॥ ಶ್ರೀಃ ॥

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

(ಸಂ. ೩೨)

ಶ್ರೀಶಿವರಹಸ್ಯ

ಸಂಪುಟ ೧೦

ಅನುವಾದಕ

ಆಸ್ಥಾನವಿದ್ವಾನ್ ಎಚ್. ಗಂಗಾಧರಶಾಸ್ತ್ರೀ

ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲು ಅಧ್ಯಾಪಕ

ಮೈಸೂರು

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

1948

|| ಶ್ರೀಃ ||

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

(ಸಂ. ೩೨)

ಶ್ರೀ ಶಿವರಹಸ್ಯ

ಸಂಪುಟ ೧೦

ಅನುವಾದಕ

ಆಸ್ಥಾನವಿದ್ವಾನ್ ಎಚ್. ಗಂಗಾಧರಶಾಸ್ತ್ರೀ

ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲು ಅಧ್ಯಾಪಕ

ಮೈಸೂರು

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

1948

Printed by D. Rajarathnam
Sree Panchacharya Electric Press
Sayaji Rao Road, Mysore.
For The Palace Mysore.

ಮುನ್ನುಡಿ

ಈ ಹತ್ತನೆಯ ಪ್ರತಿಯಿಂದ ಶ್ರೀಶಿವರಹಸ್ಯದ ತೃತೀಯಾಂಶವು ಪೂರ್ಣವಾಗಲಿದೆ. ಈ ಅಂಶವೆಲ್ಲ ಪೂರ್ತಿಯಾಗಿ ಅನೇಕ ಸಣ್ಣ ಸಣ್ಣ ಇತಿಹಾಸಗಳಿಂದ ತುಂಬಿಹೋಗಿದೆ. ಪ್ರಾಚೀನ ಪುರಾಣಗಳಲ್ಲಿ ಸಾಮಾನ್ಯವಾಗಿ ಕಥೆಯು ಸಂಭಾಷಣಾರೂಪದಲ್ಲಿ ಆರಂಭವಾಗಿ, ಮಧ್ಯೆ ಮಧ್ಯೆ ಇತರ ಇತಿಹಾಸಗಳು ಬೆಳೆದು, ವಾಚಕರಿಗೆ ಮೊದಲಿನ ಕಥೆಯನ್ನು ಸಿಂಹಾವಲೋಕನದಿಂದ ಕೊನೆಯಲ್ಲಿ ತೋರ್ಪಡಿಸಿ ಗ್ರಂಥ ಸಮಾಪ್ತಿಮಾಡುವುದು ಸಂಪ್ರದಾಯವಾಗಿ ನಿಂತಿದೆ. ಅದೇರೀತಿ ಈ ತೃತೀಯಾಂಶದ ಕಥೆಯು, ಸ್ಕಂದ ಜೈಗೀಷವ್ಯಾದಿಗಳ ಸಂಭಾಷಣೆಯಲ್ಲಿ ಆರಂಭವಾಗಿ, ಶೌನಕಾದಿ ಮಹರ್ಷಿಗಳಿಗೂ ಸೂತಮುನಿಗೂ ನಡೆದ ಮಾತುಕತೆಗಳಿಂದ ಬೆಳೆದು, ವ್ಯಾಸ ಮಹರ್ಷಿಗಳು ಸೂತರಿಗೆ ಮಾಡಿದ ಉಪದೇಶವಾಕ್ಯಗಳಿಂದ ಹರಡಿ, ಹಾಗೆಯೇ ಸ್ಕಂದ ಪಾರ್ವತಿಯರ, ನಂದೀಶ್ವರ ಪ್ರಮಥಗಣಗಳ, ಬ್ರಹ್ಮ ಮತ್ತು ಅವನ ಸಭ್ಯರ, ಜನಕ ಯಾಜ್ಞವಲ್ಕ್ಯರ, ಹೀಗೆ ಅನೇಕರ ಉಕ್ತಿ ಪ್ರತ್ಯುಕ್ತಿಗಳಿಂದ ನಾನಾ ಶೈವ ಧರ್ಮಗಳನ್ನು ಹರಡಿ ಈ ಅಂಶವು ಸಮಾಪ್ತಿಗೊಳ್ಳುವುದು. ಇಲ್ಲಿರುವ ಇತಿಹಾಸಗಳೆಲ್ಲವೂ ಶಿವ ಅಥವಾ ಶೈವರ ಪಾರಮ್ಯವನ್ನು ವಿವರಿಸುವುವು. ಈ ಇತಿಹಾಸಗಳನ್ನು ಓದಿ ತೃಪ್ತಿಪಡುವವನ ಮನಸ್ಸು ಶಿವಭಕ್ತಿಯ ಆವರಣದಿಂದ ಕೂಡಿರಬೇಕು. ಅದನ್ನರಿತೇ ಈ ಗ್ರಂಥಕಾರರು ಗ್ರಂಥಾಧ್ಯಯನಮಾಡುವ ಅಧಿಕಾರಿಗಳು ಯಾರು ಎಂಬುದನ್ನು ವಿಸ್ತಾರವಾಗಿ ಹೇಳಿರುವರು. ಅಧಿಕಾರಿಗಳ ಸ್ವರೂಪವರ್ಣನೆಗಿಂತಲೂ ಅನಧಿಕಾರಿಗಳ ವಿವೇಚನೆ ಇಲ್ಲಿ ಹೆಚ್ಚಾಗಿದೆ. ಇಲ್ಲಿರುವ ಇತಿಹಾಸಗಳು, ಶಿವಪಾರಮ್ಯವನ್ನು ಆಸ್ತಿಕರ ಮನದಲ್ಲಿ ನಿಲ್ಲಿಸಲಿ ಎಂಬುದೇ ಗ್ರಂಥಕಾರರ ಮುಖ್ಯೋದ್ದೇಶ. ಶ್ರೀಮಚ್ಛಂಕರಾಚಾರ್ಯರು ತಮ್ಮ ಮನೀಷಾಪಂಚಕದಲ್ಲಿ ಸೋಹಂ ಭಾವನೆಯಿಂದ ದೃಢಪ್ರಜ್ಞನಾದವನು 'ಚಂಡಾಲೋಸ್ತು ಸ ತು ದ್ವಿಜೋಸ್ತು ಗುರುರಿತ್ಯೇಷಾ ಮನೀಷಾ ಮಮ' ಎಂದು ಅವನೇ ಪರಮ ಪೂಜ್ಯನೆಂದು ನಿರೂಪಿಸಿರುವಂತೆ, ಈ ಗ್ರಂಥಕಾರರು ಶಿವಭಕ್ತಿಯುತನು ಯಾವ ಜಾತಿಯುವನಾಗಲಿ, ಎಷ್ಟು ವಯಸ್ಸಿನವನಾಗಲಿ, ಎಂತಹ ಚರ್ಯೆಯಲ್ಲಿರಲಿ, ಅವನೇ ಮಾನ್ಯನು ; ಅವನೇ ಮುಕ್ತಿ ಸೋಪಾನವನ್ನು ಮೆಟ್ಟತಕ್ಕವನು ಎಂದು ಅಭಿಪ್ರಾಯಪಟ್ಟಿರುವರು. ಜಗತ್ಸೃಷ್ಟಿಸ್ಥಿತಿಲಯಕರ್ತನಾದ ಮಹಾದೇವನು ಎಷ್ಟು ಸುಲಭನು, ಎಂತಹ ದಯಾಶಾಲಿಯು,

ಯಾವರೀತಿಯಿಂದಾದರೂ ಆ ಪರಶಿವನನ್ನು ಒಲಿಸಬಹುದು ಎಂಬ ವಿವೇಕವು ಈ ಶಿವರಹಸ್ಯ ತೃತೀಯಾಂಶವನ್ನು ಓದುವವರಿಗೆ ಬರದೇ ಇರಲಾರದು.

ಈ ಪ್ರತಿಯಲ್ಲಿ ಬಿಲ್ವವೃಕ್ಷಗಳನ್ನು ಬೆಳೆಸಬೇಕಾದ ಆವಶ್ಯಕತೆ, ಬಿಲ್ವ ಪತ್ರೆಯು ಶಿವಾರಾಧನೆಗೆ ಮುಖ್ಯ ಸಾಮಗ್ರಿಯಾಗಿರುವಿಕೆ, ಶಿವರಾತ್ರೀ ವ್ರತ ನಿರ್ಣಯ, ಶಿವರಾತ್ರಿಯ ದಿನ ನಡೆಸಬೇಕಾದ ಶಿವಧರ್ಮಗಳು, ಶಿವಪ್ರೀತ್ಯರ್ಥ ವಾಗಿ ಆಚರಿಸಬೇಕಾದ ದಾನಾದಿಗಳು, ತನ್ನಲ್ಲಿ ಅತಿಶಯವಾದ ಐಶ್ವರ್ಯವಿದ್ದರೂ ಲೋಭಿಯಾಗಿದ್ದರೆ ಅವನಿಗೆ ಒದಗುವ ಕಷ್ಟನಷ್ಟಗಳು, ಇವೇ ಮೊದಲಾದ ವಿಷಯ ಗಳು ಜನಸಾಮಾನ್ಯಕ್ಕೂ ಬೇಕಾಗುವಂತೆ ಪ್ರತಿಪಾದಿತವಾಗಿವೆ. ಒಂದು ಮತ್ತು ಎರಡನೆಯ ಅಂಶಗಳಲ್ಲಿ ಕಂಡುಬರುವ ತಾತ್ವಿಕಾಂಶಗಳು ಈ ತೃತೀಯಾಂಶದಲ್ಲಿ ತೋರುವುದಿಲ್ಲ. ಕೇವಲ ಭಕ್ತಿಯ ಸ್ವರೂಪ, ಭಕ್ತನ ಪ್ರಾಶಸ್ತ್ಯ ಇವೇ ಈ ಅಂಶದ ಸಾರ. ಒಟ್ಟಿನಲ್ಲಿ ಶೈವತತ್ತ್ವಪ್ರತಿಪಾದಕವಾದ ಗ್ರಂಥವೆಂದರೆ ಇದಕ್ಕಿಂತ ದೊಡ್ಡದು ಮತ್ತೊಂದಿಲ್ಲವೆಂದರೆ ಅತಿಶಯೋಕ್ತಿಯಲ್ಲ. ಅನೇಕ ಗ್ರಂಥಗಳಲ್ಲಿರುವಂತೆ ಇದರ ಲ್ಲಿಯೂ, ಪುನರುಕ್ತಿ, ಉತ್ಪ್ರೇಕ್ಷೆ, ಅನೌಚಿತ್ಯವಾದ ಭಾಗಗಳು ಅಲ್ಲಲ್ಲಿ ಕಂಡುಬರ ಬಹುದು. ಆದರೆ ಅದರಲ್ಲಿಯೂ ಒಂದು ರಹಸ್ಯವಿಲ್ಲದಿಲ್ಲ. ನೀರಸವಾದ ಅನೇಕ ಸಂದರ್ಭಗಳಲ್ಲಿಯೂ, ಒಂದು ರಸವನ್ನು ಹುಡುಕಿ, ಆದರಿಂದ ಆತ್ಮೋಲ್ಲಾಸವನ್ನು ಪಡೆಯುವುದು ಸದಧಿಕಾರಿಯ ಲಕ್ಷಣ. ಮತ್ತೆ ಸುಲಭಶೈಲಿ, ಉಪಪಾದನಕ್ರಮ, ವಿಷಯವಿವರಣೆ ಮುಂತಾದ ಗುಣಗಳು ಈ ಗ್ರಂಥದಲ್ಲಿ ಮೂರ್ತಿಮತ್ತಾಗಿವೆ.

ಇಂಥಹ ಗ್ರಂಥರತ್ನಗಳನ್ನು ಪ್ರಕಾಶಕ್ಕೆ ತಂದು ಮಹೋಪಕಾರವೆಸಗಿದ, **ನಮ್ಮ ರಾಜರ್ಷಿಗಳಾದ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ.,** ಮಹಾಪ್ರಭುಗಳು ಹೀಗೆಯೇ ದೀರ್ಘಾಯುಷ್ಮಂತರಾಗಿ ಚಿರಕಾಲ ರಾಜ್ಯಭಾರ ನಡೆಸಲಿ. ಪ್ರಭುಗಳ ಕುಟುಂಬವರ್ಗವೆಲ್ಲಾ ಆಯುರಾರೋಗ್ಯೈಶ್ವರ್ಯಯುತವಾಗಿ ಸಂತೋಷದಿಂದಿರಲಿ. ನಮ್ಮ ಮಹಾರಾಜರ ಸದ್ವಂಶವು ಸರ್ವತೋಮುಖವಾಗಿ ಏಳಿಗೆ ಪಡೆಯಲಿ, ಹೀಗೆಂದು ನಾನು ಈ ಗ್ರಂಥಾಭಿಮಾನ ದೇವತೆಯಾದ ಪಾರ್ವತೀಪತಿಯನ್ನು ಸದಾ ಪ್ರಾರ್ಥಿಸುವೆನು.

ಶ್ರೀ ಸರ್ವಧಾರಿ ಸಂವತ್ಸರದ
ವೈಶಾಖ ಶುದ್ಧ ಪಂಚಮೀ
ಗುರುವಾರ
13—5—1948.

ಇತಿ ಸಜ್ಜನವಿಧೇಯ,
ಹೊನ್ನೇನಹಳ್ಳಿ ಗಂಗಾಧರಶಾಸ್ತ್ರೀ,
ಆಸ್ಥಾನವಿದ್ವಾನ್, ಮೈಸೂರು.

ಶ್ರೀಶಿವರಹಸ್ಯದ ಹರನಾಮಕವಾದ ತೃತೀಯಾಂಶದ ಉತ್ತರಾರ್ಧದ ವಿಷಯಾನುಕ್ರಮಣಿಕಾ

(ನಲವತ್ತೊಂದನೆಯ ಅಧ್ಯಾಯದಿಂದ ಐವತ್ತನೆಯ ಅಧ್ಯಾಯ ಪೂರ್ತಿಯಾಗಿ)

ತನ್ನ ಸ್ವಪ್ನವೃತ್ತಾಂತವನ್ನು ತಿಳಿಸುವುದು, ಅದರಿಂದ ಅವಳು ಪಾಪಿನಿಯಲ್ಲವೆಂದು ತಿಳಿದು ಮಗನಿಗೆ ಶಿವತತ್ತ್ವೋಪದೇಶಮಾಡುವುದು, ಆ ತತ್ತ್ವದ ಮಹಿಮೆಯಿಂದ ಆತನಿಗೆ ಶಿವಾರ್ಚನೆಯಲ್ಲಿ ಮನಸ್ಸುಂಟಾಗುವುದು, ಪತಂಗ (ಮಿಡತೆಯು)ವು ಸೂರ್ಯನನ್ನು ಮರೆಮಾಡುವುದು, ಅದರ ಇತಿಹಾಸದಲ್ಲಿ ರಾಜಪತ್ನಿ ಮತ್ತು ಮುದ್ಗಲ ಋಷಿಯ ಸಂವಾದ, ಸ್ತ್ರೀಯರಿಗೆ ವಿಶ್ವಪತಿಯೆನಿಸಿದ ಶಂಕರನೇ ನಿಜವಾದ ಪತಿಯು, ಆತನ ಪೂಜೆಯೇ ಪತಿವ್ರತಾಧರ್ಮವೆಂದು ಮುದ್ಗಲನು ಬೋಧಿಸುವುದು, ಅದರಂತೆ ಅವರು ಶಿವಾರ್ಚನೆಮಾಡಿ ಸದ್ಗತಿಯನ್ನು ಪಡೆಯುವುದು, ಆಗ ಸತ್ಯವ್ರತನು ಈ ಇತಿಹಾಸವನ್ನು ಹೇಳಿ ತನ್ನ ಮಗನು ಸೊಸೆಗೆ ಕೊಡುವ ಶಾಪವನ್ನು ತಪ್ಪಿಸುವುದು. .... ಪುಟ ೧೩೭–೧೭೮

ನಲವತ್ತೈದನೆಯ ಅಧ್ಯಾಯ

ಶಿವಧರ್ಮವರ್ಣನೆ, ಬಿಲ್ವವನಪಾಲಕನಿಗೆ ಬರುವ ಸುಕೃತ ವಿಚಾರ, ಶಿವರಾತ್ರಿಯ ವಿಷಯಕವಾಗಿ ಶಿವಧುಂಡಿಯು ಪಶ್ಚಾತ್ತಾಪಪಡುವುದು ಪುಟ ೨೭೯–೨೩೮

ನಲವತ್ತಾರನೆಯ ಅಧ್ಯಾಯ

ವನಪಾಲಕ ಮತ್ತು ಶಿವದುಂಡೀ ಇವರಿಬ್ಬರ ಸಂಭಾಷಣೆ, ಲಿಂಗಪೂಜಾ ಮಹಿಮಾ, ಮತ್ತು ಇತಿಹಾಸ, ಸ್ವಪುತ್ರಿಯಲ್ಲಿ ಮೋಹಿತನಾಗಿದ್ದರೂ ರಾಜನೊಬ್ಬನು ಶಿವಲಿಂಗದರ್ಶನ ಮಾತ್ರದಿಂದ ಕೈಲಾಸವನ್ನು ಹೊಂದಿದನೆಂಬ ವಿಚಾರ, ಬಿಲ್ವ ಮೂಲಸ್ಥ ಲಿಂಗಮಹಿಮಾ, ಬಿಲ್ವಾರ್ಪಣಮಹಿಮಾ, ಬಿಲ್ವವೃಕ್ಷಪೋಷಣ ಮತ್ತು ಬಿಲ್ವವನ ಪಾಲನ ಮಹಿಮಾ, ಭಿಲ್ಲಜಾತಿಯ ಹೆಂಗಸೊಬ್ಬಳೂ ಬಿಲ್ವವೃಕ್ಷವನ್ನು ನೆಟ್ಟು, ಅದರ ಪಾತಿಯಲ್ಲಿ ನರ್ಮದಾಲಿಂಗವನ್ನು ಸ್ಥಾಪಿಸಿ, ಆ ತೀರ್ಥಪ್ರಾಶನಮಾಡಿದ್ದರಿಂದ ಆಕೆಗೆ ಸದ್ಗತಿ ಬಂದ ವಿಚಾರ, ಯಮನು ಆಕೆಗೆ ಇಂದ್ರಾಣಿಯಾಗುವಂತೆ ವರಕೊಡುವುದು, ಅದರಂತೆ ಆಕೆಯು ಅರಣ್ಯದಲ್ಲಿದ್ದಾಗ ಇಂದ್ರನು ಆಕೆಯನ್ನು ಮೋಹಿಸಿ ವಿವಾಹವಾಗುವುದು, ಶಿವಧುಂಧಿಯು ಶಿವನೈವೇದ್ಯವನ್ನು ತಿಂದು ಹಸಿವನ್ನು ಹೋಗಲಾಡಿಸಿಕೊಂಡುದು, ಆನೆ ಸಿಂಹಗಳಿಗೆ ಸದ್ಗತಿ ಬಂದ ವಿಚಾರ.

ಪುಟ ೨೩೯–೨೯೦

ನಲವತ್ತೇಳನೆಯ ಅಧ್ಯಾಯ

ಶಿವಧುಂಧಿಯು ಇತರ ಋಷಿಕುಮಾರರೊಡನೆ ವನಾಂತರದಲ್ಲಿ ಬಿಲ್ವವನಕ್ಕೆ ಹೋಗಿ ಶಿವರಾತ್ರಿಯದಿನ ಶಿವಾರಾಧನೆ ಮಾಡುವುದು, ಅಲ್ಲಿರುವ ಸಕಲ ಮೃಗಗಳೂ

ಶಿವಾರ್ಚನೆ ಮಾಡುವುದು, ಸಿಂಹಕ್ಕೆ ಶಿವಧರ್ಮವನ್ನು ವಿವರಿಸುವುದು, ಶಿವರಾತ್ರೀ ನಿರ್ಣಯ, ಶಿವವ್ರತಾಧಿಕಾರಿನಿರ್ಣಯ, ಮದ್ದಾನೆಯು ಹಿಂದೆ ಶಿವಾರ್ಚನೆಮಾಡಿದ್ದರೂ, ಪ್ರದೋಷಕಾಲದಲ್ಲಿ ನಾರಾಯಣಸ್ಮರಣೆಮಾಡಿದ್ದರಿಂದ ಆ ಮದ್ದಾನೆಯ ಜನ್ಮ ಬಂದುದು, ಆ ಸಂಸ್ಕಾರದಿಂದ ಮತ್ತೆ ಶಿವಾರ್ಚನೆಮಾಡಿ ಮುಕ್ತಿಯನ್ನು ಹೊಂದಿದುದು, ಪ್ರದೋಷಕಾಲದಲ್ಲಿ ನಾರಾಯಣನು ಲಕ್ಷ್ಮೀಲೋಲನಾಗಿದ್ದುದರಿಂದ, ಆವನ ಸ್ಮರಣೆಯು ಪ್ರದೋಷಕಾಲದಲ್ಲಿ ನಿಷಿದ್ಧವೆಂದು ಭೃಗುಋಷಿಯು ಪ್ರತಿಪಾದಿಸುವುದು, ಇದರಿಂದ ಶಿವಧರ್ಮಕ್ಕೆ ಸದೃಶವಾದ ಮತ್ತೊಂದು ಧರ್ಮವಿಲ್ಲವೆಂದು ಶಿವದುಂಢಿಯು ತಿಳಿಯುವುದು, ಶಿವದುಂಢಿಗೆ ಶಿವಲೋಕಪ್ರಾಪ್ತಿವಿಚಾರ, ಇದನ್ನು ತಿಳಿದ ಭಿಲ್ಲನು ಅರಣ್ಯದಲ್ಲಿದ್ದ ಸಕಲ ಶಿವಲಿಂಗಗಳನ್ನೂ ಪೂಜಿಸಿ ತಾನೂ ಮುಕ್ತಿಯನ್ನು ಹೊಂದುವುದು. .... ಪುಟ ೨೯೧-೩೪೭

ನಲವತ್ತೆಂಟನೆಯ ಅಧ್ಯಾಯ

ಪುಣ್ಯಮೂರ್ತಿಯೆಂಬ ರಾಜನ ಚರಿತ್ರೆ, ಆತನು ರಾಜ್ಯವನ್ನು ಜ್ಯೇಷ್ಠಪುತ್ರನಿಗೆ ಅರ್ಪಿಸಿ ತಾನು ರೇವಾತೀರಕ್ಕೆ ಹೋಗುವುದು, ಅಲ್ಲಿ ಬಿಲ್ವವನ ನಿರ್ಮಾಣ ಮಾಡಿ ಈಶ್ವರಾರಾಧನೆ ನಡೆಸುತ್ತಿರುವುದು. ರಾಜನಿಂದ ಮಹರ್ಷಿಗಳಿಗೆ ದೊರಕುವ ಸತ್ಕಾರ, ರಾಜನಿಗೆ ಮಧ್ಯೆ ಮರಣವು ಸಂಭವಿಸುವುದು, ವಿಮಾನಾರೂಢನಾಗಿ ಬಂದ ನಂದಿಯನ್ನು ರಾಜಪುತ್ರರು ತಮ್ಮ ತಂದೆಯೇಕೆ ಮೃತನಾದನೆಂದು ಪ್ರಶ್ನಿಸುವುದು, ನಂದಿಯು ಮೃತದೇಹಕ್ಕಾಗಿ ವ್ಯಥೆಪಡಕೂಡದೆಂದು ಬೋಧಿಸುವುದು, ಆದರೂ ಆ ಮಕ್ಕಳು ಯಮಲೋಕಕ್ಕೆ ಹೋಗಿ ಯಮನನ್ನು ಧಿಕ್ಕರಿಸುವುದು, ಯಮನು ಅದು ಕಾಲಮೃತ್ಯುವಿನ ತಪ್ಪೆಂದು ತಪ್ಪಿಸಿಕೊಳ್ಳುವುದು, ಆಗ ಆ ಮಕ್ಕಳು ಮೃತ್ಯುವನ್ನು ಎಳೆದು ತಂದು ಕೊಳಕ್ಕೆ ಎಸೆಯುವುದು, ಆಗ ರಾಜನು ಸಜೀವನಾಗಿ ಎದ್ದು ಮತ್ತೆ ಭಸ್ಮತ್ರಿಪುಂಡ್ರಾದಿಗಳಿಂದ ಶಿವಾರ್ಚನೆಗೆ ತೊಡಗುವುದು, ನಂದಿಯನ್ನು ಪೂಜಿಸಿ ಶಿವನನ್ನು ಸ್ತುತಿಸುವುದು, ರಾಜಾ ಮತ್ತು ನಂದಿಕೇಶ್ವರನ ಸಂಭಾಷಣೆ, ರಾಜನು ಮೃತ್ಯುವೇ ಮೊದಲಾದವರನ್ನು ಬಿಡಿಸಿ ರಕ್ಷಿಸುವುದು, ರಾಜಕೃತ ಶಿವಪೂಜಾ ವರ್ಣನೆ. .... ಪುಟ ೩೪೮-೪೦೭

ನಲವತ್ತೊಂಬತ್ತನೆಯ ಅಧ್ಯಾಯ

ಶಿವಭಕ್ತ ಮತ್ತು ರತ್ನಾಕರ ಇವರ ಸಂಭಾಷಣೆ, ಕಾಟಕೋಟರನ ತಂದೆಯು ಗೋಮಯವಾದ ಶಿವಲಿಂಗದ ಮೇಲೆ ಪಾದವನ್ನಿಡುವುದು, ಅವನ ಮಗನು

ಐವತ್ತನೆಯ ಅಧ್ಯಾಯ

ಇತಿ ತೃತೀಯಾಂಶೋತ್ತರಾರ್ಧಾನುಕ್ರಮಣಿಕಾ

॥ ಶ್ರೀಃ ॥

॥ ಓಂ ನಮಶ್ಶಿವಾಯ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ಏಕಚತ್ವಾರಿಂಶೋಽಧ್ಯಾಯಃ

॥ ರತ್ನಾಕರ ಉವಾಚ ॥

ಇತಿ ತದ್ವಚನಂ ಶ್ರುತ್ವಾ ಶುಕವಾಣೀ ವಿಚಕ್ಷಣಾ ।
ಮುಹುಃ ಪ್ರಣಮ್ಯ ಭರ್ತಾರಂ ಪ್ರಾಹ ಸತ್ಯವ್ರತಂ ಪುನಃ ॥೧॥

ಭಗವನ್ ಗಿರಿಶಂ ಪ್ರಾಪ ಗಿರಿರಾಜಸುತಾ ಕಥಂ ।
ಆವಿರ್ಭೂತಾ ಕಥಮುಮಾ ಶ್ರೀಗಿರೀಶ್ವರಮಂದಿರೇ ॥೨॥

ತೇನ ವಾ ಕಿಂ ತಪಸ್ತಪ್ತಂ ಯೇನ ಗೌರೀವಿಲೋಕನಂ ।
ತದ್ಬಾಲ್ಯಲೀಲಾಕಲನಂ ಜಾತಂ ಪೀಯೂಷಸನ್ನಿಭಂ ॥೩॥

ನಲವತ್ತೊಂದನೆಯ ಅಧ್ಯಾಯ

ಈಶ್ವರಭಕ್ತನಾದ ಸತ್ಯವ್ರತನು ಹಾಗೆ ಹೇಳಿದ ಶೈವವ್ರತಸ್ವರೂಪವನ್ನು ಬುದ್ಧಿಮತಿಯಾದ ಆ ಶುಕವಾಣಿಯು ಕೇಳಿ ಸಂತೋಷಪಟ್ಟು ಪುನಃ ತನ್ನ ಪತಿಯಾದ ಸತ್ಯವ್ರತನಿಗೆ ನಮಸ್ಕರಿಸಿ ಈ ರೀತಿಯಾಗಿ ಪ್ರಶ್ನಿಸಿದಳು. ಎಂದು ರತ್ನಾಕರನು ಪುಣ್ಯಮೂರ್ತಿಗಳಿಗೆ ಮುಂದಿನ ಕಥೆಯನ್ನು ವಿವರಿಸಿದನು. ॥೧॥

" ಪೂಜ್ಯಪತಿಯೇ, ಗಿರಿಜೆಯು ಪರಮೇಶ್ವರನನ್ನು ವಲ್ಲಭನನ್ನಾಗಿ ಪಡೆದು ಕೊಂಡಿರುವಳಷ್ಟೆ. ಅಂಥ ಮಹಾದೇವನನ್ನು ಆಕೆಯು ಹೇಗೆ ಪಡೆದಳು? ಮತ್ತು ಆ ಭಗವತಿಯು ಪರ್ವತರಾಜನ ಉದರದಲ್ಲಿ ಹೇಗೆ ಜನಿಸಿದಳು? ಈ ವೃತ್ತಾಂತ ವನ್ನು ನನಗೆ ಹೇಳಬೇಕೆಂದು ಪ್ರಾರ್ಥಿಸುತ್ತೇನೆ. ॥೨॥

ಇಂಥ ಜಗನ್ಮಾತೆಯಾದ ಭಗವತಿಯನ್ನು ತನ್ನ ಪುತ್ರಿಯನ್ನಾಗಿ ಹಿಮ ವಂತನು ಹೇಗೆ ಪಡೆದನು? ಆ ಭಗವತಿಯ ಬಾಲ್ಯಾವಸ್ಥೆಯ ಮುದ್ದು ಮುಖ

ಇದಂ ಸರ್ವಂ ವಿಶೇಷೇಣ ವದ ಕಾರುಣಿಕೋತ್ತಮ ।
ಇತಿ ತದ್ವಚನಂ ಶ್ರುತ್ವಾ ಪ್ರಾಹ ಸತ್ಯವ್ರತಸ್ಸತೀಂ ॥೪॥

॥ ಸತ್ಯವ್ರತ ಉವಾಚ ॥

ಪುರಾ ಹಿಮಾಚಲಸ್ಸೃಷ್ಟಶ್ಶಂಕರೇಣ ಕುಲಾಚಲಃ ।
ಭೂಧಾರಣಾರ್ಥಮೇತಸ್ಯ ಸೃಷ್ಟಿರಾಸೀದ್ವರಾನನೇ ॥೫॥

ಧೃತಸ್ತೇನ ಧರಾಭಾರಸ್ಸುಮೇರುಪ್ರಮುಖೈಸ್ಸಹ ।
ತೇನ ತಾವದ್ಗತಂ ಪೂರ್ವಮತಲಂ ಪ್ರತಿ ನಿರ್ಮಲಂ ॥೬॥

ತತ್ರೈಕಸ್ಯಾಪ್ಯಸಂಚಾರಃ ಕೇವಲಂ ಸ ಸ್ವಯಂ ಪರಂ ।
ಶಿವಪ್ರಸಾದಲೇಶೇನ ಕೂರ್ಮಾಧಾರತಯಾ ಸ್ಥಿತಃ ॥೭॥

ವನ್ನೂ, ಆಕೆಯ ಬಾಲಲೀಲೆಯನ್ನೂ, ಅಮೃತತುಲ್ಯವಾದ ಆಕೆಯ ತೊದಲು ನುಡಿಗಳನ್ನೂ ಅನುಭವಿಸುವ ಮಹಾಯೋಗವು ಆ ಹಿಮವಂತನಿಗೆ ಹೇಗೆ ದೊರೆಯಿತು ? ಆದಕ್ಕಾಗಿ ಆತನು ಎಂಥ ತಪಸ್ಸನ್ನು ಮಾಡಿದ್ದನು ? ॥೩॥

ಪ್ರಿಯನೇ, ನೀನು ಪರಮದಯಾಳುವಾಗಿದ್ದೀಯೆ. ನನ್ನ ಅಭಿಲಾಷೆಯನ್ನು ಸಲ್ಲಿಸಿಕೊಡು. ನಾನು ಪ್ರಶ್ನಿಸಿದ ಎಲ್ಲಾ ವೃತ್ತಾಂತಗಳನ್ನೂ ವಿಸ್ತಾರವಾಗಿ ನನಗೆ ತಿಳಿಯಹೇಳು." ಹೀಗೆಂದು ಪತ್ನಿಯಾದ ಶುಕವಾಣಿಯು ಪ್ರಾರ್ಥಿಸಿಕೊಳ್ಳಲು, ಹಾಗೆಯೇ ಆಗಲೆಂದು ಒಪ್ಪಿ ಸತ್ಯವ್ರತನು ಈ ರೀತಿ ಹೇಳತೊಡಗಿದನು. ॥೪॥

" ಪ್ರಿಯೆ ಶುಕವಾಣಿಯೇ, ಕೇಳು. ಹಿಂದೆ ಪರಮೇಶ್ವರನು ಕುಲಾಚಲ ವೆನಿಸಿದ ಹಿಮವತ್ಪರ್ವತವನ್ನು ಸೃಷ್ಟಿಸಿದನು. ಭೂಮಿಯನ್ನು ಧರಿಸುವುದ ಕ್ಕಾಗಿಯೇ ಈ ಮಹಾಪರ್ವತದ ಸೃಷ್ಟಿ ಆಯಿತು. ॥೫॥

ಹೀಗೆ ಸೃಷ್ಟವಾದ ಹಿಮವತ್ಪರ್ವತವು ಸುಮೇರುವೇ ಮೊದಲಾದ ಇತರ ಮಹಾಪರ್ವತಗಳಂತೆ ಭೂಭಾರವನ್ನು ಧರಿಸಿತು. ಹೀಗಿರಲು ಒಂದು ಸಲ ಇದೇ ಹಿಮವಂತನು ಅಖಂಡವಾದ ಭೂಭಾರವನ್ನು ಧರಿಸುವ ಉದ್ದೇಶದಿಂದ ಪವಿತ್ರ ವಾದ ಅತಲಲೋಕಕ್ಕೆ ಹೋದನು. ॥೬॥

ಆ ಅತಲಲೋಕದಲ್ಲಿ ಯಾರ ಸಂಚಾರವೂ ಇರಲಿಲ್ಲ. ಆ ನಿರ್ಜನ ಪ್ರಶಾಂತದೇಶದಲ್ಲಿ ಹಿಮವಂತನು ಶಿವಾನುಗ್ರಹದಿಂದ ಸರ್ವತ್ರ ವ್ಯಾಪಿಸಿಕೊಂಡ ನಲ್ಲದೇ ಕೂರ್ಮನಿಗೂ ಸಹಾಯವಾಗುವಂತೆ ಭೂಮಿಯನ್ನು ಧರಿಸಿದನು. ॥೭॥

ತನ್ಮೂಲಸಾನುನಿಲಯಃ ಕೂರ್ಮಸ್ತತ್ಸಾನುಸಂಗವಾತ್ ।
ನ ಭೂಭಾರಭಯಂ ಪ್ರಾಪ ಸತ್ಸಂಗಃ ಖಲು ತಾದೃಶಃ ॥೮॥

ಮಹಾವಾಯುಸಮಾಕ್ರಾಂತಮತಲಂ ತತ್ರ ನಿರ್ಮಿತಂ ।
ಲಿಂಗಮೇಕಂ ಮಹೇಶೇನ ನಿರ್ಮಿತಂ ರತ್ನಮಂದಿರಂ ॥೯॥

ತಸ್ಮಿನ್ನೇವ ಮಹಾದೇವೋ ಮಂದಿರೇ ಸುಂದರೇ ಸ್ಥಿತಃ ।
ಗೌರ್ಯಾ ಸಹ ವಿಲಾಸೇನ ತದೇಕಾಂತಸ್ಥಲಂ ಯತಃ ॥೧೦॥

ತಸ್ಮಿನ್ ಲಿಂಗೇ ಸ ಗೌರೀಶಂ ಕರೋತಿ ಶಿವಪೂಜನಂ ।
ಕಮಲೈರಮಲೈಃ ಫುಲ್ಲೈಃ ಕೋಮಲೈರ್ಬಿಲ್ವಪಲ್ಲವೈಃ ॥೧೧॥

ದೂರ್ವಾಂಕುರೈರಭಿನವೈಃ ಕನಕೈರ್ದಮನೈರಪಿ ।
ಚಂಪಕೈಃ ಕೇತಕೀಪುಷ್ಪೈರ್ಜಪಾಪುಷ್ಪೈಶ್ಚ ಕೋಟಿಭಿಃ ॥೧೨॥

ಭೂಮಿಯನ್ನು ಮೊದಲಿಂದಲೂ ಧರಿಸಿದ್ದ ಕೂರ್ಮನು ಆಗ ಈ ಹಿಮವಂತನ ತಪ್ಪಲನ್ನು ಆಶ್ರಯಿಸಿದನು. ಅಂದರೆ ಅವನಿಗೆ ಭೂಧಾರಣೆಯ ಭಾರವಾಗಲೀ ಆಯಾಸವಾಗಲಿ ಇರಲಿಲ್ಲ. ಸತ್ಪುರುಷರ ಸಹವಾಸದಿಂದ ಸಕಲ ಕ್ಲೇಶವೂ ನಾಶವಾಗಿಹೋಗುವುದಷ್ಟೆ. ॥೮॥

ಆ ಅತಲಲೋಕದಲ್ಲಿ ಯಾವಾಗಲೂ ಮಹಾವಾಯುವು ಪ್ರಚಂಡವಾಗಿ ಬೀಸುತ್ತಿದ್ದಿತು. ಇಂಥ ಏಕಾಂತವಾದ ಲೋಕದಲ್ಲಿ ಒಂದು ರತ್ನಮಯವಾದ ಮಂದಿರವನ್ನೂ, ಅದರಲ್ಲಿ ಒಂದು ಶಿವಲಿಂಗವನ್ನೂ ಸಹ ಶಿವನೇ ನಿರ್ಮಿಸಿದ್ದನು. ॥೯॥

ಆ ವಿಜನವಾದ ಪ್ರದೇಶದಲ್ಲಿ, ಆ ಸುಂದರವಾದ ದೇವಾಲಯದಲ್ಲಿ ಶಂಕರನು ಗೌರೀಸಮೇತನಾಗಿ ಆನಂದವಾಗಿ ಇರುತ್ತಿದ್ದನು. ॥೧೦॥

ಆ ಗೌರೀರಮಣನಾದ ಮಹೇಶನೂ ಸಹ ಆ ಶಿವಲಿಂಗಕ್ಕೇ ಆರಾಧನೆ ಮಾಡುತ್ತಿದ್ದನು. ಸುಂದರವಾದ ಕಮಲಗಳಿಂದಲೂ ಕೋಮಲವಾದ ಬಿಲ್ವಪತ್ರೆಗಳಿಂದಲೂ ಸತತವೂ ಆ ಶಿವಲಿಂಗವನ್ನು ಅರ್ಚಿಸುತ್ತಿದ್ದನು. ॥೧೧॥

ತಾನೇ ಪರಶಿವನಾಗಿದ್ದರೂ ಸಹ ಸ್ವಾಪತ್ರರೂಪವಾದ ಶಿವಲಿಂಗಕ್ಕೆ ಗರಿಕೆ, ಸಂಪಿಗೆ, ದವನ, ಬಿಳಿಯ ಸಂಪಿಗೆ, ಕೇದಿಗೆ, ಜಪಾಕುಸುಮ ಮುಂತಾದ ಉತ್ತಮೋ

ತತ್ರ ಸಾಯಂ ಮಹೇಶಾನಂ ದದರ್ಶ ಗಿರಿಜಾಪತಿಂ ।
ನೃತ್ಯೋತ್ಸವೇನ ಸಂತುಷ್ಟಮಂಬಿಕಾವೀಕ್ಷಣಪ್ರಿಯಂ ॥೧೩॥

ಯದಾ ತೇನ ಶಿವಾ ದೃಷ್ಟಾ ತದಾ ಸಾ ಶಿವವಲ್ಲಭಾ ।
ಕ್ರೀಡಾರತಾ ಬಾಲಿಕೇವ ಯೌವನೇನಾಪಿ ಸಂಯುತಾ ॥೧೪॥

ಯುವತೀತ್ವೇನ ದೃಷ್ಟಾ ಸಾ ಯದಾ ಶಂಕರವಲ್ಲಭಾ ।
ತದಾ ಪರ್ವತಮಾಲೋಕ್ಯ ಶಂಕರಃ ಪ್ರಾಹ ತಂ ಗಿರಿಂ ॥೧೫॥

ತೇನಾರ್ಚಿತೋಽತಿಸಂತುಷ್ಟಸ್ತಸ್ಮಿನ್ ಲಿಂಗೇ ಮನೋಹರೇ ।
ಕಿಂ ತ್ವಯಾ ದೃಶ್ಯತೇ ಮೂರ್ತಿಃ ಕಾಪಿ ಸಾ ಶೋಭನೇತ್ಯಪಿ ॥೧೬॥

ತ್ತಮಗಳಾದ ಪುಷ್ಪಗಳಿಂದಲೂ ಪತ್ರೆಗಳಿಂದಲೂ ಪೂಜೆಯನ್ನು ನಡೆಸುತ್ತಿದ್ದನು. ॥೧೨॥

ಹೀಗೆಯೇ ಶಿವಲಿಂಗಾರಾಧನೆಯನ್ನೇ ನಡೆಸುತ್ತಾ ಸಾಯಂಕಾಲದಲ್ಲಿ ನಾಟ್ಯೋತ್ಸವಾದಿಗಳಿಂದ ಪರಮೇಶ್ವರನು ಸಂಭ್ರಮದಲ್ಲಿ ಆಸಕ್ತನಾಗಿದ್ದಾಗ, ಆ ಗಿರಿಜಾಸಮೇತನಾದ ಶಂಕರನನ್ನು ಹಿಮವಂತನು ಸಂದರ್ಶಿಸಿದನು. ॥೧೩॥

ಹಿಮವಂತನ ದೃಷ್ಟಿಯು ಗಿರಿಜೆಯ ಮೇಲೆ ಬಿದ್ದೊಡನೆಯೇ ಆತನಿಗೆ ಆ ಭಗವತಿಯು ಕೇವಲ ಬಾಲಿಕೆಯಂತೆ ಕಂಡಳು. ಆ ಗೌರಿಯು ತನ್ನ ಕುಮಾರಿ ಎಂತಲೂ, ಕೇವಲ ಆಟಪಾಟಗಳನ್ನಾಡುತ್ತಿರುವ ತನ್ನ ಪುತ್ರಿಯೇ ಈಗ ನವಯೌವನದಲ್ಲಿ ಕಾಲಿಡುತ್ತಿರುವಂತೆಯೂ ಭಾಸವಾಯಿತು. ಆ ಶಂಕರ ಪ್ರಿಯಪತ್ನಿಯಾದ ಭಗವತಿಯನ್ನು ಸಾಕ್ಷಾತ್ ತನ್ನ ಪುತ್ರಿಯನ್ನು ನೋಡುತ್ತಿರುವಂತೆ ಪ್ರೇಮವಾತ್ಸಲ್ಯಪೂರಿತವಾದ ದೃಷ್ಟಿಯಿಂದ ಆ ಹಿಮವಂತನು ನೋಡತೊಡಗಿದನು. ॥೧೪-೧೫॥

ಬಳಿಕ ಹಿಮವಂತನು ಆ ಶಿವಲಿಂಗವನ್ನೇ ಪೂಜಿಸಿ, ಶಿವಾರಾಧನೆಯನ್ನು ಮಾಡಿ ಶಂಕರನನ್ನು ಸಂತುಷ್ಟಗೊಳಿಸಿದನು. ಆಗ ಆತನ ಅರ್ಚನೆಯಿಂದ ಸುಪ್ರೀತನಾದ ಶಂಕರನು ಹಿಮವಂತನನ್ನು ಕುರಿತು ನಿನಗೆ ನಮ್ಮ ಸ್ವರೂಪವು ಹೇಗೆ ತೋರುತ್ತಿದೆ? ನೀನು ಗೌರಿಯನ್ನು ಏನೆಂದು ತಿಳಿಯುತ್ತಿದ್ದೀಯೆ? ನಿನಗೆ ಈ ಕಲ್ಯಾಣಿಯು ಹೇಗೆ ಕಾಣುತ್ತಿರುವಳು? ಎಂದು ಪ್ರೀತಿಯಿಂದ ಕೇಳಿದನು. ಆಗ ಹಿಮವಂತನು ವಿನಯದಿಂದ ಈ ರೀತಿ ನುಡಿದನು. ॥೧೬॥

॥ ಹಿಮವಾನುವಾಚ ॥

ಭಗವನ್ ದೃಶ್ಯತೇ ಲೀಲಾ ಕಾಪಿ ಬಾಲೋಚಿತಾ ಮಯಾ ।
ಸಾ ತು ಸದ್ಯಸ್ಸಮುತ್ಪನ್ನಾ ಕನ್ಯಕೇವ ವಿರಾಜಿತಾ ॥೧೭॥

ಅಪೂರ್ವಮಿದಮತ್ರೇದಂ ಜನನೀ ನಾತ್ರ ದೃಶ್ಯತೇ ।
ಸ್ತನ್ಯಪಾನೋನ್ಮುಖಾ ಸೇಯಂ ಕಾ ವಾ ತಜ್ಜನನೀ ಶಿವ ॥೧೮॥

ಶೈಲೇಶ್ವರ ಪ್ರಸನ್ನೋಽಸ್ಮಿ ಸದ್ಯಸ್ತ್ವತ್ಕೃತಪೂಜಯಾ ।
ಅಪೂಜಿತಮಿದಂ ಲಿಂಗಂ ಪೂಜ್ಯತೇ ಸಾದರಂ ತ್ವಯಾ ॥೧೯॥

ನಾತ್ರಾಮರಾಣಾಂ ಸಂಚಾರಃ ಕಿನ್ನರಾಣಾಂ ವಿಶೇಷತಃ ।
ಗಂಧರ್ವಾಣಾಂ ನ ಸಂಚಾರಸ್ಸಿದ್ಧಾದೀನಾಂ ಚ ಸರ್ವಥಾ ॥೨೦॥

ಭಗವನ್ ಮಹೇಶನೇ, ನನಗೆ ಇಲ್ಲಿ ಕೇವಲ ಬಾಲ್ಯಲೀಲೆಯೇ ಕಾಣುತ್ತಿರುವುದು. ಆ ಬಾಲ್ಯವಲ್ಲದೇ ಮತ್ತೇನೂ ನನಗೆ ತೋರುತ್ತಿಲ್ಲ. ಈ ಗೌರಿಯು ಕನ್ಯಕೆಯಂತೆಯೂ, ಈಗ ಜನಿಸಿದವಳಂತೆಯೂ ನನಗೆ ಕಾಣುತ್ತಿರುವಳು. ॥೧೭॥

ನನಗೆ ಇಲ್ಲಿನ ವಿದ್ಯಮಾನವು ಪರಮಾಶ್ಚರ್ಯಕರವಾಗಿ ತೋರುತ್ತಿದೆ. ಈ ಗೌರಿಯು ನವಜಾತ ಕನ್ಯಕೆಯಂತೆ ತೋರುವಳು. ಮತ್ತು ಸ್ತನ್ಯಪಾನಕ್ಕಾಗಿ ತಾಯಿಯನ್ನು ಅಪೇಕ್ಷಿಸುತ್ತಿರುವಳೋ ಎಂಬಂತೆಯೂ ಕಾಣುತ್ತಿರುವಳು. ಆದರೆ ಇಲ್ಲಿ ಜನನಿಯು ಯಾರೂ ಕಾಣುತ್ತಿಲ್ಲ. ಹೀಗಿರಲು ಈ ಬಾಲಿಕೆಗೆ ಸ್ತನ್ಯವನ್ನು ಕೊಟ್ಟು ಸಂತೈಸಿ ಲಾಲಿಸುವವರು ಯಾರು? ಇಲ್ಲಿ ಯಾರು ಇಲ್ಲವಲ್ಲ ಎಂದು ಒಂದು ಬಗೆಯ ಖೇದವೇ ನನ್ನ ಮನಸ್ಸಿಗೆ ಅಂಟಿಕೊಂಡಿರುವಂತೆ ಭಾಸವಾಗುತ್ತಿರುವುದು." ಹೀಗೆಂದು ಹಿಮವಂತನು ತನ್ನ ಮನಸ್ಸಿಗೆ ತೋರುತ್ತಿದ್ದ ನಿಜವಾದ ಭಾವನೆಯನ್ನು ಪ್ರಕಟಪಡಿಸಲು ಶಂಕರನು ಸಂತೋಷದಿಂದ ಈರೀತಿ ನುಡಿದನು. ॥೧೮॥

ಎಲೈ ಪರ್ವತರಾಜನೇ! ನಿನ್ನ ಉದಾರವಾದ ಭಾವನೆಯಿಂದಲೂ, ಈಗ ನೀನು ಈ ಶಿವಲಿಂಗಪೂಜೆಯನ್ನು ಭಕ್ತಿಯಿಂದ ಆಚರಣೆ ಮಾಡಿದುದರಿಂದಲೂ ನಾನು ಸಂತುಷ್ಟನಾದೆನು. ಈ ಶಿವಲಿಂಗದ ಪೂಜೆಯು ಸಾಮಾನ್ಯರಿಗೆ ದುರ್ಲಭವಾಗಿರುವುದು. ॥೧೯॥

ಈ ಪರಮೈಕಾಂತಸ್ಥಳದಲ್ಲಿ ದೇವತೆಗಳಿಗೂ ಸಂಚರಿಸಲು ಶಕ್ಯವಿಲ್ಲ. ಕಿನ್ನರರು, ಗಂಧರ್ವರು, ಸಿದ್ಧರು ಮೊದಲಾದವರು ಯಾರೂ ಇಲ್ಲಿ ಸಂಚಾರವ

ಅತ ಏವ ಪರಂ ಲಿಂಗಮಿದಂ ಸಂಪ್ರೂಜ್ಯತೇ ಮಯಾ ।
ತವಾಪ್ಯೇತತ್ಕಿಲಾಧಾರಧರಾಧಾರತ್ವಸಾಧನಂ ॥೨೧॥

ಇದಂ ದೃಷ್ಟಂ ತ್ವಯಾ ರೂಪಮಪಾರತಪಸಾ ಗಿರೇ ।
ಧನ್ಯೋಽಸಿ ಕೃತಕೃತ್ಯೋಽಸಿ ಮತ್ಪೂಜಾಫಲಮೀದೃಶಂ ॥೨೨॥

ಇಯಂ ಬಾಲಾ ಪಾಲನೀಯಾ ಲಾಲನೀಯಾ ಚ ಸಾದರಂ ।
ಮಂದಿರಂ ಪ್ರತಿ ನೇಯಾಪಿ ವಿನಯಾಭಿನಯೈಃ ಪರಂ ॥೨೩॥

ಏತದಾಲೋಕನಾಯಾಪಿ ಯಾವದಾಗಮ್ಯತೇ ಮಯಾ ।
ತಾವತ್ಪಾಲನಮೇತಸ್ಯಾಃ ಕರ್ತವ್ಯಮತಿಯತ್ನತಃ ॥೨೪॥

ನ್ನಾಗಲಿ ಪ್ರವೇಶವನ್ನಾಗಲಿ ಮಾಡಲಾರರು. ಆದುದರಿಂದ ಈ ಸ್ಥಾನವು ಪರಮ ಶ್ರೇಷ್ಠವೂ ಅತ್ಯಂತ ಗುಪ್ತವೂ ಆಗಿರುತ್ತದೆ. ॥೨೦॥

ಆದ್ದರಿಂದಲೇ ಸ್ವಯಂ ನಾನೂ ಸಹ ಸ್ವಾತ್ಮರೂಪವಾದ ಈ ಶಿವ ಲಿಂಗವನ್ನು ಇಲ್ಲಿ ಪೂಜಿಸುವೆನು. ಈ ಆತ್ಮಲಿಂಗವು ಅತ್ಯಂತ ಮಹತ್ತರವಾದದ್ದು. ಅಖಂಡ ಭೂಮಿಯನ್ನೇ ಧರಿಸಿರುವ ನಿನಗೂ ಇದೇ ಆಧಾರಭೂತವಾದದ್ದಾಗಿರುತ್ತದೆ. ನಿನಗೆ ಭೂಭಾರವನ್ನು ಹೊರುವ ಸಾಮರ್ಥ್ಯವೂ ಈ ಶಿವಲಿಂಗದ ಅಂಶಾಂಶದಿಂದಲೇ ಉಂಟಾಗಿರುವುದು. ॥೨೧॥

ಅಪಾರವಾದ ತಪಸ್ಸಿನಿಂದ ಲಭಿಸುವ ಈ ಶಿವಲಿಂಗಸಂದರ್ಶನಾದಿಗಳನ್ನು ನೀನು ಈಗ ಮಾಡಿ ಧನ್ಯನಾಗಿದ್ದೀಯೆ. ನನ್ನನ್ನು ಸಂಪೂಜಿಸಿದುದರಿಂದ ಪರಮ ಕೃತಕೃತ್ಯನಾಗಿದ್ದೀಯೆ. ನನ್ನ ಪೂಜಾಫಲವೇ ಹೀಗೆ ಮಹತ್ತರವಾದುದು. ॥೨೨॥

ಈಗ ನೀನು ಈ ಗೌರಿಯನ್ನು ಬಾಲಿಕೆ ಎಂದು ಭಾವಿಸಿದ್ದರಿಂದ ನಿನ್ನ ಕನ್ಯಕೆ ಎಂದೇ ತಿಳಿದುಕೋ. ಮತ್ತು ಈಕೆಯನ್ನು ಪುತ್ರಿಯನ್ನು ಕಾಪಾಡುವಂತೆ ಲಾಲನೆ ಪಾಲನೆಗಳಿಂದ ಪೋಷಿಸಿ ಆನಂದಪಡು. ಈಗ ನೀನು ಈ ಗೌರಿಯನ್ನು ಮಹಾಜಾಗರೂಕತೆಯಿಂದ ನಿನ್ನ ಮನೆಗೆ ಕರೆದುಕೊಂಡು ಹೋಗು. ॥೨೩॥

ಮುಂದೆ ನಾನೇ ಸ್ವತಃ ಈ ಗೌರಿಯನ್ನು ನೋಡಲು ನಿನ್ನ ಮನೆಗೆ ಬರುವೆನು. ಅಲ್ಲಿಯವರೆಗೂ ನೀನು ಈಕೆಯನ್ನು ಅತ್ಯಾದರದಿಂದ ಲಾಲಿಸಿ ಪೋಷಿಸು. ॥೨೪॥

ಇತ್ಯುಕ್ತ್ವಾಂತರ್ದಧೇ ಸಾಂಬಸ್ತಸ್ಮಿನ್ ಲಿಂಗೇ ಮನೋಹರೇ ।
ಸ ಗೌರ್ಯಾಃ ಕಾಮರೂಪಾಣಿ ಸ್ಮರನ್ ತದ್ವೈಭವಾರ್ಣವಾತ್॥೨೫॥

ತತಃಪರಂ ಸ ಶೈಲೇಂದ್ರೋ ವಿಸ್ಮಯಂ ಪರಮಂ ಗತಃ ।
ಕಥಮೇತತ್ಪಾಲನಂ ಸ್ಯಾದಿತಿ ಚಿಂತಾಕುಲಸ್ತದಾ ॥೨೬॥

ತತಸ್ಸಸ್ಮಾರ ಮೇನಾಂ ತಾಂ ಪಾತುಮೇತಾಂ ಸುತಾಮಿವ।
ಸಾಪ್ಯಾಗತಾ ತದಾ ಮೇನಾ ತಾಂ ದೃಷ್ಟ್ವಾ ವಿಸ್ಮಯಂ ಗತಾ ॥೨೭॥

॥ ಮೇನೋವಾಚ ॥

ಕೇಯಂ ಬಾಲಾತಿವಿಮಲಾ ಬಾಲವಿದ್ಯುಲ್ಲತಾನಿಭಾ ।
ಕೇನ ಭಾಗ್ಯೇನ ದೃಷ್ಟೇಯಮಪೂರ್ವಾ ಮೂರ್ತಿರೀದೃಶೀ ॥೨೮॥

ಈ ಪ್ರಕಾರವಾಗಿ ಹಿಮವಂತನಿಗೆ ಹೇಳಿ ಶಂಕರನು ಆಕಸ್ಮಿಕವಾಗಿ ಗೌರಿಯ ಈ ಲೀಲೆಯನ್ನೂ, ಸಕಲ ವೈಭವ ಜನಕ ಸಾಮರ್ಥ್ಯವನ್ನೂ ಪರ್ಯಾಲೋಚಿಸುತ್ತಾ ಅದೇ ಶಿವಲಿಂಗದಲ್ಲಿಯೇ ಮಾಯವಾಗಿ ಐಕ್ಯನಾದನು. ॥೨೫॥

ಈ ಆಕಸ್ಮಿಕವಾದ ಎಲ್ಲಾ ವಿದ್ಯಮಾನಗಳನ್ನು ಪರ್ಯಾಲೋಚಿಸುತ್ತಾ ಹಿಮವಂತನಿಗೂ ಅತ್ಯಂತ ವಿಸ್ಮಯವಾಯಿತು. ಅಲ್ಲದೇ ತಾನು ಎಲ್ಲಿ! ಭಗವತಿಯಾದ ಗೌರಿ ಎಂತಹವಳು! ಆಕೆಯನ್ನು ಲಾಲನೆ ಪೋಷಣೆಮಾಡುವುದು ಹೇಗೆ! ಅದು ತನ್ನಿಂದ ಶಕ್ಯವಾದೀತೇ ಎಂದು ಮುಂತಾದ ಚಿಂತೆಯು ಆತನನ್ನು ಬಾಧಿಸತೊಡಗಿತು. ॥೨೬॥

ಬಳಿಕ ಹಿಮವಂತನು ಗೌರಿಯನ್ನು ಪಾಲಿಸುವುದಕ್ಕೆ ತನ್ನ ಪತ್ನಿಯು ಸಮರ್ಥಳಾಗಬಹುದೆಂಬ ಯೋಚನೆಯಿಂದ ಪ್ರಿಯಳಾದ ಮೇನಾದೇವಿಯನ್ನು ಸ್ಮರಿಸಿದನು. ಅವನು ಸ್ಮರಿಸಿದೊಡನೆಯೇ ಮೇನಾದೇವಿಯು ಅಲ್ಲಿಗೆ ಬಂದಳು. ಆಕೆಯು ಕುಮಾರೀಭಾವವನ್ನು ತಳೆದು ಅಲ್ಲಿಯೇ ನಗುತ್ತಲಿದ್ದ ಗೌರಿಯನ್ನು ನೋಡಿ ಅತ್ಯಂತ ವಿಸ್ಮಿತಳಾಗಿ ಹಿಮವಂತನನ್ನು ಕುರಿತು ಪ್ರಶ್ನಿಸಿದಳು. ॥೨೭॥

"ಪ್ರಿಯನೇ, ಈ ಅತ್ಯಂತ ಸುಂದರಿಯಾದ ಕನ್ಯಕೆ ಯಾರು? ಸಾಕ್ಷಾತ್ ಮಿಂಚಿನ ಬಳ್ಳಿಯಂತೆ ಈಕೆಯು ಉಜ್ವಲಳಾಗಿರುವಳು. ಯಾವ ಸೌಭಾಗ್ಯದಿಂದ

ನಿತತ್ಸಂದರ್ಶನಾದೇವ ಮಮಾನಂದಃ ಪ್ರವರ್ಧತೇ ।
ಆನಂದಮೂರ್ತಿರೇವೇಯಮಮಾನಂದಂ ದಾತುಮಿಚ್ಛತಿ ॥೨೯॥

ಇತಿ ತದ್ವಚನಂ ಶ್ರುತ್ವಾ ಪ್ರಾಹ ಮೇನಾಂ ಸ ತತ್ಪತಿಃ ।
ವಿಶಿಷ್ಯ ಪೂರ್ವವೃತ್ತಾಂತಂ ಸ್ಮೃತ್ವಾ ಸ್ಮೃತ್ವಾ ಯಥಾಕ್ರಮಂ ॥೩೦॥

ತತಸ್ತದುಕ್ತಮಾಕರ್ಣ್ಯ ಸಾಪಿ ಮೇನಾತಿವಿಸ್ಮಿತಾ ।
ಶಿವಾ ಸಂಕಲ್ಪಿತಾ ಸೇಯಂ ಶಿವಾ ನೂನಂ ಶಿವಪ್ರದಾ ॥೩೧॥

ಇತ್ಯುಕ್ತ್ವಾ ಸಾತಿಸಂತೋಷೈರ್ದುಂದುಭಿಧ್ವನಿಪೂರ್ವಕಂ ।
ತಾಮಾದಾಯ ಯಯೌ ಮಂದಂ ಸುಂದರಂ ನಿಜಮಂದಿರಂ ॥೩೨॥

ನಿನಗೆ ಈಕೆಯ ಸಂದರ್ಶನವಾಯಿತು? ಈ ತೆರನಾದ ರೂಪಗುಣರಾಶಿಯು ಮತ್ತೆಲ್ಲಿಯೂ ನಮ್ಮ ದೃಷ್ಟಿಗೋಚರವಾಗಿಲ್ಲ. ॥೨೮॥

ಈಕೆಯನ್ನು ನೋಡಿದೊಡನೆಯೇ ನನಗೆ ಆನಂದವು ಉಕ್ಕೇರಿಬರುತ್ತಿರುವುದು. ಸಾಕ್ಷಾತ್ ಆನಂದಮಯಿಯಾದ ಈಕೆಯು ಕೇವಲ ನಮಗೆ ಆನಂದವನ್ನೇ ಕೊಡುತ್ತಿರುವಳು. ॥೨೯॥

ಈ ರೀತಿ ಮೇನಾದೇವಿಯು ಪ್ರಶ್ನಿಸಲು ಹಿಮವಂತನು ತನ್ನ ಪತ್ನಿಗೆ ನಡೆದ ಎಲ್ಲಾ ಸಂಗತಿಗಳನ್ನೂ ಮೊದಲಿಂದ ಕೊನೆಯವರಿಗೂ ವಿಶದವಾಗಿ ಹೇಳಿದನು. ॥೩೦॥

ತನ್ನ ಪತಿಯು ಹೇಳಿದ ಎಲ್ಲಾ ಸಂಗತಿಗಳನ್ನೂ ಕೇಳಿ ಮೇನಾದೇವಿಗೆ ಅತ್ಯಾಶ್ಚರ್ಯವೂ ಪರಮಾನಂದವೂ ಆಯಿತು. ಈ ನನ್ನ ಪ್ರಿಯ ಕುಮಾರಿಯು ನಿಜವಾಗಿಯೂ ಭಗವತಿಯಾದ ಗೌರಿಯೇ ಆಗಿರುವಳು. ಈಕೆಯ ದೆಸೆಯಿಂದಲೇ ನಮಗೆ ಸಕಲ ಸೌಭಾಗ್ಯಗಳೂ ಪ್ರಾಪ್ತವಾಗುವುವು. ಇಂಥ ಭಗವತಿಯನ್ನು ನಾವು ಕುಮಾರಿಕೆಯನ್ನಾಗಿ ಪಡೆದದ್ದರಿಂದ ಧನ್ಯರಾದೆವು ಎಂದು ಮುಂತಾಗಿ ನೆನೆಯುತ್ತಾ ಆನಂದಪಟ್ಟಳು. ಬಳಿಕ ದುಂದುಭಿಯೇ ಮೊದಲಾದ ಮಂಗಳವಾದ್ಯಗಳು ಮೊಳಗುತ್ತಿರಲು ಕುಮಾರೀರೂಪಧಾರಿಣಿಯಾದ ಗೌರಿಯನ್ನು ಕರೆದುಕೊಂಡು ತನ್ನ ದಿವ್ಯವಾದ ಅರಮನೆಗೆ ತೆರಳಿದಳು. ॥೩೧-೩೨॥

ಯದಾ ಪ್ರವಿಷ್ಟಾ ಗಿರಿರಾಜರಾಜ
ಕಾರ್ತಸ್ವರಾಕಾರಮೃಗೇಂದ್ರಜುಷ್ಟಂ ।
ತದೈವ ಪದ್ಮಾದಿಸುರಾಂಗನಾಶ್ಚ
ಸಮಾಗತಾಸ್ತತ್ಪದಸೇವನಾಯ ॥೩೩॥

ದೇವದುಂದುಭಿನಿರ್ಘೋಷತೂರ್ಯಧ್ವನಿವಿರಾಜಿತಂ ।
ತದಾ ತನ್ಮಂದಿರಂ ಜಾತಂ ಸುರನಾರೀಸಮಾವೃತಂ ॥೩೪॥

ಅಂತಕಾಂತಕಮನೋಹರಕಾಂತಾ
ಸೇಯಮಿತ್ಯಭಿನವೈರುಪಚಾರೈಃ ।
ತಾಮುಪಾರಸುರಕಿನ್ನರದಾರಾಃ
ಚಾಮರೈರಪಿ ಸಿಷೇವುರಪಾರೈಃ ॥೩೫॥

ಯಾವ ಸುಮುಹೂರ್ತದಲ್ಲಿ ಭಗವತಿಯಾದ ಗೌರಿಯು ಹಿಮವಂತನ ಕುಮಾರಿಕೆ ಎಂದೆನಿಸಿಕೊಂಡು ಹಿಮವಂತನ ದಿವ್ಯವಾದ ಅರಮನೆಯನ್ನು ಪ್ರವೇಶಿಸಿದಳೋ, ಆ ಮೊದಲುಗೊಂಡು ಲಕ್ಷ್ಮಿಯೇ ಮೊದಲಾದ ದೇವಸ್ತ್ರೀಯರು ಭಗವತಿಯ ಪಾದಪದ್ಮಗಳ ಸೇವೆಗಾಗಿ ಆ ಅರಮನೆಗೆ ಪದೇ ಪದೇ ಬರತೊಡಗಿದರು. ॥೩೩॥

ಹಿಮವಂತನ ಮನೆಗೆ ಭಗವತಿ ಗೌರಿಯು ಪ್ರವೇಶಸಮಾರಂಭಮಾಡುವ ಸಮಯದಲ್ಲಿ ಆ ಅರಮನೆಯು ಆಗುಂತುಕರಾದ ದೇವಾಂಗನೆಯರಿಂದ ಕಿಕ್ಕಿರಿದಿದ್ದಿತು. ದೇವವಾದ್ಯಗಳಾದ ದುಂದುಭಿ, ಭೇರಿ, ಓಲಗ ಮುಂತಾದ ಮಂಗಳವಾದ್ಯಗಳಿಂದ ಪ್ರತಿಧ್ವನಿತವಾಗಿ ಅಲ್ಲಿ ಮಹಾಉತ್ಸವಸಂಭ್ರಮವೇ ಜರುಗಿತು. ॥೩೪॥

ಸಮಾಗತಳಾದ ಗೌರಿಯು ಭಗವಂತನಾದ ಮೃತ್ಯುಂಜಯನ ಪರಮಪ್ರೀತಿಗೆ ಪಾತ್ರಳಾಗಿರುವ ಪತ್ನಿ ಎಂಬುದನ್ನು ದೇವಸ್ತ್ರೀಯರು, ಕಿನ್ನರಪತ್ನಿಯರು ಎಲ್ಲರೂ ನೋಡಿದಕೂಡಲೇ ತಿಳಿದುಕೊಂಡರು. ಆದ್ದರಿಂದಲೇ ಅವರು ಭಗವತಿಯ ಪ್ರೀತಿಯನ್ನು ಸಂಪಾದಿಸಬೇಕೆಂದು ಅತ್ಯಂತ ಉತ್ಸಾಹದಿಂದ ಚಾಮರ, ಛತ್ರಿ ಮುಂತಾದ ಸೇವೆಗಳನ್ನಲ್ಲದೇ ಇನ್ನೂ ಅನೇಕವಿಧವಾದ ಉಪಚಾರಗಳಿಂದ ಸೇವಿಸಿದರು. ॥೩೫॥

ಸುರದಾರಾನಪಾರಾಂಸ್ತಾನ್ ತದಾರಾಧನತತ್ಪರಾನ್ ।
ವಿಲೋಕ್ಯ ಪರಮಂ ಪ್ರಾಪ ಸಂತೋಷಂ ಗಿರಿನಾಯಕಃ ॥೩೬॥

ಸುರಾಂಗನಾನಾಂ ಚ ಸುಮಂಗಲಾನಿ
ಗಾನಾನಿ ಡೋಲಾಂತರತಲ್ಪಸಂಗೇ ।
ತಸ್ಯಾಃ ಪ್ರಜಾತಾನಿ ಸುಮಂಗಲೇಽಪಿ
ಸಂಪ್ರಾಪ್ತದೀಪ್ತಾಖಿಲಮಂಗಲೇತಿ ॥೩೭॥

ಶ್ರೀಸರ್ವಮಂಗಲ್ಯೈಡೋಲಾ ತವೇಯ ಮಹಿಮಂಡಲ್ಯೈಃ ।
ಅಲಂಕೃತಾ ಪಶ್ಯ ಪಶ್ಯೇತ್ಯಾಂದೋಲನಪರಾಸ್ಸುರಾಃ ॥೩೮॥

ಹಿಮವಾನಪಿ ತಾನ್ ದೃಷ್ಟ್ವಾ ಸ್ವದಾರಸಹಿತಾನ್ ಸುರಾನ್ ।
ಸಂತೋಷಂ ಪರಮಂ ಪ್ರಾಪ ಮಂಗಲಂ ಜಾತಮಿತ್ಯಪಿ ॥೩೯॥

ಈ ಪ್ರಕಾರವಾಗಿ ಸಮಸ್ತ ದೇವಾಂಗನೆಯರೂ ಬಂದು ತನ್ನ ಕುಮಾರಿಯಾದ ಗೌರಿಯನ್ನು ಸೇವಿಸುತ್ತಿರುವರು ಅಂದಮೇಲೆ ನನ್ನ ಪುತ್ರಿಯು ಮಹಾಮಹಿಮಶಾಲಿನಿ ಮತ್ತು ಪರಮಭಾಗ್ಯವತಿಯೇ ಸರಿ ಎಂದು ಪದೇ ಪದೇ ನೆನೆಸಿಕೊಂಡು ಹಿಮವಂತನಿಗೆ ಪರಮಾನಂದವಾಯಿತು. ॥೩೬॥

ಕುಮಾರೀಭಾವವನ್ನು ತಳೆದಿದ್ದ ಆ ಭಗವತಿ ಗೌರಿಯನ್ನು ದೇವಾಂಗನಾದಿಗಳು ತೊಟ್ಟಲಿನಲ್ಲಿ ಚಿತ್ರವಿಚಿತ್ರವಾದ ಮೆತ್ತನೆಯ ಹಾಸಿಗೆಯನ್ನು ಹಾಸಿ ಮಲಗಿಸಿ, ಮಂಗಳಕರವಾದ ಜೋಗುಳದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿ ತೂಗುತ್ತಿದ್ದರು. ಹೀಗೆ ಸುಮಂಗಲಿಯರ ಮಂಗಳಗಾನಗಳಿಂದ ಸರ್ವವಿಧದಲ್ಲಿಯೂ ಮಂಗಳೋತ್ಸವಗಳು ಅವಿಚ್ಛಿನ್ನವಾಗಿ ಅಭಿವೃದ್ಧವಾಗುತ್ತಿದ್ದವು. ॥೩೭॥

ಆಗ ದೇವತೆಗಳೂ ಸಹ ಗಿರಿಜೆಯ ಸೇವೆಗಾಗಿ ಬರುತ್ತಿದ್ದರು. ಪಾರ್ವತಿಯೇ, ನೋಡು ನೋಡು, ನಿನ್ನ ಸೇವೆಗಾಗಿ ಲಕ್ಷ್ಮಿಯೇ ಮೊದಲಾದ ಸುಮಂಗಲಿಯರು ಸಿದ್ಧರಾಗಿರುತ್ತಾರೆ. ನಿನ್ನನ್ನು ತೂಗುವುದಕ್ಕಾಗಿ ನಾಗಾಭರಣಗಳಿಂದ ಅಲಂಕೃತವಾದ ತೊಟ್ಟಿಲುಸಿದ್ಧವಾಗಿದೆ ಎಂದು ಮುಂತಾಗಿ ಹೇಳುತ್ತಾ ಅತ್ಯುತ್ಸಾಹದಿಂದ ದೇವತೆಗಳೆಲ್ಲರೂ ಗಿರಿಜೆಯ ತೊಟ್ಟಿಲನ್ನು ತೂಗುತ್ತಿದ್ದರು. ॥೩೮॥

ಹೀಗೆ ದೇವತೆಗಳೆಲ್ಲರೂ ತಮ್ಮ ಪತ್ನಿಯರೊಂದಿಗೆ ಪದೇ ಪದೇ ಹಿಮವಂತನ ಮನೆಗೆ ಬರುತ್ತಿದ್ದುದರಿಂದ ಹಿಮವಂತನಿಗೆ ಅತ್ಯಂತ ಸಂತೋಷವಾಗು

ತದಾ ಪ್ರಭೃತಿ ತೇ ದಾರಾಸ್ಸುರಾಣಾಂ ಶೈಲಮಂದಿರೇ ।
ತತ್ಸೇವಾರ್ಥಂ ನಿವಾಸಂ ಚ ಚಕ್ರುರಾನಂದಸಂವೃತಾಃ ॥೪೦॥

ಸಾ ಬಾಲಿಕಾ ಶಾರದಶುಕ್ಲಪಕ್ಷ
ನವೇಂದುರೇಖೇವ ಸುಖಾಯ ತೇಷಾಂ ।
ಶನೈಶ್ಶನೈರ್ವೃದ್ಧಿಮವಾಪ ಸಾಪಿ
ಮನೋಜ್ಞರೂಪಾಚ ಕೃಪಾಸ್ವರೂಪಾ ॥೪೧॥

ಸುರದಾರಕೃತೋಪಚಾರಮಾರಾ
ದನಿವಾರ್ಯೈರ್ವ ವಿನೋದದಾನಶೀಲಾ ।
ಮಹಿಲೇತಿ ಶಿವಸ್ಯ ತೈರುದಾರೈ
ರನುವಾರಂ ಪರಿಸೇವಿತಾಪಿ ಬಾಲಾ ॥೪೨॥

ತ್ತಿದ್ದಿತು. ತನ್ನ ಅರಮನೆಯಲ್ಲಿ ನಿತ್ಯವೂ ದೊಡ್ಡ ಮಂಗಳ ಸಮಾರಂಭವೇ ನಡೆಯುವಂತೆ ಸಂತೋಷ ಸಡಗರಗಳು ನಡೆಯುತ್ತಿದ್ದುದನ್ನು ನೋಡಿ ಅವನಿಗೆ ಪರಮಾನಂದವಾಗುತ್ತಿದ್ದಿತು. ॥೩೯॥

ಆ ಮೊದಲುಗೊಂಡು ದೇವಾಂಗನೆಯರು ಗಿರಿಜೆಯ ಸೇವೆಯನ್ನೇ ಮಾಡುತ್ತಿರಬೇಕೆಂಬ ಆಸೆಯಿಂದ ಹಿಮವಂತನ ಮನೆಯಲ್ಲಿಯೇ ಉಳಿದುಕೊಳ್ಳಲಾರಂಭಿಸಿದರು. ಕಾಲಕಾಲದಲ್ಲಿ ಆ ದೇವಸ್ತ್ರೀಯರು ಕುಮಾರಿಯಾದ ಗಿರಿಜೆಯನ್ನು ಲಾಲನ ಪೋಷಣಾದಿಗಳಿಂದ ಸೇವಿಸುತ್ತಾ ಆನಂದವಾಗಿ ಅಲ್ಲಿಯೇ ವಾಸಿಸಿದರು. ॥೪೦॥

ಗಿರಿಜೆಯು ಶರತ್ಕಾಲದ ಶುಕ್ಲಪಕ್ಷದ ಚಂದ್ರನಂತೆ ದಿನೇ ದಿನೇ ಅಭಿವೃದ್ಧಿ ಹೊಂದುತ್ತಾ ಸಕಲರಿಗೂ ನಯನಾನಂದವನ್ನುಂಟುಮಾಡುತ್ತಿದ್ದಳು. ಅವಳು ದೊಡ್ಡವಳಾದಂತೆಲ್ಲಾ ಆಕೆಯ ಅಂಗಾಂಗಗಳಲ್ಲಿ ಸೌಂದರ್ಯಪ್ರವಾಹವೇ ಉಕ್ಕೇರಿ ಬರುವಂತೆಯೂ, ಕರುಣಾರಸವು ಆಕೆಯಲ್ಲಿ ಪೂರ್ಣವಾಗುತ್ತಿರುವಂತೆಯೂ ತೋರುತ್ತಿದ್ದಿತು. ಹೀಗಿರುವ ಗಿರಿಜೆಯನ್ನೇ ನೋಡುತ್ತಾ ಹಿಮವಂತನೇ ಮೊದಲಾದ ಸಮಸ್ತರೂ ಅತ್ಯಂತ ಆನಂದವನ್ನು ಪಡೆಯುತ್ತಿದ್ದರು. ॥೪೧॥

ತಂಡೋಪತಂಡರಾಗಿ ಬಂದಿದ್ದ ಆ ದೇವಾಂಗನೆಯರೇ ಮೊದಲಾದವರು ಕ್ಷಣಕ್ಷಣದಲ್ಲಿಯೂ, ಈ ಬಾಲಿಕೆಯು ಸಾಕ್ಷಾತ್ ಭಗವಾನ್ ಶಂಕರನ ಪತ್ನಿಯಾಗಿರು

ರೂಪಯೌವನಸಂಪನ್ನಾಮೇನಾಂ ಮೇನಾ ಮುಹುರ್ಮುಹುಃ ।
ವಿಲೋಕ್ಯ ಪರಮಾನಂದಂ ಪ್ರಾಪ ದುಷ್ಪ್ರಾಪಮನ್ವಹಂ ॥೪೩॥

ತತಃಪರಂ ಕಿನ್ನರಸಿದ್ಧಶುದ್ಧ
ಗಂಧರ್ವನಾರೀಪರಿಸೇವಿತಾ ಚ ।
ಚಚಾರ ಶೈಲೇಂದ್ರಗೃಹೇ ಮನೋಜ್ಞೇ
ವಿದ್ಯುಲ್ಲತೇವಾಮಿತಮೂರ್ತಿರೂಪಾ ॥೪೪॥

ಶ್ರುತ್ವಾತೋ ಮೂರ್ತಿಸೌಂದರ್ಯವಾಹಿನೀ ಸೇಯಮಿತ್ಯಪಿ ।
ಮೇನಾ ವಚನಧಾರಾಭಿರಾನಂದಂ ಪ್ರಾಪ ಶೈಲರಾಟ್ ॥೪೫॥

ವಳೆಂಬುದನ್ನು ನೆನೆಸಿಕೊಂಡು ಹೊಸಹೊಸದಾಗಿ ಸೇವೆಯನ್ನಾರಂಭಿಸುತ್ತಿದ್ದರು. ಹೀಗೆ ಆ ಅಪಾರವಾದ ಸೇವೆಯನ್ನು ಕೊಂಚವೂ ನಿಷೇಧಿಸದೇ ಗಿರಿಜೆಯು ಸ್ವೀಕರಿಸುತ್ತಿದ್ದಳು. ಸಮಸ್ತರಿಗೂ ಸಂತೋಷವನ್ನು ಉಂಟುಮಾಡುತ್ತಿರುವುದೇ ಗಿರಿಜೆಗೆ ಮುಖ್ಯ ವ್ಯವಹಾರವೆಂಬಂತೆ ತೋರುತ್ತಿದ್ದಿತು. ॥೪೨॥

ಕ್ರಮೇಣ ಸಕಲ ಸುಲಕ್ಷಣಗಳಿಂದಲೂ, ರೂಪಗುಣಗಳಿಂದಲೂ, ಸೌಂದರ್ಯ ಯೌವನಗಳಿಂದಲೂ ಸಂಪನ್ನೆಯಾದ ಗಿರಿಜೆಯನ್ನು ನೋಡುತ್ತ ನೋಡುತ್ತಾ ತಾಯಿಯಾದ ಮೇನಾದೇವಿಗೆ ಪರಮಾನಂದವಾಗುತ್ತಿದ್ದಿತು. ಇತರರಿಗೆ ದುರ್ಲಭವಾದ ಮಾತೃತ್ವವನ್ನು ಪಡೆದುಕೊಂಡಿದ್ದರಿಂದ ಅವಳ ಆನಂದವು ಅಪಾರವಾಗಿದ್ದಿತು. ॥೪೩॥

ಹೀಗೆಯೇ ದಿನವೂ ಕಿನ್ನರರು, ಸಿದ್ಧ, ಗಂಧರ್ವ, ದೇವಾಂಗನೆಯರು ಮುಂತಾದ ಅಪಾರ ಸ್ತ್ರೀಮಂಡಲಿಯಿಂದ ಲಾಲಿತಳೂ, ಪೋಷಿತಳೂ, ಸೇವಿತಳೂ, ಆಗಿ ಗಿರಿಜೆಯು ಹಾಗೆ ಪ್ರವರ್ಧಮಾನಳಾದಳು. ಮತ್ತು ಆ ಹಿಮವಂತನ ಅರಮನೆಯಲ್ಲಿ ಆ ಕನ್ಯಕೆಯಾದ ಗಿರಿಜೆಯೂ ಸಂಚರಿಸಲಾರಂಭಿಸಲು, ನೋಡುವವರಿಗೆ ಸಾಕ್ಷಾತ್ ಮಿಂಚಿನ ಬಳ್ಳಿಯೇ ತಿರುಗಾಡುತ್ತಿರುವುದೋ ಎಂಬಂತೆ ಭಾಸವಾಗುತ್ತಿದ್ದಿತು. ॥೪೪॥

ಮೇನಾದೇವಿಯು ಆಗಾಗ ತನ್ನ ಪತಿಯಾದ ಹಿಮವಂತನ ಕೂಡ ತನ್ನ ಪುತ್ರಿಯು ದೊಡ್ಡವಳಾಗುತ್ತಿರುವಳೆಂದೂ ಸಾಕ್ಷಾತ್ ಸೌಂದರ್ಯನಿಧಿಯಾಗಿರುವಳೆಂದೂ ವರ್ಣಿಸಿ ವರ್ಣಿಸಿ ಹೇಳುತ್ತಿದ್ದಳು. ಈ ಸಂತೋಷವಾರ್ತೆಯನ್ನು ಕೇಳಿ

ತತಃ ಪರಂ ಪರಿಣಯಃ ಕಥಂ ಭಾವೀತಿ ಚಿಂತಯಾ ।
ಮೇನಯಾ ಸಹ ಶೈಲೇಶೋ ವಿಚಾರಂ ಚ ಚಕಾರ ಸಃ ॥೪೬॥

॥ ಶೈಲೇಂದ್ರ ಉವಾಚ ॥

ತ್ವದುಕ್ತಿಭಿಸ್ತಾವದಿಯಂ ಮಯಾಪಿ
ಜ್ಞಾತ್ವೈವ ಸಂಪೂರ್ಣವಯಃಪ್ರಮಾಣಾ ।
ಅತಃ ಪರಂ ಕಿಂ ಸಮಯೋಽಪಿ ವೃತ್ತಃ
ಪಾಣಿಗ್ರಹಸ್ಯಾಪಿ ಶುಭಗ್ರಹೇಷು ॥೪೭॥

ಕೋ ವಾ ಭವಿಷ್ಯತಿ ಪತಿರ್ಭಾಗ್ಯವಾನಮಿತಪ್ರಭಃ ।
ನ ಜಾನೇ ಸ ಪತಿಃ ಪ್ರಾಯಃ ಪ್ರಿಯಮೇತಾದೃಶಂ ವಸು ॥೪೮॥

ಹಿಮವಂತನು ಅಮೃತವನ್ನು ಆಸ್ವಾದಿಸಿದವನಂತೆ ಪರಮಾನಂದವನ್ನು ಪಡೆಯುತ್ತಿದ್ದನು. ॥೪೫॥

ಈ ರೀತಿ ಕನ್ಯಕೆಯು ಪ್ರವರ್ಧಮಾನಳಾಗಲು ಕ್ರಮೇಣ ಹಿಮವಂತ ಮೇನಾದೇವಿಯರಿಗೆ ತಮ್ಮ ಪುತ್ರಿಯ ವಿವಾಹದ ಚಿಂತೆಯು ಆರಂಭವಾಯಿತು. ಪತಿಪತ್ನಿಯರಲ್ಲಿ ನಿತ್ಯವೂ ಪುತ್ರಿಯ ಮದುವೆಯ ವಿಚಾರವೇ ಚರ್ಚಿತವಾಗತೊಡಗಿತು. ಹೀಗೆಯೇ ವಿಚಾರ ವಿನಿಮಯವು ನಡೆಯುತ್ತಿದ್ದಾಗ ಹಿಮವಂತನು ಒಮ್ಮೆ ಈರೀತಿ ಹೇಳಿದನು. ॥೪೬॥

ಪ್ರಿಯಳೇ, ನೀನು ಹೇಳುವಂತೆ ನಮ್ಮ ಕುಮಾರಿಯು ಪ್ರಾಪ್ತವಯಸ್ಕಳಾಗಿದ್ದಾಳೆ. ಗಿರಿಜೆಯು ಪ್ರವರ್ಧಮಾನಸ್ಥಿತಿಗೆ ಬಂದಿರುವುದನ್ನು ನಾನೂ ಸಹ ನೋಡುತ್ತಲಿದ್ದೇನೆ. ನಮ್ಮ ಪ್ರಿಯಕುವರಿಯನ್ನು ಶುಭಮುಹೂರ್ತದಲ್ಲಿ ಯೋಗ್ಯನಾದ ವರನಿಗೆ ಪ್ರದಾನಮಾಡುವ ಕಾಲವು ಪ್ರಾಪ್ತವಾಗಿದೆ ಎಂಬ ಚಿಂತೆಯು ನನ್ನನ್ನು ಬಾಧಿಸುತ್ತಿದೆ. ॥೪೭॥

ಇಂಥ ಲೋಕೋತ್ತರವಾದ ರೂಪಗುಣಸಂಪನ್ನೆಯಾದ ನಮ್ಮ ಕುವರಿಗೆ ಅನುರೂಪನಾದ ವರನು ಯಾವನಿರುವನು? ಎಂಬ ಚಿಂತೆಯೇ ಸತತವೂ ನನ್ನನ್ನು ಪೀಡಿಸುತ್ತಿರುವುದು. ಪರಮ ಭಾಗ್ಯಶಾಲಿಯೂ ಮಹಿಮಾವಂತನೂ ಐಶ್ವರ್ಯಶಾಲಿಯೂ ಆದ ವರನೇ ಈಕೆಗೆ ಆಗಬೇಕಷ್ಟೆ. ಅಂಥ ಮಹಾನುಭಾವನು ಎಲ್ಲಿರುವನೋ ಒಂದೂ ನನಗೆ ತೋರುತ್ತಿಲ್ಲ. ॥೪೮॥

ವಿದ್ಯುಲ್ಲತಾನಾಮಪಿ ಕೋಟಿಯೋ ಯೇ
ನೈತತ್ಸರೂಪಾಃ ಸ್ಮರಣೇಽಪಿ ದೂರಂ ।
ಪ್ರಾಯಃ ಪ್ರಯಾಂತ್ಯೇವ ನ ಲಜ್ಜಯಾ ಕಿಂ
ಕಸ್ತತ್ಸಮಾನಃ ಪತಿರಸ್ತಿ ಲೋಕೇ ॥೪೯॥

ಸಾ ಸರ್ವದೇವಾಸುರದಾರವಂದ್ಯಾ
ಪ್ರಾಯಶ್ಶಿವಾನೀತಿ ಮತಿರ್ಮಮಾಪಿ ।
ಜಾತೋ ವಿವಾಹೋ ಭವಿತಾ ಕಥಂ ವಾ
ಕ್ವಾಹಂ ಶಿವಃ ಕ್ವಾಮರವಂದ್ಯಪಾದಃ ॥೫೦॥

ಇತ್ಯೇವಂ ಚಿಂತಯಾ ನಿತ್ಯಂ ಗಿರಿರಾಹಾರವರ್ಜಿತಃ ।
ವಿಚಾರಸಾಗರೇ ಮಗ್ನೋ ಪುನಃಪುನರುದಾರಧೀಃ ॥೫೧॥

ಕೋಟಿಕೋಟಿಯಾಗಿ ಒಟ್ಟಾಗಿ ಸೇರಿಕೊಂಡಿರುವ ಮಿಂಚಿನ ಬಳ್ಳಿಗಳೂ ಸಹ ಸೌಂದರ್ಯಕಾಂತಿಗಳಿಂದ ನಮ್ಮ ಕುವರಿಯ ಸಾಮ್ಯವನ್ನು ಪಡೆಯಲಾರವು. ಅಂಥ ಮಿಂಚಿನ ಬಳ್ಳಿಗಳೂ ಗಿರಿಜೆಯ ಸ್ಮರಣೆಯು ಬಂದೊಡನೆಯೇ ನಾಚಿ ಕೊಂಡೋಡುವುವು. ಹೀಗಿರುವ ನಮ್ಮ ಪ್ರಿಯಕುವರಿಗೆ ಅನುರೂಪನಾದ ವರನು ಅಖಂಡ ಲೋಕದಲ್ಲಿ ತಾನೇ ಯಾವನಿರುವನು? ॥೪೯॥

ಪ್ರಿಯಳೇ, ನಮ್ಮ ಕುಮಾರಿಯ ಪೂರ್ವಸಂಗತಿಯನ್ನು ಯೋಚಿಸಿ, ಮತ್ತು ಈಗ ಸಕಲ ದೇವಾಸುರನಾರಿಯರೂ ಸಹ ಈಕೆಯ ಸೇವೆಯನ್ನು ಮಾಡುತ್ತಿರುವುದನ್ನು ನೋಡಿ, ನಾನು ನಮ್ಮ ಗಿರಿಜೆಯನ್ನು ಸಾಕ್ಷಾತ್ ಭಗವತಿಯಾದ ಗೌರಿ ಎಂತಲೇ ನಂಬಿರುತ್ತೇನೆ. ಆದರೆ ಈಗ ಈಕೆಗೆ ಪಾಣಿಗ್ರಹಣ ಕಾಲವು ಪ್ರಾಪ್ತವಾಗಿದೆ. ಯೋಚಿಸಿ ನೋಡಿದರೆ ಈಕೆಗೆ ಅನುರೂಪನು ಆ ಮಹಾದೇವನೇ ಸರಿ. ಆದರೆ ಆ ಭಗವಂತನನ್ನು ಪ್ರಾರ್ಥಿಸಿಕೊಳ್ಳುವ ಬಗೆ ಹೇಗೆ? ಅಲ್ಪನಾದ ನಾನೆಲ್ಲಿ? ಸಮಸ್ತ ದೇವಸಂಪೂಜ್ಯನಾದ ಆ ಪರಶಿವನೆಲ್ಲಿ? ಹೀಗಿರಲು ಇವರಿಬ್ಬರಿಗೆ ವಿವಾಹವು ನಡೆಯುವ ಉಪಾಯವು ಯಾವುದು? ॥೫೦॥

ಹೀಗೆಂದು ಪತ್ನೀ ಮೇನಾದೇವಿಯೊಡನೆ ನಿತ್ಯವೂ ಹಿಮವಂತನು ಚಿಂತಿಸುತ್ತಿದ್ದನು. ಇದೇ ಚಿಂತಾಸಮುದ್ರದಲ್ಲಿ ಮುಳುಗಿರುತ್ತಿದ್ದ ಅವನಿಗೆ ಆಹಾರವನ್ನು

ಯಾ ಸರ್ವಮಂಗಳಾ ಸಾಪಿ ಶಂಕರಾರ್ಧಾಂಗಭಾಗಿನೀ ।
ಸ್ವಸ್ವರೂಪಮನುಪ್ರಾಪ್ಯ ಚಚಾರ ಗಿರಿಮಂದಿರೇ ॥೫೨॥

ತೇನ ಸ್ವರೂಪೇಣ ಪುನರ್ಮಹೇಶಂ
ಪ್ರಾಪ್ತುಂ ಭವಾನೀ ಶಿವಪೂಜನೇನ ।
ಮತಿಂ ಚಕಾರಾತಿಮನೋಜ್ಞರೂಪಾ
ಶಿವವ್ರತೇನಾಪಿ ಪುನಃ ಸ್ಮೃತೇನ ॥೫೩॥

ಸಾ ಗೌರೀ ವಿಜಯಾಯುಕ್ತಾ ಜಯಯಾಪಿ ಸಮನ್ವಿತಾ ।
ತೃತೀಯಾವ್ರತಕಾಲಂ ಚ ಪ್ರಾಪ್ಯ ಪ್ರಾಹ ವಚೋ ಮುದಾ ॥೫೪॥

ತೆಗೆದುಕೊಳ್ಳಬೇಕೆಂಬ ಅರಿವೂ ಇರುತ್ತಿರಲಿಲ್ಲ, ಇಚ್ಛೆಯೂ ಆಗುತ್ತಿರಲಿಲ್ಲ. ಸತತವೂ ಯುಕ್ತಾಯುಕ್ತಗಳನ್ನೇ ಪರ್ಯಾಲೋಚಿಸುತ್ತಾ ವಿವಾಹ ವಿಷಯವನ್ನೇ ಕುರಿತು ಚಿಂತಿಸುತ್ತಿದ್ದನು. ॥೫೧॥

ಇತ್ತಲಾಗಿ ಶಂಕರನ ದೇಹಾರ್ಧವನ್ನೇ ಪಡೆಯುವವಳಾಗಿದ್ದ ಕುಮಾರಿ ಗಿರಿಜೆಯು, ದಿನದಿನಕ್ಕೆ ತನ್ನದೇ ಆದ ವೈಶಿಷ್ಟ್ಯವನ್ನು ಸ್ವರೂಪದ ಅರಿವನ್ನೂ ಪಡೆಯುತ್ತಾ, ಹಿಮವಂತನ ಅರಮನೆಯಲ್ಲಿ ವಿಹರಿಸುತ್ತಿದ್ದಳು. ॥೫೨॥

ಸ್ವಸ್ವರೂಪ ಪರಿಜ್ಞಾನವು ಬಂದಬಳಿಕ ಗಿರಿಜೆಗೆ ತನ್ನ ಪೂರ್ವೋತ್ತರಗಳ ಅರಿವುಂಟಾಯಿತು. ಪರಮಸೌಂದರ್ಯವನ್ನು ಪಡೆದುಕೊಂಡಿದ್ದ ಆ ಗಿರಿಜೆಯು ಪುನಃ ಭಗವಾನ್ ಶಂಕರನನ್ನೇ ಸೇರಬೇಕೆಂದು ಮನಸ್ಸಿನಲ್ಲಿ ಸಂಕಲ್ಪಿಸಿದಳು. ಹಾಗೂ ಶಿವಮಹಾವ್ರತವನ್ನು ಸ್ಮರಿಸಿಕೊಂಡು ಅದೇ ವ್ರತದ ಮೇರೆಗೆ ಶಿವಾರಾಧನೆ ಮಾಡಿ ಶಿವನನ್ನೇ ಪತಿಯನ್ನಾಗಿ ಪಡೆಯಬೇಕೆಂದೂ ನಿಶ್ಚಯಿಸಿಕೊಂಡಳು. ॥೫೩॥

ವಿಜಯೆ ಮತ್ತು ಜಯೆ ಎಂಬ ಇಬ್ಬರು ಆಪ್ತಸಖಿಯರಿಂದ ಗಿರಿಜೆಯು ಸತತವೂ ವಿಹಾರಾದಿಗಳಿಂದ ಕಾಲವನ್ನು ಕಳೆಯುತ್ತಿದ್ದಳು. ಹೀಗಿರಲು ತೃತೀಯಾ ಮಹಾವ್ರತದ ದಿನವು (ಭಾದ್ರಪದ ಶುಕ್ಲ ತೃತೀಯಾ) ಪ್ರಾಪ್ತವಾಗಲು ದೇವಿಯು ತನ್ನ ಸಖಿಯರ ಸಂಗಡ ಈ ರೀತಿ ಹೇಳಿದಳು. ॥೫೪॥

ಜಯೇ ಸುರಸರಿತ್ತೀರೇ ನೀರಜಾತಿಮನೋಹರೇ ।
ಸ್ಥಿತ್ವಾ ನೇಯಃ ಕಿಯಾನ್‌ಕಾಲೋ ಮಯೇತ್ಯಾಹಾತಿಶೋಭನಾ ॥೫೫॥

ತತಃ ಪರಂ ಸಾ ಚತುರಂತಯಾನೇ
ಸ್ಥಿತ್ವಾ ಸಖೀವೃಂದನಿವಾರಿತಾಪಿ ।
ಯಯೌ ಸರಿತ್ತೀರಮುದಾರಮಂಬಾ
ಶನೈಶ್ಶನೈರಂಬುರುಹಾತಿಧೀರಂ ॥೫೬॥

ದದರ್ಶ ಸಾ ಸರಿತ್ತೀರೇ ಮುನಿನಾರೀಗಣಂ ನಿಶಿ ।
ಸಾ ತೃತೀಯಾವ್ರತಂ ಕರ್ತುಮುದ್ಯತಂ ಸರ್ವಸಾಧನೈಃ ॥೫೭॥

ವ್ರತಂ ಚಕಾರ ಸಾ ಗೌರೀ ಯದುಕ್ತಂ ಪುರವೈರಿಣಾ ।
ತದೇವೇದಮಿತಿ ಸ್ಮೃತ್ವಾ ಸಂತೋಷಂ ಪರಮಂ ಯಯೌ ॥೫೮॥

"ಪ್ರಿಯಸಖಿ ಜಯೇ, ನಾನು ಕೆಲವು ಕಾಲ ಗಂಗಾತೀರದಲ್ಲಿ ವಾಸಿಸಲು ಅಪೇಕ್ಷಿಸುತ್ತೇನೆ. ಆ ನದಿಯಲ್ಲಿ ಅಪಾರ ಕಮಲಗಳು ಬೆಳೆದು ಮನೋಹರವಾಗಿರುತ್ತವೆ. ಅಂಥ ಸುಂದರವಾದ ಪ್ರದೇಶದಲ್ಲೇ ಇದ್ದು ಕೆಲವು ದಿನಗಳನ್ನು ಕಳೆಯಬೇಕೆಂದಿರುವೆನು." ಎಂದು ತನ್ನ ಸಖಿಯರಿಗೆ ಗಿರಿಜೆಯು ತನ್ನ ಅಭಿಲಾಷೆಯನ್ನು ತಿಳಿಸಿದಳು. ॥೫೫॥

ಕೆಲವುಜನ ಸಖಿಯರು ಗಿರಿಜೆಯು ಗಂಗಾತೀರಕ್ಕೆ ಹೋಗುವುದನ್ನು ವಿರೋಧಿಸಿ ಅಲ್ಲಿಗೆ ಹೋಗುವುದು ಬೇಡವೆಂದರು. ಆದರೆ ಗಿರಿಜೆಯು ಒಪ್ಪಲಿಲ್ಲ. ದಿವ್ಯವಾದ ಯಾನವನ್ನೇರಿ ಕೂಡಲೇ ಕಮಲಸುಮಭರಿತವಾದ ಗಂಗಾತೀರಕ್ಕೆ ಹೋದಳು.॥೫೬॥

ಆ ಗಂಗಾತೀರದಲ್ಲಿ ಅನೇಕ ಮುನಿಪತ್ನಿಯರನ್ನು ಗಿರಿಜೆಯು ನೋಡಿದಳು. ಸಾಯಂಕಾಲದ ಆ ಸಮಯದಲ್ಲಿ ಮುನಿಪತ್ನಿಯರು ನಾನಾವಿಧವಾದ ಸಾಮಗ್ರಿಗಳನ್ನು ಹೊಂದಿಸಿಕೊಂಡು ತೃತೀಯಾವ್ರತವನ್ನು ಆಚರಿಸಲು ಉದ್ಯುಕ್ತರಾಗಿದ್ದರು. ॥೫೭॥

ಆ ಮುನಿಪತ್ನಿಯರ ಪ್ರಯತ್ನವನ್ನು ನೋಡಿದಕೂಡಲೇ ಗಿರಿಜೆಯು ಆ ಪ್ರಯತ್ನವು ತೃತೀಯಾವ್ರತವನ್ನೇ ಕುರಿತದ್ದೆಂದೂ, ಅದೇ ವ್ರತವನ್ನೇ ಪೂರ್ವದಲ್ಲಿ ಶಂಕರನು ತನಗೆ ಹೇಳಿದ್ದನೆಂಬುದನ್ನೂ ಜ್ಞಾಪಿಸಿಕೊಂಡಳು. ॥೫೮॥

ತತಃ ಪರಂ ಜಯಾಮಾಹ ತಾಭಿಃ ಕಿಂ ಕ್ರಿಯತೇ ಜಯೇ ।
ವ್ರತಂ ವಿಚಾರಯಾದ್ಯೇತಿ ಸರ್ವಜ್ಞಾಪಿ ಶಿವಪ್ರಿಯಾ ॥೫೯॥

ತತಃ ಪ್ರಣಮ್ಯ ತಾಂ ಗೌರೀಂ ಗತ್ವಾ ಮುನಿವರಾಂಗನಾಃ ।
ಪ್ರಾಹ ಕಿಂ ವಾ ವ್ರತಂ ಕರ್ತುಮಾರಬ್ಧಮಿತಿ ಸಾದರಂ ॥೬೦॥

॥ ಮುನಿಪತ್ನ್ಯ ಊಚುಃ ॥

ಇದಂ ತೃತೀಯಾವ್ರತಮೇತದೇವ
ಸೌಭಾಗ್ಯಸಂಪತ್ತಿಕರಂ ಮನೋಜ್ಞಂ ।
ಸಂತಾನವೃದ್ಧಿಪ್ರದಮೇತದೇವ
ವೈಧವ್ಯದೌರ್ಭಾಗ್ಯವಿನಾಶಕಂ ಚ ॥೬೧॥

ಇದಂ ಪುರಾ ಶಂಕರವಲ್ಲಭಾಯೈ
ಶಿವೋಕ್ತಮೇವಂ ವ್ರತಮಾದರೇಣ ।

ಸಾಕ್ಷಾತ್ ಶಿವಪತ್ನಿಯೂ ಸರ್ವಜ್ಞಳೂ ಆಗಿದ್ದರೂ ಗಿರಿಜೆಯು ಲೌಕಿಕವಾಗಿ ತಾನೂ ಅಲ್ಪಜ್ಞಳಾಗಿದ್ದೇನೆಂಬಂತೆ ನಟಿಸುತ್ತಾ ಸಖಿಯಾದ ಜಯೆಯನ್ನು ಕುರಿತು, ಈ ಮುನಿಪತ್ನಿಯರು ಏನನ್ನು ಮಾಡುತ್ತಿದ್ದಾರೆ? ಇವರು ಆಚರಿಸುತ್ತಿರುವ ವ್ರತವು ಯಾವುದು? ಎಂಬುದನ್ನು ವಿಚಾರಿಸೆಂದು ಹೇಳಿದಳು. ॥೫೯॥

ಆಗ ಜಯೆಯು ಗಿರಿಜೆಗೆ ನಮಸ್ಕರಿಸಿ ಅವಳ ಇಷ್ಟದ ಮೇರೆಗೆ ಮುನಿಪತ್ನಿಯರ ಬಳಿಗೆ ಹೋಗಿ, ನೀವು ಯಾವ ವ್ರತವನ್ನು ಆರಂಭಿಸುತ್ತಿರುವಿರಿ? ಎಂದು ವಿನಯದಿಂದ ಕೇಳಿದಳು. ಆಕೆಯ ಪ್ರಶ್ನೆಯನ್ನು ಕೇಳಿ ಮುನಿಪತ್ನಿಯರು ಈ ರೀತಿ ಉತ್ತರವಿತ್ತರು. ॥೬೦॥

"ನಾವು ಈಗ ಮಾಡುತ್ತಿರುವುದು ಶಿವವ್ರತವು. ಇದಕ್ಕೆ ತೃತೀಯಾ ಮಹಾವ್ರತವೆಂದು ಹೆಸರು. ಈ ವ್ರತವನ್ನು ಆಚರಿಸುವುದರಿಂದ ವೈಧವ್ಯವೇ ಮುಂತಾದ ದೌರ್ಭಾಗ್ಯಗಳನ್ನು ಕಳೆದುಕೊಳ್ಳಬಹುದು. ಮತ್ತು ಇದು, ಸಂತಾನವೇ ಮೊದಲಾದ ಸಕಲ ಸಂಪತ್ತುಗಳನ್ನೂ ಒದಗಿಸಿಕೊಡುವುದು. ॥೬೧॥

ಈ ಮಹಾವ್ರತವನ್ನು ಪೂರ್ವದಲ್ಲಿ ಸಾಕ್ಷಾತ್ ಶಂಕರನೇ ಶಿವಪತ್ನಿಗೆ ಉಪದೇಶಿಸಿದ್ದನು. ಆದ್ದರಿಂದ ಈ ವ್ರತವು ಅತ್ಯಂತ ಮಹತ್ತರವಾದದ್ದು. ನಾವು

ಅಸ್ಮಾಭಿರಪ್ಯದ್ಯ ಶಿವಪ್ರಸಾದ
ಲಾಭಾಯ ತಾವತ್ಕ್ರಿಯತೇ ನಿಶಾಯಾಂ ॥೬೨॥

ಕನ್ಯಕಾಪಿ ವ್ರತಂ ಕೃತ್ವಾ ಪತಿಮಾಪ್ನೋತಿ ಸುಂದರಂ।
ಧೀರಂ ಮನೋಹರಂ ವೀರಾನ್ ಕುಮಾರಾನಪಿ ಸುಂದರಾನ್ ॥೬೩॥

ಏತದ್ವ್ರತಾಚರಣಮೇವ ನಿಧಾನಭೂತ
ಮೇತದ್ವ್ರತಂ ಸುರತರುಃ ಖಲು ಕಾಮಧೇನುಃ।
ಏತೇನ ತಾವದಖಿಲೇಪ್ಸಿತಸಿದ್ಧಿರೇವ
ಮಾಂಗಲ್ಯದಂ ವ್ರತಮಿತಿ ಪ್ರವದಂತಿ ವೇದಾಃ ॥೬೪॥

ಆದ್ಯೋತ್ಸವೇನ ನಿಶಿ ಜಾಗರಣೇನ ಪೂಜಾ
ಕಾರ್ಯಾ ಶಿವಸ್ಯ ಕುಸುಮಾದಿಭಿರಾದರೇಣ।
ಲಿಂಗೇ ಮನೋಜ್ಞೇ ಸಿಕತಾಮಯೇಽಸ್ಮಿನ್
ಅಭ್ಯರ್ಚಿತೇ ದಿಶತಿ ಭಾಗ್ಯಮಪಾರಮೀಶಃ ॥೬೫॥

ಶಿವಸುಪ್ರೀತಿಯನ್ನು ಸಂಪಾದಿಸುವುದಕ್ಕಾಗಿ ಈ ಪ್ರದೋಷಸಮಯದಲ್ಲಿ ಅದೇ ಶಿವಮಹಾವ್ರತವನ್ನು ಆಚರಿಸುತ್ತಿದ್ದೇವೆ. ॥೬೨॥

ಈ ವ್ರತದಿಂದ ಲಭಿಸುವ ಪುಣ್ಯಫಲವು ಅತ್ಯದ್ಭುತವಾಗಿರುತ್ತದೆ. ಮದುವೆ ವಯಸ್ಸಿನ ಕನ್ನಿಕೆಯು ಈ ವ್ರತವನ್ನು ಮಾಡಿದರೆ ಶೀಘ್ರವಾಗಿಯೇ ತನಗೆ ಅನುರೂಪನೂ, ಸುಂದರ ಸುಶೀಲನೂ ಆದ ಪತಿಯನ್ನು ಪಡೆಯುವಳು. ಮತ್ತು ಸಂಸಾರದಲ್ಲಿ ಸುಖಾನಂದಗಳನ್ನು ಪಡೆಯುವಳಲ್ಲದೇ ವೀರರಾದ ಸುಪುತ್ರರನ್ನೂ ಹೊಂದುವಳು. ॥೬೩॥

ಈ ಒಂದು ಶಿವಮಹಾವ್ರತವನ್ನು ಆಚರಿಸಿದರೆ ಸಕಲ ಇಷ್ಟಾರ್ಥಗಳೂ ಲಭಿಸುವುವು. ಈ ವ್ರತಾಚರಣೆಯೇ ಮಹಾನಿಧಿಯಂತೆಯೂ, ಕಲ್ಪವೃಕ್ಷದಂತೆಯೂ, ಕಾಮಧೇನುವಿನಂತೆಯೂ ಆಗಿರುತ್ತದೆಂದು ವೇದಗಳು ಸಾರುತ್ತಿವೆ. ಅದರಂತೆಯೇ ಈ ವ್ರತದಿಂದ ಸಕಲ ಕಲ್ಯಾಣಗಳೂ ಸಿದ್ಧಿಸುವುವು. ॥೬೪॥

ಈ ದಿನ ತೃತೀಯಾತಿಥಿಯಾಗಿದೆ. ಈ ತಿಥಿಯಲ್ಲೇ ಈ ವ್ರತವನ್ನು ಆಚರಿಸಬೇಕೆಂದು ವಿಧಿವಿಹಿತವಾಗಿರುತ್ತದೆ. ಇಂದು ಸಾಯಂಕಾಲದಲ್ಲಿ ಅತ್ಯಂತ ವಿಜೃಂಭಣೆ

ಇತಿ ತದ್ವಚನಂ ಶ್ರುತ್ವಾ ಜಯಾ ತಾಮಾಹ ಶಾಂಭವೀಂ ।
ಪ್ರಹೃಷ್ಟಾ ಹೃಷ್ಟವದನಾಂ ವ್ರತಂ ಕ್ರಿಯತ ಇತ್ಯಪಿ ॥೬೬॥

ವ್ರತಂ ಚ ಶ್ರೀಮಹಾದೇವಪೂಜಾರೂಪಂ ಮನೋಹರಂ ।
ಲಿಂಗಂ ಚ ಸಿಕತಾರೂಪಂ ಕೃತಂ ತಾಭಿರ್ಮನೋಹರಂ ॥೬೭॥

ವಿತಾನಾದ್ಯೈರ್ಮಂಟಪಾನಿ ಮನೋಜ್ಞಾನಿ ಕೃತಾನ್ಯಪಿ ।
ಅರ್ಚನಾರ್ಥೇ ಸಮುದ್ಯುಕ್ತಂ ಮುನಿದಾರೈರ್ಮನೋರಮೇ ॥೬೮॥

ಶಿವವ್ರತಮಿದಂ ಗೌರಿ ಕರ್ತವ್ಯಮಧುನಾ ತ್ವಯಾ ।
ಸಂಪಾದನೀಯಾ ಸಾಮಗ್ರೀ ಕ್ಷಣೇನೇತ್ಯಾಹ ಸಾ ಜಯಾ ॥೬೯॥

ಯಿಂದ ಶಿವಪೂಜೆಯನ್ನು ಮಾಡಬೇಕಲ್ಲದೇ ರಾತ್ರಿ ಶಿವಧ್ಯಾನವನ್ನೇ ಮಾಡುತ್ತಾ ಜಾಗರಣೆಯನ್ನೂ ನಡೆಸಬೇಕು. ಮರಳಿನಿಂದ ಕೂಡಿದ ಶಿವಲಿಂಗವನ್ನರ್ಚಿಸಿ ಸಾಂಗವಾಗಿ ಈ ವ್ರತವನ್ನು ಆಚರಿಸಿದರೆ ಶಂಕರನು ಸುಪ್ರೀತನಾಗಿ ಅಪಾರವಾದ ಭಾಗ್ಯಸಂಪತ್ತುಗಳನ್ನು ಅನುಗ್ರಹಿಸುವನು." ॥೬೫॥

ಈ ರೀತಿಯಾಗಿ ಋಷಿಪತ್ನಿಯರು ಹೇಳಿದ ಮಾತನ್ನು ಕೇಳಿ ಜಯೆಯು ಅತ್ಯಂತ ಸಂತುಷ್ಟಳಾದಳು. ಅವಳು ಹಾಗೆಯೇ ಬಂದು, ಪ್ರಸನ್ನಮುಖಳಾಗಿದ್ದ ಗಿರಿಜೆಗೆ ಅವರು ವ್ರತವನ್ನು ಆಚರಿಸುತ್ತಿರುವರೆಂದು ಹೇಳಿ ಆ ವ್ರತದ ವಿಧಿಯನ್ನೂ ವಿವರಿಸಿ ಹೇಳಿದಳು. ॥೬೬॥

ಆ ತೃತೀಯಾವ್ರತವು ಶಿವಾರಾಧನರೂಪವೇ ಆಗಿದೆ ಎಂದೂ, ಶಿವಪೂಜೆಗಾಗಿ ವಾಲುಕಾಮಯವಾದ ಶಿವಲಿಂಗವಾಗಬೇಕೆಂದೂ, ಅದರಂತೆ ಆ ಋಷಿಪತ್ನಿಯರು ಮಾಡುತ್ತಿರುವರೆಂದೂ ಹೇಳಿದಳು. ॥೬೭॥

ಆ ಮುನಿಪತ್ನಿಯರು ತಳಿರು ತೋರಣಗಳಿಂದ ಅಲಂಕೃತವಾದ ದಿವ್ಯಮಂಟಪವನ್ನು ರಚಿಸಿಕೊಂಡು, ಶಿವಪೂಜೆಗೆ ಉದ್ಯುಕ್ತರಾಗಿದ್ದ ಸಮಾಚಾರವನ್ನೂ ಗಿರಿಜೆಗೆ ತಿಳಿಸಿದಳು. ಮತ್ತು ಈ ರೀತಿ ಹೇಳಿದಳು. ॥೬೮॥

ಪ್ರಿಯ ಸಖಿ, ಗೌರಿಯೇ! ನೀನೂ ಸಹ ಈ ವ್ರತವನ್ನು ನಡೆಸು. ಈ ಕೂಡಲೇ ಸಮಸ್ತ ಸಾಮಗ್ರಿಗಳನ್ನೂ ಅನುಕೂಲಪಡಿಸಿಕೊಂಡು ಸಕಲ ಸೌಭಾಗ್ಯಪ್ರದವಾದ ಈ ಶಿವವ್ರತವನ್ನು ಅವಶ್ಯವಾಗಿ ನೀನೂ ಮಾಡಬೇಕು. ॥೬೯॥

ಅಂಬಿಕಾಪಿ ತದುಕ್ತಾನಿ ಶ್ರುತ್ವಾ ವಾಕ್ಯಾನಿ ಸಾದರಂ ।
ತಥಾಸ್ತ್ವಿತಿ ಮುದಾ ಪ್ರಾಹ ಸಾ ಯಯೌ ಗಿರಿಮಂದಿರಂ ॥೨೦॥

ಸಾ ನತ್ವಾ ಮೇನಕಾಂ ಪ್ರಾಹ ಮಾತಸ್ತ್ವಾ ಸರ್ವಮಂಗಳಾ ।
ಶಿವವ್ರತಂ ಮುದಾ ಕರ್ತುಮದ್ಯ ತಾವತ್ಸಮುದ್ಯತಾ ॥೨೧॥

ತ್ವಯಾಪಿ ತದ್ವ್ರತಂ ಕಾರ್ಯಮಂಬಯಾ ಸಹ ಸಾದರಂ ।
ತದ್ವ್ರತೋತ್ತಮಮಿತ್ಯುಕ್ತಂ ಮುನಿದಾರೈರ್ವಿಶೇಷತಃ ॥೨೨॥

ಅಂಬಾ ಸುರಸರಿತ್ತೀರೇ ತಿಷ್ಠತಿ ಪ್ರೀತಮಾನಸಾ ।
ತ್ವಯಾಪ್ಯಾಗತ್ಯ ಕರ್ತವ್ಯಂ ತದ್ವ್ರತಂ ಮಂಗಳಾವಹಂ ॥೨೩॥

ಈ ರೀತಿಯಾಗಿ ಜಯೆಯು ಶಿವವ್ರತದ ವಿಷಯವಾಗಿ ಎಲ್ಲವನ್ನೂ ಹೇಳಲು, ಗಿರಿಜೆಯೂ ಕೂಡಲೇ ಸಂತೋಷದಿಂದ ಆ ವ್ರತವನ್ನು ತಾನೂ ಮಾಡುವೆನೆಂದಳು. ಆಗ ಸಕಲ ಸಾಮಗ್ರಿಗಳನ್ನೂ ಸಿದ್ಧಪಡಿಸುವುದಕ್ಕಾಗಿ ಜಯೆಯು ಜಾಗ್ರತೆ ಹಿಮವಂತನ ಅರಮನೆಗೆ ತೆರಳಿದಳು. ॥೨೦॥

ಅಲ್ಲಿ ಮೇನಕಾದೇವಿಯನ್ನು ಕಂಡು ನಮಸ್ಕರಿಸಿ ಶಿವವ್ರತದ ವಿಷಯವನ್ನೂ, ಇಂದೇ ಆ ವ್ರತದ ಮುಖ್ಯತಿಥಿ ಎಂಬುದನ್ನೂ ತಿಳಿಸಿ, ಗಿರಿಜೆಯೂ ಸಹ ಆ ವ್ರತವನ್ನು ಮಾಡಲು ಯತ್ನಿಸುತ್ತಿರುವಳೆಂಬುದನ್ನೂ ಹೇಳಿದಳು. ಮತ್ತು ಈ ರೀತಿ ಶ್ರುತಪಡಿಸಿದಳು. ॥೨೧॥

ದೇವಿ ಮಹಾರಾಣಿ! ಈ ಶಿವವ್ರತವು ಉತ್ತಮೋತ್ತಮವೆಂದು ಋಷಿಪತ್ನಿಯರು ಬಹು ಪ್ರಶಂಸಿಸಿರುವರು. ಆದುದರಿಂದ ಈ ಉತ್ತಮವಾದ ವ್ರತವನ್ನು ನೀನೂ ಸಹ ಗಿರಿಜೆಯೊಡನೆ ಮಾಡಬಹುದಾಗಿದೆ. ॥೨೨॥

ನಿನ್ನೊಡನೆ ಆ ಶ್ರೇಷ್ಠವ್ರತವನ್ನು ಆಚರಿಸಬೇಕೆಂಬ ಅಭಿಲಾಷೆಯಿಂದ ಕುಮಾರಿ ಗಿರಿಜೆಯು ಅಲ್ಲೇ ಗಂಗಾತೀರದಲ್ಲಿ ನಿನ್ನನ್ನೇ ನಿರೀಕ್ಷಿಸಿಕೊಂಡಿರುವಳು. ಆದ್ದರಿಂದ ಈ ಕೂಡಲೇ ನೀನು ಅಲ್ಲಿಗೆ ಬಂದು ಅತ್ಯಂತ ಸೌಭಾಗ್ಯಪ್ರದವಾದ ಆ ವ್ರತವನ್ನು ಮಾಡಿ ಶ್ರೇಯೋಭಾಗಿನಿಯಾಗಬೇಕು. ॥೨೩॥

ಇತಿ ತದ್ವಚನಂ ಶ್ರುತ್ವಾ ನಿವೇದ್ಯ ಗಿರಯೇ ತದಾ ।
ಪೂಜಾಸಂಭಾರಸಂಯುಕ್ತಾ ಸರಿತ್ತೀರಂ ಯಯೌ ಮುದಾ ॥೨೪॥

ತತ್ರೈವ ಕಾರಯಾಮಾಸ ರತ್ನಮಂಡಲಮಂಡಿತಂ ।
ಸುಂದರಂ ಮಂದಿರಂ ಭಕ್ತ್ಯಾ ವಿತಾನಾದಿಸಮನ್ವಿತಂ ॥೨೫॥

ಅಪಾರೈರುಪಚಾರೈಸ್ಸಾ ಭವಾನ್ಯಾ ಸಹ ಸಾದರಂ ।
ಪೂಜಯಾಮಾಸ ಗಿರಿಶಂ ಗಿರಿಣಾಪಿ ಸಮನ್ವಿತಾ ॥೨೬॥

ನಿಶಿ ಜಾಗರಣಂ ಕೃತ್ವಾ ಪ್ರಾತಸ್ಸಂಪೂಜ್ಯ ಶಂಕರಂ ।
ಸಾ ದದೌ ಮುನಿಭಾರ್ಯಾಭ್ಯೋ ಮುನಿಭ್ಯೋಽಪ್ಯನ್ನಮಾದರಾತ್ ॥೨೭॥

ಸುವರ್ಣಶೂರ್ಪಸಂಪೂರ್ಣಫಲೋಪಾಯನಕೋಟಿಭಿಃ ।
ಚಕಾರ ಮುನಿಶಾರ್ದೂಲಾನ್ ಪ್ರಹೃಷ್ಟಾನ್ ವನಿತಾಯುತಾನ್ ॥೨೮॥

ಎಂದು ಜಯೆಯು ಶ್ರುತಪಡಿಸಲು ಆ ಮಾತನ್ನು ಕೇಳಿ ಮೇನಾದೇವಿಗೆ ಅತ್ಯಂತ ಸಂತೋಷವಾಯಿತು. ಆಕೆಯು ಈ ವಿಷಯವನ್ನು ಕೂಡಲೇ ಪತಿಯಾದ ಹಿಮವಂತನಿಗೆ ತಿಳಿಸಿ ಆತನ ಅನುಜ್ಞೆಯನ್ನು ಪಡೆದುಕೊಂಡು ಸಮಸ್ತ ಪೂಜಾ ಸಂಭಾರಗಳೊಂದಿಗೆ ಗಂಗಾತೀರಕ್ಕೆ ತೆರಳಿದಳು. ॥೨೪॥

ಆ ಗಂಗಾತೀರಕ್ಕೆ ಹೋದಕೂಡಲೇ ಮೇನಾದೇವಿಯು ರತ್ನಮಯವಾದ ಮಂಟಪವನ್ನು ದೊಡ್ಡಮಂದಿರದಂತೆಯೇ ಕಟ್ಟಿಸಿ, ಅದನ್ನು ರತ್ನಮಯವಾದ ತಳಿರು ತೋರಣಗಳಿಂದ ದಿವ್ಯವಾಗಿ ಅಲಂಕಾರಮಾಡಿಸಿದಳು. ॥೨೫॥

ಪೂಜೆಗೆ ಸಕಲ ಸನ್ನಾಹಗಳನ್ನೂ ಅಣಿಮಾಡಿಕೊಂಡ ಬಳಿಕ ಗಿರಿಜೆಯು ಮತ್ತು ಮೇನಾದೇವಿಯೂ ಹಿಮವಂತನೊಡನೆ ಶಂಕರನನ್ನು ಅರ್ಚಿಸಿದರು. ॥೨೬॥

ಅವರೆಲ್ಲರೂ ರಾತ್ರಿಯಲ್ಲಿ ಜಾಗರಣೆಮಾಡಿ ಪ್ರಾತಃಕಾಲದಲ್ಲಿ ಪುನಃ ಮಹಾ ವೈಭವದಿಂದ ಶಿವನನ್ನು ಪೂಜಿಸಿದರು. ಪೂಜಾಂತ್ಯದಲ್ಲಿ ಮುನಿಗಳಿಗೂ ಮತ್ತು ಮುನಿಪತ್ನಿಯರಿಗೂ ನಾನಾ ವಿಧವಾದ ಭಕ್ಷ್ಯಭೋಜ್ಯಾದಿಗಳನ್ನಿತ್ತು ತೃಪ್ತಿಪಡಿಸಿದರು. ॥೨೭॥

ಪೂಜಾಸಾಂಗತಾಫಲಸಿದ್ಧಿಗಾಗಿ ಬಂಗಾರದ ಮೊರದಲ್ಲಿ ನಾನಾ ವಿಧವಾದ ಹಣ್ಣುಹಂಪಲುಗಳನ್ನು ಯಥೇಚ್ಛವಾಗಿ ದಕ್ಷಿಣೆಯೊಡನೆ ತುಂಬಿ, ಮುನಿಗಳಿಗೂ ಮುನಿಪತ್ನಿಯರಿಗೂ ವಾಯನ ದಾನಕೊಟ್ಟು ಸಂತುಷ್ಟಿಗೊಳಿಸಿದರು. ॥೨೮॥

ತತಃ ಪ್ರಾಪ ಸ್ವಭವನಂ ಸರ್ವಮಂಗಳಯಾ ಸಹ ।
ತತಃ ಸ್ವಪ್ನಸ್ತಯಾ ದೃಷ್ಟೋ ಮೇನಯಾಪ್ಯಂಬಯಾ ಶುಭಃ ॥೭೯॥

ಅತ್ಯುಚ್ಚರತ್ನಪ್ರತಿಭಾಸಮೇತ
ಸ್ಸಿಂಹಾಸನಾರೂಢಶಿವಾಸಹಾಯಃ ।
ಹೃಷ್ಟಸ್ತಯಾ ಮೇನಕಯಾ ವಿವಾಹಂ
ಮಹೋತ್ಸವೋಽಪ್ಯುತ್ಸವರಾಶಿಹೇತುಃ ॥೮೦॥

ಅಂಬಾ ಶಿವಾಂಕಮಧಿರುಹ್ಯ ಶಿವೇನ ಸಾಕಂ
ಸ್ಮೇರಾಧರಾ ಹರಮನೋಹರಬಾಹುವೀತಾ ।
ಭೂಯೋ ವಿಲೋಕ್ಯ ಮುಹುರಾದರತಃ ಪ್ರಹೃಷ್ಟಾ
ಸ್ವಾಂ ಸಾ ದದರ್ಶ ತದನಂತರಮುತ್ಥಿತಾಪಿ ॥೮೧॥

ತತಃ ಪರಂ ಸಮಾರಂಭೋ ಮಹಾನೇವಾಭವತ್ತದಾ ।
ಜಾತಕಲ್ಪೋ ವಿವಾಹೋಽಪೀತ್ಯಪಿ ಹೃಷ್ಟಾಪಿ ಮೇನಕಾ ॥೮೨॥

ಹೀಗೆ ಸಾಂಗೋಪಾಂಗವಾಗಿ ಶಿವವ್ರತವನ್ನು ನೆರವೇರಿಸಿದ ಬಳಿಕ ಮೇನಾದೇವಿಯು ಕುಮಾರಿ ಗಿರಿಜೆಯೊಡನೆ ತನ್ನ ಅರಮನೆಗೆ ಹಿಂದಿರುಗಿ ಬಂದಳು. ಅದೇ ದಿನವೇ ರಾತ್ರಿಯಲ್ಲಿ ಮೇನಾದೇವಿಗೂ ಗಿರಿಜೆಗೂ ಸಹ ಒಂದು ಒಳ್ಳೆಯ ಸ್ವಪ್ನವು ಗೋಚರವಾಯಿತು. ॥೭೯॥

ಆ ಸ್ವಪ್ನದ ಸ್ವರೂಪವು ಈಪರಿ ಇತ್ತು. ಗೌರೀಸಹಿತನಾಗಿ ಪರಮೇಶ್ವರನು ದಿವ್ಯವಾದ ಸಿಂಹಾಸನದ ಮೇಲೆ ವಿರಾಜಿಸುತ್ತಿರುವನು. ಹಾಗೂ ಮಹಾಸಂಭ್ರಮದೊಡನೆ ಗಿರಿಜೆಯ ವಿವಾಹ ಮಹೋತ್ಸವವು ಜರುಗುತ್ತಿರುವುದು. ॥೮೦॥

ನೋಡುನೋಡುತ್ತಿದ್ದಂತೆಯೇ ಗಿರಿಜೆಯು ಶಂಕರನ ತೊಡೆಯನ್ನೇರಿ ಪರಮಾನಂದದಿಂದ ವಿರಾಜಿಸಿದಳು. ಶಿವನು ಮಂದಹಾಸವನ್ನು ಬೀರುತ್ತಾ ಪಾರ್ವತಿಯ ಕಂಠವನ್ನು ತನ್ನ ಎಡತೋಳಿಂದ ಆಲಿಂಗಿಸಿಕೊಂಡಿರುವನು. ಹೀಗಿರುವ ಆ ದಿವ್ಯ ಸ್ವಪ್ನವನ್ನು ನೋಡಿ ಮೇನಾದೇವಿಯು ಪರಮಾನಂದಭರಿತಳಾಗಿ ಹಾಗೆಯೇ ನಿದ್ದೆಯಿಂದ ಎಚ್ಚತ್ತಳು. ॥೮೧॥

ಆಗ ಮೇನಾದೇವಿಯು ದೊಡ್ಡ ಉತ್ಸವ ಸಮಾರಂಭವೇ ನಡೆಯುವಂತೆ

ನಿವೇದಿತಸ್ಸ ಶೈಲಾಯ ಸ್ವಸ್ವಪ್ನೋ ಮೇನಕಯಾ ತತಃ ।
ತೇನ ಸ್ವಪ್ನೇನ ಸಂತುಷ್ಟೋ ಗಿರಿರಾಜೋ ವಿಶೇಷತಃ ॥೬೩॥

ತತಶ್ಚ ನೈರ್ಮೇನಕಾಪಿ ಶಿವಾಯೈ ಪ್ರಾಹ ಸಾದರಂ ।
ಸ್ವಸ್ವಪ್ನಮಾದರೇಣೈವ ಜನಯಂತೀ ಸುಖಾಂಬುಧಿಂ ॥೬೪॥

ತತಃ ಪರಂ ಶಿವಾ ಪ್ರಾಹ ಸ್ವಸ್ವಪ್ನಮಪಿ ಸಾ ಮುಹುಃ ।
ಪೃಷ್ಟಾ ಮಂದಂ ಲಜ್ಜಯೈವ ಸ್ಮೇರಧಾರಾತಿರಾಜಿತಾ ॥೬೫॥

ತತಃ ಪರಂ ಮಹಾದೇವಃ ಪ್ರಸನ್ನಸ್ಸಮುಪಾಗತಃ ।
ಗಣಕೋಟಿಸಮಾಕೀರ್ಣಸ್ಸರ್ವದೇವನಮಸ್ಕೃತಃ ॥೬೬॥

ಏರ್ಪಡಿಸಿದಳು. ಹೀಗೆ ಶುಭಸ್ವಪ್ನವನ್ನು ಕಂಡ ಬಳಿಕ ಸರ್ವಥಾ ಕುಮಾರಿ ಗಿರಿಜೆಯ ವಿವಾಹವು ಶಂಕರನೊಂದಿಗೆ ನಡೆಯುವುದೆಂದು ನಿಶ್ಚಿಂತಳಾದಳು. ||೬೨||

ಬಳಿಕ ಮೇನಾದೇವಿಯು ಈ ಶುಭಸ್ವಪ್ನದ ಸಂಗತಿಯನ್ನು ತನ್ನ ಪತಿಯಾದ ಹಿಮವಂತನಿಗೆ ತಿಳಿಸಿದಳು. ಈ ಶುಭಶಕುನದಿಂದ ಗಿರಿರಾಜನಿಗೆ ಪರಮಾನಂದವಾಯಿತು. ||೬೩||

ಅನಂತರ ಈ ಶುಭಸಮಾಚಾರವನ್ನು ತಿಳಿಸಿ ಆನಂದಪಡಿಸಬೇಕೆಂದು ಮೇನಕೆಯು ಕುಮಾರಿ ಗಿರಿಜೆಗೆ ಪ್ರೀತಿಪುರಸ್ಸರವಾಗಿ ತನ್ನ ಆ ಸ್ವಪ್ನವಿಷಯವನ್ನು ಹೇಳಿದಳು. ||೬೪||

ಆಗ ಗಿರಿಜೆಯು ತನಗೂ ಅದೇ ಸ್ವಪ್ನವಾಗಿದೆ ಎಂದು ತಿಳಿಸಿದಳು. ಆಗ ತಾಯಿ ಮೇನಾದೇವಿಯು ಆ ಸ್ವಪ್ನವು ಹೇಗಿತ್ತು. ? ವಿವರಿಸಿ ಹೇಳೆಂದು ಉತ್ಸಾಹದಿಂದ ಕೇಳಲು, ಕುಮಾರಿ ಗಿರಿಜೆಗೆ ಅದನ್ನು ಹೇಳಲು ಆನಂದವುಕ್ಕುತ್ತಿದ್ದರೂ ಲಜ್ಜೆಯಿಂದ ಸಂಕೋಚಪಡುತ್ತಿದ್ದಳು. ಅಂತೂ ಹಾಗೆಯೇ ಲಜ್ಜೆಯಿಂದಲೇ ಸಕಲ ಸ್ವಪ್ನ ವೃತ್ತಾಂತವನ್ನು ತಿಳಿಯಪಡಿಸಿದಳು. ||೬೫||

ಅನಂತರ ಪರಮ ಸುಪ್ರೀತನಾದ ಪರಮೇಶ್ವರನು ಅಕಸ್ಮಾತ್ತಾಗಿ ಹಿಮವಂತನ ಅರಮನೆಗೆ ಬಂದನು. ಸಕಲ ದೇವ ಸಂಪೂಜ್ಯನಾದ ಆ ಮಹಾದೇವನ ಜೊತೆಯಲ್ಲಿ ಸಮಸ್ತ ಗಣಪರಿವಾರದವರೂ ಸೇವೆಮಾಡುತ್ತಾ ಬಂದಿದ್ದರು. ||೬೬||

ಅಪಾರಮಂಗಳಾಕಾರಸ್ಸರ್ವಮಂಗಳದಾಯಕಃ ।
ಸ ಸರ್ವಮಂಗಳಾಕಾಂತಶ್ಛತ್ರಾರ್ಬುದವಿರಾಜಿತಃ ॥೮೭॥

ಚಾಮರಾರ್ಬುದಸಂಕೀರ್ಣಸ್ತೂರ್ಯಧ್ವನಿಸಮಾವೃತಃ ।
ಅಪಾರವಿಭವೋಪೇತಸ್ತಂ ದದರ್ಶ ಗಿರಿಸ್ತತಃ ॥೮೮॥

ತತಃ ಪ್ರಣಮ್ಯ ಬಹುಧಾ ಸ್ತುತ್ವಾ ಸರ್ವಾಮರೇಶ್ವರಂ ।
ಶಂಕರಂ ಪ್ರಾಹ ವಿನುತಃ ಕೃತಾರ್ಥೋಽಸ್ಮೀತಿ ಸಾದರಂ ॥೮೯॥

ತತೋ ಮಹೋತ್ಸವೇನೈವ ಮಂದಿರೇ ಸಮಲಂಕೃತೇ ।
ಪ್ರವಿಷ್ಟಶ್ಶಂಕರಃ ಸ್ಮೃತ್ವಾ ತತ್ಪ್ರವೇಶವಚೋ ಮುದಾ ॥೯೦॥

ತತಸ್ಸಮಾಗತಂ ಗೌರೀ ಶ್ರುತ್ವಾ ಶಂಕರಮಾದರಾತ್ ।
ಪ್ರಹೃಷ್ಟಾ ಶೋಭನಸ್ಯಾಯಂ ಸಮಯೋಽಯಮಿತಿ ಪ್ರಿಯಃ ॥೯೧॥

ಅತಿಶಯ ಮಂಗಳಸ್ವರೂಪನೂ ಸಮಸ್ತ ಕಲ್ಯಾಣಪ್ರದನೂ ಆದ ಆ ವಿಭುವೇ ಗಿರಿಜೆಗೆ ಪತಿಯಾಗಬೇಕಾಗಿದ್ದುದರಿಂದ, ಮಹಾಸಂಭ್ರಮದಿಂದೊಡಗೂಡಿದವನಾಗಿ ಅಸಂಖ್ಯಾತಗಳಾದ ಛತ್ರಚಾಮರಾದಿಗಳಿಂದ ಸಂಸೇವಿತನಾಗಿ ಸಮಸ್ತ ಮಂಗಳ ವಾದ್ಯಗಳೊಡನೆ ಬಿಜಯಂಗೈಯಲು, ಆ ಶಂಕರನ ಸಂದರ್ಶನದಿಂದ ಹಿಮವಂತನು ಮಹಾನಂದಭರಿತನಾದನು. ॥೮೭-೮೮॥

ಶಂಕರನನ್ನು ಕಂಡಕೂಡಲೇ ಹಿಮವಂತನು ಸಾಷ್ಟಾಂಗ ಪ್ರಣಾಮದಿಂದ ವಂದಿಸಿದನು. ಮತ್ತು ಆ ಸಕಲ ದೇವಾಧೀಶ್ವರನನ್ನು ಬಹುವಾಗಿ ಸ್ತುತಿಸಿ ಅಂದು ತಾನೇ ಧನ್ಯನೆಂದುಕೊಂಡನು. ॥೮೯॥

ಬಳಿಕ ಹಿಮವಂತನು ತನ್ನ ನಿವಾಸಕ್ಕೆ ದಯೆಮಾಡಿಸಬೇಕೆಂದು ಪ್ರಾರ್ಥಿಸಿಕೊಳ್ಳಲು, ಶಂಕರನು ಸಂತೋಷದಿಂದ ದಿವ್ಯವಾದ ಅರಮನೆಗೆ ಮಹೋತ್ಸವದೊಡನೆ ಪ್ರವೇಶಸಮಾರಂಭವನ್ನು ನಡೆಸಿದನು. ॥೯೦॥

ಶಂಕರನು ಬಿಜಯಂಗೈದಿರುವನೆಂಬ ಸಮಾಚಾರವನ್ನು ಗಿರಿಜೆಯು ಕೇಳಿದೊಡನೆಯೇ ಮಹಾನಂದ ಭರಿತಳಾದಳು. ಈ ಸಮಯವೇ ಮಹಾಕಲ್ಯಾಣಪ್ರದವೆಂದು ಅತ್ಯುತ್ಸಾಹಪೂರಿತಳಾದಳು. ॥೯೦॥

ಮಧುಪರ್ಕಾದಿಕಂ ಕೃತ್ವಾ ಶಂಕರಾಯ ಮಹಾತ್ಮನೇ।
ದದಾವಪಾರರತ್ನೌಘಸಂವೀತಾಭರಣಾನ್ಯಪಿ ॥೯೨॥

ತತಸ್ತಾಂ ಭೂಷಿತಾಂ ಕೃತ್ವಾ ಗೌರೀಮಮರವಂದಿತಾಂ।
ಆಹೂಯ ಮೇನಕಾ ಪ್ರಾಹ ಪರಮಾನಂದಸಾಗರಾ ॥೯೩॥

ಅಂಬಾಂಬಾಪಾರವಿಭವೈಸ್ಸ ಭವಸ್ತವ ವಲ್ಲಭಃ।
ಭವಿತಾ ಭೂರಿಭಾಗ್ಯೈಸ್ತ್ವಂ ಭವಿತ್ರೀ ಭವವಲ್ಲಭಾ ॥೯೪॥

ಸೌಭಾಗ್ಯನಿಧಯಃ ಪ್ರಾಪ್ತಾಸ್ತದ್ವ್ರತಾಚರಣಾತ್ತ್ವಯಾ।
ಏತಾದೃಶಂ ಮಹದ್ಭಾಗ್ಯಂ ಕಸ್ಯ ಸ್ಯಾದ್ಭುವಿ ಶಾಂಭವಿ ॥೯೫॥

ವ್ರತಂ ಕಥಂ ಶಾಂಭವಮಂಬ ತೇನ
ಶಂಭುಃ ಪ್ರಸನ್ನಶ್ಶುಭದೋ ಭವಾನಿ।
ಯದ್ವಾಂಛಿತಂ ತತ್ತದಭೂದಿದಾನೀಂ
ವಿಧಾನಮಸ್ಯ ವ್ರತಮೇವ ನೂನಂ ॥೯೬॥

ಅನಂತರ ಹಿಮವಂತನು ಶಂಕರನಿಗೆ ಮಧುಪರ್ಕವೇ ಮೊದಲಾದ ಸಕಲ ಉಪಚಾರಗಳಿಂದ ಉಪಚರಿಸಿ, ಅಪಾರವಾದ ರತ್ನಗಳನ್ನೂ ದಿವ್ಯವಾದ ಆಭರಣಗಳನ್ನೂ ಸಮರ್ಪಿಸಿದನು. ॥೯೨॥

ಬಳಿಕ ಕುಮಾರಿ ಗಿರಿಜೆಯನ್ನು ನಾನಾ ವಿಧವಾದ ವಸ್ತ್ರಭೂಷಣಗಳಿಂದ ಅಲಂಕರಿಸಿ ಅತ್ಯಾನಂದಿತಳಾದ ಮೇನಕೆಯು ಗಿರಿಜೆಗೆ ಈರೀತಿ ಹೇಳಿದಳು. ॥೯೩॥

ವತ್ಸೆ ಗಿರಿಜೆ! ನಿನ್ನ ಪುಣ್ಯವು ಅತ್ಯಮೋಘವಾದದ್ದು. ನಿನ್ನ ಪುಣ್ಯಮಹಿಮೆಯಿಂದ ನಿನಗೆ ಶಂಕರನೇ ಪತಿಯಾಗುವನು. ಆ ದೇವದೇವನಿಗೆ ನೀನೇ ಪತ್ನಿಯಾಗುವೆ. ನೀನು ಈಗ ಅಪಾರ ಸೌಭಾಗ್ಯವತಿಯಾಗಿರುವೆಯಮ್ಮಾ. ॥೯೪॥

ನೀನು ಆ ಶಿವವ್ರತವನ್ನು ಆಚರಿಸಿದುದರಿಂದ ನಿನಗೆ ಸೌಭಾಗ್ಯನಿಧಿಯೇ ಪ್ರಾಪ್ತವಾಗುತ್ತಿದೆ. ಇಂಥ ಭಾಗ್ಯವು ಲೋಕದಲ್ಲಿ ಮತ್ತೆ ಯಾರಿಗೆ ತಾನೇ ಲಭಿಸುವುದು? ॥೯೫॥

ಆಹಾ! ಆ ಶಿವವ್ರತವು ಎಷ್ಟು ಅದ್ಭುತವಾದುದು! ಆ ವ್ರತಾಚರಣೆಯಿಂದಲೇ ದೇವದೇವನಾದ ಶಂಕರನು ಪ್ರಸನ್ನನಾಗಿ ಇಂದು ನಮ್ಮ ಕೋರಿಕೆ

ಇತೋಽಧಿಕಂ ನ ವ್ರತಮಿತ್ಯವೈಮಿ
ವ್ರತಂ ವ್ರತಾನಾಂ ನ ಶಿರೋಮಣಿಃ ಕಿಂ।
ಇದಂ ಪರಂ ಶಾಂಭವಮಂಬ ಸಿದ್ಧಿಃ
ಸದ್ಯಃ ಕಿಮೇವಂ ವ್ರತಮಸ್ತಿ ಲೋಕೇ ॥೯೭॥

ಕಸ್ತೂರೀಘನಸಾರಪಂಕಕಲಿತೇ ಕಿಂ ಶಂಕರಾಂಕಾಂಕಿತೋ
ಪ್ಯಂಕೋಲಾಮಲಬಾಲಿಕಾಕುಲಯುತೇ ನಿಶ್ಶಂಕಪಂಕೇರುಹೈಃ।
ನಿಶ್ಶಂಕೈರ್ನ ಶಶಾಂಕಮಂಡಲಕುಲವ್ಯಕ್ತೋಲ್ಲಸತ್ಕಂದುಕೈಃ
ಆನಂದಾಂಬುಧಿವರ್ಧಕೈರ್ಮೃಡದೃಢಕ್ರೀಡಾ ಮೃಡಾಣಿ ತ್ವಯಾ ॥೯೮॥

ಇತಿ ಮೇನಾವಚೋವೀಚೀಧಾರಾಂ ಧೀರಾ ಮನೋಹರಾಂ।
ಸ್ವಕರ್ಣರತ್ನಚಷಕಪರಿಪೂರ್ಣಾಂ ಪಪೌ ಶಿವಾ ॥೯೯॥

ಯನ್ನು ಅನುಗ್ರಹಿಸಲು ಇಲ್ಲಿಗೇ ಬಂದಿರುವನು. ಇದಿಷ್ಟು ಸಂಪಲ್ಲಾಭವು ನಿಜವಾಗಿಯೂ ಆ ವ್ರತದ ಮಹಿಮೆಯೇ ಸರಿ. ॥೯೬॥

ಈ ಶಿವವ್ರತದಂತೆ ಶೀಘ್ರವಾಗಿ ಫಲವನ್ನು ಕೊಡುವ ಅಥವಾ ಇಂಥ ಶ್ರೇಷ್ಠವಾದ ಫಲವನ್ನು ಅನುಗ್ರಹಿಸುವ ದಿವ್ಯ ವ್ರತವು ಮತ್ತೆ ಯಾವುದಿರುವುದು? ಅಂಥ ಬೇರೆ ವ್ರತವೇ ಯಾವುದೂ ಇಲ್ಲದಿರುವುದರಿಂದ ಈ ಶಿವವ್ರತವೇ ವ್ರತಗಳಲ್ಲೆಲ್ಲಾ ಶಿರೋಮಣಿಯೆನಿಸಿರುತ್ತದೆ. ॥೯೭॥

ಪ್ರಿಯಪುತ್ರಿಯೇ, ಪರಶಿವನು ನಿನ್ನೊಡಗೂಡಿ ಕಸ್ತೂರಿಯೇ ಮೊದಲಾದ ಸುಗಂಧವವಸ್ತುಸಾರದಿಂದಲೂ, ದೇವಲೋಕದ ಸ್ತ್ರೀಯರಿಂದಲೂ, ಕಮಲ ಕಲ್ಹಾರಾದಿ ಪುಷ್ಪಗಳಿಂದಲೂ ಕೂಡಿದವನಾಗಿ, ಚಂದ್ರಮಂಡಲದಂತೆ ದುಂಡಾಗಿಯೂ ಶುಭ್ರವಾಗಿಯೂ ಇರುವ ಸುಂದರವಾದ ಚೆಂಡುಗಳಿಂದ ಆಟವಾಡುವನು. ಆಗ ನೀನು ಆನಂದಭರಿತಳಾಗಿ ಪರಶಿವನ ಲೀಲಾವಿಲಾಸಗಳಲ್ಲಿ ಮೈಮರೆತು ಹೋಗುವೆ.” ॥೯೮॥

ಹೀಗೆ ಪ್ರೀತಿಯಿಂದ ಮೇನಾದೇವಿಯು ಶ್ಲಾಘಾಪುರಸ್ಸರವಾಗಿಯೂ ಅಮೃತಧಾರೆಯನ್ನೇ ಸುರಿಸುವಂತೆಯೂ ಸರಸವಾಗಿ ನುಡಿದ ಮಾತನ್ನು, ಗಿರಿಜೆಯು ತನ್ನ ಕಿವಿ ಎಂಬ ರತ್ನಪಾತ್ರೆಯಿಂದ ತುಂಬಿಕೊಂಡು ಕುಡಿಯುತ್ತಿರುವಳೋ ಎಂಬಂತೆ ಆಲಿಸಿಕೇಳಿ ಅತ್ಯಂತ ಆನಂದಭರಿತಳಾದಳು. ॥೯೯॥

ಸಾ ಗೌರೀ ರಮಣಾಂಕಮಂಕನಿಹಿತಾ ಸಂಪ್ರಾಪ ಶಂಕಾಂಕಿತಾ
ಸಾ ಮೂರ್ತಿಸ್ಸುಮುಹೂರ್ತಕೀರ್ತಿರಪರಾ ರೇಜೇ ನಿಜಂ ವಲ್ಲಭಂ ।
ಸಂಪ್ರಾಪ್ತಾಮಿತಭಾಗ್ಯಯೋಗ್ಯನಿಲಯಾ ಸಾನಂದಧಾರಾಲಯಾ
ಶೈಲೇನಾಪಿ ಸಮರ್ಪಿತಾ ಶಿವಕರವ್ಯಾಪಾರಸಂತರ್ಪಿತಾ ॥೧೦೦॥

ತತೋ ಮಹೋತ್ಸವೋ ವೃತ್ತಸ್ಸ ಮಹಾಗಿರಿಮಂದಿರೇ ।
ಸುರಲೋಕೇಽಪಿ ಸಂವೃತ್ತೋ ಗಂಧರ್ವನಗರೇಷ್ವಪಿ ॥೧೦೧॥

ದೇವದುಂದುಭಿನಿರ್ಘೋಷವ್ಯಾಪ್ತಂ ಭೂಮಂಡಲಂ ತದಾ ।
ಶೋಭನಂ ಸೂತ್ರಯನ್ನೇವ ಶಿವಯೋರ್ವವೃಧೇ ತದಾ ॥೧೦೨॥

ಸಾ ಶಂಕರಾಂಕನಿಲಯಾ ರುರುಚೇ ಭವಾನೀ
ವಿದ್ಯುಲ್ಲತೇವ ಶರದಂಬರಕಂಧರಾಂಕೇ ।
ತೇನೋತ್ಸವೇನ ಗಿರಿಶೋಽಪಿ ಸುಖಾಂಬುರಾಶಿ
ಕಲ್ಲೋಲಲೋಲಹೃದಯಸ್ಸದಯಸ್ಸ ರೇಜೇ ॥೧೦೩॥

ಅನಂತರ ಹಿಮವಂತನು ಶಿವಾಂಕಮಾತ್ರಗಾಮಿನಿಯಾಗುವ ಗೌರಿಯನ್ನು ಸುಮುಹೂರ್ತದಲ್ಲಿ ಧಾರೆ ಎರೆದು ಶಿವಪಾಣಿಗ್ರಹಣವನ್ನು ಮಾಡಿಸಿದನು. ಹೀಗೆ ಶಿವವ್ರತದ ಮಾಹಾತ್ಮ್ಯೆಯಿಂದ ಗಿರಿಜೆಯು ಸ್ವಪತಿಯನ್ನು ಸುಲಭವಾಗಿ ಸೇರಿದಳಲ್ಲದೇ ಅನಂತ ಸೌಭಾಗ್ಯವನ್ನೂ ಅಪಾರ ಆನಂದವನ್ನೂ ಹೊಂದಿದಳು. ॥೧೦೦॥

ಈ ರೀತಿ ಆ ಪಾರ್ವತೀಪರಮೇಶ್ವರರ ವಿವಾಹ ಸಮಯದಲ್ಲಿ ಹಿಮವಂತನ ಮನೆಯಲ್ಲಿ ಮಹಾ ವೈಭವವು ಆರಂಭವಾಯಿತಲ್ಲದೇ, ದೇವಲೋಕದಲ್ಲಿಯೂ ಗಂಧರ್ವಲೋಕದಲ್ಲಿಯೂ ಸಹ ವಾದ್ಯಮೇಳಗಳು ಮೊಳಗಿ ದೊಡ್ಡ ಉತ್ಸವ ಸಮಾರಂಭವು ಜರುಗಿತು. ಹಾಗೆಯೇ ಪಾರ್ವತೀ ಪರಮೇಶ್ವರರ ಕಲ್ಯಾಣಕಾರ್ಯವೂ ಸಹ ಮಹಾಸಂಭ್ರಮದಿಂದ ನೆರವೇರಿತು. ॥೧೦೧-೧೦೨॥

ಹೀಗೆ ಮಹಾಮಂಗಳಕಾರ್ಯವು ಜರುಗಿದ ಬಳಿಕ ಪಾರ್ವತಿಯು ಅನಪಾಯವಾದ ಪರಶಿವನ ತೊಡೆಯ ಮೇಲೆ ಮಂಡಿಸಿದಳು. ಆ ಶಿವೋತ್ಸಂಗದ ಮೇಲೆ ಗಿರಿಜೆಯು ವಿರಾಜಿಸುತ್ತಿರುವುದನ್ನು ನೋಡಿದರೆ ಶರತ್ಕಾಲದ ಮೇಘಮಧ್ಯದಲ್ಲಿ ಹೊಳೆಯುವ ಮಿಂಚಿನಂತೆ ಪ್ರಕಾಶಿಸುತ್ತಿದ್ದಳು. ಈ ಶುಭಕಾರ್ಯದಿಂದ ಗಿರಿಜೆಯು

ಇತಿ ತದ್ವಚನಂ ಶ್ರುತ್ವಾ ಶುಕವಾಣೀ ಶುಚಿಸ್ಮಿತಾ ।
ಕಿಮುದ್ಯಾಪನಮಸ್ಯೇತಿ ಸತ್ಯವ್ರತಮುವಾಚ ಸಾ ॥೧೦೪॥

॥ ಸತ್ಯವ್ರತ ಉವಾಚ ॥

ಶೃಣು ಭದ್ರೇ ಪ್ರವಕ್ಷ್ಯಾಮಿ ತದ್ವ್ರತೋದ್ಯಾಪನಂ ಮುದಾ ।
ಉದ್ಯಾಪನಶ್ರವಣತೋಽಪ್ಯಭಿವೃದ್ಧಿಸುಖಂ ಭವೇತ್ ॥೧೦೫॥

ಅಸ್ಮಿನ್ ವ್ರತೇ ಷೋಡಶವತ್ಸರಾಣಾ
ಮಂತೇ ಕೃತಾಂತಾಂತಕಪೂಜನೇನ ।
ಮಹೋತ್ಸವೋದ್ಯಾಪನತೋಽಪಿ ಪೂರ್ಣಂ
ವ್ರತಂ ಭವತ್ಯೇವ ಕೃತಂ ಚ ಸಾಂಗಂ ॥೧೦೬॥

ಷೋಡಶೇ ವತ್ಸರೇ ಪ್ರಾಪ್ತೇ ತದ್ವ್ರತೋದ್ಯಾಪನೋತ್ಸವಃ ।
ಕರ್ತವ್ಯೋಽಪ್ಯತಿಯತ್ನೇನ ಬಹುಭಿಸ್ಸಾಧನೈರ್ಮುದಾ ॥೧೦೭॥

ಪರಮಸುಖಾನಂದಗಳನ್ನು ಪಡೆದಳಲ್ಲದೇ ಪರಮೇಶ್ವರನೂ ಸಹ ಆ ಉತ್ಸವಾದಿಗಳನ್ನನುಭವಿಸಿ ವಿಶೇಷವಾಗಿ ಆನಂದತುಂದಿಲನಾಗಿ ಶೋಭಿಸುತ್ತಿದ್ದನು. ॥೧೦೩॥

ಈ ವಿಧವಾದ ಕಥೆಯನ್ನು ಕೇಳಿ ಶುಕವಾಣಿಗೆ ಬಹಳ ಆನಂದವಾಯಿತು. ಬಳಿಕ ಅವಳು ತನ್ನ ಪತಿಯಾದ ಸತ್ಯವ್ರತನನ್ನು ಕುರಿತು ಆ ಶಿವವ್ರತದ ಉದ್ಯಾಪನ ವಿಧಿಯನ್ನು ತನಗೆ ಹೇಳಬೇಕೆಂದು ಕೇಳಿಕೊಳ್ಳಲು, ಆಗ ಸತ್ಯವ್ರತನು ಆ ಉದ್ಯಾಪನ ವಿಧಿಯನ್ನು ಈ ರೀತಿ ಹೇಳಿದನು. ॥೧೦೪॥

ಪ್ರಿಯೇ ಶುಕವಾಣಿ ! ಆ ಮಹಾವ್ರತದ ಉದ್ಯಾಪನೆಯ ಕ್ರಮವನ್ನು ಹೇಳುವೆನು. ಆಲಿಸಿ ಕೇಳುವವಳಾಗು. ಈ ಉದ್ಯಾಪನೆಯ ವಿಧಿಯನ್ನು ಶ್ರವಣಮಾಡುವುದರಿಂದಲೂ ಸುಖಾನಂದಗಳು ಅಭಿವೃದ್ಧವಾಗುವುವು. ॥೧೦೫॥

ಈ ವ್ರತವನ್ನು ಹದಿನಾರು ವರ್ಷ ಅವಿಚ್ಛಿನ್ನವಾಗಿ ಆಚರಿಸಿ ಹದಿನಾರನೆಯ ವರ್ಷದಲ್ಲಿ ಉದ್ಯಾಪನೆಯನ್ನು ಮಾಡಬೇಕು. ಶಿವಾರಾಧನೆಯನ್ನು ಮಾಡಿ ಈ ವ್ರತೋದ್ಯಾಪನೆಯನ್ನು ಸಂಭ್ರಮದಿಂದ ನಡೆಸಿದ ಬಳಿಕ ಈ ವ್ರತವು ಪರಿಪೂರ್ಣವಾಗಿ ಸಾಂಗವಾಗಿ ನೆರವೇರಿದಂತಾಗುವುದು. ॥೧೦೬॥

ವ್ರತವನ್ನಾಚರಿಸುತ್ತಾ ಹದಿನಾರನೆಯ ವರ್ಷವು ಪ್ರಾಪ್ತವಾದಾಗ ಈ ವ್ರತಕ್ಕೆ ಉದ್ಯಾಪನೆಯನ್ನು ಮಾಡಬೇಕು. ಯತ್ನಪುರಸ್ಸರವಾಗಿ ಅಪಾರ ಸಾಮಗ್ರಿ

ಶಂಕರೋಕ್ತಪ್ರಕಾರೇಣ ವ್ರತಾಚಾರಂ ಸಮಾಪ್ಯತೇ।
ಉದ್ಯಾಪನವ್ರತಸ್ಯಾಪಿ ಕಾರ್ಯಸಾಧನಕಲ್ಪನಂ ॥೧೦೮॥

ಪೂರ್ವೋಕ್ತೈರೇವ ವಿವಿಧೈಃ ಫಲೈರಪಿ ಸಮನ್ವಿತೈಃ।
ಶೂರ್ಪೈಃ ಷೋಡಶಸಂಖ್ಯಾಕೈರುಪಶೂರ್ಪಸಮನ್ವಿತೈಃ ॥೧೦೯॥

ಫಲೈಷ್ಷೋಡಶಸಂಖ್ಯಾಕೈರ್ವಿವಿಧೈಃ ಸ್ವರ್ಣಸಂಯುತೈಃ।
ಪೂರಣೀಯಾನಿ ಶೂರ್ಪಾಣಿ ರತ್ನೈರ್ಮುಕ್ತಾಫಲೈರಪಿ ॥೧೧೦॥

ತಾನಿ ಶೈವಕುಟುಂಬೇಭ್ಯೋ ದೇಯಾನಿ ಪ್ರೀತಿಪೂರ್ವಕಂ।
ದುಕೂಲಚೋಲಯುಕ್ತಾನಿ ಷೋಡಶತ್ವಪ್ರಕಲ್ಪನಾತ್ ॥೧೧೧॥

ಗಳನ್ನು ಸಂಪಾದಿಸಿಕೊಂಡು ಬಹು ಸಂಭ್ರಮದಿಂದ ವಿಧವತ್ತಾಗಿ ಉದ್ಯಾಪನೆಯನ್ನು ನಡೆಸಬೇಕು. ॥೧೦೭॥

ಈ ವ್ರತದ ಉದ್ಯಾಪನ ವಿಧಿಯು ಸಾಕ್ಷಾತ್ ಶಂಕರ ಪ್ರೋಕ್ತವೇ ಆಗಿರುತ್ತದೆ. ಆ ವಿಧಿಯ ಪ್ರಕಾರ ಉದ್ಯಾಪನೆಯನ್ನು ಮಾಡಿದರೆ ವ್ರತವು ಪರಿಪೂರ್ಣವಾಗುವುದು. ಉದ್ಯಾಪನವ್ರತದ ಸಾಧನಸಾಮಗ್ರಿಗಳು ಮತ್ತು ಕ್ರಮಗಳೂ ಮೊದಲಿನ ವ್ರತದ ವಿಧಿಯಂತೆಯೇ ಇರುವುವು. ಅದರಂತೆಯೇ ಸಾಮಗ್ರಿಯನ್ನು ಸಂಪಾದಿಸಿಕೊಳ್ಳಬೇಕು. ॥೧೦೮॥

ವ್ರತವಿಧಿಯಲ್ಲಿ ಇರುವಂತೆ ಉದ್ಯಾಪನವ್ರತದಲ್ಲಿಯೂ ಉಪಾಯನ ದಾನವನ್ನು ಕೊಡಬೇಕು. ಅದಕ್ಕೆ ನಾನಾ ವಿಧವಾದ ಹಣ್ಣುಹಂಪಲುಗಳಿಂದ ಕೂಡಿದ ಹದಿನಾರು ದೊಡ್ಡ ಮೊರಗಳೂ ಹದಿನಾರು ಚಿಕ್ಕ ಮೊರಗಳೂ ಆಗಬೇಕು. ॥೧೦೯॥

ಆ ಮೊರಗಳಲ್ಲಿ ಎಲ್ಲಾ ಹಣ್ಣುಗಳನ್ನೂ ಹದಿನಾರು ಸಂಖ್ಯೆಯಾಗಿ ಎಣಿಸಿ ತುಂಬಬೇಕು. ಅಲ್ಲದೇ ಅವುಗಳಲ್ಲಿ ಸ್ವರ್ಣಮಯವಾದ ಫಲಗಳನ್ನೂ ರತ್ನ ಮತ್ತು ಮುತ್ತುಗಳನ್ನೂ ಹದಿನಾರರಂತೆ ಎಣಿಸಿ ಹಾಕಿರಬೇಕು. ॥೧೧೦॥

ಹಾಗೆಯೇ ಅವರಲ್ಲಿ ವಸ್ತ್ರಗಳನ್ನೂ ಮತ್ತು ಸೀರೆ ಕುಪ್ಪಸಗಳನ್ನೂ ಹದಿನಾರರಂತೆ ಎಣಿಸಿ ದಾನಕ್ಕೆ ಇಡಬೇಕು. ಇಂಥ ಉಪಾಯನ ದಾನವನ್ನು ಈಶ್ವರಭಕ್ತರಾಗಿ ಸದಾಚಾರದಲ್ಲಿರುವ ದಂಪತಿಗಳಿಗೆ ಪೂಜಾಪುರಸ್ಸರವಾಗಿ ಅರ್ಪಿಸಬೇಕು. ॥೧೧೧॥

ತತಶ್ಚ ಸಕುಟುಂಬೇಭ್ಯೋ ಶಾಂಭವೇಭ್ಯೋ ಧನಾನ್ಯಪಿ ।
ಅನ್ನಾನ್ಯಪಿ ಪ್ರದೇಯಾನಿ ಧೇನವೋಽಪಿ ಗೃಹಾ ಅಪಿ ॥೧೧೨॥

ಭೂಷಣಾನ್ಯಪಿ ದೇಯಾನಿ ಯಥಾವಿಭವಮಾಸ್ತಿಕೈಃ ।
ವಿಭವೇ ಸತಿ ತತ್ರಾಪಿ ವಿತ್ತಶಾಠ್ಯಂ ನ ಕಾರಯೇತ್ ॥೧೧೩॥

ಏವಂ ಕೃತೋದ್ಯಾಪನಾನಾಮಂಗನಾನಾಂ ಪದೇ ಪದೇ ।
ಭವಂತ್ಯೇವ ಸುಖಾನೀತಿ ವೇದಡಿಂಡೀರವಶ್ಶ್ರುತಃ ॥೧೧೪॥

ಏವಂ ವ್ರತೇ ಕೃತೇ ಪೂರ್ಣೇ ಮೃತೋಽಪಿ ಪತಿರೇಷ್ಯತಿ ।
ಅತಸ್ಸೌಭಾಗ್ಯದಂ ಮನ್ಯೇ ವ್ರತಮೇತದಸಂಶಯಂ ॥೧೧೫॥

ವ್ರತಮೇತತ್ಕನ್ಯಕಾಪಿ ಕೃತ್ವಾ ಪ್ರಿಯತಮಂ ಪತಿಂ ।
ಪ್ರಾಪ್ನೋತಿ ನಾತ್ರ ಸಂದೇಹಸ್ತದ್ವ್ರತಂ ತಾದೃಶಂ ಯತಃ ॥೧೧೬॥

ಅನಂತರ ಅನೇಕ ಮಂದಿ ಈಶ್ವರ ಭಕ್ತರಿಗೆ ಯಥೇಚ್ಛವಾಗಿ ದಕ್ಷಿಣೆಯನ್ನು ಕೊಡಬೇಕಲ್ಲದೇ, ಗೋದಾನ, ಗೃಹದಾನ ಇತ್ಯಾದಿ ಮಹಾದಾನಗಳನ್ನು ಮಾಡಿ ಬಳಿಕ ಅನ್ನದಾನವನ್ನೂ ನಡೆಸಬೇಕು. ॥೧೧೨॥

ಈ ವ್ರತವನ್ನು ಮಾಡಿದ ಬಳಿಕ ಧನಲೋಭದಿಂದ ಯಾವುದರಲ್ಲಿಯೂ ಏನನ್ನೂ ಕಡಮೆಮಾಡಬಾರದು. ತಮ್ಮ ಐಶ್ವರ್ಯದ ಯೋಗ್ಯತೆಗೆ ತಕ್ಕಂತೆ ಉದಾರವಾಗಿ ದಾನಧರ್ಮಗಳನ್ನು ನಡೆಸಬೇಕು. ದರಿದ್ರರಾದವರಿಗೆ ವಸ್ತ್ರಗಳನ್ನೂ ಒಡವೆಗಳನ್ನು ದಾನಮಾಡಬೇಕು. ॥೧೧೩॥

ಈ ಪ್ರಕಾರವಾಗಿ ಯಾವ ಸ್ತ್ರೀಯು ಉದ್ಯಾಪನೆಯನ್ನು ಮಾಡುವಳೋ ಅವಳಿಗೆ ಸಮಸ್ತ ಸೌಭಾಗ್ಯ ಸೌಖ್ಯಗಳೂ ಅವಿಚ್ಛಿನ್ನವಾಗಿ ಲಭಿಸುತ್ತಿರುವುವೆಂದು ಸಾಕ್ಷಾತ್ ವೇದವೇ ಘಂಟಾಘೋಷವಾಗಿ ಸಾರುತ್ತಿದೆ. ॥೧೧೪॥

ಈ ಮಹಾವ್ರತವನ್ನು ಸಮಗ್ರವಾಗಿ ಮಾಡಿದರೆ ಪತಿಯು ಮೃತನಾಗಿದ್ದರೂ ಪುನಃ ಜೀವಂತನಾಗಿ ಎದ್ದು ಬರುವನು. ಆದ್ದರಿಂದ ಈ ವ್ರತವು ಅತ್ಯುತ್ತಮವೆಂಬುದರಲ್ಲಿಯೂ ಸಕಲ ಸೌಭಾಗ್ಯಪ್ರದವೆಂಬುದರಲ್ಲಿಯೂ ಸ್ವಲ್ಪವೂ ಸಂಶಯವಿಲ್ಲ. ॥೧೧೫॥

ಕನ್ಯಕೆಯು ಈ ವ್ರತವನ್ನು ಆಚರಿಸಿದರೆ ತನ್ನ ಪ್ರೀತಿಗೆ ಅನುರೂಪನಾದ

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ ।
ಯಸ್ಯ ಶ್ರವಣಮಾತ್ರೇಣ ಸೌಭಾಗ್ಯಂ ವೃದ್ಧಿಮೇಷ್ಯತಿ ॥೧೧೭॥

ಇದಮುದ್ಯಾಪನಂ ಪೂರ್ವಂ ಪೃಷ್ಟೋ ಗಿರಿಜಯಾ ಶಿವಃ ।
ಪ್ರಾಹ ಪ್ರಸನ್ನವದನಸ್ಸರ್ವದೇವಶಿಖಾಮಣಿಃ ॥೧೧೮॥

ಪುರಾ ಕಶ್ಚಿದಭೂದ್ರಾಜಾ ಬ್ರಹ್ಮಾವರ್ತೇ ವರಾನನೇ ।
ತಸ್ಯ ಭಾಗ್ಯಂ ವರಾರೋಹೇ ವಿನಾಶರಹಿತಂ ಸದಾ ॥೧೧೯॥

ಸ ಶಾಂಭವವರಸ್ತಸ್ಯ ವಯಶ್ಶಂಕರಪೂಜಯಾ ।
ಜಾತಂ ಪರಿಣತಂ ತೇನ ತೋಷಿತಾಶ್ಶಾಂಕರಾ ಅಪಿ ॥೧೨೦॥

ಪತಿಯನ್ನೇ ಶೀಘ್ರವಾಗಿ ಪಡೆಯುವಳು. ಇದರಲ್ಲಿ ಕಿಂಚಿತ್ತು ಸಂದೇಹವಿಲ್ಲ. ಏಕೆಂದರೆ ಈ ವ್ರತವೇ ಅಷ್ಟು ಮಹತ್ತರವಾಗಿದೆಯಷ್ಟೆ. ||೧೧೬||

ಇದೇ ವಿಚಾರದಲ್ಲಿ ಒಂದು ಪುರಾತನವಾದ ಇತಿಹಾಸವುಂಟು. ಈ ಕಥೆಯನ್ನು ಕೇಳುವುದರಿಂದ ಸುಖಸೌಭಾಗ್ಯಗಳು ಅಭಿವೃದ್ಧವಾಗಿ ದೊರೆಯುವುವು. ||೧೧೭||

ಈ ವ್ರತದ ಉದ್ಯಾಪನವಿಧಿಯನ್ನೇ ಪೂರ್ವದಲ್ಲಿ ಗಿರಿಜೆಯು ಪರಮೇಶ್ವರನನ್ನು ಪ್ರಶ್ನಿಸಿದ್ದಳು. ಆಗ ಶಂಕರನು ಮಂದಹಾಸಪೂರ್ವಕವಾಗಿ ಈರೀತಿ ನುಡಿದನು. ||೧೧೮||

"ಹಿಂದೆ ಬ್ರಹ್ಮಾವರ್ತದಲ್ಲಿ ಒಬ್ಬ ರಾಜನಿದ್ದನು. ಆತನು ಮಹಾ ಸಂಪದ್ಯುಕ್ತನಾಗಿದ್ದನು. ಆತನ ಐಶ್ವರ್ಯವು ಆದ್ಯಂತವಿಲ್ಲದೇ ಶಾಶ್ವತವಾಗಿ ಇರುವುದಾಗಿದ್ದಿತು. ||೧೧೯||

ಆ ರಾಜನು ಶಿವಭಕ್ತ ಶ್ರೇಷ್ಠನಾಗಿದ್ದನು. ಆತನು ಸದಾ ಶಿವಾರಾಧನೆಯನ್ನು ಮಾಡುತ್ತಲೇ ತನ್ನ ಆಯುಷ್ಯದ ಬಹುಭಾಗವನ್ನು ಕಳೆದು ವೃದ್ಧನಾದನು. ಆ ವರೆಗೆ ಆತನು ಕೋಟ್ಯಂತರ ಶಾಂಭವರಿಗೆ ದಾನಧರ್ಮಾದಿಗಳನ್ನು ಮಾಡಿ ಸಂತೃಪ್ತಿಗೊಳಿಸಿದ್ದನು. ||೧೨೦||

ಪೂಜಿತಾನ್ಯಪಿ ಲಿಂಗಾನಿ ರಾಜ್ಞಾ ತೇನೈವ ಕೋಟಿಶಃ ।
ಕೃತಾನಿ ತೇನ ಬಹುಧಾ ಶಿವೋದ್ಯಾನವನಾನ್ಯಪಿ ॥೧೨೧॥

ಶಿವಮಂದಿರನಿರ್ಮಾಣಂ ರತ್ನೈಸ್ತೇನೈವ ಕಾರಿತಂ ।
ಸ್ಥಾಪಿತಾನ್ಯಪಿ ಲಿಂಗಾನಿ ಚಿತ್ರರತ್ನಮಯಾನ್ಯಪಿ ॥೧೨೨॥

ತೇಷು ಪೂಜಾ ಕೃತಾ ತೇನ ಯಯಾ ತುಷ್ಯತಿ ಶಂಕರಃ ।
ತಸ್ಯ ಭಾಗ್ಯಸ್ಯ ನೇಯತ್ತಾ ಸ ಮಹಾನ್ ಸುರವಂದಿತಃ ॥೧೨೩॥

ತಸ್ಯ ಪುತ್ರಾಶ್ಶತಂ ತೇಷಾಂ ಶಿವಭಕ್ತಿರ್ದೃಢಾ ಸದಾ ।
ತೈಶ್ಚ ಶೂರೈರಪಾರೈಶ್ಚ ರಿಪವೋ ವಿಜಿತಾ ಅಪಿ ॥೧೨೪॥

ತೇಷಾಂ ರಿಪುಜಯೇ ಶಕ್ತಿಃ ಕೇವಲಂ ಶಿವಪೂಜಯಾ ।
ಸೈನ್ಯಮನ್ಯತ್ಪರಂ ತೇಷಾಂ ಸಾಮಾನ್ಯಪರಿಸೇವನೇ ॥೧೨೫॥

ಆ ರಾಜನು ಕೋಟ್ಯಂತರ ಶಿವಲಿಂಗಗಳ ದರ್ಶನವನ್ನು ಮಾಡಿದ್ದನಲ್ಲದೇ ಸ್ವಹಸ್ತದಿಂದಲೇ ಅನೇಕ ವಿಧವಾಗಿ ಪೂಜಿಸಿಯೂ ಇದ್ದನು. ಅವನು ಅನೇಕ ಶಿವೋದ್ಯಾನವನಗಳನ್ನು ನಿರ್ಮಿಸಿದ್ದನು. ರತ್ನಮಯವಾದ ಅನೇಕ ಶಿವಮಂದಿರಗಳನ್ನು ಕಟ್ಟಿಸಿ ಅವುಗಳಲ್ಲಿ ರತ್ನಮಯವಾದ ಶಿವಲಿಂಗಗಳನ್ನು ಪ್ರತಿಷ್ಠೆಮಾಡಿಸಿದ್ದನು. ||೧೨೨||

ಆ ಶಿವಲಿಂಗಗಳಿಗೆ ಶಂಕರನು ಸುಪ್ರೀತನಾಗುವಷ್ಟು ಯಥೇಚ್ಛವಾಗಿ ಪೂಜೆಗಳನ್ನು ನಡೆಸಿದ್ದನು. ಇದರಿಂದ ಅವನ ಪುಣ್ಯಕ್ಕೂ ಮತ್ತು ಭಾಗ್ಯಕ್ಕೂ ಎಣೆ ಇರಲಿಲ್ಲ. ಸಕಲ ದೇವತೆಗಳೂ ಅವನನ್ನು ವಂದಿಸುತ್ತಿದ್ದರು. ಆ ರಾಜನು ಅಂಥ ಮಹಾತ್ಮನಾಗಿದ್ದನು. ||೧೨೩||

ಆ ರಾಜನಿಗೆ ನೂರು ಮಂದಿ ಮಕ್ಕಳಿದ್ದರು. ಅವರೂ ಸಹ ಪರಮ ಶಿವಭಕ್ತರಾಗಿದ್ದರು. ಆ ಶೂರರಾದ ರಾಜಪುತ್ರರು ತಮ್ಮ ಎಲ್ಲಾ ಶತ್ರುಗಳನ್ನೂ ಗೆದ್ದು ವಶಪಡಿಸಿಕೊಂಡಿದ್ದರು. ||೧೨೪||

ಆ ರಾಜಪುತ್ರರಿಗೆ ಹಾಗೆ ಅಜೇಯರಾಗಿ ಜಯಗಳಿಸುವ ಸಾಮರ್ಥ್ಯವು ಕೇವಲ ಶಿವಪೂಜೆಯಿಂದಲೇ ಪ್ರಾಪ್ತವಾಗಿದ್ದಿತು. ಸೈನ್ಯವು ಕೇವಲ ಹೆಸರಿಗೆ ಮಾತ್ರ ಅವರಿಗೆ ಸಹಾಯಕ್ಕೆಂದು ತೋರುತ್ತಿದ್ದಿತು. ಆದರೆ ಅದು ಅವರ ಸೇವೆಗೆ ಮಾತ್ರ ಇದ್ದಿತು. ಅವರೇ ಶತ್ರುಸಂಹಾರಕಾರ್ಯದಲ್ಲಿ ಸ್ವತಃ ಅದ್ವಿತೀಯ ಪರಾಕ್ರಮಶಾಲಿಗಳಾಗಿದ್ದರು. ||೧೨೫||

ತಸ್ಯೈವ ರಾಜ್ಞಃ ಕನ್ಯಾಪಿ ಕಾಪಿ ಶೋಭನವರ್ಧನಾ ।
ತಯಾ ಬಾಲ್ಯಂ ಸಮಾರಭ್ಯ ಕೃತಂ ಶಂಕರಪೂಜನಂ ॥೧೨೬॥

ತನ್ಮಾತಾ ವಿಮಲಾ ನಾಮ್ನಾ ಸಾಪಿ ಶಂಕರಪೂಜನೇ ।
ಸರ್ವದಾಪಿ ಸಮುದ್ಯುಕ್ತಾ ಕನ್ಯಾಮಾಹ ಕದಾಚನ ॥೧೨೭॥

ಕಲ್ಯಾಣಿ ತವ ಕಲ್ಯಾಣಂ ಭಾವಿ ಶಂಕರಮರ್ಚಯ ।
ಶಿವಾರ್ಚನೇನ ಭರ್ತಾಪಿ ತವ ಸ್ಯಾದೇವ ಭಾಗ್ಯವಾನ್ ॥೧೨೮॥

ಕಿಂ ಚ ನಿತ್ಯಂ ಶಿವಾಚಾರನಿರತಾಪಿ ಶಿವಾರ್ಚನಂ ।
ಸೌಮಂಗಲ್ಯವ್ರತಂ ನಿತ್ಯಂ ಕುರು ತಾವದ್ವಿಶೇಷತಃ ॥೧೨೯॥

ಅಯಂ ತು ಶ್ರಾವಣೋ ಮಾಸಃ ಪೂರ್ವಕಲ್ಪಸ್ತತಃ ಪರಂ ।
ಸೌಮಂಗಲ್ಯವ್ರತಸ್ಯಾಪಿ ಸಮಯಸ್ಸ್ಯಾದುಪಸ್ಥಿತಃ ॥೧೩೦॥

ಅದೇ ರಾಜನಿಗೆ ಒಬ್ಬ ಪುತ್ರಿಯೂ ಇದ್ದಳು. ಅವಳು ಬಾಲ್ಯದಿಂದಲೂ ಅವಿಚ್ಛಿನ್ನವಾಗಿ ಶಿವಾರ್ಚನೆಯನ್ನು ಮಾಡುತ್ತಿದ್ದುದರಿಂದ ಕಲ್ಯಾಣಭಾಗಿನಿಯಾಗಿದ್ದಳು. ॥೧೨೬॥

ಆ ರಾಜಪುತ್ರಿಯ ತಾಯಿಯಾದ ವಿಮಲೆ ಎಂಬುವಳೂ ಸಹ ಸತತವೂ ಶಿವಾರ್ಚನೆಯಲ್ಲಿಯೇ ಆಸಕ್ತಳಾಗಿರುತ್ತಿದ್ದಳು. ಆ ರಾಣಿಯು ಒಂದು ದಿನ ತನ್ನ ಪುತ್ರಿಯನ್ನು ಕುರಿತು ಪ್ರೀತಿಯಿಂದ ಈ ರೀತಿ ನುಡಿದಳು. ॥೧೨೭॥

ವತ್ಸೆ, ಕುಮಾರಿ, ನಿನಗೆ ಮುಂದೆ ಮಂಗಳವು ಪ್ರಾಪ್ತವಾಗುವುದರಲ್ಲಿ ಸಂಶಯವಿಲ್ಲ. ನೀನು ಇನ್ನೂ ಹೆಚ್ಚಾಗಿ ಭಕ್ತಿಯಿಂದ ಶಿವನನ್ನು ಪೂಜಿಸು. ಇದರಿಂದ ನಿನಗೆ ಒಳ್ಳೆಯ ಭಾಗ್ಯಶಾಲಿಯಾದ ಪತಿಯು ದೊರೆಯುವನು. ॥೧೨೮॥

ಯದ್ಯಪಿ ನೀನು ನಿತ್ಯವೂ ಶಿವಪೂಜೆಯನ್ನೂ ಶಿವಧರ್ಮಗಳನ್ನೂ ಆಚರಿಸುತ್ತಿರುವೆ. ಹಾಗೆಯೇ ಸೌಭಾಗ್ಯಪ್ರದವಾದ ಶಿವಮಹಾವ್ರತವನ್ನೂ ನೀನು ಮಾಡು. ॥೧೨೯॥

ಇದು ಶ್ರಾವಣಮಾಸವಾಗಿದೆ. ಇದು ಸೌಮಂಗಲ್ಯಪ್ರದವಾದ ಶಿವ ವ್ರತಕ್ಕೆ ಪೂರ್ವಕಲ್ಪವಾಗಿರುವುದು. ಇದನ್ನು ಮಾಡಿದ ಬಳಿಕ ಮುಂದೆ ಮುಖ್ಯಕಾಲವೂ ಸನ್ನಿಹಿತವಾಗುವುದು. ॥೧೩೦॥

ಭಾದ್ರಶುಕ್ಲತೃತೀಯಾಯಾಂ ಹಸ್ತರ್ಕ್ಷೇ ಸೋಮವಾಸರೇ ।
ತದ್ವ್ರತಂ ಸರ್ವಥಾ ಕಾರ್ಯಂ ನಾರೀಭಿಃ ಪುರುಷೈರಪಿ ॥೧೩೧॥

ಸೋದ್ಯಾಪನವ್ರತಂ ಕೃತ್ವಾ ಭಾಗ್ಯಂ ಪ್ರಾಪ್ನೋತಿ ಮಾನವಃ ।
ವ್ರತರತ್ನಮಿತಿ ಪ್ರೋಕ್ತಂ ತದ್ವ್ರತಂ ಕಮಲಾನನೇ ॥೧೩೨॥

ಮಯಾಪಿ ಕ್ರಿಯತೇ ಬಾಲೇ ತಸ್ಮಿನ್ ಕಾಲೇ ತ್ವಯಾಪಿ ತತ್ ।
ಅವಶ್ಯಮೇವ ಕರ್ತವ್ಯಂ ತೇನ ಸ್ಯಾದಕ್ಷಯಂ ಸುಖಂ ॥೧೩೩॥

ಇತಿ ತದ್ವಚನಂ ಶ್ರುತ್ವಾ ಸಾ ಸಂತುಷ್ಟಾ ಕುಮಾರಿಕಾ ।
ವ್ರತಕಾಲಮನುಪ್ರಾಪ್ಯ ಚಕಾರ ವ್ರತಮಾದರಾತ್ ॥೧೩೪॥

ಮುಂದೆ ಬರುವ ಭಾದ್ರಪದ ಶುಕ್ಲ ತೃತೀಯಾ ದಿನವು ಆ ಶಿವವ್ರತಕ್ಕೆ ಮುಖ್ಯಕಾಲವಾಗಿರುವುದು. ಅಂದು ಹಸ್ತನಕ್ಷತ್ರ ಮತ್ತು ಸೋಮವಾರಗಳ ಯೋಗವೂ ಇರುವುದು. ಆ ದಿನ ಸ್ತ್ರೀಯರು ಮತ್ತು ಪುರುಷರೂ ಸಹ ಅವಶ್ಯವಾಗಿ ಆ ವ್ರತವನ್ನು ಮಾಡಬೇಕು. ॥೧೩೧॥

ಉದ್ಯಾಪನ ಸಹಿತವಾಗಿ ಆ ಶಿವವ್ರತವನ್ನು ಪೂರ್ಣಮಾಡಿದರೆ ಮಾನವರಿಗೆ ಖಂಡಿತವಾಗಿಯೂ ಸಕಲ ಸೌಭಾಗ್ಯಗಳೂ ಲಭಿಸುವುವು. ಆ ವ್ರತವು ಮಿಕ್ಕೆಲ್ಲಾ ವ್ರತಗಳಿಗಿಂತಲೂ ಪರಮ ಶ್ರೇಷ್ಠವಾಗಿರುವುದೆಂದು ನಿರ್ಣೀತವಾಗಿರುವುದು. ॥೧೩೨॥

ವ್ರತದ ಆ ಮುಖ್ಯಕಾಲದಲ್ಲಿ ನಾನೂ ಆ ವ್ರತವನ್ನು ಮಾಡುವೆನು. ನೀನೂ ಸಹ ಅದನ್ನು ಅವಶ್ಯ ಮಾಡಬೇಕು. ಆದರಿಂದ ನಿನಗೆ ಅಪಾರವಾದ ಸೌಖ್ಯವು ಲಭಿಸುವುದು. ॥೧೩೩॥

ಈ ರೀತಿಯಾಗಿ ತಾಯಿಯಾದ ವಿಮಲೆಯು ಹೇಳಲು, ಆ ಮಾತನ್ನು ಕೇಳಿ ರಾಜಕುಮಾರಿಗೆ ಬಹಳ ಸಂತೋಷವಾಯಿತು. ಅವಳು ತಾಯಿಯ ಹೇಳಿಕೆಯ ಪ್ರಕಾರ ಆ ವ್ರತಕಾಲದಲ್ಲಿ ಮಹಾ ಉತ್ಸಾಹದಿಂದ ಶಿವವ್ರತವನ್ನು ಆಚರಿಸಿದಳು. ॥೧೩೪॥

ಪಶ್ಚಾತ್ಪರಿಣಯೋತ್ಸಾಹಸಮೇತಾ ಸಾ ಕುಮಾರಿಕಾ ।
ಭರ್ತಾ ಮೇ ಶಾಂಕರಶ್ರೇಷ್ಠೋ ವೀರಶ್ಚಾಸ್ತ್ವಿತಿ ಸಾದರಾತ್ ॥೧೩॥

ತತಃ ಪರಂ ಸ ರಾಜಾಪಿ ಸರ್ವಸೌಭಾಗ್ಯಸಂಯುತಂ ।
ವರಂ ದ್ರಷ್ಟುಂ ಸಮುದ್ಯುಕ್ತಶ್ಚಿಂತಯಾಕುಲಮಾನಸಃ ॥೧೪॥

ವರಶ್ಚ ಶಾಂಕರೋ ಧೀರಸ್ಸರ್ವಸೌಭಾಗ್ಯಸಂಯುತಃ ।
ವರೋ ದುರ್ಲಭ ಇತ್ಯೇವ ಚಿಂತಯಾ ಪ್ರಾಹ ಕನ್ಯಕಾಂ ॥೧೫॥

ಬಾಲೇ ಭೂಮಂಡಲೇ ಕೋಽಪಿ ಪಂಚರೇಫಸಮನ್ವಿತಃ ।
ನ ಲಭ್ಯತೇ ವರಃ ಕಿಂ ವಾ ಕರ್ತವ್ಯಮಧುನಾ ವದ ॥೧೬॥

ಉದಾರಶ್ಶಾಂಕರೋ ವೀರಸ್ಸುಂದರಶ್ಶ್ರೀಕರೋಽಪಿ ಯಃ ।
ವರೋಽತಿದುರ್ಲಭೋ ಲೋಕೇ ಕಿಂ ಕರ್ತವ್ಯಮತಃ ಪರಂ ॥೧೭॥

ಆ ರಾಜಕುಮಾರಿಯು ಪ್ರಾಪ್ತವಯಸ್ಕಳಾಗಿ ವಿವಾಹಕ್ಕೆ ಯೋಗ್ಯ ವಯಸ್ಸನ್ನು ಹೊಂದಿದ್ದುದರಿಂದ, ಅವಳು ತನಗೆ ಪರಶಿವಭಕ್ತನೂ ಮಹಾವೀರನೂ ಆದ ಪತಿಯೇ ದೊರೆಯಬೇಕೆಂಬ ಕಾಮನೆಯಿಂದ ಆ ಮಹಾವ್ರತವನ್ನು ಮಾಡಿದಳು. ॥೧೩॥

ಇತ್ತಲಾಗಿ ರಾಜನಿಗೂ ತನ್ನ ಪುತ್ರಿಗೆ ವಿವಾಹ ವಯಸ್ಸು ತುಂಬಿದೆ ಎಂದೂ, ಅವಳಿಗೆ ಅನುರೂಪನಾದ ವರನು ಯಾವನಿರುವನೆಂದೂ ಯೋಚನೆಗೆ ಆರಂಭವಾಯಿತು. ಹಾಗೆಯೇ ಅವನು ವರಾನ್ವೇಷಣೆಯನ್ನು ಬಹುವಾಗಿ ಮಾಡುತ್ತಾ ವಿವಾಹಕ್ಕೆ ಪ್ರಯತ್ನಿಸುತ್ತಿದ್ದನು. ॥೧೪॥

ಎಷ್ಟು ಹುಡುಕಿದರೂ ಶಿವಭಕ್ತಿಯುಕ್ತನಾಗಿಯೂ ಶೂರನಾಗಿಯೂ ಸಂಪತ್ಸೌಭಾಗ್ಯಶಾಲಿಯಾಗಿಯೂ ಇರುವ ವರನು ದೊರೆಯದಿರಲು ಆ ಮಹಾಚಿಂತೆಯಿಂದ ತನ್ನ ಪುತ್ರಿಯನ್ನು ಕುರಿತು ಈರೀತಿ ಹೇಳಿದನು. ॥೧೫॥

ವತ್ಸೇ ಕುಮಾರಿ! ನಿನಗೆ ಮೆಚ್ಚುಗೆಯಾದ ವರನು ಈ ಪೃಥ್ವಿಯಲ್ಲೇ ದುರ್ಲಭನಾಗಿರುವನು. ಉದಾರನೂ, ಶಾಂಕರನೂ, ವೀರನೂ, ಸುಂದರನೂ, ಶ್ರೀಕರನೂ ಆದ ಪತಿಯು ಆಗಬೇಕೆಂದು ನೀನು ಬಯಸುತ್ತಿರುವೆ. ಆದರೆ ಈ ಐದು ರೇಫಗಳಿಂದ (ರ ಎಂಬ ಅಕ್ಷರ) ಕೂಡಿದ ವರನು ಎಲ್ಲಿಯೂ ದೊರೆಯುಲಿಲ್ಲ.

ಕ್ವಚಿತ್ಕಶ್ಚಿದ್ಗುಣಃ ಕಶ್ಚಿತ್ಕ್ವಚಿತ್ಕಶ್ಚಿದತಸ್ತಥಾ ।
ನ ಪಂಚರೇಫಸಂಯುಕ್ತೋ ವರೋ ದೃಷ್ಟಿಪಥಂ ಗತಃ ॥೧೪೦॥

ಇತಿ ತದ್ವಚನಂ ಶ್ರುತ್ವಾ ಸಾ ಕನ್ಯಾ ಖಿನ್ನಮಾನಸಾ ।
ವ್ರತಸ್ಯ ಮಹಿಮಾ ಕೋ ವಾ ತಸ್ಯೇತ್ಯಾಹ ಸ್ವಮಾತರಂ ॥೧೪೧॥

॥ ವಿಮಲೋವಾಚ ॥

ಬಾಲೇ ಕ್ವ ತಸ್ಯ ಮಹಿಮಾ ಭೂಯಾನೇವಾಧಿತಿಷ್ಠತಿ ।
ತತ್ಸಾಂಗಂ ಯದಿ ತರ್ಹಿ ಸ್ಯಾತ್ಫಲಂ ಸರ್ವಮುಪೇಕ್ಷಿತಂ ॥೧೪೨॥

ಯತಸ್ಸಾಂಗಾನಿ ಕರ್ಮಾಣಿ ಸರ್ವಾಣಿ ಫಲದಾನ್ಯತಃ ।
ಅಂಗಹೀನೇನ ನ ಫಲಂ ಕರ್ಮಣೇತ್ಯವಧಾರಯ ॥೧೪೩॥

ಹುಡುಕಿದ್ದಾಯಿತು. ಎಲ್ಲಿಯೂ ಸಿಕ್ಕಲಿಲ್ಲ. ಈಗೇನು ಮಾಡುವುದು? ಇದೇ ನನಗೆ ಚಿಂತೆಯಾಗಿರುವುದು. ||೧೩೮-೧೩೯||

ಒಂದು ಕಡೆಯಲ್ಲಿ ಒಂದು ಗುಣವಿದ್ದರೆ ಬೇರೊಂದು ಕಡೆಯಲ್ಲಿ ಮತ್ತೊಂದು ಗುಣವಿರುವುದು. ಅಂತೂ ಐದು ಗುಣಗಳಿಂದ ಪರಿಪೂರ್ಣನಾದ ವರನು ಮಾತ್ರ ಎಷ್ಟು ಅನ್ವೇಷಣ ಮಾಡಿದರೂ ಸಿಕ್ಕಲಿಲ್ಲ. ||೧೪೦||

ಈ ಪ್ರಕಾರವಾದ ರಾಜನ ಮಾತನ್ನು ಕೇಳಿ ರಾಜಪುತ್ರಿಗೆ ಬಹಳ ವ್ಯಸನವಾಯಿತು. ಆಗ ಅವಳು ತನ್ನ ತಾಯಿಯನ್ನು ಕುರಿತು, "ಇದೇನಿದು! ನೀನು ವ್ರತವನ್ನು ಬಹುವಾಗಿ ಶ್ಲಾಘಿಸಿದ್ದೆ, ಅದರ ಮಹಿಮೆಯು ಹಾಗಿದೆ ಹೀಗಿದೆ ಎಂದು ಹೊಗಳಿದ್ದೆಯಲ್ಲಾ, ಎಲ್ಲಿ ಈಗ ಆ ಮಹಿಮೆ? ನನ್ನ ಕಾಮನೆಯು ಸಿದ್ಧಿಸಲಿಲ್ಲವಲ್ಲಾ" ಎಂದು ಖೇದದಿಂದ ದೂರಿಡಲು ಆಗ ಆ ವಿಮಲೆಯು ಪುತ್ರಿಯನ್ನು ಈರೀತಿ ಸಂತೈಸಿದಳು. ||೧೪೧||

" ಮಗಳೇ, ಚಿಂತಿಸಬೇಡ. ಆ ವ್ರತದ ಮಹಿಮೆಯು ನಾನು ಹೇಳಿದಂತೆ ಅದ್ಭುತವಾಗಿ ಇದ್ದೇ ಇರುವುದು. ಅದರಲ್ಲೇನೂ ಸಂಶಯವಿಲ್ಲ. ವ್ರತವು ಸಾಂಗವಾಗಿ ಪರಿಪೂರ್ಣವಾದರೆ ಆಗ ಸಕಲ ಇಷ್ಟಾರ್ಥಗಳೂ ಸಿದ್ಧಿಸಿಯೇ ಸಿದ್ಧಿಸುವುವು. ||೧೪೨||

ಯಾವ ಕರ್ಮವೇ ಆಗಲಿ ಸರ್ವಾಂಗಸಮೇತವಾಗಿ ನೆರವೇರಿದ ಬಳಿಕವೇ ಅದು ಫಲವನ್ನು ಕೊಡಲು ಸಮರ್ಥವಾದೀತು. ಅಂಗಕರ್ಮಗಳು ಪೂರ್ಣವಾಗದಿದ್ದರೆ

ತತ್ರ ತಾವತ್ಪ್ರಸೂನಾನಿ ವಿವಿಧಾನಿ ಫಲಾನ್ಯಪಿ ।
ಭಕ್ತ್ಯಾ ಸಂಪಾದನಿಯಾನಿ ಸ್ವಹಸ್ತೇನ ವಿಶೇಷತಃ ॥೧೪೪॥

ಅಶಕ್ಯಮಿದಮೇತಾವತ್ತಥಾ ಜಾಗರಣಾದಿಕಂ ।
ಅತಃ ಕಥಂ ವಾ ಸಫಲಂ ಕರ್ಮ ನ ಸ್ಯಾದ್ವದಾಧುನಾ ॥೧೪೫॥

ವಿಧ್ಯುಕ್ತಕರ್ಮಣಾ ತಾವತ್ಫಲಂ ಭವತಿ ಸರ್ವಥಾ ।
ತತ್ರ ವೈಗುಣ್ಯಶಂಕಾಪಿ ಯದಿ ಸ್ಯಾತ್ಕಿಂ ಫಲಂ ತದಾ ॥೧೪೬॥

ಇತಿ ತದ್ವಚನಂ ಶ್ರುತ್ವಾ ಸಾಪಿ ಬಾಲಾ ಮನೋರಮಾ ।
ಕೋ ವಾ ಗುರುರ್ಮಯಾ ಪ್ರಾಪ್ಯಃ ಕೇನ ಸಾಂಗಂ ವ್ರತಂ ಭವೇತ್॥೧೪೭॥

ಯಾವ ಕರ್ಮದಿಂದಲೂ ಫಲವು ದೊರೆಯುವುದಿಲ್ಲೆಂದು ತಿಳಿ. ಈಗ ನೀನು ಮಾಡಿದ ವ್ರತದಲ್ಲಿ ಎಲ್ಲಾ ಅಂಗಗಳೂ ನಡೆದಿರುವುದಿಲ್ಲ. ॥೧೪೩॥

ಈ ವ್ರತಕ್ಕೆ ಕೇವಲ ಸ್ವಹಸ್ತದಿಂದಲೇ ಸಾಮಗ್ರಿಗಳನ್ನು ಸಂಪಾದಿಸಿಕೊಳ್ಳಬೇಕು. ಅಪಾರವಾಗಿ ಪತ್ರಪುಷ್ಪಗಳನ್ನೂ, ನಾನಾವಿಧವಾದ ಹಣ್ಣುಕಾಯಿಗಳನ್ನೂ ಭಕ್ತಿಯಿಂದ ಸ್ವಯಂ ತಂದುಕೊಳ್ಳಬೇಕು. ॥೧೪೪॥

ಅಲ್ಲದೇ ರಾತ್ರಿಯಲ್ಲಿ ಜಾಗರಣೆಯನ್ನು ಮಾಡಬೇಕು. ಇವುಗಳೆಲ್ಲಾ ಆ ವ್ರತಕ್ಕೆ ಅಂಗಗಳಾಗಿರುತ್ತವೆ. ನೀನು ಬಾಲಿಕೆಯಾಗಿರುವುದರಿಂದ ಈ ಅಂಶಗಳನ್ನು ಆಚರಿಸಲು ಈವರೆಗೆ ನಿನಗೆ ಶಕ್ತಿ ಇರಲಿಲ್ಲ. ಆದ್ದರಿಂದ ಅಂಗಗಳು ಲೋಪ ಹೊಂದಿದ್ದರಿಂದ ಸರಿಯಾಗಿ ಫಲವು ಹೇಗೆ ದೊರೆಕೀತು? ನೀನೇ ಹೇಳು. ॥೧೪೫॥

ವಿಧಿಯಿಂದ ಚೋದಿತವಾದ ಕರ್ಮಕ್ಕೆ ಅವಶ್ಯ ಫಲವಿದ್ದೇ ಇರುವುದು. ಒಂದು ಅಂಗಾಂಶವಾದರೂ ಲುಪ್ತವಾಗಿರಬಹುದು ಎಂಬ ಸಂಶಯಕ್ಕೂ ಆಸ್ಪದವಿಲ್ಲದಂತೆ ಕರ್ಮವನ್ನು ಆಚರಿಸಿದರೆ ಫಲವು ದೊರೆಯುವುದು. ಅಂಗಲೋಪ ಸಂಶಯವಿದ್ದಾಗ ಫಲವು ಹೇಗೆತಾನೆ ಲಭಿಸುವುದು? ॥೧೪೬॥

ಈ ರೀತಿಯಾಗಿ ತಾಯಿ ವಿಮಲೆಯು ಹೇಳಲು ಅದನ್ನು ಕೇಳಿ ರಾಜಕುಮಾರಿಗೆ ಮತ್ತೂ ಚಿಂತೆಯು ದೃಢವಾಯಿತು. ಮತ್ತು ಹೇಗೆ ವ್ರತವನ್ನು ಮಾಡಲಿ? ಹೇಗೆ ಮಾಡಿದರೆ ವ್ರತವು ಸಾಂಗವಾದೀತು? ಅಂಥ ಕ್ರಮವನ್ನು ನನಗೆ ಬೋಧಿಸತಕ್ಕ ಗುರುವು ಯಾವನಾದರೂ ಲಭಿಸಬಲ್ಲನೇ? ಯಾವರೀತಿಯಿಂದ

ಕಥಂ ಸ್ಯಾತ್ತತ್ಫಲಾವಾಪ್ತಿರಿತಿ ಚಿಂತಾಸಮನ್ವಿತಾ ।
ಯಯೌ ಸುರಸರಿತ್ತೀರೇ ಸಖೀನಿಕರಸಂವೃತಾ ॥೧೪೮॥

ತತ್ರ ಸ್ನಾತ್ವಾ ಮಹಾದೇವಂ ಪ್ರಯಾಗೇಶ್ವರಪೂಜನಂ ।
ಚಕಾರ ಭೂತಿನಿಟಿಲಾ ರುದ್ರಾಕ್ಷಕರಕಂಕಣಾ ॥೧೪೯॥

ತದಾ ತಲ್ಲಿಂಗಪೂಜಾರ್ಥಂ ಗಂಗಾಸ್ನಾನಾದಿಪಾವನಃ ।
ಭೃಗುಸ್ಸಮಾಗತಸ್ತತ್ರ ಭೂತಿರುದ್ರಾಕ್ಷಭೂಷಣಃ ॥೧೫೦॥

ಸ ಸಮಾಗತ್ಯ ತಂ ದೇವಂ ಬಿಲ್ವಪತ್ರಾದಿಭಿರ್ಮುದಾ ।
ಪೂಜಯಿತ್ವಾ ಪ್ರಣಮ್ಯಾಪಿ ಪ್ರವಿಷ್ಟಸ್ಸ ಕುಶಾಸನೇ ॥೧೫೧॥

ತಮುವಾಚ ಪ್ರಣಮ್ಯಾಥ ಭೃಗುಂ ರಾಜಕುಮಾರಿಕಾ ।
ಪ್ರಸನ್ನವದನಂ ಶಾಂತಂ ಶಿವನಾಮಜಪೋತ್ಸುಕಂ ॥೧೫೨॥

ವ್ರತವನ್ನು ಸಾಂಗವಾಗಿ ಮಾಡಿ ಫಲವನ್ನು ಪಡೆದುಕೊಂಡೇನು? ಎಂದು ಮುಂತಾಗಿ ಆ ರಾಜಕುಮಾರಿಯು ಅತಿಯಾಗಿ ಚಿಂತಾಗ್ರಸ್ತಳಾದಳು. ॥೧೪೭॥

ಬಳಿಕ ಆ ರಾಜಕುಮಾರಿಯು ಕೆಲವು ಮಂದಿ ಸಖಿಯರೊಂದಿಗೆ ಗಂಗಾನದೀ ತೀರಕ್ಕೆ ಹೋದಳು. ಅಲ್ಲಿ ಸ್ನಾನಮಾಡಿ ಭಸ್ಮತ್ರಿಪುಂಡ್ರವನ್ನೂ ರುದ್ರಾಕ್ಷಮಾಲೆಗಳನ್ನೂ ಧರಿಸಿಕೊಂಡು ಅಲ್ಲಿಯೇ ಇದ್ದ ಪ್ರಯಾಗೇಶ್ವರನನ್ನು ಭಕ್ತಿಯಿಂದ ಪೂಜಿಸಿದಳು. ॥೧೪೮-೧೪೯॥

ಅದೇ ಸಮಯದಲ್ಲಿ ಭೃಗುಮುನಿಯೂ ಸಹ ಪ್ರಯಾಗೇಶ್ವರಲಿಂಗವನ್ನು ಪೂಜಿಸುವುದಕ್ಕಾಗಿ ಗಂಗಾಸ್ನಾನದಿಂದ ಪರಿಶುದ್ಧನಾಗಿ ಭಸ್ಮರುದ್ರಾಕ್ಷಿಗಳನ್ನು ಧರಿಸಿಕೊಂಡು ಅಲ್ಲಿಗೆ ಬಂದನು. ॥೧೫೦॥

ಆ ಭೃಗುಮುನಿಯು ಶಿವಲಿಂಗದ ಬಳಿಗೆ ಬಂದು ಭಕ್ತಿಪುರಸ್ಸರವಾಗಿ ಬಿಲ್ವಪತ್ರಾದಿಗಳಿಂದ ಪೂಜಿಸಿ ಅಲ್ಲಿಯೇ ದರ್ಭಾಸನದ ಮೇಲೆ ಶಿವಧ್ಯಾನಮಾಡುತ್ತಾ ಕುಳಿತುಕೊಂಡನು. ॥೧೫೧॥

ಭೃಗುಮುನಿಯು ಹಾಗೆಯೇ ದರ್ಭಾಸನದ ಮೇಲೆ ಕುಳಿತುಕೊಂಡು ಶಾಂತಚಿತ್ತದಿಂದ ಶಿವನಾಮವನ್ನು ಜಪಿಸುತ್ತಿರಲು, ಈ ರಾಜಕುಮಾರಿಯು ಆ ಮುನಿಯ ಪಾದಕ್ಕೆ ನಮಸ್ಕರಿಸಿ ವಿನಯದಿಂದ ಈ ರೀತಿ ಕೇಳಿದಳು. ॥೧೫೨॥

॥ ರಾಜಕನ್ಯೋವಾಚ ॥

ಕೇನ ವಾಂಛಿತಸಿದ್ಧಿಸ್ಸ್ಯಾದ್ಭೃಗೋ ಶಾಂಭವಪುಂಗವ ।
ತನ್ಮೇ ವದ ವಿಚಾರ್ಯಾದ್ಯ ಯೇನ ಸ್ಯಾತ್ಸುಖಮಕ್ಷಯಂ ॥೧೫೩॥

॥ ಭೃಗುರುವಾಚ ॥

ಸೌಭಾಗ್ಯದಂ ವ್ರತಂ ಲೋಕೇ ನಾರೀಣಾಂ ಪ್ರಥಿತಂ ಖಲು ।
ತದ್ವ್ರತಾಚರಣೇನೈವ ಸರ್ವಸಿದ್ಧಿರ್ಭವಿಷ್ಯತಿ ॥೧೫೪॥

ತದಂಬಯಾ ಕೃತಂ ಪೂರ್ವಂ ಶಂಕರೋಕ್ತವಿಧಾನತಃ ।
ಸಾ ಸರ್ವಮಂಗಳಾ ಜಾತಾ ತದ್ವ್ರತಾಚರಣಾಚ್ಛಿವಾ ॥೧೫೫॥

ತದ್ವ್ರತಾಚರಣೇನೈವ ದಗ್ಧಂ ತ್ರಿಪುರಕಾನನಂ ।
ಮಹೇಶ್ವರೇಣ ತೇನೈವ ಕೃತಸ್ತದ್ವಿಜಯಸ್ತತಃ ॥೧೫೬॥

ಎಲೈ ಭೃಗುಮಹಾಮುನಿಯೇ, ನನ್ನ ಇಷ್ಟಾರ್ಥವು ಸಿದ್ಧಿಸಬೇಕಾದರೆ ಏನನ್ನು ಮಾಡಬೇಕು? ಬಯಸಿದ ಕೋರಿಕೆಯನ್ನು ನಿಶ್ಚಿತವಾದ ರೀತಿಯಲ್ಲಿ ಪಡೆದುಕೊಳ್ಳಲು ಯಾವ ಉಪಾಯವನ್ನು ಮಾಡಬೇಕೆಂಬುದನ್ನು ಈಗ ನನಗೆ ಉಪದೇಶಿಸು. ಏನನ್ನು ಮಾಡಿದರೆ ನನಗೆ ಅಕ್ಷಯವಾದ ಸೌಖ್ಯವು ಲಭಿಸೀತು? ಎಂಬುದನ್ನು ದಯೆಯಿಟ್ಟು ಬೋಧಿಸು. ಎಂದು ರಾಜಕುಮಾರಿಯು ಪ್ರಾರ್ಥಿಸಿಕೊಳ್ಳಲು ಭೃಗುಮುನಿಯು ಇಂತೆಂದನು. ॥೧೫೩॥

"ಎಲೌ ಕುಮಾರಿ, ಪ್ರಪಂಚದಲ್ಲಿ ಸ್ತ್ರೀಯರಿಗಾಗಿಯೇ ಶಿವಮಹಾವ್ರತವು ಪ್ರಚುರವಾಗಿ ಪ್ರಸಿದ್ಧವಾಗಿದೆಯಷ್ಟೆ. ಅದೇ ವ್ರತವನ್ನೇ ಸ್ತ್ರೀಯರು ಮಾಡಬೇಕು. ಅದರಿಂದಲೇ ಅವರ ಸಕಲ ಇಷ್ಟಾರ್ಥಗಳೂ ಸಿದ್ಧಿಸುವುವು. ॥೧೫೪॥

ಈ ವ್ರತವನ್ನು ಪೂರ್ವದಲ್ಲಿ ಸಾಕ್ಷಾತ್ ಶಂಕರನೇ ಗಿರಿಜೆಗೆ ಉಪದೇಶಿಸಿದನು. ಅದೇ ವ್ರತವನ್ನು ಮಾಡಿ ಪಾರ್ವತಿಯು ಶಾಶ್ವತವಾಗಿ ಸರ್ವಮಂಗಳೆ ಎನಿಸಿಕೊಂಡಳು. ॥೧೫೫॥

ಈ ಮಹಾವ್ರತವನ್ನು ಗಿರಿಜೆಯು ಆಚರಿಸಿದ್ದರಿಂದಲೇ ಮಹಾರಣ್ಯಪ್ರಾಯರಾದ ತ್ರಿಪುರಾಸುರರು ವಿಧ್ವಸ್ತರಾದರು. ಈ ವ್ರತದ ಬೆಸೆಯಿಂದಲೇ ಪರಮೇಶ್ವರನು ಆ ಅಸುರರನ್ನೆಲ್ಲಾ ಕೊಂದು ಮಹಾ ವಿಜಯಶಾಲಿಯಾದನು. ॥೧೫೬॥

ನಾರಾಯಣಾದಯಸ್ಸರ್ವೇ ಪ್ರಚಂಡನಗರಾಗ್ನಿನಾ ।
ದಗ್ಧಾ ಅಪಿ ಸಮುತ್ಪನ್ನಾಃ ಕಮಲಾಕೃತತದ್ವ್ರತಾತ್ ॥೧೫೭॥

ಋಷಯೋಽಪಿ ಸಮುತ್ಪನ್ನಾಸ್ತದ್ವ್ರತಾಚರಣಾತ್ಪರಂ ।
ಅಸುರೋದರಸಂಕ್ರಾಂತಾಸ್ತತ್ಕಲತ್ರಕೃತಾತ್ಪುರಾ ॥೧೫೮॥

ಅನ್ಯೇಽಪಿ ಯೇ ಮೃತಾಃ ಪೂರ್ವೇ ತತ್ತದ್ವ್ರತವಿಶೇಷತಃ ।
ಸಂಪ್ರಾಪ್ತಜೀವನಾಸ್ಸರ್ವೇ ತದ್ವ್ರತಂ ಹಿ ಮಹತ್ತರಂ ॥೧೫೯॥

ಸರ್ವಸೌಭಾಗ್ಯದಂ ಪುಣ್ಯಂ ತದೇವ ವ್ರತಮುತ್ತಮಂ ।
ತೇನ ವಾಂಛಿತಸಿದ್ಧಿಸ್ಸ್ಯಾನ್ನಾತ್ರ ಕಾರ್ಯಾ ವಿಚಾರಣಾ ॥೧೬೦॥

ವ್ರತಂ ಸೌಭಾಗ್ಯದತ್ವೇನ ಪ್ರಸಿದ್ಧಂ ತದ್ವರಾನನೇ ।
ಸಾಂಗಂ ಕುರು ವಿಧಾನೇನ ತೇನ ಸಿದ್ಧಿರ್ಭವಿಷ್ಯತಿ ॥೧೬೧॥

ನಾರಾಯಣನೇ ಮೊದಲಾದ ದೇವತೆಗಳು ಹಿಂದೆ ಪ್ರಚಂಡನೆಂಬ ಅಸುರನ ಪಟ್ಟಣದಲ್ಲಿ ಸುಟ್ಟು ಭಸ್ಮೀಭೂತರಾಗಿದ್ದರು. ಅಂತಹವರೂ ಕೂಡ ಲಕ್ಷ್ಮಿಯು ಮಾಡಿದ ಈ ವ್ರತದ ಮಹಿಮೆಯಿಂದ ಮತ್ತೆ ಬದುಕಿ ಬಂದರು. ॥೧೫೭॥

ಹಿಂದೆ ಋಷಿಗಳೆಲ್ಲರೂ ಸಹ ಅಸುರರ ಹೊಟ್ಟೆಯ ಪಾಲಾಗಿದ್ದರು. ಆಗ ಆ ಋಷಿ ಪತ್ನಿಯರು ಇದೇ ವ್ರತವನ್ನು ಭಕ್ತಿಯಿಂದ ಮಾಡಿ ತಮ್ಮ ಪತಿಯರನ್ನು ಪುನಃಬದುಕಿಸಿಕೊಂಡರು. ॥೧೫೮॥

ಇನ್ನೂ ಎಷ್ಟೋ ಮಂದಿ ಸತ್ತವರೂ ಸಹ ಈ ಮಹಾವ್ರತದ ಮಹಿಮೆಯಿಂದ ಪುನಃ ಜೀವಿತರಾಗಿದ್ದಾರೆ. ಆದ್ದರಿಂದ ಈ ವ್ರತವು ಅತ್ಯಂತ ಮಹತ್ತರವಾದದ್ದು. ॥೧೫೯॥

ಈ ಅತ್ಯುತ್ತಮವಾದ ಮಹಾವ್ರತವು ಮಹಾ ಪುಣ್ಯಪ್ರದವಾದದ್ದು. ಮತ್ತು ಸಕಲ ಸೌಭಾಗ್ಯಪ್ರದವೂ ಆಗಿರುತ್ತದೆ. ಇದರಿಂದಲೇ ಸಮಸ್ತ ಇಷ್ಟಾರ್ಥಗಳೂ ಸಿದ್ಧಿಸುವುವು. ಈ ವಿಷಯದಲ್ಲಿ ಕಿಂಚಿತ್ತೂ ಸಂಶಯಪಡಬೇಕಾಗಿಲ್ಲ. ॥೧೬೦॥

ಎಲೌ ರಾಜಪುತ್ರಿಯೇ, ಪರಮ ಸೌಭಾಗ್ಯಪ್ರದವಾದ ಈ ಮಹಾವ್ರತವು ಸರ್ವಜನವಿದಿತವಾಗಿರುತ್ತದೆ. ನೀನೂ ಸಹ ಇದೇ ವ್ರತವನ್ನು ಸಾಂಗವಾಗಿ

ಪರಶ್ವೋ ಹಸ್ತನಕ್ಷತ್ರೇ ತೃತೀಯಾ ಸೋಮವಾಸರೇ ।
ಶುಕ್ಲೇ ಭಾದ್ರಪದಸ್ಯ ಸ್ಯಾತ್ತದ್ವ್ರತಂ ಶುಭದಾಯಕಂ ॥೧೬೨॥

ಇತಿ ತದ್ವಚನಂ ಶ್ರುತ್ವಾ ಸಾಪಿ ಸಂತುಷ್ಟಮಾನಸಾ ।
ತೇನೋಪದಿಷ್ಟಾ ಗುರುಣಾ ಮಹತಾ ಕರುಣಾಲಯಾ ॥೧೬೩॥

ತತಸ್ತದುಕ್ತಮಾರ್ಗೇಣ ತತ್ರೈವ ನೃಪಕನ್ಯಕಾ ।
ಸಾಂಗಂ ವ್ರತಂ ಚಕಾರಾಶು ಸೋದ್ಯಾಪನಮನಾಮಯಂ ॥೧೬೪॥

ತತಃ ಪರಂ ಯಯೌ ಸಾಪಿ ಮುದಾ ಜನಕಮಂದಿರಂ ।
ಸಂತುಷ್ಟಾಂ ತಾಮುವಾಚಾಥ ಸ ರಾಜಾ ಸ್ವಕುಮಾರಿಕಾಂ ॥೧೬೫॥

ವಿಧಿವತ್ತಾಗಿ ಆಚರಿಸು. ಇದರಿಂದಲೇ ನಿನಗೆ ಇಷ್ಟಾರ್ಥವು ಸಿದ್ಧಿಸುವುದು. ॥೧೬೧॥

ನಾಡಿದ್ದು ಹಸ್ತನಕ್ಷತ್ರವೂ, ಸೋಮವಾರವೂ, ತೃತೀಯಾತಿಥಿಯೂ, ಭಾದ್ರಪದ ಮಾಸದ ಶುಕ್ಲಪಕ್ಷವೂ ಆಗಿರುತ್ತದೆ. ಈ ಮಹಾಯೋಗದಲ್ಲಿಯೇ ಆ ಸೌಮಂಗಲ್ಯಪ್ರದವಾದ ವ್ರತವನ್ನು ಮಾಡಬೇಕಾದದ್ದು. ಅದೇ ಮುಖ್ಯ ಕಾಲವಾಗಿರುತ್ತದೆ.” ॥೧೬೨॥

ಈ ಪ್ರಕಾರವಾಗಿ ಭೃಗುಮುನಿಯು ಹೇಳಲು ಆ ರಾಜಕುಮಾರಿಗೆ ಅತ್ಯಂತ ಸಂತೋಷವಾಯಿತು. ತನಗೆ ಒಬ್ಬ ಯೋಗ್ಯನಾದ ಗುರುವು ಲಭಿಸಿ ಆತನಿಂದ ಉಪದೇಶವು ದೊರೆಯಿತೆಂದು ಆಕೆಯು ಸಂತುಷ್ಟಳಾದಳು. ॥೧೬೩॥

ಅನಂತರ ಆ ಭೃಗುಮುನಿಯು ಹೇಳಿದಂತೆ ರಾಜಕುಮಾರಿಯು ಅಲ್ಲಿಯೇ ಸಕಲ ಅಂಗಾಂಶಸಹಿತವಾಗಿ ಮಹಾವ್ರತವನ್ನೂ ಮತ್ತು ಉದ್ಯಾಪನಕರ್ಮವನ್ನೂ ಸಹ ನಿರ್ವಿಘ್ನವಾಗಿ ವೈಭವಪೂರ್ವಕವಾಗಿ ಆಚರಿಸಿದಳು. ॥೧೬೪॥

ವ್ರತವೆಲ್ಲವೂ ಸಾಂಗವಾಗಿ ನೆರವೇರಿದ ಬಳಿಕ ರಾಜಕುಮಾರಿಯು ತನ್ನ ತಂದೆಯ ಮನೆಗೆ ತಿರುಗಿ ಬಂದಳು. ವ್ರತವು ಸಾಂಗವಾಗಿ ನಡೆಯಿತೆಂದು ಅತ್ಯಂತ ಆನಂದಪಡುತ್ತಿದ್ದ ಆ ಕುಮಾರಿಯನ್ನು ಕುರಿತು ರಾಜನು ಪ್ರೀತಿಯಿಂದ ಈರೀತಿ ಪ್ರಶ್ನಿಸಿದನು. ॥೧೬೫॥

|| ರಾಜೋವಾಚ ||

ಕಿಂ ವಾ ವ್ರತಂ ತ್ವಯಾ ಚೀರ್ಣಮದ್ಯ ಯೇನ ತವಾಧುನಾ ।
ಪ್ರಹೃಷ್ಟಹೃದಯಂ ಚೇದಂ ವದೇತಿ ಪ್ರೀತಮಾನಸಃ ॥೧೬೬॥

|| ಕನ್ಯಕೋವಾಚ ||

ಭೃಗುಣಾ ತಾವದದ್ಯೋಕ್ತಂ ಸೌಮಂಗಲ್ಯವ್ರತಂ ಮಮ ।
ತತ್ಕೃತಂ ತೇನ ಸಂತುಷ್ಟಾ ವಾಂಛಿತಂ ಮೇ ಭವಿಷ್ಯತಿ ॥೧೬೭॥

ಇತಿ ತದ್ವಚನಂ ಶ್ರುತ್ವಾ ಸೋಽಪಿ ಸಂತುಷ್ಟಮಾನಸಃ ।
ತದ್ದಾರಾ ಅಪಿ ಸಂತುಷ್ಟಾಸ್ತಥಾಸ್ತ್ವಿತಿ ಸುತಾ ಅಪಿ ॥೧೬೮॥

ತದಾನೀಂ ತದ್ವ್ರತೇನೈವ ಸಂತುಷ್ಟಶ್ಶಂಕರೋ ವರಂ ।
ವಿಚಾರ್ಯ ಪ್ರೇಷಯಾಮಾಸ ಕಿನ್ನರಂ ಸರ್ವಸುಂದರಂ ॥೧೬೯॥

ಎಲೌ ಮಗಳೇ, ಇದೇನು ಇಂದು ಅತ್ಯಂತ ಉತ್ಸಾಹಶಾಲಿನಿಯಾಗಿದ್ದೀಯೆ. ಅಂಥ ಮಹತ್ತಾದ ಯಾವ ಕಾರ್ಯವನ್ನು ನೀನು ಮಾಡಿದೆ? ಯಾವುದಾದರೂ ಮಹಾವ್ರತವನ್ನು ನೆರವೇರಿಸಿರುವೆಯಾ? ಈಗ ನೀನು ಇಷ್ಟೊಂದು ಆನಂದಪಡುತ್ತಿರಲು ಕಾರಣವೇನು? ಹೇಳು! ಎಂದು ರಾಜನು ಕೇಳಲು ರಾಜಕುಮಾರಿಯು ಈ ರೀತಿ ನುಡಿದಳು. ||೧೬೬||

"ತಂದೆಯೇ, ನನಗೆ ಭೃಗುಮಹರ್ಷಿಯ ದರ್ಶನವು ಲಭಿಸಿದ್ದಿತು. ಆ ಮಹಾತ್ಮನು ನನಗೆ ಸೌಮಂಗಲ್ಯವ್ರತವೊಂದನ್ನು ಉಪದೇಶಿಸಿದನು. ಅವನು ಹೇಳಿದಂತೆ ಆ ವ್ರತವನ್ನು ಮಾಡಿದೆನು. ಇನ್ನು ನನ್ನ ಅಭಿಲಾಷೆಯು ನೆರವೇರುವುದೆಂದು ನನಗೆ ಈಗ ಬಹು ಆನಂದವಾಗುತ್ತಿದೆ." ಹೀಗೆಂದು ರಾಜಕುಮಾರಿಯು ಹೇಳಲು, ||೧೬೭||

ಆಗ ರಾಜನಿಗೂ ಬಹಳ ಸಂತೋಷವಾಯಿತು. ತಮ್ಮ ಪುತ್ರಿಗೆ ಈಶ್ವರಾನುಗ್ರಹದಿಂದ ಶೀಘ್ರವಾಗಿಯೇ ಅನುರೂಪನಾದ ವರನು ದೊರೆಯುವನೆಂದು ರಾಜನಿಗೂ ಆತನ ಪತ್ನಿಗೂ ಪುತ್ರರಿಗೂ ಸಹ ಪರಮಾನಂದವಾಯಿತು. ||೧೬೮||

ಇತ್ತಲಾಗಿ ಪರಮೇಶ್ವರನು ಸುಪ್ರೀತನಾಗಿದ್ದುದರಿಂದ ಆ ರಾಜಕುಮಾರಿಗೆ ಯಾರು ಯೋಗ್ಯನಾದ ವರನೆಂಬುದನ್ನು ತಾನೇ ಪರ್ಯಾಲೋಚಿಸಿ ಅತ್ಯಂತ ಸುಂದರನಾದ ಒಬ್ಬ ಕಿನ್ನರನನ್ನು ಕಳುಹಿಸಿದನು. ||೧೬೯||

ತತಸ್ಸ ಸರ್ವಸೌಭಾಗ್ಯೈಸ್ಸಂಯುತಃ ಪ್ರಯಯೌ ಮುದಾ ।
ಪ್ರಯಾಗಮೇವ ಬಹುಭಿಃ ಕಿನ್ನರೈರಪಿ ಸಂಯುತಃ ॥೧೭೦॥

ತತಃ ಸ್ನಾತ್ವಾ ಸ ಗಂಗಾಯಾಂ ಪ್ರಯಾಗೇಶ್ವರಪೂಜನಂ ।
ಕೃತ್ವಾ ಬಿಲ್ವಾದಿಭಿಸ್ಸಮ್ಯಗ್ಗಂಗಾತೀರೇ ಚಚಾರ ಸಃ ॥೧೭೧॥

ತದಾನೀಂ ಸಾ ವರಾರೋಹಾ ರತ್ನಪ್ರಾಸಾದಮಂಟಪೇ ।
ಆರುಹ್ಯ ಸ್ವಸಖೀಯುಕ್ತಾ ತಂ ದದರ್ಶ ಚ ಕಿನ್ನರಂ ॥೧೭೨॥

ದಿವ್ಯಂ ತುರಂಗಮಾರುಹ್ಯ ಪ್ರೇಂಖಂತಮತಿಸುಂದರಂ ।
ಧಾವಂತಮಪಿ ಧೈರ್ಯೇಣ ಕಿನ್ನರಂ ವರಮುತ್ತಮಂ ॥೧೭೩॥

ತಂ ವಿಲೋಕ್ಯಾತಿಸುಭಗಃ ಕೋಽಯಮತ್ಯದ್ಭುತೋ ಮಯಾ ।
ದೃಷ್ಟೋ ನರಸ್ಯ ಕಿಂ ರೂಪಮೀದೃಶಂ ನ ಸುರಸ್ಯ ವಾ ॥೧೭೪॥

ಆ ಕಿನ್ನರನು ನವತರುಣನಾಗಿದ್ದನಲ್ಲದೇ ಪರಮಭಾಗ್ಯಶಾಲಿಯೂ ಆಗಿದ್ದನು. ಅವನು ಈಶಪ್ರೇರಣೆಯಮೇರೆಗೆ ಅನೇಕ ಸಂಗಡಿಗರಾದ ಕಿನ್ನರರೊಂದಿಗೆ ಪ್ರಯಾಗಕ್ಕೆ ಬಂದಿದ್ದನು. ॥೧೭೦॥

ಆ ಪ್ರಯಾಗದಲ್ಲಿ ಕಿನ್ನರನು ಗಂಗಾನದಿಯಲ್ಲಿ ಸ್ನಾನಮಾಡಿ ಅನೇಕ ಬಿಲ್ವ ಮತ್ತು ಪುಷ್ಪಾದಿಗಳಿಂದ ಪ್ರಯಾಗೇಶ್ವರನನ್ನು ಪೂಜಿಸಿದನು. ಮತ್ತು ಅಲ್ಲಿಯೇ ಆ ಗಂಗಾತೀರದಲ್ಲಿ ವಿಲಾಸದಿಂದ ಸಂಚರಿಸುತ್ತಿದ್ದನು. ॥೧೭೧॥

ಇತ್ತಲಾಗಿ ರಾಜಕುಮಾರಿಯು ಅರಮನೆಯ ಮೇಲ್ಭಾಗದ ಗೋಪುರ ಮಂಟಪದಲ್ಲಿ ತನ್ನ ಸಖಿಯರೊಂದಿಗೆ ಕ್ರೀಡಿಸುತ್ತಿದ್ದಾಗ ಗಂಗಾತೀರದಲ್ಲಿ ತಿರುಗಾಡುತ್ತಿದ್ದ ಈ ಕಿನ್ನರನು ಆಕೆಯ ದೃಷ್ಟಿಗೆ ಗೋಚರನಾದನು. ॥೧೭೨॥

ಕಿನ್ನರನು ದಿವ್ಯವಾದ ಕುದುರೆಯ ಮೇಲೆ ಕುಳಿತುಕೊಂಡು ತನ್ನ ಸ್ವಾಭಾವಿಕವಾದ ಧೀರೋದಾರಸ್ವಭಾವದಿಂದ ಅತ್ತಿಂದಿತ್ತ ಸಂಚರಿಸುತ್ತಿದ್ದನು. ರಾಜಕುಮಾರಿಯು ಇವನನ್ನು ನೋಡಿದ ಕೂಡಲೇ ಇವನೇ ಉತ್ತಮನಾದ ವರನೆಂದೂ ಅತ್ಯಂತ ಸುಂದರನಾಗಿ ಇರುವನೆಂದೂ ತಿಳಿದುಕೊಂಡಳು. ॥೧೭೩॥

ಇವನನ್ನು ನೋಡಿ ರಾಜಕುಮಾರಿಯು ತನ್ನಲ್ಲಿಯೇ ಈರೀತಿ ಯೋಚಿಸಿಕೊಂಡಳು. ಈತನು ಯಾವನಿರಬಹುದು? ಅತ್ಯಂತ ಸುಂದರನೂ ಪರಮಭಾಗ್ಯ

ಏತಾದೃಶೋ ಯದಿ ನರೋ ಧೃತಸ್ತ್ಯದ್ಭಾಗ್ಯಮುದ್ಭುತಂ ।
ಪಂಚರೇಖಾಕರಸ್ಸೋಽಯಂ ವರಲಕ್ಷಣಸಂಯುತಃ ॥೧೭೫॥

ಅಯಂ ಸುರೋ ವಾ ಗಂಧರ್ವಃ ಕಿನ್ನರೋ ವಾ ವಿಚಾರ್ಯತಾಂ ।
ಯದ್ವಾ ಪಂಚಶರಸ್ಸೋಽಯಂ ಸರ್ವಸೌಭಾಗ್ಯಸಂಯುತಃ ॥೧೭೬॥

ಏವಂ ವಿಚಾರ್ಯ ಸಾ ಚಿತ್ತೇ ಪ್ರಾಹ ಮಾತರಮಾದರಾತ್ ।
ಪಶ್ಯಾಂಬ ತಂ ಭಾಗ್ಯವಂತಂ ಸ ಕೋ ವಾ ತಂ ವಿಚಾರಯ ॥೧೭೭॥

ಇತಿ ತದ್ವಚನಂ ಶ್ರುತ್ವಾ ಮಾತಾ ಪ್ರಾಹ ವಿಚಕ್ಷಣಾ ।
ಅಯಂ ಬಾಲೇ ನರೋ ನಾಯಂ ಸುರಶ್ಚರತಿ ಕಿನ್ನರಃ ॥೧೭೮॥

ಶಾಲಿಯೂ ಆಗಿರುವನಷ್ಟೆ. ಇಂತಹವನು ಖಂಡಿತವಾಗಿಯೂ ಮನುಷ್ಯರಲ್ಲಾಗಲಿ, ದೇವತೆಗಳಲ್ಲಾಗಲಿ ಯಾವನೂ ಇರಲಾರನು. ||೧೭೪||

ಇವನೇ ನನಗೆ ಪತಿಯಾಗಿ ದೊರೆಯಬಾರದೇ? ಇವನನ್ನೇ ನಾನು ವರಿಸಿದರೆ ನನ್ನ ಭಾಗ್ಯವೇ ಭಾಗ್ಯವಾದೀತು. ಇವನು ಮಹಾವರ್ಚಸ್ವಿಯೂ ವರನಿಗೆ ಇರಬೇಕಾದ ಐದು ರೇಖೆಗಳಿಂದ ಪರಿಪೂರ್ಣನೂ ಆಗಿರುವನು. ಮಹಾ ಸುಲಕ್ಷಣನೂ ಆಗಿದ್ದಾನೆ. ||೧೭೫||

ಇವನು ದೇವತೆಯೋ ಅಥವಾ ಗಂಧರ್ವನೋ ಅಥವಾ ಕಿನ್ನರನೋ ಅಥವಾ ಸಾಕ್ಷಾತ್ ಮನ್ಮಥನೋ? ವಿಚಾರಿಸಬೇಕಲ್ಲ! ಹೇಗೆ ವಿಚಾರಿಸುವುದೋ ಅದೂ ತಿಳಿಯುತ್ತಿಲ್ಲ. ಆಹಾ! ಇವನು ಎಂಥ ಭಾಗ್ಯಶಾಲಿಯಾಗಿರುವನು. ||೧೭೬||

ಹೀಗೆಂದು ರಾಜಕುಮಾರಿಯು ನಾನಾವಿಧವಾಗಿ ಚಿಂತಿಸಿ ಬಳಿಕ ತನ್ನ ತಾಯಿಯ ಸಂಗಡ, ಅಮ್ಮ ಅಲ್ಲಿ ನೋಡು. ಆ ಯುವಕನು ಎಷ್ಟು ಸುಂದರನಾಗಿರುವನು. ಅವನು ಮಹಾಭಾಗ್ಯಶಾಲಿ ಎಂದು ತೋರುತ್ತಿರುವನು. ಅವನು ಯಾರೆಂಬುದನ್ನು ಹೇಗಾದರೂ ವಿಚಾರಿಸು ಎಂದು ಬೇಡಿಕೊಂಡಳು. ||೧೭೭||

ಆಗ ರಾಣಿಯೂ ಸಹ ಆ ಯುವಕನನ್ನು ದೂರದಿಂದ ನೋಡಿ ಅಚ್ಚರಿಗೊಂಡಳು. ಅವಳು ಮಗಳನ್ನು ಕುರಿತು ಈರೀತಿ ನುಡಿದಳು. ಮಗಳೇ! ಇವನು ಖಂಡಿತವಾಗಿಯೂ ಮನುಜನಲ್ಲ. ಯಾವನೋ ಕಿನ್ನರನೋ ಅಥವಾ ಗಂಧರ್ವನೋ

ಯದ್ವಾ ಗಂಧರ್ವ ನಿವಾಯಂ ಗಂಗಾತೀರೇ ಮನೋಹರೇ।
ಈದೃಶೋ ನ ನರಃ ಕೋಽಪಿ ದೃಷ್ಟೋ ವಾ ನ ಶ್ರುತಃ ಖಲು॥೧೭೯॥

ಅಥಾಪಿ ತಾವದಧುನಾ ಚಾರದ್ವಾರಾ ವಿಚಾರ್ಯತಾಂ।
ಕೋಽಯಮಿತ್ಯಧುನಾ ರಾಜ್ಞೇ ನಿವೇದಯ ವರಂ ವರಂ ॥೧೮೦॥

ಇತಿ ತದ್ವಚನಂ ಶ್ರುತ್ವಾ ಸಾ ತಾಮಾಹ ವಿಚಕ್ಷಣಾ।
ಬಾಲೇ ತ್ವಯೈವ ವಕ್ತವ್ಯಂ ಕೋಽಯಮಿತ್ಯಪಿ ಸಾದರಂ ॥೧೮೧॥

ಇತಿ ತದ್ವಚನಂ ಶ್ರುತ್ವಾ ಸಾ ರಾಜನಿಕಟಂ ಯಯೌ।
ತಮಾಹ ತಸ್ಯ ವೃತ್ತಾಂತಂ ಸ ತಾಮಾಹ ತತಃ ಪರಂ ॥೧೮೨॥

ಮಯಾ ವಿಚಾರ್ಯತೇ ಬಾಲೇ ತಾದೃಶಃ ಕಿನ್ನರೋ ಭವೇತ್।
ವಿಶಿಷ್ಯ ವಾ ಸುರೋ ವಾ ಸ್ಯಾತ್ಸ ಕಥಂ ವಾ ನರೋ ಭವೇತ್॥೧೮೩॥

ಈ ಮನೋಹರವಾದ ಗಂಗಾತೀರದಲ್ಲಿ ಸಂಚರಿಸುತ್ತಿರುವನು. ಈ ತೆರನಾದ ರೂಪ ಗುಣಸಂಪನ್ನನನ್ನು ಮನುಜರಲ್ಲಿ ಎಲ್ಲಿಯೂ ನೋಡಿಲ್ಲ. ||೧೭೮-೧೭೯||

ಆದರೂ ಈತನು ಯಾವನೆಂಬುದನ್ನು ವಿಚಾರಿಸಬೇಕು. ಈ ಕೂಡಲೇ ಈ ವಿಚಾರವನ್ನು ರಾಜನಿಗೆ ತಿಳಿಸಿ ದೂತರ ಮುಖಾಂತರ ಆ ಯುವಕನು ಯಾರೆಂದೂ, ಆತನ ವೃತ್ತಾಂತವೇನೆಂದೂ ವಿಚಾರಿಸಬೇಕೆಂದು ಹೇಳು. ಹೀಗೆಂದು ರಾಜಕುಮಾರಿಯು ಹೇಳಲು, ||೧೮೦||

ಅವಳ ಮಾತನ್ನು ಕೇಳಿ ಬುದ್ಧಿಮತಿಯಾದ ರಾಣಿಯು ಅದೇನೋ ಔಚಿತ್ಯ ವಿದೆ ಎಂದು ಯೋಚಿಸಿಕೊಂಡು, ಮಗಳೇ! ನೀನೇ ಈ ವಿಚಾರವನ್ನು ರಾಜನಿಗೆ ಹೇಳು. ನೀನು ಹೇಳುವುದೇ ಈಗ ಯುಕ್ತವಾಗಿ ತೋರುವುದು ಎಂದು ಸಂತೈಸಿ ದಳು. ||೧೮೧||

ತಾಯಿಯ ಮಾತಿನಮೇರೆಗೆ ರಾಜಕುಮಾರಿಯು ಕೂಡಲೇ ತನ್ನ ತಂದೆಯ ಬಳಿಗೆ ಹೋಗಿ, ಆ ಯುವಕನನ್ನು ಬಹುವಾಗಿ ವರ್ಣಿಸಿ ಶ್ಲಾಘಿಸಿ, ಆ ವೃತ್ತಾಂತವನ್ನು ವಿಚಾರಿಸಬೇಕೆಂದಳು. ಆಗ ರಾಜನು ಪ್ರೀತಿಯಿಂದ ಈರೀತಿ ಹೇಳಿದನು. ||೧೮೨||

ಮಗಳೇ! ನೀನು ಹೇಳುವುದನ್ನು ನೋಡಿದರೆ ಆ ತರುಣನು ಕಿನ್ನರನೋ

ಇತ್ಯುಕ್ತ್ವಾ ಪ್ರೇಷಯಾಮಾಸ ಚಾರಾನ್ ಬಹುವಿಧಾನ್ ಸ್ವಕಾನ್ ।
ತದ್ವೃತ್ತಾಂತವಿಚಾರಾರ್ಥಂ ನಿಪುಣಾನತಿಕೋವಿದಃ ॥೧೮೪॥

ತೇ ಗತಾಸ್ತಸ್ಯ ನಿಕಟೇ ತದಾ ಸೋಽಪಿ ವಿಲೋಕ್ಯತಾಂ ।
ಪ್ರಾಸಾದಶೃಂಗಮಧ್ಯಸ್ಥಾಂ ನ ದದರ್ಶಾನ್ಯಮಾಗತಂ ॥೧೮೫॥

ಸ ಕಿನ್ನರೋ ವಿಲೋಕ್ಯಾಶು ತಾಮೇವ ಮದನಾತುರಃ ।
ತತ್ಸಂಗಮೋಪಾಯಚಿಂತಾಂ ಚಕಾರ ವಿತತಾಮಪಿ ॥೧೮೬॥

ಕಥಂ ವಾ ಸಾ ಸಮಾಯಾತಿ ತುಂಗಪ್ರಾಸಾದಸಂಸ್ಥಿತಾ ।
ಮಯಾ ವಾ ತತ್ರ ಗಂತವ್ಯಂ ಕಥಂ ವಾ ರಾಜಮಂದಿರೇ ॥೧೮೭॥

ಗಂಧರ್ವನೋ ಆಗಿರಬಹುದು. ಅವನು ನಿನಗೆ ಹೇಗೆ ವರನಾದಾನು. ಅಥವಾ ಇರಲಿ, ನಾನು ಈ ಕೂಡಲೇ ಅವನ ವೃತ್ತಾಂತವನ್ನು ವಿಚಾರಿಸಲು ಏರ್ಪಡಿಸುವೆನು. ||೧೮೩||

ಹೀಗೆಂದು ಮಗಳನ್ನು ಸಂತೈಸಿ ಮಹಾತತ್ವಜ್ಞನಾದ ಆ ರಾಜನು ಕೂಡಲೇ ಆ ತರುಣನನ್ನು ವಿಚಾರಿಸಿಕೊಂಡು ಬರಲು ಜಾಣರಾದ ಅನೇಕ ತನ್ನ ದೂತರನ್ನು ಅಟ್ಟಿದನು. ||೧೮೪||

ಆ ದೂತರು ಕೂಡಲೇ ಆ ಕಿನ್ನರನ ಸಮೀಪಕ್ಕೆ ಹೋದರು. ಆದರೆ ಆ ಕಿನ್ನರನು ಸಮೀಪಕ್ಕೆ ಬಂದ ದೂತರನ್ನು ಗಮನಿಸಲೇ ಇಲ್ಲ. ಇವನು ಒಂದೇ ಸಮನೇ ಆ ರಾಜಕುಮಾರಿಯನ್ನೇ ಅರಮನೆಯ ಗೋಪುರದ ಮೇಲುಗಡೆ ನೋಡುವುದರಲ್ಲಿಯೇ ಆಸಕ್ತನಾಗಿದ್ದನು. ಆತನ ದೃಷ್ಟಿಯು ಆ ಕಡೆಯಲ್ಲೇ ನೆಲಸಿ ಹೋಗಿದ್ದಿತು. ||೧೮೫||

ರಾಜಕುಮಾರಿಯನ್ನು ನೋಡಿದೊಡನೆಯೇ ಆಕೆಯ ರೂಪರಾಶಿಯಲ್ಲಿ ಆ ಕಿನ್ನರನು ಮುಗ್ಧನಾಗಿ ಹೋದನು. ಇಂಥ ರೂಪವತಿಯನ್ನು ಪಡೆಯದ ಮೇಲೆ ಏತಕ್ಕೆ ಜೀವನವನ್ನು ಧರಿಸಿರಬೇಕು? ಇದರಿಂದ ಮತ್ತೇನು ಪ್ರಯೋಜನ? ಅವಳನ್ನು ಹೇಗೆ ಪಡೆಯಲಿ? ಎಂದು ಮುಂತಾಗಿ ಅನೇಕ ಮೋಹದಚಿಂತೆಗಳು ಅವನನ್ನು ಆವರಿಸಿಕೊಂಡಿದ್ದವು. ||೧೮೬||

ಆ ಅರಮನೆಯ ಮೇಲುಗಡೆಯ ಗೋಪುರದಿಂದ ಆ ರಾಜಕುಮಾರಿಯು ಹೇಗೆ ಇಲ್ಲಿಗೆ ಬಂದಾಳು. ಯಾವಾಗ ಬರುವಳೋ ತಿಳಿಯಲಿಲ್ಲವಲ್ಲ? ಅಥವಾ

ಪ್ರೇರಿತಶ್ಶಂಕರೇಣಾಹಂ ತತ್ಪರಿಗ್ರಹವಾಂಛಯಾ ।
ತತ್ಪಾಣಿಗ್ರಹಣಂ ಕೇನ ಸಾಧನೇನ ಭವಿಷ್ಯತಿ ॥೧೪೪॥

ಏವಂ ಚಿಂತಾಸಮಾಕ್ರಾಂತಂ ತಂ ವಿಲೋಕ್ಯಾತಿವಿಸ್ಮಿತಾಃ ।
ತೇಽಪಿ ಚಾರಾಃ ಪರಂ ಭೂಪಂ ಸವಿಚಾರಾಸ್ಸಮಾಗತಾಃ ॥೧೪೯॥

ತತಸ್ತೇ ತಸ್ಯ ಚಿಹ್ನಾನಿ ನಿವೇದ್ಯಾಶು ಯಥಾರ್ಥತಃ ।
ಸಂತುಷ್ಟಂ ತಂ ನೃಪಂ ಚಕ್ರುರ್ವರಃ ಪ್ರಾಪ್ತೋಽಯಮಿತ್ಯಪಿ॥೧೯೦॥

ತತಸ್ಸಾಪಿ ವರಾರೋಹಾ ದೃಷ್ಟಕಿನ್ನರವಿಗ್ರಹಾ ।
ತದ್ವಿಲೋಕನಸಂಸಕ್ತಾ ನಾನ್ಯಲೋಕನತತ್ಪರಾ ॥೧೯೧॥

ನಾನೇ ಆ ರಾಜನ ಅರಮನೆಗೆ ಹೋಗಲೇ? ಹೇಗೆ ಹೋಗಲಿ? ಯಾವ ನೆಪ ಮಾಡಿಕೊಂಡು ಅವಳನ್ನು ಸೇರಲಿ? ||೧೪೭||

ಶಂಕರನೇ, ನನ್ನನ್ನು ಆ ರಾಜಪುತ್ರಿಯೊಡನೆ ಪಾಣಿಗ್ರಹಣಮಾಡಿಕೊಳ್ಳಲು ಕಳುಹಿಸಿರುವನು. ಆದರೆ ಅವಳನ್ನು ಪಡೆಯುವ ಬಗೆ ಹೇಗೆ? ಅವಳನ್ನು ವರಿಸಿಕೊಳ್ಳಲು ಯಾವ ಉಪಾಯವನ್ನು ಮಾಡಲಿ? ಆಕೆಯು ಹೇಗೆ ನನ್ನ ವಶಳಾದಾಳು? ||೧೪೪||

ಹೀಗೆಯೇ ಆ ಕಿನ್ನರನು ಮಹಾಚಿಂತೆಯಲ್ಲಿ ಡೋಲಾಯಮಾನನಾಗಿ ನಿಂತಿರಲು, ಆತನ ಚರ್ಯೆಗಳಿಂದ ದೂತರು ಆತನ ಮನಸ್ಸಿನ ಸ್ಥಿತಿಯನ್ನು ಅರಿತುಕೊಂಡರು. ಆತನ ಈ ಅದ್ಭುತವಾದ ವರ್ತನೆಯನ್ನು ಕಂಡು ವಿಸ್ಮಿತರಾಗಿ ಆ ದೂತರು ಕೂಡಲೇ ರಾಜನ ಬಳಿಗೆ ಬಂದು ಎಲ್ಲವನ್ನೂ ವಿವರಿಸಿ ಹೇಳಿದರು. ||೧೪೯||

ಆ ದೂತರು ತಾವು ನೋಡಿದ ಆ ಕಿನ್ನರನ ಚರ್ಯೆ, ಚಿಹ್ನೆ, ಭಾವ, ಭಂಗಿ ಎಲ್ಲವನ್ನೂ ತಿಳಿಸಿ ಇವನೇ ರಾಜಕುಮಾರಿಗೆ ತಕ್ಕ ವರನೆಂಬುದಾಗಿಯೂ ಹೇಳಿದರು. ಪುತ್ರಿಯನ್ನು ಪರಿಗ್ರಹಿಸಿಕೊಳ್ಳುವುದಕ್ಕಾಗಿಯೇ ವರನು ತನ್ನಲ್ಲಿಗೆ ಬಂದಿರುವನೆಂಬಸುದ್ದಿಯನ್ನು ಕೇಳಿ ರಾಜನಿಗೆ ಪರಮಾನಂದವಾಯಿತು. ||೧೯೦||

ಇತ್ತಲಾಗಿ ರಾಜಕುಮಾರಿಯೂ ಸಹ ಅರಮನೆಯ ಗೋಪುರದಿಂದಲೇ ಆ ಕಿನ್ನರಯುವಕನನ್ನು ನೋಡುತ್ತ ನೋಡುತ್ತಾ ಮೈಮರೆತಿದ್ದಳು. ಸಕಲ ವ್ಯಾಪಾರಶೂನ್ಯಳಾಗಿ ಒಂದೇ ಸಮನೆ ಆಕೆಯು ಕಿನ್ನರನನ್ನೇ ಎವೆಯಿಕ್ಕದೆ ನೋಡುತ್ತಿದ್ದಳು. ||೧೯೧||

ತದಾನೀಮಾಗತೋ ರಾಜಾ ಸ್ವಕನ್ಯಾನಿಕಟಂ ತದಾ ।
ಕಿನ್ನರಾಲೋಕನೋದ್ಯುಕ್ತಾ ಜನಕಂ ನ ದದರ್ಶ ಸಾ ॥೯೨॥

ತಾಮಾಯತಾಕ್ಷೀಂ ವಿಮಲಾಂ ತದಾಲೋಕನತತ್ಪರಾಂ ।
ದೃಷ್ಟ್ವಾ ಸರಿತ್ತಟಂ ಪ್ರಾಪ ಮಿತ್ರೈಃ ಪರಿಜನೈಸ್ಸಹ ॥೯೩॥

ಬಾಲಾವಿಲೋಕನರತಂ ದೃಷ್ಟ್ವಾ ಕಿನ್ನರಮಾದರಾತ್ ।
ಪ್ರಾಹ ಕೋಽಸೀತಿ ತಂ ರಾಜಾ ಪ್ರಹೃಷ್ಟಹೃದಯಸ್ತದಾ ॥೯೪॥

॥ ಕಿನ್ನರ ಉವಾಚ ॥

ಕಿನ್ನರಶ್ಶಂಕರೇಣೈವ ಪ್ರೇಷಿತೋಽಹಮಿಹಾಧುನಾ ।
ಮಯಾ ಸಮರ್ಚಿತಃ ಪೂರ್ವಂ ಸೌಮಂಗಲ್ಯವ್ರತೇನ ಸಃ ॥೯೫॥

ಅದೇ ಸಮಯದಲ್ಲಿ ರಾಜನು ಪುತ್ರಿಯ ಬಳಿಗೆ ಬಂದನು. ಆದರೆ ರಾಜಕುಮಾರಿಯು ಸದಾ ಕಿನ್ನರನನ್ನೇ ನೋಡುವುದರಲ್ಲಿ ತಲ್ಲೀನಳಾಗಿದ್ದುದರಿಂದ ಅವಳಿಗೆ ಮೈಮೇಲೆ ಪ್ರಜ್ಞೆಯೇ ಇರಲಿಲ್ಲ. ತಂದೆಯು ಬಂದುದು ಸಹ ಅವಳಿಗೆ ತಿಳಿಯಲಿಲ್ಲ. ॥೯೨॥

ಕುಮಾರಿಯು ನೋಡುತ್ತಿದ್ದ ಬಗೆಯನ್ನೂ ಅವಳ ಭಾವಭಂಗಿಯನ್ನೂ ರಾಜನು ಅರಿತುಕೊಂಡನು. ಆ ಕಿನ್ನರನಲ್ಲಿಯೇ ಈಕೆಯು ಅನುರಕ್ತಳಾಗಿರುವಳೆಂಬುದು ರಾಜನಿಗೆ ತಿಳಿಯಿತು. ಆಗ ಅವನು ಮಿತಪರಿವಾರದೊಡನೆ ಆ ಕಿನ್ನರನನ್ನು ಕಾಣಲು ಗಂಗಾತೀರಕ್ಕೆ ಹೋದನು. ೯೩॥

ಅಲ್ಲಿ ಕಿನ್ನರನೂ ಸಹ, ತನ್ನ ಪುತ್ರಿಯನ್ನೇ ಕಣ್ಣುಗಳನ್ನರಳಿಸಿಕೊಂಡು ನೋಡುತ್ತಿರುವ ರೀತಿಯನ್ನು ನೋಡಿ ಇಬ್ಬರಿಗೂ ಪರಸ್ಪರ ಪ್ರೀತಿಯುಂಟಾಗಿದೆ ಎಂಬುದನ್ನು ತಿಳಿದುಕೊಂಡು ರಾಜನಿಗೆ ಸಂತೋಷವಾಯಿತು. ಆಗ ರಾಜನು ಆ ಕಿನ್ನರನನ್ನು ಕುರಿತು ಗಂಭೀರವಾಗಿ, ನೀನು ಯಾರು ? ನಿನ್ನ ವೃತ್ತಾಂತವೇನು ? ಎಂದು ಪ್ರಶ್ನಿಸಲು, ॥೯೪॥

“ಎಲೈ ರಾಜನೇ, ನಾನು ಕಿನ್ನರನು. ನನ್ನನ್ನು ಶಂಕರನೇ ಈಗ ಇಲ್ಲಿಗೆ ಕಳುಹಿಸಿರುವನು. ಹಿಂದೆ ನಾನು ಸೌಮಂಗಲ್ಯವ್ರತವನ್ನು ಮಾಡಿದ್ದೆನು. ಅದರಿಂದ ಸುಪ್ರೀತನಾದ ಶಿವನು ನನ್ನನ್ನು ಇಲ್ಲಿಗೆ ಕಳುಹಿಸಿರುವನು” ಹೀಗೆಂದು ಕಿನ್ನರನು ಹೇಳಿದನು. ॥೯೫॥

ಇತಿ ತದ್ವಚನಂ ಶ್ರುತ್ವಾ ರಾಜಾ ಸಂತುಷ್ಟಮಾನಸಃ ।
ಕಿಂ ತ್ವಯಾ ದೃಷ್ಟಮಧುನಾ ತದ್ವದೇತ್ಯಾಹ ಸಾದರಂ ॥೧೯೬॥

॥ ಕಿನ್ನರ ಉವಾಚ ॥

ವಿದ್ಯುಲ್ಲತಾ ಕಾಪಿ ಮಯಾತ್ರ ದೃಷ್ಟಾ
ಪ್ರಾಸಾದಶೃಂಗೋಜ್ಜ್ವಲಮಂಡಲಸ್ಥಾ ।
ತದ್ದರ್ಶನಾಸಕ್ತಮಿದಂ ಮನೋ ಮೇ
ಸಾ ದೃಷ್ಟಪೂರ್ವಾ ನ ಮಯಾ ಕದಾಪಿ ॥೧೯೭॥

ಸಾಪಿ ಪ್ರಪಶ್ಯತ್ಯಧುನಾ ಮನೋಜ್ಞಾ
ಮಾಮೇವ ಯೋಗೋ ಭವಿತಾಪಿ ನೂನಂ ।
ಮಹೇಶ್ವರಾರಾಧನಜಂ ವಿಚಿತ್ರಂ
ಫಲಂ ಯತಸ್ಸ್ಯಾದಿತಿ ನಿಶ್ಚಯೋ ಮೇ ॥೧೯೮॥

ಕಿನ್ನರನ ಮಾತನ್ನು ಕೇಳಿ ರಾಜನು ಸಂತುಷ್ಟನಾದನು. ಆದರೂ ಮತ್ತೆ ಪರೀಕ್ಷಿಸಲು ಪುನಃ ಪ್ರಶ್ನೆಮಾಡಿದನು. ಅಯ್ಯಾ ಕಿನ್ನರನೇ, ನೀನು ಇಲ್ಲಿ ಏನನ್ನು ಕಂಡೆ? ಈಗ ಏನನ್ನು ನೋಡುತ್ತಿದ್ದೀಯೆ? ಎಂದು ಆದರದಿಂದಲೇ ಕೇಳಿದನು. ಆಗ ಕಿನ್ನರನು ಹೀಗೆ ಉತ್ತರವಿತ್ತನು. ॥೧೯೬॥

ಎಲೈ ರಾಜನೇ, ಆ ಅರಮನೆಯ ಮೇಲ್ಭಾಗದ ಗೋಪುರದಲ್ಲಿ ಒಂದು ಅಪೂರ್ವವಾದ ಸೌಂದರ್ಯರಾಶಿಯನ್ನು ನೋಡಿದೆನು. ಆ ವನಿತಾಮಣಿಯು ಸಾಕ್ಷಾತ್ ಮಿಂಚಿನ ಬಳ್ಳಿಯಂತೆಯೇ ಇರುವಳೆಂದರೆ ಅತಿಶಯೋಕ್ತಿಯಾಗಲಾರದು. ಇಂಥ ಸುಂದರಿಯನ್ನು ಈವರೆಗೆ ನಾನೆಲ್ಲಿಯೂ ನೋಡಿರುವುದಿಲ್ಲ. ಈಕೆಯು ನನ್ನ ದೃಷ್ಟಿಗೆ ಗೋಚರಳಾದಮೇಲೆ ನನ್ನ ಮನಸ್ಸೆಲ್ಲವೂ ಅವಳಲ್ಲೇ ನೆಟ್ಟುಹೋಗಿದೆ. ಈಗಲೂ ಸಹ ಸದಾ ಅವಳನ್ನೇ ನೋಡಿಕೊಂಡಿರಬೇಕೆಂದೆನಿಸುತ್ತದೆ. ಮತ್ತು ಅವಳನ್ನೇ ನೋಡುತ್ತಿದ್ದೇನೆ। ॥೧೯೭॥

ಆ ಸುಂದರಿಯಾದ ಕುಮಾರಿಯೂ ಸಹ ನನ್ನನ್ನೇ ನೆಟ್ಟದೃಷ್ಟಿಯಿಂದ ನೋಡುತ್ತಿರುವಳು. ಅವಳಿಗೂ ನನ್ನಲ್ಲಿ ಅನುರಾಗವುಂಟಾಗಿಯೇ ಇರಬಹುದು. ಆದುದರಿಂದ ನಮ್ಮಿಬ್ಬರಿಗೂ ಪರಸ್ಪರ ಸಂಬಂಧವೇರ್ಪಡುವುದರಲ್ಲಿ ಯಾವ ಸಂಶ

ಇತಿ ತದ್ವಚನಂ ಶ್ರುತ್ವಾ ತಥಾಸ್ತ್ವಿತಿ ಸ ಭೂಪತಿಃ ।
ತಾಂ ತಸ್ಮೈ ಕನ್ಯಕಾಂ ದತ್ವಾ ವರಶ್ರೇಷ್ಠಾಯ ಧೀಮತೇ ॥೧೯೯॥

ತತ್ಪಾಣಿಗ್ರಹಣೇನ ಸೋಽಪಿ ಪರಮಾನಂದಾಂಬುರಾಶಿಂ ಶ್ರಿತೋ
ರಾಜಾಪ್ಯುತ್ಸವಸಂಯುತೋ ನೃಪಸತೀ ತತ್ಕನ್ಯಕಾಪಿ ಪ್ರಿಯಂ ।
ಸಂಪ್ರಾಪ್ಯ ಪ್ರಮುದಾನ್ವಿತಾ ಶಿವಪದಾಂಭೋಜಾರ್ಚನಸ್ಯೇಪ್ಸಿತಂ
ಸೌಭಾಗ್ಯಂ ಮಹದಿತ್ಯಪೂರ್ವವಿಭವಂ ಸಸ್ಮಾರ ಸಾ ತದ್ವ್ರತಂ ॥೨೦೦॥

ಸೌಮಂಗಲ್ಯವಿವರ್ಧಕಂ ವ್ರತಮಿದಂ ಸೌಭಾಗ್ಯವೃದ್ಧಿಪ್ರದಂ
ಶ್ರೋತೃಣಾಮಪಿ ವಾಂಛಿತಾರ್ಥದಮಿದಂ ಜ್ಞಾತ್ವೈವ ಕುರ್ವಂತಿ ಯೇ ।

ಯವೂ ಇಲ್ಲ. ಈಶ್ವರಾನುಗ್ರಹದಿಂದ ಶೀಘ್ರವಾಗಿಯೇ ನಾವು ಪರಸ್ಪರಪ್ರೀತಿಯನ್ನು ಪಡೆಯುವೆವು. ಏಕೆಂದರೆ ಶಂಕರಾರಾಧನೆಯು ಎಂದೂ ಹುಸಿಯಾಗುವುದಿಲ್ಲ. ಎಂದಾದರೂ ಒಂದು ದಿನ ಅದ್ಭುತರೀತಿಯಿಂದಲೇ ಬಯಸಿದ ಫಲವು ಲಭಿಸಿಯೇ ಲಭಿಸುವುದೆಂದು ನನಗೆ ನಂಬಿಕೆ ಇದೆ. ॥೧೯೮॥

ಈ ಪ್ರಕಾರವಾಗಿ ಹೇಳಿದ ಕಿನ್ನರನ ಮಾತನ್ನು ಕೇಳಿ ರಾಜನಿಗೆ ಅತ್ಯಂತ ಸಂತೋಷವಾಯಿತು. ಬಳಿಕ ಆ ವರಶ್ರೇಷ್ಠನಾದ ಕಿನ್ನರನಿಗೆ ತನ್ನ ಮಗಳನ್ನು ವಿವಾಹಮಾಡಿಕೊಟ್ಟನು. ॥೧೯೯॥

ಹೀಗೆ ಕೇವಲ ಶಿವವ್ರತದ ಮಾಹಾತ್ಮ್ಯೆಯಿಂದ ಕಿನ್ನರನು ತಾನು ಕಾಮಿಸಿದ ಸುಂದರ ಸ್ತ್ರೀಯನ್ನು ವರಿಸಿ ಆನಂದಪಟ್ಟನು. ರಾಜನು ಮತ್ತು ಆತನ ಪತ್ನಿಯರೂ ಸಹ ತಮ್ಮ ಪುತ್ರಿಗೆ ಅನುರೂಪನಾದ ವರನು ದೊರೆತು ವಿವಾಹಮಾಡಿಕೊಡುವಂತಾದ್ದರಿಂದ ಮಹಾ ವೈಭವ ಸಂಭ್ರಮಗಳನ್ನು ಅನುಭವಿಸಿ ಆನಂದಪಟ್ಟರು. ಆ ರಾಜಕುಮಾರಿಯೂ ಸಹ ತನ್ನ ಅಪೇಕ್ಷೆಯಂತೆ ಸುಂದರನಾದ ಪತಿಯನ್ನು ಪಡೆದುಕೊಂಡು ಪರಮಾನಂದಭರಿತಳಾದಳು. ಮತ್ತು ಈ ಪರಮ ಸೌಭಾಗ್ಯ ಐಶ್ವರ್ಯಗಳು ಕೇವಲ ಶಿವಭಜನದಿಂದಲೇ ಪ್ರಾಪ್ತವಾದವೆಂದೂ ಆ ಶಿವವ್ರತವು ಅತ್ಯದ್ಭುತವೂ ಉತ್ತಮೋತ್ತಮವೂ ಆಗಿದೆ ಎಂದೂ ನೆನೆದುಕೊಂಡು ಪರಮ ಸಂತುಷ್ಟಳಾದಳು. ॥೨೦೦॥

ಎಲೌ ಶುಕವಾಣಿಯೇ! ಈ ಶಿವವ್ರತದ ಮಹಿಮೆಯು ಹೀಗೆ ಅತ್ಯದ್ಭುತವಾಗಿರುವುದು. ಈ ವ್ರತದಿಂದ ಸೌಮಂಗಲ್ಯವೂ ಸೌಭಾಗ್ಯ ಸೌಖ್ಯಗಳೂ ಅಭಿವೃದ್ಧ

ತೇ ತಾವದ್ಭುವಿ ಭೂರಿಭಾಗ್ಯಮತುಲಂ ಸಂಪ್ರಾಪ್ಯ ಜನ್ಮಾಂತರೇ
ಷ್ಯತ್ಯುತ್ಕೃಷ್ಟಶಿವಾಶ್ರಯಾ ಶಿವಪದಂ ಯಾಂತ್ಯೇವ ದೇವಾರ್ಚಿತಾಃ॥೨೦೧॥

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಉತ್ತರಭಾಗೇ ಸೌಭಾಗ್ಯದಶಿವವ್ರತರಾಜೋದ್ಯಾಪನ ಕಥನಂ ನಾಮೈಕ ಚತ್ವಾರಿಂಶೋಧ್ಯಾಯಃ

ವಾಗುವುವು. ಈ ವ್ರತಮಾಹಾತ್ಮ್ಯೆಯನ್ನು ಯಾರು ಕೇವಲ ಶ್ರವಣಮಾಡುವರೋ ಅವರಿಗೂ ಸಹ ಇಷ್ಟಾರ್ಥಗಳು ಪ್ರಾಪ್ತವಾಗುವುವು. ಹೀಗಿರುವ ಈ ವ್ರತದ ಶ್ರೇಷ್ಠತೆಯನ್ನೂ ಮಹಿಮೆಯನ್ನೂ ಯಾರು ಅರಿತುಕೊಂಡು ಈ ವ್ರತವನ್ನು ಆಚರಿಸುವರೋ ಅವರು ಇಹಲೋಕದಲ್ಲಿ ಅಪಾರವಾದ ಸೌಭಾಗ್ಯಸೌಖ್ಯಗಳನ್ನು ಪಡೆಯುವರಲ್ಲದೇ ಜನ್ಮಾಂತ್ಯದಲ್ಲಿ ಅತ್ಯುತ್ಕೃಷ್ಟ ಶಿವಪರಾಯಣರಾಗಿ, ಸಕಲ ದೇವ ಸಂಪೂಜ್ಯರಾಗಿ, ಕೊನೆಗೆ ಶಿವಧಾಮವಾದ ಕೈಲಾಸವನ್ನು ಸಹ ಹೊಂದುವರು ಎಂದು ಸತ್ಯವ್ರತರಾಜನು ಶುಕವಾಣಿಗೆ, ಶಿವವ್ರತ ವಿಧಿಯನ್ನು ವಿಸ್ತಾರವಾಗಿ ಹೇಳಿದ ನೆಂಬಲ್ಲಿಗೆ ॥೨೦೧॥

ನಲವತ್ತೊಂದನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

|| ಓಂ ನಮಶ್ಶಿವಾಯ ||

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ದ್ವಿಚತ್ವಾರಿಂಶೋಽಧ್ಯಾಯಃ

|| ರತ್ನಾಕರ ಉವಾಚ ||

ಇತಿ ತದ್ವಚನಂ ಶ್ರುತ್ವಾ ಸಾಪಿ ಸಂತುಷ್ಟಮಾನಸಾ ।
ಸತ್ಯವ್ರತಮುವಾಚೇದಂ ವಚನಂ ಪ್ರೀತಮಾನಸಾ ॥೧॥

ಪಂಚಾಕ್ಷರಾರ್ಥಕಥನಪ್ರಸಂಗಾ
ದೇತಾದೃಶಂ ವ್ರತಮುದೀರಿತಮಿಷ್ಟಸಿದ್ಧ್ಯೈ ।
ನಿತ್ಯವ್ರತಂ ವದ ವಿಶೇಷತ ಏವ ಮಹ್ಯಂ
ತದ್ವತ್ಸರೇ ಖಲು ಸಕೃತ್ ಕ್ರಿಯತೇ ವಿಶಿಷ್ಯ ॥೨॥

ನಲವತ್ತೆರಡನೆಯ ಅಧ್ಯಾಯ

ಸತ್ಯವ್ರತನ ಪತ್ನಿಯು ಪತಿಯಿಂದ ಹೇಳಲ್ಪಟ್ಟ ಆ ಮಾತುಗಳನ್ನು ಕೇಳಿ ಸಂತುಷ್ಟಳಾಗಿ ಮತ್ತೆ ಪತಿಯನ್ನು ಕುರಿತು ಹೀಗೆ ಕೇಳಿಕೊಂಡಳು—"ಪತಿವರ್ಯನೇ, ಇಲ್ಲಿನ ವರೆಗೂ ಶಿವಪಂಚಾಕ್ಷರಾರ್ಥಕಥನಪ್ರಸಂಗದಲ್ಲಿ ಶ್ರೇಷ್ಠವಾದ ವ್ರತವಿಧಾನವನ್ನು ನನಗೆ ತಿಳಿಸಿರುವೆ. ಈಗ ದಿವ್ಯವಾದ ನಿತ್ಯವ್ರತವಿಧಾನವನ್ನು ಕೇಳಬೇಕೆಂಬ ಅಭಿಲಾಷೆಯಿರುವುದು. ನೀನು ಹೇಳಿದ ಆ ವ್ರತವನ್ನು ವರ್ಷಕ್ಕೊಂದುಬಾರಿ ವಿಶೇಷ ರೀತಿಯಿಂದ ಮಾಡಬೇಕೆಂದು ತಿಳಿದುಕೊಂಡೆನು." ||೧-೨||

ಎಂದು ಕೇಳಿಕೊಂಡ ಪತ್ನಿಯ ಮಾತನ್ನು ಕೇಳಿ ಸತ್ಯವ್ರತನು, ತನ್ನ ಪತ್ನಿಯನ್ನು ಧನ್ಯಳೆಂದು ಹೊಗಳಿ ಉತ್ತಮವಾದ ನಿತ್ಯವ್ರತವಿಧಾನವನ್ನು ಉಪದೇಶಿಸತೊಡಗಿದನು. "ಎಲೌ ಪತಿವ್ರತಾಶಿರೋಮಣಿಯೇ, ಈ ನಿತ್ಯವ್ರತವೆಂ

ಇತಿ ತದ್ವಚನಂ ಶ್ರುತ್ವಾ ವಿಲೋಕ್ಯ ಸ್ವಸತೀಂ ದ್ವಿಜಃ ।
ಧನ್ಯಾಸೀತ್ಯಾದರೇಣೋಕ್ತ್ವಾ ಪ್ರಾಹ ನಿತ್ಯವ್ರತಾಂತರಂ ॥೩॥

ನಾರೀಣಾಂ ಚ ನರಾಣಾಂ ಚ ನಿತ್ಯವ್ರತಮಿಹೋಚ್ಯತೇ ।
ತಚ್ಛೃಣುಷ್ವ ವರಾರೋಹೇ ಸರ್ವಪಾಪಹರಂ ಪರಂ ॥೪॥

ಲಿಂಗೇ ಶಿವಾರ್ಚನಂ ನಿತ್ಯಮುಚರೇ ವಾ ಚರೇಪಿ ವಾ ।
ಕರ್ತವ್ಯಂ ಬಿಲ್ವಪತ್ರಾದ್ಯೈರ್ಜಲೈರ್ವಾ ವಿಮಲೈರ್ನವೈಃ ॥೫॥

ತತ್ರಾಧಿಕಾರೋಪಿ ವಿಭೂತಿಧಾರಣೇ
ಭವತ್ಯವಶ್ಯಂ ನ ವಿನಾಪಿ ತೇನ ।
ರುದ್ರಾಕ್ಷಮಾಲಾಭರಣೇಪಿ ತಾಭ್ಯಾಂ
ವಿನಾ ಶಿವಾರ್ಚಾಧಿಕೃತೋ ನ ನೂನಂ ॥೬॥

ಶಿವಾರ್ಚನಂ ಪಾಪಹರಂ ಪ್ರಕೃಷ್ಟಂ
ತದ್ಯೇನ ವಾ ನೂತನಬಿಲ್ವಪತ್ರೈಃ ।
ಕೃತಂ ಭವೇನ್ನೀರಲವೈಶ್ಚ ತೇನ
ಕೃತಾನಿ ಪುಣ್ಯಾನ್ಯಮಿತಾನಿ ನೂನಂ ॥೭॥

ಬುದು ಸ್ತ್ರೀಪುರುಷರೆಲ್ಲರಿಗೂ ಇಷ್ಟಾರ್ಥವನ್ನು ಕೊಡತಕ್ಕದ್ದು. ಮತ್ತು ಈ ವ್ರತಾಚರಣೆಯಿಂದ ಸಮಸ್ತರ ಪಾಪಗಳೂ ನಿವಾರಣೆಯಾಗುವುವು. ||೩-೪||

ಪ್ರತಿನಿತ್ಯವೂ ಚರರೂಪವಾದ ಜಂಗಮಾತ್ಮಕಲಿಂಗದಲ್ಲಾಗಲಿ, ಅಚರರೂಪವಾದ ಶಿವಲಿಂಗಗಳಲ್ಲಾಗಲಿ ಈಶ್ವರನನ್ನು ಭಕ್ತಿಯಿಂದ ಬಿಲ್ವಪತ್ರೆ, ಶುದ್ಧೋದಕ ಮೊದಲಾದ ಪೂಜಾಸಾಮಗ್ರಿಗಳಿಂದ ಪೂಜಿಸಬೇಕು. ಆ ಶಿವಾರ್ಚನೆಗೆ ಅಧಿಕಾರಿಯೆನಿಸಿದವನು ವಿಭೂತಿಯನ್ನಾಗಲಿ, ರುದ್ರಾಕ್ಷಮಾಲೆಯನ್ನಾಗಲಿ ಧರಿಸಿದವನಾಗಿರಬೇಕು. ಈ ಎರಡು ವಸ್ತುಗಳಿಂದ ಅಲಂಕೃತನಾಗದವನು ನಿತ್ಯಪೂಜೆಗೆ ಅರ್ಹನೇ ಅಲ್ಲ. ||೬||

"ಹೊಸದಾದ ಬಿಲ್ವದಳದಿಂದಾಗಲಿ, ಶುದ್ಧವಾದ ಜಲದಿಂದಾಗಲಿ ಭಕ್ತಿಯಿಂದ ಮಾಡಿದ ಶಿವಾರ್ಚನೆಯು ಸರ್ವಪಾಪಹರವಾದದ್ದು ಮತ್ತು ವಿಶೇಷ ಪುಣ್ಯಪ್ರದವಾದದ್ದು. ||೭||

ಅವಶ್ಯಮೇಷಾ ಶಿವಲಿಂಗಪೂಜಾ
ಕಾರ್ಯಾ ಮಯಾ ಬಿಲ್ವದಲೈರ್ಜಲೈರ್ವಾ ।
ತಯಾ ಮಯಾ ಪಾಪಕುಲಾನಿ ನೂನಂ
ವಿನಾಶನೀಯಾನ್ಯನಿಶಂ ಸಕೃದ್ವಾ ॥೮॥

ಇತಿ ನಿಶ್ಚಿತ್ಯ ಯೋ ನಿತ್ಯಂ ಕರೋತಿ ಶಿವಪೂಜನಂ ।
ತಸ್ಯ ಪಾಪಾನಿ ನಶ್ಯಂತಿ ಕೃತಾನ್ಯಪಿ ವಿಶೇಷತಃ ॥೯॥

ಕೃತ್ವಾ ಶಿವಾರ್ಚನಾರಂಭಂ ಕರ್ತವ್ಯಂ ತತ್ಸಮಾಪನಂ
ಯತಃ ಸಮಾಪನಾಭಾವೇ ತಸ್ಯ ತೇನ ಫಲಂ ಚ ನ ॥೧೦॥

ನಾರಂಭಮಾತ್ರಂ ಶಾಸ್ತ್ರಾರ್ಥಃ ಕಿಂತ್ವಾರಬ್ಧಸ್ಯ ಕರ್ಮಣಃ ।
ಸಮಾಪನಂ ತೇನ ತಾವತ್‌ಫಲಮಿತ್ಯವಧಾರಿತಂ ॥೧೧॥

ಕೃತೇ ಶಿವಾರ್ಚನೋದ್ಯೋಗೇ ಯದಿ ವಿಘ್ನಕರೋ ಭವೇತ್ ।
ತದಾ ತದ್ವಾರಣಂ ಕಾರ್ಯಂ ತೇನ ಪೂಜಾಫಲಂ ಭವೇತ್ ॥೧೨॥

ಆದ್ದರಿಂದ ನಾನು ಹೇಗಾದರೂ ಮಾಡಿ ತಪ್ಪದೆ ಶಿವಲಿಂಗಪೂಜೆಯನ್ನು ಬಿಲ್ವದಳದಿಂದಾಗಲಿ, ನೀರಿನಿಂದಾಗಲಿ ನಡೆಸಬೇಕು. ಇದರಿಂದ ಜಾಗ್ರತೆಯಾಗಿ ನನ್ನ ಪಾಪರಾಶಿಯೆಲ್ಲಾ ನಿರ್ಮೂಲವಾಗುವುದರಲ್ಲಿ ಸಂದೇಹವೇ ಇಲ್ಲ." ॥೮॥

ಎಂಬ ಭಾವನೆಯಿಂದ ಯಾವನು ತಪ್ಪದೆ ಶಿವಾರಾಧನೆಯನ್ನು ನಡೆಸುವನೋ ಅವನ ಪಾಪರಾಶಿಯೆಲ್ಲವೂ ನಾಶವಾಗುವುದು. ಆದರೆ ಶಿವಾರ್ಚನೆಗೆ ಆರಂಭಮಾಡಿದ ಮೇಲೆ ಸಮಾಪ್ತಿಪರ್ಯಂತ ಮುಂದುವರಿಸಲೇಬೇಕು. ಆರಂಭಮಾಡಿ ಸಮಾಪ್ತಿ ಮಾಡದಿದ್ದರೆ ವ್ರತಫಲವು ಆತನಿಗೆ ದೊರೆಯುಲಾರದು. ॥೯-೧೦॥

ಕೇವಲ ಆರಂಭಮಾತ್ರದಿಂದ ಯಾವುದೂ ಫಲಕೊಡಲಾರದು. ಆರಂಭ ಮಾಡಿದ ಕಾರ್ಯವು ಸಮಾಪ್ತಿಗೊಂಡರೆ ಆಗ ಫಲ ದೊರೆಯುವುದೆಂದು ಶಾಸ್ತ್ರಗಳು ನಿಶ್ಚಯಮಾಡಿರುತ್ತವೆ. ಒಂದುವೇಳೆ ಆರಂಭಮಾಡಿದ ಶಿವಾರ್ಚನೆಗೆ ಮಧ್ಯೆ ಅಡ್ಡಿಯೊದಗುವುದಾದರೆ ಅದನ್ನು ಸಂಪೂರ್ಣವಾಗಿ ಪರಿಹರಿಸಿಕೊಳ್ಳಲು ಪ್ರಯತ್ನಿಸಬೇಕು. ಆ ಪ್ರಯತ್ನದಿಂದಲೂ ವಿಘ್ನನಿವಾರಣಕಾರ್ಯದಿಂದಲೂ ಶಿವಪೂಜಾಫಲವು ದೊರೆಯುವುದೆಂದು ತಿಳಿದವರು ಹೇಳುವರು. ॥೧೧-೧೨॥

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ ।
ಶೃಣು ಭದ್ರೇ ಪ್ರವಕ್ಷ್ಯಾಮಿ ತಂ ಪಾಪಾಶನಿಸಂಭವಂ ॥೧೩॥

ರೇವಾತೀರೇ ಪುರಾ ಕಶ್ಚಿದ್ರಾಜಾ ಪರಮಧಾರ್ಮಿಕಃ ।
ಶಿವಾರ್ಚನರತೋ ನಿತ್ಯಂ ಶಿವಪೂಜಕಪೂಜಕಃ ॥೧೪॥

ಸ ಕೃತ್ವಾ ಪೂಜನಂ ಶಂಭೋರ್ನರ್ಮದಾತೀರಮಾಶ್ರಿತಃ ।
ಅಪಾರೈರುಪಚಾರೈಸ್ತೈರೇತಾವದತಿದುರ್ಲಭಾಃ ॥೧೫॥

ತತಸ್ಸರಾಜಾ ಪೂಜಾಂತೇ ಶಿವನೈವೇದ್ಯಮಾದರಾತ್ ।
ಗೃಹೀತ್ವಾ ಸ ಸರಿತ್ತೀರೇ ಚಚಾರ ನಿಜಲೀಲಯಾ ॥೧೬॥

ತದಾ ದೂರಾನ್ಮಹಾದೇವಪೂಜಾನಿರತಮಾಸ್ತಿಕಂ ।
ದದರ್ಶ ನರ್ಮದಾತೀರೇ ತರುಗುಲ್ಮಸಮಾವೃತೇ ॥೧೭॥

ತದಾನೀಮಾಗತಃ ಕ್ರೂರಶ್ಶಾರ್ದೂಲೋಽಪಿ ಪಿಪಾಸಯಾ ।
ತಂ ದದರ್ಶಾತಿದೂರೇಣ ವ್ಯಾಕುಲಸ್ಸಮಭೂತ್ತತಃ ॥೧೮॥

ಎಲೌ ಮಂಗಳಾಂಗಿಯೇ, ಇದಕ್ಕೆ ನಿದರ್ಶನವಾಗಿರುವ ಒಂದು ಪ್ರಾಚೀನ ಇತಿಹಾಸವನ್ನು ಹೇಳುವೆನು ಕೇಳು. "ಹಿಂದೆ ರೇವಾನದೀ ತೀರದಲ್ಲಿ ಧರ್ಮಿಷ್ಠನೂ ಶಿವಪೂಜಾಧುರಂಧರನೂ, ಈಶ್ವರಭಕ್ತರಲ್ಲಿ ಅನುರಾಗವುಳ್ಳವನೂ ಆದ ಒಬ್ಬ ರಾಜನಿದ್ದನು. ||೧೩-೧೪||

ಆತನು ಒಂದು ಸಾರಿ ನರ್ಮದಾತೀರದಲ್ಲಿ ಅತ್ಯಂತ ದುರ್ಲಭವೂ, ಅತಿಶಯವೂ ಆದ ಉಪಚಾರಗಳಿಂದ ಈಶ್ವರನನ್ನು ಪೂಜಿಸಿ, ಶಿವನೈವೇದ್ಯವನ್ನು ತಾನು ಭುಂಜಿಸಿ ಸಂತೋಷದಿಂದ ಆ ನದೀತೀರದಲ್ಲಿ ಸ್ವಲ್ಪಹೊತ್ತು ಸಂಚರಿಸಿದನು. ||೧೫-೧೬||

ಅಲ್ಲಿಯೇ ಒಬ್ಬ ಬ್ರಾಹ್ಮಣನು ದೂರದಲ್ಲಿ ಒಂದು ಮರದ ಗುಂಪಿನ ಮಧ್ಯೆ ಕುಳಿತು ಭಕ್ತಿಯಿಂದ ಶಿವಾರಾಧನೆ ಮಾಡುತ್ತಿದ್ದನು. ಅಲ್ಲಿಗೆ ಒಂದು ಕ್ರೂರವಾದ ಹುಲಿಯು ಬಾಯಾರಿಕೆಯಿಂದ ಕೂಡಿ ನೀರುಕುಡಿಯಲು ಜಾಗ್ರತೆ ಬಂದಿತು. ಇದನ್ನು ಈ ರಾಜನು ದೂರದಿಂದಲೇ ನೋಡಿ ವ್ಯಾಕುಲಚಿತ್ತನಾಗಿ ಹೀಗೆ ಯೋಚಿಸಿದನು. ||೧೭-೧೮||

ಅಯಂ ಕರೋತ್ಯತ್ರ ಮಹೇಶಪೂಜಾ
ಮೇತಸ್ಯ ವಿಘ್ನೋ ಭವಿತಾ ದ್ವಿಜೋಽಯಂ ।
ಸಂರಕ್ಷಣೀಯಃ ಖಲು ರಾಜಧರ್ಮೋ
ಯತೋ ನರಾಣಾಂ ಪರಿಪಾಲನಂ ಸ್ಯಾತ್ ॥೧೯॥

ಮನುಷ್ಯಮಾತ್ರಸ್ಯ ವಿಘಾತಕಾನಿ
ನಿವಾರಣೀಯಾನಿ ಶಿವಾರ್ಚಕಾಯ ।
ನಿವಾರಣೀಯಾನಿ ವಿಶೇಷತೋಽತ್ರ
ಪೂಜಾಪರೋಽಯಂ ಗಿರಿಶಸ್ಯ ನೂನಂ ॥೨೦॥

ಶಿವಪೂಜಕದುಃಖವಾರಣಾನಾಂ
ಫಲಮೀಶಾರ್ಚನಮೇವ ತೇನ ದುಃಖಂ ।
ನ ಭವತ್ಯತ ಏವ ದುಃಖನಾಶೇ
ಪ್ರಯತಸ್ತಾವದಹಂ ಭವಾಮಿ ನೂನಂ ॥೨೧॥

ಅಯಂ ತು ಪರ್ವತಾಕಾರಃ ಶಾರ್ದೂಲೋಽಪಿ ನಿವಾರಕಂ ।
ದೃಷ್ಟ್ವಾ ಮಾಂ ಪದಘಾತೇನ ಹನಿಷ್ಯತಿ ನ ಸಂಶಯಃ ॥೨೨॥

ಈ ದ್ವಿಜನು ಇಲ್ಲಿ ಶಿವಪೂಜೆಮಾಡುತ್ತಿರುವನು. ಇದಕ್ಕೆ ಈ ಹುಲಿಯಿಂದ ವಿಘ್ನವೊದಗುವಂತಿದೆ. ಹೇಗಾದರೂ ಮಾಡಿ ಈ ವಿಘ್ನವನ್ನು ಪರಿಹರಿಸಬೇಕು. ಈರೀತಿ ಪ್ರಜಾಪರಿಪಾಲನೆಮಾಡುವುದು ರಾಜಧರ್ಮವೆಂದೇ ನನ್ನ ಭಾವನೆ. ॥೧೯॥

ಯಾವ ಮನುಷ್ಯನಿಗೇ ಆಗಲಿ ತೊಂದರೆಯುಂಟಾದಾಗ ಆತನನ್ನು ಸಂರಕ್ಷಿಸುವುದೇ ರಾಜಧರ್ಮವೆಂದು ಹೇಳುವರು. ಹಾಗಿರುವಲ್ಲಿ ಶಿವಪೂಜಾಪರನಾದ ಈತನನ್ನು ರಕ್ಷಿಸುವುದು ವಿಶೇಷ ಧರ್ಮವಲ್ಲವೆ! ॥೨೦॥

ಶಿವಪೂಜಕರಿಗೆ ಬಂದಿರುವ ದುಃಖಗಳನ್ನು ನಿವಾರಿಸುವುದರಿಂದ, ಆತನಿಗೂ ಶಿವಪೂಜಾಫಲವು ದೊರೆಯುವುದು. ಮತ್ತು ಆತನ ಸಕಲ ದುಃಖಗಳೂ ದೂರ ಸರಿಯುವುವು. ಹೀಗಿರುವಾಗ ನಾನು ಈ ಕೆಲಸಕ್ಕೆ ಈಗಲೇ ಸಿದ್ಧನಾಗಬೇಕು. ॥೨೧॥

ಈ ಹುಲಿಯಾದರೋ ಬೆಟ್ಟದಂತೆ ಬಲಿಷ್ಠವಾಗಿರುವುದು. ನನ್ನನ್ನು ನೋಡಿ ಜೊಡನೆಯೇ ಪಂಜದಿಂದ ಹೊಡೆದು ಕೊಲ್ಲುವುದು. ಆದರೆ ಬಾಯಾರಿಕೆಯಿಂದ

ಪಿಪಾಸಯಾ ಪೀಡಿತಸ್ಯ ಕಥಂ ಕಾರ್ಯಂ ನಿವಾರಣಂ ।
ತದಿದಂ ಸಂಕಟಂ ತಾವದನಿವಾರ್ಯಮುಪಾಗತಂ ॥೨೩॥

ತತ್ಪಿಪಾಸಾವಾರಣಾಯ ಶೈವಸಂರಕ್ಷಣಾಯ ಚ ।
ರಕ್ಷಣಾಯ ಮಮಾಪ್ಯತ್ರ ಸಾಧನಂ ದುರ್ಲಭಂ ಖಲು ॥೨೪॥

ಏವಂ ವ್ಯಾಕುಲಚಿತ್ತಸ್ಯ ರಾಜ್ಞಸ್ತಸ್ಯಾಪಿ ಭಾಮಿನೀ ।
ಪ್ರಾಸಾದವರಮಾರುಹ್ಯ ತಂ ದದರ್ಶ ಪತಿಂ ತದಾ ॥೨೫॥

ವ್ಯಾಘ್ರಂ ಚ ದೂರಾದಾಲೋಕ್ಯ ಶಾಂಕರಂ ಶಿವಪೂಜಕಂ ।
ರಾಜಾನಂ ಚ ಸ್ವಭರ್ತಾರಂ ಜಾತಾ ವ್ಯಾಕುಲಮಾನಸಾ ॥೨೬॥

ತ್ರಯಾಣಾಂ ರಕ್ಷಣೋಪಾಯಃ ಕೋ ವಾ ತಾವತ್ಸ ದುರ್ಲಭಃ ।
ಅತಃ ಪರಂ ವಿಧೇಯಂ ಕಿಂ ಮಯೇತ್ಯಪಿ ಸಮಾಗತಾ ॥೨೭॥

ಪ್ರಾಸಾದಾದವರುಹ್ಯಾಶು ಸಖೀಜನಸಮಾವೃತಾ ।
ರಥಮಾರುಹ್ಯ ಬಹುಭಿರ್ಭಟೈರಪಿ ಸಮಾವೃತಾ ॥೨೮॥

ಕೂಡಿ ಜಲಾರ್ಥವಾಗಿ ಬಂದಿರುವ ಈ ಹುಲಿಯನ್ನು ಹೊಡೆಯುವುದು ಹೇಗೆ? ಒಳ್ಳೆಯ ಧರ್ಮಸಂಕಟವು ಈಗ ಪ್ರಾಪ್ತವಾಯಿತಲ್ಲಾ! ||೨೨-೨೩||

ಅದರ ಬಾಯಾರಿಕೆಯನ್ನು ಹೋಗಲಾಡಿಸಿ, ಶಿವಪೂಜಕನನ್ನು ರಕ್ಷಿಸಿ, ನನ್ನನ್ನು ಕಾಪಾಡಿಕೊಳ್ಳಲು ಏನುಮಾಡಬೇಕು? ಎಂದು ಯೋಚಿಸುತ್ತಿರುವ ರಾಜನನ್ನು ಅವನ ಪತ್ನಿಯು ದೂರದಲ್ಲಿದ್ದ ಅರಮನೆಯ ಉಪ್ಪರಿಗೆಯಮೇಲೆ ನಿಂತು ನೋಡಿದಳು. ||೨೪-೨೫||

ಹುಲಿ, ಮತ್ತು ಶಿವಾರ್ಚಕನಾದ ಬ್ರಾಹ್ಮಣ ಇವರನ್ನು ನೋಡುತ್ತಾ ದಿಗ್ಭ್ರಾಂತನಾಗಿ ನಿಂತಿದ್ದ ತನ್ನ ಪತಿಯನ್ನು ದೂರದಿಂದ ನೋಡಿ ವ್ಯಾಕುಲಚಿತ್ತಳಾಗಿ ಈ ಮೂವರನ್ನೂ ರಕ್ಷಿಸಲು ನಾನು ಮಾಡಬೇಕಾದ ಕಾರ್ಯವಾವುದು? ಎಂದು ರಾಣಿಯು ಯೋಚಿಸುತ್ತಲೇ ಅಲ್ಲಿಗೆ ಹೊರಟಳು. ||೨೬-೨೭||

ಉಪ್ಪರಿಗೆಯಿಂದಿಳಿದು, ಸಖಿಯರೊಡನೆ ಕೂಡಿ, ರಥಾರೂಢಳಾಗಿ ಅನೇಕ ಸೈನಿಕರೊಡನೆ ಪತಿಯಿದ್ದ ಸ್ಥಳಕ್ಕೆ ಬಂದಳು. ಮತ್ತು ಯೋಚಿಸುತ್ತ ನಿಂತಿದ್ದ ಪತಿ

ಸಾ ಸಮಾಗತ್ಯ ರಾಜಾನಂ ಪ್ರಾಹಾತಿವಿನಯಾನ್ಮುಹುಃ ।
ಪ್ರಣಯಾದ್ಯತಿಯತ್ನೇನ ಕೃತಾಂಜಲಿಪುಟಾ ಶುಭಾ ॥೨೯॥

ಕಥಮತ್ರಾಗತಂ ರಾಜನ್ ಸಂಕಟಂ ಸಮುಪಾಗತಂ ।
ತ್ರಯಾಣಾಂ ರಕ್ಷಣಂ ಕೇನ ಸಾಧನೇನ ವದಾಧುನಾ ॥೩೦॥

ಅಯಂ ತು ಶಾಂಭವಶ್ರೇಷ್ಠಃ ಶಿವಪೂಜಾಪರಾಯಣಃ ।
ರಕ್ಷಣೀಯಃ ಪ್ರಯತ್ನೇನ ತದುಪೇಕ್ಷಾ ತು ನೋಚಿತಾ ॥೩೧॥

ತೃಷಾರ್ತೋಽಪಿ ಸ ಶಾರ್ದೂಲಃ ಪ್ರತಪ್ತೋ ಭಾನುಭಾನುಭಿಃ ।
ಅಧುನಾ ತಸ್ಯ ಹನನೇ ಪಾಪಮೇವ ಪ್ರಜಾಯತೇ ॥೩೨॥

ಏಕ ಏವ ನ ಶಾರ್ದೂಲಃ ಸಕುಟುಂಬಃ ಸಮಾಗತಃ ।
ಶಿಶುಭಿಸ್ಸಹ ತೇಷ್ವಾರ್ತಾಃ ಶಿಶವಸ್ತೃಷಯಾ ನೃಪ ॥೩೩॥

ನ ಚ ಮಾರ್ಗಾಂತರಂ ಪಶ್ಯ ಗಿರಿಸಾನುಸಮಾಕುಲಃ ।
ಅಲ್ಪಾಲ್ಪ ಏವ ಮಾರ್ಗೋಽಯಂ ನ ಪರಾವೃತ್ಯ ಯಾಂತಿ ತೇ ॥೩೪॥

ಯನ್ನು ನೋಡಿ, ಪ್ರೀತಿಪೂರ್ವಕವಾಗಿ ನಮಸ್ಕರಿಸಿ ಕೈಜೋಡಿಸಿಕೊಂಡು ಹೀಗೆಂದಳು. ||೨೮-೨೯||

ರಾಜನೇ, ನಿನಗೆ ಈ ಯೋಚನೆಯು ಒದಗಿದುದು ಹೇಗೆ? ಪ್ರಕೃತ ನಿಮ್ಮ ಈ ಮೂವರನ್ನೂ ರಕ್ಷಿಸುವ ಉಪಾಯವೇನಿದ್ದರೂ ಅದನ್ನು ನನಗೆ ವಿವರಿಸುವವನಾಗು. ಹೇಗಿದ್ದರೂ ಶಿವಪೂಜಾಪರಾಯಣನಾದ ಈ ಬ್ರಾಹ್ಮಣನನ್ನು ಬದುಕಿಸುವುದು, ಉಚಿತವೂ ಶಾಸ್ತ್ರಸಂಮತವೂ ಆಗಿದೆ. ಇದನ್ನು ಮಾತ್ರ ಉದಾಸೀನಮಾಡತಕ್ಕದಲ್ಲ. ||೩೦-೩೧||

ಆ ಹುಲಿಯು ಬಾಯಾರಿಕೆಯಿಂದ ಬಳಲಿ ಬಿಸಿಲಿನ ಝಳಕ್ಕೆ ಬೆಂಡಾಗಿ ಹೋಗಿದೆ. ಅದನ್ನು ಕೊಲ್ಲುವುದೂ ಈಗ ಪಾಪಕರ. ಅಲ್ಲದೆ ತನ್ನ ಸಂಸಾರದಿಂದ ಕೂಡಿ ಬಂದಿರುವ ಈ ಹುಲಿಯನ್ನು ಕೊಂದರೆ ಹೆಣ್ಣುಹುಲಿ, ಮತ್ತು ಇದರ ಮರಿಗಳೂ ದಿಕ್ಕಿಲ್ಲದಂತಾಗುತ್ತವೆ. ಇದರ ಮರಿಗಳಾದರೋ ಬಾಯಾರಿಕೆಯಿಂದ ಕಂಗೆಟ್ಟಿವೆ. ||೩೨-೩೩||

ಇಲ್ಲಿರುವ ದಾರಿಯಾದರೋ ಅಷ್ಟು ದೊಡ್ಡದಾಗಿಲ್ಲ. ಹುಲಿಯು ಮಾರ್ಗಾಂತರದಲ್ಲಿ ಮುಂದುವರಿಯಲು ಅವಕಾಶವಿಲ್ಲದಂತಾಗಿದೆ. ಶಿವಪೂಜಕನಾದ ಈ ಬ್ರಾಹ್ಮ

ಅಯಂ ಚ ಯುವತೀ ಯುಕ್ತಃಶಾಂಭವಶ್ಶಿವಪೂಜಕಃ ।
ಪ್ರಾಯಶಶ್ಶೈವಪತ್ನೀ ಸಾ ಗುರ್ವಿಣೀ ಚಲನಾಕ್ಷಮಾ ॥೩೫॥

ಸಮಾಪ್ಯೈತದ್ವ್ರತಂ ರಾಜನ್ ದೀನಾನಾಂ ಪರಿರಕ್ಷಣಂ ।
ನ ಕೋಽಪಿ ರಕ್ಷಣೋಪಾಯೋ ದೃಶ್ಯತೇ ಕಿಂ ಕರೋಮ್ಯಹಂ ॥೩೬॥

ಏವಮುಕ್ತ್ವಾ ಸ್ಥಿತಾ ತತ್ರ ಸಾ ರಾಜ್ಞೀ ಭೂಪತಿಂ ತದಾ ।
ತದಾನೀಂ ಸಾಪಿ ಸುಷುವೇ ಕುಮಾರಂ ಶೈವಭಾಮಿನೀ ॥೩೭॥

ಸಕುಟುಂಬಸ್ಸಶಾರ್ದೂಲಸ್ತತ್ತೀರಂ ಸಮುಪಾಗತಃ ।
ಬಾಲಕಸ್ಯ ಧ್ವನಿಂ ರಮ್ಯಂ ಶುಶ್ರಾವಾಪೂರ್ವಮಾದರಾತ್ ॥೩೮॥

ಶ್ರುತ್ವಾ ತಂ ಧ್ವನಿಮುಪ್ಯಾಹ ಶಾರ್ದೂಲಃ ಸ್ವಸತೀಂ ಪ್ರತಿ ।
ಅಯಮಶ್ರುತಪೂರ್ವೋಽತ್ರ ಶಬ್ದಸ್ತಾವದಿಹ ಶ್ರುತಃ ॥೩೯॥

ಇತಿ ತದ್ವಚನಂ ಶ್ರುತ್ವಾ ಸಾಪ್ಯಾಹ ಸ್ವಪತಿಂ ತದಾ ।
ಮನುಷ್ಯನಾರೀ ಸಾ ತಾವದಧುನಾ ಸುಷುವೇ ಸುತಂ ॥೪೦॥

ಣನ ಪತ್ನಿಯನ್ನು ನೋಡಿದರೆ ಗರ್ಭಿಣಿಯಂತೆ ಕಾಣುತ್ತಿರುವಳು. ಎದ್ದು ಓಡಾಡು ವುದಕ್ಕೂ ಈಕೆಗೆ ಶಕ್ತಿಯಿಲ್ಲದಂತಿದೆ. ||೩೪-೩೫||

ಈ ಬ್ರಾಹ್ಮಣನಾದರೋ ಶಿವವ್ರತವನ್ನು ಮುಗಿಸಿ, ಈ ಸನ್ನಿವೇಶವನ್ನು ನೋಡಿ ಗೋಳಿಡುವನು. ಇದಕ್ಕೆ ಉಪಾಯವೇ ಆತನಿಗೆ ತೋರಲಾರದು. ಎಂದು ರಾಣಿಯು ಯೋಚಿಸುತ್ತ ನಿಂತಿರುವಾಗಲೇ, ಬ್ರಾಹ್ಮಣ ಪತ್ನಿಯು ಪ್ರಸವವೇದನೆ ಯನ್ನು ಪಡೆದವಳಾಗಿ, ಕೂಡಲೇ ಗಂಡುಮಗುವನ್ನು ಹೆತ್ತಳು. ||೩೬-೩೭||

ಆಗಲೇ ಹುಲಿಯು ತನ್ನ ಪತ್ನೀಪುತ್ರರೊಡನೆ ನದಿಯ ದಡವನ್ನು ಸೇರಿತು. ಕೂಡಲೇ ಕೇಳಿಬಂದ ಮಗುವಿನ ಅಳುವನ್ನು ಆಲಿಸಿ ಹುಲಿಯು, ತನ್ನ ಪತ್ನಿಯನ್ನು ಕುರಿತು, "ಆಹಾ ಈ ಶಬ್ದವೇನು ? ಇಲ್ಲಿಯವರೆಗೂ ಇಂತಹ ಧ್ವನಿಯನ್ನೆ ಇಲ್ಲಿ ನಾನು ಕೇಳಿರಲಿಲ್ಲ. ಇದು ಹೊಸದಾಗಿದೆ" ಎಂದು ಹೇಳಲು ಆಗ ಹೆಣ್ಣು ಹುಲಿಯು ಪತಿಯನ್ನು ಕುರಿತು "ಇಲ್ಲಿ ಒಬ್ಬಳು ಮನುಷ್ಯಸ್ತ್ರೀಯು ಒಂದು ಗಂಡುಮಗು ವನ್ನು ಜನಿಸಿರುವಳು. ||೩೮-೩೯-೪೦||

ತತ್ರ ತಾವನ್ನ ಗಂತವ್ಯಮಸ್ಮದ್ದರ್ಶನಮಾತ್ರತಃ ।
ಭೀತಾಸ್ತಾವದ್ಭವಿಷ್ಯಂತಿ ಮನುಷ್ಯಾಃ ಸ್ವಸ್ವಭಾವತಃ ॥೪೧॥

ಅಸ್ಮದ್ದರ್ಶನಮಾತ್ರೇಣ ತದಿಚ್ಛಾ ಪ್ರಪಲಾಯನೇ ।
ಭವಿಷ್ಯತಿ ನ ಸಾಮರ್ಥ್ಯಮಧುನಾ ತು ಪಲಾಯನೇ ॥೪೨॥

ತದ್ವಧಾರ್ಥಂ ತು ನೋದ್ಯೋಗೋ ಯದ್ಯಪ್ಯಸ್ಮಾಕಮಾಸ್ತಿಕೆ ।
ತಥಾಪಿ ಭಯದಂ ರೂಪಂ ದೃಷ್ಟ್ವಾ ಭೀತಾ ಭವಂತಿ ತೇ ॥೪೩॥

ಮಾರ್ಗಾಂತರಂ ಚ ನಾಸ್ಮಾಕಂ ಜಲಾರ್ಥಂ ಗಮನೇಽಧುನಾ ।
ಆರ್ತಿಶ್ಚ ತೃಷಯಾ ತಾವದ್ಬಾಲಾನಾಮಪಿ ಜಾಯತೇ ॥೪೪॥

ಅಹೋ ಮಹದಿದಂ ಕಷ್ಟಂ ಪ್ರಾಪ್ತಂ ದೇಹವಿಸರ್ಜನಂ ।
ವರಂ ನ ಹಾರಪೀಡಾ ತು ವರಮಿತ್ಯವಧಾರಿತಂ ॥೪೫॥

ಕಿಂ ಚ ರೇವಾತಟೇ ಲಿಂಗಾನ್ಯಪೂರ್ವಾಣಿ ತದರ್ಚನಂ ।
ಕರ್ತುಮಾಯಾಂತಿ ತೇ ಸಂತಸ್ತಾವದೇಕಾಂತಮಿತ್ಯಪಿ ॥೪೬॥

ಅಲ್ಲಿಗೆ ಈಗ ನಾವು ಹೋಗಬಾರದು. ನಮ್ಮನ್ನು ನೋಡಿದೊಡನೆಯೇ ಮನುಷ್ಯರಾದ ಇವರು ಸ್ವಭಾವವಾಗಿ ಹೆದರಿ ಓಡಲು ಅಪೇಕ್ಷಿಸುವರು. ಆದರೆ ಆ ಸ್ತ್ರೀಯು ಮಾತ್ರ ಓಡಲಾರಳು. ||೪೧-೪೨||

ನಾವು ಮಾತ್ರ ಅವರನ್ನು ಕೊಲ್ಲಲು ಯತ್ನಿಸಬಾರದು. ನಮ್ಮನ್ನು ನೋಡಿದೊಡನೆಯೇ ಹೆದರಿ ಅವರು ಓಡುವ ಯತ್ನಮಾಡುವುದಂತೂ ಖಂಡಿತ. ಏನು ಮಾಡುವುದು ? ನೀರನ್ನು ಕುಡಿಯಲು ಹೋಗುವುದಕ್ಕೆ ನಮಗೆ ಬೇರೆ ಮಾರ್ಗವೇ ಇಲ್ಲದಂತಾಗಿದೆ. ನಮ್ಮ ಮಕ್ಕಳಾದರೋ ಬಾಯಾರಿಕೆಯಿಂದ ಬಹಳ ಬಳಲಿವೆ. ||೪೩-೪೪||

ಅಲ್ಲದೆ ಈಗ ನಮಗೆ ಮತ್ತೊಂದು ಕಷ್ಟವೊದಗಿತು. ಈ ಬ್ರಾಹ್ಮಣನು ಹರಭಕ್ತನು. ಇಂತಹವರನ್ನು ಹಿಂಸಿಸುವುದಕ್ಕಿಂತಲೂ ನಾವು ಪ್ರಾಣಬಿಡುವುದೇ ಒಳ್ಳೆಯದು. ಅಲ್ಲದೆ ಈ ರೇವಾ ನದಿಯ ದಡದಲ್ಲಿ ಅನೇಕ ಪವಿತ್ರವಾದ ಶಿವಲಿಂಗಗಳಿರುವುವು. ಇವುಗಳನ್ನು ಭಕ್ತಿಯಿಂದ ಪೂಜಿಸಲು ಅನೇಕ ಸತ್ಪುರುಷರು ಇಲ್ಲಿಗೆ ಬರುವರು. ||೪೫-೪೬||

ಶಿವಪೂಜಾರ್ಥಮುದ್ಯುಕ್ತೇ ನಾರೀ ಭರ್ತರಿ ಸಾದರಾ ।
ಉಪಚಾರಪ್ರದಾನಾಯ ಪ್ರಾಯಶಸ್ಸಮುಪಾಗತಾ ॥೪೭॥

ತತಃ ಪತಿವ್ರತಾ ಸಾಪಿ ಶೈವಸ್ಯ ಮಹಿಲಾ ತತಃ ।
ತದ್ದುಃಖದಾನಮಾತ್ರೇಣ ನರಕಸ್ಸ್ಯಾದಸಂಶಯಂ ॥೪೮॥

ಹಾರದುಃಖಪ್ರದಾನೇನ ವ್ಯಾಘ್ರರೂಪಮುಪಾಗತಂ ।
ಪುನಸ್ತದ್ದುಃಖದಾನೇನ ನರಕಾನ್ನಿರ್ಗಮಃ ಕಥಂ ॥೪೯॥

ಮರಣಂ ವಾ ಭವತ್ವತ್ರ ತೃಷಯಾ ಪರಯಾ ಪರಂ ।
ನ ಶಾಂಭವಾಯ ದುಃಖಾನಿ ದೇಯಾನೀತ್ಯವಧಾರಯ ॥೫೦॥

ಸ್ವಾಯಂಶೈವಾರ್ಚನಸ್ಯಾಪಿ ಕಾಲೋಽಯಂ ಶಾಂಭವೋ ಯತಃ ।
ಮಧ್ಯಾಹ್ನೇಽಪಿ ಪ್ರಯತ್ನೇನ ಕರೋತಿ ಶಿವಪೂಜನಂ ॥೫೧॥

ಶಿವಪೂಜಾಸಮಾರಂಭೇ ನ ವಿಘ್ನಾಚರಣಂ ಮತಂ ।
ತದ್ವಿಘ್ನಾಚರಣಾಪಾರಪಾಪನಾಶಃ ಕಥಂ ಭವೇತ್ ॥೫೨॥

ಪತಿಯು ಶಿವಪೂಜಾಸಕ್ತನಾದೊಡನೆಯೇ, ಪ್ರಾಯಶಃ ಪತ್ನಿಯೂ ಸಹ ಪತಿಶುಶ್ರೂಷೆಗಾಗಿ ಜೊತೆಯಲ್ಲಿ ಬಂದೇ ಬರುವಳು. ಈಶ್ವರಭಕ್ತರ ಪತ್ನಿಯರೆಲ್ಲರೂ ಪತಿವ್ರತೆಯರೇ ಅಹುದು. ಅಂತಹವರಿಗೆ ನಾವು ಹಿಂಸೆಕೊಡುವುದರಿಂದ ನಮಗೆ ನಿಜವಾಗಿಯೂ ನರಕವೇ ಲಭಿಸುವುದು. ॥೪೭-೪೮॥

ಹಿಂದೆ ನಾವು ಈಶ್ವರಭಕ್ತರಿಗೆ ಹಿಂಸೆಯನ್ನುಂಟುಮಾಡಿದ್ದರಿಂದಲೇ ಈಗ ನಮಗೆ ಹುಲಿಯ ಜನ್ಮ ಬಂದಿದೆ. ಈಗಲೂ ನಾವು ಅದೇ ಕೆಲಸ ಮಾಡುತ್ತಿದ್ದರೆ ನಾವು ನರಕದಿಂದ ಹೊರಹೊರಡುವುದು ಹೇಗೆ? ನಮಗೆ ಈ ಬಾಯಾರಿಕೆಯಿಂದ ಮರಣವೊದಗಿದರೂ ಸರಿಯೇ, ನಾವು ಬೇರೆ ಈ ಈಶ್ವರಪೂಜಕರಿಗೆ ಹಿಂಸೆಕೊಡ ಬಾರದು ಎಂಬುದನ್ನು ತಿಳಿ. ॥೪೯-೫೦॥

ಶಿವಾರಾಧಕರು ಈಶ್ವರನನ್ನು ಮಧ್ಯಾಹ್ನಕಾಲದ ಪೂಜೆಯಿಂದ ತೃಪ್ತಿಪಡಿಸುವ ಕಾಲವೇ ಇದು. ಇಂತಹ ಸಮಾರಂಭದಲ್ಲಿ ನಾವು ಶಿವಪೂಜೆಗೆ ಅಡ್ಡಿಮಾಡುವುದು ನ್ಯಾಯವಲ್ಲ. ಹಾಗೆ ಅಡ್ಡಿತರುವುದರಿಂದ ಬರುವ ಪಾಪರಾಶಿಯನ್ನು ನಾವು ಕಳೆದು ಕೊಳ್ಳುವುದು ಹೇಗೆ? ॥೫೧-೫೨॥

ನ ಬ್ರಹ್ಮಹತ್ಯಾದಿಕಪಾತಕೇಭ್ಯ
ಸ್ತಥಾ ಭಯಂ ಭಾವಿ ಯಥಾ ಭಯಂ ಸ್ಯಾತ್ ।
ಮಹೇಶ್ವರಾರಾಧನವಿಘ್ನತೋತ
ಸ್ತದ್ವಿಘ್ನಮಾತ್ರಾನ್ನರಕೇ ಸ್ಥಿತಿಸ್ಸ್ಯಾತ್ ॥೫೩॥

ಮಹೇಶ್ವರಾರಾಧನತತ್ಪರೇಭ್ಯೋ
ನೈವೋಪಕಾರಃ ಕೃತ ಏವ ಕೇನ ।
ಕುಯೋನಿಮಾರ್ಗಗಮನಪ್ರಸಕ್ತಂ
ಅತೋ ನ ತೇಷಾಂ ಭಯದತ್ವಮಿಷ್ಟಂ ॥೫೪॥

ಭಕ್ತ್ಯಾ ಯೋ ವಚನೈರ್ಜಲೈರಪಿ ಶಿವಾಚಾರಾಯ ತೋಷಪ್ರದೋ
ಮುಕ್ತೋ ದೋಷಗಣೈರ್ಭವತ್ಯಗಣಿತೈರ್ಮುಕ್ತ್ಯಂಗನಾವಲ್ಲಭಃ ।
ಸ್ಯಾದೇವೇತಿ ಮುಹುಃ ಶ್ರುತಂ ಮುನಿವರ್ಯೈರುಕ್ತಂ ವಚೋಸ್ಮಿನ್ಮನೇ
ಕಿಂ ನ ಸ್ಮರ್ಯತ ಏವ ಸಂಸ್ಮರ ಪುನಃ ಸಂಸ್ಕಾರಮಾವರ್ತಯ ॥೫೫॥

ಈಶ್ವರಾರಾಧನೆಗೆ ಅಡ್ಡಿ ಬರುವುದರಿಂದ ಲಭಿಸುವ ನರಕವು ಬ್ರಹ್ಮಹತ್ಯಾದಿ ಮಹಾಪಾಪಗಳ ಆಚರಣೆಯಿಂದಲೂ ಲಭಿಸಲಾರದು. ಅಷ್ಟು ಭಯಂಕರವಾದ ಪಾಪಶೇಷಕ್ಕೆ ನಾವು ಹೆದರಬೇಡವೇ? ॥೫೩॥

ಯಾರಿಗೆ ಕುತ್ಸಿತವಾದ ಯೋನಿಗಳಲ್ಲಿ ಪ್ರವೇಶಿಸಲಿಚ್ಛೆಯಿರುವುದೋ, ಅವರು ಈಶ್ವರಾರಾಧಕರಿಗೆ ಎಂದೂ ಉಪಕಾರ ಮಾಡಲಾರರು. ಅವರಿಗೆ ಎಂದೂ ಆ ನರಕಭಯವು ತಪ್ಪುವುದಿಲ್ಲ. ಅದನ್ನೇ ಅವರಿಗೆ ಇಷ್ಟವೆಂದೂ ತಿಳಿಯಬೇಕಾಗುವುದು. ॥೫೪॥

ಯಾರು, ಭಕ್ತಿಯಿಂದ ಶಿವಧರ್ಮದಲ್ಲಿ ನಿರತರಾಗಿರುವವರಿಗೆ ಸಮಾಧಾನವಾದ ಮಾತನ್ನೂ, ಅರ್ಘ್ಯಪಾದ್ಯಾದಿಗಳನ್ನೂ ಕೊಟ್ಟು ಅವರನ್ನು ತೃಪ್ತಿಗೊಳಿಸುವರೋ, ಅಂತಹವರಿಗೆ ಸಮಸ್ತ ಪಾಪಗಳೂ ಪರಿಹಾರವಾಗುವುವು. ಮುಕ್ತಿಯೆಂಬ ಸ್ತ್ರೀಯು ಅನಾಯಾಸವಾಗಿ ಅವರಿಗೆ ಲಭಿಸುವಳು. ಈ ಮಾತನ್ನು ನಾವು ಅನೇಕ ಜನ ಮಹರ್ಷಿಗಳ ಬಾಯಿಂದ ಕೇಳಿರುವೆವು. ಇಷ್ಟಿದ್ದರೂ ನೀನು ಇನ್ನೂ ಈಶ್ವರ ಸೇವಕರನ್ನು ಸ್ಮರಿಸುವುದಿಲ್ಲವೇ! ॥೫೫॥

ಅಲಂ ದೇಹೇನಾಲಂ ವಿಮಲಕುಲಶಾರ್ದೂಲವಪುಷಾ
ಪ್ಯಲಂ ದುಃಖಂ ಯೇನ ಪ್ರಭವತಿ ಮುಹುರ್ನೋಹಮಧುನಾ ।
ವಿಹಾಯಾಂಗತ್ಯಾಗೇ ಕುರುಮತಿಮತೋ ಭೂತಿಮಧುನಾ
ದವೋತ್ಪನ್ನಾಂ ಕಾಲೇ ಕುರು ಕುರು ಮಹಾಪಾತಕಹರಾಂ ॥೫೬॥

ಇತಿ ತದ್ವಚನಂ ಶ್ರುತ್ವಾ ಶಾಂಕರೋ ದ್ವಿಜಪುಂಗವಃ ।
ವಿಸ್ಮಯಂ ಪರಮಂ ಪ್ರಾಪ ತದ್ಭಾರ್ಯಾಪಿ ನವಪ್ರಸೂಃ ॥೫೭॥

ಶುಶ್ರಾವ ವಚನಂ ರಾಜಾ ಸ ಶಾರ್ದೂಲಾಂಗನೋದಿತಾಂ ।
ಶುಶ್ರಾವ ರಾಜಪತ್ನೀ ಚ ವಿಸ್ಮಯಾವಹಮುತ್ತಮಾಂ ॥೫೮॥

ತತಃ ಪರಂ ತೃಷಾಕ್ರಾಂತಾಃ ಶಾರ್ದೂಲಾಸ್ತೇ ಪರಸ್ಪರಂ ।
ಪ್ರೋಚುರ್ವಿನಾಶಕಾಲೋಯಮಸ್ಮಾಕಮಿತಿ ನಿಶ್ಚಯಾತ್ ॥೫೯॥

ಸಮ್ಯಗೇವಾಧುನಾ ಜಾತಂ ಶರೀರಂ ದವಭಸ್ಮನಾ ।
ಪಾವನಂ ಪಾವನಂ ಪ್ರಾಪ್ತಂ ರೇವಾತೀರಂ ಮನೋಹರಂ ॥೬೦॥

ಅತಿ ದುಷ್ಟವಾದ ಹುಲಿಯ ಜನ್ಮದಲ್ಲಿ ಹುಟ್ಟಿ ಈ ದುಃಖವನ್ನು ಅನುಭವಿಸುವುದನ್ನೂ, ಈ ಹುಲಿಯ ಶರೀರವನ್ನೂ ಈಗ ಬಿಟ್ಟು ಇಂತಹ ಪುಣ್ಯಕಾರ್ಯಕ್ಕೆ ನೆರವಾಗುವುದೇ ಒಳ್ಳೆಯದು. ಶಿವಾರ್ಚನೆಯೆಂಬ ಈ ಕರ್ಮವು ಈ ಅರಣ್ಯದಲ್ಲಿ ನಾವು ಸಂಪಾದಿಸಿದ ಸಕಲ ಪಾಪಕರ್ಮಗಳನ್ನೂ ನಿವಾರಿಸತಕ್ಕುದಾಗಿರುವುದರಿಂದ ಈ ದೇಹವು ಬಾಯಾರಿಕೆಯೆಂಬ ಅಗ್ನಿಯಿಂದ ದಗ್ಧವಾಗಿ ಭಸ್ಮವಾಗಲಿ." ||೫೬||

ಹಾಗೆಂದು ಹೇಳಿದ ಶಾರ್ದೂಲಪತ್ನಿಯ ಮಾತುಗಳನ್ನು ಈಶ್ವರಪೂಜಕನಾದ ಆ ಬ್ರಾಹ್ಮಣನೂ, ಬಾಣಂತಿಯಾದ ಆತನ ಪತ್ನಿಯೂ, ಕೇಳಿದರು. ಹಾಗೆಯೇ ಅಲ್ಲಿದ್ದ ರಾಜನೂ, ರಾಜಪತ್ನಿಯೂ ಇದನ್ನು ಕೇಳಿ ಆಶ್ಚರ್ಯಪಟ್ಟರು. ||೫೭-೫೮||

ಆ ಹುಲಿಗಳಿಗೆ ಬಾಯಾರಿಕೆಯು ಅತಿಯಾಗಲು, ಆಗಲೇ ಅವು ಇದು ತಮ್ಮ ವಿನಾಶಕಾಲವೆಂದು ತಿಳಿದುವು. ಅಲ್ಲದೆ ತಮ್ಮ ದೇಹವು ಕಾಡು ಬೂದಿಯಿಂದ ಪವಿತ್ರವಾಗಿ ಹಾಗೆಯೇ ನಮ್ಮ ಪುಣ್ಯವಶದಿಂದ ಪವಿತ್ರವಾದ ಈ ರೇವಾತೀರವು ದೊರೆಯಿತಲ್ಲಾ ಎಂದು ಯೋಚಿಸಿದುವು. ||೫೯-೬೦||

ರೇವಾತೀರೇ ತನುತ್ಯಾಗೋ
ಯದಿ ದೈವಾದ್ಭವಿಷ್ಯತಿ ।
ತದಾ ಪರಂ ಕೃತಾರ್ಥಾಸ್ಸ್ಮಃ
ಕಿಮತೋಽಪ್ಯಧಿಕಂ ಫಲಂ ॥೬೧॥

ರೇವಾತೀರೇ ಯಶ್ಶರೀರವ್ಯಯಾರ್ಥಂ
ಪ್ರೂತೋ ಭೂತ್ವಾ ತಿಷ್ಠತಿ ಪ್ರೀತಚಿತ್ತಃ ।
ದೇವೈರಾದಾವರ್ಚಿತಸ್ಸ್ಯಾತ್ತದಾ ಸ್ಯಾ
ದ್ಗೌರೀಕಾಂತಾರಾಧಕಸ್ಸ್ಯಾನ್ನರೋಽಪಿ ॥೬೨॥

ಪುಣ್ಯೈರಪಾರೈಃ ಖಲು ಶಾಂಭವತ್ವಂ
ತತ್ರಾಪಿ ರೇವಾತಟಸಂಶ್ರಿತತ್ವಂ ।
ತತ್ರಾಪಿ ತಲ್ಲಿಂಗಸಮರ್ಚಕತ್ವಂ
ತತ್ರಾಪಿ ತದ್ದೇಹವಿಸರ್ಜಕತ್ವಂ ॥೬೩॥

ವದತ್ಸ್ವಚ್ಚೈರೇವಂ ಭವಭವಭವಾಂಭೋಧಿತರಣ
ಪ್ರವೀಣಂ ಕೃತ್ವಾ ಮಾಮವ ಭವ ಭವಾನೀರಮಣಮೋ ।

ರೇವಾನದಿಯ ತೀರದಲ್ಲಿ ಅದೃಷ್ಟವಶದಿಂದ ಮರಣವು ಸಂಭವಿಸಿದುದೇ ಆದರೆ ನಿಜವಾಗಿಯೂ ನಾವು ಧನ್ಯರೇ ಸರಿ. ಅದಕ್ಕಿಂತಲೂ ಹೆಚ್ಚಿನ ಭಾಗ್ಯವು ನಮಗೆ ಮತ್ತೇನುಬೇಕು ? ॥೬೧॥

ರೇವಾನದೀತೀರದಲ್ಲಿ ಯಾವ ಮನುಷ್ಯನು ತನ್ನ ಶರೀರ ತ್ಯಾಗಮಾಡುವನೋ, ಅಂತಹವನು ಮೊದಲು ದೇವತೆಗಳಿಂದ ಪೂಜಿತನಾಗಿ ಅನಂತರ ಮತ್ತೆ ಜನ್ಮಪಡೆಯುವುದಾದರೆ ಈಶ್ವರಾರಾಧಕನೆನಿಸಿಯೇ ಜನಿಸುವನು. ॥೬೨॥

ಅನೇಕ ಪುಣ್ಯಕರ್ಮಗಳನ್ನಾಚರಿಸುವುದರಿಂದ ಈಶ್ವರಾರಾಧಕನಾಗುವನು. ಅದರಲ್ಲಿಯೂ ರೇವಾತಟದಲ್ಲಿ ವಾಸಿಸುತ್ತಾ ಶಿವಲಿಂಗಾರ್ಚಕನೆನಿಸುವುದೂ, ಕೊನೆಗೆ ಅಲ್ಲಿಯೇ ಮರಣವು ಸಂಭವಿಸುವುದೂ, ಅತಿಶಯಪುಣ್ಯವಶದಿಂದ ಲಭಿಸಬೇಕೇ ಹೊರತು ಸಾಮಾನ್ಯರಿಗೆ ದೊರಕಲಾರದು. ॥೬೩॥

ಎಲೈ ಪರಮೇಶ್ವರನೇ, ಪಾರ್ವತೀಪತಿಯೇ, ಈ ಸಂಸಾರವೆಂಬ ಅಗಾಧವಾದ ಸಮುದ್ರವನ್ನು ಸುಲಭವಾಗಿ ನಮ್ಮಿಂದ ದಾಟಿಸಿ, ಉದ್ಧರಿಸು. ಮಹಾದೇವನೇ,

ಕ್ಷಣೈಃ ಪ್ರಾಣಾಹಾರಂ ಹರ ಹರ ಹರಾಪಾರಕರುಣಾ
ರಸಾಕಾರಾಸಾರಂ ಹರಹರ ಸಸಂಸಾರನಿಕರಂ ॥೬೪॥

ಅತಃ ಪರಂ ಜನ್ಮಶತಾಂತರೇ ವಾ
ರೇವಾಸರಿತ್ತೀರತರುಪ್ರರೋಹಃ ।
ಭವಾಮಿ ಸಂಸಾರಭಯಾನಲಾರ್ತ
ಕೃತಾಂತವಾರ್ತಾವ್ಯತಮಾನಸಾರ್ತಃ ॥೬೫॥

ಜನ್ಮಾವಸಾನಸಮಯೋಽಪಿ ಸಮಾಗತೋಽಯಂ
ಕಾಯವ್ಯಯೋತ್ತರಮತಃ ಪರಮಿಂದುಮೌಳಿಃ ।
ರೇವಾಸರಿತ್ಸಲಿಲವಾತವಿಧೂತಪಾಪಾ
ನಸ್ಮಾನ್ಸ್ವಪಾದಕಮಲಾಲಿಕುಲಾನ್ ಕರೋತು ॥೬೬॥

ನ ರೇವಾತೀರೇಽಸ್ಮಿನ್ ಕಿಮಿತಿ ತನುನಾಶೋ ವಿಭವತೀ
ತ್ಯುಮಾಕಾಂತಂ ಸ್ಮೃತ್ವಾ ಪುನರಪಿ ಮಹಾದೇವ ಹರ ಮಾಂ ।

ಕ್ಷಣಕಾಲದಲ್ಲಿಯೇ ನನ್ನ ಈ ಪ್ರಾಣವನ್ನು ಅಪಹರಿಸು. ಆ ಮೂಲಕ ನಿನ್ನ ಸಾನ್ನಿಧ್ಯವು ದೊರಕುವಂತೆ ಮಾಡಿ ಈ ಸಂಸಾರದುಃಖವನ್ನು ತೊಲಗಿಸಿ ರಕ್ಷಿಸು ಎಂದು ಶಂಕರನನ್ನು ಪ್ರಾರ್ಥಿಸಬೇಕು. ॥೬೪॥

ಅಲ್ಲದೆ ನೂರಾರು ಜನ್ಮಗಳಿಂದ ಮುಂದಾದರೂ ರೇವಾತೀರದಲ್ಲಿ ಮರವಾಗಿ ಹುಟ್ಟುವಂತೆ ಅನುಗ್ರಹಿಸು. ಇದರಿಂದ ಸಂಸಾರ ಭಯವನ್ನೂ, ಯಮಬಾಧೆಯನ್ನೂ, ಮನೋವ್ಯಥೆಯನ್ನೂ ಕಳೆದುಕೊಂಡು ಶಾಂತಜೀವನವನ್ನು ನಡೆಸುವೆನು. ॥೬೫॥

ಜನ್ಮದ ಅವಸಾನ ಕಾಲವು ಬಂದಾಗಲಾದರೂ, ಈ ರೇವಾತೀರವು ದೊರಕಿದರೆ ಇಲ್ಲಿನ ಮರಣದಿಂದ ದೇಹತ್ಯಾಗಾನಂತರದಲ್ಲಿ ಈಶ್ವರನ ಸನ್ನಿಧಿಯು ದೊರಕುವುದು. ರೇವಾನದಿಯ ನೀರಿನಮೇಲಿನ ಗಾಳಿಯು ಸ್ಪರ್ಶವಾದರೂ ಸಹ ನಾವು ಪರಶಿವನ ಪಾದಕಮಲಗಳಿಗೆ ಮುತ್ತುವ ಭ್ರಮರಗಳ ಜನ್ಮವನ್ನಾದರೂ ಪಡೆಯಬಹುದಲ್ಲವೆ? ॥೬೬॥

"ಎಲೈ ಪರಮೇಶ್ವರನೇ, ನಮಗೆ ಈ ರೇವಾತೀರದಲ್ಲಿ ಏತಕ್ಕಾಗಿ ಮರಣವೊದಗಬಾರದು," ಎಂದು ಶಂಕರನನ್ನು ಪ್ರಾರ್ಥಿಸಿಕೊಂಡಾದರೂ ಈ ದೇಹವನ್ನು

ಪರೇತ್ಯುಕ್ತ್ವಾತ್ಯುಚ್ಚೈಸ್ತ್ಯಜ ತನುಮಿಮಾಂ ಭೂತಿಲಲಿತಾಂ
ಕಥಂ ಜನ್ಮಾಪಾಯೇ ಭಸಿತತನುಯೋಗೋಽಪಿ ಸುಲಭಃ ॥೬೭॥

ಇತಿ ತದ್ವಚನಂ ಶ್ರುತ್ವಾ ಸಂಚರನ್ ಗಗನಾಂತರೇ ।
ನಾರದಸ್ತಾನುಪಾಗತ್ಯ ಶಾರ್ದೂಲಾನ್ ಪ್ರಣತೋ ಮುದಾ ॥೬೮॥

ತತಸ್ತಾನಾಹ ಸ ಮುನಿರ್ವಿಸ್ಮಯಂ ಪರಮಂ ಗತಃ ।
ಶಾರ್ದೂಲಾನ್ಮರಣೋದ್ಯುಕ್ತಾನ್ ಕಂಪಮಾನೋ ವರಾನನೇ ॥೬೯॥

॥ ನಾರದ ಉವಾಚ ॥

ಪೂರ್ವಜನ್ಮನಿ ಕೇ ಯೂಯಂ ಪರಮಜ್ಞಾನಸಂಯುತಾಃ ।
ಕೇನ ಪಾಪೇನ ಸಂಪ್ರಾಪ್ತಂ ಶಾರ್ದೂಲವಪುರೀದೃಶಂ ॥೭೦॥

ಅತಿಪುಣ್ಯವತಾಮೇವ ರೇವಾತೀರಸಮಾಗಮಃ ।
ತತ್ರಾಪಿ ಶಿವಭಕ್ತ್ಯಾಯಂ ಸಾ ಪುಣ್ಯಗಿರಿಕೋಟಿಭಿಃ ॥೭೧॥

ಬಿಟ್ಟುಬಿಡು. ಪರಶಿವನಿಗಾಗಿ ಅರ್ಪಿಸಿದ ಈ ದೇಹವು ತೊಲಗಿದಮೇಲೆ, ಮುಂದೆ ಭಸ್ಮಲಿಪ್ತವಾಗುವಂತಹ ಪವಿತ್ರ ಶಿವಪೂಜಕ ಜನ್ಮವಾದರೂ ಸುಲಭವಾಗಿ ದೊರಕೀತು.” ॥೬೭॥

ಎಂದು ಹೇಳುತ್ತಿದ್ದ ಹುಲಿಯ ಮಾತನ್ನು ಅಂತರಿಕ್ಷಮಾರ್ಗದಲ್ಲಿ ಸಂಚರಿಸುವ ನಾರದಮಹರ್ಷಿಯು ಕೇಳಿ ಒಡನೆಯೇ ಬಂದು ಹುಲಿಗಳನ್ನು ನೋಡಿದನು. ಆ ಹುಲಿಗಳಾದರೋ ಪ್ರಾಣತ್ಯಾಗಕ್ಕೆ ಸಿದ್ಧವಾಗಿರುವುದನ್ನು ಕಂಡು ಮತ್ತೂ ವಿಸ್ಮಯಾವಿಷ್ಟನಾದನು. ॥೬೮-೬೯॥

ಮತ್ತು ಶಾರ್ದೂಲಗಳನ್ನು ಕುರಿತು ಹೀಗೆ ಪ್ರಶ್ನೆಮಾಡಿದನು “ಎಲೈ ವ್ಯಾಘ್ರಗಳೇ, ನೀವು ಪೂರ್ವಜನ್ಮದಲ್ಲಿ ಯಾರಾಗಿದ್ದಿರಿ? ಯಾವ ಪಾಪಕರ್ಮದಿಂದ ಇಂತಹ ಭಯಂಕರ ವ್ಯಾಘ್ರಜನ್ಮವು ನಿಮಗೆ ಒದಗಿತು? ಈ ರೇವಾತೀರವಾಸವು ಕೇವಲ ಪುಣ್ಯಶಾಲಿಗಳಿಗೆ ಮಾತ್ರ ಲಭ್ಯವಾದದ್ದು. ಅದರಲ್ಲೂ ಶಿವಭಕ್ತಿಯಿಂದ ಇಲ್ಲಿ ವಾಸಿಸುವುದು ಕೋಟಿಪುಣ್ಯಪರಿಪಾಕವಲ್ಲವೆ! ॥೭೦-೭೧॥

ಯೇನ ಪುಣ್ಯಾನ್ಯಪಾರಾಣಿ ಕೃತಾನ್ಯಮಿತಜನ್ಮಭಿಃ ।
ತೇನೈವ ಪ್ರಾಪ್ಯತೇ ಭಕ್ತಿಸ್ಸುರಾಧೀಶೇ ಮಹೇಶ್ವರೇ ॥೭೨॥

ಕುರ್ವಂತ್ಯತ್ರ ತಪಶ್ಚರ್ಯಾಂ ಶಿವೇ ಭಕ್ತ್ಯರ್ಥಮಾದರಾತ್ ।
ಕೋಟಿಶೋ ನರ್ಮದಾತೀರೇ ನಿರಾಹಾರಾಃ ಪರಂ ಸುರಾಃ ॥೭೩॥

ಶಿವಭಕ್ತಿಸುಧಾಲಾಭೋ ದುರ್ಲಭಃ ಖಲು ದೇಹಿನಾಂ ।
ಅಪಾರಜನ್ಮಸುಕೃತೈಃ ಶಿವಭಕ್ತೋ ಭವೇದ್ಭುವಿ ॥೭೪॥

ಶಾಂಕರಾಚಾರನಿರತಾಃ ಶಾಂಕರಾಶ್ಶಂಕರಪ್ರಿಯಾಃ ।
ಅತೋ ನ ತತ್ಸಮಾ ಲೋಕೇ ಕೋಪಿ ದೃಷ್ಟಶ್ಶ್ರುತೋಪಿ ವಾ॥೭೫॥

ತೃಣೀಕೃತ್ಯ ಶರೀರಾಣಿ ಸ್ಥಿತಂ ಮರಣಕಾಂಕ್ಷಯಾ ।
ರೇವಾತೀರೇ ಭವದ್ಭಿಸ್ತು ಭವತ್ತುಲ್ಯಸ್ಸುರೋಪಿ ಕಿಂ ॥೭೬॥

ದವಭಸ್ಮಾಂಕಿತಂ ಕೃತ್ವಾ ಶರೀರಮಧುನಾ ಕಥಂ ।
ಅಕಸ್ಮಾತ್ತ್ಯಕ್ತುಮುದ್ಯುಕ್ತಂ ಭವದ್ಭಿರ್ಭವವಿಹ್ವಲೈಃ ॥೭೭॥

ಅನೇಕ ಜನ್ಮಗಳಲ್ಲಿ ಸಂಪಾದಿಸಿದ ಸುಕೃತವಿಶೇಷಗಳಿಂದಲೇ ದೇವದೇವನಾದ ಶಂಕರನಲ್ಲಿ ಭಕ್ತಿಹುಟ್ಟುವುದು. ಶಿವಭಕ್ತಿಯನ್ನು ಸಂಪಾದಿಸುವುದಕ್ಕಾಗಿಯೇ ಈ ರೇವಾತೀರದಲ್ಲಿ ಕೋಟಿಸಂಖ್ಯೆಯಿಂದ ಋಷಿಗಳು ಆಹಾರಾದಿಗಳನ್ನು ದೂರಮಾಡಿ ತಪಸ್ಸುಮಾಡುತ್ತಿರುವರು. ||೭೨-೭೩||

ಶಿವಭಕ್ತಿಯೆಂಬ ಅಮೃತವು ಸಕಲ ಪ್ರಾಣಿಗಳಿಗೂ ಸುಲಭವಾಗಿ ದೊರೆಯುತಕ್ಕುದಲ್ಲ. ಅನೇಕ ಜನ್ಮಗಳಲ್ಲಿ ಆರ್ಜಿಸಿದ ಸುಕೃತದಿಂದಲೇ ಮಾನವನು ಈಶ್ವರಭಕ್ತನೆನಿಸುವನು. ಯಾರು ಶಿವಧರ್ಮಗಳನ್ನರಿತು ನಡೆಯುವರೋ, ಅಂತಹವರು ಈಶ್ವರನಿಗೆ ಪ್ರಿಯರೆನಿಸುವರು. ಇದರಿಂದಲೇ ಈಶ್ವರ ಭಕ್ತಸದೃಶರು ಮತ್ತಾರೂ ಇಲ್ಲವೆಂದೇ ಹೇಳಬಹುದು. ||೭೪-೭೫||

ನೀವಾದರೋ, ನಿಮ್ಮ ಶರೀರವನ್ನು ತೃಣವನ್ನಾಗಿ ಭಾವಿಸಿಕೊಂಡು, ಮರಣಕಾಂಕ್ಷಿಗಳಾಗಿರುವಿರಿ. ನಿಮ್ಮಂತೆ ಯಾವ ದೇವತೆಯೂ ಇಷ್ಟು ಭಕ್ತಿಯುಳ್ಳ

ಇತಿ ನಾರದವಾಕ್ಯಾನಿ ಶ್ರುತ್ವಾ ದೂರೇಣ ಭೂಪತಿಃ ।
ಸಮಾಗತಸ್ಸತೀಯುಕ್ತಃ ಕೌತುಕಾಲೋಕನೋತ್ಸುಕಃ ॥೭೮॥

ತತ್ರೋಪವಿಷ್ಟಾಸ್ತೇ ಸರ್ವೇ ಛಾಯಾಯಾಮತಿವಿಸ್ಮಿತಾಃ ।
ತತಃ ಪರಂ ಸ ಶೈವೋಽಪಿ ತ್ವರಯಾ ಸಮುಪಾಗತಃ ॥೭೯॥

ಪ್ರಣಮ್ಯ ತಾನುವಾಚಾದೌ ತೃಷಾರ್ತಾನ್ ಸದಯೋ ದ್ವಿಜಃ ।
ಭಸ್ಮೋದ್ಧೂಳಿತಸರ್ವಾಂಗಾನ್ ಶಾರ್ದೂಲಾನ್ ಮರಣೋನ್ಮುಖಾನ್ ॥೮೦॥

॥ ಶಾಂಭವ ಉವಾಚ ॥

ಅಯಂ ಮಧ್ಯಾಹ್ನಸಮಯೋ ರೇವಾಯಾಂ ಶಿವಪೂಜನಂ ।
ಕರ್ತವ್ಯಮಾದೌ ವಾರ್ತಾಪಿ ಪಶ್ಚಾತ್ಸಂಭಾವಿತಾ ಖಲು ॥೮೧॥

ಪಿಪಾಸವೋ ಬಾಲಕಾಶ್ಚ ತೇ ಶುಷ್ಕರಸನಾ ಅಪಿ ।
ಅತ್ರಾಭ್ಯಾಗಮನೇ ಕಾಲೋ ಭೂಯಾನೇವಾಭವತ್ಖಲು ॥೮೨॥

ವನಾಗಿಲ್ಲ. ಕಾಡುಕಿಚ್ಚಿನಿಂದ ಉಂಟಾದ ಭಸ್ಮದಿಂದ ದೇಹವನ್ನು ಬಳಿದುಕೊಂಡು ಹೀಗೆ ಏತಕ್ಕಾಗಿ ಸಂಸಾರಕ್ಕೆ ಹೆದರಿ ದೇಹತ್ಯಾಗಮಾಡುತ್ತಿರುವಿರಿ ?" ॥೭೬-೭೭॥

ಎಂದು ಹೇಳುತ್ತಿದ್ದ ನಾರದ ಮಹರ್ಷಿಯ ಮಾತನ್ನು ಕೇಳುತ್ತಲೇ, ದೂರದಲ್ಲಿದ್ದ ರಾಜನು ಸಪತ್ನೀಕನಾಗಿ ಆ ಆಶ್ಚರ್ಯವನ್ನು ನೋಡಲು ಅಲ್ಲಿಗೆ ಬಂದನು. ಅನಂತರ ಅವರೆಲ್ಲರೂ ಅಲ್ಲಿಯೇ ಒಂದು ಮರದ ನೆರಳಿನಲ್ಲಿ ಆಶ್ಚರ್ಯದಿಂದ ಕುಳಿತಿರುವಾಗ, ಶಿವಾರಾಧಕನಾದ ಆ ಬ್ರಾಹ್ಮಣನು ದೂರದಿಂದಲೇ ನೋಡಿ, ಅಲ್ಲಿಗೆ ಬೇಗ ಬಂದು ಭಸ್ಮಲಿಪ್ತಾಂಗರಾಗಿ ಬಾಯಾರಿಕೆಯಿಂದ ಬಳಲಿ ಸಾಯುವುದಕ್ಕೆ ಸಿದ್ಧವಾಗಿರುವ ಹುಲಿಗಳಿಗೆ ವಂದಿಸಿ ಹೀಗೆಂದನು. ॥೭೮-೭೯-೮೦॥

ಈ ಮಧ್ಯಾಹ್ನಕಾಲದಲ್ಲಿ ರೇವಾತೀರಕ್ಕೆ ಬಂದವನು ಮೊದಲು ಈಶ್ವರನನ್ನು ಪೂಜಿಸಿ ಅನಂತರ ಇತರ ಮಾತುಗಳನ್ನಾಡಬೇಕು. ಅದಿರಲಿ. ಎಲೈ ಹುಲಿಯೇ, ನಿನ್ನ ಮಕ್ಕಳೆಲ್ಲವೂ ಬಾಯಾರಿಕೆಯಿಂದ ಬಳಲಿ, ಅವರ ನಾಲಗೆಯೆಲ್ಲಾ ಒಣಗಿನಿಂತಿದೆ. ಹಾಗಾದರೂ ಇಲ್ಲಿಗೆ ಜಾಗ್ರತೆ ಬರಲು ಇಷ್ಟೇಕೆ ತಡಮಾಡಿದೆ ? ॥೮೧-೮೨॥

॥ ಶಾರ್ದೂಲ ಉವಾಚ ॥

ಇತಿ ತದ್ವಚನಂ ಶ್ರುತ್ವಾ ನಾರದೇನಾಪಿ ಸಂಯುತಾಃ ।
ರೇವಾಯಾಂ ಗಂತುಮುದ್ಯುಕ್ತಾಸ್ತಥಾಹುಃ ಶೈವಪುಂಗವಂ ॥೮೩॥

ನವಪ್ರಸೂತಾ ಮಹಿಷೀ ತವ ಶಾಂಭವಪುಂಗವ ।
ತಸ್ಯಾಸ್ಸ್ಯಾದ್ಭಯಮಸ್ಮಾಕಂ ದರ್ಶನಾದಿತಿ ಸತ್ವರಂ ॥೮೪॥

ತತಸ್ತಾನಾಹ ಶೈವೋಽಪಿ ತಯೈವ ಪ್ರೇಷಿತೋಽಸ್ಮ್ಯಹಂ ।
ತಮಾಲಕುಂಜಸಂವೀತಾ ಪ್ರಸ್ತರದ್ವಾರವೇಷ್ಟಿತಾ ॥೮೫॥

ಶೃಣೋತಿ ವಚನಾನ್ಯೇವ ಮಧುರಾಣ್ಯತಿಸಾದರಂ ।
ಭವತಾಂ ನಯನಾಪ್ರಾಪ್ಯ ಸಾ ಕುಂಜಾ ಪಿಹಿತಾ ಯತಃ ॥೮೬॥

ಕಿಂ ಚ ಸಾ ಪಿಹಿತಾ ವಾಸ್ತು ಮಾಸ್ತು ವಾ ಕಿಂ ತತಃ ಫಲಂ ।
ಘಾತುಕತ್ವಮತಿಸ್ತಾವನ್ನ ಭವತ್ಸು ಪ್ರಜಾಯತೇ ॥೮೭॥

ಇತಿ ತದ್ವಚನಂ ಶ್ರುತ್ವಾ ರೇವಾಂ ಗತ್ವಾಪಿ ಸಾದರಂ ।
ನಿಮಜ್ಜ್ಯ ಭಸ್ಮನಾಂಗಾನಿ ಚಕ್ರುರ್ಲಿಪ್ತಾನಿ ಸಾದರಂ ॥೮೮॥

ಎಂದು ಪ್ರಶ್ನಿಸಿದ ಆ ಬ್ರಾಹ್ಮಣನ ಮಾತನ್ನು ಕೇಳಿ ನಾರದಾದಿಗಳೊಡನೆ ರೇವಾನದಿಗೆ ಹೋಗುತ್ತಿದ್ದ ಆ ಹುಲಿಯು ದ್ವಿಜನನ್ನು ಕುರಿತು ಹೀಗೆಂದಿತು. " ಎಲೈ ಶಾಂಭವನೇ, ನಿನ್ನ ಪತ್ನಿಯು ಆಗ ತಾನೇ ಪ್ರಸವಿಸಿದಳು. ನಮ್ಮನ್ನು ನೋಡಿದರೆ ಅವಳು ಎಲ್ಲಿ ಹೆದರುವಳೋ ಎಂಬ ಭಯದಿಂದ ನಾವು ಸಂಕಟಪಟ್ಟೆವು " ಎಂದಿತು. ||೮೩-೮೪||

ಅದನ್ನು ಕೇಳಿ ಆ ಬ್ರಾಹ್ಮಣನು " ಎಲೈ ವ್ಯಾಘ್ರಶ್ರೇಷ್ಠನೇ, ನನ್ನ ಪತ್ನಿಯೇ ಈಗ ಇಲ್ಲಿಗೆ ನನ್ನನ್ನು ಕಳುಹಿಸಿರುವಳು. ಹೊಂಗೆಯ ಮರದ ಪೊದರಿನಲ್ಲಿ ಕುಳಿತು, ಬಾಗಿಲಿಗೆ ಕಲ್ಲನ್ನೇ ಅಡ್ಡಲಾಗಿಟ್ಟು ನೀನು ಆಡುತ್ತಿದ್ದ ಹಿತವಾದ ಮಾತುಗಳನ್ನೇ ಕೇಳುತ್ತಿದ್ದಳು. ಆದರೆ ಪೊದರಿನಲ್ಲಿ ಅಡಗಿದ್ದುದರಿಂದ ಆಕೆಯು ನಿಮ್ಮ ದೃಷ್ಟಿಗೋಚರಳಾಗಲಿಲ್ಲ. ||೮೫-೮೬||

ನಿನ್ನ ಭಯಕ್ಕಾಗಿ ನನ್ನ ಪತ್ನಿಯು ಪೊದರಿನ ಬಾಗಿಲಿಗೆ ಕಲ್ಲಿಟ್ಟು ಅಡಗಿದ್ದಳು. ನಿನ್ನಲ್ಲಿ ಇಷ್ಟು ಸೌಮ್ಯಸ್ವಭಾವವಿರುವಾಗ ಬಾಗಿಲಿಗೆ ರಕ್ಷಣೆಯೇ

ತತಃ ಪರಂ ಪ್ರಯತ್ನೇನ ರೇವಾಲಿಂಗೇಷು ಸಾದರಂ ।
ದತ್ತಂ ಜಲಂ ಬಿಲ್ವಪತ್ರಸಮೇತಮತಿಭಕ್ತಿತಃ ॥೮೯॥

ತತಃ ಪ್ರದಕ್ಷಿಣೀಕೃತ್ಯ ಪ್ರಣಮ್ಯ ಚ ಪುನಃ ಪುನಃ ।
ಜಲಗ್ರಹಣಮಾಕಂಠಂ ಕೃತಮೇವಾತಿತೃಷ್ಣಯಾ ॥೯೦॥

ತತಃ ಪರಂ ಸ ರಾಜಾಪಿ ತತ್ತೀರಶಿವಮಂದಿರಂ ।
ಪರಮಾಶ್ಚರ್ಯಸಂಯುಕ್ತಃ ಕಿಮೇತದಿತಿ ನಿಶ್ಚಯಾತ್ ॥೯೧॥

ತಾನ್ವಿಲೋಕ್ಯ ಸ ರಾಜಾಪಿ ನಾರದೋಽಪಿ ಸ ಶಾಂಭವಃ ।
ಯಯೌ ಶಾರ್ದೂಲಸಂಯುಕ್ತೋ ನಾರದೇನಾಪಿ ಸಂಯುತಃ॥೯೨॥

॥ ಶಾರ್ದೂಲ ಉವಾಚ ॥

ತತ್ರೋಪವಿಷ್ಟಸ್ತಾನಾಹ ನತ್ವಾ ಶಂಕರಮಾದರಾತ್ ।
ಕೇ ಯೂಯಮಿತಿ ಯತ್ನೇನ ಶಂಕರಧ್ಯಾನಪೂರ್ವಕಂ ॥೯೩॥

ಅಹಂ ಪೂರ್ವಭವೇ ರಾಜನ್ ತುಷಾರಗಿರಿಸಂಸ್ಥಿತಃ ।
ತಸ್ಯ ದೇಶಸ್ಯ ರಾಜಾಹಂ ಮಹದೈಶ್ವರ್ಯಸಂಯುತಃ ॥೯೪॥

ಬೇಕಿಲ್ಲ. ಎಂದು ಆಡಿದ ಬ್ರಾಹ್ಮಣನ ಮಾತನ್ನು ಕೇಳುತ್ತಲೇ ಆ ಹುಲಿಯು ರೇವಾನದಿಯನ್ನು ಪ್ರವೇಶಿಸಿ, ಒಂದು ಸಾರಿ ಮುಳುಗಿ ಬಂದು, ಅಲ್ಲಿದ್ದ ಭಸ್ಮವನ್ನು ದೇಹಕ್ಕೆಲ್ಲಾ ಬಳಿದುಕೊಂಡಿತು. ॥೮೭-೮೮॥

ಬಹು ಪ್ರಯಾಸದಿಂದ ಬಿಲ್ವಪತ್ರೆಯನ್ನೂ, ನೀರನ್ನೂ ಈಶ್ವರಲಿಂಗಕ್ಕೆ ಸಮರ್ಪಿಸಿ, ಪ್ರದಕ್ಷಿಣೆಮಾಡಿ, ನದಿಯ ಮಧ್ಯದಲ್ಲಿ ಕಂಠಪರ್ಯಂತವಾದ ಜಲಪಾನ ಮಾಡಿ ತನ್ನ ಬಾಯಾರಿಕೆಯನ್ನು ಕಳೆದುಕೊಂಡಿತು. ॥೮೯-೯೦॥

ಆದನ್ನು ನೋಡಿ ರಾಜ, ನಾರದ ಮತ್ತು ಆ ಬ್ರಾಹ್ಮಣ ಇವರೆಲ್ಲರೂ ನರ್ಮದಾ ನದಿಯ ತೀರದಲ್ಲಿದ್ದ ಶಿವಾಲಯಕ್ಕೆ ಹೋದರು. ಅಲ್ಲಿಗೆ ಆ ಹುಲಿಯೂ ಬಂದಿತು. ಅವರಿಗೆ ಇದೆಲ್ಲವೂ ಆಶ್ಚರ್ಯಕರವಾಗಿದ್ದಿತು. ॥೯೧-೯೨॥

ಆ ಶಿವಾಲಯದಲ್ಲಿದ್ದ ಈಶ್ವರಲಿಂಗವನ್ನು ನಮಸ್ಕರಿಸಿ ಎಲ್ಲರೂ ಅಲ್ಲಿ ಕುಳಿತುಕೊಂಡರು. ಆಗ ರಾಜನು ಶಂಕರನನ್ನು ಧ್ಯಾನಿಸುತ್ತಾ ಆ ಹುಲಿಯನ್ನು

ಶಿವಪೂಜಾರತೋ ನಿತ್ಯಂ ಕದಾಚಿದ್ರಜನೀಮುಖೇ ।
ದೃಷ್ಟ್ವಾ ಸ್ನಾನೋದ್ಯತಾ ಭಾರ್ಯಾ ಸಂಪೂರ್ಣನವಯೌವನಾ ॥೯೫॥

ತದಾ ಪಂಚಶರಾವೇಶಾತ್ತದಾಲೋಕನಸಂಭ್ರಮೇ ।
ಮಾಮಾಹ ಸಾತಿಯುವತೀ ಶಿವಾರಾಧನತತ್ಪರಾ ॥೯೬॥

ಅಹೋ ನೃಪವರಾದ್ಯಾಯಂ ಪ್ರದೋಷಸ್ಸೋಮವಾಸರೇ ।
ಭೂತಾ ಕಾಮಾನ್ವಿತಾ ಪಾತಃ ಶಿವನಕ್ಷತ್ರಸಂಯುತಃ ॥೯೭॥

ಮಾಘಮಾಸೋಽಪ್ಯಯಂ ತಾವದಸಿತಃಪಕ್ಷ ಇತ್ಯಪಿ ।
ನ ಜ್ಞಾತಃ ಕಿಂ ತ್ವಯಾ ತಾವದ್ರಾಜಸೋಽಸಿ ನ ಸಂಶಯಃ ॥೯೮॥

ಅಹೋ ಮಹದಿದಂ ಪಾಪಂ ಕರ್ತುಮಭ್ಯುದ್ಯತಂ ಮಯಾ ।
ಸುಧಾಮಯೋಽಯಂ ಕಾಲೋಽತಃ ಕಾಲಕಾಲಂ ಸಮರ್ಚಯ ॥೯೯॥

ಕುರಿತು ನೀವು ಯಾರು? ಎಂದು ಪ್ರಶ್ನಿಸಿದನು. ಆಗ ಹುಲಿಯು ರಾಜನನ್ನು ಕುರಿತು ಹೀಗೆಂದಿತು—"ಎಲೈ ರಾಜನೇ, ನಾನು ಹಿಂದಿನ ಜನ್ಮದಲ್ಲಿ ಹಿಮಾಲಯ ಪ್ರದೇಶಕ್ಕೆಲ್ಲಾ ರಾಜನೆನಿಸಿಕೊಂಡಿದ್ದೆನು. ನನ್ನ ಐಶ್ವರ್ಯವು ಅಪರಿಮಿತವಾಗಿದ್ದಿತು. ॥೯೩-೯೪॥

ನಾನು ಪ್ರತಿದಿನವೂ ಪ್ರದೋಷಕಾಲದಲ್ಲಿ ಶಿವಾರಾಧನೆ ಮಾಡುತ್ತಿದ್ದೆನು. ಅದಕ್ಕಾಗಿ ಒಂದುಸಾರಿ ಸ್ನಾನಮಾಡಲು ಹೊರಟೆನು. ಆಗ ಅತಿ ಸುಂದರಿಯೂ, ಯುವತಿಯೂ ಆದ ನನ್ನ ಪತ್ನಿಯು ಸ್ನಾನಮಾಡಲು ಹೊರಟದ್ದನ್ನು ನೋಡಿ, ನಾನು ಕಾಮಪರವಶನಾಗಿ ಅವಳನ್ನೇ ನೋಡುತ್ತಾ ನಿಂತೆನು. ಆಗ ಶಿವನಲ್ಲಿ ಅತಿ ಭಕ್ತಿಯನ್ನಿಟ್ಟಿದ್ದ ನನ್ನ ಪತ್ನಿಯು ನನ್ನೊಡನೆ ಹೀಗೆಂದಳು. ॥೯೫-೯೬॥

"ಎಲೈ ರಾಜಶ್ರೇಷ್ಠನೇ, ಈ ದಿನ ಸೋಮವಾರವಾಗಿದೆ. ಅಲ್ಲದೆ ಇದು ಪ್ರದೋಷಕಾಲ. ಮತ್ತು ಮಾಘಮಾಸದ ಕೃಷ್ಣಪಕ್ಷದ ತ್ರಯೋದಶೀ ವೇಧೆಯಿರುವ ಚತುರ್ದಶಿಯೇ ಈದಿನವಾಗಿದೆ. ವ್ಯತೀಪಾತವೂ, ಶಿವದೇವತಾಕವಾದ ನಕ್ಷತ್ರವೂ ಈ ದಿನ ಸೇರಿದೆ. ಈ ವಿಷಯವು ನಿನಗೆ ತಿಳಿಯದೆ? ಕೇವಲ ರಜೋಗುಣದಿಂದ ತುಂಬಿಹೋಗಿರುವೆಯಲ್ಲವೇ? ॥೯೭-೯೮॥

ಅಯ್ಯೋ, ಎಂತಹ ಪಾಪಬುದ್ಧಿಯು ಈಗ ಲಭಿಸಿತು. ಅಮೃತಮಯವಾದ ಇಂತಹ ಕಾಲವು ದೊರೆಯುವುದೇ ದುರ್ಲಭ. ಬಹು ಪ್ರಯಾಸದಿಂದ ದೊರೆತಿರುವ

ದುರ್ಲಭಃ ಖಲು ದೇಹೋಽಯಂ ಕಾಲೋಽಯಮಿತಿ ದುರ್ಲಭಃ ।
ಬಹುಪುಣ್ಯಪ್ರಭಾವೇನ ಸಮಯೋಽಯಂ ಹಿ ಲಭ್ಯತೇ ॥೧೦೦॥

ಕಿಂ ಕಿಂ ಪುಣ್ಯಂ ಕೃತಂ ಪೂರ್ವಂ ಪೂರ್ವಂ ಪೂರ್ವಭವೈರ್ಮುಹುಃ ।
ನ ಜಾನೇ ಸಮಯಃ ಪ್ರಾಪ್ತಸ್ಸೋಽಯಮೀಶಾರ್ಚನಾಯ ಮೇ ॥೧೦೧॥

ವಾಂಛಂತಿ ಮುನಯಸ್ತಾವತ್ಕಾಲಮೇತಾದೃಶಂ ಸುರಾಃ ।
ಗಂಧರ್ವಾಃ ಕಿನ್ನರಾಸ್ಸಿದ್ಧಾಶ್ಚಾರಣಾ ಅಪಿ ಸರ್ವಥಾ ॥೧೦೨॥

ಇತೋಽಧಿಕಃ ಪುಣ್ಯಕಾಲೋ ನ ಭವಿಷ್ಯತಿ ಸರ್ವಥಾ ।
ಏತತ್ಸಮೋಽಪಿ ನಾಸ್ತ್ಯೇವ ಪುಣ್ಯಕಾಲ ಇತಿ ಶ್ರುತಂ ॥೧೦೩॥

ಕಿಂ ತೈರ್ವಾಗ್ರಹಣಾದ್ಯೈರಪಿ ತಥಾ ಕಿಂ ತೈರಪಾರಾಯನೈ
ರೇತತ್ಕಾಲಸಮೋ ನ ಕಾಲ ಇತಿ ಮೇ ಧೀರಾಗಮೈರ್ಜಾಯತೇ ।
ತಸ್ಮಾದರ್ಚಯ ಶಂಕರಂ ಬಹುವಿಧೈರ್ದ್ರವ್ಯೈರಪಾರೈರಯಂ
ಕಾಲೋ ದುರ್ಲಭ ಏವ ತಾವದಧುನಾ ಕಾಯೋಽಪ್ಯಯಂ ದುರ್ಲಭಃ॥೧೦೪॥

ಈ ಸಮಯದಲ್ಲಿ ಮನುಷ್ಯಜನ್ಮದ ಸಾರ್ಥಕತೆಗಾಗಿ ಈಗ ಕಾಲಕಾಲನಾದ ಶಂಕರನನ್ನು ಆರಾಧಿಸು. ಬಹು ಪುಣ್ಯಪ್ರಭಾವದಿಂದಲೇ ಅಲ್ಲವೆ ಇಂತಹ ಸಮಯವು ಮತ್ತು ಈ ದೇಹವು ನಮಗೆ ದೊರೆತಿರುವುದು ! ॥೯೯-೧೦೦॥

ನಾನು ಹಿಂದೆ ಯಾವ ಜನ್ಮಗಳಲ್ಲಿ ಎಂತಹ ಸುಕೃತವನ್ನು ಗಳಿಸಿದ್ದೆನೋ, ಆ ಪುಣ್ಯದ ಫಲವಾಗಿ ಈಗ ಈಶಾರ್ಚನೆಗೆ ಯೋಗ್ಯವಾದ ಇಂತಹ ಕಾಲವು ದೊರಕಿರುವುದು. ಈ ವಿಧವಾದ ಸುಸಮಯದಲ್ಲಿ ಶಂಕರನನ್ನು ಪೂಜಿಸಲು ಅನೇಕ ಮಹರ್ಷಿಗಳು, ಗಂಧರ್ವರೂ, ಕಿನ್ನರರೂ, ಸಿದ್ಧರೂ, ಚಾರಣರೂ ಬಹುಕಾಲದಿಂದ ಕಾದುಕೊಂಡಿರುವರು. ॥೧೦೧-೧೦೨॥

ಇದಕ್ಕಿಂತಲೂ ಈಶ್ವರಪೂಜೆಗೆ ಶ್ರೇಷ್ಠವಾದ ಕಾಲವು ನಮಗೆ ದೊರೆಯಲಾರದು. ಅಸಂಖ್ಯಾತವಾದ ಸೂರ್ಯ ಚಂದ್ರಗ್ರಹಣ ಕಾಲದಲ್ಲಿಯೂ, ಅನೇಕ ಅಯನಕಾಲ (ದಕ್ಷಿಣೋತ್ತರಾಯನಗಳು) ಗಳಲ್ಲಿಯೂ ಈಶ್ವರಾರಾಧನೆ ಮಾಡಿದ ಫಲಕ್ಕಿಂತಲೂ ಹೆಚ್ಚಿನ ಫಲವು ಈಗ ಶಿವಾರ್ಚನೆ ಮಾಡುವುದರಿಂದ ಲಭಿಸುವುದು ಎಂದು ಶಾಸ್ತ್ರಮುಖಗಳಿಂದ ಕೇಳಿರುವೆನು. ಆದ್ದರಿಂದ ಪತಿದೇವನೇ, ಹೇಗಾದರೂ

ಕಲ್ಪಾಸ್ತೇ ಬಹವೋ ಗತಾ ಅಪಿ ತಥಾ ಕಲ್ಪೇಷು ತೇಷು ಪ್ರಿಯಃ
ಕಾಲೋಽಯಂ ಶಿವಪೂಜನಸ್ಯ ನ ಗತೋ ಯಸ್ಮಿನ್ ಸಮಭ್ಯರ್ಚಿತಃ ।
ದಾಸ್ಯತ್ಯೇವ ಪದಂ ನಿಜಂ ಗಿರಿಜಯಾ ಸಾಕಂ ಕ್ವಚಿದ್ಯಾಸ್ಯತಿ
ಶ್ರೀಮೃತ್ಯುಂಜಯ ಇತ್ಯಮೈಮಿ ಸಮಯಸ್ತಸ್ಮಾದಯಂ ದುರ್ಲಭಃ ॥೧೦೫॥

ಸಂಭಾಷಣೇನಾಪಿ ರುಚಿಃ ಕುತಸ್ಸ್ಯಾ
ದಯಂ ಶಿವಾರಾಧನಕಾಲ ಏವ ।
ಪ್ರಯಾಹಿ ಗೇಹಾತ್ಪರತಃ ಪ್ರಯಾಹಿ
ಚೇಟೀಕುಟಂ ವಾ ವಿಟವಾಟಿಕಾಂ ವಾ ॥೧೦೬॥

ಇತ್ಯುಕ್ತ್ವಾ ವಿರತಾ ಸಾಪಿ ಸಂಭಾಷಣಪರಾಙ್ಮುಖಾ ।
ಮಹ್ಯಂ ಶಾಪಸ್ತಯಾ ದತ್ತಶ್ಶಾರ್ದೂಲಸ್ತ್ವಂ ಭವೇತ್ಯಪಿ ॥೧೦೭॥

ಮಾಡಿ ಈಗ ನಾನಾವಿಧವಾದ ಪೂಜಾದ್ರವ್ಯಗಳನ್ನು ಒದಗಿಸಿಕೊಂಡು ಈಶ್ವರಪೂಜೆಗೆ ಸಿದ್ಧನಾಗು. ಮನುಷ್ಯ ಜನ್ಮವೂ, ಇಂತಹ ಪೂಜಾಯೋಗ್ಯ ಕಾಲವೂ ಅತ್ಯಂತ ದುರ್ಲಭಗಳಾಗಿರುವಾಗ ಈ ಸುಸಮಯವನ್ನು ಎಂದಿಗೂ ನೀನು ಕಳೆದುಕೊಳ್ಳ ಬೇಡ. ||೧೦೩-೧೦೪||

ಇಲ್ಲಿನ ವರೆಗೆ ಎಷ್ಟೋ ಕಲ್ಪಗಳು ಕಳೆದುಹೋದವು. ಆ ಕಲ್ಪಗಳಲ್ಲೆಲ್ಲಾ ಶಿವಪೂಜೆಗೆ ಯೋಗ್ಯವಾದ ಇಂತಹ ಕಾಲವು ಮಾತ್ರ ಕಳೆದುಹೋಗಲಿಲ್ಲ. ಈ ಕಾಲದಲ್ಲಿ ಭಕ್ತಿಯಿಂದ ಶಿವಾರ್ಚನೆ ಮಾಡಿದವರಿಗೆ ಶಂಕರನು ಪಾರ್ವತಿಯೊಡನೆ ತೃಪ್ತನಾಗಿ ತನ್ನ ಭಕ್ತನಿಗೆ ತನ್ನ ಸಾಯುಜ್ಯವನ್ನೇ ಕೊಡುವನು ಎಂದು ನಾನು ದೃಢವಾಗಿ ತಿಳಿದಿರುವೆನು. ಆದರೆ ಎಂದೂ ಇಂತಹ ಕಾಲವು ದೊರೆಯುವುದು ದುರ್ಲಭವೆಂದು ತಿಳಿ. ||೧೦೫||

ಇಂತಹ ಈಶ್ವರಾರಾಧನಕಾಲದಲ್ಲಿ ಕೇವಲ ಸಂಭಾಷಣೆಯಿಂದ ಯಾವ ಪ್ರಯೋಜನವಾದೀತು? ಎಲೈ ಪತಿಯೇ, ನೀನು ಅಷ್ಟು ಕಾಮಗ್ರಸ್ತನಾದರೆ ಈ ಮನೆಯಲ್ಲಿರಬೇಡ. ವೇಶ್ಯಾಗೃಹಕ್ಕೋ ಅಥವಾ ವಿಟರ ಗುಂಪಿಗೋ ಹೋಗಿ ಸೇರಿಕೋ." ||೧೦೬||

ಎಂದು ಹೇಳಿ ಪತ್ನಿಯು ಮುಂದೆ ಮಾತನ್ನಾಡಲಿಲ್ಲ. ಹಾಗೂ ನಾನು ವಿವೇಕಿಯಾಗದೆ ಕಾಮಾತುರನಾಗಿಯೇ ಇದ್ದುದನ್ನು ನೋಡಿ ಅವಳು ನನಗೆ

ತತಃ ಕಾಮಾತುರೇಣೈವ ಚೇಟೀ ಸಂಸೇವಿತಾ ಮಯಾ ।
ನಾರಾಧಿತೋ ಮಹಾದೇವೋ ನಾರ್ಚಿತೋಪ್ಯವಲೋಕಿತಃ ॥೧೦೮॥

ಚೇಟೀಗರ್ಭೇ ಸಮುತ್ಪನ್ನಾ ಸುತಾ ಅಪಿ ಮದನ್ವಯಾತ್ ।
ಸ ವಿವಾಹಮಹಂ ಪಾಪೀ ಶಿವಪೂಜಾಪರಾಙ್ಮುಖಃ ॥೧೦೯॥

ಶಾರ್ದೂಲದೇಹಮಾಪನ್ನಸ್ಸೇಯಂ ಚೇಟೀ ಮಮಪ್ರಿಯಾ ।
ಏತೇ ಬಾಲಾಸ್ಸುತಾಸ್ಸರ್ವೇ ಶಾರ್ದೂಲತ್ವಮುಪಾಗತಾಃ ॥೧೧೦॥

ಮೋಹೇನ ಪಾಪಾಚರಣಾದ್ದುಷ್ಟಯೋನಿಮುಪಾಗತಾಃ ।
ದುಃಖಂ ಚ ತೇನ ಪಾಪೇನ ಪ್ರಾಪ್ಯತೇ ಸತ್ಯಮುಚ್ಯತೇ ॥೧೧೧॥

ತದ್ದೇಹ ವಿಗಮೇ ಜಾತೇ ಯಮದೂತೈಸ್ಸಮಾಗತಂ ।
ಆಗತಾಃ ಪಾದಘಾತೇನ ತೇ ಸರ್ವೇ ತಾಡನೋದ್ಯತಾಃ ॥೧೧೨॥

“ನೀನು ಹುಲಿಯಾಗು” ಎಂದು ಶಾಪವಿತ್ತಳು. ಅಷ್ಟಾದರೂ ನಾನು ಕಾಮಾರ್ತನಾಗಿ ಆಗಲೇ ಒಬ್ಬಳು ಚೇಟಿಯನ್ನು ಉಪಭೋಗಿಸಿದೆನು. ಆ ಕಾಲದಲ್ಲಿ ಈಶ್ವರಾರಾಧನೆಯನ್ನಾಗಲಿ, ಈಶ್ವರ ದರ್ಶನವನ್ನಾಗಲಿ ನಾನು ಮಾಡಲಿಲ್ಲ. ॥೧೦೭-೧೦೮॥

ಆಗಲೇ ಆ ಚೇಟಿಯು ನನ್ನಿಂದ ಗರ್ಭವನ್ನು ಪಡೆದು ಸ್ತ್ರೀಶಿಶುವನ್ನು ಪ್ರಸುವಿಸಿದಳು. ಹೀಗೆ ಶಿವಪೂಜಾಸಮಯದಲ್ಲಿ ಅಕಾರ್ಯವನ್ನೆಸಗಿದ ನನಗೆ ಶಾಪದಿಂದ ವ್ಯಾಘ್ರಜನ್ಮವು ಪ್ರಾಪ್ತವಾಯಿತು. ನನ್ನ ಸಂಪರ್ಕದಿಂದ ಆ ಚೇಟಿಯು ಈಗಲೂ ಪ್ರಿಯಳೆನಿಸಿದಳು. ಆ ಮಕ್ಕಳೇ ಈಗಲೂ ಹುಲಿಯ ಮರಿಗಳಾಗಿ ಜನಿಸಿದುವು. ॥೧೦೯-೧೧೦॥

ಅಜ್ಞಾನದಿಂದ ಕಾರ್ಯಮಾಡಿದ ನನಗೆ ಈ ದುಷ್ಟಜನ್ಮವು ಪ್ರಾಪ್ತವಾಯಿತು. ಮತ್ತು ಅತಿಯಾದ ದುಃಖವೂ ಒದಗಿತು. ದೇಹತ್ಯಾಗಾನಂತರದಲ್ಲಿ ಯಮದೂತರು ರಭಸದಿಂದ ಬಂದು ನನ್ನನ್ನು ಕಾಲಿನಿಂದ ಒದೆಯಲು ಆರಂಭಿಸಿದರು. ॥೧೧೧-೧೧೨॥

ರೇ ರೇ ತ್ವಯಾ ಶಿವದಿನೇ ಶಿವಪೂಜನಾನಿ
ತ್ಯಕ್ತಾನಿ ತಾನಿ ಶಿವದಾನ್ಯಪಿ ಮುಕ್ತಿದಾನಿ ।
ತತ್ತ್ಯಾಗಜಾತಫಲಮೇತದಿತಿ ಬ್ರುವಂತಃ
ಪಾದಾಭಿಘಾತನಿಕರಂ ಪರಿತಃ ಕ್ಷಿಪಂತಿ ॥೧೧೩॥

ತತ್ಪಾದಜಾಪಾರನಖಾಂಕುಶಾನಾಂ
ಸಂಘೈಶ್ಶರೀರಂ ಚ ವಿದೀರ್ಣಮೇವ ।
ತತಃ ಪರಂ ನೀತಮಘೋರಮುಧ್ಯೇ
ನಿಕ್ಷಿಪ್ತಮಾಶು ಜ್ವಲನೈಶ್ಚ ತಪ್ತಂ ॥೧೧೪॥

ತತಃ ಪರಂ ಕಾಲಮುಪಾಗತೋಽಹಂ
ತೈರೇವ ಘಾತೈಃ ಕುಲಿಶಾಭಿಘಾತೈಃ ।
ಕಶಾಭಿಘಾತೈರತಿಪೀಡಿತಂ ಮಾಂ
ದದರ್ಶ ಕಾಲಃ ಕುಪಿತೋಽತಿತೀವ್ರಂ ॥೧೧೫॥

॥ ಚಿತ್ರಗುಪ್ತ ಉವಾಚ ॥

ತತಃ ಪರಂ ಚಿತ್ರಗುಪ್ತಂ ಪ್ರಾಹ ಗಂಭೀರಯಾ ಗಿರಾ ।
ಕೃತಂ ಪಾತಕಮೇತೇನ ಕೃತಂ ಕಿಮಿತಿ ಚಿಂತಯಾ ॥೧೧೬॥

ಎಲೈ ನೀಚನೇ, ಪ್ರಶಸ್ತವಾದ ಶಿವರಾತ್ರಿಯ ದಿನ ನೀನು ಮುಕ್ತಿಪ್ರದವಾದ ಈಶ್ವರಪೂಜೆಯುನ್ನು ತಿರಸ್ಕರಿಸಿದೆ. ಅದರ ಫಲವೇ ಈ ನಮ್ಮ ಪಾದಘಾತ" ವೆಂದು ಹೇಳುತ್ತಾ ಎಲ್ಲರೂ ನನ್ನನ್ನು ಒದೆಯಲಾರಂಭಿಸಿದರು. ॥೧೧೩॥

ಅವರ ಕಾಲಿನಲ್ಲಿದ್ದ ಶೂಲಗಳಿಂದ ನನ್ನ ಮೈಯೆಲ್ಲಾ ಸೀಳಿಹೋಯಿತು. ಹಾಗೆಯೇ ವ್ಯಥೆಪಡುತ್ತಿದ್ದ ನನ್ನನ್ನು ತೆಗೆದುಕೊಂಡು ಹೋಗಿ ಉರಿಯುತ್ತಿರುವ ಬೆಂಕಿಯಿಂದ ಕೂಡಿದ ನರಕದಲ್ಲಿ ಹಾಕಿದರು. ॥೧೧೪॥

ಹಾಗೆಯೇ ವ್ಯಥೆಪಡುತ್ತಾ ನಾನು ಯಮನ ಸಮೀಪಕ್ಕೆ ಬಂದೆನು. ಪಾದಘಾತದಿಂದಲೂ, ವಜ್ರಾಯುಧದ ಏಟಿನಿಂದಲೂ, ಚಾವಟಿಯ ಪೆಟ್ಟಿನಿಂದಲೂ ಬಳಲಿದ್ದ ನನಗೆ ಯಮನು ಅತಿ ಕ್ರೂರದೃಷ್ಟಿಯಿಂದ ಕಾಣಿಸಿಕೊಂಡನು. ॥೧೧೫॥

ಒಡನೆಯೇ ಚಿತ್ರಗುಪ್ತನನ್ನು ಕರೆದು ಯಮನು " ಈತನು ಮಾಡಿದ ಅಪರಾಧವೇನು ? ಏತಕ್ಕಾಗಿ ಈ ನರಕಕ್ಕೆ ಈತನನ್ನು ತಳ್ಳಿದೆ ? " ಎಂದು ಪ್ರಶ್ನಿ

ಅನೇನ ಮಾಘಾಸಿತಭೂತರಾತ್ರಿ
ರ್ನಿತಾಶು ಚೇಟೀಪಟುಚುಂಬನಾದ್ಯೈಃ ।
ತಿರಸ್ಕೃತೋಽಯಂ ರಜನೀ ಮುಖೇಽಪಿ
ಸ್ವಭಾರ್ಯಯಾ ಶಂಕರಚರ್ಯಯಾಽಯಂ ॥೧೧೭॥

ಯಸ್ಮಿನ್ ಕಾಲೇ ವಿಶ್ವನಾಥಾರ್ಚನಾದ್ಯೈ
ರಾನಂದಾಬ್ಧಿರ್ವರ್ಧತೇ ಪುಣ್ಯಸಂಘೈಃ ।
ಸಾಕಂ ತಸ್ಮಿನ್ ಪಾಪರಾಶಿಃ ಪ್ರವೃದ್ಧೋ
ಚೇಟೀವಾಟೀವೀಟಿಕಾಸ್ಫೋಟನಾದ್ಯೈಃ ॥೧೧೮॥

ಅನೇನ ಪುಣ್ಯಾನಿ ಪುರಾಕೃತಾನಿ
ಯಾವಂತಿ ತಾವಂತಿ ಲಯಂ ಗತಾನಿ ।
ಭೂತವ್ರತತ್ಯಾಗತ ಏವ ಪಶ್ಚಾತ್
ಪ್ರಾಪ್ತಾನ್ಯಪಾರಾಣ್ಯಪಿ ಪಾತಕಾನಿ ॥೧೧೯॥

ಸಲು, ಆಗ ಚಿತ್ರಗುಪ್ತನು ಯಮನೊಡನೆ ಹೀಗೆಂದನು, “ಸ್ವಾಮಿಯೇ, ಈತನು ಮಾಘಮಾಸದ ಕೃಷ್ಣ ಚತುರ್ದಶಿಯಲ್ಲಿ ಶಿವರಾತ್ರಿಯೆಂದು ಪ್ರಸಿದ್ಧವಾದ ಆ ದಿನ ಶಿವಾರಾಧನೆ ಮಾಡದೆ ಚೇಟಿಯ ಜೊತೆ ಸೇರಿ ಚುಂಬನಾದಿಗಳಿಂದ ಕಾಲಕಳೆದನು. ಅಲ್ಲದೆ ಪ್ರದೋಷಕಾಲದಲ್ಲಿ ಪತ್ನಿಯಿಂದ ಉಪದಿಷ್ಟನಾದರೂ ಈಶ್ವರಸೇವೆಗೆ ಮನಸ್ಸುಮಾಡಲಿಲ್ಲ. ||೧೧೬-೧೧೭||

ವಿಶ್ವನಾಥನನ್ನು ಪೂಜಿಸಿ, ಸ್ಥಿರವಾದ ಆನಂದಸಮುದ್ರವನ್ನು ಹೆಚ್ಚಿಸುವ ಪುಣ್ಯಕರವಾದ ಆ ಸಮಯದಲ್ಲಿ ಈ ರಾಜನು ಪಾಪಕಾರ್ಯಾಸಕ್ತನಾಗಿ ಚೇಟಿಯೊಡಗೂಡಿ ಆಕೆಯೊಡನೆ ತಾಂಬೂಲಚರ್ವಣಾದಿ ವಿಹಾರಗಳಲ್ಲಿ ಕಾಲಕಳೆದನು. ||೧೧೮||

ಹಾಗೆ ಮಾಡಿದ್ದರಿಂದ ಈತನು ಹಿಂದೆ ಸಂಪಾದಿಸಿದ್ದ ಪುಣ್ಯರಾಶಿಯೆಲ್ಲಾ ನಾಶವಾಯಿತು. ಅದೂ ಅಲ್ಲದೆ ಶಿವರಾತ್ರಿವ್ರತವನ್ನು ತಿರಸ್ಕರಿಸಿದುದರಿಂದ ಪಾಪರಾಶಿಯು ಅಭಿವೃದ್ಧಿಯಾಯಿತು. ||೧೧೯||

ಅಹೋ ಧೃತಂ ಪುಣ್ಯಮನೇನ ತಾವತ್
ಯಾವನ್ನ ಕೇನಾಪಿ ಕೃತಂ ತಥಾಪಿ ।
ತಾವದ್ವಿನಷ್ಟಂ ಶಿವರಾತ್ರಿಕಾಲ
ಶಿವಾರ್ಚನತ್ಯಾಗತಏವ ಸತ್ಯಂ ॥೧೨೦॥

ಅಹೋ ಶಿವಾರ್ಚನತ್ಯಾಗಂ ಪುಣ್ಯಾದ್ರಿಕುಲಿಶಂ ವಿದುಃ ।
ಪುಣ್ಯಾರಣ್ಯದವಂ ಪ್ರಾಹುರ್ವೇದವೇದಾಂತಪಾರಗಾಃ ॥೧೨೧॥

ನವನೀತಗಿರಿರ್ಯಥಾನಲಾ
ತ್ಪ್ರಲಯಂ ಯಾತಿ ತಥೈವ ಸರ್ವಥಾ ।
ಸುಕೃತಾದ್ರಿಲಯೋಽಪಿ ಜಾಯತೇ
ಶಿವಪೂಜಾವಿರಹೇ ವಿಶೇಷತಃ ॥೧೨೨॥

ಸಿಕತಾಮಿತಪರ್ವತಕ್ಷಯೋ
ಸರಿತಾಂ ಕಾಲ ಯಥಾ ತಥಾ ಪರಂ ।
ಸುಕೃತಾದ್ರಿಲಯೋಽಪಿ ಜಾಯತೇ
ಶಿವಪೂಜಾವಿರಹೇ ವಿಶೇಷತಃ ॥೧೨೩॥

ಈತನು ಹಿಂದೆ ಯಾರೂ ನಡೆಸದಿರುವಷ್ಟು ಪುಣ್ಯಕರ್ಮಗಳನ್ನು ನಡೆಸಿದ್ದನು. ಪುಣ್ಯರಾಶಿಯೂ ಸಂಚಿತವಾಗಿತ್ತು. ಆದರೇನು ? ಶಿವರಾತ್ರಿವ್ರತಾಚರಣೆ ಮಾಡದಿದ್ದುದರಿಂದ ಆ ಪುಣ್ಯರಾಶಿಯೆಲ್ಲಾ ಏಕಕಾಲದಲ್ಲಿ ಲಯವಾಯಿತು. ಇದು ನಿಜ. ॥೧೨೦॥

ವೇದವೇದಾಂತಗಳನ್ನರಿತ ವಿವೇಕಿಗಳು, ಶಿವಾರ್ಚನೆಯ ಪರಿತ್ಯಾಗವನ್ನೇ ಪುಣ್ಯಾದ್ರಿಯ ವಜ್ರಾಯುಧವೆಂದೂ, ಪುಣ್ಯಾರಣ್ಯಕ್ಕೆ ಕಾಡುಕಿಚ್ಚೆಂದೂ ಸಾರುತ್ತಿರುವರು. ಬೆಂಕಿಯ ಸಂಪರ್ಕದಿಂದ ಬೆಣ್ಣೆಯ ರಾಶಿಯು ಕರಗಿಹೋಗುವಂತೆ, ಶಿವಪೂಜಾಪರಿತ್ಯಾಗದ ಪಾಪಲೇಪದಿಂದ ಪುಣ್ಯರಾಶಿಯು ಲಯವಾಗುವುದು. ॥೧೨೧-೧೨೨॥

ನದಿಯ ಪ್ರವಾಹಕ್ಕೆ ಸಿಕ್ಕಿ ಮರಳಿನ ಪರ್ವತವು ಕರಗಿಹೋಗುವಂತೆ ಶಿವಪೂಜಾರಾಹಿತ್ಯದ ಪಾಪದಿಂದ ಸುಕೃತವೆಂಬ ಪರ್ವತವೂ ಧ್ವಂಸವಾಗಿ ಹೋಗುವುದು. ॥೧೨೩॥

ಪ್ರಲಯಾನಲಸಂಗಮಾದ್ಯಥಾ
ವಿಲಯಂ ಯಾತಿ ಧರಾ ತಥಾ ಪರಂ ।
ಸುಕೃತಾದ್ರಿಲಯೋಽಪಿ ಜಾಯತೇ
ಶಿವಪೂಜಾವಿರಹೇ ವಿಶೇಷತಃ ॥೧೨೪॥

ಶ್ರುತಪೋತಲಯೇ ಯಥಾ ಜನಾಃ
ಪ್ರಲಯಂ ಯಾಂತಿ ನದೀರಯೈಸ್ತಥಾ ।
ಸುಕೃತಾದ್ರಿಲಯೋಽಪಿ ಜಾಯತೇ
ಶಿವಪೂಜಾವಿರಹೇ ವಿಶೇಷತಃ ॥೧೨೫॥

ಭೂತಾಯಾಂ ನಿಶಿ ಬಿಲ್ವಪಲ್ಲವಮುಮಾಕಾಂತಾಯ ಲಿಂಗೇ ಮುದಾ
ದಾತುಂ ವಾಂಛತಿ ಯಃ ಸ ಏವ ಸುಕೃತಾಂಭೋಧಿಸ್ಸಪುಣ್ಯಾಕೃತಿಃ ।
ತಂ ದೇವಾಃ ಪ್ರಣಮಂತಿ ಭೂತಿವಿಲಸತ್ಫಾಲಂ ಮುಹುಶ್ಶಾಂಭವಂ
ರುದ್ರಾಕ್ಷಾವೃತಕಂಠಕರ್ಣವಿವರಂ ತಂ ಕಿಂ ನರಂ ವಾ ನರಂ ॥೧೨೬॥

ಪ್ರಲಯಕಾಲದ ಅಗ್ನಿಯಿಂದ ಭೂಮಿಯು ಹೇಗೆ ಬೆಂದುಹೋಗುವುದೋ ಹಾಗೆ ಶಿವಪೂಜೆಮಾಡದಿದ್ದವನ ಪುಣ್ಯರಾಶಿಯು ಮಾಯವಾಗಿ ಹೋಗುವುದು. ||೧೨೪||

ನದಿಯ ಮಧ್ಯದಲ್ಲಿ ದೋಣಿಯು ಒಡೆದುಹೋದರೆ ಜನರು ಹೇಗೆ ನದೀವೇಗದಿಂದ ನಾಶಹೊಂದುವರೋ ಅದರಂತೆ, ಪುಣ್ಯರಾಶಿಯು ಶಿವಪೂಜಾಪರಿತ್ಯಾಗದಿಂದ ನಾಶಹೊಂದುವುದು. ||೧೨೫||

ಯಾರು ಶಿವರಾತ್ರಿಯ ನಿಶಿಯಲ್ಲಿ ಈಶ್ವರಲಿಂಗವನ್ನು ಬಿಲ್ವಪತ್ರಾದಿಗಳಿಂದ ಅರ್ಚಿಸುವರೋ ಅಂತಹವರಿಗೆ ಪುಣ್ಯರಾಶಿಯು ಅನಾಯಾಸವಾಗಿ ಲಭಿಸುವುದು. ಅವರು ಸಾಕ್ಷಾತ್ಪುಣ್ಯಮೂರ್ತಿಗಳೇ ಆಗುವರು. ಅಲ್ಲದೆ ರುದ್ರಾಕ್ಷಿಯ ಆಭರಣವನ್ನು ಧರಿಸಿ, ಭಸ್ಮಲಿಪ್ತಗಾತ್ರನಾಗಿ ಈಶ್ವರನನ್ನು ಪೂಜಿಸುವ ಮನುಷ್ಯನನ್ನಾಗಲಿ, ಕಿಂನರನನ್ನೇ ಆಗಲಿ, ದೇವತೆಗಳು ಆತನನ್ನು ಈಶ್ವರಪ್ರಿಯನೆಂದು ಭಾವಿಸಿ ಸರ್ವದಾ ಅವನಿಗೆ ನಮಸ್ಕರಿಸುವರು. ||೧೨೬||

ಶುಷ್ಯತ್ಯಘಾಂಭೋನಿಧಯಃ ಕ್ಷಣೇನ
ನಶ್ಯಂತ್ಯಪಾರಾಪದಕಾಲಮೇಘಾಃ ।
ಭೂತಾನಿಶಾಯಾಂ ಶಿವಪೂಜನೇನ
ತತ್ಕೇನ ಪುಣ್ಯೇನ ಸಮಂ ವದಾಮಿ ॥೧೨೭॥

ಭೂತಾ ಯಾವದುಪೈತಿ ತಾವದುಭಯಂ ಪಾದಾಂಬುರಾಶೇರ್ಭವೇ
ತ್ಸಾ ಚೇದಂತಿಕಮೇತಿ ಕಂಪಮತುಲಂ ಪ್ರಾಪ್ನೋತಿ ಪಾಪಾರ್ಣವಃ ।
ಕಿಂ ಕರ್ತವ್ಯಮತಃ ಪರಂ ನ ನಿಲಯಃ ಕೋಽಪೀತಿ ವೇಗಾತ್ಪರಂ
ಯಾತ್ಯೇವಾಶಿವಪೂಜಕಂ ಶಿವರತೇ ಜಾತೇ ಸ್ವಚಿತ್ತೇ ಸತಿ ॥೧೨೮॥

ಮಾಸಂ ಭೂತಶಿವಾರ್ಚನಸ್ಯ ನ ಫಲಂ ವಕ್ತುಂ ಸಮರ್ಥೋ ಭವೇ
ದ್ವೇದೋಽಪೀತಿ ಚತುರ್ಮುಖೋಽಪಿ ಬಹುಧಾ ನಾರಾಯಣೋ ವಾ ಯಮಃ ।
ಶೇಷೋ ವಾ ಗುರುರೇವ ವಾ ಸ ಮಹಿಮಾ ವಾಚಾಂ ಕಿಲಾಗೋಚರಃ
ಶಂಕಾಮೇವ ಸ ಶಂಕರೋಽಪಿ ಸಶಿವೋ ವಕ್ತುಂ ಕರೋತಿ ಧ್ರುವಂ ॥೧೨೯॥

ಶಿವರಾತ್ರಿಯ ದಿನ ಮಾಡಿದ ಈಶ್ವರಪೂಜೆಯಿಂದ ಪಾಪರಾಶಿಯೆಂಬ ಸಮುದ್ರವು ಕ್ಷಣಕಾಲದಲ್ಲಿ ಒಣಗಿಹೋಗುವುದು. ವಿಪತ್ತೆಂಬ ಕಾಲಮೇಘವು ಚದುರಿಹೋಗುವುದು. ಇಂತಹ ಮಹಿಮೆಯು ಮತ್ತಾವ ಸುಕೃತಕ್ಕೆ ತಾನೆ ಸಿಗುವುದು? ಆದ್ದರಿಂದ ಇದಕ್ಕೆ ಸಮನಾದ ಬೇರೆ ಪುಣ್ಯಕಾರ್ಯವಿಲ್ಲವೆಂದೇ ನನ್ನ ಭಾವನೆ.॥೧೨೭॥

ಶಿವರಾತ್ರಿಯ ದಿನವು ಬರುವ ವೇಳೆಗೆ ಮನುಷ್ಯನ ಪಾಪರಾಶಿಯು ಎಷ್ಟೇ ವೃದ್ಧಿಯಾಗಿದ್ದರೂ, ಎಲ್ಲಿ ಈತನು ಈಶ್ವರಾರಾಧನೆಮಾಡಿ ನನ್ನನ್ನು ನಾಶಗೊಳಿಸುವನೋ ಎಂದು ಅದು ನಡುಗುವುದು. ಅಲ್ಲದೆ ಈಶ್ವರಾರ್ಚನೆಮಾಡುವ ಮನುಷ್ಯರ ಪಾಪರಾಶಿಯೆಲ್ಲಾ ಶಿವಾರ್ಚನೆಯಿಂದ ಒದಗಿದ ಸುಕೃತದಿಂದ ಓಡಿಸಲ್ಪಟ್ಟು, ಕೊನೆಗೆ ವೇಗದಿಂದ ಓಡಿಹೋಗಿ, ಶಿವರಾತ್ರಿಯೆಂದು ತಿಳಿದೂ ಶಿವಾರಾಧನೆ ಮಾಡದಿರುವ ಮನುಜರಲ್ಲಿ ಅಡಗುವುದು. ॥೧೨೮॥

ಶಿವರಾತ್ರಿಯಲ್ಲಿ ನಡೆಸಿದ ಶಿವಾರ್ಚನೆಯಿಂದ ಬರುವ ಫಲವನ್ನು ವಿವರಿಸಿ ಹೇಳಲು, ವೇದಗಳಿಗೂ ಸಾಧ್ಯವಿಲ್ಲ. ಅಲ್ಲದೆ ಬ್ರಹ್ಮ, ವಿಷ್ಣು, ಆದಿಶೇಷ, ಬೃಹಸ್ಪತಿ ಮುಂತಾದವರಿಂದಲೂ ಆಗಲಾರದು. ಹೆಚ್ಚೇನು. ಪಾರ್ವತೀಪತಿಯಾದ

ಕಿಂ ವರ್ಣಯಾಮಿ ಯಮ ಭೂತನಿಶಾಶಿವಾರ್ಚಾ
ಪುಣ್ಯಾಬ್ಧಿಶಕ್ತಿಮಿಹ ಭುಕ್ತಿಮಯಂ ದದಾತಿ ।
ಮುಕ್ತಿಂ ಚ ದೇಹವಿಲಯೇ ಸತಿ ದೇಹಮನ್ಯ
ನ್ನಾಸ್ತೀತಿ ಸಾ ಬಹುವಿಚಾರರತಾಪಿ ನೂನಂ ॥೧೩೦॥

ಏವಂ ಬ್ರುವಂತಮುಪಕೃತ್ಸಮಯೋಪಿ ದೃಷ್ಟ್ವಾ
ತಂ ಚಿತ್ರಗುಪ್ತಮುಸಿತೇತರಭೂತಿಭೂಷಂ ।
ರುದ್ರಾಕ್ಷಕಂಕಣಕರಂ ಶಿವಲಿಂಗಹಸ್ತ
ಮಾನಂದಜಾಶ್ರುನಯನಂ ಪ್ರಣತೋ ಬಭಾಷೇ ॥೧೩೧॥

॥ ಯಮ ಉವಾಚ ॥

ಧನ್ಯಾ ಕೃತಾ ಸಭಾ ಸೇಯಂ ತ್ವಯಾ ಧನ್ಯೇನ ಕೇವಲಂ ।
ಅಹಂ ಧನ್ಯಃ ಕೃತೋ ಮಾನ್ಯಃ ಶಿವಾರಾಧನವಾಗ್ರಸೈಃ ॥೧೩೨॥

ಶಂಕರನೂ ಸಹ ತನ್ನ ಅರ್ಚನೆಯ ಫಲವನ್ನು ವಿವರಿಸಿ ಹೇಳಲು ಯೋಚನೆ ಮಾಡುವನು. ಇದು ನಿಜ. ॥೧೨೯॥

ಯಮದೇವನೇ, ಶಿವರಾತ್ರಿಯಲ್ಲಿ ನಡೆಸಿದ ಶಿವಾರ್ಚನೆಯ ಫಲವನ್ನು ನಾನೆಷ್ಟು ವರ್ಣಿಸಲಿ ! ಆ ಪುಣ್ಯರಾಶಿಯು ಸಕಲ ಭೋಗಗಳನ್ನೂ ಐಹಿಕದಲ್ಲಿ ಒದಗಿಸಿ, ಅನಂತರ ಸ್ಥಿರಮುಕ್ತಿಯನ್ನು ಅನುಗ್ರಹಿಸುವುದು. ನಿಜವಾಗಿಯೂ ಆ ದಿನದ ಈಶ್ವರಾರಾಧನೆಯಿಂದ ಪುನರ್ಜನ್ಮವಿಲ್ಲದ ಶಾಶ್ವತವಾದ ಆನಂದವು ಲಭಿಸುವುದೆಂದು ಸ್ಥಿರಪಡಿಸಿರುವರು." ॥೧೩೦॥

ಎಂದು ಶುಭ್ರವಾದ ಭಸ್ಮವನ್ನು ಬಳಿದುಕೊಂಡು, ರುದ್ರಾಕ್ಷಿಯ ಬಳೆಯನ್ನು ಕೈಗಳಿಗೆ ಕಟ್ಟಿ, ಶಿವಲಿಂಗವನ್ನು ಕೈಯ್ಯಲ್ಲಿ ಹಿಡಿದು ಆನಂದಬಾಷ್ಪನಯನನಾಗಿ ನಮಸ್ಕರಿಸಿ ಹೇಳುತ್ತಿರುವ ಚಿತ್ರಗುಪ್ತನ ಮಾತುಗಳನ್ನು ಕೇಳಿ ಯಮರಾಜನು ಚಿತ್ರಗುಪ್ತನಿಗೆ ಹೀಗೆಂದನು. ॥೧೩೧॥

"ಎಲೈ ಚಿತ್ರಗುಪ್ತನೇ, ನೀನೇ ಧನ್ಯನು. ನಿನ್ನಿಂದ ಅಲಂಕೃತವಾಗಿ ಈ ಸಭೆಯೂ ಧನ್ಯವೆನಿಸಿದೆ. ನೀನು ವಿವರಿಸಿದ ಶಿವಪೂಜಾಮಹಿಮೆಯನ್ನು ಕೇಳಿ ತದ್ರಸಪಾನದಿಂದ ನಾನೂ ಕೃತಾರ್ಥನೆನಿಸಿಕೊಂಡೆನು. ॥೧೩೨॥

ಭೋ ಚಿತ್ರಗುಪ್ತ ಶಿವಪೂಜನಪುಣ್ಯಶಕ್ತಿ
ವಾರ್ತಾ ವಿಶೇಷಕಥನೇನ ಸುಧಾ ನ ತುಲ್ಯಾ ।
ಸಾ ತೃಪ್ತಿಮಾತ್ರಕರಣಂ ತದಘಾದ್ರಿನಾಶಂ
ಕೃತ್ವಾ ಕರೋತಿ ಖಲು ಮುಕ್ತಿಮಪಿ ಸ್ವಹಸ್ತೇ ॥೧೩೩॥

ಧನ್ಯೋಽಸಿ ತ್ವಮುಮಾಸಹಾಯಚರಣಾಂಭೋಜಾರ್ಚನಾತ್ಯಾದರೋ
ಹಾರೋ ಹಾರವಿಹಾರವರ್ಣನರತೋ ಹಾರೋಪಹಾರಾದರಃ ।
ವ್ಯಾಹಾರೈರಪಿ ಹಾರಕೀರ್ತಿಕಥನಾವಿಷ್ಟೈಃ ಪ್ರಕೃಷ್ಟೈರ್ಮುಹು
ಸ್ತುಷ್ಟೋಽಹಂ ಶಿಪಿವಿಷ್ಟಕೀರ್ತಿಸುಧಯಾ ಪುಷ್ಟೋಽಪಿ ಕಷ್ಟಕ್ಷಯೇ ॥೧೩೪॥

ಏವಮುಕ್ತ್ವಾ ಸ್ಥಿತೇ ತತ್ರ ಯಮೇ ಕೇಚಿದುಪಾಗತಾಃ ।
ಮೇಚಕಾಚಲಸಂಕಾಶಾಃ ಪ್ರತಪ್ತಾಯಸಸಂಹತಾಃ ॥೧೩೫॥
ಪ್ರದಗ್ಧಬಾಹುದಂಡಾಶ್ಚ ದಗ್ಧಮುಂಡಾಶ್ಚ ಕೋಟಿಶಃ ।
ಸಂದಗ್ಧಕರಪಾದಾಶ್ಚ ರಕ್ತಧಾರಾಸಮಾವೃತಾಃ ॥೧೩೬॥

ಎಲೈ ಚಿತ್ರಗುಪ್ತನೇ, ಈಶ್ವರಪೂಜಾಮಹಿಮೆಯ ಪ್ರಸ್ತಾವವು ಅಮೃತಕ್ಕಿಂತಲೂ ಹೆಚ್ಚು ಪವಿತ್ರವಾದದ್ದು. ಏಕೆಂದರೆ ಅಮೃತಪಾನದಿಂದ ತೃಪ್ತಿ ಮಾತ್ರ ಒದಗುವುದು. ಈ ಕಥಾಶ್ರವಣವಾದರೋ ಪಾಪನಾಶಕವಾಗಿ, ಸ್ಥಿರತರವಾದ ಮುಕ್ತಿಸುಖವನ್ನು ಕರಗತವನ್ನಾಗಿ ಮಾಡುವುದು. ॥೧೩೩॥

ಚಿತ್ರಗುಪ್ತನೇ ನೀನು ಧನ್ಯನು. ಯಾವಾಗಲೂ ಪಾರ್ವತೀಪತಿಯಾದ ಶಂಕರನ ಪಾದಸೇವಾಸಕ್ತನಾಗಿರುವೆ. ಈಶ್ವರನ ವಿಹಾರಾದಿಗಳನ್ನರಿತ ಪೂರ್ಣ ಹರಭಕ್ತನೆನಿಸಿರುವೆ. ಈಶ್ವರನ ಪೂಜಾದಿಗಳಲ್ಲಿ ಆಸಕ್ತಿಯನ್ನು ತೋರಿಸಿರುವೆ. ನಿನ್ನ ಉಕ್ತಿಗಳೆಲ್ಲವೂ ಶ್ರೀಪರಮೇಶ್ವರನ ಕೀರ್ತಿಸುಧೆಯನ್ನು ಎರಚತಕ್ಕವುಗಳಾಗಿವೆ. ಇದರಿಂದ ಸಕಲರ ಕಷ್ಟಗಳನ್ನೆಲ್ಲಾ ಪರಿಹರಿಸುವನಾಗಿರುವೆ. ಇದನ್ನೆಲ್ಲಾ ನೋಡಿದರೆ ನೀನೇ ಪರಮಶಾಂಭವನಲ್ಲವೆ ? ” ॥೧೩೪॥

ಎಂದು ಹೇಳಿ ಯಮನು ಸುಮ್ಮನಾದನು. ಒಡನೆಯೇ ಅಲ್ಲಿಗೆ ಕೆಲವರು ಬಂದರು. ಅವರು ಚಿತ್ರವರ್ಣದ ಪರ್ವತದಂತೆ, ಕಾದ ಕಬ್ಬಿಣದ ಬರೆಯಿಂದ ಬಣ್ಣಬಣ್ಣವಾದ ದೇಹದಿಂದ ಕೂಡಿದ್ದರು. ಅವರ ಬಾಹುಗಳು ಅರ್ಧ ಸುಟ್ಟುಹೋಗಿ

ಪೂಯಪ್ರವಾಹಸಂವೀತಾಃ ಕುರ್ವಂತೋ ರೋದನಂ ಮುಹುಃ ।
ಪಿಬಂತೋಽಪ್ಯಶ್ರುಸಂವೀತಾಂ ಪೂಯಧಾರಾಂ ಕ್ರಿಮಿಶ್ರಿತಾಂ ॥೧೩೭॥

ತಾನ್‌ದೃಷ್ಟ್ವಾ ಸಭಯಗ್ರಸ್ತೋ ಯಮಃ ಪ್ರಾಹಾತಿವಿಸ್ಮಿತಃ ।
ಚಿತ್ರಗುಪ್ತಂ ವಿಲೋಕ್ಯಾಪಿ ಕೇ ತೇ ವದ ಮಮೇತ್ಯಪಿ ॥೧೩೮॥

ಮಾಘಾಸಿತಚತುರ್ದಶ್ಯಾಮೇತೈರ್ಭುಕ್ತಂ ದುರಾತ್ಮಭಿಃ ।
ಅಶಿವಾರಾಧಕೈರೇತೈರ್ನಾರಾಧಿ ಗಿರಿಜಾಪತಿಃ ॥೧೩೯॥

ನ ಲಿಂಗಂ ಶಿವಪೂಜಾಯಾಮರ್ಚಿತಂ ಬಿಲ್ವಪಲ್ಲವೈಃ ।
ಏತೈಃ ಪಾಪರತೈರ್ದೂತನಿಹತೈಸ್ಸಮುಪಾಗತಂ ॥೧೪೦॥

ಅಶಿವಾಚಾರನಿರತಾಸ್ತೇ ಸರ್ವೇಽಪಿ ಯಮಾಧುನಾ ।
ಪಾತನೀಯಾಃ ಪ್ರಯತ್ನೇನ ತಪ್ತಪೂಯಸರಿದ್ವರೇ ॥೧೪೧॥

ದ್ದುವು. ಕೈಕಾಲುಗಳೂ ಎದೆಯು, ಬಹುಭಾಗವೂ ಸುಟ್ಟುಹೋಗಿದ್ದಿತು. ರಕ್ತ ಧಾರೆಯು ಸುರಿಯುತ್ತಿತ್ತು. ಮೈಯ್ಯೆಲ್ಲೆಲ್ಲಾ ಕೀವು ಹೊರಬೀಳುತ್ತಿತ್ತು. ಅವರು ಆಗಾಗ ಗಟ್ಟಿಯಾಗಿ ಅಳುತ್ತಿದ್ದರು. ಅಳುವಾಗ ಬಂದ ಕಣ್ಣೀರನ್ನೇ ಆಗಾಗ ಕುಡಿಯುತ್ತಿದ್ದರು. ಕೆಲವರು ಹುಳುಗಳಿಂದ ತುಂಬಿದ ಕೀವನ್ನೇ ಪಾನಮಾಡು ತ್ತಿದ್ದರು. ||೧೩೫-೧೩೬-೧೩೭||

ಅಂತಹ ನಾರಕಿಗಳನ್ನು ನೋಡಿ ಯಮನೂ ಹೆದರಿದನು. ಮತ್ತು ಆಶ್ಚರ್ಯ ದಿಂದ ಕೂಡಿ ಚಿತ್ರಗುಪ್ತನನ್ನು ಕುರಿತು "ಇವರು ಯಾರು? ಏತಕ್ಕಾಗಿ ಇಷ್ಟು ಶಿಕ್ಷೆಯನ್ನು ಇವರಿಗೆ ವಿಧಿಸಿರುವೆ?" ಎಂದು ಪ್ರಶ್ನಿಸಿದನು. ಅದಕ್ಕೆ ಚಿತ್ರಗುಪ್ತನು ಹೀಗೆಂದನು—"ಸ್ವಾಮಿಯೇ, ಈ ದುರಾತ್ಮರು ಮಾಘ ಕೃಷ್ಣ ಚತುರ್ದಶಿಯ ದಿನವಾದ ಶಿವರಾತ್ರಿಯಲ್ಲಿ ಶಿವಾರಾಧನೆ ಮಾಡದೆ, ಪುಷ್ಕಲವಾಗಿ ಊಟಮಾಡಿ ದವರು. ||೧೩೮-೧೩೯||

ಮತ್ತು ಇವರು ಎಂದೂ ಬಿಲ್ವದಳಗಳಿಂದ ಈಶ್ವರನ ಲಿಂಗವನ್ನು ಪೂಜಿಸಿದ ವರಲ್ಲ. ಆದ್ದರಿಂದ ಇಂತಹ ಪಾಪಿಷ್ಠರು ನಮ್ಮ ಸೇವಕರಿಂದ ಹೊಡೆಯಲ್ಪಟ್ಟಿದ್ದಾರೆ. ಯಾರು ಈಶ್ವರನ ಸೇವಾಕ್ರಮವನ್ನು ತಿಳಿಯದೆ, ಶಿವಧರ್ಮಗಳನ್ನು ದೂರಮಾಡಿ ರುವರೋ ಅವರನ್ನೆಲ್ಲಾ ಪ್ರಯತ್ನಪುರಸ್ಸರವಾಗಿ ಕಾದಕೀವಿನ ನದಿಯಲ್ಲಿ ಮುಳುಗಿ ಸಬೇಕು. ||೧೪೦-೧೪೧||

ಸಂತಪ್ತಶೋಣಿತಾಂಭೋಧಿರೇತದರ್ಥಂ ವಿನಿರ್ಮಿತಃ ।
ಸಂತಪ್ತಮೂತ್ರಕೂಪಾಶ್ಚ ದೀರ್ಘಿಕಾಶ್ಚ ವಿನಿರ್ಮಿತಾಃ ॥೧೪೨॥

ಸಂತಪ್ತಮಲವಾಹಿನ್ಯಸ್ತದರ್ಥಂ ಕಿಂ ನ ನಿರ್ಮಿತಾಃ ।
ಸಂತಪ್ತಶಸ್ತ್ರಗಿರಯಸ್ತತ್ರಾಪಾರವಿನಿರ್ಮಿತಾಃ ॥೧೪೩॥

ಕಲ್ಪಾವಸಾನೇಽಪಿ ಚ ಮುಕ್ತಿರೇಷಾಂ
ದೋಷಾಕರಾಣಾಮಶಿವಾರ್ಚಕಾನಾಂ ।
ಸೃಷ್ಟಿಶ್ಚ ತಾವನ್ನರಕಾರ್ಣವಾನಾಂ
ಪ್ರಪೂರಣಾಯೇತಿ ಮತಿರ್ಮನ್ಯೈಷಾ ॥೧೪೪॥

ಕಷ್ಟಾನ್ಯಪಾರಾಣಿ ಭವಂತಿ ತೇಷಾಂ
ಯೇಷಾಂ ಪ್ರದೋಷೇ ನ ಶಿವಾರ್ಚನೇಚ್ಛಾ ।
ತತ್ರಾಪಿ ಭೂತಾ ಯದಿ ಸಾ ಸಿತಾನ್ಯಾ
ಮಾಘೀ ಸಪಾತಾಪಿ ಶಿವೋಡುಯುಕ್ತಾ ॥೧೪೫॥

ಕಾದ ರಕ್ತಸಮುದ್ರವೂ, ಸುಡುವ ಮೂತ್ರದ ಕೊಳಗಳೂ, ಕುದಿಯುತ್ತಾ ಹರಿಯುವ ಮಲರಾಶಿಯ ಪ್ರವಾಹವೂ, ತಪ್ತವಾದ ಶಸ್ತ್ರಗಳ ರಾಶಿಯೂ, ಇಂತಹ ವರನ್ನು ಶಿಕ್ಷಿಸುವುದಕ್ಕಾಗಿಯೇ ಅಲ್ಲವೇ ಈ ನರಕದಲ್ಲಿ ನಾವು ಸೃಷ್ಟಿಮಾಡಿರುವುದು ! ||೧೪೨-೧೪೩||

ಇವರಿಗೆ ಕಲ್ಪವು ಮುಳುಗಿದರೂ ಮುಕ್ತಿಯು ದೊರಕಲಾರದು. ಈ ನರಕಲೋಕಗಳ ಸೃಷ್ಟಿಯಾದರೋ, ಹೀಗೆ ಶಿವದ್ವೇಷಿಗಳಾಗಿ, ದೋಷಾಕರರೆನಿಸಿದ ಪಾಪಿಗಳನ್ನು ಶಿಕ್ಷಿಸುವುದಕ್ಕಾಗಿಯೇ ಎಂದು ನಾನು ತಿಳಿದಿರುವೆನು. ಎಂದಿಗೂ ಇವರು ಈ ನರಕದುಃಖದಿಂದ ತಪ್ಪಿಸಿಕೊಳ್ಳಲಾರರು. ||೧೪೪||

ಪ್ರತಿ ಪ್ರದೋಷಕಾಲದಲ್ಲಿಯೂ, ಅದರಲ್ಲಿಯೂ ಮಾಘಮಾಸದ ಮಹಾ ಶಿವರಾತ್ರಿಯ ದಿನ ಅಂದರೆ ವ್ಯತೀಪಾತ ಮತ್ತು ಶಿವದೇವತಾಕವಾದ ನಕ್ಷತ್ರದಿಂದ ಕೂಡಿರುವ ಮಾಘ ಕೃಷ್ಣಚತುರ್ದಶಿಯ ದಿನ ಯಾರು ಶಿವಾರಾಧನೆ ಮಾಡುವುದಿಲ್ಲವೋ ಅಂತಹವರಿಗೆ ಕಷ್ಟಪರಂಪರೆಗಳು ಒದಗುವುದು ಸಹಜವೇ ಅಲ್ಲವೇ ! ||೧೪೫||

ಸಾ ಮಾನ್ಯಾ ವಾ ಯಾಪಿ ಭೂತಾಸಿತಾನ್ಯಾ
ಮಾಘೀ ತಸ್ಯಾಂ ಯೋಪಿ ಮೋಹೇನ ಭುಂಕ್ತೇ।
ತಸ್ಯಾಪಾರಾ ಯಾತನಾ ಸ್ಯಾದವಶ್ಯಂ
ಸತ್ಯಂ ಸತ್ಯಂ ವಿಶ್ವನಾಥೇ ಶಪಾಮಿ ॥೧೪೬॥

ಇತಿ ತದ್ವಚನಂ ಶ್ರುತ್ವಾ ಸ ಯಮಃ ಪ್ರಾಹ ಕಿಂಕರಾನ್।
ನೇಯಾಸ್ತೇ ತ್ವರಯಾ ದೂರೇಷ್ವಘೋರೇಷು ಪತಂತು ತೇ ॥೧೪೭॥

ಇತಿ ತದ್ವಚನಂ ಶ್ರುತ್ವಾ ಕ್ರೂರಾಸ್ತೇ ಯಮಕಿಂಕರಾಃ।
ನೀತ್ವಾ ತಾನ್ಪಾತಯಾಮಾಸುಸ್ತಪ್ತಾಮೇಧ್ಯಹ್ರದಾದಿಷು ॥೧೪೮॥

ತತಃ ಪರಂ ತತ್ರ ಭೃಗುಃ ಸಮಾಗತೋ
ಭೂತವ್ರತಾಚಾರವಿಶುದ್ಧಚಿತ್ತಃ।
ವಿಭೂತಿಪೂತೋ ಭಸಿತತ್ರಿಪುಂಡ್ರ
ರುದ್ರಾಕ್ಷಮಾಲಾಕಲಿತಃ ಸಹಾರಃ ॥೧೪೯॥

ಮಾಘಮಾಸದ ಕೃಷ್ಣಚತುರ್ದಶೀ ತಿಥಿಯು ಈಶ್ವರಪೂಜೆಗೆ ಸರ್ವಶ್ರೇಷ್ಠವಾದುದು. ಅಂತಹ ದಿನದಲ್ಲಿಯೂ ಯಾರು ಶಿವಪ್ರೀತ್ಯರ್ಥವಾಗಿ ಉಪವಾಸಮಾಡಿ, ಈಶ್ವರಾರಾಧನೆಮಾಡದೆ ಅಜ್ಞಾನದಿಂದ ಭೋಜನಮಾಡುವರೋ, ಅಂತಹವರಿಗೆ ಸತ್ಯವಾಗಿಯೂ ಇಂತಹ ಅಪಾರವಾದ ನರಕಯಾತನೆಗಳು ಸಂಭವಿಸುವುವು. ವಿಶ್ವನಾಥನ ಸಾಕ್ಷಿಯಾಗಿ ಈ ಮಾತನ್ನು ನಾನು ಹೇಳುತ್ತಿರುವೆನು." ॥೧೪೬॥

ಈ ಚಿತ್ರಗುಪ್ತನ ಮಾತುಗಳನ್ನು ಕೇಳಿ, ಯಮನು ಒಡನೆಯೇ ಸೇವಕರನ್ನು ಕರೆದು, "ಇವರನ್ನೆಲ್ಲಾ ಅಘೋರವೆನಿಸಿದ ನರಕದಲ್ಲಿ ಎಸೆದುಬಿಡಿ" ಎಂದು ಆಜ್ಞಾಪಿಸಿದನು. ಅವನ ಅಪ್ಪಣೆಯಂತೆ ಕ್ರೂರರಾದ ಆ ಸೇವಕರು ಅವರನ್ನು ಎಳೆದುಕೊಂಡು ಹೋಗಿ ಕಾದು ಕುದಿಯುತ್ತಿದ್ದ ಮಲಮೂತ್ರಕೊಳಗಳಲ್ಲಿ ಎಸೆದು ಬಿಟ್ಟರು. ॥೧೪೭-೧೪೮॥

ಅಷ್ಟರಲ್ಲಿಯೇ ಶಿವರಾತ್ರಿಯ ವ್ರತವಿಧಾನವನ್ನು ಚೆನ್ನಾಗಿ ತಿಳಿದುಕೊಂಡಿರುವ ರುದ್ರಾಕ್ಷ ಭಸ್ಮ ತ್ರಿಪುಂಡ್ರಾದಿಗಳಿಂದ ಅಲಂಕೃತನಾಗಿ ಪವಿತ್ರನೆನಿಸಿರುವ ಈಶ್ವರಾರಾಧಕನಾದ ಭೃಗುಮಹರ್ಷಿಯು ಅಲ್ಲಿಗೆ ಬಂದನು. ॥೧೪೯॥

ತಂ ದೃಷ್ಟ್ವಾ ಶಾಂಭವಶ್ರೇಷ್ಠಂ ಭೃಗುಂ ಭೂತಿವಿಭೂಷಿತಃ ।
ರುದ್ರಾಕ್ಷಮಾಲಾಭರಣಃ ಪ್ರಣತಸ್ಸ ಯಮೋ ಮುದಾ ॥೧೫೦॥

ಶಿವಶಂಕರ ಪಾರ್ವತೀಪತೇ
ಗಿರಿಶೇಶಾನ ಮಹೇಶ ಪಾಹಿ ಮಾಂ ।
ಇತಿ ನಾಮ ಸುಧಾರಸಂ ಮುಹುಃ
ಕಲಯಂತಂ ತಮುವಾಚ ಚಾರು ಕಾಲಃ ॥೧೫೧॥

ಭೃಗೋ ತತ್ತ್ವವಿದಾಂ ಶ್ರೇಷ್ಠ ವೇದವೇದಾಂತಪಾರಗ ।
ಶಿವಧ್ಯಾನಸುಧಾಪಾನಪೀನಮಾನಸ ತೇ ನಮಃ ॥೧೫೨॥

ಧನ್ಯಸ್ತ್ವದಭ್ಯಾಗಮನೇನ ನೂನಂ
ಸ್ಥಲಂ ಪವಿತ್ರಂ ಕೃತಮೇತದದ್ಯ ।
ಗಾತ್ರಂ ಪವಿತ್ರಂ ಮಮ ಜಾತಮೇವ
ಶ್ರೋತ್ರಂ ಸನೇತ್ರಂ ಮಮ ತೃಪ್ತಮದ್ಯ ॥೧೫೩॥

ಹಾಗೆ ಬಂದ ಈಶ್ವರಪೂಜಕನಾದ ಭೃಗುಮಹರ್ಷಿಯನ್ನು ನೋಡಿ, ಭಸ್ಮರುದ್ರಾಕ್ಷಧಾರಿಯಾಗಿದ್ದ ಯಮನು ನಮಸ್ಕಾರಾದಿಗಳಿಂದ ಮಹರ್ಷಿಯನ್ನು ಉಪಚರಿಸಿದನು. ಭೃಗುಮಹರ್ಷಿಯು ಆಗ "ಗಿರಿಗುಹವಾಸಿಯೂ, ದೇವಾದಿ ದೇವನೂ, ಶಿವಶಂಕರನೂ, ಪಾರ್ವತೀಪತಿಯೂ ಆದ ಮಹಾದೇವನು ನನ್ನನ್ನು ಕಾಪಾಡಲಿ" ಎಂದು ಈಶ್ವರನನ್ನೇ ಧ್ಯಾನಿಸುತ್ತಿದ್ದನು. ಹೀಗೆ ಸದಾ ಶಿವಧ್ಯಾನ ಪರನಾದ ಋಷಿಯ ಧ್ಯಾನಸುಧೆಯನ್ನು ಕೇಳುತ್ತಾ, ಯಮಧರ್ಮರಾಯನು ಸಂತೋಷದಿಂದ ಹೀಗೆ ಋಷಿಯೊಡನೆ ಮಾತನಾಡಿದನು. ||೧೫೦-೧೫೧||

"ವೇದವೇದಾಂತಪಾರಗನೂ, ಮಹಾತತ್ತ್ವಜ್ಞಾನಿಯೂ, ಶಿವಧ್ಯಾನಾಮೃತ ದಿಂದ ಪವಿತ್ರವಾದ ಚಿತ್ತವುಳ್ಳವನೂ ಆದ ಮಹರ್ಷಿಯೇ ನಿನಗೆ ನಮಸ್ಕಾರ.||೧೫೨||

ಮಹರ್ಷಿಯೇ, ನಿನ್ನ ಆಗಮನದಿಂದ ನಾನು ಧನ್ಯನಾದೆನು. ನನ್ನ ಈ ಲೋಕವೆಲ್ಲಾ ಪವಿತ್ರವಾಯಿತು. ನಿನ್ನ ದರ್ಶನದಿಂದ ನನ್ನ ಕಣ್ಣು, ಕಿವಿ, ಕಾಲು ಗಳೆಲ್ಲವೂ ಧನ್ಯವೆನಿಸಿದುವು. ನಿನ್ನನ್ನು ನೋಡುವುದರಿಂದ ನನಗೆ ಅತಿಶಯವಾದ ತೃಪ್ತಿಯುಂಟಾಗಿರುವುದು. ||೧೫೩||

ಅಪಾರಪುಣ್ಯಾಮರಭೂರುಹಾಸ್ತೇ
ಫಲೋನ್ಮುಖಾ ಏವ ನ ಸಂಶಯೋತ್ರ ।
ಯತಶ್ಶಿವಾಚಾರರತಸ್ಯ ತಾವ
ತ್ತವಾಧುನಾದ್ಯಾಗಮನಪ್ರಸಕ್ತಂ ॥೧೫೪॥

ಅತಃ ಪರಂ ತಾವದಿದಂ ವಿಚಾರ್ಯ
ಧರ್ಮಸ್ವರೂಪಂ ವದ ಸಾವಧಾನಂ ।
ನಿರ್ಮಥ್ಯ ವೇದಾರ್ಣವಮುದ್ಧೃತೋರ್ಣಂ
ಸ್ಮೃತ್ವಾಪ್ಯಪರ್ಣಾರಮಣಂ ಕ್ಷಣೇನ ॥೧೫೫॥

ಧರ್ಮಾಧರ್ಮಜ್ಞಾನಶೂನ್ಯಸ್ಯ ಲೋಕೇ
ನಾನಂದೇಶೋಪೀತಿಮನ್ಯೇ ಕಿಮನ್ಯೈಃ ।
ಧರ್ಮೈಃ ಕೃತ್ಯಂ ಯೇನ ಧರ್ಮೇಣ ಮುಕ್ತಿ
ರ್ಧರ್ಮಂ ತಂ ಮೇ ಸಾವಧಾನಂ ವದಾಶು ॥೧೫೬॥

ಸರ್ವದಾ ಈಶ್ವರತೃಪ್ತಿಕರಗಳಾದ ಧರ್ಮದಲ್ಲಿಯೇ ನಡೆಯುತ್ತಿರುವ ನಿನ್ನ ಆಗಮನದ ಫಲವಾಗಿ, ನನ್ನ ಸುಕೃತವೆಂಬ ಕಲ್ಪವೃಕ್ಷಗಳು ನನಗೆ ಫಲಕೊಡಲು ಆರಂಭಿಸುವುವು. ಇದರಲ್ಲಿ ಸಂಶಯವಿಲ್ಲ. ನನ್ನ ಇಷ್ಟಾರ್ಥಗಳೆಲ್ಲಾ ಇನ್ನು ನೆರವೇರುವುವೆಂದು ನಾನು ನಂಬಿದ್ದೇನೆ. ॥೧೫೪॥

ಮಹರ್ಷಿಯೇ, ಈಗ ನನಗೆ ಶುದ್ಧಧರ್ಮಸ್ವರೂಪವನ್ನು ವಿವರಿಸುವವನಾಗು. ಅದು ವೇದಾರ್ಥಸಾರವೂ, ಮಹೇಶ್ವರಾರಾಧನೆಗೆ ಸಾಧಕವೂ ಆಗಿರುವುದು. ಅಂತಹ ಧರ್ಮಸ್ವರೂಪವನ್ನು ಶಿವನಾಮೋಚ್ಚಾರಣೆಯಿಂದ ಕೂಡಿ ವಿವರಿಸುವವನಾಗು. ॥೧೫೫॥

ಲೋಕದಲ್ಲಿ ಧರ್ಮ ಮತ್ತು ಅಧರ್ಮಗಳ ಸ್ವರೂಪವನ್ನು ತಿಳಿಯದವನಿಗೆ ಮುಕ್ತಿಯಲ್ಲಿ ದೊರಕುವ ಆನಂದವು ದೊರೆಯುವುದಿಲ್ಲವೆಂದೇ ಹೇಳುವರು. ಯಾವ ಧರ್ಮದಿಂದ ಸಕಲ ಕೆಲಸಗಳೂ ನಡೆಯುತ್ತವೆಯೋ ಮತ್ತು ಯಾವುದಿಲ್ಲದಿದ್ದರೆ ಮುಕ್ತಿಯು ಅತ್ಯಂತ ದುರ್ಲಭವೆನಿಸುವುದೋ ಅಂತಹ ಧರ್ಮದ ಸ್ವರೂಪವನ್ನು ನನಗೆ ಸಾವಧಾನಚಿತ್ತನಾಗಿ ತಿಳಿಸುವವನಾಗು." ॥೧೫೬॥

ಇತಿ ತದ್ವಚನಂ ಶ್ರುತ್ವಾ ಸ ಭೃಗುಶ್ಶಾಂಭವೋತ್ತಮಃ ।
ಪ್ರಾಹಾತ್ಯುಚ್ಚೈರ್ಮಹಾದೇವ ಮಹಾದೇವೇತಿ ಸಂವದನ್ ॥೧೫೭॥

॥ ಭೃಗುರುವಾಚ ॥

ಸಂತ್ಯೇವಾನ್ಯೇ ಕಾಲಸಾಮಾನ್ಯಧರ್ಮಾಃ
ಕಿಂ ತೈರ್ಧರ್ಮೈರ್ಧರ್ಮರತ್ನಂ ವದಾಮಿ ।
ತದ್ರತ್ನಂ ತೇ ಕಂಠಭೂಷಾಸ್ತು ನಿತ್ಯಂ
ತೇನೈವೋಮಾಕಾಂತಕಾಂತಪ್ರಸಾದಃ ॥೧೫೮॥

ಶಿವಧರ್ಮಸಮಾನಧರ್ಮಮನ್ಯಂ
ನ ವಿಜಾನಾಮಿ ನ ವೇದ ಬೋಧಿತೋಽಪಿ ।
ಸ ತು ಧರ್ಮವರಸ್ಸ ಏವ ಧರ್ಮಃ
ಸ ಸುರಾಣಾಮಭಿಸೇವನೀಯ ಏವ ॥೧೫೯॥

ಎಂದು ಕೇಳಿಕೊಂಡ ಯಮನ ಮಾತಿನಂತೆ, ಶಂಕರಕಿಂಕರನೆನಿಸಿದ ಭೃಗುಮಹರ್ಷಿಯು ಮಹಾದೇವ, ಮಹಾದೇವ ಎಂದು ಶಂಕರನನ್ನು ಸ್ಮರಿಸುತ್ತಾ ಹೀಗೆ ಉಪದೇಶಮಾಡಿದನು " ಯಮಧರ್ಮನೇ, ಲೋಕದಲ್ಲಿ ಕಾಲೋಚಿತವಾಗಿ ಎಷ್ಟೋ ಧರ್ಮಗಳು ಅವತರಿಸುವುವು. ಹಾಗೆಯೇ ನಷ್ಟವನ್ನೂ ಹೊಂದುವುವು. ಅಂತಹ ಧರ್ಮಸ್ವರೂಪದಿಂದ ನಾವು ಉತ್ತಮ ಧರ್ಮವೊಂದನ್ನು ಕಂಡುಹಿಡಿಯಲಾಗುವುದಿಲ್ಲ. ಎಲ್ಲಕ್ಕೂ ಉತ್ತಮವಾದ ಒಂದು ಧರ್ಮವನ್ನು ಈಗ ನಿನಗೆ ತಿಳಿಸುವೆನು. ಅದನ್ನು ನೀನು ಸರ್ವದಾ ಕಂಠಾಭರಣದಂತೆ ಧರಿಸಿಕೊಂಡಿರು. ಆದರಿಂದ ಉಮಾಪತಿಯ ಸದನುಗ್ರಹವು ನಿನಗೆ ಸ್ಥಿರವಾಗಿ ಲಭಿಸುವುದು. ॥೧೫೭-೧೫೮॥

ಶಿವಧರ್ಮಕ್ಕೆ ಸಮಾನವಾದ ಮತ್ತೊಂದು ಧರ್ಮವನ್ನೇ ನಾನು ಕಾಣೆನು. ವೇದಗಳಲ್ಲಿ ಎಷ್ಟೋ ಧರ್ಮಸ್ವರೂಪಗಳು ಉಕ್ತವಾಗಿವೆ. ಆದರೇನು ? ಶಿವಧರ್ಮವೇ ಧರ್ಮಶ್ರೇಷ್ಠವೆಂದೂ, ದೇವತೆಗಳಿಗೂ ಅದು ಪ್ರಿಯವಾಗಿದೆಯೆಂದೂ ನಾನು ಅರಿತಿರುವೆನು. ॥೧೫೯॥

ಸುರೈರಪಾರೈಶ್ಶಿವಧರ್ಮಧರ್ಮೋ
ನಾರಾಯಣಾದ್ಯೈಃ ಕೃತ ಏವ ಸರ್ವೈಃ ।
ಮುನೀಶ್ವರೈರಪ್ಯುರಗೇಶ್ವರೈಶ್ಚ
ಸಿದ್ಧೈಶ್ಚ ಗಂಧರ್ವವರೈಶ್ಚ ನಿತ್ಯಂ ॥೧೬೦॥

ಯಂ ಸರ್ವದೇವೋತ್ತಮಮಾಮನಂತಿ
ಸೋಮಾವತಂಸಂ ಗಿರಿಜಾವೃತಾಂಸಂ ।
ತಂ ದಾರಿತಾಪಾರನೃಸಿಂಹಮಾಂಸಂ
ವಂದೇ ಶಿವಾಮಾನಸರಾಜಹಂಸಂ ॥೧೬೧॥

ಯತ್ಪಾದುಕಾರಾಧಕಸೇವಕಾನಾಂ
ಪಾದಾರವಿಂದಾನ್ಯರವಿಂದಜಾತಃ ।
ಗೋವಿಂದವೃಂದಾರಕವೃಂದಮೌಲಿ
ಮೂಲಾನಿ ಚಕ್ರೇ ತಮಹೋ ಭಜಾಮಿ ॥೧೬೨॥

ಈ ಶಿವಧರ್ಮವನ್ನೇ ಸಕಲ ದೇವತೆಗಳೂ, ನಾರಾಯಣನೇ ಮೊದಲಾದ ದೇವಶ್ರೇಷ್ಠರೂ, ಮಹರ್ಷಿಗಳೂ, ಉರಗಸಿದ್ಧಸಾಧ್ಯಗಂಧರ್ವರೂ ಸಹ ನಿತ್ಯದಲ್ಲಿಯೂ ಅನುಷ್ಠಾನಮಾಡುತ್ತಿರುವರು. ॥೧೬೦॥

ಚಂದ್ರನನ್ನೇ ಅಲಂಕಾರವಸ್ತುವನ್ನಾಗಿ ಮಾಡಿಕೊಂಡು, ಪಾರ್ವತಿಯಿಂದ ಆಲಿಂಗಿತನಾಗಿರುವ ಮಹಾದೇವನನ್ನೇ ಸಕಲ ದೇವತೆಗಳೂ ದೇವಶ್ರೇಷ್ಠನೆಂದು ನಂಬಿರುವರು. ನರಸಿಂಹನಾಗಿದ್ದ ವಿಷ್ಣುವಿನ ಗರ್ವವನ್ನು ಶರಭಾವತಾರದಿಂದ ಅಡಗಿಸಿ, ಪಾರ್ವತಿಯ ಮನಸ್ಸೆಂಬ ಮಾನಸಸರೋವರಕ್ಕೆ ರಾಜಹಂಸದಂತೆ ಅಲಂಕಾರವಸ್ತುವಾಗಿರುವ ಮಹೇಶ್ವರನನ್ನು ನಾನು ಸರ್ವದಾ ಧ್ಯಾನಮಾಡುವೆನು. ॥೧೬೧॥

ಆ ಪರಶಿವನ ಪರಮಭಕ್ತರ ಪಾದವನ್ನು ಬ್ರಹ್ಮನು, ವಿಷ್ಣುವೇ ಮೊದಲಾದ ಸಕಲ ದೇವತಾ ವರ್ಗಕ್ಕೂ ಪೂಜ್ಯವಸ್ತುವನ್ನಾಗಿ ಮಾಡಿ, ಆ ಮೂಲಕ ಶಿವನ ಪ್ರೀತಿಯನ್ನು ಸಂಪಾದಿಸಲು ಯತ್ನಿಸುವನು. ಇಂತಹ ಮಹಾಮಹಿಮನಾದ ಪರಮೇಶ್ವರನನ್ನು ನಾನು ಸರ್ವದಾ ಭಜಿಸುವೆನು. ॥೧೬೨॥

ಯಸ್ಯೈಶ್ವರ್ಯಂ ಮಾನಗಮ್ಯಂ ನ ನೂನಂ
ಯಂ ವೇದಾಂತಾ ನೈವ ಜಾನಂತಿ ಸರ್ವೇ ।
ತಂ ದೇವೇಶಂ ಪೂಜಯಾಮಿ ಪ್ರಭಾತೇ
ಮಧ್ಯಾಹ್ನೇ ವಾ ಸಾಯಮಭ್ಯಂತರೇ ವಾ ॥೧೬೩॥

ಯಲ್ಲಿಂಗಾಗ್ರಾದಿಂದಿರಾಕಾಂತಮುಖ್ಯಾಃ
ಸರ್ವೇ ದೇವಾಸ್ತಾವದುತ್ಪತ್ತಿಮಾಪುಃ ।
ತಂ ತ್ಯಕ್ತ್ವಾನ್ಯಂ ಕಂ ವ್ರಜಾಮಃ ಶರಣ್ಯಂ
ತಂ ದೇವಾನಾಮಗ್ರಗಣ್ಯಂ ಭಜಾಮಿ ॥೧೬೪॥

ಯತ್ಪಾದಾಂಗುಲ್ಯಗ್ರರೇಖಾಭಿಜಾತಂ
ಚಿತ್ರಂ ವಿಷ್ಣೋರ್ಭೂಷಣಂ ತಂ ವರೇಣ್ಯಂ ।
ವಂದೇ ಗೌರೀಕಾಂತಮೇಕಂ ನಿತಾಂತಂ
ಸ್ವಾಂತೇ ಶಾಂತೇ ಸಂತತಂ ಸಂವಸಂತಂ ॥೧೬೫॥

ಆ ಪರಮೇಶ್ವರನ ಐಶ್ವರ್ಯವನ್ನು ಅಂದರೆ ಅವನ ಲೀಲಾವಿಭೂತಿಯನ್ನು ನಿಜವಾಗಿಯೂ ಇಷ್ಟೇ ಎಂದು ಹೇಳಲು ಸಾಧ್ಯವಿಲ್ಲ. ಸಕಲ ಉಪನಿಷತ್ತುಗಳೂ ಸಹ ಈಶ್ವರನ ನಿಜಸ್ವರೂಪವನ್ನು ತಿಳಿಯಲಾರದವುಗಳಾಗಿವೆ. ಅಂತಹ ದೇವದೇವನನ್ನು ನಾನು ಪ್ರಾತರ್ಮಧ್ಯಾಹ್ನ ಸಾಯಂಕಾಲಗಳಲ್ಲಿ ತಪ್ಪದೆ ಪೂಜಿಸುವೆನು. ॥೧೬೩॥

ಯಾವ ಪರಶಿವನ ಲಿಂಗಾಗ್ರದಿಂದಲೇ ಈ ವಿಷ್ಣುವೇ ಮೊದಲಾದ ಸಕಲ ದೇವತೆಗಳೂ ಆವಿರ್ಭವಿಸಿರುವರೋ, ಅಂತಹ ದೇವದೇವನನ್ನು ಬಿಟ್ಟು ನಾವು ಮತ್ತಾರನ್ನು ಶರಣುಹೊಂದೋಣ? ದೇವದೇವನಾದ ಮಹೇಶ್ವರನನ್ನು ಸರ್ವದಾ ಧ್ಯಾನಿಸುವುದೇ ಮುಖ್ಯವಾದ ಶಿವಧರ್ಮವಲ್ಲವೆ! ॥೧೬೪॥

ವಿಷ್ಣುವಿನ ಭೂಷಣಾದಿಗಳು, (ಚಕ್ರವೇ ಮೊದಲಾದುವುಗಳು) ಈಶ್ವರನ ಪಾದಾಂಗುಷ್ಠದಿಂದ ಬರೆದ ಚಕ್ರರೂಪವಾದ ರೇಖಾವಿನ್ಯಾಸವೇ ಅಲ್ಲವೇ? ಅಂತಹ ಬಲಿಷ್ಠವಾದ ಚಕ್ರವನ್ನು ವಿಷ್ಣುವಿಗೆ ಲೀಲಾಜಾಲವಾಗಿ ಒದಗಿಸಿಕೊಟ್ಟ ಗೌರೀಪತಿಯೆಂದು ಮೆರೆಯುವ ಮತ್ತು ಶಾಂತಮನಸ್ಕರಿಗೆ ಸದಾ ಧ್ಯೇಯವಸ್ತುವಾಗಿರುವ ಮಹಾದೇವನನ್ನು ನಾನು ಸರ್ವದಾ ನಮಸ್ಕರಿಸುವೆನು. ॥೧೬೫॥

ನ ಭಜಾಮಿ ಶಿವಾನ್ಯಮನ್ಯವಾರ್ತಾಂ
ನ ಕರೋಮ್ಯೇವ ನ ಧೀರಹಾರಕಂಠಃ ।
ಕಂಕಪರ್ದಮಾಲಿಕಾಸನೋತೋ
ಭವತಿ ಪ್ರೀತವಿಶಿಷ್ಟಮಾನಸೋಽಪಿ ॥೧೬೬॥

ನ ಸ್ವಪ್ನೇಽಪಿ ಶಿವಾನ್ಯನಾಮಕಥನೇ ಪ್ರೀತಿಸ್ಸುಧಾಧಾರಯಾ
ಪ್ರೀತಃ ಕಾಂಜಿಕಮಿಚ್ಛತೀತಿ ಕುಮತಿಃ ಕೋ ವಾ ಜಗನ್ಮಂಡಲೇ ।
ನಾ ಸ್ಮೋಽಪೇಂದ್ರವಿರಿಂಚಿನಾಮಕಥನೇ ತತ್ಪೂಜನೇ ವಾ ಮತಿಃ
ಸ್ವಪ್ನೇಽಪೀತಿ ಶಪಾಮಿ ಕಾಲಿಶಿವಯೋಃ ಪಾದಾರವಿಂದೇ ಮುದಾ ॥೧೬೭॥

ಪೂಜ್ಯಶ್ಶಂಕರ ಏವ ಶಂಕರಕಥಾ ಶ್ರಾವ್ಯಾ ಸದಾ ಶ್ರೂಯತೇ
ಶ್ರಾವ್ಯಂ ಸಾಧನಮೇವ ಸಾಧನವರೈರ್ಬಿಲ್ವಾದಿಭಿಸ್ಸಾಧ್ಯತೇ ।
ನೇಯಂ ಸ್ಯಾದನಿಶಂ ತಥಾಪಿ ಸತತಂ ತತ್ತುಂಗಲಿಂಗಾರ್ಚನೈ
ಶ್ಯಾಂಗಾರಾಧನಮೇವ ಮೇ ಧನಮಿತಿ ಜ್ಞೇಯಂ ನಿಧಾನಂ ಪರಂ ॥೧೬೮॥

ಅನೇಕ ದೇವತೆಗಳಿಂದ ನನ್ನ ಇಷ್ಟಾರ್ಥವನ್ನು ಪಡೆದರೂ ಈಶ್ವರನನ್ನು ಬಿಟ್ಟು ಮತ್ತೆ ಯಾವ ದೇವತೆಯನ್ನೂ ನಾನು ಸೇವಿಸುವುದಿಲ್ಲ. ಧೀರನಾದ ಈಶ್ವರ ಭಕ್ತನನ್ನು ಬಿಟ್ಟು ಮತ್ತಾರನ್ನೂ ಹೊಗಳುವುದಿಲ್ಲ. ಸರ್ವವ್ಯಾಪಕನಾಗಿ ಸರ್ವದಾ ದೇವಗಂಗೆಯನ್ನು ಜಡೆಯಲ್ಲಿ ಧರಿಸಿಕೊಂಡಿರುವ ಮಹಾದೇವನೊಬ್ಬನನ್ನೇ ನಾನು ಧ್ಯಾನಮಾಡುವೆನು. ॥೧೬೬॥

ಅಮೃತಪಾನಮಾಡಿದವನು ಎಂದಾದರೂ ಗಂಜಿಯನ್ನು ಕುಡಿಯಲು ಬಯಸುವನೇ ? ಅದರಂತೆ ಶಿವನಾಮಸ್ಮರಣೆಯಿಂದ ತೃಪ್ತಿಹೊಂದಿದ ನಾನು ಬ್ರಹ್ಮೋಪೇಂದ್ರಾದಿ ಇತರ ದೇವಶ್ರೇಷ್ಠರ ನಾಮಗಳನ್ನಾಗಲಿ, ಪೂಜೆಯನ್ನಾಗಲಿ ಸ್ವಪ್ನದಲ್ಲಿಯೂ ಮಾಡುವುದಿಲ್ಲವೆಂದು ಪಾರ್ವತೀ ಪರಶಿವರ ಪಾದಸಾಕ್ಷಿಕವಾಗಿ ಪ್ರಮಾಣಮಾಡುವೆನು. ॥೧೬೭॥

ಶಂಕರನನ್ನೇ ಸರ್ವದಾ ಪೂಜಿಸಬೇಕು. ಶಂಕರಚರಿತ್ರೆಗಳನ್ನು ತಪ್ಪದೆ ಕೇಳಬೇಕು. ಪೂಜಾಸಾಧನಗಳಾದ ಬಿಲ್ವಾದಿಗಳಿಂದಲೇ ಶಂಕರನನ್ನು ಆರಾಧಿಸಬೇಕು. ಸರ್ವದಾ ಲಿಂಗಾರ್ಚನೆಯಲ್ಲಿ ಮನಸ್ಸಿಟ್ಟಿರಬೇಕು. ಈಶ್ವರಭಕ್ತರನ್ನು ತೃಪ್ತಿಗೊಳಿ

ಭಸ್ಮೋದ್ಧೂಲನಪೂರ್ವಕಂ ಸಿತಲಸದ್ಭೂತ್ಯಾ ತ್ರಿಪುಂಡ್ರಂ ಮುಹು
ರ್ಧೃತ್ವಾ ಭಾಲತಲೇ ಗಲೇ ಕರತಲೇ ರುದ್ರಾಕ್ಷಮಾಲಾಮಪಿ ।
ತಂ ಪಂಚಾಕ್ಷರಮಂತ್ರಮೇವ ಸತತಂ ಜಪ್ತ್ವಾ ಶಿವಾರಾಧನಂ
ಕೃತ್ವಾ ಬಿಲ್ವದಲೈರ್ವಸಾಮಿ ಭುವನೇ ಜೀವಾಮಿ ಯಾವದ್ಯಮ ॥೧೬೯॥

ಯಲ್ಲೋಚನಾಂಚನವಿಲೋಚನಗಾತ್ರಪಾತ್ರಂ
ತಾವತ್ಪವಿತ್ರಮಪಿ ಮುಕ್ತಿಕಲತ್ರಗಾತ್ರಂ ।
ತಂ ಚಿತ್ರಭಾನುನಯನಂ ಶರಣಂ ಭಜಾಮೋ
ಮಾಹೇಶ್ವರಾಮರತರುಂ ಹರಮೇಕಮೇವ ॥೧೭೦॥

ಯಾ ಜಿಹ್ವಾ ಮಧುರಾಣಿ ವಾಂಛತಿ ಮುಹುಸ್ಸಾ ಸರ್ವದಾ ನಾರ್ಮದಂ
ಶರ್ವಂ ವಾಂಛತಿ ವಕ್ತುಮಿಚ್ಛತಿ ಪರಂ ತನ್ನಾಮಮಾತ್ರಂ ಪರಂ ।
ಕಿಂ ಚಿತ್ರಂ ತದಿದಂ ಸುಧಾರಸಸರಿತ್ಪಾನೋದ್ಯತಾ ಸಾ ಕಥಂ
ವಾಂಛಂತ್ಯತಿತುಚ್ಛಕಾಂಜಿಕರಸಂ ಸಾ ಸ್ವಸ್ವಭಾವಾದಪಿ ॥೧೭೧॥

ಸಬೇಕು. ಈ ರೀತಿ ಸರ್ವದಾ ಶಂಕರನ ಸೇವೆಮಾಡುವುದೇ ತನಗೆ ಒಂದು ದೊಡ್ಡ ನಿಧಿಯೆಂದು ತಿಳಿಯಬೇಕು. ॥೧೬೮॥

ಪ್ರತಿಯೊಬ್ಬನೂ ಭಸ್ಮದಿಂದ ದೇಹವನ್ನು ಲೇಪಿಸಿಕೊಳ್ಳಬೇಕು. ತ್ರಿಪುಂಡ್ರ ಧಾರಣೆಮಾಡಿಕೊಳ್ಳಬೇಕು. ಹಣೆಯಮೇಲೆ, ಕತ್ತಿನಲ್ಲಿ, ಕೈಗಳಿಗೆ ರುದ್ರಾಕ್ಷಿಯ ಸರವನ್ನು ಧರಿಸಿಕೊಳ್ಳಬೇಕು. ಶಿವಪಂಚಾಕ್ಷರಮಂತ್ರವನ್ನೇ ಸರ್ವದಾ ಜಪಿಸಬೇಕು. ಬಿಲ್ವದಳಗಳಿಂದ ಜೀವವಿರುವವರೆಗೂ ಶಂಕರನನ್ನು ಪೂಜಿಸಬೇಕು. ಇದೇ ನಿಜವಾದ ಧರ್ಮವೆಂದು ನಾನು ತಿಳಿದಿರುವೆನು. ॥೧೬೯॥

ಪರಶಿವನ ಕಟಾಕ್ಷಕ್ಕೆ ಪಾತ್ರನಾದ ದೇಹಿಯು ಪವಿತ್ರನಾಗುವನಲ್ಲದೆ, ಮುಕ್ತಿಯೆಂಬ ಸ್ತ್ರೀಯಿಂದ ಆಲಿಂಗಿತನಾಗುವನು. ಅಗ್ನಿಯನ್ನೇ ನೇತ್ರವನ್ನಾಗಿ ಮಾಡಿಕೊಂಡು ತನ್ನ ಭಕ್ತರಿಗೆ ಕಲ್ಪವೃಕ್ಷದಂತಿರುವ ಮಹೇಶ್ವರನನ್ನು ಬಿಟ್ಟು ಮತ್ತಾರನ್ನೂ ನಾನು ಸೇವಿಸುವನಲ್ಲ. ॥೧೭೦॥

ಯಾರ ನಾಲಗೆಯು ಸರ್ವದಾ ನರ್ಮದಾತೀರಸ್ಥವಾದ ಶಿವಲಿಂಗನಾಮೋಚ್ಚಾರಣೆಯನ್ನೇ ಮಾಡುತ್ತಿರುವುದೋ, ಯಾರ ನಾಲಗೆಯು ಶಿವನನ್ನು ಬಿಟ್ಟು ಮತ್ತಾರ ವಿಚಾರವನ್ನೂ ಹೇಳಲಾರದೋ, ಅಂತಹವರು ನಿಜವಾಗಿಯೂ ಅಮೃತ

ಮೃತ್ಯುರ್ವಾ ಸಮುಪೇತು ಕಾಲಕಲಿತೋ ಹಾಲಾಹಲಂ ವಾ ಮುಹು
ರ್ವ್ಯಾಧಿರ್ವಾ ಸಮುಪೈತು ವಜ್ರಮಥವಾ ಬ್ರಹ್ಮಾಸ್ತ್ರಮುಭ್ಯೇತು ವಾ ।
ಚಕ್ರಂ ವಾ ಕಿಮನೇನ ಯದ್ಯಗಸುತಾಕಾಂತಾಂಘ್ರಿಪದ್ಮಾರ್ಚನ
ಧ್ಯಾನಾನಂದರಸಪ್ರವಾಹರಸಿತೋ ಭೀತಃ ಕುತೋ ವಾ ಭವೇತ್ ॥೧೭೨॥

ಜನ್ಮಾನ್ಯಪ್ಯಮಿತಾನಿ ತಾನಿ ವಿವಿಧಾನ್ಯಾಯಾಂತು ಕಿಂ ತೈರ್ಭಯಂ
ಯದ್ಯಂತಃಕರಣಂ ಕ್ಷಣಾರ್ಧಮಪಿ ವಾ ಮುಗ್ಧೇಂದುಮೌಳಿಂ ವ್ರಜೇತ್ ।
ತಾನ್ಯಪ್ಯಸ್ಯ ಸುಧಾಮಯಾನಿ ಸತತಂ ಮನ್ಯೇತಿ ಧನ್ಯಾನ್ಯಪಿ
ನ್ಯಸ್ತಾನ್ಯಾಮರಪೂಜನಸ್ಯ ಗಿರಿಜಾಕಾಂತಾರ್ಚಕಸ್ಯಾಧುನಾ ॥೧೭೩॥

ಕಲ್ಯಾಣಂ ಕಲಯಾಮಿ ಕಾಮಮಧುನಾ ಕಾಮಾಂತಕಾರಾಧನಾತ್
ಕಃ ಕಾಮಾಂತಕಪೂಜನೇನ ಕಮಪಿ ಪ್ರಾಪ್ನೋತಿ ಕಾಮಂ ಯಮ ।
ಕಾಮಪ್ರಾಪಕಮೇಕಮೇವ ಜಗತಾಂ ಕಾಮಾಂತಕಂ ಮೇನಿರೇ
ಸರ್ವೇ ತೇ ಮುನಯಸ್ಸುರಾಸುರಗಣಾಸ್ಸಿದ್ಧಾ ಮುನೀಂದ್ರಾ ಅಪಿ ॥೧೭೪॥

ಪಾನಾಸಕ್ತರಾಗುವರೆಂದೇ ನನ್ನ ಭಾವನೆ. ಅಮೃತಪಾನಾಸಕ್ತಿಯುಳ್ಳ ಆ ನಾಲಗೆಯು ಎಂದಾದರೂ ತುಚ್ಛವಾದ ಗಂಜಿಯನ್ನು ಕುಡಿಯಲು ಅಪೇಕ್ಷಿಸುವುದೇ! ॥೧೭೧॥

ಪಾರ್ವತೀಪತಿಯ ಪಾದಕಮಲಧ್ಯಾನದಲ್ಲಿ ನಿರತನಾಗಿರುವವನಿಗೆ ಮೃತ್ಯು, ಹಾಲಾಹಲವಿಷ, ನಾನಾವಿಧವಾದ ವ್ಯಾಧಿಗಳು, ವಜ್ರಾಯುಧ, ಬ್ರಹ್ಮಾಸ್ತ್ರ ಅಥವಾ ವಿಷ್ಣುಚಕ್ರ ಇವುಗಳಲ್ಲಿ ಯಾವುದರ ಭಯವೂ ಇರಲಾರದು. ಏಕೆಂದರೆ ಪರಶಿವನಿಗೆ ಇವೆಲ್ಲವೂ ಹೆದರತಕ್ಕವುಗಳಾಗಿ, ಪರಶಿವಪಾದಭಕ್ತರನ್ನು ಎಂದಿಗೂ ಇವು ಪೀಡಿಸಲಾರವು. ॥೧೭೨॥

ಮನುಷ್ಯರಿಗೆ ಎಷ್ಟೇ ಜನ್ಮಗಳು ಬಂದರೂ ಅವರ ಜನ್ಮದ ಜೀವಿತಕಾಲದಲ್ಲಿ ಕ್ಷಣಕಾಲವಾದರೂ, ಅರ್ಧಕ್ಷಣವಾದರೂ ಚಂದ್ರಶೇಖರನನ್ನು ಸ್ಥಿರಮನಸ್ಸಿನಿಂದ ಧ್ಯಾನಿಸಿದುದೇ ಆದರೆ ಅವನ ಜೀವನವೆಲ್ಲಾ ಅಮೃತಮಯವೆನಿಸುವುದು. ಅಲ್ಲದೆ ಅಂತಹ ಗಿರಿಜಾಪತಿಯ ಪಾದಸೇವಕನಿಗೆ ಸಕಲ ಜನ್ಮಗಳೂ ಸುಖಮಯವಾಗಿದ್ದು ಶಿವಭಕ್ತಿಯನ್ನು ವೃದ್ಧಿಪಡಿಸತಕ್ಕದ್ದಾಗುವುವು. ॥೧೭೩॥

ಯಮರಾಜನೇ, ಸಕಲ ಭಕ್ತವೃಂದವೂ ತಮ್ಮ ಇಷ್ಟಪ್ರಾಪ್ತಿಗಾಗಿ ಕಾಮಾಂತಕನೆನಿಸಿದ ಮಹಾದೇವನನ್ನೇ ಭಜಿಸುವರು. ಅವನ ಸೇವೆಯಿಂದಲೇ

ಯತ್ರ ಸ್ಯಾದ್ಗಮನಂ ವಿಧೇರ್ವಿಧಿಬಲಾತ್ತತ್ರಾಂತಕಸ್ಯಾಂತತೋ
ಬಿಲ್ವೀಕೋಮಲಪಲ್ಲವೈರ್ಜಲಲವೈರ್ಲಿಂಗಾರ್ಚನಂ ಜಾಯತೇ ।
ಏತಸ್ಮಾದಧಿಕಂ ಕಿಮಸ್ತಿ ಸುಕೃತಂ ತನ್ನೈವ ಜಾನೇ ಪರಂ
ತೇನೈವಾಮೃತತಾಮುಪೈಮಿ ಶಿವತಾಂ ಪ್ರಾಪ್ನೋಮಿ ಸತ್ಯಂ ಯಮ॥೧೭೫॥

ಏತಸ್ಮಾತ್ಕಿಮಿಹಾಸ್ತ್ಯಪೂರ್ವಮಮರಾಧೀಶೋ ಮಹೇಶೋ ಮುಹು
ರ್ಭಾಗ್ಯೈಃ ಸ್ಮರ್ಯತ ಏವ ದುಃಖವಿಲಯಸ್ಸಂಜಾಯತೇ ತಾವತಾ ।
ಮುಕ್ತಿಸ್ಸಾ ಕರಪಂಕಜಾಮಲಕತಾಂ ಪ್ರಾಪ್ನೋತಿ ಯಾಂತ್ಯಾಧಯೋ
ದೂರಾದೇವ ಲಯಂ ಪ್ರಯಾತ್ಯಘಕುಲಂ ನಿರ್ಮೂಲಮಾತ್ರಾಕುಲಂ
॥೧೭೬॥

ಸಕಲ ಕಲ್ಯಾಣಗಳೂ ಲಭಿಸುವೆವೆಂದು ನಾನು ನಂಬಿರುವೆನು. ಯಾವನು ಕಾಮಾಂತಕನೋ, ಅವನೇ ಕಾಮಪ್ರಾಪಕನು ಅಂದರೆ ಇಷ್ಟಾರ್ಥವನ್ನು ಪೂರ್ತಿಗೊಳಿಸುವವನು ಎಂದು ಸಕಲ ಋಷಿಗಳೂ, ದೇವರಾಕ್ಷಸರೂ, ಸಿದ್ಧಮುನೀಂದ್ರರೂ ಸಾರುತ್ತಿರುವರು. ||೧೭೪||

ಯಮರಾಜನೇ, ನಾನು ಎಲ್ಲಿಗೆ ಹೋದರೂ ನನ್ನ ಸುಕೃತವಶದಿಂದ ಅಲ್ಲಿ ಈಶ್ವರಾರ್ಚನೆಗೆ ಬೇಕಾದ ಕೋಮಲಬಿಲ್ವದಳಗಳೂ ಇತರ ಪೂಜಾಸಾಮಗ್ರಿಗಳೂ ಹೇರಳವಾಗಿ ದೊರೆಯುವುವು. ಅವುಗಳಿಂದ ನಾನು ಶಿವಲಿಂಗಾರ್ಚನೆಯನ್ನು ಭಕ್ತಿಯಿಂದ ನೆರವೇರಿಸುವೆನು. ಇದಕ್ಕಿಂತಲೂ ಹೆಚ್ಚಿನ ಪುಣ್ಯವು ನನಗೇತಕ್ಕೆ? ಇದರಿಂದಲೇ ನಾನು ಅಮರನೆನಿಸುವೆನು. ಕೊನೆಗೆ ಇದರಿಂದಲೇ ನಾನು ಶಿವಸಾಯುಜ್ಯವನ್ನೂ ಹೊಂದುವೆನೆಂಬುದರಲ್ಲಿ ಸಂಶಯವಿಲ್ಲ. ||೧೭೫||

ಸರ್ವದಾ ಶಂಕರಧ್ಯಾನಮಾಡುವುದಕ್ಕಿಂತ ಹೆಚ್ಚಿನ ಭಾಗ್ಯವು ಮಾನವವೃಂದಕ್ಕೇ ಯಾವುದೂ ಇಲ್ಲವೆಂದೇ ನನ್ನ ಭಾವನೆ. ಈ ರೀತಿ ಶಂಕರಸ್ಮರಣೆ ಮಾಡುವ ಬುದ್ಧಿಯುಂಟಾಗುವುದೂ ಪುಣ್ಯವಿಶೇಷದಿಂದಲೇ ಅಲ್ಲವೇ! ಹಾಗೆ ಈಶ್ವರನಾಮಸ್ಮರಣೆ ಮಾಡುವುದರಿಂದ ಮನುಷ್ಯರ ಸಕಲ ದುಃಖಗಳೂ ನಿವಾರಣೆಯಾಗುವುವಲ್ಲದೆ ಮುಕ್ತಿಯು ಅಂಗೈನ ನೆಲ್ಲಿಯಕಾಯಿಯಂತೆ ಸುಲಭಸಾಧ್ಯವೆನಿಸುವುದು. ಸಮಸ್ತ ಪಾಪರಾಶಿಯು ನಾಶವಾಗಿ ಮತ್ತೆ ಪಾಪಸಂಘಟನೆಯಾಗದಂತೆ ಮುಕ್ತಿಯ ಆನಂದವನ್ನು ಅನಾಯಾಸವಾಗಿ ಪಡೆಯುವನು. ||೧೭೬||

ಧನ್ಯಂ ತಾವದಿದಂ ದಿನಂ ಯಮ ಸುಧಾತುಲ್ಯಂ ವಿಶಲ್ಯಂ ಮನೋ
ಮಾರಾರಿಸ್ಮರಣಾದಿನಾ ಗತಮತಃ ಪಾಪಾತಿಭೀತಿಃ ಕುತಃ ।
ತತ್ತಾವದ್ವಿಪುಲಾತಪತ್ರಮಮಲಂ ಧೃತ್ವಾ ಕಳತ್ರಂ ಹರೇ
ರೀಶಾರಾಧಕಸೇವಕಾನನುಪದಂ ಪ್ರೀತ್ಯಾನುಧಾವತ್ಯಪಿ ॥೧೭೭॥

ಇತಿ ಶ್ರೀಶಿವರಹಸ್ಯೇ ತೃತೀಯಾಂಶೇ ಉತ್ತರಾರ್ಧೇ
ಸ್ತ್ರೀಪುರುಷಯೋರ್ನಿತ್ಯವ್ರತೇತಿಹಾಸಮಹಾಶಿವರಾತ್ರೀಮಹಿಮಾ
ಯಮಭೃಗುಸಂವಾದವರ್ಣನಂ ನಾಮ ದ್ವಿಚತ್ವಾರಿಂಶೋಽಧ್ಯಾಯಃ

ಯಮಧರ್ಮನೇ, ಈಶ್ವರನಾಮಸ್ಮರಣೆಮಾಡಿದ ಈದಿನವೇ ಸುದಿನ. ಅಮೃತಪಾನಮಾಡಿದಂತೆ ನನಗೆ ಇದರಿಂದ ತೃಪ್ತಿಯುಂಟಾಗಿ ಮನಃಕಲ್ಮಷವೆಲ್ಲಾ ಮಾಯವಾಗಿರುವುದು. ಮಾರಾರಿಯ ಸ್ಮರಣೆಯಿಂದ ಇನ್ನು ನನಗೆ ಪಾಪಭಯವೆಲ್ಲಿರುವುದು? ಈ ರೀತಿ ಮಹಾದೇವನಾಮಸ್ಮರಣೆ ಮಾಡಿದವನನ್ನು ಲಕ್ಷ್ಮಿಯು ತಾನೇ ಛತ್ರಿಹಿಡಿದುಕೊಂಡು ಆತನನ್ನು ಅನುಸರಿಸಿಕೊಂಡು ಹೋಗುವಳು. ಅಂದರೆ ಮನುಷ್ಯನು ಈಶ್ವರಧ್ಯಾನದಿಂದ ಐಹಿಕವಾದ ಸಕಲಭೋಗ್ಯಭಾಗ್ಯಗಳನ್ನೂ ಆಮುಷ್ಮಿಕವಾದ ಮುಕ್ತಿಸುಖವನ್ನೂ ಪಡೆಯುವನೆಂಬುದರಲ್ಲಿ ಸಂಶಯವಿಲ್ಲ'' ಎಂದು ಭೃಗುಮಹರ್ಷಿಯು ಶಿವಧರ್ಮಮಹಿಮೆಯನ್ನು ಯಮರಾಜನಿಗೆ ವಿವರಿಸಿ ಹೇಳಿದನು. ॥೧೭೭॥

ಇಲ್ಲಿಗೆ ಶ್ರೀಶಿವರಹಸ್ಯದ ತೃತೀಯಾಂಶ ಉತ್ತರಾರ್ಧದಲ್ಲಿ ಸ್ತ್ರೀಪುರುಷರು ನಿತ್ಯವ್ರತ
ಮಾಡಿದುದರ ಫಲವನ್ನು ತಿಳಿಸುವ ಇತಿಹಾಸ, ಮಹಾಶಿವರಾತ್ರಿಯ ಮಹಿಮೆ
ಮತ್ತು ಯಮ, ಭೃಗು ಇವರ ಸಂವಾದ ಇವುಗಳನ್ನು ತಿಳಿಸುವ
ನಲವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಓಂ ನಮಶ್ಶಿವಾಯ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ತ್ರಿಚತ್ವಾರಿಂಶೋಽಧ್ಯಾಯಃ

॥ ಸತ್ಯವ್ರತ ಉವಾಚ ॥

ಇತಿ ತದ್ವಚನಂ ಶ್ರುತ್ವಾ ಯಮೋ ವಿಗತಕಲ್ಮಶಃ ।
ವಿಭೂತಿಭೂಷಣಾಂ ಪ್ರಾಹ ಭೃಗುಂ ಶಿವಪರಾಯಣಂ ॥೧॥

॥ ಯಮ ಉವಾಚ ॥

ಮನ್ಯೇಽಹಂ ತ್ರಿಪುರಾರಾತಿಸ್ಮೃತಿರ್ನೋಽವಾತಿಪಾವನೀಂ ।
ತಾಂ ಪುಣ್ಯವಾಹಿನೀಂ ಪ್ರಾಹುಸ್ಸಾ ಸುಧಾವಾಹಿನೀ ನ ಕಿಂ ॥೨॥

ತಿರಸ್ಕರೋತಿ ಸಾ ತಾವತ್ಸ್ಮೃತಾಪ್ಯಮರವಾಹಿನೀಂ ।
ಚತುರ್ವರ್ಗಫಲಾಕಾರಕಲ್ಲೋಲಕುಲಸಂಕುಲಾ ॥೩॥

ನಲವತ್ತುಮೂರನೆಯ ಅಧ್ಯಾಯ

ಯಮಧರ್ಮರಾಯನು ಭೃಗುಮಹರ್ಷಿಯ ಮಾತುಗಳನ್ನು ಕೇಳಿ ಶುದ್ಧಾಂತರಂಗವುಳ್ಳವನಾಗಿ ವಿಭೂತಿಯಿಂದ ಅಲಂಕೃತನಾಗಿದ್ದ ಪರಮ ಶಾಂಭವನೆನಿಸಿದ ಭೃಗುಋಷಿಯೊಡನೆ ಮತ್ತೆ ಹೀಗೆಂದನು. ॥೧॥

"ಮಹರ್ಷಿಯೇ, ತ್ರಿಪುರಾಸುರನಾಶಕನಾದ ಮಹಾದೇವನ ಸ್ಮರಣೆಯು ಅತಿ ಪವಿತ್ರವಾದದ್ದು; ಮತ್ತು ಪುಣ್ಯವಾಹಿನಿಯೆನಿಸಿದ ಅಮೃತ ಪ್ರವಾಹಕ್ಕೆ ಸರಿಸಮವಾದದ್ದೆಂದು ತಿಳಿದವರೂ ಹೇಳುವರು. ನಾನೂ ಹಾಗೆಯೇ ತಿಳಿದಿರುವೆನು. ಕೇವಲ ಈಶ್ವರಸ್ಮರಣೆಯಿಂದಲೇ ಸಕಲ ಫಲವನ್ನೂ ಕೊಡುತ್ತಾ, ಧರ್ಮಾರ್ಥಕಾಮ

ಪುನಃಪುನರ್ವದ ಮುದಾ ತ್ರಿಪುರಾರಾತಿಪೂಜನೇ ।
ಯತ್ಫಲಂ ತತ್ಫಲಂ ಶ್ರೋತುಂ ಪ್ರವೃತ್ತಮಧುನಾ ಮನಃ ॥೪॥

ಇತಿ ತದ್ವಚನಂ ಶ್ರುತ್ವಾ ಭೃಗುಶ್ಶಿವಮನುಸ್ಮರನ್ ।
ಮಹಾದೇವಕಥಾಸಿಂಧುಂ ಸಸ್ಮಾರ ಪ್ರೀತಮಾನಸಃ ॥೫॥

॥ ಭೃಗುರುವಾಚ ॥

ಮಹೇಶ್ವರಾಪಾರಕಥಾನಿಧೇರ್ನಾ
ಮಂತೋ ನ ದೃಷ್ಟೋಽಸ್ತಿ ನ ಮಧ್ಯಭಾಗಃ ।
ಆದಿಶ್ಚ ನೈವಾವಧೃತೋ ಮಯಾ ತು
ವೇದೈರಪಾರೈರಪಿ ಸೇತಿಹಾಸೈಃ ॥೬॥

ಕೈಲಾಸವಾಸನಿರತಾಃ ಪ್ರಮಥಾಃ ಪ್ರಭಾತ
ಮಾರಭ್ಯ ಶಂಕರಕಥಾಸುಧಯಾ ದಿನಾನಿ ।

ಮೋಕ್ಷಗಳೆಂಬ ಪುರುಷಾರ್ಥಚತುಷ್ಟಯಗಳನ್ನೇ ಅಲೆಯನ್ನಾಗಿ ಹೊಂದಿ ಪ್ರವಹಿಸುವ ಈಶ್ವರ ನಾಮಗಳು ಗಂಗಾನದಿಯನ್ನು ಸಹ ಪಾವಿತ್ರ್ಯದಲ್ಲಿ ತಿರಸ್ಕರಿಸುತ್ತವೆ. ॥೨-೩॥

ಮಹರ್ಷಿಯೇ, ಮಹಾದೇವಾರ್ಚನೆಯಿಂದ ಒದಗುವ ಪುಣ್ಯಫಲವನ್ನು ಇನ್ನೂ ವಿವರವಾಗಿ ನನಗೆ ತಿಳಿಸು. ಆದನ್ನು ಕೇಳುವ ಕುತೂಹಲವು ನನಗೆ ಬಹಳವಾಗಿರುವುದು.” ॥೪-೫॥

ಎಂದು ಪ್ರಾರ್ಥಿಸಿಕೊಂಡ ಯಮಧರ್ಮನಿಗೆ ಭೃಗುಮಹರ್ಷಿಯು ಹೀಗೆ ಉಪದೇಶಿಸಿದನು. “ಯಮರಾಜನೇ, ಪರಶಿವನ ಪವಿತ್ರವಾದ ಕಥೆಗೆ, ಕೊನೆ ಮೊದಲೇ ಇಲ್ಲ. ಎಷ್ಟು ವಿಸ್ತಾರವಾಗಿ ಹೇಳಿದರೂ ಮುಗಿಯುವಂತಿಲ್ಲ. ಸಕಲ ವೇದಗಳೂ, ಪುರಾಣೇತಿಹಾಸಗಳೂ ಇನ್ನೂ ವಿವರಿಸುತ್ತಲೇ ಇರುವುವು. ಇದರಿಂದ ನನಗಂತೂ ಇದಕ್ಕೆ ಆದ್ಯಂತವಿಲ್ಲವೆಂಬ ಭಾವವು ಚೆನ್ನಾಗಿ ಮನದಟ್ಟಾಗಿರುತ್ತದೆ. ॥೬॥

ಇದೇ ಪರಶಿವನ ಕಥೆಯನ್ನು ಕೈಲಾಸದಲ್ಲಿ ಪ್ರಮಥಗಣಗಳು ಪ್ರತಿದಿನವೂ ಪ್ರಾತಃಕಾಲದಿಂದ ಸಾಯಂಕಾಲದವರೆಗೂ ಅವಿಚ್ಛಿನ್ನವಾಗಿ ವಿವರಿಸುತ್ತಿರುವುವು.

ನೀತ್ವಾ ಚ ಸಂತಿ ಗಿರಿಶೋಽಪಿ ನಯತ್ಯಪಾರಾನ್
ಕಲ್ಪಾನ್ ತಥಾಪಿ ನ ಸಮಾಪ್ತಿಕಥಾ ಕದಾಪಿ ॥೭॥

ಪುರಾ ಕೈಲಾಸಶಿಖರೇ ರತ್ನಪ್ರಾಸಾದಮಂಡಪೇ ।
ಕಲ್ಪದ್ರುಮಸಮುತ್ಪನ್ನಕುಸುಮಾಸಾರಸಂವೃತೇ ॥೮॥

ರತ್ನಸಿಂಹಾಸನಾಸೀನಂ ಪ್ರಸನ್ನವದನಂ ಮುದಾ ।
ಸಂಪೂರ್ಣಪೂರ್ಣಕಾಮಂ ತಂ ದದರ್ಶ ಗಿರಿಜಾ ಶಿವಂ ॥೯॥

ಅಪಾರರತ್ನಾಭರಣಪ್ರಭಾರಾಶಿವಿರಾಜಿತಂ ।
ಸ್ಮೇರಧಾರಾಪರಿಕ್ರಾಂತದಿವ್ಯಾಧರವಿರಾಜಿತಂ ॥೧೦॥

ರಾಜೀವರಾಜಕಲ್ಲೋಲಮಾಲಯಾ ಸಮಲಂಕೃತಂ ।
ಸರಸ್ತೀರೇ ಲಿಂಗಮೇಕಂ ಪಶ್ಯಂತಂ ಮುಹುರಾದರಾತ್ ॥೧೧॥

ಸುಛತ್ರಮಂಡಲಾಕಾರಮಣಿಕಾಂತಿವಿರಾಜಿತಂ ।
ಚಾಮರಾಕಾರಕಾಶ್ಮೀರಪ್ರಭಾಮಂಡಲಮಂಡಿತಂ ॥೧೨॥

ಹೀಗೆಯೇ ಎಷ್ಟೋ ಕಲ್ಪಗಳು ಅನಾಯಾಸವಾಗಿ ಕಳೆದಿವೆ. ಆದರೂ ಶಂಕರ ಕಥೆಯು ಇನ್ನೂ ಸಮಾಪ್ತಿಯಾಗಿಲ್ಲ. ||೭||

ಹಿಂದೆ ಒಂದುಸಾರಿ, ರತ್ನಮಯವಾದ ಉಪ್ಪರಿಗೆಯ ಮೇಲೆ ಕಲ್ಪವೃಕ್ಷಗಳ ಪುಷ್ಪಮಾಲೆಗಳಿಂದ ಅಲಂಕೃತವಾಗಿರುವ ಮಂಟಪದಲ್ಲಿ ರತ್ನಸಿಂಹಾಸನಾರೂಢನಾಗಿ ಪ್ರಸನ್ನಮುಖಮುದ್ರೆಯಿಂದ ಕೂಡಿ, ಪೂರ್ಣ ಕಾಮಪ್ರದನೆನಿಸಿರುವ ಮಹೇಶ್ವರನನ್ನು ಪಾರ್ವತಿಯು ಸಂತೋಷದಿಂದ ನೋಡಿದಳು. ||೮-೯||

ಆಗ ಪರಶಿವನು ಅತಿಶಯವಾದ ರತ್ನಾಭರಣಗಳ ಕಾಂತಿಯಿಂದ ಪ್ರಕಾಶಿಸುತ್ತಿದ್ದನು. ಮತ್ತು ಮುಗುಳ್ನಗೆಯ ಸೊಬಗಿನಿಂದ ಸುಂದರವಾದ ಅಧರವುಳ್ಳವನಾಗಿ, ಕೋಮಲವಾದ ಕಮಲಪುಷ್ಪಗಳ ಮಾಲೆಯಿಂದ ವಿರಾಜಿಸುವ ಒಂದು ಶಿವಲಿಂಗವನ್ನೇ ದೃಷ್ಟಿಸಿ ನೋಡುತ್ತಿದ್ದನು. ಅದು ಒಂದು ಸರೋವರದ ದಡದಲ್ಲಿ ಹೆಚ್ಚಿನ ತೇಜಸ್ಸಿನಿಂದ ಹೊಳೆಯುತ್ತಿದ್ದಿತು. ಛತ್ರಿಚಾಮರಾದಿಗಳಿಂದಲೂ, ರತ್ನಕಾಂತಿಗಳಿಂದಲೂ ಆ ಶಿವಲಿಂಗವು ಬಹಳವಾಗಿ ಶೋಭಿಸುತ್ತಿದ್ದಿತು. ಅಕ್ಕಪಕ್ಕದಲ್ಲಿರುವ

ಸುಮೇರುಶಿಖರಸ್ಪರ್ಧಿ ಗೌರೀಕುಚಕರಪ್ರಭಂ ।
ತದಂಗಾಲಿಂಗನಾಸಕ್ತಂ ಬಭಾಷೇ ವಚನಂ ಶಿವಾ ॥೧೩॥

॥ ಶ್ರೀಗೌರ್ಯುವಾಚ ॥

ಸ್ವಾಮಿನ್ಮಹೇಶ ಕೃಪಯಾ ತ್ವಯಾ ಶಿವಕಥಾ ಸುಧಾನಿರ್ಮಿತಾ ।
ಸಾ ಮುಹುಃ ಪೀತಾ ನ ತೃಪ್ತಿರುಪಜಾಯತೇ ॥೧೪॥

ಬ್ರಹ್ಮಕಲ್ಪಾಶ್ಚ ಬಹವಃ ಕಥಾಕಥನಲೀಲಯಾ ।
ನೀತಾಸ್ತದ್ಗಣನಾ ತಾವತ್ ನ ಕರ್ತುಮಿಹ ಶಕ್ಯತೇ ॥೧೫॥

ಕಥಾಸುಧಾರಾಶಿರಪೂರ್ವ ಏವ
ದಿನೇ ದಿನೇ ನೂತನಕೌತುಕಾನಿ ।
ಕರೋತಿ ನಾಂತೋಽಪಿ ನ ಮಧ್ಯಭಾಗ
ಸ್ತಸ್ಯಾದಿಭಾಗೋಽಪಿ ನ ಚಂದ್ರಮೌಲೇ ॥೧೬॥

ನಾನಾ ದೇಶಿಯ ರತ್ನಕಾಂತಿಯು ಛತ್ರಿಚಾಮರಗಳಂತೆ ಹೊಳೆಯುತ್ತಿದ್ದಿತು. ||೧೦-೧೧-೧೨||

ಮತ್ತು ಪರಶಿವನಾದರೋ, ಮೇರುಶಿಖರವನ್ನು ತಿರಸ್ಕರಿಸುವಂತಹ ಶುಭ್ರ ವರ್ಣದಿಂದ ರಂಜಿಸುವ ಗೌರೀದೇವಿಯ ಕುಚಗಳ ಕಾಂತಿಯು ಹೊಳಪಿನಿಂದ ಅಲಂಕೃತನಾಗಿ, ಪಾರ್ವತಿಯ ಆಲಿಂಗನದಲ್ಲಿ ತವಕಪಡುತ್ತಿದ್ದನು. ಇಂತಹ ಪ್ರಸನ್ನ ಹೃದಯನಾದ ಪರಶಿವನೊಡನೆ ಪಾರ್ವತಿಯು ಇಂತೆಂದಳು. ||೧೩||

"ಮಹೇಶ್ವರನೇ, ನೀನು ಹಿಂದೆ ವಿವರಿಸಿದ ಶಿವಕಥೆಯನ್ನು ನಾನು ಅನೇಕಸಾರಿ ಕೇಳಿದರೂ, ನನಗೆ ತೃಪ್ತಿಯಾಗಲಿಲ್ಲ. ಅಂತಹ ಅಮೃತಪಾನದಿಂದ ನನಗೆ ಇನ್ನೂ ಮನಸ್ತೃಪ್ತಿಯಾಗಿಲ್ಲ. ಈ ಕಥೆಯನ್ನು ಕೇಳುತ್ತಲೇ ಅನೇಕ ಬ್ರಹ್ಮಕಲ್ಪಗಳು ಕಳೆದು ಹೋಗಿವೆ. ಅವುಗಳನ್ನು ಎಣಿಸುವುದೇ ಕಷ್ಟವಾಗಿದೆ. ||೧೪-೧೫||

ಈಶ್ವರ ಕಥೆಯೆಂಬುದೇ ಒಂದು ಅಮೃತರಾಶಿಯು. ಅದು ಸುಲಭವಾಗಿ ದೊರೆಯತಕ್ಕುದಲ್ಲ. ದಿನದಿನಕ್ಕೂ ಅದು ಆಶ್ಚರ್ಯಕರವಾಗುವಂತೆ ವೃದ್ಧಿಹೊಂದುತ್ತಿ

ಶಿವಕಥಾಮೃತರಾಶಿವಿವೇಚನೇ
ಚತುರಮೇವ ಮನೋ ನ ಮಮಾಧುನಾ ।
ಕಿಮಯಮೇತದಿತಿಸ್ಮಯಸಂಯುತಂ
ಕಥಯ ತತ್ತ್ವಮಿಹಾಶು ಸದಾಶಿವ ॥೧೭॥

ಇತ್ಯಂಬಿಕಾವಚನರತ್ನಮನೋಜ್ಞಹಾರಂ
ಕರ್ಣಾವತಂಸಮುಸಕೃದ್ಗಿರಿಶೋನುಭೂತಂ ।
ಸ್ಮೃತ್ವಾ ಪುನಃ ಪುನರುಮಾವಚನಾಮೃತೇನ
ತೃಪ್ತೋಪ್ಯುವಾಚ ವಚನೈರಭಿನಂದ್ಯ ಗೌರೀಂ ॥೧೮॥

॥ ಶ್ರೀಸದಾಶಿವ ಉವಾಚ ॥

ಗಿರಿರಾಜಕುಮಾರಿಕೇ ವಚಃ
ಪರಮಂ ತಾವದಿದಂ ಶೃಣು ಪ್ರಿಯೇ ।
ಪ್ರಿಯಮೇವ ವದಾಮಿ ಸಾವಧಾನಂ
ಧನಮೇತನ್ಮಮ ಸತ್ಯಮೇವ ನೂನಂ ॥೧೯॥

ರುವುದು. ಚಂದ್ರಶೇಖರನೇ, ನಿನ್ನ ಅಂತಹ ಕಥೆಗೆ ಆದಿ, ಮಧ್ಯ, ಅಂತ್ಯ ಇವುಗಳು ಕಾಣುವುದೇ ಇಲ್ಲವಲ್ಲ! ॥೧೬॥

ಪರಮೇಶ್ವರನೇ, ನಿನ್ನ ಕಥಾಮೃತವನ್ನು ವಿಮರ್ಶಿಸುವ ಅಥವಾ ವಿಭಾಗಿಸುವ ಶಕ್ತಿಯು ಚತುರವಾದ ನನ್ನ ಮನಸ್ಸಿನಲ್ಲಿಯೂ ಕಾಣುವುದಿಲ್ಲ. ಈಗ ನಾನು ನಿನ್ನ ಕಥಾಶ್ರವಣದಲ್ಲಿ ಆಶ್ಚರ್ಯಯುತನಾಗಿ ಕುತೂಹಲಿಯಾಗಿರುವೆನು. ಆದುದರಿಂದ ದಯೆಯಿಟ್ಟು ಆ ಕಥಾತತ್ತ್ವವನ್ನು ನನಗೆ ಬೋಧಿಸು." ॥೧೭॥

ಎಂದು ಹೇಳಿದ ಅಂಬಿಕೆಯ ಮನೋಹರವಾದ ವಾಕ್ಸರಣಿಯನ್ನು ಪರಶಿವನು ಕೇಳಿ, ಅದನ್ನು ತನ್ನ ಕರ್ಣಾಭರಣವನ್ನಾಗಿ ಮಾಡಿಕೊಂಡನು. ಅಂದರೆ ಅದನ್ನು ಮನಃಪೂರ್ವಕವಾಗಿ ಕೇಳಿ, ದೇವಿಯ ಮಾತುಗಳಿಗೆ ಅತ್ಯಾನಂದಪಡುತ್ತಾ ದೇವಿಯನ್ನು ಕುರಿತು ಹೀಗೆಂದನು. ॥೧೮॥

" ಗಿರಿಜೆಯೇ, ಈಗ ನಾನು ಹೇಳುವ ಒಂದು ಮಾತನ್ನು ಕೇಳು. ಆ ಮಾತು ನನಗೆ ಬಹು ಪ್ರಿಯವಾದದ್ದು. ಅದೇ ನನಗೆ ನಿಧಿಯಂತೆಯೂ ಇರುವುದು. ಅದನ್ನು ಸಾವಧಾನದಿಂದ ಲಾಲಿಸು. ॥೧೯॥

ವೇದಾಸ್ತಾವದನಂತಾಸ್ತೇ ಸರ್ವೇ ಶಿವಕಥಾಮಯಾಃ ।
ಅತಸ್ತದಾದಿಮಧ್ಯಾಂತಾಃ ಶ್ರುತಾ ಅಪಿ ನ ಸರ್ವಥಾ ॥೨೦॥

ಕಥಾ ಸುಧಾಸಮುದ್ರೇಷು ಸೂಕ್ಷ್ಮಬಿಂದುಸಮಾ ಕಥಾ ।
ಶ್ರುತಾ ಕಲ್ಪೇಷ್ವಪಾರೇಷು ಗತೇಷು ವಿವಿಧೇಷ್ವಪಿ ॥೨೧॥

ಮತ್ಕಥಾಕಥನೇ ಗೌರಿ ಮಮಾಪಿ ಸಹಸಾ ತಥಾ ।
ನ ಶಕ್ತಿರಿತಿ ವಿದ್ಧಿ ತ್ವಂ ತತ್ಪಾರಾದರ್ಶನಾದಪಿ ॥೨೨॥

ಮತ್ಕಥಾಪಾರಗಾ ನಿತ್ಯಂ ನ ಮಮಾಪಿ ತಥಾ ಸತಿ ।
ಕೋ ವಾ ತತ್ಪಾರಗೋ ಭೂಯೋ ಗಿರಿಜೇ ತಂ ವದಾಧುನಾ ॥೨೩॥

ನಾಸ್ಮಾಕಂ ಪ್ರಳಯಾದಿಭೀತಿರಗಜೇ ಕಲ್ಪಾಃ ಪ್ರಯಾಂತು ಪ್ರಿಯೇ
ತೇ ತಾವದ್ಯದಿ ಕೋಟಿಶೋಽಪಿ ವಿಲಯಂ ಯಾಸ್ಯಂತಿ ಕಾ ತಾವತಾ ।
ಹಾನಿಸ್ಸ್ಯಾದಸಕೃತ್ಕಥಾಕಥನತೋ ನೇಯಂ ದಿನಃ ಕೋಟಿಶಃ
ಕಲ್ಪಾಶ್ಚೇದ್ದಿನಕೋಟಿಭಾಗ ಇತಿ ಮೇ ಸರ್ವಾಮರಾಣಾಮಪಿ ॥೨೪॥

ಆದ್ಯಂತರಹಿತವಾದ ಸಕಲ ವೇದರಾಶಿಯೆಲ್ಲಾ ಶಿವಕಥಾಮಯಗಳೇ. ಆದರಿಂದಲೇ ಈ ಶಿವಕಥೆಗೆ ಕೊನೆಮೊದಲಿಲ್ಲವಾಗಿದೆ. ಇಷ್ಟು ಕಲ್ಪಪರ್ಯಂತ ನೀನು ಕೇಳಿರುವ ಈಶ್ವರ ಕಥೆಯು, ಕೇವಲ ಸಮುದ್ರದ ಒಂದು ಸಣ್ಣ ಬಿಂದುವಿಗೆ ಸಮನಾಗಿದೆ. ಅಂದರೆ ಇನ್ನೂ ನೀನು ಕೇಳಬೇಕಾದ ಭಾಗವು ಅನಂತಾನಂತವಾಗಿರುವುದು. ॥೨೦-೨೧॥

ನನ್ನ ಕಥೆಯನ್ನು ಪೂರ್ಣವಾಗಿ ತಿಳಿಸಲು ನನಗೇ ಶಕ್ತಿಸಾಲದು. ಅಲ್ಲದೆ ಆ ಕಥಾಭಾಗದ ಕೊನೆಯು ನನಗೆ ಸರಿಯಾಗಿ ತಿಳಿದಿಲ್ಲ. ಹಾಗಿರುವಾಗ ಮತ್ತಾರು ತಾನೇ ನನ್ನ ಪೂರ್ಣವಿಚಾರವನ್ನು ತಿಳಿಸಲು ಸಮರ್ಥನಾದಾನು? ॥೨೨-೨೩॥

ನಮಗಾದರೂ ಪ್ರಳಯಾದಿಗಳ ಭಯವಿಲ್ಲ. ಎಷ್ಟುಕೋಟಿ ಕಲ್ಪಗಳು ಕಳೆದು ಪ್ರಪಂಚವೇ ನಾಶವಾದರೂ ಅದರಿಂದ ನಮಗೆ ಯಾವ ಹಾನಿಯೂ ಒದಗಲಾರದು. ಈ ಕಥಾಕಥನದಿಂದ ಎಷ್ಟುಕೋಟಿ ದೇವತೆಗಳ ಕಲ್ಪಗಳು ಕಳೆದರೂ ನಮಗೆ ಅದು ಒಂದು ದಿನದ ಕೋಟಿಭಾಗದಲ್ಲಿ ಒಂದು ಭಾಗವು ಕಳೆದಂತೆಯೇ ಸರಿ. ಸರ್ವದಾ ನನಗೂ ಪ್ರಪಂಚಕ್ಕೂ ಯಾವ ಸಂಬಂಧವೂ ಇಲ್ಲವೆಂಬುದನ್ನು ತಿಳಿ. ॥೨೪॥

ನಿಗಮೈರಪಿ ವಿಜ್ಞೇಯೋ ವಿಭವೋ ನ ಮಮಾಂಬಿಕೇ ।
ತಸ್ಮಾದಾದ್ಯಂತರಹಿತೋ ವಿಭವೋ ಮಮ ಸರ್ವಥಾ ॥೨೫॥

ಉಕ್ತಾ ನೋಕ್ತಾ ಕಥಾ ಗೌರಿ ಮಯಾ ತಾವತ್ಪುನಃ ಪುನಃ ।
ಸಿದ್ಧೈವ ನೂತನಾ ಪ್ರೋಕ್ತಾ ಕಾಪಿ ಕಾಪಿ ಕಥಾ ಸುಧಾ ॥೨೬॥

ಲಿಂಗಾರ್ಚನಸ್ಯ ಮಹಿಮಾ ಹಿಮಶೈಲಕನ್ಯೇ
ನಾಂತಂ ಪ್ರಯಾತಿ ನ ದದಾತಿ ಕಥಾ ತಥಾ ಚ ।
ತನ್ಮಧ್ಯಭಾಗಕಥನಾವಸರಃ ಕದಾ ವಾ
ಭಾವೀ ಭವಿಷ್ಯತಿ ಕಥಂ ಕಥಯಾಶು ಮಹ್ಯಂ ॥೨೭॥

ಏವಮುಕ್ತಾ ಭವಾನೀ ಸಾ ಮಹಾದೇವೇನ ಸಾದರಂ ।
ಆನಂದಸಾಗರೇಣಾಶು ಸಮ್ಯಗಾಲಿಂಗಿತಾ ಮುಹುಃ ॥೨೮॥

ಅತಃ ಕಥಂ ವಾ ಯಮ ಶಂಕರಸ್ಯ
ಕಥಾಂ ಕಥಂಚಿತ್ಪ್ರವದಾಮಿ ಸಾಪಿ ।

ನನ್ನ ವೈಭವವನ್ನು ವೇದಗಳೂ ಸರಿಯಾಗಿ ವಿವರಿಸಲಾರವು. ಅದರಿಂದಲೇ ನನ್ನ ವೈಭವಕ್ಕೆ ಆದ್ಯಂತಗಳಿಲ್ಲ. ಇಲ್ಲಿನವರೆಗೆ ನಾನು ಹೇಳಿದ ಅಥವಾ ಹೇಳದಿರುವ ನನ್ನ ಇತಿಹಾಸಗಳನ್ನೆಲ್ಲಾ ಈಗ ಮತ್ತೆ ಹೇಳಿದೆನಾದರೆ ಅದೆಲ್ಲವೂ ನಿನಗೆ ಅನಿರ್ವಚನೀಯವಾದ ಅಮೃತಕ್ಕೆ ಸರಿಸಮವಾಗಿ ಹೊಸ ಹೊಸದಾಗಿಯೇ ಕಾಣತೊಡಗುವುವು. ॥೨೫-೨೬॥

ನಗರಾಜಪುತ್ರಿಯೇ, ಶಿವಲಿಂಗಾರ್ಚನೆಯ ಮಹಿಮೆಯೊಂದನ್ನು ಹೇಳತೊಡಗಿದರೆ ಅದಕ್ಕೆ ಕೊನೆ ಮೊದಲೇ ಇಲ್ಲ. ಹಾಗಿರುವಾಗ ಆ ಮಹಿಮೆಯ ಮಧ್ಯಭಾಗವನ್ನು ನೀನು ಕೇಳುವುದು ಮುಂದೆ ಯಾವಾಗಲೋ ಒದಗಬಹುದು. ಅದನ್ನು ನೀನೇ ಯೋಚಿಸಬೇಕು." ॥೨೭॥

ಎಂದು ಶಂಕರನು ಪಾರ್ವತಿಗೆ ಹೇಳಿ, ಒಡನೆಯೇ ಆನಂದಸಾಗರದಿಂದ ಕೂಡಿದವನಾಗಿ ಪತ್ನಿಯನ್ನು ಗಾಢವಾಗಿ ಆಲಿಂಗಿಸಿಕೊಂಡನು. ॥೨೮॥

ಸ್ಮರಾಮಿ ಶುದ್ಧಂ ಹೃದಯಂ ಕರೋಮಿ
ಜಿಹ್ವಾಂತಯಾ ತಾಂ ಮಧುರಾಂ ಕರೋಮಿ ॥೨೯॥

ಅಹೋ ಶಿವಕಥಾಸುಧಾನಿಧಿರಪಾರಪುಣ್ಯೈರಯಂ
ಸ್ಮೃತೋಽಪಿ ತನುತೇ ಮುದಂ ಕಿಮಿದಮತ್ರ ಚಿತ್ರಂ ಕೃತಂ ।
ಶಿವೇನ ಚ ದಯಾಳುನಾ ಶಿವಜನೈಕಸಂಜೀವಿನೀ
ಕೃತಾ ಶಿವಕಥಾತ್ಮಿಕಾ ಮಧುರವಾಹಿನೀ ಸಾ ಕಥಂ ॥೩೦॥

ಮನ್ಯೇ ಶಿವಾರಾಧನಮೇವ ಶುದ್ಧಂ
ಶುದ್ಧಂ ಕರೋತಿ ಪ್ರವರಂ ಚ ಸಿದ್ಧಂ ।
ತತ್ತುಲ್ಯಮನ್ಯನ್ನ ಮಯಾ ಶ್ರುತಂ ಚ
ವೇದಾಂತವಾಕ್ಯೈರಪಿ ಕೋಟಿಶೋಽಪಿ ॥೩೧॥

ಯಮಧರ್ಮರಾಯನೇ, ಶಂಕರನ ಕಥಾಸಮುದ್ರವು ಹೀಗಿರುವಾಗ ನಿನಗೆ ಅದನ್ನು ಯಾವ ರೀತಿ ತಿಳಿಸಲಿ. ಆದರೂ ಅಲ್ಪಭಾಗವನ್ನಾದರೂ ನಿನಗೆ ತಿಳಿಸುತ್ತಾ ಆದರಿಂದ ನನ್ನ ಮನಸ್ಸನ್ನೂ ನನ್ನ ಜಿಹ್ವೆಯನ್ನೂ ಪವಿತ್ರಗೊಳಿಸುವೆನು. ॥೨೯॥

ಈಶ್ವರಕಥೆಯೆಂಬ ಅಮೃತಸಮುದ್ರವು ನಮಗೆ ಅತಿಶಯವಾದ ಪುಣ್ಯಶೇಷ ದಿಂದ ಸ್ಮರಣೆಗೆ ಬರಬೇಕು. ಇಲ್ಲದಿದ್ದರೆ ಅದನ್ನು ಖಂಡಿತವಾಗಿ ಹೇಳಲಾಗುವು ದಿಲ್ಲ. ದಯಾಳುವಾದ ಶಂಕರನು ತನ್ನ ಭಕ್ತರ ಉದ್ಧಾರಕ್ಕಾಗಿಯೇ ಈ ಮಧುರ ತರವಾದ ಶಿವಕಥಾರೂಪವೆನಿಸಿದ ಅಮೃತಪ್ರವಾಹವನ್ನು ವಿವರಿಸಿರುವನಲ್ಲವೇ! ॥೩೦॥

ಲೋಕದಲ್ಲಿ ಶಿವಾರಾಧನೆಯೇ ನಿರ್ದುಷ್ಟವಾದ ಕರ್ಮ. ಅದೇ ಮನುಷ್ಯ ರನ್ನು ಶುದ್ಧರನ್ನಾಗಿಯೂ, ಸಿದ್ಧಪುರುಷರನ್ನಾಗಿಯೂ ಮಾಡುವುದು. ಅದಕ್ಕೆ ಸಮವಾದ ಕಾರ್ಯವು ಲೋಕದಲ್ಲಿ ಯಾವುದೂ ಇರಲಾರದು. ಮತ್ತು ಅಖಂಡ ವಾದ ವೇದಾಂತಗಳಲ್ಲಿಯೂ ತತ್ಸದೃಶವಾದ ಮತ್ತೊಂದು ಕರ್ಮವನ್ನು ಎಲ್ಲಿಯೂ ವಿಸ್ತಾರವಾಗಿ ನಿರೂಪಿಸಿಲ್ಲ. ॥೩೧॥

ಶಿವಾರ್ಚನಧನಂ ಕಾಲ ನಿಧಯೋಽಪಿ ಶಿವಾರ್ಚನಂ ।
ಶಿವಾರ್ಚನಂ ಸುಧಾನೂನಂ ಮೋಕ್ಷೋಽಪಿ ಶಿವಪೂಜನಂ ॥೩೨॥

ಶಿವಾರ್ಚನೇನೈವ ಕೃತಾಃ ಕೃತಾರ್ಥಾಃ
ಶಿವಾರ್ಚನೇನೈವ ಸುಧಾಂಬುರಾಶಿಃ ।
ಉದ್ವೇಲತಾಮೇತಿ ನ ಸಂಶಯೋಽತ್ರ
ತಸ್ಯ ಪ್ರಭಾವಂ ಶಿವ ಏವ ವೇದ ॥೩೩॥

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ ।
ತಂ ಸುಧಾಸಾಗರಾಕಾರಂ ಶೃಣು ಶಂಕರಮರ್ಚಯ ॥೩೪॥

ಪುರಾ ಗೋದಾವರೀತೀರೇ ಗೌತಮಂ ಮುನಿಪುಂಗವಂ ।
ತ್ರಿಯಂಬಕಾರ್ಚಕಂ ದೃಷ್ಟ್ವಾ ಪ್ರಾಹ ನಾರಾಯಣಃ ಸ್ವಯಂ ॥೩೫॥

ಪೂಜಯಿತ್ವಾ ಮಹಾದೇವಮುಪಚಾರೈರನೇಕಧಾ ।
ಪ್ರಣಮ್ಯ ಬಹುಧಾ ಶ್ರಾಂತಂ ಸ್ವೇದಧಾರಾಸಮಾವೃತಂ ॥೩೬॥

ಕುತಃ ಸಮಾಗತೋ ವಿದ್ವನ್ ಶ್ರಮೋಽಪಿ ತ್ವಯಿ ದೃಶ್ಯತೇ ।
ಶಿವತೀರ್ಥಾಟನೇನೈವ ತವ ಕಾಲಃ ಪ್ರಯಾತಿ ಹಿ ॥೩೭॥

ಎಲೈ ಯಮುನೇ, ಶಿವಾರ್ಚನೆಯೇ ಭಕ್ತರಿಗೆ ಅಮೂಲ್ಯನಿಧಿ. ಸಕಲೈಶ್ವರ್ಯವೂ ಅವರಿಗೆ ಶಿವಾರ್ಚನೆಯೇ. ಅಮೃತ, ಶಾಶ್ವತವಾದ ಮುಕ್ತಿ ಇವೆಲ್ಲವನ್ನೂ ಭಕ್ತರು ಶಿವಾರ್ಚನೆಯೆಂದೇ ತಿಳಿದಿರುವರು. ॥೩೨॥

ಭಕ್ತರು ಶಿವಾರ್ಚನೆಯಿಂದಲೇ ಧನ್ಯರಾಗುವರು. ಅವರ ಆನಂದಾಮೃತವೆಂಬ ಸಮುದ್ರವು ಮೇರೆದಪ್ಪಿ ಉಕ್ಕುವುದೂ ಈ ಶಿವಾರ್ಚನೆಯಿಂದಲೇ. ಇದರ ಮಹಿಮೆಯು ಶಿವನಿಗೊಬ್ಬನಿಗೆ ಮಾತ್ರ ತಿಳಿದಿರುವುದು. ॥೩೩॥

ಈ ವಿಷಯದಲ್ಲಿ ಪವಿತ್ರವಾದ ಮತ್ತು ಪುರಾತನವಾದ ಇತಿಹಾಸವೊಂದಿರುವುದು. ಅದು ಸುಧಾಸಾಗರದಂತೆ ಕೇಳಲು ಹಿತಕರವಾಗಿರುವುದು. ಅದನ್ನು ತಿಳಿದು ಅನಂತರ ಶಂಕರನನ್ನು ಆರಾಧಿಸು. ॥೩೪॥

"ಒಂದುಸಾರಿ ಗೋದಾವರೀತೀರದಲ್ಲಿ ಪರಶಿವಾರ್ಚಕನೂ, ಮುನಿಶ್ರೇಷ್ಠನೂ ಆದ ಗೌತಮಮಹರ್ಷಿಯು ಮಹಾವಿಷ್ಣುವಿನ ಸಮೀಪಕ್ಕೆ ಬಂದನು. ಆತನು

ಕಿಂ ಕಿಮದ್ಯ ಶಿವಸ್ಥಾನಂ ತ್ವಯಾ ದೃಷ್ಟಂ ಮಹಾಮುನೇ ।
ಕಿಂ ಕಿಂ ಲಿಂಗಂ ಪೂಜಿತಂ ಚ ಬಹುಭಿಸ್ಸಾಧನೈಸ್ತ್ವಯಾ ॥೩೮॥

ಕ್ವಾಪೂರ್ವಂ ವಾ ತ್ವಯಾ ದೃಷ್ಟಂ ಯದುತ್ಸಾಹಕರಂ ಪರಂ ।
ತದದ್ಯ ವದ ನಿಶ್ಚಿತ್ಯ ಸ್ಮೃತ್ವಾ ಸ್ಮೃತ್ವಾ ಪುನಃ ಪುನಃ ॥೩೯॥

॥ ಗೌತಮ ಉವಾಚ ॥

ಶಿವಭಕ್ತಾಯ ವಕ್ತವ್ಯಂ ಕೌತುಕಂ ಯದಹೈತುಕಂ ।
ತದಿದಾನೀಂ ಶೃಣು ಪ್ರೀತ್ಯಾ ಭಕ್ತೋಽಸಿ ಕಮಲಾಪತೇ ॥೪೦॥

ನೇತ್ರಾರವಿಂದೇನ ಶಿವಾಂಘ್ರಿಪದ್ಮಂ
ತ್ವಯಾ ಸಮಭ್ಯರ್ಚಿತಮಾದರೇಣ ।

ಮಹಾದೇವನನ್ನು ನಾನಾವಿಧವಾದ ಉಪಚಾರಗಳಿಂದ ಪೂಜಿಸಿ, ಅದರಿಂದ ಬಳಲಿ ಬೆವರು ಹೊಂದಿದ್ದನು. ॥೩೫-೩೬॥

ಅಂತಹ ಮಹರ್ಷಿಯನ್ನು ಕುರಿತು ನಾರಾಯಣನು ಜ್ಞಾನಿಯಾದ ಮಹರ್ಷಿಯೇ, ನೀನು ಶಿವತೀರ್ಥಕ್ಷೇತ್ರಗಳಲ್ಲಿ ಸಂಚರಿಸಿ ಬಹು ಬಳಲಿರುವೆ. ಅದರಲ್ಲಿಯೇ ನೀನು ಬಹುಕಾಲ ಕಳೆದಿರುವೆ. ಇಲ್ಲಿನ ವರೆಗೆ ನೀನು ನೋಡಿರುವ ಶಿವಕ್ಷೇತ್ರಗಳಾವುವು ? ಯಾವ ಶಿವಲಿಂಗಾರಾಧನೆಯು ಭಕ್ತರಿಗೆ ಬಹು ಫಲಪ್ರದವೆನಿಸಿರುವುದು ? ನಿನಗೆ ಯಾವ ತೀರ್ಥವು ಉತ್ಸಾಹವನ್ನೂ, ಸಂತೋಷವನ್ನೂ, ಭಕ್ತಿಯನ್ನು ವೃದ್ಧಿಗೊಳಿಸಿತು ? ಅದನ್ನು ದಯೆಯಿಂದ ನನಗೆ ತಿಳಿಸುವವನಾಗು" ಎಂದು ಪ್ರಶ್ನಿಸಿದನು. ॥೩೭-೩೮॥

ಆಗ ಗೌತಮಮಹರ್ಷಿಯು ವಿಷ್ಣುವನ್ನು ಕುರಿತು ಹೀಗೆಂದನು. "ಮಹಾವಿಷ್ಣುವೇ ! ಈಶ್ವರ ವಿಷಯಕವಾದ ವೃತ್ತಾಂತವನ್ನೆಲ್ಲಾ ಈಶ್ವರಭಕ್ತನಿಗೆ ಮಾತ್ರ ವಿವರಿಸಿ ಹೇಳಬೇಕು. ಕಮಲಾಪತಿಯಾದ ನೀನು ಈಗ ಈಶ್ವರನಲ್ಲಿ ಅಸಾಧಾರಣ ಭಕ್ತಿಯಿಟ್ಟಿರುವುದರಿಂದ ನಿನ್ನಲ್ಲಿ ಆಶ್ಚರ್ಯಕರಗಳಾದ ಆ ಸಮಾಚಾರವನ್ನೆಲ್ಲಾ ಈಗಲೇ ತಿಳಿಸುವೆನು. ॥೪೦॥

ಮಹಾವಿಷ್ಣುವೇ, ನೀನು ಈಶ್ವರನ ಪಾದಕಮಲವನ್ನು ನಿನ್ನ ನೇತ್ರಕಮಲದಿಂದ ಪೂಜಿಸಿರುವೆ. ಅಂತಹ ಪರಮಭಕ್ತಾಗ್ರಣಿಯೆನಿಸಿದ ನೀನು ಈಗ ನಾನು

ಏತಾದೃಶಸ್ತ್ವಂ ಶಿವಭಕ್ತಭಕ್ತೋ
ಮುಕ್ತಿಪ್ರಸಾರೂಪಕಥಾಂ ಶೃಣುಷ್ವ ॥೪೧॥

ಪೂರ್ವೇದ್ಯುರದ್ಭುತಂ ದೃಷ್ಟ್ವಾ ದುರದೃಷ್ಟವಿನಾಶಕಂ ।
ಅಸ್ಮಿನ್ ಗಿರಿವರೇ ರಮ್ಯೇ ಚತ್ವಾರೋ ವಾನರಾಸ್ಸ್ಥಿತಾಃ ॥೪೨॥

ತೈರಾನೀತಾನಿ ರಮ್ಯಾಣಿ ಬಿಲ್ವಪತ್ರಾಣಿ ತೈರ್ಮುದಾ ।
ಕೃತಲಿಂಗಾರ್ಚನಂ ಭಕ್ತ್ಯಾ ರಸಾಲಜಫಲೈರಪಿ ॥೪೩॥

ತತಃ ಪ್ರದಕ್ಷಿಣೀಕೃತ್ಯ ನಮಸ್ಕೃತ್ಯ ಮಹೇಶ್ವರಂ ।
ಉಪವಿಷ್ಟಾಶ್ಶಿವಧ್ಯಾನಂ ಕೃತ್ವಾ ಭಸ್ಮವಿಭೂಷಣಾಃ ॥೪೪॥

ತನ್ಮಧ್ಯೇ ಕಶ್ಚಿದಾಹಾನ್ಯಾನ್ ಶಿವಲಿಂಗಾವಲೋಕನಂ ।
ಕೃತ್ವಾ ಭಸ್ಮಲಲಾಟಾದೌ ಧೃತ್ವಾ ಸ್ಮೃತ್ವಾ ಮಹೇಶ್ವರಂ ॥೪೫॥

॥ ವಾನರ ಉವಾಚ ॥

ಮಯಾ ನಿಮೀಲಿತಾಕ್ಷೇಣ ಸ್ವಪ್ನೋ ದೃಷ್ಟೋ ಮಹಾನಿಹ ।
ಕಶ್ಚಿದತ್ರಾಗತಃ ಶೈವಃ ಶಿವನಾಮಜಪೋತ್ಸುಕಃ ॥೪೬॥

ಹೇಳಲಿರುವ ಮುಕ್ತಿಯು ಅರವಟ್ಟಿಗೆಯಂತೆ ಭಕ್ತರಿಗೆಲ್ಲಾ ಮೋಕ್ಷಪ್ರದವಾದ ಈಶ್ವರ ಚರಿತೆಯನ್ನು ಭಕ್ತಿಯಿಂದ ಕೇಳು. ॥೪೧॥

ಈ ರಮ್ಯವಾದ ಪರ್ವತದಲ್ಲಿ ಹಿಂದೆ ನಾಲ್ಕು ಕಪಿಗಳಿದ್ದುವು. ಅವು ಹಿಂದಿನ ದಿವಸ ಆದ ದುಃಸ್ವಪ್ನದ ಅನಿಷ್ಟನಿವಾರಣೆಗಾಗಿ, ಮನೋಹರವಾದ ಬಿಲ್ವಪತ್ರೆಗಳನ್ನು ತಂದು ಶಿವಲಿಂಗವನ್ನು ಭಕ್ತಿಯಿಂದ ಪೂಜಿಸಿ, ಮಾವಿನಹಣ್ಣುಗಳನ್ನು ನಿವೇದಿಸಿದುವು. ॥೪೨-೪೩॥

ಹಾಗೆಯೇ ಶಿವಲಿಂಗಕ್ಕೆ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ, ಈಶ್ವರಧ್ಯಾನ ಮಾಡುತ್ತಾ ಕುಳಿತುಕೊಂಡವು. ಆಗ ಅವುಗಳಲ್ಲಿ ಒಂದು ಕಪಿಯು ಈಶ್ವರಲಿಂಗವನ್ನೇ ನೋಡುತ್ತಾ ಹಣೆಯೇ ಮುಂತಾದ ಅವಯವಗಳಲ್ಲಿ ಭಸ್ಮಧಾರಣೆಮಾಡಿಕೊಂಡು, ಉಳಿದ ಕಪಿಗಳನ್ನು ಕುರಿತು ಹೀಗೆಂದಿತು. ॥೪೪-೪೫॥

"ಎಲೈ ವಾನರಗಳೇ, ನಾನು ನಿದ್ರಿಸುತ್ತಿರುವಾಗ ನನಗೆ ಒಂದು ಸ್ವಪ್ನವು ಹೀಗೆ ಗೋಚರವಾಯಿತು. ಸ್ವಪ್ನದಲ್ಲಿ ಒಬ್ಬ ಶಿವಾರಾಧಕನು ಈಶ್ವರನಾಮಗಳನ್ನು

ಭೂತಿರುದ್ರಾಕ್ಷಪೂತಾಂಗೋ ಲಿಂಗಂ ದೃಷ್ಟ್ವಾ ಸಮರ್ಚಿತಂ ।
ಕೇನ ಬಿಲ್ವದಳಂ ದತ್ತಂ ಕೋಮಲಂ ಲಿಂಗಮಸ್ತಕೇ ॥೪೭॥

ಏತಾದೃಶಂ ಬಿಲ್ವಪತ್ರಂ ಮಾಘಾಸಿತಚತುರ್ದಶೀಂ ।
ಪ್ರಾಪ್ಯ ರಾತ್ರೌ ಶಾಂಗಲಿಂಗೇ ದತ್ವಾ ಮುಕ್ತೋ ಭವೇದ್ಧ್ರುವಂ॥೪೮॥

ಕುತಃ ಕೇನ ಸಮಾನೀತೋಽಸ್ಯಾರಕ್ತೋ ಬಿಲ್ವಪಲ್ಲವಃ ।
ತಸ್ಮೈನಮಃ ಪುನಸ್ತಸ್ಮೈ ಸ ಬಿಲ್ವತರವೇ ನಮಃ ॥೪೯॥

ಅದ್ಯೈವ ಗತ್ವಾ ದ್ರಷ್ಟವ್ಯೋ ವಿಪಿನೇ ಬಿಲ್ವಭೂರುಹಃ ।
ಜಲಾಧಿಭಿಃ ಪೋಷಣೀಯೋ ಯಥಾಯೋಗ್ಯಂ ಪ್ರಯತ್ನತಃ ॥೫೦॥
ಅತಃ ಪರಂ ಸಮಾಯಾತಿ ಮಾಘಾಸಿತಚತುರ್ದಶೀ ।
ತೈರೀಶಪೂಜಾ ಕರ್ತವ್ಯಾ ತತ್ರ ಬಿಲ್ವದಲೈರ್ನವೈಃ ॥೫೧॥

ಚ್ಚರಿಸುತ್ತಾ ವಿಭೂತಿ, ರುದ್ರಾಕ್ಷಿ ಇವುಗಳನ್ನು ಅವಯವಗಳಲ್ಲಿ ಧರಿಸಿಕೊಂಡು ನಾನು ಬಿಲ್ವಪತ್ರೆಯಿಂದ ಪೂಜಿಸಿದ್ದ ಶಿವಲಿಂಗವನ್ನು, ಈ ಬಿಲ್ವದಳವನ್ನು ನೋಡಿ, ಈ ಬಿಲ್ವದಳವನ್ನು ತಂದು ಶಿವಲಿಂಗದ ಮೇಲಿಟ್ಟವರು ಯಾರು ? ಎಂದು ಪ್ರಶ್ನಿಸಿದನು. ॥೪೬-೪೭॥

ಅಲ್ಲದೆ ಇಂತಹ ಕೋಮಲವಾದ ಬಿಲ್ವಪತ್ರೆಯನ್ನು ಯಾರು ಮಾಘಮಾಸದ ಕೃಷ್ಣಚತುರ್ದಶಿಯೆನಿಸಿದ ಶಿವರಾತ್ರಿಯ ದಿನ ತಂದು ಶಿವಲಿಂಗಾರ್ಚನೆಮಾಡುವರೋ ಅವರು ನಿಜವಾಗಿಯೂ ಮುಕ್ತರಾಗುವರು. ಇಂತಹ ಕೆಂಪುಬಣ್ಣದ ಕೋಮಲವಾದ ಬಿಲ್ವಪತ್ರೆಯನ್ನು ತಂದವರಾರು ? ತಂದವರಿಗೂ ಮತ್ತು ಅಂತಹ ಬಿಲ್ವವೃಕ್ಷಕ್ಕೂ ನನ್ನ ಅನಂತಾನಂತ ವಂದನೆಗಳು. ॥೪೮-೪೯॥

ಈಗಲೇ ಹೋಗಿ ನಾನು ಆ ವೃಕ್ಷವನ್ನು ನೋಡಬೇಕು. ಮತ್ತು ಅದನ್ನು ಜಲಸೇಚನಾದಿಗಳಿಂದ ಪ್ರಯತ್ನಪೂರ್ವಕವಾಗಿ ಇನ್ನೂ ಬೆಳೆಸಬೇಕು. ಮುಂದೆ ಬರುವ ಶಿವರಾತ್ರಿಯ ದಿನ ಅದೇ ಮರದ ದಳಗಳಿಂದ ಈಶ್ವರಪೂಜೆಯನ್ನು ಭಕ್ತಿಯಿಂದ ನೆರವೇರಿಸಬೇಕು. ॥೫೦-೫೧॥

ತದಿದಂ ನಾರ್ಮದಂ ಲಿಂಗಂ ನೇಯಂ ತತ್ರ ವನೇ ಮುದಾ ।
ಬಿಲ್ವಮೂಲೇ ಸ್ಥಾಪನೀಯಂ ಸ್ಥಾತವ್ಯಂ ತತ್ರ ಸರ್ವದಾ ॥೫೨॥

ಅತಃ ಪರಂ ಭಾವಿನೀಕಾ ಕದಾ ಭೂತಾ ವಿಭೂತಿದಾ ।
ತಾವಚ್ಛರೀರಮೇತನ್ಮೇ ರಕ್ಷಣೀಯಂ ಪ್ರಯತ್ನತಃ ॥೫೩॥

ಕಥಂ ತಾವದ್ಭಾಗ್ಯಂ ಭವತಿ ಬಹುಪುಣ್ಯಾಂಬುಧಿಕೃತಂ
ತಥಾಭೂತಾ ಭೂತಾ ನವವಿಮಲಬಿಲ್ವೀದಳಕುಲಂ ।
ತಥಾ ಶಾಂಗಂ ಲಿಂಗಂ ತದಿದಮತಿತುಂಗಂ ತನುರಿಯಂ
ಚತುರ್ಣಾಂ ಯೋಗೋಽಯಂ ಶಿವಕರುಣಯಾ ಜಾಯತ ಇತಿ ॥೫೪॥

ಯದಿ ಪ್ರಪಶ್ಯಾಮ್ಯಮಿತೈರಪೂರ್ವೈಃ
ಪುಣ್ಯೈಸ್ತದಾ ಬಿಲ್ವದಳಂ ಸಲಿಂಗಂ ।
ತದಾ ಜಿತೋ ಮೃತ್ಯುರಘಾದ್ರಿನಾಶೋ
ಜಾತೋಽಪಿ ಜಾತಿಸ್ಮರತಾಪಿ ಮುಕ್ತಿಃ ॥೫೫॥

ಈ ನರ್ಮದಾಲಿಂಗವನ್ನು ಅದೇ ಬಿಲ್ವವೃಕ್ಷದ ಮೂಲದಲ್ಲಿ ಪ್ರತಿಷ್ಠೆಮಾಡಬೇಕು. ಅಲ್ಲಿಯೇ ನಾನೂ ಸರ್ವದಾ ವಾಸಿಸುತ್ತಾ, ಪುಣ್ಯಪ್ರದವಾದಶಿವರಾತ್ರಿಯು ಬರುವವರೆಗೂ ಈ ಶರೀರವನ್ನು ರಕ್ಷಿಸಿಕೊಂಡಿರಬೇಕು. ॥೫೨-೫೩॥

ಪವಿತ್ರವಾದ ಶಿವರಾತ್ರಿ, ಕೋಮಲವಾದ ಅಂತಹ ಬಿಲ್ವವೃಕ್ಷ, ಅತಿಮಹಿಮೆಯುಳ್ಳ ನರ್ಮದಾಲಿಂಗ, ಉಜ್ಜ್ವಲವಾದ ಈ ಶರೀರ, ಈ ನಾಲ್ಕನ್ನೂ ಸೇರಿಸಿ ಶಿವರಾತ್ರಿವ್ರತವನ್ನು ನಡೆಸುವ ಪರಮಭಾಗ್ಯವು ನನಗಿರುವುದೇ ? ಈ ನಾಲ್ಕು ವಸ್ತುಗಳ ಸೇರುವಿಕೆಯೂ ಶಿವನ ಅನುಗ್ರಹದಿಂದಲೇ ಅಲ್ಲವೆ? ಈ ರೀತಿ ನಡೆಸುವುದರಿಂದ ನನಗೆ ಬರುವ ಸುಕೃತವು ಸಮುದ್ರರೂಪದಲ್ಲಿ ಅಗಾಧವಾಗಿರುವುದು. ॥೫೪॥

ಅಖಂಡಪುಣ್ಯಫಲದಿಂದ ಆ ರೀತಿ ಬಿಲ್ವದಳಗಳಿಂದ ಅರ್ಚಿತವಾದ ಶಿವಲಿಂಗವನ್ನು ಆ ದಿನ ಪೂಜಿಸುವ ಸನ್ನಿವೇಶವು ಒದಗಿದುದೇ ಆದರೆ, ಆಗ ನಾನು ಮೃತ್ಯುವನ್ನು ನಿಗ್ರಹಿಸಿದಂತಾಯಿತು. ನನ್ನ ಪಾಪದ ಪರ್ವತವು ಭಸ್ಮವಾದಂತಾಗಿ ಅನೇಕ ಜನ್ಮಗಳ ಸ್ಮರಣೆಯಿಂದಲೇ ನಾನು ಮುಕ್ತಿಯನ್ನೂ ಹೊಂದುವಂತಾಗುವೆನು. ॥೫೫॥

ತತ್ಸಾಧನೀಯಂ ಬಹುಭಿಃ ಪ್ರಯತ್ನೈ
ರ್ನ ಚೇದಿದಂ ಜನ್ಮಕೃತಂ ವೃಥಾಸ್ಯಾತ್ ।
ತಸ್ಮಾದವಶ್ಯಂ ಶಿವಲಿಂಗಬಿಲ್ವೇ
ತೇ ದುರ್ಲಭೇ ಜನ್ಮನಿ ಜನ್ಮನೀತಿ ॥೫೬॥

ಕೈಶ್ಚಿತ್ಪೂರ್ವಭವಾರ್ಜಿತೈರ್ಬಹುವಿಧೈಃ ಪುಣ್ಯೈಶ್ಶಿವಾರಾಧನಂ
ಸ್ಮೃತ್ವಾ ಮೃತ್ಯುತಿರಸ್ಕ್ರಿಯಾಮಪಿ ಮುಹುರ್ನಾನಾದಿದುಃಖಕ್ಷಯಂ ।
ಪಶ್ಯತ್ಯೇವ ಮಹಾನಿಶಿ ತ್ರಿನಯನಂ ಸಂಪೂಜ್ಯ ಬಿಲ್ವೀದಲೈ
ರ್ಭೂತಾಯಾಂ ಧೃತಭೂತಿಪೂತಹೃದಯಃ ಶುದ್ಧಾಸಿತಾಯಾಂ ಮುಹುಃ ॥೫೭॥

ಮಹೇಶ್ವರಾನುಗ್ರಹ ಭಾಜನಾನಾಂ
ತತ್ಪುಣ್ಯಲಾಭೋ ಭವತೀತಿ ಮನ್ಯೇ ।
ಅತಃ ಕಥಂ ತಾದೃಶಮಸ್ತಿಪುಣ್ಯಂ
ಕಥಂ ತದನ್ವೇಷಣಚಿಂತನಂ ವಾ ॥೫೮॥

ಹೇಗಾದರೂ ಮಾಡಿ ಅದೇ ರೀತಿ ಶಿವರಾತ್ರಿಯ ದಿನ ಪೂಜೆಮಾಡಲೇ ಬೇಕು. ಇಲ್ಲದಿದ್ದರೆ ಈ ಜನ್ಮವೇ ವ್ಯರ್ಥವಾಗುವುದು ಆದ್ದರಿಂದ ಪ್ರಯತ್ನಶತ ದಿಂದ ಪ್ರತಿ ಜನ್ಮದಲ್ಲಿಯೂ, ಈ ದುರ್ಲಭವಾದ ಶಿವಲಿಂಗ ಮತ್ತು ಬಿಲ್ವದಳ ಗಳನ್ನು ಹೊಂದುವಂತಹ ಪುಣ್ಯವನ್ನು ಸಂಪಾದಿಸಬೇಕು. ॥೫೬॥

ಶಿವರಾತ್ರಿಯ ನಿಶಿಯಲ್ಲಿ ಯಾರು ವಿಭೂತಿರುದ್ರಾಕ್ಷಾದಿ ಧಾರಣಾದಿಗಳಿಂದ ಶುದ್ಧಮನಸ್ಕರಾಗಿ, ಪರಮೇಶ್ವರನನ್ನು ಬಾರಿಬಾರಿಗೂ ಬಿಲ್ವಪತ್ರಾದಿಗಳಿಂದ ಪೂಜಿ ಸುವರೋ, ಅವರು ಪೂರ್ವಜನ್ಮಗಳಲ್ಲಿ ಸಂಪಾದಿಸಿದ್ದ ಪಾಪರಾಶಿಯನ್ನೆಲ್ಲಾ ಕಳೆದು ಕೊಂಡು, ಮೃತ್ಯುವನ್ನೂ ಜಯಿಸಿ ಸಕಲ ವಿಧ ದುಃಖಗಳಿಂದ ಮುಕ್ತರಾಗುವರು. ಆದರೆ ಆ ದಿನ ಶಿವಾರಾಧನೆ ಮಾಡುವ ಬುದ್ಧಿ ಬರಬೇಕಾದರೂ ಪೂರ್ವಾರ್ಜಿತ ಸುಕೃತರಾಶಿಯೇ ಮುಖ್ಯ ಕಾರಣವಾಗುವುದು. ॥೫೭॥

ಅಲ್ಲದೆ ಮಹೇಶ್ವರಾನುಗ್ರಹಕ್ಕೆ ಪಾತ್ರರಾದವರಿಗೆ ಮಾತ್ರ ಅಷ್ಟು ಪುಣ್ಯಪ್ರಾ ಪ್ತಿಯು ಸಂಭವಿಸುವುದು. ಅಂತಹ ಪುಣ್ಯವು ನಮಗೆ ಹೇಗೆ ಲಭಿಸೀತು? ಆ ಪುಣ್ಯಾನ್ವೇಷಣಮಾಡುವ ಚಿಂತೆಯಾದರೂ ನಮಗೇತಕ್ಕೆ? ॥೫೮॥

ಏವಮುಕ್ತ್ವಾ ಮಹಾದೇವಂ ನತ್ವಾ ಭೂಯಃ ಪ್ರಯತ್ನತಃ ।
ಕ್ವ ಬಿಲ್ವತರುರಸ್ತೀತಿ ನಿರ್ಗತಃ ಶಿವಮಂದಿರಾತ್ ॥೫೯॥

ಏವಂ ಸ್ವಪ್ನೋ ಮಯಾ ದೃಷ್ಟಃ ಶರೀರಂ ಪುಲಕಾಂಚಿತಂ ।
ಆನಂದೋಪಿ ಪ್ರವೃದ್ಧೋ ಮೇ ತತ್ಕಥಾಶ್ರವಣಾದಿಹ ॥೬೦॥

ಇತ್ಯುಕ್ತಂ ತದ್ವಚಸ್ತಾವಚ್ಛ್ರುತಮೇವ ಮಯಾ ಹರೇ ।
ತದಾನೀಮಾಗತಃ ಕಶ್ಚಿದ್ಭಿಲ್ಲೋ ಜಾಲಕರಃ ಖರಃ ॥೬೧॥

ಸ ತಾನಾಗತ್ಯ ಜಾಲೇನ ಗೃಹೀತ್ವಾ ಗಂತುಮುದ್ಯತಃ ।
ತಮಾಹ ವಾನರಃ ಕಶ್ಚಿತ್ಕುಶಲೋ ಭಿಲ್ಲಮಾಸ್ತಿಕಃ ॥೬೨॥

॥ ವಾನರ ಉವಾಚ ॥

ಕಿಮಸ್ಮಾಕಂ ಕೃತ್ಯಂ ವದ ವದ ಮುದಾ ಭಿಲ್ಲವಚನೈಃ
ಶಿಶೂನಾಂ ಕ್ರೀಡಾರ್ಥಂ ಮೃಡಸದನನಿರ್ಮಾಲ್ಯಮಧುನಾ ।
ವಿನೇತುಂ ಜಾತಂ ಮೇ ಗಮನಮಧುನಾ ತೇಪಿ ಶಿಶವಃ
ಪ್ರತೀಕ್ಷಾಂ ಕುರ್ವಂತಿ ಪ್ರತಿಲವಮಹೋ ಮಾತೃನಿಕಟೇ ॥೬೩॥

ಹೀಗೆ ಹೇಳಿ ಆ ಭಕ್ತನು ಮತ್ತೆ ಮತ್ತೆ ಶಂಕರನನ್ನು ವಂದಿಸುತ್ತಾ "ಆ ಬಿಲ್ವವೃಕ್ಷವೆಲ್ಲಿರುವುದು" ಎಂದು ಹುಡುಕಿಕೊಂಡು ಶಿವಾಲಯದಿಂದ ಹೊರಹೊರಟನು." ಅಂತಹ ಸ್ವಪ್ನವೊಂದು ನನಗೆ ಗೋಚರವಾಯಿತು. ಅಂತಹ ಶೈವನ ಮಾತುಗಳನ್ನು ಕೇಳಿದ್ದರಿಂದಲೇ ಆನಂದವೂ ನನಗೆ ಅಭಿವೃದ್ಧಿಯಾಯಿತು. ॥೫೯-೬೦॥

ನಾರಾಯಣನೇ, ಹೀಗೆ ಆ ವಾನರವು ಹೇಳಿದ ಮಾತುಗಳನ್ನು ನಾನೇ ಕೇಳಿದೆನು. ಅಷ್ಟುಹೊತ್ತಿಗೆ ಸರಿಯಾಗಿ ಒಬ್ಬ ಬೇಡರವನು ಅಲ್ಲಿಗೆ ಬಂದು ಬಲೆಯನ್ನು ಬೀಸಿ, ಆ ಕಪಿಗಳನ್ನೆಲ್ಲಾ ಹಿಡಿದುಬಿಟ್ಟನು. ಒಡನೆಯೇ ಅವೆಲ್ಲವನ್ನು ಕಟ್ಟಿ ಹೊತ್ತುಕೊಂಡು ಹೋಗುತ್ತಿರುವಾಗ ಚತುರಮತಿಯುಳ್ಳ ಒಂದು ವಾನರವು ಆ ಭಿಲ್ಲನು ಆಸ್ತಿಕನೆಂದರಿತು ಬೇಡರವನೊಂದಿಗೆ ಹೀಗೆಂದಿತು. ॥೬೧-೬೨॥

"ಎಲೈ ಭಿಲ್ಲನೇ, ನಿನ್ನಲ್ಲಿ ಹೆಚ್ಚುಮಾತೇನು? ನಮ್ಮಿಂದ ನಿನಗೆ ಆಗಬೇಕಾದ ಕಾರ್ಯವಾವುದಿರುವುದು? ನಾವು ನಮ್ಮ ಮರಿಗಳಿಗೆ ಶಿವನಿರ್ಮಾಲ್ಯವನ್ನು ಪ್ರಸಾದರೂಪದಿಂದ ಆಟಕ್ಕಾಗಿ ತಂದುಕೊಡಬೇಕೆಂದು ಈ ಶಿವಾಲಯಕ್ಕೆ

ಇದಂ ನಿರ್ಮಾಲ್ಯಮಾದಾಯ ಧೃತ್ವಾ ಶಿರಸಿ ಕೇವಲಂ ।
ಧೃತ್ವಾ ಭೂತಿಂ ಸ್ತನ್ಯಪಾನಂ ಕರ್ತುಮಿಚ್ಛಂತಿ ಬಾಲಕಾಃ ॥೬೪॥

ವನಿತಾ ಗುರ್ವಿಣೀ ಸಾಭೋ ಸಾ ಸಾಧ್ವೀ ಬಿಲ್ವಪಲ್ಲವಂ ।
ಜಗ್ಧ್ವಾ ಶಿವಾರ್ಪಿತಂ ಪುತ್ರಾನ್ ಸುಷುವೇ ತತ್ತದೌಷಧಂ ॥೬೫॥

ಪುತ್ರಾಶ್ಶಿವರತಾ ಏವ ಭವಂತ್ವಿತಿ ವಿಶೇಷತಃ ।
ಸಾ ತಾವಚ್ಛಿವನಿರ್ಮಾಲ್ಯಭೋಜನಪ್ರವಣಾ ಸತಿ ॥೬೬॥

ಮಯಾ ಗೃಹೀತ್ವಾ ನಿರ್ಮಾಲ್ಯಂ ಗಂತವ್ಯಮಿದಮಾದರಾತ್ ।
ದೇಯಂ ತೇಭ್ಯಸ್ತತಸ್ತೇಸ್ಯುಸ್ಸ್ತನ್ಯಾಯಾಭ್ಯುದ್ಯತಾ ಅಪಿ ॥೬೭॥

ಸ್ತನ್ಯಾಭಾವೇ ಶಿಶೂನಾಂ ತು ನ ಜೀವನಮಿತಿ ಸ್ಮರ ।
ಅತಸ್ತ್ಯಜಾಧುನಾ ತೇಷು ಕೃಪಾ ಯದಿ ಭವೇತ್ತದಾ ॥೬೮॥

ಬಂದಿದ್ದೆವು. ಈಗ ಆ ಮರಿಗಳಾದರೋ ತಾಯಿಯ ಬಳಿಯಲ್ಲಿಯೇ ನಿಂತು ನಮ್ಮ ಆಗಮನವನ್ನೇ ನಿರೀಕ್ಷಿಸುತ್ತಿರುವುವು. ॥೬೩॥

ನಾವು ಹೋದ ಒಡನೆಯೇ ಶಿವನಿರ್ಮಾಲ್ಯವನ್ನು ಆ ಮರಿಗಳು ಶಿರಸ್ಸಿನಲ್ಲಿ ಮುಡಿದು, ಭಸ್ಮವನ್ನು ಹಣೆಗಿಟ್ಟು, ಅನಂತರ ಸ್ತನ್ಯಪಾನಕ್ಕೆ ಆರಂಭಿಸುವುವು. ನನ್ನ ಪತ್ನಿಯಾದರೋ ಗರ್ಭಿಣಿಯಾಗಿರುವಳು. ಬಿಲ್ವದಳವನ್ನು ಈಶ್ವರನಿಗರ್ಪಿಸಿ ಅದನ್ನೇ ಆಹಾರದಂತೆ ಭುಂಜಿಸಿ ಇಲ್ಲಿನವರೆಗೂ ಮರಿಗಳನ್ನು ಹೆತ್ತಿರುವಳು. ಯಾವಾಗಲೂ ಅವಳಿಗೆ ಬಿಲ್ವದಳವೇ ಮುಖ್ಯವಾದ ಔಷಧಿಯಂತಿರುವುದು. ॥೬೪-೬೫॥

ಹಾಗೆ ಬಿಲ್ವದಳವನ್ನೇ ಭಕ್ಷಿಸುವ ತಾಯಿಯ ಉದ್ದೇಶವೇನಾಗಿತ್ತೆಂದರೆ ತನ್ನಲ್ಲಿ ಮುಂದೆ ಜನಿಸುವ ಮಕ್ಕಳೂ ಶಿವಪ್ರಸಾದಭಕ್ಷಣದಲ್ಲಿ ಆಸಕ್ತಿಯುಳ್ಳವರಾಗಿರಲಿ ಎಂಬುದೇ. ಆದ್ದರಿಂದ ಎಲೈ ಭಿಲ್ಲನೇ, ಈಗಲೇ ನಾನು ಈ ಶಿವಪ್ರಸಾದವನ್ನು ಆ ಮರಿಗಳಿಗೆ ಕೊಡಲೇಬೇಕು. ಅವು ಈ ಪ್ರಸಾದವನ್ನು ಸ್ವೀಕರಿಸಿದ ಮೇಲೆ ತಾಯಿಯ ಹಾಲನ್ನು ಕುಡಿಯುವುವು. ॥೬೬-೬೭॥

ಭಿಲ್ಲನೇ, ಮಕ್ಕಳಿಗೆ ತಾಯಿಯ ಹಾಲಿಲ್ಲದಿದ್ದರೆ ಅವು ಬದುಕುವುದು ಸಾಧ್ಯವೇ? ಅದರಿಂದಲಾದರೂ, ಅವುಗಳ ಮೇಲೆ ದಯೆಯಿದ್ದರೆ ನಮ್ಮನ್ನು ಬಿಡುವವನಾಗು" ಎಂದು ಕೇಳಿಕೊಂಡ ಕಪಿಯ ಮಾತನ್ನು ಆಶ್ಚರ್ಯದಿಂದ ಕೇಳಿದ ಭಿಲ್ಲನು,

ಇತಿ ತದ್ವಚನಂ ಶ್ರುತ್ವಾ ಕೌತುಕಂ ಸ ಧನುರ್ಧರಃ ।
ಸ್ಥಿತೋ ಜಾಲಂ ಚ ವಿಚ್ಛಿದ್ಯ ತನ್ಮಧ್ಯೇ ತೇ ವಿನಿರ್ಗತಾಃ ॥೬೯॥

ತ್ವರಯಾ ತೇ ವನಂ ಗತ್ವಾ ಬಿಲ್ವಾನಾರುಹ್ಯ ಭೂರುಹಾನ್ ।
ವಿಚಾರನಿರತಾ ಜಾತಾಸ್ತೇ ಸರ್ವೇಽಪಿ ಪರಸ್ಪರಂ ॥೭೦॥

॥ ವಾನರಾ ಊಚುಃ ॥

ಅಹೋ ಕಥಂ ಸ್ವಪ್ನಕಥಾ ಶ್ರುತಾ ಸಾ
ತತ್ರಾಪಿ ಭೂತಾ ನಿಶಿ ಬಿಲ್ವಪೂಜಾ ।
ಸಾ ದುರ್ಲಭೇತ್ಯುಕ್ತಮಘಾಪಹಾರೇ
ಶಕ್ಯಾಪಿ ಮುಕ್ತ್ಯೈ ಭವತೀತಿ ಸತ್ಯಂ ॥೭೧॥

ಸಂಭಾವಿತಾ ಏವ ಭವಂತಿ ವಿಘ್ನಾಃ
ಶಿವಾರ್ಚನೇ ತೇನ ಸ ವಿಘ್ನನಾಶಃ ।
ಅಪೇಕ್ಷಿತಸ್ಸ್ಯಾದಿತಿ ಚಿಂತ್ಯತೇ ಕಥಂ
ಕಥಂ ಭವಿಷ್ಯತ್ಯಧುನಾ ವದೈವಂ ॥೭೨॥

ಒಡನೆಯೇ ಅವುಗಳ ಕೋರಿಕೆಯಂತೆ ಆ ವಾನರಗಳನ್ನು ಬಲೆಯಿಂದ ಬಿಡಿಸಿ ಕಳುಹಿಸಿದನು. ಕೂಡಲೇ ಅವು ಜಾಗ್ರತೆಯಾಗಿ ವನಕ್ಕೆ ಹೋಗಿ, ಬಿಲ್ವವೃಕ್ಷದ ಮೇಲೆ ಕುಳಿತು ತಮ್ಮತಮ್ಮಲ್ಲಿಯೇ ಹೀಗೆ ವಿಚಾರಮಾಡತೊಡಗಿದವು. ॥೬೮-೬೯-೭೦॥

ಆಹಾ! ಸ್ವಪ್ನದಲ್ಲಿ ನಡೆದ ವಿಚಾರವು ನಿಜವಾದದ್ದು. ಮಹಾಶಿವರಾತ್ರಿನಿಶಿಯಲ್ಲಿ ಈಶ್ವರನನ್ನು ಆರಾಧಿಸುವುದು ಪುಣ್ಯಾಲಭ್ಯವಾದದ್ದು. ಪಾಪಕರ್ಮಗಳಿಂದ ಅದಕ್ಕೆ ಅಡ್ಡಿಆತಂಕಗಳು ಹೆಚ್ಚು. ಕಷ್ಟಪಟ್ಟು ಆ ರೀತಿ ಶಿವಾರ್ಚನೆಮಾಡಿದರೆ ಸಕಲ ಪಾಪಗಳೂ ನಾಶವಾಗಿ, ಶಾಶ್ವತವಾದ ಮುಕ್ತಿ ದೊರೆಯುವುದೆಂಬುದು ನಿಜ. ॥೭೧॥

ಶಿವಾರ್ಚನೆಗೆ ಅನೇಕ ವಿಘ್ನಗಳು ಒದಗುವುದು ಸಹಜ. ಆದರೆ ಆ ವಿಘ್ನನಾಶಕ್ಕೆ ಶಿವಾರ್ಚನೆಯೇ ಮುಖ್ಯಸಾಧನ. ಕೇವಲ ಅಪೇಕ್ಷೆಯಿಂದಾಗಲಿ, ಯೋಚನೆಯಿಂದಾಗಲಿ ಆ ವಿಧದ ಶಿವಾರ್ಚನೆಗೆ ಅವಕಾಶವು ಎಂದಾದರೂ ದೊರಕೀತೇ? ॥೭೨॥

ಇತ್ಯುಕ್ತ್ವಾ ತೇ ಸ್ಥಿತಾಸ್ತತ್ರ ನಿಹತಾಶ್ಚ ಶರೈಸ್ತತಃ ।
ಕ್ವ ಗತಾಃ ಸವಿಚಾರೋಽಪಿ ಕರ್ತವ್ಯ ಇತಿ ಭಾತಿ ನೋ ॥೭೩॥

॥ ಭೃಗುರುವಾಚ ॥

ಇತಿ ತದ್ವಚನಂ ಶ್ರುತ್ವಾ ಸ ವಿಷ್ಣುಃ ಪ್ರೀತಮಾನಸಃ ।
ಇದಂ ಕೌತುಕಮಿತ್ಯುಕ್ತ್ವಾ ಗೌತಮೇನಾನ್ವಿತೋ ಯಯೌ ॥೭೪॥

ಯತ್ರ ತೇ ಶರಘಾತೇನ ಪೀಡಿತಾಸ್ತರುಕೋಟರೇ ।
ಪತಿತಾಸ್ತಾನ್ವಿಲೋಕ್ಯಾಯಂ ಗೌತಮಃ ಪ್ರಾಹ ಮಾಧವಂ ॥೭೫॥

॥ ಗೌತಮ ಉವಾಚ ॥

ಏಷಾಂ ಶರಕೃತಾ ಪೀಡಾ ಯಥಾ ನ ಸ್ಯಾತ್ತಥಾ ತ್ವಯಾ ।
ಕರ್ತವ್ಯಂ ಪಾಲನಂ ಧರ್ಮಃ ಸೋಽಯಮತ್ಯಂತದುರ್ಲಭಃ ॥೭೬॥

ಯೇ ಪೂಜಯಂತಿ ಶಿವಮಾದರಪೂರ್ವಕಂ ತೇ
ವಂದ್ಯಾ ಭವಂತಿ ಸತತಂ ಪರಿಪಾಲನೀಯಾಃ ।

ಹೀಗೆ ಆ ವಾನರಗಳು ಯೋಚಿಸುತ್ತಾ ಅಲ್ಲಿ ಕುಳಿತಿದ್ದುವು. ಅಷ್ಟರಲ್ಲಿಯೇ ಎಲ್ಲಿಂದಲೋ ಕೆಲವು ಬಾಣಗಳು ಬಂದವು. ಆದರಿಂದ ಆ ವಾನರಗಳು ಏನಾದುವು ಎಂಬುದೇ ನನಗೆ ಯೋಚನೆಯಾಗಿದೆ." ಎಂದು ಭೃಗುಮಹರ್ಷಿಯು ಹೇಳಲು ಅದನ್ನು ಕೇಳಿದ ವಿಷ್ಣುವು ಸಂತೋಷ ಮತ್ತು ಆಶ್ಚರ್ಯ ಇವುಗಳಿಂದ ಕೂಡಿ ಗೌತಮಮಹರ್ಷಿಯೊಡನೆ ಅವುಗಳನ್ನು ಹುಡುಕಿಕೊಂಡು ಪ್ರಯಾಣಮಾಡಿದನು. ||೭೩-೭೪||

ಹಾಗೆಯೇ ಮುಂದೆ ಬರುತ್ತಿರುವಾಗ, ಬಾಣಗಳ ಏಟಿನಿಂದ ಗಾಯಗೊಂಡು ಬಿದ್ದಿದ್ದ ವಾನರಗಳನ್ನು ನೋಡಿ ಗೌತಮನು ವಿಷ್ಣುವಿನೊಡನೆ ಹೀಗೆಂದನು — "ಓಹೋ, ಈ ಕಪಿಗಳೇ ಈಗ ಶರಘಾತಕ್ಕೆ ಸಿಕ್ಕಿವೆ. ಹೇಗಾದರೂ ಮಾಡಿ ಇವುಗಳನ್ನು ರಕ್ಷಿಸುವುದೇ ಪರಮಧರ್ಮ. ಇಂತಹ ಸತ್ಕಾರ್ಯವು ಲಭಿಸುವುದೇ ದುರ್ಲಭವಲ್ಲವೇ ! ||೭೫-೭೬||

ಯಾರು ಈಶ್ವರನನ್ನು ಭಕ್ತಿಯಿಂದ ಆರಾಧಿಸುವರೋ, ಅವರೇ ನಿಜವಾಗಿಯೂ ಪೂಜ್ಯರು. ಅವರನ್ನು ಸರ್ವದಾ ರಕ್ಷಿಸಬೇಕು. ಈಶ್ವರಾರಾಧಕರ ವಿಷಯ

ಜಾತಿರ್ನ ತಾವದಧುನಾ ತು ವಿಚಾರಣೀಯಾ
ಕಿಂ ಜಾತಿಭೇದವಿಷಯೇಣ ವಿಚಿಂತನೇನ ॥೭೭॥

ಇತಿ ತದ್ವಚನಂ ಶ್ರುತ್ವಾ ಚಕಾರ ಪರಿಪಾಲನಂ।
ಸೋಽಪಿ ನಾರಾಯಣಸ್ತೇಷಾಂ ಗೌತಮೇನ ಸಹಾದರಾತ್ ॥೭೮॥

ತತಃ ಕಾಲೇನ ಭೂತಾಪಿ ಸಾ ಮಾಘೀ ಸಮುಪಾಗತಾ।
ತದಾನೀಂ ವಾನರಾಸ್ಸರ್ವೇ ಸಂತುಷ್ಟಾಶ್ಶಿವತತ್ಪರಾಃ ॥೭೯॥

ಸೇಯಮಭ್ಯಾಗತಾ ಭೂತಾ ಪುಣ್ಯಭೂತಾ ಶಿವಪ್ರದಾ।
ಶಿವರಾತ್ರಿರಿಯಂ ದೃಷ್ಟ್ವಾ ಧನ್ಯಾಸ್ಸ್ಮೋ ನಾತ್ರ ಸಂಶಯಃ ॥೮೦॥

ಇತ್ಯುಕ್ತ್ವಾ ಸಾಯಮಭ್ಯೇತ್ಯ ವೃದ್ಧಗಂಗಾಜಲೇ ಮುದಾ।
ಸ್ನಾತ್ವಾ ಚಕ್ರುರ್ಲಲಾಟಾದೌ ದವಭಸ್ಮತ್ರಿಪುಂಡ್ರಕಂ ॥೮೧॥

ತತಃ ಪರಂ ಬಿಲ್ವಪತ್ರಾಣ್ಯಾದಾಯ ವಿಮಲಾನ್ಯಪಿ।
ಆಗತಾಶ್ಶಿವಪೂಜಾರ್ಥಂ ತಸ್ಮಿನ್ನೇವ ತ್ರಿಯಂಬಕೇ ॥೮೨॥

ದಲ್ಲಿ ಜಾತಿಯನ್ನಾಗಲಿ, ವ್ಯಕ್ತಿಯನ್ನಾಗಲಿ ಕುರಿತು ಚರ್ಚಿಸಬಾರದು. ಹಾಗೆ ಚರ್ಚಿಸುವುದು ವ್ಯರ್ಥವಾದುದು. ॥೭೭॥

ಎಂದು ಹೇಳುತ್ತಾ ಮಾಧವ ಮತ್ತು ಗೌತಮರು ಆ ವಾನರಗಳಿಗೆ ಶರಬಾಧೆಯನ್ನು ತಪ್ಪಿಸಿ ಕಾಪಾಡಿದರು. ಅನಂತರ ಕೆಲವು ದಿನಗಳಾದ ಮೇಲೆ ಮಾಘಮಾಸದ ಶಿವರಾತ್ರಿಯ ದಿನವು ಪ್ರಾಪ್ತವಾಯಿತು. ಆ ದಿನ ರಾತ್ರಿ ವಾನರಗಳೆಲ್ಲಾ ಈಶ್ವರಾರಾಧನೆ ಮಾಡಲು ಪ್ರಯತ್ನಿಸಿದುವು. ॥೭೮-೭೯॥

"ಆಹಾ! ಪುಣ್ಯಕರವಾದ ಈ ಶಿವರಾತ್ರಿಯ ದಿನವನ್ನು ಕಂಡ ನಾವೇ ಧನ್ಯರು" ಎಂದು ಹೇಳುತ್ತಾ ಆ ವಾನರಗಳೆಲ್ಲವೂ ವೃದ್ಧಗಂಗಾನದಿಯಲ್ಲಿ ಸಾಯಂಕಾಲ ಸ್ನಾನಮಾಡಿದುವು. ಅಲ್ಲಿಯೇ ಇದ್ದ ಕಾಡುಕಿಚ್ಚಿನ ಬೂದಿಯನ್ನು ಹಣೆಯಲ್ಲಿಟ್ಟು ತ್ರಿಪುಂಡ್ರರಚನೆ ಮಾಡಿಕೊಂಡುವು. ॥೮೦-೮೧॥

ಪರಿಶುದ್ಧವಾದ ಮತ್ತು ಕೋಮಲವಾದ ಬಿಲ್ವಪತ್ರೆಗಳನ್ನು ಸಂಪಾದಿಸಿ, ಶಿವಪೂಜೆಗಾಗಿ ತ್ರಿಯಂಬಕೇಶ್ವರ ದೇವಾಲಯಕ್ಕೆ ಬಂದವು. ಅಲ್ಲಿ ಪುಲಸ್ತಿ ಎಂಬ

ತದಾ ಶಿವಾಲಯೇ ಕಶ್ಚಿತ್ಪುಲಸ್ತಿರಿತಿ ವಿಶ್ರುತಃ ।
ಕೃತ್ವಾ ದ್ವಾರನಿರೋಧಾನಿ ಚಕಾರ ಶಿವಪೂಜನಂ ॥೮೩॥

ಪೂಜಾಂ ಕೃತ್ವಾ ಮುನಿಶ್ರೇಷ್ಠೋ ರಾತ್ರೌ ಯಾಮತ್ರಯಾವಧಿ ।
ಪ್ರಣಾಮಾನ್ಕರ್ತುಮೀಶಾಯ ದ್ವಾರಮುತ್ಪಾಟ್ಯ ನಿರ್ಗತಃ ॥೮೪॥

ತದಾ ತಾನ್ವಾನರಾನ್ ದೃಷ್ಟ್ವಾ ಶಿವಪೂಜೋದ್ಯತಾನಪಿ ।
ಸ್ವಾಂಗಾಗತಾಂಶ್ಚುಕೋಪಾಥ ತೇನ ಕ್ರೋಧಾಗ್ನಿರುತ್ಥಿತಃ ॥೮೫॥

ಕ್ರೋಧಾಗ್ನಿನಾ ಸಮಾಕ್ರಾಂತಾಸ್ತೇ ಸರ್ವೇ ವಾನರಾಸ್ತದಾ ।
ತವಾಪಿ ಹನನಂ ಕಾರ್ಯಮಿತ್ಯೂಚುಸ್ತೇ ತತೋ ಮೃತಾಃ ॥೮೬॥

ತತಃ ಪರಂ ವಿಮಾನಾನಿ ಸಮಾರುಹ್ಯಾತಿಪಾವನಾಃ ।
ವಾನರಾ ಅಪಿ ತೇ ಪ್ರಾಪುರ್ಬ್ರಹ್ಮಲೋಕಮನಾಮಯಂ ॥೮೭॥

ಬ್ರಹ್ಮಾ ತಾನಾಗತಾನ್ ದೃಷ್ಟ್ವಾ ದೂರಾದುತ್ಥಾಯ ಸಾದರಂ ।
ಪೂಜಯಾಮಾಸ ಯತ್ನೇನ ಸ್ವಾಸನೇ ಸಂನಿವೇಶ್ಯ ಚ ॥೮೮॥

ಮಹರ್ಷಿಯು ಆ ಶಿವಾಲಯದ ಬಾಗಿಲನ್ನು ಹಾಕಿಕೊಂಡು ಈಶ್ವರಪೂಜೆಮಾಡುತ್ತಿದ್ದನು. ||೮೨-೮೩||

ಆ ರಾತ್ರಿಯಲ್ಲಿ ಆ ಋಷಿಯು ಹಾಗೆ ಮೂರು ಜಾವದಲ್ಲಿಯೂ ಶಿವಾರ್ಚನೆ ಮಾಡಿ, ನಾಲ್ಕನೆಯ ಯಾಮದಲ್ಲಿ ಶಿವಾಲಯ ಪ್ರದಕ್ಷಿಣೆ ಮಾಡಲೋಸುಗ ಬಾಗಿಲು ತೆರೆದನು. ಅಲ್ಲಿ ಶಿವಪೂಜೆಗಾಗಿ ಕಾದು ನಿಂತಿದ್ದ ವಾನರಗಳನ್ನು ನೋಡಿದರೂ, ಋಷಿಯು ತನ್ನ ಹತ್ತಿರಕ್ಕೆ ಹಾರಿಬಂದ ಕೋತಿಗಳ ಮೇಲೆ ಅತ್ಯಂತ ಕೋಪದಿಂದ ಕ್ರೋಧಾಗ್ನಿಯನ್ನು ಪ್ರಯೋಗಿಸಿದನು. ||೮೪-೮೫||

ಆ ಅಗ್ನಿಯಿಂದ ಸಂತಪ್ತಗಳಾದ ವಾನರಗಳು ನಿನಗೂ ಅದೇರೀತಿ ಮರಣವುಂಟಾಗಲಿ ಎಂದು ಹೇಳುತ್ತಲೇ ಮೃತಪಟ್ಟವು. ಒಡನೆಯೇ ಮೂಕಪ್ರಾಣಿಗಳೆನಿಸಿದ ವಾನರಗಳಿಗೂ ದಿವ್ಯವಿಮಾನವು ಬಂದಿತು. ಅದರಲ್ಲಿ ಕುಳಿತು ಬ್ರಹ್ಮಲೋಕವನ್ನು ಸೇರಿದುವು. ||೮೬-೮೭||

ಇವುಗಳನ್ನು ನೋಡಿದೊಡನೆಯೇ ಬ್ರಹ್ಮನು ಪ್ರತ್ಯುತ್ಥಾನಾದಿಗಳಿಂದ ಉಪಚರಿಸಿ, ಅವುಗಳನ್ನು ತನ್ನ ಪೀಠದ ಮೇಲೆ ಕುಳ್ಳಿರಿಸಿ ಅರ್ಚಿಸಿದನು. ಹೀಗೆ

ತತಸ್ಸೂಜಿತಾನ್ವಿಲೋಕ್ಯಾಪಿ ಚತುರ್ಮುಖಸಭಾಸದಃ ।
ತಮೂಚುಃ ಕೃತಕೃತ್ಯಂ ತೇ ವಿಧಿಂ ಶಿವರತಾರ್ಚಕಂ ॥೮೯॥

॥ ಸಭಾಸದ ಊಚುಃ ॥

ಕಿಂ ಪುಣ್ಯಮೇತೈಃ ಕೃತಮತ್ರ ಯೇನ
ತ್ವದರ್ಚಿತೈರ್ಭಾವಿ ಕಿಮಸ್ತಿ ಭವ್ಯಂ ।
ಇದಂ ವಿಶಿಷ್ಯಾದ್ಯ ವದಾಶು ಯೇನ
ಸ್ಯಾದಸ್ಮದೀಯಂ ಚ ಮನಃ ಪ್ರಹೃಷ್ಟಂ ॥೯೦॥

॥ ಬ್ರಹ್ಮೋವಾಚ ॥

ಭೂತಾಯಾಂ ಶಿವಪೂಜನಾರ್ಥಮುಸಕೃದ್ಯತ್ನಃ ಕೃತೋ ವಾನರೈ
ರೇತೈರೇವ ಹಿ ಪಾಮರೈರಪಿ ತದಾ ಯತ್ನೋ ವೃಥೈವಾಭವತ್ ।
ತದ್ಯತ್ನಾತ್ಪರಮಾಗತಾಃ ಖಲು ಮಯಾ ಸಮ್ಯಕ್ಸಮಾರಾಧಿತಾ
ಸ್ತಂ ಯತ್ನಂ ಪ್ರವದಂತಿ ಸಂತತಮಹೋ ವೇದಾಃ ಸುಧಾಮಿತ್ಯಪಿ ॥೯೧॥

ಏತೇ ತಾವದಹೋ ಪುಲಸ್ತಿಬಹುಲಕ್ರೋಧಾಗ್ನಿತಪ್ತಾಸ್ತತ
ಸ್ತಂ ತಾವದ್ವಿನಿಹಂತುಮೇವ ಬಹುಧಾ ಚಕ್ರುಃ ಪ್ರಯತ್ನಂ ತತಃ ।
ಸಂದಗ್ಧಾಸ್ಸಮುಪಾಗತಾಃ ಪುನರಮೀ ತನ್ನಾಶನಾಯೋದ್ಯತಾ
ಸ್ತಂ ನಾಶೇ ಸತಿ ಲಿಂಗಪೂಜನರತೈಃ ಪ್ರಾಪ್ತವ್ಯಮೈಶಂ ಪದಂ ॥೯೨॥

ಶಿವಪೂಜಾಸಕ್ತರಾಗಿದ್ದ ಕಪಿಗಳನ್ನು ಭಕ್ತಿಯಿಂದ ಪೂಜಿಸುತ್ತಿರುವ ಬ್ರಹ್ಮನನ್ನು ನೋಡಿ ಆ ಸಭೆಯಲ್ಲಿದ್ದವರೆಲ್ಲರೂ ಬ್ರಹ್ಮನೊಡನೆ ಹೀಗೆಂದರು. ॥೮೮-೮೯॥

"ಬ್ರಹ್ಮದೇವನೇ, ಇವರು ಯಾರು? ಭೂಲೋಕದಲ್ಲಿ ಇವರು ಆಚರಿಸಿದ ಪುಣ್ಯಕಾರ್ಯವಾವುದು? ಏತಕ್ಕಾಗಿ ನೀನು ಇಷ್ಟು ಸಂಭ್ರಮದಿಂದ ಇವುಗಳನ್ನು ಪೂಜಿಸುವೆ? ಇವೆಲ್ಲವನ್ನೂ ದಯೆಯಿಟ್ಟು ನಮಗೆ ತಿಳಿಸುವವನಾಗು" ಎಂದು ಪ್ರಶ್ನಿಸಿದರು. ॥೯೦॥

ಆಗ ಬ್ರಹ್ಮನು "ಸಭ್ಯರೇ, ಇವು ಭೂಲೋಕದ ವಾನರಗಳು. ಮಹಾಶಿವ ರಾತ್ರಿಯ ದಿನ ಈಶ್ವರಾರಾಧನೆಗಾಗಿ ಬಹು ಪ್ರಯತ್ನಮಾಡಿದುವು. ಆದರೆ ಅವುಗಳ ಪ್ರಯತ್ನವೆಲ್ಲಾ ವ್ಯರ್ಥವಾಯಿತು. ಆದರೆ ಆ ದಿನ ಅಷ್ಟು ಪ್ರಯತ್ನಮಾಡಿದವರೂ

ಸ ಯತಿಃ ಶಿವಪೂಜಾಂತೇ ಪುಲಸ್ತಿಃ ಕ್ರೋಧಸಂಕುಲಃ ।
ರಾವಣೋ ಭವಿತಾ ಭಾಗ್ಯೈರಮಿತೈರ್ಲೋಕರಾವಣಃ ॥೯೩॥

ಶಿವಪೂಜಾಪ್ರಭಾವೇನ ಸ ಸರ್ವಾಮರದಂಡನಂ ।
ಕರಿಷ್ಯತಿ ನ ಸಂದೇಹೋ ಮಹದೈಶ್ವರ್ಯಸಂಯುತಃ ॥೯೪॥

ಅಜೇಯೋ ಭವಿತಾ ಲೋಕೇ ಸುರಾವಧ್ಯಸ್ಸರಾವಣಃ ।
ನರಾನ್ನಗಣಯತ್ಯೇವ ವಾನರಾಂಸ್ತು ವಿಶೇಷತಃ ॥೯೫॥

ನಾರಾಯಣೋಽಪಿ ಭವಿತಾ ನರೋ ನಂದೀಶಶಾಪತಃ ।
ಸ ರಾವಣಸ್ಯ ಹಂತಾ ಸ್ಯಾದ್ವಾನರೈರೀದೃಶೈಃ ಸಹ ॥೯೬॥

ಸಹ ನನಗೆ ಪೂಜ್ಯರೆನಿಸುವರು. ಅಂತಹ ಪ್ರಯತ್ನಗಳೇ ಭಕ್ತರಿಗೆ ಅಮೃತಸಮ ಗಳೆಂದು ಶ್ರುತಿಗಳು ಹೇಳುತ್ತಿವೆ. ಆದರಿಂದ ನಾನು ಇಂತಹ ಕಾರ್ಯಕ್ಕಾಗಿ ಯತ್ನಿಸಿದ ಇವುಗಳನ್ನು ಸೇವಿಸುತ್ತಿರುವೆನು. ॥೯೧॥

ಇವು ಈಶ್ವರಾರಾಧನೆಗೆ ಹೋಗಿದ್ದ ಕಾಲದಲ್ಲಿ ಪುಲಸ್ತಿಮಹರ್ಷಿಯು ತನ್ನ ಕೋಪಜ್ವಾಲೆಯಿಂದ ಸುಟ್ಟುಬಿಟ್ಟನು. ಅವನನ್ನು ಕೊಲ್ಲಲು ಈ ವಾನರಗಳು ಪ್ರಯತ್ನಿಸಿದುವು. ಇದರೆ ಆದು ಸಾಗದೆ ಈ ರೀತಿ ಮೃತಿಹೊಂದಿದುವು. ಹೇಗಾದರೂ ಶಿವಪೂಜಕರಿಂದ ಮರಣಹೊಂದಿದವರಿಗೆ ಶಿವಸಾಯುಜ್ಯವು ದೊರೆಯುವುದು ನಿಶ್ಚಯ. ॥೯೨॥

ಆದರೆ ಆ ಪುಲಸ್ತಿಯತಿಯು ಶಿವಪೂಜೆಯನ್ನು ಸಾಂಗಗೊಳಿಸಿದನು. ಆದರೂ ಅವನು ಮಾಡಿದ ಪಾಪಕಾರ್ಯದ ಫಲವಾಗಿ ಲೋಕಭಯಂಕರನಾದ ರಾವಣನೆಂಬ ಹೆಸರಿನಿಂದ ಮತ್ತೆ ರಾಕ್ಷಸನಾಗಿ ಜನಿಸುವನು. ಆದರೆ ಶಿವಪೂಜಾಪ್ರಭಾವದಿಂದ ಸಕಲೈಶ್ವರ್ಯಸಂಪನ್ನನಾಗಿ ಪ್ರಕಾಶಿಸುವನು. ॥೯೩-೯೪॥

ಹಾಗೂ ಆ ರಾವಣನು ಅತ್ಯಂತ ಶೂರನೆನಿಸಿ, ದೇವಾದಿದೇವತೆಗಳಿಗೂ ಅಜೇಯನೆನಿಸುವನು. ಆದರಿಂದ ಆತನು ಯಾವ ಮನುಷ್ಯರನ್ನೂ, ವಾನರರನ್ನೂ ಲಕ್ಷಿಸನು. ಅದೇ ಕಾಲದಲ್ಲಿ ನಂದೀಶ್ವರಶಾಪದಿಂದ ನಾರಾಯಣನು ಮನುಷ್ಯನಾಗಿ ಜನಿಸುವನು. ಇದೇ ಕಪಿಗಳ ಸಹಾಯದಿಂದ ಆ ನರನೇ ಇವನನ್ನು ಕೊಲ್ಲುವನು. ॥೯೫-೯೬॥

ಅಯಂ ಹನೂಮಾನ್ ಭವಿತಾ ಸುಗ್ರೀವೋಽಪ್ಯಂಗದೋಽಪ್ಯಯಂ ।
ವಾಲೀ ಸೋಽಯಮಮೀ ಮುಖ್ಯಾಸ್ತತ್ಸಹಾಯಾರ್ಥಮುದ್ಯತಾಃ ॥೯೭॥

ಉಪಕಾರಃ ಕೃತಂ ಪೂರ್ವಂ ತೇನ ನಾರಾಯಣೇನ ಯಃ ।
ವಾನರಾಣಾಂ ವನೇ ತೇನ ಸಹಾಯಸ್ತೇ ನ ಸಂಮತಃ ॥೯೮॥

ಇತಿ ತದ್ವಚನಂ ಶ್ರುತ್ವಾ ಸರ್ವೇ ವಿಸ್ಮಿತಮಾನಸಾಃ ।
ಕಥಂ ಶಪ್ತ ಇತಿ ಪ್ರಾಹುರ್ನಂದಿಕೇಶೇನ ಕೇಶವಃ ॥೯೯॥

ಪುರಾ ಶಿವಪ್ರಸಾದೇನ ವೈಕುಂಠಂ ಪ್ರಾಪ್ಯ ಮಾಧವಃ ।
ರಮಯಾ ರಮಮಾಣಸ್ಸನ್ ನರರೂಪೇಣ ಸಂಸ್ಥಿತಃ ॥೧೦೦॥

ಪ್ರದೋಷಕಾಲೀನಶಿವಾರ್ಚನಾನಿ
ನಾರಾಯಣೋಽಸೌ ರಮಮಾಣ ಏವ ।
ಲಕ್ಷ್ಮೀಂ ವಿಹಾಯ ಸ್ಥಿತ ಏವ ದೃಷ್ಟೋ
ನಂದೀಶಭೃತ್ಯೈರನಿವೃತ್ಯಲೋಕೇ ॥೧೦೧॥

ಈ ನಾಲ್ಕು ಜನರೇ ಹನುಮಂತ, ಸುಗ್ರೀವ, ವಾಲಿ, ಅಂಗದರೆಂಬ ಹೆಸರಿನಿಂದ ಜನಿಸುವರು. ಈ ಕಪಿಗಳಿಗೆ ನಾರಾಯಣನು ಹಿಂದೆ ಆ ಅರಣ್ಯದಲ್ಲಿ ಶರಘಾತದಿಂದ ತಪ್ಪಿಸಿ ಸಹಾಯಮಾಡಿದ್ದನು. ಅದರ ಕೃತಜ್ಞತೆಯಿಂದ ಇದೇ ವಾನರಗಳು ಮುಂದೆ ನಾರಾಯಣನಿಗೆ ಅರಣ್ಯದಲ್ಲಿ ಸಹಾಯಮಾಡುವುವು." ॥೯೭-೯೮॥

ಎಂದು ಬ್ರಹ್ಮನು ಹೇಳಿದ್ದನ್ನು ಕೇಳಿ, ಆ ಸಭೆಯವರೆಲ್ಲರೂ ಬ್ರಹ್ಮನನ್ನು ಕುರಿತು "ಮಹಾತ್ಮನೇ, ನಂದೀಶ್ವರನು ನಾರಾಯಣನಿಗೆ ನರನಾಗಿ ಹುಟ್ಟುವಂತೆ ಶಪಿಸಿದನೆಂದು ಹೇಳಿದೆಯಲ್ಲವೆ? ಅದು ಹೇಗೆ?" ಎಂದು ಪ್ರಶ್ನಿಸಲು ಬ್ರಹ್ಮನು ಆಗ ಅವರಿಗೆ ಹೀಗೆಂದನು—"ಸಭ್ಯರೇ, ಹಿಂದೆ ಈಶ್ವರಾನುಗ್ರಹದಿಂದ ವಿಷ್ಣುವು ವೈಕುಂಠವನ್ನು ಸಂಪಾದಿಸಿಕೊಂಡು, ಲಕ್ಷ್ಮಿಯೊಡನೆ ವಿಹರಿಸುತ್ತಾ ಮನುಷ್ಯರೂಪದಲ್ಲಿದ್ದನು. ಒಂದುಸಾರಿ, ॥೯೯-೧೦೦॥

ಪ್ರದೋಷಕಾಲವಾಗಿದ್ದರೂ ವಿಷ್ಣುವು ಶಿವಾರ್ಚನೆ ಮಾಡದೆ ಪತ್ನಿಯೊಡನೆ ಕ್ರೀಡಿಸುತ್ತಲೇ ಇದ್ದನು. ಆಗ ಬಂದ ನಂದೀಶ್ವರನ ಶಿವಗಣಗಳನ್ನು ನೋಡಿದರೂ ಲಕ್ಷ್ಮಿಯಿಂದ ದೂರನಾಗದೆ ಕ್ರೀಡಿಸುತ್ತಿದ್ದನು. ॥೧೦೧॥

ತತಃ ಕದಾಚಿತ್ಕೈಲಾಸೇ ಸ್ಥಿತ್ವಾ ನಂದೀ ಸ್ವಕಿನ್ನರಾನ್ ।
ಕುತ್ರ ಕೋ ವಾ ಸುರಃ ಕಿಂ ವಾ ಕರೋತೀತ್ಯಾಹ ಸಾದರಂ ॥೧೦೨॥

ತತ್ರಾರ್ಬುದಾಕ್ಷಕೋಽಪ್ಯಾಹ ನಂದಿಕೇಶಸ್ಯ ಕಿಂಕರಃ ।
ಪ್ರಣಮ್ಯ ದಂಡವತ್ಸಮ್ಯಙ್ನಂದಿಕೇಶಂ ಕೃತಾಂಜಲಿಃ ॥೧೦೩॥

॥ ಅರ್ಬುದಾಕ್ಷ ಉವಾಚ ॥

ಸಂಚಾರಃ ಕ್ರಿಯತೇ ನಿತ್ಯಂ ಸರ್ವೇಷು ಭುವನೇಷ್ವಪಿ ।
ದೃಶ್ಯಂತೇ ಮಾನವಾಸ್ಸಿದ್ಧಾಃ ಕಿನ್ನರಾಶ್ಚ ಸುರಾ ಅಪಿ ॥೧೦೪॥

ತೇ ತಾವದಧುನಾ ಸರ್ವೇ ಸ್ವಸ್ವಾಚಾರರತಾ ನರಾಃ ।
ಗಂಧರ್ವಾಃ ಕಿನ್ನರಾಸ್ಸಿದ್ಧಾ ಮುನಯೋಽಪಿ ವಿಶೇಷತಃ ॥೧೦೫॥

ಸುರೇಷು ಕೇವಲಾಂ ಹಿತ್ವಾ ಲಕ್ಷ್ಮೀರಮಣಮಾಸ್ತಿಕಾಃ ।
ಸುರಾಸ್ತ್ವಾಚಾರನಿರತಾಃ ಶಂಕರಾರಾಧನೋತ್ಸುಕಾಃ ॥೧೦೬॥

ಯದಾ ತಾವನ್ಮಯಾ ಸ್ವಾಮಿನ್ ಗತಂ ವೈಕುಂಠಮಂದಿರಂ ।
ತದಾ ಸ ನರರೂಪೇಣ ಸ್ಥಿತೋ ನಾರಾಯಣೋ ಮುದಾ ॥೧೦೭॥

ಅನಂತರ ಒಂದುಸಾರಿ ನಂದೀಶ್ವರನು ಕೈಲಾಸದಲ್ಲಿದ್ದು ಸಮೀಪದಲ್ಲಿದ್ದ ಸೇವಕರನ್ನು ಕರೆದು "ಲೋಕದಲ್ಲಿ ದುಷ್ಟನಾದ ರಾಕ್ಷಸನು ಲೋಕಕಂಟಕನೆನಿಸಿ ಎಲ್ಲಿಯಾದರೂ ಅಡಗಿಕೊಂಡಿರುವನೇ?" ಎಂದು ಪ್ರಶ್ನಿಸಿದನು. ಒಡನೆಯೇ ಅವನ ಸೇವಕರಲ್ಲಿ ಒಬ್ಬನಾದ ಅರ್ಬುದಾಕ್ಷನು ಎದ್ದು ನಿಂತು ನಮಸ್ಕರಿಸಿ. ಕೈಜೋಡಿಸಿಕೊಂಡು ಹೀಗೆ ಬಿನ್ನವಿಸಿದನು. ॥೧೦೨-೧೦೩॥

"ಮಹಾದೇವಭಕ್ತನೇ, ನಾನು ಸಕಲ ಲೋಕಗಳಲ್ಲಿಯೂ ಸುತ್ತಿಬಂದಿರುವೆನು. ಮನುಷ್ಯರೂ, ಸಿದ್ಧರೂ, ಕಿನ್ನರರೂ, ದೇವತೆಗಳೂ ಎಲ್ಲರೂ ತಮ್ಮ ತಮ್ಮ ಆಚಾರಗಳಲ್ಲಿ ನಿರತರಾಗಿ ಕ್ಷೇಮದಿಂದಿರುವರು. ಸಕಲ ಋಷಿಗಳೂ ಸಹ ವಿಶೇಷ ರೀತಿಯ ತಪಶ್ಚರ್ಯಾದಿಗಳಿಂದ ಲೋಕಕಲ್ಯಾಣ ಕೋರುತ್ತಿರುವರು. ॥೧೦೪-೧೦೫॥

ದೇವತೆಗಳಲ್ಲಿ ಲಕ್ಷ್ಮೀಪತಿಯಾದ ವಿಷ್ಣುವೊಬ್ಬನನ್ನು ಬಿಟ್ಟರೆ, ಸಕಲರೂ ಸದಾಚಾರಸಂಪನ್ನರೆನಿಸುವರು. ಆದರೆ ಒಂದುಸಾರಿ ನಾನು ವೈಕುಂಠಕ್ಕೆ ಹೋದಾಗ ಅಲ್ಲಿ ವಿಷ್ಣುವು ನರರೂಪದಲ್ಲಿದ್ದನು. ॥೧೦೬-೧೦೭॥

ರಮಾಮಾಲಿಂಗ್ಯ ಸಾಯಾಹ್ನೇ ಶಿವಪೂಜಾಪರಾಙ್ಮುಖಃ ।
ಸ್ಥಿತಃ ಪೃಷ್ಟೋ ಮಯಾ ಪುಷ್ಟಃ ಕೋಸೀತಿ ಸ ಜಗಾದ ಮಾಂ ॥೧೦೮॥

ತ್ವಂ ಕೋಸೀತ್ಯತಿವೇಗೇನ ತ್ಯಕ್ತ್ವಾ ಲಜ್ಜಾಂ ತಯಾ ಸಹ ।
ನಗ್ನಯಾ ರಮಯಾ ಧೂರ್ತಸ್ತದಾಲಿಂಗನತತ್ಪರಃ ॥೧೦೯॥

ತತಃ ಪರಂ ಸ ವಿಜ್ಞಾತೋಪ್ಯಯಂ ದುರ್ಜನ ಇತ್ಯಪಿ ।
ಜನಾರ್ದನಃ ಸ ಸಂತ್ಯಕ್ತಶ್ಶಕ್ತೇನಾಪಿ ಪ್ರಪಾತನೇ ॥೧೧೦॥

ಇದಮೇತಾದೃಶಂ ಕಷ್ಟಮಪೂರ್ವಮಮರೇಷ್ವಪಿ ।
ಕಾ ಗತಿರ್ಭಾವಿನೀ ತಸ್ಯ ವದ ಮಹ್ಯಂ ವಿಶೇಷತಃ ॥೧೧೧॥

ಇತ್ಯುಕ್ತಂ ತದ್ವಚಃ ಶ್ರುತ್ವಾ ನಂದಿಕೇಶೋಪಿ ವಿಸ್ಮಿತಃ ।
ಪ್ರಾಹಾರ್ಬುದಾಕ್ಷಮುಕ್ಷೇಣ ವಚನೇನ ವಿಚಕ್ಷಣಃ ॥೧೧೨॥

ಮತ್ತು ಪ್ರದೋಷಕಾಲದಲ್ಲಿ ಶಿವಾರಾಧನೆಮಾಡದೆ ಲಕ್ಷ್ಮಿಯನ್ನು ಆಲಿಂಗಿಸಿಕೊಂಡು ಕ್ರೀಡಿಸುತ್ತಿದ್ದನು. ಒಡನೆಯೇ ನಾನು ನೀನು ಯಾರೆಂದು ಪ್ರಶ್ನಿಸಿದೆನು. ಆಗಲೂ ಅವನು ಪ್ರಶ್ನೆಗೆ ಉತ್ತರಕೊಡದೆ "ನೀನು ಯಾರು? ಇಲ್ಲಿಗೇಕೆ ಬಂದೆ?" ಎಂದು ಕೂಗುತ್ತಾ, ನಾಚಿಕೆಯೂ ಇಲ್ಲದೆ ನಗ್ನಳಾಗಿದ್ದ ಲಕ್ಷ್ಮಿಯನ್ನು ಆಲಿಂಗಿಸುವುದರಲ್ಲಿಯೇ ಆಸಕ್ತನಾಗಿದ್ದನು. ಒಡನೆಯೇ "ಇವನೆಂತಹ ಧೂರ್ತನಿರಬಹುದು" ಎಂಬ ಭಾವವು ನನಗೆ ಬಂದರೂ ಕೊನೆಗೆ ವಿಷ್ಣುವಾಗಿರಬಹುದೆಂದು ಯೋಚಿಸಿ, ಸ್ವಶಕ್ತಿಯಿಂದ ಅವನನ್ನು ಶಿಕ್ಷಿಸುವ ಸಾಮರ್ಥ್ಯವಿದ್ದರೂ ನಾನು ಯಾವ ಕಾರ್ಯವನ್ನೂ ನಡೆಸಲಿಲ್ಲ. ||೧೦೮-೧೦೯-೧೧೦||

ಇಂತಹ ವರ್ತನೆಯು ಯಾವ ದೇವತೆಗಳಲ್ಲಿಯೂ ಇಲ್ಲಿನವರೆಗೆ ಕಂಡು ಬಂದಿಲ್ಲ. ನಂದೀಶ್ವರನೇ, ಮುಂದೆ ಈ ವಿಷ್ಣುವಿಗೆ ಬರುವ ಪಾಪವಿಶೇಷವಾವುದು? ಎಂದು ಪ್ರಶ್ನಿಸಲು ಆಗ ನಂದೀಶ್ವರನು ಅರ್ಬುದಾಕ್ಷನನ್ನು ಕುರಿತು ಹೀಗೆಂದನು. ||೧೧೧-೧೧೨||

|| ನಂದಿಕೇಶ್ವರ ಉವಾಚ ||

ಸ ನರೋ ಭವಿತಾ ಲೋಕೇ ರಾಮನಾಮಾ ಭವಿಷ್ಯತಿ ।
ಅಸುರಾಹೃತಭಾರ್ಯೋಽಪಿ ಭವಿಷ್ಯತಿ ನ ಸಂಶಯಃ ||೧೧೩||

ಪುನಃ ಪುನಸ್ಸಜನ್ಮಾನಿ ಸ ಪ್ರಾಪ್ಸ್ಯಾತೀವ ದುಃಖಿತಃ ।
ಅನುತಪ್ತೋ ಲಿಂಗಪೂಜಾಂ ಕರಿಷ್ಯತಿ ವಿಶೇಷತಃ ||೧೧೪||

|| ಭೃಗುರುವಾಚ ||

ಇತಿ ತದ್ವಚನಂ ಶ್ರುತ್ವಾ ಸ್ಮೃತ್ವಾ ಶಂಕರಮವ್ಯಯಂ ।
ಪ್ರಭಾವಂ ಶಾಂಕರಂ ಶ್ರುತ್ವಾ ಪ್ರಹೃಷ್ಟಾಃ ಕಾಲಮಾದರಂ ||೧೧೫||

ಕೋ ವಾ ವಿಜಾನಾತಿ ಮಹೇಶಶಕ್ತಿಂ
ತದರ್ಚಕಾನಾಂ ಚ ಶಿವಾರ್ಚನಸ್ಯ ।
ಮಹೇಶ್ವರೋ ವೇದ ಶಿವಾಪಿ ವೇದ
ಸ್ಕಂದೋ ಗಣೇಶೋಽಪಿ ಸ ನಂದಿಕೇಶಃ ||೧೧೬||

ಶಿವಪ್ರಸಾದಲೇಶೇನ ಸುರತ್ವಂ ಪ್ರಾಪ್ಯತೇ ಸುರಾಃ ।
ಶಾಂಕರಾವಜ್ಞಯಾ ತಾವನ್ನರಕಂ ಪ್ರಾಪ್ನುವಂತಿ ತೇ ||೧೧೭||

"ಅರ್ಬುದಾಕ್ಷನೇ, ಈ ವಿಷ್ಣುವೇ ರಾಮನೆಂಬ ಹೆಸರಿನಿಂದ ಭೂಲೋಕದಲ್ಲಿ ಮನುಷ್ಯನಾಗಿ ಜನಿಸುವನು. ಈತನ ಪತ್ನಿಯನ್ನು ರಾಕ್ಷಸನೊಬ್ಬನು ಅಪಹರಿಸುವನು. ಹೀಗೆ ಅನೇಕ ಕಷ್ಟಗಳನ್ನು ಅನುಭವಿಸಿ ಕೊನೆಗೆ ಈಶ್ವರಲಿಂಗಾರಾಧನೆಯಿಂದ ಪಾಪರಹಿತನಾಗುವನು. ||೧೧೩-೧೧೪||

ಹೀಗೆಂದು ಹೇಳಿದ ನಂದಿಯ ಮಾತುಗಳನ್ನು ಬ್ರಹ್ಮದೇವನು ಸಭ್ಯರಿಗೆ ತಿಳಿಸಲು ಅವರು ಶಂಕರನನ್ನು ಪದೇ ಪದೇ ಸ್ಮರಿಸುತ್ತಾ ಸಂತುಷ್ಟರಾದರು. ಆದರೆ ಈಶ್ವರಪೂಜಾಮಹಿಮೆಯನ್ನೂ ಈಶ್ವರನ ನೈಜವಾದ ಶಕ್ತಿಯನ್ನೂ ಅರಿತವರು ಯಾರೂ ಇಲ್ಲ. ಆದರೆ ಮಹೇಶ್ವರ, ಪಾರ್ವತಿ, ಸ್ಕಂದ, ಗಣಪತಿ ಇವರು ನಾಲ್ವರಿಗೆ ಮಾತ್ರ ಅದು ತಿಳಿದಿರಬಹುದು. ||೧೧೫-೧೧೬||

ಸುರರು ಸುರತ್ವವನ್ನು ಸಂಪಾದಿಸಬೇಕಾದರೂ, ಶಿವಪ್ರಸಾದದ ಅನುಗ್ರಹವಿರಬೇಕು. ಶಿವಾರಾಧಕರನ್ನು ಅಪಮಾನಗೊಳಿಸುವುದರಿಂದಲೇ ಸರ್ವರಿಗೂ

ತೇ ತೇ ನರಾಃ ಶಂಕರಪೂಜನೇನ
ನಿತ್ಯಂ ಕೃತಾರ್ಥಾಃ ಕೃತಕೃತ್ಯವಂದ್ಯಾಃ ।
ಸುರಾಸುರಾಣಾಮಪಿ ತೇತಿಪೂಜ್ಯಾಃ
ಪೂಜ್ಯಾ ಭವಂತ್ಯೇವ ಮುನೀಶ್ವರೈಶ್ಚ ॥೧೧೮॥

ಅಹೋ ಮಹದ್ಭಾಗ್ಯಮುಮಾಸಹಾಯಃ
ಸಹಾಯಭೂತೋಽಪಿ ನರೇಷು ಯಸ್ಯ ।
ತಸ್ಯಾಂಘ್ರಿಪದ್ಮಂ ತ್ರಿದಶಾದಿವಂದ್ಯಂ
ವಿಶೇಷತಃ ಕಿಂ ನ ಮುಕುಂದವಂದ್ಯಂ ॥೧೧೯॥

॥ ಶಾರ್ದೂಲ ಉವಾಚ ॥

ಇತಿ ತದ್ವಚನಂ ಶ್ರುತ್ವಾ ತಂ ಪ್ರಣಮ್ಯ ಭೃಗುಂ ಯಮಃ ।
ಮಾಮಂಗುಲ್ಯಾ ವಿನಿರ್ದಿಶ್ಯ ಪ್ರಾಹ ಭೂತಾಮನುಸ್ಮರನ್ ॥೧೨೦॥

ಮಹಾನರಕವು ಲಭಿಸುವುದು. ಯಾರು ನಿತ್ಯವೂ ಶಿವಾರ್ಚನೆಯಿಂದ ಮನಸ್ಸನ್ನು ಪರಿಪಕ್ವಗೊಳಿಸಿಕೊಂಡಿರುವರೋ ಅಂತಹವರು ದೇವತೆಗಳಿಗೂ, ಋಷಿಜನರಿಗೂ ಪರಮಪೂಜ್ಯರೆನಿಸಿಕೊಳ್ಳುವರು. ॥೧೧೭-೧೧೮॥

ಅಲ್ಲದೆ ಯಾರು ಶಿವಾರ್ಚನೆಗೆ ಸಹಾಯಮಾಡುವರೋ ಅಂತಹವರನ್ನೂ ಶಂಕರನು ಅನುಗ್ರಹಿಸುವನು. ಹಾಗೆ ಈಶ್ವರಾನುಗ್ರಹಕ್ಕೆ ಪಾತ್ರರಾದವರ ಪಾದ ಪದ್ಮಗಳನ್ನು ವಿಷ್ಣುವೇ ಮೊದಲಾದ ಸಕಲ ದೇವತೆಗಳೂ ಪೂಜಿಸುತ್ತಾರೆಂಬುದನ್ನು ಮರೆಯಬೇಡ. ಅದು ಅಂತಹ ವಿಶೇಷವೂ ಅಲ್ಲ. ॥೧೧೯॥

ಎಂದು ಭೃಗುಮಹರ್ಷಿಯು ಯಮನಿಗೆ ಹಿಂದಿನ ಇತಿಹಾಸವನ್ನು ಹೇಳಲು ಅದನ್ನು ಕೇಳಿದ ಯಮನು ಪವಿತ್ರವಾದ ಶಿವರಾತ್ರಿಯನ್ನು ಸ್ಮರಿಸಿಕೊಳ್ಳುತ್ತಾ ಋಷಿಗೆ ನನ್ನನ್ನು ತನ್ನ ಕೈಬೆರಳಿನಿಂದ ತೋರಿಸುತ್ತಾ ಹೀಗೆಂದನು. ಎಂದು ಹುಲಿಯು ಅಲ್ಲಿ ನೆರೆದಿದ್ದ ಬ್ರಾಹ್ಮಣಾದಿಗಳಿಗೆ ಸ್ವವಿಷಯವನ್ನು ವಿವರಿಸಲಾರಂಭಿಸಿತು. ॥೧೨೦॥

॥ ಯಮ ಉವಾಚ ॥

ಕಾ ಗತಿರ್ಭಾವಿನೀ ತಸ್ಯ ಭಾರ್ಯಯಾ ಭರ್ತ್ಸಿತಸ್ಯ ಚ ।
ಚೇಟೀಕಟಿತಟಾಘಾತಪೀಡಿತಸ್ಯ ದುರಾತ್ಮನಃ ॥೧೨೧॥

ಕಸ್ಮಿನ್ವಾ ನರಕೇ ತಸ್ಯ ಪ್ರವೇಶಸ್ಸಯತೋ ಭವೇತ್ ।
ಗತಿರ್ನರಕಭೋಗಾಂತೇ ಕಾ ಭವಿಷ್ಯತಿ ತದ್ವದ ॥೧೨೨॥

॥ ಭೃಗುರುವಾಚ ॥

ಭೂತಾವ್ರತತ್ಯಾಗತ ಏವ ಕ್ರೂರಃ
ಯದ್ಯಪ್ಯಯಂ ಪಾತಕಸಂಘರಾಶಿಃ ।
ತಥಾಪ್ಯನೇನ ಶ್ರುತಮೇವಮದ್ಯ
ಮಾಹಾತ್ಮ್ಯಮೀಶಾನಪದಾರ್ಚಕಾನಾಂ ॥೧೨೩॥

ಕಿಂ ಚಾಸ್ಯ ಭಾರ್ಯಾ ಶಿವಪೂಜನಾಂತೇ
ಸಸ್ಮಾರ ಭರ್ತಾರಮಮುಂ ಕಥಂ ವಾ ।
ನಾರಾಧಿತೋಯಂ ಗಿರಿಜಾಸಹಾಯ
ಸ್ತೇನೇತ್ಯತಿಸ್ನೇಹವಶೇನ ದೈವಾತ್ ॥೧೨೪॥

"ಎಲೈ ಮಹರ್ಷಿಯೇ, ಹೆಂಡತಿಯನ್ನು ಮೊದಲು ಅಪೇಕ್ಷಿಸಿ, ಅವಳಿಂದ ತಿರಸ್ಕೃತನಾಗಿ ಶಿವಪೂಜಾಕಾಲದಲ್ಲಿ ಚೇಟೀಸಂಭೋಗಮಾಡಿದ ಈ ದುರಾತ್ಮನಿಗೆ ಯಾವ ನರಕವನ್ನು ವಿಧಿಸಬೇಕು? ಅಂತಹ ನರಕಯಾತನೆಯನ್ನು ಅನುಭವಿಸಿದ ಮೇಲೆ ಇವನಿಗೆ ದೊರೆಯುವ ಗತಿಯಾವುದು?" ಎಂಬುದಾಗಿ ಯಮನು ಭೃಗು ಮಹರ್ಷಿಯನ್ನು ಮತ್ತೆ ಪ್ರಶ್ನಿಸಿದನು. ॥೧೨೧-೧೨೨॥

ಭೃಗುಋಷಿಯು ಯಮನಿಗೆ ಉತ್ತರ ಹೇಳುತ್ತಾ ಹೀಗೆಂದನು. "ಈ ರಾಜನು ಶಿವರಾತ್ರೀ ವ್ರತತ್ಯಾಗಮಾಡಿದ್ದರಿಂದ ನಿಜವಾಗಿಯೂ ಕ್ರೂರನಾದ ಪಾಪ ರಾಶಿಯನ್ನೇ ಸಂಪಾದಿಸಿದಂತಾಯಿತು. ಆದರೆ ಈತನು ಈಗ ಈಶ್ವರಪಾದಸೇವಕರ ಮಹಿಮೆಯನ್ನೆಲ್ಲಾ ತಿಳಿದುಕೊಂಡಿರುವನು. ॥೧೨೩॥

ಅಲ್ಲದೆ ಈತನ ಪತ್ನಿಯು ತಾನು ಶಿವಾರಾಧನೆಮಾಡಿದ ಮೇಲೆ ಯಾವುದೋ ರೀತಿಯಲ್ಲಿ ತನ್ನ ಪತಿಯನ್ನು ಸ್ಮರಿಸಿಕೊಂಡಿರುವಳು. ಮತ್ತು ಆಕೆಯು ದುರದೃಷ್ಟ

ತತ್ಕೃತಸ್ಮರಣಗೋಚರೋ ನೃಪಃ
ಪಾಪರಾಶಿಕಲಿತೋಽಪಿ ಯಾತನಾಂ ।
ನೈವ ಯಾಸ್ಯತಿ ಪರಂ ತು ದುರ್ದಶಾಂ
ವ್ಯಾಘ್ರಯೋನಿಮಭಿಯಾಸ್ಯತಿ ಧ್ರುವಂ ॥೧೨೫॥

ಜಾತಿಸ್ಮರೋಽಯಂ ಭವಿತಾ ಯಮಾತಃ
ಶಾರ್ದೂಲದೇಹೇಽಪಿ ಶಿವಾರ್ಚನಾನಿ ।
ಕೃತ್ವಾ ಪ್ರಯಾಸ್ಯತ್ಯಮರಾಭಿವಂದ್ಯಃ
ಕೈಲಾಸನಾಥಂ ಗಿರಿಜಾಸನಾಥಂ ॥೧೨೬॥

ತಚ್ಚೇಟಿಕಾಲಿಂಗನನಂದಿನಂ ಚ
ಚಕಾರ ಭಾರ್ಯಾಂಗವಿಚಿಂತನೇನ ।
ತದಂಗಸಂಗೇನ ಚ ಚೇಟಿಕಾಪಿ
ಜಾತಿಸ್ಮರತ್ವಂ ಸಮುಪೇಷ್ಯತೀತಿ ॥೧೨೭॥

ವಶದಿಂದ ತನ್ನ ಪತಿಯು ಪರಶಿವನನ್ನು ಆರಾಧಿಸಲಿಲ್ಲವಲ್ಲಾ ಎಂದು ಪರಿತಪಿಸಿಕೊಂಡಿರುವಳು. ॥೧೨೪॥

ಹಾಗೆ ಆಕೆಯು ಈತನನ್ನು ಸ್ಮರಿಸಿಕೊಂಡು ಈತನ ಪಾಪರಾಶಿಯನ್ನೆಲ್ಲಾ ಹೋಗಲಾಡಿಸಿರುವುದರಿಂದ ಈತನಿಗೆ ಇಲ್ಲಿ ಯಾವ ನರಕಯಾತನೆಯೂ ದೊರೆಯ ಕೂಡದು. ಆದರೆ ಆತನ ದುರ್ದಶೆಗಾಗಿ ಆತನು ಹುಲಿಯ ಜನ್ಮವನ್ನು ತಪ್ಪದೆ ಪಡೆಯುವನು. ಇದರಲ್ಲಿ ಸಂಶಯವಿಲ್ಲ. ॥೧೨೫॥

ಎಲೈ ಯಮಧರ್ಮನೇ, ಅತಿಕಾಮುಕನಾದ ಈತನು ಶಾರ್ದೂಲಜನ್ಮವನ್ನೈತ್ತಿದರೂ, ಅಲ್ಲಿ ಪೂರ್ವಜನ್ಮದ ಅರಿವುಂಟಾಗಿ ಶಿವಾರ್ಚನೆಮಾಡಿ ಮತ್ತೆ ದೇವತ್ವವನ್ನು ಪಡೆಯುವನು. ಅಲ್ಲದೆ ದೇವಶ್ರೇಷ್ಠನೆನಿಸಿ ಕೈಲಾಸಾಧಿಪತಿಯಾದ ಶಂಕರನ ಸಾನ್ನಿಧ್ಯವನ್ನೂ ಹೊಂದುವನು. ॥೧೨೬॥

ಆ ಚೇಟಿಯನ್ನು ಆಲಿಂಗಿಸುವ ಕಾಲದಲ್ಲಿ ಆಕೆಯಲ್ಲಿ ತನ್ನ ಹೆಂಡತಿಯೆಂಬ ಭಾವನೆಯನ್ನಿಟ್ಟಿದ್ದನು. ಅಂತಹ ಪವಿತ್ರಶರೀರಿಣಿಯ ಆರೋಪವು ಆ ಚೇಟಿಗೆ ದೊರೆತಿದ್ದುದರಿಂದ ಆಕೆಯು ಪೂರ್ವಜನ್ಮವಾಸನೆಯುಳ್ಳ ಶ್ರೇಷ್ಠಜನ್ಮವನ್ನು ಪಡೆಯುವಳು. ॥೧೨೭॥

ತದುತ್ಪನ್ನಾಸ್ಸುತಾಸ್ಸರ್ವೇ ತದಂಗಾಲಿಂಗನಾದಿಭಿಃ ।
ಜಾತಿಸ್ಮರತ್ವಮಭ್ಯೇತ್ಯ ಕರಿಷ್ಯತಿ ಶಿವಾರ್ಚನಂ ॥೧೨೮॥

ಶಾಂಭವೀ ತಸ್ಯ ಯಾ ಭಾರ್ಯಾ ತಸ್ಯಾಶ್ಶಾಪೇನ ಕೇವಲಂ ।
ಶಾರ್ದೂಲೋ ಭವಿತಾ ಸೋಽಯಂ ರೇವಾತೀರವನೇ ಯಮ ॥೧೨೯॥

ರೇವಾಜಲಸ್ನಾನಕೃತಾರ್ಘದೇಹ
ಸ್ತಲ್ಲಿಂಗಪೂಜಾನಿರತೋಽಪಿ ನಿತ್ಯಂ ।
ತತ್ತೀರಸಂತ್ಯಕ್ತತನುರ್ಯಮಾಂತೇ
ಮುಕ್ತೋ ಭವಿಷ್ಯತ್ಯಪಿ ನಾತ್ರ ಚಿತ್ರಂ ॥೧೩೦॥

॥ ಯಮ ಉವಾಚ ॥

ಇತಿ ತದ್ವಚನಂ ಶ್ರುತ್ವಾ ಮಾಮಾಹೂಯಾಂತಿಕಂ ಯಮಃ ।
ಪ್ರಾಹ ಗಂಭೀರಯಾ ವಾಚಾ ಸಂತೋಷಂ ಜನಯನ್ ಮುಹುಃ ॥೧೩೧॥

ಭೃಗುಮುನಿವಚನೇನ ಮೋಚಿತಸ್ತ್ವಂ
ಪಟುಭಟದಂಡವಿಘಟ್ಟನಾದಿ ದೂನಃ ।
ಪರಿಹರ ಹರಚಿಂತನೇನ ದುಃಖಂ
ಭಜ ಭಜ ಶಂಕರಮದ್ಯ ಸಾವಧಾನಂ ॥೧೩೨॥

ಇವರಿಬ್ಬರ ಸಂಪರ್ಕದಿಂದ ಜನಿಸಿದ ಮರಿಗಳೂ ಸಹ ಹಿಂದಿನ ಜನ್ಮದ ಅರಿವನ್ನು ಪಡೆದು ಶಿವಾರ್ಚನೆ ಮಾಡಿ ತನ್ಮೂಲಕ ಮುಕ್ತವಾಗುವುವು. ಆದರೆ ಈತನ ಪತ್ನಿಯ ಶಾಪದಂತೆ ಈಗ ಈತನು ರೇವಾತೀರದಲ್ಲಿ ಹುಲಿಯ ಜನ್ಮದಿಂದ ಅವತಾರಮಾಡುವನು. ॥೧೨೮-೧೨೯॥

ಆ ರೇವಾನದಿಯ ಪವಿತ್ರ ತೀರ್ಥಪಾನದಿಂದಲೂ ಸ್ನಾನದಿಂದಲೂ ಪರಿಶುದ್ಧನಾಗಿ ಅಲ್ಲಿರುವ ಶಿವಲಿಂಗಗಳನ್ನು ಅರ್ಚಿಸಿ, ಕೊನೆಗೆ ಅಲ್ಲಿಯೇ ಶರೀರತ್ಯಾಗಮಾಡಿ ಕೊನೆಯಲ್ಲಿ ನಿಜವಾಗಿಯೂ ಮುಕ್ತನಾಗುವನು. ಇದರಲ್ಲಿ ನೀನು ಆಶ್ಚರ್ಯಪಡಬೇಡ." ॥೧೩೦॥

ಎಂದು ಭೃಗುಮಹರ್ಷಿಯು ಹೇಳಿದೊಡನೆಯೇ ಯಮನು ನನ್ನನ್ನು ಹತ್ತಿರಕ್ಕೆ ಕರೆದು ಗಂಭೀರವಾಗಿ ಹೀಗೆಂದನು. " ಎಲೈ ಪಾಪಿಯೇ, ಈಗ ನಿನ್ನನ್ನು

ಪ್ರಾಪ್ಯಾಪ್ಯಸಾರ್ಯೈಃ ಸುಕೃತೈರ್ನರತ್ವ
ಮವ್ಯಾಹತೈಶ್ವರ್ಯಮನಾಮಯತ್ವಂ ।
ಹಾರತ್ವಮಪ್ಯರ್ಧಶಶಾಂಕಮೌಳಿಂ
ಪುಣ್ಯಸ್ವರೂಪಾಃ ಪರಮರ್ಚಯಂತಿ ॥೧೩೩॥

ಯಃ ಪ್ರಾಪ್ಯಾಪಿ ನರತ್ವಮಾಸ್ತಿಕವರೋ ಮಾಹೇಶ್ವರಃ ಕೇವಲಂ
ನ ಸ್ಯಾದಿಂದುಕಲಾವತಂಸಭಜನಾಸಕ್ತೋಽಪಿ ಶಕ್ತಃ ಪರಂ ।
ತಂ ತಾವನ್ನರರಾಸಭಂ ವಿದುರಹೋ ದುರ್ವೀರ್ಯಜಂ ದುರ್ಜನಂ
ದುರ್ಜಾತಿಂ ನರಕಾಲಯಂ ಚ ಸ ಪುನಃ ಸ್ಯಾದ್ರಾಸಭೋ ಭೂರಿಶಃ ॥೧೩೪॥

ಇತಿ ಮಾಮಾಹ ಸ ಯಮಃ ಪುಣ್ಯಾಪುಣ್ಯನಿಯಾಮಕಃ ।
ಅನ್ಯದಪ್ಯಾಹ ಮಾಮೇವ ತದ್ವಕ್ತುಂ ನೈವ ಶಕ್ಯತೇ ॥೧೩೫॥

ಭೃಗುಮಹರ್ಷಿಗಳ ಮಾತಿನಂತೆ ನರಕದಿಂದ ಬಿಡುಗಡೆ ಮಾಡಿರುವೆನು. ನನ್ನ ದೂತರ ದಂಡಾಘಾತದಿಂದ ನಿನಗೆ ಒದಗಿರುವ ದುಃಖವನ್ನು ಈಶ್ವರಾರಾಧನೆಯಿಂದ ಪರಿಹರಿಸಿಕೋ. ಮಹಾದೇವನನ್ನು ಆಗಾಗ ಸ್ಮರಿಸುತ್ತಾ ಸಾವಧಾನ ಮನಸ್ಕನಾಗಿ ನಿನ್ನ ಸಕಲ ಪಾಪಗಳನ್ನೂ ಕಳೆದುಕೊಂಡು ಮುಕ್ತನಾಗು. ||೧೩೧-೧೩೨||

ತಾನು ಮಾಡಿದ ಪುಣ್ಯಪರಿಪಾಕದಿಂದ ಮನುಷ್ಯರು ಅಪಾರವಾದ ಮತ್ತು ತಡೆಯಿಲ್ಲದ ಐಶ್ವರ್ಯವನ್ನೂ, ಆರೋಗ್ಯವನ್ನೂ, ಈಶ್ವರಭಕ್ತಿಯನ್ನೂ ಹೊಂದುವರು. ಆದರೆ ಕೇವಲ ಪುಣ್ಯರೂಪಿಗಳಾದವರು ಮಾತ್ರ ಈಶ್ವರಾರ್ಚನೆಯ ಬುದ್ಧಿಯಿಂದ ಕೂಡಿ ಜನಿಸುವರು. ||೧೩೩||

ಪೂರ್ವಪುಣ್ಯದಿಂದ ಮನುಷ್ಯನಾಗಿ ಅದರಲ್ಲಿಯೂ ಆಸ್ತಿಕನೆನಿಸಿ, ಮಹೇಶ್ವರ ಭಕ್ತನಾಗಿ ಜನಿಸಿದರೂ, ಅವರು ಚಂದ್ರಕಲಾಧರನಾದ ಶಂಕರನ ಭಜನೆಯಲ್ಲಿ ಮನಸ್ಸಿಡುವುದಿಲ್ಲ. ಅಂತಹವರನ್ನು ಮನುಷ್ಯರೂಪದ ಕತ್ತೆಯೆನ್ನಬಹುದು. ಅಲ್ಲದೆ ನಾನಾ ದುಃಖಗಳಿಗೆ ಈಡಾಗಿ ನರಕದುಃಖವನ್ನನುಭವಿಸುತ್ತಾ ದುರ್ವೀರ್ಯೋದ್ಭವನಾಗಿ, ದುರ್ಜಾತಿಯಲ್ಲಿ ಜನಿಸಿ ನಾನಾ ಕ್ಲೇಶಗಳಿಗೆ ಒಳಗಾಗುವನು '' ||೧೩೪||

ಎಂದು ಪುಣ್ಯಪಾಪಗಳಿಗೆ ತಕ್ಕ ಸುಖದುಃಖಗಳನ್ನು ಒದಗಿಸುವ ಯಮನು ನನಗೆ ಉಪದೇಶಿಸಿ, ಮತ್ತೊಂದು ರಹಸ್ಯಾಂಶವನ್ನೂ ನನಗೆ ತಿಳಿಸಿದನು. ಅದನ್ನು

ಏವಂ ಸಂಭಾಷಣೇನೈವ ಕಾಲೋ ಭೂಯಾನ್ ಗತಸ್ತತಃ ।
ದೂರಾದ್ದೃಷ್ಟಂ ಯಮೇನಾಪಿ ವಿಮಾನಮತಿಸುಂದರಂ ॥೧೪೬॥

ಕೋಟಿಸೂರ್ಯಪ್ರತೀಕಾಶಂ ಪ್ರಭಾಮಂಡಲಮಂಡಿತಂ ।
ರತ್ನಚ್ಛತ್ರಪತಾಕಾಢ್ಯಂ ಮುಕ್ತಾಮಾಲಾವಿರಾಜಿತಂ ॥೧೪೭॥

ರತ್ನದ್ವಾರೈರಪಾರೈಶ್ಚ ರುಚಿರೈರಭಿಮಂಡಿತಂ ।
ಚಂದ್ರಮಂಡಲಸಂಕಾಶಂ ದರ್ಪಣೈಃ ಪರಿವೇಷ್ಟಿತಂ ॥೧೪೮॥

ಚಂದ್ರಮಂಡಲಮಾಲಾಭಿಸ್ತಾರಾಮಾಲಾಭಿರಾವೃತಂ ।
ಪುಷ್ಪಾಸಾರಸಮಾಕ್ರಾಂತಂ ನವಮೇವ ಪ್ರತಿಕ್ಷಣಂ ॥೧೪೯॥

ರುದ್ರವೀಣಾಗಾನವಿದ್ಯಾವಿಶಾರದವರೈರಪಿ ।
ಸಮಲಂಕೃತಮುತ್ಕೃಷ್ಟಂ ನಾಟ್ಯನಾರೀಗಣೈರಪಿ ॥೧೫೦॥

ತಾದೃಶಂ ತದ್ವಿಲೋಕ್ಯಾಶು ಸ ಭೃಗುಂ ಪ್ರಾಹ ವಿಸ್ಮಿತಃ ।
ಕೃತಾಂತಃ ಕಿಮಿದಂ ದೃಷ್ಟಮಪೂರ್ವಂ ಪುಷ್ಪಕಂ ಮುನೇ ॥೧೫೧॥

ಈಗ ಹೇಳಲು ಸಾಧ್ಯವಿಲ್ಲ. ಹೀಗೆ ನಮ್ಮ ಸಂಭಾಷಣೆಯಲ್ಲಿಯೇ ಅನೇಕ ಕಾಲವು ಕಳೆದುಹೋಯಿತು. ಅಷ್ಟರಲ್ಲಿಯೇ ದಿವ್ಯವಿಮಾನವೊಂದು ದೂರದಲ್ಲಿ ಬರುತ್ತಿರುವುದು ಯಮನಿಗೆ ಗೋಚರವಾಯಿತು. ॥೧೪೫-೧೪೬॥

ಆ ವಿಮಾನವು ಕೋಟಿ ಸೂರ್ಯರಂತೆ, ತೇಜೋರಾಶಿಯಿಂದಾವೃತವಾಗಿದ್ದಿತು. ರತ್ನಮಯವಾದ ಛತ್ರಿಚಾಮರಗಳೂ, ಮುತ್ತಿನ ಸರಗಳೂ, ರತ್ನನಿರ್ಮಿತವಾದ ಬಾಗಿಲುಗಳೂ, ಅದರಲ್ಲಿ ಚಂದ್ರಮಂಡಲದಂತೆ ಶುಭ್ರವಾಗಿರುವ ಕನ್ನಡಿಗಳೂ ಶೋಭಿಸುತ್ತಿದ್ದವು. ॥೧೪೭-೧೪೮॥

ಅದರ ಸುತ್ತಲೂ ಚಂದ್ರಮಂಡಲಗಳ ಮತ್ತು ನಕ್ಷತ್ರ ರಾಶಿಗಳ ಮಾಲೆಗಳು ಹೊಳೆಯುತ್ತಿದ್ದವು. ಅದು ಪುಷ್ಪವೃಷ್ಟಿಯ ಮಧ್ಯದಲ್ಲಿ ಮುಂದುವರಿಯುತ್ತಿದ್ದಿತು. ಪ್ರತಿಕ್ಷಣದಲ್ಲಿಯೂ ಅದು ಹೊಸಹೊಸ ಆಕಾರವನ್ನು ಪಡೆಯುತ್ತಿದ್ದಿತು. ಅದರಲ್ಲಿ ರುದ್ರವೀಣಾಧಾರಿಗಳಾದ ಗಾಯಕರೂ, ನಾಟ್ಯಮಾಡುವ ಅಪ್ಸರಸ್ತ್ರೀಯರೂ ಒಂದು ಕಡೆ ಕುಳಿತು ತಮ್ಮ ನೈಪುಣ್ಯವನ್ನು ತೋರ್ಪಡಿಸುತ್ತಿದ್ದರು. ॥೧೪೯-೧೫೦॥

ವಿಮಾನಮೀದೃಶಂ ಪೂರ್ವಂ ನ ಮನ್ನಯನಗೋಚರಂ ।
ಕಿಮಿದಂ ರತ್ನರಾಶೀನಾಂ ನಭೋಮಂಡಲಮಂಡಲಂ ॥೧೪೨॥

ಯಸ್ಯ ಪ್ರಭಾಭಿರ್ಭಾನುಶ್ಚ ಖದ್ಯೋತನಿಭ ಏವ ಸಃ ।
ತಸ್ಯ ಪ್ರಭಾ ಸಮುತ್ಪನ್ನಾಸ್ತಾವದ್ದಿಙ್ಮಂಡಲೇಷ್ವಪಿ ॥೧೪೩॥

ನ ಚ ನಾರಾಯಣಸ್ಯೇದಂ ವಿಧೇರಿಂದ್ರಸ್ಯ ವಾ ಭೃಗೋ ।
ನ ಗಣಾನಾಂ ಚ ನಾನ್ಯೇಷಾಮಿದಂ ಶಾಂಭವಮೇವ ಕಿಂ ॥೧೪೪॥

ಅಶಾಂಭವವಿಮಾನಸ್ಯ ಕಿಮೇವಂ ಕಾಂತಿರದ್ಭುತಾ ।
ಏವಂ ವಿಚಾರಸಂಪನ್ನೇ ತದ್ವಿಮಾನಮುಪಾಗತಂ ॥೧೪೫॥

ಗಣಕೋಟಿಮಹಾದೇವಧ್ವನಯೋಽಪಿ ಶ್ರುತಾಸ್ತದಾ ।
ತಾನಿ ತೂರ್ಯಾಣ್ಯಪಾರಾಣಿ ದೃಷ್ಟಾನಿ ವಿಮಲಾನ್ಯಪಿ ॥೧೪೬॥

ಅಂತಹ ವಿಮಾನವನ್ನು ಕಂಡು ಯಮನು ಭೃಗುಮಹರ್ಷಿಯೊಡನೆ ಹೀಗೆಂದನು "ಮುನಿವರ್ಯನೇ ಇದೇನು? ಹಿಂದೆ ಎಂದೂ ನೋಡದ ಸೌಂದರ್ಯದಿಂದ ವಿಜೃಂಭಿಸುವ ವಿಮಾನವೊಂದು ಈಕಡೆಗೆ ಬರುತ್ತಿದೆ. ರತ್ನರಾಶಿಯಂತೆ ಅಂತರಿಕ್ಷಭಾಗವನ್ನೆಲ್ಲಾ ಅಲಂಕರಿಸುವ ಈ ದಿವ್ಯ ವಿಮಾನವನ್ನು ನಾನು ಎಂದೂ ನೋಡಿಯೇ ಇರಲಿಲ್ಲವಲ್ಲ. ||೧೪೧-೧೪೨||

ಇದರ ತೇಜಸ್ಸಿನ ಎದುರಿಗೆ ಸೂರ್ಯಮಂಡಲವು ಮಿಣುಕುಹುಳುವಿನಂತೆ ಕಾಣುತ್ತಿರುವುದು. ಇದರ ಕಾಂತಿಯು ಸರ್ವವ್ಯಾಪಿಯಾಗಿರುವುದು. ಇದನ್ನು ನೋಡಿದರೆ ಬ್ರಹ್ಮ, ನಾರಾಯಣ, ಇಂದ್ರ, ಪ್ರಮಥಗಣಗಳು ಇವರ ವಿಮಾನಗಳಂತೆ ಕಾಣುತ್ತಿಲ್ಲ. ಇಷ್ಟು ಕಾಂತಿಯುಕ್ತವಾಗಿರುವ ಇದು ಪ್ರಾಯಶಃ ಈಶ್ವರನ ವಿಮಾನವೇ ಇದ್ದರೂ ಇರಬಹುದು. ||೧೪೩-೧೪೪||

ಶಂಕರನ ಸಂಬಂಧಿಯಲ್ಲದ ವಿಮಾನಕ್ಕೆ ಇಷ್ಟೊಂದು ಕಾಂತಿಯು ಹೇಗೆ ಬಂದೀತು"? ಎಂದು ಯಮನು ಊಹಿಸುವಷ್ಟರಲ್ಲಿಯೇ ಆ ವಿಮಾನವು ಸಮೀಪಗತವಾಯಿತು. ಅಲ್ಲದೆ ಪ್ರಮಥಗಣಗಳ ಜಯಜಯಧ್ವನಿಯೂ, ತುತ್ತೂರಿಯೇ ಮೊದಲಾದ ವಾದ್ಯರವವೂ ಅಲ್ಲಿ ಕೇಳಬಂದಿತು. ||೧೪೫-೧೪೬||

ತದ್ಧ್ವನಿಶ್ರವಣಾದೇವ ಬ್ರಹ್ಮಾನಾರಾಯಣಾದಯಃ ।
ಸಮಾಗತಾಸ್ಸಂಭ್ರಮೇಣ ಕಿಮೇತದಿತಿ ವಿಸ್ಮಿತಾಃ ॥೧೪೭॥

ನಾರದಾದ್ಯಾಶ್ಚ ಮುನಯೋ ಗಂಧರ್ವಾ ಅಪಿ ಕಿನ್ನರಾಃ ।
ಸಮಾಗತಾಸ್ಸಂಭ್ರಮೇಣ ತದಾಲೋಕನಕೌತುಕೈಃ ॥೧೪೮॥

ತದಾ ದಿವ್ಯವಿಮಾನಸ್ಥಾಃ ಶಿವಾರ್ಚನಪರಾಯಣಾಃ ।
ದೃಷ್ಟ್ವಾ ಸಾ ರಾಜಮಹಿಲಾ ಕಾಲಕಾಲಾನುವಾದಿನೀ ॥೧೪೯॥

॥ ದೇವಾ ಊಚುಃ ॥

ಧನ್ಯಾಸಿ ಧನ್ಯವರಪೂಜಿತಪಾದುಕಾಸಿ
ಭೂತಾ ಮಹಾನಿಶಿ ಮಹೇಶ್ವರಪೂಜನೇನ ।
ಘೋರಂ ತಪಃ ಖಲು ಮಹೇಶ್ವರಲಿಂಗಪೂಜಾ
ಬಿಲ್ವೀದಲಾದಿಭಿರಪಾರನವಪ್ರಸೂನೈಃ ॥೧೫೦॥

ಆ ಧ್ವನಿಯನ್ನು ಕೇಳಿದೊಡನೆಯೇ ಬ್ರಹ್ಮ, ವಿಷ್ಣು, ನಾರದನೇ ಮೊದಲಾದ ಸಕಲ ದೇವತಾಶ್ರೇಷ್ಠರೂ, ಋಷಿವರ್ಗದವರೂ, ಆಶ್ಚರ್ಯದಿಂದ ಅದನ್ನು ನೋಡಲು ಅಲ್ಲಿಗೆ ಬಂದು ನೆರೆದರು. ॥೧೪೭-೧೪೮॥

ಆ ವಿಮಾನದಲ್ಲಿ ಶಿವಾರ್ಚನಪರಾಯಣರಾದ ಅನೇಕ ಮಹಾತ್ಮರೂ ಮತ್ತು ಶಿವಾರ್ಚನೆಯಿಂದ ಮುಕ್ತಿಯನ್ನು ಪಡೆದಿದ್ದ ಈ ರಾಜಪತ್ನಿಯೂ ಕುಳಿತಿದ್ದರು. ವಿಷ್ಣ್ವಾದಿ ದೇವತೆಗಳು ಶಿವನಾಮಜಪಮಾಡುತ್ತಾ ಕುಳಿತಿದ್ದ ರಾಣಿಯನ್ನು ನೋಡಿದೊಡನೆಯೇ ಭಕ್ತಿಪೂರ್ವಕವಾಗಿ ನಮಸ್ಕರಿಸಿ ಹೀಗೆ ಸ್ತುತಿಸಿದರು. ॥೧೪೯-೧೫೦॥

"ಎಲೌ ಮಂಗಳೆಯೇ, ನೀನು ಪರಶಿವನ ಪಾದಪೂಜೆಯಿಂದ ಈಗ ಧನ್ಯಳೆನಿಸಿರುವೆ. ನೀನು ಮಹಾಶಿವರಾತ್ರಿಯ ದಿನ ಬಿಲ್ವದಳಗಳಿಂದಲೂ ವಿವಿಧವಾದ ಪುಷ್ಪರಾಶಿಯಿಂದಲೂ, ಶಿವಲಿಂಗವನ್ನು ಪೂಜಿಸಿ, ತನ್ಮೂಲಕ ಘೋರವಾದ ತಪಸ್ಸನ್ನಾಚರಿಸಿರುವೆಯಲ್ಲವೇ ॥೧೫೦॥

ಹಸ್ತೌ ತೇ ಶಿವಲಿಂಗಪೂಜನಪರೌ ಧನ್ಯೌ ಚ ಮಾನ್ಯೌ ಮುಹು
ರ್ನೇತ್ರೇ ತೇ ಶಿವವೀಕ್ಷಣೇನ ವಿಮಲೇ ಧನ್ಯಂ ಮನಸ್ತೇ ಯತಃ ।
ತ್ವಂ ಮಾನ್ಯಾಸಿ ಜಗತ್ತ್ರಯೇಪಿ ಧರಣೀ ಜಾತಾ ತ್ವಯಾ ಪಾವನಾ
ತ್ವತ್ಪಾದಾಂಬುಜವೀಕ್ಷಣೇನ ವಯಮಪ್ಯದ್ಯಾತಿಧನ್ಯಾಃ ಖಲು ॥೧೫೨॥

ಇತಿ ಸಾ ಸಂಸ್ತುತಾ ದೇವೈರ್ಯಮೇನಾಭ್ಯರ್ಚಿತಾ ತತಃ ।
ಇಂದ್ರಲೋಕಂ ಯಯೌ ಪಶ್ಚಾದಿಂದ್ರೇಣಾಪಿ ಸಮರ್ಚಿತಾ ॥೧೫೩॥

ಬ್ರಹ್ಮಲೋಕಂ ಯಯೌ ಪಶ್ಚಾದ್ಬ್ರಹ್ಮಣಾ ಪೂಜಿತಾತದಾ ।
ಯಯೌ ವೈಕುಂಠಭವನಂ ನಾರಾಯಣಸಮರ್ಚಿತಾ ॥೧೫೪॥

ತತಃ ಪರಂ ಹರಂ ಪ್ರಾಪ ತ್ವರಯಾ ಹರಮಂದಿರೇ ।
ಗಿರಿಜಾನಿಕಟೇ ಸ್ಥಿತ್ವಾ ಚಕಾರ ಶಿವಪೂಜನಂ ॥೧೫೫॥

ಪರಮಾನಂದಮಗ್ನಾ ಸಾ ಸದಾ ಗಿರಿಜಯಾ ಸಹ ।
ವಾಸಂ ಚಕಾರ ಕೈಲಾಸೇ ಶಿವಾವಾಸೇ ಸುಧಾರಸೇ ॥೧೫೬॥

ನಿನ್ನ ಕೈಗಳು ಶಿವಲಿಂಗಪೂಜೆಯಿಂದ ಧನ್ಯವಾಗಿವೆ. ಶಿವಲಿಂಗದ ದರ್ಶನದಿಂದ ನಿನ್ನ ನೇತ್ರಗಳೂ, ಧ್ಯಾನದಿಂದ ನಿನ್ನ ಮನಸ್ಸೂ ಪರಿಶುದ್ಧಿಗೊಂಡಿವೆ. ಶಿವವ್ರತದಿಂದ ನೀನು ಮಾನ್ಯಳಾಗಿರುವೆ. ಜಗತ್ರಯವೂ ನೀನು ನೆಲಸಿದ್ದ ಭೂಪ್ರದೇಶವೆಲ್ಲವೂ ಪವಿತ್ರಗಳೆನಿಸಿವೆ. ಅಂತಹ ಸಾಧ್ವಿಯೂ ಶಿವಪೂಜಾಧುರಂಧರಳೂ ಆದ ನಿನ್ನ ಪಾದಕಮಲಗಳ ದರ್ಶನದಿಂದ ಇಂದು ನಾವೂ ಧನ್ಯರಾದೆವು. ||೧೫೨||

ಹೀಗೆ ದೇವತೆಗಳಿಂದಲೂ, ಯಮನಿಂದಲೂ ಸ್ತುತಿಸಲ್ಪಟ್ಟು ಸತ್ಕೃತಳಾಗಿ, ಅಲ್ಲಿಂದ ಇಂದ್ರಲೋಕಕ್ಕೆ ಹೋಗಿ ಅಲ್ಲಿ ಇಂದ್ರನಿಂದಲೂ, ಬ್ರಹ್ಮಲೋಕದಲ್ಲಿ ಬ್ರಹ್ಮನಿಂದಲೂ, ವೈಕುಂಠದಲ್ಲಿ ವಿಷ್ಣುವಿನಿಂದಲೂ ಪೂಜಿತಳಾಗಿ ಮುಂದುವರಿದಳು. ||೧೫೩-೧೫೪||

ಕೊನೆಗೆ ಕೈಲಾಸವನ್ನು ಹೊಕ್ಕು ಅಲ್ಲಿದ್ದ ಶಿವಾಲಯವನ್ನು ಪ್ರವೇಶಿಸಿ, ಅಲ್ಲಿ ಪಾರ್ವತಿಯ ಜೊತೆಯಲ್ಲಿಯೇ ನಿಂತು ಈಶ್ವರಾರ್ಚನೆ ಮಾಡಿದಳು. ಹಾಗೆ ಮಾಡಿದ ಶಿವಾರ್ಚನೆಯಿಂದ, ಆನಂದಾಂಬುಧಿಯನ್ನು ಪಡೆದು ಅಮೃತೋಪಮ

ಇಂದ್ರಲೋಕಾದಿಗಮನಂ ತತ್ಕೃತಾಭ್ಯರ್ಚನಾದಿಕಂ ।
ಶುಶ್ರಾವ ಸಮುಯಸ್ತತ್ರಾಪ್ಯಶಾರೀರವಚಶ್ಚ ಯೈಃ ॥೧೩೭॥

ತಂ ವಿಸ್ಮಯಾವಹಂ ದೃಷ್ಟ್ವಾ ಯಮೋಽಪ್ಯುತ್ಸವಮಾದರಾತ್ ।
ಭೃಗುಮಾಹ ವಿನೀತಾಂಗೋ ವಿಸ್ಮಯಾವಿಷ್ಟಮಾನಸಂ ॥೧೩೮॥

ಕೇಯಂ ಸ್ತುತಾ ನತಾ ದೇವೈರ್ಬ್ರಹ್ಮನಾರಾಯಣಾದಿಭಿಃ ।
ಕಿಂ ತಯಾ ವಾ ಕೃತಂ ಪುಣ್ಯಮೀದೃಶೋತ್ಸವಸಾಧನಂ ॥೧೩೯॥

॥ ಭೃಗುರುವಾಚ ॥

ಕಿಂ ವಕ್ತವ್ಯಮತಃ ಪರಂ ಯಮ ಮಯಾ ಸಾ ಪುಣ್ಯರಾಶಿಃ ಪರಂ
ನೇಯತ್ತಾ ಖಲು ತತ್ಕೃತಾಮಿತಮಹಾಪುಣ್ಯಾಂಬುರಾಶೇರಪಿ ।
ಯಾ ಭೂತಾ ನಿಶಿ ಲಿಂಗಪೂಜನರತಾ ತತ್ಪುಣ್ಯಮೇತಾದೃಶಂ ।
ಯೇನೋಪೇಂದ್ರಪುರಸ್ಸರಾ ಅಪಿ ಸುರಾಸ್ತತ್ಪಾದುಕಾರಾಧಕಾಃ ॥೧೪೦॥

ವಾದ ಕೈಲಾಸವಾಸದಲ್ಲಿಯೇ ನಿರತಳಾಗಿ ಅಲ್ಲಿಯೇ ಆನಂದವನ್ನನುಭವಿಸುತ್ತ ಲಿದ್ದಳು. ॥೧೩೬॥

ಹೀಗೆ ಆ ರಾಣಿಯು ಇಂದ್ರಲೋಕಾದಿಗಳ ಮೂಲಕ ಶಿವಸಾನ್ನಿಧ್ಯವನ್ನು ಸೇರಿದುದನ್ನು ಅಶರೀರವಾಣಿಯಿಂದ ಕೇಳಿ ಯಮನು ಅತ್ಯಂತ ಹರ್ಷಿತನಾಗಿ ಅವನಂತೆಯೇ ಆಶ್ಚರ್ಯ ಹರ್ಷಗಳಿಂದ ಕೂಡಿದ್ದ ಭೃಗುಮಹರ್ಷಿಯನ್ನು ಕುರಿತು ಹೀಗೆಂದನು. ॥೧೩೭-೨೩೮॥

"ಮಹರ್ಷಿಯೇ, ಹೀಗೆ ಬ್ರಹ್ಮ ವಿಷ್ಣ್ವಾದಿಗಳಿಂದಲೂ, ಪೂಜಿತಳಾಗಿ ಸ್ತುತ್ಯಳಾದ ಈಕೆಯು ಯಾರು? ಇಂತಹ ವೈಭವವನ್ನು ಪಡೆಯಲು ಆಕೆಯು ಆಚರಿಸಿದ ತಪಃಫಲವಾವುದು?" ಎಂದು ಪ್ರಶ್ನಿಸಲು ಆಗ ಭೃಗುಋಷಿಯು ಹೀಗೆಂದನು. ॥೧೩೯॥

"ಎಲೈ ಯಮಧರ್ಮನೇ, ಆಕೆಯು ಆಚರಿಸಿದ ಪುಣ್ಯಕರವಾದ ವ್ರತವಾವುದೆಂದರೆ, ಮಹಾಶಿವರಾತ್ರಿಯಲ್ಲಿ ಶಿವಾರ್ಚನೆ. ಅದರಿಂದ ಲಭಿಸುವ ಸುಕೃತವನ್ನು ಇಷ್ಟೇ ಎಂದು ನಿರ್ಧರಿಸಲಾಗುವುದಿಲ್ಲ. ಆ ವ್ರತಾಚರಣೆಯಿಂದ ಶಿವನನ್ನು ತೃಪ್ತಿಪಡಿಸಿದವರ ಪಾದಗಳನ್ನು ಉಪೇಂದ್ರನೇ ಮೊದಲಾದ ಸಕಲ ದೇವತೆಗಳೂ ಅದೊಂದು ಸುಕೃತರಾಶಿಯೆಂದು ತಿಳಿದು ಸರ್ವದಾ ಪೂಜಿಸುವರು. ॥೧೪೦॥

ಅಸ್ಯೈವ ರಾಜ್ಞೋ ಮಹಿಳಾ ವಿಮಲಾ ಸಾ ಶಿವಾರ್ಚನೈಃ ।
ಭೂತಾ ನಿಶಿ ಮಹೇಶಾಯ ತಯಾ ದೇಹಸ್ಸಮರ್ಪಿತಃ ॥೧೬೧॥

ಇತಿ ತದ್ವಚನಂ ಶ್ರುತ್ವಾ ಯಮಃ ಪ್ರಾಹಾತಿವಿಸ್ಮಿತಃ ।
ಕಥಂ ದೇಹಸ್ತಯಾ ದತ್ತೋ ಮಹೇಶಾಯಾತಿಸಾದರಂ ॥೧೬೨॥

॥ ಭೃಗುರುವಾಚ ॥

ರತ್ನಾನಿ ಸರ್ವಾಣಿ ಸಮರ್ಪಿತಾನಿ
ತಯಾ ಮಹೇಶಾಯ ಶಿವಾರ್ಚನೇನ ।
ನೀತಂ ವಯಸ್ಸರ್ವಮನಾಕುಲೇನ
ಚಿತ್ತೇನ ತತ್ಪುಣ್ಯಸಮರ್ಚಿತೇನ ॥೧೬೩॥

ಯಾವಂತಿ ರತ್ನಜಾತಾನಿ ಸುವರ್ಣಾಭರಣಾನ್ಯಪಿ ।
ವಿವಿಧಾನಿ ವಿಚಿತ್ರಾಣಿ ತಾನಿ ದತ್ತಾನಿ ಶಂಭವೇ ॥೧೬೪॥

ಪ್ರಾಜ್ಯಂ ರಾಜ್ಯಂ ತಯಾ ದತ್ತಂ ಶಿವಪೂಜಾರ್ಥಮಾದರಾತ್ ।
ಮಾತಂಗಾಶ್ಚ ತುರಂಗಾಶ್ಚ ದಾಸಾ ದಾಸ್ಯಶ್ಚ ಕೋಟಿಶಃ ॥೧೬೫॥

ಪತಿವ್ರತೆಯಾದ ಆಕೆಯೇ ಇಲ್ಲಿ ನಿಂತಿರುವ ಈ ರಾಜನ ಪತ್ನಿಯು. ಆಕೆಯು ಮಹಾಶಿವರಾತ್ರಿಯ ದಿನ ಈಶ್ವರನನ್ನು ಪೂಜಿಸಿ, ಅನಂತರ ದೇಹತ್ಯಾಗ ಮಾಡಿದಳು" ಎಂದು ಹೇಳಿದ ಭೃಗುಋಷಿಯ ಮಾತುಗಳನ್ನು ಕೇಳಿ ಯಮನು "ಮುನಿಯೇ, ಆ ರಾಣಿಯು ಈಶ್ವರನಿಗೆ ತನ್ನ ದೇಹತ್ಯಾಗ ಮಾಡಿದುದು ಹೇಗೆ?" ಎಂದು ಮತ್ತೆ ಪ್ರಶ್ನಿಸಲು ಆಗ ಮಹರ್ಷಿಯಿಂತೆಂದನು. ॥೧೬೧-೧೬೨॥

"ಯಮಧರ್ಮನೇ, ಆಕೆಯು ಶಿವಪೂಜಾ ಸಮಯದಲ್ಲಿ ತನ್ನಲ್ಲಿದ್ದ ಅಮೂಲ್ಯವಾದ ರತ್ನಗಳನ್ನೆಲ್ಲಾ ಶಿವಾರ್ಪಣೆಮಾಡಿದಳು. ಅದೇ ರೀತಿ ಸರ್ವದಾ ಶಿವಧ್ಯಾನದಲ್ಲಿಯೇ ವಯಸ್ಸನ್ನು ಕಳೆದು ತನ್ನ ಮನಸ್ಸನ್ನು ಅಲ್ಲಿಯೇ ನೆಲೆಗೊಳಿಸಿದನು. ॥೧೬೩॥

ಮತ್ತು ತನ್ನಲ್ಲಿ ಎಷ್ಟು ರತ್ನಾಭರಣಗಳಿದ್ದವೋ, ಮತ್ತು ಎಂತೆಂತಹ ವಿಚಿತ್ರ ವಸ್ತುಗಳಿದ್ದವೋ ಅವೆಲ್ಲವನ್ನೂ ಶಿವನಿಗೆ ಅರ್ಪಿಸಿದಳು. ಅಷ್ಟೇ ಅಲ್ಲದೆ ಉತ್ತಮವಾದ ತನ್ನ ರಾಜ್ಯ, ಕೋಶ, ಆನೆ, ಕುದುರೆ, ದಾಸದಾಸಿಯರು ಇವರೇ ಮೊದಲಾದ ಸಕಲ ಭೋಗ್ಯವಸ್ತುಗಳನ್ನೂ ಶಿವಪೂಜಾರ್ಥವಾಗಿ ವಿನಿಯೋಗಿಸಿದಳು.॥೧೬೪-೧೬೫

ಪುತ್ರಾಶ್ಚ ದತ್ತಾಶ್ಯರ್ಾಯ ಶಿವಸೇವಾರ್ಥಮಾದರಾತ್ ।
ನಾನಾವಿಧಾನಿ ಧಾನ್ಯಾನಿ ದತ್ತಾನ್ಯೇವ ತಯಾ ಯಮ ॥೧೬೬॥

ದತ್ತಾನ್ಯಮಂದಗೋವೃಂದಾನ್ಯಪಾರಾ ಮಹಿಷೀಗಣಾಃ ।
ಭಕ್ತ್ಯಾ ಶಂಕರಪೂಜಾರ್ಥಂ ತಯಾ ರತ್ನಗೃಹಾ ಅಪಿ ॥೧೬೭॥

ತತಃ ಪರಂ ಸ್ವದೇಹೋಽಪಿ ಶಾಂಕರಾಯ ಸಮರ್ಪಿತಃ ।
ಭೂತಾ ಮಹಾನಿಶಿ ಪ್ರೀತ್ಯಾ ಬಿಲ್ವಪಲ್ಲವಸಂನಿಭಃ ॥೧೬೮॥

ತತಃ ಪ್ರೀತೋ ಮಹಾದೇವಸ್ಸಾಂಬಸ್ತತ್ಕೃತಪೂಜಯಾ ।
ವಿಮಾನಂ ಪ್ರೇಷಯಾಮಾಸ ಗಣಕೋಟಿಸಮನ್ವಿತಂ ॥೧೬೯॥

ತೇನೈವ ಸಾ ಶರೀರೇಣ ವಿಮಾನವರಮಾಶ್ರಿತಾ ।
ಯಯೌ ಕೈಲಾಸನಗರಂ ಸುರಾಣಾಮಪಿ ದುರ್ಲಭಂ ॥೧೭೦॥

ಏತಾದೃಶಂ ಮಹದ್ಭಾಗ್ಯಂ ಶಂಕರಾರಾಧನಂ ವಿನಾ ।
ದುರ್ಲಭಂ ದೇಹಿನಾಂ ಮನ್ಯೇ ಸಂಸಾರಭಯನಾಶಕಂ ॥೧೭೧॥

ಮತ್ತು ತನ್ನ ಮಕ್ಕಳನ್ನು ಶಿವಸೇವೆಗಾಗಿ ಅರ್ಪಿಸಿದಳು. ಹಾಗೆಯೇ ನಾನಾವಿಧವಾದ ಧಾನ್ಯರಾಶಿಯನ್ನೂ, ಅಸಂಖ್ಯಾತವಾದ ಗೋವುಗಳನ್ನೂ, ಮಹಿಷೀ ಗಣಗಳನ್ನೂ, ರತ್ನಗೃಹಗಳನ್ನೂ ಶಿವಪೂಜಾಸಾರ್ಥಕತೆಗಾಗಿ ದಾನಮಾಡಿದಳು. ||೧೬೬-೧೬೭||

ಇಷ್ಟೆಲ್ಲಾ ಆದಮೇಲೆ ಆಕೆಯು ಬಿಲ್ವಪತ್ರೆಯಂತೆ ಕೋಮಲವಾಗಿದ್ದ ತನ್ನ ದೇಹವನ್ನೂ ಶಂಕರನಿಗೆ ಸಮರ್ಪಿಸಿದಳು. ಮಹಾಶಿವರಾತ್ರಿಯ ದಿನದಲ್ಲಿ ತನ್ನ ದೇಹವನ್ನು ಶಿವಪ್ರೀತ್ಯರ್ಥವಾಗಿ ಅರ್ಪಣೆಮಾಡಿದ್ದರಿಂದ ಮಹಾದೇವನು ಅದರಿಂದ ತೃಪ್ತನಾಗಿ, ಅನೇಕ ಗಣಗಳಿಂದ ಕೂಡಿ ವಿರಾಜಿಸುವ ದಿವ್ಯವಿಮಾನವನ್ನು ಮಹಾ ದೇವನು ಆಕೆಗಾಗಿ ಕಳುಹಿಸಿದನು. ಮಹಾರಾಣಿಯಾದರೋ, ತನ್ನ ತಪಃಪ್ರಭಾವ ದಿಂದ ಸಶರೀರಳಾಗಿಯೇ ಕೈಲಾಸನಗರವನ್ನು ಕುರಿತು ಆ ವಿಮಾನದಲ್ಲಿ ಪ್ರಯಾಣ ಮಾಡಿದಳು. ಈ ರೀತಿಯಾದ ಸುಕೃತವು ದೇವತೆಗಳಿಗೂ ಲಭಿಸಲಾರದು. ||೧೬೮-೧೬೯-೧೭೦||

ಇಂತಹ ವೈಭವವು ಜೀವಿಗಳಿಗೆ ಶಂಕರಾರಾಧನೆಯಿಂದಲೇ ಲಭಿಸಬೇಕು. ಅಲ್ಲದೆ ಸಂಸಾರದ ಭಯವನ್ನು ನಾಶಗೊಳಿಸಲು ಶಿವಾರಾಧನೆಗಿಂತ ಬೇರೆಯಾದ

ಸಂಸಾರಾಂಗಾರಲಹರೀಪರಿವೇಷ್ಟಿತವಿಗ್ರಹಾಃ ।
ನಾರಾಧಯಂತಿ ಗಿರಿಶಂ ತದಿದಂ ಮಹದದ್ಭುತಂ ॥೧೭೨॥

ಏಕೇನ ಜನ್ಮನಾ ಪುಣ್ಯಂ ಯತ್ಕೃತಂ ಜನನಾವಧಿ ।
ತೇನಾಮರಣಮೀಶಾನೇ ಭಕ್ತ್ಯಂಶಃ ಕೋಽಪಿ ಲಭ್ಯತೇ ॥೧೭೩॥

ತಾದೃಶಾನ್ಯೇವ ಜನ್ಮಾನಿ ಯದಪಾರಾಣಿ ಮಾನವಃ ।
ಪ್ರಾಪ್ನೋತಿ ತರ್ಹಿ ಗಿರಿಶೇ ಭಕ್ತಿಃ ಕಾಪಿ ಪ್ರವರ್ಧತೇ ॥೧೭೪॥

ತಯಾ ಭಕ್ತ್ಯಾ ಮಹಾದೇವಂ ನವಬಿಲ್ವದಳೈರಪಿ ।
ದ್ವಿತ್ರೈಃ ಸಮರ್ಚಯನ್ನೇವ ಮುಕ್ತೋ ಭವತಿ ಮಾನವಃ ॥೧೭೫॥

ರತ್ನೈರ್ವಾ ಮಣಿಭೂಷಣೈರಪಿ ಮಣಿಚ್ಛತ್ರೈರ್ವಿತಾನಾದಿಭಿ
ರ್ಮುಕ್ತಾಲಂಕೃತಚಾಮರೈರಗಣಿತೈಸ್ಸ್ರಗ್ಭಿಸ್ತಥಾ ಚಂದನೈಃ ।
ತೃಪ್ತೋ ನ ತ್ರಿಪುರಾಂತಕಃ ಖಲು ನವೈರ್ಬಿಲ್ವೀದಲೈಃ ಕೋಮಲೈ
ರ್ನೀರೈರ್ಹಾರಸಮರ್ಪಿತೈಃ ಪರಮಯಂ ತುಷ್ಟೋ ಭವಾನೀಪತಿಃ ॥೧೭೬॥

ಉಪಾಯವೇ ಇಲ್ಲ. ಆದರೆ ಸಂಸಾರವೆಂಬ ಸಾಲುಬೆಂಕಿಯಿಂದ ಸುಟ್ಟ ದೇಹವುಳ್ಳವರಾದರೂ ಜನರು ಅದನ್ನು ಪರಿಹರಿಸಿಕೊಳ್ಳಲು ಪರಶಿವನನ್ನು ಪೂಜಿಸುವುದಿಲ್ಲ. ಇದೂ ಒಂದು ಆಶ್ಚರ್ಯವೇ ಸರಿ. ||೧೭೧-೧೭೨||

ಒಂದು ಜನ್ಮದಲ್ಲಿ ಪುಣ್ಯರಾಶಿಯನ್ನು ಸಂಪಾದಿಸಲು ಆ ಜನ್ಮ ಕಳೆಯುವವರೆಗೂ ಪುಣ್ಯಕಾರ್ಯಗಳನ್ನೆಸಗಬೇಕು. ಆದರೆ ಶಿವಪೂಜೆಯೆಂಬ ಒಂದು ಪುಣ್ಯಕಾರ್ಯವು ಎಷ್ಟೋ ಜನ್ಮಗಳನ್ನು ಕಳೆದರೂ ಮತ್ತೆ ಮತ್ತೆ ಪುಣ್ಯರಾಶಿಯನ್ನೊದಗಿಸುತ್ತಾ ಶಿವಭಕ್ತಿಯನ್ನು ಹೆಚ್ಚಿಸುತ್ತದೆ. ||೧೭೩-೧೭೪||

ಶಿವಪೂಜೆಯಲ್ಲಿಯೂ, ಭಕ್ತಿಪೂರ್ವಕವಾಗಿ ಎರಡೋ ಅಥವಾ ಮೂರು ಹೊಸ ಬಿಲ್ವಪತ್ರೆಯನ್ನು ಶಿವಲಿಂಗಕ್ಕೆ ಅರ್ಪಿಸುವುದರಿಂದಲಂತೂ ಮನುಷ್ಯನು ಅನಾಯಾಸವಾಗಿ ಮುಕ್ತನಾಗುವನು. ||೧೭೫||

ಪರಶಿವನಿಗೆ ಪೂಜಾಕಾಲದಲ್ಲಿ, ರತ್ನಮಯವಾದ ಚತ್ರಿಚಾಮರಗಳು, ಮಣಿಭೂಷಣಗಳು, ಗಂಧಮಾಲ್ಯಾದಿಗಳು ಇವುಗಳನ್ನು ಎಷ್ಟು ಹೆಚ್ಚಾಗಿ ಅರ್ಪಿಸಿದರೂ ಅಷ್ಟು ತೃಪ್ತಿಯೊದಗಲಾರದು. ದೃಢವಾದ ಭಕ್ತಿಯಿಂದ ಮನೋಹರವಾದ

ಆನಂದಾಂಬುಧಿರೇವ ಶಂಕರ ಇತಿ ಜ್ಞಾತಸ್ತತಃ ಕಿಂ ನರೈ
ಸ್ತಸ್ಮೈ ದೇಯಮದೇಯಮೇವ ಸಕಲಂ ದೇಯಂ ತದೀಯಂ ಯತಃ ।
ಸ್ವತ್ವಂ ಕಸ್ಯ ಧನೇಷು ತಿಷ್ಠತಿ ಧನಂ ಕಸ್ಯಾಸ್ತಿ ಲೋಕತ್ರಯೇ
ಗೌರೀಕಾಮುಕ ಏವ ಕಾಲಧನಿಕಃ ಕಾಲಾಂತಕಃ ಕೇವಲಂ ॥೧೭೭॥

ಅಪಾರಮೈಶ್ವರ್ಯಮುಮಾಸಹಾಯ
ಪಾದಾರವಿಂದಾರ್ಚನಲಭ್ಯಮೇವ ।
ಐಶ್ವರ್ಯದಾನೇನ ಕಥಂ ಸ ದೇವ
ಸ್ತುಷ್ಟೋ ಭವೇದ್ಭಕ್ತಿಲವಂ ವಿನಾಪಿ ॥೧೭೮॥

ಕೆಲವು ಬಿಲ್ವದಳಗಳನ್ನು ಜಲಾಭಿಷೇಕಪೂರ್ವಕವಾಗಿ ಅರ್ಪಿಸಿದರೆ ಸಾಕು. ಪರಶಿವನು ಸಂತೃಪ್ತಿಪಡುವನು. ||೧೭೬||

ಪರಶಿವನು ಕೇವಲ ಆನಂದಮಯಸ್ವರೂಪನು ಎಂಬುದೇ ನಿಜವಾದ ತತ್ವ. ಇದನ್ನರಿತ ಜನರು ಪರಶಿವನಿಗೆ ಯಾವುದನ್ನು ಅರ್ಪಿಸಬೇಕು.? ಯಾವುದು ಅರ್ಪಣೆಗೆ ಯೋಗ್ಯವಲ್ಲ? ಎಂಬುದನ್ನು ಯೋಚಿಸಲೇ ಬಾರದು. ಲೋಕದಲ್ಲಿ ಧನರಾಶಿಗೆ ನಿಜವಾದ ಯಜಮಾನರು ಯಾರೂ ಇಲ್ಲ. ಯಾರ ಯಜಮಾನಿಕೆ ಯನ್ನೂ ಸ್ಥಿರವಾಗಿ, ಧನವು ಪಡೆಯಲಾರದು. ಆದುದರಿಂದ ನನ್ನ ವಸ್ತುವಿದು, ಎಂದು ಯಾವುದನ್ನು ತಾನೆ ಹೇಳಬಹುದು? ಒಟ್ಟಿನಲ್ಲಿ ವಿಚಾರಮಾಡಿದರೆ ಗೌರೀಪತಿಯಾದ ಪರಶಿವನೊಬ್ಬನೇ ಸರ್ವಕ್ಕೂ ಯಜಮಾನನು. ಅವನೇ ಕಾಲ ವ್ಯಾಪಕ ಅವನೇ ಧನಿಕ ಮತ್ತು ಕಾಲನಾಶಕ. ಇದರಲ್ಲಿ ಸಂಶಯವೇ ಇಲ್ಲ. ||೧೭೭||

ಮನುಷ್ಯರಿಗೆ ಅಪಾರವಾದ ಐಶ್ವರ್ಯವು ಲಭಿಸಿರಬೇಕಾದರೆ ನಿಜವಾಗಿಯೂ ಅವರು ಈಶ್ವರ ಪಾದಾರವಿಂದಾರ್ಚನೆ ಮಾಡಿರಬೇಕು. ಅಂತಹ ಸಕಲೈಶ್ವರ್ಯಪ್ರದ ನಾದ ಶಂಕರನಿಗೆ ನಾವು ಯಾವ ಐಶ್ವರ್ಯವನ್ನು ತಾನೇ ಕೊಡಬಹುದು? ನಿಜವಾಗಿ ಶಿವನಿಗೆ ಅರ್ಪಿಸುವುದೆಂದರೆ ದೃಢಭಕ್ತಿಯೊಂದೇ. ಅದರಿಂದಲೇ ಶಂಕರನನ್ನು ತೃಪ್ತಿಗೊಳಿಸಬೇಕು. ||೧೭೮||

ಭಕ್ತ್ಯಾ ದತ್ತಂ ಕಾಲಬಿಲ್ವೀದಳಂ ವಾ
ಮೂರ್ಧ್ನಾ ಧತ್ತೇ ಶಂಕರಃ ಶಂಕರೋಯಂ।
ಏತತ್ತುಲ್ಯಃ ಕೋಪಿ ದೇವೇಷು ದೇವೋ
ನಾಸ್ತೀತ್ಯೇವಂ ಪ್ರಾಹ ವೇದೋಪಿ ನೂನಂ ॥೧೭೯॥

ಫಾಲಾಕ್ಷೇ ಸತಿ ಕೋನ್ಯದೇವಭಜನಾಸಕ್ತೋ ಭವೇದ್ಭೂತಲೇ
ತ್ಯಕ್ತ್ವಾ ಜಾರಜನೋಪ ಕೇವಲಮುಪೇಂದ್ರಾದಿದೇವಾರ್ಚಿತೇ।
ರತ್ನಂ ತಂ ಪರಿಹೃತ್ಯ ಕಾಚಶಕಲಂ ವಾಂಛನ್ ಜನೋ ಜೀವನಂ
ಧನ್ಯಂ ಕಿಂ ಮನುತೇ ಜನೈರಭಿನುತಃ ಕಿಂ ತಾದೃಶೋ ಜಾಯತೇ ॥೧೮೦॥

ಜಾಯಂತೇ ಜನನಾದಿದುಃಖನಿಧಯಸ್ತ್ಯಕ್ತ್ವಾ ಶಿವಾರಾಧನಂ
ದುಃಖಾಂಭೋಧಿಪರಾಭವಾಯ ಬಹುಧಾ ಭಾವಃ ಪ್ರವೃತ್ತೋ ಮುಹುಃ।
ವೀರೇಶಂ ನವಬಿಲ್ವಕೋಮಲದಲೈರಭ್ಯರ್ಚಯನ್ ಸಾದರಂ
ಹಾರಾಹಾರವಿಶೇಷಭೂಷಿತವಪುಃ ಪ್ರಾಪುಸ್ತಮರ್ಥಾನಪಿ ॥೧೮೧॥

ಭಕ್ತನು ದೃಢಭಕ್ತಿಯಿಂದ ಅರ್ಪಿಸಿದ ಬಿಲ್ವದಳವನ್ನು, ಸುಖಕರನಾದ ಈ ಶಂಕರನು, ಪ್ರೀತಿಯಿಂದ ತಾನೇ ತನ್ನ ಶಿರಸ್ಸಿನಲ್ಲಿ ಧರಿಸುವನು. ಇಂತಹ ದಯಾಳುವಾದ ಶಂಕರನಿಗೆ ಸಮನಾದ ದೇವಶ್ರೇಷ್ಠನು ಮತ್ತಾರಿರುವನು ? ಅದಕ್ಕಾಗಿಯೇ ಶಿವಸದೃಶವಾದ ಪೂಜ್ಯವಸ್ತುವು ನಿಜವಾಗಿಯೂ ಬೇರೊಂದಿಲ್ಲ ಎಂದು ವೇದಗಳು ಸದಾ ಸಾರುತ್ತಿರುವುವು. ॥೧೭೯॥

ಬ್ರಹ್ಮ, ವಿಷ್ಣ್ವಾದಿದೇವತೆಗಳಿಂದ ಪೂಜಿತನಾದ ಅಗ್ನಿನೇತ್ರಧಾರಿ ಶಂಕರನನ್ನು ಬಿಟ್ಟು ಯಾರು ದೇವತಾಂತರ ಪೂಜಾಧ್ಯಾನಾದಿಗಳಲ್ಲಿ ತೊಡಗುವರೋ, ಅವರು ನಿಜವಾಗಿಯೂ, ಅವರ ಜೀವನದಲ್ಲಿ ಅಮೂಲ್ಯವಾದ ರತ್ನವನ್ನು ದೂರ ಎಸೆದು, ಗಾಜಿನ ಚೂರುಗಳನ್ನು ಗುಡ್ಡೆಹಾಕಿಕೊಂಡಂತೆಯೇ ಸರಿ. ಅಲ್ಲದೆ ಅವರು ಎಂದಿಗೂ ತಮ್ಮ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಲಾರರು. ಲೋಕಪೂಜ್ಯರಾಗರು. ॥೧೮೦॥

ಯಾರು ಈಶ್ವರಾರಾಧನೆ ಮಾಡದೆ ಕಾಲಕಳೆಯುವರೋ, ಅವರಿಗೆ ಜನನ ಮರಣಾದಿ ಸಕಲ ದುಃಖಗಳು ಎಂದೂ ಕೊನೆಗಾಣಲಾರವು. ಎಷ್ಟೋ ವೇಳೆ ಅವುಗಳನ್ನು ಪರಿಹರಿಸಿಕೊಳ್ಳಲು ಪ್ರಯತ್ನಿಸಿದರೂ ಅವು ತಪ್ಪಲಾರವು. ಆದರೆ ಭಕ್ತಿಯಿಂದ ಕೂಡಿ ವೀರಶಂಕರನನ್ನು ಬಿಲ್ವಾರ್ಚನಾದಿಗಳಿಂದ ತೃಪ್ತಿಪಡಿಸಿದವರು

ಲಕ್ಷ್ಮೀಕಾಂತಚತುರ್ಮುಖಾದಿಕಸುರಾನ್ ವೀರೇಶ್ವರಾರಾಧಕಃ
ಪ್ರಾಯಃ ಕಾರುಣಿಕಃ ಕರೋತಿ ಯವಸಪ್ರಾಯಾನ್ ಯಮಾನಾಮಯಃ ।
ತತ್ತುಲ್ಯಸ್ತು ಸ ಏವ ತೇನ ವಿದಿತಂ ತತ್ತ್ವಂ ಕಥಂಚಿತ್ಪ್ರಭೋಃ
ಶಂಭೋಃ ಕಸ್ತದಪಾರದಿವ್ಯಮಹಿಮಾ ಪಾರಂಗತೋ ಭೂತಲೇ ॥೧೮೨॥

ಇತಿ ಶ್ರೀಶಿವರಹಸ್ಯೇ ತೃತೀಯಾಂಶೇ ಉತ್ತರಾರ್ಧೇ ಭೃಗುಯಮಸಂವಾದೇ
ಶಿವರಾತ್ರೀ ಮಹಿಮಾನುವರ್ಣನಂ ನಾಮ
ತ್ರಿಚತ್ವಾರಿಂಶೋಽಧ್ಯಾಯಃ

ಧನಕನಕಾದಿಗಳಿಂದ ಅಲಂಕೃತರಾಗಿ, ಭೋಗಿಗಳೆನಿಸಿ ಸಂಸಾರದುಃಖದಿಂದ ವಿಮುಕ್ತರಾಗಿ ಕೊನೆಗೆ ಶಿವಸಾಯುಜ್ಯಪಡೆಯುವರು. ||೧೮೧||

ಪ್ರಾಯಿಕವಾಗಿ ವೀರೇಶ್ವರಾರಾಧಕನಾದವನು, ಬ್ರಹ್ಮ, ವಿಷ್ಣು ಮುಂತಾದ ಇತರ ದೇವತೆಗಳನ್ನು ಹುಲ್ಲು ಕಡ್ಡಿಯಂತೆ ಅಲ್ಪವಾಗಿ ಭಾವಿಸುವನು. ಮತ್ತು ಯಾವ ವಿಧವಾದ ಸಾಂಸಾರಿಕ ಕ್ಲೇಶಕ್ಕೂ ಸಿಕ್ಕದೆ ಸುಖಸ್ವರೂಪಿಯಾಗಿರುವನು. ಅಂತಹ ಭಕ್ತನಿಗೆ ಸರಿಸಮರೆನಿಸಿದವರು ಲೋಕದಲ್ಲಿ ಯಾರೂ ದೊರಕಲಾರರು. ಮತ್ತು ಶಂಕರತತ್ತ್ವಕ್ಕಿಂತ ಮಿಗಿಲಾದ ತತ್ತ್ವವೂ, ಅದರ ಮಹಿಮೆಯನ್ನು ಪೂರ್ಣವಾಗಿ ತಿಳಿದವರಿಗೆ ಸಮನಾದ ದೇವತೆಯೂ ಸಹ, ಲೋಕದಲ್ಲಿ ಮತ್ತಾರೂ ದೊರೆಯಲಾರರು ಎಂದು ಭೃಗುಮಹರ್ಷಿಯು ಯಮಧರ್ಮರಾಜನಿಗೆ ಶಿವಪೂಜಾ ಮಹಿಮೆಯನ್ನು ವಿವರವಾಗಿ ತಿಳಿಸಿದನೆಂದು, ವ್ಯಾಘ್ರವು ತನ್ನ ಸಮೀಪಕ್ಕೆ ಬಂದ ರಾಜ ಮತ್ತು ಬ್ರಾಹ್ಮಣರಿಗೆ ತಿಳಿಸಿತು. ಈ ವಿಷಯವನ್ನು ಸತ್ಯವ್ರತರಾಜನು ತನ್ನ ಪತ್ನಿಗೆ ತಿಳಿಸುತ್ತಿರುವನು. ||೧೮೨||

ಇಲ್ಲಿಗೆ ಶಿವರಹಸ್ಯದ ತೃತೀಯಾಂಶದ ಉತ್ತರಾರ್ಧದಲ್ಲಿ ಭೃಗು, ಯಮ ಇವರ
ಸಂವಾದರೂಪವಾಗಿ ಶಿವರಾತ್ರೀಮಹಿಮೆಯನ್ನು ವಿವರಿಸುವ
ನಲವತ್ತುಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಓಂ ನಮಶ್ಶಿವಾಯ ॥

ಅಥ ಶ್ರೀ ಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ಚತುಶ್ಚತ್ವಾರಿಂಶೋಽಧ್ಯಾಯಃ

॥ ಸತ್ಯವ್ರತ ಉವಾಚ ॥

ಇತಿ ಕಾಲೋ ಭೃಗೋರ್ವಾಕ್ಯಮಾಕರ್ಣ್ಯ ಸಸುಧಾಮಯಂ ।
ಅವಾಪ ಪರಮಾನಂದಮಾನಂದಾಶ್ರುಸಮಾಕುಲಃ ॥೧॥

॥ ಯಮ ಉವಾಚ ॥

ಭೂತಂ ಭವ್ಯಂ ಭವಿಷ್ಯಚ್ಚ ಯೇನ ಜ್ಞಾತಂ ತ್ವಯಾ ಭೃಗೋ ।
ಶಿವತತ್ತ್ವಂ ವಿಶೇಷೇಣ ತನ್ಮೇ ಬ್ರೂಹಿ ವಿಶೇಷತಃ ॥೨॥

ರಹಸ್ಯಮಪಿ ತನ್ಮಹ್ಯಂ ವದ ಸಾದರಮಾಸ್ತಿಕೇ ।
ತತ್ಕೌತುಕಾನಾಂ ನಿಲಯಂ ಸರ್ವಥೇತ್ಯವಗಮ್ಯತೇ ॥೩॥

ನಲವತ್ತುನಾಲ್ಕನೆಯ ಅಧ್ಯಾಯ

ಸತ್ಯವ್ರತನು ತನ್ನ ಪತ್ನಿಯನ್ನು ಕುರಿತು ಮುಂದಿನ ವಿಷಯವನ್ನು ವಿವರಿಸುತ್ತಾ ಹೀಗೆಂದನು. "ಯಮನು ಭೃಗುಮಹರ್ಷಿಯ ಅಮೃತೋಪಮವಾದ ಆ ಮಾತುಗಳನ್ನು ಕೇಳಿ, ಆನಂದಾಶ್ರುಪೂರಿತನಾಗಿ ಮತ್ತೆ ಹೀಗೆಂದನು. ॥೧॥

ಮಹರ್ಷಿಯೇ, ನೀನು ಭೂತಭವಿಷ್ಯದ್ವರ್ತಮಾನಕಾಲದ ವಿಷಯಗಳನ್ನೆಲ್ಲಾ ಅರಿತವನು. ದಯೆಯಿಂದ ನನಗೆ ರಹಸ್ಯವಾದ ಶಿವತತ್ತ್ವವನ್ನು ಉಪದೇಶಿಸು. ತತ್ತ್ವವು ಎಲ್ಲರಿಗೂ ಅತ್ಯಂತಾಶ್ಚರ್ಯಕರವಾಗಿರುವುದೆಂದು ನಾನು ತಿಳಿಯುತ್ತೇನೆ. ॥೨-೩॥

॥ ಭೃಗುರುವಾಚ ॥

ಗೋಪನೀಯಂ ಪ್ರಯತ್ನೇನ ಯದೇತದಧುನೋಚ್ಯತೇ ।
ಅಭಕ್ತಾಯ ನ ವಕ್ತವ್ಯಮಶ್ರದ್ಧಾನಿಲಯಾಯ ಚ ॥೪॥

ಶಾಂಕರಾಯಾತಿಶುದ್ಧಾಯ ಭೂತಿರುದ್ರಾಕ್ಷಧಾರಿಣೇ ।
ವಕ್ತವ್ಯಂ ತದ್ರಹಸ್ಯೇಷು ಶಿವಸ್ಥಾನೇಷು ಕೇವಲಂ ॥೫॥

ಯಸ್ಮಾಲ್ಲಿಂಗಾತ್ಸಮುತ್ಪನ್ನಂ ಬ್ರಹ್ಮಾನಾರಾಯಣಾದಿಕಂ ।
ಚರಾಚರಾತ್ಮಕಂ ವಿಶ್ವಂ ತತ್ಪೂಜಾ ಸರ್ವಸಿದ್ಧಿದಾ ॥೬॥

ಲಿಂಗಾದೇವ ಸಮುತ್ಪನ್ನಾಸ್ಸರ್ವೇ ದೇವಾಃ ಪಿನಾಕಿನಃ ।
ವೇದಾಶ್ಚ ಯಜ್ಞಾ ಋಷಯೋ ಗಂಧರ್ವಾಃ ಕಿನ್ನರಾ ಅಪಿ ॥೭॥

ಪೃಷ್ಟಾ ಕೂಟೇನ ಕಿಂ ತೇನ ಕೋಟಿಶಃ ಪ್ರಭವಂತ್ಯಪಿ ।
ತಸ್ಮಾದೇವ ವಿಲೀಯಂತೇ ತಸ್ಮಿನ್ನಾರಾಯಣಾದಯಃ ॥೮॥

ಹೀಗೆ ಕೇಳಿಕೊಂಡ ಯಮನಿಗೆ ಶಿವತತ್ತ್ವವನ್ನು ಉಪದೇಶಿಸುವ ಮೊದಲು ಭೃಗುಋಷಿಯು ಹೀಗೆಂದನು. ಶಿವತತ್ತ್ವವೆಂಬುದು ಅತ್ಯಂತ ರಹಸ್ಯವಾದದ್ದು. ಅದನ್ನು ಈಶ್ವರಭಕ್ತನಲ್ಲದವನಿಗೆ ಮತ್ತು ಶಿವಮಹಿಮೆಯಲ್ಲಿ ನಂಬಿಕೆಯಿಲ್ಲದವನಿಗೆ ಎಂದಿಗೂ ತಿಳಿಸಬಾರದು. ಯಾರು ಭಸ್ಮರುದ್ರಾಕ್ಷಧಾರಣಾದಿಗಳಿಂದ ಶಂಕರನನ್ನು ಸೇವಿಸುವುದರಲ್ಲಿ ನಿರತರಾಗಿರುವರೋ ಅಂತಹವರಿಗೆ ಮಾತ್ರ ಇದನ್ನು ತಿಳಿಸಬೇಕು. ||೪-೫||

ಬ್ರಹ್ಮ, ವಿಷ್ಣುವೇ ಮೊದಲಾದ ಚರಾಚರಾತ್ಮಕವಾದ ಈ ಜಗತ್ತೆಲ್ಲಾ ಶಿವಲಿಂಗದಿಂದಲೇ ಉತ್ಪನ್ನವಾಗಿರುವುದು. ಅಲ್ಲದೆ ಸಕಲ ವೇದಗಳೂ, ಯಜ್ಞಗಳೂ, ಋಷಿಗಳೂ, ಗಂಧರ್ವರೂ, ಕಿನ್ನರರೂ ಈ ಶಿವಲಿಂಗದಿಂದಲೇ ಜನ್ಯರಾದವರು. ಆದ್ದರಿಂದ ಶಿವಲಿಂಗಾರಾಧನೆಯು ಸರ್ವಸಿದ್ಧಿಪ್ರದವೆಂದೇ ತಿಳಿಯಬೇಕು. ||೬-೭||

ಉತ್ಪನ್ನವಾದ ಸಕಲ ಜಗತ್ತೂ, ಬ್ರಹ್ಮಾದಿಗಳೂ ಲಯಹೊಂದುವುದೂ ಈ ಶಿವಲಿಂಗದಲ್ಲಿಯೇ. ಅಂತಹ ಶಿವಲಿಂಗವನ್ನೇ ಈ ಗಂಧರ್ವಕಿನ್ನರರೂ, ಸಿದ್ಧಸಾಧ್ಯರೂ, ಸಕಲ ಮುನಿಗಣಗಳೂ ಸರ್ವದಾ ಪೂಜಿಸುತ್ತಿರುವರು. ಅಲ್ಲದೆ ಆ ಶಿವ

ಲಿಂಗಾರಾಧನಮೇವಕೇವಲಮುಮಾಕಾಂತಪ್ರಿಯಂ ತತ್ಸರ್ವೈಃ ।
ಗಂಧರ್ವೈರಪಿ ಕಿನ್ನರೈರಪಿ ಕೃತಂ ಸಿದ್ಧೈರ್ಮುನೀಂದ್ರೈರಪಿ ।
ತತ್ತ್ಯಾಗಾತ್ಪತಿತಾ ಭವಂತಿ ತದವಿಜ್ಞಾತಂ ನ ಹಾರ್ಯೈರ್ವಿಜ್ಞಾ
ತದ್ಭಿನ್ನೈಸ್ತದಪಾರಪುಣ್ಯನಿಧಿಭಿಸ್ತಾವತ್ಪರಂ ಲಭ್ಯತೇ ॥೯॥

ವ್ರತಂ ಶಿವಾರಾಧನಮೇವ ಯೇಷಾಂ
ತೇಷಾಂ ನ ಸಂಸಾರಭಯಾನಿ ಕಾಲ ।
ತೇನ ವ್ರತೇನೈವ ವಿಮುಕ್ತಿರಂತೇ
ಭುಕ್ತೇಷು ಭಾಗ್ಯೇಷ್ವಖಿಲೇಷುತೇಷು ॥೧೦॥

ಅನ್ಯೋಧರ್ಮೋ ನ ಸ್ಫುರತ್ಯೇವ ನೂನಂ
ವೇದೇ ಧರ್ಮಶ್ಶಾಂಕರಃ ಕೇವಲೋ ಯಃ ।
ತೇನೈವ ಸ್ಯಾನ್ಮುಕ್ತಿರಿತ್ಯೇವ ಮನ್ಯೇ
ಕೋನ್ಯೋಧರ್ಮಸ್ತಾದೃಶೋ ವೇದವೇದ್ಯಃ ॥೧೧॥

ರಹಸ್ಯಮನ್ಯತ್ಪ್ರವದಾಮಿ ಕಾಲ
ಯಃ ಕಾಲಕಾಲಾರ್ಚನತತ್ಪರೋ ನ ।

ಲಿಂಗಪೂಜಾಪರಿತ್ಯಾಗದಿಂದ ಸಕಲರೂ ಪತಿತರೆನಿಸುವರು. ಈ ಅಂಶವು ಶಿವೇತರ ದೇವತಾಭಕ್ತರಿಗೆ ತಿಳಿಯಲಾರದು. ಯಾರು ಅನೇಕ ಪುಣ್ಯಕಾರ್ಯಗಳಿಂದ ಸುಕೃತವನ್ನಾರ್ಜಿಸಿರುವರೋ, ಅವರಿಗೇ ಈಶ್ವರಲಿಂಗದಲ್ಲಿ ಸ್ಥಿರಭಕ್ತಿಯೊದಗುವುದು. ||೮-೯||

ಶಿವಾರಾಧಕರಿಗೆ ಎಂದಿಗೂ ಸಂಸಾರಭಯವಿರುವುದಿಲ್ಲ. ಅಲ್ಲದೆ ಅವರು ಶಿವಾರಾಧನೆಯಿಂದಲೇ ಮುಕ್ತಿಯನ್ನೂ, ಭುಕ್ತಿಯನ್ನೂ, ಸಕಲ ಭೋಗ್ಯವಸ್ತುಗಳನ್ನೂ ಹೊಂದುವರು. ||೧೦||

ವೇದದಲ್ಲಿ ತೋರಿಬರುವ ಸಕಲ ಧರ್ಮವಾಕ್ಯಗಳೂ ಶಿವಪಾರಮ್ಯವನ್ನೇ ವಿವರಿಸತಕ್ಕವುಗಳು. ಶಿವತತ್ತ್ವವಲ್ಲದೆ ಬೇರೊಂದು ತತ್ತ್ವವು ವೇದದಲ್ಲಿ ಇಲ್ಲವೇ ಇಲ್ಲ. ಅಂತಹ ವೇದಪ್ರತಿಪಾದ್ಯಮಾನವಾದ ಶಿವತತ್ತ್ವದಿಂದಲೇ ಭಕ್ತನಿಗೆ ಮುಕ್ತಿಯೆಂದು ನಾನು ದೃಢವಾಗಿ ಹೇಳಬಲ್ಲೆ. ||೧೧||

ಯಮಧರ್ಮನೇ, ಯಾರು ಶಿವಾರ್ಚನೆಯಲ್ಲಿ ಆಸಕ್ತಿಯನ್ನೇ ತೋರಿಸನೋ

ತಂ ಜಾರಜಂ ವಿದ್ಧಿ ವಿಶೇಷತಸ್ತ್ವಂ
ಸ ... ಯೋಕ್ತಂ ಶಪಥಶ್ಶಿವೇಪಿ ॥೧೨॥

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ ।
ಕೌತುಕಂ ಶೃಣು ವಕ್ಷ್ಯಾಮಿ ಕಾಲ ಕಾಲಾಂತಕಪ್ರಿಯಃ ॥೧೩॥

ಆರ್ಯಾವರ್ತೇ ಪುರಾ ಕಶ್ಚಿದ್ಬ್ರಾಹ್ಮಣೋ ವೇದಪಾರಗಃ ।
ಸರ್ವಶಾಸ್ತ್ರಾರ್ಥತತ್ತ್ವಜ್ಞಃ ಶಿವಧ್ಯಾನಪರಾಯಣಃ ॥೧೪॥

ಸತ್ಯಮೂರ್ತಿರಿತಿ ಖ್ಯಾತಸ್ಸತ್ಯಪ್ರವಣಮಾನಸಃ ।
ಋತಂ ಸತ್ಯಮಿತಿ ಜ್ಞಾತಂ ತೇನ ತತ್ತ್ವಂ ಶಿವಾತ್ಮಕಂ ॥೧೫॥

ತತಃ ಪರಂ ಶಿವಸ್ತೇನ ಸರ್ವಾರಾಧ್ಯ ಇತಿ ಸ್ಮೃತಃ ।
ಸರ್ವೇಪ್ಯಾರಾಧಕಾ ಏವ ಶಂಕರಸ್ಯಾಮರಾಃ ಪರಂ ॥೧೬॥

ಸುರಾರಾಧ್ಯಃ ಸ ಏವೇತಿ ಸರ್ವದಾಪ್ಯವಧಾರಿತಃ ॥೧೭॥

ಅಧ್ಯಾಪಿತಾನಿ ಶಾಸ್ತ್ರಾಣಿ ಶಾಂಕರಾಣಿ ಮನೀಷಿಣಾ ।
ತೇನೈವ ಶಿವವಿದ್ಯಾಯಾಂ ನಿಪುಣೇನ ಮಹಾತ್ಮನಾ ॥೧೮॥

ಅವನು ನಿಜವಾಗಿಯೂ ಶುದ್ಧವಂಶದವನಲ್ಲವೆಂದು (ಜಾರಜ) ನಾನು ಪ್ರಮಾಣ ಪೂರ್ವಕವಾಗಿ ಹೇಳಬಲ್ಲೆನು. ॥೧೨॥

ಈ ವಿಷಯದಲ್ಲಿ ಹಿಂದಿನ ಒಂದು ಇತಿಹಾಸವನ್ನು ಹೇಳುವೆನು ಕೇಳು. ಆರ್ಯಾವರ್ತ (ವಿಂಧ್ಯ ಮತ್ತು ಹಿಮಾಲಯಗಳ ಮಧ್ಯದೇಶ) ದಲ್ಲಿ ವೇದವೇದಾಂತ ಗಳನ್ನೂ, ಸಕಲ ಶಾಸ್ತ್ರಗಳನ್ನೂ ಅರಿತಿದ್ದ ಶಿವಪೂಜಾಪರಾಯಣನಾದ ಒಬ್ಬ ಬ್ರಾಹ್ಮಣನಿದ್ದನು. ॥೧೩-೧೪॥

ಆತನು ಸರ್ವದಾ ಸತ್ಯಪರಿಪಾಲನೆಮಾಡುತ್ತಾ, ಸತ್ಯವೇ ಲೋಕದಲ್ಲಿ ಅವಿನಾಶಿಯಾದ ಉತ್ತಮ ಶಿವತತ್ತ್ವವೆಂದು ನಂಬಿ, ತನ್ನ ಹೆಸರಿಗೆ ತಕ್ಕಂತೆ ಸತ್ಯ ಮೂರ್ತಿಯಾಗಿಯೇ ವಿರಾಜಿಸುತ್ತಿದ್ದನು. ಅಲ್ಲದೆ ಆತನು ಸಕಲ ದೇವತೆಗಳಿಗೂ ಶಿವನೇ ಆರಾಧ್ಯನು. ಸಕಲ ದೇವತೆಗಳೂ ಸರ್ವದಾ ಶಂಕರನನ್ನೇ ಸೇವಿಸುತ್ತಿರು ವರು, ಎಂದು ನಂಬಿದ್ದನು. ॥೧೫-೧೬॥

ಸಕಲ ದೇವತಾಪೂಜ್ಯನೇ ಶಿವನು ಎಂದು ದೃಢವಾಗಿ ಆತನು ನಂಬಿದ್ದನು.

ತಸ್ಯ ಪುತ್ರಾಸ್ಸಮುತ್ಪನ್ನಾಃ ಶತಂ ತೇಷ್ವೇಕಮಂತಿಮಂ ।
ಪುತ್ರಂ ವಿಹಾಯ ತೇ ಸರ್ವೇ ಪುತ್ರಾಶ್ಶಿವಪರಾಯಣಾಃ ॥೧೯॥

ಭೂತಿರುದ್ರಾಕ್ಷಪೂತಾಂಗಾಃ ಶಿವಲಿಂಗಾರ್ಚನಪ್ರಿಯಾಃ ।
ಶಿವಶಾಸ್ತ್ರಪ್ರವೀಣಾಶ್ಚ ಶಿವವ್ರತಪರಾಯಣಾಃ ॥೨೦॥

ಸರ್ವೇ ಭೂತವ್ರತಪ್ರೀತಾಸ್ತೇ ಸರ್ವೇ ಭೂತಿಭೂಷಣಾಃ ।
ಶಂಕರಾರಾಧನಂ ತೇಷಾಂ ವ್ರತಂ ನಾನ್ಯದ್ವ್ರತಂ ಯಮ ॥೨೧॥

ನಿಯಮಶ್ಶಿವಪೂಜಾಯಾಂ ತೇಷಾಮಾಜನ್ಮನಿಶ್ಚಿತಃ ।
ನಿರತಾ ಏವ ತೇ ಸರ್ವೇ ಶಿವಧರ್ಮೇ ವಿಲಕ್ಷಣೇ ॥೨೨॥

ಶಿವವ್ರತಂ ವ್ರತಂ ತೇಷಾಂ ತನ್ನಾರೀಣಾಂ ವಿಶೇಷತಃ ।
ಕಾಲಶ್ಶಿವಾರ್ಚನೇನೈವ ನೀಯತೇ ತಾಭಿರಾದರಾತ್ ॥೨೩॥

ಸ ವಿಪ್ರಸ್ತಾನ್ ಸುತಾನ್ ದೃಷ್ಟ್ವಾ ಶಿವನಾಮಾಂಕಿತಾನ್ ಮುಹುಃ ।
ಸಂತೋಷಂ ಪರಮಂ ಪ್ರಾಪ ಮುಕ್ತಿತುಲ್ಯಮನಾಮಯಂ ॥೨೪॥

ವಿದ್ವಾಂಸನಾದ ಆತನು ಅನೇಕ ಜನ ಶಿಷ್ಯರಿಗೆ ಶಿವವಿದ್ಯೆಯನ್ನು ಬೋಧಿಸುತ್ತಾ ಶಿವವಿದ್ಯಾಪಾರಂಗತನೆನಿಸಿಕೊಂಡಿದ್ದನು. ||೧೭-೧೮||

ಆತನಿಗೆ ನೂರು ಜನ ಮಕ್ಕಳು. ಅವರಲ್ಲಿ ಕಡೆಯ ಮಗನೊಬ್ಬನನ್ನು ಬಿಟ್ಟರೆ, ಸರ್ವರೂ ಶಿವಪೂಜಾಸಕ್ತರೆಂದೇ ಹೇಳಬಹುದಾಗಿದ್ದಿತು. ಏಕೆಂದರೆ ಅವರು ಸದಾ ಭಸ್ಮರುದ್ರಾಕ್ಷಗಳನ್ನು ಧರಿಸಿಕೊಂಡು ಶಿವಲಿಂಗಾರ್ಚನೆ ಮಾಡುತ್ತಾ, ಶಿವಮಹಿಮೆಗಳನ್ನು ವಿವರಿಸುವ ಗ್ರಂಥಗಳನ್ನು ಪಠಿಸುತ್ತಾ ಕಾಲಕಳೆಯುತ್ತಿದ್ದರು. ||೧೯-೨೦||

ಎಲ್ಲರೂ ಶಿವವ್ರತಮಾಡುವುದರಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸುತ್ತಾ ಭಸ್ಮಭೂಷಿತರಾಗಿ, ಸರ್ವದಾ ಶಂಕರಾರಾಧನೆಯೇ ತಮ್ಮ ಮುಖ್ಯ ಧರ್ಮವೆಂದು ಭಾವಿಸಿದ್ದರು. ತಮ್ಮ ಜನ್ಮ ಪೂರ್ತಿ ಶಿವವ್ರತಪರಾಯಣರಾಗಿರಬೇಕೆಂದೇ ಅವರು ದೃಢನಿಶ್ಚಯಮಾಡಿದ್ದರು. ||೨೧-೨೨||

ಕೇವಲ ಆ ಮಕ್ಕಳಲ್ಲದೆ ಅವರ ಪತ್ನಿಯರೂ ಸಹ ಸದಾ ಶಿವವ್ರತಾನುಷ್ಠಾನದಲ್ಲಿಯೇ ಕಾಲಕಳೆಯುತ್ತಿದ್ದರು. ಅಂತಹ ಮಕ್ಕಳನ್ನೂ, ಸೊಸೆಯರನ್ನೂ, ಶಿವನಾ

ಶಿವಲಿಂಗಾರ್ಚನೋದ್ಯುಕ್ತಾನ್ ಭೂತಿರುದ್ರಾಕ್ಷಭೂಷಣಾನ್ ।
ಪುತ್ರಾನಾಲೋಕ್ಯ ಸಂತುಷ್ಟೋ ನರ್ತನಂ ಸ ಕರೋತ್ಯಪಿ ॥೨೫॥

ಮತ್ತುಲ್ಯೋ ಭುವಿ ಕೋ ವಾಸ್ಯಾತ್ಕುಮಾರಾಃ ಶಾಂಕರಾಃ ಪರಂ ।
ತದ್ದಾರಾ ಅಪಿ ತೇ ನಿತ್ಯಂ ಶಿವಧ್ಯಾನಪರಾಯಣಾಃ ॥೨೬॥

ಸ ಕದಾಚಿತ್ಸಮಾಹೂಯ ಪುತ್ರಾನಾಲಿಂಗ್ಯ ಸಾದರಂ ।
ಪ್ರಾಹ ಸಂತುಷ್ಟಹೃದಯಃ ಸಂತೋಷಂ ಜನಯನ್ ಪರಂ ॥೨೭॥

ಮತ್ಪ್ರಾರ್ಥಿತಂ ಚಿಂತಿತಮೇವ ನೂನಂ
ಮಹೇಶ್ವರಾರಾಧನಮೇವ ಧರ್ಮಃ ।
ಧರ್ಮಾಂತರತ್ಯಾಗಮತಿರ್ಮಯಾಭೂ ।
ದತೋಽಸ್ತಿ ಧನ್ಯೋ ಭುವನತ್ರಯೇಽಪಿ ॥೨೮॥

ಮಗಳಿಂದಲೇ ಕರೆಯಲ್ಪಡುವ ಅವರಮಕ್ಕಳನ್ನೂ ನೋಡಿ ಈ ಬ್ರಾಹ್ಮಣನು ಮುಕ್ತಿಗೆ ಸದೃಶವಾದ ಆನಂದವನ್ನು ಅನುಭವಿಸುತ್ತಾ ಕಾಲಕಳೆಯುತ್ತಿದ್ದನು. ॥೨೩-೨೪॥

ಒಂದೊಂದು ವೇಳೆ ತನ್ನ ಪುತ್ರರು, ಪತ್ನಿಯರೊಡನೆ ಶಿವಲಿಂಗಾರ್ಚನೆಗೆ ತೊಡಗಿ, ಭೂತಿರುದ್ರಾಕ್ಷಧಾರಿಗಳಾಗಿ ಶಿವವ್ರತಪರಾಯಣರಾಗಿರುವವರನ್ನು ನೋಡಿ, ಆ ಬ್ರಾಹ್ಮಣನು ನಾನೇ ಧನ್ಯನು, ಲೋಕೋತ್ತರವಾದ ಪುತ್ರಸಂಪತ್ತನ್ನು ಪಡೆದು ನಾನು ಕೃತಕೃತ್ಯನಾದೆನು. ಎಂದು ಹೇಳಿಕೊಳ್ಳುತ್ತಿದ್ದನು. ॥೨೫-೨೬॥

ಒಂದು ಸಾರಿ ಸತ್ಯಮೂರ್ತಿಯು ಆ ಮಕ್ಕಳನ್ನು ಕರೆದು ಪ್ರೀತಿಯಿಂದಾ ಲಿಂಗಿಸಿಕೊಂಡು, ಸಂತುಷ್ಟಾಂತರಂಗನಾಗಿ, ಹೀಗೆ ಹೇಳಿದನು. ॥೨೭॥

ಎಲೈ ಪುತ್ರರೇ, ನಾನು ಇಲ್ಲಿನವರೆಗೂ ಶಿವಾರಾಧನೆಯನ್ನೇ ಉತ್ತಮವಾದ ಧರ್ಮವೆಂದು ಊಹಿಸಿದ್ದೆನು. ಅದರಂತೆಯೇ ನನಗೆ ಈ ಧರ್ಮವನ್ನು ಬಿಟ್ಟು ಧರ್ಮಾಂತರವನ್ನು ಅವಲಂಬಿಸುವ ಬುದ್ಧಿಯು ಉಂಟಾಗದಿದ್ದುದಕ್ಕಾಗಿ ನಾನು ನಿಜವಾಗಿಯೂ ಧನ್ಯನೆನಿಸಿರುವೆನು. ಲೋಕತ್ರಯದಲ್ಲಿ ಮತ್ತಾರೂ ನನಗೆ ಸರಿಸಮರಿಲ್ಲ. ॥೨೮॥

ಧರ್ಮೋ ಮಮಾಯಂ ಪರಿಪಾಲನೀಯೋ
ಭವದ್ಭಿರತ್ರಾದರಪೂರ್ವಕಂ ಮೇ
ಶ್ರೋತವ್ಯಮೇತದ್ವಚನಂ ಮಮಾನ್ಯಂ
ನ ಪ್ರಾರ್ಥನೀಯಂ ಭುವನತ್ರಯೇಽಪಿ ॥೨೯॥

ಶಿವಾರ್ಚನೇನೈವ ಸದಾ ವಿನೇಯಃ
ಕಾಲಃ ಸದಾ ತೇನ ಸಕಾಲಕಾಲಃ ।
ತುಷ್ಟೋ ಭವತ್ಯೇವ ಸ ಮುಕ್ತಿದಾತಾ
ಭೋಗಪ್ರದಾತಾಪಿ ಸ ಏವ ಪುತ್ರಾಃ ॥೩೦॥

ನಾನ್ಯಶ್ಶರಣ್ಯೋ ಜಗತಾಂ ಕುಮಾರಾಃ
ಶಿವಶ್ಶರಣ್ಯೇಷು ವರೇಣ್ಯ ಏವ ।
ಕೇಮುಂ ವಿಹಾಯಾನ್ಯಮುಪಾಶ್ರಯಂತಿ
ತಾನ್ನೈವಜಾನೇ ಜಗತೀತಲೇಽಸ್ಮಿನ್ ॥೩೧॥

ನೀವೆಲ್ಲರೂ ನಾನು ನಂಬಿರುವ ಈ ಧರ್ಮವನ್ನೇ ರಕ್ಷಿಸಿಕೊಂಡು ಬರಬೇಕು. ನನ್ನ ಈ ಉಪದೇಶವನ್ನು ಆದರಪೂರ್ವಕವಾಗಿ ನೀವು ನಡೆಸಿಕೊಡಬೇಕು. ನೀವು ತ್ರಿಲೋಕಗಳಲ್ಲಿ ಈಶ್ವರನೊಬ್ಬನನ್ನು ಬಿಟ್ಟು ಮತ್ತಾವ ದೇವತೆಗಳಲ್ಲಿಯೂ ಏನನ್ನೂ ಪ್ರಾರ್ಥಿಸಬಾರದು. ॥೨೯॥

ಎಲೈ ಪುತ್ರರೇ, ನೀವು ನಿಮ್ಮ ಕಾಲವನ್ನು ಸರ್ವದಾ ಶಿವಾರ್ಚನೆಯಿಂದಲೇ ಕಳೆಯಿರಿ. ಆದರಿಂದ ತೃಪ್ತನಾದ ಪರಶಿವನು ನಿಮಗೆ ಐಹಿಕವಾದ ಸಕಲ ಭೋಗಗಳನ್ನೂ ಕೊಡುವನಲ್ಲದೆ ಸ್ಥಿರಮುಕ್ತಿಯನ್ನೂ ಅನುಗ್ರಹಿಸುವನು. ॥೩೦॥

ಎಲೈ ಪುತ್ರರಿರಾ, ಲೋಕರಕ್ಷಕನೆಂದರೆ ಶಂಕರನೊಬ್ಬನೇ. ಭಕ್ತರನ್ನು ಉದ್ಧರಿಸುವವರಲ್ಲಿ ಶ್ರೇಷ್ಠನೆನಿಸಿದವನು ಶಂಕರನೇ. ಇಂತಹ ಶಂಕರನನ್ನು ಬಿಟ್ಟು ಯಾರು ತಾನೆ ಮತ್ತೊಬ್ಬ ದೇವತೆಯನ್ನು ಪೂಜಿಸುವರು. ಆದ್ದರಿಂದ ನೀವು ಶಂಕರನನ್ನು ಬಿಟ್ಟು ಮತ್ತಾವ ದೇವರನ್ನೂ ಆಶ್ರಯಿಸಬೇಡಿ. ॥೩೧॥

ಶಿವಾರ್ಥಮೇವ ಪ್ರಯತಾ ಭವಂತಿ
ಶಿವಾರ್ಚನೇನೈವ ತದಾಪ್ತಿರಿಷ್ಟಾ ।
ಶಿವಪ್ರದಾತಾ ನ ಶಿವೇತರಸ್ಸ್ಯಾ
ದತಃ ಶಿವಾರಾಧನಮೇವ ಕಾರ್ಯಂ ॥೩೨॥

ಕೋ ವಾ ಶಿವಾರಾಧಕಕೇನ ತುಲ್ಯೋ
ವೇದೇಷ್ವಶೇಷೇಷ್ವಪಿ ಧರ್ಮವರ್ಯಃ ।
ಸ ಏವ ತೇನೈವ ಭವಂತ್ಯಭೀಷ್ಟಾ
ಸ್ತಸ್ಮಾತ್ತಮೇವೋತ್ತಮಮಾಮನಂತಿ ॥೩೩॥

ಕೋ ವಾ ನ ಸ್ಯಾಚ್ಛಾಂಭವೋ ಭೂರಿಪುಣ್ಯೈ
ಸ್ತೇಷಾಂ ತಾವತ್ತತ್ಫಲಂ ಶಾಂಭವತ್ವಂ ।
ತಚ್ಚೇನ್ನಸ್ಯಾತ್ತೇಷು ಪುಣ್ಯೇಷು ತಾವ
ತ್ಪುಣ್ಯತ್ವಂ ವಾ ದುರ್ಲಭಂ ಸರ್ವಥಾಪಿ ॥೩೪॥

ಪ್ರಪಂಚದಲ್ಲಿ ಪ್ರತಿಯೊಬ್ಬರೂ ಸುಖಪ್ರಾಪ್ತಿಗಾಗಿಯೇ ಪ್ರಯತ್ನಿಸುವರು. ಅಂತಹವರು ಈಶ್ವರನನ್ನೇ ನಂಬಬೇಕು. ಏಕೆಂದರೆ ಶಿವ (ಮಂಗಳ) ಪ್ರದನು ಶಿವನಲ್ಲದೆ ಮತ್ತಾರಿರುವರು ? ಆದ್ದರಿಂದ ಶಿವ (ಇಷ್ಟಾರ್ಥ) ಕಾಮಿಗಳು ಶಿವನನ್ನಲ್ಲದೆ ಮತ್ತಾರನ್ನೂ ಆರಾಧಿಸಬಾರದು. ॥೩೨॥

ಅಲ್ಲದೆ ಈಶ್ವರನನ್ನು ಪೂಜಿಸುವವನೇ ಶ್ರೇಷ್ಠನಾದವನು. ಆತನೇ ಧರ್ಮ ಸ್ವರೂಪಿಯು. ಇದೇ ಅಭಿಪ್ರಾಯವನ್ನೇ ವೇದಗಳು ಸಾರುತ್ತಲಿವೆ. ಅವನು ಸದಾ ಭಕ್ತರ ಇಷ್ಟಾರ್ಥಗಳನ್ನೆಲ್ಲಾ ಪೂರ್ತಿಗೊಳಿಸುವ ಸಾಮರ್ಥ್ಯವುಳ್ಳವನು. ಆದುದರಿಂದಲೇ ಮಹಾದೇವನನ್ನು ಸರ್ವಶ್ರೇಷ್ಠನೆಂದು ಸರ್ವರೂ ಭಾವಿಸುವರು. ॥೩೩॥

ಅನೇಕ ಸುಕೃತಗಳನ್ನು ಆರ್ಜಿಸಿದವನು ಯಾರಾದರೂ ಈಶ್ವರ ಸೇವಕನಾಗಬಹುದು. ಅವನಿಗೆ ದೊರಕುವ ಅತಿಶಯ ಫಲವೆಂದರೆ ಶಾಂಭವತ್ವವೇ. ಅಂದರೆ ಅವನು ಸಾಕ್ಷಾಚ್ಛಿವಸ್ವರೂಪಿಯಾಗುವನು. ಒಂದುವೇಳೆ ಅಂತಹ ಸುಕೃತಗಳಿಗೆ ಆ ಫಲವು ದೊರಕದಿದ್ದರೆ ಆ ಪುಣ್ಯದ ಫಲವು ಅವನಿಗೆ ಲಭಿಸಲಿಲ್ಲವೆಂದೇ ಭಾವಿಸಬೇಕು. ॥೩೪॥

ತ್ಯಕ್ತ್ವಾ ಜಾರಜಮೇಕಮೇವ ಕುಮತಿಂ ಸರ್ವೇ ಪರಂ ಶಾಂಕರಾ
ಸ್ತತ್ತ್ವಜ್ಞಾಶ್ಚ ಸುರಾರ್ಚಕಾಶ್ಚ ಸುತರಾಂ ಲಿಂಗಾರ್ಚನಾತ್ಯುತ್ಸುಕಾಃ ।
ಏತತ್ಪುಣ್ಯಸಮಂ ನ ಪುಣ್ಯಮಿತಿ ಮೇ ಪುಣ್ಯೇನ ಪುಣ್ಯಾತ್ಮನಾ
ಜಾತಾ ಬುದ್ಧಿರತಃ ಪರಂ ಶಿವಪರೈಃ ಸ್ಥೇಯಂ ಗೃಹೇ ಸಾದರಂ ॥೩೫॥

ಶರೀರಮೇತತ್ಖಲು ಜಾತಮೇವ
ಜೀರ್ಣಂ ನ ತೂರ್ಣಂ ಗಿರಿಜಾಸಹಾಯಃ ।
ಅನುಗ್ರಹಂ ಮೇ ನ ಕರೋತಿ ಶಕ್ತಿಃ
ಶಿವಾರ್ಚನಾದಿಷ್ವಧುನಾತಿದೂರಂ ॥೩೬॥

ಅತಃ ಪರಂ ಯನ್ಮದನಾಂತಕಸ್ಯ
ಪುರಂ ಪುರಾಣಾಂ ಪ್ರವರಂ ತದೇವ ।
ಸಂಸೇವನೀಯಂ ಸುರವಾಹಿನೀ ಸಾ
ಯತ್ರೋತ್ತರಂ ಸಾ ಪ್ರವಹತ್ಯಪಾರಾ ॥೩೭॥

ಪುತ್ರರೇ, ನೀವೆಲ್ಲರೂ ತತ್ತ್ವಜ್ಞಾನಿಗಳಾಗಿರುವಿರಿ. ಸದಾಶಿವಲಿಂಗಾರ್ಚಕರೆನಿಸಿ, ಪುಣ್ಯ ಶರೀರಿಗಳೆನಿಸಿರುವಿರಿ. ಆದರೆ ಜಾರಜನಾದ ಒಬ್ಬ ಮಗನು ಮಾತ್ರ ದುರ್ಮಾರ್ಗಗಾಮಿಯಾಗಿರುವನು. ಶಿವಪೂಜೆಗಿಂತ ಪುಣ್ಯಕರವಾದ ಕಾರ್ಯವು ಲೋಕದಲ್ಲಿ ಮತ್ತೊಂದಿಲ್ಲ; ಹೀಗೆಂಬುದೇ ನನ್ನ ಮುಖ್ಯಾಶಯ. ಆದರಿಂದಲೇ ಶಿವಪೂಜಾಸಕ್ತರಾದವರು ಸರ್ವದಾ ಮನೆಯಲ್ಲಿರಬೇಕು. ॥೩೫॥

ನನ್ನ ಈ ಶರೀರವು ಜೀರ್ಣವಾಗುತ್ತಲಿದೆ. ಅಷ್ಟಾದರೂ ನನ್ನ ಮೇಲೆ ಶಿವಾನುಗ್ರಹವು ಒದಗಲಿಲ್ಲ. ಅದೂ ಅಲ್ಲದೆ ಶಿವಾರ್ಚನೆಮಾಡಲು ನನ್ನ ಶಕ್ತಿಯು ಕುಂಠಿತವಾಗುತ್ತಲಿರುವುದು. ಅದಕ್ಕಾಗಿಯೇ ಶಕ್ತಿಯಿದ್ದಾಗ ಶಿವಾರ್ಚನೆ ಮಾಡಬೇಕು. ॥೩೬॥

ಮನ್ಮಥನಾಶಕನಾದ ಪರಶಿವನ ನಗರವೆನಿಸಿದ ಕಾಶೀಪಟ್ಟಣವು ಬಹು ಪವಿತ್ರವಾದುದು. ಅಲ್ಲಿಯೇ ದೇವಗಂಗಾನದಿಯು ಉತ್ತರಾಭಿಮುಖವಾಗಿ ಹರಿಯುತ್ತಲಿರುವುದು. ಇಂತಹ ಪವಿತ್ರಕ್ಷೇತ್ರವನ್ನು ಸರ್ವದಾ ಸೇವಿಸಬೇಕು. ॥೩೭॥

ತತ್ರೈವ ನಿತ್ಯಂ ಮಣಿಕರ್ಣಿಕಾಯಾಂ
ಸ್ನಾತ್ವಾ ನವ್ಯೈರ್ಬಿಲ್ವದಳೈರ್ಜಲೈರ್ವಾ ।
ವಿಶ್ವೇಶ್ವರಾಭ್ಯರ್ಚನಮುದ್ಯ ಕಾರ್ಯಂ
ಕಾರ್ಯಾಂತರಂ ನಾಸ್ಯ ವಿಶೇಷತಸ್ತು ॥೩೮॥

ಶಿವಪ್ರಸಾದೇನ ಕುಮಾರರೂಪಂ
ಭಾಗ್ಯಂ ತದನ್ಯಚ್ಚ ವಿಶೇಷತಸ್ತು ।
ಪ್ರಾಪ್ತಂ ಕಿಮನ್ಯಂ ಮಮ ಸಾಧ್ಯಮೇಕಂ
ಕಾಶೀಪುರೀನಾಥಮುಪಾಶ್ರಯಾಮಿ ॥೩೯॥

ತಾಮನ್ನಪೂರ್ಣಾಂ ಶರಣಾಗತಾರ್ತಿ
ಗ್ರ್ರಹಾಣದಕ್ಷಾಂ ಶರಣಂ ವ್ರಜಾಮಿ ।
ತಂ ಧುಂಡಿರಾಜಂ ಶರಣಂ ವ್ರಜಾಮಿ
ತಂ ಚಾವಿಮುಕ್ತಂ ಶರಣಂ ವ್ರಜಾಮಿ ॥೪೦॥

ಅಲ್ಲದೆ ಮಣಿಕರ್ಣಿಕಾಕ್ಷೇತ್ರವೆನಿಸಿದ ಕಾಶೀನಗರ ಭಾಗದಲ್ಲಿಯೇ ಸದಾ ವಾಸಿಸುತ್ತಾ, ನಿತ್ಯವೂ ಗಂಗಾಸ್ನಾನದಿಂದ ಶುದ್ಧನಾಗಿ, ಬಿಲ್ವದಳಗಳಿಂದಲೂ, ಶುದ್ಧೋದಕದಿಂದಲೂ, ವಿಶ್ವೇಶ್ವರನನ್ನು ಅರ್ಚಿಸುತ್ತಾ ಕಾಲಕಳೆಯಬೇಕು. ನನಗಾದರೋ ಅದನ್ನು ಬಿಟ್ಟು ಬೇರೆ ಕೆಲಸವೇ ಕಾಣುವುದಿಲ್ಲ. ||೩೮||

ನನಗಾದರೊ ಶಿವಾನುಗ್ರಹದಿಂದ ಪುತ್ರಸಂಪತ್ತು ಅತಿಶಯವಾದ ರೀತಿಯ ಲ್ಲಿಯೇ ಲಭಿಸಿದಂತಾಗಿದೆ. ಇದಕ್ಕಿಂತ ಶ್ರೇಷ್ಠವಾದ ಭಾಗ್ಯವು ನಮಗೆ ಮತ್ತೇನಿರು ವುದು ? ಈಗ ನಾನು ಅಪೇಕ್ಷಿಸುವುದು ಕಾಶೀನಗರ ವಾಸಿಯಾದ ಪರಶಿವನ ಆರಾಧನೆಯೊಂದನ್ನೇ. ||೩೯||

ಅದೇ ಕಾಶೀನಗರದಲ್ಲಿ ಭಕ್ತರ ಸಂತಾಪಗಳನ್ನು ಹೋಗಲಾಡಿಸುವುದ ರಲ್ಲಿ ಸಮರ್ಥಳಾದ ಅನ್ನಪೂರ್ಣಾದೇವಿಯನ್ನೂ, ಮಹಾಗಣಪತಿಯೆನಿಸಿದ ಧುಂಡಿ ರಾಜನನ್ನೂ, ಅವಿಮುಕ್ತಕ್ಷೇತ್ರವೆನಿಸಿದ ಕಾಶೀನಗರ ಭಾಗವನ್ನೂ ದರ್ಶನಮಾಡಿ, ಅವರನ್ನೇ ಮೊರೆಹೊಕ್ಕು ಧನ್ಯನೆನಿಸುವೆನು. ||೪೦||

ವೀರೇಶ್ವರಂ ತಂ ಶರಣಂ ವ್ರಜಾಮಿ
ಬಿಲ್ವೀದಳೈಸ್ಸಾದರಮರ್ಚಯಾಮಿ ।
ನೃತ್ಯಂ ಕರೋಮಿ ಪ್ರಣತಶ್ಶಿವಾಗ್ರೇ
ಸ್ಮರಾಧುನಾ ಮಾಂ ಸ್ಮರ ಶಂಕರೇತಿ ॥೪೧॥

ಭಜಾಮಿ ವಿಕಟಾಗೌರೀಚರಣಾಂಬುರುಹಂ ಮುದಾ ।
ಭಜಾಮಿ ಸಂಕಟಾಗೌರೀಂ ವಂದೇ ಸಿದ್ಧೇಶ್ವರೀಮಪಿ ॥೪೨॥

ಶ್ರೀಕಾಲಭೈರವಂ ವಂದೇ ಸರ್ವಾಭೀಷ್ಟದಮಾದರಾತ್ ।
ವಂದೇ ಮುಹುರ್ಮುಹುರ್ವಂದೇ ವಕ್ರತುಂಡವಿನಾಯಕಂ ॥೪೩॥

ಕೃತ್ತಿವಾಸೇಶ್ವರಾದೀನಿ ಯಾನಿ ಲಿಂಗಾನಿ ಕೋಟಿಶಃ ।
ಕಾಶ್ಯಾಂ ತಾನಿ ಪ್ರಪಶ್ಯಾಮಿ ಕೃತ್ಯಮನ್ಯಂ ನ ಮೇ ಸುತಾಃ ॥೪೪॥

ಯಾ ರಮ್ಯಾ ಗಿರಿರಾಜರಾಜತನಯಾ ಕಾಂತಪ್ರಿಯಾ ಸಾ ಪುರೀ ।
ಕಾಶೀತಿ ಪ್ರಥಿತಾ ತಥೈವ ಕಥಿತಾ ವೇದೈರಪಾರೈರಪಿ ।

ಅಲ್ಲಿಯೇ ವಿರಾಜಿಸುವ ವೀರೇಶ್ವರಲಿಂಗವನ್ನು ಭಕ್ತಿಯಿಂದ ಬಿಲ್ವದಳಾದಿಗಳಿಂದ ಅರ್ಚಿಸಿ, ಮೊರೆಹೊಗುವೆನು. ಮತ್ತು ಶಿವಲಿಂಗದ ಮುಂದೆ ಪೂಜಾಂತ್ಯದಲ್ಲಿ ನಾಟ್ಯವಾಡುತ್ತಾ ಶಂಕರನೇ ನನ್ನನ್ನು ರಕ್ಷಿಸು. ನನ್ನನ್ನು ಅನುಗ್ರಹಿಸು ಎಂದು ಕೇಳಿಕೊಳ್ಳುವೆನು. ||೪೧-೪೨||

ಭಕ್ತರ ವಿಘ್ನಗಳನ್ನೂ, ಸಂಕಟಗಳನ್ನೂ ಪರಿಹರಿಸುವ, ಸಿದ್ಧೇಶ್ವರಿಯೆನಿಸಿದ ಗೌರಿಯ ಚರಣಕಮಲಗಳಿಗೆ ನಮಸ್ಕರಿಸುವೆನು. ಸರ್ವಾಭೀಷ್ಟಪ್ರದನಾದ ಕಾಲಭೈರವನಿಗೂ, ವಿಘ್ನನಿವಾರಕನಾದ ಗಜಮುಖನಿಗೂ ಪದೇಪದೇ ವಂದಿಸುವೆನು. ||೪೩||

ಕಾಶೀನಗರದಲ್ಲಿ ವಿರಾಜಿಸುವ ಕೃತ್ತಿವಾಸೇಶ್ವರನೇ ಮೊದಲಾದ ಕೋಟಿ ಸಂಖ್ಯೆಯ ಶಿವಲಿಂಗಗಳನ್ನೂ ದರ್ಶನಮಾಡಿ, ಅವೆಲ್ಲವುಗಳಿಗೂ ವಂದಿಸಿ ಮುಕ್ತನಾಗುವೆನು. ಮಕ್ಕಳಿರಾ, ಇದಕ್ಕಿಂತ ಬೇರೆ ಯಾವ ಕೆಲಸವೂ ನನಗೆ ಕಾಣುವುದಿಲ್ಲ. ||೪೪||

ಪಾರ್ವತೀಪತಿಯಾದ ಶಂಕರನಿಗೆ ಪ್ರಿಯವಾದ ನಗರವೆಂದರೆ ಭೂಲೋಕದಲ್ಲಿ ಕಾಶೀನಗರವೇ ಎಂದು ಸಕಲ ವೇದಗಳೂ ಉದ್ಘೋಷಿಸುತ್ತಿವೆ. ಮತ್ತು

ಶ್ರೋತವ್ಯಾ ಪುನರಾದರೇಣ ಬಹುಧಾ ಸಂಸೇವನೀಯಾ ಮಯಾ ।
ನೇಯಂ ಸ್ಯಾದವಿಶಿಷ್ಟಮಸ್ಯ ಚ ವಯಃ ಕಾಯವ್ಯಯಾಯಾಸ್ತು ಸಾ॥೪೫॥

ಕಃ ಕಾಶೀನಗರೀವಿಲೋಕನರತೋ ನ ಸ್ಯಾತ್ತಪಸ್ಯಾಫಲಂ ।
ಕಾಶೀವಾಸಮಿತಿ ಬ್ರುವಂತಿ ಮುನಯೋ ವೇದಾಶ್ಚ ಸಿದ್ಧಾ ಅಪಿ ।
ಸಂವಾಸಂ ಪ್ರವದಂತಿ ವಾಸವಮುಖಾ ಪ್ರಾಪ್ಯಂ ತಮೀಡೇ ಪರಂ
ಕರ್ತವ್ಯಂ ಚ ನ ಮುಹ್ಯತೇ ಖಲು ಮಯಾ ಸಂಸಾರನಿಚ್ಛೇದಕಂ ॥೪೬॥

ಜಾತಶ್ಶಂಕರಪೂಜನೇನ ಬಹುಧಾ ಸಂಸಾರದುಃಖಕ್ಷಯಃ
ಕಾಲಾನ್ಮೇ ನ ಭಯಂ ಶಿವಾರ್ಚನರತಃ ಕಿಂ ಕಾಲಭೀತೋ ಭವೇತ್ ।
ಯದ್ಯಪ್ಯೇವಮಥಾಪಿ ಮೇ ಶಿವಪುರೀ ಮಲ್ಲೋಚನಾಗೋಚರಾ
ಜಾತಾ ವಾ ಕಥಮಪ್ಯಪಾರವಿವಿಧಕ್ಲೇಶಾಶ್ರಿತಂ ಮಾನಸಂ ॥೪೭॥

ನಾನೂ ಹಾಗೆಯೇ ತಿಳಿದಿದ್ದೇನೆ. ಆದ್ದರಿಂದ ಅಂತಹ ನಗರದಲ್ಲಿಯೇ ನಾನು ಇನ್ನು ಉಳಿದಿರುವ ಆಯುಸ್ಸನ್ನು ಕಳೆಯಬೇಕೆಂದು ಸಂಕಲ್ಪಮಾಡಿರುವೆನು. ಮತ್ತು ನನ್ನ ಈ ದೇಹತ್ಯಾಗವು ಕಾಶಿಯಲ್ಲಿಯೇ ನಡೆಯಲಿ ಎಂದು ಪ್ರಾರ್ಥಿಸುವೆನು. ||೪೫||

ಸಕಲ ತಪಸ್ಸಿಗೂ ಮುಖ್ಯ ಫಲವೆಂದರೆ ಕಾಶೀನಗರ ದರ್ಶನ ಮತ್ತು ಕಾಶೀ ವಾಸವೆಂದೇ ಸಕಲ ಮುನಿಗಳೂ ತಿಳಿದಿರುವರು; ಮತ್ತು ವೇದಗಳೂ ಹಾಗೆಯೇ ಸಾರುತ್ತಿರುವುವು. ಅಲ್ಲದೆ ಇಂದ್ರಾದಿದೇವತೆಗಳೂ ಸಹ ಇಷ್ಟಾರ್ಥಪ್ರದವಾದ ಕಾಶೀ ನಗರದ ವಾಸವೇ ಉತ್ತಮವಾದುದೆಂದು ಸಾರುತ್ತಿರುವರು. ಹೀಗಿರುವಾಗ ಸಂಸಾರ ದುಃಖನಿವಾರಕವಾದ ಇಂತಹ ಕಾರ್ಯವನ್ನು ನಾನು ಮಾಡದಿರುವುದು ನ್ಯಾಯವಲ್ಲ. ||೪೬||

ಇಲ್ಲಿನ ವರೆಗೆ ಮಾಡಿದ ಶಿವಾರ್ಚನೆಯ ಫಲವಾಗಿ ನನಗೆ ಅನೇಕ ಸಾಂಸಾರಿಕ ಕ್ಲೇಶಗಳು ನಾಶವಾಗಿವೆ. ಕಾಲಕಾಲನಾದ ಶಂಕರನ ಅರ್ಚನೆಯಿಂದ ನಾನು ಯಮನಿಗೂ ಈಗ ಹೆದರುವಂತಿಲ್ಲ. ಶಿವಪೂಜಕನಾದವನು ಎಂದೂ ಯಮನಿಗೆ ಭಯಪಡುವುದಿಲ್ಲ. ಆದರೂ, ಮುಂದೆ ಬರುವ ಕ್ಲೇಶಾದಿಗಳಿಂದ ಹೆದರುವ ನನ್ನ ಮನಸ್ಸು ಈಗ ಶಿವಾವಾಸಸ್ಥಾನವಾದ ಕಾಶೀನಗರದ ದರ್ಶನದಲ್ಲಿ ಹಾತೊರೆಯುತ್ತಿರುವುದು." ||೪೭||

ಇತ್ಯುಕ್ತಂ ತದ್ವಚಶ್ಶ್ರುತ್ವಾ ಕುಮಾರಾಸ್ತಾತಮಾದರಾತ್ ।
ಪ್ರಣಮ್ಯ ದಂಡವದ್ಭೂಮಾವೂಚುರಾನಂದಕಂಧರಾಃ ॥೪೮॥

ಅಸ್ಮಾಕಂ ಕಿಮಿಹಾಸ್ತಿ ಕೃತ್ಯಮಧುನಾ ಕಾಶೀಪುರೀನಾಯಕಾ ।
ಲೋಕಾಲೋಕನಲೋಲಮಾನಸಯುತೈರ್ನೇತ್ರೈಃ ಪವಿತ್ರೈಃ ಪರಂ ।
ದ್ರಷ್ಟವ್ಯಾ ಖಲು ಕಾಶಿಕಾಪಿ ಕಮಲೈರ್ಬಿಲ್ವೀದಳೈಃ ಕೋಮಲೈಃ
ಕಾಶೀನಾಯಕಪೂಜನಂ ಪ್ರತಿದಿನಂ ಕರ್ತವ್ಯಮತ್ಯಾದರಾತ್ ॥೪೯॥

ಇತ್ಯುಕ್ತಾಃ ಪ್ರಸ್ಥಿತಾಸ್ಸರ್ವೇ ಪುತ್ರಾಃ ಕಾಶೀಪುರೀಂ ಪ್ರತಿ ।
ಪಿತ್ರಾ ಮಾತ್ರಾಪಿ ಸಂಯುಕ್ತಾಸ್ತೇ ಯುಕ್ತಾಃ ಪುಣ್ಯಕೋಟಿಭಿಃ ॥೫೦॥

ತದಾನೀಂ ಯಃ ಕನಿಷ್ಠೋಭೂತ್ತತ್ಪುತ್ರಃ ಸ ತು ದುರ್ಜನಃ ।
ನ ಗಂತುಮುದ್ಯತಃ ಸಾಕಂ ತೈಸ್ಸಹಾತೀವ ದುಷ್ಟಧೀಃ ॥೫೧॥

ಎಂದು ಹೇಳಿದ ತಂದೆಯ ಮಾತುಗಳನ್ನು ಆ ಮಕ್ಕಳು ಕೇಳಿ ಸಂತೋಷ ಪಟ್ಟು, ತಂದೆಗೆ ಸಾಷ್ಟಾಂಗ ನಮಸ್ಕಾರಮಾಡಿ, ಆನಂದದಿಂದ ಹೀಗೆಂದರು. ||೪೮||

"ತಂದೆಯೇ, ನಮಗಾದರೋ ಇಲ್ಲಿ ಕೆಲಸವೇನಿರುವುದು? ನಾವೂ ಸಹ ನಿನ್ನೊಡನೆಯೇ ಕಾಶೀನಗರಕ್ಕೆ ಬಂದು, ಅಲ್ಲಿರುವ ವಿಶ್ವೇಶ್ವರಸ್ವಾಮಿಯ ರಮ್ಯವಾದ ಮೂರ್ತಿಯನ್ನು ದರ್ಶನಮಾಡಿ ನಮ್ಮ ಕಣ್ಣುಗಳ ಸಾರ್ಥಕತೆಯನ್ನು ಪಡೆಯು ವೆವು. ಸುಂದರವಾದ ಮತ್ತು ಪವಿತ್ರವಾದ ಕಾಶೀನಗರದರ್ಶನದಿಂದ ತೃಪ್ತರಾಗು ವೆವು. ಕೋಮಲವಾದ ಮತ್ತು ಮನೋಹರವಾದ ಬಿಲ್ವಪತ್ರೆಗಳಿಂದ ಪ್ರತಿದಿನವೂ ಕಾಶೀನಗರಾಧಿಪತಿಯಾದ ಶಂಕರನನ್ನು ಸೇವಿಸಿ ಧನ್ಯರಾಗುವೆವು. ಅಂತಹ ಸುಯೋಗವು ನಮಗೂ ಲಭಿಸಲಿ." ||೪೯||

ಹೀಗೆಂದು ಆ ಪುತ್ರರೆಲ್ಲರೂ ಹೇಳಿ ತಂದೆಯೊಡನೆಯೂ ತಾಯಿಯೊಡನೆಯೂ ತಾವು ಕಾಶೀನಗರಕ್ಕೆ ಪ್ರಯಾಣ ಬೆಳೆಸಲು ಸಿದ್ಧರಾದರು. ಇಷ್ಟು ವಿವೇಕವುಂಟಾ ಗಲು ಅವರು ಜನ್ಮಾಂತರಗಳಲ್ಲಿ ಸಂಪಾದಿಸಿದ ಪುಣ್ಯರಾಶಿಯೇ ಕಾರಣವಲ್ಲವೇ !||೫೦||

ಅಂತೂ ಒಟ್ಟಿನಲ್ಲಿ ಎಲ್ಲ ಮಕ್ಕಳೂ ಕಾಶೀಪ್ರಯಾಣಕ್ಕೆ ಸಿದ್ಧರಾದರು. ಆದರೆ ಅವರಲ್ಲಿ ಅತ್ಯಂತ ಕಿರಿಯವನಾದವನು ಮಾತ್ರ ದುರ್ಬುದ್ಧಿಯಿಂದ ಕೂಡಿ

ನ ಶಿವಾರಾಧನಾಸಕ್ತಃ ಸ ಶಕ್ತೋಽಪ್ಯತಿದುಷ್ಟಧೀಃ ।
ತಂ ವಿಲೋಕ್ಯ ಪಿತಾ ಪ್ರಾಹ ದೂರಾದಾಹೂಯ ದುಃಖಿತಃ ॥೫೨॥

ರೇ ರೇ ಬಾಲಕ ದುಷ್ಟಾತ್ಮನ್ ಕಾ ಗತಿರ್ಭಾವಿನೀ ತವ ।
ಸರ್ವಥಾ ವಿಮುಖಸ್ತ್ವಂ ತು ಭವಾನೀರಮಣಾರ್ಚನೇ ॥೫೩॥

ಯಃ ಶಾಂಗಲಿಂಗಾರ್ಚನತತ್ಪರಸ್ಸ್ಯಾತ್
ಸ ಏವ ಧನ್ಯೋಽಪಿ ಸ ಏವ ಮಾನ್ಯಃ ।
ಮನ್ಯೇ ತದನ್ಯಂ ಖಲಜಾರಜಂ ವಾ
ಶ್ವಪಾಕಜಂ ವಾ ಶಪಥಃ ಶಿವೇಽಪಿ ॥೫೪॥

ಇತ್ಯುಕ್ತಂ ತದ್ವಚಶ್ಶ್ರುತ್ವಾ ಸೋಽಪಿ ನಿರ್ವಿಣ್ಣಮಾನಸಃ ।
ಪ್ರಾಹ ತಂ ಪಿತರಂ ನತ್ವಾ ಖಿನ್ನಚಿತ್ತಃ ಕೃತಾಂಜಲಿಃ ॥೫೫॥

ನ ರತಿರ್ಜಾಯತೇ ನೂನಂ ಶಂಕರಾರಾಧನೇ ಮಮ ।
ನ ಕಾಶೀನಗರೀಂ ಗಂತುಂ ತದ್ಬೀಜಂ ಮೇ ವದಾಧುನಾ ॥೫೬॥

ದವನಾಗಿ ಅವರ ಜೊತೆಯಲ್ಲಿ ಕಾಶಿಗೆ ಹೋಗಲು ಇಷ್ಟಪಡಲಿಲ್ಲ. ಅಲ್ಲದೆ ಶಿವಾರಾಧನೆಗೂ ಮನಗೊಡಲಿಲ್ಲ. ಇಂತಹ ಮಗನನ್ನು ತಂದೆಯು ನೋಡಿ, ಅವನನ್ನು ಕರೆದು ಇಂತೆಂದನು. ||೫೧-೫೨||

"ಎಲೈ ದುಷ್ಪುತ್ರನೇ. ಮುಂದೆ ನಿನ್ನ ಗತಿಯೇನು? ಈಶ್ವರಾರ್ಚನೆಯಲ್ಲಿ ಇಷ್ಟು ಉದಾಸೀನನಾಗಿರುವುದರಿಂದ ನಿನಗೆ ಮುಂದೆ ರಕ್ಷಣೆ ಕೊಡುವವರು ಯಾರು? ಯಾರು ಶಿವಲಿಂಗಾರ್ಚನೆಯಲ್ಲಿಯೇ ಮನಸ್ಸಿಡುವರೋ, ಅವರೇ ಲೋಕದಲ್ಲಿ ಮಾನ್ಯರೆನಿಸುವರು. ಅಲ್ಲದೆ ಅವರೇ ಧನ್ಯರೂ ಅಹುದು. ಹಾಗೆ ಶಿವಪೂಜಾವಿಮುಖರಾದವರನ್ನು, ದುಷ್ಟರೆಂದೂ, ವ್ಯಭಿಚಾರದಿಂದ ಜನಿಸಿದವರೆಂದೂ, ನಾಯಿಮಾಂಸಭಕ್ಷಕರೆಂದೂ ಶಪಥಪೂರ್ವಕವಾಗಿ ತಿಳಿಯುವೆನು." ||೫೪||

ಎಂದ ತಂದೆಯ ಮಾತನ್ನು ಆ ಕುಮಾರನು ಕೇಳಿ ದುಃಖಿತನಾಗಿ, ತಂದೆಯನ್ನು ಕುರಿತು ಅಂಜಲಿಬದ್ಧನಾಗಿ ಹೀಗೆ ಕೇಳಿಕೊಂಡನು. "ತಂದೆಯೇ, ನನಗೆ ಶಿವಾರಾಧನೆಯಲ್ಲಿಯೂ ಶಿವಕ್ಷೇತ್ರವೆನಿಸಿದ ಕಾಶೀನಗರವನ್ನು ಸೇರುವುದರಲ್ಲಿಯೂ ಏತಕ್ಕೋ ಮನಸ್ಸೇ ಬರುವುದಿಲ್ಲವಲ್ಲಾ! ಇದು ನನಗೂ ಆಶ್ಚರ್ಯವಾಗಿದೆ. ಇದರ ಕಾರಣವನ್ನೇ ನಾನೂ ನಿನ್ನಿಂದ ತಿಳಿಯಬೇಕಾಗಿದೆ. ||೫೫-೫೬||

ಶಾಂಕರಾಗ್ರೇಸರಸ್ಯಾಪಿ ಪುತ್ರಃ ಖಲ್ವಸ್ಮಿ ತೇ ತಥಾ ।
ಭ್ರಾತರಃ ಶಾಂಕರಾ ಏವ ದೌರ್ಭಾಗ್ಯಂ ಕಿಂ ಮಮೇದೃಶಂ ॥೫೭॥

ಕಿಮನೇನ ಶರೀರೇಣ ಕಿಂ ಕುಲೇನ ಧನೇನ ವಾ ।
ಕಿಂ ವಿದ್ಯಯಾಪಿ ತಪಸಾ ಯದಿ ಭಕ್ತಿರ್ನ ಶಾಂಕರೇ ॥೫೮॥

ರುದ್ರಾಧ್ಯಾಯೇನಾಧುನಾಪ್ಯಸ್ಯ ಭಕ್ತಿ
ಸ್ತೇನೈವೇಶಾರಾಧನೇನಾಸ್ಯ ಭಕ್ತಿಃ ।
ಕಿಂ ಕರ್ತವ್ಯಂ ಕಿಂ ನ ಕರ್ತವ್ಯಮೇವಂ
ಕಾ ವಾ ಕಾ ವಾ ಭಾವಿನೀ ಮೇ ಗತಿರ್ವಾ ॥೫೯॥

ಚಿಂತಾ ನೈತಜ್ಜೀವನೇ ತಾವದಸ್ಮಿನ್
ಕಾಯೇ ವಾಮೇ ಕಾಯನಾಶೋತ್ತರಂ ಮೇ ।
ಕಾ ವಾ ಕಾ ವಾ ಯಾತನಾ ದುರ್ದಶಾ ಸ್ಯಾ
ದಿತ್ಯೇವಾರ್ತಂ ಮಾನಸಂ ಕಿಂ ಕರೋಮಿ ॥೬೦॥

ಈಶ್ವರ ಭಕ್ತರಲ್ಲಿ ಆಗ್ರೇಸರನೆನಿಸಿದ ನಿನ್ನಂತಹವನ ಪುತ್ರನಾಗಿರುವೆನು. ನನ್ನ ಸಹೋದರರೆಲ್ಲಾ ಈಶ್ವರನಲ್ಲಿ ಭಕ್ತಿಯುತರಾಗಿರುವರು. ನನಗೆ ಮಾತ್ರ ಆ ಸೌಭಾಗ್ಯವು ಒದಗಲಿಲ್ಲವಲ್ಲಾ! ನನಗೆ ಆ ಒಂದು ಭಾಗ್ಯವಿಲ್ಲದಮೇಲೆ ಈ ಶರೀರದಿಂದಾಗಲಿ, ಈ ಹಣಕಾಸಿನಿಂದಾಗಲಿ, ವಿದ್ಯೆ, ತಪಸ್ಸು, ಕುಲ ಮುಂತಾದುವುಗಳಿಂದಾಗಲಿ ಪ್ರಯೋಜನವೇನು? ಶಂಕರನಲ್ಲಿರುವ ಭಕ್ತಿಯೇ ಉತ್ತಮ ನಿಧಿಯಲ್ಲವೇ? ||೫೭-೫೮||

ರುದ್ರಾಧ್ಯಾಯ ಜಪದಲ್ಲಿಯೂ, ರುದ್ರಾಧ್ಯಾಯ ಪುರಸ್ಸರವಾದ ಈಶ್ವರಾರಾಧನೆಯಲ್ಲಿಯೂ ನನಗೆ ಮನಸ್ಸೇ ಬರುವುದಿಲ್ಲವಲ್ಲಾ! ಈಗ ಮುಂದೇನು ಮಾಡಬೇಕು? ಯಾವುದನ್ನು ಬಿಡಬೇಕು? ಎಂಬುದೇ ನನಗೆ ಅರಿಯದಂತಾಗಿದೆ. ಇದರಿಂದ ನನಗೆ ಮುಂದೇನು ಗತಿ ಎಂಬುದೇ ತಿಳಿಯುವಂತಿಲ್ಲ. ||೫೯||

ಈ ಲೋಕದ ಜೀವನದಲ್ಲಿ ನನಗೆ ಅಷ್ಟು ಆಸಕ್ತಿಯಿಲ್ಲ. ಈ ದೇಹದ ಪರಿಣಾಮವೇನಾದರೂ ಆಗಲಿ. ಈ ದೇಹತ್ಯಾಗಾನಂತರ ಮುಂದೆ ಯಾವ ಸ್ಥಿತಿಯು ನನಗೆ ದೊರೆಯುವುದೋ ಎಂಬ ವ್ಯಥೆಯೇ ಮನಸ್ಸಿನಲ್ಲಿ ಪ್ರಬಲವಾಗಿ ನಿಂತಿದೆ. ಮುಂದೇನು ಮಾಡಲಿ. ||೬೦||

॥ ಸತ್ಯಮೂರ್ತಿರುವಾಚ ॥

ಇತ್ಯುಕ್ತಂ ತದ್ವಚಃ ಶ್ರುತ್ವಾ ಸತ್ಯಮೂರ್ತಿಃ ಸುದುಃಖಿತಃ ।
ಪತ್ನೀಮಾಹೂಯ ತಾಮಾಹ ರಹಸ್ಯೇ ಸತ್ಯಭಾಷಿಣೀಂ ॥೬೧॥

ಜಾರಜಂ ಪ್ರಾಹ ವೇದೋಽಪಿ ಮೃತ್ಯುಂಜಯಪರಾಙ್ಮುಖಂ ।
ಶಿವಾಚಾರರತಂ ಪ್ರಾಹುರಜಾರಜಮಿತಿ ಪ್ರಿಯೇ ॥೬೨॥

ಸದಾ ನ ವಾಸೋ ಮಮ ಮಂದಿರೇಷು
ದುಷ್ಟಂ ಚ ನಾರೀಹೃದಯಂ ವಿಶಿಷ್ಯ ।
ತ್ವದೀಯಪಾಪಾನಿ ನ ವೇದ್ಮಿ ತಾನಿ
ಜ್ಞೇಯಾನಿ ತಾವತ್ಖಲು ಕಾರ್ಯಹೇತೋಃ ॥೬೩॥

ಇದಂ ವದಾದ್ಯಾಸ್ತು ವಿನಿರ್ಣಯೋಽಸ್ಯ
ಪಾಪಂ ಚ ಕಾಶೀಗಮನಂ ಚ ಮಾಸ್ತು ।
ಚಿಂತಾ ಮಮೇಯಂ ಮಹತೀ ಪ್ರವೃತ್ತಾ
ಪ್ರಾಣಪ್ರಯಾಣಾವಧಿ ಸರ್ವಥಾಪಿ ॥೬೪॥

ಎಂದು ದುಃಖಿಸಿದ ಮಗನನ್ನು ನೋಡಿ, ಆ ಸತ್ಯಮೂರ್ತಿಯು ಒಡನೆಯೇ ತನ್ನ ಪತ್ನಿಯನ್ನು ಕರೆದು ರಹಸ್ಯವಾಗಿ ಹೀಗೆ ಪ್ರಶ್ನಿಸಿದನು. "ಎಲೌ ಪ್ರೇಯಸಿಯೇ, ಲೋಕದಲ್ಲಿ ಶಿವಭಕ್ತಿಯಿಂದ ವಿಮುಖನಾದವನು ಜಾರಜನಾಗಿರಬೇಕು. ಶುದ್ಧವಾದ ಜನ್ಮವನ್ನು ತಾಳಿದವನೇ ನಿಜವಾದ ಈಶ್ವರಭಕ್ತಿಯನ್ನು ಪಡೆಯುವನು ಎಂದು ವೇದಗಳು ಹೇಳುತ್ತಿರುವುವು. ॥೬೧-೬೨॥

ನಾನು ಮನೆಯಲ್ಲಿ ಸದಾ ವಾಸಮಾಡುತ್ತಿರಲಿಲ್ಲ. ಸ್ತ್ರೀಯರ ಮನಸ್ಸು ಬಹು ಬೇಗ ದುರ್ಮಾರ್ಗಕ್ಕೆ ತಿರುಗುವುದು. ನಿನ್ನ ಪಾಪಕಾರ್ಯಗಳು ನನಗೆ ಸರಿಯಾಗಿ ತಿಳಿಯಲಿಲ್ಲ. ಈಗ ಯಾವುದೋ ಒಂದು ವಿಷಯ ನಿರ್ಣಯಕ್ಕಾಗಿ ಆ ವಿಷಯವನ್ನು ತಿಳಿಯಬೇಕಾಗಿ ಬಂದಿದೆ. ॥೬೩॥

ಜಾಗ್ರತೆ ನೀನು ಆಚರಿಸಿದ ಪಾಪಕಾರ್ಯಗಳಾವುದಿದ್ದರೂ ಈಗಲೇ ನನಗೆ ತಿಳಿಸುವವಳಾಗು. ಆ ವಿಷಯವು ಈಗ ನಿರ್ಣಯವಾಗಬೇಕು. ಇದಕ್ಕಾಗಿ ಕಾಶೀಪ್ರಯಾಣವನ್ನೇ ನಿಲ್ಲಿಸಿರುವೆನು. ಈ ನಿನ್ನ ಸಂಬಂಧವಾದ ಚಿಂತೆಯು ನನಗೆ ಮರಣಾವಧಿ ತಪ್ಪುವಂತಿಲ್ಲ." ॥೬೪॥

ಇತ್ಯಾಕರ್ಣ್ಯ ವಚಸ್ತಸ್ಯ ಸಾಪಿ ಪಾಪಾನುತಾಪತಃ ।
ಕಂಪನೇ ತಂ ಪತಿಂ ಪ್ರಾಹ ಸಂಪನ್ನಂ ಶಿವವಿದ್ಯಯಾ ॥೬೫॥

ನ ಯತ್ನೇನ ಕೃತಂ ಪಾಪಂ ಸತ್ಯಮುದ್ಯೋಚ್ಯತೇ ಮಯಾ ।
ಸ್ವಪ್ನೇ ಕೋಽಪಿ ಸಮಾಲಿಂಗ್ಯ ಸ್ಥಿತೋ ಮಾಂ ದುಷ್ಟಧೀಃ ಪುರಾ॥೬೬॥

ತತಃ ಪುರುಷಕೃತ್ಯಂ ಚ ಸ್ವಪ್ನೇ ವೃತ್ತಂ ಮಮಾದ್ಭುತಂ ।
ಸ ಸ್ವಪ್ನೋ ಲಜ್ಜಯಾ ನೋಕ್ತಸ್ತೇನ ಗರ್ಭೋಽಪ್ಯಭೂನ್ಮಮ ॥೬೭॥

ತತಃ ಪರಮಯಂ ಜಾತಃ ಸುತಶ್ಶಿವಪರಾಙ್ಮುಖಃ ।
ಇತೋಽನ್ಯನ್ನಾಧಿಕಂ ಪಾಪಂ ಸ್ಮರ್ಯತೇ ನ ಕೃತಂ ಮಯಾ ॥೬೮॥

ಇತ್ಯುಕ್ತಂ ತದ್ವಚಶ್ಶ್ರುತ್ವಾ ಸತ್ಯಮೂರ್ತಿಸ್ಸುದುಃಖಿತಃ ।
ಅಶಕ್ಯಮಥ ವಿಜ್ಞಾಯ ಕಿಂ ಕರ್ತವ್ಯಂ ಮಯೇತ್ಯಪಿ ॥೬೯॥

ತತಃ ಪರಂ ಸಮಾಹೂಯ ತಂ ಸುತಂ ಶಿವವಿದ್ಯಯಾ ।
ಪೂತಂ ಚಕಾರ ಸೋಽಪ್ಯಾಸೀತ್ತಯಾ ಸಪ್ರತಿಭಸ್ತದಾ ॥೭೦॥

ಎಂದು ಹೇಳಿದ ಪತಿವಾಕ್ಯಗಳನ್ನು ಕೇಳಿ ಪತ್ನಿಯಾದ ಶಾರದೆಯು ತನ್ನ ಪಾಪಕಾರ್ಯಕ್ಕಾಗಿ ತಾನೇ ನಡುಗುತ್ತಾ, ಶಿವವಿದ್ಯಾನಿಪುಣನಾದ ಪತಿಯನ್ನು ಕುರಿತು ಹೀಗೆಂದಳು "ಪತಿದೇವನೇ, ನಾನು ಮನಃಪೂರ್ವಕವಾಗಿ ಯಾವ ಪಾಪಕಾರ್ಯವನ್ನೂ ಮಾಡಿದವಳಲ್ಲ. ಇದನ್ನು ಪ್ರಮಾಣಪೂರ್ವಕವಾಗಿ ಹೇಳುತ್ತೇನೆ. ಹಿಂದೆ ದುಷ್ಟ ಬುದ್ಧಿಯಿಂದ ಪರಪುರುಷನೊಬ್ಬನು ಸ್ವಪ್ನದಲ್ಲಿ ಬಂದು ನನ್ನನ್ನು ಆಲಿಂಗಿಸಿ ಕೊಂಡನು. ||೬೫-೬೬||

ಹಾಗೆಯೇ ಸ್ವಪ್ನದಲ್ಲಿ ಆತನು ಮೈಥುನಕ್ರಿಯೆಗಳನ್ನಾಚರಿಸಿದನು. ಅದು ಸ್ವಪ್ನದಲ್ಲಿ ನಡೆಯಿತಾದ್ದರಿಂದ ಅದನ್ನು ನಾನು ನಾಚಿಕೆಯಿಂದ ಯಾರಿಗೂ ತಿಳಿಸ ಲಿಲ್ಲ. ಅಂದಿನಿಂದಲೇ ನಾನು ಗರ್ಭಿಣಿಯಾಗಿ ಈರೀತಿ ಶಿವಪೂಜೆಯಲ್ಲಿ ವಿಮುಖ ನಾದ ಮಗನನ್ನು ಪಡೆದಿರುವೆನು. ಇಷ್ಟಲ್ಲದೆ ಮತ್ತಾವ ದುಷ್ಕಾರ್ಯವನ್ನೂ ನಾನು ಮಾಡಿದವಳಲ್ಲ" ಎಂದಳು. ||೬೭-೬೮||

ಪತ್ನಿಯ ಆ ಮಾತುಗಳನ್ನು ಕೇಳಿದ ಸತ್ಯಮೂರ್ತಿಯು ದುಃಖಿತನಾಗಿ ಮುಂದೇನುಮಾಡಬೇಕೆಂಬುದನ್ನೇ ಯೋಚಿಸಿ, ಏನು ಮಾಡುವುದಕ್ಕೂ ಅಸಮರ್ಥ

ಏವಂ ಸ ಶಿಕ್ಷಯನ್ ಪುತ್ರಾನ್ ಸತ್ಯಮೂರ್ತಿರ್ಮಹಾಮುನಿಃ ।
ಉವಾಸ ಸುಚಿರಂ ಗೇಹೇ ಶಿವಪೂಜಾಪರಾಯಣಃ ॥೨೦॥

ತತಃ ಕದಾಚಿತ್ತತ್ಪುತ್ರಃ ಶಿವಪೂಜಾಪರಾಯಣಃ ।
ಆಮಧ್ಯಾಹ್ನಂ ವನೇ ಸ್ಥಿತ್ವಾ ಗೃಹಂ ಗಂತುಂ ಸಮುದ್ಯತಃ ॥೨೨॥

ತದಾನೀಮುದ್ಗತಃ ಕೋಽಪಿ ಪತಂಗಸ್ಸಮುಪಾಗತಃ ।
ಪತಂಗಮಂಡಲಂ ಭಿತ್ವಾ ಪತಂಗಾಚ್ಛಾದನಕ್ಷಮಃ ॥೨೩॥

ಪತಂಗಮಸ್ತಂಗತಮೇವ ಮೇನೇ
ಪ್ರದೋಷಕಾಲೋಽಯಮಿತಿ ಭ್ರಮೇಣ ।
ಸಂಕಲ್ಪಪೂಜಾಂ ಸ ಚಕಾರ ತೀವ್ರಂ
ಗತಃ ಸ್ವಗೇಹಂ ಪ್ರತಿ ಶೈವವರ್ಯಃ ॥೨೪॥

ತಸ್ಮಿನ್ ಗತೇ ಸಮುತ್ಥಾಯ ನಾಸನಂ ಪ್ರದದೌ ಸತೀ ।
ತಸ್ಮೈ ಮಧ್ಯಾಹ್ನಪೂಜಾಯಾಂ ನಿರತಾ ತಸ್ಯಭಾಮಿನೀ ॥೨೫॥

ನಾಗಿದ್ದನು. ಹಾಗೂ ಒಂದು ಸಾರಿ ಮಗನನ್ನು ಕರೆದು, ಆತನಿಗೆ ಸಂಪೂರ್ಣವಾದ ಶಿವ ವಿದ್ಯೆಯನ್ನು ಉಪದೇಶಿಸಿದನು. ಅದರ ಪ್ರಭಾವದಿಂದ ಆತನು ಪರಿಶುದ್ಧನಾಗಿ, ಪ್ರತಿಭಾಶಾಲಿಯೆನಿಸಿದನು. ॥೨೦॥

ಹಾಗೆಯೇ ಅನೇಕ ದಿನಪರ್ಯಂತ ಶಿವವಿದ್ಯೋಪದೇಶ ಮಾಡುತ್ತಾ, ಮಗನನ್ನು ಶಿವಪೂಜಾಪರಾಯಣನನ್ನಾಗಿ ಮಾಡಿದನು. ಹೀಗಿರಲು ಒಂದು ದಿನ ಮಗನು ಮಧ್ಯಾಹ್ನದವರೆಗೂ ವನದಲ್ಲಿ ಶಿವಪೂಜಾಪರಾಯಣನಾಗಿದ್ದು ಅನಂತರ ಮನೆಗೆ ಹೋಗಲು ಪ್ರಯತ್ನಿಸಿದನು. ॥೨೧-೨೨॥

ಆಗಲೇ ಒಂದು ಪತಂಗ (ದೊಡ್ಡಕಪಟ) ಪಕ್ಷಿಯು ಸೂರ್ಯ ಮಂಡಲಕ್ಕೆ ಅಡ್ಡಲಾಗಿ ನಿಂತು ಸೂರ್ಯಪ್ರಕಾಶವನ್ನೇ ಮರೆಮಾಡಿತು. ಅದನ್ನು ನೋಡಿ ಆ ಬ್ರಾಹ್ಮಣಪುತ್ರನು "ಸೂರ್ಯಾಸ್ತಮಾನವಾಗಿ ಪ್ರದೋಷಕಾಲವು ಸಮೀಪಿಸಿತು" ಎಂದು ತಿಳಿದುಕೊಂಡು, ಒಡನೆಯೇ ಅಲ್ಲಿ ಪ್ರದೋಷಕಾಲದ ಶಿವಾರ್ಚನೆಯನ್ನೂ ನೆರವೇರಿಸಿ ಮನೆಗೆ ಬಂದನು. ॥೨೪॥

ಹಾಗೆ ಬಂದ ಪತಿಯನ್ನು ನೋಡಿ ಆತನ ಪತ್ನಿಯು ಪ್ರತ್ಯುತ್ಥಾನಾದಿಗಳಿಂದ ಆತನನ್ನು ಮರ್ಯಾದಿಸಲಿಲ್ಲ. ಏಕೆಂದರೆ ಆಕೆಯು ಮಾಧ್ಯಾಹ್ನಿಕಪೂಜೆಯಿಂದ ಶಿವ

ತದಾನೀಂ ತಾಂ ವಿಲೋಕ್ಯಾಹ ಸಾಯಂಕಾಲೋಽಯಮಾಗತಃ ।
ವಿಧೇಯಃ ಪೂಜನಂ ಶಂಭೋಃ ಸಂಪಾದಯ ಜಲಾದಿಕಂ ॥೨೬॥

ಇತಿ ತದ್ವಚನಂ ಶ್ರುತ್ವಾ ಸಾ ಶಿವಾರ್ಚನತತ್ಪರಾ ।
ನೋತ್ಥಿತಾ ನ ಬಭಾಷೇ ಚ ವಿಭೂತಿಪರಿಭೂಷಿತಾ ॥೨೭॥

ತದಾನೀಂ ಪ್ರಾಹ ತಾಂ ಕ್ರುದ್ಧಃ ಶಾಪಂ ದಾಸ್ಯಾಮಿ ಸತ್ವರಂ ।
ಗೃಹಾಣೇತಿ ತದಾ ಪ್ರಾಹ ತತ್ಪಿತಾ ತಂ ವಿಲೋಕಯನ್ ॥೨೮॥

ಇಯಂ ಮಧ್ಯಾಹ್ನಸಮಯೇ ಶಿವಾರ್ಚನಪರಾ ಸತೀ ।
ತ್ಯಕ್ತ್ವಾ ಶಿವಾರ್ಚನಂ ತುಭ್ಯಮಭ್ಯುತ್ಥಾನರತಾಪಿ ನ ॥೨೯॥

ನ ಸಾಯಂಕಾಲಪೂಜಾಯಾಃ ಸಮಯೋಽಯಮುಪಾಗತಃ ।
ಭ್ರಾಂತ್ಯಾ ಸಮಾಗತಂ ತಾವದಧುನಾ ತವ ವಿಭ್ರಮಃ ॥೩೦॥

ಇಯಂ ಶಿವಾರ್ಚನೋದ್ಯುಕ್ತಾ ತದ್ವಿಘ್ನಾಚರಣೋದ್ಯಮೇ ।
ಪಾಪಂ ಪ್ರತ್ಯುತ ತೇ ಭಾವಿ ಶಾಪಶಕ್ತಿಃ ಕ್ವ ತೇ ವದ ॥೩೧॥

ನನ್ನು ಅರ್ಚಿಸುತ್ತಿದ್ದಳು. ಆಗ ಪತಿಯು ತನ್ನ ಪತ್ನಿಯನ್ನು ನೋಡಿ "ಏನು! ಈಗ ಸಾಯಂಕಾಲವಾಗಿದೆ. ಶಿವಪ್ರದೋಷಪೂಜೆಗಾಗಿ ಬೇಗ ಜಲಾದಿಗಳನ್ನು ಸಿದ್ಧಗೊಳಿಸು" ಎಂದನು. ||೨೫-೨೬||

ಇದನ್ನು ಕೇಳಿಯೂ ಅವನ ಹೆಂಡತಿಯು ತಾನು ಶಿವಪೂಜಾಸಕ್ತಳಾದುದರಿಂದ ಯಾವ ಉತ್ತರವನ್ನೂ ಕೊಡದೆ ಸುಮ್ಮನಿದ್ದಳು. ಅದಕ್ಕಾಗಿ ಕೋಪಿಸಿಕೊಂಡ ಪತಿಯು "ಎಲೌ ದುಷ್ಟಳೇ, ನೀನು ಬಹಳ ಅವಿಧೇಯತೆಯನ್ನು ತೋರ್ಪಡಿಸುವೆ. ನಿನಗೆ ಶಾಪಕೊಡುವೆನು" ಎಂದು ಗರ್ಜಿಸಿದನು. ಅದನ್ನು ಆತನ ತಂದೆಯಾದ ಸತ್ಯಮೂರ್ತಿಯು ಕಂಡು ಮಗನೊಡನೆ ಹೀಗೆಂದನು. ||೨೭-೨೮||

"ಎಲೈ ಪುತ್ರನೇ, ನೀನು ಈಗ ಭ್ರಾಂತನಾಗಿರುವೆ. ಇದು ಸಾಯಂಕಾಲ ಸಮಯವಲ್ಲ. ಭಕ್ತಿಯಿಂದ ಮಾಧ್ಯಾಹ್ನಿಕಪೂಜೆಮಾಡುತ್ತಿರುವ ನಿನ್ನ ಪತ್ನಿಯು ಶಿವಾರ್ಚನೆಯನ್ನು ಬಿಟ್ಟು ನಿನ್ನನ್ನುಪಚರಿಸುವುದು ನ್ಯಾಯವಲ್ಲ. ||೨೯-೩೦||

ಇವಳು ಶಿವಪೂಜಾನಿರತಳಾಗಿರುವಳು. ಈಗ ಆ ಪವಿತ್ರಕಾರ್ಯಕ್ಕೆ ಅಡ್ಡಿತರುವುದರಿಂದ ನಿನಗೆ ಪಾಪಸಂಘಟನೆಯಾಗುವುದಲ್ಲದೆ ಶಾಪಾನುಗ್ರಹಶಕ್ತಿಯೂ ದೂರ

ಶಿವಾರ್ಚನಾತ್ಪರೋ ಧರ್ಮೋ ನಾಸ್ತಿ ನ ಶ್ರೂಯತೇಽಪಿ ಚ ।
ತದರ್ಚನಪರಾಸ್ಸರ್ವೇ ಮಾನನೀಯಾ ವಿಶೇಷತಃ ॥೮೨॥

ಪತಿಪೂಜಾವ್ರತಂ ತಸ್ಯಾಃ ಪತಿರ್ವಿಶ್ವಪತಿಸ್ತತಃ ।
ಪತಿವ್ರತಾವ್ರತಂ ತ್ಯಾಗಂ ಕಥಂ ಕಾ ಕರ್ತುಮಿಚ್ಛತಿ ॥೮೩॥

ಪತಿವ್ರತಾಯಾಂ ಶಾಪೋಽಪಿ ದತ್ತಸ್ಸ್ಯಾದ್ವಿಫಲಃ ಸುತ ।
ಸ ಶಾಪಃ ಸ್ವಾಪಕಾರಾಯ ಪ್ರತ್ಯುತ ಸ್ಯಾದಸಂಶಯಂ ॥೮೪॥

॥ ಸತ್ಯಮೂರ್ತಿರುವಾಚ ॥

ಇತಿ ತದ್ವಚನಂ ಶ್ರುತ್ವಾ ತಂ ಪ್ರಣಮ್ಯ ಗುರುಂ ಸುತಃ ।
ಸಾಯಂಕಾಲಃ ಕಥಂ ನಾಯಮಿತ್ಯಾಹಾನ್ಯದಪಿ ಸ್ಮರನ್ ॥೮೫॥

ಪತಂಗೋಽಯಂ ಪತಂಗಸ್ಯ ಛಾಯಯಾ ಪರಮಾವೃತಃ ।
ಪಶ್ಯ ಪಶ್ಯ ಪತಂಗಂ ತಂ ಯೇನಾಭೂತ್ತವ ವಿಭ್ರಮಃ ॥೮೬॥

ವಾಗುವುದು. ಲೋಕದಲ್ಲಿ ಶಿವಾರ್ಚನೆಗಿಂತ ದೊಡ್ಡದಾದ ಧರ್ಮವೊಂದಿಲ್ಲ. ಅಂತಹ ಅರ್ಚನ ಕಾರ್ಯದಲ್ಲಿ ತೊಡಗಿದವರು ಯಾರೇ ಆಗಿದ್ದರೂ ಅವರನ್ನು ಮರ್ಯಾದಿಸಬೇಕು. ॥೮೧-೮೨॥

ಪತಿವ್ರತೆಯು ಪತಿಸೇವೆಯನ್ನೇ ಮಾಡಬೇಕು. ಆದರೆ ಶಂಕರನು ವಿಶ್ವಪತಿಯಲ್ಲವೆ? ಅಂತಹವನ ಸೇವೆಯಿಂದ ಪತಿವ್ರತಾಧರ್ಮವು ವೃದ್ಧಿಯಾಗುವುದು. ಅದನ್ನು ಸ್ತ್ರೀಯು ಬಿಡುವುದು ಹೇಗೆ? ಅಂತಹ ಪತಿವ್ರತೆಗೆ ಕೊಟ್ಟ ಶಾಪವು ಎಂದೂ ಫಲಿಸಲಾರದು. ಅಲ್ಲದೆ ಅದು ಶಾಪಕೊಟ್ಟವನಿಗೆ ಹಿಂಸೆಯನ್ನುಂಟು ಮಾಡುವುದು. ಸಂಶಯವಿಲ್ಲ.'' ॥೮೩-೮೪॥

ಹಾಗೆಂದ ತಂದೆಯ ಮಾತನ್ನು ಕೇಳಿ, ಆ ಮಗನು ಶಾಂತನಾಗಿ ತಂದೆಗೆ ವಂದಿಸಿ, ತನಗೆ ಸಾಯಂಕಾಲದ ಭ್ರಾಂತಿ ಬಂದುದು ಹೇಗೆ? ಇದು ಸಾಯಂಕಾಲವಲ್ಲ ಎಂಬುದು ಹೇಗೆ? ಎಂದು ಪ್ರಶ್ನಿಸಲು, ಆಗ ಸತ್ಯಮೂರ್ತಿಯು ಆ ವಿಷಯವನ್ನು ವಿಸ್ತರಪಡಿಸಿದನು. ''ಪುತ್ರವರ್ಯನೇ, ಇದು ಸಾಯಂಕಾಲವಲ್ಲ. ಅಲ್ಲಿ ಹಾರಾಡುತ್ತಿರುವ ಪತಂಗವನ್ನು ನೋಡು. ಅದು ಸೂರ್ಯನ ತೇಜಸ್ಸನ್ನು ಮುಚ್ಚಿ ನಿನಗೆ ಸಾಯಂಕಾಲದ ಭ್ರಾಂತಿಯನ್ನುಂಟುಮಾಡಿದೆ. ॥೮೫-೮೬॥

ಏತಾವದಪಿ ನ ಜ್ಞಾತಂ ತ್ವಯಾ ಪುತ್ರ ಭ್ರಮಾದಿಹ ।
ಕಥಂ ಶಾಪಪ್ರದಾನಾರ್ಥಮುದ್ಯತೋಽಸ್ಯ ವಿವೇಕತಃ ॥೪೭॥

ಇತಿ ತದ್ವಚನಂ ಶ್ರುತ್ವಾ ಸಾಶ್ಚರ್ಯಃ ಪಿತರಂ ಸುತಃ ।
ಕಃ ಪತಂಗೋಽಯಮಿತ್ಯಾಹ ಸ ತಮಾಹ ಪುನರ್ದ್ವಿಜಃ ॥೪೮॥

ಅಯಂ ಪೂರ್ವಭವೇ ರಾಜಾ ಸರ್ವಭೂಮಂಡಲಾಧಿಪಃ ।
ಮಹದೈಶ್ವರ್ಯಸಂಪನ್ನಃ ಸರ್ವಸೌಭಾಗ್ಯಸಂಯುತಃ ॥೪೯॥

ಕಳತ್ರಾಣಾಂ ಸಹಸ್ರೇಣ ಸೋಽಯಂ ಸಂಸೇವಿತೋ ನೃಪಃ ।
ಶಿವಾರ್ಚನರತಾಸ್ತಸ್ಯ ಸರ್ವೇ ದಾರಾಃ ಪ್ರಯತ್ನತಃ ॥೯೦॥

ನೃಪಃ ಕಾಮಾತುರೋ ನಿತ್ಯಂ ದಾರಭೋಗಾರ್ಥಮುದ್ಯತಃ ।
ಸ ತು ಧರ್ಮಮಧರ್ಮಂ ವಾ ನ ಜಾನಾತಿ ವಿಶೇಷತಃ ॥೯೧॥

ತದಾನೀಂ ಮುದ್ಗಲೋ ನಾಮ ಕಶ್ಚಿದಭ್ಯಾಗತೋ ಮುನಿಃ ।
ತಂ ದೃಷ್ಟ್ವಾ ಸ ನೃಪಸ್ತೂಷ್ಣೀಂ ಸ್ಥಿತಶ್ಶಿವಪರಾಙ್ಮುಖಃ ॥೯೨॥

ಎಲೈ ಪುತ್ರನೇ, ಇಷ್ಟುಮಾತ್ರ ಇದನ್ನು ತಿಳಿಯದೇ ಹೋದೆಯಲ್ಲಾ. ಅದೂ ಅಲ್ಲದೆ ಭ್ರಾಂತನಾಗಿ ಶಾಪಕೊಡಲು ಪ್ರಯತ್ನಿಸುವುದು ಉಚಿತವೇ '' ಎಂದು ತಿಳಿಸಲು ಆಗ ಮಗನು ಆಶ್ಚರ್ಯಯುತನಾಗಿ '' ಇದು ಏನು ? ಹಾಗಾದರೆ ಈ ಪತಂಗ ಯಾವುದು ? ಅದರ ವಿಷಯವನ್ನು ದಯವಿಟ್ಟು ತಿಳಿಸಬೇಕು '' ಎಂದು ಪ್ರಾರ್ಥಿಸಲು ಮತ್ತೆ ಸತ್ಯಮೂರ್ತಿಯು ಮಗನೊಡನೆ ಹೀಗೆಂದನು. ||೪೭-೪೮||

ಈತನು ಪೂರ್ವಜನ್ಮದಲ್ಲಿ ರಾಜನಾಗಿದ್ದನು. ಮತ್ತು ಸಮಸ್ತವಾದ ಐಶ್ವರ್ಯದಿಂದ ಕೂಡಿದವನಾಗಿ, ಸಕಲ ಭೋಗಭಾಗ್ಯಗಳಿಂದ ಮೆರೆಯುತ್ತಾ ಸಕಲ ಭೂಮಂಡಲಕ್ಕೂ ಅಧಿಪತಿಯೆನಿಸಿದ್ದನು. ಈತನಿಗೆ ಸಾವಿರ ಹೆಂಡತಿಯರಿದ್ದರು. ಆದರೆ ಅವರೆಲ್ಲರೂ ಸದಾ ಶಿವಪೂಜಾಪರಾಯಣರಾಗಿದ್ದು ಪತಿಸೇವೆ ಮಾಡುತ್ತಿದ್ದರು. ||೪೯-೯೦||

ಆದರೆ ರಾಜನಾದರೋ, ಸರ್ವದಾ ಕಾಮಾತುರನಾಗಿ, ಸ್ತ್ರೀಸೌಖ್ಯದಲ್ಲಿಯೇ ಕಾಲಕಳೆಯುತ್ತಾ, ಧರ್ಮಾಧರ್ಮಪರಿಜ್ಞಾನವಿಲ್ಲದವನಾಗಿದ್ದನು. ಆಗ ಒಂದುಸಾರಿ ಮುದ್ಗಲನೆಂಬ ಒಬ್ಬ ಮಹರ್ಷಿಯು ಅಕಸ್ಮಾತ್ತಾಗಿ ಈ ರಾಜಭವನಕ್ಕೆ ಬಂದನು.

ತತಸ್ತಸ್ಯ ಕಳತ್ರಾಣಿ ತಂ ದೃಷ್ಟ್ವಾ ಮುನಿಪುಂಗವಂ ।
ಶಾಂಭವತ್ವಂ ವಿದಿತ್ವಾಪಿ ಪ್ರಣತಾಶ್ಶಿವತತ್ಪರಂ ॥೯೩॥

ರಾಜದಾರಾನ್ವಿಲೋಕ್ಯಾಯಂ ಹಾರಾನ್ ಹಾರವಿಭೂಷಿತಾನ್ ।
ರುದ್ರಾಕ್ಷಭೂತಿಪೂತಾಂಗಾನ್ ಪ್ರಣತಃ ಪರಯಾ ಮುದಾ ॥೯೪॥

ಅಹೋ ಭಾಗ್ಯಮಿದಂ ದೃಷ್ಟಂ ನಾರೀಣಾಮಪಿ ಶಂಕರೇ ।
ಕಥಂ ಪ್ರೀತಿರುಮಾಕಾಂತಾರಾಧನಾಯೋದ್ಯತಾ ಅಮೀ ॥೯೫॥

ಇತಿ ತದ್ವಚನಂ ಶ್ರುತ್ವಾ ತಂ ಮುನಿಂ ತಾ ನೃಪಾಂಗನಾಃ ।
ಅರ್ಘ್ಯಪಾದ್ಯಾದಿಭಿಸ್ತುಷ್ಟಂ ಚಕ್ರುರಾದರಪೂರ್ವಕಂ ॥೯೬॥

ತತಸ್ತಮೂಚುಸ್ತಾಸ್ಸರ್ವಾಃ ಶಿವಪೂಜಾಪರಾಯಣಂ ।
ಧರ್ಮಃ ಕೋ ವಾ ವದಾಸ್ಮಭ್ಯಮಿತಿ ವೇದವಿನಿಶ್ಚಿತಃ ॥೯೭॥

॥ ಮುದ್ಗಲ ಉವಾಚ ॥

ಪತಿಪೂಜಾಪರೋ ಧರ್ಮೋ ದಾರಾಣಾಂತು ವಿಶೇಷತಃ ।
ಪುರುಷಾಣಾಂ ಚ ಸರ್ವೇಷಾಂ ಪತಿರ್ವಿಶ್ವಪತಿಶ್ಶಿವಃ ॥೯೮॥

ಅವನನ್ನು ನೋಡಿಯೂ ರಾಜನು ಉದಾಸೀನತೆಯಿಂದ ಆತನನ್ನು ಗೌರವಿಸದೆ ಸುಮ್ಮನಿದ್ದನು. ॥೯೧-೯೨॥

ಆದರೆ ಆ ರಾಜಪತ್ನಿಯರು ಶಿವಪೂಜಾಗ್ರಗಣ್ಯನಾದ ಈ ಋಷಿಯನ್ನು ನೋಡಿ, ಈತನು ಶಾಂಭವನೆಂದು ತಿಳಿದು ಭಕ್ತಿಯಿಂದ ನಮಸ್ಕರಿಸಿದರು. ಅವರೆಲ್ಲರೂ ರುದ್ರಾಕ್ಷ ವಿಭೂತ್ಯಾದಿಗಳಿಂದ ದೇಹವನ್ನು ಅಲಂಕರಿಸಿಕೊಂಡು, ಈಶ್ವರ ಬುದ್ಧಿಯಿಂದ ತನಗೆ ನಮಸ್ಕರಿಸಿದುದನ್ನು ನೋಡಿ ಆಶ್ಚರ್ಯಪಟ್ಟನು. ॥೯೩-೯೪॥

ಮತ್ತೂ ಹೀಗೆಂದನು. "ಇಂತಹ ರಾಜಪತ್ನಿಯರಿಗೆ ಇಷ್ಟು ಶಿವಪೂಜಾಭಿಮಾನವು ಬಂದುದು ಬಹು ಆಶ್ಚರ್ಯವಾಗಿದೆ" ಎನ್ನುತ್ತಿರುವುದನ್ನು ಆ ರಾಜಪತ್ನಿಯರು ಕೇಳಿ ಸಂತೋಷಪಡುತ್ತಾ ಆ ಋಷಿಯನ್ನು ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿ ಆದರಿಸಿದರು. ॥೯೬॥

ಮತ್ತು ಶಿವಪೂಜಾಧುರಂಧರನಾದ ಆ ಮಹರ್ಷಿಯನ್ನು ಕುರಿತು, ರಾಜಪತ್ನಿಯರು ತಮಗೆ ವೇದಪ್ರತಿಪಾದ್ಯಮಾನವಾದ ಧರ್ಮವೊಂದನ್ನು ಉಪದೇಶಿಸುವಂತೆ ಪ್ರಾರ್ಥಿಸಿಕೊಂಡರು. ಆಗ ಮುದ್ಗಲ ಮಹರ್ಷಿಯು, ಅವರ ಪ್ರಾರ್ಥನೆ

ತಂ ವಿಶ್ವಪತಿಮೇವೇಶಂ ಪತಿಂ ಮತ್ವಾ ಪತಿವ್ರತಾಃ ।
ಯಂ ಪೂಜಯಂತಿ ಯತ್ನೇನ ಪ್ರಸ್ತುವಂತ್ಯನಿಶಂ ಮುದಾ ॥೯೯॥

ಶಿವಪೂಜಾಪರೋ ಧರ್ಮಸ್ತತ್ತ್ಯಾಗಾದೇವ ಸರ್ವಥಾ ।
ಬಹುಪಾಪಾಲಯೋ ಭೂತ್ವಾ ನರೋ ನರಕಮಶ್ನುತೇ ॥೧೦೦॥

ಯೋಽಯಂ ಪತಿವ್ರತಾಧರ್ಮೋ ಮಹೇಶಾರ್ಚನಲಕ್ಷಣಃ ।
ತತ್ತ್ಯಾಗಾನ್ನರಕಾವಾಸೋ ಭವತ್ಯೇವ ನ ಸಂಶಯಃ ॥೧೦೧॥

ಶಿವಾಪತಿಃ ಪತಿರ್ಭರ್ತಾ ಮಾತಾ ಬಂಧುಃ ಸಖಾ ಸುಹೃತ್ ।
ಅತಸ್ತತ್ಪೂಜನಂ ಧರ್ಮಃ ಪರಮಃ ಪರಿಕೀರ್ತಿತಃ ॥೧೦೨॥

ಯೇ ಯೇ ಪತಿವ್ರತಾಧರ್ಮಾಃ ಶ್ರುತಾಸ್ತೇ ಶಾಂಭವಾಃ ಪರಂ ।
ಯತಃ ಪರಃ ಪತಿಶ್ಶಂಭುಸ್ತದ್ವ್ರತಂ ಶಿವಪೂಜನಂ ॥೧೦೩॥

ಯಂತೆ ಧರ್ಮೋಪದೇಶಮಾಡಲಾರಂಭಿಸಿದನು. “ಎಲೌ ರಾಜಮಹಿಷಿಯರೇ, ಪತಿವ್ರತಾಸ್ತ್ರೀಯರಿಗೆ ಪತಿ ಸೇವೆಯೇ ಮುಖ್ಯವಾದ ಧರ್ಮ. ಆದರೆ ಸ್ತ್ರೀಪುರುಷ ಸಾಧಾರಣವಾಗಿ ವಿಶ್ವಪತಿಯೆನಿಸಿದ ಪರಶಿವನೇ ಪರಮಪೂಜ್ಯನು. ||೯೭-೯೮||

ಪರಶಿವನನ್ನೇ ವಿಶ್ವಪತಿಯೆಂದು ತಿಳಿದು, ಯಾವಾಗಲೂ ಅವನನ್ನೇ ಪೂಜಿಸುತ್ತಲೂ, ಸ್ತುತಿಸುತ್ತಲೂ ಇರುವ ಧರ್ಮವೇ ಶ್ರೇಷ್ಠವಾದ ಶಿವಧರ್ಮ. ಅದರಿಂದಲೇ ಪರಮಪದವು ದೊರೆಯುವುದು. ಆ ಧರ್ಮಪರಿತ್ಯಾಗದಿಂದ ಮನುಷ್ಯನು ಪಾಪಾಶ್ರಿತನಾಗಿ ನರಕಭಾಗಿಯೆನಿಸುವನು. ||೯೯-೧೦೦||

ಮಹೇಶ್ವರಾರ್ಚನೆಯ ರೂಪವಾದ ಧರ್ಮವೇ ಪತಿವ್ರತಾಧರ್ಮವೆನಿಸುವುದು. ಅದನ್ನು ತ್ಯಜಿಸುವುದರಿಂದ ನಿಜವಾಗಿಯೂ ಸ್ತ್ರೀಯರು ನರಕವನ್ನು ಹೊಂದುವರು. ಪಾರ್ವತೀಪತಿಯಾದ ಶಂಕರನೇ ನಿಜವಾದ ಒಡೆಯನು. ತಾಯಿ, ತಂದೆ, ಬಂಧು ಮತ್ತು ಕೃತ್ರಿಮನಲ್ಲದ ಸ್ನೇಹಿತ ಇವರೆಲ್ಲರೂ ಪರಶಿವನೇ. ಆದ್ದರಿಂದಲೇ ಇಂತಹ ಆಪದ್ಬಂಧುವನ್ನು ಭಕ್ತಿಯಿಂದ ಪೂಜಿಸುವುದು ಪರಮ ಧರ್ಮ. ||೧೦೧-೧೦೨||

ಪತಿವ್ರತಾಧರ್ಮವೆಂದರೆ ಪತಿಸೇವೆಮಾಡುವುದು ಎಂದರ್ಥ. ಆದರೆ ಇಲ್ಲಿ ಪತಿಯೆಂದರೆ ಪರಶಿವನು ಎಂದು ಅರಿಯಬೇಕು. ಕೆಲವರು ಪತಿಯೆಂದರೆ ತನ್ನ ಗಂಡ

ಕೇಚಿತ್ಕಾಂತಂ ಪತಿಂ ಪ್ರಾಹುಸ್ಸ ತಾವದತಿಲೌಕಿಕಃ ।
ನ ತಸ್ಯ ಸೇವಯಾ ಮುಕ್ತಿಸ್ಸ ಯತಃ ಪಾಮರೋ ನರಃ ॥೧೦೪॥

ನ ಪಾಮರನರಪ್ರೀತ್ಯಾ ಪರಲೋಕೋ ಭವಿಷ್ಯತಿ ।
ಪರಂ ತು ಪುತ್ರಸಂಪತ್ತಿಮಾತ್ರಸಾಮಾನ್ಯಕಾರಣಂ ॥೧೦೫॥

ಪುತ್ರೋತ್ಪಾದಕತಾಶಕ್ತಿರಪಿ ತಸ್ಯ ನ ಸರ್ವಥಾ ।
ಸಾ ಶಕ್ತಿಶ್ಶಂಕರಸ್ಯೈವ ತತಸ್ಸ ಪತಿರುಚ್ಯತೇ ॥೧೦೬॥

ತದುತ್ಪಾದಕಸಾಮಾನ್ಯಂ ಪತಿಂ ಯದಿ ವದಂತಿ ತೇ ।
ತದ್ಯೋನಿಸ್ತತ್ಪತಿಃ ಕಿಂ ನ ತದ್ಗರ್ಭೋಽಪಿ ಪತಿರ್ನ ಕಿಂ ॥೧೦೭॥

ತಸ್ಮಾತ್ಪುತ್ರೋತ್ಪಾದಕಃ ಶಂಕರೋಽತೋ
ಭರ್ತಾ ಸೋಽಯಂ ವಿಶ್ವಭರ್ತಾ ಮಹೇಶಃ ।
ತತ್ಪಾದಾಬ್ಜಾರಾಧನಂ ತದ್ವ್ರತಂ ಸ್ಯಾತ್
ಪಾತಿವ್ರತ್ಯಂ ತೇನ ಸಿದ್ಧಂ ವ್ರತೇನ ॥೧೦೮॥

ಎನ್ನುವರು. ಅದು ಲೌಕಿಕವಾದ ಮಾತು. ಆ ಪತಿಸೇವನೆಯಿಂದ ಮುಕ್ತಿಯು ದೊರಕಲಾರದು. ಏಕೆಂದರೆ ಅಂತಹ ಪತಿಯು ತಿಳಿವಳಿಕೆಯಿಲ್ಲದ ಸಾಮಾನ್ಯ ಮನುಷ್ಯನೆನಿಸುವನು. ||೧೦೩-೧೦೪||

ಪಾಮರನೆನಿಸಿದ ನರನ ಸೇವೆಯಿಂದ ಎಂದಿಗೂ ಮುಕ್ತಿಯು ದೊರಕಲಾರದು. ಆ ಪತಿಯು ಕೇವಲ ಪುತ್ರೋತ್ಪತ್ತಿಗೆ ಸ್ಥೂಲಕಾರಣನೆನಿಸುವನು. ಆ ಶಕ್ತಿಯೂ ಸಹ ಅವನಲ್ಲಿ ಸಂಪೂರ್ಣವಾಗಿದೆಯೆಂದು ಹೇಳಲು ಸಾಧ್ಯವಿಲ್ಲ. ಅದೂ ಈಶ್ವರಾನುಗ್ರಹದಿಂದಲೇ ಲಭಿಸಬೇಕು. ಅದರಿಂದಲೇ ಲೋಕಪತಿಯೆನಿಸಿದವನು ಶಂಕರನು ಎಂದು ಎಲ್ಲರೂ ಹೇಳುವರು. ||೧೦೫-೧೦೬||

ಪುತ್ರೋತ್ಪಾದಕಸಾಮಾನ್ಯನಾದ ಆ ನರನನ್ನೇ ಪತಿಯೆನ್ನುವುದಾದರೆ, ಪುತ್ರೋತ್ಪತ್ತಿಗೆ ಇತರ ಸಾಧಕಗಳೆನಿಸಿದ, ಸ್ತ್ರೀಯೋನಿ, ಗರ್ಭ ಇವುಗಳಿಗೂ ಪತಿಯೆಂಬ ಹೆಸರು ಸಲ್ಲಬಾರದೇಕೆ? ಆದ್ದರಿಂದ ಸ್ತ್ರೀಯರಿಗೆ ಪುತ್ರೋತ್ಪಾದಕನಾದ ಪತಿಯೆಂದರೆ ಶಂಕರನೊಬ್ಬನೇ. ಅವನೇ ಲೋಕೈಕಪತಿ. ಅವನ ಪಾದಪದ್ಮಾರಾಧನೆಯೇ ನಿಜವಾದ ವ್ರತ. ಅದನ್ನು ಅನುಷ್ಠಾನದಿಂದ ಸಾಧಿಸಿಕೊಳ್ಳುವುದೇ ಪಾತಿವ್ರತ್ಯವೆಂದು ತಿಳಿಯಬೇಕು. ||೧೦೭-೧೦೮||

ಇದಂ ತತ್ತ್ವಮವಿಜ್ಞಾಯ ಯಾ ನಾರೀ ಭವಸೇವನಂ ।
ಕರೋತಿ ಪತಿಬುಧ್ಯಾ ಸಾ ನಾಶ್ನುತೇ ಸುಖಮಕ್ಷಯಂ ॥೧೦೯॥

ಅಕ್ಷಯಸ್ಯ ಸುಖಸ್ಯಾಶು ದಾತಾ ಶಂಕರ ಏವ ಸಃ ।
ತಸ್ಮಾತ್ತದರ್ಚನಂ ಕಾರ್ಯಂ ತದ್ವ್ರತಂ ಪರಮಂ ವ್ರತಂ ॥೧೧೦॥

ತೇನೈವ ಹಿ ವ್ರತೇನಾಶು ಸಂಸಾರವಿಷಶೋಷಣಂ ।
ಅತಸ್ತದ್ವ್ರತಮುತ್ಕೃಷ್ಟಂ ನಾರೀಣಾಂ ಚ ವಿಶೇಷತಃ ॥೧೧೧॥

ಇತಿ ತದ್ವಚನಂ ಶ್ರುತ್ವಾ ರಾಜದಾರಾಃ ಪರಂ ಮುನಿಂ ।
ಪೂಜಯಾಮಾಸುರರ್ಘ್ಯಾದ್ಯೈಸ್ಸುವರ್ಣೈರಪಿ ಕೋಟಿಶಃ ॥೧೧೨॥

ತತಃ ಪರಂ ಮುನಿಸ್ಸೋಽಪಿ ಪತಿವ್ರತಪರಾಯಣಾನ್ ।
ದಾರಾನ್ ದೃಷ್ಟ್ವಾ ಪ್ರಹೃಷ್ಟಸ್ಸನ್ ಪ್ರಯಯಾವಾಶ್ರಮಂ ಸ್ವಕಂ ॥೧೧೩॥

ತತಃ ಪರಂ ಸ ರಾಜಾಪಿ ತಂ ಗತಂ ಮುನಿಪುಂಗವಂ ।
ಶ್ರುತ್ವಾ ಸಮಾಗತೋ ಗೇಹಂ ದಾರಾನಾಹ ಸ ಶಾಂಕರಾನ್ ॥೧೧೪॥

ಈ ರೀತಿಯಾಗಿ ತಿಳಿದು ಯಾವ ಹೆಂಗಸು ಸಾಕ್ಷಾತ್ಪರಶಿವನನ್ನೇ ಪತಿಬುದ್ಧಿಯಿಂದ ಅರ್ಚಿಸುತ್ತಾ ಶಿವಾನುಗ್ರಹಕ್ಕೆ ಪಾತ್ರಳಾಗುವಳೋ, ಆಕೆಯೇ ಶಾಶ್ವತವಾದ ಮುಕ್ತಿಯನ್ನು ಸಂಪಾದಿಸುವಳು. ಅಂತೂ ನಾಶರಹಿತವಾದ ನಿತ್ಯಸುಖವನ್ನು ದಯಪಾಲಿಸುವವನು ಶಂಕರನೊಬ್ಬನೇ. ಅವನ ಅರ್ಚನೆಯೇ ನಿಜವಾದ ಶಾಂಕರ ವ್ರತ, ಎಂದು ಭಾವಿಸಬೇಕು. ||೧೦೯-೧೧೦||

ಆ ಶಿವವ್ರತವನ್ನೇ ಸಂಸಾರವೆಂಬ ವಿಷವನ್ನು ಪರಿಹರಿಸುವ ಶಕ್ತಿಯುಳ್ಳದ್ದೆಂದು ಹೇಳುವರು. ಆದರಿಂದಲೇ ಸ್ತ್ರೀಯರಿಗೆ ಅದು ಉತ್ತಮವಾದ ವ್ರತವೆಂದು ನಿರೂಪಿಸಲ್ಪಟ್ಟಿದೆ” ಎಂದು ಹೇಳಿದ ಮುದ್ಗಲಮಹರ್ಷಿಯ ಮಾತುಗಳನ್ನು ಕೇಳಿ ಆ ರಾಜಪತ್ನಿಯರು ಶಿವಭಕ್ತಿಭರಿತರಾಗಿ, ಆ ತತ್ತ್ವವನ್ನುಪದೇಶಿಸಿದ ಮಹರ್ಷಿಗೆ ಕೋಟಿಸಂಖ್ಯೆಯಲ್ಲಿ ಸುವರ್ಣಾದಿಗಳನ್ನು ಕೊಟ್ಟು ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿದರು. ||೧೧೧-೧೧೨||

ಆ ಋಷಿಯಾದರೋ, ಪತಿವ್ರತಾಧರ್ಮದಲ್ಲಿ ನಿರತರಾಗಿದ್ದ ರಾಜಪತ್ನಿಯರನ್ನು ನೋಡಿ ಹರ್ಷಚಿತ್ತನಾಗಿ ತನ್ನ ಆಶ್ರಮವನ್ನು ಕುರಿತು ತೆರಳಿದನು. ಇತ್ತ

|| ರಾಜೋವಾಚ ||

ಕಿಮೇತೇನ ಕೃತಂ ಪ್ರೀತ್ಯಾ ಮುನಿನಾ ಪರಿಭಾಷಣಂ ।
ತಸ್ಮೈ ಕಿಮರ್ಥಂ ರತ್ನಾನಿ ದತ್ತಾನಿ ವಿವಿಧಾನ್ಯಪಿ ॥೧೧೫॥

ಏತಾದೃಶಾಸ್ಸಮಾಯಾಂತಿ ಬಹವೋಽಪಿ ವನಾತ್ಪರಂ ।
ತೇಭ್ಯಃ ಕಿಂ ರತ್ನಕೋಶೋಽಪಿ ದೇಯ ಏವ ನಿಜೇಚ್ಛಯಾ ॥೧೧೬॥

ಗತಸ್ಸುರತಕಾಲೋಽಪಿ ಭವದ್ಭಿರ್ಲಿಂಗಪೂಜಯಾ ।
ಕಾಲೋ ವಿನೀಯತೇ ಸರ್ವಃ ಕಿಮೇವಮುಚಿತಂ ಪ್ರಿಯಾಃ ॥೧೧೭॥

ಇತಿ ತದ್ವಚನಂ ಶ್ರುತ್ವಾ ತೇ ಸರ್ವೇಽಪ್ಯೇಕದಾ ಪರಂ ।
ದಾರಾಸ್ತಮೂಚುರ್ಧಿಗ್ಧಿಕ್ತೇ ಜನ್ಮ ಶರ್ವಪರಾಙ್ಮುಖಂ ॥೧೧೮॥

ಮಧ್ಯಾಹ್ನಸಮಯಸ್ಸೋಽಯಮಧುನಾ ಶಿವಪೂಜನಂ ।
ಕರ್ತವ್ಯಮತಿಯತ್ನೇನ ಕಿಂ ತೇನ ಸುರತೇನ ನಃ ॥೧೧೯॥

ರಾಜನಾದರೋ ಆ ಋಷಿಯು ತನ್ನ ಆಶ್ರಮಕ್ಕೆ ತೆರಳಿದ್ದನ್ನು ಕೇಳಿ ಶಿವಪೂಜಾಸಕ್ತ ರಾಗಿದ್ದ ಪತ್ನಿಯರ ಸಮೀಪಕ್ಕೆ ಬಂದನು. ||೧೧೩-೧೧೪||

ಒಡನೆಯೇ ಆತನು ಹೀಗೆ ಆಕ್ಷೇಪಿಸಿದನು. "ಎಲೌ ಪತ್ನಿಯರೇ, ಈ ಋಷಿ ಯೊಡನೆ ಇಲ್ಲಿನವರೆಗೂ ನೀವು ಪ್ರೀತಿಯಿಂದ ಆಡಿದ ಮಾತುಗಳಾವುವು? ಏತ ಕ್ಕಾಗಿ ಅವನಿಗೆ ಅಂತಹ ಅಮೂಲ್ಯವಾದ ರತ್ನಗಳನ್ನು ಕೊಟ್ಟಿರಿ? ಅರಣ್ಯದಿಂದ ಇಂತಹ ಮುನಿಗಳು ಎಷ್ಟೋ ಜನರು ಬರುವರು. ಅವರಿಗೆಲ್ಲಾ ನಿಮ್ಮ ಮನ ಬಂದಷ್ಟು ರತ್ನಾದಿಗಳನ್ನು ಕೊಡುವುದು ಸಾಧ್ಯವೇ? ||೧೧೫-೧೧೬||

ನಿಮ್ಮ ಈ ಶಿವಾರ್ಚನೆಯ ದೆಸೆಯಿಂದ ನನಗೆ ಸಂಭೋಗಕಾಲವೂ ಕಳೆದು ಹೋಯಿತು. ನಿಮ್ಮ ಪೂಜಾಸಂಭ್ರಮದಲ್ಲಿ ನನ್ನ ಸುಖಕಾಲವನ್ನೆಲ್ಲಾ ಕಳೆಸು ವುದು ಯಾವ ನ್ಯಾಯ" ಎಂದು ರಾಜನು ತನ್ನ ಪತ್ನಿಯರನ್ನು ಆಕ್ಷೇಪಿಸಲು ಆಗ ಆ ಪತ್ನಿಯರೆಲ್ಲಾ ಒಟ್ಟಾಗಿ, ಶಿವಪೂಜಾಪರಾಙ್ಮುಖನಾದ ಆ ರಾಜನ ಜನ್ಮವನ್ನು ಬಹುವಾಗಿ ನಿಂದಿಸಿದರು. ಮತ್ತೂ ಹೀಗೆಂದರು. ||೧೧೭-೧೧೮||

ಇದು ಶಿವಪೂಜೆಗೆ ಯೋಗ್ಯವಾದ ಮಧ್ಯಾಹ್ನಕಾಲ. ಈಕಾಲದಲ್ಲಿ ನಾವು ಸಂಭೋಗಕ್ಕೆ ಇಷ್ಟಪಡಲಾರೆವು. ರಾಜನೇ, ಇಂತಹ ಸಮಯದಲ್ಲಿ ವಿವೇಕವಿಲ್ಲದ

ಪತಂಗೋಽಪಿ ನ ಮಧ್ಯಾಹ್ನೇ ಕರೋತಿ ಸುರತಂ ಖಲು ।
ತತೋಽಪ್ಯಧಮ ಏವ ತ್ವಂ ಕೋಽವಾ ತತ್ರ ರಸಸ್ತವ ॥೧೨೦॥

ಗಚ್ಛ ಗಚ್ಛ ಪತಂಗತ್ವಂ ಪ್ರಾಪ್ಯ ಕ್ವಾಪಿ ಯಥೇಚ್ಛಯಾ ।
ಇತಿ ಶಪ್ತೋ ನೃಪೋ ದಾರೈಃ ಪತಂಗತ್ವಮುಪಾಗತಃ ॥೧೨೧॥

ಸ ಸಂಚರತಿ ಸರ್ವತ್ರ ಲೋಕಾನಾಂ ಮೋಹಮಾವಹನ್ ।
ಸಾಯಂಕಾಲಭ್ರಮೋ ವೃತ್ತಸ್ತದೀಯಛಾಯಯಾ ತವ ॥೧೨೨॥

ಅಸ್ಮಿನ್ ಮಧ್ಯಾಹ್ನಸಮಯೇ ಶಿವಪೂಜಾಂ ಪತಿವ್ರತಾ ।
ಕರೋತ್ಯೇಷಾ ಕ್ವತೇ ಶಾಪೋ ಲಗತ್ಯಸ್ಯಾಂ ವಿಶೇಷತಃ ॥೧೨೩॥

ಪತಿವ್ರತಾಂ ವ್ರತೋದ್ಯುಕ್ತಾಂ ಯದಿ ಶಪ್ತುಂಸಮುದ್ಯತಃ ।
ತದಾ ತನ್ವೈವ ಶಾಪೋಽಸೌ ವೃಥಾ ಭವತಿ ಪುತ್ರಕ ॥೧೨೪॥

ಪತಂಗ ಪಕ್ಷಿಯೂ ಕೂಡ ಮೈಥುನಾದಿಗಳನ್ನು ಆಚರಿಸುವುದಿಲ್ಲ. ಅದಕ್ಕಿಂತಲೂ ನೀನು ಕೀಳಾದವನೇ? ಆ ಸಂಭೋಗದಲ್ಲಿ ನಿನಗೆ ದೊರಕುವ ಸುಖವೆಂತಹುದು? ||೧೧೯-೧೨೦||

ಎಂದು ಅವರು ಪತಿಯನ್ನು ದೂಷಿಸಿ, "ನೀನು ಈಗಲೇ ಪತಂಗ (ಮಿಡತೆ) ಪಕ್ಷಿಯಾಗಿ ಜನ್ಮತಾಳು" ಎಂದು ಶಪಿಸಿದರು. ಒಡನೆಯೇ ಆ ರಾಜನು ಶಾಪ ದಂತೆ ಮಿಡತೆಯಾಗಿ ಜನಿಸಿ ಲೋಕದಲ್ಲೆಲ್ಲಾ ಸಂಚರಿಸುತ್ತಿರುವನು. ಆ ಸಂಚಾರ ಕಾಲದಲ್ಲಿಯೇ ಅದು ಸೂರ್ಯನಿಗೆ ಮರೆಯಾಗಿ ಬಂದುದರಿಂದ ನಿನಗೆ ಸಾಯಂಕಾಲದ ಭ್ರಾಂತಿಬಂದಿದೆ ಎಂದು ಸತ್ಯಮೂರ್ತಿಯು ತನ್ನ ಮಗನಿಗೆ ಹಿಂದಿನ ಸಮಾಚಾರ ವನ್ನು ತಿಳಿಸಿದನು. ||೧೨೧-೧೨೨||

ಈ ಮಧ್ಯಾಹ್ನಕಾಲದಲ್ಲಿ ಶಿವಪೂಜೆಯನ್ನು ಆಚರಿಸುವವಳನ್ನು ಪತಿವ್ರತೆ ಯೆಂದು ತಿಳಿ. ಅದರಲ್ಲೂ ನಿನ್ನ ಪತ್ನಿಯಂತೂ ದೃಢಮನಸ್ಸಿನಿಂದ ಈಶ್ವರಾರಾಧನೆ ಮಾಡುತ್ತಿರುವಾಗ ಅವಳಿಗೆ ನಿನ್ನ ಶಾಪವು ತಟ್ಟುವುದೆಂತು? ಒಂದು ವೇಳೆ ನೀನು ಬಲಾತ್ಕಾರವಾಗಿ ಶಾಪಕೊಡುವುದಾದರೆ ಆ ಶಾಪದಿಂದ ಅವಳಿಗೇನೂ ಹಾನಿಯಾಗದೆ ಅದು ನಿನ್ನನ್ನೇ ಹಿಂಸಿಸುವುದು. ||೧೨೩-೧೨೪||

ಪತಿವ್ರತಾನಾಂ ವ್ರತಸಾಧನಾನಿ
ಸಂಪಾದನೀಯಾನಿ ಮನೋಹರಾಣಿ ।
ದೇಯಾನಿ ತೈರೇವ ಪತಿಃ ಪತೀನಾಂ
ಪ್ರೀತೋ ಭವೇದ್ವಿಶ್ವಪತಿಃ ಪ್ರಭೂತಃ ॥೧೨೫॥

ಅಹೋ ನ ಜಾನಾತಿ ವಿಮೂಢಚಿತ್ತಃ
ಪತಿಂ ಪತೀನಾಂ ಪರಮೇಶ್ವರಂ ತಂ ।
ಅಜ್ಞಾತವೇದಾಂತವಿಚಾರರಾಶಿಃ
ಸ ಪಾಪರಾಶಿಃ ಖಲು ದುಃಖರಾಶಿಃ ॥೧೨೬॥

ಅಪತಿಂ ಚ ಪತಿತ್ವೇನ ಮತ್ವಾ ಕಾಶ್ಚಿದ್ಭಜಂತಿ ತಂ ।
ನ ತೇನ ಸೌಖ್ಯಮಾರ್ತಾಪಿ ಪರಲೋಕೇ ವಿಶೇಷತಃ ॥೧೨೭॥

ಭೂಲೋಕೇಪಿ ಸುಖಾನಿ ತಾವದನಿಶಂ ದಾಸ್ಯತ್ಯುಮಾವಲ್ಲಭೋ ।
ಭಕ್ತ್ಯಾ ಪೂಜಿತ ಏವ ಭೂತಿನಿಟಿಲೈರ್ಭಾವ್ಯೈಃ ಪರಂ ಭಾವಿತಃ ।
ಭರ್ಗಂ ಭಾಗ್ಯದಮಾಹುರಂತಕರಿಪುರ್ಮೋಕ್ಷಪ್ರದಾತಾ ತತಃ
ಸರ್ವೇಷಾಂ ಪತಿರಿತ್ಯಮೈಮಿ ಸ ಪತಿಃ ಸರ್ವಜ್ಞಚೂಡಾಮಣಿಃ ॥೧೨೮॥

ಪತಿಯಾದವನು ತನ್ನ ಪತಿವ್ರತೆಯೆನಿಸಿದ ಪತ್ನಿಯು ಆಚರಿಸುವ ಮನೋಹರವಾದ ಶೈವವ್ರತಗಳಿಗೆ ಬೇಕಾದ ಸಾಧನಗಳನ್ನು ಒದಗಿಸಿಕೊಡಬೇಕು. ಅದರಿಂದಲೇ ವಿಶ್ವಪತಿಯೆನಿಸಿದ ಮಹಾದೇವನು ತೃಪ್ತಿಹೊಂದುವನು. ಇದು ನಿಜ. ॥೧೨೫॥

ವೇದಾಂತಗಳ ನಿಜತತ್ತ್ವವನ್ನರಿಯದವನು, ಅಜ್ಞಾನಿಯೆನಿಸಿ ಲೋಕೈಕನಾಥನಾದ ಪರಶಿವನ ಸ್ವರೂಪವನ್ನರಿಯದೆ ಪಾಪಕಾರ್ಯಾಸಕ್ತನಾಗಿ ದುಃಖರಾಶಿಯನ್ನು ಅನುಭವಿಸುವನು. ॥೧೨೬॥

ಅಂತಹವನನ್ನು ಪತಿಯೆಂದು ಭಾವಿಸಿ ಹೆಂಡತಿಯು ಬಹಳವಾಗಿ ಸೇವಿಸುವಳು. ಆದರಿಂದ ಆಕೆಗೆ ಪರಲೋಕಸುಖವು ಅಷ್ಟಾಗಿ ಲಭಿಸಲಾರದು. ಏಕೆಂದರೆ ನಿಜವಾದ ಪತಿಯು ಆತನಲ್ಲ. ಈಶ್ವರನೇ. ॥೧೨೭॥

ಈಶ್ವರನು, ತನ್ನನ್ನು ಭಕ್ತಿಯಿಂದ ವಿಭೂತಿರುದ್ರಾಕ್ಷಿಗಳನ್ನು ಧರಿಸಿ ಪೂಜಿಸಿದವರಿಗೆ ಐಹಿಕದ ಸಕಲ ಭೋಗಭಾಗ್ಯಗಳನ್ನೂ ಅನುಗ್ರಹಿಸಿ, ಜ್ಞಾನಪ್ರದಾತ

ನಿಮಿತ್ತಸಾಮಾನ್ಯಮಿದಂ ವಪುಸ್ತೇ
ಭರ್ತಾ ಪರಂ ಶಂಕರ ಏವ ಸತ್ಯಂ ।
ತ್ವತ್ತಸ್ಸುಖಾಂಶೋಽಪಿ ನ ತಾವದಸ್ಯಾಃ
ಸಂಭಾವಿತಸ್ಸತ್ಯಮಿದಂ ವದಾಮಿ ॥೧೨೯॥

ಏವಂ ಸತ್ಯಪಿ ನಾರೀಣಾಮಸ್ವಾತಂತ್ರ್ಯಂ ಪ್ರಕಲ್ಪಿತಂ
ಏಕಾಧೀನತಯಾ ಸ್ಥೇಯಮಿತೀಶೇನ ಮಹಾತ್ಮನಾ ॥೧೩೦॥

ತದಪ್ಯಲೌಕಿಕಂ ನೈವ ಕಿಂತು ಲೌಕಿಕಮಿತ್ಯತಃ ।
ತೂಷ್ಣೀಂ ವಸ ನ ಶಾಪಸ್ತೇ ತಸ್ಯಾಂ ಲಗತಿ ಸರ್ವಥಾ ॥೧೩೧॥

ವಿಶ್ವೇಶ್ವರಾಜ್ಞಾವಿರಹೇ ಕಥಂ ವಾ
ಪ್ರವೃತ್ತಿಲೇಶೋಽಪಿ ತವಾಧುನಾ ಸ್ಯಾತ್ ।

ನಾಗಿ ತನ್ಮೂಲಕ ಮೋಕ್ಷವನ್ನು ಸಹ ಅನುಗ್ರಹಿಸುವನು. ಸರ್ವಜ್ಞಚೂಡಾಮಣಿ ಯೆನಿಸಿದ ಆ ಪರಶಿವನೇ ಲೋಕೈಕಪತಿಯು ಎಂದು ಮೊದಲು ಭಾವಿಸಬೇಕು. ||೧೨೮||

ಪುತ್ರನೇ, ನಿನ್ನ ಶರೀರವು ನಿನ್ನ ಪತ್ನಿಗೆ ನಿಮಿತ್ತಮಾತ್ರವಾದ ಪತಿಯೆನಿಸಿದೆ. ನಿಜವಾದ ಸೌಖ್ಯವನ್ನು ಅನುಗ್ರಹಿಸುವವನು ಪರಶಿವನೇ. ನಿನ್ನಿಂದ ಯಾವ ವಿಧವಾದ ಸೌಖ್ಯವೂ ನಿನ್ನ ಪತ್ನಿಗೆ ಲಭಿಸಲಾರದು. ಇದನ್ನು ನಿಜವೆಂದು ನಂಬು. ||೧೨೯||

ಇಷ್ಟಾದರೂ "ಸ್ತ್ರೀಯರು ಸ್ವತಂತ್ರರಾಗಿರಕೂಡದು. ಯಾವಾಗಲೂ ಅವರು ಒಬ್ಬನ ಅಧೀನದಲ್ಲಿಯೇ ಇರಬೇಕು" ಎಂಬ ಭಾವನೆಯಿಂದಲೇ ಪರಶಿವನು ಲೌಕಿಕವಾಗಿ ಪತಿಯನ್ನೂ, ಅವನಲ್ಲಿ ಭಕ್ತಿಯಿಡಬೇಕೆಂಬ ನಿಯಮವನ್ನೂ ಸ್ತ್ರೀಯರಿಗೆ ಕಲ್ಪಿಸಿರುವನು. ಆದ್ದರಿಂದ ಮಗನೇ, ನೀನು ಯಾವ ವಿಧವಾದ ಶಾಪಾದಿಗಳಿಂದಲೂ ಅವಳನ್ನು ಶಿಕ್ಷಿಸದೆ ಉದಾಸೀನದಿಂದ ಅವಳೊಡನೆ ವಾಸ ಮಾಡು. ಅವಳಿಗೆ ನೀನು ಯಾವ ಶಿಕ್ಷೆಯನ್ನೂ ವಿಧಿಸಲಾರೆ. ||೧೩೦-೧೩೧||

ಈಶ್ವರಾಜ್ಞೆಯೇ ಹಾಗಿರುವಾಗ ಅದನ್ನು ಮೀರಿದರೆ ನೀನು ಯಾವ ಕಾರ್ಯದಲ್ಲಿಯೂ ಪ್ರವೃತ್ತಿಯನ್ನು ಹೊಂದಲಾರೆ. ಆದ್ದರಿಂದ ಈಗಲಾದರೂ ನಿನ್ನ

ತತಸ್ತ್ವಮೀಶಂ ಶರಣಂ ಪ್ರಯಾಹಿ
ವಿಹಾಯ ಮೋಹಂ ಮುಹುರಾದರೇಣ ॥೧೩೨॥

ಶಿವವ್ರತಘ್ನೋ ನರಕಂ ಪ್ರಯಾತಿ
ತಯಾ ಚ ಸಾ ತದ್ವ್ರತಮಾತ್ರನಿಷ್ಠಾ ।
ಶ್ರೇಷ್ಠೇತಿ ಮತ್ವಾ ವಿಹಿತಂ ಚ ಕೃತ್ವಾ
ವಸಾಧುನಾ ಶಂಕರಮಂದಿರೇಸ್ಮಿನ್ ॥೧೩೩॥

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ ।
ವೇದಡಿಂಡೀರವಾಕಾರಂ ಕುಮಾರ ಶೃಣು ಸಾದರಂ ॥೧೩೪॥

ಪುರಾ ನಿಷಧದೇಶೇಷು ಕುಂಡಿನಂ ನಾಮ ಪತ್ತನಂ ।
ತದ್ವಿಪ್ರಜನಸಂಕೀರ್ಣಂ ರಾಜಮಂಡಲಮಂಡಿತಂ ॥೧೩೫॥

ನಿಷಧೇಶಸ್ಯ ಯೇ ದಾರಾಸ್ತೇಷು ಕೇಚನ ಶಾಂಕರಾಃ ।
ತೇ ಶಂಕರಾರಾಧನೇನ ನಯಂತಿ ಸಮಯಂ ಮುಹುಃ ॥೧೩೬॥

ಯಾವದೇವ ಸ್ವಭೋಗಾರ್ಹಂ ವಸನಾನ್ನಾದಿಕಂ ನವಂ ।
ತತ್ಸರ್ವಮೀಶಪೂಜಾರ್ಥಂ ಕುರ್ವಂತ್ಯತ್ಯಂತಯತ್ನತಃ ॥೧೩೭॥

ತಪ್ಪನ್ನು ತಿದ್ದಿಕೊಂಡು, ಆ ಜಗದೀಶ್ವರನನ್ನೇ ಮೊರೆಹೊಗು. ನೀನು ಧನ್ಯನೆನಿಸುವೆ. ಮೋಹವನ್ನು ಮಾತ್ರ ಬಿಡು. ॥೧೩೨॥

ಶಿವಾರ್ಚನೆಗೆ ಅಡ್ಡಿಮಾಡಿದವರು ನರಕಭಾಗಿಗಳಾಗುವರು. ಈಗ ನಿನ್ನ ಪತ್ನಿಯು ಆ ವ್ರತದಲ್ಲಿಯೇ ನೆಟ್ಟಮನಸ್ಸುಳ್ಳವಳಾಗಿರುವುದರಿಂದ, ಅವಳನ್ನೇ ನೀನು ಶ್ರೇಷ್ಠಳೆಂದು ತಿಳಿದು, ಅವಳ ನಿಯಮವನ್ನು ಪಾಲಿಸುತ್ತಾ, ಶಿವಾಲಯದಲ್ಲಿಯೇ ವಾಸಮಾಡುವವನಾಗು. ॥೧೩೩॥

ಇದಕ್ಕೆ ಸಂಬಂಧಿಸಿದ ಪೂರ್ವದ ಇತಿಹಾಸವೊಂದನ್ನು ನಿನಗೆ ಹೇಳುವೆನು ಕೇಳು. ಅದು ವೇದಾರ್ಥವನ್ನು ಜಗತ್ತಿನಲ್ಲೆಲ್ಲಾ ಸಾರತಕ್ಕದ್ದಾಗಿರುವುದು. " ಹಿಂದೆ ನಿಷಧದೇಶದಲ್ಲಿ ಕುಂಡಿನವೆಂಬ ನಗರವೊಂದಿದ್ದಿತು. ಅದು ಅನೇಕ ಜ್ಞಾನಿಗಳ ಸಮೂಹದಿಂದಲೂ ರಾಜರ ಗುಂಪುಗಳಿಂದಲೂ ಪ್ರಕಾಶಿಸುತ್ತಿದ್ದಿತು. ॥೧೩೪-೧೩೫॥

ಆ ನಿಷಧರಾಜನಿಗೆ ಬಹುಮಂದಿ ಪತ್ನಿಯರಿದ್ದರು. ಅವರಲ್ಲಿ ಕೆಲವರು

ತದರ್ಪಿತಂ ಮಹೇಶಾಯ ತದ್ಭುಕ್ತ್ವಾತ್ಕೇವಲಂ ಸುಖಂ ।
ಸಂಪ್ರಾಪ್ಯ ಕಾಲನಯನಂ ಕುರ್ವಂತಿ ಶಿವಪೂಜಯಾ ॥೧೩೮॥

ಸುರತೇ ನ ರತಿಸ್ತೇಷಾಂ ಯಥಾ ಶಂಕರಪೂಜನೇ ।
ಭೋಗಾಂತರೇಪಿ ನ ರತಿಸ್ತದ್ಗತಿಃ ಶಿವಪೂಜನೇ ॥೧೩೯॥

ಪುಷ್ಪಾಣ್ಯಸಾರಾಣ್ಯಪಿ ಚಂದನಾನಿ
ಸಮರ್ಪಿತಾನ್ಯೇವ ಮಹೇಶ್ವರಾಯ ।
ಗೃಹ್ಣಂತಿ ನಿರ್ಮಾಲ್ಯಧಿಯಾ ಗೃಹೀತ್ವಾ
ಧೃತ್ವಾ ಶಿರಸ್ಯೇವ ವಸಂತಿ ನಿತ್ಯಂ ॥೧೪೦॥

ತೇಷಾಂ ನ ಕಾರ್ಯಾಂತರಮಸ್ತಿ ಕಿಂಚಿತ್
ಪ್ರಾತಸ್ಸಮಾರಭ್ಯ ಶಿವಾರ್ಚನೇನ ।
ಕಾಲೋ ವಿನೀತಃ ಸ ನಿಶಾವಸಾನಂ
ಯಾವತ್ಪುನಃ ಶಂಕರಪೂಜನಂ ಸ್ಯಾತ್ ॥೧೪೧॥

ಶಿವಪೂಜಾಭಿಮಾನಿನಿಯರು. ಅಂತಹವರು ತಮ್ಮ ಭೋಗಸಾಧನವಾದ ವಸ್ತ್ರಾದ್ಯಾಭರಣಗಳೆಲ್ಲವನ್ನೂ ಈಶ್ವರಪೂಜೆಗಾಗಿ ಸಮರ್ಪಿಸುತ್ತಿದ್ದರು. ॥೧೩೬-೧೩೭॥

ತಮ್ಮ ಆಹಾರವನ್ನೇ ಶಿವನ ನೈವೇದ್ಯಕ್ಕಾಗಿ ಸಮರ್ಪಿಸುತ್ತಿದ್ದರು. ಶಂಕರಾರಾಧನೆಗಾಗಿ ಎಷ್ಟು ತವಕಪಡುತ್ತಿದ್ದರೋ, ಅಷ್ಟು ಅಭಿಲಾಷೆಯು ಪತಿಸಂಭೋಗದಲ್ಲಾಗಲಿ, ಇತರ ಭೋಗಾನುಭವದಲ್ಲಾಗಲಿ ಇರಲಿಲ್ಲ. ಹಾಗೆಯೇ ಅವರು ಕಾಲಕಳೆಯುತ್ತಿದ್ದರು. ॥೧೩೮-೧೩೯॥

ನಾನಾವಿಧವಾದ ಪುಷ್ಪಗಳನ್ನೂ, ದಿವ್ಯಗಂಧಗಳನ್ನೂ ಮೊದಲು ಶಂಕರನಿಗೆ ಅರ್ಪಿಸುತ್ತಿದ್ದರು. ಅನಂತರ ಅದನ್ನೇ ಪ್ರಸಾದರೂಪದಲ್ಲಿ ಸ್ವೀಕರಿಸಿ, ತಮ್ಮ ಶಿರಸ್ಸಿನಲ್ಲಿಟ್ಟು ಸಂತೋಷಪಡುತ್ತಿದ್ದರು. ॥೧೪೦॥

ಪ್ರಾತಃಕಾಲದಿಂದ ಸಾಯಂಕಾಲದವರೆಗೂ ಮತ್ತಾವ ಕಾರ್ಯಗಳಿಗೂ ಪ್ರಯತ್ನಿಸದೆ ಅವಿಚ್ಛಿನ್ನವಾಗಿ ಶಿವಪೂಜಾಸಕ್ತರಾಗಿರುವರು. ರಾತ್ರಿಯನ್ನು ಹೇಗೋ ಕಳೆದು ಮತ್ತೆ ಪ್ರಾತಃಕಾಲದಲ್ಲಿಯೇ ಶಿವಪೂಜಾರಂಭಮಾಡುವರು. ॥೧೪೧॥

ಏವಂ ಶಿವಾಚಾರರತಾನ್ವಿಲೋಕ್ಯ
ದಾರಾನ್ ಸ ರಾಜಾಪ್ಯತಿವಿಸ್ಮಯೇನ ।
ತಚ್ಚಿತ್ತವೃತ್ತ್ಯಾ ಪರಿವರ್ತಮಾನೋ
ದದೌ ಸ ಸರ್ವಸ್ವಮುದಾರಬುದ್ಧಿಃ ॥೧೪೨॥

ಯದ್ದತ್ತಂ ತೇನ ರಾಜ್ಞಾ ಪ್ರಸೂನಂ
ರತ್ನಂ ದಿವ್ಯಂ ಭೂಷಣಂ ವಾ ದುಕೂಲಂ ।
ತತ್ತದ್ದತ್ವಾ ಶಂಕರಾಯಾತಿಭಕ್ತ್ಯಾ
ದತ್ತಂ ತಾಭಿಶ್ಶಾಂಭವೇಭ್ಯೋ ವಿಶೇಷಾತ್ ॥೧೪೩॥

ತದ್ದತ್ತಾನಿ ವಸೂನಿ ಯಾನಿ ವಿವಿಧಾನ್ಯಾಸಾದ್ಯತೇ ಶಾಂಕರಾಃ
ಸರ್ವೇ ಯಾಂತಿ ಗೃಹಾದ್ಯದಾ ಸ ನೃಪತಿರ್ದೃಷ್ಟ್ವಾತಿಹೃಷ್ಟಸ್ತದಾ ।
ಮದ್ಭಾಗ್ಯಂ ತದಿದಂ ಮಹತ್ತರಮಿತಿ ಜ್ಞಾತ್ವಾ ತದಾತ್ಯಾದರಾ
ದ್ದಾರೇಭ್ಯಃ ಸ ವಸೂನಿ ಶಂಕರಪದಾಂಭೋಜಾರ್ಚಕೇಭ್ಯಃ ಪರಂ॥೧೪೪॥

ಹೀಗೆ ಸರ್ವದಾ ಈಶ್ವರಾರಾಧನೆಗೆ ತೊಡಗಿದ್ದ ತನ್ನ ಪತ್ನಿಯರನ್ನು ನೋಡಿ ರಾಜನು ತಾನೂ ಅದರಿಂದ ಚಿತ್ತಶುದ್ಧಿಯನ್ನು ಪಡೆದು, ಮತ್ತೆ ಅವರ ಪೂಜೆಗೆ ಅನೇಕ ಸಾಧನಗಳನ್ನು ಒದಗಿಸಿಕೊಡುತ್ತಿದ್ದನು. ॥೧೪೨॥

ರಾಜನು ಪತ್ನಿಯರ ಮೇಲಿನ ಅಭಿಮಾನದಿಂದ ದಿವ್ಯವಾದ ಪುಷ್ಪ, ರತ್ನ, ಭೂಷಣಾದಿಗಳು ಈ ಯಾವುದನ್ನು ಕೊಟ್ಟರೂ ಅವರು ಅವುಗಳನ್ನು ಶಂಕರನಿಗೆ ಸಮರ್ಪಣೆಮಾಡುವರು. ಅನಂತರ ಅದನ್ನು ಈಶ್ವರಸೇವಕರಿಗೆ ದಾನವಾಗಿ ಕೊಡುವರು. ॥೧೪೩॥

ಹಾಗೆ ರಾಜಪತ್ನಿಯರು ದಾನಮಾಡಿದ ವಸ್ತುಗಳನ್ನೆಲ್ಲಾ ಶಿವದೀಕ್ಷಾಬದ್ಧರಾದವರು ಗುಂಪುಗುಂಪಾಗಿ ತೆಗೆದುಕೊಂಡು ಹೋಗುವುದನ್ನು ನೋಡಿ ರಾಜನೂ ಬಹಳವಾಗಿ ಸಂತೋಷಪಟ್ಟನು. ಮತ್ತು ಅತಿಶಯವಾಗಿ ಆನಂದಪಡುತ್ತಾ, ಇನ್ನೂ ಉಳಿದಿದ್ದ ತನ್ನ ಐಶ್ವರ್ಯವನ್ನೆಲ್ಲಾ ಪತ್ನಿಯರ ಮೂಲಕ ಶಿವಪ್ರೀತ್ಯರ್ಥವಾಗಿ ಶಾಂಭವರಿಗೆ ದಾನಮಾಡಿಸಲಾರಂಭಿಸಿದನು. ॥೧೪೪॥

ಅಶಾಂಕರಾಶ್ಚ ತದ್ದಾರಾಃ ಕೇಚಿತ್ತತ್ಸೇವಯಾ ಪರಂ ।
ಸುರತಾದಿಪ್ರದಾನೇನ ನಯಂತಿ ಸಮಯಂ ಮುಹುಃ ॥೧೪೫॥

ಏತತ್ಸುರತದಾನೇನ ಪಾದಸಂವಾಹನಾದಿನಾ ।
ನೇಯಃ ಕಾಲ ಇತಿ ಜ್ಞಾತ್ವಾ ತಿಷ್ಠಂತ್ಯೇವಾತಿಪಾಮರಾಃ ॥೧೪೬॥

ವರ್ಜಯಂತ್ಯಪಿ ತೇ ತಾವದ್ಭರ್ತಾರಂ ಶಂಕರಾರ್ಚಕೈಃ ।
ದಾರೈಃ ಪ್ರೀತಿರ್ನ ಕಾರ್ಯೇತಿ ಧನವ್ಯಯಭಿಯಾ ಪರಂ ॥೧೪೭॥

ಯದ್ದತ್ತಂ ಧನಮಸ್ಮಭ್ಯಂ ತದಾಗಾರೇಷು ತಿಷ್ಠತಿ ।
ಹಾರದಾರಾಧನಂ ಸರ್ವಂ ಹಾರ್ಯೈರ್ನೀತಂ ಪರಂ ನೃಪ ॥೧೪೮॥

ಇತಿ ತದ್ವಚನಂ ಶ್ರುತ್ವಾ ಸ ರಾಜಾ ಪರಿವರ್ಜಯನ್ ।
ತಾಂಸ್ತಥಾ ನೈವ ವಕ್ತವ್ಯಮಿತಿ ತಾವದುದಾರಧೀಃ ॥೧೪೯॥

ಭವತಾಂ ಕಿಂ ಪ್ರಿಯಂ ತಾವದ್ವಕ್ತವ್ಯಂ ನಿರ್ವಿಶೇಷತಃ ।
ತತ್ಸರ್ವಮಪಿ ಕರ್ತವ್ಯಮತ್ರ ನಾಸ್ಯ ವಿಡಂಬನಾ ॥೧೫೦॥

ಶಿವಪೂಜಕರಲ್ಲದ ಕೆಲವು ರಾಜಮಹಿಷಿಯರು ಯಾವ ದೇವತಾರ್ಚನೆಗೂ ಮನಗೊಡದೆ, ಕೇವಲ ಸುರತಸುಖದಿಂದಲೂ, ಪತಿಯ ಪಾದಗಳನ್ನು ಒತ್ತುವುದರಿಂದಲೂ, ಇನ್ನೂ ಇತರ ಭೋಗಾನುಭವಗಳಿಂದಲೂ ಪಾಮರರಂತೆ ಕಾಲಕಳೆಯುತ್ತಿದ್ದರು. ||೧೪೫-೧೪೬||

ಮತ್ತು ಪತಿಯೊಡನೆ, ಶಂಕರಾರ್ಚಕರಂತೆ ಕಾಲಕಳೆಯುವ ಆ ಪತ್ನಿಯರ ಸಹವಾಸವನ್ನು ಬಿಡುವಂತೆಯೂ, ಅವರ ಮೇಲಿನ ಅಭಿಮಾನದಿಂದ ರಾಜನಿಗೆ ದ್ರವ್ಯನಷ್ಟವಾಗುವುದೆಂದೂ ಒತ್ತಿ ಒತ್ತಿ ಹೇಳಿದರು. ತಮಗೆ ಕೊಟ್ಟ ಭೂಷಣಾದಿಗಳು ಮನೆಯಲ್ಲಿಯೇ ಇರುತ್ತವೆಂದೂ, ಆ ಶಂಕರನನ್ನು ಅರ್ಚಿಸುವ ಪತ್ನಿಯರಿಗೆ ಕೊಟ್ಟ ಭೂಷಣಾದಿಗಳನ್ನು ಇತರರು ಹೊತ್ತುಕೊಂಡು ಹೋಗುವರೆಂದೂ ಬೋಧಿಸತೊಡಗಿದರು. ||೧೪೭-೧೪೮||

ಆಗ ಅವರ ಬೋಧನೆಗೆ ರಾಜನು ಮರುಳಾಗದೆ ಹಾಗೆ ನೀವು ಹೇಳಬಾರದೆಂದು ಅವರನ್ನು ತಡೆದು ಹೊರಟುಹೋದನು. ಹೀಗೆಯೇ ರಾಜನು ಅನೇಕದಿನಗಳನ್ನು

ಏವಂ ನೀತಃ ಕಿಯಾನ್ ಕಾಲಸ್ತೇನ ರಾಜ್ಞಾ ಕದಾಚನ ।
ಹಾರದಾರಾನುಪಾಗತ್ಯ ಪ್ರಾಹ ಮಂದಂ ವಿನೋದತಃ ॥೧೫೦॥

॥ ರಾಜೋವಾಚ ॥

ಪ್ರಷ್ಟವ್ಯಮೇಕಮಧುನಾ ಪ್ರಿಯಾಸ್ತಾವದ್ವದಂತು ಮೇ ।
ಸಂಗೋಪನಂ ವಿನಾ ಸರ್ವಂ ಭಕ್ತಿಶ್ಚಾಸ್ತು ಭವತ್ಸು ಮೇ ॥೧೫೧॥

ಯದೇವ ಶಿವಪೂಜಾರ್ಥಂ ಯದಾಸ್ಯಾತ್ಸಮಪೇಕ್ಷಿತಂ ।
ತತ್ಸರ್ವಮಪಿ ದಾತವ್ಯಂ ದುರ್ಲಭಂ ವಾ ಭವೇದ್ಭುವಿ ॥೧೫೨॥

ನ ಸ್ವರ್ಗಲೋಕಪರ್ಯಂತಮಪ್ರಾಪ್ಯಂ ಮಮ ಸರ್ವಥಾ ।
ಯದೇವಾಪೇಕ್ಷಿತಂ ವಸ್ತು ತದತ್ರಾನೀಯ ದೀಯತೇ ॥೧೫೩॥

ವಿನೀತ ಏವ ಕಾಲೋಽಪಿ ಭೂಯಾನ್ ಶಂಕರಪೂಜಯಾ ।
ವಿರತಿರ್ನ ಕದಾಪ್ಯತ್ರ ಭವತಾಮುಪಜಾಯತೇ ॥೧೫೪॥

ದಾರಾಣಾಂ ಪ್ರಾಯಶಃ ಪುತ್ರೇಷ್ವಪೇಕ್ಷಾ ಭವತೀತ್ಯಪಿ ।
ಶ್ರೂಯತೇ ಬಹುಧಾ ಸಾ ಕಿಂ ಭವತಾಂ ನೋಪಜಾಯತೇ ॥೧೫೫॥

ಕಳೆದು ಒಂದುಸಾರಿ ಶಿವಪೂಜಕರಾಗಿದ್ದ ಪತ್ನಿಯರ ಸಮೀಪಕ್ಕೆ ಬಂದು ಮುಂದೆ ಹೇಳುವಂತೆ ಸಮಾಧಾನವಾಗಿ ಕೆಲವು ಮಾತುಗಳನ್ನಾಡಿದನು. ||೧೪೯-೧೫೦||

"ಎಲೌ ಸ್ತ್ರೀಯರೇ, ನಿಮ್ಮಲ್ಲಿ ಒಂದು ಮಾತನ್ನು ಕೇಳಬೇಕೆಂದಿರುವೆನು. ಅದನ್ನು ನನಗೆ ಮರೆಮಾಜದೆ ನನ್ನಮೇಲಿನ ಭಕ್ತಿಯಿಂದ ಹೇಳಿರಿ. ನಿಮಗೆ ಅತ್ಯಂತ ಇಷ್ಟವಾಗಿ ಶಿವಾರಾಧನೆಗೆ ಬೇಕಾಗಿರುವ ವಸ್ತುವಾವುದು? ಅದನ್ನು ಹೇಳಿದರೆ ಒಡನೆಯೇ ದೊರಕಿಸಿಕೊಡುವೆನು. ||೧೫೧-೧೫೨||

ನಿಮ್ಮ ಶಿವಪೂಜೆಗೆ ಯಾವುದು ಆಗತ್ಯವೆಂದು ತೋರಿಬರುವುದೋ, ಆ ವಸ್ತುವನ್ನಾದರೂ ಹೇಳಿರಿ. ಆ ವಸ್ತುಗಳು ಭೂಲೋಕದಲ್ಲಿ ದೊರೆಯದೇ ಹೋದರೂ, ಸ್ವರ್ಗಲೋಕವನ್ನೆಲ್ಲಾ ಹುಡುಕಿಸಿ ತರಿಸುವೆನು. ಆ ಸಾಮರ್ಥ್ಯವು ನನಗಿರುವುದು. ನಿಮ್ಮ ಅಪೇಕ್ಷೆಯಂತೆ ಆ ವಸ್ತುಗಳನ್ನೆಲ್ಲಾ ತರಿಸಿಕೊಡುವ ಭಾರ ನನ್ನದು. ||೧೫೩-೧೫೪||

ಕಿಂ ಚಾಂಗೇಷ್ವತಿರಮ್ಯೇಷು ಶಿವನಿರ್ಮಾಲ್ಯಚಂದನಂ ।
ಶಿವಾರ್ಪಿತಂ ಭೂಷಣಂ ವಾ ನ ಕದಾಪಿ ಹಿ ದೃಶ್ಯತೇ ॥೧೫೭॥

ನ ಪುಷ್ಪಮಾಲಿಕಾ ದೃಷ್ಟಾ ಶಿವಲಿಂಗಸಮರ್ಪಿತಾ ।
ಕಂಠೇ ಕುಚತಟೇ ಹಾರೋ ನ ರತ್ನಮಣಿಮಂಡಿತಃ ॥೧೫೮॥

ಭೂತ್ಯಾ ಪರಂ ಭೂಷಿತಾನಿ ದಿವ್ಯಾನ್ಯಂಗಾನಿ ಸರ್ವದಾ ।
ರುದ್ರಾಕ್ಷಮಾಲಿಕಾಭಿಶ್ಚ ಕಿಮೇವಮುಚಿತಂ ಭವೇತ್ ॥೧೫೯॥

ಚಂದನೇ ನೀಯತೇ ಭೂತಿಃ ಶಿವಲಿಂಗಸಮರ್ಪಣೇ ।
ತೇನಾಂಗಾನಿ ನಲಿಪ್ತಾನಿ ಕಥಂಚಿದ್ಭೂಷಣಂ ತದಾ ॥೧೬೦॥

ನ ಶಿವಾರ್ಚನಕಾಲೇಷು ಯುಕ್ತಂ ಚಂದನಲೇಪನಂ ।
ಪೂಜಾಂತೇ ಲೇಪನೇ ದೋಷೋ ನ ಶ್ರುತಿಸ್ಮೃತಿಭಿಃ ಖಲು॥೧೬೧॥

ನ ರತ್ನಾಭರಣಾನಾಂ ಚ ಧಾರಣೇ ದೂಷಣಂ ಸ್ಮೃತಂ ।
ಶಿವಾರ್ಪಿತಾನಿ ಧಾರ್ಯಾಣಿ ಭೂಷಣಾನ್ಯಪಿ ತಾನಿ ಕಿಂ ॥೧೬೨॥

ನೀವು ಸರ್ವದಾ ಈಶ್ವರಸೇವೆಯಿಂದಲೇ ಕಾಲಕಳೆದಿರುವಿರಿ. ನಿಮಗೆ ವಿರಾಮವೇ ದೊರೆತಿಲ್ಲ. ಪ್ರಾಯಿಕವಾಗಿ ಪತ್ನಿಯರಿಗೆ ಪುತ್ರಾಪೇಕ್ಷೆಯು ಬಹಳವಾಗಿರುವುದೆಂದು ಕೇಳಿದ್ದೇನೆ. ನಿಮಗೆ ಆ ಅಪೇಕ್ಷೆಯಿರುವುದಿಲ್ಲವೆ? ॥೧೫೫-೧೫೬॥

ನಿಮ್ಮ ಅವಯುವಗಳಲ್ಲಿ ಶಿವನಿರ್ಮಾಲ್ಯವಾದ ಗಂಧವಾಗಲಿ, ಶಿವಾರ್ಪಣೆ ಮಾಡಿದ್ದ ಒಡವೆಗಳಾಗಲಿ ಈಗ ಕಾಣುತ್ತಿಲ್ಲ. ಶಿವಲಿಂಗಕ್ಕೆ ಪೂಜಿಸಿದ್ದ ಪುಷ್ಪಮಾಲಿಕೆಯೂ, ಶಿವನಿಗೆ ಅಲಂಕರಿಸಿದ್ದ ರತ್ನಹಾರಗಳೂ, ನಿಮ್ಮ ಕಂಠವನ್ನೂ ಕುಚತಟವನ್ನೂ ಬಹುವಾಗಿ ಅಲಂಕರಿಸಿಲ್ಲವಲ್ಲಾ! ॥೧೫೭-೧೫೮॥

ಕೇವಲ ವಿಭೂತಿಯಿಂದಲೂ, ರುದ್ರಾಕ್ಷಿಯ ಸರಗಳಿಂದಲೂ ನಿಮ್ಮ ದೇಹಗಳನ್ನು ಅಲಂಕರಿಸಿಕೊಂಡಿರುವಿರಿ. ಈಗಲಂತೂ ಶಿವಾರ್ಪಿತವಾದ ಚಂದನವನ್ನೂ ತ್ಯಜಿಸಿರುವಿರಿ. ಇದು ಬಹಳ ಆಶ್ಚರ್ಯವಾಗಿದೆ. ಇದು ಉಚಿತವೇ? ಒಂದು ವೇಳೆ ಇದು ನಿಮ್ಮ ತಪ್ಪಾಗುವುದಿಲ್ಲವೇ? ॥೧೫೯-೧೬೦॥

ಈಶ್ವರಾರ್ಚನೆಯ ಕಾಲದಲ್ಲಿ ಗಂಧವನ್ನು ಧರಿಸಿರಬಾರದು. ಪೂಜಾನಂತರದಲ್ಲಿ ಶಿವಪ್ರಸಾದ ರೂಪವಾದ ಗಂಧವನ್ನೇಕೆ ಲೇಪಿಸಿಕೊಳ್ಳಬಾರದು? ರತ್ನಾಭರಣ

ಭುಜ್ಯತೇ ಶಿವನೈವೇದ್ಯಮಿತಿ ಬುದ್ಧ್ಯಾ ಶಿವಾರ್ಪಿತಂ ।
ಇದಾನೀಂ ತವಿಚ್ಛಾಮಿ ಪ್ರಾಯಶೋ ನಾ ಭವಿಷ್ಯತಿ ॥೧೬೩॥

ದತ್ತಂ ಮಹದ್ಭಾಗ್ಯಮಿದಂ ಶಿವೇನ
ಕಸ್ಯೋಪಭೋಗಾಯ ಮದೀಯಮೇವಂ ।
ಕರ್ತುಂ ಕಥಂ ಸ್ಯಾದುಚಿತಂ ಕದಾ ವಾ
ಭೋಗೋ ಭವೇದ್ರತ್ನವಿಭೂಷಣಾನಾಂ ॥೧೬೪॥

ಇತಿ ತದ್ವಚನಂ ಶ್ರುತ್ವಾ ಮಂದಹಾಸಪುರಸ್ಸರಂ ।
ಮಂದಮಾಹುರ್ವಿಚಾರ್ಯೈವ ವಿನೋದೈರಲಮಿತ್ಯಪಿ ॥೧೬೫॥

ಜನ್ಮಪ್ರಾಪ್ತಂ ಭೂರಿಪುಣ್ಯೈರ್ಭವೇಪಿ
ಭಕ್ತಿರ್ಜಾತಾ ಕ್ವಾಪಿ ಭಾಗ್ಯಾನಿ ಸಂತಿ ।
ನೂನಂ ಕಿಂ ವಾ ಶಂಕರಾರಾಧನೇನ
ನೇಯಸ್ತಾವತ್ಕಾಲ ಇತ್ಯೇವ ಮನ್ಯೇ ॥೧೬೬॥

ಗಳನ್ನು ಶಿವಾರ್ಪಿತಗಳನ್ನಾಗಿ ಮಾಡಿ, ಅನಂತರ ಅವುಗಳನ್ನು ಧರಿಸಿಕೊಳ್ಳುವುದರಲ್ಲಿ ಸಂದೇಹವೇನು? ಅದು ಶ್ರುತಿವಿರುದ್ಧವಲ್ಲವಷ್ಟೆ. ॥೧೬೧-೧೬೨॥

ಯಾವ ವಸ್ತುವನ್ನೇ ಆಗಲಿ, ಅದು ಶಿವನಿವೇದಿತವಾದದ್ದು ಎಂಬ ಭಾವನೆಯಿಂದ ಅನುಭವಿಸಿದರೆ ಅದರಲ್ಲಿ ದೋಷವಿಲ್ಲವೆಂದು ತಿಳಿದವರು ಹೇಳುವರು. ಎಲೌ ಪತ್ನಿಯರೇ, ನಮಗೆ ಈಶ್ವರನು ಅನೇಕ ಭಾಗ್ಯಗಳನ್ನು ಅನುಗ್ರಹಿಸಿರುವನು. ಇವೆಲ್ಲವೂ ಯಾರಿಗಾಗಿ ಎಂಬುದನ್ನು ಯೋಚಿಸಿ, ಎಲ್ಲವೂ ಶಿವದತ್ತವಾದುದೆಂದು ನಂಬಿ ಏತಕ್ಕಾಗಿ ಉಪಭೋಗಿಸಬಾರದು? ॥೧೬೩-೧೬೪॥

ಎಂದು ಮೃದುಮಧುರವಾಗಿ ಕೇಳಿದ ಪತಿಯ ವಾಕ್ಯಗಳನ್ನಾಲಿಸಿ, ಆ ಶಿವಪೂಜಾನಿರತರಾದ ಪತ್ನಿಯರು 'ಈ ವಿನೋದವು ಸಾಕು' ಎಂದು ಪತಿಯನ್ನುಉದ್ದೇಶಿಸಿ ಹೇಳುತ್ತಾ ನಿದಾನವಾಗಿ ಮುಂದೆ ಹೇಳುವಂತೆ ಮಾತನಾಡತೊಡಗಿದರು. ॥೧೬೫॥

ನಾವು ಹಿಂದೆ ಎಷ್ಟೋ ಸುಕೃತಗಳನ್ನಾರ್ಜಿಸಿರುವುದರಿಂದ ಈ ಜನ್ಮದಲ್ಲಿ ನಮಗೆ ಈಶ್ವರಭಕ್ತಿಯೊದಗಿದೆ. ನಮ್ಮ ಭಾಗ್ಯವು ಹೇಗೋ ದೊರೆಯುತ್ತದೆ. ಇಂತಹ ಕ್ಷಣಿಕವಾದ ಭಾಗ್ಯಕ್ಕಾಗಿ ಅಸದೃಶವಾದ ಈಶ್ವರಭಕ್ತಿಯನ್ನು ಕಳೆದು

ಕಿಂ ರತ್ನಾಭರಣೈರ್ವಿಚಿತ್ರವಸನೈಃ ಕಿಂ ಚಂದನೈರ್ವಾ ಫಲೈಃ ।
ಸ್ರಗ್ಭಿರ್ವಾ ಶಿವಪೂಜನೇನ ತು ಪರಂ ಸ್ವಾಂತಂ ಪ್ರಶಾಂತಂ ಮುಹುಃ ।
ಸಂತುಷ್ಟಂ ಖಲು ಸಂತತಂ ಶಿವಪದಾಂಭೋಜಾರ್ಚನೈಃ ಕೇವಲಂ
ನೇಯಂ ಮೇ ವಯ ಇತ್ಯನೈರಿ ನ ಸುತೈಃ ಕೃತ್ಯಂ ಕ್ವಚಿದ್ದೃಶ್ಯತೇ॥೧೬೭॥

ಅಸ್ಮಾಕಂ ಪರಲೋಕಸಾಧನಮಿದಂ ಭೂತಿಃ ಪರಂ ಭೂಷಣಂ
ರುದ್ರಾಕ್ಷಾಮಲಕಂಕಣಾದಿಕಲಿತಾ ತಾವತ್ತನುಸ್ತಾವತಾ ।
ಶ್ರೀಪಂಚಾಕ್ಷರಕೀರ್ತನೇನ ರಸನಾ ಪೀಯೂಷವಾಂಛಾಮಪಿ
ತ್ಯಕ್ತ್ವಾ ತಿಷ್ಠತಿ ನಿಷ್ಠುರಂ ಚ ಹೃದಯೇ ಶಾಂಗಾನ್ಯದೇವೇಷ್ವಪಿ ॥೧೬೮॥

ಅಸ್ಮಾಭಿಃ ಪತಿರಿಂದುಶೇಖರ ಇತಿ ಜ್ಞಾತಃಪತೀನಾಂಪತಿ
ರ್ದೇವಾನಾಮಪಿ ದೇವ ಏವ ಸ ಮಹಾದೇವೋ ಥವೋ ಮಾಧವಃ ।

ಕೊಳ್ಳುವುದು ಯುಕ್ತವೇ? ಅದಕ್ಕಾಗಿ ನಾವು ನಮ್ಮ ಕಾಲವನ್ನು ಶಂಕರಾರಾಧನೆ ಯಿಂದಲೇ ಕಳೆಯಬೇಕೆಂದು ದೃಢಸಂಕಲ್ಪಮಾಡಿರುವೆವು. ||೧೬೬||

ಈ ರತ್ನಾಭರಣಗಳೂ, ಚಿತ್ರವಿಚಿತ್ರವಾದ ವಸ್ತ್ರಗಳೂ, ಗಂಧಮಾಲ್ಯಾದಿಗಳೂ ನಮ್ಮ ಮನಸ್ಸನ್ನು ಶಾಂತಗೊಳಿಸಲಾರವು. ಇವುಗಳಿಂದ ಇನ್ನೂ ಕಾಮಕ್ರೋಧಾದಿ ಗಳು ಅಧಿಕವಾಗುವುವು. ದೃಢಭಕ್ತಿಯಿಂದ ಎಸಗಿದ ಶಿವಾರ್ಚನೆಯೇ ನಮಗೆ ಚಿರಶಾಂತಿಯನ್ನೀಯುವುದು. ಇದನ್ನೆಲ್ಲಾ ತಿಳಿದೇ ನಾವು ನಮ್ಮ ಅನಂತವಾದ ಕಾಲವನ್ನೆಲ್ಲಾ ಶಂಕರಪಾದಪದ್ಮಾರ್ಚನೆಯಿಂದಲೇ ಕಳೆಯಬೇಕೆಂದು ನಿಶ್ಚಯ ಮಾಡಿರುವೆವು. ಹೀಗಿರುವಾಗ ನಮಗೆ ಮಕ್ಕಳಿಂದ ಆಗಬೇಕಾದ ಪ್ರಯೋಜನ ವೇನು? ನಮಗೆ ಪುತ್ರಾಭಿಲಾಷೆಯೇ ಇಲ್ಲವಾಗಿದೆ. ||೧೬೭||

ನಮಗೆ ಈ ವಿಭೂತಿಯೇ ಪರಲೋಕಸುಖಕ್ಕೆ ಸಾಧನವು. ಮತ್ತು ಈ ಲೋಕದಲ್ಲಿ ನಮ್ಮ ದೇಹಕ್ಕೆ ಭೂಷಣವೆನಿಸುವುದು. ಹಾಗೆಯೇ ಸುವರ್ಣಾಭರಣ ಗಳಿಗಿಂತ ಈ ರುದ್ರಾಕ್ಷಿಯ ಸರಗಳೇ ದೇಹಾಲಂಕಾರವಸ್ತುಗಳೆನಿಸಲಿ. ಶಿವಪಂಚಾ ಕ್ಷರದ ಉಚ್ಚಾರಣೆಯಿಂದ ನಮ್ಮ ನಾಲಗೆಯು ಅಮೃತವನ್ನು ಸಹ ಅಪೇಕ್ಷಿಸುವು ದಿಲ್ಲ. ಹೀಗಾಗಿ ನಮ್ಮ ಮನಸ್ಸು ಶಂಕರನನ್ನು ಬಿಟ್ಟು ಮತ್ತಾವ ದೇವತೆಯನ್ನಾ ಗಲಿ, ಬೇರಾವ ವಸ್ತುವನ್ನಾಗಲಿ ಅಪೇಕ್ಷಿಸಲಾರದು. ||೧೬೮||

ನಮಗೆ ಚಂದ್ರಶೇಖರನೂ, ವಿಶ್ವಪತಿಯೂ, ಪಾರ್ವತೀಕಾಂತನೂ ಆದ

ಪೂಜ್ಯಸ್ಸ್ಯಾದನಿಶಂ ಶಿವಾರ್ಚನಮಿದಂ ತಾವದ್ವ್ರತಂ ದೇಹಿನಾ
ಮಸ್ಮಾಭಿಶ್ಚ ಪತಿವ್ರತಾಭಿರಧುನಾ ಶರ್ವಃ ಪತಿಃ ಪೂಜ್ಯತೇ ॥೧೬೯॥

ಅತಃ ಪರಂ ನಾಸ್ತ್ಯಪಿ ಜನ್ಮವಾರ್ತಾ
ಕೃತಾಂತವಾರ್ತಾಪ್ಯತಿದೂರತಃ ಸ್ಯಾತ್ ।
ಕಾಯವ್ಯಪಾಯೋಽಪಿ ಶಿವಾರ್ಚನೇನ
ಸಂಭಾವನೀಯೋ ನಿಯಮೇನ ನೂನಂ ॥೧೭೦॥

ಭ್ರಾಂತಿಂ ಮಾಕುರು ಸರ್ವಥಾಪಿ ಮಹಿಲಾದೇಹೇಷು ಗೇಹೇಷು ವಾ
ದೋಷಾನೇವ ವಿಚಿಂತ್ಯ ಸಂತತಮುಮಾಕಾಂತಂ ಪ್ರಶಾಂತಂ ಭಜ ।
ತತ್ಪಾದಾಂಬುಜಚಿಂತನೇನ ತು ಸುಖಂ ಪ್ರಾಪ್ತವ್ಯಮೇವಾಕ್ಷಯಂ
ದ್ರಾಕ್ಷಂ ನೀರಮವಾಪ್ಯ ನ ಕ್ಷಣಮಪಿ ಕ್ಷಾರಂ ಜಲಂ ವಾಂಛತಿ ॥೧೭೧॥

ಮಹಾದೇವನೇ ಪತಿಯು. ಈ ಶಿವಾರ್ಚನೆಯನ್ನು ಮಾಡುವುದೇ ಪತಿಸೇವೆಯೆಂದು ಭಾವಿಸಿರುವೆವು. ಪತಿವ್ರತಾಸ್ತ್ರೀಯರೆನಿಸಿದ ನಾವು ಸರ್ವದಾ ಶಂಕರನನ್ನು ಭಜಿಸುವುದರಿಂದಲೇ ಆತನನ್ನು ಪೂಜ್ಯನಾದ ಪತಿಯೆಂದು ಭಾವಿಸಿರುವೆವು. ॥೧೬೯॥

ಹೀಗೆ ನಾವು ಶಿವಾರ್ಚನೆಮಾಡುವುದರಿಂದ ನಮಗೆ ಯಮನ ಭಯವಾಗಲಿ, ಜನ್ಮಾಂತರಗಳ ಪ್ರಾಪ್ತಿಯಾಗಲಿ ಇರುವುದಿಲ್ಲ. ಇದೇ ಶಿವವ್ರತದ ನಿಯಮದಿಂದಲೇ ನಮ್ಮ ಈ ದೇಹವು ನಾಶವಾದರೂ ನಮಗೆ ಅಷ್ಟು ದುಃಖವಿಲ್ಲ. ॥೧೭೦॥

ರಾಜಶ್ರೇಷ್ಠನೇ, ಸ್ತ್ರೀಯರ ದೇಹಸೌಂದರ್ಯಕ್ಕೂ, ರಾಜಭವನವೇ ಮೊದಲಾದ ಐಹಿಕ ಭೋಗ್ಯವಸ್ತುಗಳಿಗೂ ಮನಗೊಟ್ಟು ಭ್ರಾಂತನೆನಿಸಬೇಡ. ಇವುಗಳೆಲ್ಲಾ ದೋಷವಿಶಿಷ್ಟವಾದವುಗಳೆಂದು ತಿಳಿದು ಸರ್ವದಾ ಮಹೇಶ್ವರನ ಪಾದಾರ್ಚನೆಯಲ್ಲಿಯೇ ಮನಸ್ಸಿಡು. ಅದರಿಂದಲೇ ನಿಜವಾದ ಸೌಖ್ಯವು ಲಭಿಸುವುದು. ದ್ರಾಕ್ಷಾಮೃತವನ್ನು ಪಡೆದ ಮನುಷ್ಯನು ಉಪ್ಪುನೀರನ್ನು ಎಂದಾದರೂ ಬಯಸುವನೇ? ಅದರಂತೆ ನೀನು ಎಂದಿಗೂ ಈ ಸಾಂಸಾರಿಕ ಸುಖವನ್ನು ಬಯಸಿ, ಶಿವಭಕ್ತಿಯೆಂಬ ಅಮೃತವನ್ನು ದೂರೀಕರಿಸಬೇಡ. ॥೧೭೧॥

ಧನ್ಯಸ್ತ್ವಂ ರಿಪುಮೌಲಿಲಾಲಿತಪದಾಂಭೋಜೋಽಸಿ ಹಾರೋಽಸ್ಯತಃ
ಶಂಭುಃ ಪೂರ್ವಭವೇಷು ತಾವದಸಕೃತ್ತ್ವತ್ತ್ವದಾರಾಧಿತಃ ।
ಜನ್ಮಪ್ರಾಪ್ತಮಿದಂ ಸಮಸ್ತವಿಭವಪ್ರಾಪ್ತ್ಯೈ ಪರಂ ಹಾರತಾಂ
ಪ್ರಾಪ್ಯಾರ್ಧೇಂದುಶಿಖಾಮಣಿಂ ಭಜ ನಿಜೋಪಾಯೈರಪಾರೈರ್ವಿನಾ॥೧೭೨॥

ಐಶ್ವರ್ಯಂ ಯದಿಹಾಸ್ತಿ ತೇನ ಗಿರಿಶಂ ಭಕ್ತ್ಯಾ ಸಮಭ್ಯರ್ಚಯ
ಪ್ರೀತ್ಯಾ ಶಂಕರಪೂಜನಂ ಕುರು ಧನೈರೀಶಾರ್ಪಿತೈಃ ಕೇವಲಂ ।
ಶಂಭುಶ್ಶಾಂಭವಮೇತ್ಯ ಯಂ ಹಿ ಸಕಲಂ ಗೃಹ್ಣಾತಿ ರತ್ನಾದಿಕಂ
ವಿದ್ಧಿ ತ್ವಂ ಚರಲಿಂಗಮಿತ್ಯಪಿ ಪರಂ ತಂ ಶಾಂಭವಂ ಶಾಂಕರಂ ॥೧೭೩॥

ರಾಜನೇ, ನೀನೇ ಧನ್ಯನು. ಏಕೆಂದರೆ ನಿನ್ನ ಶೌರ್ಯಸಹಾಯದಿಂದ ಸಕಲ ಶತ್ರುಗಳನ್ನೆಲ್ಲಾ ನಾಶಮಾಡಿ, ಅತುಲವಾದ ಐಶ್ವರ್ಯವನ್ನೂ, ರಾಜ್ಯವನ್ನೂ ಸಂಪಾದಿಸಿರುವೆ. ಅಲ್ಲದೆ ಅಸದೃಶವಾದ ಶಿವಭಕ್ತಿಯನ್ನು ಸಂಪಾದಿಸಿ ರಾಜನ ಜನ್ಮವನ್ನು ಪಡೆದಿರುವೆ. ಇದಕ್ಕಿಂತ ಹೆಚ್ಚಿನ ಮೇಲ್ಮೆಯಿನ್ನಾವುದು ? ಈಗಲೂ ನೀನು ಹರಭಕ್ತಿಯನ್ನು ಇನ್ನೂ ಹೆಚ್ಚಿಸಿಕೊಂಡು ಅರ್ಧೇಂದುಶೇಖರನಾದ ಪರಶಿವನನ್ನೇ ಧ್ಯಾನಿಸುತ್ತಾ ಅದಕ್ಕೆ ಬೇಕಾದ ಸಾಧನಗಳನ್ನು ಸಂಪಾದಿಸುವವನಾಗು. ||೧೭೨||

ನಿನ್ನಲ್ಲಿ ಅತಿಯಾದ ಐಶ್ವರ್ಯವಿದ್ದರೆ ಭಕ್ತಿಯಿಂದ ಆ ಐಶ್ವರ್ಯವನ್ನೆಲ್ಲಾ ಪರಶಿವನಿಗೆ ಅರ್ಪಿಸಿ, ಮನಃಪೂರ್ವಕವಾಗಿ ಪೂಜೆಮಾಡು. ಆಗ ನಿನ್ನ ನಿಧಿಗೆ ಸಾರ್ಥಕತೆಯೇರ್ಪಡುವುದು. ಮತ್ತು ಧನಕನಕಾದಿ ಅಮೂಲ್ಯವಾದ ವಸ್ತುಗಳನ್ನು ಈಶ್ವರಾರ್ಚಕರೆನಿಸಿದ ಮಹಾತ್ಮರಿಗೆ ದಾನಮಾಡು. ಪರಶಿವನು ಸಕಲ ವಸ್ತುಗಳನ್ನು ಭಕ್ತರ ಮೂಲಕ ಸ್ವೀಕರಿಸುವನು. ಆದರಿಂದ ತೃಪ್ತನೂ ಆಗುವನು. ಹಾಗೆ ಈಶ್ವರನನ್ನೇ ಧ್ಯಾನಿಸಿ, ಪೂಜಿಸುವವರಿಗೆ ಚರಲಿಂಗವೆಂಬ ಸಂಜ್ಞೆಯಿರುವುದು. ಅಂತಹವರ ಪೂಜೆಯಿಂದ ನಿಜವಾಗಿಯೂ ಪರಮೇಶ್ವರನು ತೃಪ್ತಿಹೊಂದುವನು. ||೧೭೩||

ಉತ್ಪನ್ನಾಸ್ತ್ರವ ತೇ ಸುತಾ ಅಪಿ ತಥಾ ತಿಷ್ಠಂತು ಕಿಂ ತೈಃ ಫಲಂ
ಯಾವತ್ತೇ ಸುದೃಢಂ ಶರೀರಮಸಕೃತ್ ತಾವಚ್ಛಿವಾರಾಧನಂ ।
ಕರ್ತವ್ಯಂ ತವ ರಾಜ್ಯಭಾರವಿಗಮಾಪಾಯೋಽಪಿ ಶರ್ವಾರ್ಚನಂ
ತತ್ಸರ್ವಾರ್ಥದಮಿತ್ಯಮೈವಿ ಬಹುಧಾ ಸತ್ಯಂ ಹಿತಂ ಚೋದಿತಂ ॥೧೭೪॥

ಶರೀರಮಪಿ ನಾಯಾತಿ ಮರಣಾನಂತರಂ ಪರಂ
ಶಿವಾರ್ಚನಾರ್ಜಿತಂ ಪುಣ್ಯಂ ಸಹಾಯಾಸ್ಯತಿ ಕೇವಲಂ ॥೧೭೫॥

ನ ಪುತ್ರೈರ್ವಾ ಕಳತ್ರೈರ್ವಾ ತವ ಕೃತ್ಯಂ ನರಾಧಿಪ ।
ಪರಲೋಕಹಿತಂ ತಾವತ್ ಸತತಂ ಚಿಂತಯಾಧುನಾ ॥೧೭೬॥

ಶೌರ್ಯಂ ಚ ತಾವತ್ಸಫಲಂ ತವ ಸ್ಯಾ
ನ್ಮೃತ್ಯುರ್ಯದಿ ಸ್ಯಾತ್ಸ ಜಿತಸ್ತ್ವಯಾಪಿ ।
ಜೇಯಃ ಸ ಶೂರೋ ನ ಜಿತೋಽಪಿ ಲೋಕೇ
ಕೇನಾಪಿ ತೇನಾಪಿ ಪರೋ ನ ಲೋಕೇ ॥೧೭೭॥

ಉತ್ಪತ್ತಿ ಮತ್ತು ಮರಣ ಇವುಗಳಿಂದ ಕೂಡಿ ನರಳುವ ಸಾಮಾನ್ಯಮಾನವರಿಗೆ ಮಕ್ಕಳು ಬೇಕು. ಅವರಿಂದ ಉತ್ತರಕ್ರಿಯಾದಿಗಳನ್ನು ಹೊಂದಿ ತನ್ಮೂಲಕವಾದರೂ ಸೌಖ್ಯವನ್ನು ಪಡೆಯಲೆಂದೇ ಆ ಮಕ್ಕಳನ್ನು ಅವರು ಬಯಸುವರು. ಆದರೆ ಜೀವವಿರುವವರೆಗೂ ಶಿವಾರ್ಚನೆಮಾಡಿ ಸಕಲ ರಾಜ್ಯಸಂಪತ್ತನ್ನೂ ಶಿವನಿಗಾಗಿ ಅರ್ಪಿಸುವೆನೆಂಬ ಭರವಸೆಯುಳ್ಳವನಿಗೆ ಮಕ್ಕಳಾಗಲಿ, ಇತರ ಬಂಧುಗಳಾಗಲಿ ಅನವಶ್ಯಕ. ರಾಜ್ಯಪ್ರಾಪ್ತಿ, ರಾಜ್ಯನಾಶ ಇವೂ ಸಹ ಶಿವಾರ್ಚನೆಯೇ ಎಂದು ನಂಬಿ ಸರ್ವವನ್ನೂ ಶಂಕರನಿಗೆ ಅರ್ಪಿಸುವುದೇ ನಿಜವಾದ ಧರ್ಮವೆಂದು ತಿಳಿ. ॥೧೭೪॥

ಮನುಷ್ಯನ ದೇಹಕ್ಕೆ ಮರಣವು ಸಂಭವಿಸಿದ ಮೇಲೆ ಆ ದೇಹವು ಮತ್ತೆ ದೊರೆಯಲಾರದು. ಶಿವಾರ್ಚನೆಯಿಂದ ಲಭಿಸಿದ ಸುಕೃತವಾದರೋ ಸರ್ವದಾ ಆತನನ್ನು ಹಿಂಬಾಲಿಸುವುದು. ಹೆಂಡತಿ, ಮಕ್ಕಳು ಇವರಾರಿಂದಲೂ ನಿನಗೆ ಸದ್ಗತಿಯು ದೊರೆಯಲಾರದು. ಅದಕ್ಕಾಗಿ ಪರಲೋಕದ ಸುಖವನ್ನು ಅನಾಯಾಸವಾಗಿ ದೊರಕಿಸುವ ಶಿವಾರ್ಚನೆಯನ್ನು ಮಾತ್ರ ತಪ್ಪದೆ ನೆರವೇರಿಸು. ॥೧೭೫-೧೭೬॥

ನಿನಗೆ ನಿಜವಾಗಿ ಶೌರ್ಯವಿರುವುದಾದರೆ ಲೋಕದಲ್ಲಿ ಯಾರಿಂದಲೂ ಜಯಿಸಲ್ಪಡದಿರುವ, ಮೃತ್ಯುವನ್ನು ಜಯಿಸು. ಆಗ ನಿನ್ನ ಶೌರ್ಯಕ್ಕೆ ಸಾರ್ಥಕತೆಯೊದಗು

ದ್ರಷ್ಟವ್ಯಂ ತವ ಶೌರ್ಯಮುಷ್ಯತಿತರಾಂ ಶೂರಃ ಸ ಮೃತ್ಯುರ್ಯತೋ
ಡುರ್ಜೇಯೋ ಯದಿ ವಾ ಜಿತಸ್ತವ ತದಾ ಶೌರ್ಯೋತ್ಸವೋ ದೃಶ್ಯತೇ।
ಕಿಂ ಶೌರ್ಯಂ ಮಶಕಕ್ಷಯೇಣ ಸಫಲಂ ಸಿಂಹೋರುದೇಹಕ್ಷಯೇ
ಶಕ್ತಂ ಚೇತ್ಸಫಲಂ ತದಿತ್ಯಭಿಮತಂ ನೋಚೇದ್ವೃಥಾ ತತ್ಫಲು ॥೧೭೮॥

ಮೃತ್ಯೋರಪ್ಯಧುನಾ ಜಯಾಯ ವಿಮಲಂ ಬಿಲ್ವೀದಳಂ ಸಾಧನಂ
ಗಂಗಾತುಂಗತರಂಗಭಂಗಕಮಲಂ ದೂರ್ವಾಂಕುರೈರ್ವಾ ಮುದಾ।
ಶಂಗಾಯಾದ್ಯ ಸಮರ್ಪಿತಂ ನಿಶಿ ಮಹಾಭೂತಾಪಿ ಮಾಘೀಕುಹೂ
ಭೋಕ್ತವ್ಯಂ ತದನಂತರಂ ಖಲು ಮಹಾಮೃತ್ಯುಃ ಸಭೀತೋ ಭವೇತ್
॥೧೭೯॥

ವುದು. ಆ ಮೃತ್ಯುವು ನಿಜವಾಗಿಯೂ ಶೂರನು. ಜಯಿಸಲು ಅಸಾಧ್ಯನಾದವನು. ಇಲ್ಲಿನವರೆಗೆ ಯಾರೂ ಅವನನ್ನು ಜಯಿಸಿಲ್ಲ. ಅವನಿಗೆ ಸಮನಾದವನು ಲೋಕದಲ್ಲಿ ಯಾರೂ ಇಲ್ಲ. ||೧೭೬||

ಅತ್ಯಂತ ಶೂರನೂ, ಜಯಿಸಲಸಾಧ್ಯನೂ ಆದ ಮೃತ್ಯುವನ್ನು ಜಯಿಸುವುದರಿಂದಲೇ ನಿನ್ನ ಶೌರ್ಯಕ್ಕೆ ಪ್ರಾಶಸ್ತ್ಯವೊದಗುವುದು. ಹಾಗಿಲ್ಲವಾದರೆ ಅಂತಹ ಶೌರ್ಯದಿಂದ ಏನೂ ಪ್ರಯೋಜನ ಲಭಿಸಲಾರದು. ಸಿಂಹವನ್ನು ಕೊಂದವರನ್ನು ಶೂರರೆನಬಹುದೇ ಹೊರತು ನೊಣವನ್ನು ತಿಕ್ಕಿದವರನ್ನಲ್ಲ. ಅದರಂತೆ ಯಾರು ಮೃತ್ಯುಂಜಯರೋ ಅವರೇ ಧೀರರು. ಅವರ ಧೈರ್ಯವೇ ಬಹುಮಟ್ಟಿಗೆ ಮಿಗಿಲಾದುದು. ಸಾಧ್ಯವಲ್ಲದ ಕಾರ್ಯವನ್ನು ಸಾಧಿಸುವುದೇ ಶೌರ್ಯ. ||೧೭೭||

ಅಂತಹ ಮೃತ್ಯುವಿನ ಜಯಕ್ಕೆ ಒಂದು ಬಿಲ್ವದಳವೇ ಮುಖ್ಯಸಾಧನ. ಮಾಘಮಾಸದ ಕೃಷ್ಣ ಚತುರ್ದಶಿಯಲ್ಲಿ ಅರ್ಧರಾತ್ರಿಯ ವೇಳೆ ಗಂಗಾನದಿಯಲ್ಲಿ ಬೆಳೆದ ಕಮಲಗಳನ್ನಾಗಲಿ, ಗರಿಕೆಯನ್ನಾಗಲಿ, ಬಿಲ್ವದಳದೊಡನೆ ಮಹಾದೇವನ ಲಿಂಗಮೌಳಿಯಲ್ಲಿ ಅರ್ಚನೆಮಾಡಿದರೆ ಒಡನೆಯೇ ಈ ಮೃತ್ಯುವು ಹೆದರಿ ನಮಗೆ ಸೋತು ಓಡಿಹೋಗುವನು. ಮೃತ್ಯುಭೀತಿಯು ತಪ್ಪಿದೊಡನೆಯೇ ಸಕಲ ಭೋಗಗಳೂ ದೊರೆಯುವುವಲ್ಲದೆ ಆ ಮೋಕ್ಷವೆಂಬುದು ಕರಗತವಾಗುವುದರಲ್ಲಿ ಸಂಶಯವಿಲ್ಲ. ||೧೭೮||

ಪುಣ್ಯೈರೇವ ಸಮಾಗತಾ ಶಿವತಿಥಿಃ ಸೇಯಂ ಜಲಂ ವಾ ತ್ವಯಾ
ಪೇಯಂ ನಾದ್ಯ ಶಿವಾರ್ಚನಂ ಕುರು ಮುಹುರ್ಹಾರ್ಯೈಃ ಪರಂ ಸಂವೃತಃ ।
ಭಾಗ್ಯಂ ತೇ ಬಹುದೇಯಮದ್ಯ ಧನಮಪ್ಯಾಶ್ವಾದಿಕಂ ಸರ್ವಥಾ
ಹಾರೇಭ್ಯಸ್ತವ ತಾವದುಕ್ತಮಧುನಾ ಸರ್ವಂ ಹಿತಂ ಕೇವಲಂ ॥೧೮೦॥

ಏತಸ್ಮಿನ್ನವರತ್ನಮಂಡಲಗೃಹೇ ಲಿಂಗೇತಿ ತುಂಗೇ ಮುದಾ
ರತ್ನೈಃ ಪೂಜಯ ನೂತನೈರಗಣಿತೈರ್ಹಾರ್ಯೈರಪಾರ್ಯೈರಪಿ ।
ರತ್ನಾಲಂಕೃತಭೂಷಣೈರಪಿ ಮುದಾ ಕಸ್ತೂರಿಕಾಕರ್ದಮೈಃ
ಪಾಟೀರದ್ರವಸಾಗರೈರಪಿ ಮುಹುಃ ಪುಣ್ಯೈರಪಾರ್ಯೈರಪಿ ॥೧೮೧॥

ಇತಿ ಶ್ರೀಶಿವರಹಸ್ಯೇ ತೃತೀಯಾಂಶೇ ಉತ್ತರಾರ್ಧೇ ನಿಷಧದೇಶರಾಜಾ
ತತ್ಕಲತ್ರಸಂವಾದೇ ಶಿವರಾತ್ರಿ ಶಿವಪೂಜಾಮಹಿಮಾನುವರ್ಣನಂ
ನಾಮ ಚತುಶ್ಚತ್ವಾರಿಂಶೋಽಧ್ಯಾಯಃ

ರಾಜಶ್ರೇಷ್ಠನೇ, ನಮ್ಮ ಸುಕೃತವಿಶೇಷದಿಂದ ಶಿವರಾತ್ರಿಯು ಈಗ ಪ್ರಾಪ್ತವಾಗಿರುವುದು. ಈ ದಿನ ಪಾನಭೋಜನಾದಿಗಳನ್ನು ನಿಲ್ಲಿಸಿ, ಈಶ್ವರಭಕ್ತರೊಡಗೂಡಿ ಶಿವಾರ್ಚನೆ ಮಾಡು. ಇದರಿಂದ ಸಕಲೈಶ್ವರ್ಯವೂ ಲಭಿಸುವುದು. ಅಲ್ಲದೆ ನಿನ್ನಲ್ಲಿರುವ ಧನಕನಕಾದಿಗಳನ್ನೂ, ಕುದುರೆಯೇ ಮುಂತಾದ ಭೋಗ್ಯಪದಾರ್ಥಗಳನ್ನೂ ಈಶ್ವರಸೇವಾನಿರತರಾದವರಿಗೆ ದಾನಮಾಡು. ಇದರಿಂದ ನಿನಗೆ ಸಕಲ ಕಲ್ಯಾಣಗಳೂ ಲಭಿಸುವುವು. ಇದರಲ್ಲಿ ಸಂಶಯ ಪಡಬೇಡ. ||೧೭೯||

ಈ ನವರತ್ನಮಯವಾದ ದಿವ್ಯಮಂಟಪದಲ್ಲಿ ವಿಶಾಲವಾದ ಪೀಠದ ಮೇಲಿರುವ ಶಿವಲಿಂಗವನ್ನು ನೂತನವಾದ ಪುಷ್ಪಹಾರಗಳಿಂದಲೂ, ರತ್ನಾಭರಣಗಳಿಂದಲೂ ಕಸ್ತೂರಿ, ಶ್ರೀಗಂಧ ಇವೇ ಮೊದಲಾದ ಸುಗಂಧರಾಶಿಯಿಂದಲೂ ಭಕ್ತಿಪೂರ್ವಕವಾಗಿ ಅರ್ಚಿಸು. ಇನ್ನೂ ಪವಿತ್ರತರಗಳಾದ ಪೂಜಾವಸ್ತುಗಳನ್ನು ಪರಶಿವನಿಗರ್ಪಿಸಿ ಆ ಮಹಾದೇವನನ್ನು ತೃಪ್ತಿಪಡಿಸು. ನಿನಗೆ ಐಹಿಕಾಮುಷ್ಮಿಕ ಸುಖಗಳೆರಡೂ ಲಭಿಸುವುವು" ಎಂದು ರಾಜಪತ್ನಿಯರು ನಿಷಧರಾಜನಿಗೆ ಬುದ್ಧಿ ಹೇಳಿದರೆಂಬುದನ್ನು ಸತ್ಯವ್ರತರಾಜನು ತಿಳಿಸಿದನು. ||೧೮೦||

ಇಲ್ಲಿಗೆ ಹರನಾಮಕವಾದ ತೃತೀಯಾಂಶದ ಉತ್ತರಾರ್ಧದಲ್ಲಿ
ಶಿವಪೂಜಾಮಹಿಮಾನುವರ್ಣನವಾದ
ನಲವತ್ತುನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಓಂ ನಮಶ್ಶಿವಾಯ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ಪಂಚಚತ್ವಾರಿಂಶೋಽಧ್ಯಾಯಃ

॥ ಭೃಗುರುವಾಚ ॥

ಇತ್ಯಪಾರನಿಜೋದಾರದಾರಾವಾಕ್ಯಸುಧಾಂ ಮುಹುಃ ।
ಪೀತ್ವಾ ಪ್ರೀತಿಂ ಪರಾಂ ಪ್ರಾಪ ಪ್ರಪಾಮಿವ ತೃಷಾತುರಃ ॥೧॥

ತತಃಪರಂ ಸ ಭೂತಾಯಾಂ ಭೂತಿರುದ್ರಾಕ್ಷಭೂಷಣಃ ।
ಚಕಾರ ಪೂಜನಂ ಶಂಭೋರ್ಲಿಂಗೇ ಬಹುವಿಧೈರ್ಧನೈಃ ॥೨॥

ಯಾವತ್ತೇನಾರ್ಜಿತಂ ದ್ರವ್ಯಂ ತಾವತ್ಸರ್ವಂ ಸಮರ್ಪಿತಂ ।
ಲಿಂಗೇ ತಚ್ಛಾಂಭವೇಭ್ಯಶ್ಚ ದತ್ತಂ ಬಹುವಿಧಂ ಧನಂ ॥೩॥

ನಲವತ್ತೈದನೆಯ ಅಧ್ಯಾಯ

ಈರೀತಿ ಆ ರಾಜಪತ್ನಿಯರು ಉದಾರಾಶಯವನ್ನು ಪ್ರಕಟಿಸಿ ಮಧುರವಾಗಿ ಮಾತನ್ನಾಡಲು, ಅದನ್ನು ಕೇಳಿ ನಿಷಧರಾಜನಿಗೆ ಅಮೃತಪಾನಮಾಡಿದಂತಾಯಿತು. ಅತ್ಯಂತ ಬಾಯಾರಿಕೆಯಿಂದ ಸಂತಪ್ತನಾದವನಿಗೆ ಅರವಟ್ಟಿಗೆ ಸಿಕ್ಕಿದರೆ ಎಷ್ಟು ಆನಂದವಾಗುವುದೋ, ಹಾಗೆಯೇ ಆ ರಾಣಿಯ ವಾಗಮೃತವನ್ನು ಪಾನಮಾಡಿ ರಾಜನು ಆತ್ಯಾನಂದಿತನಾದನು. ॥೧॥

ಅನಂತರ ತಾನೂ ಭಸ್ಮರುದ್ರಾಕ್ಷಿಗಳನ್ನು ಧರಿಸಿಕೊಂಡು ಮಹಾಶಿವರಾತ್ರಿ ವ್ರತದಲ್ಲಿ ಆಸಕ್ತನಾಗಿ ನಾನಾವಿಧವಾದ ದಿವ್ಯ ಪೂಜಾದ್ರವ್ಯಗಳಿಂದ ಶಿವಾರಾಧನೆಯನ್ನು ಮಾಡಿದನು. ॥೨॥

ತಾನು ಸಂಪಾದಿಸಿದ ಎಲ್ಲಾ ಐಶ್ವರ್ಯವನ್ನೂ ಶಿವಪೂಜೆಯಲ್ಲಿ ವಿನಿಯೋಗಿಸಿ

ಅಪಾರೈಶ್ಶಿವನೈವೇದ್ಯೈರಪಾರಾಶ್ಶಾಂಕರಾ ಅಪಿ ।
ಭೂಷಿತಾಸ್ತೇನ ಭೂಪೇನ ತೋಷಿತಾಶ್ಚಂದನಾದಿಭಿಃ ॥೪॥

ತತಃಪರಂ ದಾರಹಾರಮಂದಿರೇ ಸುಂದರೇ ನೃಪಃ ।
ಶಿವೋಪಹಾರೈರುದರಂ ಪೂರಯಾಮಾಸ ಸಾದರಂ ॥೫॥

ಹಾರದಾರೈಶ್ಚ ತೈರ್ಭುಕ್ತಂ ಶಿವನೈವೇದ್ಯಮಾದರಾತ್ ।
ಶಿವಾರ್ಪಿತಂ ಬಿಲ್ವಪತ್ರಂ ಭಕ್ಷಿತಂ ಪುಣ್ಯಸಾಧನಂ ॥೬॥

ತದಾನೀಂ ತದ್ವ್ರತಂ ದೃಷ್ಟ್ವಾ ಹಾರದಾರಾನ್ವಿತಂ ನೃಪ ।
ನಂದಿಕೇಶಂ ಸಮಾಹೂಯ ಪ್ರಾಹ ಗೌರೀಮನೋಹರಃ ॥೭॥

ಅತ್ಯಂತ ವಿಜೃಂಭಣೆಯಿಂದ ಶಂಕರನನ್ನು ಆರಾಧಿಸಿದನು. ಅನಂತರ ದರಿದ್ರರಾದ ಶಾಂಭವರಿಗೆ ನಾನಾವಿಧವಾದ ದ್ರವ್ಯಗಳನ್ನು ದಾನಮಾಡಿದನು. ॥೩॥

ಸಮಸ್ತ ಶಿವಧರ್ಮಿಯರಿಗೂ ಶಿವನಿವೇದಿತವಾದ ಪಕ್ವಾನ್ನಗಳಿಂದ ಸಂತೃಪ್ತಿಯಾಗುವಂತೆ ಭೋಜನವನ್ನು ಮಾಡಿಸಿದನು. ಹಾಗೆಯೇ ವಸ್ತ್ರಾಭರಣಗಳನ್ನೂ ಚಂದನಾದಿಗಳನ್ನೂ ಕೊಟ್ಟು ಎಲ್ಲರನ್ನೂ ಸಂತೋಷಗೊಳಿಸಿದನು. ॥೪॥

ಎಲ್ಲಾ ಶಾಂಭವಶ್ರೇಷ್ಠರನ್ನೂ ಸಕಲ ವಿಧದಲ್ಲಿಯೂ ಸಂತುಷ್ಟಿಗೊಳಿಸಿ ಅನಂತರ ಆ ರಾಜನು ಅದೇ ಶಿವಮಂದಿರದಲ್ಲಿ ಶಿವನೈವೇದ್ಯವನ್ನು, ಶಿವಭಕ್ತೋಚ್ಛಿಷ್ಟವನ್ನು ಅತ್ಯಂತ ಭಕ್ತಿಯಿಂದ ತಾನು ಭುಂಜಿಸಿದನು. ॥೫॥

ರಾಜನಿಗೆ ಭೋಜನವಾದನಂತರ ಶಿವಭಕ್ತರಾದ ಆತನ ಪತ್ನಿಯರೂ ಶಿವನೈವೇದ್ಯವನ್ನು ಊಟಮಾಡಿದರು. ಹಾಗೆಯೇ ಅತ್ಯಂತ ಪುಣ್ಯಹೇತುವಾದ ಶಿವಪ್ರಸಾದದ ಬಿಲ್ವಪತ್ರೆಯನ್ನೂ ಭಕ್ಷಿಸಿದರು. ॥೬॥

ಈ ರೀತಿಯಾಗಿ ಪರಮ ಶಿವಭಕ್ತರಾದ ಪತ್ನಿಯರಿಂದೊಡಗೂಡಿ ಭಕ್ತಿಪರವಶತೆಯಿಂದ ವ್ರತವನ್ನು ಆ ರಾಜನು ಸಾಂಗವಾಗಿ ನೆರವೇರಿಸಲು ಅದನ್ನು ನೋಡಿ, ಪರಮೇಶ್ವರನು ನಂದಿಕೇಶ್ವರನನ್ನು ಕರೆದು ಹೀಗೆ ಹೇಳಿದನು. ॥೭॥

ನಂದಿನ್ನಿಷಧದೇಶೇಶೋ ಮಹಾಭೂತವ್ರತಾದರಃ ।
ಸಾದರಸ್ಸ ಸಮಾನೇಯೋ ವಿಮಾನೇನಾತಿಸತ್ವರಂ ॥೮॥

ಇತ್ಯುಕ್ತಂ ಶಂಕರಾಸಾರವ್ಯಾಹಾರಕಲನಾನ್ಮುದಾ ।
ಜಗಾಮ ಸತ್ವರಂ ನಂದೀ ವಿಮಾನವರಮಾಶ್ರಿತಃ ॥೯॥

ಗತ್ವಾ ಸ ನಂದೀ ಭೂಪಾಲನಗರಂ ಸುಮನೋಹರಂ ।
ವಿವೇಶ ಮಂದಿರಂ ತಸ್ಯ ರತ್ನಮಂಡಲಮಂಡಿತಂ ॥೧೦॥

ಲಿಂಗಕೋಟಿಸಮಾಕೀರ್ಣಂ ರತ್ನತೋರಣಸಂಯುತಂ ।
ಹಾರದಾರಸಮಾಕೀರ್ಣಂ ರಾಜ್ಞಾಪಿ ಸಮಲಂಕೃತಂ ॥೧೧॥

ತತಃಪರಂ ಸ ಲಿಂಗಾನಿ ಪೂಜಯಿತ್ವಾ ಪ್ರಯತ್ನತಃ ।
ಪಶ್ಯನ್ ಲಿಂಗಾನ್ಯಪೂರ್ವಾಣಿ ಸ್ಥಿತಃ ಸಂಪೂಜಿತಾನಿ ಸಃ ॥೧೨॥

"ಎಲೈ ನಂದಿಕೇಶನೇ! ನಿಷಧದೇಶದ ಮಹಾರಾಜನು ಮಹಾಧರ್ಮಿಷ್ಠನಾಗಿರುವನು. ಅಲ್ಲದೇ ಶಿವರಾತ್ರಿವ್ರತವನ್ನು ಭಕ್ತಿಯಿಂದ ಮಾಡಿರುವನು. ಆದುದರಿಂದ ಆತನನ್ನು ಗೌರವದಿಂದ ಹೋಗಿಕಂಡು ವಿಮಾನದಲ್ಲಿ ಜಾಗ್ರತೆ ಇಲ್ಲಿಗೆ ಕರೆದುಕೊಂಡು ಬಾ." ॥೮॥

ಈರೀತಿಯಾದ ಶಿವವಚನವನ್ನು ಕೇಳಿ ನಂದಿಕೇಶನು ಅತ್ಯಂತ ಆನಂದದಿಂದ ಕೂಡಲೇ ಆ ರಾಜನನ್ನು ಕರೆದುಕೊಂಡು ಬರಲು ವಿಮಾನವನ್ನೇರಿ ಹೊರಟನು. ॥೯॥

ನಂದಿಯು ವೇಗದಿಂದ ಪ್ರಯಾಣಮಾಡಿ ಆ ರಾಜನ ಪಟ್ಟಣವನ್ನು ಸೇರಿದನು. ಆ ನಗರವು ಅತ್ಯಂತ ರಮ್ಯವಾಗಿದ್ದಿತು. ಅದರ ಸೊಬಗನ್ನು ನೋಡಿ ಆನಂದಿಸುತ್ತಾ ನಂದಿಯು ರಾಜನ ಅರಮನೆಯನ್ನು ಪ್ರವೇಶಿಸಿದನು. ಆ ಅರಮನೆಯು ಅತ್ಯಂತ ಸುಂದರವಾಗಿತ್ತು. ಅಲ್ಲಿ ಸಮಸ್ತ ಪದಾರ್ಥಗಳುರತ್ನಮಯವಾದದ್ದೇ. ಸುತ್ತಲೂ ರತ್ನಮಯವಾದ ತೋರಣದಿಂದ ಅಲಂಕರಿಸಿದ್ದರು. ಅಲ್ಲಿ ಅನೇಕ ಶಿವಲಿಂಗಗಳಿದ್ದವು. ಆ ರಾಜನೂ ಆತನ ಶಿವಭಕ್ತರಾದ ಪತ್ನಿಯರೂ ಅದೇ ಅರಮನೆಯಲ್ಲಿ ಇದ್ದರು. ॥೧೦-೧೧॥

ಆ ಶಿವಲಿಂಗಗಳನ್ನು ಕಂಡಕೂಡಲೇ ನಂದಿಕೇಶನು ಭಕ್ತಿಯಿಂದ ನಮಸ್ಕರಿಸಿ ತಾನೂ ಪೂಜಿಸಿದನು. ಅಲ್ಲಿ ನಾನಾ ವಿಧವಾದ ಶ್ರೇಷ್ಠವಾದ ಅಪೂರ್ವ ಶಿವಲಿಂಗಗಳಿದ್ದವು. ಅವುಗಳನ್ನೆಲ್ಲಾ ನೋಡಿನೋಡಿ ಆನಂದಪಟ್ಟನು. ॥೧೨॥

ತತಃಪರಂ ಸ ರಾಜಾಪಿ ಹಾರದಾರಸಮಾವೃತಃ ।
ಪ್ರಣತೋಽಪಿ ಕೃತಾರ್ಥೋಽಸ್ಮಿ ಧನ್ಯೋಽಸ್ಮೀತಿ ವದನ್ಮುಹುಃ ॥೧೩॥

ತತಃಪರಂ ರತ್ನರಮ್ಯೇ ಸ್ವರ್ಣಸಿಂಹಾಸನೇ ನೃಪಃ ।
ಉಪವಿಷ್ಟಂ ನಂದಿಕೇಶಂ ಪೂಜಯಾಮಾಸ ಸಾದರಂ ॥೧೪॥

ನಂದೀ ತತ್ಕೃತಪೂಜಯಾತಿಮುದಿತೋ ರಾಜಾನಮಾಹಾದರಾ
ದೇತದ್ರತ್ನವಿಮಾನಮದ್ಯ ಭವತೇ ಶಂಗೇನ ಸಂಪ್ರೇಷಿತಂ ।
ಆರೂಢೋ ಭವ ಹಾರದಾರಸಹಿತೋ ತುಷ್ಟಸ್ತ್ವದಭ್ಯರ್ಚಿತೋ
ಭೂತಾಯಾಂ ಗಿರಿರಾಜರಾಜತನಯಾಕಾಂತೋ ನಿತಾಂತಂ ನೃಪ ॥೧೫॥

ಇತ್ಯಾಕರ್ಣ್ಯ ಸ ಹಾರದಾರಸಹಿತೋ ರಾಜಾತಿತುಷ್ಟಸ್ತದಾ
ತತ್ರಾರುಹ್ಯ ಯಯೌ ತದಾ ಸಮಭವನ್ಮಂದಾರವೃಷ್ಟಿರ್ಮುಹುಃ ।

ಈರೀತಿ ನಂದಿಕೇಶ್ವರನು ಬಂದಿರುವನೆಂಬ ಸಮಾಚಾರವನ್ನು ತಿಳಿದಕೂಡಲೇ ಆ ರಾಜನು ತನ್ನ ಪತ್ನಿಯರೊಡನೆ ಬಂದು ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಇಂದು ತಾನೇ ಧನ್ಯನೆಂದು ನೆನೆದುಕೊಂಡನು. ॥೧೩॥

ಅನಂತರ ನಂದಿಕೇಶನನ್ನು ಸುವರ್ಣಮಯವಾದ ಸಿಂಹಾಸನದ ಮೇಲೆ ಕುಳ್ಳಿರಿಸಿ, ಅರ್ಘ್ಯಪಾದ್ಯಾದಿಗಳಿಂದಲೂ ಮಧುಪರ್ಕದಿಂದಲೂ ಅತ್ಯಂತ ಭಕ್ತಿಪುರಸ್ಸರವಾಗಿ ಪೂಜಿಸಿ ಸತ್ಕರಿಸಿದನು. ॥೧೪॥

ಆ ಪೂಜಾಸತ್ಕಾರಗಳಿಂದ ಅತ್ಯಂತ ಸಂತುಷ್ಟನಾದ ನಂದಿಕೇಶನು ರಾಜನನ್ನು ಕುರಿತು ಆದರದಿಂದ "ರಾಜನೇ! ಇದೋ ಈ ರತ್ನವಿಮಾನವನ್ನೇರು. ಇದನ್ನು ನಿನಗಾಗಿಯೇ ತಂದಿರುತ್ತೇನೆ. ನೀನು ಈವರೆಗೂ ಮಾಡಿದ ಶಿವಲಿಂಗಾರಾಧನೆಯಿಂದ ಮತ್ತು ಮಹಾಭೂತವ್ರತದಿಂದ ಪರಮೇಶ್ವರನು ಸಂತುಷ್ಟನಾಗಿ ನಿನ್ನನ್ನು ಕರೆದುಕೊಂಡು ಬಾರೆಂದು ವಿಮಾನದೊಡನೆ ನನ್ನನ್ನು ಕಳುಹಿಸಿದ್ದಾನೆ. ನಿನ್ನ ಪತ್ನಿಯರೊಡನೆ ವಿಮಾನವನ್ನು ಹತ್ತು. ನಿಮ್ಮನ್ನು ಪರಶಿವನ ಬಳಿಗೆ ಕರೆದುಕೊಂಡು ಹೋಗುವೆನು." ॥೧೫॥

ನಂದಿಕೇಶನ ಆ ಮಾತನ್ನು ಕೇಳಿದೊಡನೆಯೇ ರಾಜನಿಗೂ ಆತನ ಪತ್ನಿಯರಿಗೂ ಅತ್ಯಂತ ಆನಂದವಾಯಿತು. ಆಗ ಅವರೆಲ್ಲರೂ ಉತ್ಸಾಹದಿಂದ ವಿಮಾನವ

ತೂರ್ಯಾಣಾಂ ಧ್ವನಯೋಽಪಿ ತಾವದಸಕೃದ್ವೃತ್ತಾಃ ಪ್ರವೃದ್ಧಾಸ್ಸುರೈಃ
ಉತ್ಸಾಹೋಽಪಿ ಕೃತೋ ಹಿ ದುಂದುಭಿರವೈರ್ದೇವಾಂಗನಾನರ್ತನೈಃ॥೧೬॥

ತಂ ಪ್ರಸ್ಥಿತಂ ಸಮಾಲೋಕ್ಯ ವಿಮಾನವರಸಂಸ್ಥಿತಂ ।
ಅಶೈವದಾರಾಸ್ತಂ ಪ್ರಾಹುಸ್ತಸ್ಯೈವಾತಿಮನೋಹರಾಃ ॥೧೭॥

ಸೇವಾ ಕೃತಾ ಧವಧಿಯಾ ಬಹುಧಾ ತವ ಸಾದರಂ ।
ಅತಃ ಪರಂ ಗತಿಃ ಕಾ ವಾ ವದಾಸ್ಮಭ್ಯಂ ನೃಪೋತ್ತಮ ॥೧೮॥

ಪತಿವ್ರತಾನಾಂ ಪತಿರೇವ ದೇವಃ
ತತ್ಸೇವಯಾ ಸರ್ವನಿವಾಸಸಿದ್ಧಿಃ ।
ಇತಿ ಶ್ರುತಂ ತೇನ ಶಿವಾರ್ಚನೇನ
ಪ್ರೀತಿರ್ನ ಜಾತಾ ವಿಫಲಂ ಚ ಜನ್ಮ ॥೧೯॥

ನ್ನೇರಿ ಹೊರಡಲು ಮಂದಾರಾದಿಪುಷ್ಪವೃಷ್ಟಿಯಾಯಿತು. ಆಕಾಶದಲ್ಲಿ ಭೇರಿನಾದಗಳೂ ಮಂಗಳ ವಾದ್ಯಗಳೂ ಉಲಿಯುತ್ತಿದ್ದವು. ದೇವತೆಗಳು ದುಂದುಭಿಯನ್ನು ಬಾರಿಸಿದರು. ಅಪ್ಸರೆಯರು ಉತ್ಸಾಹದಿಂದ ನರ್ತನ ಮಾಡಿದರು. ॥೧೬॥

ಆ ರಾಜನಿಗೆ ಶಿವಭಕ್ತಿಯಿಲ್ಲದೆ, ಶಿವಾರಾಧನೆಯನ್ನು ಮಾಡದವರೂ ಕೆಲವು ಜನ ಪತ್ನಿಯರಿದ್ದರು. ರಾಜನು ವಿಮಾನವನ್ನೇರಿದ ಕೂಡಲೇ ಅವರು ದುಃಖದಿಂದಲೂ ಪಶ್ಚಾತ್ತಾಪದಿಂದಲೂ ಕಣ್ಣೀರಿಡುತ್ತಾ ರಾಜನನ್ನು ಕುರಿತು ಹೀಗೆ ಹೇಳಿದರು. ॥೧೭॥

"ಎಲೈ ಮಹಾರಾಜನೇ! ಈವರೆಗೂ ನೀನೇ ನಮಗೆ ಗತಿ ಎಂದೂ, ವಲ್ಲಭನೆಂದೂ ಅನೇಕ ವಿಧವಾಗಿ ನಿನ್ನ ಸೇವೆಯನ್ನು ಮಾಡಿರುವೆವು. ಈಗ ನಮ್ಮನ್ನು ಬಿಟ್ಟು ನೀನು ಹೊರಟುಹೋದರೆ ನಮ್ಮ ಗತಿ ಏನು ? ನಮ್ಮನ್ನು ಕಾಪಾಡುವವರು ಯಾರು ? ॥೧೮॥

ಎಲೈ ಮಹಾರಾಜನೇ! ನಾವು ಮೋಸಹೋದೆವು. ಪತಿವ್ರತಾಸ್ತ್ರೀಯರಿಗೆ ಪತಿಸೇವೆಯೇ ಪರಮಧರ್ಮವೆಂತಲೂ ಪತಿಯೇ ಪರದೈವವೆಂತಲೂ ಪತಿಸೇವೆಯಿಂದಲೇ ಉತ್ತಮಲೋಕ ಪ್ರಾಪ್ತಿಯಾಗುವುದೆಂದೂ ಹೇಳುತ್ತಿದ್ದರು. ಅದನ್ನು ಕೇಳಿ ಅದೇ ನಿಜವೆಂದು ನಂಬಿ ನಾವು ಶಿವಾರ್ಚನೆಯ ಗೋಜಿಗೆ ಹೋಗಲಿಲ್ಲ. ಕೇವಲ

ಪತಿಃ ಪತೀನಾಂ ಗಿರಿಜಾಪತಿರ್ಯಃ
ಸ ನಾರ್ಚಿತೋ ನಾನುವಿಲೋಕಿತೋಽಪಿ ।
ನಾಕರ್ಣಿತೋ ವಾ ನ ಕಥಾ ಶ್ರುತಾ ವಾ
ತ್ವತ್ಸೇವನಾತ್ಯಾದರತೋಽಪಿ ಮೋಹಾತ್ ॥೨೦॥

ಪ್ರತಾರಿತಾಃ ಸ್ಮೋ ದ್ವಿಜಭಾಮಿನೀಭಿಃ
ಭ್ರಾಂತಾಭಿರೀಶಾನಪರಾಙ್ಮುಖಾಭಿಃ ।
ಭರ್ತಾ ನರಶ್ರೇಷ್ಠಮುಸೇವಿತೇತಿ
ಹಾಹಾ ಹತಾಃ ಸ್ಮಃ ಕಿಮತಃ ಪರಂ ವಾ ॥೨೧॥

ಏವಂ ಪ್ರಲಪಮಾನಾಸು ಮಹಿಲಾಸು ಸ ಭೂಪತಿಃ ।
ಜಹೌ ರತ್ನಮಯೀಂ ರಜ್ಜುಂ ತದಾಕರ್ಷಣತತ್ಪರಃ ॥೨೨॥

ನಿನ್ನ ಸೇವೆಯನ್ನೇ ಮಾಡುತ್ತಾ ಕಾಲವನ್ನು ಕಳೆದೆವು. ಅದು ಅನುಚಿತವಾಯಿತೆಂದೂ ನಮ್ಮ ಜೀವನವು ವ್ಯರ್ಥವಾಯಿತೆಂದೂ ಈಗ ತಿಳಿದಂತಾಯಿತು. ॥೧೯॥

ನಾವು ಪತಿ ಎಂಬ ಮೋಹದಲ್ಲಿ ಬಿದ್ದು ಕೇವಲ ನೀನೇ ಗತಿ ಎಂದು ಭ್ರಾಂತರಾಗಿ ನಿನ್ನನ್ನೇ ಸೇವಿಸಿದೆವು. ಸಕಲ ಪತಿಯರಿಗೂ ಪತಿಯಾಗಿರುವವನು ಪರಮೇಶ್ವರನು ಎಂಬುದನ್ನು ನಾವು ಅರಿಯದೇ ಕೆಟ್ಟೆವು. ನಾವು ತತ್ತ್ವವನ್ನು ತಿಳಿಯದಿದ್ದುದರಿಂದ ಶಿವಾರ್ಚನೆಯನ್ನು ನಡೆಸಲಿಲ್ಲ. ಆತನ ದರ್ಶನವನ್ನು ಸಹ ಮಾಡಲಿಲ್ಲ. ಆತನ ಕಥೆಯನ್ನೂ ಕೇಳಲಿಲ್ಲ. ॥೨೦॥

ನಮಗೆ ಈ ರೀತಿ ಬೋಧನೆಯನ್ನು ಮಾಡಿದವರು ದ್ವಿಜಪತ್ನಿಯರು. ಅವರೂ ಸಹ ಶಿವಾರ್ಚನೆಯನ್ನು ಮಾಡುತ್ತಿರಲಿಲ್ಲ. ಪತಿಯೇ ಪರದೈವವೆಂದು ಅವರೂ ಭ್ರಾಂತರಾಗಿ ನಮಗೂ ಆ ರೀತಿ ಪತಿಯನ್ನೇ ಸೇವಿಸಬೇಕೆಂದೂ ಈಶ್ವರ ಪೂಜೆ ಅನಾವಶ್ಯಕವೆಂದು ಉಪದೇಶಮಾಡಿ ಮೋಸಮಾಡಿದರು. ಪ್ರಿಯತಮನೇ, ಈಗ ಏನು ಮಾಡುವುದು? ನಾವು ಹಾಳಾಗಿಬಿಟ್ಟೆವಲ್ಲಾ? ನಮಗೆ ಮುಂದೇನು ಗತಿ?" ॥೨೧॥

ಈ ರೀತಿ ಆ ಅಶೈವರಾದ ಪತ್ನಿಯರು ಗೋಳಾಡುತ್ತಿರುವುದನ್ನು ನೋಡಿ ಅವರನ್ನೂ ಕರೆದುಕೊಂಡೇ ಹೋಗಬೇಕೆಂಬ ಅಪೇಕ್ಷೆಯಿಂದ ರಾಜನು ವಿಮಾನದ ಮೇಲಕ್ಕೆ ಕರೆಸಿಕೊಳ್ಳುವುದಕ್ಕಾಗಿ ಒಂದು ರತ್ನಮಯವಾದ ಹಗ್ಗವನ್ನು ಕೆಳಗಡೆಗೆ ಬಿಟ್ಟನು. ॥೨೨॥

ರಜ್ಜುಂ ತಾಂ ಸಮುಪಾದಾಯ ಮಹಿಲಾಸ್ತಸ್ಯ ತಾಸ್ತದಾ ।
ಬಧ್ವಾ ಕಂಠೇ ದೃಢಂ ವಾತೈರ್ನಿಹತಾಸ್ತಾ ಯಯುಸ್ತತಃ ॥೨೩॥

ದೃಷ್ಟ್ವಾ ತದ್ರಜ್ಜುಸಂಬಂಧಾಶ್ಚಲಿತಾಶ್ಚಾತಿವಾತತಃ ।
ಯಮೋ ವಿಲೋಕ್ಯ ದೂರೇಣ ಚಿತ್ರಗುಪ್ತಮುವಾಚ ಸಃ ॥೨೪॥

॥ ಯಮ ಉವಾಚ ॥

ಯದಂತರಾಲೇ ಚಲಿತಾಸ್ಸೂಕ್ಷ್ಮರಜ್ಜುಸಮಾಶ್ರಯಾಃ ।
ತಾಸಾಂ ಕಿಮಸ್ತಿ ವೃತ್ತಾಂತಮಿತಿ ಪ್ರಾಹಾತಿವಿಸ್ಮಿತಃ ॥೨೫॥

॥ ಚಿತ್ರಗುಪ್ತ ಉವಾಚ ॥

ಯಃ ಪಾರಿಭಾಷಿಕೋ ಭರ್ತಾ ನರಸ್ತಸ್ಯ ಪರಂ ಕೃತಾ ।
ಸೇವಾ ತಾಭಿರ್ವಿಶ್ವಭರ್ತಾ ನ ಕದಾಭ್ಯರ್ಚಿತೋ ಯಮ ॥೨೬॥

ಆ ಪತ್ನಿಯರು ತಾವೂ ವಿಮಾನವನ್ನೇರಬೇಕೆಂಬ ಅತ್ಯುತ್ಸಾಹದಿಂದ ಆ ರತ್ನಮಯವಾದ ಹಗ್ಗವನ್ನು ಅವಸರವಾಗಿ ಕತ್ತಿನಲ್ಲಿ ಕಟ್ಟಿಕೊಂಡರು. ಆ ಕೂಡಲೇ ಆ ಹಗ್ಗವು ಅಲ್ಲಿಯೇ ಬಿಗಿದುಕೊಂಡುಬಿಟ್ಟಿತು. ಆಗ ಅವರು ಉಸಿರು ಕಟ್ಟಿಕೊಂಡು ಹಾಗೆಯೇ ಸ್ವಲ್ಪಹೊತ್ತಿನೊಳಗಾಗಿ ಅವರೆಲ್ಲರೂ ಹಿಂಬಾಲಿಸಿ ಹೋದರು. ಅಂತೂ ಅವರ ಶರೀರಗಳು ಮಾತ್ರ ಹಗ್ಗದಲ್ಲಿಯೇ ನೇತಾಡುತ್ತಿದ್ದವು. ||೨೩||

ಆ ಶರೀರಗಳು ದೊಡ್ಡಗಾಳಿ ಬೀಸಿದೊಡನೆ ಜೋರಾಗಿ ತೂಗಾಡುತ್ತಿದ್ದವು. ಇದು ಆ ಸಮಯದಲ್ಲಿ ಹತ್ತಿರದಲ್ಲಿಯೇ ಸಂಚರಿಸುತ್ತಿದ್ದ ಯಮಧರ್ಮನ ಕಣ್ಣಿಗೆ ಬಿದ್ದಿತು. ಇದನ್ನು ದೂರದಿಂದ ನೋಡಿದಕೂಡಲೇ ಯಮನು ಚಿತ್ರಗುಪ್ತನ ಸಂಗಡ ಹೀಗೆ ಕೇಳಿದನು. ||೨೪||

"ಎಲೈ ಚಿತ್ರಗುಪ್ತನೇ, ಅಲ್ಲಿ ನೋಡು. ಯಾರೋ ಹೆಂಗಸರು ಹಗ್ಗದಲ್ಲಿ ನೇತಾಡುತ್ತಾ ಯಾವನನ್ನೋ ಅನುಸರಿಸಿಕೊಂಡು ಹೋಗುತ್ತಿರುವಂತಿದೆ. ಅವರು ಯಾರು ? ಅವರ ಪಾಪಪುಣ್ಯಕರ್ಮಗಳ ವೃತ್ತಾಂತವೇನು ? ಬೇಗ ಹೇಳು. ಹೀಗೆಂದು ಯಮನು ಆತುರದಿಂದ ಕೇಳಿದನು. ||೨೫||

ಪ್ರಪಂಚದಲ್ಲಿ ವ್ಯಾವಹಾರಿಕವಾಗಿ ಸ್ತ್ರೀಯರ ಪತಿಯರಿಗೆ ಭರ್ತಾ ಎಂದು ಹೇಳುತ್ತಾರೆ. ಆ ಭರ್ತನೇ ಮುಖ್ಯನೆಂದು ತಿಳಿದುಕೊಂಡು ಈ ಸ್ತ್ರೀಯರು ಆತ

ಹಾರಾಶ್ಚ ದಾರಾ ಬಹವೋ ನೃಪಸ್ಯ
ತೈರನ್ವಿತೋ ಯಾತಿ ವಿಮಾನಮಧ್ಯಂ ।
ಆರಾಧಿತಶ್ಶಂಕರಲಿಂಗಪೂಜಾ
ಪ್ರಭಾವತಶ್ಶಂಕರಮಂದಿರಾಯ ॥೨೭॥

ಇತಿ ತದ್ವಚನಂ ಶ್ರುತ್ವಾ ಪ್ರೇಷಯಾಮಾಸ ಕಿಂಕರಾನ್ ।
ಯಮಸ್ತದ್ವಾರಣಾಯಾಶು ತಾಡನಾಯಾಪಿ ಬಾಡವಾನ್ ॥೨೮॥

ತತಃ ಪರಂ ತು ತೈರೂರ್ಧ್ವಂ ಗತಂ ವೇಗೇನ ಬಾಡವೈಃ ।
ಛಿನ್ನಾ ರಜ್ಜುರ್ನಿಪತಿತಾಸ್ತಾಸ್ಸರ್ವಾ ಯಮ ಮಂದಿರೇ ॥೨೯॥

ನನ್ನೇ ಸರ್ವದಾ ಸೇವಿಸಿದರು. ಆತನು ಮನುಷ್ಯಮಾತ್ರನೆಂದೂ ಕೇವಲ ಪರಮೇಶ್ವರನೇ ಸಕಲ ಜಗತ್ತಿಗೂ ಭರ್ತನೆಂದೂ ಆ ಸ್ತ್ರೀಯರು ತಿಳಿಯದೆ ಸದಾ ತಮ್ಮ ಪತಿಯನ್ನು ಉಪಚರಿಸಿದರೇ ವಿನಾ ಶಂಕರನನ್ನು ಒಂದು ಸಲವೂ ಆರಾಧಿಸಲಿಲ್ಲ. ||೨೬||

ಅದೇ ರಾಜನಿಗೆ ಶಿವಭಕ್ತಿಯುಕ್ತರಾದ ಅನೇಕ ಪತ್ನಿಯರಿರುವರು. ಅವರೊಡನೆ ಆ ರಾಜನು ಬಹುಕಾಲ ಶಿವಾರಾಧನೆಯನ್ನೂ ಶಿವಲಿಂಗಪೂಜೆಯನ್ನೂ ಮಾಡಿರುವುದರಿಂದ ಆ ಪುಣ್ಯಕ್ಕೆ ಫಲವಾಗಿ ತನ್ನ ಶಿವಭಕ್ತರಾದ ಪತ್ನಿಯರೊಡನೆ ವಿಮಾನದಲ್ಲಿ ಕುಳಿತುಕೊಂಡು ಕೈಲಾಸಕ್ಕೆ ಹೋಗುತ್ತಿದ್ದಾನೆ." ಹೀಗೆಂದು ಚಿತ್ರಗುಪ್ತನು ಹೇಳಿದನು. ||೨೭||

ಈ ರೀತಿಯಾದ ಚಿತ್ರಗುಪ್ತನ ಮಾತನ್ನು ಕೇಳಿದ ಕೂಡಲೇ ಯಮನು ಆ ಸ್ತ್ರೀಯರು ಪಾಪಿಯರೆಂದೇ ನಿಶ್ಚಯಿಸಿ ಅವರನ್ನು ಅಲ್ಲಿಯೇ ತಡೆದು ನರಕಕ್ಕೆ ಎಳೆದುಕೊಂಡುಬರಬೇಕೆಂದೂ, ಅವರಿಗೆ ತಾಡನಾದಿ ಶಿಕ್ಷೆಯನ್ನು ಕೊಡಲೆಂದೂ ತನ್ನ ದೂತರಿಗೆ ಆಜ್ಞಾಪಿಸಿ ತನ್ನ ರಥದ ಕುದುರೆಗಳನ್ನೂ ಓಡಿಸುವಂತೆ ಹೇಳಿದನು.||೨೮||

ಕೂಡಲೇ ಆ ಕುದುರೆಗಳು ವೇಗವಾಗಿ ಓಡಿ ಮೇಲಕ್ಕೆ ವಿಮಾನದ ಬಳಿಗೆ ರಥವನ್ನು ಮುಟ್ಟಿಸಿದವು. ಆಗ ಯಮದೂತರು ಆ ಹಗ್ಗವನ್ನು ಕತ್ತರಿಸಿದರು. ಅದರಲ್ಲಿ ನೇತಾಡುತ್ತಿದ್ದ ಸ್ತ್ರೀಯರೆಲ್ಲರೂ ಅಲ್ಲಿಂದ ನರಕದಲ್ಲೇ ಬಿದ್ದರು. ||೨೯||

ಅತಿಪ್ರಲಪಮಾನಾಸ್ತಾಸ್ಸರ್ವಾಃ ಖಿನ್ನಾನನಾಸ್ತಥಾ ।
ಯಮಕೋಪಾಗ್ನಿನಾ ತಾವನ್ಮೇಚಕಾ ಇವ ಸಂಸ್ಥಿತಾಃ ॥೩೦॥

ತದ್ದುರ್ದಶಾಂ ವಿಲೋಕ್ಯೈವ ಹಾರದಾರಸಮನ್ವಿತಃ ।
ನಂದಿಕೇಶಮುವಾಚೇದಂ ವಚನಂ ಭೂಪತಿಸ್ತದಾ ॥೩೧॥

॥ ನಿಷಧೇಶ ಉವಾಚ ॥

ಪಶ್ಯ ಪಶ್ಯ ಮದೀಯಾಸ್ತೇ ಯಮದೂತನಿವಾರಿತಾಃ ।
ವಿಚ್ಛಿನ್ನರಜ್ಜುಬಂಧಾಃ ಕಿಂ ಯಮಾಂತಿಕಮುಪಾಗತಾಃ ॥೩೨॥

॥ ನಂದಿಕೇಶ್ವರ ಉವಾಚ ॥

ವಿಶ್ವಭರ್ತಾ ಮಹಾದೇವೋ ಯದಿ ನಾರಾಧಿತಸ್ತದಾ ।
ಕಥಂ ವಾ ಸುಖಲೇಶೋಽಪಿ ವದ ರಾಜನ್ ವಿಚಾರ್ಯ ಮಾಂ ॥೩೩॥

ನರಕದಲ್ಲಿ ಬಿದ್ದೊಡನೆಯೇ ಆ ಸ್ತ್ರೀಯರು ಅತ್ಯಂತ ದುಃಖಿತರಾಗಿ ಪ್ರಲಾಪಿಸಿದರು. ಯಮನಿಗೆ ಆಗ ಬೆಂಕಿಯನ್ನೇ ಉಗುಳುವಷ್ಟು ಕೋಪಬಂದಿತು. ಅಂಥ ಉಗ್ರಸ್ವರೂಪನಾದ ಯಮನನ್ನು ನೋಡಿ ಅವರು ಹೆದರಿಕೆಯಿಂದ ಶ್ಯಾಮಲ ವರ್ಣದವರಾಗಿ ಹೋದರು. ॥೩೦॥

ಅಷ್ಟುಹೊತ್ತಿಗೆ ಶಿವಭಕ್ತಪತ್ನಿಯರೊಂದಿಗೆ ಪ್ರಯಾಣಮಾಡುತ್ತಿದ್ದ ಆ ರಾಜನ ದೃಷ್ಟಿಯು ಆ ಸ್ತ್ರೀಯರ ಮೇಲೆ ಬಿದ್ದಿತು. ಅವರು ಗೋಳಾಡುವುದನ್ನು ನೋಡಿ ಕೂಡಲೇ ನಂದಿಕೇಶನನ್ನು ಕುರಿತು ಹೀಗೆ ಕೇಳಿದನು. ॥೩೧॥

ನಂದಿಕೇಶನೇ, ನೋಡು ನೋಡು. ನನ್ನವರನ್ನು ಯಮದೂತರು ನರಕಕ್ಕೆ ಸೆಳೆದುಕೊಂಡು ಹೋಗುತ್ತಿದ್ದಾರೆ. ನನ್ನ ಪತ್ನಿಯರನ್ನು ನನ್ನೊಡನೆ ಬಾರದಂತೆ ತಡೆದು ನಾನು ಕಟ್ಟಿದ ಹಗ್ಗವನ್ನು ಕತ್ತರಿಸಿದ್ದಾರೆ. ಏಕೆ ಅವರನ್ನು ಹಾಗೆ ಎಳೆದು ಕೊಂಡು ಹೋಗುತ್ತಿದ್ದಾರೆ? ಎಂದು ಪ್ರಶ್ನಿಸಲು ಆಗ ನಂದೀಶ್ವರನು ರಾಜನನ್ನು ಕುರಿತು ಹೇಳಿದನು. ॥೩೨॥

ಮಹಾರಾಜ, ಪ್ರಪಂಚಕ್ಕೆಲ್ಲಾ ಅಧಿಪತಿಯು ಪರಮೇಶ್ವರನು. ಆತನನ್ನು ಆರಾಧಿಸದ ಬಳಿಕ ಸುಖವೆಲ್ಲಿಂದ ಬರುವುದು? ಹೇಳು ನೋಡೋಣ. ಇದನ್ನು ನೀನೇ ಆಲೋಚಿಸಿ ನೋಡು. ಆ ಸ್ತ್ರೀಯರು ಒಂದುಸಲವೂ ಶಿವನನ್ನು ಆರಾಧಿಸಿ

ತವಾಪಿ ನಾತ್ರಾಗಮನಂ ಪ್ರಸಕ್ತಂ
ತದ್ಯೋಗತೋ ಯದ್ಯಪಿ ಸರ್ವಥಾಪಿ ।
ತಥಾಪಿ ಭೂತಾವ್ರತತತ್ಪರತ್ವಾತ್
ಅಭ್ಯಾಗತೋಽಸಿ ತ್ರಿಪುರಾರಿಮಾರ್ಗಂ ॥೩೪॥

ಏತೈಶ್ಚ್ಯದೃಷ್ಟೈರ್ಹರದಾರೈಸ್ಸಮೇತೋ
ದೈವಾದೇತತ್ಸಾಧುಸಂಭಾಷಣೇನ ।
ಭೂತಾ ನೀತಾ ಶಂಕರಾರಾಧನಾದ್ಯೈ
ರೇತೈರಾಸೀದುತ್ತಮಾ ತೇ ಗತಿಶ್ಚ ॥೩೫॥

ಅಶಾಂಕರಾಭ್ಯಾಗಮನಂ ಕದಾಚಿತ್
ಕೈಲಾಸಮಾರ್ಗೇ ನೃಪ ಭರ್ಗಮಾರ್ಗಃ ।
ಸ್ವರ್ಗಾಪವರ್ಗಾವತಿದುರ್ಗರೂಪೌ
ಯತಸ್ಸುರಾಣಾಮಪಿ ದುರ್ಗಮೋಽಯಂ ॥೩೬॥

ರುವುದಿಲ್ಲ. ಅಂದಮೇಲೆ ಅವರಿಗೆ ಹೇಗೆ ನರಕವು ತಪ್ಪುವುದು? ಸುಖವು ಹೇಗೆ ಉಂಟಾಗುವುದು? ॥೩೩॥

ಎಲೈ ರಾಜನೇ, ಅವರಂತೂ ಕೈಲಾಸಕ್ಕೆ ಬರಲಾರರು. ಅದಿರಲಿ. ಅವರ ಸಹವಾಸದಿಂದ ನೀನೂ ಕೈಲಾಸಕ್ಕೆ ಸರ್ವಥಾ ಯೋಗ್ಯನಾಗಿರಲಿಲ್ಲ. ಆದರೆ ಆ ಶಿವರಾತ್ರಿವ್ರತವನ್ನು ಭಕ್ತಿಯಿಂದ ಮಾಡಿದೆ. ಆ ಪುಣ್ಯದಿಂದ ಕೈಲಾಸಮಾರ್ಗವು ನಿನಗೆ ದೊರೆತಿರುತ್ತದೆ. ॥೩೪॥

ನಿನ್ನ ಒಳ್ಳೆಯ ಅದೃಷ್ಟದಿಂದ ಈ ಶಿವಭಕ್ತಪತ್ನಿಯರ ಮಾತನ್ನು ಕೇಳಿ ನೀನು ಭೂತಾವ್ರತವನ್ನು ಮಾಡಿ ಶಿವನನ್ನು ಆರಾಧಿಸಿದೆ. ಅದು ನಿನ್ನ ಪುಣ್ಯ. ಈಗ ನಿನಗೆ ಉತ್ತಮಗತಿಯು ಸಿಕ್ಕಿರುವುದು ಈ ಶಿವಭಕ್ತಿಯುತರಾದ ಪತ್ನಿಯರ ದೆಸೆಯಿಂದ ಎಂದು ತಿಳಿ. ॥೩೫॥

ಎಲೈ ರಾಜನೇ, ಕೈಲಾಸಮಾರ್ಗದಲ್ಲಿ ಶಿವಭಕ್ತರಲ್ಲದವರು ಎಂದೂ ಸಂಚರಿಸಲಾರರು. ಏಕೆಂದರೆ ಅದು ಸಾಕ್ಷಾತ್ ಪರಮೇಶ್ವರನ ಮಾರ್ಗವಾಗಿರುವುದು. ಸ್ವಾಭಾವಿಕವಾಗಿಯೇ ಸ್ವರ್ಗಮಾರ್ಗವೂ ಮೋಕ್ಷಮಾರ್ಗವೂ ದುರ್ಲಭವಾಗಿರು

ನಾನ್ಯೈರ್ಧರ್ಮೈರ್ಯಾತಿ ಕೈಲಾಸಮಾರ್ಗಂ
ಧರ್ಮಾಭಾಸೈಸ್ತೈರಿದಂ ಭಾಗ್ಯಮೇವ ।
ಕಿಂ ಪ್ರಾಪ್ತವ್ಯಂ ಶಂಕರಾರಾಧನೇನ
ಪ್ರಾಪ್ಯಂ ಭಾಗ್ಯಂ ಕೇವಲಂ ದುರ್ಲಭತ್ವಾತ್ ॥೩೭॥

ರಜ್ಜುರ್ದತ್ತಾ ಯಾ ತ್ವಯಾ ತನ್ನಿರಾಸಃ
ಕರ್ತುಂ ತಾವನ್ನಾಭವದ್ಬುದ್ಧಿರಸ್ಯ ।
ದ್ರಷ್ಟವ್ಯಂ ಕಿಂ ಕೌತುಕಂ ಭಾವಿ ತಾವಾನ್
ಮಾರ್ಗೇ ತಸ್ಮಿನ್ನಿತ್ಯವೈಹಿ ತ್ವಮಾದೌ ॥೩೮॥

ತತ್ಕಿಂ ದೃಷ್ಟಂ ಕೌತುಕಂ ಪಶ್ಯ ಪಶ್ಯ
ತ್ವದ್ಭಾರ್ಯಾಣಾಂ ದುರ್ಭಗಾಣಾಂ ವಿಶಿಷ್ಯ ।
ಕಾಲಕ್ರೋಧಾನ್ಮೇಚಕಾಕಾರತಾಂತಾಃ
ಪ್ರಾಪ್ತಾಸ್ಸರ್ವಾಶ್ಚರ್ಯಪೂಜಾವಿಹೀನಾಃ ॥೩೯॥

ತ್ತದೆಯಲ್ಲವೆ! ಆದುದರಿಂದ ಈ ಕೈಲಾಸಮಾರ್ಗದಲ್ಲಿ ದೇವತೆಗಳೂ ಸಹ ಸುಲಭವಾಗಿ ಸಂಚರಿಸಲಾರರು. ॥೩೬॥

ಶಿವಧರ್ಮವನ್ನುಳಿದು ಬೇರೆಲ್ಲ ಧರ್ಮಗಳೂ ಕೇವಲ ಧರ್ಮಾಭಾಸಗಳು. ಅಂದರೆ ಧರ್ಮದಂತೆ ತೋರುತ್ತವೆ. ಆದರೆ ಅವೇ ಧರ್ಮದ ಪರಮ ರಹಸ್ಯವಲ್ಲ. ಆದುದರಿಂದ ಅಂಥ ಧರ್ಮಾನುಷ್ಠಾನತತ್ಪರರಾದರೂ ಈ ಕೈಲಾಸಮಾರ್ಗವು ಅವರಿಗೆ ದೊರೆಯುವುದಿಲ್ಲ. ಈ ಭಾಗ್ಯವು ಕೇವಲ ಶಂಕರಾರಾಧನೆಯಿಂದ ಮಾತ್ರವೇ ದೊರೆಯತಕ್ಕದು. ಇದು ಅತ್ಯಂತ ದುರ್ಲಭವಾಗಿರುವುದರಿಂದಲೇ ಪರಮ ಭಾಗ್ಯವೆನಿಸಿರುವುದು. ॥೩೭॥

ಆ ಪತ್ನಿಯರಿಗೆ ನೀನೇ ಹಗ್ಗವನ್ನು ಕೊಟ್ಟಿದ್ದರಿಂದ ನಾನು ತಡೆಯದೆ ಸುಮ್ಮನಿದ್ದೆ. ಅವರನ್ನಲ್ಲಿಯೇ ತ್ಯಾಗಮಾಡಿ ಹೋಗಲು ನನಗೆ ಮನಸ್ಸು ಬರಲಿಲ್ಲ. ಆದರೆ, ಈಗ ನಡೆದಿದ್ದುದನ್ನು ನೀನು ನೋಡಿದೆ ತಾನೆ? ಈ ಮಾರ್ಗದಲ್ಲಿ ಹೀಗೆಯೇ ಎಷ್ಟೋ ವಿಸ್ಮಯಕರವಾದ ಘಟನೆಗಳು ನಡೆಯುತ್ತಲೇ ಇರುತ್ತವೆಂದು ತಿಳಿ. ॥೩೮॥

ನೀನು ನೋಡಿದುದು ಇದೇ ಮೊದಲು. ಅದು ಅತ್ಯಾಶ್ಚರ್ಯವಲ್ಲ. ಈಗ ನೋಡು. ಅಲ್ಲಿ ನಿನ್ನ ಆ ಭಾಗ್ಯಹೀನ ಪತ್ನಿಯರು ಎಷ್ಟು ಪೇಚಾಡುತ್ತಿರುವರು.

ಯೇ ನಾರ್ಚಯಂತಿ ಭಗವಂತಮಶಾಂತಚಿತ್ತಾಃ
ಸ್ವಾಂತೇ ನಿಧಾಯ ವಿಧಿನಾ ಗಿರಿಜಾಸಹಾಯಂ ।
ಮೃತ್ಯುಂಜಯಂ ಸದಯಮಾಗಮವೃಂದವೇದ್ಯಂ
ತೇಷಾಂ ಕಥಂ ಭವತಿ ಶೋಭನವೃಂದವಾರ್ತಾ ॥೪೦॥

ಮಮಾಪಿ ಶಕ್ತಿಃ ಕಥಮಿಂದುಮೌಳಿ
ಪ್ರಸಾದಲೇಶೇನ ವಿನಾಪಿ ತಾಸಾಂ ।
ಶ್ರೀಭರ್ಗಮಾರ್ಗೇಷ್ವವಲೋಕನೇನ
ವಾರ್ತಾಪಿ ತಾವತ್ಸಹ ದೂರತಸ್ಸ್ಯಾತ್ ॥೪೧॥

ತಾಸಾಂ ನ ತಾವನ್ನಯನಂ ವಿಮಾನ
ವರೇಣ ನೂನಂ ಕುಪಿತಃ ಪ್ರಭುಸ್ಸ್ಯಾತ್ ।
ಶಂಭುಃ ಸ್ವತಂತ್ರೋ ನ ಭವಾಮಿ ತಾಭಿಃ
ಕಾರ್ಯಂ ನ ಕಿಂಚಿತ್ತವ ವಾ ಮಮಾಪಿ ॥೪೨॥

ಯಮನ ಕೋಪಕ್ಕೆ ಪಾತ್ರರಾಗಿ ಭಯದಿಂದ ಕಪ್ಪಾಗಿ ಬಾಡಿಹೋಗಿರುವರು. ಶಿವಪೂಜೆಯನ್ನು ಮಾಡದಿದ್ದುದರಿಂದಲೇ ಅವರಿಗೆ ಈ ದುರವಸ್ಥೆಯು ಪ್ರಾಪ್ತ ವಾಯಿತು. ॥೩೯॥

ಆ ಪರಮೇಶ್ವರನನ್ನು ಯಾರು ಪೂಜಿಸುವುದಿಲ್ಲವೋ, ಯಾರು ಈರ್ಷ್ಯಾ ಮೋಹಗಳಿಂದ ಕಲುಷಿತಮನಸ್ಕರಾಗಿ ಶಂಕರನನ್ನು ಧ್ಯಾನಿಸುವುದಿಲ್ಲವೋ, ಸಕಲ ವೇದವೇದಾಂತಸಂಸ್ತುತನಾದ ಮೃತ್ಯುಂಜಯನನ್ನು ಯಾರು ಭಜಿಸುವುದಿಲ್ಲವೋ ಅವರಿಗೆ ಶ್ರೇಯಸ್ಸು ಹೇಗೆ ಉಂಟಾದೀತು? ಎಂದೂ ಇಲ್ಲ. ॥೪೦॥

ನನಗೆ ಈ ಕೈಲಾಸಮಾರ್ಗಗಳಲ್ಲಿ ಸ್ವಚ್ಛಂದವಾಗಿ ಸಂಚರಿಸುವ ಶಕ್ತಿಯೂ ಆ ಪರಮೇಶ್ವರನ ಕೃಪಾಕಟಾಕ್ಷ ಲೇಶದ ಮಹಿಮೆಯಿಂದಲೇ ಪ್ರಾಪ್ತವಾಗಿರುವುದು. ಆತನ ಅನುಗ್ರಹವಿಲ್ಲದಿದ್ದರೆ ಇಲ್ಲಿ ಸಂಚರಿಸುವುದಂತೂ ಇರಲಿ, ಇದನ್ನು ನೋಡುವ ಮಾತೇ ಎಷ್ಟೋ ದೂರವಿರುತ್ತದೆ. ॥೪೧॥

ಆ ನಿನ್ನ ಪತ್ನಿಯರನ್ನು ಈ ವಿಮಾನದಲ್ಲಿ ಕೂರಿಸಿಕೊಂಡು ಹೋಗುವ ಹಾಗಿಲ್ಲ. ನಾವೇನಾದರೂ ಅವರನ್ನು ಇದರಲ್ಲಿ ಕೂರಿಸಿದರೆ ಶಂಕರನು ಕೋಪಗೊಳ್ಳು ವನು. ಈ ವಿಚಾರದಲ್ಲಿ ಸಾಕ್ಷಾತ್ ಪರಮೇಶ್ವರನೇ ಸರ್ವಸ್ವತಂತ್ರನು. ಆದುದರಿಂದ

ಅಪಾರಜನ್ಮಾರ್ಜಿತಪುಣ್ಯರಾಶಿಃ
ಯ ಏವ ಲೋಕೇ ಸ ಪರಂ ಮಹೇಶಂ।
ಸ್ಪ್ರಾಪ್ನೋತಿ ನಾನ್ಯಃ ಖಲು ತಾಭಿರೀಶೋ
ನಾರಾಧಿತೋಽತೋ ನಯನಂ ಕಥಂ ವಾ ॥೪೩॥

ಕದಾಪಿ ನಾರಾಧಿತಮೇವ ಲಿಂಗಂ
ದೃಷ್ಟಂ ಚ ಭಕ್ತ್ಯಾ ನ ನತಂ ಚ ತಾಭಿಃ।
ಅತಃ ಕಥಂ ವಾ ನಯನಂ ಚ ತಾಸಾಂ
ಕೈಲಾಸದೇಶೇಷು ವಿನಾತಿದೇಶೈಃ ॥೪೪॥

ಶಿವಾತಿದೇಶೇನ ವಿನಾ ನ ಕಾರ್ಯಂ
ಕೃತಂ ಕದಾಪಿ ತ್ವರಯಾ ಮಯಾಪಿ।
ಅತಃ ಪರಂ ಸಾ ನ ಮತಾಪಿ ವಾರ್ತಾ
ನೇತುಂ ಪ್ರಯತ್ನೋಽಪಿ ವೃಥಾ ತದಾಸ್ಯಾತ್ ॥೪೫॥

ಈ ಸ್ತ್ರೀಯರ ವಿಚಾರದಲ್ಲಿ ನನ್ನಿಂದಾಗಲಿ ನಿನ್ನಿಂದಾಗಲಿ ಏನನ್ನೂ ಮಾಡಲು ಸಾಧ್ಯವಿರುವುದಿಲ್ಲ. ॥೪೨॥

ಯಾವನು ಅನಂತ ಜನ್ಮಗಳಿಂದಲೂ ಪುಣ್ಯಸಂಗ್ರಹವನ್ನು ಮಾಡಿಕೊಂಡಿರುತ್ತಾನೆಯೋ ಆತನೇ ಪರಮೇಶ್ವರನ ಸಾಮೀಪ್ಯವನ್ನು ಪಡೆಯುವನು. ಬೇರೆಯುವರು ಖಂಡಿತ ಆತನ ಸಾನ್ನಿಧ್ಯವನ್ನು ಪಡೆಯಲಾರರು. ಶಿವನನ್ನು ಒಂದು ಸಲವೂ ಆರಾಧಿಸದ ಈ ಸ್ತ್ರೀಯರನ್ನು ಹೇಗೆ ಕರೆದುಕೊಂಡು ಹೋಗುವುದು ? ॥೪೩॥

ಆ ನಿನ್ನ ಪತ್ನಿಯರು ಯಾವಾಗಲೂ ಶಿವಲಿಂಗವನ್ನು ಅರ್ಚಿಸಿರುವುದಿಲ್ಲ. ಅಥವಾ ಒಂದು ಸಲವೂ ಸಂದರ್ಶಿಸಿರುವುದಿಲ್ಲ. ಶಿವಲಿಂಗಕ್ಕೆ ಎಂದೂ ಇವರು ಭಕ್ತಿಯಿಂದ ನಮಸ್ಕರಿಸಿರುವುದಿಲ್ಲ. ಅಂದಮೇಲೆ ಇವರನ್ನು ಕೈಲಾಸಕ್ಕೆ ಹೇಗೆ ಕರೆದುಕೊಂಡು ಹೋಗುವುದು? ಅಥವಾ ಹಾಗೆಮಾಡುವುದಕ್ಕೆ ಪರಮೇಶ್ವರನ ಅಪ್ಪಣೆಯಾದರೂ ಇದ್ದಿದ್ದರೆ ಆಗಬಹುದಾಗಿತ್ತು. ಅಪ್ಪಣೆಯೂ ಇಲ್ಲ. ॥೪೪॥

ನಾನು ಈವರೆಗೆ ಎಷ್ಟೇ ಆತುರವಿದ್ದರೂ ಪರಮೇಶ್ವರನ ಅಪ್ಪಣೆ ಇಲ್ಲದೇ ಏನನ್ನೂ ಎಂದೂ ಮಾಡಿರುವುದಿಲ್ಲ. ಇನ್ನು ಮುಂದೆಯೂ ಆತನ ಆಜ್ಞೆಯನ್ನು ಒಂದು ಹೆಜ್ಜೆಯೂ ಮೀರಲಾರೆ. ಆದುದರಿಂದ ಅವರನ್ನು ಕರೆದುಕೊಂಡು ಹೋ

ಯಮೋಽಪಿ ತಾವತ್ಕಠಿನೋ ವಚೋ ನೋ
ದೂರಾನ್ನಿರಾಕೃತ್ಯ ನಿಜಾಧಿಕಾರೈಃ ।
ತದ್ಯಾತನಾಮೇವ ಕರಿಷ್ಯತೀತಿ
ನ ತೇನ ವಕ್ತವ್ಯಮತಿಪ್ರಿಯಂ ವಾ ॥೪೬॥

ಪ್ರಿಯೋಕ್ತಿಭಿಃ ಕಿಂ ಸ ವಶೀಕೃತಃ ಸ್ಯಾತ್
ಮಹೇಶ್ವರಾಜ್ಞಾಪರಿಪಾಲನೇನ ।
ಯಮೋ ನ ಕಸ್ಯಾಪಿ ವಶೇ ವಶೀ ಚ
ತಸ್ಮಾದಶೈವಾಶನಿರೇವ ಕಾಲಃ ॥೪೭॥

ಇತಿ ತದ್ವಚನಂ ಶ್ರುತ್ವಾ ಸ ರಾಜಾಪ್ಯತಿವಿಸ್ಮಿತಃ ।
ತಂ ಪ್ರಣಮ್ಯ ಮುಹುರ್ಭಕ್ತ್ಯಾ ನಂದಿಕೇಶಮುವಾಚ ಹ ॥೪೮॥

ಗುವ ಮಾತನ್ನು ಬಿಡು. ಅದರಿಂದ ಏನೂ ಪ್ರಯೋಜನವಿಲ್ಲ. ಅದು ಆಗದ ಮಾತು. ||೪೫||

ಯಮನಾದರೋ ಸ್ವಾಭಾವಿಕವಾಗಿಯೇ ಕಠಿನನಾಗಿರುವನು. ಆವನು ಅಧಿಕಾರವನ್ನು ನಡೆಸುತ್ತಿರುವಾಗ ಯಾರಾದರೂ ಏನನ್ನಾದರೂ ಹೇಳಿದರೆ ಮತ್ತಷ್ಟು ಕೋಪಗೊಳ್ಳುವನು. ಆದುದರಿಂದ ನಾನು ಈಗ ಆತನ ಹತ್ತಿರ ಹೋಗಿ ಹೇಳಿದರೂ ನನ್ನ ಮಾತನ್ನು ಆತನು ಲಕ್ಷಿಸುವುದಿಲ್ಲ. ಬಿಡುಗಡೆ ಮಾಡುವುದಕ್ಕೆ ಬದಲಾಗಿ ಆ ಸ್ತ್ರೀಯರಿಗೆ ಮತ್ತಷ್ಟು ಹೆಚ್ಚು ಶಿಕ್ಷಿಸುವನು. ||೪೬||

ಒಳ್ಳೆಯ ಮಾತುಗಳನ್ನಾಡಿ ಆ ಯಮನನ್ನು ವಶಮಾಡಿಕೊಳ್ಳಲು ಸಾಧ್ಯವೇ ಇಲ್ಲ. ಅದು ಎಂದೂ ಆಗದ ಮಾತು. ಆತನು ಶಿವಾಜ್ಞಾಪರಿಪಾಲನೆಯಿಂದ ನಿರಂಕುಶನೂ ಸ್ವತಂತ್ರನೂ ಆಗಿದ್ದಾನೆ. ಆತನು ಯಾರಿಗೂ ವಶನಾಗಲಾರನು. ಆದುದರಿಂದ ಅಶೈವರನ್ನು ಅವನಿಂದ ಬಿಡಿಸುವುದಕ್ಕೆ ಸಾಧ್ಯವಿಲ್ಲ. ಯಮನೆಂದರೆ ಅಶೈವರಿಗೆ ಸಾಕ್ಷಾತ್ ಸಿಡಿಲೇ ಸರಿ. ||೪೭||

ಈಪ್ರಕಾರವಾಗಿ ನಂದಿಕೇಶನು ಹೇಳುತ್ತಿರಲು ರಾಜನು ಅತ್ಯಂತ ವಿಸ್ಮಿತನಾಗಿ ಹಾಗೂ ನಿರಾಶನಾಗಿ ಪುನಃ ನಂದಿಕೇಶನಿಗೆ ನಮಸ್ಕರಿಸಿ ವಿನಯದಿಂದ ಹೀಗೆ ಹೇಳಿದನು. ||೪೮||

ಆಹೂಯ ಕಾಲೋ ವಕ್ತವ್ಯಸ್ತಾಸಾಂ ಮಾಸ್ತ್ವಿತಿ ಯಾತನಾ ।
ಯದ್ಯಪ್ಯೇವಂ ತಥಾ ಯುಕ್ತಿಸ್ತ್ವದೀಯಾ ಶ್ರೂಯತೇ ಮಯಾ ॥೪೯॥

ಆಹೂಯತೇ ಯಮಃ ಪಶ್ಯ ತದುಕ್ತಿಂ ಶೃಣು ಸಾದರಂ ॥೫೦॥

ಇತ್ಯುಕ್ತ್ವಾ ಪ್ರೇಷಯಾಮಾಸ ನಂದಿಕೇಶಃ ಸ್ವಕಿಂಕರಂ ।
ಸ ಕೃತಾಂತಾಂತಿಕಂ ಕಾಲಸ್ಸಮಾನೇಯ ಇತಿ ಸ್ಫುಟಂ ॥೫೧॥

ಸ ಗತ್ವಾ ಪ್ರಾಪ ತಂ ಕಾಲಂ ಕಾಲಾಗಮನಮಿಚ್ಛತಿ ।
ನಂದಿಕೇಶೋ ವಿಮಾನಸ್ಥಃ ಪಶ್ಯ ಪಶ್ಯಾಧುನಾ ಯಮ ॥೫೨॥

ಇತಿ ತದ್ವಚನಂ ಶ್ರುತ್ವಾ ಯಮೋಪ್ಯುತ್ಥಾಯ ವೇಗತಃ ।
ಚಿತ್ರಗುಪ್ತಾದಿಭಿಸ್ಸಾಕಂ ನಂದಿಕೇಶಾಂತಿಕಂ ಯಯೌ ॥೫೩॥

ಎಲೈ ನಂದಿಕೇಶನೇ! ಯಮನನ್ನು ಕರೆದು ಇಷ್ಟನ್ನಾದರೂ ಹೇಳು. ಆ ನನ್ನ ಪತ್ನಿಯರಿಗೆ ಯಾತನೆಯನ್ನುಂಟುಮಾಡುವುದು ಬೇಡೆಂದು ತಿಳಿಸು. ನೀನು ಮಾತಿನಲ್ಲಿ ಚತುರನಿರುವೆ ಎಂದು ಕೇಳಿದ್ದೇನೆ. ನಿನ್ನ ಯುಕ್ತಿಯುಕ್ತವಾದ ಮಾತನ್ನು ಕೇಳಿ ಯಮನು ನಮ್ಮ ಅಭಿಲಾಷೆಯನ್ನು ನಡೆಸಿಕೊಟ್ಟಾನು. ಆದುದರಿಂದ ದಯೆಯಿಟ್ಟು ಯಮನನ್ನು ಕರೆದು ಹೇಳೆಂದು ರಾಜನು ಕೇಳಿಕೊಳ್ಳಲು ಆಗ ನಂದಿಕೇಶನು, ಆಗಲಿ ಯಮನನ್ನು ಕರೆಯುತ್ತೇನೆ. ಆತನ ಮಾತನ್ನು ನೀನು ಕೇಳು ಎಂದನು. ||೪೯-೫೦||

ಅನಂತರ ತನ್ನ ಭೃತ್ಯನನ್ನು ಕರೆದು ಕೂಡಲೇ ಯಮನ ಬಳಿಗೆ ಹೋಗಿ ಆತನನ್ನು ಕರೆದುಕೊಂಡು ಬರುವಂತೆ ಆಜ್ಞಾಪಿಸಿದನು. ||೫೧||

ಆ ಭೃತ್ಯನು ಕೂಡಲೇ ಯಮನ ಬಳಿಗೆ ಹೋಗಿ ಆತನನ್ನು ಕುರಿತು ಯಮಧರ್ಮನೇ! ನಂದಿಕೇಶನು ನಿನ್ನ ಆಗಮನವನ್ನು ಬಯಸುತ್ತಾನೆ. ವಿಮಾನದಲ್ಲಿ ಕುಳಿತುಕೊಂಡು ನಿನ್ನನ್ನು ನಿರೀಕ್ಷಿಸುತ್ತಿದ್ದಾನೆ. ಆದುದರಿಂದ ಜಾಗ್ರತೆ ಬಂದು ಆತನನ್ನು ನೋಡಬೇಕು, ಎಂದು ಹೇಳಿದನು. ||೫೨||

ಆ ಭೃತ್ಯನ ಮಾತನ್ನು ಕೇಳಿದಕೂಡಲೇ ಯಮನು ತಡಮಾಡದೆ ಹೊರಟು ಜಾಗ್ರತೆಯಾಗಿ ಚಿತ್ರಗುಪ್ತನೇ ಮೊದಲಾದವರೊಡನೆ ನಂದಿಕೇಶನ ಬಳಿಯನ್ನು ಬಂದು ಸೇರಿದನು. ||೫೩||

ಗತ್ವಾ ಪ್ರಣಮ್ಯ ತಂ ಭಕ್ತ್ಯಾ ಯಮಃ ಪ್ರಾಹ ಕೃತಾಂಜಲಿಃ ।
ಆಜ್ಞಾಪಯಾಶು ಮಾಂ ಸ್ವಾಮಿನ್ ಬಹುಕಾರ್ಯಂ ಮಮೇತ್ಯಪಿ ॥೫೪॥

॥ ನಂದಿಕೇಶ್ವರ ಉವಾಚ ॥

ರಾಜ್ಞಃ ಕಿಲಾಸ್ಯ ಮಹಿಲಾಸ್ತಾಸ್ತ್ವತ್ಕ್ರೋಧಾನಲಾಹತಾಃ ।
ತಾಸಾಮತಃ ಪರಂ ಮಾಸ್ತು ಯಾತನಾ ಮಯಿ ಚೇತ್ಕೃಪಾ ॥೫೫॥

ಇತಿ ತದ್ವಚನಂ ಶ್ರುತ್ವಾ ಯಮಃ ಕ್ರೋಧಾಕುಲೋಽಪಿ ತಂ ।
ಪ್ರಾಹಾತಿವಿಸ್ಮಯಾಪನ್ನೋ ವಚನಂ ವಿಸ್ಮಯಾವಹಂ ॥೫೬॥

॥ ಯಮ ಉವಾಚ ॥

ಕಿಮೇವಮಾಜ್ಞಾಪ್ಯುಚಿತಾ ತವಾದ್ಯ
ಕಾಲಾಂತಕಾರಾಧನಮಂತರಾ ಕಿಂ ।
ಸಂಭಾವಿತಂ ಸ್ಯಾತ್ಸುಖಮಂತರಾ ಯಃ
ತಸ್ಯೇಶಪೂಜಾವಿರಹೋ ಮಹಾನ್ಹಿ ॥೫೭॥

ಯಮನು ಹತ್ತಿರಕ್ಕೆ ಬಂದಕೂಡಲೇ ಮೊದಲು ನಂದಿಕೇಶನಿಗೆ ನಮಸ್ಕರಿಸಿ ವಿನಯದಿಂದ, ಅಪ್ಪಣೆಯಾಗಬೇಕು ಸ್ವಾಮಿಯೇ, ನನಗೆ ಆಜ್ಞೆ ಏನಾಗುತ್ತದೆ? ನನಗೆ ಬಹಳ ಕೆಲಸವಿರುವುದರಿಂದ ಹೆಚ್ಚು ಅವಕಾಶವೂ ಇರುವುದಿಲ್ಲ. ಆದುದರಿಂದ ಜಾಗ್ರತೆ ಅಪ್ಪಣೆಯಾಗಲಿ ಎಂದು ಕೈಮುಗಿದುಕೊಂಡು ನಿಂತನು. ಆಗ ನಂದಿಯು ಹೀಗೆಂದನು. ॥೫೪॥

"ಎಲೈ ಧರ್ಮರಾಜನೇ, ಆ ಸ್ತ್ರೀಯರು ಈ ರಾಜನ ಪತ್ನಿಯರು. ಅವರು ಪಾಪಿಷ್ಠರಾಗಿರುವುದರಿಂದ ನಿನ್ನ ಕೋಪಕ್ಕೆ ಪಾತ್ರರಾಗಿರುವರಷ್ಟೆ! ಆದರೆ ಇನ್ನು ಅವರಿಗೆ ಅತಿ ಯಾತನೆಯಾಗುವುದು ಬೇಡ. ಯಮಧರ್ಮನೇ, ನನ್ನಲ್ಲಿ ಮೈತ್ರಿ ಇರುವುದಾದರೆ ನನಗಾಗಿ ಅವರನ್ನು ಯಾತನೆಯಿಂದ ಬಿಡುಗಡೆಮಾಡು." ॥೫೫॥

ಯದ್ಯಪಿ ಆ ಪಾಪಿಗಳ ಮೇಲೆ ಯಮನು ಕೋಪಿಷ್ಠನಾಗಿದ್ದನು. ಆದರೂ ನಂದಿಕೇಶನ ಮಾತನ್ನು ಕೇಳಿ ವಿಸ್ಮಯದಿಂದ ಹೀಗೆ ಹೇಳಿದನು. ॥೫೬॥

" ಇದೇನು ನಂದಿಕೇಶನೇ, ನನಗೆ ಈ ರೀತಿ ಅಪ್ಪಣೆಯನ್ನು ಮಾಡುತ್ತಿದ್ದೀಯೆ? ಮೃತ್ಯುಂಜಯಾರಾಧನೆಯ ಪರಿತ್ಯಾಗವು ಮಹಾಪರಾಧವಲ್ಲವೆ?

ಇಂದ್ರಾದಿಕಾನಾಂ ಗಣನಾ ನ ಯಸ್ಯ
ಯಮಸ್ಯ ಮೇ ಶಂಕರಭಕ್ತವರ್ಯ ।
ನ ಕೋಽಪಿ ಲೋಕೇ ಗಣನೀಯ ಏವ
ವಿನಾ ಶಿವಾಚಾರರತಂ ಪ್ರಕೃಷ್ಟಂ ॥೫೮॥

ಮಹೇಶ್ವರಾಜ್ಞಾವಚನೈಸ್ತದುಕ್ತೈಃ
ವೇದಸ್ವರೂಪೈರಮಿತೈಃ ಸ್ಮೃತೈರ್ಮೇ ।
ಅಶೈವಲೋಕೇ ಪ್ರಲಯಾನಲಸ್ಯ
ಕಿಮಸ್ತ್ಯಕಾರ್ಯಂ ವದ ಮೇ ವಿಚಾರ್ಯ ॥೫೯॥

ಕಲ್ಪಾವಸಾನೇಽಪಿ ನ ಮುಕ್ತಿರೇವ
ಲಿಂಗಾರ್ಚನತ್ಯಾಗವಿದೂಷಿತಾನಾಂ ।

ಅದೇಕೆ? ಯಾವನು ಈಶಪೂಜೆಯನ್ನು ತ್ಯಾಗಮಾಡಿರುವನೋ ಅವನಿಗೆ ಎಲ್ಲಿ ಯಾದರು ಸುಖವು ಸಂಭಾವಿತವಾಗಿದೆಯೇ? ಅವರಿಗೆ ಯಾತನೆಯು ಹೇಗೆ ತಪ್ಪೀತು? ॥೫೭॥

ಶಿವಭಕ್ತಶ್ರೇಷ್ಠನೇ, ನಾನು ಯಮನೆಂಬುದು ನಿನಗೆ ಗೊತ್ತೇ ಇದೆ. ನನಗೆ ಎಂತಹ ದೇವೇಂದ್ರಾದಿಗಳೂ ಸಹ ಲಕ್ಷ್ಯವಲ್ಲ. ಅವರನ್ನೂ ಸಹ ದೊಡ್ಡವರೆಂದು ನಾನು ಪರಿಗಣಿಸುವುದಿಲ್ಲ. ಪರಶಿವಭಕ್ತರನ್ನು ಮಾತ್ರ ಬಿಟ್ಟರೆ ಮತ್ತೆ ಯಾರೂ ನನ್ನ ಗಣನೆಗೆ ಇಲ್ಲ. ॥೫೮॥

ಶಿವನ ಆಜ್ಞೆಯೊಂದಕ್ಕೆ ನಾನು ತಲೆಬಾಗಿಸುತ್ತೇನೆ. ಶಿವನ ವಚನವೇ ನನಗೆ ವೇದವಚನ. ಆತನ ಅಪ್ಪಣೆಯನ್ನು ಎಂದೂ ಮರೆಯದೆ ನಾನು ಪಾಲಿಸುತ್ತೇನೆ. ನಾನು ಅಶೈವರಿಗೆ ಪ್ರಲಯಾಗ್ನಿಸ್ವರೂಪನು. ಶಿವನಿಂದಕರನ್ನು ಎಂದೂ ನಾನು ಕ್ಷಮಿಸುವುದಿಲ್ಲ. ಇಂಥ ಶಿವಾಜ್ಞೆ ನನಗಿರುವಾಗ ಯಾವುದು ತಾನೆ ಅಸಾಧ್ಯ? ಏನನ್ನು ತಾನೆ ನಾನು ಮಾಡಲಾರೆ? ಶಿವನ ಅಪ್ಪಣೆಯನ್ನು ಪಾಲಿಸುವುದಕ್ಕಾಗಿ ಯಾವಾಗ ಏನು ಮಾಡಬೇಕಾದರೂ ಸಿದ್ಧನಿರುತ್ತೇನೆ. ಇದು ನಿನಗೂ ತಿಳಿದ ವಿಚಾರವೇ ಆಗಿರುತ್ತದೆ. ॥೫೯॥

ಶಿವಲಿಂಗಾರ್ಚನೆಯನ್ನು ತ್ಯಜಿಸಿ ಪಾಪಿಷ್ಠರಾದವರಿಗೆ ನರಕಯಾತನೆಯಿಂದ ಕಲ್ಪಾಂತ್ಯದಲ್ಲಿಯೂ ಸಹ ಬಿಡುಗಡೆ ಇರುವುದಿಲ್ಲ. ಇಂಥ ಪರಮ ಪಾಪಿಗಳಿಗೆ

ತದರ್ಥಮೇವಾಶನಿಸೃಷ್ಟಿರಾದೌ
ಅಗ್ನಿಪ್ರವಾಹೋದಕದುಷ್ಟಸೃಷ್ಟಿಃ ॥೬೦॥

ಕಷ್ಟಾನಿ ಸೃಷ್ಟಾನಿ ಬಹೂನಿ ನೂನಂ
ಅಶೈವಭೋಗಾಯ ಮಹೇಶ್ವರೇಣ ।
ತೇಷ್ವೇವ ತಾವತ್ಖಲು ಪಾತನೀಯಾಃ
ತೇ ಶಂಕರಾಜ್ಞಾವಿಮುಖಾಸ್ಸದುಃಖಾಃ ॥೬೧॥

ಕಶ್ಶಂಗಪೂಜಾವಿಮುಖೋಽಪಿ ಲೋಕೇ
ಸುಖೀ ಸ ಶೋಕಾಕರ ಏವ ಘೋರಃ ।
ಘೋರಾಣ್ಯಘೋರಾಣ್ಯಪಿ ಯಾತನಾನಾಂ
ಸ್ಥಲಾನಿ ಯಾತ್ಯೇವ ಸ ದುಷ್ಟಬುದ್ಧಿಃ ॥೬೨॥

ಏತಾಭಿರ್ನ ಶಿವಾರ್ಚನಂ ಕೃತಮುಮಾಕಾಂತಾರ್ಚಕಾರಾಧನಂ
ತದ್ಭಕ್ತಾಂಘ್ರಿನಿಷೇವಣಂ ಚ ನ ಕೃತಂ ತತ್ಪಾದುಕಾರಾಧನಂ ।

ಯಾತನೆಯನ್ನು ವಿಧಿಸುವುದಕ್ಕೋಸ್ಕರವಾಗಿಯೇ ಮೊದಲೇ ಸಿಡಿಲು, ಅಗ್ನಿ, ಪ್ರವಾಹ, ಕುದಿಯುವ ನೀರಿನ ರಾಶಿ ಮುಂತಾದ ನರಕಗಳು ನಿರ್ಮಿತವಾಗಿವೆ.॥೬೦॥

ಅಶೈವರಾದ ಪಾಪಿಗಳು ಅನುಭವಿಸುವುದಕ್ಕಾಗಿಯೇ ನಾನಾವಿಧವಾದ ಕಷ್ಟಗಳನ್ನು ಪರಮೇಶ್ವರನೇ ಸೃಷ್ಟಿಸಿದ್ದಾನೆ. ನಾನು ಅಶೈವರನ್ನೆಲ್ಲಾ ಅಂಥ ಯಾತನೆಗಳಲ್ಲೇ ತಳ್ಳಬೇಕಷ್ಟೆ. ಏಕೆಂದರೆ ಅವರು ಶಿವನ ಆಜ್ಞೆಯನ್ನು ಉಲ್ಲಂಘಿಸಿರುತ್ತಾರೆ. ಆದ್ದರಿಂದಲೇ ಅವರು ದುಃಖಗಳನ್ನೂ ಅನುಭವಿಸುತ್ತಾರೆ. ॥೬೧॥

ಶಿವಾರಾಧನೆಯಿಂದ ವಿಮುಖನಾದವನು ಯಾವನು ತಾನೆ ಪ್ರಪಂಚದಲ್ಲಿ ಸುಖವಾಗಿ ಬಾಳಿಯಾನು? ಹಾಗಿದ್ದವನು ಎಂದೂ ಸುಖಿಯಾಗಲಾರ. ಅಂಥ ಪಾಪಿಯು ಸದಾ ಶೋಕನಿಧಿಯೇ ಆಗುವನು. ಆತನು ಘನಘೋರವಾದ ಯಾತನೆಗಳಾಗುವ ನರಕಗಳಲ್ಲೇ ಬೀಳುವನು. ಏಕೆಂದರೆ ಆತನು ಅಂತಹ ದ್ರೋಹಮತಿಯೆನಿಸಿರುತ್ತಾನೆ. ॥೬೨॥

ಈ ರಾಜನ ಸ್ತ್ರೀಯರಂತೂ ಪರಮ ಪಾಪಿಗಳಾಗಿರುತ್ತಾರೆ. ಇವರು ತಮ್ಮ ಜನ್ಮದಲ್ಲಿ ಒಂದು ಸಲವೂ ಶಿವನನ್ನು ಪೂಜಿಸಿರುವುದಿಲ್ಲ. ಅಥವಾ ಶಿವಾರಾಧಕ

ತತ್ತನ್ಮಂದಿರಮಾರ್ಜನಂ ಚ ನ ಕೃತಂ ತಚ್ಚೇಟಿಕಾಸೇವನಂ
ತದ್ದಾಸೀಪತಿಸೇವನಂ ಚ ನ ಕೃತಂ ತದ್ದಾಸಸಂಸೇವನಂ ॥೬೩॥

ನಾಲೋಕಿತಂ ಶಂಕರಕಿಂಕರಾಣಾಂ
ಪಾದಾರವಿಂದಪ್ರಭವಂ ರಜೋಽಪಿ ।
ಯೈರ್ನಾದರಾತ್ತಸ್ಯ ಕಥಂ ಸುಖಂ ಸ್ಯಾತ್
ಸ್ವಪ್ನೇ ನ ತನ್ಮೇ ವದ ಸಾವಧಾನಂ ॥೬೪॥

ನ ಭೂತಿಲೋಕೋಽಪಿ ವಿಲೋಕಿತೋಽಪಿ
ಪರಾಙ್ಮುಖಶ್ಶಂಕರಪೂಜನೇಷು ।
ಸುಖೀ ವಿಪಾಶೀ ಸುಖಮೇತಿ ಕಿಂ ವಾ
ನರೋ ವಿಶೇಷೇಣ ಮಹೋರಗಾರ್ತಃ ॥೬೫॥

ರನ್ನೂ ಪುರಸ್ಕರಿಸಿರುವುದಿಲ್ಲ. ಸದಾ ಶಿವಭಕ್ತರನ್ನು ಇವರು ಎಂದೂ ಶರಣು ಹೊಕ್ಕಿಲ್ಲ. ಅವರ ಚರಣಸೇವೆಯನ್ನೂ ಮಾಡಿರುವುದಿಲ್ಲ. ಶಿವಮಂದಿರದ ಅಥವಾ ಶಿವಭಕ್ತಗೃಹದ ಸ್ವಚ್ಛತಾಕ್ರಿಯೆಯನ್ನೂ ಇವರು ನಡೆಸಿರುವುದಿಲ್ಲ. ಶಾಂಭವ ಶ್ರೇಷ್ಠರ ದಾಸದಾಸಿಯರ ಅಥವಾ ದಾಸೀಪತಿಯರ ಅಥವಾ ದಾಸದಾಸರ ಸೇವೆಯನ್ನೂ ಸಹ ಇವರು ಮಾಡಿರುವುದಿಲ್ಲ. ॥೬೩॥

ಯಾರು ಶಾಂಭವರ ಚರಣಧೂಳಿಯನ್ನೂ ನೋಡಿರುವುದಿಲ್ಲವೋ, ಅಥವಾ ನೋಡಿಯೂ ಅದನ್ನು ಆದರದಿಂದ ವಿನಿಯೋಗಿಸಿಕೊಂಡಿಲ್ಲವೋ ಅವರಿಗೆ ಸುಖವು ಹೇಗೆ ಉಂಟಾದೀತು? ಹೇಳು ನೋಡೋಣ. ಅವರಿಗೆ ಸುಖವು ಕೇವಲ ಸ್ವಪ್ನ ಪ್ರಾಯವೇ ಸರಿ. ಎಂದೂ ನಿಜವಾದ ಸುಖವು ಅವರಿಗೆ ದೊರೆಯುವುದಿಲ್ಲ. ॥೬೪॥

ಭಸ್ಮರುದ್ರಾಕ್ಷಿಗಳನ್ನೂ ಪರಿಗಣಿಸದೇ ಶಿವಪೂಜೆಯನ್ನೂ ತ್ಯಾಗಮಾಡಿ ಶಿವಪರಾಙ್ಮುಖನಾದ ಮನುಷ್ಯನು ಎಂದಾದರೂ ಸುಖಿಯಾಗಿ ಬಾಳಿಯಾನೇ? ಎಂದೂ ಇಲ್ಲ. ಅಂತಹವನ ಕೊರಳಿಂದ ಎಂದೂ ನನ್ನ ಪಾಶವು ಸಡಿಲವಾಗುವುದಿಲ್ಲ. ಅಂತಹವನು ಮಹಾಸರ್ಪಗಳಿಂದ ಪೀಡಿತನಾದಂತೆಯೇ ಸರಿ. ॥೬೫॥

ವದಂತಿ ತಾವದ್ಗಿರಿಶಾರ್ಚನೇನ
ಹೀನಂ ವಿಹೀನಂ ಕ್ವ ಮಲಾಶನಾನಾಂ ।
ಕಸ್ತೂರಿಕಾಚಂದನವಾಸನಾಪಿ
ತಸ್ಮಾದಶೈವಸ್ಯ ಕುತಸ್ಸುಖಂ ಸ್ಯಾತ್ ॥೬೬॥

ಆಜ್ಞಾಪನೀಯೋ ನ ತಥಾ ತ್ವಯಾಹಂ
ನ ಧರ್ಮಹಾನಿಶ್ಚ ತ್ವಯಾತಿಸಹ್ಯಾ ।
ವಿಶೇಷತಶ್ಶಂಕರಪೂಜಕಸ್ಯಾ
ಪ್ಯಶೈವವಾರ್ತಾಸು ರುಚಿಃ ಕಥಂ ವಾ ॥೬೭॥

ವಾಕ್ಯೈರನೇಕೈರ್ನನು ತಾವತ್ತ್ವಯೋಕ್ತಂ
ಶೈವಾಸ್ಸರ್ವೇ ಪೂಜನೀಯಾಸ್ತ್ವಯೇತಿ ।
ಅನ್ಯೇ ಘೋರೇ ಪಾತನೀಯಾಃ ಪ್ರಯತ್ನೈಃ
ಕುಂಭೀಪಾಕೇ ಸರ್ವಥೇತಿ ಸ್ಮೃತಂ ಕಿಂ ॥೬೮॥

ಅಮೇಧ್ಯವನ್ನು ಭಕ್ಷಿಸುತ್ತಿರುವವರಿಗೆ ಎಲ್ಲಿಯಾದರೂ ಕಸ್ತೂರಿ ಚಂದನಗಳ ಪರಿಮಳವು ಬರುತ್ತದೆಯೇ? ಎಂದೂ ಇಲ್ಲ. ಹಾಗೆಯೇ ಅಶೈವರಿಗೆ ಸುಖದ ವಾಸನೆಯೂ ದೊರೆಯುಲಾರದು. ಆದ್ದರಿಂದಲೇ ಶಿವಾರ್ಚನೆಯನ್ನು ಮಾಡದವನು ಸಕಲ ಭಾಗ್ಯಹೀನನು ಎಂದು ಹೇಳುವರು. ॥೬೬॥

ಆದುದರಿಂದ ನಂದಿಕೇಶನೇ, ನೀನು ಈ ರೀತಿ ಆಜ್ಞಾಪಿಸಬಾರದು. ಅಶೈವರಿಗೆ ಶಿಕ್ಷೆಯಾಗಲೇಬೇಕು. ಹಾಗೆ ಶಿಕ್ಷಿಸದೇ ಬಿಟ್ಟುಬಿಟ್ಟರೆ ಧರ್ಮಕ್ಕೇ ಧಕ್ಕೆ ಬರುವುದು. ಹಾಗೆ ಧರ್ಮಹಾನಿಯಾಗುವುದು ನನಗೂ ನಿನಗೂ ಸಹ್ಯವಾದುದಲ್ಲ. ಅದರಲ್ಲಿಯೂ ಶಿವಾರಾಧನ ಮಾತ್ರದಲ್ಲಿ ರಸಿಕನಾದ ನಿನಗೆ ಈ ವಿಚಾರಗಳಲ್ಲಿ ಮಾತಾಡುವುದು ಏನು ಪ್ರಯೋಜನ. ನೀನು ಈ ಅಶೈವರ ಪಕ್ಷದಲ್ಲಿ ಪ್ರೀತಿಯಿಡಬೇಡ. ॥೬೭॥

ಇನ್ನೊಂದು ವಿಚಾರ. ನೀನು ಹಿಂದೆ ನನ್ನ ಸಂಗಡ ಖಡಾಖಂಡಿತವಾಗಿ ಹೇಳಿದ್ದೆ. ಶಿವಭಕ್ತರನ್ನೆಲ್ಲಾ ಪೂಜಿಸಬೇಕೆಂತಲೂ ಅಶೈವರನ್ನು ಕುಂಭೀಪಾಕಾದಿ ಘೋರ ನರಕದಲ್ಲಿ ಅವಶ್ಯ ಹಾಕಬೇಕೆಂದೂ ನನಗೆ ಅಪ್ಪಣೆ ಮಾಡಿದ್ದೆಯಲ್ಲಾ. ಅದು ಜ್ಞಾಪಕವಿದೆಯೇ? ಆದುದರಿಂದ ಈಗ ಅನ್ಯಥಾ ಹೇಳಬಾರದು. ॥೬೮॥

ಮಾ ಕೌತುಕೇನಾಪಿ ಮಹೇಶ್ವರೋಽಪಿ
ಕದಾಚಿದೀಶಾನಪರಾಙ್ಮುಖಾನಾಂ।
ನ ಯಾತನಾ ಸ್ಯಾದಿತಿ ತದ್ವಚೋಽಪಿ
ಶ್ರೀನಂದಿಕೇಶಾರ್ಯ ನ ರೋಚತೇ ಮೇ ॥೬೯॥

॥ ಸತ್ಯಮೂರ್ತಿರುವಾಚ ॥

ಇತ್ಯುಕ್ತ್ವಾ ನಂದಿಕೇಶಾಯ ನತ್ವಾ ವಿನಯಪೂರ್ವಕಂ।
ಯಮೋಽಪಿ ಸ್ವಾಲಯಂ ಪ್ರಾಪ ಚಿತ್ರಗುಪ್ತಾದಿಭಿಸ್ಸಹ ॥೭೦॥

ತತಃ ಪರಂ ಸ ನಂದೀಶಃ ಕೈಲಾಸಭವನಂ ಯಯೌ।
ಪ್ರಹೃಷ್ಟೋ ಯಮವಾಕ್ಯಾನಿ ಸ್ಮೃತ್ವಾ ವಿಸ್ಮಯಮಾನಸಃ ॥೭೧॥

ಅತಃ ಕುಮಾರನಾರೀಣಾಂ ಮುಖ್ಯೋ ವಿಶ್ವಪತಿಃ ಪತಿಃ।
ತತ್ಪೂಜನಾದಭೀಷ್ಟಾರ್ಥಾಸ್ಸಿದ್ಧ್ಯಂತೀತ್ಯವಧಾರಯ ॥೭೨॥

ಈ ವಿಚಾರದಲ್ಲಿ ಪರಮೇಶ್ವರನೂ ವಿನೋದಕ್ಕಾಗಿ ಎಂದಾದರೂ ಪಕ್ಷಪಾತ ವಹಿಸುವುದು ನನಗೆ ಸಮ್ಮತವಾಗುವುದಿಲ್ಲ. ಶಿವಾರಾಧನೆಯಿಂದ ವಿಮುಖರಾದವರಿಗೆ, ಅಯ್ಯೋ ಯಾತನೆ ಆಗುತ್ತಿದೆಯಲ್ಲಾ ಎಂದು ಯಾರಿಗೂ ಮರುಕ ಹುಟ್ಟಬಾರದು. ಅಶೈವರಿಗೆ ಯಾತನೆಯನ್ನು ಕೊಡಬಾರದೆಂಬ ಮಾತು ನನಗೆ ರುಚಿಸದು.” ॥೬೯॥

ಹೀಗೆಂದು ಯಮಧರ್ಮನು ಹೇಳಿ ನಂದಿಕೇಶನನ್ನು ಸಮಾಧಾನಗೊಳಿಸಿ ಅನಂತರ ಆತನಿಗೆ ನಮಸ್ಕರಿಸಿ ವಿನಯದಿಂದ ಅನುಜ್ಞೆಯನ್ನು ಪಡೆದುಕೊಂಡು ಚಿತ್ರಗುಪ್ತನೇ ಮೊದಲಾದವರೊಡನೆ ತನ್ನ ವಾಸಸ್ಥಾನಕ್ಕೆ ಹಿಂತಿರುಗಿದನು. ॥೭೦॥

ಆ ಯಮನ ಮಾತುಗಳನ್ನು ಕೇಳಿ ನಂದಿಕೇಶನಿಗೆ ವಿಸ್ಮಯವಾಯಿತು. ಈತನು ಎಷ್ಟು ಕಾರ್ಯತತ್ಪರನಾಗಿದ್ದಾನೆಂದು ಮನಸ್ಸಿನಲ್ಲಿಯೇ ಶ್ಲಾಘಿಸುತ್ತಾ ಆತನ ಮಾತನ್ನು ನೆನೆಸಿಕೊಂಡು ಆನಂದಪಡುತ್ತಲೇ ಕೈಲಾಸಕ್ಕೆ ಹೋದನು.॥೭೧॥

ಆದುದರಿಂದ ಸ್ತ್ರೀಯರು ಕೇವಲ ತಮ್ಮ ಪತಿಯನ್ನು ಮಾತ್ರ ಸೇವಿಸಿದರೆ ಅವರ ಕರ್ತವ್ಯ ಪೂರ್ಣವಾದಂತಾಗುವುದಿಲ್ಲ. ಆ ಸ್ತ್ರೀಯರಿಗೂ ಮುಖ್ಯಪತಿಯು ಆ ವಿಶ್ವಪತಿಯಾದ ಪರಮೇಶ್ವರನೇ ಆಗಿರುತ್ತಾನೆ. ಆತನನ್ನೇ ಪೂಜಿಸಿ ಆರಾಧಿಸಿದರೆ ಸಕಲ ಇಷ್ಟಾರ್ಥಗಳೂ ಲಭಿಸುವುವೆಂದು ತಿಳಿಯತಕ್ಕದ್ದು. ಎಂದು ಸತ್ಯಮೂರ್ತಿಯೆಂಬ ಬ್ರಾಹ್ಮಣನು ತನ್ನ ಮಗನಿಗೆ ಉಪದೇಶಿಸುತ್ತಾ ಹೀಗೆಂದನು. ॥೭೨॥

ಪತಿರ್ಯೋ ಲೌಕಿಕಸ್ತ್ರೀಣಾಂ ಶಾಂಕರತ್ವೇನ ನಿಶ್ಚಿತಃ ।
ಯದಿ ತರ್ಹಿ ಪ್ರಯತ್ನೇನ ಕರ್ತವ್ಯಂ ತಸ್ಯ ಪೂಜನಂ ॥೭೩॥

ತತ್ಸೇವನೇನ ಸುಪ್ರೀತೋ ಭವತ್ಯೇವ ಮಹೇಶ್ವರಃ ।
ಅತಸ್ತಸ್ಯಾಪಿ ಕರ್ತವ್ಯಂ ಶೈವತ್ವೇನೈವ ಸೇವನಂ ॥೭೪॥

ಅಶೈವೋ ಯದಿ ಭರ್ತಾ ಸ್ಯಾತ್ತಂ ತ್ಯಜೇನ್ಮದ್ಯಪಂ ಯಥಾ ।
ನ ಮದ್ಯಪಾರಾಧನಾರ್ಥಮುದ್ಯತಾಪಿ ಪತಿವ್ರತಾ ॥೭೫॥

ಬ್ರಹ್ಮಸ್ವಹರ್ತಾ ಗುರುದಾರಗಾಮೀ
ಯೋ ಬ್ರಹ್ಮಹಾ ಮದ್ಯಪ ಏವ ವಾ ಸ್ಯಾತ್ ।
ಯಃ ಸ್ಯಾದಶೈವೋಽಪಿ ಸ ದೂರತೋಽಪಿ
ತ್ಯಾಜ್ಯಃ ಕುಲಸ್ತ್ರೀಭಿರಿತಿ ಸ್ಮರಾಮಿ ॥೭೬॥

ಇಹಲೋಕದ ಪತಿಯಾದವನು ಶಾಂಭವನೇ ಆಗಿದ್ದರೆ ಸ್ತ್ರೀಯರು ಆತನ ಸೇವಾಶುಶ್ರೂಷೆಗಳನ್ನು ಶಿವಭಕ್ತಸೇವೆ ಎಂಬ ದೃಷ್ಟಿಯಿಂದ ಮಾಡಬೇಕು. ॥೭೩॥

ಅತ್ಯಂತ ಶಿವಭಕ್ತಿಯುಳ್ಳ ಪತಿಯನ್ನು ಸೇವೆಮಾಡಿದರೆ ಆದರಿಂದಲೂ ಪರಮೇಶ್ವರನು ಸುಪ್ರೀತನಾಗುತ್ತಾನೆ. ಆದುದರಿಂದ ಸ್ತ್ರೀಯರು ತಮ್ಮ ಪತಿಯನ್ನು ಶಿವಭಕ್ತನಾಗಿದ್ದಾನೆಂದೂ, ಆತನ ಸೇವೆ ಮಾಡಬೇಕಾದುದು ಅವಶ್ಯವೆಂದೂ ತಿಳಿದು ಕೊಂಡು ತಪ್ಪದೇ ಪತಿಸೇವೆಯನ್ನು ನಡೆಸಬೇಕು. ॥೭೪॥

ಪತಿಯು ಶಿವಭಕ್ತನಾಗಿಲ್ಲದೇ ಅಶೈವನಾಗಿದ್ದರೆ ಆತನನ್ನು ತ್ಯಜಿಸಬೇಕು. ಮದ್ಯಪಾನಮಾಡುವವರನ್ನು ಸ್ತ್ರೀಯರು ಪತಿವ್ರತೆಯರಾಗಿದ್ದರೂ ಅವರನ್ನು ಸೇವಿಸುವುದಿಲ್ಲ. ಅಂಥ ಪತಿಯನ್ನು ತಿರಸ್ಕರಿಸಿಬಿಡುತ್ತಾರೆ. ಹಾಗೆಯೇ ಅಶೈವನಾದ ಪತಿಯನ್ನೂ ತ್ಯಾಗಮಾಡಬಹುದು. ॥೭೫॥

ಬ್ರಾಹ್ಮಣರ ಸ್ವತ್ತನ್ನು ಕದ್ದಿರುವ, ಗುರುಪತ್ನಿಯೊಡನೆ ಸಹವಾಸವನ್ನು ಮಾಡಿರುವ, ಬ್ರಾಹ್ಮಣನ ಹತ್ಯೆಮಾಡಿರುವ, ಮದ್ಯವನ್ನು ಪಾನಮಾಡಿರುವ ಪತಿಗಳು ಮಹಾ ಪಾತಕಿಗಳೆಂದು ಇವರನ್ನು ಹೇಗೆ ತ್ಯಾಗಮಾಡುವರೋ ಹಾಗೆಯೇ ಕುಲಸ್ತ್ರೀಯರಾಗಿದ್ದರೂ ಅಶೈವನಾದ ಪತಿಯನ್ನು ಕೂಡಲೇ ತ್ಯಾಗ ಮಾಡಬೇಕೆಂಬುದಕ್ಕೆ ಸ್ಮೃತಿ ವಚನವಿದೆ. ॥೭೬॥

ದೈವಾನ್ಮಹಾದೇವಪರಾಯಣಃ ಸ್ಯಾತ್
ಪತಿಸ್ತದಾರಾಧನತಸ್ಸುಖಾನಿ ।
ಸ್ಪ್ರಾಪ್ನೋತಿ ನಾರೀ ನಿರಯಂ ನ ಯಾತಿ
ಸಾ ತೇನ ಸಾಕಂ ಶಿವಮೇತಿ ನೂನಂ ॥೭೭॥

ಅಶೈವಪತಿಕಾರ್ಯಾಣಿ ನ ಕಾರ್ಯಾಣಿ ಕದಾಚನ ।
ಅಶೈವಭರ್ತೃತ್ಯಾಗೇನ ಸ್ವರ್ಗಮೇತಿ ಸತೀ ಪರಂ ॥೭೮॥

ಮದ್ಯಂ ಪಿಬತಿ ಚೇದ್ಭರ್ತಾ ತೇನ ಸಾಕಂ ಕಥಂ ಸತೀ ।
ಸ್ಥಾಸ್ಯತ್ಯತಶ್ಶಿವಾಚಾರವರ್ಜಿತೋ ವರ್ಜ್ಯತಾಮಗಾತ್ ॥೭೯॥

ನ ಭಾಗ್ಯೇನ ವಿನಾ ನಾರೀ ಭರ್ಗಭಕ್ತಪತಿಂ ವ್ರಜೇತ್ ।
ಸರ್ವಭಾಗ್ಯಪ್ರದೋ ನೂನಂ ಭರ್ಗಭಕ್ತಪತಿಃ ಸ್ವತಃ ॥೮೦॥

ಅದೃಷ್ಟವಶಾತ್ ಶಿವಪರಾಯಣನಾಗಿರುವ ಪತಿಯು ಲಭಿಸಿದರೆ ಆತನನ್ನು ಸರ್ವಪ್ರಯತ್ನಗಳಿಂದಲೂ ಸೇವಿಸಬೇಕು. ಆತನ ಸೇವೆಯಿಂದಲೇ ಸಕಲ ಸುಖಗಳೂ ಲಭಿಸುವುವು. ಅಂಥ ಪತಿಪರಾಯಣೆಗೆ ಎಂದೂ ನರಕವಿರುವುದಿಲ್ಲ. ಆ ಶೈವ ಪತಿಯ ಸಹವಾಸದಿಂದ, ಆತನ ಸೇವೆಯ ಪುಣ್ಯದಿಂದ, ಪತಿಯೊಡನೆ ತಾನೂ ಶಿವಸಾಮೀಪ್ಯವನ್ನೇ ಹೊಂದುವಳು. ॥೭೭॥

ಪತಿಯು ಶಿವಭಕ್ತನಲ್ಲದಿದ್ದರೆ ಆತನ ಯಾವ ಕಾರ್ಯವನ್ನೂ ಸೇವೆಯನ್ನೂ ಮಾಡಕೂಡದು. ಅಂಥ ಅಶೈವನಾದ ಪತಿಯನ್ನು ತ್ಯಾಗಮಾಡಿದರೆ ಪತಿವ್ರತೆಯಾದ ಪತ್ನಿಯು ಸ್ವರ್ಗವನ್ನು ಪಡೆಯುವಳು. ॥೭೮॥

ಸ್ತ್ರೀಯು ಪತಿವ್ರತೆಯಾಗಿದ್ದರೂ ಪತಿಯು ಮದ್ಯಪಾಯಿಯಾಗಿದ್ದರೆ ಆತನೊಡನೆ ಪತ್ನಿಯು ಹೇಗೆ ಇದ್ದಾಳು? ಆತನ ಸಹವಾಸವು ಸಹ್ಯವೇ ಎನಿಸುವುದಿಲ್ಲ. ಹಾಗೆಯೇ ಶಿವಧರ್ಮವನ್ನು ತ್ಯಾಗಮಾಡಿದವನೂ ಸರ್ವಥಾ ವರ್ಜ್ಯನೇ ಆಗುತ್ತಾನೆ. ॥೭೯॥

ಸ್ತ್ರೀಯು ಭಾಗ್ಯವತಿಯಾಗಿದ್ದರೇ ಶೈವನಾದ ಪತಿಯನ್ನು ಪಡೆಯುವಳು. ಅಂಥ ಶಿವಭಕ್ತನಾದ ಪತಿಯು ಸ್ವತಃ ಸಕಲ ಸುಖಗಳನ್ನೂ ಉಂಟುಮಾಡತಕ್ಕವನಾಗಿರುತ್ತಾನೆ. ಅಷ್ಟು ಸಾಮರ್ಥ್ಯವು ಅವನಿಗುಂಟು. ॥೮೦॥

ಭರ್ತಾ ಭರ್ಗಾರ್ಚಕೋ ಯಃ ಸ್ಯಾತ್ ತದಾಜ್ಞೋಲ್ಲಂಘನಾದಪಿ ।
ನರಕಂ ಯಾತಿ ಸಾ ನಾರೀ ಯಾವದಾಭೂತಸಂಪ್ಲವಮ್ ॥೮೧॥

॥ ಭೃಗುರುವಾಚ ॥

ಇತಿ ತದ್ವಚನಂ ಶ್ರುತ್ವಾ ದೃಷ್ಟ್ವಾ ದೂರೇ ಸ ಶಾಂಕರಃ ।
ಪಿತ್ರಾ ಸಹ ಸ್ಥಿತಃ ಶ್ರುತ್ವಾ ಶಿವಧರ್ಮಾನ್ವಿಶೇಷತಃ ॥೮೨॥

ಶಾರದಾ ನಾಮ ತನ್ನಾರೀ ಸಮಾಪ್ಯ ಶಿವಪೂಜನಂ ।
ಪತಿಶುಶ್ರೂಷಣೋದ್ಯುಕ್ತಾ ಸೋಽಪಿ ಶಾಂಕರ ಇತ್ಯಪಿ ॥೮೩॥

ಶಂಕರಾರಾಧನಂ ಕೃತ್ವಾ ಶಾಂಕರಸ್ಯಾಪಿ ಸೇವನಂ ।
ಕರ್ತವ್ಯಮಿತಿ ಬುದ್ಧ್ಯಾ ಸಾ ಚಕಾರ ಪತಿಸೇವನಂ ॥೮೪॥

ಶಿವಾರಾಧಕನಾದ ಪತಿಯ ಆಜ್ಞೆಯನ್ನು ಮೀರಿದರೆ ನಾರಿಗೆ ನರಕವು ಉಂಟಾಗುವುದು. ಪತಿಯಿಷ್ಟದಂತೆ ನಡೆಯದ ಸ್ತ್ರೀಯು ನರಕದಲ್ಲಿ ಸಮಸ್ತ ಭೂತ ಲಯವಾಗುವ (ಪ್ರಲಯ) ವರೆಗೂ ವಾಸಮಾಡುವಳು. ಮತ್ತು ಅನೇಕ ಯಾತನೆ ಗಳನ್ನೂ ಅನುಭವಿಸುವಳು. ॥೮೧॥

ಈ ಎಲ್ಲಾ ಶಿವಧರ್ಮಗಳನ್ನೂ ಅಶ್ವೈವನಾಗಿದ್ದ ಕಿರಿಯ ಮಗನು ತನ್ನ ತಂದೆ ಸತ್ಯಮೂರ್ತಿಯಿಂದ ಬಹಳ ಹೊತ್ತಿನ ವರೆಗೂ ಶ್ರದ್ಧೆಯಿಂದ ಕೇಳುತ್ತಲೇ ಇದ್ದನು. ಈ ಪ್ರಸಂಗವನ್ನು ಕೇಳಿ ಆತನಿಗೆ ತೃಪ್ತಿಯೇ ಆಗುತ್ತಿದ್ದಿಲ್ಲ. ಮತ್ತೂ ಮತ್ತೂ ಕೇಳಬೇಕೆಂದು ಉತ್ಸುಕನಾಗುತ್ತಿದ್ದನು. ॥೮೨॥

ಅಷ್ಟುಹೊತ್ತಿಗೆ ಆತನ ಪತ್ನಿಯಾದ ಶಾರದೆ ಎಂಬವಳು ಶಿವಾರ್ಚನೆಯನ್ನು ಸಮಗ್ರವಾಗಿ ಮಾಡಿ ಮುಗಿಸಿ ಪತಿಯ ಸೇವೆಗಾಗಿ ಸನ್ನದ್ಧಳಾದಳು. ತನ್ನ ಪತಿಯು ಶಿವಸ್ವರೂಪಿಯಾಗಿದ್ದಾನೆಂದು ಬಗೆದು ಅತ್ಯಾದರದಿಂದ ಆಕೆಯು ಪದೇ ಪದೇ ಆತನನ್ನು ಸೇವಿಸುತ್ತಿದ್ದಳು. ॥೮೩॥

ಶಿವಾರಾಧನೆಯನ್ನು ಮಾಡಿದ ಬಳಿಕ ಶಾಂಭವರ ಸೇವೆಯನ್ನೂ ಮಾಡ ಬೇಕೆಂದು ಆಕೆಯು ಅರಿತಿದ್ದಳು. ಅದೇ ಪ್ರಕಾರ ಆಕೆಯು ತನ್ನ ಪತಿಯು ಶಿವಸ್ವರೂಪಿಯಾಗಿದ್ದಾನೆಂದು ನೆನೆಸಿಕೊಂಡು ಪದೇ ಪದೇ ಆತನ ಸೇವೆಯನ್ನು ಮಾಡುತ್ತಿದ್ದಳು. ॥೮೪॥

ಸೋಽಪಿ ತಾಂ ಪ್ರೀಣಯತ್ಯೇವ ಶಿವಾರ್ಚನರತೇತಿ ಸಾ ।
ನ ನಿಷ್ಠುರಂ ವದತ್ಯೇವ ಸ ತಾಂ ಪ್ರತಿ ವಿಶೇಷತಃ ॥೮೫॥

॥ ಶಾರ್ದೂಲ ಉವಾಚ ॥

ಇತ್ಯುಕ್ತಂ ಭೃಗುವಾಗ್ವೃಂದಮಮುಮಂದಾನಂದದಂ ಮುದಾ ।
ಹೃಷ್ಟಶ್ಶಿವಕಥಾಮೇವ ಪುನಃ ಶ್ರುತ್ವಾ ಸ್ಥಿತೋ ಯಮಃ ॥೮೬॥

॥ ಸತ್ಯವ್ರತ ಉವಾಚ ॥

ತತ್ತತ್ಕಥಾಕರ್ಣನವರ್ಣನೇನ
ಕಾಲೋ ವಿನೀತಸ್ತದನಂತರಂ ಮೇ ।
ವನೇ ಜನಿರ್ವ್ಯಾಘ್ರಕುಲೇ ಕಿಲಾಸೀತ್
ಜಾತಿಸ್ಮರತ್ವಂ ಸ್ವಸತೀಪ್ರಸಾದಾತ್ ॥೮೭॥

ಇತಿ ವ್ಯಾಘ್ರವಚಃ ಶ್ರುತ್ವಾ ಸ ರಾಜಾ ಶೈವಪುಂಗವಃ ।
ಬ್ರಾಹ್ಮಣಶ್ಚಾತಿಸಂತುಷ್ಟಶ್ಶಿವಾರಾಧನತತ್ಪರಃ ॥೮೮॥

ಆ ಸತ್ಯಮೂರ್ತಿಯೂ ಸಹ ತನ್ನ ಪತ್ನಿಯು ಶಿವಾರಾಧನೆಯಲ್ಲಿ ಆಸಕ್ತಳಾಗಿದ್ದಾಳೆಂದು ಆಕೆಯನ್ನು ಅತ್ಯಂತ ಪ್ರೀತಿಸುವನು, ಆದರಿಸುವನು. ಆಕೆಯೊಡನೆ ಯಾವ ನಿಷ್ಠುರವಾದ ಮಾತನ್ನೂ ಆಡುತ್ತಿರಲಿಲ್ಲ. ಆಕೆಯಲ್ಲಿ ಅತ್ಯಂತ ಅನುರಾಗವನ್ನೇ ಪ್ರಕಟಿಸುತ್ತಿದ್ದನು. ಹೀಗೆಯೇ ಇಬ್ಬರೂ ಅನ್ಯೋನ್ಯವಾಗಿದ್ದುಕೊಂಡು ಸುಖವನ್ನನುಭವಿಸುತ್ತಿದ್ದರು." ||೮೫||

ಈ ಪ್ರಕಾರವಾಗಿ ಭೃಗುಮುನಿಯು ಹೇಳುತ್ತಿರಲು ಯಮನು ಆ ಮಾತುಗಳನ್ನು ಕೇಳಿ ಅತ್ಯಂತ ಆನಂದೋತ್ಸಾಹದಿಂದ ಕೂಡಿ ಪುನಃ ಆ ಶಿವಕಥೆಗಳನ್ನೇ ಕೇಳುತ್ತಿದ್ದನು. ||೮೬||

ಇದೇ ರೀತಿಯಾಗಿ ನಾನೂ ಆ ಶಿವಕಥಾಪ್ರಸಂಗಗಳನ್ನೇ ಅಲ್ಲಿ ಕೇಳುತ್ತಾ ಅನೇಕ ದಿವಸಗಳನ್ನು ಕಳೆದೆ. ಅನಂತರ ಈ ಕಾಡಿನಲ್ಲಿ ನನಗೆ ಜನ್ಮವು ವ್ಯಾಘ್ರಜಾತಿಯಲ್ಲಿ ಉಂಟಾಯಿತು. ಆದರೆ ನನಗೆ ನನ್ನ ಪತ್ನಿಯು ಸಹವಾಸಪುಣ್ಯದಿಂದ ಹಿಂದಿನ ಚರಿತ್ರೆಗಳೆಲ್ಲಾ ಸ್ಮೃತಿಗೆ ಬರುತ್ತಿವೆ. ||೮೭||

ಈ ರೀತಿಯಾಗಿ ಆ ಶಾರ್ದೂಲವು ಸ್ವವಿಷಯವನ್ನು ತಿಳಿಸಲು ಆ ಮಾತು

ತತಃ ಪರಂ ನಾರದೋಽಪಿ ತದುಕ್ತವಚನಾಂಬುಧಿಂ ।
ಶ್ರುತ್ವಾ ಪೀತ್ವಾ ಪ್ರಹೃಷ್ಟೋಽಭೂತ್ಸತ್ಯಮುಕ್ತಮಿತಿ ಪ್ರಿಯೇ ॥೮೯॥

ಸಾ ರಾಜ್ಞೀ ಪರಮಂ ಪ್ರಾಪ ಸುಖಂ ಶೈವಃ ಪತಿರ್ಮಮ ।
ಅತೋ ಮಮ ಮಹದ್ಭಾಗ್ಯಂ ಭರ್ಗದತ್ತಮಿತಿ ಪ್ರಿಯಾ ॥೯೦॥

ಸ್ವಸ್ವಸ್ಥಾನಂ ತತಃ ಪ್ರಾಪುಸ್ತೇ ಸರ್ವೇ ಶಿವಪೂಜಕಾಃ ।
ಶಿವಾರ್ಚನಪ್ರಭಾವಾಣಾಂ ಕುರ್ವಂತಸ್ತೇ ಪ್ರಶಂಸನಂ ॥೯೧॥

ಇಯಂ ಪುಣ್ಯಕಥಾ ತಾವತ್ತುಭ್ಯಮುದ್ಯ ಸಮೀರಿತಾ ।
ಸರ್ವಪಾಪಹರಾ ನಿತ್ಯಂ ಶ್ರವಣಾತ್ಸರ್ವಕಾಮದಾ ॥೯೨॥

ಗಳನ್ನೆಲ್ಲಾ ಕೇಳಿ ಆ ಶಿವಧರ್ಮಪರಾಯಣರಾದ ರಾಜನೂ ಬ್ರಾಹ್ಮಣನೂ ನಾರದನೂ ಸಹ ಅತ್ಯಂತ ಸಂತುಷ್ಟರಾದರು. ॥೮೮॥

ಅನಂತರ ಆ ರಾಜನು ಪ್ರಿಯಕಥಾಲಾಪ, ಸತ್ಕಾರ ಇವುಗಳಿಂದ ನಾರದನನ್ನು ಪುರಸ್ಕರಿಸಲು ನಾರದನೂ ಆತನ ಮಧುರವಾದ ವಚನಗಳನ್ನು ಕೇಳುತ್ತ ಅತ್ಯಂತ ಆನಂದಿತನಾದನು. ಪ್ರಿಯೇ, ಶುಕವಾಣಿಯೇ, ಇದೆಲ್ಲಾ ಪರಮ ಸತ್ಯವಾದದ್ದೆಂದು ತಿಳಿ. ಎಂದು ಸತ್ಯವ್ರತರಾಜನು ತನ್ನ ಪತ್ನಿಗೆ ವ್ಯಾಘ್ರದ ಕಥೆಯನ್ನು ಹೇಳಿದನು. ॥೮೯॥

ಈ ಮಾತುಗಳನ್ನೆಲ್ಲಾ ಕೇಳಿ ಆ ರಾಣಿಯು ಪರಮಾನಂದವನ್ನು ಹೊಂದಿದ ಳಲ್ಲದೇ ಆಕೆಯು ತನ್ನ ಪತಿಯೂ ಪರಶಿವಭಕ್ತನಾಗಿದ್ದಾನೆ. ನಾನೂ ಭಾಗ್ಯವಂತ ಳಾಗಿದ್ದೇನೆ. ಈ ಸೌಭಾಗ್ಯವನ್ನು ಪರಮೇಶ್ವರನೇ ನನಗೆ ಅನುಗ್ರಹಿಸಿದ್ದಾನೆ. ಹೀಗೆಂದು ನೆನೆಸಿಕೊಳ್ಳುತ್ತಾ ಅತ್ಯಂತ ಸಂತುಷ್ಟಳಾಗುತ್ತಿದ್ದಳು. ಹೀಗೆಂದು ಹೇಳಿ ಕಥೆಯನ್ನು ಸತ್ಯವ್ರತರಾಜನು ಮುಗಿಸುತ್ತಾ ಹೀಗೆಂದನು. ॥೯೦॥

ಅದೆಲ್ಲವನ್ನೂ ಕೇಳಿ ಆನಂದಿತರಾಗಿ ಆ ಶಿವಭಕ್ತರೆಲ್ಲರೂ ಶಿವಾರ್ಚನೆಯ ಮಹಿಮೆಯನ್ನೆ ಪದೇ ಪದೇ ಸ್ಮರಿಸಿಕೊಂಡು ಶ್ಲಾಘಿಸುತ್ತಾ ತಮ್ಮ ತಮ್ಮ ಸ್ಥಾನ ಗಳಿಗೆ ಹೊರಟುಹೋದರು. ॥೯೧॥

ಈ ಕಥೆಯು ಅತ್ಯಂತ ಪುಣ್ಯಪ್ರದವಾದುದು. ಸಕಲ ಪಾಪಗಳನ್ನೂ ನಿವಾರಿ ಸುವುದಾಗಿದೆ. ಇದನ್ನು ಕೇಳಿದರೆ ಸಕಲ ಇಷ್ಟಾರ್ಥಗಳೂ ಸಿದ್ಧಿಸುತ್ತವೆ. ಇಂಥ ಮಹತ್ತರವಾದ ಕಥೆಯನ್ನು ನಿನಗಾಗಿ ನಾನು ಹೇಳಿದ್ದೇನೆ. ॥೯೨॥

ಅತಸ್ತ್ವಯಾಪಿ ಯತ್ನೇನ ಕರ್ತವ್ಯಂ ಶಿವಪೂಜನಂ ।
ಶಿವಾರ್ಚನಂ ಪರೋ ಧರ್ಮೋ ನಾರೀಣಾಮಪಿ ಸರ್ವಥಾ ॥೯೩॥

॥ ರತ್ನಾಕರ ಉವಾಚ ॥

ಇತಿ ತದ್ವಚನಂ ಶ್ರುತ್ವಾ ಸಾ ಚಕಾರ ಶಿವಾರ್ಚನಂ ।
ಭರ್ತ್ರಾ ತೇನ ಶಿವಾಚಾರನಿರತೇನ ಸಹಾದರಾತ್ ॥೯೪॥

ತಸ್ಯಾಂ ಪುತ್ರಾಸ್ಸಮುತ್ಪನ್ನಾಶ್ಶಾಂಭವಾ ಏವ ತೇ ಸದಾ ।
ಶಿವಾರ್ಚನಪರಾಸ್ಸರ್ವೇ ಗುರುಶುಶ್ರೂಷಣೇ ರತಾಃ ॥೯೫॥

ಶೈವಃ ಪಿತಾಯಮಸ್ಮಾಕಂ ಜನನೀ ಶಿವತತ್ಪರಾ ।
ವಯಂ ಚ ಶಾಂಭವಾಸ್ತೇನ ಭಾಗ್ಯಮಿತ್ಯೂಚುರಾದರಾತ್ ॥೯೬॥

ಆದುದರಿಂದ ಶಿವಾರ್ಚನೆಯನ್ನು ನೀನೂ ಆಗತ್ಯವಾಗಿ ಮಾಡಲೇಬೇಕು. ಸ್ತ್ರೀಯರಿಗೂ ಶಿವಪೂಜೆಯೇ ಪರಮಧರ್ಮವಾಗಿರುವುದು. ಇದನ್ನು ತಿಳಿದುಕೊಂಡು ನೀನೂ ಜಾಗ್ರತೆ ಶಿವಾರಾಧನೆಯಲ್ಲಿ ಆಸಕ್ತಳಾಗು.” ॥೯೩॥

ಹೀಗೆಂದು ಸತ್ಯವ್ರತನು ಶುಕವಾಣಿಗೆ ಉಪದೇಶಮಾಡಲು, ಅದೇ ಮೇರೆಗೆ ಆಕೆಯೂ ಪತಿಯೊಡನೆ ಅತ್ಯಂತ ಭಕ್ತಿಪೂರ್ವಕವಾಗಿ ಶಿವಾರ್ಚನೆಯನ್ನು ಮಾಡಲು ತೊಡಗಿದಳು. ॥೯೪॥

ಹೀಗೆಯೇ ಆಕೆಯು ಶಿವಾರಾಧನೆಯನ್ನು ಮಾಡುತ್ತಿರಲು ಆಕೆಗೆ ಅನೇಕ ಪುತ್ರರು ಜನಿಸಿದರು. ಅವರೆಲ್ಲರೂ ಪರಮಶಿವಭಕ್ತರಾಗಿದ್ದರು. ಸದಾ ಶಿವಾರ್ಚನೆಯಲ್ಲಿಯೂ ತಂದೆತಾಯಿಗಳ ಸೇವೆಯಲ್ಲಿಯೂ ತತ್ಪರರಾಗಿರುತ್ತಿದ್ದರು. ॥೯೫॥

ನಮ್ಮ ತಂದೆಯು ಶಿವಭಕ್ತನು, ನಮ್ಮ ತಾಯಿಯೂ ಶಿವಾರಾಧನೆಯನ್ನು ಮಾಡತಕ್ಕವಳಾಗಿದ್ದಾಳೆ. ಹಾಗೆಯೇ ನಾವೂ ಸಹ ಶಿವಪೂಜಕರಾಗಿದ್ದೇವೆ. ಆಹಾ! ನಾವೇ ಭಾಗ್ಯಶಾಲಿಗಳು. ಹೀಗೆಂದು ಆ ಪುತ್ರರು ಆನಂದದಿಂದ ಸದಾ ಶಿವಾರಾಧನೆಯನ್ನೇ ನಡೆಸುತ್ತಿದ್ದರು. ॥೯೬॥

ತೇ ಸರ್ವೇ ನರ್ಮದಾತೀರೇ ಕೃತ್ವಾ ಬಿಲ್ವವನಂ ನವಂ ।
ಸಂತುಷ್ಟಾಸ್ತತ್ರ ಲಿಂಗಾನಿ ಸ್ಥಾಪಯಿತ್ವಾಪಿ ಕೋಟಿಶಃ ॥೯೭॥

ತಸ್ಮಿನ್ನೇವ ವನೇ ಸ್ಥಿತಂ ಶಿವರತೈಃ ಕೃತ್ವಾ ಶಿವಾರಾಧನಂ
ಭಸ್ಮೋದ್ಧೂಳಿತವಿಗ್ರಹೈರಪಿ ತಥಾ ರುದ್ರಾಕ್ಷಮಾಲಾವೃತೈಃ ।
ತೈರೇವಾಮಲಬಿಲ್ವಕೋಮಲದಲೈರಭ್ಯರ್ಚಯಂತೋ ಮುಹುಃ
ತತ್ರೋವಾಸ ಮಹೇಶ್ವರೋಽಪಿ ಸತತಂ ತತ್ಪೂಜಯಾ ಲಾಲಸಃ ॥೯೮॥

ತನ್ಮಾತಾ ಸ್ವಸುತಾನ್ವಿಲೋಕ್ಯ ಪರಯಾ ಪ್ರೀತ್ಯಾ ಶಿವಾರಾಧಕಾನ್
ತತ್ಪುತ್ರಾನಪಿ ಶಾಂಕರಾನತಿಮುದಾ ತತ್ಪುತ್ರಪೌತ್ರಾನಪಿ ।
ಶರ್ವಾರಾಧನತತ್ಪರಾನತಿಲಸದ್ಭಸ್ಮತ್ರಿಪುಂಡ್ರಾಂಕಿತಾನ್
ಮೇನೇ ಧನ್ಯತಮಂ ಕುಲಂ ಕುಲಮಿದಂ ಶ್ರೀಶೂಲಪಾಣೇರಿತಿ ॥೯೯॥

ಆಗ ಆ ತಂದೆತಾಯಿಗಳೂ ಮಕ್ಕಳೂ ಸಹ ಮತ್ತೂ ಹೆಚ್ಚಾಗಿ ಶಿವಪೂಜೆಯನ್ನು ಮಾಡಬೇಕೆಂಬ ಇಚ್ಛೆಯಿಂದ ಒಟ್ಟಾಗಿ ನರ್ಮದಾನದೀ ತೀರಕ್ಕೆ ಹೋದರು. ಅಲ್ಲಿ ಒಂದು ನೂತನವಾದ ಬಿಲ್ವವನವನ್ನೇ ನಿರ್ಮಿಸಿ ಅಲ್ಲಿ ಸಹಸ್ರಾರು ಶಿವಲಿಂಗಗಳನ್ನು ಸ್ಥಾಪಿಸಿ ನಿತ್ಯವೂ ಶಿವಲಿಂಗಗಳನ್ನು ಪೂಜಿಸುತ್ತಿದ್ದರು. ||೯೭||

ಹೀಗೆಯೇ ಅವರೆಲ್ಲರೂ ಆ ರೇವಾತೀರದಲ್ಲಿಯೇ ನೆಲಸಿ ನಿತ್ಯವೂ ಶಿವಧರ್ಮ ತತ್ಪರರಾಗಿದ್ದರು. ಅವರು ಸದಾ ಭಸ್ಮರುದ್ರಾಕ್ಷಮಾಲೆಗಳನ್ನು ಧರಿಸಿಕೊಂಡಿರುತ್ತಿದ್ದರು. ತಾವೇ ಬೆಳೆಸಿದ ಬಿಲ್ವವೃಕ್ಷಗಳಿಂದ ಪತ್ರೆಗಳನ್ನು ತಂದು ನಿತ್ಯವೂ ಶಿವಲಿಂಗಗಳಿಗೆ ಭಕ್ತಿಯಿಂದ ಪೂಜಿಸುತ್ತಿದ್ದರು. ಇವರ ಈ ರೀತಿಯಾದ ಆರಾಧನೆಯಿಂದ ಪರಮೇಶ್ವರನು ಸುಪ್ರೀತನಾದನಲ್ಲದೇ ಅವರ ಪೂಜೆಯಲ್ಲಿ ಮಮತೆಯನ್ನು ತೋರ್ಪಡಿಸುತ್ತ ತಾನೂ ಅಲ್ಲಿಯೇ ವಾಸಮಾಡುತ್ತಿದ್ದನು. ||೯೮||

ಈ ರೀತಿ ಶಿವಾರಾಧನೆಯಲ್ಲಿ ತತ್ಪರರಾದ ಪುತ್ರರನ್ನು ನೋಡಿ ಅವರ ತಾಯಿಯು ಅತ್ಯಂತ ಆನಂದಿತಳಾದಳು. ಹಾಗೆಯೇ ಕಾಲಕ್ರಮೇಣ ಆ ಪುತ್ರರಿಗೂ ಮಕ್ಕಳಾದರು. ಅವರಿಗೂ ಕ್ರಮೇಣ ಪುತ್ರರು ಜನಿಸಿದರು. ಇವರೆಲ್ಲರೂ ಪರಮ ಶಿವಭಕ್ತರೇ ಆಗಿದ್ದರು. ಭಸ್ಮತ್ರಿಪುಂಡ್ರ ಮತ್ತು ರುದ್ರಾಕ್ಷಧಾರಿಗಳಾಗಿ ಶಿವಭಕ್ತ ಶ್ರೇಷ್ಠರಾದ ಮಕ್ಕಳನ್ನೂ ಮೊಮ್ಮಕ್ಕಳನ್ನೂ ಅವರ ಮಕ್ಕಳನ್ನೂ ನೋಡಿ ನೋಡಿ ಆನಂದಪಟ್ಟು ಆ ಸತ್ಯವ್ರತದಂಪತಿಗಳು ನಮ್ಮ ಕುಲವೇ ನಿಜವಾಗಿ ಧನ್ಯವಾದದ್ದು.

ಏವಂ ಶಿವಾರಾಧನತತ್ಪರಂ ತಂ
ಸತ್ಯವ್ರತಂ ಬಿಲ್ವವನಂ ಸಪುತ್ರಂ।
ದೃಷ್ಟ್ವಾ ಪ್ರಹೃಷ್ಟಾ ಮುನಯೋಽಪಿ ಚಿತ್ರಾಂ
ತತ್ಸಂತತೇರ್ವೃದ್ಧಿಮತಿಪ್ರಸಿದ್ಧಾಂ ॥೧೦೦॥

ಇಂದ್ರಾದಯೋಽಪ್ಯಾದರತಸ್ತಮೇತ್ಯ
ಮಹೇಶ್ವರಾರಾಧನಸಕ್ತಚಿತ್ತಂ।
ನಮಂತಿ ಗಂಧರ್ವನರಾಶ್ಚ ಸರ್ವೇ
ನಿತ್ಯಂ ಶಿವಾರಾಧನಸಕ್ತಚಿತ್ತಂ ॥೧೦೧॥

ತದ್ದೇಶರಾಜಾ ತಂ ದೃಷ್ಟ್ವಾ ಮಹಾರಥ ಇತಿ ಶ್ರುತಃ।
ರೇವಾತೀರೇ ಚರನ್ ದೃಷ್ಟ್ವಾ ಲಿಂಗಾನ್ಯಪಿ ವಿಶೇಷತಃ ॥೧೦೨॥

ಇದೇ ಶಿವಕುಲವಾಗಿರುವುದು ಹೀಗೆಂದು ಶ್ಲಾಘಿಸಿಕೊಳ್ಳುತ್ತಾ ಅತ್ಯಾನಂದಿತರಾದರು. ॥೯೯॥

ಈ ರೀತಿ ಆ ಸತ್ಯವ್ರತನ ವಂಶವು ದಿನದಿಂದ ದಿನಕ್ಕೆ ಅಭಿವೃದ್ಧವಾದದ್ದನ್ನೂ ಅತ್ಯಾಶ್ಚರ್ಯವಾಗುವಂತೆ ಆ ಮಕ್ಕಳೆಲ್ಲರೂ ಕೇವಲ ಪರಶಿವಭಕ್ತರಾದದ್ದನ್ನೂ ನೋಡಿದ ಋಷಿಗಳೆಲ್ಲರೂ ಅತ್ಯಂತ ವಿಸ್ಮಿತರಾದರು. ಆ ಸತ್ಯವ್ರತನ ಶಿವಾರಾಧನೆಯ ಕ್ರಮವನ್ನೂ ಆ ಬಿಲ್ವವನವನ್ನೂ ಆ ಪುತ್ರ ಸಂತತಿಯನ್ನೂ ನೋಡಿ ಎಲ್ಲಾ ಮುನಿಗಳಿಗೂ ಅತ್ಯಾಶ್ಚರ್ಯವುಂಟಾಯಿತು. ॥೧೦೦॥

ಆ ಸತ್ಯವ್ರತನ ಚಿತ್ತವು ಸರ್ವದಾ ಶಿವಧ್ಯಾನದಲ್ಲಿಯೇ ಆಸಕ್ತವಾಗಿರುತ್ತಿತ್ತು. ಅಂಥವನನ್ನು ದರ್ಶನಮಾಡಬೇಕೆಂದು ದೇವೇಂದ್ರಾದಿ ದೇವತೆಗಳೂ, ಗಂಧರ್ವರೂ ಸಮಸ್ತರೂ ಬಂದು ಸಂದರ್ಶಿಸಿ ಭಕ್ತಿಯಿಂದ ನಮಸ್ಕರಿಸುತ್ತಿದ್ದರು. ॥೧೦೧॥

ಹೀಗೆಯೇ ಒಂದು ದಿವಸ ಅಲ್ಲಿ ರಾಜ್ಯವನ್ನಾಳುತ್ತಿದ್ದ ಮಹಾರಥನೆಂಬ ರಾಜನೂ ಬಂದು ಸತ್ಯವ್ರತನನ್ನು ನೋಡಿದನು. ಅಲ್ಲಿದ್ದ ಅನೇಕಾನೇಕ ಶಿವಲಿಂಗಗಳನ್ನೂ ಸಂದರ್ಶಿಸಿದನು. ॥೧೦೨॥

ತತ್ಪುತ್ರಪೌತ್ರಾದಿಸಮರ್ಚಿತಾನಿ
ಲಿಂಗಾನಿ ರೇವಾಜಲಬಿಲ್ವಪತ್ರೈಃ ।
ಕುಂದಾದಿಭಿಶ್ಚಾದರತೋಽತಿಭಕ್ತ್ಯಾ
ಸತ್ಯವ್ರತಂ ಪ್ರಾಹ ಸ ಭೂಪತಿಸ್ತಂ ॥೧೦೩॥

॥ ಮಹಾರಥ ಉವಾಚ ॥

ಮುನೀಂದ್ರ ಪುತ್ರಪೌತ್ರಾದಿಸಂತತಿರ್ಮಹತೀ ತವ ।
ಶಂಕರಾರಾಧನೋದ್ಯುಕ್ತಾ ವೃದ್ಧಿಮೇತಿ ಪುನಃ ಪುನಃ ॥೧೦೪॥

ಸ್ತನಂಧಯೋಽಪಿ ತ್ರಿಪುರಾಂತಕಂ ತಂ
ಸಮರ್ಚಯತ್ಯತ್ರ ಕಥಂ ಪ್ರವೃತ್ತಿಃ ।
ಅನೇನ ನಾಧೀತಮಪಿ ಶ್ರುತಂ ವಾ
ಮಾಹಾತ್ಮ್ಯಮೀಶಸ್ಯ ಕಿಮತ್ರ ಚಿತ್ರಂ ॥೧೦೫॥

ಅಚ್ಛಿನ್ನನಾಭಿನಾಳೋಽಪಿ ಜಟಾಮಂಡಲಮಂಡಿತಃ ।
ಉದ್ಧೂಳನತ್ರಿಪುಂಡ್ರಾಭ್ಯಾಂ ರುದ್ರಾಕ್ಷೈರಪ್ಯಲಂಕೃತಃ ॥೧೦೬॥

ಆ ಸತ್ಯವ್ರತನ ಪುತ್ರರೂ ಪೌತ್ರರೂ ಎಲ್ಲರೂ ಅಲ್ಲಿದ್ದ ಶಿವಲಿಂಗಗಳಿಗೆಲ್ಲಾ ರೇವಾಜಲದಿಂದ ಅಭಿಷೇಕವನ್ನು ಮಾಡಿ ಬಿಲ್ವಪತ್ರೆಗಳಿಂದಲೂ ಮಲ್ಲಿಗೆ ಮುಂತಾದ ಹೂಗಳಿಂದಲೂ ಭಕ್ತಿಪುರಸ್ಸರವಾಗಿ ಪೂಜಿಸುತ್ತಿದ್ದುದನ್ನು ನೋಡಿ ಆ ರಾಜನು ಸತ್ಯವ್ರತನನ್ನು ಕುರಿತು ವಿನಯದಿಂದ ಹೀಗೆ ಕೇಳಿದನು. ॥೧೦೩॥

ಎಲೈ ಮುನೀಂದ್ರನೇ! ನೀನೇ ಪುಣ್ಯಾತ್ಮನು. ಭಾಗ್ಯಶಾಲಿಯಾಗಿರುತ್ತೀಯೆ. ನಿನ್ನ ವಂಶವು ದಿನದಿಂದ ದಿನಕ್ಕೆ ಅಭಿವೃದ್ಧಿಯನ್ನು ಹೊಂದುತ್ತಿದೆ. ನಿನ್ನ ಸಂತತಿಯವರೆಲ್ಲಾ ಕೇವಲ ಶಿವಾರಾಧನೆಯಲ್ಲಿಯೇ ತತ್ಪರರಾಗಿರುತ್ತಾರೆ. ॥೧೦೪॥

ಇಲ್ಲಿ ನೋಡು. ಸ್ತನ್ಯಪಾನಮಾಡುವ ಈ ಎಳೇ ಹಸುಳೆಯೂ ಸಹ ಶಂಕರನನ್ನು ಆರಾಧಿಸುತ್ತಿದೆ. ಇವನಿಗೆ ಆ ಪರಮೇಶ್ವರನ ಮಹಿಮೆಯು ಹೇಗೆ ತಿಳಿಯಿತೋ ಅದೇ ಆಶ್ಚರ್ಯಕರವಾಗಿದೆ. ಈತನು ಇನ್ನೂ ಯಾವುದನ್ನೂ ಅಭ್ಯಾಸ ಮಾಡಿರುವುದಿಲ್ಲ. ಅಥವಾ ಯಾವ ಕಥೆಯನ್ನೂ ಕೇಳಿರುವುದಿಲ್ಲ. ಇವನಿಗೆ ಹೀಗೆ ಪ್ರವೃತ್ತಿಯು ಉಂಟಾದದ್ದೇ ಮಹಾ ಆಶ್ಚರ್ಯ. ॥೧೦೫॥

ಇನ್ನೂ ನಾಭಿನಾಳವನ್ನು ಕತ್ತರಿಸದಿರುವ ಶಿಶುವು ಕೇವಲ ಶಿಶುವಾಗಿರು

ಅಯಂ ಕೋ ವಾ ತವ ಪ್ರೀತಿಸ್ತಸ್ಮಿನ್ನತಿತರಾಂ ಖಲು ।
ಇದಂ ನ ಕೌತುಕಂ ಕ್ವಾಪಿ ಶ್ರುತಂ ದೃಷ್ಟಂ ಚ ನ ಧ್ರುವಂ ॥೧೦೭॥

ತತ್ರಾಪಿ ಖಲು ತಾರುಣ್ಯಂ ತರುಣಸ್ಯಾಪಿ ಸಂತತಿಃ ।
ಕಥಮೇವಂ ಪ್ರವೃದ್ಧಾ ತೇ ಕಿಂ ವಾ ತದ್ವೃದ್ಧಿಕಾರಣಂ ॥೧೦೮॥

ಕಿಂ ಚ ಸರ್ವೇಽಪಿ ಪುಷ್ಟಾಂಗಾಸ್ಸುಂದರಾಶ್ಚ ವಿಶೇಷತಃ ।
ಶಂಕರಾರಾಧನೋದ್ಯುಕ್ತಾಸ್ಸರ್ವೇಽಪಿ ಖಲು ಸರ್ವದಾ ॥೧೦೯॥

ತ್ವತ್ಪುತ್ರಪೌತ್ರಾದಿದಾರಾ ಅಥ ವಿಶೇಷತಃ ।
ಶಿವಾರ್ಚನಾನಿ ಕುರ್ವಂತಿ ಗೃಹಕೃತ್ಯವಿವರ್ಜಿತಾಃ ॥೧೧೦॥

ವಾಗಲೇ ಮುದ್ದಾದ ಆ ಹಸುಳೆಯು ಜಟೆಯಿಂದ ಅಲಂಕೃತನಾಗಿರುವನು ; ಭಸ್ಮ ರುದ್ರಾಕ್ಷಿಗಳನ್ನು ಧರಿಸಿರುವನು. ||೧೦೬||

ನೀನು ಈ ಹಸುಳೆಯನ್ನು ಅತ್ಯಂತ ಪ್ರೀತಿಸುತ್ತಿರುವೆಯಲ್ಲಾ! ಈ ಮಗುವು ಯಾರು ? ಇಂಥ ಮಗುವನ್ನು ನಾವು ಎಲ್ಲಿಯೂ ನೋಡಿರುವುದಿಲ್ಲ. ಇಂಥ ಅದ್ಭುತ ವನ್ನು ಎಲ್ಲಿಯೂ ಕೇಳಿರುವುದೂ ಇಲ್ಲ. ಇವನ ವಿದ್ಯಮಾನವೇನು ? ||೧೦೭||

ಅದರಲ್ಲಿಯೂ ನಿನಗೆ ತಾರುಣ್ಯವೆಂದರೇನು ? ನಿನಗೆ ಎಷ್ಟು ವಯಸ್ಸಾಗಿದೆ ? ಇದೇನು ಆಶ್ಚರ್ಯ ? ಇಂಥ ತರುಣನಾಗಿರುವ ನಿನ್ನ ಸಂತತಿಯು ಹೇಗೆ ಬೆಳೆಯಿತು ? ಈರೀತಿಯಾದ ಅಭಿವೃದ್ಧಿಗೆ ಏನು ಕಾರಣ ? ಇವೆಲ್ಲವನ್ನೂ ಹೇಳು. ||೧೦೮||

ಅದರಲ್ಲಿಯೂ ಮತ್ತೊಂದು ಆಶ್ಚರ್ಯವೇನೆಂದರೆ, ನಿನ್ನ ಮಕ್ಕಳು ಅನ್ನಾ ಹಾರಗಳನ್ನೂ ಮುಟ್ಟದೇ ಸದಾ ಶಿವಪೂಜೆಯಲ್ಲಿಯೇ ತತ್ಪರರಾಗಿರುತ್ತಾರೆ. ಆದರೂ ಅವರೆಲ್ಲರೂ ಹೃಷ್ಟಪುಷ್ಟರಾಗಿದ್ದಾರೆ ಮತ್ತು ಅತ್ಯಂತ ಸುಂದರರಾಗಿದ್ದಾರೆ. ಇದು ಹೇಗೆ? ||೧೦೯||

ನಿನ್ನ ಮಕ್ಕಳ ಮತ್ತು ಮೊಮ್ಮಕ್ಕಳ ಎಲ್ಲರ ಪತ್ನಿಯರೂ ಸಹ ವಿಶೇಷ ವಾಗಿಯೇ ಶಿವಪೂಜೆಯನ್ನು ಮಾಡುತ್ತಿರುತ್ತಾರೆ. ಯಾವ ಗೃಹಕೃತ್ಯಗಳನ್ನೂ ಮಾಡದೇ ಹೀಗೆಯೇ ನಿಮಗೆ ಹೇಗೆ ಕಾಲಕಳೆಯುವುದು ? ||೧೧೦||

ನ ಚಾಸ್ಮಿನ್ನಾಶ್ರಮೇ ದೃಷ್ಟಮನ್ನಂ ಕ್ಷೀರಂ ಘೃತಾದಿಕಂ ।
ಏವಂ ಚ ಕಥಮೇತೇಷಾಂ ಜೀವನಂ ಪ್ರತ್ಯಹಂ ಮುನೇ ॥೧೧೧॥

ಇತಿ ತದ್ವಚನಂ ಶ್ರುತ್ವಾ ಮುನಿಸ್ಸತ್ಯವ್ರತಸ್ತದಾ ।
ತಮಾಹ ಸಂಸ್ಮರನ್ ಭಕ್ತ್ಯಾ ದೇವದೇವಂ ಮಹೇಶ್ವರಂ ॥೧೧೨॥

ಅಸ್ಮಾಕಮಸ್ತ್ಯನ್ನಪತಿಪ್ರಸಾದಾತ್
ಅನ್ನಂ ದಧಿಕ್ಷೀರಘೃತಾದಿಕಂ ಚ ।
ಬ್ರಹ್ಮಾದಯಃ ಕರ್ಮಕರಾಶ್ಚ ಗೇಹೇ
ಪೂರ್ಣಂ ಗೃಹಂ ಮೇ ಸುರಗೋಕುಲೇನ ॥೧೧೩॥

ತಿಷ್ಠಂತ್ಯಪಾರಾಸ್ಸುರಭೂರುಹಾಶ್ಚ
ಚಿಂತಾಮಣಿಸ್ತಿಷ್ಠತಿ ಗೇಹಮಧ್ಯೇ ।
ಮಹೇಶ್ವರಾರಾಧನಲಬ್ಧಮೇವ
ಸಂಪೂರ್ಣಮೈಶ್ವರ್ಯಮಿದಂ ಮಮೇಹ ॥೧೧೪॥

ಈ ಆಶ್ರಮದಲ್ಲಿ ಎಲ್ಲಿಯೂ ಅನ್ನಾಹಾರಗಳಾಗಲೀ ಕ್ಷೀರ, ಘೃತ, ಇವು ಏನೂ ಇರುವುದಿಲ್ಲ. ಅವುಗಳನ್ನು ಯಾರೂ ಸಂಗ್ರಹಿಸುವುದೂ ಇಲ್ಲವಲ್ಲ. ಇವರೆಲ್ಲಾ ಏನನ್ನು ತಿನ್ನುತ್ತಾರೆ? ಹೇಗೆ ಜೀವಿಸುತ್ತಾರೆ? ಇದೆಲ್ಲವನ್ನೂ ದಯೆಯಿಟ್ಟು ಹೇಳು. ||೧೧೧||

ಹೀಗೆಂದು ಮಹಾರಥನು ಪ್ರಶ್ನಿಸಲು ಮುನಿಯಾದ ಸತ್ಯವ್ರತನು ದೇವದೇವ, ಮಹೇಶ್ವರ ಎಂದು ಧ್ಯಾನಿಸುತ್ತಾ ಹೀಗೆ ಹೇಳಿದನು. ||೧೧೨||

“ಎಲೈ ಮಹಾರಥನೇ! ಆ ಪರಮೇಶ್ವರನೇ ಅನ್ನಪತಿ ಎಂದು ನಾವು ಭಜಿಸಿರುವುದರಿಂದ ಆತನ ಅನುಗ್ರಹದಿಂದಲೇ ನಮ್ಮ ಮನೆಯಲ್ಲಿ ದಿವ್ಯವಾದ ಅನ್ನ, ಹಾಲು, ಮೊಸರು, ತುಪ್ಪ ಎಲ್ಲವೂ ಸಮೃದ್ಧವಾಗಿವೆ. ನಮಗೆ ಯಾವುದಕ್ಕೂ ಕೊರತೆ ಇರುವುದಿಲ್ಲ. ಸಾಕ್ಷಾತ್ ಬ್ರಹ್ಮನೇ ಮೊದಲಾದವರು ನಮ್ಮ ಅನುಚರರಾಗಿರುವರು. ಕಾಮಧೇನುವೇ ಮೊದಲಾದ ದೇವತೆಗಳ ಗೋವುಗಳೇ ನಮ್ಮಲ್ಲಿ ಬಂದಿರುತ್ತವೆ. ಹೀಗೆ ನಮ್ಮ ಮನೆಯು ಸಕಲ ಸಂಪತ್ಸಮೃದ್ಧವಾಗಿರುತ್ತದೆ. ||೧೧೩||

ನಾವು ಸದಾ ಮಹೇಶ್ವರನನ್ನೇ ಆರಾಧಿಸುತ್ತೇವೆ. ಆ ಪುಣ್ಯದಿಂದಲೇ ನಮ್ಮ ಮನೆಯಲ್ಲಿ ದೇವತೆಗಳ ಕಲ್ಪವೃಕ್ಷವೂ, ಚಿಂತಾಮಣಿರತ್ನವೂ, ಸಕಲ ಐಶ್ವರ್ಯ

ಮತ್ಸಂತತಿಸ್ತಿಷ್ಠತಿ ಕೋಟಿಶೋऽತ್ರ
ರೇವಾತಟಂ ಪುಣ್ಯಮಿತಿ ಪ್ರಸಿದ್ಧಾ ।
ನ ಸ್ವರ್ಗಲೋಕೇऽಪಿ ಮಮಾಸ್ತಿ ವಾಂಛಾ
ನ ಸತ್ಯಲೋಕೇಪಿ ನ ವಿಷ್ಣುಲೋಕೇ ॥೧೧೫॥

ಮಯಾ ಸ್ತುತಃ ಪ್ರಾಜ್ಞಮುಕೇನ ಶಂಭುಃ
ತತಃ ಪರಂ ಮೇ ಚಮಕೋಕ್ತಮರ್ಥಂ ।
ದದಾವುದಾರಃ ಸ ಹರಃ ಪರಂ ಮೇ
ಕಿಮಸ್ತಿ ದುಷ್ಪ್ರಾಪಮಪೀಹ ಲೋಕೇ ॥೧೧೬॥

ಯದ್ಯನ್ಮಮಾಸ್ಮಿನ್ ಸಮಪೇಕ್ಷಿತಂ ಸ್ಯಾತ್
ತತ್ಪ್ರಾಪ್ತಮೀಶಾಂಘ್ರಿರಜಃ ಪ್ರಸಾದಾತ್ ।

ಗಳೂ ಬಂದಿರುತ್ತವೆ. ನಮ್ಮ ಮನೆಯಲ್ಲಿ ಯಾವುದಕ್ಕೂ ಕೊರತೆ ಇಲ್ಲ. ಎಲ್ಲವೂ ಸಂಪೂರ್ಣವೇ ಆಗಿದೆ. ॥೧೧೪॥

ನರ್ಮದಾ ನದೀ ತೀರವು ಅತ್ಯಂತ ಪುಣ್ಯತಮವಾದ ಕ್ಷೇತ್ರವೆಂದು ಪ್ರಸಿದ್ಧ ವಷ್ಟೆ. ಆದ್ದರಿಂದಲೇ ನಾವು ಇಲ್ಲಿಗೆ ಬಂದು ವಾಸಿಸುತ್ತಿರುವೆವು. ನನ್ನ ಸಂತತಿಯು ಬೇಕಾದಷ್ಟು ಅಭಿವೃದ್ಧವಾಗಿ ಕೋಟಿಗಟ್ಟಳೆ ಆಗಿರುತ್ತದೆ. ಇದಕ್ಕೆಲ್ಲಾ ಆ ಪರ ಮೇಶ್ವರನ ಅನುಗ್ರಹವೇ ಕಾರಣ. ಆದುದರಿಂದ ನನಗೆ ಈಗ ಸ್ವರ್ಗದಲ್ಲಿಯೂ ಅಪೇಕ್ಷೆ ಇರುವುದಿಲ್ಲ. ಅಥವಾ ಬ್ರಹ್ಮಲೋಕವನ್ನಾಗಲಿ, ವಿಷ್ಣುಲೋಕವನ್ನಾಗಲಿ ಪಡೆಯಬೇಕೆಂಬ ಆಸೆಯೂ ನನಗಿಲ್ಲ. ॥೧೧೫॥

ನಾನು ಹಿಂದೊಮ್ಮೆ ಪರಮೇಶ್ವರನನ್ನು ರುದ್ರಾಧ್ಯಾಯವನ್ನು ಹೇಳುತ್ತಾ ಸ್ತೋತ್ರಮಾಡಿದೆನು. ಅಷ್ಟರಿಂದಲೇ ಪರಮೇಶ್ವರನು ಸಂತುಷ್ಟನಾಗಿ ನನಗೆ ಚಮಕ ಸೂಕ್ತದಲ್ಲಿ ಹೇಳಿರುವ ಎಲ್ಲಾ ಫಲಗಳನ್ನೂ ಅನುಗ್ರಹಿಸಿದನು. ಆದುದರಿಂದಲೇ ಆತನು ಪರಮೋದಾರನು. ಆತನೇ ಸಕಲವನ್ನೂ ಕೊಡುತ್ತಿರಲು ನನಗೆ ದುರ್ಲಭ ವಾದದ್ದು ಈ ಪ್ರಪಂಚದಲ್ಲಿ ಏನು ತಾನೇ ಇರುತ್ತದೆ? ॥೧೧೬॥

ನನಗೆ ಯಾವಯಾವ ವಸ್ತುಗಳು ಯಾವಯಾವಾಗ ಬೇಕಾಗುತ್ತದೆಯೋ ಅವುಗಳೆಲ್ಲಾ ಪರಮೇಶ್ವರನ ಪಾದಧೂಳಿಯ ಅನುಗ್ರಹದಿಂದ ಆ ಕೂಡಲೇ ದೊರೆ

ಕಿಮಸ್ತ್ಯಶಕ್ಯಂ ಜಗತೀತಲೇಽಸ್ಮಿನ್
ತ್ರಿಲೋಚನಶ್ಚೇನ್ಮಮ ಸುಪ್ರಸನ್ನಃ ॥೧೧೭॥

ತ್ರಿಲೋಚನಾಕಾರಮಚಿಂತ್ಯಮೇಕಂ
ಧ್ಯಾತ್ವಾಪಿ ಧೈರ್ಯೇಣ ವಿಭೂತಿಪೂತಃ ।
ಪ್ರಾಪ್ನೋತಿ ಸೌಭಾಗ್ಯಸಮೃದ್ಧಿಮಾದೌ
ಮುಕ್ತೋ ಭವತ್ಯೇವ ಪರಾಂತಕಾಲೇ ॥೧೧೮॥

ನ ಜಾನಂತಿ ಮಹಾದೇವಸ್ವರೂಪಮತಿದುರ್ಭಗಾಃ ।
ಕ್ಲೇಶಸಾಗರಮಗ್ನಾಸ್ತೇ ಪುನಃ ಪುನರನೇಕಧಾ ॥೧೧೯॥

ಯಸ್ತ್ವೇಕಾಂತಮುಮಾಕಾಂತಂ ಸ್ವಾಂತೇ ಸಂತತಮರ್ಚಯೇತ್ ।
ತಸ್ಯ ಭಾಗ್ಯಸ್ಯ ನೇಯತ್ತಾ ಸ ಏವ ಸುಭಗೋತ್ತಮಃ ॥೧೨೦॥

ಯುವುವು. ಸದಾ ದೊರೆಯುತ್ತಲೂ ಇರುತ್ತವೆ. ಅಂದಮೇಲೆ ನನ್ನ ಮೇಲೆ ಶಂಕರನು ಪ್ರಸನ್ನನಾಗಿರಲು ನನಗೆ ಅಸಾಧ್ಯವಾದದ್ದು ಏನಿದೆ? ॥೧೧೭॥

ಆ ಪರಮೇಶ್ವರನು ತ್ರಿಲೋಚನಾಕಾರದಿಂದ ಇರುವನು. ಆತನ ಸ್ವರೂಪವನ್ನು ನಿಷ್ಕೃಷ್ಟವಾಗಿ ಚಿಂತಿಸಲೂ ಯಾರಿಗೂ ಸಾಧ್ಯವಿರುವುದಿಲ್ಲ. ಅಂತಹ ಮಹಾದೇವನನ್ನೇ ಭಸ್ಮಾದಿಗಳಿಂದ ಅಲಂಕೃತನಾಗಿ ಭಕ್ತಿಯಿಂದ ಆರಾಧಿಸಿದರೆ ಇಹದಲ್ಲಿ ಸಮಸ್ತ ಐಶ್ವರ್ಯಗಳು ಲಭಿಸುವುವಲ್ಲದೇ ಅಂತ್ಯದಲ್ಲಿ ಪರಮಪದವೂ ದೊರೆಯುವುದು. ಇದರಲ್ಲಿ ಸಂಶಯವೇ ಇಲ್ಲ. ॥೧೧೮॥

ಪರಮೇಶ್ವರನು ಇಷ್ಟು ಮಹನೀಯ ಸ್ವರೂಪನಾಗಿದ್ದಾನೆಂದು ತಿಳಿಯದೇ ಮೂಢರು ಭಾಗ್ಯಹೀನರಾಗಿ ಸಂಸಾರವೆಂಬ ಕ್ಲೇಶಸಾಗರದಲ್ಲಿ ಪದೇಪದೇ ಬಿದ್ದು ದುಃಖಗಳನ್ನು ಅನುಭವಿಸುತ್ತಾರೆ. ॥೧೧೯॥

ಯಾವಾತನು ಸರ್ವದಾ ಚಿತ್ತದಲ್ಲಿ ಕೇವಲ ಪರಮೇಶ್ವರನನ್ನೇ ಧ್ಯಾನಿಸುತ್ತಾನೆಯೋ ಆತನೇ ಪರಮಭಾಗ್ಯಶಾಲಿಯು. ಆತನ ಭಾಗ್ಯಕ್ಕೆ ಗಣನೆಯೇ ಇಲ್ಲ. ಆತನ ಪುಣ್ಯವನ್ನು ಇಷ್ಟೆಂದು ಪರಿಗಣಿಸುವುದಕ್ಕೇ ಸಾಧ್ಯವಿಲ್ಲ. ॥೧೨೦॥

ಯೇನ ನಾರಾಧಿತಂ ಲಿಂಗಂ ಶಾಂಗಂ ಮಂಗಲದಾಯಕಂ ।
ಸ ದರಿದ್ರೋ ದುರ್ಭಗಶ್ಚ ಜಾಯತೇ ಪ್ರತಿಜನ್ಮನಿ ॥೧೨೧॥

ಅಶಿವಾರಾಧನೋದ್ಯುಕ್ತಾ ಶ್ಶಿವಾರ್ಚನಪರಾಙ್ಮುಖಾಃ ।
ಅಶಿವಂ ಪ್ರಾಪ್ನುವಂತ್ಯೇವ ಕುಂಭೀಪಾಕಾದಿಲಕ್ಷಣಂ ॥೧೨೨॥

ನರತ್ವಮಪಿ ಸಂಪ್ರಾಪ್ಯ ಯೋ ನಾರ್ಚಯತಿ ಶಂಕರಂ ।
ಸಂಸಾರಮೇವ ತಂ ಪ್ರಾಪ್ನೋತ್ಯವಶ್ಯಮಿತಿ ನಿಶ್ಚಯಃ ॥೧೨೩॥

ಚಂಡಾಲಜಾತಾಃ ಪರಮಾದರೇಣ
ನಾರಾಧಯಂತ್ಯೇವ ಮೃಡಂ ಮೃಡಾನೀಂ ।
ಅತೋ ಭವಂತ್ಯೇವ ವಿಮೂಢಚಿತ್ತಾಃ
ಪುನಃ ಪುನರ್ದುಃಖಭವಾಬ್ಧಿಮಗ್ನಾಃ ॥೧೨೪॥

ಅಂಥ ಪರಮೇಶ್ವರನ ಸ್ವರೂಪವಾದ, ಮತ್ತು ಸಕಲ ಕಲ್ಯಾಣಗಳನ್ನೂ ಪ್ರದಾನಮಾಡುವ ಶಿವಲಿಂಗವನ್ನು ಯಾರು ಪೂಜಿಸುವುದಿಲ್ಲವೋ, ಆತನು ಪರಮ ದರಿದ್ರನಾಗಿ ಹುಟ್ಟುವನು. ಆತನು ಪ್ರತಿಯೊಂದು ಜನ್ಮದಲ್ಲಿಯೂ ಭಾಗ್ಯಹೀನನಾಗಿ ಅವನತಿಯನ್ನೇ ಹೊಂದುವನು. ||೧೨೧||

ಶಿವನನ್ನು ಆರಾಧಿಸದೇ ಶಿವಪರಾಙ್ಮುಖರಾದವರು ಸರ್ವಥಾ ಅಮಂಗಳವನ್ನೇ ಪಡೆಯುವರು. ಅವರು ಕುಂಭೀಪಾಕವೇ ಮೊದಲಾದ ಘೋರನರಕದಲ್ಲಿ ಬೀಳುವರು. ||೧೨೨||

ಇಂಥ ದುರ್ಲಭವಾದ ಮತ್ತು ಅಮೋಘವಾದ ಮನುಷ್ಯಜನ್ಮವನ್ನು ಪಡೆದಿದ್ದರೂ ಕೂಡ ಇದರ ಬೆಲೆಯನ್ನು ತಿಳಿಯದೇ ಶಿವನನ್ನು ಯಾರು ಆರಾಧಿಸುವುದಿಲ್ಲವೋ ಅವರು ಖಂಡಿತವಾಗಿಯೂ ಸಂಸಾರದಲ್ಲಿಯೇ ಬಿದ್ದು ಅನೇಕ ಕಷ್ಟಗಳನ್ನು ಅನುಭವಿಸುವರು. ||೧೨೩||

ಕೇವಲ ಚಂಡಾಲನಿಗೆ ಹುಟ್ಟಿದವರು ಮಾತ್ರ ಮೂಢರಾಗಿ ವಿವೇಕವಿಲ್ಲದೇ ಭವಾನಿಯನ್ನು ಮತ್ತು ಭವಾನೀಪತಿಯನ್ನು ಆರಾಧಿಸುವುದಿಲ್ಲ. ಅದಕ್ಕಾಗಿಯೇ ಅವರು ಪದೇ ಪದೇ ಹುಟ್ಟುವರು, ಸಾಯುವರು. ಪುನಃ ಪುನಃ ಸಂಸಾರದ ದುಃಖಸಾಗರದಲ್ಲಿ ಮುಳುಗಿ ಕ್ಲೇಶಪಡುವರು. ||೧೨೪||

ಯಶ್ಚಂಡಾಲಾನ್ಮದ್ಯಪಾದ್ರಾಸಭಾದ್ವಾ
ಜಾತೋ ಜಾತ್ಯಾ ಜನ್ಮಕೋಟಿಷ್ವಘೌಘಃ।
ವ್ಯಾಪ್ತೋ ಘೋರೈಸ್ತಂ ವಿಹಾಯಾಪರಃ ಸ್ಯಾತ್
ಪುಣ್ಯೈಶ್ಶೈವಂ ಶಂಕರಧ್ಯಾನಪೂತಃ ॥೧೨೫॥

ನ ಶಾಂಕರಾಣಾಂ ಯಮಭೀತಿವಾರ್ತಾ
ಯಮಃ ಸ್ವತಃ ಕಿಂಕರ ಏವ ತೇಷಾಂ।
ಯಮಸ್ಯ ಕಾ ವಾ ಗಣನಾ ಗಣಾನಾಂ
ತೇ ಶಾಂಕರಾ ಏವ ಗಣಾ ಭವಂತಿ ॥೧೨೬॥

ಕಾಲೇ ಕಾಲೇ ಸ ಕಾಲೋಽಪಿ ಕಾಲಕಾಲಾರ್ಚಕಾನ್ ಮುಹುಃ।
ಕಾಲಕಾಲಭಯಾದೇವ ಪೂಜಯತ್ಯತಿಭಕ್ತಿತಃ ॥೧೨೭॥

ಜನ್ಮ ಜನ್ಮಾಂತರಗಳಲ್ಲಿಯೂ ಅನೇಕ ಪಾಪಕಾರ್ಯಗಳನ್ನು ಮಾಡಿದವನೇ ಚಂಡಾಲನಲ್ಲಿಯೂ ಮದ್ಯಪಾಯಿಯಲ್ಲಿಯೂ ಕತ್ತೆಯಲ್ಲಿಯೂ ಹುಟ್ಟುವನು. ಆತನೇ ಘೋರವಾದ ಯಾತನೆಗಳನ್ನೂ ಅನುಭವಿಸುವನು. ಆದರೆ ಇವೆಲ್ಲಕ್ಕೂ ವ್ಯತ್ಯಾಸವಾಗಿ ಶೈವನು ಶಿವಧ್ಯಾನದಿಂದ ಪವಿತ್ರನೂ ಪುಣ್ಯಾತ್ಮನೂ ಆಗಿ ಶ್ರೇಯಸ್ಸನ್ನು ಪಡೆಯುವನು. ॥೧೨೫॥

ಶಾಂಕರರಿಗೆ ಯಾರಿಂದಲೂ ಅಪಾಯವುಂಟಾಗಲಾರದು. ಸಾಕ್ಷಾತ್ ಮೃತ್ಯುವಾದ ಯಮನಿಂದಲೂ ಅವರಿಗೆ ಹೆದರಿಕೆ ಎಂಬುದಿಲ್ಲ. ಯಮನು ಸ್ವತಃ ಆ ಶೈವರಿಗೆ ಕಿಂಕರನೇ ಆಗಿರುತ್ತಾನೆ. ಶಿವಗಣಕ್ಕೆ ಯಮನಿಂದ ಭಯವೆಂದರೇನು? ಶಿವಭಕ್ತರೇ ಶಿವಗಣದವರು. ಅಂದಮೇಲೆ ಆ ಶಿವಗಣದವರಾದ ಶೈವರಿಗೆ ಎಂದೂ ಮೃತ್ಯುಭಯವು ಉಂಟಾಗಲಾರದು. ॥೧೨೬॥

ಯಮನೂ ಸಹ ಆಗಿಂದಾಗ ಮೃತ್ಯುಂಜಯನ ಭಕ್ತರನ್ನು ಪೂಜಿಸುತ್ತಾನೆ. ಶಿವಭಕ್ತರಲ್ಲಿ ಶಿವನಿಗೆ ಮಮತೆಯೂ ಪಕ್ಷಪಾತವೂ ಇರುತ್ತದೆ. ಅಂಥ ಶೈವರಿಗೆ ತೊಂದರೆಯನ್ನುಂಟುಮಾಡಿದರೆ ಪರಮೇಶ್ವರನಿಗೆ ಕೋಪವುಂಟಾದೀತೆಂಬ ಭಯದಿಂದ ಯಮನು ಶೈವರನ್ನು ಅತ್ಯಂತ ಆದರದಿಂದ ಪುರಸ್ಕರಿಸುತ್ತಾನೆ. ॥೧೨೭॥

ಶಂಕರಾರಾಧನಂ ಧರ್ಮಃ ಕಾಲಸ್ಯೇತ್ಯವಧಾರಿತಃ ।
ಶಿವಾರಾಧನತುಲ್ಯಂ ಹಿ ಶಾಂಕರಾರಾಧನಂ ನೃಪ ॥೧೨೮॥

ಸಂತುಷ್ಟೋ ವಿಷಮೇಕ್ಷಣೋಽಪಿ ಬಹುಧಾ ಸಮ್ಯಕ್ ಸಮಾರಾಧಿತೋ
ಶೈವೇ ಶೈವಹೃದಂಬುಜಾಂತರಗತಃ ಕಾಷ್ಠಾಪಹಾರೋದ್ಯತಃ ।
ಗೌರೀವಲ್ಲಭಮಂದಿರಂ ಪರತರಂ ತತ್ಸುಂದರಂ ಮೇನಿರೇ
ಹಾರಾಂತಃಕರಣಂ ಪ್ರಮಾಣವಿಷಯೇ ತತ್ಕಿಂ ಭವೇದ್ಭೂಪತೇ ॥೧೨೯॥

ಜಾತಿರ್ವಾ ನ ವಿಚಾರ್ಯತೇ ಶಿವರತೇ ಜಾತೇ ಭವಾನೀಪತಿಃ
ದೃಷ್ಟ್ವಾ ತದ್ಧೃದಯಾರವಿಂದಮುಗಜಾಕಾಂತಃ ಸ್ವಕಂ ಮಂದಿರಂ ।
ಮತ್ವಾ ತಿಷ್ಠತಿ ತತ್ರ ತಸ್ಯ ವಸತಿಸ್ತಾವತ್ಪರಂ ರೋಚತೇ
ಕೈಲಾಸೇಽಪಿ ರುಚಿಸ್ತಥಾ ಭಗವತಶ್ಶಂಭೋರ್ನಸೂನಂ ನೃಪ ॥೧೩೦॥

ಯಮನು ಶಿವಪೂಜೆಯನ್ನು ಮಾಡುತ್ತಾನೆಂಬುದೂ, ಶಿವಧರ್ಮವೇ ಆತನಿಗೆ ಪರಮವಾಗಿದೆ ಎಂಬುದೂ ಪ್ರಸಿದ್ಧವಷ್ಟೆ. ಹಾಗೆಯೇ ಆತನು ಶಿವಭಕ್ತರನ್ನೂ ಪೂಜಿಸುತ್ತಾನೆ. ಏಕೆಂದರೆ ಶೈವರನ್ನು ಆದರಿಸುವುದು ಶಿವಪೂಜೆಗೆ ಸದೃಶವೇ ಆಗಿರುತ್ತದೆ. ಶೈವಪೂಜೆಯು ಶಿವಾರಾಧನೆಯಂತೆಯೇ ಸರಿ. ||೧೨೮||

ಶಿವಭಕ್ತನನ್ನು ಪೂಜಿಸಿ ಸಂತುಷ್ಟನನ್ನಾಗಿ ಮಾಡಿದರೆ ಆ ಭಕ್ತನ ಹೃದಯದಲ್ಲಿರುವ ಪರಮೇಶ್ವರನೇ ಸುಪ್ರೀತನಾಗುತ್ತಾನೆ. ಆ ಶಂಕರನು ಸರ್ವವ್ಯಾಪಿಯಾಗಿದ್ದಾನಷ್ಟೆ. ಆತನಿಗೆ ಎಲ್ಲವೂ ಆಯತನವಾಗಿರುವಂತೆ ತನ್ನ ಭಕ್ತನ ಅಂತಃಕರಣವೂ ಸುಂದರವೂ ಶ್ರೇಷ್ಠವೂ ಆದ ಮಂದಿರವೇ ಆಗಿರುತ್ತದೆ. ಅಲ್ಲಿ ಆತನೇ ವಿರಾಜಮಾನನಾಗಿರುತ್ತಾನೆ ಎಂಬುದನ್ನು ಸರ್ವರೂ ಪ್ರಮಾಣವಚನಗಳಿಂದ ಅಂಗೀಕರಿಸಿರುತ್ತಾರೆ. ಆದುದರಿಂದ ಅಂತಹ ಭಕ್ತನನ್ನು ಪೂಜಿಸಿದರೆ ಆ ಪೂಜೆಯಿಂದ ಶಿವಭಕ್ತನ ಹೃದಯಮಧ್ಯವರ್ತಿಯಾದ ಪರಮೇಶ್ವರನೇ ಸಂತುಷ್ಟನಾಗಿ ಸಕಲ ದುಃಖಗಳನ್ನೂ ನಿವಾರಣೆಮಾಡುತ್ತಾನೆ. ಆದ್ದರಿಂದಲೇ ಯಮನು ಶಾಂಭವರನ್ನು ಪೂಜಿಸುವನು. ||೧೨೯||

ತನ್ನ ಭಕ್ತನು ಯಾವ ಜಾತಿಯವನೆಂಬುದನ್ನು ಸಹ ಪರಮೇಶ್ವರನು ಪರಿಗಣಿಸುವುದಿಲ್ಲ. ಆ ಭಕ್ತನು ಯಾವ ಜಾತಿಯವನೇ ಇರಲಿ ಆತನ ಭಕ್ತಿಯ ಪ್ರಕರ್ಷವನ್ನು ಮಾತ್ರ ನೋಡಿ, ಆನಂದಪಟ್ಟು (ಆತನ) ಆ ಭಕ್ತನ ಹೃದಯವೇ

ಪೂಜಯಂತ್ಯತಿಯತ್ನೇನ ಶಾಂಕರಾನಮರಾ ಅಪಿ ।
ಶಿವಮಂದಿರಮಿತ್ಯೇವ ಮತ್ವಾ ಶಾಂಕರಮಾನಸಂ ॥೧೩೧॥

ಅಹೋ ಪುಣ್ಯವತಾಮೇವ ಮಹಾದೇವಾರ್ಚನೇ ರತಿಃ ।
ಸಾ ಮತಿರ್ದುರ್ಲಭಾ ಲೋಕೇ ದುರ್ಲಭಾ ದುರ್ಲಭಾ ನೃಣಾಂ ॥೧೩೨॥

ಶಿವಭಕ್ತ್ಯಂಕುರಾಪಾರಶಾಂಕರಾಪಾರಚೇತಸಾ ।
ಧರ್ಮಾದಿಫಲಪೂರ್ಣಾನಾಮಿಯತ್ತಾವರ್ಜಿತಂ ಸುಖಂ ॥೧೩೩॥

ಪದೇ ಪದೇಽಪಿ ಕಲ್ಯಾಣಂ ಶಾಂಕರಸ್ಯ ಮಹಾತ್ಮನಃ ।
ಶಂಕರಾರಾಧನೇ ಪ್ರೀತಿ ರ್ಬಹುಜನ್ಮತಪಃಫಲಂ ॥೧೩೪॥

ತನ್ನ ಮಂದಿರವೆಂದು ಅಲ್ಲಿಯೇ ಬಂದು ಸ್ಥಿರವಾಗಿ ಇರುತ್ತಾನೆ. ಎಲೈ ರಾಜನೇ, ಭಕ್ತನ ಹೃದಯದಲ್ಲಿ ವಾಸಮಾಡುವುದು ಆ ಶಂಕರನಿಗೆ ಎಷ್ಟು ಪ್ರಿಯವಿರುತ್ತದೆಯೋ ಅಷ್ಟು ಪ್ರೀತಿಯು ತನ್ನ ಕೈಲಾಸದಲ್ಲಿಯೂ ಇರುವುದಿಲ್ಲೆಂದು ತಿಳಿ. ॥೧೩೦॥

ಶಿವಭಕ್ತರ ಚಿತ್ತವು ಶಿವನ ಮಂದಿರವೇ ಆಗಿದೆ. ಮತ್ತು ಶಿವನ ಆವಾಸಸ್ಥಾನವಾಗಿದೆ ಎಂಬುದನ್ನು ತಿಳಿದುಕೊಂಡೇ ದೇವತೆಗಳೂ ಸಹ ಶಾಂಕರರನ್ನು ಪ್ರಯತ್ನಪುರಸ್ಸರವಾಗಿ ಪೂಜಿಸುವರು. ॥೧೩೧॥

ಮಹಾದೇವನ ಆರಾಧನೆಯಲ್ಲಿಯೇ ಪ್ರೀತಿ ಇಟ್ಟುಕೊಂಡಿರುವುದು ಬಹಳ ಕಷ್ಟ. ಅಂತಹ ಭಾಗ್ಯವು ಕೇವಲ ಪುಣ್ಯವಂತರಿಗೆ ಮಾತ್ರ ಲಭಿಸುವುದು. ಅವರು ಕೇವಲ ಶಿವಾರಾಧನೆಯೊಂದನ್ನು ಬಿಟ್ಟು ಮತ್ತೆ ಯಾವುದನ್ನೂ ಪ್ರೀತಿಸುವುದಿಲ್ಲ. ಇಂತಹ ಸದ್ಬುದ್ಧಿಯು ಬಹಳ ವಿರಳ. ಅದರಲ್ಲಿಯೂ ಈ ಮನುಷ್ಯರಲ್ಲಿ ಅತ್ಯಂತ ದುರ್ಲಭವೇ. ॥೧೩೨॥

ಶಾಂಭವರ ಚಿತ್ತವು ಅತ್ಯಂತ ಮಹತ್ತರವಾದದ್ದು. ಅಲ್ಲಿಯೇ ಅಪಾರವಾದ ಶಿವಭಕ್ತಿಯು ಅಂಕುರವಿರುತ್ತದೆ. ಅಂಥ ಚಿತ್ತದ ದೆಸೆಯಿಂದ ಉಂಟಾಗುವ ಧರ್ಮಾದಿ ಪುರುಷಾರ್ಥಗಳನ್ನೂ ಸುಖಗಳನ್ನೂ ಇಷ್ಟೆಂದು ಹೇಳುವುದಕ್ಕಾಗುವುದಿಲ್ಲ. ಅದು ಸರ್ವವೂ ಅಪಾರವೇ ಆಗಿರುತ್ತದೆ. ॥೧೩೩॥

ಅನೇಕ ಜನ್ಮಗಳಲ್ಲಿ ಆಚರಿಸಿದ ತಪಸ್ಸಿನ ಪುಣ್ಯಗಳಿಗೆ ಫಲವೇ ಆ

ಯಾ ಪಿನಾಕಿನಮಾಯಾತಿ ನಮಸ್ಯಾ ಕಲ್ಮಲೀಕಿನಂ ।
ಸೈವ ತಾವನ್ನಮಸ್ಕಾರ್ಯಂ ಕರೋತಿ ನರಮಪ್ಯಹೋ ॥೧೩೫॥

ಕಲ್ಮಲೀಕೀ ಸ ಸಂಪ್ರೀತಃ ಕೃತಯಾ ಸ್ವನಮಸ್ಯಯಾ ।
ಸುರವಂದ್ಯಂ ಕರೋತ್ಯೇವ ನರಂ ವಿಗತಕಲ್ಮಷಂ ॥೧೩೬॥

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ ।
ಭಕ್ತ್ಯುದ್ರೇಕೋ ಭವತ್ಯೇವ ಯಸ್ಯ ಶ್ರವಣಮಾತ್ರತಃ ॥೧೩೭॥

ಶೃಣು ತಂ ಸಾವಧಾನೇನ ವಿಶ್ವಾಸಂ ಕುರು ಸಾದರಂ ।
ವಿಶ್ವಾಸಃ ಖಲು ಧರ್ಮೇಷು ಸರ್ವದಾ ಸುಖದಾಯಕಃ ॥೧೩೮॥

ಶಂಕರಾರಾಧನೆಯಲ್ಲಿ ಅನುರಾಗವಾಗಿ ಬರುತ್ತದೆ. ಅಷ್ಟು ಪುಣ್ಯಗಳ ದೆಸೆಯಿಂದ ಶಿವಭಕ್ತನಿಗೆ ಪದೇ ಪದೇ ಶ್ರೇಯಸ್ಸುಗಳು ಉಂಟಾಗುತ್ತವೆ. ||೧೩೪||

ಮನುಷ್ಯನು ಪರಮ ಪಾಪಿಯಾಗಿದ್ದರೂ ಪಾಪನಾಶಕನಾದ ಪರಮೇಶ್ವರನಿಗೆ ಯಾವ ನಮಸ್ಕಾರವು ಅರ್ಪಿತವಾಗುತ್ತದೆಯೋ ಅದೇ ನಮಸ್ಕಾರವು ಮನುಷ್ಯ ಮಾತ್ರನನ್ನಾದರೂ ಸಕಲರಿಗೂ ಪೂಜ್ಯನನ್ನಾಗಿ ಮಾಡುವುದು. ||೧೩೫||

ಪರಮೇಶ್ವರನು ನಮಸ್ಕೃತನಾದರೆ ಆ ನಮಸ್ಕಾರಮಾತ್ರದಿಂದಲೇ ಶಿವನು ಸುಪ್ರೀತನಾಗಿ, ನಮಸ್ಕರಿಸಿದವನು ಪಾಪಿಷ್ಠನಾಗಿದ್ದರೂ, ಮನುಷ್ಯಮಾತ್ರನಾಗಿದ್ದರೂ ಆತನನ್ನು ನಿಷ್ಪಾಪನನ್ನಾಗಿಯೂ ದೇವಪೂಜ್ಯನನ್ನಾಗಿಯೂ ಮಾಡುವನು. ||೧೩೬||

ಈ ವಿಚಾರದಲ್ಲಿ ದೃಷ್ಟಾಂತವಾಗಿ ಒಂದು ಪುರಾತನವಾದ ಇತಿಹಾಸವನ್ನು ತಿಳಿದವರು ಹೇಳುತ್ತಾರೆ. ಅದೂ ಮಹತ್ತರವಾದದ್ದು. ಅದನ್ನು ಕೇಳಿದೊಡನೆ ಶಿವನಲ್ಲಿ ಭಕ್ತಿಯು ಉದ್ಬುದ್ಧವಾಗುವುದರಲ್ಲಿ ಸಂಶಯವಿಲ್ಲ. ||೧೩೭||

ಆ ಇತಿಹಾಸವನ್ನು ಹೇಳುವೆನು. ಗಮನವಿಟ್ಟು ಕೇಳು. ಈ ಇತಿಹಾಸದ ವಿಚಾರದಲ್ಲಿ ಸಂಶಯ ಆಶಂಕೆಗಳನ್ನು ಹೊಂದಬೇಡ. ಧಾರ್ಮಿಕವಾದ ವಿಚಾರದಲ್ಲಿ ಮುಖ್ಯವಾಗಿ ನಂಬಿಕೆ ಇರಬೇಕು. ಸಂಶಯಾತ್ಮಕವಾದ ಮನಸ್ಸಿನಿಂದ ಧರ್ಮ ವನ್ನು ಮಾಡಿದರೆ ಫಲವು ದೊರೆಯಲಾರದು. ಗಾಢವಾದ ನಂಬಿಕೆ ಇಟ್ಟುಕೊಂಡು ಅನುಷ್ಠಾನ ಮಾಡಿದರೇ ಸಮಸ್ತ ಸುಖಗಳೂ ಲಭಿಸುವುವು. ಆ ಮನಸ್ಸಿನ ದೃಢ ವಿಶ್ವಾಸವೇ ಫಲವನ್ನು ತಂದುಕೊಡುವುದು. ||೧೩೮||

ಅವಿಶ್ವಾಸೇನ ದುಃಖಾನಿ ಭವಂತ್ಯೇವ ಪದೇ ಪದೇ ।
ಅತಸ್ತಾವದವಿಶ್ವಾಸಃ ಪರಿತ್ಯಾಜ್ಯೋತಿದೂರತಃ ॥೧೩೯॥

ತತ್ರ ಶಾಂಭವಧರ್ಮೇಷು ವಿಶ್ವಾಸಶ್ಚೇದ್ವಿಶೇಷತಃ ।
ತದಾ ತರಂತಿ ಸಂಸಾರಶೋಕಸಾಗರಮಾದರಾತ್ ॥೧೪೦॥

ಅವಿಶ್ವಾಸೋ ಯದಿ ಭವೇಚ್ಛಿವಧರ್ಮೇ ಕದಾಚನ ।
ತದಾ ತದ್ವಂಶನಾಶಃ ಸ್ಯಾತ್ಸ ಏವಾಶನಿರುತ್ಥಿತಃ ॥೧೪೧॥

ಕಸ್ಯಚಿದ್ಭೂರಿಭಾಗ್ಯಸ್ಯ ಶಿವಧರ್ಮೇ ರತಿರ್ಭವೇತ್ ।
ಅಭಾಗ್ಯಾನಾಂ ನ ತದ್ಧರ್ಮೇ ರತಿರ್ಭವತಿ ಸರ್ವಥಾ ॥೧೪೨॥

ನಾವು ಮಾಡತಕ್ಕ ಯಾವ ಕಾರ್ಯದಲ್ಲೇ ಆಗಲಿ ವಿಶ್ವಾಸವಿರಬೇಕು. ಸಂಶಯವಿದ್ದರೆ ಪದೇ ಪದೇ ವಿಘ್ನಗಳಿಂದ ಬಾಧೆಯುಂಟಾಗುತ್ತದೆ. ಅವಿಶ್ವಾಸದಿಂದ ದುಃಖವೇ ಹೆಚ್ಚುತ್ತದೆ. ಆದ್ದರಿಂದಲೇ ತಿಳಿದವರು "ಸಂಶಯಾತ್ಮಾ ವಿನಶ್ಯತಿ" ಎಂದು ಹೇಳಿರುವರು. ಇದನ್ನು ಗಮನಿಸಿ ಮೊದಲು ಮನಸ್ಸಿನಿಂದ ಅವಿಶ್ವಾಸವನ್ನು ದೂರಮಾಡು. ಇದರಿಂದಲೇ ಸ್ವಾಭಾವಿಕವಾದ ನಂಬಿಕೆಯು ತಲೆದೋರುವುದು. ಮತ್ತು ಬೆಳೆಯುವುದು. ॥೧೩೯॥

ಅದರಲ್ಲಿಯೂ ಈ ಶಿವಧರ್ಮಗಳಲ್ಲಿ ವಿಶೇಷವಾದ ನಂಬಿಕೆಯನ್ನೂ ಆದರವನ್ನೂ ತಂದುಕೊಂಡು ಅನುಷ್ಠಾನಮಾಡಿದರೆ ಈ ಅಖಂಡ ಸಂಸಾರವನ್ನೂ ಸಕಲ ಶೋಕಸಾಗರವನ್ನೂ ದಾಟಬಹುದು. ॥೧೪೦॥

ಈ ಶಿವಧರ್ಮಗಳ ವಿಚಾರದಲ್ಲಿ ಏನಾದರೂ ಅವಿಶ್ವಾಸವನ್ನೂ ಅಪನಂಬಿಕೆಯನ್ನೂ ತೋರಿಸಿದರೆ ಕೂಡಲೇ ವಂಶವೇ ನಿರ್ಮೂಲವಾಗುವುದು. ಅದೇ ಅವಿಶ್ವಾಸವೇ ಸಿಡಿಲಿನಂತೆ ಪರಿಣಮಿಸಿ ಸರ್ವನಾಶಮಾಡುವುದು. ॥೧೪೧॥

ಎಲ್ಲಿಯೋ ಕೋಟಿಯಲ್ಲಿ ಒಬ್ಬ ಪರಮ ಭಾಗ್ಯಶಾಲಿಗೆ ಆ ಪರಮವಾದ ಶಿವಧರ್ಮದಲ್ಲಿ ಅನುರಾಗವೂ ಪ್ರೀತಿಯೂ ಉಂಟಾಗುವುದು. ಅದು ಸುಲಭವಾಗಿ ದೊರೆಯತಕ್ಕದ್ದಲ್ಲ. ಆದರಲ್ಲೂ ಭಾಗ್ಯಹೀನರಿಗೆ ಎಂದೂ ನಂಬಿಕೆಹುಟ್ಟುವುದಿಲ್ಲ. ॥೧೪೨॥

ಅತಸ್ತ್ವಮಪಿ ವಿಶ್ವಾಸಂ ಕುರು ಮದ್ವಚನೇ ನೃಪ ।
ಯದಿ ಭಾಗ್ಯಾಭಿವೃದ್ಧಿಸ್ತೇ ಸರ್ವದಾ ಸಮಪೇಕ್ಷಿತಾ ॥೧೪೩॥

ಭಕ್ತ್ಯಾ ಕ್ಷಣಂ ಕ್ಷಣಾರ್ಧಂ ವಾ ವಿಶ್ವಾಸೇನ ಸದಾಶಿವಂ ।
ಯಃ ಪೂಜಯತಿ ತಂ ತಾವದ್ವಂದ್ಯಮಿತ್ಯಾಹುರಾಸ್ತಿಕಾಃ ॥೧೪೪॥

ಮಹಾದೇವಕಥಾಲಾಪೇ ಸುಧಾಬುದ್ಧಿರ್ಭವೇದ್ಯದಿ ।
ತದಾ ಭವತಿ ಸಂಸಾರಶೋಕರಾಶಿವಿನಾಶನಂ ॥೧೪೫॥

ಸಂಸಾರರೋಗನಾಶಾಯ ಶಿವಪೂಜನಮೌಷಧಂ ।
ಕಲ್ಪಿತಂ ತೇನ ತತ್ಸೇವಾ ಕರ್ತವ್ಯಾತಿಪ್ರಯತ್ನತಃ ॥೧೪೬॥

ಪುರಾ ಪುಲ್ಕಸ ಏವಾಸೀಜ್ಜ್ಞಾತ್ಯಾ ಕೋಽಪಿ ಹಿಮಾಲಯೇ ।
ತಸ್ಯ ಭಾಗ್ಯವಶಾದ್ಭಕ್ತಿಃ ಫಾಲಾಕ್ಷೇ ಸಮಭೂನ್ನೃಪ ॥೧೪೭॥

ಆದ್ದರಿಂದ ಈ ಮಹತ್ವ ವಿಚಾರವನ್ನು ಗಮನಿಸಿ ನಾನು ಹೇಳುವುದರಲ್ಲಿ ಗಮನ ವಿಡು. ಎಲೈ ಮಹಾರಥನೇ, ನಿನಗೆ ನಿನ್ನ ಭಾಗ್ಯವು ಸರ್ವದಾ ಅಭಿವೃದ್ಧವಾಗ ಬೇಕೆಂಬ ಅಭಿಲಾಷೆ ಇದ್ದರೆ ಮೊದಲು ನಂಬಿಕೆಯನ್ನು ಸ್ಥಿರಪಡಿಸಿಕೊ. ॥೧೪೩॥

ಆ ಪರಮೇಶ್ವರನಲ್ಲಿ ನಂಬಿಕೆಇಟ್ಟು ಭಕ್ತಿಯಿಂದ ಒಂದು ಕ್ಷಣವೋ ಅಥವಾ ಅದಕ್ಕಿಂತಲೂ ಕಡಮೆ ಅರ್ಧಕ್ಷಣದವರೆಗೆ ಧ್ಯಾನಿಸಿದರೂ ಸಕಲಜನವಂದ್ಯನಾಗು ವನೆಂದು ಆಸ್ತಿಕರು ಹೇಳುತ್ತಾರೆ. ॥೧೪೪॥

ಶಿವಕಥೆಯನ್ನು ಅಮೃತವೆಂದು ತಿಳಿದುಕೊಂಡು ಅಮೃತವೆಂಬ ನಂಬಿಕೆ ಯಿಂದ ಕೇಳುತ್ತಿದ್ದರೆ ಅವರಿಗೆ ಸಕಲ ಸಾಂಸಾರಿಕವಾದ ಶೋಕದುಃಖಗಳೂ ನಾಶ ವಾಗುತ್ತವೆ. ॥೧೪೫॥

ಈ ಸಂಸಾರವೆಂಬ ಮಹಾರೋಗವನ್ನು ನಾಶಮಾಡುವುದಕ್ಕಾಗಿಯೇ ಪರಮೇಶ್ವರನು ಶಿವಾರಾಧನೆಯನ್ನು ಸೃಷ್ಟಿಸಿರುತ್ತಾನೆ. ಆದುದರಿಂದ ಶ್ರೇಯೋಭಿ ಲಾಷಿಯಾದವನು ಪ್ರಯತ್ನಪೂರ್ವಕವಾಗಿ ಶ್ರದ್ಧೆಯಿಂದ ಆತನನ್ನು ಆರಾಧಿಸಬೇಕು. ॥೧೪೬॥

ಕಥೆಯನ್ನು ಈಗ ಹೇಳುವೆನು ಕೇಳು " ಮಹಾರಥನೇ, ಹಿಂದೆ ಹಿಮಾಲಯ ಪರ್ವತಪ್ರಾಂತದಲ್ಲಿ ಒಬ್ಬ ಚಂಡಾಲನಿದ್ದನು. ಆತನು ನೀಚಜಾತಿಯವನಾಗಿದ್ದರೂ ಆತನ ಭಾಗ್ಯದಿಂದ ಶಂಕರನಲ್ಲಿ ಆತನಿಗೆ ವಿಶೇಷ ಭಕ್ತಿಯುಂಟಾಯಿತು. ॥೧೪೭॥

ತೇನ ಬಿಲ್ವವನೇ ತತ್ರ ನಿವಾಸೋಽಪಿ ಕೃತಃ ಪುರಾ ।
ತತ್ಫಲಾನಿ ಸಮಾನೀಯ ಕ್ರೀತ್ವಾ ಜೀವತಿ ಸರ್ವದಾ ॥೧೪೮॥

ತತ್ಫಲಾರ್ಥಂ ವನಸ್ಯಾಪಿ ಕೃತಂ ತೇನೈವ ರಕ್ಷಣಂ ।
ವೃತ್ತಿಸ್ಸಂಪಾದಿತಾ ತೇನ ಕಂಟಕೈರತಿದಾರುಣೈಃ ॥೧೪೯॥

ವನದ್ವಿಪಪ್ರಪೀಡಾಪಿ ತೇನ ತಸ್ಯ ನ ಜಾಯತೇ ।
ನ ವ್ಯಾಘ್ರಾಣಾಂ ಪ್ರವೇಶೋಽಪಿ ತಸ್ಮಿನ್ ಬಿಲ್ವವನೇ ನೃಪ ॥೧೫೦॥

ತೇನ ಸಂಪಾದಿತಾ ಕುಲ್ಯಾ ತದ್ವನೇನ ವನಂ ನವಂ ।
ನವಬಿಲ್ವಾಂಕುರಾಕ್ರಾಂತಂ ಸರ್ವದಾಪಿ ಮನೋಹರಂ ॥೧೫೧॥

ತಸ್ಯಾದೂರೇ ವನಸ್ಯೈವ ಋಷೀಣಾಮಾಶ್ರಮಃ ಸ್ಥಿತಃ ।
ತೇ ಸರ್ವೇಽಪಿ ಸಮಾಯಾಂತಿ ತದ್ವನಂ ಪ್ರತಿ ಸಾದರಂ ॥೧೫೨॥

ಆತನು ಮೊದಲಿನಿಂದಲೂ ಒಂದು ಬಿಲ್ವವನದಲ್ಲಿಯೇ ಗುಡಿಸಲನ್ನು ಕಟ್ಟಿಕೊಂಡು ಅದರಲ್ಲಿ ವಾಸಿಸುತ್ತಿದ್ದನು. ಆ ಬಿಲ್ವಪತ್ರೆಯ ಕಾಯಿಗಳನ್ನೇ ಮಾರಾಟ ಮಾಡಿ ಸಿಕ್ಕಿದ ದ್ರವ್ಯದಿಂದ ತನ್ನ ಉದರ ಪೋಷಣೆಯನ್ನು ಮಾಡಿಕೊಂಡು ಜೀವಿಸುತ್ತಿದ್ದನು. ||೧೪೮||

ಅದೇ ಕಾಯಿಗಳು ತನಗೆ ಹೆಚ್ಚು ಹೆಚ್ಚಾಗಿ ದೊರೆಯಬೇಕೆಂಬ ಅಪೇಕ್ಷೆಯಿಂದ ಆತನು ಆ ಅರಣ್ಯವನ್ನು ಬಹಳ ಎಚ್ಚರಿಕೆಯಿಂದ ಕಾಪಾಡುತ್ತಿದ್ದನು. ತೀಕ್ಷ್ಣವಾದ ಮುಳ್ಳುಗಳಿಂದ ಸುತ್ತಲೂ ಭದ್ರವಾಗಿ ಬೇಲಿಯನ್ನು ಅದಕ್ಕೆ ಕಟ್ಟಿದ್ದನು. ||೧೪೯||

ಆ ಚಂಡಾಲನ ಬಿಲ್ವವನಕ್ಕೆ ಕಾಡಾನೆಗಳು ಬಂದು ಹಾವಳಿ ಮಾಡುತ್ತಿರಲಿಲ್ಲ. ಅಥವಾ ಹುಲಿಗಳು ಪ್ರವೇಶಿಸುವಂತೆಯೂ ಇರಲಿಲ್ಲ. ಅಷ್ಟು ಎಚ್ಚರಿಕೆಯಿಂದ ಕಾಯುತ್ತಿದ್ದನು. ||೧೫೦||

ಆ ಬಿಲ್ವವನಕ್ಕೆ ತಾನೇ ಶ್ರಮವಹಿಸಿ ನೀರಿನ ಕೊಳವೊಂದನ್ನು ನಿರ್ಮಿಸಿದನು. ಆ ನೀರಿನ ದೆಸೆಯಿಂದ ಆ ವನವು ಸರ್ವದಾ ಬಿಲ್ವಚಿಗುರುಗಳಿಂದ ಕೂಡಿಕೊಂಡಿದ್ದು ರಮ್ಯವಾಗಿರುತ್ತಿತ್ತು. ||೧೫೧||

ಆ ಬಿಲ್ವವನದ ಸಮೀಪದಲ್ಲಿಯೇ ಒಂದು ಋಷ್ಯಾಶ್ರಮವಿದ್ದಿತು. ಅಲ್ಲಿ ವಾಸಿಸುತ್ತಿದ್ದ ಋಷಿಗಳು ಆ ವನವನ್ನು ಸಂದರ್ಶಿಸುವುದಕ್ಕಾಗಿ ನಿತ್ಯವೂ ಬರುತ್ತಿ

ತೇ ತತ್ಪ್ರದಕ್ಷಿಣೀಕೃತ್ಯ ನತ್ವಾ ಪ್ರತ್ಯಹಮಾದರಾತ್ ।
ತದ್ವನಾದ್ಬಹಿರಾಸಾಯಂ ತಿಷ್ಠಂತಿ ಶಿವತತ್ಪರಾಃ ॥೧೫೩॥

ಸಾಂದ್ರಬಿಲ್ವವನಚ್ಛಾಯಾನಿವಾರಿತಮಹಾಶ್ರಮಾಃ ।
ತದ್ವಾತಪೋತಸಂವೀತಾಃ ಪೂತಾಸ್ತೇ ಭೂತಿಭೂಷಿತಾಃ ॥೧೫೪॥

ನಿತ್ಯಂ ವನಾದ್ಬಹಿಃ ಸ್ಥಿತ್ವಾ ಧೃತ್ವಾ ಶಾಖಾಂ ಪ್ರಯತ್ನತಃ ।
ದ್ವಿತ್ರೀನ್ ಗೃಹ್ಣಂತಿ ಮುನಯೋಽಪ್ಯರುಣಾನ್ ಬಿಲ್ವಪಲ್ಲವಾನ್ ॥೧೫೫॥

ಸ ಬಿಲ್ವಪಲ್ಲವಚ್ಛೇದಂ ಸಹತೇಽಪಿ ನ ಪುಲ್ಕಸಃ ।
ತದ್ಭೀತ್ಯಾ ನ ಪರಂ ದ್ವಿತ್ರಾನ್ ಗೃಹ್ಣಂತಿ ನವಪಲ್ಲವಾನ್ ॥೧೫೬॥

ದ್ದರು. ಅವರು ಬಿಲ್ವವನಕ್ಕೆ ಬಂದು ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ಅದರ ಸಮೀಪದಲ್ಲಿಯೇ ಸಾಯಂಕಾಲದ ವರೆಗೂ ಕುಳಿತುಕೊಂಡು ಶಿವನನ್ನು ಧ್ಯಾನಿಸುತ್ತಿದ್ದರು. ||೧೫೨-೧೫೩||

ಆ ಋಷಿಗಳಿಗೆ ಎಷ್ಟೇ ಆಯಾಸವಾಗಿದ್ದರೂ ಆ ಬಿಲ್ವವನದ ದಟ್ಟವಾದ ನೆರಳಿಂದಲೂ ಅದರ ಮೂಲಕ ಬೀಸಿಕೊಂಡು ಬರುವ ಮಂದಮಾರುತದಿಂದಲೂ ಅವರ ಶ್ರಮವೆಲ್ಲಾ ದೂರವಾಗುತ್ತಿತ್ತು. ಭಸ್ಮರುದ್ರಾಕ್ಷಿಗಳನ್ನು ಧರಿಸಿದ ಅವರು ಈ ವನದ ಸೇವನದಿಂದ ಮತ್ತೂ ಪವಿತ್ರರಾಗುತ್ತಿದ್ದರು. ||೧೫೪||

ಆ ಋಷಿಗಳು ಅದೇ ವನದಲ್ಲಿ ಶಿವಾರ್ಚನೆಗೆಂದು ಬಿಲ್ವಪತ್ರೆಗಳನ್ನು ಕೊಯ್ಯುವಾಗ ಬಹಳ ದಯೆಯಿಂದ, ಎಚ್ಚರಿಕೆಯಿಂದ ವೃಕ್ಷಕ್ಕೆ ಪೆಟ್ಟಾಗದಂತೆ ಕೊಂಬೆಯನ್ನು ಹಿಡಿದುಕೊಂಡು ಎರಡೋ ಅಥವಾ ಮೂರೋ ಚಿಗುರುಚಿಗುರಾದ ಬಿಲ್ವಪತ್ರೆಗಳನ್ನು ಕುಯಿದುಕೊಂಡು ಹೋಗುತ್ತಿದ್ದರು. ||೧೫೫||

ಸ್ವೇಚ್ಛೆಯಿಂದ ಬಿಲ್ವಪತ್ರೆಗಳನ್ನು ಬೇಕಾದಷ್ಟು ಕೊಯಿದುಕೊಳ್ಳಲು ಆ ಚಂಡಾಲನು ಬಿಡುತ್ತಿರಲಿಲ್ಲ. ಆತನು ಬಹಳ ಮಮತೆಯನ್ನಿಟ್ಟುಕೊಂಡಿದ್ದರಿಂದ ಮರಗಳಿಗೆ ತೊಂದರೆಯಾಗುವುದನ್ನು ಆತನು ಸಹಿಸುತ್ತಿರಲಿಲ್ಲ. ಋಷಿಗಳು ಸಹ ಆತನ ಹೆದರಿಕೆಯಿಂದ ಎರಡುಮೂರಕ್ಕಿಂತ ಹೆಚ್ಚಾಗಿ ಪತ್ರೆಯನ್ನು ಕುಯ್ಯುತ್ತಿರಲಿಲ್ಲ. ||೧೫೬||

ತೇಷು ಕಶ್ಚಿನ್ಮುನಿಶ್ರೇಷ್ಠೋ ಯುವಾ ಬಲಸಮನ್ವಿತಃ ।
ವಿಲೋಕ್ಯ ಬಿಲ್ವವನಮುಲಾನ್ ಚಿಂತಯಾಮಾಸ ಚೇತಸಿ ॥೧೫೭॥

ಇದಂ ಬಿಲ್ವವನಂ ರಮ್ಯಮತ್ರೈವ ನವಪಲ್ಲವಂ ।
ಏತಾದೃಶಂ ವನಂ ಕ್ವಾಪಿ ನಾದೂರೇ ಲಭ್ಯತೇ ಖಲು ॥೧೫೮॥

ಸ್ಥಿತ್ವಾಪ್ಯರಣ್ಯೇ ತಪಸಾ ನಿರಾಹಾರೈರಿಹಾಧುನಾ ।
ನ ಬಿಲ್ವಪಲ್ಲವೈರೀಶೋ ಬಹುಭಿರ್ನಾರ್ಚಿತೋ ಭವಃ ॥೧೫೯॥

ಭವಾಂಬುರಾಶಿನಾಶೋಽಪಿ ನ ಶಿವಾರಾಧನಂ ವಿನಾ ।
ಶಿವಾರಾಧನಸಾಮಗ್ರೀ ಕೇವಲಂ ಬಿಲ್ವಪಲ್ಲವಃ ॥೧೬೦॥

ಆ ಋಷಿಗಳಲ್ಲಿ ಒಬ್ಬ ತರುಣನಾದವನಿದ್ದನು. ಆತನು ಋಷಿಯಾಗಿದ್ದರೂ ಬಲಿಷ್ಠನೂ ಸಾಹಸಿಯೂ ಆಗಿದ್ದನು. ಆತನು ಒಂದು ದಿವಸ ಬಿಲ್ವವನವನ್ನು ನೋಡಿ ಮನಸ್ಸಿನಲ್ಲಿ ಹೀಗೆ ಯೋಚಿಸಿದನು. ॥೧೫೭॥

ಈ ಬಿಲ್ವವನವು ಬಹಳ ರಮಣೀಯವಾಗಿದೆ. ಇಲ್ಲಿ ಬೇಕಾದಷ್ಟು ಕೋಮಲವಾದ ಬಿಲ್ವಪತ್ರೆಯ ಚಿಗುರುಗಳು ತುಂಬಿಕೊಂಡಿವೆ. ಇಂಥ ವನವು ಹತ್ತಿರದಲ್ಲೆಲ್ಲೂ ಇಲ್ಲ. ॥೧೫೮॥

ನಾನು ಎಷ್ಟೋ ದಿವಸಗಳಿಂದ ಉಪವಾಸಾದಿ ನಿಯಮವನ್ನಿಟ್ಟು ತಪಸ್ಸನ್ನು ಮಾಡುತ್ತಾ ಇಲ್ಲಿ ವಾಸಿಸುತ್ತಿದ್ದರೂ, ಸುಲಭವಾಗಿ ಬಿಲ್ವಪತ್ರೆಯು ಇಲ್ಲಿ ಸಿಕ್ಕುತ್ತಿದ್ದರೂ ಬಿಲ್ವಪತ್ರೆಗಳಿಂದ ಸಮೃದ್ಧಿಯಾಗಿ ಶಿವನನ್ನು ಒಂದು ದಿನವೂ ಪೂಜಿಸಲಿಲ್ಲ. ॥೧೫೯॥

ಈ ಸಂಸಾರಬಂಧನವಾದರೋ ಶಿವಾರಾಧನೆಯೊಂದನ್ನು ಬಿಟ್ಟರೆ ಮತ್ತೆ ಯಾವುದರಿಂದಲೂ ತೊಲಗುವುದಿಲ್ಲ. ಆದುದರಿಂದ ನಾನು ಅವಶ್ಯವಾಗಿ ಶಿವಾರಾಧನೆಯನ್ನು ಇಲ್ಲಿ ಮಾಡಲೇಬೇಕು. ಶಿವನಿಗೆ ಬಿಲ್ವಪತ್ರೆಯೇ ಅತಿ ಪ್ರಿಯವಾಗಿರುವುದರಿಂದ ಪೂಜಾಸಾಮಗ್ರಿಗಳಲ್ಲೆಲ್ಲಾ ಬಿಲ್ವಪತ್ರೆಯೇ ಮುಖ್ಯವಾದದ್ದು. ॥೧೬೦॥

ನ ಬಿಲ್ವಪಲ್ಲವಾಭಾವೇ ಸಾಂಗಂ ಶಂಗಾರ್ಚನಂ ಕೃತಂ ।
ಶಂಗಲಿಂಗಾರ್ಚನಾಭಾವೇ ಪರಲೋಕೇ ಸುಖಂ ಕುತಃ ॥೧೬೧॥

ಇಹಾಮುತ್ರ ಸುಖಂ ತಾವಚ್ಛಂಗಲಿಂಗಾರ್ಚನಾದ್ಭವೇತ್ ।
ತದಭಾವೇ ಸುಖಂ ತಾವದ್ದುರ್ಲಭಂ ಸರ್ವದೇಹಿನಾಂ ॥೧೬೨॥

ಅಹೋ ನ ಜಾನಂತಿ ವಿಮೂಢಚಿತ್ತಾಃ
ಶೈಲೇಂದ್ರಜಾಕಾಂತಸಮರ್ಚನಾನಿ ।
ಸಂಸಾರದುಃಖಾತಿಭಯಾಪಹಾನಿ
ಮೋಕ್ಷಪ್ರದಾನೀತಿ ವಿಶೇಷತಸ್ತೇ ॥೧೬೩॥

ರಹಸ್ಯಮೇತದ್ಗಿರಿಶಾರ್ಚನಂ ಹಿ
ಗೌರೀಸಹಾಯಸ್ಯ ತದಸ್ಮದೀಯೈಃ ।
ಭಾಗ್ಯೈಃ ಪ್ರಸಿದ್ಧಂ ಕಥಮದ್ಯ ಕಾರ್ಯಂ
ಬಿಲ್ವೈರ್ವಿನಾ ಕೇವಲಮುಕ್ತಿಹೇತುಃ ॥೧೬೪॥

ಆ ಬಿಲ್ವಪತ್ರೆಗಳಿಲ್ಲದಿದ್ದರೆ ಶಿವಾರ್ಚನೆಯು ಸಾಂಗವೇ ಆಗುವುದಿಲ್ಲ. ಶಿವನನ್ನು ಆರಾಧಿಸಬೇಕಾದರೆ ಶಿವಲಿಂಗಪೂಜೆಯ ಮೂಲಕವೇ ಆರಾಧಿಸಬೇಕು. ಶಿವಲಿಂಗವನ್ನು ಪೂಜಿಸಲು ಬಿಲ್ವಪತ್ರೆಯು ಅತ್ಯಾವಶ್ಯಕ. ಬಿಲ್ವಪತ್ರೆಯಿಂದ ಶಿವಲಿಂಗವನ್ನು ಪೂಜಿಸದಿದ್ದರೆ ಪರಲೋಕದಲ್ಲಿ ಸುಖವೆಲ್ಲಿ ದೊರೆಯುವುದು? ॥೧೬೧॥

ಇಹಲೋಕದಲ್ಲಿಯಾಗಲಿ ಪರಲೋಕದಲ್ಲಿಯಾಗಲಿ ಸುಖ ದೊರೆಯಬೇಕಾದರೆ ಶಿವಲಿಂಗಾರ್ಚನೆಯಿಂದಲೇ ಸರಿ. ಅದಿಲ್ಲದಿದ್ದರೆ ಯಾರಿಗೂ ಸುಖ ದೊರೆಯುವುದು ದುರ್ಲಭವೇ. ॥೧೬೨॥

ಎಷ್ಟೋ ಜನ ಅಜ್ಞಾನಿಗಳು ಶಿವಾರ್ಚನೆಯ ಸ್ವರೂಪವನ್ನು ತಿಳಿದಿರುವುದಿಲ್ಲ. ಆ ಶಿವಾರಾಧನೆಯು ಸಕಲ ಸಾಂಸಾರಿಕ ದುಃಖಗಳನ್ನೂ ಭಯಗಳನ್ನೂ ನಾಶಮಾಡುವುದೆಂದೂ ಮುಖ್ಯವಾದ ಮೋಕ್ಷವನ್ನು ಸಹ ಉಂಟುಮಾಡಿಕೊಡುವುದೆಂಬುದನ್ನೂ ಅವರು ತಿಳಿದಿರುವುದಿಲ್ಲ. ಇದು ವಿಷಾದಕರ. ॥೧೬೩॥

ಆ ಶಿವಾರ್ಚನೆಯು ಅತ್ಯಂತ ಮಹತ್ತರವಾದ ಮುಕ್ತಿಗೂ ಕಾರಣವಾಗಿರುವುದರಿಂದ ಅತಿ ರಹಸ್ಯವಾದದ್ದು. ಅಂತಹ ಶಿವಾರ್ಚನೆಯು ನಮ್ಮ ಭಾಗ್ಯದಿಂದ

ವರಂ ವನಂ ನಿರ್ಮಿತಮೀಶ್ವರೇಣ
ಮಹಾವನೇ ದುರ್ಲಭಮೇತದದ್ಯ ।
ಭೂತೋಽಪಿ ಪುಣ್ಯಸ್ಸಮುಪಾಗತೋಽಯಂ
ಬಿಲ್ವೈರ್ವಿನಾ ಕಿಂ ಭವತೀಶಪೂಜಾ ॥೧೬೫॥

ಸಾಯಂ ಯಾಸ್ಯತ್ಯಯಂ ಪ್ರಾಯಃ ಸ್ವಗೃಹಂ ವನಪಾಲಕಃ ।
ವನಮಧ್ಯೇ ಮಯಾ ಗತ್ವಾ ಸ್ಥಾತವ್ಯಮತಿಯತ್ನತಃ ॥೧೬೬॥

ತತ್ರೈವ ಪೂಜಾ ಕರ್ತವ್ಯಾ ನಿಶಿ ಜಾಗರಣೈರ್ಮಯಾ ।
ಆರಕ್ತೈಃ ಕೋಮಲೈರ್ಬಿಲ್ವೈಃ ಸ್ಥೂಲಬಿಲ್ವಫಲೈರಪಿ ॥೧೬೭॥

ಅನೇನ ಜನ್ಮನಾ ತಾವದೇತಾವತ್ಕಾರ್ಯಮೇವ ಮೇ ।
ಸ ಚೇನ್ನಿರೋಧಕಸ್ತರ್ಹಿ ಪ್ರಾಣಾಸ್ತ್ಯಾಜ್ಯಾ ನ ಸಂಶಯಃ ॥೧೬೮॥

ಮಾಡುವುದಕ್ಕೆ ಸಂದರ್ಭ ಸಿಕ್ಕಬೇಕು. ಆದರೆ ಬಿಲ್ವಪತ್ರೆ ಇಲ್ಲದಿದ್ದರೆ ಹೇಗೆ ಪೂರ್ಣವಾಗುವುದು ? ॥೧೬೪॥

ಈ ಸುಂದರವಾದ ವನವನ್ನೂ ಪರಮೇಶ್ವರನೇ ಸೃಷ್ಟಿಸಿರುತ್ತಾನೆ. ಇದು ಮಹಾರಣ್ಯಮಧ್ಯದಲ್ಲಿ ಸುರಕ್ಷಿತವಾಗಿರುತ್ತದೆ. ಇಂಥ ಮನೋಹರವಾದ ಬಿಲ್ವವನವು ಸಿಕ್ಕುವುದು ದುರ್ಲಭವೇ ಸರಿ. ಈದಿನ ಶಿವರಾತ್ರಿ ಪುಣ್ಯಕಾಲವೂ ಇರುವುದರಿಂದ ಶಿವಾರ್ಚನೆಯನ್ನು ಅವಶ್ಯವಾಗಿ ಮಾಡಬೇಕು. ಆದರೆ ಬಿಲ್ವಪತ್ರೆ ಇಲ್ಲದೇ ಹೇಗೆ ಮಾಡುವುದು ? ಆದುದರಿಂದ ಅವಶ್ಯವಾಗಿ ಬಿಲ್ವಪತ್ರೆಗಳನ್ನು ಸಂಗ್ರಹಿಸಬೇಕು. ॥೧೬೫॥

ಬಹುಶಃ ಸಾಯಂಕಾಲವಾದಮೇಲೆ ಈ ವನಪಾಲಕನು ತನ್ನ ಮನೆಗೆ ಹೊರಟು ಹೋಗಬಹುದು. ಆತನು ಹೋದಮೇಲೆ ನಾನು ಈ ವನದ ಮಧ್ಯಪ್ರದೇಶಕ್ಕೆ ಹೋಗುವೆನು. ಅಲ್ಲಿ ಹೆಚ್ಚುಹೆಚ್ಚಾಗಿ ಬಿಲ್ವಪತ್ರೆಯು ದೊರೆಯುವುದು. ॥೧೬೬॥

ಆ ವನಮಧ್ಯದಲ್ಲಿಯೇ ನಾನು ರಾತ್ರಿಯೆಲ್ಲಾ ಜಾಗರಣೆ ಮಾಡಿಕೊಂಡು ಶಿವಪೂಜೆಯನ್ನು ಮಾಡುವೆನು. ಕೆಂಪಗಿರುವ ಕೋಮಲವಾದ ಬಿಲ್ವಪತ್ರೆಯಿಂದ ಅರ್ಚಿಸುವೆನು. ದೊಡ್ಡದೊಡ್ಡ ಬಿಲ್ವಫಲಗಳನ್ನು ನಿವೇದನಮಾಡುವೆನು. ॥೧೬೭॥

ಹೇಗಾದರೂ ಪ್ರಯತ್ನಪಟ್ಟು ನಾನು ಶಿವಪೂಜೆಯನ್ನು ಇಲ್ಲಿ ಮಾಡುವೆನು. ಈ ಜನ್ಮದಲ್ಲಿ ಈ ಒಂದು ಕಾರ್ಯವನ್ನಾದರೂ ಮಾಡಲೇ ಬೇಕು. ಒಂದುವೇಳೆ

ಯದ್ವಾತದ್ವೇಮಮಭ್ಯೇತ್ಯ ಕರ್ತವ್ಯಂ ವನಪಾಲನಂ ।
ತೇನ ವ್ಯಾಜೇನ ಕರ್ತವ್ಯಂ ಬಿಲ್ವಪತ್ರೈಶ್ಶಿವಾರ್ಚನಂ ॥೧೯॥

ನ ತದ್ಧಾಸ್ಯತ್ವಮಾತ್ರೇಣ ಹಾನಿಃ ಕ್ವಾಪಿ ಭವಿಷ್ಯತಿ ।
ಯೇನ ಕೇನಾಪಿ ರೂಪೇಣ ಕರ್ತವ್ಯಂ ಶಂಕರಾರ್ಚನಂ ॥೨೦॥

ಕಿಂ ಚಾತಿಪಾವನೋ ನೂನಂ ಸ ಬಿಲ್ವವನಪಾಲಕಃ ।
ಸ ಬಿಲ್ವವನವಾತೇನ ವೀತಃ ಕಿಂ ನಾತಿಪಾವನಃ ॥೨೧॥

ಧನ್ಯೋಽಯಮೇವ ಧನ್ಯೋಽಪಿ ಬಿಲ್ವಭೂರುಹಪಾಲಕಃ ।
ಬಿಲ್ವಾನಾಂ ವನದೋ ನಿತ್ಯಮತಃ ಪೂಜ್ಯೋ ನ ಸಂಶಯಃ ॥೨೨॥

ನಾನು ಪೂಜೆಮಾಡುವ ವೇಳೆಗೆ ಆ ವನಪಾಲಕನು ಬಂದು ತಡೆದರೆ ಆತನೊಡನೆ ಹೊಡೆದಾಡಿ ಪ್ರಾಣಬಿಟ್ಟರೂ ಚಿಂತೆ ಇಲ್ಲ. ಇದನ್ನು ಮಾಡಲೇಬೇಕು. ॥೧೮॥

ಅಥವಾ ಹೀಗೆ ಮಾಡುವೆನು. ಈ ವನಪಾಲಕನ ಹತ್ತಿರಕ್ಕೆ ಹೋಗಿ ಆತನೊಡನೆ ಈ ವನವನ್ನು ರಕ್ಷಣೆಮಾಡುವ ಕೆಲಸಕ್ಕೆ ಸೇರಿಕೊಳ್ಳುವೆನು. ಆ ವನಪಾಲನ ನೆವದಿಂದಲಾದರೂ ಬಿಲ್ವಪತ್ರೆಗಳನ್ನು ಬೇಕಾದಷ್ಟು ಸಂಪಾದಿಸಿ ಸಮೃದ್ಧಿಯಾಗಿ ಶಿವಪೂಜೆಯನ್ನು ಮಾಡಬಹುದು. ॥೧೯॥

ಒಂದುವೇಳೆ ನಾನು ಆ ಕೆಲಸಕ್ಕೆ ಸೇರಿಕೊಂಡರೆ ಆತನು ನನ್ನನ್ನು ಹಾಸ್ಯಮಾಡಬಹುದು. ಆದರೆ ಅದರಿಂದ ನನಗೇನೂ ನಷ್ಟವಾಗುವುದಿಲ್ಲ. ಈಗ ಹೇಗಾದರೂ ಮಾಡಿ ಶಿವಪೂಜೆಯನ್ನು ಮಾಡಲೇಬೇಕು. ಅದೊಂದನ್ನೇ ನಾನು ಸಾಧಿಸಬೇಕಾದದ್ದು. ॥೨೦॥

ಅಲ್ಲದೇ ಆ ವನಪಾಲಕನು ಚಂಡಾಲನಾಗಿದ್ದರೂ ಈ ಬಿಲ್ವವನದಲ್ಲಿ ಬೀಸುವ ಗಾಳಿಯ ಸಂಪರ್ಕದಿಂದ ಆತನೂ ಪರಿಶುದ್ಧನೇ ಆಗಿರುತ್ತಾನಲ್ಲವೇ ? ॥೨೧॥

ಈ ಬಿಲ್ವವನಪಾಲಕನೂ ಪವಿತ್ರನಾಗಿಯೇ ಇರುತ್ತಾನೆ. ಏಕೆಂದರೆ, ಈ ಪುಣ್ಯವೃಕ್ಷಗಳ ಸಹವಾಸದಲ್ಲಿದ್ದುಕೊಂಡು, ಇವುಗಳಿಗೆ ನಿತ್ಯವೂ ನೀರನ್ನು ಹಾಯಿಸುವನು. ಆದುದರಿಂದ ಈತನು ಧನ್ಯನು ಮತ್ತು ಪೂಜ್ಯನೂ ಆಗಿರುತ್ತಾನೆ. ॥೨೨॥

ತೇ ಬಿಲ್ವತರವಸ್ಸರ್ವೇ ಶಿವಾಕಾರಾಸ್ತಥಾಸತಿ ।
ಸ ತದ್ವನಪ್ರದಾನೇನ ಶಂಕರಾರ್ಚಕ ಏವ ಹಿ ॥೧೭೩॥

ಕುಲ್ಯಾಃ ಪ್ರಕಲ್ಪಿತಾಸ್ತೇನ ಕರ್ತುಂ ತದ್ವನವರ್ಧನಂ ।
ತತೋಽಪಿ ನಾಧಿಕಃ ಕೋಽಪಿ ಸ ಶಿವಾರಾಧಕೋ ಯತಃ ॥೧೭೪॥

ಬಿಲ್ವಾಲವಾಲಜಲಬಿಂದುಕಣಾರ್ಧಸಂಖ್ಯಾ
ತುಲ್ಯಾನಿ ಪಾತಕಕುಲಾನಿ ಲಯಂ ಗತಾನಿ ।
ತಸ್ಯೇತಿ ಧನ್ಯತಮ ಏವ ಸ ಸೂನಮದ್ಯ
ವಂದ್ಯೋಽಪಿ ತೇನ ಸಕಲಾಘವಿನಾಶನಂ ಸ್ಯಾತ್ ॥೧೭೫॥

ಬಿಲ್ವವೃಕ್ಷಗಳು ಸಾಕ್ಷಾತ್ ಶಿವಸ್ವರೂಪಗಳೆಂದು ಹೇಳುವರು. ಅದಕ್ಕನುಸಾರವಾಗಿ ಈತನು ಬಿಲ್ವವೃಕ್ಷಗಳಿಗೆ ನೀರನ್ನು ಹಾಕುವುದರಿಂದ ಲಿಂಗಾಭಿಷೇಕ ಮಾಡಿದಂತಾಯಿತು. ಇದರಿಂದ ಈತನೂ ಶಿವಪೂಜಕನೇ ಎಂದು ಸಿದ್ಧವಾಗುವುದು. ||೧೭೩||

ಅಂಥ ಶಿವಸ್ವರೂಪಗಳಾದ ಬಿಲ್ವವೃಕ್ಷಗಳನ್ನು ಬೆಳೆಯಿಸುವುದಕ್ಕೆ ಈತನು ನೀರಿನ ಕೊಳವನ್ನೇ ನಿರ್ಮಿಸಿರುತ್ತಾನೆ. ಈತನು ಇಷ್ಟೊಂದು ಪರಿಶ್ರಮ ಪೂರ್ವಕವಾಗಿ ಶಿವಾರಾಧನೆಯನ್ನು ಮಾಡುತ್ತಿದ್ದಾನೆ. ಆದ್ದರಿಂದ ಈತನಿಗಿಂತ ಪರಶಿವಭಕ್ತರು ಯಾರು ? ಶಿವಪೂಜೆಯಿಂದ ಪವಿತ್ರನಾಗಿರುವುದರಿಂದ ಈತನು ಶ್ರೇಷ್ಠನೇ ಆಗಿರುತ್ತಾನೆ. ||೧೭೪||

ಆ ವನಪಾಲಕನಲ್ಲಿ ಎಷ್ಟೇ ಪಾಪಗಳಿದ್ದರೂ ಪುಣ್ಯಕರವಾದ ಬಿಲ್ವವೃಕ್ಷಗಳಿಗೆ ಹಾಕಿರುವ ನೀರಿನ ಕೆಲವು ಬಿಂದುಗಳಿಂದ ನಾಶವಾಗುವುವು. ಈತನಾದರೋ ಬಿಲ್ವವೃಕ್ಷಗಳಿಗೆಲ್ಲಾ ದೊಡ್ಡದೊಡ್ಡದಾಗಿ ಪಾತಿಗಳನ್ನು ಕಟ್ಟಿ ಅವುಗಳಿಗೆ ಹೇರಳವಾಗಿ ನೀರನ್ನು ಹಾಯಿಸಿರುತ್ತಾನೆ. ಅಂದಮೇಲೆ ಆ ಜಲದಾನಪುಣ್ಯದಿಂದ ಈತನ ಸಕಲ ಪಾಪಗಳೂ ನಾಶವಾಗಿರುವುವು. ಅದರಿಂದ ಧನ್ಯನೂ ಪುಣ್ಯಾತ್ಮನೂ ಆಗಿರುತ್ತಾನೆ. ಆದ್ದರಿಂದಲೇ ಸಕಲ ಜನ ವಂದ್ಯನೂ ಆಗಿದ್ದಾನೆ. ಈತನ ದರ್ಶನದಿಂದ ಸಕಲ ಪಾಪಗಳೂ ಪರಿಹೃತವಾಗುವುದರಲ್ಲಿ ಸಂಶಯವಿಲ್ಲ. ||೧೭೫||

ಅಯಂ ಮಹಾನ್ ಮುನಿಃ ಪ್ರಾಯೋ ವೇಷಾಂತರಸಮನ್ವಿತಃ ।
ಕರೋತಿ ಪಾಲನಂ ತಾವದ್ಬಿಲ್ವಾನಾಂ ಪುಣ್ಯಸಾಗರಃ ॥೧೭೬॥

ಬಿಲ್ವಭೂರುಹಮೇಕಂ ವಾ ಯೋಽಭಿಷಿಂಚತಿ ಪಾಥಸಾ ।
ಅಲ್ಪೇನಾಪಿ ಸ ಯಾತ್ಯೇವ ನರಶ್ಶಂಕರಮಂದಿರಂ ॥೧೭೭॥

ಅನೇನ ತಾವದೇತಸ್ಯ ವನಸ್ಯ ಪರಿಪಾಲನಂ ।
ಕ್ರಿಯತೇ ಭಾಗ್ಯಮೇತಸ್ಯ ಪಾರೇಣ ಪರಿವರ್ಜಿತಂ ॥೧೭೮॥

ಏತಸ್ಯ ದರ್ಶನೇನಾಪಿ ಪಾಪರಾಶಿಲಯೋ ಭವೇತ್ ।
ಏತದ್ವಂದನಮಾತ್ರೇಣ ಶಂಕರೋ ವಂದಿತೋ ಭವೇತ್ ॥೧೭೯॥

ಈತನು ಬಹುಶಃ ಮಹಾತ್ಮನೂ ಮುನಿಯೂ ಆಗಿದ್ದು ಕೇವಲ ಬಿಲ್ವವನದ ಪಾಲನೆಯನ್ನು ಮಾಡುವುದಕ್ಕೋಸ್ಕರ ಚಂಡಾಲನಂತೆ ವೇಷವನ್ನು ಹಾಕಿಕೊಂಡಿರ ಬಹುದು. ಈತನು ಖಂಡಿತವಾಗಿಯೂ ಪುಣ್ಯಾತ್ಮನೇ ಆಗಿರುವನು. ॥೧೭೬॥

ಯಾವ ಮನುಷ್ಯನೇ ಆಗಲಿ, ಒಂದೇ ಒಂದು ಬಿಲ್ವವೃಕ್ಷಕ್ಕೆ ನೀರನ್ನು ಹಾಯಿಸಿ ಆ ಮೂಲಕವಾಗಿ ಆ ವೃಕ್ಷಕ್ಕೆ ಅಭಿಷೇಕ ಮಾಡಿದರೆ ಆತನು ಕೈಲಾಸ ವನ್ನು ಪಡೆಯುವನು. ಏಕೆಂದರೆ ಬಿಲ್ವವೃಕ್ಷಕ್ಕೆ ನೀರನ್ನು ಹಾಯಿಸುವ ಕೆಲಸವು ಪರಮೇಶ್ವರನಿಗೆ ಪ್ರಿಯವಾದದ್ದು. ಆತನ ಅನುಗ್ರಹದಿಂದಲೇ ಆ ನೀರನ್ನು ಹಾಯಿ ಸುವ ಮನುಷ್ಯನಿಗೆ ಶಿವಸಾಮೀಪ್ಯವು ದೊರೆಯುತ್ತದೆ. ॥೧೭೭॥

ಈತನಾದರೋ ದೊಡ್ಡದೊಂದು ಬಿಲ್ವವನವನ್ನೇ ನಿರ್ಮಿಸಿ ಇದಕ್ಕೆ ಸಕಲ ವಿಧವಾದ ರಕ್ಷಣೆಯನ್ನೂ ಮಾಡುತ್ತಿರಲು ಇವನ ಭಾಗ್ಯಕ್ಕೆ ಎಲ್ಲಿಯಾದರೂ ಎಲ್ಲೆಯುಂಟೇ? ಇಲ್ಲವೇ ಇಲ್ಲ. ಈತನ ಭಾಗ್ಯವು ಅಪಾರವಾದುದು. ॥೧೭೮॥

ಈತನ ದರ್ಶನವನ್ನು ಮಾಡಿದರೆ ಸಮಸ್ತ ಪಾಪಗಳೂ ಪರಿಹಾರವಾಗುತ್ತವೆ. ಈತನನ್ನು ವಂದಿಸಿದರೆ ಸಾಕ್ಷಾತ್ ಪರಮೇಶ್ವರನನ್ನು ವಂದಿಸಿದಂತೆಯೇ ಆಗುವು ದೆಂಬುದರಲ್ಲಿ ಸಂಶಯವಿಲ್ಲ. ॥೧೭೯॥

ಮಯಾತ್ವವಶ್ಯಮೇತಸ್ಯ ಸರ್ವದಾ ಪರಿಚರ್ಯಯಾ ।
ಕಾಲೋ ನೇಯೋ ವಿಶೇಷೇಣ ಬಿಲ್ವವೃಕ್ಷಾವಲೋಕನೈಃ ॥೧೮೦॥

॥ ಸತ್ಯಮೂರ್ತಿರುವಾಚ ॥

ಇತಿ ನಿಶ್ಚಿತ್ಯ ಮನಸಾ ಸ ಏವ ಶಿವಪೂಜಕಃ ।
ಶಿವಢುಂಢಿರಿತಿ ಖ್ಯಾತೋ ಬಭಾಷೇ ವನಪಾಲಕಂ ॥೧೮೧॥

ಕ್ವ ಬಿಲ್ವವನಪಾಲಕಪ್ರವರ ಸದ್ಮ ತೇ ಕೇನ ವಾ
ಮಹಾನಿಶಿ ವನಸ್ಯ ವಾ ಭವತಿ ಪಾಲನಂ ಘಾತುಕಂ ।
ವನದ್ವಿಪವರೈರಿದಂ ವನಮಿದಂ ಪ್ರಸನ್ನಂ ಕಥಂ
ನ ನಾಶಮುಪಯಾಸ್ಯತಿ ಪ್ರಬಲಕಂಟಕೋದ್ಘಾಟಕೈಃ ॥೧೮೨॥

ಆದುದರಿಂದ ನಾನು ಈ ವನಪಾಲಕನ ಸೇವೆಯನ್ನು ಅವಶ್ಯಮಾಡುವೆನು. ಅವನ ಜೊತೆಯಲ್ಲಿಯೇ ಪುಣ್ಯತಮಗಳಾದ ಈ ಬಿಲ್ವವೃಕ್ಷಗಳ ದರ್ಶನವನ್ನೂ ಮಾಡುತ್ತಾ ಕಾಲವನ್ನು ಕಳೆಯುವೆನು. ॥೧೮೦॥

ಹೇಗಾದರೂ ಶಿವಪೂಜೆಯನ್ನು ಮಾಡಲೇಬೇಕೆಂಬ ತೀವ್ರ ಅಭಿಲಾಷೆಯಿಂದ ಸದಾ ಶಿವಭಕ್ತನಾದ ಶಿವಢುಂಢಿಯು ಈ ರೀತಿ ಆಲೋಚಿಸಿಕೊಂಡು ಆ ಬಿಲ್ವವನ ಪಾಲಕನನ್ನು ಕುರಿತು ಹೀಗೆಂದು ಕೇಳಿದನು. ॥೧೮೧॥

ಎಲೈ ಸೌಮ್ಯನಾದ ಬಿಲ್ವವನಪಾಲಕನೇ, ನಿನ್ನ ಮನೆ ಎಲ್ಲಿರುವುದು? ನೀನು ರಾತ್ರಿಯೂ ಇಲ್ಲಿಯೇ ಇರುವೆಯಾ? ರಾತ್ರಿ ವೇಳೆಯಲ್ಲಿ ಯಾರು ಈ ವನವನ್ನು ಕಾಯುತ್ತಾರೆ? ಅರ್ಧರಾತ್ರಿಯಲ್ಲಿ ಈ ವನದಲ್ಲಿ ಹೆದರಿಕೆಯಾಗುವುದಿಲ್ಲವೆ? ಅಥವಾ ರಾತ್ರಿವೇಳೆ ಯಾರೂ ಇದನ್ನು ಕಾಯುವುದಿಲ್ಲವೇ? ಆಗ ಬಲಿಷ್ಠಗಳಾದ ಕಾಡಾನೆಗಳು ಮುಳ್ಳಿನ ಬೇಲಿಯನ್ನು ಕಿತ್ತುಹಾಕಿ ಈ ಸುಂದರವಾದ ವನಕ್ಕೆ ಪ್ರವೇಶಿಸಿ ಹಾಳುಮಾಡುವುದಿಲ್ಲವೇ? ಈಗ ಈ ವನವೇನೋ ಮನೋಹರವಾಗಿರುತ್ತದೆ. ಆದರೆ ರಾತ್ರಿವೇಳೆಯಲ್ಲಿ ಇದರ ರಕ್ಷಣೆ ಹೇಗೆ? ॥೧೮೨॥

ಇತಿ ತದ್ವಚನಂ ಶ್ರುತ್ವಾ ತಮಾಹ ವನಪಾಲಕಃ ।
ಕೃತಾಂಜಲಿಪುಟೋ ಭೂತ್ವಾ ವಿನಯೇನ ನತೋ ಮುದಾ ॥೧೮೩॥

ಏತಾವತ್ಕಾಲಪರ್ಯಂತಂ ರಕ್ಷಿತಂ ವನಮಾದರಾತ್ ।
ಪ್ರಬಲಾಸ್ತರವೋ ಜಾತಾಸ್ತೈರ್ಜಾತಂ ಜೀವನಂ ಮಮ ॥೧೮೪॥

ಅರುಣೋದಯಮಾರಭ್ಯ ಕ್ರಿಯತೇ ವನಪಾಲನಂ ।
ಸಾಯಂಕಾಲೋತ್ತರಂ ತಾವತ್ ಸ್ವಗೃಹಂ ಪ್ರತಿಗೃಹ್ಯತೇ ॥೧೮೫॥

ಅಭ್ರಂಕಷಾ ವೃತ್ತಿಸ್ತಾವದತ್ರ ಸಂಪಾದಿತಾ ಮಯಾ ।
ಏತೇ ಹಿ ಕಂಟಕಾಃ ಕ್ರೂರಾಃ ಪ್ರಾಯಃ ಕುಲಿಶಸನ್ನಿಭಾಃ ॥೧೮೬॥

ಬಿಲ್ವಶಾಖಾಗ್ರಮಾತ್ರಾಣಾಂ ಗ್ರಹಣಂ ವನದಂತಿಭಿಃ ।
ಕ್ರಿಯತೇ ವನಮಧ್ಯೇ ತು ತತ್ಪ್ರವೇಶೋ ನ ಸರ್ವಥಾ ॥೧೮೭॥

ಆ ಶಿವಧುಂಧಿಯು ಈರೀತಿ ಪ್ರಶ್ನೆಮಾಡಿದ್ದನ್ನು ಕೇಳಿ ವನಪಾಲಕನು ವಿನಯಪೂರ್ವಕವಾಗಿ ಆತನನ್ನು ವಂದಿಸಿ ಸಹರ್ಷನಮ್ರನಾಗಿ ಹೀಗೆ ಉತ್ತರ ವಿತ್ತನು. ||೧೮೩||

ನಾನು ಈವರೆಗೂ ಬಹಳ ಮಮತೆಯಿಂದಲೂ ಪರಿಶ್ರಮದಿಂದಲೂ ಕಷ್ಟ ಪಟ್ಟು ಈ ವನವನ್ನು ಕಾಪಾಡುತ್ತಿದ್ದೇನೆ. ಈಗ ಈ ವೃಕ್ಷಗಳೆಲ್ಲಾ ದೊಡ್ಡದಾಗಿವೆ. ಇವುಗಳಿಂದಲೇ ನನ್ನ ಜೀವನವೂ ಸಾಗುತ್ತಿದೆ. ||೧೮೪||

ಪ್ರಾತಃಕಾಲ ಅರುಣೋದಯದ ಮೊದಲುಗೊಂಡು ಸಾಯಂಕಾಲ ಕತ್ತಲೆ ಯಾಗುವ ವರೆಗೂ ನಾನು ಇಲ್ಲಿಯೇ ಇದ್ದು ಈ ವನವನ್ನು ಕಾಪಾಡುತ್ತೇನೆ. ಅನಂತರ ರಾತ್ರಿಯಾದಮೇಲೆ ಮನೆಗೆ ಹೋಗುವೆನು. ||೧೮೫||

ಈ ವನದ ಸುತ್ತಲೂ ಗಗನಚುಂಬಿಯಾದ ಮುಳ್ಳಿನ ಬೇಲಿಯನ್ನು ಭದ್ರ ವಾಗಿ ಕಟ್ಟಿದ್ದೇನೆ. ಆ ಮುಳ್ಳುಗಳು ಬಹಳ ತೀಕ್ಷ್ಣವಾಗಿರುತ್ತವೆ. ಇದರಿಂದ ಯಾವ ಪ್ರಾಣಿಯೂ ಇಲ್ಲಿಗೆ ಪ್ರವೇಶಿಸಲಾರದು. ||೧೮೬||

ಆ ಬೇಲಿಗೆ ಹತ್ತಿರದಲ್ಲಿರುವ ಕೆಲವು ಮರಗಳ ತುದಿಗಳನ್ನು ಎಲ್ಲಿಯಾ ದರೂ ಒಂದೊಂದು ಸಲ ಕಾಡಾನೆಗಳು ಮುರಿಯುತ್ತವೆ. ಆದರೆ ಈ ವನಮಧ್ಯವು ಸುರಕ್ಷಿತವಾಗಿರುವುದು. ಇಲ್ಲಿಗೆ ಆ ಕಾಡಾನೆಗಳೂ ಬರಲಾರವು. ||೧೮೭||

ನಾನ್ಯೇಷಾಮತ್ರ ಮಾರ್ಗೋಽಸ್ತಿ ಪ್ರವೇಶೇ ಕಂಟಕಾವೃತೇ ।
ಮಯಾಪಿ ಸೂಕ್ಷ್ಮಮಾರ್ಗೇಣ ಜಲದಾನಾಯ ಗಮ್ಯತೇ ॥೧೮೮॥

ನ ಜಂಬುಕಪ್ರವೇಶೋಽಪಿ ದುಷ್ಟಕಂಟಕಸಂಗಮಾತ್ ।
ಶಾರ್ದೂಲಾನಾಂ ಪ್ರವೇಶಸ್ತು ತತ್ರ ಸಂಭಾವಿತೋಽಪಿ ನ ॥೧೮೯॥

ಇತೋಽಧಿಕಪ್ರಯತ್ನೋಽಪಿ ನ ಮಮಾತ್ರ ಭವತ್ಯತಃ ।
ಏವಮೇವ ಮಯಾ ನೀತೋ ಭೂಯಾನ್ ಕಾಲೋ ಮಯಾ ದ್ವಿಜ॥೧೯೦॥

ಇತಿ ತದ್ವಚನಂ ಶ್ರುತ್ವಾ ದ್ವಿಜಶ್ಚಿಂತಾಪರೋಽಭವತ್ ।
ಕೇನ ಮಾರ್ಗೇಣ ಗಂತವ್ಯಂ ವನಮಧ್ಯೇ ಮಯೇತ್ಯಪಿ ॥೧೯೧॥

ತತಸ್ಸೋಽಪಿ ಗತೋ ಭಿಲ್ಲಸ್ಸಾಯಂಕಾಲೇ ಗೃಹಂ ಪ್ರತಿ ।
ಸ ತತ್ರೈವ ಸ್ಥಿತೋ ವಿಪ್ರಶ್ಚಿಂತಾವ್ಯಾಕುಲಮಾನಸಃ ॥೧೯೨॥

ಸುತ್ತಲೂ ಭದ್ರವಾದ ಮುಳ್ಳಿನ ಬೇಲಿ ಇರುವುದರಿಂದ ಯಾವ ಪ್ರಾಣಿಯೂ ಇಲ್ಲಿ ಪ್ರವೇಶಿಸಲಾರದು. ನಾನು ನೀರುಹಾಯಿಸುವುದಕ್ಕೆ ಹೋಗುವಾಗಲೂ ಕೂಡ ಕೇವಲ ಒಂದು ಸಣ್ಣ ಕಂಡಿಯಿಂದ ಒಳಕ್ಕೆ ಹೋಗುವೆನು. ||೧೮೮||

ಆ ತೀಕ್ಷ್ಣವಾದ ಮುಳ್ಳಿನ ಬೇಲಿಯ ಹೆದರಿಕೆಯಿಂದ ನರಿಗಳೂ ಪ್ರವೇಶಿಸುವುದಿಲ್ಲ. ಹುಲಿಗಳಂತೂ ಇದರ ಹತ್ತಿರಕ್ಕೇ ಬರುವುದಿಲ್ಲ. ||೧೮೯||

ಇದರ ರಕ್ಷಣೆಗಾಗಿ ಮತ್ತೇನನ್ನು ಮಾಡಲು ಸಾಧ್ಯವಿಲ್ಲದುದರಿಂದ ಮುಳ್ಳಿನ ಬೇಲಿಯನ್ನೇ ಮತ್ತೆ ಮತ್ತೆ ಭದ್ರಪಡಿಸುತ್ತಿರುತ್ತೇನೆ. ಇದೇ ರೀತಿಯಾಗಿ ಅನೇಕ ದಿವಸಗಳಿಂದಲೂ ಇದನ್ನು ಕಾಪಾಡುತ್ತಿದ್ದೇನೆ. ||೧೯೦||

ಹೀಗೆಂದು ಆ ವನಪಾಲಕನು ಹೇಳಿದ್ದನ್ನು ಕೇಳಿ ಶಿವಢುಂಢಿಯು ಚಿಂತಾವಿಷ್ಟನಾದನು. ತನಗೆ ಯಾವ ತರಹದಲ್ಲಿಯೂ ಅವಕಾಶವು ದೊರೆಯಲಿಲ್ಲ. ಮುಂದೆ ಏನು ಮಾಡುವುದು ? ಆ ವನಮಧ್ಯವನ್ನು ಪ್ರವೇಶಿಸುವುದು ಹೇಗೆ ? ಶಿವಾರ್ಚನೆಗೆ ಗತಿ ಏನು ? ಹೀಗೆಂಬುದಾಗಿ ಆತನು ಚಿಂತಿಸಲಾರಂಭಿಸಿದನು. ||೧೯೧||

ಆತನು ಇದೇ ವಿಷಯವಾಗಿ ಚಿಂತಾಸಾಗರದಲ್ಲಿ ಮುಳುಗಿರಲು ಸಾಯಂಕಾಲವಾಯಿತು. ಆಗ ಆ ವನಪಾಲಕನು ತನ್ನ ಮನೆಗೆ ಹೊರಟುಹೋದನು. ಆದರೂ ಶಿವಢುಂಢಿಯು ಅಲ್ಲೇ ಚಿಂತಿಸುತ್ತಾ ಕುಳಿತೇ ಇದ್ದನು. ||೧೯೨||

ಅಂಧಕಾರೋಽಪಿ ಸಂವೃತ್ತಸ್ತತೋ ಗಾಢತರಸ್ತತಃ।
ಹಸ್ತೀ ಸಮಾಗತಃ ಕೋಽಪಿ ಮದೋನ್ಮತ್ತೋ ವಿಶೇಷತಃ ॥೧೯೩॥

ಮದಧಾರಾಪರಿಕ್ರಾಂತಃ ಶ್ರಾಂತೋಽಪಿ ವನಲೀಲಯಾ।
ದೂರಾತ್ತಂ ದ್ವಿಜಮಾಲೋಕ್ಯ ಸ್ಥಿತಸ್ಸೋಽಪಿ ದದರ್ಶ ತಂ ॥೧೯೪॥

ತತಸ್ಸತ್ವರಮಾದಾಯ ಶುಂಡಾದಂಡೇನ ತಂ ದ್ವಿಜಂ।
ದಧಾರೋರ್ಧ್ವಂ ಪುಷ್ಕರಾಗ್ರೇ ಚಾಲಯನ್ ಕರಿಲೀಲಯಾ ॥೧೯೫॥

ಅಂತರಿಕ್ಷಂ ಗತೋ ವಿಪ್ರಸ್ತದಾ ಚಿಂತಾಸಮಾಕುಲಃ।
ಕಿಂ ಕರ್ತವ್ಯಂ ಮಯಾ ಕಿಂ ವಾ ಚಿಂತಿತಂ ಕಿಮತಃ ಪರಂ ॥೧೯೬॥

ಹಾಗೆಯೇ ಕ್ರಮೇಣ ಗಾಢವಾದ ಅಂಧಕಾರವು ಸುತ್ತಲೂ ವ್ಯಾಪಿಸಿಕೊಂಡಿತು. ಸುಮಾರು ಮಧ್ಯರಾತ್ರಿಯವರಿಗೂ ಆತನು ಅಲ್ಲಿಯೇ ಕುಳಿತುಕೊಂಡಿದ್ದನು. ಆ ಸಮಯದಲ್ಲಿ ಒಂದು ಮದೋನ್ಮತ್ತವಾದ ಕಾಡಾನೆಯು ಅಲ್ಲಿಗೆ ಬಂದಿತು. ||೧೯೩||

ಆ ಆನೆಯು ಕೊಬ್ಬಿದ್ದುದರಿಂದ ಸುತ್ತಲೂ ಇರುವ ವನವನ್ನು ಧ್ವಂಸ ಮಾಡುತ್ತಾ ಬರುತ್ತಿತ್ತು. ಹಾಗೆಯೇ ಸ್ವಲ್ಪ ಆಯಾಸಪಟ್ಟಂತೆಯೂ ತೋರುತ್ತಿತ್ತು. ಆದರೂ ಅದು ಗಂಭೀರವಾದ ಠೀವಿಯಿಂದ ಬರುತ್ತಿರುವಾಗ ಅದಕ್ಕೆ ಸ್ವಲ್ಪ ದೂರದಲ್ಲಿರುವಾಗಲೇ ಮನುಷ್ಯನು ಕುಳಿತಿದ್ದಾನೆಂದು ಗೊತ್ತಾಯಿತು. ಆಗ ಶಿವಘುಂಢಿಯೂ ಆ ಆನೆಯನ್ನು ನೋಡಿದನು. ಅಷ್ಟುಹೊತ್ತಿಗಾಗಲೇ ಆನೆಯು ತೀರ ಸಮೀಪಕ್ಕೇ ಬಂದಿದ್ದಿತು. ||೧೯೪||

ಆ ಕೂಡಲೇ ಆನೆಯು ಶಿವಘುಂಢಿಯನ್ನು ಸೊಂಡಲಿಂದ ಹಠಾತ್ತಾಗಿ ಎತ್ತಿಕೊಂಡು ಮೆಲಕ್ಕೂ ಕೆಳಕ್ಕೂ ಬೀಸತೊಡಗಿತು. ಮದಿಸಿದ ಆನೆಗಳು ಸ್ವಾಭಾವಿಕವಾಗಿ ಅನಾಹುತವನ್ನು ಮಾಡುವಂತೆ ಸೊಂಡಲಿಂದ ಆತನನ್ನು ಸುತ್ತಿಕೊಂಡು ಮೇಲಾಡಿಸಿತು. ||೧೯೫||

ಹೀಗೆ ಆಕಾಶದಲ್ಲಿ ಓಲಾಡುತ್ತಿದ್ದ ಆ ಬ್ರಾಹ್ಮಣನು ಮತ್ತೂ ಶೋಕಾವಿಷ್ಟನಾದನು. ಅಯ್ಯೋ ನನ್ನ ದೌರ್ಭಾಗ್ಯವೇ! ನಾನು ಆಲೋಚಿಸುತ್ತಿದ್ದುದೇನು? ಈಗ ಸಂಭವಿಸಿದುದೇನು? ಸಂಕಲ್ಪವೆಲ್ಲಾ ನಾಶವಾಯಿತಲ್ಲಾ? ಈಗ ನಾನೇನು ಮಾಡಲಿ? ||೧೯೬||

ಸಾ ಚಿಂತಾ ವಿಫಲಾ ಜಾತಾ ಪುಷ್ಕರಾಗ್ರಸ್ಥಿತೇನ ಮೇ ।
ಕಿಂ ಕರ್ತವ್ಯಂ ಭಕ್ಷಣಾರ್ಥಮಯಂ ತಾವತ್ಸಮುದ್ಯತಃ ॥೧೯೭॥

ಅತಃ ಪರಂ ಕ್ವ ವಾ ನೇಷ್ಯತ್ಯಯಂ ಹಸ್ತೀ ತನುಂ ಮಮ ।
ನ ಬಿಲ್ವತರುಲೇಶೇ ವಾ ಮರಣಂ ಕಿಂ ಪ್ರಜಾಯತೇ ॥೧೯೮॥

ಬಿಲ್ವವಾತೋಽಪ್ಯಂತಕಾಲೇ ಯದಿ ದೇಹೇ ಪತಿಷ್ಯತಿ ।
ತದಾ ಪೂತೋ ಬ್ರಹ್ಮಲೋಕಂ ಪ್ರಯಾಸ್ಯಾಮಿ ನ ಸಂಶಯಃ॥೧೯೯॥

ಕಿಮಯಂ ಸಕೃದಾದಾಯ ಭಕ್ಷಯಿಷ್ಯತಿ ಸತ್ವರಂ ।
ಯದ್ವಾ ವನಾಂತರೇ ದೂರೇ ಪಾತಯಿಷ್ಯತಿ ಪಾತಕೈಃ ॥೨೦೦॥

ಅಯ್ಯೋ, ನನ್ನ ಆಸೆ ಎಲ್ಲಾ ನಿರಾಸೆ ಆಯಿತಲ್ಲಾ! ಈಗ ನಾನು ಆನೆಯ ಸೊಂಡಿಲಲ್ಲಿ ಸಿಕ್ಕಿಬಿದ್ದಿದ್ದೇನೆ. ಬಹುಶಃ ಈ ಆನೆಯು ನನ್ನನ್ನು ಈಗ ತಿಂದು ಹಾಕುವುದು ಅಥವಾ ಧ್ವಂಸಮಾಡುವುದು. ನಾನು ಈಗ ಏನು ಮಾಡಲು ಶಕ್ತನಾಗಿಲ್ಲವಲ್ಲ! ॥೧೯೭॥

ನನ್ನನ್ನು ಕೊಂದಮೇಲೂ ಈ ಆನೆಯು ನನ್ನ ಕಳೆಬರವನ್ನು ಎಲ್ಲಿಗೆ ಹೊತ್ತುಕೊಂಡು ಹೋಗಿ ಬಿಸಾಡುವುದೋ ತಿಳಿಯದಲ್ಲ! ಯಾವುದಾದರೂ ಬಿಲ್ವವೃಕ್ಷದ ಬುಡದಲ್ಲಿ ನನಗೆ ಮರಣವು ಲಭಿಸೀತೇ? ನನ್ನ ಶರೀರವು ಇಲ್ಲಿಯೇ ಬೀಳುವುದಾದರೆ ಎಷ್ಟೋ ಪುಣ್ಯ ಲಭಿಸೀತು. ಏಕೆಂದರೆ ಇದು ಬಿಲ್ವವನವಾಗಿದೆ. ॥೧೯೮॥

ಮರಣಸಮಯಲ್ಲಿ ನನ್ನ ದೇಹದಮೇಲೆ ಬಿಲ್ವವಾಯುವು ಹೇಗಾದರೂ ಬೀಸುವುದೇ? ಅಂಥ ವಾಯುವು ಬೀಸಿದ್ದರೆ ಬಹಳ ಒಳ್ಳೆಯದಾಗುವುದಲ್ಲಾ? ವಾಯುವನ್ನು ನಾನು ಸೇವಿಸಿ ಪ್ರಾಣಬಿಟ್ಟಿದ್ದರೆ ಪವಿತ್ರನಾಗಿ ಬ್ರಹ್ಮಲೋಕವನ್ನೇ ಸೇರುತ್ತಿದ್ದೆನಲ್ಲಾ? ॥೧೯೯॥

ಈ ಆನೆಯು ನನ್ನನ್ನು ಹೀಗೇ ಹಿಡಿದುಕೊಂಡು ಒಂದೇ ಸಲಕ್ಕೆ ತಿಂದು ಹಾಕುವುದೋ, ಅಥವಾ ಇನ್ನೆಲ್ಲಿಗಾದರೂ ಬೇರೆ ಅರಣ್ಯಕ್ಕೆ ಹೊತ್ತುಕೊಂಡು ಹೋಗಿ ಬಿಸಾಡುವುದೋ? ಗೊತ್ತಾಗುವುದಿಲ್ಲವಲ್ಲ. ಅಯ್ಯೋ ನನ್ನ ಪಾಪ ಕರ್ಮವೇ! ॥೨೦೦॥

ಹಾಹಾ ಮಹೇಶ ಕರುಣಾಕರ ಬಿಲ್ವಪತ್ರೈ
ರ್ನಾರಾಧಿತೋಽಸಿ ಶಿವರಾತ್ರಿಮಹಾನಿಶಾಯಾಂ।
ವ್ಯರ್ಥಾ ಗತಾ ಜನಿರಿಯಂ ಧಿಗಿಯಂ ಜನಿರ್ಮೇ
ಧಿಗ್ಧಿಗ್ಲಲಾಟಲಿಖಿತಂ ಚ ವಿದುಷ್ಟಮೇವ ॥೨೦೧॥

ಪಾಹಿ ತ್ರಿಲೋಚನ ಮಹಾಪದಿಯಂ ತ್ವಯಾಪಿ
ದೂರೀಕೃತಾ ಯದಿ ನ ತರ್ಹಿ ಕೃಪಾಸಮುದ್ರ।
ಕಾ ನಾ ತವಾಪಿ ಕರುಣಾ ತರುಣೇಂದುಮೌಳೇ
ಗೌರೀವಿಲಾಸನಿಲಯಾನಲಜಾಲಭಾಲ ॥೨೦೨॥

ಭೂತಿತ್ರಿಪುಂಡ್ರಲಲಿತಾಮಲಫಾಲದೇಶ
ವೀರೇಶ ಶೋಕವಿನಿವಾರಕ ಲೋಕಹೇತೋ।
ಕಾ ತೇ ದಯಾಪಿ ದಯನೀಯತಮೋ ಮಯೀಶ
ಶಶ್ವದ್ವಿಲೋಕಯ ವಿಲೋಕಯ ಶೂಲಪಾಣೇ ॥೨೦೩॥

ಅಯ್ಯೋ, ಶಿವಶಿವ ಮಹೇಶ್ವರ, ಕರುಣಾನಿಧಿಯಾದ ನಿನ್ನನ್ನು ಇಂಥ ಶಿವರಾತ್ರಿ ಪುಣ್ಯಕಾಲದ ಮಹಾನಿಶಿಯಲ್ಲಿ ಬಿಲ್ವಪತ್ರೆಗಳಿಂದ ನಾನು ಆರಾಧಿಸಲಿಲ್ಲವಲ್ಲ. ನನ್ನ ಜೀವನವು ಹೀಗೆಯೇ ವ್ಯರ್ಥವಾಗಿ ನಾಶವಾಗುತ್ತಿದೆ. ಇಂಥ ನನ್ನ ಜನ್ಮವು ಹಾಳಾಗಿ ಹೋಯಿತು. ನನ್ನ ಹಣೆಯಬರಹವು ಅತ್ಯಂತ ಹೀನವಾದದ್ದು. ॥೨೦೧॥

ಓ ತ್ರಿನಯನನೇ, ನನಗೆ ಈಗ ಮಹಾವಿಪತ್ತು ಪ್ರಾಪ್ತವಾಗಿದೆ. ನೀನೇ ಈಗ ದಯೆಯಿಂದ ನನ್ನನ್ನು ಕಾಪಾಡಬೇಕು. ನೀನು ದಯಾಸಾಗರನಾಗಿದ್ದೀಯೆ. ನೀನು ದಯೆತೋರದಿದ್ದರೆ ನನ್ನ ಈ ಆಪತ್ತು ಮತ್ತೂ ಭಯಂಕರವೇ ಆಗುವುದು. ಓ ಚಂದ್ರಶೇಖರನೇ, ಅಗ್ನಿನೇತ್ರನೇ, ಗಿರಿಜಾರಮಣನೇ, ನನ್ನನ್ನು ಉದ್ಧರಿಸು. ॥೨೦೨॥

ಓ ಶೂಲಪಾಣಿಯೇ, ನೀನು ಮಹಾದಯಾಳುವು. ನಿನ್ನ ಹಣೆಯು ಭಸ್ಮತ್ರಿಪುಂಡ್ರದಿಂದ ಸದಾ ಅಲಂಕೃತವಾಗಿರುವುದು. ನೀನೇ ಸಕಲ ಜನರ ಶೋಕವನ್ನೂ ನಿವಾರಣೆಮಾಡುವವನು. ನಾನು ಈಗ ಅತ್ಯಂತ ದುರವಸ್ಥೆಯಲ್ಲಿ

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಉತ್ತರಾರ್ಧೇ ಬಿಲ್ವಮಹಿಮಾವರ್ಣನೇ ಶಿವಘುಂಢಿಪಶ್ಚಾತ್ತಾಪಪ್ರಾರ್ಥನಾ ವರ್ಣನಂ ನಾಮ ಪಂಚಚತ್ವಾರಿಂಶೋಽಧ್ಯಾಯಃ

ಬಿದ್ದಿದ್ದೇನೆ. ದಯಾಪಾತ್ರನಾಗಿದ್ದೇನೆ. ಓ ಲೋಕಕಾರಣನೇ, ನನ್ನನ್ನು ಕೃಪಾಕಟಾಕ್ಷದಿಂದ ಈಕ್ಷಿಸು. ಕೃಪಾಕಟಾಕ್ಷವನ್ನು ಬೀರಿ ನನ್ನನ್ನು ಕಾಪಾಡಿ ಉದ್ಧರಿಸು."ಎಂದು ಶಿವಘುಂಢಿಯು ಪಶ್ಚಾತ್ತಾಪಪಡುತ್ತಿದ್ದನೆಂದು ಸತ್ಯಮೂರ್ತಿಯೆಂಬ ಬ್ರಾಹ್ಮಣನು ಮಹಾರಥರಾಜರಿಗೆ ಶಿವಧರ್ಮವನ್ನು ಅರುಹಿದನು. ||೨೦೩||

ಇಲ್ಲಿಗೆ ಶ್ರೀಶಿವರಹಸ್ಯದ ತೃತೀಯಾಂಶದ ಉತ್ತರಾರ್ಧದಲ್ಲಿ
ನಲವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಓಂ ನಮಶ್ಶಿವಾಯ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ಷಟ್ಚತ್ವಾರಿಂಶೋಽಧ್ಯಾಯಃ

॥ ರತ್ನಾಕರ ಉವಾಚ ॥

ಇತಿ ತದ್ವಚನಂ ಶ್ರುತ್ವಾ ಸತ್ಯಮೂರ್ತಿಂ ಸ ಭೂಪತಿಃ ।
ಅತಿವಿಸ್ಮಯಮಾಪನ್ನಃ ಪ್ರಾಹ ಮಂದಂ ಕೃತಾಂಜಲಿಃ ॥೧॥

॥ ಮಹಾರಥ ಉವಾಚ ॥

ಅತಿಕೌತುಕಮುದ್ಯೋಕ್ತಮೀದೃಶಂ ನ ಶ್ರುತಂ ಮಯಾ ।
ಕದಾಪಿ ಕಾ ಗತಿಸ್ತಸ್ಯ ಜಾತಾ ತದ್ವದ ಸಾದರಂ ॥೨॥

ನಲವತ್ತಾರನೆಯ ಅಧ್ಯಾಯ

ಆ ಶಿವಢುಂಢಿಯ ವಿಚಾರವನ್ನು ಕೇಳಿ ಮಹಾರಥರಾಜನಿಗೆ ಅತ್ಯಂತ ವಿಸ್ಮಯವಾಯಿತು. ಆಗ ಆತನು ಸತ್ಯಮೂರ್ತಿಗೆ ನಮಸ್ಕರಿಸಿ ವಿನಯದಿಂದ ಹೀಗೆ ಕೇಳಿದನು. ॥೧॥

ಎಲೈ ಸತ್ಯಮೂರ್ತಿಯೇ, ಅತ್ಯಂತ ಆಶ್ಚರ್ಯಕರವಾದ ಸಂಗತಿಯನ್ನು ಹೇಳಿದೆ. ಇಂಥ ವಿಸ್ಮಯಕಾರಿಯಾದ ವಿಷಯವನ್ನು ನಾನು ಈಹಿಂದೆ ಎಲ್ಲಿಯೂ ಕೇಳಿರಲಿಲ್ಲ. ಈಗ ಮತ್ತು ಮುಂದಕ್ಕೆ ಆ ಕತೆಯನ್ನು ಕೇಳಬೇಕೆಂದು ಕುತೂಹಲವಾಗುತ್ತಿದೆ. ಆದುದರಿಂದ ಜಾಗ್ರತೆ ಮುಂದಿನ ಸಂಗತಿಯನ್ನು ಹೇಳು. ಆ ಶಿವಢುಂಢಿಗೆ ಮುಂದೆ ಏನು ಗತಿಯಾಯಿತು? ॥೨॥

॥ ಸತ್ಯವ್ರತ ಉವಾಚ ॥

ಸ ಕರೀ ಪುಷ್ಕರಾಗ್ರೇಣ ತಂ ಧೃತ್ವಾ ಗಗನಾಂತರೇ ।
ಭ್ರಾಮಯಿತ್ವಾ ವನೇ ತಸ್ಮಿನ್ ಪಾತಯಾಮಾಸ ಸತ್ವರಂ ॥೩॥

ವಿಪ್ರೋ ಬಿಲ್ವತರುಸ್ಕಂಧೇ ಪತಿತಸ್ಸತ್ವರಂ ತದಾ ।
ಶಾಖಾಂ ಗೃಹೀತ್ವಾ ಹಸ್ತಾಭ್ಯಾಂ ಸಂತೋಷಂ ಪರಮಂ ಯಯೌ ॥೪॥

ಅತಿಸಂತುಷ್ಟಹೃದಯಸ್ಸ ಬಿಲ್ವತರುಸಂಶ್ರಿತಃ ।
ಮನ್ಯೇ ಕೃತಾರ್ಥಮಾತ್ಮಾನಂ ಕರಿಣಂ ಚ ಮುದೋದ್ಧತಂ ॥೫॥

ಕಿಂ ದೇಯಂ ಕರಿಣೇ ಮಯಾ ಕರುಣಯಾ ತಾವತ್ಕರೀ ಪ್ರೇರಿತೋ
ವಿಶ್ವೇಶೇನ ಕೃಪಾಲುನಾ ಶಿವಪದೇ ಬಿಲ್ವೀದಳಂ ದೀಯತೇ ।
ಸಂತೋಷಃ ಖಲು ತಾವತೈವ ಗಿರಿಜಾಭರ್ತುಃ ಪ್ರಹರ್ತುಃ ಪರಂ
ದುಷ್ಟಾನಾಮಧಮಃ ಕಿಲಾಹಮಧುನಾ ಭೂತೋಪಕಾರಾಕ್ಷಮಃ ॥೬॥

ರಾಜನ ಕೇಳಿಕೆಯ ಮೇರೆಗೆ ಸತ್ಯಮೂರ್ತಿಯು ಮುಂದಕ್ಕೆ ಕಥೆಯನ್ನು ವಿವರಿಸಿದನು:— ಎಲೈ ರಾಜನೇ ಕೇಳು, ಆ ಆನೆಯು ಸೊಂಡಲಿಂದ ಮೇಲಕ್ಕೆ ಎತ್ತಿಕೊಂಡಿದ್ದ ಆ ಶಿವಘುಂಟಿಯನ್ನು ಅಂತರಾಳದಲ್ಲಿ ಅನೇಕಾವರ್ತಿ ತಿರುಗಿಸಿ ಕೊನೆಗೆ ರಭಸದೊಡನೆ ಅದೇ ವನದೊಳಕ್ಕೆ ಅಪ್ಪಳಿಸಿ ಬಿಸಾಡಿತು. ॥೩॥

ಆ ಆನೆಯಿಂದ ಎಸೆಯಲ್ಪಟ್ಟ ಆ ಶಿವಘುಂಟಿಯು ಒಂದು ಬಿಲ್ವಮರದ ಕೊಂಬೆಯ ಮೇಲೆ ಬಿದ್ದನು. ಹಾಗಿದ್ದರೂ ಆತನು ಸಾಯಲಿಲ್ಲ. ಅಥವಾ ಆತನಿಗೆ ಯಾವ ಪೆಟ್ಟೂ ಆಗಲಿಲ್ಲ. ಆ ಕೂಡಲೇ ಆತನು ಆ ಕೊಂಬೆಯನ್ನೇ ಭದ್ರವಾಗಿ ಹಿಡಿದುಕೊಂಡು ಅಲ್ಲಿಯೇ ಸ್ವಲ್ಪಹೊತ್ತು ಕುಳಿತಿದ್ದನು. ಆತನಿಗೆ ಇದರಿಂದ ಪರಮ ಸಂತೋಷವೇ ಆಯಿತು. ಏಕೆಂದರೆ ಸ್ವಪ್ರಯತ್ನದಿಂದ ಬಿಲ್ವವೃಕ್ಷವನ್ನು ಪಡೆಯಲು ಆಗದಿದ್ದರೂ ಈಗ ವನಮಧ್ಯದಲ್ಲಿರುವ ಬಿಲ್ವವೃಕ್ಷದ ಮೇಲೆ ಬಿದ್ದುದಕ್ಕೆ ಆತನು ಆನೆಯನ್ನು ಶ್ಲಾಘಿಸಿದನು. ಮತ್ತು ತನ್ನನ್ನೂ ಧನ್ಯನೆಂದುಕೊಂಡನು. ॥೫॥

ನಾನು ಪರಮ ಕೃತಘ್ನನಾಗಿದ್ದೆ. ಈ ಶಿವರಾತ್ರಿ ಪುಣ್ಯಕಾಲದಲ್ಲಿ ಶಿವಾರಾಧನೆ ಮಾಡಲು ಅಸಮರ್ಥನಾಗಿದ್ದೆ. ಆದರೆ ಈ ಆನೆಯು ನನಗೆ ಪರಮ ಸಹಾಯವನ್ನು ಮಾಡಿತು. ಉಪಕಾರವನ್ನೇ ಎಸಗಿತು. ಈ ಆನೆಗೆ ನಾನು ಯಾವ ಉಪಕಾರ

ನ ಕರೀ ಚರಣಾಘಾತಪೀಡಿತಂ ಮಾಂ ಚಕಾರ ಸಃ ।
ನ ವಾ ಸಂತಾಡಯಾಮಾಸ ಸ ತಾವದುಪಕಾರಕಃ ॥೭॥

ನಾನ್ಯತ್ರ ಪಾತಯಾಮಾಸ ನ ಚಕ್ರೇ ಗಿಲನಂ ಮಮ ।
ಮದಭೀಷ್ಟಂ ಕೃತಂ ತೇನ ಬಿಲ್ವಸುಧ್ಯನಿವೇಶನಾತ್ ॥೮॥

ಉನ್ಮತ್ತಕರಿಣೋಽಪ್ಯಸ್ಯ ಕರುಣಾ ಶಂಕರಾಜ್ಞಯಾ ।
ಜಾತಾ ಸೋಽಪ್ಯುಪಕರ್ತವ್ಯಃ ಕಿಂ ತಾವದುಪಕಾರಕಂ ॥೯॥

ವನ್ನೂ ಮಾಡಲು ಶಕ್ತನಾಗಿಲ್ಲ. ಆದುದರಿಂದ ನಾನು ಅತ್ಯಂತ ಕೃತಘ್ನನು. ಆಹಾ, ಆ ಪರಮೇಶ್ವರನ ದಯೆಯು ಎಷ್ಟು ಅಮೋಘವಾದದ್ದು ! ಆತನೇ ಈ ಆನೆಯನ್ನು ಈ ರೀತಿ ಪ್ರೇರಣೆಮಾಡಿ ನನ್ನನ್ನು ಇಲ್ಲಿಗೆ ಬೀಳಿಸಿದನು. ಆತನ ದಯೆಯು ಎಷ್ಟು ಮಹತ್ತರವಾಗಿದೆ ? ನಾನು ಅದನ್ನು ಹೇಗೆ ಸ್ತುತಿಸಲಿ ? ಆತನಾದರೋ ಕೇವಲ ಬಿಲ್ವದಳಾರ್ಪಣಮಾತ್ರದಿಂದಲೇ ಸಂತೃಪ್ತನಾಗುವನು. ಆದುದರಿಂದ ನಾನು ಬಿಲ್ವಪೂಜೆಯನ್ನು ಮಾಡಲೇಬೇಕು. ಇಲ್ಲದಿದ್ದರೆ ಮತ್ತೂ ನೀಚನಾಗುವೆನು. ||೬||

ಆ ಶಂಕರನು ನನ್ನನ್ನು ಆನೆಯ ಕಾಲಿನಿಂದ ತುಳಿಸಲಿಲ್ಲ. ಅಥವಾ ಮತ್ತೆ ಯಾವ ಬಗೆಯ ಅಪಾಯವನ್ನೂ ಮಾಡಗೊಡಲಿಲ್ಲ. ಆತನ ದಯೆಯಿಂದಲೇ ನಾನು ಈ ರೀತಿ ಸುರಕ್ಷಿತನಾದೆ. ಆದುದರಿಂದ ಪರಶಿವನು ಇಂದು ನನಗೆ ಎಷ್ಟು ಉಪಕಾರವನ್ನು ಮಾಡಿದನು ! ||೭||

ಈ ಆನೆಯೂ ಕೂಡ ನನಗೆ ಎಷ್ಟೊಂದು ಸಹಾಯವನ್ನು ಮಾಡಿದೆ. ನನ್ನನ್ನು ನುಂಗಲಿಲ್ಲ. ಅಥವಾ ಮತ್ತೆಲ್ಲಿಗೂ ಸಹ ಬಿಸಾಡಲಿಲ್ಲ. ನಾನು ಅಪೇಕ್ಷಿಸುತ್ತಿದ್ದ ಈ ಬಿಲ್ವವೃಕ್ಷದ ಮೇಲೆಯೇ ನನ್ನನ್ನು ಏರಿಸಿರುತ್ತದೆ. ||೮||

ಈ ಆನೆಯು ಮದಿಸಿದ್ದರೂ ನನ್ನಮೇಲೆ ಇಷ್ಟೊಂದು ದಯೆ ತೋರಲು ಆ ಪರಮೇಶ್ವರನೇ ಕಾರಣನಾಗಿದ್ದಾನೆ. ಆತನ ಆಜ್ಞೆಯಿಂದಲೇ ಇದು ನನಗೆ ಉಪಕಾರವನ್ನು ಮಾಡಿತು. ಹೀಗೆ ಸಹಾಯಮಾಡಿದ ಆನೆಗೆ ನಾನೇನು ಉಪಕಾರ ಮಾಡಲಿ ? ||೯||

ಇತ್ಯುಕ್ತ್ವಾ ಭೂರುಹಾತ್ತಸ್ಮಾದವತೀರ್ಯಾವನೀತಲಂ ।
ಪ್ರಾಪ್ಯ ಕುಲ್ಯಾಂ ದದರ್ಶಾಥ ಗಂಗಾಯಾಃ ಪಾಪನಾಶಿನೀಂ ॥೧೦॥

ತತ್ತೀರಬಿಲ್ವಮೂಲೇಷು ಲಿಂಗಾನಿ ವಿಮಲಾನ್ಯಪಿ ।
ಅತಿತುಂಗಾನಿ ಶಾಂಗಾನಿ ವಿಮಲಾನಿ ದದರ್ಶ ಸಃ ॥೧೧॥

ತತಃ ಸ್ನಾತ್ವಾ ಸ ಕುಲ್ಯಾಯಾಂ ಭಸ್ಮ ನಾಸ್ತೀತಿ ಚಿಂತಯಾ ।
ವ್ಯಾಕುಲೋ ಭಸ್ಮರಾಶಿಂ ಚ ಸ ದದರ್ಶ ಮುನೀಶ್ವರಃ ॥೧೨॥

ಸ ಪಶ್ಚಾದ್ಭಸ್ಮನೋದ್ಧೂಲ್ಯ ಸರ್ವಮಂಗಂ ಪ್ರಯತ್ನತಃ ।
ಶಿವಪೂಜಾರ್ಥಮುದ್ಯುಕ್ತಃ ಪ್ರಾಪಾನಂದಂ ಸ ವಿಸ್ಮಿತಃ ॥೧೩॥

ಬಿಲ್ವಶಾಖಾಂ ಸಮಾದಾಯ ಜಲಂ ಲಿಂಗಾನಿ ನಿಕ್ಷಿಪನ್ ।
ಪೂಜಯಾಮಾಸ ವಿಶ್ವೇಶಂ ತಲ್ಲಿಂಗೇ ಬಿಲ್ವಪಲ್ಲವೈಃ ॥೧೪॥

ಹೀಗೆಂದು ಯೋಚಿಸಿಕೊಳ್ಳುತ್ತಾ ಶಿವಘುಂಢಿಯು ಆ ಬಿಲ್ವವೃಕ್ಷದಿಂದ ಕೆಳಕ್ಕೆ ಆ ನಾಲೆಯ ಹತ್ತಿರಕ್ಕೆ ಹೋಗಿ ನೋಡಿದನು. ಆ ನಾಲೆಯು ಗಂಗಾನದಿಯಿಂದಲೇ ಬಂದಿತ್ತಾದ್ದರಿಂದ ಅದೂ ಪಾಪನಾಶಕವಾಗಿದ್ದಿತು. ॥೧೦॥

ಆ ನಾಲೆಯ ದಡದಲ್ಲಿ ಬೆಳೆದಿರುವ ಬಿಲ್ವವೃಕ್ಷದ ಕೆಳಗೆ ದೊಡ್ಡ ದೊಡ್ಡ ಪವಿತ್ರವಾದ ಶಿವಲಿಂಗಗಳಿದ್ದುದನ್ನೂ ಆತನು ನೋಡಿದನು. ॥೧೧॥

ಆಗ ಆತನು ವ್ಯರ್ಥವಾಗಿ ಕಾಲವನ್ನು ಕಳೆಯಕೂಡದೆಂದು ಯೋಚಿಸಿ ಕೂಡಲೇ ಆ ನಾಲೆಯಲ್ಲಿ ಇಳಿದು ಸ್ನಾನಮಾಡಿದನು. ಅನಂತರ ಭಸ್ಮಧಾರಣೆಯನ್ನು ಮಾಡಲು ಭಸ್ಮವಿಲ್ಲೆಂದು ಚಿಂತಿಸುತ್ತಿರಲು ಆತನ ಕಣ್ಣಿಗೆ ಒಂದು ಭಸ್ಮರಾಶಿಯೇ ಕಾಣಿಸಿತು. ॥೧೨॥

ಅನಂತರ ಆತನು ಸರ್ವಾಂಗಗಳಿಗೂ ಭಸ್ಮವನ್ನು ಲೇಪಿಸಿಕೊಂಡು ಶಿವಾರಾಧನೆಯನ್ನು ಮಾಡಲನುವಾದನು. ಈ ಎಲ್ಲಾ ಅನುಕೂಲಗಳೂ ತನಗೆ ದೊರೆತದ್ದರಿಂದ ಆತನಿಗೆ ಆತ್ಯಾನಂದವೂ ಆಶ್ಚರ್ಯವೂ ಆಗುತ್ತಿದ್ದಿತು. ॥೧೩॥

ಹೀಗೆಯೇ ಅತ್ಯಂತ ಆಸಕ್ತಿಯಿಂದ ಆತನು ಕೋಮಲ ಬಿಲ್ವಪತ್ರೆಗಳನ್ನು ಸಂಗ್ರಹಿಸಿಕೊಂಡು, ಅಲ್ಲಿದ್ದ ಶಿವಲಿಂಗಗಳಿಗೆ ಪೂಜಿಸಿ ವಿಶ್ವೇಶ್ವರನನ್ನು ಆರಾಧಿಸಿದನು. ॥೧೪॥

ಸ ಮುನಿರ್ಹಸ್ತಲಭ್ಯಾಭಿಶ್ಶಾಖಾಭಿರ್ಬಿಲ್ವಪಲ್ಲವೈಃ ।
ಮನೋಜ್ಞೈಃ ಪೂಜಯಾಮಾಸ ಶಿವಲಿಂಗಾನಿ ಶಾಂಕರಃ ॥೧೫॥

ಏವಂ ಬಿಲ್ವಾರ್ಚನೇನೈವ ನೀತಾ ಭೂತಾ ಶಿವಪ್ರಿಯಾ ।
ಅರುಣೋದಯಪರ್ಯಂತಂ ಚಕಾರ ಶಿವಸೇವನಂ ॥೧೬॥

ಸಂತೋಷಂ ಪರಮಂ ಪ್ರಾಪ ಬಿಲ್ವಪಲ್ಲವಪೂಜಯಾ ।
ಸಫಲಂ ಜನ್ಮ ಸಂಪ್ರಾಪ್ತಮತಿದುರ್ಲಭಮಿತ್ಯಪಿ ॥೧೭॥

ಕುಲಂ ಪವಿತ್ರಂ ಮಮ ಬಿಲ್ವಪಲ್ಲವೈಃ
ಕೃತಂ ಯತಶ್ಶಾಂಗಸಮರ್ಚನಂ ಮಯಾ ।
ಲಿಂಗೇಷು ತುಂಗೇಷು ಮನೋಹರೇಷು
ವಿಭೂತಿಯುಕ್ತೇಷು ವಿಭೂತಿದೇಷು ॥೧೮॥

ಆ ಶಿವಘುಂಥಿಯು ತನಗೆ ಕೈಗೆ ನಿಲುಕುತ್ತಿದ್ದ ಕೊಂಬೆಗಳಿಂದ ಬಿಲ್ವ ಪತ್ರೆಗಳನ್ನು ಕುಯಿದು ತಂದು ಯಥೇಚ್ಛವಾಗಿ ಎಲ್ಲಾ ಶಿವಲಿಂಗಗಳನ್ನೂ ಪೂಜಿಸಿದನು. ||೧೫||

ಹೀಗೆ ಒಂದೇಸಮನೆ ಬಿಲ್ವಾರ್ಚನೆಯನ್ನು ಮಾಡುತ್ತ ಮಾಡುತ್ತಲೇ ಆ ಶಿವರಾತ್ರಿಯ ಪುಣ್ಯಕಾಲವನ್ನು ಕಳೆದನು. ಅರುಣೋದಯದವರೆಗೂ ಆತನು ಶಿವಾರಾಧನೆಯನ್ನೇ ಮಾಡುತ್ತಿದ್ದನು. ||೧೬||

ಹೀಗೆ ಅವಿಚ್ಛಿನ್ನವಾಗಿ ಶಿವಲಿಂಗಕ್ಕೆ ಬಿಲ್ವಪೂಜೆಯು ತನ್ನ ಕೈಯಿಂದ ನಡೆದುದರಿಂದ ಆತನಿಗೆ ಪರಮಾನಂದವಾಯಿತು. ಅತ್ಯಂತ ದುರ್ಲಭವಾದ ಮನುಷ್ಯ ಜನ್ಮವನ್ನು ಪಡೆದುಕೊಂಡಿದ್ದುದು ಇಂದು ಸಾರ್ಥಕವಾಯಿತು ಎಂದುಕೊಂಡನು. ||೧೭||

ಈಗ ಬಿಲ್ವದಳಗಳಿಂದ ಶಿವಾರಾಧನೆಯನ್ನು ನಾನು ಮಾಡಿದ್ದರಿಂದ ನನ್ನ ವಂಶವು ಇಂದು ಪವಿತ್ರವಾಯಿತು ಮತ್ತು ಉದ್ಧಾರವಾಯಿತು. ಸಕಲೈಶ್ವರ್ಯಗಳನ್ನೂ ಪ್ರದಾನಮಾಡುವ ಈ ಎಲ್ಲಾ ಉನ್ನತವಾದ ಶಿವಲಿಂಗಗಳಿಗೂ ನಾನು ಭಸ್ಮಾರ್ಚನೆಯನ್ನೂ ಬಿಲ್ವಾರ್ಚನೆಯನ್ನೂ ಮಾಡಿರುವೆನು. ||೧೮||

ಅತಃಪರಂ ಕಾಲಭಯಂ ನ ಮೇ ಸ್ಯಾತ್
ಸಂಸಾರಭೀತಿರ್ನ ಮಮ ಪ್ರಭೂತಾ ।
ಪಾಪಾನಿ ತಾವತ್ಪ್ರಲಯಂ ಗತಾನಿ
ಶಿವಾರ್ಚನೇನೈವ ವಿಶೇಷತೋಽದ್ಯ ॥೧೯॥

ಶಿವಾರ್ಚನಾಕಾರಮಹಾನಲೇನ
ದಗ್ಧಾನಿ ಪಾಪಾಮಿತಕೋಟರಾಣಿ ।
ಜಿತಂ ಜಗತ್ಸರ್ವಮತಃಪರಂ ಮೇ
ಕರ್ತವ್ಯಮನ್ಯನ್ನ ವಿಭಾತಿ ನೂನಂ ॥೨೦॥

ಅತಃಪರಂ ಲೌಕಿಕಮೇಕಮಸ್ತಿ
ಭಿಲ್ಲಾದ್ಭಯಂ ಭೂರುಹರಕ್ಷಕಾನ್ಮೇ ।
ತದ್ವಾರಣಂ ಕೇನ ಭವಿಷ್ಯತೀತಿ
ಚಿಂತಾಂ ಕೃತಾಂತಾದಿವ ಸೋಽಪ್ಯವಾಪ ॥೨೧॥

ನಾನು ಇಂದು ಇಷ್ಟು ಅತಿಶಯವಾಗಿ ಶಿವನನ್ನು ಆರಾಧಿಸಿದುದರಿಂದ ನನ್ನ ಪಾಪಗಳೆಲ್ಲವೂ ನಾಶವಾದವು. ನನಗೆ ಇನ್ನು ಯಾವ ಸಂಸಾರ ತಾಪತ್ರಯವೂ ಉಂಟಾಗಲಾರದು. ಮುಂದೆ ನನಗೆ ಮೃತ್ಯುಭಯವೂ ಇರುವುದಿಲ್ಲ. ॥೧೯॥

ಶಿವಾರ್ಚನೆ ಎಂಬ ಮಹಾಗ್ನಿಯಿಂದ ನನ್ನ ಸಕಲ ಪಾಪರಾಶಿಯೂ ಇಂದು ಸುಟ್ಟು ಭಸ್ಮವಾಗಿ ಹೋಗಿದೆ. ಅಲ್ಲದೆ ನಾನು ಜಗತ್ತನ್ನೇ ಗೆದ್ದಿರುತ್ತೇನೆ. ನನಗೆ ಇನ್ನು ಯಾವ ಭಯವೂ ಇರುವುದಿಲ್ಲ. ನಾನು ಇನ್ನು ಏನನ್ನೂ ಮಾಡಬೇಕಾಗಿಲ್ಲ. ನನ್ನ ಕರ್ತವ್ಯವು ಇಂದು ಪೂರ್ಣವಾಯಿತು. ॥೨೦॥

ಆದರೆ ಈಗ ಒಂದು ಭಯ ಮಾತ್ರ ಇದೆ. ಯಮನಂತಿರುವ ಆ ವನಪಾಲಕನ ಸಮ್ಮತಿ ಇಲ್ಲದೇ ಒಳಗೆ ಪ್ರವೇಶಿಸಿದ್ದೇನೆ. ಆತನು ಬಂದು ನನ್ನನ್ನು ನೋಡಿ ಏನನ್ನುವನೋ! ಏನು ಮಾಡುವನೋ! ಅದನ್ನು ತಪ್ಪಿಸುವರಾರು? ಹೀಗೆಂದು ಶಿವಘುಂಘಿಯು ಗಾಢವಾಗಿ ಚಿಂತಿಸುತ್ತಿದ್ದ ಹಾಗೆಯೇ ಚೆನ್ನಾಗಿ ಬೆಳಗಾಯಿತು. ॥೨೧॥

ತತಃಪರಂ ತದ್ವನಪಾಲಕೋಽಪಿ
ಪ್ರಾತಸ್ಸಮುತ್ಥಾಯ ಯಯೌ ವನಾಯ ।
ವನಂ ಪ್ರವಿಷ್ಟೋಽಪಿ ಜಲಂ ಪ್ರದಾತುಂ
ಸ ಬಾಲಬಿಲ್ವಾಂಕುರಪೋಷಣಾಯ ॥೨೨॥

ತತಃ ಪರಂ ಸ ದೂರೇಣ ದೃಷ್ಟ್ವಾ ತಂ ಮುನಿಪುಂಗವಂ ।
ಪೂಜಿತಾನ್ಯಪಿ ಲಿಂಗಾನಿ ಬಭಾಷೇ ವಚನಂ ಮುದಾ ॥೨೩॥

॥ ವನಪಾಲ ಉವಾಚ ॥

ಆಗಂತುಕೇನ ಮಾರ್ಗೇಣ ವನೇಽಸ್ಮಿನ್ ಕಂಟಕಾವೃತೇ ।
ಮಯಾ ಯಚ್ಛಿನ್ನಿತೋ ಮಾರ್ಗಸ್ಸ ತಥೈವ ಸ್ಥಿತಃ ಖಲು ॥೨೪॥

ಮಾರ್ಗಾಂತರಸ್ತು ನಾಸ್ತ್ಯತ್ರ ಪ್ರವೇಶಃ ಕಠಿನಃ ಖಲು ।
ಮನುಷ್ಯಾಣಾಂ ಪಶೂನಾಂ ವಾ ಪ್ರಮತ್ತವನದಂತಿನಾಂ ॥೨೫॥

ಬೆಳಗಾಗಿ ಸ್ವಲ್ಪ ಹೊತ್ತಾಗುತ್ತಲೇ ಆ ವನಪಾಲಕನು ನಿದ್ದೆಯಿಂದೆದ್ದು ಬಿಲ್ವ ಸಸಿಗಳಿಗೆ ನೀರನ್ನು ಹಾಯಿಸಬೇಕೆಂದು ಮನೆಯಿಂದ ಆ ಬಿಲ್ವವನಕ್ಕೆ ಪ್ರವೇಶಿಸಿದನು. ॥೨೨॥

ವನಪಾಲಕನು ದೂರದಿಂದ ಬರುತ್ತಿದ್ದ ಹಾಗೆಯೇ ಆ ವನಮಧ್ಯದಲ್ಲಿದ್ದ ಶಿವಘುಂಭಿಯನ್ನು ನೋಡಿದನು. ಪೂಜಾದಿಗಳಿಂದ ಅಲಂಕೃತವಾದ ಶಿವಲಿಂಗಗಳೂ ಆತನ ಕಣ್ಣಿಗೆ ಬಿದ್ದವು. ಆತನು ಸಂತೋಷದಿಂದ ಅವುಗಳನ್ನು ನೋಡುತ್ತಾ ಹತ್ತಿರಕ್ಕೆ ಬಂದು ಪ್ರಸನ್ನನಾಗಿಯೇ ಹೀಗೆಂದನು. ॥೨೩॥

"ಎಲೈ ಮುನಿಯೇ! ನೀನು ಈ ವನದೊಳಕ್ಕೆ ಕ್ಷೇಮದಿಂದ ಹೇಗೆ ಪ್ರವೇಶಿಸಿದೆ? ಇಲ್ಲಿ ಪ್ರವೇಶಿಸುವುದಕ್ಕೆ ಮಾಡಿರುವುದು ಒಂದೇ ದಾರಿ. ಅಲ್ಲಿಯೂ ಕೂಡ ಮುಳ್ಳುಗಳನ್ನು ಹಾಕಿ ಭದ್ರಮಾಡಿದ್ದೆನು. ಅದನ್ನೇನೂ ತೆಗೆದುಹಾಕಿ ಒಳಗೆ ಬಂದಂತೆ ತೋರುತ್ತಿಲ್ಲ. ಅದು ಇದ್ದಹಾಗೆಯೇ ಇದೆ. ಮತ್ತೆ ಸುತ್ತಲೂ ಇರುವ ಬೇಲಿಯೂ ಹಾಗೆಯೇ ಇದೆ. ಅಂದಮೇಲೆ ನೀನು ಯಾವ ಮಾರ್ಗವಾಗಿ ಒಳಕ್ಕೆ ಬಂದೆ? ॥೨೪॥

ಒಳಕ್ಕೆ ಬರಲು ಬೇರೆ ಎಲ್ಲಿಯೂ ದಾರಿ ಇಲ್ಲ. ಇದನ್ನು ಯಾವ ಮನುಷ್ಯನೇ ಆಗಲಿ ಕಾಡುಪ್ರಾಣಿಗಳೇ ಆಗಲಿ ಪ್ರಯಾಸಪಟ್ಟರೂ ಪ್ರವೇಶಿಸಲು

ಇದಮತ್ಯದ್ಭುತಂ ದೃಷ್ಟಂ ಕುಲ್ಯಾತೀರೇ ಮನೋಹರೇ ।
ಬಿಲ್ವಪಲ್ಲವಸಂಕ್ರಾಂತಂ ತದಿದಂ ಲಿಂಗಮಂಡಲಂ ॥೨೬॥

ಸೇಯಂ ಸುರಸರಿತ್ಕುಲ್ಯಾ ಶಿವಲಿಂಗಸಮಾಕುಲಾ ।
ಏತೇಷಾಂ ಪೂಜನಂ ಕೇನಾಪ್ಯತ್ರ ನೈವ ಕೃತಂ ಪುರಾ ॥೨೭॥

ವಿಶೀರ್ಣೈರೇವ ಬಿಲ್ವಾನಾಂ ಪಾಂಡುಪತ್ರೈರಿದಂ ಪರಂ ।
ಲಿಂಗಮಂಡಲಮಾಕ್ರಾಂತಂ ದವಭೂತಿಕಣೈರಪಿ ॥೨೮॥

ಇಯಂ ವಿಭೂತಿರಾನೀತಾ ದವಪಾವಕಜಾ ಮಯಾ ।
ಬಾಲಬಿಲ್ವಪ್ರರೋಹಾಣಾಂ ವೃದ್ಧ್ಯರ್ಥಂ ಕೇವಲಂ ಖಲು ॥೨೯॥

ತನುರಪ್ಯನಯಾ ಭೂತ್ಯಾ ತವ ಪೂತೇತಿ ಮನ್ಮಹೇ ।
ಹಸ್ತಪ್ರಕ್ಷೇಪಚಿಹ್ನಂ ಚ ದೃಶ್ಯತೇ ಭಸ್ಮರಾಶಿಷು ॥೩೦॥

ಸಾಧ್ಯವಿರಲಿಲ್ಲ. ಹೀಗಿದ್ದರೂ ನೀನು ಹೇಗೆ ಒಳಕ್ಕೆ ಪ್ರವೇಶಿಸಿದೆ? ಇದೇನು ಇಂದು ಆಶ್ಚರ್ಯ! ಈ ನಾಲೆಯ ದಡದಲ್ಲಿರುವ ಲಿಂಗಗಳಮೇಲೆಲ್ಲಾ ಬಿಲ್ವಪತ್ರೆಗಳಿವೆ. ಇಲ್ಲಿ ನೀನೇ ಪೂಜೆಮಾಡಿರುವೆಯಾ? ॥೨೬॥

ಈ ನಾಲೆಯು ಸಾಮಾನ್ಯವಾದದ್ದಲ್ಲ. ಸಾಕ್ಷಾತ್ ದೇವನದಿಯಾದ ಗಂಗೆ ಯಿಂದ ಬಂದಿರುತ್ತದೆ. ಇಲ್ಲೇನೋ ಮೊದಲಿಂದಲೂ ಅನೇಕ ಶಿವಲಿಂಗಗಳು ಇದ್ದವು. ಆದರೆ ಈವರೆಗೆ ಯಾರೂ ಇಲ್ಲಿಗೆ ಬಂದು ಇವುಗಳನ್ನು ಪೂಜಿಸಿಲ್ಲ. ॥೨೭॥

ಬಿಲ್ವವೃಕ್ಷಗಳಲ್ಲಿ ಹಣ್ಣಾಗಿ ಎಲೆಗಳು ಈ ಲಿಂಗಗಳ ಮೇಲೆ ಬೀಳುತ್ತಿದ್ದವು. ಇವುಗಳನ್ನು ಹೀಗೆ ಯಾರೂ ಪೂಜಿಸಿರಲಿಲ್ಲ. ಹಾಗೆಯೇ ಕಾಡುಗಿಚ್ಚಿನಿಂದ ಉಂಟಾದ ಭಸ್ಮವೂ ಇವುಗಳ ಮೇಲೆ ಬೀಳುತ್ತಿದ್ದವು. ॥೨೮॥

ಕಾಡುಗಿಚ್ಚಿನಿಂದ ಉಂಟಾದ ಬೂದಿಯನ್ನು ಈ ಬಿಲ್ವಸಸಿಗಳಿಗೆ ಗೊಬ್ಬರ ಕ್ಕಾಗಿ ಇಲ್ಲಿಗೆ ನಾನೇ ತಂದು ಹಾಕಿದ್ದೇನೆ. ಈ ಬೂದಿಯನ್ನೇ ಹಾಕಿ ಚಿಕ್ಕ ಗಿಡ ಗಳನ್ನು ಪೋಷಿಸಿ ದೊಡ್ಡದನ್ನಾಗಿ ಮಾಡುತ್ತಿದ್ದೇನೆ. ॥೨೯॥

ಈ ಬೂದಿರಾಶಿಯಲ್ಲೆಲ್ಲಾ ಕೈಯ್ಯಾಡಿರುವಂತೆ ತೋರುತ್ತಿದೆ. ನೀನೂ ಸಹ ಭಸ್ಮಧಾರಣೆಯನ್ನು ಮಾಡಿಕೊಂಡಿರುವುದನ್ನು ನೋಡಿದರೆ ನೀನು ಇದೇ ಬೂದಿ ಯನ್ನೇ ಹಚ್ಚಿಕೊಂಡಿರುವಂತೆ ಕಾಣುತ್ತಿದೆ. ॥೩೦॥

ತವ ಸ್ವರೂಪಂ ಕಿಂ ವಾ ಮೇ ವದ ಕಿಂ ಕಿನ್ನರಸ್ಸುರಃ ।
ಪ್ರವೇಶಸ್ತಾವದನ್ಯೇಷಾಂ ಯತ್ರ ನಾಸ್ತೀತಿ ಮೇ ಮತಿಃ ॥೩೧॥

ಇತಿ ತದ್ವಚನಂ ಶ್ರುತ್ವಾ ಪೂರ್ವವೃತ್ತಾಂತಮೂದಿತಃ ।
ಸ ತಸ್ಮೈ ಪ್ರಾಹ ತೇನೈವ ವಿಸ್ಮಿತೋ ವನಪಾಲಕಃ ॥೩೨॥

ತತಃ ಪ್ರಭಾವಂ ಲಿಂಗಾನಾಂ ಲಿಂಗೇ ಬಿಲ್ವಾರ್ಪಣಸ್ಯ ಚ ।
ತದ್ಬಿಲ್ವಪೋಷಣಸ್ಯಾಪಿ ಪಪ್ರಚ್ಛ ವನಪಾಲಕಃ ॥೩೩॥

ಇತಿ ತದ್ವಚನಂ ಶ್ರುತ್ವಾ ಮುನಿರ್ಗತಭಯಸ್ತದಾ ।
ಚಕಾರ ಪರಮಪ್ರೀತ್ಯಾ ತತ್ಪ್ರಭಾವಾನುವರ್ಣನಂ ॥೩೪॥

ಶಿವಸ್ವರೂಪಾಣಿ ಕಿಲಾಮಲಾನಿ
ಲಿಂಗಾನಿ ಸರ್ವಾಣಿ ಶಿವಾರ್ಚನಂ ಚ ।

ಎಲೈ ಮುನಿಯೇ! ನೀನು ಯಾರು? ದೇವತೆಯೋ ಅಥವಾ ಕಿನ್ನರನೋ? ಬಹುಶಃ ಮನುಷ್ಯನಲ್ಲವೆಂದು ನಾನು ಊಹಿಸುತ್ತೇನೆ. ಏಕೆಂದರೆ ಈ ವನಕ್ಕೆ ಯಾವ ಮನುಷ್ಯನೂ ಪ್ರವೇಶಿಸಲಾರನು. ಆದುದರಿಂದ ನೀನು ಯಾರು? ॥೩೧॥

ಈ ಪ್ರಕಾರವಾಗಿ ವನಪಾಲಕನು ಪ್ರಶ್ನೆಮಾಡಲು ಶಿವಘುಂಥಿಯು ತನ್ನ ವೃತ್ತಾಂತವನ್ನು ಮೊದಲಿಂದ ಎಲ್ಲವನ್ನೂ ಹೇಳಿದನು. ಅದನ್ನೆಲ್ಲಾ ಕೇಳಿ ಆ ವನ ಪಾಲಕನಿಗೆ ಅತ್ಯಂತ ಆಶ್ಚರ್ಯವುಂಟಾಯಿತು. ॥೩೨॥

ಅನಂತರ ಆತನು ಶಿವಲಿಂಗಗಳ ಮಹಿಮೆಯನ್ನೂ, ಬಿಲ್ವಾರ್ಚನೆಯ ಫಲ ವನ್ನೂ, ಬಿಲ್ವವನವನ್ನು ಪೋಷಿಸುವುದರಿಂದ ಉಂಟಾಗುವ ಫಲವನ್ನೂ ಸಹ ವಿವರ ವಾಗಿ ತನಗೆ ಹೇಳಬೇಕೆಂದು ಕೇಳಿಕೊಂಡನು. ॥೩೩॥

ಈರೀತಿ ವನಪಾಲಕನು ವಿನಯದಿಂದ ಕೇಳಿಕೊಳ್ಳಲು ಶಿವಘುಂಥಿಗೆ ಹೆದರಿಕೆಯು ತಪ್ಪಿ ಧೈರ್ಯ ಬಂದಿತು. ಆತನು ಸಂತೋಷದಿಂದ ಆ ಶಿವಲಿಂಗಾದಿ ಗಳ ಮಹಿಮೆಯನ್ನು ವರ್ಣಿಸತೊಡಗಿದನು. ॥೩೪॥

ಎಲೈ ವನಪಾಲಕನೇ! ಕೇಳು. ಲಿಂಗಗಳೆಂದರೆ ಸಾಮಾನ್ಯವಾದವುಗಳಲ್ಲ. ಸಾಕ್ಷಾತ್ ಪರಮೇಶ್ವರನ ಸ್ವರೂಪವೇ ಶಿವಲಿಂಗಗಳಾಗಿರುತ್ತವೆ. ಅಂಥ ಶಿವಲಿಂಗಕ್ಕೆ ಯಾವುದನ್ನೇ ಅರ್ಚಿಸಿದರೂ ಅರ್ಪಿಸಿದರೂ ಅದು ಶಿವಾರಾಧನೆ ಎಂದೆನಿಸುವುದು.

ಲಿಂಗೇ ಕೃತಂ ಸರ್ವದಮಿತ್ಯನೈಮಿ
ಲಿಂಗಾರ್ಚನೇನಾಽಪಿ ಸಮೋ ನ ಧರ್ಮಃ ॥೩೫॥

ಅಪಾರಪುಣ್ಯೈಶ್ಶಿವಪೂಜನೇಷು
ಭಕ್ತಿರ್ಭವಾಂಭೋಧಿವಿನಾಶನಾಯ ।
ಭವಿಷ್ಯತೀತಿ ಸ್ಫುಟಮೇವ ಮನ್ಯೇ
ನ ತೇನ ಧರ್ಮೇಣ ಸಮೋಽಸ್ತಿ ಧರ್ಮಃ ॥೩೬॥

ಸಂಸಾರಾಘಕುಲಾಂಬುರಾಶಿರಸಕೃತ್ಕಂಪಂ ವಿಧತ್ತೇ ಮುಹುಃ
ಕಾಲೇಽಪಿ ತ್ರಿಪುರಾರಿಪೂಜನರತೋ ಬಿಲ್ವೀದಲೈಃ ಕೋಮಲೈಃ ।
ಲಿಂಗೇ ತುಂಗಸರಿತ್ತರಂಗನಿಕರವ್ಯಾಪ್ತೇ ಸಕೃದ್ವಾ ಸುರಾಃ
ಸರ್ವೇ ತತ್ಪದಪೂಜನಾಯ ಸತತಂ ಕುರ್ವಂತಿ ಯತ್ನಾನಪಿ ॥೩೭॥

ಆ ಶಿವಲಿಂಗಾರ್ಚನೆಯಿಂದ ಸಮಸ್ತ ಸೌಭಾಗ್ಯಗಳೂ ಲಭಿಸುವುವು. ಲಿಂಗಾರ್ಚನೆಗೆ ಸಮಾನವಾದ ಶ್ರೇಷ್ಠಧರ್ಮವು ಬೇರೆ ಒಂದೂ ಇರುವುದಿಲ್ಲ. ಎಲ್ಲಾಧರ್ಮಗಳಿಗಿಂತಲೂ ಶಿವಲಿಂಗಾರ್ಚನ ಧರ್ಮವೇ ಅತ್ಯುತ್ತಮವಾದುದು. ॥೩೫॥

ಅನೇಕ ಪುಣ್ಯರಾಶಿಗಳು ಮೊದಲು ಸಂಚಿತವಾಗಿದ್ದರೆ ಮಾತ್ರ ಶಿವಪೂಜೆಯಲ್ಲಿ ಭಕ್ತಿಯುಂಟಾಗುವುದು. ಅದೇ ಶಿವಪೂಜೆಯಿಂದ ಈ ಸಾಂಸಾರಿಕ ತಾಪತ್ರಯಗಳೆಲ್ಲಾ ನಾಶಹೊಂದುವುವು. ಈ ಸಂಸಾರ ಬಂಧನದಿಂದ ಪಾರಾಗಲು ಎಷ್ಟು ಪುಣ್ಯಗಳು ಬೇಕೋ ಅಷ್ಟೂ ಇದ್ದರೆ ಮಾತ್ರ ಶಿವಲಿಂಗಪೂಜೆಯಲ್ಲಿ ಪ್ರವೃತ್ತಿಯುಂಟಾಗುವುದು. ಅನ್ಯಥಾ ಭಕ್ತಿ ಲಭಿಸುವುದೇ ಇಲ್ಲ. ಈ ಶಿವಲಿಂಗಪೂಜೆಯಿಂದ ಮೋಕ್ಷವೇ ಲಭಿಸುವುದು. ಏಕೆಂದರೆ ಇದೇ ಅತ್ಯುತ್ತಮ ಧರ್ಮವಾಗಿರುವುದು. ಇದಕ್ಕೆ ಸಮಾನವಾದ ಧರ್ಮವೇ ಬೇರೊಂದಿಲ್ಲ. ॥೩೬॥

ಈ ಸಂಸಾರವೆಂಬುದು ಒಂದು ಸಮುದ್ರವಿದ್ದಂತೆ ಇರುತ್ತದೆ. ಅದರಲ್ಲೂ ಆಗಾಗ ದೊಡ್ಡ ದೊಡ್ಡ ಉತ್ಪಾತಗಳೂ ಕಷ್ಟಗಳೂ ಸಂಭವಿಸುತ್ತವೆ. ಇದನ್ನು ಅರಿತುಕೊಂಡು ಇದರಿಂದ ಪಾರಾಗಲು ಶಿವಾರಾಧನೆಯನ್ನೇ ಮಾಡಬೇಕು. ಕಾಲಕಾಲದಲ್ಲಿ ನದೀಜಲದಿಂದ ಶಿವಲಿಂಗಕ್ಕೆ ಅಭಿಷೇಕವನ್ನು ಮಾಡಿ ಕೋಮಲವಾದ ಬಿಲ್ವದಳಗಳಿಂದ ಅರ್ಚನೆಯನ್ನು ಮಾಡುತ್ತಿದ್ದರೆ ಈ ಸಂಸಾರ ಸಾಗರದಿಂದ ದಾಟ

ಲಿಂಗಾರಾಧನಮೇವ ಕೇವಲಮುಮಾಕಾಂತಪ್ರಿಯಂ ಮುಕ್ತಿದಂ
ಮನ್ಯೇ ಪಾಪಹರಂ ಚ ಸಂತತಮಿದಂ ಬಿಲ್ವೀದಲೈಃ ಕೋಮಲೈಃ।
ಕರ್ತವ್ಯಂ ಸಕೃದೇವ ವಾ ಸಭಸಿತೈರ್ಜೇತುಂ ಯಮಂ ಶಾಂಭವಂ
ಸಂಪ್ರಾಪ್ತುಂ ಪದಮಪ್ಯಸಾರವಿಭವಂ ಸತ್ಯಂ ತ್ರಿಸತ್ಯಂ ಪರಂ ॥೩೮॥

ಭಸ್ಮಾಲಂಕೃತದೇಹಮನ್ವಹಮುಮಾಕಾಂತಸ್ಯ ಬಿಲ್ವೀದಳೈಃ
ದೃಷ್ಟ್ವಾ ಪಾಪಮಹಾಂಬುರಾಶಿಕುಲಮಪ್ಯಾಮೂಲಲೂನಂ ಭವೇತ್।
ದುಃಖಾಬ್ಧಿಃ ಪ್ರಲಯಂ ಪ್ರಯಾತ್ಯಪಿ ಭಟಾಃ ಕಾಲಸ್ಯ ದೂರಂ ಪರಂ
ಯಾಂತ್ಯೇವಾಶು ಶಿವಾರ್ಚನೋದ್ಯತಮತಿಂ ತಸ್ಮಾತ್ಸರ್ವೈಃ ಪೂಜ್ಯತೇ॥೩೯॥

ಹೋಗಬಹುದು. ಶಿವಲಿಂಗಾರ್ಚನೆಯಾದರೋ ಸಾಮಾನ್ಯವಾದುದಲ್ಲ. ಈ ಅರ್ಚನೆಯನ್ನು ದೇವತೆಗಳೂ ಸಹ ಮಾಡಬೇಕೆಂದು ಬಹು ಪ್ರಯತ್ನಿಸುತ್ತಾರೆ. ||೩೭||

ಶಿವಲಿಂಗಾರಾಧನೆಯೊಂದೇ ಪರಮೇಶ್ವರನಿಗೆ ಪ್ರಿಯವಾದುದು. ಈ ಕ್ರಮದಿಂದ ಪೂಜಿಸಿದರೇ ಶಿವನು ಸಂತೃಪ್ತನಾಗುವನು. ಕೋಮಲವಾದ ಬಿಲ್ವದಳಗಳಿಂದಲೂ ಭಸ್ಮರುದ್ರಾಕ್ಷಗಳಿಂದಲೂ ಶಿವಲಿಂಗವನ್ನು ಅರ್ಚಿಸಬೇಕು, ಒಂದುಸಲವಾಗಲೀ ಅನೇಕಾವರ್ತಿಯಾಗಲಿ ಪೂಜಿಸಿದರೂ ಸಕಲ ಪಾಪಗಳೂ ನಾಶವಾಗುವುವು. ವಿಶಾಲವಾದ ಸಂಪತ್ತುಗಳು ಲಭಿಸುವುವು. ಇದರಿಂದ ಮೃತ್ಯುವನ್ನು ಸಹ ಜಯಿಸಬಹುದು. ಪರಮಪದವನ್ನು ಪಡೆಯಬೇಕೆಂಬ ಅಪೇಕ್ಷೆಯಿಂದ ಶಿವಲಿಂಗವನ್ನು ಆರಾಧಿಸಿದರೆ ಮೋಕ್ಷವೂ ದೊರೆಯುವುದು. ಇವೆಲ್ಲವೂ ಲಿಂಗಾರಾಧನೆಯ ಫಲಗಳು. ಇದು ಸತ್ಯವೆಂದು ಮೂರಾವರ್ತಿ ಶಪಥಮಾಡಿ ಹೇಳುವೆನು. ||೩೮||

ಪ್ರತಿದಿನವೂ ಬಿಲ್ವಾದಿಗಳಿಂದಲೂ ಭಸ್ಮಾದಿಗಳಿಂದಲೂ ಪರಿಷ್ಕಾರವಾಗಿ ಶಿವಲಿಂಗವನ್ನು ಸಂಪೂಜಿಸಿ ದರ್ಶನಮಾಡುತ್ತಿದ್ದರೆ ಮಹಾಪಾಪರಾಶಿಗಳೂ ಸಹ ಮೂಲಸಹಿತವಾಗಿ ನಾಶವಾಗುತ್ತವೆ. ಪಾಪವಾಸನೆಯೂ ಸಹ ಉಳಿಯುವುದಿಲ್ಲ. ಸಕಲ ತಾಪತ್ರಯಗಳೂ ದೂರವಾಗುವುವು. ಶಿವಾರಾಧನೆಯಲ್ಲಿ ಯಾರ ಮನಸ್ಸು ಲೀನವಾಗಿರುತ್ತದೆಯೋ ಅವರನ್ನು ಕಂಡೊಡನೆಯೇ ಯಮದೂತರು ಬಹು ದೂರಕ್ಕೆ ಓಡಿಹೋಗುತ್ತಾರೆ. ಹತ್ತಿರಕ್ಕಂತೂ ಬರುವುದೇ ಇಲ್ಲ. ಶಿವಾರಾಧನೆಯು ಇಷ್ಟು ಮಹತ್ತಮವಾದ್ದರಿಂದಲೇ ದೇವತೆಗಳೂ ಕೂಡ ಇದನ್ನು ಸದಾ ಮಾಡುತ್ತಿರುವರು. ||೩೯||

ಲಿಂಗಾರಾಧನಪುಣ್ಯರಾಶಿಜಫಲಂ ವಕ್ತುಂ ನ ಶಕ್ತಾಸ್ಸುರಾಃ
ಸೇಂದ್ರೋಪೇಂದ್ರಪುರೋಗಮಾ ಅಪಿ ತಥಾ ಸಿದ್ಧಾಃ ಪ್ರಸಿದ್ಧಾ ಅಪಿ ।
ಗಂಧರ್ವಾ ಅಪಿ ಕಿನ್ನರಾ ಅಪಿ ಗಣೈರ್ಜ್ಞೇಯೋ ನ ನಾಥ ತ್ವಯಾ
ವೇದೈರ್ವಾ ಗಿರಿಶಃ ಪರಂ ಸುರವರೋ ಜಾನಾತಿ ತತ್ವಂ ಪರಂ ॥೪೦॥

ಅನ್ಯಾರ್ಚಿತಾನಿ ವಾ ದೃಷ್ಟ್ವಾ ಲಿಂಗಾನಿ ಪರಯಾ ಮುದಾ ।
ದೇಹಾಂತೇ ಶಾಂಕರಂ ಸ್ಥಾನಂ ಪ್ರಾಪ್ನುವಂತಿ ನ ಸಂಶಯಃ ॥೪೧॥

ಪ್ರಾತಃ ಪೂಜಿತಮಾಲೋಕ್ಯ ಶಿವಲಿಂಗಂ ಶಿವಾತ್ಮಕಂ ।
ಭವೇದ್ರಾತ್ರಿಕೃತೈಃ ಪಾಪೈರ್ವಿಮುಕ್ತೋ ವಿವಿಧೈರಪಿ ॥೪೨॥

ಲಿಂಗಂ ಮಧ್ಯಾಹ್ನಕಾಲೇಽಪಿ ಪೂಜಿತಂ ಯಸ್ತು ಪಶ್ಯತಿ ।
ಸ ಪೂರ್ವಾಹ್ಣಕೃತೈಃ ಪಾಪೈಸ್ಸರ್ವೈರೇವ ಪ್ರಮುಚ್ಯತೇ ॥೪೩॥

ಅಯ್ಯಾ ಉದ್ಯಾನಪಾಲಕನೇ, ಆ ಲಿಂಗಾರಾಧನೆಯ ಪುಣ್ಯವನ್ನೂ ಫಲವನ್ನೂ ನಾನು ತಿಳಿದುಕೊಂಡಿರುವುದೇನು? ಅದನ್ನು ಹೇಳುವುದೆಂದರೇನು? ಇದೆಲ್ಲಾ ಅಸಾಧ್ಯವಾದುದೇ ಸರಿ. ಆ ಪುಣ್ಯಫಲಗಳು ಎಷ್ಟು ಮಹತ್ತಮವಾಗಿವೆ ಎಂಬುದನ್ನು ದೇವತೆಗಳು, ದೇವೇಂದ್ರ, ವಿಷ್ಣು ಮುಂತಾದವರೇ ತಿಳಿದಿರುವುದಿಲ್ಲ. ಅದರ ವಿಚಾರ ಸಿದ್ಧರಿಗಾಗಲಿ ಗಂಧರ್ವಾದಿಗಾಗಲಿ ಕಿನ್ನರ ಕಿಂಪುರುಷರಿಗಾಗಲಿ ಗೊತ್ತಿರುವುದಿಲ್ಲ. ಸಾಕ್ಷಾತ್ ಪರಮೇಶ್ವರನ ಬಳಿ ಸೇವೆಮಾಡಿಕೊಂಡಿರುವ ಶಿವಗಣಗಳಿಗೂ ಅದಕ್ಕಿಂತಲೂ ಮಿಗಿಲೆಂದರೆ ವೇದಗಳಿಗೂ ಅದು ಗೋಚರವಾಗಿರುವುದಿಲ್ಲ. ಇದರ ತತ್ವವನ್ನು ಆ ದೇವೋತ್ತಮನಾದ ಸದಾಶಿವನೊಬ್ಬನೇ ತಿಳಿದಿರುವನು. ॥೪೦॥

ಇತರರು ಪೂಜಿಸಿ ಅಲಂಕರಿಸಿರುವ ಶಿವಲಿಂಗವನ್ನು ಭಕ್ತಿಯಿಂದ ದರ್ಶನಮಾಡಿದರೂ ದೇಹಾಂತ್ಯದಲ್ಲಿ ಶಿವಸ್ಥಾನವಾದ ಕೈಲಾಸವನ್ನೇ ಪಡೆಯುವರೆಂಬುದರಲ್ಲಿ ಸಂದೇಹವೇ ಇಲ್ಲ. ॥೪೧॥

ಪ್ರಾತಃಕಾಲದಲ್ಲಿ ಶಿವಲಿಂಗವನ್ನು ಸಂಪೂಜಿಸಿ ಸಂದರ್ಶನಮಾಡಿದವನು ರಾತ್ರಿಯಲ್ಲಿ ಸಂಭವಿಸಿದ ಸಕಲ ವಿಧವಾದ ಪಾಪಗಳಿಂದಲೂ ಮುಕ್ತನಾಗುವನು. ॥೪೨॥

ಮಧ್ಯಾಹ್ನಕಾಲದಲ್ಲಿ ಸಂಪೂಜಿತವಾದ ಶಿವಲಿಂಗದ ದರ್ಶನದಿಂದ ಪೂರ್ವಾಹ್ಣದಲ್ಲಿ ಸಂಭವಿಸಿದ ಸಕಲ ಪಾಪಗಳೂ ನಾಶವಾಗುತ್ತವೆ. ॥೪೩॥

ಪ್ರದೋಷಕಾಲೇ ಯಃ ಪಶ್ಯೇಚ್ಛಿವಲಿಂಗಂ ಸಮರ್ಚಿತಂ ।
ಸ ಸಪ್ತಕಲ್ಪಪರ್ಯಂತಕೃತೈಃ ಪಾಪೈಃ ಪ್ರಮುಚ್ಯತೇ ॥೪೪॥

ಯತ್ಪುಣ್ಯಂ ಜಾಯತೇ ಭಕ್ತ್ಯಾ ಶಿವಲಿಂಗಾವಲೋಕನೇ ।
ತತ್ಪುಣ್ಯಮಂತರಹಿತಂ ಭುಕ್ತಿಮುಕ್ತಿಪ್ರದಂ ನೃಣಾಂ ॥೪೫॥

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ ।
ಶೃಣು ತಂ ಸಾವಧಾನೇನ ಮಹಾಪಾಪವಿನಾಶಕಂ ॥೪೬॥

ಪುರಾ ಕಶ್ಚಿದಭೂದ್ರಾಜಾ ವಿಂಧ್ಯಶೈಲಸಮಾಶ್ರಿತಃ ।
ಸ ಸರ್ವಭಾಗ್ಯಸಂಪನ್ನಸ್ಸುಂದರಶ್ಚ ವಿಶೇಷತಃ ॥೪೭॥

ಪ್ರದೋಷಸಮಯದಲ್ಲಿ (ಸಾಯಂಕಾಲ) ಶಿವಲಿಂಗವನ್ನು ಸಂಪೂಜಿಸಿ ಭಕ್ತಿಯಿಂದ ದರ್ಶನಮಾಡಿದರೆ ಏಳುಕಲ್ಪಗಳಿಂದ ಸಂಚಿತವಾದ ಸಕಲ ಪಾಪಗಳೂ ನಾಶವಾಗುತ್ತವೆ. ಇದರಲ್ಲಿ ಸಂದೇಹ ಬೇಡ. ||೪೪||

ಶಿವಲಿಂಗದ ದರ್ಶನದಿಂದ ಎಷ್ಟು ಪುಣ್ಯವು ಲಭಿಸುವುದೋ ಅದನ್ನು ಇಷ್ಟೆಂದು ಹೇಳಲು ಸಾಧ್ಯವಿರುವುದಿಲ್ಲ. ಅದಕ್ಕೆ ಕೊನೆಯೇ ಇರುವುದಿಲ್ಲ. ಅದು ಅನಂತವಾದುದು. ಮನುಷ್ಯರಿಗೆ ಇಹದಲ್ಲಿ ಸಮೃದ್ಧವಾಗಿ ಅನ್ನಾಹಾರಗಳನ್ನೂ ಪರದಲ್ಲಿ ಮೋಕ್ಷಪದವಿಯನ್ನೂ ಪ್ರದಾನಮಾಡುವುದೆಂಬುದಿಷ್ಟನ್ನು ಮಾತ್ರ ಸಂಕ್ಷೇಪ ವಾಗಿ ಹೇಳಬಹುದು. ||೪೫||

ಈ ವಿಚಾರವನ್ನು ತಿಳಿದವರು ಒಂದು ಪುರಾತನವಾದ ಕಥೆಯನ್ನು ಹೇಳು ವರು. ಎಲೈ ವನಪಾಲಕನೇ! ಅದೇ ಇತಿಹಾಸವನ್ನು ನಾನೂ ಹೇಳುವೆನು. ಅದು ಮಹತ್ತರವಾದುದು. ಇದನ್ನು ಕೇಳಿದ ಮಾತ್ರದಿಂದಲೇ ಮಹಾಪಾಪಗಳೂ ಸಹ ನಾಶಹೊಂದುವುವು. ನೀನೂ ಸಹ ಇದನ್ನು ಗಮನಿಸಿ ಕೇಳು. ||೪೬||

ಪೂರ್ವಕಾಲದಲ್ಲಿ ಒಬ್ಬ ರಾಜನಿದ್ದನು. ಅವನು ವಿಂಧ್ಯಪರ್ವತದ ಪ್ರದೇಶ ದಲ್ಲಿ ವಾಸಿಸುತ್ತಿದ್ದನು. ಆತನು ಸಕಲೈಶ್ವರ್ಯಸಂಪನ್ನನಾಗಿದ್ದನಲ್ಲದೇ ಅತ್ಯಂತ ಸುಂದರನೂ ಆಗಿದ್ದನು. ||೪೭||

ತಸ್ಯಾಸೀದ್ಯಾವದೈಶ್ವರ್ಯಂ ತಾವನ್ನಾನ್ಯಸ್ಯ ಭೂತಲೇ ।
ತಸ್ಯ ಕನ್ಯಾಪ್ಯಭೂತ್ಕಾಪಿ ಸಾ ನಾಮ್ನಾ ವರವರ್ಣಿನೀ ॥೪೮॥

ಸಾ ಯೌವನಂ ಸಮಾಸಾದ್ಯ ರಂಭಾಧಿಕ್ಕಾರಕಾರಿಣೀ ।
ಸೌಂದರ್ಯವಾಹಿನೀರೂಪಾ ರೂಪೇಣಾಪ್ರತಿಮೇವ ಸಾ ॥೪೯॥

ತಾಂ ಕದಾಚಿತ್ಸಮಾಲೋಕ್ಯ ರತ್ನಪ್ರಾಸಾದಮಂಟಪೇ ।
ರಾಜಾ ಸಹ ತಯಾ ಪ್ರೀತ್ಯಾ ರೇಮೇ ರತಿವಿಶಾರದಃ ॥೫೦॥

ಸ ಸರ್ವದಾಪಿ ತತ್ರೈವ ಕಾರ್ಯಾಂತರವಿವರ್ಜಿತಃ ।
ಚಕ್ರೇ ತಯಾ ಸಹ ಕ್ರೀಡಾಂ ವ್ರೀಡಾಮಾತ್ರವಿವರ್ಜಿತಃ ॥೫೧॥

ತಸ್ಮಿನ್ ವಿಂಧ್ಯಾಚಲೇ ಲಿಂಗಂ ತಸ್ಯ ಶೃಂಗೇ ಮನೋಹರೇ ।
ಉತ್ತುಂಗತುಂಗಮುತ್ಕೃಷ್ಟಂ ಸ್ಥಿತಂ ಗಂಧರ್ವಪೂಜಿತಂ ॥೫೨॥

ಆ ರಾಜನಿಗಿರುವಷ್ಟು ವಿಶಾಲವಾದ ಸಂಪತ್ತು ಇಡೀ ಪೃಥ್ವಿಯಲ್ಲಿಯೇ ಬೇರೆ ಯಾರಿಗೂ ಇರಲಿಲ್ಲ. ಆತನು ಅಷ್ಟು ಸಿರಿವಂತನಾಗಿದ್ದನು. ಆತನಿಗೆ ವರವರ್ಣಿನೀ ಎಂಬ ಒಬ್ಬ ಮಗಳಿದ್ದಳು. ||೪೮||

ಆ ವರವರ್ಣಿನಿಯು ಸ್ವಾಭಾವಿಕವಾಗಿಯೇ ಸುಲಕ್ಷಣಸಂಪನ್ನೆಯಾಗಿದ್ದಳು. ಯೌವನಾವಸ್ಥೆಯು ಪ್ರಾಪ್ತವಾದ ಕೂಡಲೇ ಆಕೆಯ ಸೌಂದರ್ಯವು ಪ್ರವಾಹದಂತೆ ಸ್ವಚ್ಛವಾಗಿ ಹೊರಹೊಮ್ಮುತ್ತಿದ್ದಿತು. ಆಕೆಯು ತನ್ನ ಸೌಂದರ್ಯದಿಂದ ಅಪ್ಸರೆಯರನ್ನೂ ರಂಭೆಯನ್ನೂ ಸಹ ತಿರಸ್ಕರಿಸುತ್ತಿದ್ದಳು. ಅಷ್ಟು ರೂಪದಲ್ಲಿ ಅಸದೃಶಳೇ ಆಗಿದ್ದಳು. ||೪೯||

ಒಂದು ದಿವಸ ಆಕೆಯು ರತ್ನಮಯವಾದ ಉಪ್ಪರಿಗೆಯ ಮಂಟಪದಲ್ಲಿ ವಿಲಾಸದಿಂದ ಕುಳಿತುಕೊಂಡಿರಲು ಆಕೆಯನ್ನು ನೋಡಿ ಆ ಕಾಮುಕನಾದ ರಾಜನು ತನ್ನ ಮಗಳಲ್ಲೇ ಮೋಹಿತನಾಗಿ ಪ್ರೀತಿಯಿಂದ ಅವಳೊಡನೆ ಸಂಭೋಗ ಕ್ರೀಡೆಯನ್ನು ಅನುಭವಿಸಿದನು. ||೫೦||

ಆ ರಾಜನು ಬೇರೆ ಎಲ್ಲಾ ಕೆಲಸಗಳನ್ನೂ ಬಿಟ್ಟು ಸರ್ವದಾ ಆ ಮಗಳೊಡನೆಯೇ ರತಿಕ್ರೀಡೆಗಳಲ್ಲಿ ಆಸಕ್ತನಾಗಿದ್ದನು. ಆತನಿಗೆ ಲಜ್ಜೆಯ ಲವಲೇಶವೂ ಇರಲಿಲ್ಲ. ||೫೧||

ಆ ರಾಜನ ಅರಮನೆಯು ವಿಂಧ್ಯಪರ್ವತದಲ್ಲಿಯೇ ಇದ್ದಿತು. ಅದೇ

ತತ್ಪ್ರಭೃತಿ ಪ್ರಗೇ ರಾಜಾ ತತ್ಪ್ರಾಸಾದವರಾಶ್ರಿತಃ ।
ಮಧ್ಯಾಹ್ನೇಽಪಿ ವಿಶೇಷೇಣ ಪ್ರದೋಷೇಽಪಿ ಸಮರ್ಚಿತಂ ॥೫೩॥

ಕಾಲಾಂತರೇ ರತಿಂ ಕೃತ್ವಾ ಸರ್ವದಾ ನಿಜಕನ್ಯಯಾ ।
ಸ್ಥಿತಃ ಪಾಪಸಮುತ್ಪನ್ನಭಯಮಾತ್ರವಿವರ್ಜಿತಃ ॥೫೪॥

ತಸ್ಯೈ ಪ್ರದರ್ಶಯತ್ಯಾದೌ ಶಿವಲಿಂಗಂ ಮನೋಹರಂ ।
ಕುಚಾಕಾರಮಿದಂ ಪಶ್ಯ ಲಿಂಗಮಿತ್ಯತಿಸಾದರಂ ॥೫೫॥

ತಲ್ಲಿಂಗಂ ಕುಚಸಂಕಾಶಮಿತಿ ಪ್ರೀತ್ಯಾ ಸಚಂದನಂ ।
ದಾಪಯತ್ಯತಿಯತ್ನೇನ ಕಸ್ತೂರೀಕರ್ದಮಾನ್ವಿತಂ ॥೫೬॥

ಅರಮನೆಯ ಶಿಖರದಲ್ಲಿ ಒಂದು ಶಿವಲಿಂಗವೂ ಇದ್ದಿತು. ಆ ಉನ್ನತವಾದ ಲಿಂಗಕ್ಕೆ ನಿತ್ಯವೂ ಒಬ್ಬ ಗಂಧರ್ವನು ಬಂದು ಪೂಜಿಸುತ್ತಿದ್ದನು. ||೫೨||

ಅದೇ ಉಪ್ಪರಿಗೆಯಲ್ಲಿ ರಾಜನು ಇದ್ದುದರಿಂದ ಆ ಶಿವಲಿಂಗವು ಆತನ ದೃಷ್ಟಿಗೆ ಆಗಾಗ ಬೀಳುತ್ತಿತ್ತು. ಆತನು ಮೂರುಹೊತ್ತು ತಪ್ಪದೇ ಆ ಶಿವಲಿಂಗವನ್ನು ನೋಡುತ್ತಿದ್ದನು. ||೫೩||

ಉಳಿದ ಕಾಲದಲ್ಲೆಲ್ಲಾ ಸರ್ವದಾ ಆ ರಾಜನಿಗೆ ತನ್ನ ಮಗಳೊಂದಿಗೆ ರಮಿಸಿ ಕ್ರೀಡಿಸುವುದೇ ಕೆಲಸವಾಗಿದ್ದಿತು. ಆತನಿಗೆ ಪಾಪದ ಯೋಚನೆಯಾಗಲಿ ಆದರಿಂದ ಹೆದರಿಕೆಯಾಗಲೀ ಏನೂ ಇರಲಿಲ್ಲ. ಹೀಗೆಯೇ ಆತನ ಕಾಲವು ಕಳೆಯುತ್ತಿದ್ದಿತು. ||೫೪||

ಆ ರಾಜನು ಆ ಶಿವಲಿಂಗವನ್ನು ವರವರ್ಣಿನಿಗೆ ತೋರಿಸುತ್ತಾ ಹೀಗೆ ಹೇಳುವನು. ನೋಡು. ಪ್ರಿಯೆ, ಈ ಲಿಂಗವು ನಿನ್ನ ಸ್ತನದಂತೆ ಸುಂದರವಾಗಿದೆ. ||೫೫||

ಶಿವಲಿಂಗವು ಸ್ತನದಂತಿರುವುದೆಂದು ಪರಿಹಾಸಮಾಡುತ್ತಾ ವಿನೋದಕ್ಕಾಗಿ ಸ್ತನಗಳನ್ನು ಅಲಂಕರಿಸುವಂತೆ ಲಿಂಗವನ್ನೂ ಅಲಂಕರಿಸಲು, ಅದರಮೇಲೆ ಚಂದನವನ್ನೂ ಕಸ್ತೂರಿ ಮುಂತಾದ ಸುಗಂಧದ್ರವ್ಯಗಳನ್ನೂ ಹಚ್ಚುತ್ತಿದ್ದನು. ||೫೬||

ಪುಷ್ಪಮಾಲಾಪರಿವೃತಂ ಕಾರಯತ್ಯಪಿ ಭೂಪತಿಃ ।
ವಿನೋದಂ ಚ ಕರೋತ್ಯೇವ ಪಶ್ಯ ಪಶ್ಯೇತಿ ತನ್ಮುಹುಃ ॥೫೭॥

ತೇನ ಪಾಪಾನ್ಯಪಾರಾಣಿ ತದನ್ಯಾನಿ ಕೃತಾನ್ಯಪಿ ।
ತತ್ಸಂಖ್ಯಾಕರಣಂ ತಾವದಶಕ್ಯಮಿತಿ ನಿಶ್ಚಿತಂ ॥೫೮॥

ತತಸ್ತಾಂ ದೈವಯೋಗೇನ ಕದಾಚಿದ್ವರವರ್ಣಿನೀಂ ।
ಮೃತಾಂ ತಾಂ ಸ ಸಮಾಲೋಕ್ಯ ಮಗ್ನೋ ದುಃಖಾಂಬುಧೌ ನೃಪಃ ॥೫೯॥

ತತ ಸ್ಸ ತೇನ ದುಃಖೇನ ಮೃತೋ ರಾಜಾಪಿ ತತ್ಕ್ಷಣೇ ।
ತದಾನೀಮಾಗತಾಃ ಕ್ರೂರಾಃ ಪ್ರಬಲಾಃ ಕಾಲಕಿಂಕರಾಃ ॥೬೦॥

ತಯಾ ಸಹ ಮೃತಂ ದೃಷ್ಟ್ವಾ ಧರ್ಮಲೇಶವಿವರ್ಜಿತಂ ।
ನೇತುಂ ಸಮುದ್ಯತಾಸ್ಸರ್ವೇ ಮತ್ವಾ ಭ್ರಾಂತ್ಯಾ ಪ್ರಯತ್ನತಃ ॥೬೧॥

ಆ ಲಿಂಗದ ಮೇಲೆ ಹೂಗಳ ಹಾರವನ್ನೂ ಹಾಕಿಸಿ ವಿನೋದ ಪ್ರದರ್ಶಿಸಿ ವರವರ್ಣಿನಿಯೊಡನೆ ನೋಡು ಪ್ರಿಯೆ, ನಿನ್ನ ಸ್ತನದಂತೆಯೇ ಈ ಲಿಂಗವು ಕಾಣುತ್ತಿದೆ. ನೋಡು ಎಂದು ಪದೇ ಪದೇ ವಿನೋದದಿಂದ ನಗುತ್ತಿದ್ದನು. ॥೫೭॥

ಆತನು ಮಗಳನ್ನು ರಮಿಸಿದ ಪಾಪ ಒಂದನ್ನಲ್ಲದೇ ಇನ್ನೂ ಎಷ್ಟೋ ಪಾಪಕಾರ್ಯಗಳನ್ನು ಮಾಡಿದ್ದನು. ಅವುಗಳನ್ನು ಎಣಿಸುವುದಕ್ಕಂತೂ ಖಂಡಿತ ಸಾಧ್ಯವೇ ಇರಲಿಲ್ಲ. ॥೫೮॥

ಹೀಗೆಯೇ ಕಾಲಕಳೆಯುತ್ತಿರಲು ದೈವವಶಾತ್ ಒಂದು ದಿನ ಆ ವರವರ್ಣಿನಿಯು ಮೃತಳಾದಳು. ಇದನ್ನು ನೋಡಿ ಆ ರಾಜನು ದುಃಖಸಾಗರದಲ್ಲಿ ಮುಳುಗಿಯೇ ಹೋದನು. ॥೫೯॥

ಆ ರಾಜನು ಹೀಗೆಯೇ ದುಃಖದಿಂದ ಗೋಳಿಡುತ್ತಾ ಅದೇ ಶೋಕಾತಿರೇಕದಿಂದ ಕೂಡಲೇ ಸತ್ತು ಹೋದನು. ಆಗ ಆ ಪಾಪಿನಿಯಾದ ವರವರ್ಣಿನಿಯನ್ನು ನರಕಕ್ಕೆ ಒಯ್ಯಬೇಕೆಂದು ಕ್ರೂರರಾದ ಯಮದೂತರು ರಭಸದಿಂದ ಕೋಲಾಹಲ ಮಾಡುತ್ತಾ ಅಲ್ಲಿಗೆ ಬಂದರು. ॥೬೦॥

ಅಲ್ಲಿ ನೋಡಲು ಆ ವರವರ್ಣಿನಿಯೊಡನೆಯೇ ರಾಜನೂ ಸತ್ತಿದ್ದನು. ಆಗ ಆ ಯಮದೂತರು, ಆಹಾ, ಇರಲಿ, ಈತನೂ ಪರಮಪಾಪಿಯೇ ಆಗಿದ್ದಾನೆ.

ತದಾನೀಮಾಗತಾ ಏವ ಕೋಟಿಶಶ್ಶಿವಕಿಂಕರಾಃ ।
ವಿಮಾನೇ ತಂ ಸಮಾರೋಪ್ಯ ಸತ್ವರಂ ಚಲಿತಾಶ್ಚ ತೇ ॥೬೨॥

ಹತ್ವಾ ತಾನ್ ಯಮದೂತಾಂಶ್ಚ ಪೂರ್ವಂ ತಂ ನೇತುಮುದ್ಯತಾನ್।
ತದ್ವಿಮಾನಂ ಯಮೋ ದೃಷ್ಟ್ವಾ ವಿಸ್ಮಯಂ ಪರಮಂ ಗತಃ ॥೬೩॥

ತತಃಪರಂ ಚಿತ್ರಗುಪ್ತಂ ವಿಲೋಕ್ಯಾಹ ಯಮೋ ಮುದಾ ।
ಕಃ ಪುಣ್ಯವಾನ್ ಪ್ರಯಾತ್ಯತ್ರ ವಿಮಾನೇನೇತಿ ಸಾದರಂ ॥೬೪॥

॥ ಚಿತ್ರಗುಪ್ತ ಉವಾಚ ॥

ಯಮಾಯಮಖಿಲಾಘೌಘರಾಶಿರೇವ ತಥಾಪಿ ಸಃ ।
ಲಿಂಗಾವಲೋಕನಾದ್ಯಾತಿ ವಿಮಾನೇನ ಶಿವಾಲಯಂ ॥೬೫॥

ಈತನು ಧರ್ಮಗಳನ್ನೆಲ್ಲಾ ತ್ಯಜಿಸಿದ್ದನು. ಮಹಾಪಾಪವನ್ನು ಮಾಡಿದ್ದಾನೆ. ಎಂದು ಯೋಚಿಸಿ ಭ್ರಾಂತಿಯಿಂದ ಆತನನ್ನೂ ನರಕಕ್ಕೆ ಹೊತ್ತುಕೊಂಡು ಹೋಗಲು ಸಿದ್ಧರಾದರು. ||೬೧||

ಅಷ್ಟುಹೊತ್ತಿಗೆ ಸರಿಯಾಗಿ ಅನೇಕ ಶಿವದೂತರೂ ಅಲ್ಲಿಗೆ ಬಂದರು. ಅವರು ಬಂದ ಕೂಡಲೇ ರಾಜನನ್ನು ನರಕಕ್ಕೆ ಒಯ್ಯಬೇಕೆಂದು ಪ್ರಯತ್ನಿಸುತ್ತಿದ್ದ ಯಮದೂತರನ್ನೆಲ್ಲಾ ಹೊಡೆದು ಅಟ್ಟಿದರು. ಅನಂತರ ಆ ರಾಜನನ್ನು ವಿಮಾನದಲ್ಲಿ ಕುಳ್ಳಿರಿಸಿಕೊಂಡು ಶೀಘ್ರವಾಗಿ ಕೈಲಾಸಕ್ಕೆ ಹೊರಟರು. ಈ ಯಾವ ವಿಚಾರವೂ ಯಮನಿಗೆ ತಿಳಿದಿರಲಿಲ್ಲ. ||೬೨||

ಆ ಕೈಲಾಸಮಾರ್ಗದಲ್ಲಿ ಹೋಗುತ್ತಿದ್ದ ವಿಮಾನವನ್ನು ಯಮನು ನೋಡಿದನು. ಅದನ್ನು ಕಂಡು ವಿಸ್ಮಯಪಟ್ಟು ಚಿತ್ರಗುಪ್ತನೊಡನೆ ನೋಡು, ಯಾವನೋ ಪುಣ್ಯಾತ್ಮನು ವಿಮಾನವನ್ನೇರಿ ಕೈಲಾಸಕ್ಕೆ ಹೋಗುತ್ತಿರುವನು. ಈತನು ಯಾರೆಂಬುದನ್ನು ನೋಡಿ ಹೇಳು ಎಂದು ಕೇಳಿದನು. ||೬೩-೬೪||

ಯಮಧರ್ಮನೇ, ಈತನು ಪರಮ ಪಾಪಿಯು. ಈತನ ಪಾಪಗಳು ರಾಶಿರಾಶಿಯಾಗಿರುತ್ತವೆ. ಆದರೂ ಕೇವಲ ಶಿವಲಿಂಗದ ದರ್ಶನದಿಂದುಂಟಾದ ಪುಣ್ಯಮಾತ್ರದಿಂದ ವಿಮಾನವನ್ನೇರಿ ಕೈಲಾಸಕ್ಕೆ ಹೋಗುತ್ತಿರುವನು. ಆಹಾ, ಶಿವಲಿಂಗದರ್ಶನವು ಎಷ್ಟು ಮಹತ್ತರವಾದದ್ದು ? ||೬೫||

ದೃಷ್ಟ್ವಾ ಶಂಕರಲಿಂಗಪೂಜನಫಲೇಯತ್ತಾ ನ ವೇದ್ಯೈ ರ್ನ ವಾ
ದೇವೈರ್ವಾ ಮುನಿಪುಂಗವೈರಪಿ ತಥಾ ಸಿದ್ಧಾದಿಭಿರ್ವಾ ಧ್ರುವಂ ।
ಏವಂ ಶಂಕರಲಿಂಗದರ್ಶನಫಲಂ ವಕ್ತುಂ ನ ಶಕ್ಯಂ ಪರಂ
ತತ್ತತ್ವಂ ಶಿವ ಏವ ವೇದ ಗಿರಿಜಾ ಸ್ಕಂದೋ ಗಣೇಶೋಽಪಿ ವಾ॥೬೬॥

ರತಿರ್ದುಹಿತ್ರಾ ಸಹ ತೇನ ತಾವತ್
ಕೃತೈವ ಯಾವನ್ಮರಣಂ ನೃಪೇಣ ।
ತಥಾಪಿ ಲಿಂಗಂ ಖಲು ತುಂಗಮೇಕಂ
ಶಾಂಗಂ ವಿಲೋಕ್ಯ ಸ್ಥಿತಿಮಾದರೇಣ ॥೬೭॥

ಸಾಯಂ ಪ್ರಗೇಽಪಿ ಪ್ರಮುದೇವ ತೇನ
ಮಧ್ಯಾಹ್ನಕಾಲೇಽಪಿ ಸಚಂದನಾದ್ಯೈಃ ।
ಅಲಂಕೃತಂ ಶಾರಯತಿ ಪ್ರಯತ್ನಾತ್
ಲಿಂಗಂ ಸ ಶಾಂಗಂ ಕುಚಸಂನಿಕಾಶಂ ॥೬೮॥

ಶಿವಲಿಂಗವನ್ನು ಪೂಜಿಸುವುದರಿಂದ ಲಭಿಸುವ ಪುಣ್ಯಫಲಗಳನ್ನು ಸಮಗ್ರವಾಗಿ ಮುನಿಗಳು, ದೇವತೆಗಳು, ಸಿದ್ಧರು, ಗಂಧರ್ವರೂ, ಯಾರೇ ಆಗಲಿ, ಕೊನೆಗೆ ವೇದವೂ ಸಹ ತಿಳಿದಿರುವುದಿಲ್ಲ. ಹಾಗೆಯೇ ಶಿವಲಿಂಗದ ದರ್ಶನದಿಂದ ಲಭಿಸುವ ಪುಣ್ಯಫಲಗಳನ್ನೂ ಇಷ್ಟೆಂದು ಮಾತಿನಿಂದ ಹೇಳಿ ತೋರಿಸಲುಸಾಧ್ಯವಿರುವುದಿಲ್ಲ. ಅದರ ಸಮಗ್ರವಾದ ತತ್ವವು ಶಿವನಿಗೇ ತಿಳಿದಿರುವುದು. ಸ್ವಲ್ಪಮಟ್ಟಿಗೆ ಪಾರ್ವತಿಗೂ ಷಣ್ಮುಖಸ್ವಾಮಿಗೂ ಗಣಪತಿಗೂ ತಿಳಿದಿರಬಹುದು ಅಷ್ಟೆ. ॥೬೬॥

ಈ ಪಾಪಿಯು ರಾಜನಾಗಿದ್ದನು. ಈತನು ಸಾಮಾನ್ಯವಾದ ಪಾಪವನ್ನು ಮಾಡಿರುವುದಿಲ್ಲ. ಘೋರವಾದ ಪಾಪವನ್ನೇ ಹೊಂದಿದ್ದಾನೆ. ತನ್ನ ಮಗಳನ್ನೇ ಸೇರಿಕೊಂಡು ಆಕೆಯೊಡನೆ ಮರಣಪರ್ಯಂತವಾಗಿ ಸಂಭೋಗಕ್ರೀಡೆಗಳನ್ನೆಲ್ಲಾ ಅನುಭವಿಸಿದ್ದಾನೆ. ಆದರೆ ಪರಿಹಾಸಕ್ಕೋ ವಿನೋದಕ್ಕೋ ಅಂತೂ ಒಂದು ಉನ್ನತವಾದ ಶಿವಲಿಂಗದ ದರ್ಶನವನ್ನು ಮಾತ್ರ ಮಾಡುತ್ತಿದ್ದನು. ॥೬೭॥

ಆ ಶಿವಲಿಂಗವು ಹಾಗಿದೆ, ಹೀಗಿದೆ, ತರುಣೀಸ್ತನದಂತಿದೆ ಎಂದು ಹೀಗೆಲ್ಲಾ ಪರಿಹಾಸಮಾಡುತ್ತಾ ಸಾಯಂಕಾಲದಲ್ಲಿಯೂ ಪ್ರಾತಃಕಾಲದಲ್ಲಿಯೂ ಮಧ್ಯಾಹ್ನದಲ್ಲಿಯೂ ಹೀಗೆ ಮೂರು ಹೊತ್ತು ಶಿವಲಿಂಗವನ್ನು ನೋಡುತ್ತಿದ್ದನು. ಮತು

ಇದಂ ಕುಚಾಕಾರಮಿದಂ ಮನೋಜ್ಞಂ
ಇದಂ ಪ್ರಪಶ್ಯೇತಿ ಮುಹುಃ ಪ್ರಪಶ್ಯನ್ ।
ರತಿಂ ದುಹಿತ್ರಾ ಸ ಚಕಾರ ರಾಜಾ
ತತ್ಪುಣ್ಯತೋ ಯಾತಿ ವಿಮಾನರತ್ನಾತ್ ॥೬೯॥

ಕೃತಾನಿ ಪಾಪಾನ್ಯಮಿತಾನಿ ತಾನಿ
ದಗ್ಧಾನಿ ತಲ್ಲಿಂಗವಿಲೋಕನೇನ ।
ಜಾತಾನಿ ಪುಣ್ಯಾನ್ಯಮಿತಾನಿ ಕಾಲೇ
ತೈರದ್ಯ ಯಾಸ್ಯತ್ಯಗಜಾಸಹಾಯಂ ॥೭೦॥

ಇತಿ ತದ್ವಚನಂ ಶ್ರುತ್ವಾ ಯಮೋಽಪಿ ಪ್ರೀತಮಾನಸಃ ।
ದೂರಾತ್ಪ್ರಣಮ್ಯ ತಂ ದೃಷ್ಟ್ವಾ ವಿಸ್ಮಯಂ ಪರಮಂ ಗತಃ ॥೭೧॥

ಆ ಭಾವನೆಯಿಂದಲೇ ಆ ಶಿವಲಿಂಗಕ್ಕೆ ಚಂದನ, ಕಸ್ತೂರಿ, ಹೂವಿನಹಾರ ಮುಂತಾದವುಗಳಿಂದ ಅಲಂಕಾರಮಾಡಿಸುತ್ತಿದ್ದನು. ॥೬೮॥

ಅಲಂಕೃತವಾದ ಶಿವಲಿಂಗವನ್ನು ತನ್ನ ಮಗಳಿಗೆ ತೋರಿಸುತ್ತಾ ಎಷ್ಟು ಚೆನ್ನಾಗಿದೆ, ನಿನ್ನ ಕುಚದಂತೆಯೇ ಈ ಲಿಂಗವೂ ಇದೆ ಎಂದು ಹೇಳುತ್ತಾ ತಾನೂ ನೋಡುತ್ತಿದ್ದನು. ಆ ರಾಜನು ತನ್ನ ಪುತ್ರಿಯನ್ನೇ ಸಂಭೋಗಿಸುತ್ತಿದ್ದರೂ ಕೇವಲ ಶಿವಲಿಂಗದರ್ಶನದಿಂದುಂಟಾದ ಪುಣ್ಯದಿಂದ ಶ್ರೇಷ್ಠವಾದ ವಿಮಾನವನ್ನೇರಿ ಈಗ ಹೋಗುತ್ತಿದ್ದಾನೆ. ॥೬೯॥

ಆ ರಾಜನು ಮಾಡಿರುವುದು ಅದೊಂದೇ ಪಾಪವಲ್ಲ. ಇನ್ನೂ ಬೇರೆ ಎಷ್ಟೋ ಮಹಾಪಾಪಕಾರ್ಯಗಳನ್ನೂ ಮಾಡಿದ್ದಾನೆ. ಆದರೂ ಅವೆಲ್ಲ ಪಾಪಗಳೂ ಶಿವಲಿಂಗದ ದರ್ಶನದಿಂದ ಧ್ವಂಸವಾಗಿ ಹೋದವು. ಅಷ್ಟು ಮಾತ್ರವೇ ಅಲ್ಲ. ಇದರಿಂದಲೇ ಆತನಿಗೆ ಅನಂತಪುಣ್ಯವೂ ಲಭಿಸಿತು. ಆ ಪುಣ್ಯಫಲದಿಂದಲೇ ಈಗ ಈತನು ವಿಮಾನವನ್ನೇರಿ ಶಿವಸನ್ನಿಧಿಗೆ ಹೋಗುತ್ತಿರುವನು. ॥೭೦॥

ಹೀಗೆಂಬುದಾಗಿ ಚಿತ್ರಗುಪ್ತನು ಹೇಳಲು ಅದನ್ನು ಕೇಳಿ ಯಮನಿಗೆ ಪರಮಾಶ್ಚರ್ಯವಾಯಿತು. ಶಿವಲಿಂಗದರ್ಶನಮಹಿಮೆಯನ್ನು ಮನಸ್ಸಿನಲ್ಲಿ ಯೋಚಿಸಿ ಅತ್ಯಂತ ವಿಸ್ಮಯದಿಂದ ದೂರದಲ್ಲಿಯೇ ನಿಂತು ಆ ರಾಜನನ್ನು ನೋಡಿ ವಂದಿಸಿದನು. ॥೭೧॥

ತತಃಪರಂ ವಿಮಾನೇನ ಸ ಯಯಾವಿಂದ್ರಪೂಜಿತಃ ।
ಬ್ರಹ್ಮಲೋಕಂ ಬ್ರಹ್ಮಣಾಪಿ ಪೂಜಿತಸ್ಸ ನೃಪಾಧಮಃ ॥೨೨॥

ಪಶ್ಚಾದ್ವೈಕುಂಠಮಾಸಾದ್ಯ ನಾರಾಯಣಸಮನ್ವಿತಃ ।
ಲಕ್ಷ್ಮ್ಯಾಪಿ ಪೂಜಿತಃ ಪಶ್ಚಾದ್ಗರುಡಾದ್ಯೈಶ್ಚ ಪೂಜಿತಃ ॥೨೩॥

ತತಸ್ತೈರರ್ಚಿತಂ ಪ್ರಾಪ ಕೈಲಾಸಂ ಶಿವಮಂದಿರಂ ।
ತತ್ರೋವಾಸ ಗಣೈಸ್ಸಾಕಂ ಮಹಾದೇವಂ ವಿಲೋಕಯನ್ ॥೨೪॥

ತಸ್ಮಾಲ್ಲಿಂಗವಿಲೋಕನೇನ ಸದೃಶಂ ಪುಣ್ಯಂ ನ ಲೋಕತ್ರಯೇ
ಲಿಂಗಾರಾಧನಮುತ್ತಮೋತ್ತಮಮಿತಿ ಜ್ಞಾತಂ ಸುರೈರಪ್ಯಲಂ ॥
ಲಿಂಗಂ ಮಂಗಳದಾಯಕಂ ಯದಿ ಮುಹುರ್ದೃಷ್ಟಂ ತದಾ ಮಂಗಳಾ
ನ್ಯಾಯಾಂತ್ಯೇವ ಮುಹುರ್ಮುಹುಃ ಖಲು ಮುದಾ ಲಿಂಗೋತ್ಸವಾ
ಲೋಕನೇ ॥೨೫॥

ಅನಂತರ ಆ ರಾಜನು ವಿಮಾನದ ಮೂಲಕ ದೇವೇಂದ್ರನ ಬಳಿಗೆ ಹೋದನು. ಆತನು ದೇವೇಂದ್ರನು ಮಾಡಿದ ಪೂಜೆಯನ್ನು ಕೈಗೊಂಡು ಹಾಗೆಯೇ ಪ್ರಯಾಣಮಾಡುತ್ತಾ ಬ್ರಹ್ಮಲೋಕವನ್ನು ಸೇರಲು ಅಲ್ಲಿ ಬ್ರಹ್ಮನೂ ಸಹ ಈತನನ್ನು ಬಹಳವಾಗಿ ಪೂಜಿಸಿದನು. ॥೨೨॥

ಆ ರಾಜನು ಅಲ್ಲಿಂದ ಹೊರಟು ವೈಕುಂಠಕ್ಕೆ ಹೋದನು. ಅಲ್ಲಿ ವಿಷ್ಣು ಲಕ್ಷ್ಮೀದೇವಿ ಮತ್ತು ಗರುಡಾದಿ ವಿಷ್ಣುಗಣಗಳೂ ಈತನನ್ನು ಪೂಜಿಸಿ ಸತ್ಕರಿಸಿದರು. ॥೨೩॥

ಹೀಗೆ ಸಮಸ್ತರೂ ಅರ್ಪಿಸಿದ ಸತ್ಕಾರವನ್ನು ಸ್ವೀಕರಿಸುತ್ತಾ ಆ ರಾಜನು ಶಿವಧಾಮವಾದ ಕೈಲಾಸಕ್ಕೆ ತೆರಳಿದನು. ಆ ಕೈಲಾಸವನ್ನು ಸೇರಿದನಂತರ ಶಿವಗಣಗಳೊಂದಿಗೆ ಮಹಾದೇವನಾದ ಶಿವನನ್ನು ನೋಡಿ ಆನಂದಪಡುತ್ತಾ ಅಲ್ಲಿಯೇ ಇದ್ದನು. ॥೨೪॥

ಆದುದರಿಂದ ಶಿವಲಿಂಗದರ್ಶನದಿಂದುಂಟಾಗುವ ಪುಣ್ಯವು ಮೂರು ಲೋಕದಲ್ಲಿ ಎಲ್ಲಿಯೂ ಇರುವುದಿಲ್ಲ. ಇದನ್ನು ತಿಳಿದುಕೊಂಡೇ ದೇವತೆಗಳು ಶಿವಲಿಂಗಪೂಜೆಯು ಅತ್ಯುತ್ತಮವಾದದ್ದೆಂದು ಹೇಳುವರು. ಅಂತೂ ಆದಿರಲಿ. ಶಿವಲಿಂಗದ ದರ್ಶನಮಾಡುವುದರಿಂದ ಸಕಲ ಶ್ರೇಯಸ್ಸುಗಳೂ ಲಭಿಸುತ್ತವೆ.

ಏತಾನಿ ಲಿಂಗಾನಿ ಮನೋಹರಾಣಿ
ಬಿಲ್ವೀದಳಾಲಂಕೃತಮಸ್ತಕಾನಿ ।
ವಿಲೋಕಿತಾನ್ಯಾಶು ಶುಭಾನಿ ದಾತುಂ
ಸದ್ಯಃ ಪ್ರವೃತ್ತಾನಿ ನ ಸಂಶಯೋಽತ್ರ ॥೨೬॥

ಯೋ ಬಿಲ್ವಮೂಲಸ್ಥಿತಲಿಂಗಪೂಜಾಂ
ಕರೋತಿ ಭಕ್ತ್ಯಾ ನವಬಿಲ್ವಪತ್ರೈಃ
ತತ್ಪುಣ್ಯರಾಶಿರ್ಗಣನಾಮತೀತಃ
ಸ ಏವ ಕೈಲಾಸಪತಿಪ್ರಿಯೋಽಪಿ ॥೨೭॥

ಬಿಲ್ವಮೂಲಸ್ಥಿತೇ ಲಿಂಗೇ ಶಿವಸ್ಸನ್ನಿಹಿತಃ ಸ್ವಯಂ ।
ಬಿಲ್ವಪತ್ರಾಣಿ ಗೃಹ್ಣಾತಿ ಶಿವಭಕ್ತಾರ್ಪಿತಾನಿ ಸಃ ॥೨೮॥

ಪುನಃ ಪುನಃ ಶಿವಲಿಂಗೋತ್ಸವವನ್ನು ಸಂದರ್ಶಿಸಿದರೆ ಉತ್ತರೋತ್ತರವಾದ ಮಂಗಳಗಳು ಲಭಿಸುತ್ತವೆಂಬುದರಲ್ಲಿ ಸಂಶಯವಿಲ್ಲ. ||೨೫||

ಎಲೈ ವನಪಾಲಕನೇ, ಇಲ್ಲಿ ನೋಡು. ಈ ಶಿವಲಿಂಗಗಳು ಬಿಲ್ವಪತ್ರೆಗಳಿಂದ ಅಲಂಕೃತವಾಗಿದ್ದು ಎಷ್ಟು ಮನೋಹರವಾಗಿ ಕಾಣಿಸುತ್ತಿವೆ. ಇವುಗಳನ್ನು ಸಂದರ್ಶಿಸಿದ ಕೂಡಲೇ ಸಕಲ ಶುಭಫಲಗಳನ್ನೂ ಪ್ರದಾನಮಾಡಲು ಸಿದ್ಧವಾಗಿವೆಯೋ ಎಂಬಂತೆ ತೋರುತ್ತಿವೆ. ||೨೬||

ಯಾವ ಮನುಷ್ಯನು ಬಿಲ್ವವೃಕ್ಷದ ಮೂಲದಲ್ಲಿ ಸ್ಥಾಪಿತವಾದ ಶಿವಲಿಂಗವನ್ನು ನೂತನವಾದ ಬಿಲ್ವಪತ್ರೆಗಳಿಂದ ಭಕ್ತಿಯುತನಾಗಿ ಪೂಜಿಸುವನೋ, ಆತನ ಪುಣ್ಯರಾಶಿಯು ಲೆಕ್ಕಮಾಡುವುದಕ್ಕೆ ಸಿಕ್ಕುವುದಿಲ್ಲ. ಆ ಪುಣ್ಯಗಳು ಅನಂತವಾಗಿರುವುವು. ಆ ಶಿವಲಿಂಗಾರಾಧಕನೇ ಕೈಲಾಸಪತಿಯಾದ ಶಿವನ ಪರಮಪ್ರೀತಿಗೆ ಪಾತ್ರನಾದವನು. ||೨೭||

ಬಿಲ್ವವೃಕ್ಷ ಮೂಲದಲ್ಲಿರುವ ಶಿವಲಿಂಗದಲ್ಲಿ ಸಾಕ್ಷಾತ್ ಪರಮೇಶ್ವರನು ಸದಾ ಅಧ್ಯಾಸೀನನಾಗಿರುತ್ತಾನೆ. ಆತನು ಶಿವಭಕ್ತರು ಲಿಂಗವನ್ನರ್ಚಿಸಿ ಅರ್ಪಿಸಿದ ಬಿಲ್ವಪತ್ರೆಗಳನ್ನು ಸ್ವತಃ ತಾನೇ ಸ್ವೀಕರಿಸುತ್ತಾನೆ. ||೨೮||

ನ ರತ್ನಾನಿ ಗೃಹ್ಣಾತಿ ಗೌರೀಸಹಾಯೋ
ಯಥಾ ಬಿಲ್ವಪತ್ರಾಣಿ ಗೃಹ್ಣಾತಿ ಮೂರ್ಧ್ನಾ ।
ಸ್ವಭಕ್ತಾರ್ಪಿತಾನಿ ಪ್ರಿಯಾಣೀತಿ ಮತ್ವಾ
ದದಾತ್ಯೇವ ಮುಕ್ತಿಂ ಸ ತೈರರ್ಚಿತೋಽಪಿ ॥೭೯॥

ಕಿಮನ್ಯನ್ಮಹಾದೇವಲಿಂಗಾರ್ಪಿತೇನ
ಪರಿಚ್ಛಿನ್ನಬಿಲ್ವೀದಳೇನಾಪಿ ತುಲ್ಯಂ ।
ತದೇಕಂ ಮಹಾಪಾತಕಾಪಾರಶೈಲ
ಪ್ರದಾಹಾಯ ಶಕ್ತಂ ಮಹಾಪಾವಕಾಭಂ ॥೮೦॥

ಕಿಮನ್ಯನ್ಮಹೇಶಾಯ ದೇಯಂ ಪ್ರಿಯಂ ವಾ
ನ ಬಿಲ್ವೀದಳಾನ್ಯತ್ಪ್ರಿಯಂ ಭೂತಲೇಽಸ್ಮಿನ್ ।
ಪುರಾ ಬಿಲ್ವಪತ್ರೈಃ ಸಮಾರಾಧ್ಯ ಧೀರಾಃ
ಸುರತ್ವಂ ಚ ಲಬ್ಧ್ವಾ ಶಿವಂ ತೇ ಪ್ರಪನ್ನಾಃ ॥೮೧॥

ಆ ಗೌರೀವಲ್ಲಭನು ರತ್ನಗಳನ್ನೂ ಸಹ ಅಷ್ಟು ವಿಶ್ವಾಸದಿಂದ ಸ್ವೀಕರಿಸುವುದಿಲ್ಲ. ಆದೇ ತನ್ನ ಭಕ್ತರು ಬಿಲ್ವಪತ್ರೆಗಳನ್ನು ಅರ್ಪಿಸಿದರೆ ಆ ಬಿಲ್ವಗಳೇ ತನಗೆ ಮಹಾಪ್ರಿಯವಾದವುಗಳೆಂದು ಅವುಗಳನ್ನು ತನ್ನ ಶಿರಸ್ಸಿನಲ್ಲಿ ಧರಿಸುತ್ತಾನೆ. ಹಾಗೂ ಆ ಶಿವಭಕ್ತರಿಗೆ ಮೋಕ್ಷವನ್ನು ಸಹ ಅನುಗ್ರಹಿಸುತ್ತಾನೆ. ॥೭೯॥

ಶಿವಲಿಂಗಾರ್ಪಿತವಾದ ಬಿಲ್ವಪತ್ರೆಯು, ಅದು ಛಿದ್ರಛಿದ್ರವಾಗಿದ್ದರೂ ಮಹಿಮೆಯಲ್ಲಿ ಅದಕ್ಕೆ ಸದೃಶವಾದದ್ದು ಮತ್ತೆ ಯಾವುದೂ ಇಲ್ಲ. ಆ ಶಿವಲಿಂಗಾರ್ಪಿತವಾದ ಬಿಲ್ವಪತ್ರೆಯೊಂದೇ ಮಹಾಪಾಪರಾಶಿಗೆ ಮಹಾಗ್ನಿಪ್ರಾಯವಾದುದು. ಅದರಿಂದಲೇ ಬೆಟ್ಟದಂತೆ ರಾಶಿಯಾಗಿರುವ ಪಾಪಸಂಘವು ಸುಟ್ಟುಭಸ್ಮವಾಗುವುದು. ॥೮೦॥

ಬಿಲ್ವದಳಗಳನ್ನು ಬಿಟ್ಟು ಮತ್ತೆ ಬೇರೆ ಯಾವುದನ್ನು ಶಿವನಿಗೆ ಪ್ರಿಯವಾದುದೆಂದು ಆರ್ಪಿಸುವುದಕ್ಕೆ ಸಾಧ್ಯ? ಏಕೆಂದರೆ ಬಿಲ್ವಪತ್ರೆಯೇ ಆ ಮಹೇಶನಿಗೆ ಪರಮಪ್ರಿಯವಾದುದು. ಅದೇ ಬಿಲ್ವಪತ್ರೆಗಳನ್ನು ಪೂರ್ವದಲ್ಲಿ ಅನೇಕರು ಆತನಿಗೆ ಅರ್ಪಿಸಿ ದೇವತ್ವವನ್ನು ಪಡೆದರು. ಹಾಗೆಯೇ ಶಿವಸನ್ನಿಧಿಯನ್ನೂ ಸೇರಿದರು. ॥೮೧॥

ಅಹೋ ಬಿಲ್ವಮೂಲಸ್ಥಲಿಂಗಾರ್ಚನೇನ
ಪ್ರಯಾಂತ್ಯೇವ ಸರ್ವೇಽಪಿ ಶಾರ್ವಂ ಮಹಾರ್ಹಂ ।
ಪದಂ ಪ್ರಾಪ್ಯ ತುಷ್ಟಾ ಭವಂತ್ಯೇವ ಸತ್ಯಂ
ನ ತೇನಾಸ್ತಿ ತುಲ್ಯೋಽತ್ರ ಲೋಕೇ ಪರತ್ರ ॥೮೨॥

ಯಃ ಕಲ್ಮಲೀಕಿನಮನುತ್ತಮಬಿಲ್ವಮೂಲೇ
ಬಿಲ್ವೀದಳೇನ ಕಮಲೈರ್ವಿಮಲೇನ ಭಕ್ತ್ಯಾ ।
ಸಂಪೂಜಯತ್ಯತಿಸದಾದರತೋ ವಿಲೋಕ್ಯ
ಸಂಪೂಜಯಂತಿ ಬಹುಧಾ ಬಹುಧಾ ಮುನೀಂದ್ರಾಃ ॥೩೮॥

ನ ಬಿಲ್ವಪತ್ರಾರ್ಪಣಪುಣ್ಯತುಲ್ಯಂ
ಪುಣ್ಯಂ ನ ವೇದೇಷು ಯತಸ್ತದೇವ ।
ಸರ್ವಾರ್ಥಸಿದ್ಧ್ಯೈ ಭವತೀತಿ ಮನ್ಯೇ
ಧನ್ಯೇನ ಮಾನ್ಯೇನ ಶಿವಾರ್ಚನೇನ ॥೮೪॥

ಆಹಾ! ಏನಾಶ್ಚರ್ಯ, ಬಿಲ್ವಪತ್ರವೃಕ್ಷದ ಮೂಲದಲ್ಲಿ ಪ್ರತಿಷ್ಠಿತವಾದ ಶಿವಲಿಂಗವನ್ನು ಆರಾಧಿಸಿದವರೆಲ್ಲರೂ ಶಿವಧಾಮವಾದ ಕೈಲಾಸವನ್ನೇ ಸೇರುವರು. ಕೈಲಾಸವನ್ನು ಪಡೆದು ಅಲ್ಲಿಪರಮಸಂತೃಪ್ತರಾಗುವರು, ಮತ್ತು ಅಮರರಾಗುವರು. ಎಲೈ ವನಪಾಲಕನೇ, ಇದು ಸತ್ಯವೆಂದು ತಿಳಿ. ಅಂಥ ಶಿವಲಿಂಗಾರಾಧನೆಗೆ ಸದೃಶವಾದ ಧರ್ಮವು ಈ ಲೋಕದಲ್ಲಿಯೂ ಇಲ್ಲ. ಪರಲೋಕದಲ್ಲಿ ಸಹ ಎಲ್ಲಿಯೂ ಕಾಣುವುದಿಲ್ಲ. ॥೮೨॥

ಯಾವ ಮನುಷ್ಯನು ಉತ್ತಮವಾದ ಬಿಲ್ವವೃಕ್ಷದ ಮೂಲದಲ್ಲಿರುವ ಶಿವಲಿಂಗಸ್ವರೂಪನಾದ ಶಂಕರನನ್ನು ಬಿಲ್ವಪತ್ರೆ ಕಮಲ ಮುಂತಾದವುಗಳಿಂದ ಭಕ್ತಿಪೂರ್ವಕವಾಗಿ ಪೂಜಿಸುವನೋ, ಅಂಥ ಮನುಷ್ಯನನ್ನು ನೋಡಿ ಮಹಾ ಮಹಾ ಮುನಿಗಳೂ ಸಹ ಆದರದಿಂದ ವಂದಿಸುತ್ತಾರೆ ಮತ್ತು ಪೂಜಿಸುತ್ತಾರೆ. ॥೮೩॥

ಶಿವನಿಗೆ ಬಿಲ್ವಪತ್ರಾರ್ಪಣದಿಂದ ಲಭಿಸುವ ಪುಣ್ಯಕ್ಕೆ ಸದೃಶವಾದ ಪುಣ್ಯವು ಬೇರೆ ಯಾವುದೂ ಇಲ್ಲವೆಂದು ವೇದಗಳೂ ಸಹ ಸಾರುತ್ತಿವೆ. ಆ ಧನ್ಯವೂ

ಪಾಪಾನಿ ತಾವತ್ಪ್ರಬಲಾನಿ ಯಾವತ್
ನ ಬಿಲ್ವಮೂಲೇ ಶಿವಲಿಂಗಮೂರ್ಧ್ನಿ ।
ಬಿಲ್ವೀದಳಾನ್ಯಾಶು ಸಮರ್ಪಿತಾನಿ
ದತ್ತೇಷು ನಷ್ಟಾನಿ ಭವಂತಿ ತಾನಿ ॥೮೫॥

ನೀರೈರ್ಬಿಲ್ವತರುಪ್ರವೃದ್ಧಿಜನಕಸ್ತದ್ಬಿಲ್ವಮೂಲಸ್ಥಿತಂ
ಲಿಂಗಂ ಪಶ್ಯತಿ ಬಿಲ್ವಪಲ್ಲವಯುತಂ ಬಿಲ್ವೈಸ್ಸಮಭ್ಯರ್ಚಯನ್ ।
ತದ್ಬಿಲ್ವೀತರುಸಂಭವೈರಭಿನವೈಶ್ಶಂಭುಪ್ರಿಯೋ ಜಾಯತೇ
ಸಾಂಬಸ್ತೇನ ಸಮರ್ಚಿತೋಽಪಿ ಸದಯೋ ಗೌರೀಸಹಾಯೋ ಮುಹುಃ
॥೮೬॥

ಮಾನ್ಯವೂ ಆದ ಶಿವಾರ್ಚನೆಯಿಂದಲೇ ಸಮಸ್ತ ಇಷ್ಟಾರ್ಥಗಳೂ ಲಭಿಸುತ್ತವೆ. ಆದ್ದರಿಂದ ಈ ಪುಣ್ಯಸದೃಶವಾದದ್ದು ಮತ್ತೆ ಬೇರೆ ಯಾವುದೂ ಇಲ್ಲ. ॥೮೪॥

ಬಿಲ್ವವೃಕ್ಷಮೂಲದಲ್ಲಿರುವ ಶಿವಲಿಂಗಕ್ಕೆ ಎಷ್ಟು ಕಾಲಪರ್ಯಂತ ಬಿಲ್ವದಳವನ್ನು ಅರ್ಪಿಸುವುದಿಲ್ಲವೋ ಅಲ್ಲಿನವರೆಗೂ ಪಾಪಗಳು ಪ್ರಬಲವಾಗಿಯೇ ಇರುತ್ತವೆ. ಯಾವಾಗ ಬಿಲ್ವಾರ್ಚನೆಯು ನಡೆಯುವುದೋ ಆ ಕೂಡಲೇ ಎಷ್ಟೋ ಪ್ರಬಲವಾಗಿದ್ದರೂ ಸಮಸ್ತ ಪಾಪಗಳೂ ನಾಶವಾಗುತ್ತವೆ. ॥೮೫॥

ಎಲೈ ವನಪಾಲಕನೇ, ಬಿಲ್ವವೃಕ್ಷಗಳನ್ನು ಪೋಷಿಸುವವನೂ ಸಹ ಶಿವಾರಾಧನೆಯನ್ನೇ ಮಾಡುವನು. ಹೇಗೆಂದರೆ ಆತನು ಬಿಲ್ವಸಸಿಗಳಿಗೆ ನೀರನ್ನು ಹಾಯಿಸುವಾಗ ಆ ಬಿಲ್ವವೃಕ್ಷಗಳ ಮೂಲದಲ್ಲಿರುವ ಶಿವಲಿಂಗಗಳನ್ನು ನೋಡುವನು. ಆತನಿಂದಲೇ ಪೋಷಿತವಾದ ಬಿಲ್ವವೃಕ್ಷಗಳಿಂದ ಪತ್ರೆಗಳು ಕೆಳಗಿರುವ ಶಿವಲಿಂಗದ ಮೇಲೆ ಬೀಳಲು ಅದು ಪೂಜೆಯೇ ಆಗುವುದು. ಮತ್ತು ಅದೇ ವೃಕ್ಷಗಳಲ್ಲಿ ಹೊಸಹೊಸದಾಗಿ ಚಿಗುರೊಡೆದು ಕೋಮಲವಾಗಿರುವ ಬಿಲ್ವದಳಗಳನ್ನು ಆ ಪೋಷಕನು ಶಿವಲಿಂಗಗಳ ಮೇಲೆ ಅರ್ಪಿಸುವುದರಿಂದ ಪರಮೇಶ್ವರನ ಪರಮಪ್ರೀತಿಗೆ ಪಾತ್ರನಾಗುವನು. ಏಕೆಂದರೆ ಆ ಪೋಷಕನಿಂದ ಗೌರೀವಲ್ಲಭನು ಅಲ್ಲಿ ಅರ್ಚಿತನಾದಂತೆಯೇ ಆಗುವನು. ಈರೀತಿ ಬಿಲ್ವವೃಕ್ಷಗಳ ಪೋಷಣೆಯೂ ಮಹಾಪುಣ್ಯಕರ. ॥೮೬॥

ಏಕಂ ಬಿಲ್ವತರುಂ ಸ್ವಹಸ್ತಗಲಿತೈರ್ನೀರೈಃ ಪ್ರವೃದ್ಧಂ ಪರಂ
ಕುರ್ಯಾತ್ತಸ್ಯ ಕುಲಂ ಪ್ರವೃದ್ಧಮಸಕೃದ್ಭುಕ್ತ್ವಾಪಿ ಭೋಗಾನ್ ಬಹೂನ್ ।
ಭುಕ್ತ್ವಾ ಶಂಕರಮೇವ ಯಾತಿ ಸ ಸುರಾರಾಧ್ಯತ್ವಮಾಪ್ನೋತ್ಯತೋ
ಧರ್ಮೋ ಬಿಲ್ವವನಾನುಪಾಲನಸಮುತ್ಪನ್ನೋಮಿತೋಽತ್ಯದ್ಭುತಃ ॥೮೭॥

ಕೃತೇನ ಬಿಲ್ವೀವನಪಾಲನೇನ
ಪುಣ್ಯಾಂಬುರಾಶಿಃ ಖಲು ತೇ ಪ್ರವೃದ್ಧಃ ।
ತತ್ಪುಣ್ಯತುಲ್ಯಂ ಕಿಮಿಹಾಸ್ತಿ ಪುಣ್ಯಂ
ಪ್ರೀತೋ ಭವತ್ಯೇವ ಶಿವೋಽಪಿ ತೇನ ॥೮೮॥

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ ।
ತಮತಿಪ್ರೀತಿದಂ ತಾವದ್ವದಾಮ್ಯಘವಿನಾಶಕಂ ॥೮೯॥

ಯಾವ ಮನುಷ್ಯನು ಒಂದೇ ಬಿಲ್ವವೃಕ್ಷಕ್ಕಾದರೂ ತನ್ನ ಕೈಗಳಿಂದ ನೀರನ್ನು ಹಾಕಿ ಪೋಷಿಸಿ ಬೆಳೆಯಿಸಿದರೆ ಆತನ ವಂಶವು ಅತ್ಯಂತವಾಗಿ ಊರ್ಜಿತವಾಗುವುದು. ಮತ್ತು ಆತನು ಅನೇಕ ಭೋಗಭಾಗ್ಯಗಳನ್ನು ಇಹದಲ್ಲಿ ಅನುಭವಿಸಿ, ದೇಹಾಂತ್ಯದಲ್ಲಿ ದೇವತೆಗಳಿಗೂ ಪೂಜ್ಯನಾಗಿ ಶಿವಧಾಮವನ್ನೇ ಪಡೆಯುವನು. ಆದುದರಿಂದ ಈ ಬಿಲ್ವವನದ ಪೋಷಣೆ ಮತ್ತು ಪಾಲನೆಗಳೂ ಅದ್ಭುತವಾದ ಪರಮಧರ್ಮವೇ ಆಗಿವೆ. ॥೮೭॥

ಅಯ್ಯಾ ವನಪಾಲಕನೇ, ನೀನೂ ಪುಣ್ಯಶಾಲಿಯಾಗಿರುವೆ. ಇಂಥ ಮಹತ್ತರವಾದ ಬಿಲ್ವವನವನ್ನೇ ನೀನು ಪೋಷಿಸಿದ್ದೀಯೆ, ಬೆಳೆಸಿದ್ದೀಯೆ. ಇದರಿಂದ ನಿನ್ನ ಪುಣ್ಯವು ಸಮುದ್ರದಂತೆ ಅಪಾರವಾಗಿರುತ್ತದೆ. ಇಂಥ ಪುಣ್ಯವು ಮತ್ತೆ ಬೇರೆ ಯಾವುದಿದೆ? ಈ ನಿನ್ನ ಸೇವೆಯಿಂದ ಆ ಶಿವನು ಸುಪ್ರೀತನೇ ಆಗುವನು. ॥೮೮॥

ಅಯ್ಯಾ ಪುಣ್ಯಶಾಲಿಯೇ, ಈ ವಿಷಯದಲ್ಲಿ ಒಂದು ಪುರಾತನವಾದ ಇತಿಹಾಸವಿರುವುದು. ಅದು ಪಾಪನಾಶಕವೂ ಪ್ರೀತಿದಾಯಕವೂ ಆಗಿರುವುದರಿಂದ ಹೇಳುತ್ತೇನೆ ಕೇಳು. ॥೮೯॥

ರೇವಾತೀರೇ ಪುರಾ ನಾರೀ ಕಾಪಿ ಭಿಲ್ಲಸ್ಯ ಸುಂದರೀ।
ಸ್ವಕುಟೀನಿಕಟೇ ಧೂರ್ತಾ ಬಿಲ್ವೀಬೀಜಂ ದದರ್ಶ ಹ ॥೯೦॥

ಆಲವಾಲಂ ಕಲ್ಪಯಿತ್ವಾ ಜಲಂ ದತ್ವಾ ಪ್ರಯತ್ನತಃ।
ಚಕಾರ ಬಿಲ್ವಬೀಜಸ್ಯ ತಸ್ಮಿನ್ ಗರ್ತೇ ಪ್ರಪಾತನಂ ॥೯೧॥

ತತಸ್ಸಾ ಜಲದಾನೇನ ಕುರ್ವತೀ ತಸ್ಯ ಪೋಷಣಂ।
ವೃತ್ತಿಂ ಚಕಾರ ತಸ್ಯೈವ ಕಂಟಕಾದ್ಯೈರ್ವಿಶೇಷತಃ ॥೯೨॥

ತತ್ಪೋಷಿತಸ್ತರುರ್ಜಾತಶ್ಶಾಖಾಭಿರಭಿತೋ ವೃತಃ।
ತದ್ಬಿಲ್ವತರುಮೂಲೇ ಸಾ ಚಕಾರ ಶಯನಸ್ಥಲಂ ॥೯೩॥

ಸಾ ಬಾಣಲಿಂಗಮಾದಾಯ ಸ ತರುರ್ಬಾಲಕೋ ಯಥಾ।
ವಾತಾಹತಿಭಯಾತ್ತತ್ರ ಸ್ಥಾಪಯಾಮಾಸ ಸುಂದರೀ ॥೯೪॥

ಹಿಂದೆ ನರ್ಮದಾತೀರದಲ್ಲಿ ಒಬ್ಬ ಭಿಲ್ಲನ ಹೆಂಡತಿಯು ವಾಸಿಸುತ್ತಿದ್ದಳು. ಆ ನಾರಿಯು ಸುಂದರಿಯಾಗಿದ್ದಳಲ್ಲದೇ ಮಹಾ ಸಾಹಸಿಯೂ ಆಗಿದ್ದಳು. ಆಕೆಯೊಂದು ದಿನ ತನ್ನ ಗುಡಿಸಲಿನ ಹತ್ತಿರದಲ್ಲೇ ಒಂದು ಬಿಲ್ವವೃಕ್ಷದ ಬೀಜವನ್ನು ಕಂಡಳು. ॥೯೦॥

ಆ ಬೀಜವನ್ನು ತೆಗೆದುಕೊಂಡು ಬಂದು ಅದಕ್ಕೆ ಒಂದು ಪಾತಿಯನ್ನು ಕಟ್ಟಿ ನೀರನ್ನು ಹಾಯಿಸಿ ಗುಂಡಿಯನ್ನು ತೋಡಿ ಆ ಗುಂಡಿಯಲ್ಲಿ ಬಿಲ್ವಬೀಜವನ್ನು ನೆಟ್ಟಳು. ॥೯೧॥

ಆ ಬೀಜವು ಮೊಳಕೆ ಒಡೆದು ಸಸಿಯಾಗಿ ಕ್ರಮೇಣ ಗಿಡವಾಗಲು ದಿನವೂ ಅದಕ್ಕೆ ನೀರು ಗೊಬ್ಬರ ಇವುಗಳನ್ನು ಹಾಕಿ ಪೋಷಣೆ ಮಾಡಿದಳು. ಮತ್ತು ಆ ಪಾತಿಯ ಸುತ್ತಲೂ ಭದ್ರವಾಗಿ ಮುಳ್ಳಿನ ಬೇಲಿಯನ್ನು ನಿರ್ಮಿಸಿದಳು. ॥೯೨॥

ಆ ಬಿಲ್ವಗಿಡವು ದಿನದಿಂದ ದಿನಕ್ಕೆ ದೊಡ್ಡದಾಯಿತು. ವಿಶೇಷವಾಗಿ ಎಲೆಗಳೂ ಕೊಂಬೆಗಳೂ ಬೆಳೆದು ದೊಡ್ಡ ಮರವಾಯಿತು. ಆ ಮರದ ಕೆಳಗೆ ಚೆನ್ನಾಗಿ ನೆರಳಿದ್ದುದರಿಂದ ಆಕೆಯು ಅಲ್ಲಿಯೇ ತನ್ನ ಶಯನಸ್ಥಾನವನ್ನು ಮಾಡಿಕೊಂಡಳು. ॥೯೩॥

ಬಿಲ್ವಮೂಲೇ ವೇಷ್ಟಿತೇ ಚ ಪ್ರವೃದ್ಧೇ ಬಿಲ್ವಭೂರುಹೇ।
ತತ್ತಥೈವ ಸ್ಥಿತಂ ತತ್ರ ರೇವಾಲಿಂಗಂ ಮನೋಹರಂ ॥೯೫॥

ತಲ್ಲಿಂಗಂ ಚ ಘಟಾಕಾರಂ ತಲ್ಲಿಂಗೋದರಪೂರಿತಂ।
ಕುಂಭಮಾತ್ರಂ ಜಲಂ ತತ್ರ ತಿಷ್ಠತ್ಯೇವಾತಿಶೀತಲಂ ॥೯೬॥

ಸಾ ತಲ್ಲಿಂಗಜಲಂ ಪೀತ್ವಾ ಪ್ರತ್ಯಹಂ ಶೀತಲಂ ಪ್ರಗೇ।
ಪ್ರಕ್ಷಾಲ್ಯ ಲಿಂಗಮಮಲಂ ಪ್ರಯಚ್ಛತಿ ಜಲಂ ಪುನಃ ॥೯೭॥

ಪತಂತಿ ಜೀರ್ಣಪರ್ಣಾನಿ ತಸ್ಯ ಬಿಲ್ವತರೋಃ ಸ್ವತಃ।
ತೈಃ ಪತ್ರೈಃ ಪೂಜಿತಂ ಲಿಂಗಂ ರೇವಾನೀರೈರ್ಮನೋಹರೈಃ ॥೯೮॥

ಆ ಭಿಲ್ಲನಾರಿಯು ಆ ವೃಕ್ಷವನ್ನು ತನ್ನ ಪುತ್ರನೆಂದೇ ಭಾವಿಸಿಕೊಂಡು ಬಹು ವಾತ್ಸಲ್ಯದಿಂದ ಪೋಷಿಸುತ್ತಿದ್ದಳು. ಆ ಮರಕ್ಕೆ ಎಲ್ಲಿಯಾದರೂ ಬಿರುಗಾಳಿ ಹೊಡೆದು ಅಪಾಯವಾಗದೇ ಇರಲಿ ಎಂದು ರಕ್ಷಾಬಂಧವನ್ನು ಕಟ್ಟುವಂತೆ ಒಂದು ಬಾಣಲಿಂಗವನ್ನು (ನರ್ಮದಾಲಿಂಗ) ತಂದು ಆ ಮರವು ಗಿಡವಾಗಿದ್ದಾಗ ಕಟ್ಟಿದ್ದಳು. ಇದರಿಂದ ಅರಿಷ್ಟವು ತಪ್ಪುವುದೆಂದು ಆಕೆಯ ಭಾವನೆಯಾಗಿತ್ತು. ॥೯೪॥

ಕ್ರಮೇಣ ಆ ಬಿಲ್ವಗಿಡದ ಬೇರುಗಳು ಸುತ್ತಲೂ ಹರಡಿಕೊಂಡು ಭದ್ರವಾಗಲು ಅದು ದೊಡ್ಡ ಮರವಾಯಿತು. ಆದರೆ ಆ ಮನೋಹರವಾದ ರೇವಾಲಿಂಗವು ಇನ್ನೂ ಆ ಮರದ ಬುಡದಲ್ಲೇ ಇದ್ದಿತು. ॥೯೫॥

ಆ ಲಿಂಗವು ಗಡಿಗೆಯ ಆಕಾರದಲ್ಲಿದ್ದಿತು. ಆದ್ದರಿಂದ ಆ ಭಿಲ್ಲನಾರಿಯು ನೀರನ್ನು ತುಂಬಿಟ್ಟುಕೊಳ್ಳುವ ಕೆಲಸಕ್ಕೆ ಅದನ್ನು ಇಟ್ಟುಕೊಂಡಳು. ಆ ಲಿಂಗದಲ್ಲಿ ಸರ್ವದಾ ಒಂದು ಬಿಂದಿಗೆ ತುಂಬುವಷ್ಟು ಶೀತಲವಾದ ನೀರನ್ನು ತುಂಬಿ ಇಟ್ಟುಕೊಂಡಿರುತ್ತಿದ್ದಳು. ॥೯೬॥

ಅಲ್ಲಿದ್ದ ನೀರನ್ನೇ ಆಕೆಯು ಕುಡಿಯುತ್ತಿದ್ದಳು. ಪ್ರತಿದಿನ ಬೆಳಗ್ಗೆ ಆ ಲಿಂಗವನ್ನು ಚೆನ್ನಾಗಿ ತೊಳೆದು ಮತ್ತೆ ನೀರನ್ನು ಅದರಲ್ಲಿ ತುಂಬುತ್ತಿದ್ದಳು. ॥೯೭॥

ಆಕೆಯು ನರ್ಮದಾನದಿಯ ನೀರನ್ನು ತಂದು ಆ ಲಿಂಗದಲ್ಲಿ ತುಂಬುತ್ತಿದ್ದುದರಿಂದಲೂ, ಅದೇ ಲಿಂಗದ ಮೇಲೆ ಆ ಬಿಲ್ವವೃಕ್ಷದ ಹಣ್ಣಾಗಿ ಕಳಿತ ಎಲೆಗಳು

ಸಾ ರಾತ್ರೌ ಸ್ವೋಪಭೋಗಾರ್ಥಂ ಪದಾರ್ಥಾನಾಂ ಪ್ರಕಾಶನಂ ।
ಬಿಲ್ವಮೂಲಸ್ಥದೀಪೇನ ಕೃತ್ವಾ ಕೃತ್ವಾ ಸ್ಥಿತಾ ಮುಹುಃ ॥೯೯॥

ಸಾ ಜಾರಿಣೀ ತಯಾ ತತ್ರ ಕೃತಂ ವಿಟವಿಡಂಬನಂ ।
ನಗ್ನಯಾ ನರ್ತನೇನಾಪಿ ಗಾನೈರಪಿ ವಿಶೇಷತಃ ॥೧೦೦॥

ತತಃ ಪಂಚತ್ವಮಾಪನ್ನಾ ಕಾಲೇನ ಯಮಕಿಂಕರೈಃ ।
ಸಮಾವೃತಾ ತದಾ ತತ್ರ ಯಮೋಽಪಿ ಸ್ವಯಮಾಗತಃ ॥೧೦೧॥

ತಾನೇವ ನೇತುಮುದ್ಯುಕ್ತಾನ್ ಕಿಂಕರಾನಾಹ ಸತ್ವರಂ ।
ಸ್ಪೃಷ್ಟವ್ಯಾ ಪುಣ್ಯಮೂರ್ತಿಸ್ಸಾ ನ ಕದಾಪೀತಿ ವಿಸ್ಮಿತಃ ॥೧೦೨॥

ತನ್ನಷ್ಟಕ್ಕೆ ತಾನೇ ಬೀಳುತ್ತಿದ್ದುದರಿಂದಲೂ ಅನಾಯಾಸವಾಗಿ ಪೂಜೆಯು ನಡೆದಂತಾಗುತ್ತಿದ್ದಿತು. ॥೯೮॥

ರಾತ್ರಿವೇಳೆಯಲ್ಲಿ ಶಯನಕಾರ್ಯಗಳ ಅನುಕೂಲತೆಗೂ, ವಸ್ತುಗಳು ಕಣ್ಣಿಗೆ ಕಾಣಿಸುವುದಕ್ಕೆಂದೂ ಅದೇ ಬಿಲ್ವವೃಕ್ಷದ ಮೂಲದಲ್ಲಿ ಒಂದು ದೀಪವನ್ನು ಹಚ್ಚಿಟ್ಟುಕೊಂಡಿರುತ್ತಿದ್ದಳು. ಇದೂ ಒಂದು ಈಶಸೇವೆಯಂತೆಯೇ ಆಗುತ್ತಿತ್ತು. ॥೯೯॥

ಆ ಭಿಲ್ಲನಾರಿಯು ಪರಮ ವ್ಯಭಿಚಾರಿಣಿಯಾಗಿದ್ದಳು. ಆ ಬಿಲ್ವಮೂಲವೇ ಆಕೆಯ ಸಂಕೇತಸ್ಥಾನವಾಗಿದ್ದಿತು. ಆಕೆಯ ವಿಟನು ಅಲ್ಲಿಗೇ ಬಂದು ಆಕೆಯೊಡನೆ ಸಂಭೋಗಿಸುತ್ತಿದ್ದನು. ಆ ಸಂಭೋಗಕಾಲದಲ್ಲಿ ಆ ನಾರಿಯು ಬೆತ್ತಲೆಯಿಂದ ಅಲ್ಲಿ ಇಲ್ಲಿ ಕುಣಿಯುತ್ತಿದ್ದಳು ಮತ್ತು ಸ್ವೇಚ್ಛೆಯಿಂದ ಹಾಡುತ್ತಿದ್ದಳು. ಹೀಗೆಯೇ ಪ್ರತಿದಿನವೂ ಮನಸ್ವಿಯಾಗಿ ಆ ವೃಕ್ಷಮೂಲದಲ್ಲೇ ವಿಹಾರಗಳನ್ನು ನಡೆಸುತ್ತಿದ್ದಳು. ॥೧೦೦॥

ಕೆಲವು ದಿವಸಗಳು ಕಳೆದನಂತರ ದೈವವಶಾತ್ ಆಕೆಯು ಮೃತಿಹೊಂದಿದಳು. ನರಕಕ್ಕೆ ಆಕೆಯನ್ನು ಒಯ್ಯಲು ಯಮದೂತರು ಬಂದು ಮುತ್ತಿದರು. ಆಗ ಸ್ವಯಂ ಯಮಧರ್ಮನೂ ಬಂದಿದ್ದನು. ॥೧೦೧॥

ಆ ನಾರಿಯು ಪಾಪಿಷ್ಠಳೆಂದೂ ಆಕೆಯನ್ನು ಜಾಗ್ರತೆ ನರಕಕ್ಕೆ ಹೊತ್ತು ಕೊಂಡು ಹೋಗಬೇಕೆಂದೂ ಯಮದೂತರು ಸಂಭ್ರಮಪಡುತ್ತಿದ್ದರು. ಅಷ್ಟು ಹೊತ್ತಿನವರೆಗೆ ಯಮನು ಅಲ್ಲಿರುವ ಸುತ್ತುಮುತ್ತಿನ ಸನ್ನಿವೇಶವನ್ನು ನೋಡಿ

ತದಾನೀಮಾಗತಸ್ತತ್ರ ಪುಲೋಮ ಇತಿ ವಿಶ್ರುತಃ ।
ರಾಜಾಪ್ಯಾಖೇಟಕಂ ಕೃತ್ವಾ ಶ್ರಾಂತಃ ಖೇದಲವಾಕುಲಃ ॥೧೦೩॥

ಸಾ ರಾಜಾ ಶಿವಪೂಜಾಯಾಂ ನಿರತಶ್ಶಿವತತ್ಪರೈಃ ।
ಸಮಾವೃತೋ ಬಿಲ್ವಮೂಲೇ ದದರ್ಶ ಯಮಮಾಸ್ತಿಕಂ ॥೧೦೪॥

ಚಿತ್ರಗುಪ್ತಾದಿಸಂಯುಕ್ತಂ ನೃತಾಲೋಕನತತ್ಪರಂ ।
ತಮಾಗತಂ ಯಮಂ ದೃಷ್ಟ್ವಾ ವಿನತಃ ಪ್ರಣಯಾನ್ವಿತಃ ॥೧೦೫॥

ಯಮಮಾಹ ತದಾ ರಾಜಾ ಶ್ರಾಂತೋಽಪಿ ಸ ಶನೈಃ ಪರಂ ।
ತೋಷಂ ಸಂಜನಯನ್ನೇವ ಯಮಾಯ ಶಿವಪೂಜಕಃ ॥೧೦೬॥

ಎಲ್ಲಾ ಘಟನೆಗಳನ್ನೂ ತಿಳಿದುಕೊಂಡು ಕೂಡಲೇ ತನ್ನ ದೂತರೊಡನೆ, ಆ ನಾರಿಯನ್ನು ಮುಟ್ಟಬೇಡಿ, ಆಕೆಯು ಪುಣ್ಯಾತ್ಮಳಾಗಿದ್ದಾಳೆ. ಆದ್ದರಿಂದ ಅವಳ ಮೇಲೆ ಕೈಮಾಡಬೇಡಿ. ಹಿಂದಕ್ಕೆ ದೂರ ಸರಿಯಿರಿ ಎಂದು ಎಚ್ಚರಿಸಿದನು. ||೧೦೨||

ಅದೇ ಹೊತ್ತಿಗೆ ಸರಿಯಾಗಿ ಪುಲೋಮ ಎಂಬ ರಾಜನು ಅಲ್ಲಿಗೆ ಬಂದನು. ಆತನು ಬೇಟೆಯನ್ನಾಡಿದ್ದರಿಂದ ಸ್ವಲ್ಪ ಆಯಾಸವಾಗಿ ವಿಶ್ರಾಂತಿಗೆಂದು ಆ ಗುಡಿಸಲಿನ ಸಮೀಪಕ್ಕೆ ಬಂದಿದ್ದನು. ||೧೦೩||

ಆ ರಾಜನೂ ಪರಮ ಶಿವಭಕ್ತನಾಗಿದ್ದನಲ್ಲದೇ ಸರ್ವದಾ ಶಿವಭಕ್ತರೊಡನೆ ಶಿವಾರಾಧನೆಯನ್ನು ನಡೆಸುತ್ತಿದ್ದನು. ಆತನು ಬಿಲ್ವವೃಕ್ಷದ ಸಮೀಪಕ್ಕೆ ಬಂದೊಡನೆಯೇ ಅಲ್ಲಿದ್ದ ಆಸ್ತಿಕನಾದ ಯಮನನ್ನು ನೋಡಿದನು. ||೧೦೪||

ಆ ಭಿಲ್ಲನಾರಿಯನ್ನು ನೋಡಲು ಯಮನೊಡನೆ ಚಿತ್ರಗುಪ್ತಾದಿಗಳೂ ಬಂದಿದ್ದರು. ಅವರೆಲ್ಲರೊಡನೆ ಇದ್ದ ಯಮನನ್ನು ನೋಡಿ ಪುಲೋಮನು ಅತ್ಯಂತ ವಿನಯದಿಂದ ನಮಸ್ಕರಿಸಿದನು. ||೧೦೫||

ಆಸ್ತಿಕವರ್ಯನಾದ ರಾಜನು ಸ್ವಯಂ ಆಯಾಸಪಟ್ಟಿದ್ದರೂ ಯಮನಲ್ಲಿ ಆದರ ತೋರಿಸಿ ಅವನನ್ನು ಸಂತೋಷಪಡಿಸುವುದಕ್ಕಾಗಿ ಹೀಗೆಂದನು. ||೧೦೬||

॥ ಪುಲೋಮ ಉವಾಚ ॥

ಕುತಸ್ಸಮಾಗತಂ ಕಾಲ ಕ್ವ ವಾ ಗಮನಮೀಪ್ಸಿತಂ ।
ಅತ್ರಾವಸ್ಥಾನಕೃತ್ಯಂ ಚ ಕಿಮಸ್ತಿ ವದ ತನ್ಮಮ ॥೧೦೭॥

ಇತ್ಯುಕ್ತಸ್ತಮುವಾಚಾಥ ಸ ಕೃತಾಂತೋ ನೃಪೋತ್ತಮಂ ।
ಅತ್ರೈವಾಗತಮಸ್ಮಾಭಿಃ ಕೌತುಕಂ ದ್ರಷ್ಟುಮಾದರಾತ್ ॥೧೦೮॥

ಪುಣ್ಯಪುಂಜಸ್ವರೂಪೇಯಂ ರಾಜನ್ ವಿಗತಕಲ್ಮಷಾ ।
ಏತದ್ದರ್ಶನಮಾತ್ರೇಣ ಕೃತಕೃತ್ಯೋಽಸ್ಮ್ಯಸಂಶಯಂ ॥೧೦೯॥

ಇತಿ ತದ್ವಚನಂ ಶ್ರುತ್ವಾ ಸ ರಾಜಾ ಪ್ರಾಹ ತಂ ಯಮಂ ।
ಇಯಂ ವಿಟಗಣಾಕ್ರಾಂತಾ ಚೇಟೀ ಪ್ರೇಕ್ಷ್ಯಾ ಕಥಂ ತ್ವಯಾ॥೧೧೦॥

" ಯಮಧರ್ಮನೇ, ಇದೇನು ಇತ್ತಲಾಗಿ ಬರೋಣವಾಗಿದೆ ? ಮುಂದೆ ಎಲ್ಲಿಗೆ ಹೋಗಬೇಕು ? ಇಲ್ಲಿ ನಿಲ್ಲಲು ಕಾರಣವೇನು ? ಇದನ್ನು ಹೇಳಬಹುದಾಗಿದ್ದರೆ ನನಗೆ ಹೇಳು." ॥೧೦೭॥

ಪುಲೋಮನ ಪ್ರಶ್ನೆಯನ್ನು ಕೇಳಿ ಯಮನು ಹೀಗೆ ಉತ್ತರವಿತ್ತನು. ಎಲೈ ರಾಜನೇ, ನಾವು ಇಲ್ಲಿಗೆಂದೇ ಬಂದಿದ್ದೇವೆ. ಇಲ್ಲಿ ನಡೆದಿರುವ ಅದ್ಭುತವನ್ನು ನೋಡಬೇಕೆಂದು ಕೌತುಕವುಂಟಾಯಿತು. ಇದನ್ನೇ ನೋಡಲು ಬಂದೆವು. ॥೧೦೮॥

ಎಲೈ ಪುಲೋಮನೇ, ಈಕೆಯು ಮಹಾಪುಣ್ಯಾತ್ಮಳೆಂದೂ ನಿಷ್ಪಾಪಳೆಂದೂ ನೀನೂ ಸಹ ತಿಳಿಯಬೇಕು. ಈಕೆಯನ್ನು ಸಂದರ್ಶಿಸಿದ್ದರಿಂದ ಖಂಡಿತವಾಗಿಯೂ ನಾನು ಇಂದು ಧನ್ಯನಾದೆನು. ಕೃತಕೃತ್ಯನಾದೆನು ಎಂದು ಯಮನು ಹೇಳಲು, ॥೧೦೯॥

ಅದನ್ನು ಕೇಳಿ ಪುಲೋಮನು ಆಶ್ಚರ್ಯದಿಂದ ಮತ್ತೆ ಕೇಳಿದನು. ಯಮಧರ್ಮನೇ, ಇದೇನು ಹೀಗೆ ಹೇಳುತ್ತೀಯೆ ? ಈಕೆಯು ಪುಣ್ಯಾತ್ಮಳೇ ? ಈಕೆಯನ್ನು ನೀನು ಸಂದರ್ಶಿಸಬೇಕೇ ? ಅದು ಹೇಗೆ ಸಂಭವ ? ಈಕೆಯು ಸದಾ ವಿಟರನ್ನು ಕಟ್ಟಿಕೊಂಡು ವ್ಯಭಿಚಾರವೇ ಮೊದಲಾದ ಅನೇಕ ಪಾಪಕಾರ್ಯಗಳನ್ನು ಮಾಡಿರುವುದರಿಂದ ಮಹಾಪಾಪಿಷ್ಠಳಲ್ಲವೇ ? ಈಕೆಯನ್ನು ನಾನು ಪಾಪಿಷ್ಠಳೆಂದೇ ತಿಳಿಯುತ್ತೇನೆ. ॥೧೧೦॥

ಇತಿ ತದ್ವಚನಂ ಶ್ರುತ್ವಾ ಯಮಃ ಪ್ರಾಹ ನೃಪಂ ಪ್ರತಿ ।
ಇಯಂ ಪುಣ್ಯಸ್ವರೂಪೇತಿ ಜ್ಞಾತಾ ರಾಜನ್ ಮಯಾ ಖಲು ॥೧೧೧॥

ಚಿತ್ರಗುಪ್ತೋಽಪಿ ಜಾನಾತಿ ಕಿಮೇತಾಂ ಪಾವನಾಮಿತಿ ।
ನದೀನಾಮಪಿ ಜಾನಾತಿ ನದೀಮಿತಿ ವಿನಿಶ್ಚಿತಂ ॥೧೧೨॥

ಅನಯಾ ಖಲು ರೇವಾಪಿ ಪುಣ್ಯಾ ಪುಣ್ಯೇತಿ ವಿಶ್ರುತಾ ।
ಏತತ್ಪುಣ್ಯಪ್ರಭಾವಸ್ತು ವಕ್ತುಮೇವ ನ ಶಕ್ಯತೇ ॥೧೧೩॥

ಲಿಂಗಾರ್ಚನಪರಾ ಸೇಯಂ ಜಲೈರ್ಬಿಲ್ವದಳೈರಪಿ ।
ಪಶ್ಯ ಪಶ್ಯೋತ್ತಮಂ ಲಿಂಗಂ ನಾರ್ಮದಂ ಕುಂಭಸನ್ನಿಭಂ ॥೧೧೪॥

ಈ ಪ್ರಕಾರವಾದ ರಾಜನ ಆಕ್ಷೇಪವನ್ನು ಕೇಳಿ ಯಮನು ಹೀಗೆ ಸಮಾಧಾನ ಹೇಳಿದನು. ಪುಲೋಮನೇ, ನೀನು ಹೇಳುವುದು ಸರಿಯಾದುದಲ್ಲ. ನನ್ನ ತಿಳಿವಳಿಕೆ ಮೇರೆಗೆ ಈಕೆಯು ಪುಣ್ಯಸ್ವರೂಪಳೇ ಆಗಿದ್ದಾಳೆ. ಹೀಗೆಂದು ಹೇಳುವವನು ನಾನೊಬ್ಬನೇ ಅಲ್ಲ. ನೋಡು. ॥೧೧೧॥

ಚಿತ್ರಗುಪ್ತನೂ ಸಹ ಈಕೆಯನ್ನು ಪುಣ್ಯಾತ್ಮಳೆಂದು ತಿಳಿದಿದ್ದಾನೆ. ಪವಿತ್ರವಾದ ನದಿಗಳೆಲ್ಲವುಗಳಿಗಿಂತಲೂ ಈ ನಾರಿಯೇ ಪವಿತ್ರತಮಳೆಂದು ಅರಿತಿರುವನು. ॥೧೧೨॥

ಅತ್ಯಂತ ಪವಿತ್ರಳೆಂಬ ನರ್ಮದೆಯೂ ಈಕೆಯ ಸಹವಾಸ ಸಂಪರ್ಕದಿಂದ ಮತ್ತೂ ಹೆಚ್ಚು ಪವಿತ್ರಳಾದಳೆಂದು ನಾನು ತಿಳಿಯುತ್ತೇನೆ. ಈ ನಾರಿಯ ಪುಣ್ಯವೂ ಆ ಪುಣ್ಯದ ಪ್ರಭಾವವೂ ಇಷ್ಟೆಂದು ಹೇಳುವುದಕ್ಕೇ ಸಾಧ್ಯವಿರುವುದಿಲ್ಲ. ॥೧೧೩॥

ಪುಲೋಮನೇ, ಈ ನಾರಿಯು ಶಿವಾರಾಧನೆಯನ್ನು ಮಾಡುತ್ತಿದ್ದಳು. ಶಿವಲಿಂಗವನ್ನು ಜಲಬಿಲ್ವಗಳಿಂದ ಅರ್ಚಿಸುತ್ತಿದ್ದಳು. ಅಲ್ಲಿ ನೋಡು. ಈಗಲೂ ಆ ನಾರ್ಮದಲಿಂಗವು ಅಲ್ಲಿಯೇ ಇದೆ. ಅದೂ ಸಹ ಬಿಲ್ವವೃಕ್ಷಮೂಲದಲ್ಲಿ ಸ್ಥಾಪಿತವಾಗಿದೆ. ಅಲ್ಲದೇ ದೀಪದಿಂದಲೂ ಬೆಳಗುತ್ತಿದೆ. ಆ ಲಿಂಗವು ಬಿಂದಿಗೆಯಂತಿದೆ. ॥೧೧೪॥

ಬಿಲ್ವಮೂಲಸಮಾಕ್ರಾಂತಂ ದೀಪಶೋಭಾವಿರಾಜಿತಂ ।
ಅನುಲಿಪ್ತಂ ಬಿಲ್ವಮೂಲಂ ಪಶ್ಯ ಬಿಲ್ವದಳಾವೃತಂ ॥೧೧೫॥

ಅನೇನ ಬಿಲ್ವತರುಣಾ ಲಿಂಗಪೂಜಾ ನಿರಂತರಾ ।
ಕಲ್ಪಿತಾ ಶೀರ್ಣಪರ್ಣಾನಿ ಪತಂತಿ ಶಿವಮಸ್ತಕೇ ॥೧೧೬॥

ಸದಾಸ್ತರಣಭೂತಾನಿ ಜೀರ್ಣಪರ್ಣಾನಿ ಭೂತಲೇ ।
ಪಶ್ಯ ಪಶ್ಯಾಧುನಾ ರಾಜನ್ ಮರಣೇ ಸಮುಪಸ್ಥಿತೇ ॥೧೧೭॥

ಬಿಲ್ವಪಲ್ಲವಸಂವೀತೇ ಭೂತಲೇ ಯಸ್ತನುಂ ತ್ಯಜೇತ್ ।
ಸ ಯಾತಿ ಪರಮಂ ಸ್ಥಾನಂ ದೇವಾನಾಮಪಿ ದುರ್ಲಭಂ ॥೧೧೮॥

ಅನಯಾ ವರ್ಧಿತಃ ಸೋಽಯಮಮಿತೋ ಬಿಲ್ವಭೂರುಹಃ ।
ಬಿಲ್ವಭೂರುಹವಾತೇನ ಪೂತಂ ರೇವಾಜಲಂ ಪರಂ ॥೧೧೯॥

ಈ ಬಿಲ್ವವೃಕ್ಷವನ್ನು ಈ ನಾರಿಯೇ ಬೆಳೆಯಿಸಿರುವಳು. ಈ ವೃಕ್ಷದ ಮೂಲದಲ್ಲಿ ಶಿವಲಿಂಗವನ್ನು ಸ್ಥಾಪಿಸಿರುವವಳೂ ಈಕೆಯೇ. ಇಲ್ಲಿ ನೋಡು, ಈ ವೃಕ್ಷದ ಮೂಲವನ್ನೆಲ್ಲಾ ಗುಡಿಸಿ ಸಾರಿಸಿ ಅಚ್ಚುಕಟ್ಟಾಗಿ ಮಾಡಿರುತ್ತಾಳೆ. ಇದೇ ಬಿಲ್ವವೃಕ್ಷದಿಂದ ನಿತ್ಯವೂ ಶಿವಲಿಂಗಪೂಜೆಯು ನಡೆಯುತ್ತದೆ. ಹೇಗೆಂದರೆ, ಹಣ್ಣಾದ ಎಲೆಗಳು ವೃಕ್ಷದ ಮೇಲಿಂದ ಶಿವಲಿಂಗದ ತಲೆಯಮೇಲೆಯೇ ಬೀಳುತ್ತವೆ. ಇಲ್ಲಿ ಸುತ್ತಲೂ ಬಿಲ್ವಪತ್ರೆಗಳು ಹಾಸಲ್ಪಟ್ಟಿವೆ. ॥೧೧೫-೧೧೬॥

ಈಕೆಯು ಕುಳಿತುಕೊಳ್ಳುವುದು ಸರ್ವದಾ ಬಿಲ್ವಪತ್ರೆಗಳ ಮೇಲೆಯೇ ಆಗಿದ್ದಿತು. ಈಗಲೂ ನೋಡು ; ಈಕೆಯೂ ಬಿಲ್ವಪತ್ರೆಗಳ ಮೇಲೆ ಬಿದ್ದುಕೊಂಡೇ ಪ್ರಾಣಬಿಟ್ಟಿರುವಳು. ॥೧೧೭॥

ಯಾರು ಬಿಲ್ವಪತ್ರೆಗಳನ್ನು ಹರಡಿಕೊಂಡು ಭೂಮಿಯಮೇಲೆ ಮೃತಿ ಹೊಂದುವರೋ, ಅವರು ದೇವತೆಗಳಿಗೂ ದುರ್ಲಭವಾದ ಪರಂಧಾಮವಾದ ಕೈಲಾಸವನ್ನು ಪಡೆಯುವರು. ॥೧೧೮॥

ಈ ನಾರಿಯು ಇದೇ ಬಿಲ್ವವೃಕ್ಷವನ್ನು ಬೆಳೆಯಿಸಿದ್ದಾಳೆ. ಈ ಬಿಲ್ವವೃಕ್ಷದ ವಾಯುಸೇವನೆಯಿಂದಲೂ ನರ್ಮದಾ ಜಲಪಾನದಿಂದಲೂ ನಾರ್ಮದಲಿಂಗ ಸಂಪರ್ಕದಿಂದಲೂ ಈಕೆಯು ಪವಿತ್ರಳಾಗಿದ್ದಾಳೆ. ಇಷ್ಟೊಂದು ಪುಣ್ಯಸಾಮಗ್ರಿಗಳು

ಈದೃಶೀ ಪುಣ್ಯಸಾಮಗ್ರೀ ಲೋಕೇ ಕಸ್ಯಾಸ್ತಿ ಭೂತಲೇ ।
ಇಯಂ ಪುಣ್ಯವತೀ ಮಾನ್ಯಾ ನರಕಂ ನಾಭಿಯಾಸ್ಯತಿ ॥೧೨೦॥

ಪುನರ್ಲಿಂಗಾರ್ಚನಂ ಕರ್ತುಂ ಮಾನುಷೀಂ ತನುಮಾಶ್ರಿತಾ ।
ಉದ್ಯತಾ ಪುಣ್ಯಭಾರೇಣ ಭೋಗವಾಂಛಾಪಿ ತಿಷ್ಠತಿ ॥೧೨೧॥

ಕನ್ಯಾ ತವ ಭವಿತ್ರೀ ಚ ಸೇಯಂ ಶಂಕರಪೂಜಕ ।
ಇಯಂ ಸೌಂದರ್ಯಧಾರಾಭಿರಾಶ್ರಿತಾಪಿ ಭವಿಷ್ಯತಿ ॥೧೨೨॥

ಇಂದ್ರೋಽಪಿ ಬ್ರಹ್ಮಚರ್ಯೇಣ ದಾರಾಕಾಂಕ್ಷಾಂ ಕರೋತಿ ಸಃ ।
ತಸ್ಮೈ ದೇಯಾ ತ್ವಯಾ ಕನ್ಯಾ ಸರ್ವಸೌಭಾಗ್ಯಸಂಯುತಾ ॥೧೨೩॥

ಪ್ರಪಂಚದಲ್ಲಿ ಮತ್ತೆ ಯಾರಿಗೆ ಲಭಿಸಿರುತ್ತವೆ? ಇಷ್ಟು ಸಾಮಗ್ರಿಗಳು ಒದಗಿದುದರಿಂದ ಈಕೆಯು ನರಕಕ್ಕೆ ಬರುವವಳಾಗಿಲ್ಲ. ಪ್ರತ್ಯುತ ಪುಣ್ಯಾತ್ಮಳಾಗಿರುತ್ತಾಳೆ. ॥೧೧೯-೧೨೦॥

ಈ ನಾರಿಯು ಇನ್ನೊಂದು ಜನ್ಮದಲ್ಲಿಯೂ ಮಾನುಷ ಸ್ತ್ರೀಯಾಗಿ ಹುಟ್ಟುವಳು. ಆ ಜನ್ಮದಲ್ಲಿ ವಿಶೇಷವಾಗಿ ಶಿವಲಿಂಗಾರಾಧನೆಯನ್ನು ಮಾಡಿ ಮುಂದೆ ಪರಮಪದವನ್ನು ಪಡೆಯತಕ್ಕವಳಿವಳು. ಈಗಿನ ಈ ಈಶಸೇವೆಯಿಂದ ಮುಂದೆ ಭೋಗವಿಲಾಸಗಳನ್ನೂ ಸುಖೋಪಭೋಗಗಳನ್ನೂ ಅನುಭವಿಸುವಳು. ॥೧೨೧॥

ಎಲೈ ಪರಮಭಕ್ತನಾದ ಪುಲೋಮನೇ, ಈಕೆಯು ನಿನ್ನ ಪುತ್ರಿಯಾಗಿಯೇ ಜನಿಸುವಳು. ಪರಮ ಸುಂದರಿಯಾಗಿ ಕಾಣುವಳು. ಈಗಿನಂತೆ ಆಗ ಕುರೂಪಿಣಿಯಾಗಿರುವುದಿಲ್ಲ. ॥೧೨೨॥

ಎಲೈ ಪುಲೋಮನೇ, ಆ ನಿನ್ನ ಕುಮಾರಿಯು ಮುಂದೆ ಪ್ರಾಪ್ತವಯಸ್ಕಳಾದಾಗ ಬ್ರಹ್ಮಚಾರಿಯಾದ ಇಂದ್ರನು ಬಂದು ನಿನ್ನ ಪುತ್ರಿಯನ್ನು ತನಗೆ ಕೊಟ್ಟು ವಿವಾಹಮಾಡಬೇಕೆಂದು ಬೇಡುವನು. ಆಗ ನೀನು ಪರಮ ಸೌಭಾಗ್ಯವತಿಯಾದ ನಿನ್ನ ಪುತ್ರಿಯನ್ನು ಆತನಿಗೆ ಪ್ರದಾನಮಾಡಿ ಕೃತಕೃತ್ಯನಾಗುವೆ. ॥೧೨೩॥

॥ ಶಿವಧುಂಧಿರುವಾಚ ॥

ಇತ್ಯುಕ್ತ್ವಾ ಸ ಯಯೌ ಕಾಲಸ್ಸರಾಜಾಪಿ ಗೃಹಂ ಯಯೌ ।
ತದುಕ್ತಾಂ ತತ್ಕಥಾಂ ಸ್ಮೃತ್ವಾ ವಿಸ್ಮಿತಃ ಪರಯಾ ಮುದಾ ॥೧೨೪॥

ತತಃ ಪರಂ ಪುಲೋಮಸ್ಯ ಪತ್ನೀ ಗರ್ಭಂ ದಧಾರ ಸಾ ।
ಗರ್ಭೇಽಪಿ ಸಾ ಶಿವಧ್ಯಾನನಿರತಾ ಸಮಭೂತ್ಸದಾ ॥೧೨೫॥

ತತಃ ಪ್ರಜಾತಾ ತದ್ಗರ್ಭಾತ್ಪ್ರಾಪ್ಯ ಜಾತಿಸ್ಮೃತಿಂ ಪರಾಂ ।
ಶಿವಾರ್ಚನರತಾ ಜಾತಾ ಪೂರ್ವಪುಣ್ಯಗಣೈಃ ಪರೈಃ ॥೧೨೬॥

ಸಾ ನಾಳಚ್ಛೇದನಾತ್ಪೂರ್ವಂ ಪ್ರಾಹ ಮಾತರಮಾದರಾತ್ ।
ಸರ್ವೇಷಾಂ ವಿಸ್ಮಯಂ ತಾವಜ್ಜನಯಂತೀ ಮುಹುರ್ಮುಹುಃ ॥೧೨೭॥

ಹೀಗೆಂದು ಹೇಳಿ ಯಮನು ಅಲ್ಲಿಂದ ತನ್ನ ಪರಿವಾರದೊಡನೆ ಹೊರಟು ಹೋದನು. ಯಮನು ಹೇಳಿದ ಕಥೆಯನ್ನೆಲ್ಲಾ ಸ್ಮರಿಸಿಕೊಂಡು ಪುಲೋಮನಿಗೆ ಅತ್ಯಂತ ವಿಸ್ಮಯವೂ ಆನಂದವೂ ಆಯಿತು. ಅನಂತರ ಆತನೂ ತನ್ನ ಅರಮನೆಗೆ ತೆರಳಿದನು. ೧೨೪॥

ಕೆಲವು ದಿನಗಳನಂತರ ಪುಲೋಮನ ಪತ್ನಿಯು ಗರ್ಭವತಿಯಾದಳು. ಆಕೆಯ ಗರ್ಭದಲ್ಲಿ ವಾಸಿಸುತ್ತಿದ್ದ ಆ ಸ್ತ್ರೀಶಿಶುವು, ಸದಾ ಶಿವಧ್ಯಾನದಲ್ಲಿಯೇ ನಿರತವಾಗಿತ್ತು. ॥೧೨೫॥

ದಿನ ತುಂಬಿದನಂತರ ಗರ್ಭದಿಂದ ಆ ಸ್ತ್ರೀಯು ಜನಿಸಿದಳು. ಹುಟ್ಟಿದ ಕೂಡಲೇ ಪೂರ್ವಸಂಸ್ಕಾರಗಳ ದೆಸೆಯಿಂದ ಆಕೆಗೆ ಸರ್ವವೂ ಸ್ಮೃತಿಗೆ ಬಂದವು. ಪೂರ್ವಜನ್ಮದಲ್ಲಿ ಸಂಚಿತವಾದ ಪುಣ್ಯದಿಂದ ಆ ಕೂಡಲೇ ಆಕೆಯು ಶಿವಾರಾಧನೆಯನ್ನು ಮಾಡತೊಡಗಿದಳು. ॥೧೨೬॥

ಆಕೆಯು ನಾಭಿನಾಳಭೇದವಾಗುವುದಕ್ಕೆ ಮೊದಲೇ ತನ್ನ ತಾಯಿಯನ್ನು ಕುರಿತು ಮಾತನಾಡತೊಡಗಿದಳು. ಇದನ್ನು ಕಂಡು ಎಲ್ಲರಿಗೂ ಪರಮಾಶ್ಚರ್ಯವಾಯಿತು. ॥೧೨೭॥

॥ ಪುಲೋಮಜಾ ಉವಾಚ ॥

ಶ್ರೀಬಿಲ್ವತರುರಸ್ತ್ಯೇಕೋ ರೇವಾತೀರೇ ಮನೋಹರೇ ।
ತತ್ರಾಸ್ತಿ ಲಿಂಗಮಪ್ಯೇಕಂ ಕುಂಭಾಕಾರಂ ಮನೋಹರಂ ॥೧೨೮॥

ತನ್ಮಧ್ಯೇ ಯಜ್ಜಲಂ ತೇನ ಗರ್ಭಕ್ಲೇಶನಿವಾರಣಂ ।
ಕರ್ತವ್ಯಂ ಯಾನಮಾರುಹ್ಯ ಗಂತವ್ಯಂ ಸತ್ವರಂ ಮಯಾ ॥೧೨೯॥

ವಿಭೂತಿರಧುನಾ ಧೇಯಾ ಲಲಾಟೇ ತಿರ್ಯಗಾದರಾತ್ ।
ತಿರ್ಯಕ್ತ್ರಿಪುಂಡ್ರಂ ಕರ್ತವ್ಯಮಿತಿ ವಾಣೀಂ ವದತ್ಯಪಿ ॥೧೩೦॥

ಇತಿ ತದ್ವಚನಂ ಶ್ರುತ್ವಾ ರಾಜಾನಂ ಪ್ರಾಹುರಾಸ್ತಿಕಂ ।
ತದುಕ್ತಸರ್ವಮತ್ಯಂತಮಾಶ್ಚರ್ಯಕರಮದ್ಭುತಂ ॥೧೩೧॥

ತದ್ಗಿರಂ ನೃಪತಿಶ್ಶ್ರುತ್ವಾ ಸ್ಮೃತ್ವಾ ಯಮವಚಃ ಪರಂ ।
ತಥಾ ಕರ್ತವ್ಯಮಿತ್ಯಾಹ ಮಹೋತ್ಸಾಹಸಮನ್ವಿತಃ ॥೧೩೨॥

ನರ್ಮದಾನದಿಯ ದಡದಲ್ಲಿ ಒಂದು ಬಿಲ್ವವೃಕ್ಷವಿದೆ. ಆ ವೃಕ್ಷದ ಮೂಲದಲ್ಲಿ ಒಂದು ಬಿಂದಿಗೆಯಂತಿರುವ ಸುಂದರವಾದ ಶಿವಲಿಂಗವೂ ಇರುತ್ತದೆ. ॥೧೨೮॥

ಆ ಶಿವಲಿಂಗದಲ್ಲಿ ರೇವಾನದಿಯ ಜಲವಿರುತ್ತದೆ. ಈಗ ನನಗುಂಟಾಗಿರುವ ಗರ್ಭವಾಸದ ಕ್ಲೇಶವು ಆ ಜಲದಿಂದಲೇ ನಿವಾರಿತವಾಗಬೇಕು. ಆದುದರಿಂದ ನಾನು ಈ ಕೂಡಲೇ ಯಾವುದಾದರೊಂದು ಯಾನವನ್ನೇರಿ ಅಲ್ಲಿಗೆ ಹೋಗುವೆನು. ॥೧೨೯॥

ಈ ಕೂಡಲೇ ನಾನು ಭಸ್ಮವನ್ನು ಧರಿಸುವೆನು. ಲಲಾಟದಲ್ಲಿ ಭಸ್ಮತ್ರಿಪುಂಡ್ರವನ್ನು ಹಚ್ಚಿಕೊಳ್ಳುವೆನು. ಹೀಗೆಂಬುದಾಗಿ ಪುಲೋಮಜೆಯು ಮಾತನ್ನಾಡಲು, ॥೧೩೦॥

ಆ ಬಾಲಿಕೆಯ ಮಾತನ್ನು ಕರ್ಣಾಕರ್ಣಿಕೆಯಿಂದ ಎಲ್ಲರೂ ಕೇಳಿದರು. ಈ ಅದ್ಭುತವನ್ನು ನೋಡಿ ಅತ್ಯಂತ ವಿಸ್ಮಯಪಟ್ಟು ಆಪ್ತರಾದವರು ರಾಜನಿಗೂ ಇದನ್ನು ತಿಳಿಸಿದರು. ॥೧೩೧॥

ಈ ಮಾತುಗಳನ್ನೆಲ್ಲಾ ಕೇಳಿ ರಾಜನಿಗೆ ಹಿಂದೆ ಯಮಧರ್ಮನು ತನಗೆ ಹೇಳಿದ್ದ ಮಾತುಗಳೆಲ್ಲ ಸ್ಮೃತಿಗೆ ಬಂದವು. ಆಗ ಆತನು ಅತ್ಯಂತ ಆನಂದದಿಂದ ಪುಲೋಮಜೆಯ ಅಪೇಕ್ಷೆಯಂತೆ ಎಲ್ಲವೂ ನಡೆಯಲೆಂದು ಸಮ್ಮತಿಯಿತ್ತನು ॥೧೩೨॥

ತತಃ ಪರಂ ಸಮಾದಾಯ ಬಾಲಾಂ ಕುಸುಮಸಂವೃತೇ ।
ಯಾನೇ ಸಂಸ್ಥಾಪ್ಯ ರಾಜಾಪಿ ಯಯೌ ರೇವಾತಟಂ ಪ್ರತಿ ॥೧೩೩॥

ಸ್ವಸಮಾರೋಪಿತಂ ಸಾಪಿ ದೂರಾತ್ತಂ ಬಿಲ್ವಭೂರುಹಂ ।
ದೃಷ್ಟ್ವಾ ಲಿಂಗಂ ಚ ಸುಪ್ರೀತಾ ಪ್ರಣತಾಪಿ ಕೃತಾಂಜಲಿಃ ॥೧೩೪॥

ತತಸ್ತತ್ರ ಗತಾ ಸ್ಥಿತ್ವಾ ಬಿಲ್ವಮೂಲೇ ಮನೋಹರೇ ।
ಲಿಂಗಮಾಲಿಂಗ್ಯ ಸಂತುಷ್ಟಾ ಸ್ನಾತ್ವಾ ಲಿಂಗಜಲೈಃ ಪರೈಃ ॥೧೩೫॥

ತತ್ರ ಭೂತ್ಯಾ ಸಮುದ್ಧೂಳ್ಯ ಸ್ವಾಂಗಾನಿ ವಿಮಲಾನ್ಯಪಿ ।
ರರಾಜ ಚಂದ್ರರೇಖೇವ ಭೂತಿರುದ್ರಾಕ್ಷಭೂಷಣಾ ॥೧೩೬॥

ಸಾ ಹಸ್ತಲಭ್ಯಾನಾದಾಯ ಕೋಮಲಾನ್ ಬಿಲ್ವಪಲ್ಲವಾನ್ ।
ತಲ್ಲಿಂಗೇ ಪೂಜಯಾಮಾಸ ಶಂಕರಂ ಲೋಕಶಂಕರಂ ॥೧೩೭॥

ಅನಂತರ ಆ ಬಾಲಿಕೆಯನ್ನು ಕೂರಿಸಿಕೊಂಡು ಹೋಗಲು ಪುಷ್ಪಮಯವಾದ ರಥವನ್ನು ಸಿದ್ಧಗೊಳಿಸಿ, ಹೂವಿನ ಮೆತ್ತೆಯ ಆಸನದಲ್ಲಿ ಪುಲೋಮಜೆಯನ್ನು ಕುಳ್ಳಿರಿಸಿಕೊಂಡು ರಾಜನು ತಾನೇ ನರ್ಮದಾ ತೀರಕ್ಕೆ ಕರೆದುಕೊಂಡು ಹೋದನು. ||೧೩೩||

ಅಲ್ಲಿಗೆ ತಲಪಿದಕೂಡಲೇ ಪುಲೋಮಜೆಯು ತಾನು ಬೆಳೆಯಿಸಿದ ಬಿಲ್ವವೃಕ್ಷವನ್ನೂ ಅದರ ಮೂಲದಲ್ಲೇ ಇದ್ದ ಶಿವಲಿಂಗವನ್ನೂ ದೂರದಲ್ಲಿದ್ದಾಗಲೇ ಕಂಡು ಅತ್ಯಂತ ಭಕ್ತಿ ಮತ್ತು ಪ್ರೀತಿಯಿಂದ ನಮಸ್ಕರಿಸಿದನು. ||೧೩೪||

ಅನಂತರ ಆ ಬಿಲ್ವವೃಕ್ಷದ ಮೂಲಕ್ಕೆ ಹೋಗಿ ಆ ಶಿವಲಿಂಗವನ್ನು ಪದೇ ಪದೇ ಅಪ್ಪಿಕೊಂಡು ಆನಂದಪಟ್ಟಳು. ಆ ಲಿಂಗದಲ್ಲಿದ್ದ ಶ್ರೇಷ್ಠವಾದ ಜಲದಿಂದ ಸ್ನಾನ ಮಾಡಿ ಅಲ್ಲಿಯೇ ಇರುತ್ತಿದ್ದಳು. ||೧೩೫||

ಆ ಪುಲೋಮಜೆಯು ತನ್ನ ಕೋಮಲವಾದ ಶರೀರಕ್ಕೆಲ್ಲಾ ಭಸ್ಮವನ್ನು ಲೇಪಿಸಿಕೊಂಡಳು. ರುದ್ರಾಕ್ಷಮಾಲೆಗಳನ್ನೂ ಧರಿಸಿದಳು. ಈ ಉಜ್ವಲವಾದ ವೇಷದಲ್ಲಿ ಆಕೆಯನ್ನು ನೋಡಿದರೆ ಚಂದ್ರರೇಖೆಯಂತೆಯೇ ಕಾಣುತ್ತಿದ್ದಳು. ||೧೩೬||

ಆ ಪುಲೋಮಜೆಯು ತನ್ನ ಕೈಗೆ ನಿಲುಕುವ ಬಿಲ್ವಪತ್ರೆಗಳನ್ನು ಕೊಯಿದು

ದೃಷ್ಟ್ವಾ ತಾಂ ವಿಸ್ಮಿತೋ ರಾಜಾ ಸ್ವಾಮಾತ್ಯಗಣಸಂಯುತಃ ।
ಧನ್ಯಾಂ ಮೇನೇ ಶಿವರತಾಂ ತಾಂ ಕನ್ಯಾಂ ಕಮಲಾನನಾಂ ॥೧೩೮॥

ತತಃ ಪ್ರೋವಾಚ ರಾಜಾನಂ ಸಾ ಕನ್ಯಾ ವರವರ್ಣಿನೀ ।
ಕರ್ಣಭೂಷಣರೂಪಾಭಿರ್ವಾಗ್ಭಿರಾದರಪೂರ್ವಕಂ ॥೧೩೯॥

ರಾಜನ್ನತ್ರೈವ ನಗರಂ ಕರ್ತವ್ಯಮತಿಸುಂದರಂ ।
ರತ್ನಪ್ರಾಕಾರಸಂಕೀರ್ಣಂ ರತ್ನಮಂದಿರಸುಂದರಂ ॥೧೪೦॥

ಅಸ್ಯ ಲಿಂಗಸ್ಯ ಕರ್ತವ್ಯಂ ಸದನಂ ಮಣಿಕೋಟಿಭಿಃ ।
ರತ್ನಪ್ರಾಸಾದರಚನಾ ಕರ್ತವ್ಯಾಪಿ ಪ್ರಯತ್ನತಃ ॥೧೪೧॥

ಕೊಂಡು ಅವುಗಳಿಂದ ಲಿಂಗದಲ್ಲಿ ಲೋಕಕ್ಕೇ ಕಲ್ಯಾಣಕಾರಿಯಾದ ಶಂಕರನನ್ನು ಪೂಜಿಸಿದಳು. ॥೧೩೭॥

ಆ ಬಾಲಿಕೆಯು ಮಾಡುತ್ತಿರುವುದನ್ನೆಲ್ಲಾ ನೋಡಿ ಆ ಪುಲೋಮನಿಗೂ ಆತನ ಮಂತ್ರಿಗಳಿಗೂ ಪರಮಾಶ್ಚರ್ಯವಾಗುತ್ತಿದ್ದಿತು. ಚಂದ್ರಮುಖಿಯಾದ ತನ್ನ ಪುತ್ರಿಯು ಈ ರೀತಿ ಶಿವಾರಾಧನೆಯಲ್ಲಿ ತತ್ಪರಳಾದುದನ್ನು ನೋಡಿ ರಾಜನು, ಧನ್ಯಳು ಧನ್ಯಳು ಎಂದುಕೊಂಡನು. ಇದೇ ರೀತಿಯಿಂದಲೇ ದಿನಗಳು ಕಳೆಯುತ್ತಿದ್ದವು. ॥೧೩೮॥

ಹೀಗಿರಲು ಒಂದುದಿನ ಸುಲಕ್ಷಣಸಂಪನ್ನಳಾದ ಆ ಕುಮಾರಿಯು ತನ್ನ ತಂದೆಯಾದ ರಾಜನನ್ನು ಕುರಿತು ಆದರಪೂರ್ವಕವಾಗಿ ಮಧುರವಾದ ಮಾತನ್ನಾಡಿದಳು. ಆ ಮಾತುಗಳು ಕಿವಿಗಳಿಗೆ ಒಂದು ಒಡವೆಯಂತೆಯೇ ಆಗಿದ್ದಿತು. (ಒಡವೆಯನ್ನಿಟ್ಟುಕೊಂಡರೆ ಎಷ್ಟು ಆನಂದವಾಗುವುದೋ ಹಾಗೆಯೇ ಈ ಮಾತುಗಳನ್ನು ಕೇಳಿದರೂ ರಾಜನಿಗೆ ಆನಂದವಾಗುತ್ತಿತ್ತು). ॥೧೩೯॥

ತಂದೆಯಾದ ಮಹಾರಾಜನೇ, ಇಲ್ಲಿಯೇ ಒಂದು ಪಟ್ಟಣವನ್ನು ನಿರ್ಮಿಸಬೇಕು. ಅದರಲ್ಲಿ ಸುಂದರವಾದ ರತ್ನಮಂದಿರಗಳನ್ನು ಕಟ್ಟಿಸಿ ಅದನ್ನು ಸುಂದರತಮವನ್ನಾಗಿ ಮಾಡಬೇಕು. ॥೧೪೦॥

ಇಲ್ಲಿರುವ ಶಿವಲಿಂಗಕ್ಕೆ ಇಲ್ಲಿಯೇ ಮಣಿಮಯವಾದ ಮಂದಿರವನ್ನು ನಿರ್ಮಿಸಬೇಕು. ಮಂದಿರವು ರತ್ನಮಯವಾದ ಮೇಲುಪ್ಪರಿಗೆಗಳಿಂದ ಕೂಡಿರಬೇಕಲ್ಲದೇ ದೊಡ್ಡ ಸುಂದರವಾದ ಅರಮನೆಯಂತೆಯೇ ಕಂಗೊಳಿಸಬೇಕು. ॥೧೪೧॥

ಅಸ್ಯ ಲಿಂಗಸ್ಯ ಪೂಜಾಪಿ ಕರ್ತವ್ಯಾ ಸಾದರಂ ಮಯಾ ।
ಅಹೋರಾತ್ರಮಿಹ ಸ್ಥೇಯಂ ಇತಃ ಕ್ವಾಪಿ ನ ಗಮ್ಯತೇ ॥೧೪೨॥

ಲಿಂಗಾವಲೋಕನೇನೈವ ಕಾಲೋ ನೇಯಃ ಕಿಯಾನ್ ಮಯಾ ।
ಇಂದ್ರೋಽಪ್ಯತ್ರ ಸಮಾಯಾಸ್ಯತ್ಯತಃ ಪರಮಸಂಶಯಂ ॥೧೪೩॥

ಸ ಮೇ ಪರಿಣಯಂ ಕೃತ್ವಾ ಗಮಿಷ್ಯತಿ ಮಹೋತ್ಸವೈಃ ।
ಏತಲ್ಲಿಂಗಾರ್ಚನಫಲಂ ಮಮೈವಂ ಹಿ ಭವಿಷ್ಯತಿ ॥೧೪೪॥

ಇತ್ಯಾಕರ್ಣ್ಯ ವಚಸ್ತಸ್ಯಾಃ ಕುಮಾರ್ಯಾಃ ಕರ್ಣಭೂಷಣಂ ।
ತಥೈವ ನಗರಂ ತತ್ರ ಕಾರಯಾಮಾಸ ಭೂಪತಿಃ ॥೧೪೫॥

ತತೋ ಯೌವನಮಾಸಾದ್ಯ ಸ್ಥಿತಾ ಸಾಪಿ ಪುಲೋಮಜಾ ।
ಇಂದ್ರೋಽಪ್ಯಭ್ಯಾಗತಸ್ತತ್ರ ದೇವೈರನ್ಯೈಸ್ಸಮಾವೃತಃ ॥೧೪೬॥

ಇಲ್ಲಿಂದ ಹೊರಕ್ಕೆ ನಾನು ಎಲ್ಲಿಗೂ ಬರುವುದಿಲ್ಲ. ಇಲ್ಲಿಂದ ಹೊರಡುವುದೂ ಇಲ್ಲ. ಹಗಲೂ ರಾತ್ರಿ ಇಲ್ಲಿಯೇ ಇದ್ದು ಶಿವಲಿಂಗಾರಾಧನೆಯನ್ನೇ ಮಾಡುತ್ತಿರುವೆನು. ॥೧೪೨॥

ಎಷ್ಟೇ ದಿವಸಗಳಾದರೂ ನಾನು ಈ ಶಿವಲಿಂಗವನ್ನು ನೋಡುತ್ತ ನೋಡುತ್ತಲೇ ಕಾಲಕಳೆಯುವೆನು. ಬಹುಶಃ ಮುಂದೆ ಇಂದ್ರನೂ ಇಲ್ಲಿಗೇ ಬರುವನು. ॥೧೪೩॥

ಇಂದ್ರನೇ ನನ್ನನ್ನು ವಿವಾಹಮಾಡಿಕೊಳ್ಳುವನು. ಈ ನನ್ನ ಶಿವಾರಾಧನೆಗೆ ಪರಮ ಫಲಸ್ವರೂಪವಾಗಿ ಆತನು ನನ್ನ ಪ್ರಾಣಿಗ್ರಹಣವನ್ನು ಮಾಡಿಕೊಂಡು ನಮ್ಮೆಲ್ಲರಿಗೂ ಸಂತಸವನ್ನುಂಟುಮಾಡಿ ತಾನೂ ಉತ್ಸವಸಹಿತನಾಗಿ ನನ್ನನ್ನು ಕರೆದುಕೊಂಡುಹೋಗುವನು. ॥೧೪೪॥

ಹೀಗೆಂದು ಪುಲೋಮಜೆಯು ಕರ್ಣಾನಂದಕರವಾದ ಮಾತನ್ನಾಡಲು ಅದನ್ನು ಕೇಳಿ ಅತ್ಯಂತ ಸಂತುಷ್ಟನಾಗಿ ಆ ಪುಲೋಮರಾಜನು ಆಕೆಯ ಇಷ್ಟದ ಮೇರೆಗೆ ಅಲ್ಲಿಯೇ ಒಂದು ಪಟ್ಟಣವನ್ನು ನಿರ್ಮಿಸಿದನು. ॥೧೪೫॥

ರಾಜನಿಂದ ಸುಂದರವಾಗಿ ನಿರ್ಮಿಸಲ್ಪಟ್ಟ ಆ ಶಿವಮಂದಿರದಲ್ಲಿಯೇ ವಾಸಿಸುತ್ತಾ ಪುಲೋಮಜೆಯು ಕಾಲಕ್ರಮೇಣ ಯೌವನವನ್ನು ಪಡೆದಳು. ಆಗ ದೇವತೆಗಳೊಡನೆ ಒಂದು ದಿನ ಇಂದ್ರನೂ ಬಂದನು. ॥೧೪೬॥

ತಮಾಗತಂ ನೃಪೋ ದೃಷ್ಟ್ವಾ ಸಂತೋಷೈರಿಂದ್ರಮಾದರಾತ್ ।
ತದ್ಬಿಲ್ವಮೂಲಸಂನಿಷ್ಟಂ ತಲ್ಲಿಂಗಾರ್ಚನತತ್ಪರಂ ॥೧೪೭॥

ತದ್ಬಿಲ್ವತರುಪತ್ರೈಸ್ತಂ ಪೂಜಯಂತಂ ಮಹೇಶ್ವರಂ ।
ಪ್ರಾಹ ಸಂತೋಷವಚನೈಃ ಪುಲೋಮಸ್ತಮವಾರಕೈಃ ॥೧೪೮॥

॥ ಪುಲೋಮ ಉವಾಚ ॥

ಧನ್ಯೋಽಸ್ಮಿ ಕೃತಕೃತ್ಯೋಽಸ್ಮಿ ಯಸ್ಮಾದಿಂದ್ರ ತ್ವಯಾಧುನಾ ।
ಸಮಾಗತಂ ಮೇ ಸಡನಂ ಸದನಂ ಶುಭಸಂಪದಾಂ ॥೧೪೯॥

ಕಿಮಸ್ತ್ಯಪೇಕ್ಷಿತಂ ಮತ್ತಸ್ತದ್ದೇಯಂ ತುಭ್ಯಮಾದರಾತ್ ।
ತವಾಪ್ತವಾಪ್ತಕಾಮಸ್ಯ ಕಾಮನಾ ಕುತ್ರ ವಾ ವದ ॥೧೫೦॥

ಇತಿ ತದ್ವಚನಂ ಶ್ರುತ್ವಾ ತಮಿಂದ್ರಃ ಪ್ರಾಹ ಸಾದರಂ ।
ಕಿಮಸ್ತ್ಯಪೇಕ್ಷಿತಂ ರಾಜನ್ ಲಿಂಗದರ್ಶನಮಂತರಾ ॥೧೫೧॥

ಇಂದ್ರನು ಅಲ್ಲಿಗೆ ಬಂದೊಡನೆಯೇ ಆ ಶಿವಮಂದಿರಕ್ಕೆ ಹೋಗಿ ಬಿಲ್ವವೃಕ್ಷದ ಮೂಲದಲ್ಲಿರುವ ಶಿವಲಿಂಗವನ್ನು ಬಿಲ್ವಪತ್ರೆಗಳಿಂದ ಅರ್ಚಿಸುತ್ತಿದ್ದನು. ಇದೆಲ್ಲವನ್ನೂ ಪುಲೋಮನು ನೋಡಿಯೂ ತಡೆಯದೆ, ಅತ್ಯಂತ ಸಂತುಷ್ಟನಾಗಿ ಇಂದ್ರನನ್ನು ಕುರಿತು ಆದರದಿಂದ ಹೀಗೆ ಹೇಳಿದನು. ||೧೪೭-೧೪೮||

ಎಲೈ ದೇವೇಂದ್ರನೇ, ಇಂದು ನಾನು ಧನ್ಯನಾದೆನು. ಕೃತಕೃತ್ಯನಾದೆನು. ನೀನು ನನ್ನ ಮನೆಗೆ ಬಂದಿದ್ದರಿಂದ ನನ್ನ ಅರಮನೆಯು ಸಕಲ ಶುಭಗಳಿಗೂ ನೆಲೆವೀಡಿನಂತಾಯಿತು. ||೧೪೯||

ಎಲೈ ಇಂದ್ರನೇ, ನೀನು ಸ್ವತಃ ಎಲ್ಲಾ ಇಷ್ಟಾರ್ಥಗಳನ್ನೂ ಪಡೆದವನಾಗಿದ್ದೀಯೆ. ಆದರೂ ನನ್ನಿಂದ ಏನು ಅಪೇಕ್ಷಿತವಾಗಿದೆಯೋ ಹೇಳು. ನೀನು ಕೇಳಿದ್ದನ್ನು ನಾನು ಅವಶ್ಯಕವಾಗಿ ಪ್ರೀತಿಯಿಂದ ಕೊಡಲು ಸಿದ್ಧನಿರುವೆನು. ಏನು ಬೇಕು ಕೇಳು. ||೧೫೦||

ಎಂದು ರಾಜನು ಪ್ರಶ್ನಿಸಲು ಇಂದ್ರನೂ ಆದರ ವಿಶ್ವಾಸವನ್ನು ಸೂಚಿಸುತ್ತಾ ಹೇಳಿದನು. ಎಲೈ ರಾಜನೇ, ನನಗೇನು ಬೇಕಾಗಿದೆ? ಶಿವಲಿಂಗದರ್ಶನ ಒಂದನ್ನು ಬಿಟ್ಟು ನನ್ನ ಅಪೇಕ್ಷಿತಾನೆ ಮತ್ತೇಸಿದ್ದೀತು ? ||೧೫೧||

ಏತಲ್ಲಿಂಗಪ್ರಭಾವಸ್ತು ಮಹ್ಯಮುಕ್ತೋ ಯಮೇನ ಸಃ ।
ಸ್ಮೃತೋಽಪಿ ತೋಷದಸ್ಸೋಽಯಂ ಸರ್ವದೋಷನಿವಾರಕಃ ॥೧೫೨॥

ತದಾನೀಮಾಹ ತಂ ಭೂಪಂ ಗುರುರಾಹೂಯ ಸಾದರಂ ।
ವಿವಾಹಾಪೇಕ್ಷಯಾತ್ರೇಂಪ್ರಸ್ಸಮಾಗತ ಇತಿ ಸ್ಮರ ॥೧೫೩॥

ತತಃ ಪರಂ ತದ್ವಚನಾಮೃತೇನ
ಪೀತೇನ ರಾಜಾ ಪರಿತುಷ್ಟದೇಹಃ ।
ತಥಾಸ್ತ್ವಿತಿ ಪ್ರಾಹ ತತಶ್ಚಕಾರ
ವಿವಾಹಯತ್ನಂ ಸ ಕೃತಾರ್ಥಬುದ್ಧಿಃ ॥೧೫೪॥

ತತಃ ಪರಂ ಮಂಡಿತಮೇವ ಸರ್ವಂ
ಪುರಂ ಮಹಾರ್ಹೈರ್ಮಣಿತೋರಣಾದ್ಯೈಃ ।
ಪುಲೋಮಜಾ ರತ್ನವಿಭೂಷಣಾದ್ಯೈ
ಸ್ಸಾ ಭೂಷಿತಾ ಪುಣ್ಯವರೇಣ್ಯಪುಂಜಾ ॥೧೫೫॥

ಈ ಶಿವಲಿಂಗದ ಮಹಿಮೆಯನ್ನು ನನಗೆ ಯಮನು ಹೇಳಿದ್ದನು. ಈ ಲಿಂಗವನ್ನು ಸ್ಮರಿಸಿದ ಮಾತ್ರದಿಂದಲೇ ಸಕಲ ಪಾಪದೋಷಗಳೂ ನಾಶವಾಗಿ ಸುಖಸಂತೋಷಗಳು ಲಭಿಸುವುವು ಎಂದು ಅಂದಿನಿಂದ ತಿಳಿದಿರುವೆನು. ॥೧೫೨॥

ಎಂದು ಹೇಳುತ್ತಿದ್ದ ಇಂದ್ರನ ಜೊತೆಯಲ್ಲಿ ಆಗ ಬೃಹಸ್ಪತಿಯೂ ಬಂದಿದ್ದನು. ಆತನು ರಾಜನನ್ನು ಹತ್ತಿರಕ್ಕೆ ಕರೆದು ಇಂದ್ರನು ಕನ್ಯಾರ್ಥಿಯಾಗಿ ಬಂದಿದ್ದಾನೆ. ನಿನ್ನ ಕುಮಾರಿಯ ಪಾಣಿಗ್ರಹಣವನ್ನು ಮಾಡಿಕೊಳ್ಳಬೇಕೆಂದು ಅಪೇಕ್ಷೆಪಡುತ್ತಿದ್ದಾನೆಂದೂ ತಿಳಿಸಿದನು. ॥೧೫೩॥

ಆ ಬೃಹಸ್ಪತಿಯ ಮಾತನ್ನು ಕೇಳಿ ರಾಜನಿಗೆ ಅಮೃತವನ್ನು ಸೇವಿಸಿದಷ್ಟು ಪರಮಾನಂದವಾಯಿತು. ಆತನು ಸಂತೋಷದಿಂದ ಉಬ್ಬಿಹೋದನು. ಇಂದ್ರನು ತನ್ನ ಕನ್ಯೆಗೆ ವರನಾಗುವುದರಿಂದ ತಾನೇ ಕೃತಾರ್ಥನಾಗುವೆನೆಂದು ಮನಸ್ಸಿನಲ್ಲಿ ಶ್ಲಾಘಿಸಿಕೊಂಡು ಕೂಡಲೇ ವಿವಾಹಕ್ಕೆ ಸಮ್ಮತಿ ಇತ್ತನು. ಹಾಗೂ ಆ ಸಮಾರಂಭಕ್ಕೆ ಬೇಕಾಗುವ ಸಿದ್ಧತೆಗಳಿಗೂ ಏರ್ಪಾಟು ಮಾಡಿದನು. ॥೧೫೪॥

ರಾಜನ ಅಪ್ಪಣೆ ಮೇರೆಗೆ ಪಟ್ಟಣವನ್ನೆಲ್ಲಾ ಅಲಂಕರಿಸಲಾಯಿತು. ಮಹಾ ಮಹಾ ಅಮೂಲ್ಯವಾದ ವೈಡೂರ್ಯಮಣಿಗಳ ತೋರಣದಿಂದ ಅಂದವಾಗಿ

ಸಂಪೂರ್ಣನಗರಂ ತಸ್ಯ ದೇವದುಂದುಭಿನಿಸ್ವನೈಃ ।
ಮಂದಾರಪುಷ್ಪವೃಷ್ಟ್ಯಾಪಿ ತೂರ್ಯೈರನ್ಯೈರ್ವಿಶೇಷತಃ ॥೧೫೬॥

ಸುಮುಹೂರ್ತೇ ದದೌ ಕನ್ಯಾಂ ಮಂಗಳಸ್ನಾನಪೂರ್ವಕಂ ।
ರಾಜಾಪ್ಯಲಂಕೃತೋ ರಾಜ್ಞೀಸಹಿತೋ ದಿವ್ಯಭೂಷಣೈಃ ॥೧೫೭॥

ಭೋಜಿತಾಶ್ಯಾಂಭವಾಸ್ತೇನ ಕೋಟಿಶೋ ರತ್ನಭೂಷಣೈಃ ।
ತೋಷಿತಾಶ್ಚ ಮಹಾದಾನೈರಪಾರೈರಮಿತೋತ್ಸವಾಃ ॥೧೫೮॥

ಏವಂ ವಿವಾಹೋತ್ಸವಸಂಯುತೋಽಭೂತ್
ರಾಜಾ ಯಯಾವಿಂದ್ರಪುರೀಂ ಸ್ವಕನ್ಯಾಂ ।

ಸಿಂಗರಿಸಲಾಯಿತು. ಆಪ್ತ ಸಖಿಯರು ಪುಣ್ಯಮೂರ್ತಿಯಾದ ಪುಲೋಮಜೆಯನ್ನು ರತ್ನಾಲಂಕಾರಗಳಿಂದ ಸೊಗಸಾಗಿ ಅಲಂಕರಿಸಿದರು. ||೧೫೫||

ಆ ವಿವಾಹಸಮಾರಂಭಕ್ಕೆಂದು ದೇವತೆಗಳೆಲ್ಲರೂ ಮಹೋತ್ಸವದಿಂದ ಆ ಪಟ್ಟಣಕ್ಕೆ ಬಂದರು. ಆ ದೇವತೆಗಳ ಮಂಗಲವಾದ್ಯದಿಂದಲೂ ನಗಾರಿ ದುಂದುಭಿ ಮುಂತಾದ ವಿಶೇಷ ವಾದ್ಯಗಳಿಂದಲೂ ವಾದನ ನಡೆಯಲು, ಆ ಧ್ವನಿಯಿಂದ ಪಟ್ಟಣವೆಲ್ಲಾ ಮೊಳಗಿತು. ಮಂದಾರವೇ ಮೊದಲಾದ ದೇವಲೋಕದ ಹೂಗಳಿಂದ ಪುಷ್ಪವೃಷ್ಟಿಯನ್ನು ಯಥೇಚ್ಛವಾಗಿ ಸುರಿಸಿದರು. ||೧೫೬||

ಅನಂತರ ಪುಲೋಮರಾಜನು ತನ್ನ ರಾಣಿಯೊಂದಿಗೆ ಮಹಾನಂದಯುಕ್ತನಾಗಿ ದಿವ್ಯವಾದ ವಸ್ತ್ರಾಭರಣಗಳಿಂದ ಅಲಂಕೃತನಾಗಿ ಸುಮುಹೂರ್ತದಲ್ಲಿ ಪುಲೋಮಜೆಗೆ ಮಂಗಳಸ್ನಾನವನ್ನು ಮಾಡಿಸಿ ದೇವೇಂದ್ರನಿಗೆ ಧಾರೆ ಎರೆದನು. ||೧೫೭||

ಮಹಾಸಂಭ್ರಮದೊಡನೆ ಕನ್ಯಾದಾನಮುಹೂರ್ತವು ನೆರವೇರಿದ ನಂತರ ದೊಡ್ಡ ಅನ್ನದಾನ ಸಮಾರಂಭವನ್ನು ನಡೆಸಿದನು. ಕೋಟಿಗಟ್ಟಳೆ ಶಿವಭಕ್ತರಿಗೆ ಭೋಜನವನ್ನು ಮಾಡಿಸಿ ರತ್ನಮಯವಾದ ಒಡವೆಗಳನ್ನೂ ವಸ್ತ್ರದಾನ ಮತ್ತು ಮಹಾದಾನ ಇವುಗಳಿಂದ ಎಲ್ಲರನ್ನೂ ಸಂತುಷ್ಟಿಗೊಳಿಸಿದನು. ಈ ಸಮಾರಂಭದಲ್ಲಿ ಶಿವಭಕ್ತರೂ ಸಹ ಅತ್ಯಂತ ಉತ್ಸವದಿಂದ ಆನಂದಭರಿತರಾಗಿದ್ದರು. ||೧೫೮||

ಹೀಗೆ ಮಹಾ ಉತ್ಸಾಹದಿಂದ ವಿವಾಹಮಹೋತ್ಸವವನ್ನು ಸಮಗ್ರವಾಗಿ ನಡೆಯಿಸಿದ ಮೇಲೆ ರಾಜನು ತನ್ನ ಕುಮಾರಿ ಪುಲೋಮಜೆಯೊಡನೆಯೂ

ಇಂದ್ರಂ ಪುರಸ್ಕೃತ್ಯ ಮಹೋತ್ಸವೇನ
ತೂರ್ಯೈಶ್ಚ ಸಂಪನ್ನಮತಿಪ್ರಯುಕ್ತೈಃ ॥೧೫೯॥

ಗೃಹಪ್ರವೇಶೋತ್ತರಮಿಂದ್ರದತ್ತೈಃ
ಕಲ್ಪದ್ರುಮಾದ್ಯೈಸ್ಸ ನೃಪೋಽತಿಹೃಷ್ಟಃ ।
ಅಭ್ಯಾಗತಸ್ಸನ್ನಗರಂ ಮನೋಜ್ಞಂ
ಸ್ವಕನ್ಯಯಾ ಸಾಕಮಮಾತ್ಯಯುಕ್ತಃ ॥೧೬೦॥

ಪುಲೋಮಜಾ ಲಿಂಗವಿಲೋಕನೇನ
ತತ್ಪೂಜನೇನಾಪಿ ಪುನಃ ಪ್ರಹೃಷ್ಟಾ ।
ತಂ ಬಿಲ್ವಮಾಲಿಂಗ್ಯ ತದೀಯಪತ್ರೈ
ರಭ್ಯರ್ಚಯಾಮಾಸ ಶಿವಾಸಹಾಯಂ ॥೧೬೧॥

ಸಾ ತಲ್ಲಿಂಗಂ ಪೂಜಯಿತ್ವಾ ಯಥೇಷ್ಟಂ
ಸ್ವರ್ಗಂ ಗತ್ವಾ ಯಾನಮಾರುಹ್ಯ ದಿವ್ಯಂ ।

ದೇವೇಂದ್ರನೊಡನೆಯೂ ಮಹಾ ಉತ್ಸವಪೂರ್ಣವಾದ ಅಮರಾವತಿ ನಗರಿಗೆ ಮಂಗಲವಾದ್ಯ ಸಮೇತನಾಗಿ ಹೋದನು. ॥೧೫೯॥

ನೂತನ ವಧೂವರರ ಗೃಹಪ್ರವೇಶೋತ್ಸವವು ಮಹಾಸಂಭ್ರಮದಿಂದ ನಡೆಯಿತು. ಅನಂತರ ದೇವೇಂದ್ರನು ಪುಲೋಮನಿಗೆ ಮಹಾಗೌರವವಾಗಿ ಪುರಸ್ಕಾರವಿತ್ತನು. ಕಲ್ಪದ್ರುಮವನ್ನೇ ಒಪ್ಪಿಸಿದನು. ಹೀಗೆ ಇಂದ್ರನಿಂದ ಸಂಭಾವಿತನಾದ ಮೇಲೆ ಪುಲೋಮನು ತನ್ನ ಕುಮಾರಿಯನ್ನೂ ಕರೆದುಕೊಂಡು ಮಂತ್ರಿಗಳೊಡನೆ ತನ್ನ ಪಟ್ಟಣಕ್ಕೆ ತಿರುಗಿ ಬಂದನು. ॥೧೬೦॥

ಅಮರಾವತಿಯಿಂದ ತಿರುಗಿ ಬಂದೊಡನೆ ಪುಲೋಮಜೆಯು ಮೊದಲು ಶಿವಲಿಂಗವನ್ನು ಸಂದರ್ಶಿಸಿದಳು. ಸಂಭ್ರಮದಿಂದ ಸಂಪೂಜಿಸಿ ಆನಂದಪಟ್ಟಳು. ಆ ಬಿಲ್ವವೃಕ್ಷವನ್ನು ಪರಮಾನುರಾಗದಿಂದ ಆಲಿಂಗಿಸಿಕೊಂಡಳು. ಅದೇ ವೃಕ್ಷದ ಬಿಲ್ವಪತ್ರೆಗಳಿಂದ ಗಿರಿಜಾರಮಣನನ್ನು ಪದೇ ಪದೇ ಆರಾಧಿಸುತ್ತಿದ್ದಳು. ॥೧೬೧॥

ಆ ಪುಲೋಮಜೆಯು ಆಗ ತನ್ನ ಮನಸ್ಸಿಗೆ ಸಂತೃಪ್ತಿಯಾಗುವ ವರೆಗೂ ಶಿವಾರಾಧನೆಯನ್ನು ನಡೆಯಿಸಿ ಅನಂತರ ದಿವ್ಯವಾದ ವಿಮಾನವನ್ನೇರಿ ಸ್ವರ್ಗಕ್ಕೆ

ಆಯಾತ್ಯೇವ ಪ್ರತ್ಯಹಂ ಲಿಂಗಪೂಜಾಂ
ಕರ್ತುಂ ಭರ್ತ್ರಾ ಸಾಕಮೇವಾತಿಹೃಷ್ಟಾ ॥೧೬.೨॥

ಶಂಕರಃ ಪ್ರೇರಯತ್ಯೇವ ಬಿಲ್ವಾರಾಧನಕಾಮುಕಃ ।
ಸ್ವಾರ್ಚನಾಯ ಪುನರ್ನಿತ್ಯಂ ಕೃಪಾಲುರ್ಬೋಧಸಾಗರಃ ॥೧೬.೩॥

ಇತಿ ತದ್ವಚನಂ ಶ್ರುತ್ವಾ ಸಾದರಂ ಭಕ್ತಿಪೂರ್ವಕಂ ।
ಪ್ರಣತಃ ಪ್ರಾಂಜಲಿಃ ಪ್ರಾಹ ತಂ ಮುನಿಂ ವನಪಾಲಕಃ ॥೧೬.೪॥

ಇತಿಹಾಸಃ ಶ್ರುತಸ್ತ್ವೋಽಯಂ ಕೃಪಯಾ ತವ ಕೇವಲಂ ।
ಧನ್ಯೋಽಸ್ಮ್ಯತಃ ಪರಂ ಕೃತ್ಯಂ ಹಿತಂ ಮಮ ವದಾಧುನಾ ॥೧೬.೫॥

ಹೋದಳು. ಅಲ್ಲದೇ ಪ್ರತಿದಿನವೂ ತನ್ನ ಪತಿಯೊಡನೆ ವಿಮಾನದಿಂದ ಬಂದು ಆನಂದವಾಗಿ ಶಿವಲಿಂಗಪೂಜೆಯನ್ನೂ ಶಿವಧ್ಯಾನವನ್ನೂ ಮಾಡಿ ಪರಮಾನಂದ ದಿಂದ ಹೋಗುತ್ತಿದ್ದಳು. ॥೧೬.೨॥

ಇಂಥ ಶಿವಾರಾಧನೆಯ ಸುಯೋಗವು ಸಾಮಾನ್ಯವಾಗಿ ಎಲ್ಲರಿಗೂ ದೊರೆಯುವುದಿಲ್ಲ. ಯಾರಿಗೆ ಅಪಾರವಾದ ಪುಣ್ಯವು ಸಂಚಿತವಾಗಿರುತ್ತದೆಯೋ ಅವರನ್ನೇ ತನ್ನನ್ನು ಅರ್ಚಿಸುವಂತೆ ಸ್ವಯಂಶಂಕರನೇ ಪ್ರೇರಿಸುತ್ತಾನೆ. ಆತನು ಬಿಲ್ವಾರಾಧನೆಯನ್ನು ಬಹಳವಾಗಿ ಮೆಚ್ಚುತ್ತಾನೆ. ಭಕ್ತರನ್ನು ಉದ್ಧಾರಮಾಡಬೇಕೆಂಬ ದಯೆಯೂ ಆತನಿಗಿರುತ್ತದೆ. ಅದರಿಂದಲೇ ಈ ವಿಧವಾದ ಸದ್ಬೋಧನೆಗಳನ್ನು ಮಾಡಿ ಅವರ ಕೈಯ್ಯಿಂದ ಆರಾಧನೆಯನ್ನು ನಡೆಯಿಸಿ ಆ ಭಕ್ತರನ್ನು ಉದ್ಧಾರ ಮಾಡುವನು. ॥೧೬.೩॥

ಈರೀತಿ ಶಿವಧುಂಧಿಯು ಇತಿಹಾಸವನ್ನು ಹೇಳಲು ಅದೆಲ್ಲವನ್ನೂ ಶ್ರದ್ಧೆಯಿಂದ ವನಪಾಲಕನು ಕೇಳಿ ಆನಂದಪಟ್ಟು ಪುನಃ ಶಿವಧುಂಧಿಯನ್ನು ನಮಸ್ಕರಿಸಿ ವಿನಯದಿಂದ ಹೀಗೆ ಹೇಳಿದನು. ॥೧೬.೪॥

"ಅಯ್ಯಾ ಮುನಿವರ್ಯನೇ, ನನ್ನಮೇಲೆ ದಯೆಮಾಡಿ ಹೇಳಿದ ಈ ಇತಿಹಾಸವನ್ನು ಕೇಳಿ ನಾನು ಧನ್ಯನಾದೆನು. ಹಾಗೆಯೇ ನನ್ನ ಮೇಲೆ ದಯೆ ತೋರಿ ನಾನು ಇನ್ನುಮುಂದೆ ನನ್ನ ಶ್ರೇಯಸ್ಸಿಗಾಗಿ ಏನನ್ನು ಮಾಡಬೇಕೆಂಬು ದನ್ನೂ ಉಪದೇಶಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಕೃಪೆಮಾಡಿ ಇದನ್ನು ನನಗೆ ಹೇಳು." ॥೧೬.೫॥

॥ ಶಿವಢುಂಢಿರುವಾಚ ॥

ಕೃತಾರ್ಥೋಽಸಿ ನ ಸಂದೇಹೋ ಬಿಲ್ವಭೂರುಹಪಾಲನೈಃ ।
ತವ ಭಾಗ್ಯಸ್ಯ ನಾಂತೋಽಸ್ತಿ ಜೀವನ್ಮುಕ್ತೋಽಸಿ ಸರ್ವಥಾ ॥೧೬೬॥

ಕಿಂ ಚಾತ್ರಮುನಯೋ ನಿತ್ಯಮಾಯಾಸ್ಯಂತಿ ಯಥಾ ತಥಾ ।
ಕರ್ತವ್ಯಂ ದ್ವಾರಮಪ್ಯೇಕಂ ವನಸ್ಯಾಸ್ಯ ವಿಶೇಷತಃ ॥೧೬೭॥

ಮುನಯೋಽಪಿ ಸಮಾಗತ್ಯ ಕುಲ್ಯಾತೀರೇ ಮನೋಹರೇ ।
ಲಿಂಗಾರ್ಚನಂ ಕರಿಷ್ಯಂತಿ ಕೋಮಲೈರ್ಬಿಲ್ವಪಲ್ಲವೈಃ ॥೧೬೮॥

ಅಪೂಜಿತಾನಿ ಲಿಂಗಾನಿ ನ ದ್ರಷ್ಟವ್ಯಾನಿ ಕೇವಲಂ ।
ಪೂಜಿತಾನ್ಯೇವ ಲಿಂಗಾನಿ ದೃಷ್ಟಾನಿ ಫಲದಾನ್ಯಪಿ ॥೧೬೯॥

ಶಿವಾರ್ಚಕೋಪಕಾರೇಣ ಶಿವಸ್ತುಷ್ಟೋ ಭವಿಷ್ಯತಿ ।
ಶಿವಾರ್ಚಕಾಪಕಾರೇಣ ರುದ್ರೋ ರುಷ್ಟೋ ಭವಿಷ್ಯತಿ ॥೧೭೦॥

ಎಲೈ ವನಪಾಲಕನೇ, ನೀನೇ ಸ್ವಯಂ ಪುಣ್ಯಾತ್ಮನಾಗಿದ್ದೀಯೆ. ಈ ಬಿಲ್ವ ವನವನ್ನು ನಿರ್ಮಿಸಿ ಪೋಷಿಸಿ ಕಾಪಾಡಿದ್ದೀಯೆ. ಇದರಿಂದ ನಿನ್ನ ಪುಣ್ಯಕ್ಕೆ ಅಂತ್ಯವೇ ಇಲ್ಲ. ನೀನು ಸಾಕ್ಷಾತ್ ಜೀವನ್ಮುಕ್ತನೇ ಆಗಿರುವೆ. ಆದರಿಂದ ಪರಮ ಧನ್ಯನಾಗಿದ್ದೀಯೆ. ॥೧೬೬॥

ಆದರೆ ಈ ವನಕ್ಕೆ ಬರಲು ಒಂದು ದಾರಿಯನ್ನಿಡಬೇಕು. ಎಲೈ ವನಪಾಲಕನೇ, ಈ ನಿನ್ನ ವನಕ್ಕೆ ಶಿವಭಕ್ತರಾದ ಮುನಿಗಳು ಸುಲಭವಾಗಿ ನಿತ್ಯವೂ ಬರುವುದಕ್ಕೆ ಅನುಕೂಲವಾಗುವಂತೆ ಒಂದು ಬಾಗಿಲನ್ನು ಮಾಡು. ॥೧೬೭॥

ನೀನು ಹೀಗೆ ದಾರಿಮಾಡಿಕೊಟ್ಟರೆ ಮುನಿಗಳು ಇಲ್ಲಿಗೆ ಬಂದು ಈ ನಾಲೆಯ ತೀರದಲ್ಲಿರುವ ಶಿವಲಿಂಗಗಳಿಗೆ ಕೋಮಲವಾದ ಬಿಲ್ವದಳಗಳಿಂದ ನಿತ್ಯವೂ ಅರ್ಚಿಸುವರು. ॥೧೬೮॥

ಪೂಜಿಸಿ ಅಲಂಕರಿಸಲ್ಪಡದಿರುವ ಶಿವಲಿಂಗಗಳನ್ನು ಸಂದರ್ಶಿಸಿದರೆ ಯಾವ ಫಲವೂ ದೊರೆಯುವುದಿಲ್ಲ. ಪರಿಷ್ಕಾರವಾಗಿ ಪೂಜಿಸಲ್ಪಟ್ಟ ಶಿವಲಿಂಗಗಳನ್ನು ಸಂದರ್ಶಿಸಿದರೇನೇ ವಿಶೇಷ ಫಲಗಳು ದೊರೆಯುವುವು. ॥೧೬೯॥

ವನಪಾಲಕನೇ, ಶಿವಭಕ್ತರಿಗೆ ಶಿವಾರ್ಚನೆಯನ್ನು ಮಾಡಲು ಅನುಕೂಲವಾಗುವಂತೆ ಉಪಕಾರವನ್ನು ಮಾಡಿದರೆ ಶಿವನು ಸಂತುಷ್ಟನಾಗುವನು. ಶಿವಭಕ್ತರಿಗೆ

ಕ್ರೋಧಂ ಯದಿ ಮಹಾರುದ್ರಃ ಕರಿಷ್ಯತಿ ಕದಾಚನ ।
ತದಾ ಬ್ರಹ್ಮಾಂಡವಿಲಯೋ ಜಾತ ಇತ್ಯವಧಾರಯ ॥೧೭೧॥

ಯೇನ ಕೇನಾಪಿ ರೂಪೇಣ ಕರ್ತವ್ಯಂ ಶಿವತೋಷಣಂ ।
ಶಿವಾರ್ಚಕೋಪಕಾರೋಽಪಿ ಪರಮಾನಂದಸಾಧನಂ ॥೧೭೨॥

ನ ಕುರ್ವಂತಿ ಮಹಾದೇವಮಜ್ಞಾತ್ವಾ ಶಿವತೋಷಣಂ ।
ಅತಃ ಪ್ರಯಾಂತಿ ನರಕಂ ಯಾವದಾಚಂದ್ರತಾರಕಂ ॥೧೭೩॥

ಧನ್ಯಾಃ ಕೃತಾರ್ಥಾಶ್ಶಿವತೋಷಣಾರ್ಥಂ
ಕುರ್ವಂತಿ ಯತ್ನಂ ವಿವಿಧೈರುಪಾಯೈಃ ।

ಅಪಕಾರ ತೊಂದರೆಗಳನ್ನುಂಟುಮಾಡಿದರೆ ಶಿವನು ಕುಪಿತನಾಗಿ ಅನಿಷ್ಟಕೊಡುವನು. ||೧೭೦||

ರುದ್ರನ ಕೋಪವೆಂದರೆ ಸಾಮಾನ್ಯವಾದದ್ದೆಂದು ತಿಳಿಯಬೇಡ. ಆತನ ಕೋಪದಿಂದ ಮಹಾ ಅನರ್ಥಗಳೇ ಉಂಟಾಗುವುವು. ಅಖಂಡ ಬ್ರಹ್ಮಾಂಡವೇ ನಾಶವಾಗುವುದು. ಅಪ್ರಿಯಕಾರ್ಯವು ನಡೆದಾಗ ಆತನು ಅಷ್ಟು ಕೋಪಗೊಳ್ಳುವನಾದ್ದರಿಂದಲೇ ಆತನನ್ನು ಮಹಾರುದ್ರನೆನ್ನುವರು. ಆತನ ಕೋಪವು ಅಷ್ಟು ಭಯಂಕರವಾಗಿರುತ್ತದೆಂದು ತಿಳಿ. ||೧೭೧||

ಆದುದರಿಂದ ಅಂಥ ಕೋಪಕ್ಕೆ ಪಾತ್ರನಾಗದಂತೆ ಹೇಗಾದರೂ ಶಿವನು ಪ್ರಸನ್ನನಾಗಿ ಇರುವಂತೆ ವರ್ತಿಸಬೇಕು. ಶಿವನನ್ನು ನಾನಾರೀತಿ ಸಂತುಷ್ಟಿಗೊಳಿಸಬಹುದು. ಶಿವನು ಭಕ್ತಪಕ್ಷಪಾತಿಯಾಗಿರುವುದರಿಂದ ಅವನ ಭಕ್ತರಿಗೆ ಉಪಕಾರವನ್ನು ಮಾಡಿದರೆ ಆದರಿಂದಲೂ ಆತನು ಪರಮ ಸಂತುಷ್ಟನಾಗುವುದರಲ್ಲಿ ಸಂಶಯವಿಲ್ಲ. ||೧೭೨||

ಎಷ್ಟೋ ಜನರು ರುದ್ರನ ಕೋಪದ ಸ್ವರೂಪವನ್ನೂ, ಆತನನ್ನು ಸಂತೋಷಗೊಳಿಸುವ ಉಪಾಯವನ್ನೂ ತಿಳಿಯದೇ ಅಂಥ ಧರ್ಮವನ್ನು ಆಚರಿಸುವುದಿಲ್ಲ. ಆ ಪಾಪಕ್ಕೆ ತಕ್ಕಂತೆ ಅವರು ಚಂದ್ರನಕ್ಷತ್ರಗಳಿರುವವರೆಗೂ ನರಕದಲ್ಲಿ ವಾಸಿಸುತ್ತಾರೆ. ||೧೭೩||

ಪುಣ್ಯಾತ್ಮರಾದವರೂ ವಿವೇಕಿಗಳಾದವರೂ ಪರಮೇಶ್ವರನನ್ನು ಸಂತುಷ್ಟಿಗೊಳಿಸಲು ಅನೇಕ ಉಪಾಯಗಳನ್ನೂ ಪ್ರಯತ್ನಗಳನ್ನೂ ಮಾಡುತ್ತಾರೆ. ಹಾಗೆಯೇ

ಪ್ರಮಾದಹೀನಾಂ ಶಿವಭಕ್ತಪೂಜಾಂ
ಕುರ್ವಂತಿ ವಿಶ್ವೇಶ್ವರತೋಷಣಾಯ ॥೧೭೪॥

ಧನ್ಯಸ್ಸ ಏವ ಭುವನೇಷು ಯ ಏವ ನಿತ್ಯಂ
ಗೌರೀಪತಿಪ್ರಿಯಕರಾಣಿ ಕರೋತಿ ಭಕ್ತ್ಯಾ ।
ಕರ್ಮಾಣಿ ವೇದವಿಹಿತಾನಿ ವಿಭೂತಿಪೂತೋ
ರುದ್ರಾಕ್ಷಲಿಂಗಸಹಿತಶ್ಶಿವತುಂಗಲಿಂಗೇ ॥೧೭೫॥

ಇತಿ ತದ್ವಚನಂ ಶ್ರುತ್ವಾ ಫಲಾನಿ ವಿಮಲಾನ್ಯಪಿ ।
ತಸ್ಮೈ ದದೌ ಮುನೀಂದ್ರಾಯ ಸ ಏವ ವನಪಾಲಕಃ ॥೧೭೬॥

ತತಃ ಪರಂ ಮುನಿಸ್ತುಷ್ಟಃ ಸ್ನಾತ್ವಾ ಭೂತಿವಿಭೂಷಣಃ ।
ಚಕಾರ ಲಿಂಗಪೂಜಾಂ ಚ ಬಹುಭಿರ್ಬಿಲ್ವಪಲ್ಲವೈಃ ॥೧೭೭॥

ತದೀಯರಾದ ಭಕ್ತಗಣದವರನ್ನೂ ಅವಿಚ್ಛಿನ್ನವಾಗಿ ಪೂಜಿಸಿ ಅವರಿಗೆ ಉಪಕರಿಸಿ ಈಶ್ವರನ ಪ್ರೀತಿಯನ್ನು ಸಂಪಾದಿಸುತ್ತಾರೆ. ॥೧೭೪॥

ಯಾವ ಮನುಷ್ಯನು ಗೌರೀವಲ್ಲಭನಿಗೆ ಪ್ರಿಯಕರವಾದ ಕರ್ಮಗಳನ್ನೂ ವೇದವಿಹಿತವಾದ ಕರ್ಮಗಳನ್ನೂ ಪ್ರತಿದಿನವೂ ಮಾಡುತ್ತಾನೆಯೋ ಮತ್ತು ಯಾವನು ಭಸ್ಮರುದ್ರಾಕ್ಷಮಾಲೆಗಳನ್ನು ಧರಿಸಿಕೊಂಡು ಶಿವಲಿಂಗಾರಾಧನೆಯನ್ನು ತಪ್ಪದೇ ನಿತ್ಯವೂ ನಡೆಸುವನೋ ಅವನೇ ಈ ಪ್ರಪಂಚದಲ್ಲಿ ನಿಜವಾಗಿ ಪುಣ್ಯಾತ್ಮನು. ಧನ್ಯನೂ ಆತನೇ ಆಗಿರುತ್ತಾನೆ. ಹೀಗೆಂದು ಶಿವಘುಂಢಿಯು ಹೇಳಲು, ॥೧೭೫॥

ಆತನ ಮಾತುಗಳನ್ನೆಲ್ಲಾ ವನಪಾಲಕನು ಸಾವಧಾನದಿಂದ ಕೇಳಿ ಗ್ರಹಿಸಿದನು. ಅನಂತರ ಆತನು ಸ್ವಚ್ಛವಾದ ಹಣ್ಣುಕಾಯಿಗಳನ್ನು ತಂದು ಆ ಶಿವಘುಂಢಿಗೆ ಅರ್ಪಿಸಿದನು. ॥೧೭೬॥

ಆ ಫಲಗಳನ್ನು ತಂದುಕೊಟ್ಟದ್ದರಿಂದಲೇ ಮುನಿಯಾದ ಶಿವಘುಂಢಿಯು ಪರಮಸಂತುಷ್ಟನಾದನು. ಅನಂತರ ಆತನು ಪುನಃ ಸ್ನಾನಮಾಡಿ ಭಸ್ಮವನ್ನು ಧರಿಸಿ ಅಪಾರವಾದ ಬಿಲ್ವಪತ್ರೆಗಳಿಂದ ಯಥೇಚ್ಛವಾಗಿ ಶಿವಲಿಂಗವನ್ನು ಪೂಜಿಸಿದನು. ॥೧೭೭॥

ತದ್ದತ್ತೈಃ ಪರಿಪಕ್ವೈಸ್ತೈಃ ಸ್ಥೂಲಬಿಲ್ವಫಲೈಶ್ಶಿವಂ ।
ಪೂಜಯಿತ್ವೋಪಹಾರಂ ಚ ಕಲ್ಪಯಾಮಾಸ ಸಾದರಂ ॥೧೭೮॥

ಹಾರೋ ಹಾರೋಪಹಾರೇಣ ಕ್ಷುಧಾಮುಪನಿವಾರ್ಯ ಸಃ ।
ತಲ್ಲಿಂಗಾಲೋಕನಂ ಕೃತ್ವಾ ಸ್ಥಿತಸ್ತೇನಾಭಿವಂದಿತಃ ॥೧೭೯॥

ತತಃ ಪರಂ ವನಸ್ಯಾಪಿ ದ್ವಾರಮೇಕಂ ಚಕಾರ ಸಃ ।
ಯೇನ ಪ್ರವಿಷ್ಟಾ ಮುನಯೋ ಭವಂತ್ಯಪಿ ವನೇ ಮುದಾ ॥೧೮೦॥

ತದಾ ಪ್ರಭೃತಿ ಸಂತೋಷೈರ್ಮುನಯಸ್ತತ್ಸಮೀಪಗಾಃ ।
ಪ್ರವಿಶ್ಯ ಬಿಲ್ವಕಾಂತಾರಂ ಸುಖಂ ಪ್ರಾಪುರ್ನಿಜೇಚ್ಛಯಾ ॥೧೮೧॥

ಶಿವಢುಂಢಿಪ್ರಸಾದೇನ ತಸ್ಮಿನ್ ಬಿಲ್ವವನೇ ಮುಹುಃ ।
ಆಯಾಂತಿ ಬಿಲ್ವಪತ್ರಾರ್ಥಂ ಪೂಜಯಂತಿ ಮಹೇಶ್ವರಂ ॥೧೮೨॥

ಹಾಗೆಯೇ ಆ ವನಪಾಲಕನು ಕೊಟ್ಟಿದ್ದ ಪರಿಪಕ್ವವಾಗಿ ಹಣ್ಣಾಗಿರುವ ದೊಡ್ಡ ದೊಡ್ಡ ಬಿಲ್ವ ಫಲಗಳನ್ನು ಶಿವನಿಗೆ ನಿವೇದನ ಮಾಡಿದನು. ॥೧೭೮॥

ಅನಂತರ ಆ ಶಿವಭಕ್ತನಾದ ಶಿವಢುಂಢಿಯು ಆ ಶಿವನಿವೇದಿತವಾದ ಹಣ್ಣುಗಳನ್ನು ತಿಂದು ಹಸಿವನ್ನು ಇಂಗಿಸಿಕೊಂಡು ಆ ಶಿವಲಿಂಗವನ್ನೇ ನೋಡಿ ಆನಂದವಾಗಿದ್ದನು. ವನಪಾಲಕನು ಭಕ್ತಿಯಿಂದ ಅವರನ್ನು ಸದಾ ಸೇವಿಸುತ್ತಿದ್ದನು.॥೧೭೯॥

ಅನಂತರ ಆತನು ಆ ಬಿಲ್ವವನಕ್ಕೆ ಒಂದು ಬಾಗಿಲನ್ನೂ ಮಾಡಿಸಿದನು. ಆ ಬಾಗಿಲಿಂದ ಮುನಿಗಳೆಲ್ಲಾ ಸುಲಭವಾಗಿ ಬಿಲ್ವವನಕ್ಕೆ ಬಂದು ಆನಂದದಿಂದ ಹೋಗುತ್ತಿದ್ದರು. ॥೧೮೦॥

ಆ ಮೊದಲುಗೊಂಡು ಅಲ್ಲಿ ಸಮೀಪದಲ್ಲಿ ವಾಸಿಸುತ್ತಿದ್ದ ಎಲ್ಲಾ ಋಷಿವರ್ಗದವರೂ ಸಂತೋಷದಿಂದ ಆ ಬಿಲ್ವವನಕ್ಕೆ ಮನಸ್ಸು ಬಂದಾಗಲೆಲ್ಲಾ ಹೋಗಿ ಆನಂದಪಡುತ್ತಿದ್ದರು. ॥೧೮೧॥

ಇಷ್ಟೊಂದು ಶಿವಢುಂಢಿಯ ಸಹಾಯದಿಂದ ಆ ಮುನಿಗಳಿಗೆಲ್ಲರಿಗೂ ಅನುಕೂಲವಾಯಿತು. ಮತ್ತು ಅವರು ನಿತ್ಯವೂ ಆ ವನಕ್ಕೆ ಬಂದು ಬಿಲ್ವಪತ್ರೆಗಳನ್ನು ಕೊಯಿದುಕೊಂಡು ಹೋಗುತ್ತಿದ್ದರು. ಮತ್ತೂ ಆನಂದವಾಗಿ ಶಿವಲಿಂಗಪೂಜೆಯನ್ನೇ ಮಾಡುತ್ತಿದ್ದರು. ॥೧೮೨॥

ಶಿವಘುಂಢಿಂ ವಿಲೋಕ್ಯಾಪಿ ವಾರ್ತಾಂ ಶ್ರುತ್ವಾಪಿ ತಸ್ಯ ತಾಂ ।
ಹೃಷ್ಟಾಃ ಕರಿಕರಾಕ್ರಾಂತಶರೀರಕ್ರಾಂತಿಗೋಚರಂ ॥೧೮೩॥

॥ ರತ್ನಾಕರ ಉವಾಚ ॥

ಇತಿ ಸತ್ಯವ್ರತೋಕ್ತಾನಿ ವಚನಾನಿ ಸ ಭೂಪತಿಃ ।
ಶ್ರುತ್ವಾ ಹೃಷ್ಟಃ ಪುನಃ ಪ್ರಾಹ ತಂ ಮುನಿಂ ಸ ಮಹಾರಥಃ ॥೧೮೪॥

ಸ ಗಜಃ ಕ್ವ ಗತಸ್ತಸ್ಯ ಕಾ ಗತಿ ಸ್ಸಮಭೂನ್ಮುನೇ ।
ಶಿವಘುಂಢೇಃ ಪುಲ್ಕಸಃ ಸ್ಯಾದೇತನ್ಮೇ ವದ ಸಾದರಂ ॥೧೮೫॥

॥ ಸತ್ಯಮೂರ್ತಿರುವಾಚ ॥

ಕೌತುಕಂ ಶೃಣು ರಾಜೇಂದ್ರ ತತ್ಸರ್ವಂ ವಿಸ್ಮಯಾವಹಂ ।
ಪಾಪಪ್ರಣಾಶಕಂ ಪುಣ್ಯಂ ಶಿವಭಕ್ತಿಪ್ರವರ್ಧಕಂ ॥೧೮೬॥

ಮುನಿಗಳು ಶಿವಘುಂಢಿಯು ಆನೆಯ ಸೊಂಡಿಲಿಗೆ ಸಿಕ್ಕಿಕೊಂಡಿದ್ದನ್ನೂ ಆನೆಯು ಆತನನ್ನು ಬಿಲ್ವವೃಕ್ಷದ ಮೇಲಕ್ಕೆ ಎಸೆದಿದ್ದನ್ನೂ ಮುಂದಿನ ಎಲ್ಲಾ ವೃತ್ತಾಂತಗಳನ್ನೂ ಕೇಳಿ ಅತ್ಯಂತ ವಿಸ್ಮಿತರಾದರು. ॥೮೩॥

ಹೀಗೆಂದು ಕಥೆಯನ್ನು ಹೇಳಿ ಸತ್ಯವ್ರತನು ಸುಮ್ಮನಾಗಲು ಆ ಕಥೆಯನ್ನೆಲ್ಲಾ ಕೇಳಿ ಮಹಾರಥನು ಪರಮಸಂತುಷ್ಟನಾದನು. ಆತನು ಪುನಃ ಸತ್ಯವ್ರತನನ್ನು ಕುರಿತು ಹೇಳಿದನು. ॥೧೮೪॥

ಎಲೈ ಸತ್ಯವ್ರತನೇ, ಇದನ್ನು ಮಾತ್ರ ನೀನು ಹೇಳಲಿಲ್ಲವಲ್ಲ. ಆ ಆನೆಯ ಗತಿ ಏನಾಯಿತು? ಆ ಶಿವಘುಂಢಿಯೂ ಆ ವನಪಾಲಕನಾದ ಚಂಡಾಲನೂ ಸಹ ಯಾವ ಗತಿಯನ್ನು ಪಡೆದರು? ಇದನ್ನು ಕೇಳಲು ನನಗೆ ಕುತೂಹಲವುಂಟಾಗುತ್ತದೆ. ಇದನ್ನು ದಯೆಯಿಟ್ಟು ಹೇಳು. ॥೧೮೫॥

ಮಹಾದೇವನೇ, ಆಗಲಿ ನಿನ್ನಿಷ್ಟದಂತೆ ಹೇಳುವೆನು. ಆ ಕಥೆಯು ಮಹಾಶ್ಚರ್ಯಕಾರಿಯಾಗಿರುತ್ತದೆ. ಅದನ್ನು ಶ್ರದ್ಧೆಯಿಂದ ಕೇಳು. ॥೧೮೬॥

ಸ ದಂತೀ ಸಂಚರನ್ ತಸ್ಮಿನ್ ವನೇ ಮೃಗವರಾಶ್ರಿತೇ ।
ದೈವಾದಾಹಾರರಹಿತಃ ಕ್ಷುಧಯಾಪಿ ಸಮಾವೃತಃ ॥೧೮೭॥

ತದಾ ಮೃಗೇಂದ್ರಃ ಕ್ಷುಧಯಾ ಪೀಡಿತಸ್ತಂ ದದರ್ಶ ಸಃ ।
ತುಷಾರಗಿರಿಶೃಂಗಾಗ್ರೇ ಸ್ಥಿತೋಽತಿತೃಷಿತೋಽಪಿ ಸಃ ॥೧೮೮॥

ಮತ್ತೇಭಭಕ್ಷಣೋದ್ಯುಕ್ತಸ್ತಮಾಹಾನ್ಯೋ ಮೃಗೇಶ್ವರಃ ।
ತ್ವರಾ ನ ಕಾರ್ಯಾ ಸಹಸಾ ಕರ್ತುಂ ತದ್ಭಕ್ಷಣಂ ತ್ವಯಾ ॥೧೮೯॥

ಸ ತಾವತ್ಪುಣ್ಯಪೂತಾಂಗಶ್ಶಿವಾನುಗ್ರಹಭಾಜನಂ ।
ಉಪೋಷಿತೋಽಪಿ ಭೂತಾಯಾಂ ಪೂರ್ವೇದ್ಯುಶ್ಶಂಕರಪ್ರಿಯಃ ॥೧೯೦॥

ಆ ಕಾಡಾನೆಯು ಅದೇ ಅರಣ್ಯದಲ್ಲಿ ಸಂಚರಿಸುತ್ತಿದ್ದಿತು. ಆ ಅರಣ್ಯದಲ್ಲಿ ಅನೇಕ ಸಿಂಹಗಳಿದ್ದವು. ಆ ಆನೆಗೆ ಅಂದು ಅದೃಷ್ಟವಶಾತ್ ಯಾವ ಆಹಾರವೂ ದೊರೆಯದಿದ್ದುದರಿಂದ ಬಹಳ ಹಸಿದುಕೊಂಡು ಆಹಾರಕ್ಕಾಗಿಯೇ ಅತ್ತಿಂದಿತ್ತ ಸುತ್ತುತ್ತಿತ್ತು. ॥೧೮೭॥

ಆಗ ಒಂದು ಸಿಂಹವೂ ಹಸಿವು ಬಾಯಾರಿಕೆಗಳಿಂದ ಪೀಡಿತವಾಗಿತ್ತು. ಆ ಸಿಂಹವು ಆಹಾರಕ್ಕಾಗಿಯೇ ಹೊಂಚುಹಾಕುತ್ತಾ ಮಂಜುಮುಚ್ಚಿಕೊಂಡಿದ್ದ ಬೆಟ್ಟದ ತುದಿಯಲ್ಲಿ ಕಾಯುತ್ತಿದ್ದಿತು. ಅದೇ ಸಮಯದಲ್ಲಿ ಅಲ್ಲಿಗೆ ಈ ಆನೆಯು ಹೋಗಿದ್ದರಿಂದ ಇದನ್ನು ಸಿಂಹವು ನೋಡಿತು. ॥೧೮೮॥

ಆನೆಯನ್ನು ಕಂಡಕೂಡಲೇ ಅದನ್ನು ಕೊಂದು ತಿನ್ನಬೇಕೆಂದು ಆ ಸಿಂಹವು ಹೊರಕ್ಕೆ ಹೊರಡಲು, ಅಲ್ಲಿ ಹತ್ತಿರದಲ್ಲಿದ್ದ ಮತ್ತೊಂದು ಸಿಂಹವು ಅದನ್ನು ತಡೆದು ಹೇಳಿತು. ಎಚ್ಚರಿಕೆ, ಆ ಆನೆಯನ್ನು ತಿನ್ನುವುದಕ್ಕೆ ದುಡುಕಬೇಡ. ಅನರ್ಥವಾದೀತು. ಅದನ್ನು ನೀನು ತಿನ್ನಕೂಡದು. ॥೧೮೯॥

ಆ ಆನೆಯು ಸಾಮಾನ್ಯವಾದದ್ದೆಂದು ತಿಳಿಯಬೇಡ. ಅದು ಶಿವಾನುಗ್ರಹಕ್ಕೆ ಪಾತ್ರವಾಗಿರುವುದರಿಂದ ಪುಣ್ಯಶರೀರಿಯಾಗಿರುತ್ತದೆ. ನಿನ್ನೆ ಶಿವರಾತ್ರಿಯ ಪುಣ್ಯ ದಿನದಲ್ಲಿ ಉಪವಾಸವನ್ನು ಅದು ಮಾಡಿರುವುದರಿಂದ ಅದಕ್ಕೆ ಶಂಕರನು ಸುಪ್ರೀತನಾಗಿರುತ್ತಾನೆ. ॥೧೯೦॥

ಪ್ರಕ್ಷಿಪ್ತಶ್ಶಾಂಕರಸ್ತೇನ ತ್ವರಯಾ ಬಿಲ್ವಭೂರುಹೇ ।
ತತ ಸ್ಸ ಪೂಜಯಾಮಾಸ ಶಂಕರಂ ಬಿಲ್ವಪಲ್ಲವೈಃ ॥೯೧॥

ತತಃ ಕರೀ ಕರಿವರಶ್ಶಾಂಕರಸ್ಯೋಪಕಾರಕಃ ।
ಸರ್ವಥಾ ನ ಸ ಹಂತವ್ಯಃ ಪಾಪಂ ತದ್ಧನನಾದ್ಭವೇತ್ ॥೯೨॥

ಶೈವೋಪಕಾರಕೋ ಯಃ ಸ್ಯಾತ್ಸ ತಾವತ್ಪೂಜ್ಯತೇ ಸುರೈಃ ।
ಪೂಜ್ಯಸ್ಯ ಮಾರಣೇ ತಾವನ್ನರಕಂ ಯಾತಿ ಸತ್ವರಂ ॥೯೩॥

ಹಿತೋಪದೇಶಃ ಕೃತ ಏವ ತಾವತ್
ಸ ಶೈವ ಏವೇತಿ ನ ತಸ್ಯ ಹಿಂಸಾ ।
ಕಾರ್ಯಾ ತ್ವಯಾ ತಾವದವಶ್ಯಮೇವ
ಯಮೋ ನ ಧಾವತ್ಯಹಿತಾಯ ತುಭ್ಯಂ ॥೯೪॥

ನಿನ್ನೆ ದಿನ ಈ ಆನೆಯು ಒಬ್ಬ ಶಿವಭಕ್ತನನ್ನು ಬಿಲ್ವವೃಕ್ಷದ ಮೇಲಕ್ಕೆ ಎಸೆದಿದ್ದಿತು. ಮೊದಲು ಆ ಭಕ್ತನಿಗೆ ಬಿಲ್ವಪತ್ರೆಯು ಅಲಭ್ಯವಾಗಿತ್ತು. ತನ್ನನ್ನು ಆನೆಯು ಬಿಲ್ವವೃಕ್ಷದ ಮೇಲಕ್ಕೆ ಎಸೆದಿದ್ದುದರಿಂದ ಆ ಭಕ್ತನು ಸುಪ್ರೀತನಾಗಿ ಯಥೇಷ್ಟ ಬಿಲ್ವಪತ್ರೆಗಳನ್ನು ಕುಯಿದುಕೊಂಡು ಶಿವನನ್ನು ಸಮೃದ್ಧವಾಗಿ ಆರಾಧಿಸಿದನು. ॥೯೧॥

ಹೀಗೆ ಶಿವಭಕ್ತನಿಗೆ ಇದು ಉಪಕಾರಮಾಡಿರುವುದರಿಂದ ಇದು ಗಜೋತ್ತಮನಾಗಿರುತ್ತದೆ. ಆದುದರಿಂದ ಇದನ್ನು ಖಂಡಿತ ಕೊಲ್ಲಕೂಡದು. ಕೊಂದದ್ದೇ ಆದರೆ ನಿನಗೆ ಮಹಾ ಪಾಪವು ಸಂಭವಿಸುವುದು. ॥೯೨॥

ಶಿವಭಕ್ತರಿಗೆ ಉಪಕಾರಮಾಡುವವನನ್ನು ದೇವತೆಗಳೂ ಸಹ ವಂದಿಸುತ್ತಾರೆ. ಪೂಜಿಸುತ್ತಾರೆ. ಅಂಥ ಸರ್ವಪೂಜ್ಯನಾದವನನ್ನು ಕೊಂದರೆ ಖಂಡಿತವಾಗಿಯೂ ನರಕಕ್ಕೇ ಹೋಗಿ ಯಾತನೆಗಳನ್ನು ಅನುಭವಿಸಬೇಕಾಗುವುದು. ॥೯೩॥

ಇದೋ, ನಿನಗೆ ಎಚ್ಚರಿಕೆ ಕೊಟ್ಟು ಬುದ್ಧಿವಾದವನ್ನು ಹೇಳುತ್ತಿದ್ದೇನೆ. ಆ ಆನೆಯೂ ಶಿವಭಕ್ತಿಯುಳ್ಳದ್ದಾಗಿರುತ್ತದೆ. ಆದ್ದರಿಂದ ನೀನು ಅದನ್ನು ಹಿಂಸಿಸಕೂಡದು. ಯಮನು ನಿನಗೆ ವಿಧಿಸತಕ್ಕ ಶಿಕ್ಷೆಯನ್ನು ತಪ್ಪಿಸಿಕೊಳ್ಳಬೇಕಾದರೆ ಅದನ್ನು ನೀನು ತೊಂದರೆಪಡಿಸಕೂಡದು. ಹೀಗಿದ್ದರೇ ಯಮನು ನಿನಗೆ ಶಿಕ್ಷೆ ವಿಧಿಸುವುದಕ್ಕೆ ಹಿಂಜರಿಯುವನು. ಇಲ್ಲದಿದ್ದರೆ ನಿನ್ನನ್ನು ಹಿಡಿಯುವನು. ॥೯೪॥

ವಿಶೇಷತಶ್ಶಾಂಕರೋಽಯಂ ತುಷಾರಗಿರಿಸಂಶ್ರಿತಃ ।
ತುಷಾರಗಿರಿರಪ್ಯತ್ರ ಶೈವಹಿಂಸಾಹಿತಾಯ ನ ॥೧೯೫॥

ಅಶಾಂಕರಾಃ ಕರಿವರಾಃ ಪ್ರಭೂತಾಃ ಪಾಪಕರ್ಮಣಾ ।
ತೇ ಹಂತವ್ಯಾಃ ಪ್ರಯತ್ನೇನ ಕರಿಣಃ ಕಿಂ ನು ದುರ್ಲಭಾಃ ॥೧೯೬॥

ಇತಿ ತದ್ವಚನಂ ಶ್ರುತ್ವಾ ಸ ಮೃಗೇಂದ್ರಃ ಸ್ಥಿತಸ್ತದಾ ।
ಅನ್ಯೋ ಮೃಗೇಂದ್ರಸ್ತಂ ಹತ್ವಾ ದಂತಘಾತೈರ್ಹತೋಽಪಿ ಸಃ ॥೧೯೭॥

ತದಾನೀಮಾಗತಾಃ ಕ್ರೂರಾಃ ಕೋಟಿಶೋ ಯಮಕಿಂಕರಾಃ ।
ಆಗತಾಃ ಶ್ರೀಮಹೇಶಸ್ಯ ಕಿಂಕರಾ ಅಪಿ ಕೋಟಿಶಃ ॥೧೯೮॥

ಮಂಜಿನ ಬೆಟ್ಟದಲ್ಲಿ ಪರಮೇಶ್ವರನು ವಾಸವಾಗಿರುತ್ತಾನೆ. ಆ ಆನೆಯೂ ಅದೇ ಬೆಟ್ಟದಲ್ಲೇ ಇರುತ್ತಿರುವುದರಿಂದಲೂ ಅದು ಸರ್ವಥಾ ಶಿವಪ್ರಿಯವಾಗಿರುತ್ತದೆ. ಇಂಥ ಶೈವವಸ್ತುವನ್ನು ಹಿಂಸಿಸಿದರೆ ಖಂಡಿತ ಒಳ್ಳೆಯದಾಗುವುದಿಲ್ಲ. ॥೧೯೫॥

ಆದುದರಿಂದ ಇದನ್ನು ಬಿಟ್ಟು ಶಿವಪ್ರೀತಿಕರಗಳಲ್ಲದ ಆನೆಗಳನ್ನು ನೀನು ಕೊಂದು ತಿನ್ನು, ಈ ಅರಣ್ಯದಲ್ಲಿ ಆನೆಗಳಿಗೇನೂ ಕೊರತೆ ಇರುವುದಿಲ್ಲ. ಬೇಕಾದಷ್ಟಿವೆ. ಅವುಗಳನ್ನೇ ನೀನು ಹಿಡಿದು ಕೊಲ್ಲುವುದು ಒಳ್ಳೆಯದು. ॥೧೯೬॥

ಈ ಮಾತುಗಳನ್ನು ಕೇಳಿ ಆ ಸಿಂಹವು ಆ ಆನೆಯ ತಂಟೆಗೆ ಹೋಗದೇ ಸುಮ್ಮನಾಯಿತು. ಆದರೆ ಅದೇ ಸಮಯದಲ್ಲಿ ಬೇರೊಂದು ಸಿಂಹವು ಆ ಆನೆಯನ್ನು ಹಿಡಿಯಿತು. ಆನೆಯೂ ಮಹಾ ಬಲಿಷ್ಠವಾಗಿದ್ದರಿಂದ ಘೋರವಾಗಿ ಹೋರಾಡಿತು. ಕೊನೆಗೆ ಸಿಂಹದ ಪ್ರಹಾರಗಳಿಂದ ಆನೆಯು ಸತ್ತಿತು. ಹಾಗೆಯೇ ಆನೆಯ ದಂತಾಘಾತದಿಂದ ಸಿಂಹವೂ ಮೃತವಾಯಿತು. ಅಂತೂ ಆನೆ ಸಿಂಹಗಳೆರಡೂ ಸತ್ತವು. ॥೧೯೭॥

ಆಗ ಸಿಂಹವನ್ನು ಎಳೆದುಕೊಂಡುಹೋಗಲು ಮಹಾ ಕ್ರೂರರಾದ ಅನೇಕ ಯಮದೂತರು ಬಂದರು. ಹಾಗೂ ಆನೆಯನ್ನು ಒಯ್ಯಲು ಶಿವದೂತರೂ ಬಂದರು. ॥೧೯೮॥

ಸ ಮೃಗೇಂದ್ರೋ ಯಮಭಟೈರ್ಬದ್ಧೋ ಯುದ್ಧೋದ್ಯತೈರ್ಭೃಶಂ ।
ಶಸ್ತ್ರಘಾತೈಃ ಪೀಡಿತೋಽಪಿ ತಪ್ತಾಯಸಜಲೈರಪಿ ॥೧೯೯॥

ತದಾನೀಂ ಸ ಕರೀ ತ್ಯಕ್ತ್ವಾ ಕರಿದೇಹಂ ವಿಲಕ್ಷಣಂ ।
ರಮ್ಯಂ ಶಿವಗಣಾಕಾರಂ ಪ್ರಾಪ ಸಂತೋಷಪೂರ್ವಕಂ ॥೨೦೦॥

ತತೋ ವಿಮಾನಮಾರುಹ್ಯ ದಯಯಾ ಶಿವಕಿಂಕರಾನ್ ।
ಪ್ರಾಹ ವಿಸ್ಮಯಮಾಪನ್ನಸ್ತಂ ಮೃಗೇಂದ್ರಂ ವಿಲೋಕಯನ್ ॥೨೦೧॥

ಅಯಂ ಯದ್ಯಪಿ ಶತ್ರುರ್ಮೇ ವಧಾರ್ಹೋಽಪಿ ತಥಾಪಿ ಕಿಂ ॥
ಮೋಚನೀಯಃ ಪ್ರಯತ್ನೇನ ಯಮಕಿಂಕರಬಂಧನಾತ್ ॥೨೦೨॥

ಯಮದೂತರು ಬಂದೊಡನೆಯೇ ಆ ಸಿಂಹದ ಮೇಲೆ ಯುದ್ಧಮಾಡುತ್ತಿರುವಂತೆ ಕೋಲಾಹಲಮಾಡಿ ಹೌಹಾರಿ ಆಕ್ರಮಿಸಿ ಅದನ್ನು ಹಿಂಗಟ್ಟು ಮುಂಗಟ್ಟು ಕಟ್ಟಿ ಅನೇಕ ಶಸ್ತ್ರಗಳಿಂದ ತಿವಿದರು. ಚುಚ್ಚಿದರು. ಕೆಂಪಗೆ ಕಾದು ಝುಗಝುಗಿ ಸುತ್ತಿದ್ದ ಕಬ್ಬಿಣದ ದ್ರವದಲ್ಲಿ ಸಿಂಹವನ್ನು ಹಾಕಿ ಶಿಕ್ಷಿಸಿದರು. ||೧೯೯||

ಆ ಸಮಯದಲ್ಲಿ ಆನೆಗೆ ಮಹಾ ಸಂತೋಷದಾಯಕವಾದ ಸನ್ನಿವೇಶವೊದಗಿ ಅದು ತನ್ನ ಆನೆಯ ದೇಹವನ್ನು ತ್ಯಜಿಸಿ ದಿವ್ಯಸುಂದರವಾದ ಶಿವಗಣ ದೇಹವನ್ನು ಸ್ವೀಕರಿಸಿ ಆನಂದವಾಗಿ ಓಲಾಡುತ್ತಿದ್ದಿತು. ||೨೦೦||

ಅನಂತರ ಶಿವದೂತರು ಅದನ್ನು ದಿವ್ಯವಿಮಾನದಲ್ಲಿ ಕುಳ್ಳಿರಿಸಿಕೊಂಡರು. ಆಗ ಆ ಸಿಂಹದ ದುರವಸ್ಥೆಯನ್ನು ನೋಡಿ ಆನೆಯು ಅದರ ಮೇಲೆ ಕನಿಕರದಿಂದ ಶಿವದೂತರನ್ನು ಕುರಿತು ವಿಸ್ಮಯಪೂರ್ವಕವಾಗಿ ಹೀಗೆಂದಿತು. ||೨೦೧||

ಯದ್ಯಪಿ ಈ ಸಿಂಹವು ನನಗೆ ಶತ್ರುವಾಗಿರುತ್ತದೆ. ನನ್ನನ್ನು ಇದು ಕೊಂದಿರುವುದರಿಂದ ನಾನೂ ಸಹ ಅದನ್ನು ಹಿಂಸಿಸಬೇಕೆಂದೆನಿಸುತ್ತದೆ. ಆದರೂ ಈಗ ಯಮದೂತರ ಕೈಯ್ಯಲ್ಲಿ ಬಹಳ ದುಃಖವನ್ನನುಭವಿಸುತ್ತಿದೆ. ಇದನ್ನು ನೋಡಿ ಅದರ ಮೇಲೆ ಈಗ ದಯೆಯೇ ಉಂಟಾಗುವುದು. ಈಗ ಅದು ಪರಮಶೋಚನೀಯಾವಸ್ಥೆಯಲ್ಲಿರುವುದು. ಅದನ್ನು ಬಿಡಿಸಬಾರದೇಕೆ? ||೨೦೨||

ಮಯಿ ಪ್ರೀತಿರ್ಮಹೇಶಸ್ಯ ಜಾತಾ ಶಾಂಕರಸೇವಯಾ ।
ತಯಾ ಶಾಂಕರ ಏವಾಹಂ ಕೃತಕೃತ್ಯೋ ನ ಸಂಶಯಃ ॥೨೦೩॥

ಅಯಂ ಮದಂಗಸಂಗೇನ ಪಾವನೇನಾತಿಪಾವನಃ ।
ಕಥಂ ವಾ ನರಕೋಽಸ್ಯ ಸ್ಯಾದ್ಯಾತನಾಪ್ಯತಿದಾರುಣಾ ॥೨೦೪॥

ಯಥಾ ಶೈವಾಂಗಸಂಗೇನ ಕೃತಕೃತ್ಯೋಽಸ್ಮ್ಯಹಂ ತಥಾ ।
ಶೈವಾಂಗಿಸಂಗಸಂಗೇನ ಕಥಂ ಪೂತೋ ನ ತದ್ವದ ॥೨೦೫॥

ಇತ್ಯಾಕರ್ಣ್ಯ ವಚಸ್ತಸ್ಯ ಮೋಚಿತೋ ದೂತಬಂಧನಾತ್ ।
ಸ ಮೃಗೇಂದ್ರೋ ಯಯೌ ಸ್ವರ್ಗಂ ಕರೀ ಶಂಕರಮಂದಿರಂ ॥೨೦೬॥

ನಾನು ಒಬ್ಬ ಶೈವಶ್ರೇಷ್ಠನಿಗೆ ಉಪಕಾರಮಾಡಿ ಸೇವಿಸಿದ್ದರಿಂದ ಶಿವನು ನನ್ನ ಮೇಲೆ ಸುಪ್ರೀತನಾಗಿರುವನು. ಇದರಿಂದ ನಾನೂ ಶಿವಭಕ್ತನೇ ಆದೆನು. ಅಲ್ಲದೆ ಪರಮ ಧನ್ಯನೂ ಆಗಿರುವೆನು. ಇದರಲ್ಲಿ ಸಂಶಯವಿಲ್ಲ. ||೨೦೩||

ಹೀಗಿರಲು ನನ್ನ ಈ ಪವಿತ್ರವಾದ ಶರೀರದ ಸಂಯೋಗದಿಂದ ಆ ಸಿಂಹವು ನಿಷ್ಪಾಪವೂ ಪವಿತ್ರವೂ ಆಗಿರುತ್ತದೆಯಷ್ಟೆ. ಆದ್ದರಿಂದ ಅದಕ್ಕೆ ಆ ನರಕವೂ ಅಲ್ಲಿನ ಕ್ರೂರವಾದ ಯಾತನೆಗಳೂ ಏತಕ್ಕೆ ಸಂಭವಿಸಬೇಕು? ಇದು ಅನುಚಿತವಲ್ಲವೇ? ||೨೦೪||

ನಾನೂ ಒಬ್ಬ ಶೈವಶ್ರೇಷ್ಠನ ಶರೀರ ಸಂಯೋಗದಿಂದ ಕೃತಕೃತ್ಯನೂ ಪೂತನೂ ಆಗಿರುವೆನಲ್ಲವೇ? ಹಾಗೆಯೇ ಈ ಸಿಂಹವು ನನ್ನ ಶರೀರಸಂಪರ್ಕದಿಂದ ಏತಕ್ಕೆ ಪವಿತ್ರವಾಗಿರುವುದಿಲ್ಲ? ಖಂಡಿತ ಪವಿತ್ರವಾಗಿರಲೇಬೇಕು. ಆದುದರಿಂದ ಆ ಸಿಂಹವನ್ನು ನೀವು ಯಮದೂತರ ಕೈಯ್ಯಿಂದ ಬಿಡಿಸಬೇಕು. ||೨೦೫||

ಈಪ್ರಕಾರವಾಗಿ ಆನೆಯು ಹೇಳಲು ಅದರ ಅಪೇಕ್ಷೆಯಂತೆ ಶಿವದೂತರು ಸಿಂಹವನ್ನು ಯಮದೂತರಿಂದ ಬಿಡಿಸಿದರು. ಬಳಿಕ ಸಿಂಹವು ಸ್ವರ್ಗಲೋಕವನ್ನು ಸೇರಿತು. ಆನೆಯು ಶಿವಧಾಮಕ್ಕೆ ತೆರಳಿತು. ||೨೦೬||

ತೌ ಮೃಗೇಂದ್ರೌ ವಿಲೋಕ್ಯಾಪಿ ತಂ ಮೃಗೇಂದ್ರಂ ಚ ತಂ ಕರಿಂ ।
ವಿಸ್ಮಯಂ ಪರಮಂ ಪ್ರಾಪ್ಯ ಶೈಲಾಗ್ರೇ ಸಂಸ್ಥಿತೌ ಮುದಾ ॥೨೦೭॥

ನೀತ್ವಾ ತದ್ವಾರ್ತಯಾ ಕಾಲಂ ಸ್ಮೃತ್ವಾ ಶಾಂಭವವೈಭವಂ ।
ಏತಾದೃಶಂ ಮಹದ್ಭಾಗ್ಯಂ ಪ್ರಾಪ್ತವ್ಯಮಿತಿ ತೌ ಸ್ಥಿತೌ ॥೨೦೮॥

ಪ್ರಭಾವಮಾರಾಶಾರ್ಚನತತ್ಪರಾಣಾಂ
ವಕ್ತುಂ ನ ಶಕ್ತೋಽಸ್ಮಿ ನ ವೇದರಾಶಿಃ ।
ಶ್ರಾಂತಾಶ್ಚ ವೇದಾಂತವಿಚಾರತಾಂತಾಃ
ತೇ ಶಾಂಕರಾರಾಧಕಸೇವಕಾಃ ಸ್ಯುಃ ॥೨೦೯॥

ಅಯಂ ಪ್ರಭಾವೋ ಗಿರಿಶಪ್ರಸಾದಾತ್
ಯಥಾ ಕಥಂಚಿತ್ಕಥಿತೋ ಮಯಾಪಿ ।
ತತ್ತತ್ಕಥಾಶೇಷವಿಶೇಷಲೇಶಃ
ಶ್ರುತೋಽಪಿ ಮುಕ್ತಿಂ ವಿತನೋತಿ ನೂನಂ ॥೨೧೦॥

ಈ ಆನೆ ಮತ್ತು ಸಿಂಹಗಳ ಅವಸ್ಥೆಗಳನ್ನು ನೋಡುತ್ತಾ ದೂರದಲ್ಲಿ ಬೆಟ್ಟದ ಮೇಲೆ ಆ ಎರಡು ಸಿಂಹಗಳೂ ನೋಡುತ್ತಲೇ ಇದ್ದವು. ಈ ಅದ್ಭುತವಾದ ಘಟನೆಯನ್ನು ನೋಡಿ ಅವುಗಳಿಗೆ ಪರಮಾಶ್ಚರ್ಯವೂ ಆನಂದವೂ ಆಗುತ್ತಿತ್ತು. ||೨೦೭||

ಆ ಎರಡೂ ಸಿಂಹಗಳೂ ಅದೇ ಘಟನೆಯ ಕಥೆಯನ್ನೇ ಪದೇ ಪದೇ ಸ್ಮರಿಸಿಕೊಂಡು, ಶಿವಭಕ್ತರ ಮಹಿಮೆಯನ್ನೂ ನೆನೆಸಿಕೊಂಡು, ಇಂಥ ಮಹದ್ಭಾಗ್ಯವೂ ಸುಯೋಗವೂ ನಮಗೂ ಎಂದಾದರೂ ಲಭಿಸೀತೇ ? ಎಂದು ಯೋಚಿಸುತ್ತಾ ಕಾಲಕಳೆಯುತ್ತಿದ್ದವು. ||೨೦೮||

ಶಿವಾರಾಧನೆಯಲ್ಲಿಯೇ ತತ್ಪರರಾದ ಶಿವಭಕ್ತರ ಮಹಿಮೆಯನ್ನು ಸಮಗ್ರವಾಗಿ ಹೇಳಲು ನಾನಂತೂ ಶಕ್ತನಾಗಿಲ್ಲ. ಮತ್ತೂ ವೇದರಾಶಿಯೂ ಸಮಗ್ರವಾಗಿ ಹೇಳಲಾರದು. ಯಾರು ಶಿವಾರಾಧನೆಯನ್ನು ಮಾಡುತ್ತಾ ವೇದಾಂತ ವಿಚಾರಗಳನ್ನು ಪರ್ಯಾಲೋಚಿಸುತ್ತಾ ಕಾಲ ಕಳೆಯುವರೋ ಅವರೇ ಶಿವಭಕ್ತರ ಸೇವಕರಾಗಿರುವರು. ||೨೦೯||

ಎಲೈ ಮಹಾರಥನೇ ! ಹೀಗೆ ಈಶ್ವರಭಕ್ತರ ಮಹಿಮೆಯು ಅನಂತವಾಗಿದೆ.

ಧನ್ಯಂ ತದೇತದ್ದಿನಮಿತ್ಯವೈಮಿ
ಯಸ್ಮಿನ್ ದಿನೇ ಶಾಂಭವಪುಂಗವಾನಾಂ ।
ಕಥಾ ಸ್ಮೃತಾ ಸಾ ಸುರವಾಹಿನೀ ವಃ
ಪುನಾತಿ ಚಿತ್ತಂ ಸ ಮುದಂ ಕರೋತಿ ॥೨೧೧॥

ಧನ್ಯಂ ಚಿತ್ತಂ ಶಂಕರಧ್ಯಾನಲೋಲಂ
ಧನ್ಯೇ ನೇತ್ರೇ ಲಿಂಗಸಂದರ್ಶನೇನ ।
ಧನ್ಯೌ ಹಸ್ತೌ ಲಿಂಗಸಂಪೂಜನಾದ್ಯೈಃ
ಧನ್ಯಾ ಜಿಹ್ವಾ ಶಂಗಸಂಕೀರ್ತನೇನ ॥೨೧೨॥

ವಿಶ್ವೇಶಃ ಕುಲದೈವತಂ ಮಮ ಮಹಾದೇವಃ ಪ್ರಭುರ್ಮೇ ಪಿತಾ
ದಾತಾ ಶಂಕರ ಏವ ವೇದವಿನುತಾ ಮಾತಾ ಭವಾನೀ ಮಮ ।
ತೇನೇದಂ ಮಮ ಭಾಗ್ಯಮಿಂದ್ರವಿನುತಂ ತತ್ಸಂತತಿಶ್ಶಾಂಭವೀ
ಸೌಭಾಗ್ಯಂ ಮಹದೇತದಿಂದುಶಕಲಾಲಂಕಾರಪೂಜಾರ್ಜಿತಂ ॥೨೧೩॥

ನಾನು ಸಹ ಆ ಪರಮೇಶ್ವರನ ಅನುಗ್ರಹದಿಂದಲೇ ಆ ಮಹಿಮೆಯ ಅಲ್ಪಾಂಶವನ್ನು ಕೇಳಿದರೂ ಮೋಕ್ಷವೇ ಖಂಡಿತವಾಗಿಯೂ ಲಭಿಸುವುದು. ||೨೧೦||

ಮಹಾರಥನೇ! ಈ ದಿನವೇ ಮಹಾಪುಣ್ಯತಮವಾದದ್ದು. ಈ ದಿನ ನಿಮ್ಮಂತಹ ಭಕ್ತರ ಮಹಿಮೆಯ ಕಥೆಯು ಯಥೇಚ್ಛವಾಗಿ ನಡೆಯಿತು. ಗಂಗಾನದಿ ಯಂತೆ ಪಾವನಕರವಾದ ಶಿವಭಕ್ತ ಮಹಿಮೆಯ ಕಥೆಯು ಸ್ಮೃತವಾಯಿತು. ಆ ಮಹಿಮೆಯ ಸ್ಮರಣೆಯಿಂದ ಚಿತ್ತವು ಶುದ್ಧವಾಯಿತಲ್ಲದೇ ಪರಮಾನಂದವೂ ಆಗುವುದು. ಆದ್ದರಿಂದ ಈ ದಿನವೇ ಪರಮ ಪುಣ್ಯತಮವಾದದ್ದು. ||೨೧೧||

ಶಿವಧ್ಯಾನದಲ್ಲಿಯೇ ಆಸಕ್ತವಾದ ಈ ಚಿತ್ತವು ಪರಮ ಧನ್ಯವಾದದ್ದು. ಶಿವ ಲಿಂಗವನ್ನು ಸಂದರ್ಶಿಸುವ ನೇತ್ರಗಳು, ಶಿವಲಿಂಗದ ಪೂಜಾದಿಗಳಲ್ಲಿ ಆಸಕ್ತವಾದ ಹಸ್ತಗಳು, ಮತ್ತು ಶಿವನಾಮಗಳನ್ನು ಭಜಿಸುವ ಜಿಹ್ವೆಯೂ ಕೂಡ ಪರಮಧನ್ಯ ವಾದವುಗಳು. ||೨೧೨||

ಆ ವಿಶ್ವೇಶ್ವರನೇ ನನ್ನ ಕುಲದೈವವು. ನನ್ನ ಪ್ರಭುವು ಮಹಾದೇವನು. ನನ್ನ ತಂದೆಯೂ ದಾಸಿಯೂ ಸರ್ವಸ್ವವೂ ಆ ಶಂಕರನೇ ಆಗಿದ್ದಾನೆ. ವೇದಸ್ತುತ

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಉತ್ತರಾರ್ಧೇ ರತ್ನಾಕರ ಪುಣ್ಯಮೂರ್ತಿಸಂವಾದೇ ಶಿವರಾತ್ರಿಮಹಿಮಾ ವರ್ಣನೇ ಶಿವಢುಂಢಿ ಬಿಲ್ವವನಪಾಲಕ ಹಸ್ತಿಸಿಂಹ ಕಥಾವರ್ಣನಂ ನಾಮ ಷಟ್ಚತ್ವಾರಿಂಶೋಽಧ್ಯಾಯಃ

ಳಾದ ಆ ಗಿರಿಜೆಯೇ ನನ್ನ ಮಾತೆಯು. ಹೀಗೆ ಶಿವಪಂಚಾಯತನವೇ ನನ್ನ ಸರ್ವಸ್ವವಾಗಿರುವುದರಿಂದ ನಾನೇ ಭಾಗ್ಯಶಾಲಿಯು. ಈ ನನ್ನ ಕುಟುಂಬ ಮತ್ತು ಸಂತತಿ ಇವೆಲ್ಲವೂ ಶೈವವಾಗಿರುವುದರಿಂದ ಪರಮ ಧನ್ಯವಾದವುಗಳಾಗಿವೆ. ಈ ನಮ್ಮ ಸಕಲ ಸೌಭಾಗ್ಯಗಳೂ ಆ ಚಂದ್ರಶೇಖರನ ಆರಾಧನೆಯಿಂದಲೇ ಲಭಿಸಿರುವುವೆಂದು ನಾನು ದೃಢವಾಗಿ ನಂಬಿರುತ್ತೇನೆ. ಎಂದು ಸತ್ಯವ್ರತನು ಮಹಾರಥನೆಂಬ ರಾಜನಿಗೆ ಹೇಳಿದನು. ||೨೧೩||

ಇಲ್ಲಿಗೆ ಶ್ರೀಶಿವರಹಸ್ಯದ ತೃತೀಯಾಂಶದ ಉತ್ತರಾರ್ಧದಲ್ಲಿ
ನಲವತ್ತಾರನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

|| ಓಂ ನಮಶ್ಶಿವಾಯ ||

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ಸಪ್ತಚತ್ವಾರಿಂಶೋಽಧ್ಯಾಯಃ

|| ರತ್ನಾಕರ ಉವಾಚ ||

ಇತಿ ತದ್ವಚನಂ ಶ್ರುತ್ವಾ ಸ ರಾಜಾ ವೀತಕಲ್ಮಷಃ ।
ಶಿವಢುಂಢಿಗತಿಂ ವಕ್ತುಂ ಸಸ್ಮಾರ ಗಿರಿಜಾಪತಿಂ ||೧||

ಭಗವನ್ ಪುಣ್ಯರೂಪೇಯಂ ಶ್ರುತಾ ಶಿವಕಥಾ ಮಯಾ ।
ಶಿವಢುಂಢಿಗತಿಂ ಬ್ರೂಹಿ ಕಿಂ ಚಕಾರ ತತಃ ಪರಂ ||೨||

ಶಿವಢುಂಢಿರ್ವನಂ ಪ್ರಾಪ್ಯ ಬಿಲ್ವಾವಿಷ್ಟಂ ಮಹತ್ತರಂ ।
ಸುಖಂ ಸ ಪ್ರಾಪ ತತ್ರೈವ ನಿವಾಸಂ ಚ ಚಕಾರ ಸಃ ||೩||

ನಲವತ್ತೇಳನೆಯ ಅಧ್ಯಾಯ

ಸತ್ಯವ್ರತನು ಹೇಳಿದ ಶಿವಕಥೆಯನ್ನೆಲ್ಲಾ ಕೇಳಿ ಮಹಾರಥನು ಸಕಲ ಪಾಪಗಳನ್ನೂ ಕಳೆದುಕೊಂಡು ಆನಂದದಿಂದ ಮನಸ್ಸಿನಲ್ಲಿಯೇ ಗಿರಿಜಾರಮಣನನ್ನು ಭಕ್ತಿಯಿಂದ ಧ್ಯಾನಿಸಿದನು. ಅನಂತರ ಆ ಶಿವಢುಂಢಿಯ ಗತಿ ಏನಾಯಿತೆಂಬುದನ್ನು ಹೇಳಬೇಕೆಂದು ಸತ್ಯವ್ರತನನ್ನು ಪ್ರಾರ್ಥಿಸಿಕೊಳ್ಳಲು ಆತನ ಅಪೇಕ್ಷೆ ಮೇರೆಗೆ ಸತ್ಯವ್ರತನು ಹೇಳಲಾರಂಭಿಸಿದನು. ||೧-೨||

" ಅನಂತರ ಶಿವಢುಂಢಿಯು ಅದೇ ಬಿಲ್ವವನದಲ್ಲಿ ತನ್ನ ನಿವಾಸಸ್ಥಾನವನ್ನು ಕಲ್ಪಿಸಿಕೊಂಡು ಅಲ್ಲಿಯೇ ನಿರಾತಂಕವಾಗಿ ವಾಸಮಾಡಲಾರಂಭಿಸಿದನು. ಅಲ್ಲಿ ವಾಸಿಸುವುದೇ ಪರಮಸುಖವೆಂದು ಯೋಚಿಸಿ ಅಲ್ಲಿಯೇ ಇದ್ದನು. ||೩||

ಯಾವಂತಿ ಹಸ್ತಲಭ್ಯಾನಿ ಬಿಲ್ವಪತ್ರಾಣಿ ಭೂಪತೇ ।
ತಾವದ್ಭಿಃ ಪೂಜಯಾಮಾಸ ಮಾಸಮಾತ್ರೇಣ ಶಂಕರಂ ॥೪॥

ಪಶ್ಚಾದ್ಬಿಲ್ವಂ ಸಮಾರುಹ್ಯ ಗೃಹೀತ್ವಾ ಬಿಲ್ವಪಲ್ಲವಾನ್ ।
ತೈರೀಶಮರ್ಚಯಾಮಾಸ ಲಿಂಗರೂಪಿಣಮಾಸ್ತಿಕಃ ॥೫॥

ಏವಂ ವತ್ಸರಮಾತ್ರೇಣ ಸ ವನೇ ಬಿಲ್ವಪಲ್ಲವೈಃ ।
ಲಿಂಗೇಷು ಪೂಜಯಾಮಾಸ ಶಿವಂ ಸರ್ವವನೋದ್ಭವೈಃ ॥೬॥

ಪುನರಭ್ಯಾಗತಾ ಮಾಘೀ ಸಿತಾನ್ಯಾ ಚ ಚತುರ್ದಶೀ ।
ತಾಂ ಪ್ರಾಪ್ಯ ಸ ಮುನಿಸ್ತುಷ್ಟಃ ಪ್ರಾಪ್ತಾ ಭೂತೇತಿ ಸಾ ಮಯಾ ॥೭॥

ತದಾನೀಂ ಬಿಲ್ವಪತ್ರಾಣಿ ಸ ದೃಷ್ಟ್ವಾನ್ಯೇವ ತದ್ವನೇ ।
ಅಪತ್ರಮೇವ ತಜ್ಜಾತಂ ವನಂ ತತ್ಕೃತಪೂಜಯಾ ॥೮॥

ಸದಾ ಶಿವಾರಾಧನೆಯಲ್ಲಿಯೇ ಆತನು ಕಾಲಕಳೆಯುತ್ತಿದ್ದನು. ಪ್ರತಿದಿನವೂ ತನ್ನ ಕೈಗೆ ನಿಲುಕುವ ಬಿಲ್ವಪತ್ರೆಗಳನ್ನು ಕುಯಿದುಕೊಂಡು ಶಿವಲಿಂಗಗಳನ್ನು ಪೂಜಿಸುತ್ತಾ ಒಂದು ತಿಂಗಳನ್ನು ಕಳೆದನು. ಅಷ್ಟು ದಿವಸಕ್ಕೆ ಆ ಬಿಲ್ವವೃಕ್ಷಗಳಲ್ಲಿ ಕೈಗೆ ನಿಲುಕುವಷ್ಟು ಎತ್ತರದಲ್ಲಿದ್ದ ಪತ್ರೆಗಳೆಲ್ಲಾ ತೀರಿಹೋದವು. ॥೪॥

ಅನಂತರ ಆ ಪರಮ ಆಸ್ತಿಕನಾದ ಶಿವಧುಂಧಿಯು ಬಿಲ್ವವೃಕ್ಷಗಳನ್ನು ಹತ್ತಿ ಪತ್ರೆಗಳನ್ನು ಕೊಯಿದು ತಂದು ಅವುಗಳಿಂದ ಲಿಂಗರೂಪಿಯಾದ ಶಿವನನ್ನು ಅವಿಚ್ಛಿನ್ನವಾಗಿ ಆರಾಧಿಸುತ್ತಿದ್ದನು. ॥೫॥

ಹೀಗೆಯೇ ಆತನು ಶಿವಾರ್ಚನೆಯನ್ನು ಮಾಡುತ್ತಾ ಒಂದು ವರ್ಷವು ಕಳೆಯಿತು. ಅಷ್ಟು ದಿವಸಕ್ಕೆ ಆ ವನದ ಎಲ್ಲಾ ವೃಕ್ಷಗಳಲ್ಲಿದ್ದ ಬಿಲ್ವಪತ್ರೆಗಳನ್ನೂ ನಿಶ್ಶೇಷವಾಗಿ ಕೊಯಿದು ತಂದು ಪೂಜಿಸಿ ಬಿಟ್ಟಿದ್ದನು. ॥೬॥

ಆಗ ಪುನಃ ಮಾಘಮಾಸದ ಕೃಷ್ಣ ಚತುರ್ದಶೀ ತಿಥಿಯು ಪ್ರಾಪ್ತವಾಯಿತು. ಆ ಮುನಿಯು ಇದನ್ನು ಪರ್ಯಾಲೋಚಿಸಿ, ಅಹೋ ಭಾಗ್ಯ, ಭೂತಾಪುಣ್ಯಯೋಗವು ಮತ್ತೆ ಬಂದಿತು ಎಂದು ಸ್ಮರಿಸಿ ಅತ್ಯಂತ ಸಂತುಷ್ಟನಾದನು. ॥೭॥

ಆದರೆ ಆತನು ಮೊದಲೇ ಅಪರಿಮಿತವಾಗಿ ಪತ್ರೆಗಳನ್ನು ಕೊಯಿದುಕೊಂಡು ಬಂದು ಪೂಜಿಸುತ್ತಾ ಬಂದುದರಿಂದ ಆ ವನದಲ್ಲಿ ಪತ್ರೆಯೇ ಉಳಿದಿರಲಿಲ್ಲ. ಆ

ತತಶ್ಚಿಂತಾಪರೋ ಜಾತೋ ವನೇ ತಸ್ಮಿನ್ ಮಹಾಮುನಿಃ ।
ಅಲಾಭಾದ್ಬಿಲ್ವಪತ್ರಾಣಾಂ ಕಿಂ ಕರ್ತವ್ಯಂ ಮಯೇತ್ಯಪಿ ॥೯॥

ತದಾನೀಮಾಗತಾಶ್ಚೈವಾಶ್ಶಿವಪೂಜಾಪರಾಯಣಾಃ ।
ಆದಾತುಂ ಬಿಲ್ವಪತ್ರಾಣಿ ಶಿವಪೂಜಾರ್ಥಮಾದರಾತ್ ॥೧೦॥

ತತಃ ಪರಂ ಚ ತೇ ಖಿನ್ನಾಃ ಪತ್ರಹೀನಂ ವನಂ ಪುನಃ
ದೃಷ್ಟ್ವಾ ತಂ ಮುನಿಶಾರ್ದೂಲಂ ಶಿವಢುಂಢಿಂ ಚ ಶಾಂಭವಂ ॥೧೧॥

ತಮಾಗತ್ಯ ತತಶ್ಚೈವಂ ತೇ ಸರ್ವೇ ಪ್ರಣತಾಃ ಪರಂ ।
ಊಚುಃ ಖಿನ್ನಾನನಂ ರಾಜನ್ನತ್ಯಾಶ್ಚರ್ಯಸಮನ್ವಿತಾಃ ॥೧೨॥

ವನದ ವೃಕ್ಷಗಳೆಲ್ಲಾ ಬರಿದಾಗಿದ್ದವು. ಆತನ ಪೂಜೆಯಿಂದಲೇ ಪತ್ರೆಗಳೆಲ್ಲಾ ಮುಗಿದುಹೋಗಿದ್ದವು. ಈಗ ಅಲ್ಲಿ ಒಂದು ಪತ್ರೆಯೂ ಸಿಕ್ಕುತ್ತಿರಲಿಲ್ಲ. ||೮||

ಬಿಲ್ವಪತ್ರೆಗಳ ಅಭಾವದಿಂದ ಶಿವಢುಂಢಿಗೆ ಮಹಾಚಿಂತೆಯುಂಟಾಯಿತು. ಪುಣ್ಯದಿನವೇನೋ ಪ್ರಾಪ್ತವಾಯಿತು. ಆದರೆ ಬಿಲ್ವಪತ್ರೆ ಇರಲಿಲ್ಲ. ಏನುಮಾಡುವುದು? ಶಿವಾರಾಧನೆಯನ್ನು ಹೇಗೆ ಮಾಡಲಿ ಎಂದು ಮಹಾಚಿಂತೆಯಲ್ಲಿ ಮುಳುಗಿದ್ದನು. ||೯||

ಆ ಸಮಯದಲ್ಲಿ ಕೆಲವು ಜನ ಶಾಂಭವರೂ ಅಲ್ಲಿಗೆ ಬಂದರು. ಬಿಲ್ವವನದಿಂದ ಯಥೇಷ್ಟವಾಗಿ ಪತ್ರೆಗಳನ್ನು ಕುಯಿದುಕೊಂಡು ಹೋಗಿ ಶಿವಪೂಜೆಮಾಡಬೇಕೆಂದು ಅವರು ಬಂದಿದ್ದರು. ||೧೦||

ವನದೊಳಕ್ಕೆ ಪ್ರವೇಶಿಸಿ ನೋಡಲು ಎಲ್ಲಾ ವೃಕ್ಷಗಳೂ ಬರಿದಾಗಿದ್ದವು. ಒಂದು ಪತ್ರೆಯೂ ಯಾವಾಗ ದೊರೆಯುಲಿಲ್ಲವೋ ಆಗ ಅವರು ಬಹಳ ಖಿನ್ನರಾಗಿ ಅತ್ತಿಂದಿತ್ತ ಸುತ್ತಾಡುತ್ತಿರಲು ಮುನೀಶ್ವರನೂ ಪರಮೇಶ್ವರಸದೃಶನೂ ಆದ ಶಿವಢುಂಢಿಯನ್ನು ಕಂಡರು. ||೧೧||

ಸಮೀಪಕ್ಕೆ ಹೋಗಿ ನೋಡಲು ಶಿವಢುಂಢಿಯೂ ಮಹಾವ್ಯಸನದಿಂದ ಕುಳಿತಿದ್ದನು. ಆತನ ಈ ಅವಸ್ಥೆಯನ್ನು ನೋಡಿ ಎಲ್ಲರಿಗೂ ವಿಸ್ಮಯವಾಯಿತು. ಆಗ ಅವರು ಅವನ ಕಾಲುಗಳಿಗೆರಗಿ ವಿನಯದಿಂದ ಕೇಳಿದರು. ||೧೨||

ಸ್ವಾಮಿನ್ ಕಿಮೇವಂ ಮ್ಲಾನಂ ತೇ ಮುಖಂ ಶಿವಮಹೋತ್ಸವೇ ।
ಅದ್ಯ ಧ್ಯೇಯೋ ಮಹಾದೇವೋ ವಿಶೇಷೇಣ ತಪೋಧನ ॥೧೩॥

ಶಿವಾರ್ಚನಧನಸ್ಯಾಪಿ ತವ ಖಿನ್ನಂ ಮನೋ ಯದಿ ।
ಅನ್ಯೇಷಾಂ ತತ್ರ ಕಾ ವಾರ್ತಾ ವದ ಸಂಸಾರಿಣಾಂ ಮುನೇ ॥೧೪॥

ದುಃಖಾನಾಂ ವಿಲಯೋ ಭವತ್ಯನುದಿನಂ ವಿಶ್ವೇಶ್ವರಾರಾಧನ-
ಧ್ಯಾನಾದ್ಯೈರಘಕೋಟಿವಿಲಯೋ ದುಃಖಂ ಕುತಃ ಸ್ಯಾತ್ತವ ।
ಶಂಗಾರಾಧನಮೇವ ತೇ ಧನಮಿತಿ ಜ್ಞಾತಂ ತದನ್ಯೈರ್ಧನಂ
ನೇತುಂ ಶಕ್ಯಮಪೀತಿ ತೇ ಕಥಮಿದಂ ಖಿನ್ನಂ ಮನಸ್ತದ್ವದ ॥೧೫॥

ಮುನಿವರ್ಯನೇ! ಇದೇನು ಮುಖವನ್ನು ಬಾಡಿಸಿಕೊಂಡು ಕುಳಿತಿದ್ದೀಯೆ. ಇಂದು ಶಿವರಾತ್ರಿಮಹೋತ್ಸವ ದಿನವಾಗಿದೆ. ಈದಿನ ವಿಶೇಷವಾದ ಉತ್ಸಾಹದಿಂದ ಶಿವಾರಾಧನೆಯನ್ನು ನಡೆಸಬೇಕಲ್ಲವೇ? ಪರಮ ತಪಸ್ವಿಯಾದ ನೀನು ಶಿವಧ್ಯಾನ ವನ್ನು ಬಿಟ್ಟು ಹೀಗೇಕೆ ಚಿಂತೆಯಿಂದ ಕುಳಿತಿದ್ದೀಯೆ? ||೧೩||

ಸದಾ ಶಿವಾರಾಧನತತ್ಪರನೂ ಪರಮಸಾಧಕನೂ ಆದ ನಿನ್ನ ಮನಸ್ಸೇ ಹೀಗೆ ಖೇದ ಚಿಂತೆಗಳಿಂದ ಕಳವಳ ಪಡುತ್ತಿರಲು ಇತರರಾದ ಸಂಸಾರಿಗಳ ಅವಸ್ಥೆ ಯನ್ನು ಏನೆಂದು ಹೇಳುವುದು? ನೀನು ಈಗ ಕುಂಠಿತನಾಗಿರಲು ಕಾರಣವೇನು? ||೧೪||

ವಿಶ್ವೇಶ್ವರನನ್ನು ಆರಾಧಿಸುವುದರಿಂದ ಸಕಲ ದುಃಖಗಳೂ ನಾಶವಾಗುವುವು. ಹೇಗೆಂದರೆ, ಶಿವಾರಾಧನೆಯನ್ನು ಮಾಡುವುದರಿಂದ ಸಮಸ್ತ ದುಃಖಗಳಿಗೂ ಬೀಜ ಭೂತವಾದ ಪಾಪಗಳೇ ನಾಶವಾಗುವುವು. ಅಂದಮೇಲೆ ದುಃಖವೆಲ್ಲಿಂದ ಉಂಟಾಗು ವುದು? ಎಂದೂ ಇಲ್ಲ. ನೀನೂ ಸಹ ಪರಮ ಶಿವಭಕ್ತನಿದ್ದೀಯೆ. ಶಿವಾರಾಧನೆಯೇ ನಿನ್ನ ಧನವೆಂದೂ ಸರ್ವಸ್ವವೆಂದೂ ಪ್ರಸಿದ್ಧಿ ಇದೆ. ಆದರೆ ಈಗ ನಿನ್ನ ವ್ಯಸನವು ಯಾವ ಧನಲಾಭದಿಂದ ನಿವಾರಿತವಾಗುವುದು? ನೀನು ಏನನ್ನು ಅಪೇಕ್ಷಿಸು ತ್ತೀಯೆ? ಏತಕ್ಕೆ ಖಿನ್ನನಾಗಿದ್ದೀಯೆ? ನಮಗೆ ಹೇಳಬಹುದಾಗಿದ್ದರೆ ಹೇಳು. ||೧೫||

ಇತಿ ತದ್ವಚನಂ ಶ್ರುತ್ವಾ ತಾನಾಹ ಮುನಿಪುಂಗವಾನ್ ।
ಶಿವಘುಂಢಿಃ ಸ್ಮರನ್ನೇವ ಶಂಕರಂ ಕರುಣಾಕರಂ ॥೧೬॥

ಶಿವಪ್ರಸಾದೇನ ನ ದುಃಖಮಸ್ಯ
ಸರ್ವಾತ್ಮನಾ ಸತ್ಯಮಿದಂ ವದಾಮಿ ।
ಶಿವಾರ್ಚನಂ ಮೇ ಧನಮೇತದನ್ಯೈ
ರ್ನೇಯಂ ಕಥಂ ವಾ ಶಿವತತ್ಪರಸ್ಯ ॥೧೭॥

ನ ಚೋರನೇಯಂ ನ ಚ ರಾಜನೇಯಂ
ನ ಶತ್ರುನೇಯಂ ನ ತದನ್ಯನೇಯಂ ।
ಶಿವಾರ್ಚನಾರತ್ನಮಿದಂ ಧನಂ ಮೇ
ವೃದ್ಧಿಂ ಪ್ರಯಾತ್ಯೇವ ದಿನೇ ದಿನೇಽಪಿ ॥೧೮॥

ಈರೀತಿ ಆ ಮುನಿಗಳು ಪ್ರಶ್ನಿಸಲು ಶಿವಘುಂಢಿಯು ದಯಾನಿಧಿಯಾದ ಶಂಕರನೇ ತನಗೆ ಗತಿ ಎಂದು ಮನಸ್ಸಿನಲ್ಲಿಯೇ ಧ್ಯಾನಿಸುತ್ತಾ ಹೇಳಿದನು. ||೧೬||

ಎಲೈ ಮುನಿಗಳೇ ! ನನಗೆ ಶಿವನ ದಯೆಯಿಂದ ಯಾವ ದುಃಖವೂ ಉಂಟಾಗಿರುವುದಿಲ್ಲ. ನೀವು ಹೇಳಿದಂತೆ ನಿಜವಾಗಿಯೂ ನನಗೆ ಧನವೆಂದರೆ ಶಿವಪೂಜೆಯೇ. ಹೀಗಿರಲು ನನಗೆ ದುಃಖವೆಂದರೇನು ? ಖಂಡಿತವಾಗಿಯೂ ದುಃಖವಿಲ್ಲ. ಅಥವಾ ಕೇವಲ ಶಿವಭಕ್ತನಾದ ನನಗೆ ಬೇರೆ ಯಾವ ಚಿಂತೆಯೂ ಇಲ್ಲ. ಖೇದವೂ ಇರುವುದಿಲ್ಲ. ||೧೭||

ನಾನು ಅಮೂಲ್ಯವಾದ ಮತ್ತು ಅಮೋಘವಾದ ಶಿವಾರ್ಚನೆ ಎಂಬ ಮಹಾರತ್ನವನ್ನು ಪಡೆದುಕೊಂಡಿದ್ದೇನೆ. ಈ ರತ್ನವನ್ನು ಕಳ್ಳರು ಕದಿಯಲಾರರು. ರಾಜನು ಅಪಹರಿಸಲಾರನು. ಶತ್ರುಗಳು ನಾಶಮಾಡಲಾರರು ಅಥವಾ ಮತ್ತೆ ಯಾರೂ ಎಲ್ಲಿಗೂ ಒಯ್ಯಲಾರರು. ಅಂಥ ದಿವ್ಯವಾದ ರತ್ನವಿದು. ಇದೇ ನನ್ನ ಧನವು. ಸರ್ವಸ್ವವೂ ಇದೇ. ಈ ಧನವು ದಿನದಿಂದ ದಿನಕ್ಕೆ ಅಭಿವೃದ್ಧಿಯನ್ನು ಹೊಂದುವುದೇ ವಿನಾ ಲೇಶವೂ ಕ್ಷಯಿಸುವುದಿಲ್ಲ. ||೧೮||

ನ ಕಾಲಾದಪಿ ಭೀತಿರ್ನೋ ನಾನ್ಯಸ್ಮಾದಪಿ ಸರ್ವಥಾ ।
ಶಿವಪ್ರಸಾದಸಂಬಂಧಾತ್ಕಥಂ ಭೀತೋ ಭವೇನ್ನರಃ ॥೧೯॥

ಯದ್ಯಪ್ಯನ್ಯಧನಾಪೇಕ್ಷಾ ನಾಸ್ತ್ಯಥಾಪಿ ಮಮಾಧುನಾ ।
ಸುಬಿಲ್ವಪಲ್ಲವಾಭಾವಾತ್ ಖಿನ್ನಮದ್ಯಮನಃ ಖಲು ॥೨೦॥

ಇಯಂ ಖಲು ಮಹಾಭೂತಾ ಲಿಂಗಂ ಬಿಲ್ವದಳಾನ್ಯಪಿ ।
ದುರ್ಲಭಾನೀತಿ ಮೇ ಬುದ್ಧಿಸ್ಸತ್ಸಂಗೋಽಪ್ಯತಿದುರ್ಲಭಃ ॥೨೧॥

ಮಯಾಪಿ ಶ್ವಃ ಪರಶ್ವೋ ವಾ ಭಾವಿ ಕಿಂ ವಾ ಮಮೇತ್ಯಪಿ ।
ಬಿಲ್ವಪತ್ರಾಣಿ ದತ್ತಾನಿ ಸರ್ವಾಣಿ ಶಿವಮಸ್ತಕೇ ॥೨೨॥

ನನಗೆ ಸಾಕ್ಷಾತ್ ಮೃತ್ಯುವಿನ ದೆಸೆಯಿಂದಲೂ ಸಹ ಭಯವಿರುವುದಿಲ್ಲ. ಅಂದ ಮೇಲೆ ಮತ್ತೆ ಬೇರೆ ಯಾರಿಂದ ತಾನೇ ಭಯವು ಸಂಭವಸೀತು ? ಎಂದೂ ಸರ್ವಥಾ ಭಯವಿಲ್ಲ. ಶಿವ ಪ್ರಸಾದದ ಬಲವುಳ್ಳವನು ಯಾರಿಗೆ ತಾನೇ ಹೆದರ ಬೇಕಾಗುವುದು ? ಎಂದೂ ಯಾರಿಂದಲೂ ಹೆದರಬೇಕಾದುದಿಲ್ಲ. ॥೧೯॥

ನನಗೆ ಯಾವ ದ್ರವ್ಯಗಳ ಮೇಲೆಯೂ ಅಪೇಕ್ಷೆ ಖಂಡಿತ ಇರುವುದಿಲ್ಲ. ಆದರೆ ಇಂದು ಬಿಲ್ವಪತ್ರೆಗಳಿಲ್ಲದ್ದರಿಂದ ನಾನು ಚಿಂತಿತನಾಗಿದ್ದೇನೆ. ॥೨೦॥

ಇದೋ ಇಂದು ಶಿವರಾತ್ರಿ ಮಹಾಪುಣ್ಯಕಾಲವಾಗಿರುತ್ತದೆ. ಆದರೆ ಇಂಥ ಮಹಾ ಯೋಗದಲ್ಲಿ ಬಿಲ್ವದಳಗಳಿಂದ ಶಿವಾರ್ಚನೆಯನ್ನು ಮಾಡಲಾರದವನಾಗಿ ದ್ದೇನೆ ಎಂದು ನನಗೆ ಖೇದವಾಗುತ್ತಿದೆ. ಶಿವಲಿಂಗವೂ ಬಿಲ್ವಾರ್ಚನೆಯೂ ಶಿವ ಭಕ್ತರ ಸಹವಾಸವೂ ಎಷ್ಟು ಮಹತ್ತರವಾಗಿರುತ್ತದೆಯೋ ಅಷ್ಟೇ ಕಷ್ಟ ಲಭ್ಯವೂ ಆಗಿರುವುದಷ್ಟೆ. ಇವುಗಳು ಇಂದು ನನಗೆ ದುರ್ಲಭವಾಗಿರುವುದೆಂದೇ ನನಗೆ ಮಹಾ ವ್ಯಸನವಾಗುತ್ತಿದೆ. ॥೨೧॥

ಇಂದೋ ನಾಳೆಯೋ, ಯಾವಾಗ ಏನು ವಿಪತ್ತುಗಳು ಒದಗುವುವೋ, ನನಗೆ ಮುಂದೆ ಯಾವ ಗತಿಯಾಗುವುದೋ, ಈ ಶರೀರವೇನೂ ಶಾಶ್ವತವಲ್ಲ ಎಂದು ಯೋಚಿಸಿ ನಾನು ಸ್ವಲ್ಪವೂ ಹಿಂದು ಮುಂದು ಯೋಚನೆ ಮಾಡದೇ ಎಲ್ಲಾ ಬಿಲ್ವಪತ್ರೆಗಳನ್ನೂ ಶಿವಲಿಂಗಕ್ಕೆ ಪೂಜಿಸಿ ಮುಗಿಸಿದ್ದೇನೆ. ॥೨೨॥

ನ ಬಿಲ್ವಭೂರುಹಾಗ್ರೇಽಪಿ ದೃಶ್ಯಂತೇ ಪಲ್ಲವಾಃ ಖಲು ।
ಅತಃ ಪರಂ ಮಹಾಭೂತಾ ವೃಥಾ ಸ್ಯಾತ್ತ್ರೈರ್ವಿನಾ ಖಲು ॥೨೩॥

ಯದರ್ಥಂ ಕರಿಪೀಡಾಪಿ ಸಹ್ಯಾ ಜಾತಾ ಪುರಾ ಮಮ ।
ತದಭಾವೇ ಕಥಂ ಪ್ರೀತಂ ಮನೋ ಮಮ ಭವಿಷ್ಯತಿ ॥೨೪॥

ತದ್ಬಿಲ್ವಪತ್ರಗ್ರಹಣೋದ್ಯತಾನಾಂ
ನಿವಾರಣಂ ವಾ ನ ಕೃತಂ ಮಯಾ ತು ।
ಅತಃ ಕುತೋ ವಾ ನವಬಿಲ್ವಪತ್ರಂ
ನ ಕ್ವಾಪಿ ದೃಷ್ಟಂ ಖಲು ಭೂರುಹೇಷು ॥೨೫॥

ಭವದ್ಭಿರಾಗತ್ಯ ನವಾನಿ ನೀತಾ
ನ್ಯಪಾರಪತ್ರಾಣಿ ಮಯಾಪಿ ದೈವಾತ್ ।

ಈಗ ಒಂದು ಮರದ ಮೇಲೆಯೂ ಒಂದು ಬಿಲ್ವದಳವೂ ಇರುವುದಿಲ್ಲ. ಎಲ್ಲಾ ಮುಗಿದುಹೋಗಿವೆ. ಆದರೆ ಇಂದು ಶಿವರಾತ್ರಿಯು ಪ್ರಾಪ್ತವಾಗಿದೆ. ಈಗ ಬಿಲ್ವಪತ್ರೆ ಇಲ್ಲದ್ದರಿಂದ ಶಿವಾರಾಧನೆಯನ್ನು ಮಾಡದೇ ವ್ಯರ್ಥವಾಗಿ ಇಂಥ ಪುಣ್ಯ ದಿನವು ಕಳೆದು ಹೋಗುವುದಲ್ಲಾ ಎಂದು ವ್ಯಸನಪಡುತ್ತಿದ್ದೇನೆ. ॥೨೩॥

ಕಳೆದ ವರ್ಷ ಇದೇ ದಿನದಲ್ಲಿ ಬಿಲ್ವಪತ್ರೆಗಳಿಗಾಗಿಯೇ ಆನೆಯ ಉಪಟಳವನ್ನೂ ಸಹಿಸಿಯಾದರೂ ಪತ್ರೆಗಳನ್ನು ಸಂಪಾದಿಸಬೇಕೆಂದು ಸಂಕಲ್ಪಿಸಿದ್ದೆ. ಹಾಗೆಯೇ ಎಷ್ಟೇ ಕಷ್ಟವನ್ನಾದರೂ ಅನುಭವಿಸಿ ಪತ್ರೆಗಳನ್ನು ಸಂಪಾದಿಸಿ ಶಿವಾರ್ಚನೆಯನ್ನು ಮಾಡಿದ್ದೆ. ಆದರೆ ಈ ವರ್ಷ ಅದೇ ನನಗೆ ಆ ಬಿಲ್ವಪತ್ರೆಗಳೂ ಶಿವಾರ್ಚನೆಯೂ ಲಭಿಸದೇ ಇರಲು ನನ್ನ ಮನಸ್ಸು ಹೇಗೆ ತಾನೆ ಪ್ರಸನ್ನವಾಗಿದ್ದೀತು? ॥೨೪॥

ಪತ್ರೆಗಳಿರುವವರೆಗೆ ಯಾರನ್ನೂ ಪತ್ರೆಯನ್ನು ಕೊಯ್ಯಬೇಡಿರೆಂದು ನಾನು ತಡೆಯಲಿಲ್ಲ. ಎಲ್ಲರೂ ಯಥೇಚ್ಛವಾಗಿ ಕುಯಿದುಬಿಟ್ಟದ್ದರಿಂದ ಈಗ ಮರಗಳಲ್ಲಿ ಒಂದು ಪತ್ರೆಯೂ ಇಲ್ಲ. ಅಥವಾ ಚಿಗುರೂ ಒಡೆದಿರುವುದಿಲ್ಲ. ॥೨೫॥

ನೀವುಗಳೆಲ್ಲರೂ ನಿತ್ಯವೂ ಬಂದು ಯಥೇಷ್ಟವಾಗಿ ಪತ್ರೆಗಳನ್ನು ಒಯ್ಯುತ್ತಿದ್ದೀರಿ. ನಿಮ್ಮ ದಾಕ್ಷಿಣ್ಯದಿಂದಲೋ ಅಥವಾ ಭೀತಿಯಿಂದಲೋ ನಾನೂ ನಿಮ್ಮನ್ನು

ನಿವಾರಣೇ ಭೀತಿಮುಪೇತ್ಯ ತೂಷ್ಣೀಂ
ಸ್ಥಿತಂ ಮನೋ ಮೇ ಸ್ಥಗಿತಂ ಕಿಲಾದ್ಯ ॥೨೬॥

ನ ಚಾದೂರೇ ವನಂ ಕಿಂಚಿದ್ಬಿಲ್ವಾನಾಮತ್ರ ದೃಶ್ಯತೇ ।
ಅತಿದೂರೇ ವನಂ ತಿಷ್ಠತ್ಯೇಕಂ ವ್ಯಾಘ್ರಕುಲಾಕುಲಂ ॥೨೭॥

ಅತ್ರಾದ್ಯ ಗಮನೇ ಮಧ್ಯೇ ಮಧ್ಯಾಹ್ನೇ ಶಿವಪೂಜನಂ ।
ಕರ್ತುಂ ನ ಸ್ಥಾವರಂ ಲಿಂಗಂ ಬಿಲ್ವವಾರ್ತಾಪಿ ದೂರತಃ ॥೨೮॥

ಅದ್ಯಾಹೋರಾತ್ರಮಿಶಾಯ ಬಿಲ್ವಪತ್ರಸಮರ್ಚನೈಃ ।
ನೇಯಮಿತ್ಯಪಿ ಬುದ್ಧಿಃಸ್ಯಾತ್ಸಾ ಜಾತಾ ವಿಫಲಾ ಖಲು ॥೨೯॥

ತಡೆಯಲಿಲ್ಲ. ಅದು ಹೇಗಾದರೂ ಇರಲಿ. ಈಗ ಬಿಲ್ವಪತ್ರೆಗಳಿಲ್ಲ. ಶಿವಾರ್ಚನೆಯನ್ನು ಹೇಗೆ ಮಾಡುವುದು? ಎಂಬ ಯೋಚನೆಯಲ್ಲಿಯೇ ನನ್ನ ಮನಸ್ಸು ಮುಳುಗಿದೆ. ॥೨೬॥

ಮತ್ತೆಲ್ಲಿಂದಲಾದರೂ ಪತ್ರೆಗಳನ್ನು ಸಂಪಾದಿಸೋಣವೆಂದರೆ ಹತ್ತಿರದಲ್ಲಿ ಎಲ್ಲಿಯೂ ಬಿಲ್ವವನವಿರುವುದಿಲ್ಲ. ದೂರದಲ್ಲೇನೋ ಒಂದು ವನವಿದೆ. ಆದರೆ ಅಲ್ಲಿ ಅನೇಕ ಹುಲಿಗಳು ವಾಸಮಾಡಿಕೊಂಡಿರುತ್ತವೆ. ಅಲ್ಲಿ ಹೋಗುವುದು ತಾನೇ ಹೇಗೆ? ॥೨೭॥

ಅಥವಾ ಅಲ್ಲಿಗೇ ಹೋಗೋಣವೆಂದು ಹೊರಟರೂ ಅನೇಕ ತೊಂದರೆಗಳಿವೆ. ಮಧ್ಯಾಹ್ನವೇಳೆಯ ಶಿವಪೂಜೆಯನ್ನು ಎಲ್ಲಿ ಮಾಡುವುದು? ಪ್ರತಿಷ್ಠಿತವಾದ ಶಿವಲಿಂಗವು ದಾರಿಯಲ್ಲಿ ಎಲ್ಲಿಯೂ ದೊರೆಯುಲಾರದು. ಬಿಲ್ವಪತ್ರೆಯ ಹೆಸರಂತೂ ಇಲ್ಲವೇ ಇಲ್ಲ. ॥೨೮॥

ಇಂದು ಅಹೋರಾತ್ರಿ ಅಖಂಡವಾಗಿ ಶಿವಲಿಂಗಕ್ಕೆ ಬಿಲ್ವಾರ್ಚನೆಯನ್ನು ಮಾಡುತ್ತಲೇ ಕಾಲಕಳೆಯಬೇಕೆಂಬ ಅಪೇಕ್ಷೆ ಇದ್ದಿತು. ಆದರೆ ಏನು ಮಾಡುವುದು? ಈಗ ನಮಗೆ ಅಶಕ್ಯವಾಗಿರುವುದರಿಂದ ಆ ನನ್ನ ಆಸೆಯು ನಿರಾಸೆಯಾಯಿತಲ್ಲಾ. ॥೨೯॥

ಏಕಸ್ಸಂಸ್ಥಾಪಿತೋ ಬಿಲ್ವೋ ಬಹುಪಲ್ಲವಸಂಕುಲಃ ।
ಭೂತಪೂಜಾರ್ಥಮಿತ್ಯೇವ ನೀತಾಸ್ತತ್ಪಲ್ಲವಾ ಅಪಿ ॥೩೦॥

ಕೇನ ಪ್ರವಿಷ್ಟಂ ನ ಜ್ಞಾತಂ ವನಮದ್ಯಾರುಣೋದಯೇ ।
ರಿಕ್ತೋ ಬಿಲ್ವತರುರ್ದೃಷ್ಟಃ ಕಿಂ ಕರ್ತವ್ಯಮತಃ ಪರಂ ॥೩೧॥

ಧಿಗ್ಜೀವಿತಂ ಬಿಲ್ವದಳಾರ್ಚನೇನ
ವಿನಾಪಿ ಭೂತಾನಿಶಿ ಲಿಂಗಮೂರ್ಧ್ನಿ ।
ತತೋ ವರಂ ಮೃತ್ಯುಮುಖೇ ಪ್ರವೇಶೋ
ನ ಜೀವನಂ ಬಿಲ್ವದಳೈರ್ವಿನಾಪಿ ॥೩೨॥

ಬಿಲ್ವೀದಳಂ ಕೋಮಲಮೀಶ್ವರಾಯ
ಭೂತಾರ್ಧರಾತ್ರೇ ಶಿವಲಿಂಗಮೂರ್ಧ್ನಿ ।
ದದಾತಿ ಯಸ್ತಂ ಪ್ರಣಮಂತಿ ದೇವಾಃ
ಸ ಏವ ವಂದ್ಯೋ ಭವತೀತಿ ಸರ್ವೇ ॥೩೩॥

ಈ ಶಿವರಾತ್ರಿಯ ದಿನಕ್ಕೆಂದೇ ಒಂದು ಬಿಲ್ವವೃಕ್ಷದಲ್ಲಿ ಪತ್ರೆಯೊಂದನ್ನೂ ಕೊಯ್ಯದೇ ಹಾಗೆಯೇ ನಿಲ್ಲಿಸಿಕೊಂಡಿದ್ದೆ. ಆದರೆ ಆ ವೃಕ್ಷದಲ್ಲಿದ್ದ ಪತ್ರೆಗಳೂ ಇಂದು ಮಾಯವಾಗಿವೆ. ಅವುಗಳನ್ನೂ ಯಾರೋ ತೆಗೆದುಕೊಂಡು ಹೋಗಿರುವರು. ॥೩೦॥

ಈ ವನಕ್ಕೆ ಅರುಣೋದಯಕ್ಕಿಂತಲೂ ಮೊದಲು ಯಾರು ಬಂದಿದ್ದರೋ, ಗೊತ್ತಿಲ್ಲ. ಆದರೆ ಬೆಳಗಾಗಿ ಎದ್ದು ಬಂದಕೂಡಲೇ ನೋಡಲು ಮರವು ಬರಿದಾಗಿದ್ದಿತು. ಆದುದರಿಂದ ಈಗ ಏನು ಮಾಡುವುದೋ ಒಂದೂ ತಿಳಿಯದಾಗಿದೆ. ॥೩೧॥

ಇಂಥ ಮಹಾಶಿವರಾತ್ರಿಯ ರಾತ್ರಿಯಲ್ಲಿ ಶಿವಲಿಂಗಕ್ಕೆ ಬಿಲ್ವದಳವನ್ನು ಅರ್ಚಿಸದಿರುವವನ ಬಾಳನ್ನು ಸುಡಬೇಕು. ಅಯ್ಯೋ, ಈ ಪುಣ್ಯದಿನವು ಹೀಗೆ ವ್ಯರ್ಥವಾಗಿಯೇ ಕಳೆದು ಹೋಗುತ್ತಿರುವುದು. ಹೀಗೆ ಬಿಲ್ವದಳವಿಲ್ಲದೇ ಜೀವಿಸಿರುವುದಕ್ಕಿಂತಲೂ ಮೃತ್ಯುವಿನ ಬಾಯಲ್ಲಿ ಬೀಳುವುದೇ ಎಷ್ಟೋ ಮೇಲು. ॥೩೨॥

ಇಂಥ ಮಹಾಪುಣ್ಯತಮವಾದ ಶಿವರಾತ್ರಿಯ ಮಹಾನಿಶಿಯಲ್ಲಿ ಶಿವಲಿಂಗಕ್ಕೆ ಕೋಮಲವಾದ ಬಿಲ್ವದಳ ಒಂದನ್ನು ಅರ್ಪಿಸಿದರೂ ಸಕಲ ಜನ ವಂದ್ಯನಾಗುವನೆಂದು ತಿಳಿದು ಅಂತಹವನನ್ನು ದೇವತೆಗಳೂ ಸಹ ನಮಸ್ಕರಿಸುತ್ತಾರೆ. ॥೩೩॥

ಇಂದ್ರಾದಿಕಾಸಾರಸುರೈಸ್ಸಮರ್ಚ್ಯ:
ಸ ಏವ ಯಶ್ಶಂಕರಮೂರ್ಧ್ನಿ ಬಿಲ್ವಂ।
ಪ್ರಯಚ್ಛತಿ ಸ್ವಚ್ಛಮತಿರ್ವಿಭೂತ್ಯಾ
ಲಿಂಗಸ್ವರೂಪೇ ಸುಕೃತಾರ್ಥರೂಪೇ ॥೩೪॥

ಇತಿ ತದ್ವಚನಂ ಶ್ರುತ್ವಾ ತಮೂಚುರ್ಮುನಿಪುಂಗವಾಃ।
ಅತ್ಯಾಸ್ತಿಕಂ ಮುನಿಶ್ರೇಷ್ಠಂ ಶಿವಲಿಂಗಾರ್ಚನೇ ರತಂ ॥೩೫॥

ಆಸಾಯಮಪಿ ಗಂತವ್ಯಂ ಯತ್ರ ಬಿಲ್ವವನಂ ಮಹತ್।
ಲಿಂಗಾನ್ಯಪಿ ಸಮಾದಾಯ ನಾರ್ಮದಾನಿ ಗೃಹಾತ್ಪರಂ ॥೩೬॥

ತತ್ರ ತಿಷ್ಠಂತು ಶಾರ್ದೂಲಾಃ ಪ್ರಬಲಾ ಅಪಿ ದಂತಿನಃ।
ಮೃಗೇಂದ್ರಾ ಅಪಿ ತಿಷ್ಠಂತು ಬಿಲ್ವಭೂರುಹಕಾನನೇ ॥೩೭॥

ವಿಭೂತಿ ಧಾರಣೆಯಿಂದ ಪವಿತ್ರನಾಗಿ ಚಿತ್ತಶುದ್ಧಿಯನ್ನು ಪಡೆದುಕೊಂಡು ಯಾವ ಮನುಷ್ಯನು ಲಿಂಗಸ್ವರೂಪವನ್ನು ಧರಿಸಿಕೊಂಡಿರುವ ಶಿವನ ಶಿರಸ್ಸಿನಮೇಲೆ ಒಂದೇ ಒಂದಾದರೂ ಬಿಲ್ವವನ್ನು ಏರಿಸುವನೋ ಆತನು ದೇವೇಂದ್ರನೇ ಮೊದಲಾದ ಸಮಸ್ತ ದೇವತೆಗಳಿಗೂ ಪೂಜ್ಯನಾಗುವುದರಲ್ಲಿ ಸಂಶಯವಿಲ್ಲ. ॥೩೪॥

ಹೀಗೆಂದು ಶಿವಧುಂಧಿಯು ತನ್ನನ್ನು ದೂರಿಕೊಂಡು, ವ್ಯಸನವನ್ನು ಹೇಳಿಕೊಳ್ಳಲು ಆ ಮುನಿಗಳೆಲ್ಲರೂ ಆತನ ಆಸ್ತಿಕತ್ವವನ್ನೂ ಶಿವಭಕ್ತತ್ವವನ್ನೂ ಒತ್ತಿ ಶ್ಲಾಘಿಸಿ, ಸಮಾಧಾನಪಡಿಸುತ್ತಾ ಹೇಳಿದರು. ॥೩೫॥

ಎಲೈ ಮುನಿವರ್ಯನೇ! ಈದಿನ ಎಷ್ಟೇ ಹೊತ್ತಾದರೂ ಸರಿಯೇ, ಬಿಲ್ವವನಕ್ಕೆ ನಾವು ಹೋಗೋಣ. ಸಾಯಂಕಾಲದೊಳಗಾಗಿ ಆ ಬಿಲ್ವವನವಿರುವ ಸ್ಥಳಕ್ಕೆ ಹೋಗಿ ಸೇರೋಣ. ನಮ್ಮನಮ್ಮ ಮನೆಗಳಿಂದಲೇ ನಾರ್ಮದ ಶಿವಲಿಂಗಗಳನ್ನು ತೆಗೆದುಕೊಂಡು ಹೋಗೋಣ. ಈದಿನ ಎಷ್ಟೇ ಕಷ್ಟಪಟ್ಟಾದರೂ ಬಿಲ್ವಪತ್ರೆಗಳನ್ನು ಸಂಪಾದಿಸಿ ಶಿವಾರ್ಚನೆಯನ್ನು ನಾವು ಮಾಡಲೇಬೇಕು. ॥೩೬॥

ಆ ಬಿಲ್ವವನದಲ್ಲಿ ಹುಲಿಗಳು ಇದ್ದರೆ ಇರಲಿ. ಕೊಬ್ಬಿದ ಆನೆಗಳು ಬೇಕಾದರೂ ಇರಲಿ. ಅಥವಾ ಸಿಂಹಗಳ ಹಿಂಡೇ ಇರಲಿ. ನಾವು ಅವುಗಳನ್ನು ಲಕ್ಷಿಸಕೂಡದು. ಹೆದರಲೂ ಕೂಡದು. ನಾವು ಅವಶ್ಯ ಅಲ್ಲಿಗೆ ಹೋಗಲೇಬೇಕು. ॥೩೭॥

ಅತಃ ಪರಂ ಜೀವನೇನ ಕಿಂ ಕೃತ್ಯಮಧುನಾ ವದ।
ತತ್ರ ಚೇನ್ಮರಣಂ ತೇನ ಮುಕ್ತಿರ್ಬಿಲ್ವಾವಲೋಕನಾತ್ ॥೩೮॥

ಕೋಟಿಶೋ ಮುನಯಸ್ಸರ್ವೇ ವಯಂ ಯಾಮಸ್ತದಾ ಯಮಃ।
ಭೀತಃಸ್ಯಾದೇವ ಶಾರ್ದೂಲಪ್ರಭೃತೀನಾಂ ತು ಕಾ ಕಥಾ ॥೩೯॥

ಅಸ್ಮಾಭಿರುಚ್ಚೈಶ್ಶಿವನಾಮ ಭಕ್ತ್ಯಾ
ವಕ್ತವ್ಯಮೇವೋರುವನೇ ಪ್ರವೇಶೇ।
ತದಾ ಕಥಂ ತದ್ಧ್ವನಯಃ ಪ್ರವೃದ್ಧಾಃ
ತದ್ಭೂತಿಭೀತ್ಯೈ ನ ಭವಂತಿ ಸಂತಃ ॥೪೦॥

ದವಭಸ್ಮ ಸಮಾದಾಯ ಲಿಂಗಂ ಚಾದಾಯ ಸತ್ವರಂ।
ಗಂತವ್ಯಂ ನ ವಿಲಂಬೋಽತ್ರ ಸಾಧ್ಯಃ ಖಲು ಮಹಾತ್ಮನಾಂ ॥೪೧॥

ಅಥವಾ ನಾವು ಹೀಗೆಯೇ ಜೀವಿಸಿಕೊಂಡಿದ್ದು ಮಾಡುವುದಾದರೂ ಏನು? ಒಂದು ವೇಳೆ ಆ ಶಿವಾರ್ಚನೆಯ ಪ್ರಯತ್ನದಲ್ಲಿಯೇ ಇದ್ದಾಗ ನಮಗೆ ಮರಣವು ಸಂಭವಿಸಿದರೂ ಅಡ್ಡಿ ಇಲ್ಲ. ಆ ಬಿಲ್ವವೃಕ್ಷಗಳನ್ನು ಸಂದರ್ಶಿಸಿ ಪ್ರಾಣಗಳನ್ನು ಬಿಟ್ಟರೆ ನಮಗೆ ಮುಕ್ತಿಯಾದರೂ ಲಭಿಸುವುದು. ॥೩೮॥

ಅಲ್ಲದೇ ನಿನ್ನ ಜೊತೆಯಲ್ಲಿ ನಾವು ಕೋಟ್ಯಂತರ ಮುನಿಗಳೂ ಹೊರಡಲು ಸಿದ್ಧರಾಗಿರುವೆವು. ನಾವೂ ಸಹ ನಿನ್ನ ಜೊತೆಯಲ್ಲಿಯೇ ಬರುವೆವು. ನಮ್ಮ ಮುನಿಗಳ ದೊಡ್ಡಗುಂಪನ್ನು ನೋಡಿದರೆ ಬಹುಶಃ ಯಮನೂ ಭಯಪಡಬಹುದು. ಅಂದಮೇಲೆ ಆ ಹುಲಿ ಸಿಂಹಗಳ ಪಾಡೇನು? ಅವು ನಮ್ಮನ್ನೇನೂ ಮಾಡ ಲಾರವು. ॥೩೯॥

ನಾವು ಆ ವನದಲ್ಲಿ ಪ್ರವೇಶಮಾಡುವಾಗ ಗಟ್ಟಿಯಾಗಿ ಶಿವನಾಮ ಗಳನ್ನು ಭಕ್ತಿಯಿಂದ ಭಜನೆ ಮಾಡುವೆವು. ಅಂಥ ಉಚ್ಚತರವಾದ ಧ್ವನಿಯು ಅಲ್ಲಿರತಕ್ಕ ಪ್ರಾಣಿಗಳಿಗೆ ಭಯವನ್ನುಂಟುಮಾಡಬಹುದಲ್ಲವೇ? ಬಹುಶಃ ಆ ಪ್ರಾಣಿ ಗಳು ಆ ವನವನ್ನು ಬಿಟ್ಟು ಬೇರೇ ಕಡೆಗೆ ಓಡಿಯೇ ಹೋದಾವು. ॥೪೦॥

ಆದುದರಿಂದ ಮುನಿವರ್ಯನೇ! ಜಾಗ್ರತೆ ಮಾಡು. ಈಗ ಸಾವಕಾಶಮಾಡು ವುದು ಬೇಡ. ದವಭಸ್ಮವನ್ನೂ ಶಿವಲಿಂಗವನ್ನು ಜೊತೆಗೆ ತೆಗೆದುಕೊಂಡು ಹೊರಡು. ಆ ಬಿಲ್ವವನಕ್ಕೇ ಹೋಗೋಣ. ॥೪೧॥

ಭೂತಾಯಾಮಪಿ ಕೋ ವಾ ಸ್ಯಾನ್ನಿಶಿ ಲಿಂಗಾರ್ಚನೇರತಃ ।
ಅಯಮೇತಾದೃಶಃ ಕಾಲಃ ಕದಾ ವಾ ಸಮುಪೇಷ್ಯತಿ ॥೪೨॥

ಕದಾ ಶಿವಾರ್ಚನೋದ್ಯೋಗೋ ಭವಿಷ್ಯತಿ ನ ವಿದ್ಮಹೇ ।
ಸಕುಟುಂಬೈರ್ಬಾಲಕೈಶ್ಚ ಪುತ್ರಪೌತ್ರಾದಿಭಿಸ್ಸಹ ॥೪೩॥

ಅದ್ಯ ಪ್ರಾಪ್ತವ್ಯಮಸ್ಮಾಭಿರ್ಬಿಲ್ವಭೂರುಹಕಾನನಂ ।
ಇತ್ಯುಕ್ತ್ವಾ ಚಲಿತಾಸ್ಸರ್ವೇ ಕೋಟಿಶೋ ಮುನಿಪುಂಗವಾಃ ॥೪೪॥

ಪುತ್ರಪೌತ್ರಾದಿಸಂಯುಕ್ತಾಃ ಕಲತ್ರೈರಪಿ ಸಂಯುತಾಃ ।
ತೇ ಯದಾ ಪ್ರಸ್ಥಿತಾಸ್ಸರ್ವೇ ಸಹೈವ ಶಿವಘುಂಟಿನಾ ॥೪೫॥

ತದಾ ರಿಕ್ತಮಭೂತ್ಸರ್ವಮೃಷಿಸ್ಥಾನಂ ಮನೋಹರಂ ।
ತತೋ ಗತಾಃ ಪರಿಶ್ರಾಂತಾ ಮುನಯೋ ಬಾಲಕೈಸ್ಸಹ ॥೪೬॥

ಶಿವರಾತ್ರಿಯ ದಿನ ಮಹಾನಿಶಿಯಲ್ಲಿ ಯಾವ ವಿವೇಕಿಯು ತಾನೇ ಶಿವ ಲಿಂಗಾರ್ಚನೆಯನ್ನು ಮಾಡದೇ ಇದ್ದಾನು! ಪ್ರತಿಯೊಬ್ಬನೂ ಮಾಡಲೇ ಬೇಕಾದದ್ದು. ಅಂಥ ಸುಯೋಗವು ನಮಗೆ ಎಷ್ಟು ಹೊತ್ತಿಗೆ ಲಭಿಸೀತು ಎಂದು ನಾವು ಉತ್ಸುಕರಾಗಿದ್ದೇವೆ. ||೪೨||

ನಾವು ಯಾವಾಗ ನಮ್ಮ ಕುಟುಂಬವೆನಿಸಿದ ಪತ್ನೀಪುತ್ರಪೌತ್ರಾದಿಗಳೊಡನೆ ಶಿವಾರ್ಚನೆಯ ಪ್ರಯತ್ನವನ್ನು ಮಾಡುವ ಸುಯೋಗವು ಲಭಿಸುವುದೋ ಅದು ನಮಗೆ ತಿಳಿಯುತ್ತಿಲ್ಲ. ಇದಕ್ಕಾಗಿ ನಾವು ಮಹಾ ಉತ್ಸುಕರಾಗಿರುತ್ತೇವೆ. ||೪೩||

ಆ ಶಿವಾರ್ಚನೆಯನ್ನು ಮಾಡಲು ನಾವು ಈಗಲೇ ಬಿಲ್ವವನಕ್ಕೆ ಹೋಗಬೇಕು. ಹೀಗೆಂದು ಸಂಕಲ್ಪಮಾಡಿದಕೂಡಲೇ ಎಲ್ಲಾ ಮುನಿಗಳೂ ಗುಂಪು ಸೇರಿ ಬಿಲ್ವವನಕ್ಕೆಂದು ಪ್ರಯಾಣ ಹೊರಟರು. ||೪೪||

ಆ ಮುನಿಗಳು ತಮ್ಮ ಪತ್ನೀ ಪುತ್ರ ಪೌತ್ರರೆಲ್ಲರನ್ನೂ ಜೊತೆಯಲ್ಲಿಯೇ ಕರೆದುಕೊಂಡು ಹೊರಡಲು ಶಿವಘುಂಟಿಯೂ ಅವರಿಗೆ ಜೊತೆಯಾದನು. ||೪೫||

ಅವರೆಲ್ಲರೂ ಹೊರಟುಹೋಗಲು ಆ ರಮ್ಯವಾದ ಋಷ್ಯಾಶ್ರಮವೂ ಬರಿದೇ ಆಯಿತು. ಆ ಮುನಿಗಳೂ ಕೂಡ ಚಿಕ್ಕ ಮಕ್ಕಳನ್ನು ಎತ್ತಿಕೊಂಡು ಹೋಗುತ್ತಿರುವಾಗ ಆಯಾಸವಾಗುತ್ತಿದ್ದರೂ ಉತ್ಸಾಹದಿಂದಲೇ ದಾರಿಯಲ್ಲಿ ಸಾಗುತ್ತಿದ್ದರು. ||೪೬||

ಪ್ರವಿಷ್ಟಾಸ್ತದ್ವನಂ ಯತ್ರ ಬಹವೋ ಬಿಲ್ವಭೂರುಹಾಃ ।
ತದಾನೀಂ ಕೋಟಿಶೋ ದೃಷ್ಟಾಶ್ಶಾರ್ದೂಲಾ ವಿವೃತಾನನಾಃ ॥೪೭॥

ಮೃಗೇಂದ್ರಾಃ ಶೈಲಸಂಕಾಶಾಶ್ಚಂದ್ರಮಂಡಲಸನ್ನಿಭಾಃ ।
ತದಾನೀಂ ಮುನಿದಾರಾಸ್ತೇ ಗೃಹೀತ್ವಾ ಸ್ತನ್ಯಪಾಂಛಿಶೂನ್ ॥೪೮॥

ಸ ಗರ್ಭಾಶ್ಚ ಭಯತ್ರಸ್ತಾಃ ಕಿಂ ಕರ್ತವ್ಯಮಿಹೇತ್ಯಪಿ ।
ಹಾ ಮಹಾದೇವ ಗೌರೀಶ ಮಹಾದೇವೇತಿ ವಾದಿನಃ ॥೪೯॥

ಅತ್ಯುಚ್ಚೈರ್ಮರಣಂ ಪ್ರಾಪ್ತಮಿತ್ಯೇವ ಭಯಸಂಕುಲಾಃ ॥೫೦॥

ಪ್ರದೋಷಸಮಯೇ ಪರಂ ಹರವಿಹಾರಯೋಗ್ಯಂ ವನಂ
ವಿಲೋಕಿತಮಘಾಪಹಂ ವೃತಮಪಾರಬಿಲ್ವದ್ರುಮೈಃ ।
ಅತಃ ಪರಮಮುಷ್ಯೈರ್ಭಯಂ ನ ಭವತೀತಿ ನಿಶ್ಚಿತ್ಯ ತೇ
ಶಿವಸ್ಮರಣತತ್ಪರಾಪರಮುದಾರದಾರೈಸ್ಸಹ ॥೫೧॥

ಹೀಗೆಯೇ ಅವಿಚ್ಛಿನ್ನವಾಗಿ ದಾರಿಯನ್ನು ನಡೆದು ಆ ಬಿಲ್ವ ವನಕ್ಕೆ ತಲಪಿದರು. ಅಲ್ಲಿದ್ದ ಅನೇಕ ಬಿಲ್ವವೃಕ್ಷಗಳನ್ನು ನೋಡಿ ಹರ್ಷಿಸಿದರು. ಹಾಗೆಯೇ ಅಲ್ಲಿಯೇ ವಾಸಮಾಡಿಕೊಂಡಿದ್ದ ಅನೇಕ ಹುಲಿಸಿಂಹಗಳೂ ಅವರ ದೃಷ್ಟಿಗೆ ಗೋಚರ ವಾದವು. ॥೪೭॥

ದೊಡ್ಡದೊಡ್ಡ ಬೆಟ್ಟದಂತೆ ಕಾಣುತ್ತಿದ್ದ ಅನೇಕ ಕಾಡಾನೆಗಳೂ ಆ ವನದಲ್ಲಿ ವಾಸವಾಗಿದ್ದುವು. ಆ ಕಾಡುಮೃಗಗಳನ್ನು ನೋಡಿ ಭಯದಿಂದ ಮುನಿಪತ್ನಿಯರು ತಮ್ಮ ಚಿಕ್ಕಚಿಕ್ಕ ಮಕ್ಕಳನ್ನು ಎತ್ತಿಕೊಂಡು ದಡದಡನೆ ಓಡುತ್ತಿದ್ದರು. ॥೪೮॥

ಆ ಸ್ತ್ರೀಯರಲ್ಲಿ ಅನೇಕರು ಗರ್ಭಿಣಿಯರಾಗಿದ್ದರು. ಅವರಂತೂ ಆ ಕ್ರೂರಮೃಗಗಳನ್ನು ಕಂಡು ಭಯದಿಂದ ಕಂಗೆಟ್ಟರು. ಅಯ್ಯೋ, ಏನು ಮಾಡುವುದು ? ಹೇಗೆ ಇಲ್ಲಿಂದ ಪಾರಾಗುವುದು ? ಓ ಮಹಾದೇವ, ಗೌರೀಶ, ನಾವು ಸಾಯುತ್ತಿದ್ದೇವೆ ಕಾಪಾಡು ಕಾಪಾಡು ಎಂದು ಮುಂತಾಗಿ ಗಟ್ಟಿಯಾಗಿ ಪ್ರಲಾಪಿಸುತ್ತಿದ್ದರು. ॥೪೯-೫೦॥

ಸ್ತ್ರೀಸಮುದಾಯದಲ್ಲಿ ಹೀಗೆ ಗಡಿಬಿಡಿ ನಡೆದಿದ್ದರೆ ಆ ಮುನಿಗಳು ಬೇರೊಂದು ರೀತಿಯಾಗಿ ಯೋಚಿಸುತ್ತಿದ್ದರು. ಆಹಾ ನಾವುಗಳೇ ಧನ್ಯರು. ಇಂಥ

ವ್ಯಾಘ್ರಾನ್ವಿಲೋಕ್ಯ ಸಿತಭಸ್ಮವಿಭೂಷಿತಾಂಗಾಃ
ಸರ್ವೇಽಪಿ ತೇ ಮುನಿವರಾಶ್ಶಿವಪೂಜನಾರ್ಥಂ ।
ಜಾತೋ ವಿಲಂಬ ಇತಿ ಸತ್ವರಮೇವ ತಾವತ್
ಪ್ರಾಪ್ತಾಸ್ತದೇವ ವನಮುದ್ಧತಸತ್ವಯುಕ್ತಂ ॥೫೨॥

ತಾನಾಗತಾನ್ ವಿಲೋಕ್ಯಾಶು ಸದಾರಾನ್ಮುನಿಪುಂಗವಾನ್ ।
ವಿಸ್ಮಯಂ ಪರಮಂ ಪ್ರಾಪುರ್ಮೃಗೇಂದ್ರಾ ಅಪಿ ಕೋಟಿಶಃ ॥೫೩॥

ಕಿನ್ನರಾಣಾಂ ಸುರಾಣಾಂ ವಾ ಪ್ರವೇಶೋ ನಾತ್ರ ಸರ್ವಥಾ ।
ನರಾಃ ಕಥಮಿಹಾಯಾಂತೀತ್ಯತಿವಿಸ್ಮಿತಮಾನಸಾಃ ॥೫೪॥

ಪ್ರದೋಷ ಪುಣ್ಯಕಾಲದಲ್ಲಿ ಬಿಲ್ವವನದ ದರ್ಶನವನ್ನು ಮಾಡಿದ್ದರಿಂದ ನಮ್ಮ ಪಾಪಗಳೆಲ್ಲಾ ನಾಶವಾದವು. ಆಹಾ, ಇಲ್ಲಿ ಎಷ್ಟೊಂದು ಬಿಲ್ವವೃಕ್ಷಗಳಿವೆ. ಇದು ಮನೋಹರವಾದ ವನವಾದ್ದರಿಂದಲೇ ಪರಮೇಶ್ವರನ ವಿಹಾರಕ್ಕೆ ಯೋಗ್ಯವಾಗಿರುತ್ತದೆ. ನಮ್ಮ ಪತ್ನಿಯರೂ ಸಹ ಶಿವಸ್ಮರಣವನ್ನು ಮಾಡುತ್ತಿದ್ದಾರೆ. ಇಂಥ ಪತ್ನೀಪುತ್ರರಿಂದೊಡಗೂಡಿ ಈ ಬಿಲ್ವವನವನ್ನು ಸಂದರ್ಶಿಸಿ ನಾವು ಪೂತರಾದೆವು. ಇನ್ನು ನಮಗೆ ಯಾವ ಪಾಪದಿಂದಲೂ ಭಯವಿರಲಾರದು. ಯಾವ ಪಾಪಗಳೂ ನಮ್ಮಲ್ಲಿರಲಾರವು. ॥೫೧॥

ಮುನಿಗಳು ದುಷ್ಟಪ್ರಾಣಿಗಳು ವಾಸಿಸುತ್ತಿದ್ದ ಆ ಬಿಲ್ವವನಕ್ಕೆ ಪ್ರವೇಶಿಸಿದರು. ಆ ಕ್ರೂರ ಪ್ರಾಣಿಗಳ ಆತಂಕದಿಂದ ಶಿವಪೂಜೆಗೆ ಎಲ್ಲಿ ವೇಳೆಮೀರುವುದೋ ಎಂದು ಚಿಂತಿಸುತ್ತಿದ್ದರು. ಹಾಗೆಯೇ ಧೈರ್ಯತಂದುಕೊಂಡು ಜಾಗ್ರತೆ ಶಿವಪೂಜೆಯನ್ನು ಮಾಡಬೇಕೆಂಬ ಪ್ರಯತ್ನದಲ್ಲಿ ಸಂಭ್ರಮಪಡುತ್ತಿದ್ದರು. ॥೫೨॥

ಹೀಗೆ ಹೆಂಡತಿಮಕ್ಕಳುಗಳನ್ನೆಲ್ಲಾ ಕಟ್ಟಿಕೊಂಡು ಗುಂಪುಗುಂಪಾಗಿ ಬಂದಿರುವ ಮುನಿಗಳನ್ನೆಲ್ಲಾ ನೋಡಿ ಆ ಸಿಂಹಾದಿಗಳಿಗೂ ಪರಮಾಶ್ಚರ್ಯವಾಯಿತು. ಅವು ಈ ಅದ್ಭುತವನ್ನು ಕಂಡು ಚಿಂತಿಸತೊಡಗಿದವು. ॥೫೩॥

ಈ ವನಕ್ಕೆ ಕಿನ್ನರರು, ದೇವತೆಗಳೂ ಸಹ ಹೆದರಿಕೆಯಿಂದ ಪ್ರವೇಶಿಸುತ್ತಿಲ್ಲ. ಮನುಷ್ಯರಂತೂ ಯಾವಾಗಲೂ ಇತ್ತಕಡೆಗೇ ಬಂದಿರುವುದಿಲ್ಲ. ಆದರೆ ಇಂದು ಈ ಮನುಷ್ಯರು ಹೇಗೆ ಬಂದರು, ಏತಕ್ಕೆ ಬರುತ್ತಿದ್ದಾರೆ? ಹೀಗೆಂದು ಆಶ್ಚರ್ಯದಿಂದ ಯೋಚಿಸುತ್ತಿದ್ದವು. ॥೫೪॥

ಅಸ್ಮದ್ರಕ್ಷಾರ್ಥಮೇವಾತ್ರ ತೇ ಸರ್ವೇ ಸಮುಪಾಗತಾಃ ।
ಯದ್ಯಪ್ಯಥಾಪಿ ಭೂತಾಯಾಮುಪವಾಸಃ ಕಿಲಾಧುನಾ ॥೫೫॥

ನ ಜೀವಹತ್ಯಾ ಕರ್ತವ್ಯಾ ವಿಶೇಷೇಣಾದ್ಯ ಶಂಕರಃ ।
ಪೂಜನೀಯಃ ಪ್ರಯತ್ನೇನ ನವಬಿಲ್ವದಳಾದಿಭಿಃ ॥೫೬॥

ಅದ್ಯ ಯೇ ಯೇ ಸಮಾಯಾಂತಿ ತೇ ಸರ್ವೇ ಯಾಂತಿ ಪಾವನಾಃ ।
ಇದಂ ಬಿಲ್ವವನಂ ದೃಷ್ಟ್ವಂ ಲಿಂಗಂ ಚೇದಂ ಶಿವಾತ್ಮಕಂ ॥೫೭॥

ಕಿಂ ಚಾದ್ಯ ಸ್ಯಾತ್ಪರೋ ಲಾಭೋ ಮುನಿಸಂದರ್ಶನಾದಿಹ ।
ತೇ ಶಾಂಭವಾಶ್ಶಿವಾಚಾರತತ್ಪರಾಃ ಪರಮಾದರಾತ್ ॥೫೮॥

ರುದ್ರಾಧ್ಯಾಯಂ ಪಠಿಷ್ಯಂತಿ ಮುನಯಶ್ಶಿವಪೂಜನೇ ।
ಸ ಶ್ರೋತವ್ಯಃ ಪಾಪರಾಶಿವಿನಾಶಾಯ ಶಿವಾಲಯೇ ॥೫೯॥

ಅಥವಾ ನಮ್ಮ ರಕ್ಷಣೆಗಾಗಿಯೇ ಬಂದಿದ್ದಾರೆಯೇ? ನಮ್ಮ ಆಹಾರಕ್ಕೆಂದೇ ಬಂದಿರಬಹುದೇ? ಆದರೆ ಇಂದು ಶಿವರಾತ್ರಿ ಪುಣ್ಯದಿನವು. ಏನನ್ನೂ ತಿನ್ನುವ ಹಾಗಿಲ್ಲ. ಇಂದು ಉಪವಾಸದ ದಿನ. ||೫೫||

ಮತ್ತು ಶಿವಪ್ರೀತಿಕರವಾದ ದಿನವಾಗಿರುವುದರಿಂದ ಯಾವ ಪ್ರಾಣಿಹಿಂಸೆಯನ್ನೂ ಮಾಡಕೂಡದು. ಯಾವ ಜಂತುವಿಗೂ ತೊಂದರೆಕೊಡಕೂಡದು. ಕೇವಲ ಚಿತ್ತಶಾಂತತೆಯಿಂದ ಪರಮೇಶ್ವರನನ್ನು ಬಿಲ್ವಪಲ್ಲವಗಳಿಂದ ಆರಾಧಿಸಬೇಕು. ||೫೬||

ಯಾರು ಇಂಥ ಬಿಲ್ವವನವನ್ನೂ ಶಿವಸ್ವರೂಪವಾದ ಶಿವಲಿಂಗವನ್ನೂ ಈದಿನ ಸಂದರ್ಶಿಸುವರೋ ಅವರು ಪರಮಪವಿತ್ರರಾಗಿ ಸದ್ಗತಿಯನ್ನು ಪಡೆಯುವರು. ನಾವೇ ಇಂದು ಧನ್ಯರು. ನಮ್ಮ ಅದೃಷ್ಟದಿಂದ ಇವುಗಳೆಲ್ಲವನ್ನೂ ನಾವು ನೋಡುತ್ತಿದ್ದೇವೆ. ||೫೭||

ಅಲ್ಲದೇ ನಮಗೆ ಈದಿನ ವಿಶೇಷವಾದ ಲಾಭವು ದೊರೆಯುತ್ತಿದೆ. ಅನಾಯಾಸವಾಗಿ ನಮಗೆ ಸಾತ್ವಿಕರಾದ ಮುನಿಗಳು ಸಂದರ್ಶನವನ್ನಿತ್ತಿದ್ದಾರೆ. ಇವರೆಲ್ಲರೂ ಪರಮ ಶಿವಭಕ್ತರು. ಸರ್ವದಾ ಶಿವಧರ್ಮವನ್ನೇ ಆಚರಿಸತಕ್ಕವರೂ ಆಗಿರುತ್ತಾರೆ. ||೫೮||

ಈ ಮುನಿಗಳು ಈಗ ಶಿವಾರ್ಚನೆಯ ಸಮಯದಲ್ಲಿ ಶ್ರೀರುದ್ರಾಧ್ಯಾಯವನ್ನು ಹೇಳುತ್ತಾ ಪೂಜಿಸುವರು. ನಾವೂ ನಮ್ಮ ಪಾಪಗಳನ್ನು ಕಳೆದುಕೊಳ್ಳುವು

ಶಿವನಾಮಸ್ಮರದ್ರತ್ನನಿಧಿರೇವ ಯತೋ ಮಹಾನ್ ।
ರುದ್ರಾಧ್ಯಾಯಃ ಶ್ರುತೋ ಮುಕ್ತಿಂ ದಾಸ್ಯತ್ಯೇವ ನ ಸಂಶಯಃ ॥೬೦॥

ಅದ್ಯ ಶಾಂಭವಯೋಗೇನ ಭೂತಾನಿಶಿ ಶಿವಾರ್ಚನೇ ।
ಪಶುಜನ್ಮವಿನಾಶಃ ಸ್ಯಾದಸ್ಮಾಕಂ ನಾತ್ರ ಸಂಶಯಃ ॥೬೧॥

ಶಿವೇನ ಪ್ರೇರಿತಾಸ್ಸರ್ವೇ ಮುನಯೋಽತ್ರ ಸಮಾಗತಾಃ ।
ಶಾಂಕರಾಗ್ರೇಸರಾಸ್ಸರ್ವೇ ತದ್ದರ್ಶನಮಘಾಪಹಂ ॥೬೨॥

ಕೃತಕೃತ್ಯಾಃ ಪರಂ ಸರ್ವೇ ವಯಮದ್ಯ ಮಹಾನಿಶಿ ।
ಶಿವಾರ್ಚನೇ ಶಿವಾಚಾರನಿರತೈಸ್ಸಹ ಸಾದರಂ ॥೬೩॥

ದಕ್ಕೋಸ್ಕರವಾಗಿ ಶಿವಪೂಜೆಯನ್ನು ನೋಡಬೇಕು. ಹಾಗೆಯೇ ರುದ್ರಾಧ್ಯಾಯವನ್ನೂ ಕೇಳಬೇಕು. ॥೫೯॥

ಆ ರುದ್ರಾಧ್ಯಾಯವು ಪರಮ ಮಹಿಮೆಯುಳ್ಳದ್ದು. ಅದು ಶಿವನಾಮಗಳೆಂಬ ಅಮೂಲ್ಯವಾದ ರತ್ನಗಳಿಗೆ ಗಣಿಯಂತೆ ಇರುತ್ತದೆ. ಅಂಥ ರುದ್ರಾಧ್ಯಾಯವನ್ನು ಶ್ರವಣಮಾಡಿದರೆ ಮುಕ್ತಿಯು ದೊರೆಯುವುದರಲ್ಲಿ ಸಂಶಯವಿಲ್ಲ. ಆದುದರಿಂದ ಸುಖಾಭಿಲಾಷಿಗಳಾದ ನಾವು ಅವಶ್ಯವಾಗಿ ಅದನ್ನು ಇಂದು ಕೇಳಲೇಬೇಕು. ॥೬೦॥

ಇಂಥ ಶಿವನ ಪರಮಭಕ್ತರ ಸಮಾಗಮದಿಂದ ನಾವು ಧನ್ಯರಾದೆವು. ಈ ಶಿವರಾತ್ರಿಯ ಮಹಾನಿಶಿಯಲ್ಲಿ ಶಿವಾರ್ಚನೆಯು ನಡೆಯುವಾಗ ನಾವು ಸಂದರ್ಶಿಸಿದರೆ ನಮ್ಮ ಈ ಪಶುಜನ್ಮವು ನಾಶವಾಗಿ ಉತ್ತಮ ಜನ್ಮವು ದೊರೆಯುವುದರಲ್ಲಿ ಸಂದೇಹವಿಲ್ಲ. ॥೬೧॥

ನಮ್ಮ ಸುದೈವದಿಂದ ಪರಮೇಶ್ವರನೇ ಇವರನ್ನು ಇಲ್ಲಿಗೆ ಬರುವಂತೆ ಪ್ರೇರಿಸಿ ಕಳುಹಿಸಿರುತ್ತಾನೆ. ಆದ್ದರಿಂದಲೇ ಇಲ್ಲಿಗೆ ಬಂದಿರುವರು. ಆಹಾ, ಇವರೆಲ್ಲರೂ ಶಿವಭಕ್ತಾಗ್ರಣಿಗಳಾಗಿರುವರಷ್ಟೆ. ಇವರ ದರ್ಶನದಿಂದ ಖಂಡಿತವಾಗಿಯೂ ನಮ್ಮ ಪಾಪಗಳು ನಾಶವಾಗುವುವು. ॥೬೨॥

ಈಹೊತ್ತು ನಾವೆಲ್ಲಾ ಕೃತಕೃತ್ಯರಾಗುವೆವು. ಆದುದರಿಂದ ಈ ರಾತ್ರಿಯಲ್ಲಿ ನಾವೆಲ್ಲರೂ ಕ್ರೂರಕರ್ಮಗಳನ್ನೆಲ್ಲಾ ಬಿಟ್ಟು ಸೌಮ್ಯರಾಗಿ ಸೌಹಾರ್ದದಿಂದ ಈ ಶಿವಭಕ್ತರ ಜೊತೆಯಲ್ಲಿ ಶಿವಸಮಾರಂಭವನ್ನು ಅನುಭವಿಸಬೇಕು. ಹಿಂಸಾಕೃತ್ಯಗಳನ್ನು

ದುಷ್ಟವ್ಯಾಪಾರವಿರತೈರಸ್ಮಾಭಿಃ ಸ್ಥೀಯತಾಮಾದರಾತ್ ।
ಅನ್ಯಥಾ ತೇಽತಿಭೀತಾಸ್ಸ್ಯುರ್ಮೃಗೇಭ್ಯೋ ಭೀರವೋ ನರಾಃ ॥೬೪॥

ಬಾಲಕಾ ಅಪಿ ಯೇ ಸಿಂಹಾ ಯುವಾನಶ್ಚ ಮಹತ್ತರಾಃ ।
ಸದಾ ಮೌನೇನ ತಿಷ್ಠಂತು ದುರ್ವ್ಯಾಪಾರವಿವರ್ಜಿತಾಃ ॥೬೫॥

ಅದ್ಯ ಚೇದ್ಗಜಯೂಥಾನಿ ಸಮಾಯಾಸ್ಯಂತಿ ಕೋಟಿಶಃ ।
ನ ತೇಷಾಂ ಹನನಂ ಕಾರ್ಯಂ ಭೂತಾಯಾಂ ವ್ರತತತ್ಪರೈಃ ॥೬೬॥

ಇತಿ ಸರ್ವೇ ವಿಚಾರ್ಯೈವ ತೇ ಮೃಗೇಂದ್ರಾಃ ಪರಸ್ಪರಂ ।
ಭೂತಿರುದ್ರಾಕ್ಷವಲಯಾಃ ತದ್ವನಂ ಸಮುಪಾಶ್ರಿತಾಃ ॥೬೭॥

ಆದಾಯಾದಾಯ ಬಿಲ್ವೇಭ್ಯೋ ನವಕೋಮಲಪಲ್ಲವಾನ್ ।
ರಾಶೀಕೃತ್ಯ ಸ್ಥಿತಾಸ್ಸರ್ವೇ ಶಿವಪೂಜಾರ್ಥಮಾದರಾತ್ ॥೬೮॥

ಖಂಡಿತ ಬಿಟ್ಟುಬಿಡಬೇಕು. ಹಾಗಿಲ್ಲದಿದ್ದರೆ ಇವರು ನಮ್ಮಿಂದ ಭಯಗೊಂಡು ಕಾತರರಾಗುವರು. ಸಾಭಾವಿಕವಾಗಿಯೇ ವನಮೃಗಗಳನ್ನು ಮನುಷ್ಯರು ಕಂಡರೆ ಭಯಪಡುವರಷ್ಟೆ. ॥೬೩-೬೪॥

ನಮ್ಮ ಸಿಂಹಗಳಲ್ಲಿ ಮರಿಯೇ ಆಗಲಿ ಪ್ರೌಢವೇ ಆಗಲಿ ಯಾರೂ ಈಗ ಕ್ರೂರಕರ್ಮಗಳನ್ನೂ ಹಿಂಸಾಕೃತ್ಯಗಳನ್ನೂ ಮಾಡಕೂಡದು. ಎಲ್ಲರೂ ಸೌಮ್ಯರಾಗಿ ಮೌನದಿಂದಿರಬೇಕು. ॥೬೫॥

ಒಂದು ವೇಳೆ ಕೋಟಿ ಕೋಟಿ ಆನೆಗಳ ಗುಂಪುಗಳು ಬಂದರೂ ನಾವು ಯಾರೂ ಅವುಗಳನ್ನು ಕೊಲ್ಲಕೂಡದು. ಹಿಂಸಿಸಲೂ ಕೂಡದು. ನಾವೆಲ್ಲರೂ ಶಿವರಾತ್ರಿ ವ್ರತದ ದೀಕ್ಷೆಯನ್ನು ಸರಿಯಾಗಿ ನಿಯಮದಿಂದ ಪಾಲಿಸಬೇಕು. ॥೬೬॥

ಹೀಗೆಂಬುದಾಗಿ ಆ ಸಿಂಹಗಳೆಲ್ಲವೂ ಗುಂಪುಸೇರಿ ವಿಚಾರಪೂರ್ವಕವಾಗಿ ನಿರ್ಣಯಮಾಡಿಕೊಂಡವು. ಮತ್ತು ಎಲ್ಲರೂ ನಿಯಮಸ್ಥರಾಗಿರಬೇಕೆಂದೂ ತೀರ್ಮಾನಿಸಿಕೊಂಡವು. ಅನಂತರ ಅವುಗಳೆಲ್ಲಾ ಭಸ್ಮರುದ್ರಾಕ್ಷಮಾಲೆಗಳನ್ನು ಧರಿಸಿಕೊಂಡವು. ॥೬೭॥

ಹಾಗೆಯೇ ಶಿವಪೂಜೆಗೆಂದು ಬಿಲ್ವಪತ್ರೆಗಳನ್ನೂ ಶೇಖರಿಸಿದವು. ಬಿಲ್ವಮರ ಗಳಿಂದ ಕೋಮಲವಾದ ಪತ್ರೆಯ ಚಿಗುರುಗಳನ್ನು ತಂದು ರಾಶಿಹಾಕಿಕೊಂಡವು. ॥೬೮॥

ತೇ ಮೃಗೇಂದ್ರಾಶ್ಚ ತೈರ್ದೃಷ್ಟಾಸ್ಸರ್ವೈರ್ಮುನಿವರೈರಪಿ।
ಸ್ವಕರೋಪಾರ್ಜಿತಾಪಾರಬಿಲ್ವರಾಶಿಸಮನ್ವಿತಾಃ ॥೧೯॥

ತಾನ್ ದೃಷ್ಟ್ವಾ ಮುನಯಸ್ಸರ್ವೇ ಪ್ರಹೃಷ್ಟಾಶ್ಚಿಷ್ಟಸಂಮತಾಃ।
ಏತೇಽಪಿ ಮುನಯಃ ಕೇಽಪಿ ನ ಮೃಗಾ ಇತಿ ನಿಶ್ಚಯಾಃ ॥೨೦॥

ತತಃ ಪ್ರವಿಷ್ಟಾಸ್ಸರ್ವೇಽಪಿ ವನಂ ಬಿಲ್ವವನಾಶ್ರಿತಂ।
ಪ್ರಶಾಂತಸಿಂಹಸಂಕೀರ್ಣಂ ಸಂಕೀರ್ಣಂ ಶಿವಮಂಟಪೈಃ ॥೨೧॥

ತತ್ರ ಲಿಂಗಾನಿ ದೃಷ್ಟಾನಿ ತುಂಗಾನಿ ವಿಮಲಾನ್ಯಪಿ।
ಕಾಶ್ಮೀರಮಣಿರೂಪಾಣಿ ಮುನಿಭಿಸ್ತೈರ್ಮಹಾತ್ಮಭಿಃ ॥೨೨॥

ಎಲ್ಲಾ ಸಿಂಹಗಳೂ ತಮ್ಮ ತಮ್ಮ ಸ್ವಹಸ್ತದಿಂದ ಬಿಲ್ವಪತ್ರೆಗಳನ್ನು ತಂದು ಹಾಕಿದ್ದನ್ನೂ ಆ ಸಿಂಹಗಳ ಸೌಮ್ಯಸ್ವಭಾವವನ್ನೂ ಮುನಿಗಳೆಲ್ಲರೂ ನೋಡುತ್ತಿದ್ದರು. ॥೧೯॥

ಹೀಗೆ ಆಶ್ಚರ್ಯಕರವಾಗಿ ವರ್ತಿಸುತ್ತಿದ್ದ ಸಿಂಹಗಳನ್ನು ನೋಡಿ ಮುನಿಗಳಿಗೆ ಪರಮಾಶ್ಚರ್ಯವಾಯಿತು. ಹಾಗೂ ಸಂಶಯವೂ ಹೆಚ್ಚಿತು. ಅನಂತರ ಅವರು ಹೀಗೆಂದು ತರ್ಕಿಸಿದರು—ಇವುಗಳು ಕೇವಲ ಸಿಂಹಗಳಲ್ಲ. ತಪಸ್ವಿಗಳಾದ ಮುನಿಗಳೇ ಬಹುಶಃ ಸಿಂಹದ ವೇಷವನ್ನು ಧರಿಸಿಕೊಂಡಿರಬಹುದು. ಹೀಗೆಂದು ಯೋಚಿಸಿ ಧೈರ್ಯಗೊಂಡರು. ॥೨೦॥

ಅನಂತರ ಆ ಮುನಿಗಳೆಲ್ಲಾ ಆ ಬಿಲ್ವವನಕ್ಕೆ ಪ್ರವೇಶಮಾಡಿದರು. ಅಲ್ಲಿ ದೊಡ್ಡದೊಡ್ಡ ಸುಂದರವಾದ ಬಿಲ್ವವೃಕ್ಷಗಳಿದ್ದವು. ಆ ವನವು ಸೌಮ್ಯಗಳಾದ ಸಿಂಹಗಳಿಂದ ಕೂಡಿಕೊಂಡಿದ್ದು ಪ್ರಶಾಂತ ಗಂಭೀರವಾಗಿದ್ದಿತು. ಅಲ್ಲಿ ಮಧ್ಯೆಮಧ್ಯೆ ಶಿವಮಂಟಪಗಳೂ ಅನೇಕವಾಗಿದ್ದವು. ॥೨೧॥

ಆ ಸುಂದರವಾದ ಮಂಟಪಗಳಲ್ಲಿ ದೊಡ್ಡದೊಡ್ಡ ದಿವ್ಯವಾದ ಶಿವಲಿಂಗಗಳೂ ಇದ್ದವು. ಅವು ಕಾಶ್ಮೀರದ ರತ್ನಮಣಿಯಂತೆ ಪರಮೋತ್ಕೃಷ್ಟಗಳಾಗಿದ್ದವು. ಇವುಗಳನ್ನೆಲ್ಲಾ ನೋಡಿ ಮುನಿಗಳಿಗೆ ಅತ್ಯಂತ ಹರ್ಷವಾಯಿತು. ॥೨೨॥

ತಲ್ಲಿಂಗದರ್ಶನಾದೇವ ತುಷ್ಟಾಸ್ತೇ ಮುನಿಪುಂಗವಾಃ ।
ಧನ್ಯಂ ದಿನಮಿದಂ ಜಾತಂ ಶ್ರಮೋಽಪಿ ಗತ ಇತ್ಯಪಿ ॥೭೩॥

ತತಃ ಪರಂ ಮುನಿವರ್ಯೈರ್ದೃಷ್ಟಾ ಸಾ ಸುರವಾಹಿನೀ ।
ತತ್ರ ಸ್ನಾನಂ ಚ ತೈಸ್ಸರ್ವೈಸ್ಸಕುಟುಂಬೈಸ್ಸಬಾಲಕೈಃ ॥೭೪॥

ಭಸ್ಮಸಂಛನ್ನಸರ್ವಾಂಗಾಸ್ತೇ ರುದ್ರಾಕ್ಷವಿಭೂಷಣಾಃ ।
ಧನ್ಯತ್ವಂ ಮೇನಿರೇ ಸರ್ವೇ ಶಿವಲಿಂಗಾರ್ಚನೋತ್ಸುಕಾಃ ॥೭೫॥

ತತಸ್ಸುರಸರಿತ್ತೀರೇ ಬಿಲ್ವೇಭ್ಯೋ ಬಿಲ್ವಪಲ್ಲವಾನ್ ।
ಸಮಾದಾಯ ಯಯುಸ್ಸರ್ವೇ ಗೌರೀಲಿಂಗಾಲಯಂ ಪ್ರತಿ ॥೭೬॥

ಆ ಶಿವಲಿಂಗಗಳ ದರ್ಶನದಿಂದ ಪರಮಾನಂದಿತರಾದ ಆ ಮುನಿಗಳ ಬಾಯಿಂದ ಸಂತೋಷದ ಉದ್ಗಾರಗಳೇ ಹೊರಡುತ್ತಿದ್ದವು. ಅಹೋಭಾಗ್ಯ, ಈ ದಿನವೇ ಸುದಿನವು. ನಾವು ದಾರಿಯನ್ನು ನಡೆದ ಆಯಾಸವು ಪರಿಹೃತವಾಯಿತು. ಸಾರ್ಥಕವಾಯಿತು. ಹೀಗೆಂದುಕೊಂಡು ಉಲ್ಲಾಸವನ್ನು ಪಡೆದರು. ॥೭೩॥

ಹಾಗೆಯೇ ಅತ್ತಿತ್ತಲಾಗಿ ನೀರಿನ ಆಸರೆಯನ್ನು ಅವರು ಹುಡುಕುತ್ತಿರಲು ಅಲ್ಲಿಯೇ ಹತ್ತಿರದಲ್ಲಿ ಹರಿಯುತ್ತಿದ್ದ ದೇವಗಂಗಾನದಿಯನ್ನು ಕಂಡರು. ಅಲ್ಲಿ ಆ ಮುನಿಗಳು ತಮ್ಮ ಪತ್ನೀಪುತ್ರರೊಂದಿಗೆ ಮನಸ್ವಿಯಾಗಿ ಸ್ನಾನ ಮಾಡಿದರು. ॥೭೪॥

ಅವರೆಲ್ಲರೂ ಸ್ನಾನಮಾಡಿದ ಬಳಿಕ ಮೈಗೆಲ್ಲಾ ರುದ್ರಾಕ್ಷ ಮಾಲೆಗಳನ್ನು ಧರಿಸಿಕೊಂಡು ಜಾಗ್ರತೆಯಾಗಿ ಶಿವಲಿಂಗಾರಾಧನೆಯಲ್ಲಿ ಪ್ರಯತ್ನಿಸುತ್ತಾ, ಇಂಥ ಸುಯೋಗವು ದೊರೆತಿದ್ದರಿಂದ ತಾವೇ ಪರಮಧನ್ಯರೆಂದು ಎಣಿಸಿಕೊಳ್ಳುತ್ತಿದ್ದರು. ॥೭೫॥

ಅನಂತರ ಅವರೆಲ್ಲರೂ ಆ ಗಂಗಾನದಿಯ ತೀರದಲ್ಲಿದ್ದ ಬಿಲ್ವವೃಕ್ಷಗಳಿಂದ ಯಥೇಷ್ಟವಾಗಿ ಚಿಗುರಾದ ಬಿಲ್ವಪತ್ರೆಗಳನ್ನು ಕೊಯಿದುಕೊಂಡು ಶಿವಲಿಂಗ ಮಂದಿರಕ್ಕೆ ಹೊರಟರು. ॥೭೬॥

ಮಣಿದೀಪಸಮಾಕ್ರಾಂತಂ ದೃಷ್ಟ್ವಾ ಶಂಕರಮಂದಿರಂ ।
ಪ್ರಹೃಷ್ಟಾಸ್ತೇ ಮುನಿವರಾಃ ಪ್ರದೋಷಸಮಯೇ ನೃಪ ॥೭೭॥

ಗಂಗಾಜಲಂ ಸಮಾದಾಯ ರುದ್ರಾಧ್ಯಯನಪೂರ್ವಕಂ ।
ಕೃತ್ವಾಭಿಷೇಕಂ ಬಿಲ್ವೈಶ್ಚ ಪೂಜಯಾಮಾಸುರಾದರಾತ್ ॥೭೮॥

ಮೃಗೇಂದ್ರಾಶ್ಚ ಸಮಾಗತ್ಯ ದೃಷ್ಟ್ವಾ ಶ್ರೀರುದ್ರಜಾಪಕಾನ್ ।
ಭಕ್ತ್ಯಾ ಶ್ರುತ್ವಾ ರುದ್ರಸೂಕ್ತಂ ಪ್ರಾಪುಸ್ಸಂತೋಷಮದ್ಭುತಂ ॥೭೯॥

ತೇ ಬಿಲ್ವಪತ್ರೈರೀಶಾನಂ ಪೂಜಯಿತ್ವಾ ಸ್ಥಿತಾ ಮೃಗಾಃ ।
ತೇ ದೃಷ್ಟ್ವಾ ವಿಸ್ಮಯಂ ಪ್ರಾಪ್ತಾಸ್ತೇ ಸರ್ವೇ ಶಾಂಭವೋತ್ತಮಾಃ ॥೮೦॥

ಮೃಗೇಂದ್ರಮಹಿಲಾಸ್ಸರ್ವಾಃ ಸ್ವಸ್ವಬಾಲಕಸಂವೃತಾಃ ।
ಸಮಾಗತ್ಯಾರ್ಚಯಾಮಾಸುರೀಶಾನಂ ಬಿಲ್ವಪಲ್ಲವೈಃ ॥೮೧॥

ಅಷ್ಟು ಹೊತ್ತಿಗೆ ಪ್ರದೋಷ ಸಮಯವು ಬಂದಿದ್ದಿತು. ಆ ಶಿವಾಲಯದಲ್ಲಿ ರತ್ನಮಣಿಮಯವಾದ ದೀಪಗಳೇ ಉರಿಯುತಿದ್ದು ಯಥೇಚ್ಛವಾಗಿ ಪ್ರಕಾಶವನ್ನು ಬೀರುತ್ತಿದ್ದವು. ಈ ಸಾಧನ ಸಂಪತ್ತುಗಳನ್ನೆಲ್ಲಾ ನೋಡಿ ಮುನಿಗಳು ಪರಮ ಸಂತೋಷದಿಂದ ಶಿವಾಲಯವನ್ನು ಪ್ರವೇಶಿಸಿದರು. ॥೭೭॥

ಅವರು ಗಂಗಾನದಿಯಿಂದಲೇ ನೀರನ್ನು ಶೇಖರಿಸಿಕೊಂಡು ಶಿವಪೂಜೆಗಾರಂಭಿಸಿದರು. ಯಥಾಕ್ರಮವಾಗಿ ಪೂಜಿಸುತ್ತಾ, ರುದ್ರಾಧ್ಯಾಯವನ್ನು ಹೇಳುತ್ತಾ ಅಭಿಷೇಕವನ್ನು ಮಾಡಿದನಂತರ ಬಿಲ್ವಪತ್ರೆಗಳಿಂದ ಭಕ್ತಿಯುತರಾಗಿ ಪೂಜಿಸಿದರು. ॥೭೮॥

ಆ ಪೂಜೆಯ ಸಮಯದಲ್ಲಿ ಎಲ್ಲಾ ಸಿಂಹಗಳೂ ಬಂದುನಿಂತಿದ್ದವು. ಅವು ರುದ್ರಾಧ್ಯಾಯ ಪಾರಾಯಣ ಮಾಡುವವರನ್ನು ಭಕ್ತಿಯಿಂದ ನೋಡುತ್ತಾ ಅದ್ಭುತಾನಂದವನ್ನು ಪಡೆದವು. ॥೭೯॥

ಆ ಸಿಂಹಗಳೂ ಕೂಡ ಬಿಲ್ವಪತ್ರೆಗಳಿಂದ ಶಿವನನ್ನು ಅರ್ಚಿಸುತ್ತಾ ಶಿವಾರಾಧನೆಯನ್ನು ನಡೆಸುತ್ತಿದ್ದವು. ಇವುಗಳನ್ನೆಲ್ಲಾ ನೋಡಿ ಆ ಮುನಿಗಳಿಗೆ ಪರಮಾಶ್ಚರ್ಯವಾಯಿತು. ॥೮೦॥

ಅಲ್ಲಿದ್ದ ಹೆಣ್ಣುಸಿಂಹಗಳೂ ಕೂಡ ತಮ್ಮ ತಮ್ಮ ಮರಿಗಳೊಂದಿಗೆ ಬಂದು ಬಿಲ್ವಪತ್ರೆಗಳಿಂದ ಶಿವನನ್ನು ಪೂಜಿಸುತ್ತಿದ್ದವು. ॥೮೧॥

ಖರ್ಜೂರೈರ್ನಾರಿಕೇಳೈಶ್ಚ ಬೀಜಪೂರಾದಿಭಿಃ ಫಲೈಃ ।
ಪೂಜಯಾಮಾಸುರೀಶಾನಂ ಶಿವಸ್ಮರಣಪೂರ್ವಕಂ ॥೮೨॥

ತತಃ ಪರಂ ದಂತಿಯೂಥಃ ಕೋಽಪಿ ಭಸ್ಮವಿಭೂಷಿತಃ ।
ಬಿಲ್ವಶಾಖಾಕರೋ ದೃಷ್ಟಃ ಕರಾಂತರಜಲಾನ್ವಿತಃ ॥೮೩॥

ತಂ ದೃಷ್ಟ್ವಾ ವಿಸ್ಮಯಂ ಪ್ರಾಪ್ತಾಸ್ತೇ ಸರ್ವೇ ಮುನಿಪುಂಗವಾಃ ।
ತೇ ಶಿವಂ ಪೂಜಯಾಮಾಸುಃ ಕರಿಣೋ ಬಿಲ್ವಪಲ್ಲವೈಃ ॥೮೪॥

ಕರಾಂತರಾಲಸಂಭೂತೈರ್ಗಂಗಾವಾರಿಭಿರಾದರಾತ್ ।
ಅಭ್ಯಷಿಂಚನ್ಮಹಾದೇವಂ ಸ್ಮರಂತಃ ಪಾರ್ವತೀಪತಿಂ ॥೮೫॥

ವ್ಯಾಘ್ರಾಸ್ಸಮಾಗತಾಃ ಪಶ್ಚಾಚ್ಛಿವಪೂಜಾರ್ಥಮುನ್ನತಾಃ ।
ತೈಶ್ಚ ಸಂಪೂಜಿತೋ ಭಕ್ತ್ಯಾ ಶಂಕರೋ ಬಿಲ್ವಪಲ್ಲವೈಃ ॥೮೬॥

ಆ ಸಿಂಹಗಳು ಶಿವನನ್ನೇ ಸದಾ ಧ್ಯಾನಿಸುತ್ತಾ ಖರ್ಜೂರ, ತೆಂಗು, ಸೀಬೆ ಮುಂತಾದ ಫಲಗಳನ್ನು ತಂದು ನಿವೇದನ ಮಾಡಿ ಪೂಜಿಸಿದವು. ||೮೨||

ಅಷ್ಟುಹೊತ್ತಿಗೆ ಒಂದು ಕಾಡಾನೆಗಳ ಹಿಂಡು ಬಂದಿತು. ಆ ಆನೆಗಳೆಲ್ಲವೂ ಭಸ್ಮದಿಂದ ಅಲಂಕೃತವಾಗಿದ್ದವು. ಅವು ಸೊಂಡಿಲೊಳಗೆ ನೀರನ್ನು ತುಂಬಿಕೊಂಡು, ಸೊಂಡಲಿಂದ ಬಿಲ್ವವೃಕ್ಷದ ಕೊಂಬೆಗಳನ್ನೇ ಹಿಡಿದುಕೊಂಡು ಬಂದಿದ್ದವು. ||೮೩||

ಈ ವಿಲಕ್ಷಣವಾದ ಆನೆಗಳನ್ನು ಕಂಡು ಮುನಿಗಳು ಪರಮಾಶ್ಚರ್ಯ ಪಡುತ್ತಾ ನೋಡುತ್ತಿದ್ದಂತೆಯೇ ಆ ಆನೆಗಳು ಶಿವನನ್ನು ಪೂಜಿಸಿದವು. ||೮೪||

ತಮ್ಮ ಸೊಂಡಿಲೊಳಗಡೆ ಇದ್ದ ನೀರಿನಿಂದ ಅಭಿಷೇಕವನ್ನು ಮಾಡಿ, ತಂದಿದ್ದ ಬಿಲ್ವಪತ್ರೆಗಳನ್ನೆಲ್ಲಾ ಏರಿಸಿದವು. ಶಿವಧ್ಯಾನವನ್ನು ಮಾಡುತ್ತಾ ನಾನಾರೀತಿ ಪೂಜಿಸಿದವು. ||೮೫||

ಅಷ್ಟು ಹೊತ್ತಿಗೆ ಅನೇಕ ದೊಡ್ಡದೊಡ್ಡ ಹುಲಿಗಳೂ ಸಹ ಬಂದು ಬಿಲ್ವಾದಿಗಳಿಂದ ಶಿವನನ್ನು ಪೂಜಿಸಿದವು. ||೮೬||

ತತಃ ಪರಂ ಪ್ರಹರ್ಷೇಣ ವನಗಾವಸ್ಸಮಾಗತಾಃ ।
ತಾಭಿಃ ಕ್ಷೀರಾಭಿಷೇಕೇಣ ಕೃತಂ ಶಂಕರಪೂಜನಂ ॥೮೭॥

ಕ್ಷೀರಪ್ರವಾಹಸಂಕ್ರಾಂತಂ ತತ್ಸರ್ವಂ ಶಿವಮಂದಿರಂ ।
ಬಿಲ್ವರಾಶಿಸಮಾಕ್ರಾಂತಂ ತತ್ಸರ್ವಂ ಶಿವಮಂದಿರಂ ॥೮೮॥

ಬಿಲ್ವರಾಶಿಸಮಾಕ್ರಾಂತಂ ಫಲರಾಶಿವಿಜೃಂಭಿತಂ ।
ಬಿಲ್ವಶಾಖಾಸ್ಸಮಾನೀತಾಃ ಕೋಟಿಶೋ ವನಹಸ್ತಿಭಿಃ ॥೮೯॥

ತಾಭಿಸ್ಸಮರ್ಚಿತೋ ಭಕ್ತ್ಯಾ ಮಧ್ಯರಾತ್ರೇ ಮಹೇಶ್ವರಃ ॥೯೦॥

ಬಿಲ್ವಭೂರುಹಮಹೋನ್ನತಶಾಖಾ
ಭಂಗಜಾತರವಸಂಕುಲಮಾಸೀತ್ ।
ತದ್ವನಂ ಸ ತು ರವೋಽಪಿ ಕೃತಾರ್ಥಂ
ಜಾತಮದ್ಯ ವನಮಿತ್ಯಪಿ ಜಾತಃ ॥೯೧॥

ಈ ಸೌಮ್ಯವಾದ ವಾತಾವರಣವನ್ನು ಕಂಡು ಅಡವಿಯ ಹಸುಗಳು ಅತ್ಯಂತ ಉಲ್ಲಾಸದಿಂದ ಬಂದು ಶಿವಲಿಂಗಗಳಿಗೆ ತಮ್ಮ ಕ್ಷೀರದಿಂದಲೇ ಅಭಿಷೇಕವನ್ನು ಮಾಡಿ ಶಿವಪೂಜೆಯನ್ನು ನಡೆಸಿದವು. ॥೮೭॥

ಆಗ ಆ ಶಿವಮಂದಿರವು ಕ್ಷೀರಪ್ರವಾಹದಿಂದ ತುಂಬಿಹೋಯಿತು. ಎಲ್ಲಾ ಕಡೆಯಲ್ಲಿಯೂ ಬಿಲ್ವಪತ್ರೆಯ ರಾಶಿಯೇ ಕಾಣಬರುತಿದ್ದಿತು. ಅಲ್ಲಿ ಹಣ್ಣುಕಾಯಿಗಳು ರಾಶಿರಾಶಿಯಾಗಿ ಬಿದ್ದಿದ್ದವು. ಸರ್ವಥಾ ಆ ಶಿವಮಂದಿರವು ಪರಮೋತ್ಸವದಿಂದ ಓಲಾಡುತ್ತಿದ್ದಿತು. ॥೮೮॥

ಕಾಡಾನೆಗಳು ಬಿಲ್ವವೃಕ್ಷದ ಚಿಕ್ಕಚಿಕ್ಕಕೊಂಬೆಗಳನ್ನೇ ತಂದು ಪೂಜಿಸಿದ್ದುವು. ಅಂತು ಆ ಶಿವರಾತ್ರಿಯ ಮಹಾನಿಶಿಯಲ್ಲಿ ಆ ಮಂದಿರದಲ್ಲಿ ನೆರೆದಿರುವವರೆಲ್ಲರೂ ಪರಮಭಕ್ತಿಯಿಂದ ಮಹೇಶ್ವನನ್ನು ಆರಾಧಿಸಿದರು. ॥೮೯-೯೦॥

ಶಿವಪೂಜೆಗಾಗಿ ಬಿಲ್ವಪತ್ರೆಗಳನ್ನು ಒದಗಿಸಲು ಆನೆಗಳು ಪದೇಪದೇ ಬಿಲ್ವ ವೃಕ್ಷಗಳ ದೊಡ್ಡದೊಡ್ಡ ಕೊಂಬೆಗಳನ್ನೇ ಮುರಿದುತರುತ್ತಿದ್ದವು. ಆಗ ಉಂಟಾದ ಶಬ್ದವು ಆ ವನದಲ್ಲೆಲ್ಲಾ ವ್ಯಾಪಿಸುತ್ತಿದ್ದಿತು. ಈ ಶಿವಾರಾಧನೆಯ ಸಂಪರ್ಕದಿಂದ ಆ ಶಬ್ದವು ಧನ್ಯವಾಗುತ್ತಿದ್ದಿತಲ್ಲದೇ ಆ ಅರಣ್ಯವು ಕೃತಾರ್ಥವಾಗುತ್ತಿತ್ತು. ॥೯೧॥

ತಾಂಛಿವಾರಾಧಕಾನ್ ದೃಷ್ಟ್ವಾ ತೇ ಸರ್ವೇ ಮುನಿಪುಂಗವಾಃ ।
ಶಿವಲಿಂಗಾರ್ಚನಂ ಚಕ್ರುರ್ನಿಶಿ ಜಾಗರಣಂ ಮುದಾ ॥೯೨॥

ಅರುಣೋದಯವೇಲಾಯಾಂ ಪುನಃ ಸ್ನಾತ್ವಾ ಪ್ರಯತ್ನತಃ ।
ಚಕ್ರುಶ್ಶಿವಾರ್ಚನಂ ಸರ್ವೇ ಭೂತಿರುದ್ರಾಕ್ಷಭೂಷಣಾಃ ॥೯೩॥

ತತಸ್ಸೂರ್ಯೋದಯೇ ಜಾತೇ ಮೃಗೇಂದ್ರಶ್ಶಾಂಭವೋತ್ತಮಾನ್ ।
ಪ್ರಣಮ್ಯ ದಂಡವದ್ಭೂಮೌ ಕೃತಾಂಜಲಿಪುಟೋ ಮುದಾ ॥೯೪॥

ಪ್ರಾಹ ಕ್ಷುಧಾ ಸಮಾಕ್ರಾಂತಾನ್ಮುನಿದಾರಾನ್ವಿಲೋಕ್ಯ ಸಃ ।
ದಂತಿಯೂಥಂ ವಿಲೋಕ್ಯಾಪಿ ಶಾರ್ದೂಲಾನಪಿ ಕೋಟಿಶಃ ॥೯೫॥

॥ ಮೃಗೇಂದ್ರ ಉವಾಚ ॥

ಇಯಂ ಪುಣ್ಯತಮಾ ಶಿಷ್ಟಾ ಭೂತಾ ಸ್ವಲ್ಪೀಯಸೀ ಖಲು ।
ಅಧುನಾ ಪಾರಣಾ ಕಾರ್ಯಾ ಫಲೈಶ್ಶಿವನಿವೇದಿತೈಃ ॥೯೬॥

ಆ ಪ್ರಾಣಿಗಳೆಲ್ಲವೂ ಅತ್ಯಾಸಕ್ತಿಯಿಂದ ಶಿವಾರಾಧನೆ ಮಾಡುತ್ತಿರುವುದನ್ನು ನೋಡಿ ಅತ್ಯದ್ಭುತಾಶ್ಚರ್ಯಯುಕ್ತರಾದರಲ್ಲದೇ ತಾವೂ ಪರಮಭಕ್ತಿಯಿಂದ ಶಿವಲಿಂಗಾರ್ಚನೆಯನ್ನು ಮಾಡಿ ರಾತ್ರಿ ಎಲ್ಲಾ ಆನಂದದಿಂದ ಜಾಗರಣೆ ಮಾಡಿದರು. ॥೯೨॥

ಅರುಣೋದಯವಾದ ನಂತರ ಆ ಮುನಿಗಳೆಲ್ಲರೂ ಮತ್ತೆ ಶುದ್ಧಿಗಾಗಿ ಸ್ನಾನ ಮಾಡಿ ಭಸ್ಮರುದ್ರಾಕ್ಷಮಾಲೆಗಳೆಲ್ಲವನ್ನೂ ಧರಿಸಿಕೊಂಡು ಮತ್ತೆ ಶಿವಾರ್ಚನೆ ಮಾಡಿದರು. ॥೯೩॥

ಹೀಗೆಯೇ ಅವಿಚ್ಛಿನ್ನವಾಗಿ ಶಿವಾರ್ಚನೆಯನ್ನು ನಡೆಸುತ್ತಿರಲು ಸೂರ್ಯೋದಯವಾಯಿತು. ಅಷ್ಟು ಹೊತ್ತಿಗೆ ಆ ಮುನಿಗಳೂ ಅವರ ಪತ್ನೀಪುತ್ರರೂ ಬಹಳ ಹಸಿವಿನಿಂದ ಕಾತುರರಾಗಿದ್ದರು. ಆ ಸಮಯದಲ್ಲಿ ಒಂದು ಸಿಂಹವು ಅಲ್ಲಿ ನೆರೆದಿರುವ ಮುನಿಗಳನ್ನೂ ಸಿಂಹಗಳನ್ನೂ ಆನೆಗಳನ್ನೂ ನೋಡುತ್ತಾ ಮೊದಲು ಮುನಿಜನರಿಗೆ ಸಾಷ್ಟಾಂಗ ನಮಸ್ಕಾರಮಾಡಿ ವಿನಯದಿಂದ ಹೀಗೆ ಹೇಳಿತು. ॥೯೪-೯೫॥

ಪುಣ್ಯ ಪ್ರದವಾದ ಶಿವರಾತ್ರಿಯ ದಿನವು ಕಳೆಯುತ್ತಾ ಇದೆ. ಇದು ಪೂರ್ಣವಾಗಿ ಕಳೆಯುವುದಕ್ಕೆ ಸ್ವಲ್ಪಹೊತ್ತು ಉಳಿದಿದೆ. ಅಷ್ಟು ಸ್ವಲ್ಪ ಹೊತ್ತಿ

ಅನ್ಯೈಶ್ಚ ವಿವಿಧೈರ್ಭಕ್ಷ್ಯೈಃ ಕೃತ್ವಾ ಶಾಂಕರಪೂಜನಂ ।
ಅತಃಪರಂ ವಿಲಂಬೋಽಪಿ ಕರ್ತುಮೇವ ನ ಶಕ್ಯತೇ ॥೯೭॥

ಕೃತ್ವೋಪವಾಸಂ ಭೂತಾಯಾಂ ಚತುರ್ದಶ್ಯಾಂ ಪರೇಽಹನಿ ।
ಪಾರಣಾಯಾಂ ಮಹತ್ಪುಣ್ಯಮನ್ನೈಶ್ಶಿವನಿವೇದಿತೈಃ ॥೯೮॥

ತ್ವರಯಾ ಖಲು ಕಾರ್ಯಾಣಿ ನೈವೇದ್ಯಾನ್ಯುತ್ತಮಾನ್ಯಪಿ ।
ಪರಮಾನ್ನಾನಿ ಕಾರ್ಯಾಣಿ ಗೋಕ್ಷೀರೈರ್ಮಧುರೈರಪಿ ॥೯೯॥

ಫಲೈರಪಾರೈರ್ವಿವಿಧೈಃ ಕ್ಷುಧಾಪ್ಯದ್ಯ ಪ್ರವರ್ಧತೇ ।
ಅತಃ ಪರಂ ವಿಲಂಬೋಽಪಿ ನ ಕಾರ್ಯಸ್ಸರ್ವಥಾ ಖಲು ॥೧೦೦॥

ನಲ್ಲಿಯೇ ಈ ಪುಣ್ಯಕಾಲವು ಕಳೆದುಹೋಗುವುದು. ಅದು ಕಳೆಯುವಷ್ಟರಲ್ಲಿಯೇ ನಾವು ನಮ್ಮ ವ್ರತವನ್ನು ಸಾಂಗಗೊಳಿಸಬೇಕು. ವ್ರತವು ಪೂರ್ಣವಾಗಬೇಕಾದರೆ ಪಾರಣೆಯಾಗಬೇಕು. ಪಾರಣೆಯನ್ನು ಶಿವನಿವೇದಿತವಾದ ಹಣ್ಣುಕಾಯಿಗಳಿಂದಲೇ ನೆರವೇರಿಸಬೇಕು. ||೯೬||

ಪಾರಣೆಗೆ ಮೊದಲು ನಾನಾ ಬಗೆಯ ಭಕ್ಷ್ಯಗಳನ್ನು ಶಂಕರರಿಗೆ ಅರ್ಪಿಸಬೇಕು. ಇನ್ನು ವಿಳಂಬ ಮಾಡುವಹಾಗಿಲ್ಲ. ವೇಳೆಯು ಮೀರಿಹೋಗುತ್ತಿದೆ. ||೯೭||

ಕೃಷ್ಣ ಚತುರ್ದಶೀ ದಿನದಲ್ಲಿ ಶಿವರಾತ್ರಿ ವ್ರತವನ್ನು ಕೈಗೊಂಡು ಉಪವಾಸ ಮಾಡಿ ಶಿವಾರಾಧನೆಯನ್ನು ಮಾಡಿದ ಬಳಿಕ, ಮರುದಿನ ಅದೇ ತಿಥ್ಯಂತದಲ್ಲಿ ಶಿವನಿವೇದಿತವಾದ ಅನ್ನವನ್ನು ಭಕ್ಷಿಸಿ ಪಾರಣೆಯನ್ನು ಮಾಡಿದರೆ ಮಹಾಪುಣ್ಯವು ಲಭಿಸುವುದಷ್ಟೆ. ||೯೮||

ಕಡೆಗೆ ಪಾರಣೆಮಾಡಲು ಅನುಕೂಲವಾಗುವಂತೆ ಶಿವನೈವೇದ್ಯಕ್ಕೆ ಈ ಕೂಡಲೇ ಉತ್ಕೃಷ್ಟಗಳಾದ ಪದಾರ್ಥಗಳನ್ನು ಸಿದ್ಧಮಾಡಬೇಕಷ್ಟೆ. ಆದುದರಿಂದ ಜಾಗ್ರತೆಯಾಗಿ ಮಧುರವಾದ ಹಸುವಿನ ಹಾಲನ್ನೂ ಪರಮಾನ್ನ ಮುಂತಾದುವುಗಳನ್ನೂ ಸಿದ್ಧಗೊಳಿಸಬೇಕು. ||೯೯||

ಪಾರಣೆಯನ್ನು ಮಾಡುವುದಕ್ಕೆ ನಾನಾ ವಿಧವಾದ ಹಣ್ಣುಹಂಪಲುಗಳನ್ನೂ ಸಿದ್ಧಪಡಿಸಬೇಕು. ಉಪವಾಸದಿಂದ ಶಿವರಾತ್ರಿ ವ್ರತವನ್ನು ಆಚರಿಸಿ ಬಹಳ ಹಸಿದಿರುವರು. ಇನ್ನು ಪಾರಣೆಗೆ ತಡಮಾಡಬಾರದು. ||೧೦೦||

ಬಾಲಕಾಶ್ಚ ಕ್ಷುಧಾಕ್ರಾಂತಾಸ್ಸರ್ವೇ ವೃದ್ಧಾಸ್ತದಾ ತಥಾ ।
ಪಾಕಸ್ಸಂಪಾದನೀಯೋಽಪಿ ತಂಡುಲಾದ್ಯೈರ್ಮನೋಹರೈಃ ॥೧೦೧॥

ಇತ್ಯುಕ್ತಂ ತದ್ವಚಃ ಶ್ರುತ್ವಾ ಮುನಯೋ ವಿಸ್ಮಯಾವೃತಾಃ ।
ಸ್ವದಾರಾನೂಚುರಧುನಾ ಪಾಕಃ ಕಾರ್ಯಃ ಪ್ರಿಯಾನಿತಿ ? ॥೧೦೨॥

ಮುನಿದಾರಾಃ ಪ್ರಹೃಷ್ಟಾಸ್ತೇ ಚಕ್ರುಃ ಪಾಕಾನ್ ಯಥೇಚ್ಛಯಾ ।
ಅನ್ನರಾಶಿಭಿರಾಕ್ರಾಂತಂ ತತ್ಸರ್ವಂ ಶಿವಮಂದಿರಂ ॥೧೦೩॥

ತತಸ್ಸಮರ್ಚಯಿತ್ವೇಶಂ ದತ್ವಾ ನೈವೇದ್ಯಮಾಸ್ತಿಕಾಃ ।
ತೇ ಸರ್ವೇ ಪಾರಣಾಂ ಚಕ್ರುಶ್ಶಿವಸ್ಮರಣಪೂರ್ವಕಂ ॥೧೦೪॥

ಬಾಲಕರೂ ವೃದ್ಧರೂ ಹಸಿವಿನಿಂದ ಬಹಳ ಆಯಾಸಗೊಂಡಿರುವರು. ಅವರಿಗೆಲ್ಲರಿಗೂ ಜಾಗ್ರತೆ ಊಟಮಾಡಿಸಬೇಕು. ಆದಕ್ಕಾಗಿ ಶುದ್ಧವಾದ ಅಕ್ಕಿಯಿಂದ ಅಡಿಗೆಯನ್ನೂ ಸಿದ್ಧಮಾಡಬೇಕು. ||೧೦೧||

ಎಂದು ಆ ಸಿಂಹವು ಹೇಳಿದ ಮಾತನ್ನು ಕೇಳಿ ಮುನಿಗಳೆಲ್ಲರಿಗೂ ಆಶ್ಚರ್ಯವಾಯಿತಲ್ಲದೇ ಸಂತೋಷವೂ ಆಯಿತು. ಆಗ ಅವರು ತಮ್ಮ ಪತ್ನಿಯರನ್ನು ಕರೆದು ಈ ಕೂಡಲೇ ಉತ್ಕೃಷ್ಟವಾದ ಅಡುಗೆಯನ್ನು ಮಾಡಲು ಸೂಚನೆ ಕೊಟ್ಟರು. ||೧೦೨||

ಮುನಿಪತ್ನಿಯರೆಲ್ಲರೂ ಸೇರಿ ಸಂತೋಷದಿಂದ ಕೂಡಲೇ ಅಡುಗೆಯನ್ನು ಸಿದ್ಧಗೊಳಿಸಿದರು. ಅಲ್ಲಿ ಏನೇನನ್ನು ಮಾಡಲು ಸಾಧ್ಯವಾಗಿದ್ದಿತೋ ಅಷ್ಟು ಬಗೆಯ ಭಕ್ಷ್ಯಭೋಜ್ಯಗಳನ್ನೂ ವಿಧವಿಧವಾದ ಅನ್ನಗಳನ್ನೂ ಮಾಡಿ ಅವೆಲ್ಲವನ್ನೂ ಶಿವಮಂದಿರದಲ್ಲಿ ಶಿವನೈವೇದ್ಯಕ್ಕೆ ತಂದಿಟ್ಟರು. ಆಗ ನೈವೇದ್ಯಕ್ಕೆ ಒಂದು ದೊಡ್ಡ ರಾಶಿಯೇ ಸಿದ್ಧವಾಗಿದ್ದಿತು. ||೧೦೩||

ಮುನಿಗಳೆಲ್ಲರೂ ಆ ಪದಾರ್ಥಗಳನ್ನು ಶಿವನಿಗೆ ನಿವೇದನಮಾಡಿದರು. ಅನಂತರ ಆ ಎಲ್ಲಾ ಋಷಿಗಳೂ ಶಿವನನ್ನೇ ಧ್ಯಾನಿಸುತ್ತಾ ಆ ಶಿವನಿವೇದಿತವಾದ ಪ್ರಸಾದಗಳಿಂದ ಸಾಂಗವಾಗಿ ಪಾರಣೆಯನ್ನು ನೆರವೇರಿಸಿದರು. ||೧೦೪||

ಅನ್ನಾನಿ ಬಹುಭಿಸ್ಸರ್ವೈರ್ಭಕ್ಷಿತಾನಿ ಮೃಗೈರಪಿ ।
ವ್ಯಾಘ್ರೈರ್ಗೋಭಿರ್ದಂತಿಭಿಶ್ಚ ತದನ್ಯೈರಪಿ ಭಕ್ತಿತಃ ॥೧೦೫॥

ತುಷ್ಟಾಃ ಪಾರಣಯಾ ಸರ್ವೇ ಪುಷ್ಟಾಂಗಾಸ್ತದ್ರಸೈರಪಿ ।
ಉಪವಿಷ್ಟಾಃ ಪ್ರಹೃಷ್ಟಾಂಸ್ತಾನ್ ಮುನೀನ್ ದೃಷ್ಟ್ವಾ ಶಿವಾರ್ಚಕಾನ್ ॥೧೦೬॥

ತತೋ ಮೃಗೇಂದ್ರೋ ಬಹುಧಾ ಸ್ತುತ್ವಾ ಶಂಕರಮಾದರಾತ್ ।
ಶಿವಢುಂಢಿಂ ವಿಲೋಕ್ಯಾಹ ಶಿವಧರ್ಮಾನ್ವದೇತಿ ನೋ ॥೧೦೭॥

ಶಿವಭೂತಾವ್ರತಪ್ರೀತಶ್ಶಿವಭಕ್ತಿಸಮನ್ವಿತಃ ।
ತಮಾಹ ಮೃಗರಾಜಾನಂ ಶಿವನಾಮಜಪೋತ್ಸುಕಂ ॥೧೦೮॥

॥ ಶಿವಢುಂಢಿರುವಾಚ ॥

ಜ್ಞಾತಂ ಸರ್ವೈಶ್ಶ್ಯಾಂಕರಂ ಧರ್ಮಜಾಲಂ
ನಂದೀಶಾದ್ಯೈರುಕ್ತಮತ್ಯಾದರೇಣ ।

ಮುನಿಗಳೆಲ್ಲರೂ ಪಾರಣೆಯನ್ನು ನೆರವೇರಿಸಿದಮೇಲೆ ಆ ಶಿವಪ್ರಸಾದವಾದ ಅನ್ನವನ್ನೇ ಮೃಗಗಳೂ ಗೋವುಗಳೂ ಆನೆ ಹುಲಿ ಮುಂತಾದ ಎಲ್ಲಾ ಪ್ರಾಣಿಗಳೂ ಭಕ್ತಿಯಿಂದ ಭಕ್ಷಿಸಿದವು. ॥೧೦೫॥

ಆ ಶಿವಾರಾಧಕರೆಲ್ಲರೂ ತೃಪ್ತಿಯಾಗುವವರೆಗೂ ಆಹಾರವನ್ನು ಭಕ್ಷಿಸಿ ಸಂತುಷ್ಟರಾದರು. ಅದೇ ಆಹಾರದ ರಸದಿಂದ ದೃಢಕಾಯರೂ ಆಗಿ ಉಲ್ಲಾಸ ಹೊಂದಿ ಆನಂದದಿಂದ ಮುನಿಗಳೆಲ್ಲರೂ ಸುಖವಾಗಿ ಕುಳಿತುಕೊಂಡಿರಲು ಆ ಶ್ರೇಷ್ಠವಾದ ಸಿಂಹವು ಎಲ್ಲರಿಗೂ ವಿನಯದಿಂದ ನಮಸ್ಕರಿಸಿ, ಸ್ತೋತ್ರಮಾಡಿ ಶಿವಢುಂಢಿಯನ್ನು ಕುರಿತು ಶಿವಧರ್ಮದ ವಿಷಯವಾಗಿ ಉಪದೇಶ ಮಾಡಬೇಕೆಂದು ಕೇಳಿಕೊಂಡಿತು. ॥೧೦೬-೧೦೭॥

ಶಿವಢುಂಢಿಯು ಶಿವಭಕ್ತಿಯಿಂದ ತೃಪ್ತನಾಗಿದ್ದನಲ್ಲದೇ ಶಿವರಾತ್ರಿ ವ್ರತವು ಸಾಂಗವಾಗಿ ನೆರವೇರಿದ್ದರಿಂದ ಪರಮ ಸಂತುಷ್ಟನಾಗಿದ್ದನು. ಆತನು ಸಿಂಹದ ಪ್ರಾರ್ಥನೆಯನ್ನು ಕೇಳಿದೊಡನೆ ಪ್ರಸನ್ನಚಿತ್ತನಾಗಿ ಹೇಳತೊಡಗಿದನು. ॥೧೦೮॥

ಶಿವಧರ್ಮವು ಅತ್ಯಂತ ಮಹತ್ತರವಾದದ್ದು. ಹಾಗೂ ಪರಮ ಗಹನವಾದುದು. ಅದರ ಸ್ವರೂಪವನ್ನು ನಂದಿಕೇಶನೇ ಮೊದಲಾದವರು ತಿಳಿದಿದ್ದಾರೆ.

ತತ್ರಾವನ್ಮೇ ಕಿಂಚಿದದ್ಯಾಸ್ತಿ ಪುಣ್ಯೈ
ರ್ವಕ್ತವ್ಯಂ ಸ್ಯಾಚ್ಛಂಕರಸ್ಯ ಪ್ರಸಾದಾತ್ ॥೧೦೯॥

ಕೇನ ಶಾಂಕರಧರ್ಮಾಣಾಂ ಮಹಿಮಾ ಪುಣ್ಯಸಾಧನಂ ।
ವಕ್ತುಂ ವಾ ಶಕ್ಯತೇ ಸರ್ವಮಪರಾಧವಿನಾಶನಂ ॥೧೧೦॥

ಭವತ್ಯಪಾರಪುಣ್ಯಾಬ್ಧಿಪ್ರವೃದ್ಧಿರಪಿ ಜಾಯತೇ ।
ಶಿವಪುಣ್ಯಪ್ರವಾಹೇಣ ನೇಯಂ ಸುರನದೀಸಮಾ ॥೧೧೧॥

ಅನ್ಯೇಷಾಂ ತತ್ರ ಕಾ ವಾರ್ತಾ ಸ ಸರ್ವೋತ್ಕೃಷ್ಟ ಏವ ಹಿ ।
ಸರ್ವಧರ್ಮೋತ್ತಮಂ ಪ್ರಾಹುಶ್ಶಾಂಕರಂ ಧರ್ಮಮಾಸ್ತಿಕಾಃ॥೧೧೨॥

ಅವರೇ ಆ ಧರ್ಮದ ಸ್ವರೂಪವನ್ನೂ ಪ್ರಕಟಗೊಳಿಸಿರುತ್ತಾರೆ. ನನ್ನ ಪುಣ್ಯ ಸೌಭಾಗ್ಯದಿಂದ ನಾನೂ ಸ್ವಲ್ಪ ಅದನ್ನು ತಿಳಿದುಕೊಂಡಿದ್ದೇನೆ. ಕೇವಲ ಪರಮೇಶ್ವರನ ಅನುಗ್ರಹದಿಂದಲೇ ಆ ಗೂಢವಾದ ಶಿವಧರ್ಮಸ್ವರೂಪಜ್ಞಾನದ ಲೇಶವು ನನ್ನಲ್ಲಿರುತ್ತದೆ. ॥೧೦೯॥

ಆ ಶಿವಧರ್ಮದ ಮಹಿಮೆಯನ್ನು ಶ್ರವಣಮಾಡಿದ ಮಾತ್ರದಿಂದಲೇ ಸಕಲ ಪಾಪಗಳೂ ನಾಶಹೊಂದುತ್ತವೆ. ಅಲ್ಲದೇ ಆ ಧರ್ಮಶ್ರವಣವು ಪುಣ್ಯಕ್ಕೆ ಹೇತುವಾಗುವುದು. ಆದರೆ ಆ ಪಾಪನಾಶಕವಾದ ಶಿವಧರ್ಮದ ಮಹಿಮೆಯನ್ನು ಯಾರು ತಾನೇ ಸಮಗ್ರವಾಗಿ ಹೇಳಬಲ್ಲರು ? ॥೧೧೦॥

ಗಂಗಾನದಿಯು ಸಮುದ್ರಕ್ಕೆ ಸೇರುವುದಾದರೂ ಸಮುದ್ರದಲ್ಲಿ ನೀರನ್ನು ಹೆಚ್ಚಿಸುವಷ್ಟು ಸಾಮರ್ಥ್ಯವು ಅದಕ್ಕೆ ಇರುವುದಿಲ್ಲ. ಆದರೆ ಶಿವಧರ್ಮಶ್ರವಣಪುಣ್ಯವೆಂಬ ಪ್ರವಾಹದಿಂದ ಅಪಾರವಾದ ಸುಕೃತ ಸಮುದ್ರವು ಅಭಿವೃದ್ಧವಾಗಿ ಹೆಚ್ಚುತ್ತದೆ. ಆದುದರಿಂದ ಈ ಧರ್ಮಶ್ರವಣ ಪುಣ್ಯವು ಸಾಮಾನ್ಯ ನದಿಗೆ ಸದೃಶವಾಗಿಲ್ಲ. ಆದಕ್ಕಿಂತಲೂ ಎಷ್ಟೋ ಪಾಲು ಹೆಚ್ಚು ಶ್ರೇಷ್ಠವಾದುದು. ॥೧೧೧॥

ಈ ಶಿವಧರ್ಮಕ್ಕೆ ಪರಮ ಪವಿತ್ರವಾದ ಗಂಗಾನದಿಯೇ ಸದೃಶವಾಗಿಲ್ಲವೆಂದು ಹೇಳುವಾಗ ಮತ್ತೆ ಯಾವ ಧರ್ಮವು ತಾನೆ ಈ ಧರ್ಮಕ್ಕೆ ಸರಿಹೋದೀತು ? ಈ ಧರ್ಮಕ್ಕೆ ಸದೃಶವಾದ ವಸ್ತುವೇ ಈ ಬ್ರಹ್ಮಾಂಡದಲ್ಲಿಲ್ಲ. ಅದಕ್ಕಾಗಿಯೇ ಜ್ಞಾನಿಗಳಾದ ಆಸ್ತಿಕರು ಈ ಶಿವಧರ್ಮವನ್ನು ಸರ್ವಧರ್ಮಗಳಿಗಿಂತಲೂ ಉತ್ತಮವಾದದ್ದೆಂದು ಹೇಳಿರುವರು. ಈ ಸರ್ವೋತ್ಕೃಷ್ಟವಾದ ಧರ್ಮದ ವಿಷಯದಲ್ಲಿ ಮತ್ತೇ

ಅತಸ್ತಚ್ಛ್ರವಣಾದೇವ ಮುಕ್ತಿಃ ಕರತಲಾಶ್ರಯಾ ।
ಧನ್ಯಾನಾಂ ಶಾಂಕರೇ ಧರ್ಮೇ ಭಕ್ತಿಃ ಕಾಮದುಘೇವ ಸಾ ॥೧೧೩॥

ಸಾ ಭಕ್ತಿರ್ಯಸ್ಯ ಭಾಗ್ಯೇನ ಸ ಏವ ಶಿವಸಮ್ಮತಃ ॥೧೧೪॥

ಧರ್ಮೋತ್ತಮತ್ವಮತಿಗೋಚರಮೇಕಮೇವ
ಧರ್ಮಂ ವದಂತಿ ಮುನಯಶ್ಶಿವಧರ್ಮಮಾರ್ಯಾಃ ।
ತಂ ತಾವದದ್ಯ ಶೃಣು ವೇದಶಿರೋಮಣಿಂ ತಂ
ಸ್ವರ್ಗಾಪವರ್ಗದಮಮೋಘಮಘಕ್ಷಯಾಯ ॥೧೧೫॥

ಧರ್ಮಶ್ಶಿವಾರ್ಚನಮಿದಂ ಪರಮಂ ಪವಿತ್ರಂ
ಧನ್ಯಂ ಚ ಮಂಗಲಕರಂ ಕರಣಂ ಚ ಮುಕ್ತೇಃ ।

ನನ್ನು ತಾನೇ ಹೇಳಲಾದೀತು? ಹಾಗೆ ಹೇಳುತ್ತಾ ಹೋದರೆ ಮುಗಿಯುವುದೂ ಇಲ್ಲ. ಹೇಳಲು ಸಾಧ್ಯವೂ ಇಲ್ಲ. ||೧೧೨||

ಈ ಧರ್ಮವು ಇಷ್ಟು ಮಹತ್ತರವಾಗಿರುವುದರಿಂದಲೇ ಇದನ್ನು ಶ್ರವಣ ಮಾಡಿದರೂ ಮೋಕ್ಷವು ಹಸ್ತಗತವಾಗುವುದು. ಮುಕ್ತಿಯು ಸ್ವಾಧೀನವಾಗುವುದು. ಸಕಲ ಇಷ್ಟಾರ್ಥಗಳನ್ನೂ ತಂದುಕೊಡುವ ಈ ಧರ್ಮದಲ್ಲಿ ಕೇವಲ ಭಾಗ್ಯವಂತರಿಗೆ ಮಾತ್ರ ಭಕ್ತಿಯುತ್ಪನ್ನವಾಗುವುದು. ಹಾಗೆಯೇ ಅವರೇ ಧನ್ಯರೂ ಆಗುವರು. ||೧೧೩||

ಯಾವನಿಗೆ ಸ್ವಪುಣ್ಯವಶದಿಂದ ಈ ಶಿವಧರ್ಮದಲ್ಲಿ ಭಕ್ತಿಯುಂಟಾಗುವುದೋ ಅವನೇ ಶಿವನ ಪ್ರೀತಿಗೆ ಪಾತ್ರನಾಗುವನು. ಆತನಲ್ಲಿಯೇ ಶಿವನಿಗೆ ಪಕ್ಷಪಾತ ವಿರುತ್ತದೆ. ||೧೧೪||

ಆರ್ಯರಾದ ಮುನಿಗಳು ಒಂದೇ ಒಂದು ಧರ್ಮವು, ಪರಮಶ್ರೇಷ್ಠವೆಂಬ ಜ್ಞಾನಕ್ಕೆ ವಿಷಯವಾಗುವುದೆಂದು ಹೇಳುವರು. ಆ ಧರ್ಮವೇ ಶಿವಧರ್ಮವಾಗಿರುವುದು. ಅದೇ ವೇದಮೂರ್ಧನ್ಯವಾದುದು. ಇದರಿಂದಲೇ ಸ್ವರ್ಗವಾಗಲಿ, ಮೋಕ್ಷವಾಗಲಿ ಲಭಿಸುವುದು. ನಿನ್ನ ಸಕಲ ಪಾಪಗಳನ್ನು ದೂರಮಾಡುವುದಕ್ಕೋಸ್ಕರ ಅದೇ ಧರ್ಮವನ್ನು ಹೇಳುವೆನು. ಆಲಿಸಿ ಕೇಳು. ||೧೧೫||

ಅಂಥ ಧರ್ಮವು ಶಿವಾರ್ಚನೆ ಎಂಬುದೇ ಆಗಿದೆ. ಈ ಶಿವಾರ್ಚನಾ ರೂಪವಾದ ಧರ್ಮವೇ ಪರಮ ಪವಿತ್ರವಾದುದು. ಇದೇ ಸಕಲ ಕಲ್ಯಾಣಗಳಿಗೂ

ಏತಸ್ಯ ತಾವದಮಿತೋ ಮಹಿಮಾ ಸ ತಾವತ್
ಬ್ರಹ್ಮಾದಿಭಿಶ್ಚ ವಿದಿತೋ ನ ವಿಶೇಷತಸ್ತು ॥೧೧೬॥

ಇತ್ಯಾಕರ್ಣ್ಯ ಮುದಾ ಮುನೀಶ್ವರವಚಸ್ಸಿಂಹಃ ಪ್ರಹೃಷ್ಟಃ ಪರಂ
ನತ್ವಾ ಶಾಂಭವಪುಂಗವಂ ಭವಪದಾಂಭೋಜಾರ್ಚನೈಸ್ಸಾದರಂ।
ಭೂತಾನಿರ್ಣಯಮೇವ ಮೇ ವದ ಕಥಂ ಭೂತಾರ್ಚನೇ ಕಿಂ ಫಲಂ
ಬಿಲ್ವೈಶ್ಶಂಕರಲಿಂಗಮೂರ್ಧ್ನಿ ಭಗವನ್ ತತ್ಪಾರಣಾಯಾಃ ಫಲಂ ॥೧೧೭॥

ಕಸ್ಯಾಧಿಕಾರೋಽಪಿ ವದಾಧುನಾ ಮೇ
ತತ್ಸಾಧನಾನ್ಯಪ್ಯಖಿಲಾನಿ ವಿದ್ವನ್।
ಇದಂ ದಿನಂ ಶಂಭುಕಥಾಪ್ರಸಂಗೈಃ
ನೇಯಂ ವಿಶಿಷ್ಟಂ ದಿನಮೀದೃಶಂ ಹಿ ॥೧೧೮॥

ಕಾರಣ ಭೂತವಾದದ್ದು. ಇದನ್ನೇ ಮೋಕ್ಷಕ್ಕೆ ಪರಮೋಪಾಯವೆಂದು ತಿಳಿ. ಈ ಧರ್ಮದ ಮಹಿಮೆಯಾದರೋ ಅಪಾರವಾಗಿರುತ್ತದೆ. ಆದರ ಸ್ವರೂಪ ನಿರ್ಣಯವು ಸಾಕ್ಷಾತ್ ಹಿರಣ್ಯಗರ್ಭನಿಗೂ ಸಾಧ್ಯವಿಲ್ಲ. ಆದರ ಸಂಪೂರ್ಣ ಜ್ಞಾನವು ಯಾರಿಗೂ ಗೋಚರವಾಗಿರುವುದಿಲ್ಲ. ||೧೧೬||

ಶಿವಧರ್ಮ ಮಹಿಮೆಯನ್ನು ಸಂಪೂರ್ಣವಾಗಿ ಹೇಳುವುದಕ್ಕೆ ಯಾರಿಂದಲೂ ಸಾಧ್ಯವೇ ಇಲ್ಲವೆಂದು ಶಿವಘುಂಢಿಯು ಹೇಳಲು, ಅದನ್ನು ಕೇಳಿ ಸಿಂಹವು, ಆಹಾ ಅಷ್ಟೊಂದು ಪಾರಮ್ಯವೇ? ಎಂದು ಆನಂದಪಟ್ಟು ಅನಂತರ ಮತ್ತೆ ಶಿವಘುಂಢಿಗೆ ನಮಸ್ಕರಿಸಿ ಹೀಗೆ ಕೇಳಿತು. "ಹೇ ಭಗವನ್, ಇಷ್ಟನ್ನಾದರೂ ಕೃಪೆಮಾಡಿ ಹೇಳಬೇಕು. ಈ ಶಿವರಾತ್ರಿಯಲ್ಲಿ ಆಚರಿಸುವ ಮಹಾವ್ರತದ ಸ್ವರೂಪವನ್ನು ತಿಳಿಯಪಡಿಸು. ಆ ವ್ರತವನ್ನು ಹೇಗೆ ಆಚರಿಸಬೇಕು? ಅದರಿಂದ ಯಾವ ಫಲವು ದೊರೆಯುವುದು? ಶಿವಲಿಂಗಕ್ಕೆ ಬಿಲ್ವಾರ್ಚನೆಯನ್ನು ಮಾಡುವುದರಿಂದ ದೊರೆಯುವ ಫಲವೇನು? ಈ ಪಾರಣೆಯಿಂದ ಲಭಿಸುವ ಸುಕೃತವೇನು? ಇವುಗಳನ್ನೆಲ್ಲಾ ನಮಗೆ ಬೋಧಿಸಬೇಕೆಂದು ಪ್ರಾರ್ಥಿಸುವೆನು. ||೧೧೭||

ಆ ವ್ರತವನ್ನು ಆಚರಿಸಲು ಯಾರು ಅಧಿಕಾರಿಗಳು? ಆ ವ್ರತಕ್ಕೆ ಯಾವ ಯಾವುದು ಮುಖ್ಯಸಾಧನ? ಉಪಾಯಗಳು ಯಾವುವು? ಇವೆಲ್ಲವನ್ನೂ ವಿವರಿಸಿ ಹೇಳು. ಈ ದಿನವನ್ನು ಪೂರ್ತಿಯಾಗಿ ಶಿವಕಥಾಪ್ರಸಂಗಗಳಿಂದಲೇ ಕಳೆಯಬೇಕಷ್ಟೆ.

ತವಾಪ್ಯಾಗಮನಂ ಜಾತಂ ದೈವಾದತ್ರ ಮಹಾವನೇ ।
ಮಹೇಶ್ವರೇಣ ಸಂಗೋಽಯಂ ಜನಿತೋ ಮುಕ್ತಿದಾಯಕಃ ॥೧೧೯॥

ಇತಿ ತದ್ವಚನಂ ಶ್ರುತ್ವಾ ಪುರಸ್ಕೃತ್ಯ ಸ ಶಾಂಭವಾನ್ ।
ಪ್ರಣಮ್ಯ ಶಂಕರಂ ಸ್ಮೃತ್ವಾ ಪ್ರಾಹ ಧರ್ಮಂ ಸ ಶಾಂಭವಂ ॥೧೨೦॥

॥ ಶಿವಢುಂಢಿರುವಾಚ ॥

ಭೂತಾಂ ಕಾಮಯುತಾಂ ನಿಶಾರ್ಧಸಮಯವ್ಯಾಪ್ತಾಂ ವ್ರತೀ ನ ತ್ಯಜೇತ್
ಶುದ್ಧಾಂ ತಾಮಪಿ ತಾದೃಶೀಂ ಯದಿ ನ ಸಾ ಪೂರ್ವಂ ಪರೇದ್ಯುರ್ಯದಿ।
ಸಾಯಂಕಾಲಸಮನ್ವಿತಾ ಭವತಿ ಸಾ ಗ್ರಾಹ್ಯಾ ಪರಾಪೇಕ್ಷಯಾ
ಪೂರ್ವಂ ಸೋಮವದೇವ ತತ್ಪ್ರಬಲಮಿತ್ಯಾಹುಶ್ಶಿವಾರಾಧಕಾಃ ॥೧೨೧॥

ಹಾಗೆಯೇ ಈ ಶಿವರಾತ್ರಿವ್ರತದ ವಿಚಾರವನ್ನೇ ಪರ್ಯಾಲೋಚನೆ ಮಾಡುತ್ತಾ ಕಾಲವನ್ನು ಕಳೆಯಬಹುದು. ||೧೧೮||

ಅಕಸ್ಮಾತ್ ನೀನು ಈ ಅರಣ್ಯಕ್ಕೆ ಬಂದಿರುತ್ತೀಯೆ. ನಿನ್ನ ಸಮಾಗಮವು ನಮ್ಮ ಸುದೈವದಿಂದ ದೊರಕಿರುತ್ತದೆ. ನಿನ್ನ ಸಹವಾಸವೇ ಮೋಕ್ಷದಾಯಕವಾಗುವುದು. ಇಂಥ ಮಹಾತ್ಮನ ಸಂಗವನ್ನು ನನಗೆ ಇಂದು ಆ ಪರಮೇಶ್ವರನೇ ಅನುಗ್ರಹಿಸಿದ್ದಾನೆ. ಈಗ ನನ್ನ ಅಪೇಕ್ಷೆಯನ್ನು ಪೂರೈಸಿ ಈ ಸುಸಂಧಿಯನ್ನು ಸಾರ್ಥಕವನ್ನಾಗಿ ಮಾಡಬೇಕು. ||೧೧೯||

ಈರೀತಿಯಾಗಿ ಸಿಂಹವು ಕೇಳಿಕೊಳ್ಳಲು ಅದರಿಷ್ಟದಂತೆ ಆ ಶಿವಢುಂಢಿಯು ಉಪನ್ಯಾಸಮಾಡಲು ಸಂಕಲ್ಪಿಸಿದನು. ಆತನು ಶಿವನನ್ನು ಧ್ಯಾನಿಸಿ ನಮಸ್ಕರಿಸುತ್ತಾ ಅಲ್ಲಿ ನೆರೆದಿದ್ದ ಶಾಂಭವರಿಗೆ ಶಿವಧರ್ಮವನ್ನು ವಿವರಿಸಲು ಆರಂಭಿಸಿದನು. ||೧೨೦||

ಭೂತಾ ಎಂದರೆ ಕೃಷ್ಣಪಕ್ಷದ ಚತುರ್ದಶೀ ತಿಥಿ. ಆ ತಿಥಿಯು ಅರ್ಧರಾತ್ರಿಯನ್ನು ವ್ಯಾಪಿಸಿಕೊಂಡಿರುವಾಗ ಮತ್ತು ತ್ರಯೋದಶೀ ವೇಧೆಯನ್ನು ಪಡೆದಿದ್ದಾಗ ಈ ವ್ರತವನ್ನು ಆಚರಿಸಬೇಕು. ಈ ವ್ರತಕ್ಕೆ ಚತುರ್ದಶೀ ತಿಥಿಯೇ ಮುಖ್ಯವಾದದ್ದು. ಅದರಲ್ಲಿಯೂ ಸಾಯಂಕಾಲದ ಮೊದಲುಗೊಂಡು ಚತುರ್ದಶೀ ತಿಥಿಯ ವ್ಯಾಪ್ತಿಯು ಇದ್ದರೆ ಅದೇ ಉತ್ಕೃಷ್ಟವು. ಅರ್ಧರಾತ್ರಿಯಿಂದ ಮುಂದಕ್ಕೆ ಚತುರ್ದಶೀತಿಥಿಯು ಆರಂಭವಾಗುವದಾಗಿದ್ದರೂ, ಸಾಯಂಕಾಲ ಮತ್ತು ಮಧ್ಯರಾತ್ರಿ ಈ ಉಭಯವ್ಯಾಪ್ತಿ ಇರುವ ಚತುರ್ದಶೀ ತಿಥಿಯನ್ನೇ ಶ್ರೇಷ್ಠವೆಂದು ತಿಳಿಯಬೇಕು.

ಬ್ರಹ್ಮಭೂತಂ ತಪಸ್ತೇಜೋ ಯಶೋ ಭುವನಮಿತ್ಯಪಿ ।
ವದಿಷ್ಯೇ ಸತ್ಯಮಿತ್ಯೇವ ವದಿಷ್ಯೇ ತನ್ಮಹದ್ವ್ರತಂ ॥೧೨೨॥

ಬ್ರಹ್ಮಭೂತವ್ರತಂ ಕೃತ್ವಾ ಮಾಘಮಾಸಿ ವಿಶೇಷತಃ ।
ಸಂಸಾರಬಂಧನಿರ್ಮುಕ್ತಶ್ಶಿವಂ ಯಾತಿ ನ ಸಂಶಯಃ ॥೧೨೩॥

ಶುದ್ಧವಾಗಿ ಸಂಪೂರ್ಣ ದಿನ ವ್ಯಾಪ್ತವಾದ ಚತುರ್ದಶೀ ತಿಥಿ ಇದ್ದರಂತೂ ಅದು ಉತ್ತಮ ಕಲ್ಪವು. ಆ ಸಾಯಂಕಾಲ, ಮಧ್ಯರಾತ್ರಿ ಇವೆರಡರಲ್ಲಿ ಯಾವುದಾದರೂ ಒಂದಕ್ಕೆ ಮಾತ್ರ ಆ ತಿಥಿಯ ವ್ಯಾಪ್ತಿ ಇದ್ದರೆ ಆಗ ಮೊದಲನೆಯ ದಿನವು ಮುಖ್ಯವೋ ಅಥವಾ ಮಾರನೆಯ ದಿನವು ಶ್ರೇಷ್ಠವೋ ಎಂಬ ಸಂಶಯ ಬರುವುದು. ಅಂತಹ ಸಂದರ್ಭದಲ್ಲಿ ಮಧ್ಯರಾತ್ರಿಯಿಂದ ಮುಂದಕ್ಕೆ ಉತ್ತರವ್ಯಾಪ್ತಿ ಇರುವ ತಿಥಿಗಿಂತಲೂ ಮಧ್ಯರಾತ್ರಿಗೆ ಪೂರ್ವವ್ಯಾಪ್ತಿ ಇದ್ದು ಪ್ರದೋಷಕಾಲದಲ್ಲಿ ವ್ಯಾಪ್ತವಾದ ಆ ಚತುರ್ದಶೀ ತಿಥಿಯೇ ವ್ರತಕ್ಕೆ ಶ್ರೇಷ್ಠವು. ಸೋಮಯಾಗದ ವಿಷಯದಲ್ಲಿಯೂ ಹೀಗೆಯೇ ಉತ್ತರವ್ಯಾಪ್ತಿಕಲ್ಪಕ್ಕಿಂತಲೂ ಪೂರ್ವವ್ಯಾಪ್ತಿ ಕಲ್ಪವೇ ಪ್ರಬಲವಾಗಿರುವುದರಿಂದ ಪರಿಗ್ರಾಹ್ಯವೆಂದು ಶಾಸ್ತ್ರದಲ್ಲಿ ಸಿದ್ಧಾಂತವಾಗಿರುವುದು. ಅದರಂತೆಯೇ ಈ ಶಿವರಾತ್ರಿವ್ರತ ವಿಷಯದಲ್ಲೂ ತಿಳಿಯಬೇಕು. ಪ್ರದೋಷ ಸಮಯಕ್ಕೆ ತ್ರಯೋದಶಿಯ ವೇಧೆ ಇರಬಹುದು. ಒಂದು ವೇಳೆ ಮಧ್ಯರಾತ್ರಿಯಿಂದ ಮುಂದಕ್ಕೆ ಅಮಾವಾಸ್ಯೆಯ ವೇಧೆ ಇದ್ದರೂ ಅಡ್ಡಿ ಇಲ್ಲ. ಅಂತೂ ಹೀಗೆ ಕೃಷ್ಣಪಕ್ಷ ಚತುರ್ದಶೀ ತಿಥಿಯು ಸಾಯಂಕಾಲ ಅಥವಾ ಮಧ್ಯರಾತ್ರಿ ಇವುಗಳಲ್ಲಿ ಸೇರಿ ಸುಯೋಗವಾದಾಗ ಈ ಭೂತಾವ್ರತಕ್ಕೆ ಮುಖ್ಯ ಕಾಲವು. ಪಾರಣೆಯ ಕಾಲದಲ್ಲಿಯೂ ಚತುರ್ದಶಿಯಿರುವುದು ಶ್ರೇಷ್ಠ. ಇದನ್ನು ವ್ರತಮಾಡುವವರು ಅವಶ್ಯವಾಗಿ ಗಮನಿಸುತ್ತಿರಬೇಕು. ॥೧೨೧॥

ಈ ಮಹಾವ್ರತವು ಪರಮಸತ್ಯವಾದುದು. ಪರಬ್ರಹ್ಮ, ಪಂಚಭೂತಗಳು, ತಪಸ್ಸು, ತೇಜಸ್ಸು, ಯಶಸ್ಸು, ಈ ಭುವನಮಂಡಲ, ಇವು ಹೇಗೆ ಸತ್ಯವಾಗಿರುವುವೋ ಹಾಗೆಯೇ ಈ ವ್ರತವೂ ಅಷ್ಟು ಸತ್ಯವಾದುದು. ॥೧೨೨॥

ಈ ಬೃಹದಾಕಾರವಾದ ವ್ರತವನ್ನು ಮಾಘಮಾಸದಲ್ಲಿ ವಿಶೇಷ ಪ್ರಯತ್ನದಿಂದ ಅನುಷ್ಠಿಸಿದರೆ ಈ ಜನನ ಮರಣರೂಪ ಸಂಸಾರ ಬಂಧನವು ತಪ್ಪಿಹೋಗುವುದು. ಅಲ್ಲದೇ ಶಿವಧಾಮವೂ ಸಹ ಅವಶ್ಯವಾಗಿ ದೊರೆಯುವುದು. ॥೧೨೩॥

ತದಿದಂ ವ್ರತಮುತ್ಕೃಷ್ಟಂ ವ್ರತಂ ವೈದಿಕಮಿತ್ಯತಃ ।
ಏತದ್ವ್ರತಪರಿತ್ಯಾಗಾದ್ಬ್ರಾಹ್ಮಣಃ ಪತಿತೋ ಭವೇತ್ ॥೧೨೪॥

ವಿಶಿಷ್ಟಭೂತಾ ಸಂಯುಕ್ತಾ ಯಾ ರಾತ್ರಿ ಸ್ಸಾ ಶಿವಪ್ರಿಯಾ ।
ತಸ್ಯಾಮುಪೋಷಣಂ ಕಾರ್ಯಂ ಕರ್ತವ್ಯಂ ಚ ಶಿವಾರ್ಚನಂ ॥೧೨೫॥

ಶಿವಲಿಂಗೇ ಬಿಲ್ವಪತ್ರೈರ್ಜಲೈರ್ಭೂತ್ಯಾಪಿ ಭಕ್ತಿತಃ ।
ನಿರಾಹಾರೇಣ ಯಃ ಸ್ಥಿತ್ವಾ ಭೂತಾಯಾಂ ಶಿವಪೂಜನಂ ॥೧೨೬॥

ಕರ್ತವ್ಯಮತಿಯತ್ನೇನ ಕೋಮಲೈರ್ಬಿಲ್ವಪಲ್ಲವೈಃ ।
ನಿಶಾ ಜಾಗರಣೇನೈವ ನೇಯಾ ಸರ್ವಾ ಪ್ರಯತ್ನತಃ ॥೧೨೭॥

ಬಿಲ್ವಪಲ್ಲವಸಂಯುಕ್ತಂ ಲಿಂಗಂ ಕೃತ್ವಾ ಶಿವಂ ಸ್ಮರನ್ ।
ನಯಂತಿ ಯೇ ಮಹಾಭೂತಾಂ ತೇ ಮುಕ್ತಾಃ ಖಲು ಸರ್ವಥಾ ॥೧೨೮॥

ಈ ವ್ರತವು ಪ್ರಮಾಣಮೂರ್ಧನ್ಯವಾದ ವೇದದಲ್ಲಿ ವಿಹಿತವಾಗಿರುವುದು. ಆದರಿಂದಲೇ ಪರಮೋತ್ಕೃಷ್ಟವೆನಿಸಿರುವುದು. ಈ ವ್ರತವನ್ನು ಬ್ರಾಹ್ಮಣನು ಆಚರಿಸದೇ ದೂರಮಾಡಿದರೆ ಖಂಡಿತವಾಗಿಯೂ ಪತಿತನಾಗುವನು. ॥೧೨೪॥

ಯಾವ ರಾತ್ರಿಯನ್ನು ಸಂಪೂರ್ಣವಾಗಿ ಕೃಷ್ಣಚತುರ್ದಶೀ ತಿಥಿಯು ವ್ಯಾಪಿಸಿಕೊಂಡಿರುತ್ತದೆಯೋ ಆ ರಾತ್ರಿಯು ಶಿವನಿಗೆ ಪರಮಪ್ರಿಯವಾದದ್ದು. ಅಂಥ ಪುಣ್ಯಯೋಗವಿದ್ದಾಗ ಉಪವಾಸ ಮಾಡಿ ವಿಶೇಷಪ್ರಯತ್ನದಿಂದ ಶಿವನನ್ನು ಆರಾಧಿಸಬೇಕು. ॥೧೨೫॥

ಶಿವಾರಾಧನೆ ಎಂದರೆ ಶಿವಲಿಂಗಕ್ಕೆ ಪೂಜೆಮಾಡುವುದು. ಕೃಷ್ಣಚತುರ್ದಶೀ ವ್ರತದಲ್ಲಿ ಉಪವಾಸವಿದ್ದು ಶಿವಲಿಂಗವನ್ನು ನಿರ್ಮಲವಾದ ಜಲದಿಂದ ಅಭಿಷೇಕ ಮಾಡಿ ಬಿಲ್ವಪತ್ರೆಗಳಿಂದಲೂ ಭಸ್ಮರುದ್ರಾಕ್ಷಗಳಿಂದಲೂ ಪೂಜಿಸಬೇಕು. ॥೧೨೬॥

ಕೋಮಲವಾದ ಬಿಲ್ವಪತ್ರೆಗಳಿಂದ ಪೂರ್ಣವಾದ ಆಸಕ್ತಿವಹಿಸಿ ಶಿವಲಿಂಗಾರ್ಚನೆಯನ್ನು ನಡೆಯಿಸಬೇಕು. ಹಾಗೆಯೇ ಪೂಜೆಯಿಂದ ಆ ರಾತ್ರಿಯನ್ನು ನಿದ್ದೆ ಮಾಡದೆ ಕಳೆಯಬೇಕು. ॥೧೨೭॥

ಭೂತಾವ್ರತದಲ್ಲಿ ಶಿವಲಿಂಗ ಮಸ್ತಕವನ್ನು ಬಿಲ್ವಪತ್ರೆಗಳಿಂದ ಅರ್ಚಿಸಿ ಅಲಂಕರಿಸಿ, ಅಂಥ ಅಲಂಕೃತವಾದ ಶಿವಲಿಂಗವನ್ನು ಸಂದರ್ಶಿಸುತ್ತಾ ಶಿವನನ್ನೇ

ಭೂರಿಪುಣ್ಯಪ್ರಭಾವೇನ ಭೂತಾಯಾಂ ಶಿವಪೂಜನೇ ।
ಮತಿರ್ಭವತಿ ಸಾ ಸ್ವರ್ಗಮಪವರ್ಗಂ ಚ ದಾಸ್ಯತಿ ॥೧೨೯॥

ತಾವದ್ಧನ್ಯಂ ಜೀವನಂ ಯಾವದೇವ
ಭೂತಾ ಪ್ರಾಪ್ತಾ ಶಂಕರಾರಾಧನಾಯ ।
ತಸ್ಯಾಂ ಪೂಜಾಂ ಬಿಲ್ವಪತ್ರೈರ್ಮಹೇಶೇ
ಕೃತ್ವಾ ಮುಕ್ತೋ ಜಾಯತೇ ಲಿಂಗರೂಪೇ ॥೧೩೦॥

ಲಿಂಗಂ ದುರ್ಲಭಮೇವ ತಾವದಮಲಂ ಬಿಲ್ವೀದಳಂ ದುರ್ಲಭಂ
ಸಾ ಭೂತಾಪ್ಯತಿದುರ್ಲಭಾ ಜನಿರಿಯಂ ಸರ್ವಾತ್ಮನಾ ದುರ್ಲಭಾ ।
ಏತದ್ಯೋಗಮಪಾರಪುಣ್ಯವಿಭವೈರ್ಮನ್ಯೇ ಸ ಯೋಗಃ ಪರಂ
ಧನ್ಯಾನಾಂ ಧನಮೇವ ತೇನ ಸ ಶಿವಸ್ತುಷ್ಟೋ ಮಹೇಶಃ ಪ್ರಭುಃ ॥೧೩೧॥

ಯಾರು ಗಾಢವಾಗಿ ಧ್ಯಾನಿಸುವರೋ ಅವರು ಖಂಡಿತವಾಗಿಯೂ ಸಂಸಾರದಿಂದ ಮುಕ್ತರಾಗುವರು. ॥೧೨೮॥

ಅನೇಕಾನೇಕ ಪುಣ್ಯರಾಶಿಯು ಪೂರ್ವದಲ್ಲಿ ಸಂಚಿತವಾಗಿದ್ದರೆ ಮಾತ್ರ ಇಂಥ ಮಹಾ ಶಿವರಾತ್ರಿದಿನದಲ್ಲಿ ಶಿವಾರ್ಚನೆಯನ್ನು ಮಾಡಬೇಕೆಂಬ ಅಪೇಕ್ಷೆ ಹುಟ್ಟುವುದು. ಹಾಗೆಯೇ ವ್ರತವೂ ಸಾಂಗವಾಗಿ ನಡೆದು ಸ್ವರ್ಗವೂ ಮೋಕ್ಷವೂ ಲಭಿಸುವುವು. ಪುಣ್ಯವಿಲ್ಲದವನಿಗೆ ಈ ಯಾವುವೂ ಲಭ್ಯವಾಗುವುದಿಲ್ಲ. ॥೧೨೯॥

ಶಿವಾರಾಧನೆ ಮಾಡಲು ಇಂಥ ಮಹಾ ಚತುರ್ದಶೀ ತಿಥಿಯು ದೊರೆತು ಪುಣ್ಯದಿನದಲ್ಲಿ ಬಿಲ್ವಪತ್ರಾದಿಗಳಿಂದ ಶಿವಲಿಂಗಾರ್ಚನೆಯನ್ನು ಯಾವನು ಮಾಡುವನೋ ಅವನು ಆ ಕೂಡಲೇ ಧನ್ಯನಾಗುವನು ; ಕೃತಕೃತ್ಯನೂ ಮತ್ತು ಮುಕ್ತನೂ ಎನಿಸುವನು. ॥೧೩೦॥

ಶಿವಲಿಂಗವೂ, ಬಿಲ್ವಪತ್ರೆಯೂ, ಕೃಷ್ಣ ಚತುರ್ದಶಿಯೂ, ಶಿವಭಕ್ತತ್ವವೂ, ಇವೆಲ್ಲವೂ ಮಹಾದುರ್ಲಭವಾದ ವಸ್ತುಗಳು. ಇವುಗಳಲ್ಲಿ ಒಂದೊಂದು ದೊರೆಯುವುದೇ ಕಷ್ಟ. ಇವೆಲ್ಲವೂ ಒಟ್ಟು ಒಂದೆಡೆಯಲ್ಲಿ ಸೇರಬೇಕಾದರೆ, ಅಥವಾ ಒಟ್ಟು ಸೇರಿದ್ದು ದೊರೆಯಬೇಕಾದರೆ ಅಪಾರಪುಣ್ಯಗಳನ್ನು ಗಳಿಸಿರಬೇಕು. ಇವುಗಳ ಸಮಾಗಮವೇ ಒಂದು ಮಹಾಧನ. ಈ ಸುಯೋಗವನ್ನೇ ಧನ್ಯರಾದವರು ಮಹಾನಿಧಿ

ಕೋ ವಾ ಬಿಲ್ವದಳೇನ ಸಾಪಿ ಗಿರಿಜಾಕಾಂತಸ್ಯ ರತ್ನೇ ತಥಾ
ನ ಪ್ರೀತಿರ್ನ ಸರಿದ್ವರಾಂಭಸಿ ನ ವಾ ಪ್ರೀತಿಸ್ಸುಧಾಸಾಗರೇ ।
ಏಕಂ ವಾ ನವಬಿಲ್ವಪಲ್ಲವಮುಮಾಕಾಂತಃ ಕಪರ್ದೀ ಮುದಾ
ಧತ್ತೇ ಚಂದ್ರಕಲಾಮಿವಾತಿವಿಮಲಾಂ ಸ್ವರ್ಗಾಪವರ್ಗಪ್ರದಃ॥೧೩೨॥

ಅಜಾರಜಾ ಏವ ಕಿಲಾಧಿಕಾರಂ
ಸಂಪ್ರಾಪ್ನುವಂತೀಶ್ವರಪೂಜನೇಷು ।
ನ ಜಾರಜಾನಾಂ ಶಿವಭಕ್ತಿಲೇಶೋ
ಪ್ಯತಃ ಕಥಂ ತೇ ಶಿವಪೂಜಕಾಃ ಸ್ಯುಃ ॥೧೩೩॥

ನ ಯಸ್ಯ ಭಕ್ತಿರ್ಗಿರಿಶಾರ್ಚನೇ ಸ್ಯಾತ್
ತಂ ಜಾರಜಂ ಪ್ರಾಹುರಘೌಂಬುರಾಶಿಂ ।
ತಂ ಸಂತ್ಯಜಂತ್ಯಂತ್ಯಜಸನ್ನಿಭಂ ತಂ
ಸಂತೋ ವದಂತ್ಯೇವ ಮಹಾಘರಾಶಿಂ ॥೧೩೪॥

ಎಂದು ತಿಳಿಯುತ್ತಾರೆ. ಏಕೆಂದರೆ ಈ ಮಹತ್ತರವಾದ ವಸ್ತುಸಮಾಗಮದಿಂದಲೇ ಪರಮೇಶ್ವರನು ಸುಪ್ರೀತನಾಗುವನು. ॥೧೩೧॥

ಈ ಗಿರಿಜಾರಮಣನಿಗೆ ಬಿಲ್ವದಳದಲ್ಲಿರುವಷ್ಟು ಪ್ರೀತಿಯು ರತ್ನದಲ್ಲಿಯಾಗಲಿ ಗಂಗಾನದಿಯ ಜಲದಲ್ಲಾಗಲಿ ಅಥವಾ ಅಮೃತಸಮುದ್ರದಲ್ಲಾಗಲಿ ಇರುವುದಿಲ್ಲ. ಬಿಲ್ವದಳವೇ ಆತನಿಗೆ ಅಷ್ಟು ಪ್ರಿಯವಾಗಿರುವುದು. ಆ ಮಹಾದೇವನು ಸ್ವರ್ಗಪ್ರದನೂ ಮೋಕ್ಷದಾತನೂ ಆಗಿರುವನು. ಅಂತಹವನ ಸ್ವರೂಪವೆನಿಸಿದ ಶಿವಲಿಂಗದ ಮಸ್ತಕದಲ್ಲಿ ಒಂದೇ ಒಂದು ಬಿಲ್ವಪತ್ರೆಯನ್ನು ಅರ್ಪಿಸಿದರೆ ಅತಿ ವಿಮಲವಾದ ಚಂದ್ರಕಲೆಯನ್ನು ಪ್ರೀತಿಯಿಂದ ಶಿರಸ್ಸಿನಲ್ಲಿ ಧಾರಣಮಾಡುವಂತೆ ಅಲಂಕರಿಸಿಕೊಳ್ಳುವನು. ॥೧೩೨॥

ಸತ್ಕುಲಪ್ರಸೂತರಾದವರಿಗೆಲ್ಲರಿಗೂ ಈ ಶಿವಾರ್ಚನೆಯಲ್ಲಿ ಅಧಿಕಾರವುಂಟು. ಜಾರಿಣೀಪುತ್ರರಿಗೆ ಶಿವನಲ್ಲಿ ಎಂದೂ ಭಕ್ತಿಯೇ ಉಂಟಾಗಲಾರದು. ಅಂದಮೇಲೆ ಅವರು ಹೇಗೆ ಶಿವಪೂಜಕರಾದಾರು? ॥೧೩೩॥

ಯಾವನಿಗೆ ಶಿವಾರ್ಚನೆಯಲ್ಲಿ ಭಕ್ತಿ ಆಸಕ್ತಿಗಳಿಲ್ಲವೋ, ಆತನನ್ನು ಜಾರಜನೆಂದೇ ಹೇಳುವರು. ಆತನು ಪಾಪರಾಶಿಸ್ವರೂಪನೇ ಸರಿ. ಆದ್ದರಿಂದಲೇ

ಭೂತಿರುದ್ರಾಕ್ಷಪೂತಾಂಗಶ್ಶಿವಭಕ್ತಿಪರಾಯಣಃ ।
ಶಿವವ್ರತಾಧಿಕಾರೀ ತು ನಿರ್ಣೀತೋ ವೇದವಿತ್ತಮೈಃ ॥೧೩೫॥

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ ।
ಶೃಣುಧ್ವಂ ಮುನಯಸ್ಸರ್ವೇ ಮೃಗೇಂದ್ರಾಸ್ಸಾವಧಾನತಃ ॥೧೩೬॥

ಅತ್ರೈವ ಪೂರ್ವಮಭವದ್ವನೇ ಕರಿವರೋ ಮದೈಃ ।
ಸಮಾಕ್ರಾಂತಸ್ಸರ್ವದಾಪಿ ಸರ್ವಭೂರುಹಪೀಡಕಃ ॥೧೩೭॥

ಉತ್ಪಾಟಯ ಮೂಲತೋ ವೃಕ್ಷಾನ್ ಸ್ಥಿತ್ವಾ ತತ್ಪತ್ರಭಕ್ಷಣಂ ।
ಕೃತ್ವಾ ವ್ಯಾಘ್ರಕುಲಂ ಹತ್ವಾ ಭಕ್ಷಯತ್ಯೇವ ಸಂತತಂ ॥೧೩೮॥

ಶಿಷ್ಟರಾದವರು ಅಂತ್ಯಜನನ್ನು ದೂರಮಾಡುವಂತೆ, ಅಶೈವನನ್ನು ಶಿವಾರಾಧಕರು ದೂರ ತ್ಯಜಿಸುವರು. ಶಿವನಲ್ಲಿ ಭಕ್ತಿಯಿಲ್ಲದವನನ್ನು ಪಾಪರಾಶಿ ಎಂದೇ ಹೇಳುವರು. ॥೧೩೪॥

ಭಸ್ಮರುದ್ರಾಕ್ಷಿಗಳ ಧಾರಣೆಯಿಂದ ಯಾವಾತನ ಶರೀರವು ಪವಿತ್ರವಾಗಿರುವುದೋ, ಯಾವನು ಶಿವಭಕ್ತಿಯುತನಾಗಿರುವನೋ ಆತನೇ ಶಿವಾರ್ಚನೆಯಲ್ಲಿ ಅಧಿಕಾರಿ ಎಂದು ವೇದಜ್ಞರು ನಿರ್ಣಯಮಾಡಿರುವರು. ನಾರುದ್ರೋ ರುದ್ರಮರ್ಚಯೇತ್ ಎಂದು ಪ್ರಮಾಣವಚನವೂ ಇಲ್ಲಿ ಕಂಡುಬರುವುದು. ॥೧೩೫॥

ಇದೇ ಅಧಿಕಾರ ನಿರ್ಣಯದ ವಿಚಾರದಲ್ಲಿ ಒಂದು ಪುರಾತನವಾದ ಇತಿಹಾಸವಿದೆ. ಅದನ್ನು ಹೇಳುವೆನು. ಎಲೈ ಮುನಿಗಳೇ, ನೀವೂ ಸಾವಧಾನತೆಯಿಂದ ಕೇಳಿರಿ. ಎಲೈ ಸಿಂಹಗಳೇ, ನೀವೂ ಗಮನವಿಟ್ಟು ಆಲಿಸಿರಿ. ॥೧೩೬॥

ಇದೇ ಅರಣ್ಯದಲ್ಲಿ ಹಿಂದೆ ಒಂದು ಮದೋನ್ಮತ್ತವಾದ ಆನೆಯಿದ್ದಿತು. ಅದು ಮಹಾ ಔದ್ಧತ್ಯದಿಂದ ಅರಣ್ಯದ ಮರಗಳನ್ನೆಲ್ಲಾ ಮುರಿದು ಧ್ವಂಸಮಾಡುತ್ತಿದ್ದಿತು. ॥೧೩೭॥

ಈ ಆನೆಯು ಮರಗಳನ್ನು ಮೂಲಸಮೇತವಾಗಿ ಉರುಳಿಸಿ ಅವುಗಳ ಎಲೆಗಳನ್ನು ತಿನ್ನುತ್ತಿದ್ದಿತು. ಒಂದೊಂದುವೇಳೆ ಹುಲಿಗಳೊಡನೆ ಜಗಳವಾಡಿ ಹುಲಿಯನ್ನೇ ಕೊಲ್ಲುತ್ತಿತ್ತು. ॥೧೩೮॥

ಸ ಸರ್ವಪೀಡಕೋಽಸ್ಯಮಲಬಿಲ್ವಸಂಭಕ್ಷಕಃ
ಶಿವಾರ್ಚನರತಃ ಪ್ರಗೇ ಸುರಸರಿನ್ನಿಮಗ್ನೋ ಮುಹುಃ ।
ದವಾಮಲವಿಭೂತಿಭಿಃ ಸಿತತರೋರುಗಾತ್ರೋ ಗಜಃ
ಶಿವಸ್ಮರಣತತ್ಪರಶ್ಚರತಿ ತುಂಗಲಿಂಗಾಲಯೇ ॥೧೩೯॥

ಅಭಿಷಿಚ್ಯ ಮಹೇಶ್ವರಂ ಮುದಾ
ಸ್ವಕರಾನೀತಸರಿದ್ವರಾಂಭಸಾ ।
ನವಕೋಮಲಬಿಲ್ವಪಲ್ಲವೈಃ
ಶಿವಲಿಂಗಾನಿ ಸಮರ್ಚಯತ್ಯಪಿ ॥೧೪೦॥

ಪ್ರದಕ್ಷಿಣೀಕೃತ್ಯ ಮಹೇಶ್ವರಂ ಮುಹುಃ
ಪ್ರಣಮ್ಯ ಚಾಘ್ರಾಯ ಸ ಬಿಲ್ವಪಲ್ಲವಾನ್ ।
ಪ್ರಯಾತಿ ಭಕ್ತ್ಯಾ ಶಿವ ಶಂಕರೇತಿ
ವದನ್ವನಂ ವ್ಯಾಘ್ರಕುಲಪ್ರಕೀರ್ಣಂ ॥೧೪೧॥

ಆ ಆನೆಯು ಸರ್ವಪೀಡಕವಾಗಿದ್ದರೂ ಶೈವಧರ್ಮದಲ್ಲಿದ್ದಿತು. ಸುಂದರವಾದ ಬಿಲ್ವವೃಕ್ಷಗಳನ್ನು ಅದು ಎಂದೂ ಮುರಿಯುತ್ತಿರಲಿಲ್ಲ. ಪ್ರತಿದಿನ ಬೆಳಗ್ಗೆ ಗಂಗಾನದಿಯಲ್ಲಿ ಮುಳುಗಿ ಸ್ನಾನಮಾಡಿ, ಕಾಡಿಗಿಚ್ಚಿನಿಂದುಂಟಾದ ಭಸ್ಮವನ್ನು ದೇಹಕ್ಕೆಲ್ಲಾ ಹಚ್ಚಿಕೊಂಡು ಶಿವಲಿಂಗಕ್ಕೆ ಬಿಲ್ವಾದಿಗಳಿಂದ ಪೂಜಿಸುತ್ತಿದ್ದಿತು. ಮತ್ತು ಶಿವನನ್ನೇ ಸದಾ ಧ್ಯಾನಿಸುತ್ತಾ ಶಿವಕ್ಷೇತ್ರದಲ್ಲಿ ಸಂಚರಿಸುತ್ತಿದ್ದಿತು. ॥೧೩೯॥

ಆ ಆನೆಯು ತನ್ನ ಸೊಂಡಿಲಲ್ಲಿ ನೀರನ್ನು ತುಂಬಿಕೊಂಡು ಬಂದು ಶಿವಲಿಂಗಕ್ಕೆ ಅಭಿಷೇಕಮಾಡಿ, ಅದೇ ಸೊಂಡಲಿಂದಲೇ ಬಿಲ್ವಪತ್ರೆಗಳನ್ನೂ ತಂದು ಭಕ್ತಿಯಿಂದ ಶಿವಲಿಂಗಗಳ ಮೇಲೆ ಎಸೆದು ಪೂಜಿಸುತ್ತಿದ್ದಿತು. ॥೧೪೦॥

ಆ ಆನೆಯು ಶಿವಲಿಂಗಕ್ಕೆ ಪದೇ ಪದೇ ಪ್ರದಕ್ಷಿಣೆಮಾಡಿ ಸಾಷ್ಟಾಂಗ ನಮಸ್ಕಾರ ಮಾಡುತ್ತಿದ್ದಿತು. ಮತ್ತು ಶಿವ, ಶಂಕರ ಎಂದು ಧ್ಯಾನಮಾಡುತ್ತಾ ಈ ವ್ಯಾಘ್ರಭೂಯಿಷ್ಠವಾದ ಅರಣ್ಯದಲ್ಲಿ ಆಹಾರಕ್ಕಾಗಿ ಅಲೆದಾಡುತ್ತಿದ್ದಿತು. ॥೧೪೧॥

ಹತ್ವಾ ವ್ಯಾಘ್ರಕುಲಂ ತದೀಯಮಮಲಂ ಮಾಂಸಂ ಸಮಾದಾಯ ತೈಃ
ಗಂಗಾವಾರಿಭಿರಾದರೇಣ ವಿಮಲೈಃ ಪ್ರಕ್ಷಾಲ್ಯ ಭೂತ್ಯಾಯುತಂ ।
ದತ್ವೇಶಾಯ ಸ ಭಕ್ಷಯತ್ಯತಿಮುದಾ ರುದ್ರಂ ಮುಹುಸ್ಸಂಸ್ಮರನ್
ಪಕ್ವಾನ್ಯತ್ಯಮಲಾನಿ ತದ್ವನಫಲಾನ್ಯಾಧಾಯ ಲಿಂಗೇ ಕರೀ ॥೧೪೨॥

ಏವಂ ಯುಗಾಯುತಂ ಸ್ಥಿತ್ವಾ ಶಿವಪೂಜಾಪರಾಯಣಃ ।
ಯೋಗೇನ ವಿಜಹೌ ದೇಹಂ ಸಂಸ್ಮರನ್ನೇವ ಶಂಕರಂ ॥೧೪೩॥

ತತಸ್ಸ ಪುಷ್ಪಕಾರೂಢೋ ಬ್ರಹ್ಮಲೋಕಂ ಯಯೌ ಮುದಾ ।
ಮಹಾದೇವಗಣೋಪೇತೋ ಯಮಾದಿಭಿರಭಿಷ್ಟುತಃ ॥೧೪೪॥

ಬ್ರಹ್ಮಣಾ ಪೂಜಿತಸ್ತತ್ರ ವಿಧಿವದ್ವಿಧಿತತ್ಪರಃ ।
ಬ್ರಹ್ಮರತ್ನಾಸನೇ ಸ್ಥಿತ್ವಾ ತುಷ್ಟೋಽಪಿ ನ್ನಗನಾಯಕಃ ॥೧೪೫॥

ಆ ಆನೆಯು ಹುಲಿಗಳನ್ನು ಹಿಡಿದು ಕೊಂದು ಅದರ ಮಾಂಸವನ್ನು ತಂದು ಗಂಗಾನೀರಿನಲ್ಲಿ ಚೆನ್ನಾಗಿ ತೊಳೆದು ಭಸ್ಮವನ್ನು ಮಿಶ್ರಮಾಡಿ, ಪವಿತ್ರಗೊಳಿಸಿ ಅದನ್ನು ಮೊದಲು ಈಶ್ವರನಿಗೆ ನಿವೇದನ ಮಾಡುತ್ತಿತ್ತು. ಹಾಗೆಯೇ ಇನ್ನೂ ಅನೇಕವಿಧವಾದ ಹಣ್ಣುಕಾಯಿಗಳನ್ನೂ ತಂದು ಈಶನಿಗೆ ಅರ್ಪಿಸಿ ಅನಂತರ ಆ ಶಿವನಿವೇದಿತವಾದ ಮಾಂಸವನ್ನೂ ಹಣ್ಣುಕಾಯಿಗಳನ್ನೂ ತಾನೇ ಶಿವನನ್ನು ಧ್ಯಾನಿಸುತ್ತಾ ಭಕ್ಷಿಸುತ್ತಿದ್ದಿತು. ॥೧೪೨॥

ಹೀಗೆಯೇ ಪ್ರತಿದಿನವೂ ಶಿವಾರಾಧನೆಯನ್ನು ಮಾಡುತ್ತ ಜೀವನವನ್ನು ಅನೇಕ ವರ್ಷಪರ್ಯಂತ ನಡೆಸಿ, ಬಳಿಕ ಒಂದು ದಿನ ಆ ಆನೆಯು ಶಿವನನ್ನೇ ಸ್ಮರಣೆ ಮಾಡುತ್ತಾ ಯೋಗಸಿದ್ಧಿಯಿಂದ ಮರಣವನ್ನು ಹೊಂದಿತು. ॥೧೪೩॥

ಆಗ ಆ ಆನೆಯು ಪುಷ್ಪಕ ವಿಮಾನವನ್ನೇರಿ ಶಿವದೂತರೊಡನೆ ಯಮನೇ ಮೊದಲಾದವರಿಂದ ಹೊಗಳಿಸಿಕೊಳ್ಳುತ್ತಾ ಬ್ರಹ್ಮಲೋಕಕ್ಕೆ ಹೋಯಿತು. ॥೧೪೪॥

ಬ್ರಹ್ಮಲೋಕದಲ್ಲಿ ಈ ಆನೆಯನ್ನು ಬ್ರಹ್ಮನು ವಿಧಿವತ್ತಾಗಿ ಪೂಜಿಸಿದನು. ರತ್ನಮಯವಾದ ಸಿಂಹಾಸನದಮೇಲೆ ಅದನ್ನು ಕುಳ್ಳಿರಿಸಿ ಸತ್ಕರಿಸಿದನು. ಈ ಎಲ್ಲಾ ಸತ್ಕಾರಗಳನ್ನೂ ಕೈಗೊಂಡು ಆ ಆನೆಯು ಪರಮಸಂತೋಷದಿಂದಿದ್ದಿತು. ॥೧೪೫॥

ತದಾ ಬ್ರಹ್ಮಸಭಾಸದ್ಭಿರ್ಮಹಾತ್ಮಾ ಕೋಽಯಮಿತ್ಯಪಿ ।
ಪೃಷ್ಟಶ್ಚತುರ್ಮುಖಃ ಪ್ರಾಹ ತಾನೀಶ್ವರಪರಾಯಣಾನ್ ॥೧೪೬॥

ಅಯಂ ಶಿವಾರಾಧನತತ್ಪರೋಽಭೂತ್
ಗಂಧರ್ವ ಏವಾಮಿತಗಂಧಪೂರ್ಣಃ ।
ಅಯಂ ಪ್ರದೋಷೇ ಶಿವಪೂಜಕೋಽಪಿ
ಜಗಾದ ನಾರಾಯಣನಾಮ ಮೋಹಾತ್ ॥೧೪೭॥

॥ ಬ್ರಹ್ಮ ಉವಾಚ ॥

ತೇನ ಪಾಪೇನ ಸ ವನೇ ಕರೀ ಸಮಭವತ್ತತಃ ।
ಶಿವಲಿಂಗಾರ್ಚನೋತ್ಕರ್ಷಾಜ್ಜಾತೋ ಜಾತಿಸ್ಮರೋಽಪಿ ಸಃ ॥೧೪೮॥

ಆಗ ಬ್ರಹ್ಮನ ಸಭೆಯಲ್ಲಿ ಅನೇಕ ಮಂದಿ ಈಶ್ವರಪರಾಯಣರಾದ ಮಹಾತ್ಮರಿದ್ದರು. ಅವರು ಈ ಆನೆಗೆ ಬ್ರಹ್ಮನು ಮಾಡಿದ ಪೂಜೆಯನ್ನು ನೋಡಿ ಆಶ್ಚರ್ಯಗೊಂಡು, ಬ್ರಹ್ಮನನ್ನು ಕುರಿತು ನಿನ್ನಿಂದಲೂ ಪೂಜ್ಯನಾದ ಈ ಮಹಾತ್ಮನು ಯಾರು? ಈತನ ವೃತ್ತಾಂತವೇನು? ಹೇಳಬೇಕೆಂದು ಕೇಳಿಕೊಂಡರು. ಅವರ ಅಪೇಕ್ಷೆ ಮೇರೆಗೆ ಬ್ರಹ್ಮನು ಈರೀತಿ ಹೇಳಿದನು. ॥೧೪೬॥

ಈ ಆನೆಯು ಹಿಂದಿನ ಜನ್ಮದಲ್ಲಿ ಒಬ್ಬ ಗಂಧರ್ವನಾಗಿದ್ದನು. ಆತನು ಸಕಲ ಸಂಪದ್ಯುಕ್ತನಾಗಿದ್ದನಲ್ಲದೇ ಸದಾ ಶಿವಾರಾಧನೆಯಲ್ಲಿಯೇ ನಿರತನಾಗಿದ್ದನು. ಆತನು ಪ್ರದೋಷ ಸಮಯದಲ್ಲಿ ತಪ್ಪದೆ ಶಿವಾರ್ಚನೆ ಮಾಡುತ್ತಿದ್ದನು. ಆದರೆ ಅಜ್ಞಾನದಿಂದ ಶಿವಪೂಜೆಯನ್ನು ಮಾಡುವಾಗ ನಾರಾಯಣ ಎಂದು ವಿಷ್ಣುವನ್ನು ಸ್ಮರಿಸುತ್ತಿದ್ದನು. ॥೧೪೭॥

ಆ ಪಾಪದಿಂದ ಗಂಧರ್ವನು ಆನೆಯಾಗಿ ಹುಟ್ಟಿದನು. ಇದೇ ಆ ಆನೆಯು. ಇದು ಹಿಂದಿನ ಜನ್ಮದ ಸಂಸ್ಕಾರವಾಸನೆಯ ಬಲದಿಂದ ಪೂರ್ವಜನ್ಮ ವೃತ್ತಾಂತವನ್ನು ಸ್ಮರಿಸಿಕೊಂಡು ಸದಾ ಶಿವಲಿಂಗಾರ್ಚನೆಯನ್ನು ಮಾಡಿರುತ್ತದೆ. ॥೧೪೮॥

ತೇನ ಪುಣ್ಯಪ್ರಭಾವೇನ ಸ ಚಕಾರ ಶಿವಾರ್ಚನಂ ।
ಮದಾಂಧೋಽಪಿ ಮಹಾದೇವಂ ಸ್ಮರತ್ಯೇವ ಮುಹುರ್ಮುಹುಃ ॥೧೪೯॥

॥ ಸತ್ಯಮೂರ್ತಿರುವಾಚ ॥

ಇತಿ ತದ್ವಚನಂ ಶ್ರುತ್ವಾ ಮೃಗೇಂದ್ರಃ ಪ್ರಾಹ ತಂ ಮುನಿಂ ।
ತನ್ನಾಮೋಚ್ಚಾರಣಾದೇವ ಕಥಂ ಜಾತಃ ಕರೀ ವನೇ ॥೧೫೦॥

ಇದಂ ತು ಕೌತುಕಂ ತಾವಚ್ಛ್ರೋತವ್ಯಮಧುನಾ ಮಮ ।
ಇತಿ ತದ್ವಚನಂ ಶ್ರುತ್ವಾ ಪ್ರಾಹ ತಂ ಮುನಿಪುಂಗವಃ ॥೧೫೧॥

॥ ಶಿವಘುಂಥಿರುವಾಚ ॥

ಪುರಾ ಭೃಗುರಿತಿ ಖ್ಯಾತೋ ಮುನಿಶ್ಶಾಂಭವಪುಂಗವಃ ।
ಸ ಗತೋ ಲೋಕಸಂಚಾರಂ ಕುರ್ವನ್ವೈಕುಂಠಮಾದರಾತ್ ॥೧೫೨॥

ಈ ಆನೆಯು ಪೂರ್ವಜನ್ಮದಲ್ಲಿ ಮಾಡಿದ ಶಿವಾರ್ಚನೆಯಿಂದ ಲಭಿಸಿದ ಪುಣ್ಯಪ್ರಭಾವದಿಂದಲೇ ಆನೆಯ ಜನ್ಮದಲ್ಲಿ ಮದಾಂಧವಾಗಿರುತ್ತಿದ್ದರೂ ಪದೇಪದೇ ಶಿವನನ್ನು ಧ್ಯಾನಿಸುತ್ತಿದ್ದಿತು. ಮತ್ತು ಶಿವಾರ್ಚನೆಯನ್ನೂ ಮಾಡುತ್ತಿದ್ದಿತು. ॥೧೪೯॥

ಹೀಗೆಂದು ಶಿವಘುಂಥಿಯು ಹೇಳುತ್ತಿರಲು, ಮಧ್ಯದಲ್ಲಿ ಸಿಂಹವು ಪ್ರಶ್ನಿಸಿತು. ಆ ವಿಷ್ಣುವಿನ ಹೆಸರನ್ನು ಹೇಳಿದ್ದರಿಂದಲೇ ಆ ಗಂಧರ್ವನು ಆನೆಯಾಗಿಬಿಟ್ಟನೆ? ಅದು ಹೇಗೆ? ಏತಕ್ಕೆ ಆನೆ ಆದನು? ॥೧೫೦॥

ಈ ವಿಚಾರವನ್ನು ಕೇಳಬೇಕೆಂದು ನನಗೆ ಕುತೂಹಲವುಂಟಾಗಿದೆ. ಅದನ್ನು ಶ್ರುತಪಡಿಸಬೇಕೆಂದು ಸಿಂಹವು ಕೇಳಿಕೊಳ್ಳಲು ಶಿವಘುಂಥಿಯು ಆ ವಿಷಯವನ್ನೇ ಹೇಳಲಾರಂಭಿಸಿದನು. ॥೧೫೧॥

ಹಿಂದೆ ಭೃಗು ಎಂಬ ಪ್ರಸಿದ್ಧನಾದ ಮುನಿಯಿದ್ದನು. ಆತನು ಶಾಂಭವರಲ್ಲೆಲ್ಲಾ ಅತ್ಯಂತ ಶ್ರೇಷ್ಠನಾದವನು. ಆತನು ಒಂದು ಸಲ ಲೋಕಸಂಚಾರವನ್ನು ಮಾಡುತ್ತಾ ವೈಕುಂಠಕ್ಕೆ ಹೋದನು. ॥೧೫೨॥

ತಸ್ಮಿನ್ ಕಾಲೇ ದ್ವಾರಭಾಗೇ ಸ್ಥಿತಸ್ತಂ ಗರುಡೋ ಮುನಿಂ ।
ಪ್ರಾಹಾಂತಿಕಂ ಸಮಾಪನ್ನೋ ನ ಗಂತವ್ಯಂ ತ್ವಯೇತಿ ಸಃ ॥೧೫೩॥

ತದಾನೀಂ ತದ್ವಚಃ ಶ್ರುತ್ವಾ ಮುನಿರ್ವಿಸ್ಮಿತಮಾನಸಃ ।
ನಿರೋಧಕಃ ಕಥಂ ಜಾತೋ ಮಮಾಯಮಿತಿ ಸತ್ವರಂ ॥೧೫೪॥

ತತಸ್ತಂ ವಿಸ್ಮಿತಂ ದೃಷ್ಟ್ವಾ ಗರುಡಃ ಪ್ರಾಹ ತಂ ಭೃಗುಂ ।
ರತಿಕಾಲೋ ಹರೇಸ್ಸೋಽಯಂ ಪ್ರಯಾಹಿ ಪರತೋ ಮುನೇ॥೧೫೫॥

ಇತಿ ತದ್ವಚನಂ ಶ್ರುತ್ವಾ ನಿಷ್ಠುರಂ ಮುನಿಪುಂಗವಃ ।
ಗರುಡಂ ಭಸ್ಮಸಾತ್ಕೃತ್ವಾ ಕೋಪೇನ ಸ ಯಯೌ ಹರಿಂ ॥೧೫೬॥

ತದಾನೀಮುತ್ಥಿತೋ ವಿಷ್ಣುರಸಮಾಪ್ತಮನೋರಥಃ ।
ಅವದನ್ನಾರಯಾಮಾಸ ಸಂಜ್ಞಯಾ ಮುನಿಪುಂಗವಂ ॥೧೫೭॥

ಆಗ ವೈಕುಂಠದ ಬಾಗಿಲಲ್ಲಿ ಗರುಡನು ಕಾಯುತ್ತಿದ್ದನು. ಆತನು ಭೃಗುವನ್ನು ಕಂಡೊಡನೆಯೇ ಸಮೀಪಕ್ಕೆ ಹೋಗಿ ಒಳಕ್ಕೆ ಹೋಗಕೂಡದೆಂದು ತಡೆದನು. ಭೃಗುವನ್ನು ಒಳಕ್ಕೆ ಬಿಡಲಿಲ್ಲ. ||೧೫೩||

ಆ ಗರುಡನ ಮಾತನ್ನು ಕೇಳಿ ಭೃಗುವಿಗೆ ಪರಮಾಶ್ಚರ್ಯವಾಯಿತು. ಇದೇನು! ನನಗೂ ಪ್ರವೇಶಮಾಡಲು ಅಡ್ಡಿ ಇದೆಯೇ? ಆದರಲ್ಲೂ ಈ ಗರುಡನು ನನ್ನನ್ನು ತಡೆಯಲು ಶಕ್ತನಾದನೇ? ಏನೋ ವಿಪರೀತವಿದ್ದಂತೆ ತೋರುತ್ತಿದೆ ಎಂದು ಆಶ್ಚರ್ಯಪಟ್ಟನು. ||೧೫೪||

ಭೃಗುಮುನಿಯು ವಿಸ್ಮಿತನಾಗಿ ಅಲ್ಲಿಯೇ ನಿಂದಿರಲು ಗರುಡನು ತಿರುಗಿ ಹೇಳಿದನು. ಈಗ ವಿಷ್ಣುವು ರತಿಕ್ರೀಡೆಯಲ್ಲಿ ಆಸಕ್ತನಾಗಿರುವನು. ಈಗ ನೀನು ಒಳಕ್ಕೆ ಪ್ರವೇಶಿಸುವ ಹಾಗಿಲ್ಲ. ಮತ್ತೆಲ್ಲಿಗಾದರೂ ಹೋಗಿಬಾ ಎಂದು ನುಡಿದನು. ||೧೫೫||

ಗರುಡನ ಒರಟು ಮಾತನ್ನು ಕೇಳಿ ಭೃಗುಮುನಿಗೆ ಕೋಪಬಂದಿತು. ಕೂಡಲೇ ಆತನು ಅದೇ ಕೋಪದಿಂದ ಗರುಡನನ್ನು ಸುಟ್ಟು ಭಸ್ಮಮಾಡಿ ವೈಕುಂಠದೊಳಕ್ಕೆ ವಿಷ್ಣುವಿನ ಬಳಿಗೆ ಹೋದನು. ||೧೫೬||

ವಿಷ್ಣುವು ಇನ್ನೂ ವಿಹಾರದಲ್ಲೇ ಆಸಕ್ತನಾಗಿದ್ದನು. ತನಗೆ ತೃಪ್ತಿಯಾಗುವ ಮಧ್ಯೆ ಇದೇನೋ ವಿಘ್ನಬಂತೆಂಬಂತೆ ತಾತ್ಸಾರಮಾಡಿ ಕುಶಲಪ್ರಶ್ನೆಯ ಸಂಭಾಷಣೆ

ತತೋ ಭೃಗುರುವಾಚೇದಂ ವಚೋ ನಾರಾಯಣಂ ಮುಹುಃ ।
ನಿಷ್ಠುರಾಣಿ ವದನ್ನೇವ ವಚನಾನಿ ನೃಗಾಧಿಪ ॥೧೫೮॥

ಧಿಗ್ಧಿಗ್ಧಿಗೇತತ್ತವ ಮೌನಮಸ್ಯ
ಸಾಯಂ ಶಿವಾರಾಧನವರ್ಜಿತಸ್ಯ ।
ಪ್ರದೋಷಕಾಲೇ ಸುರತೋತ್ಸವೇ ಕಥಂ
ವದಾಮಿ ತಾವದತಿದುರ್ಮತಿಸ್ತೇ ॥೧೫೯॥

ಸಾಯಂಕಾಲಶ್ಶಂಗಲಿಂಗಾರ್ಚನೇನ
ನೇಯುಸ್ಸಾಯಂ ಪೂಜಯೇತ್ಯಾಗತೋಽಸ್ಮಿ ।
ಕಿಂ ಪಾಪಿಷ್ಠೇನಾಧುನಾ ಸಂಗತಿರ್ನೋಽಹಾತ್
ತೇನಾಪಿ ತ್ವಾದೃಶೇನಾಭಯೇನ ॥೧೬೦॥

ಯನ್ನೂ ಮಾಡದೇ ಕೇವಲ ಕೈ ಸಂಕೇತದಿಂದ ಹೊರಟುಹೋಗೆಂದು ಭೃಗುವಿಗೆ ಸೂಚಿಸಿದನು. ॥೧೫೭॥

ಇದರಿಂದ ಭೃಗುವಿಗೆ ಅಗೌರವವಾದಂತಾಯಿತು. ಆತನು ಕೋಪಗೊಂಡು ವಿಷ್ಣುವನ್ನು ಹೀಯಾಳಿಸುತ್ತಾ ನಿಷ್ಠುರವಾಗಿಯೇ ಹೀಗೆ ಹೇಳಿದನು. ॥೧೫೮॥

ಛೀಃ ! ನಿನ್ನ ಬಾಳನ್ನು ಸುಡಬೇಕು. ನಮ್ಮಂತಹವರು ಬಂದಾಗಲೂ ನೀನು ಮಾತನ್ನಾಡಿಸುವುದಿಲ್ಲ. ಔದ್ಧತ್ಯದಿಂದ ಮೌನವಾಗಿದ್ದೀಯೆ. ಅಲ್ಲದೇ ಈ ಪ್ರದೋಷ ಕಾಲದಲ್ಲಿ ಶಿವಾರಾಧನೆ ಮಾಡುವುದನ್ನು ಬಿಟ್ಟು ಸಂಭೋಗವಿಲಾಸದಲ್ಲಿ ಮೆರೆಯುತ್ತಿರುವೆಯಾ ? ನಿನ್ನ ದುರ್ಬುದ್ಧಿಯೂ, ಅಹಂಕಾರವೂ ಮಿತಿಮೀರಿದಂತಿದೆ. ಇಷ್ಟು ಅಹಂಕಾರವು ನಿನಗೆ ಎಲ್ಲಿಂದ ಬಂದಿತು ? ಅಪಾಯವು ಸಂಭವಿಸೀತು. ಎಚ್ಚರಿಕೆ. ॥೧೫೯॥

ಸಾಯಂಕಾಲದ ಶಿವಾರ್ಚನೆಯನ್ನು ಮಾಡಲು, ಶಿವಲಿಂಗವನ್ನು ಪೂಜಿಸುತ್ತಾ ಸಾಯಂಕಾಲವನ್ನು ಕಳೆಯಬೇಕೆಂಬ ಅಪೇಕ್ಷೆಯಿಂದ ಇಲ್ಲಿಗೆ ಬಂದೆನು. ಆದರೆ ಈಗ ಇಲ್ಲಿ ವಿಪರೀತವಾಗಿದೆ. ಪಾಪಿಷ್ಠನಾದ ನಿನ್ನ ಸಂಗಡ ಏನುಮಾಡುವುದು ? ನೀನು ಅಹಂಕಾರದಿಂದ ನಿರ್ಭಯನಾಗಿದ್ದೀಯೆ. ನಿನ್ನೊಡನೆ ಇಂಥ ಪುಣ್ಯ ಸಮಯದಲ್ಲಿ ಇರುವುದು ನಮಗೂ ಬಹುಶಃ ಅಪಾಯಕರವಾದೀತು. ॥೧೬೦॥

ಭಯಮಪಿ ಬಹುಜಾತಂ ನ ಸ್ಮೃತಂ ತತ್ತ್ವಯಾ ಕಿಂ
ಗಿರಿಶಭಜನಶೂನ್ಯಾ ಸಾಯಮಾರ್ತಿಃ ಪ್ರಪನ್ನಾ ।
ಅನುದಿನವಿಲಯಃ ಸ್ಯಾದೀಶಪೂಜಾವಿಯೋಗೇ
ಕಥಮಪಿ ತವ ಲಜ್ಜಾ ಜಾಯತೇ ನಾಧುನಾ ವಾ ॥೧೬೧॥

ಸಾಯಂಕಾಲಃ ಕಾಲಕಾಲಾರ್ಚನಾದ್ಯೈಃ
ನೇಯೋ ಧನ್ಯಃ ಪುಣ್ಯರೂಪೈಸ್ತತಸ್ತ್ವಂ ।
ಉನ್ಮತ್ತವತ್ಕಿಂ ಪ್ರಜಾತೋಽಸಿ ವಿಷ್ಣೋ
ಸಾಯಂ ಕಾಲಸ್ಸರ್ವಥಾ ದಾರಯೋಗೇ ॥೧೬೨॥

ಸಾಯಂ ವಿಶೇಷೇಣ ತವಾರ್ಚನಂ ಯಃ
ಕರ್ತುಂ ಪ್ರವೃತ್ತೋ ಭವತಿ ಪ್ರಮೋಹಾತ್ ।
ತ್ವನ್ನಾಮ ವಕ್ತುಂ ಯತತೇ ಸ ಯಾತು
ಸಂಸಾರಮಾದೌ ನರಕಂ ಚ ಪಶ್ಚಾತ್ ॥೧೬೩॥

ನಿನ್ನ ಜೀವನದಲ್ಲಿ ಅನೇಕವಿಧವಾದ ಭಯಪ್ರಾಪ್ತವಾಗಿದ್ದುದನ್ನು ಮರೆತೆಯಾ ? ಸಾಯಂಕಾಲದಲ್ಲಿ ಶಿವಾರಾಧನೆಯನ್ನು ಮಾಡದಿದ್ದರೆ ಏನುಗತಿಯಾಗುವುದು ? ತಿಳಿದಿರುವೆಯಾ ? ಈಶಪೂಜೆಯನ್ನು ತ್ಯಾಗಮಾಡಿದರೆದಿನದಿಂದ ದಿನಕ್ಕೆ ಅಧೋಗತಿಗೆ ಇಳಿದು ನಾಶವಾಗುವೆ. ಹೀಗಿದ್ದರೂ ನಿನಗೆ ತಿಳಿವಳಿಕೆ ಬಂದಿಲ್ಲ ಅಥವಾ ಲಜ್ಜೆಯೂ ಉಂಟಾಗಿಲ್ಲವಲ್ಲ ! ॥೧೬೧॥

ಪರಮಪುಣ್ಯಪ್ರದವಾದ ಸಾಯಂಕಾಲದಲ್ಲಿ ಮೃತ್ಯುಂಜಯನನ್ನೇ ಆರಾಧಿಸುತ್ತಾ ಕಾಲಕಳೆಯ ಬೇಕೆಂದಿರುವುದು. ಆದರೆ ಈಗ ನೀನು ಉನ್ಮತ್ತನಂತೆ ತೋರುತ್ತಿದ್ದೀಯೆ. ಈ ಪುಣ್ಯಕಾಲವು ಸ್ತ್ರೀಸುಖಕ್ಕೆ ಸರ್ವಥಾ ಯೋಗ್ಯವಲ್ಲವೆಂಬುದನ್ನು ನೀನು ಯೋಚಿಸಿರುವುದಿಲ್ಲ. ನೀನು ಹೀಗೆ ಕಲುಷಿತಮನಸ್ಸಿನವನಾಗಿರುವುದರಿಂದ ನಿನಗೆ ಶಾಪವನ್ನು ಕೊಡುವೆನು. ॥೧೬೨॥

ಯಾರು ಸಾಯಂಕಾಲದಲ್ಲಿ ನಿನ್ನನ್ನು ಪೂಜಿಸುವರೋ ಅಥವಾ ನಿನ್ನನ್ನು ನಾಮಸ್ಮರಣಪೂರ್ವಕವಾಗಿ ಭಜಿಸುವರೋ ಅವರು ಮೊದಲು ಸಂಸಾರದ ಬಂಧನವನ್ನು ಅನುಭವಿಸಿ ಅನಂತರ ನರಕವಾಸವನ್ನು ಹೊಂದಲಿ. ॥೧೬೩॥

|| ಶಿವಢುಂಢಿರುವಾಚ ||

ಇತಿ ಶಪ್ತ್ವಾ ತದಾ ವಿಷ್ಣುಂ ಯಯೌ ಕ್ರೋಧಸಮಾಕುಲಃ ।
ತದ್ದರ್ಶನಸಮುದ್ಭೂತಕ್ರೋಧನಾಶಾಯ ಕಾಶಿಕಾಂ ||೧೬೪||

ಸ ಕಾಶೀಯಾತ್ರಯಾ ಪಾಪಂ ವಿಷ್ಣುದರ್ಶನಜಂ ಮುನಿಃ ।
ನಷ್ಟಂ ದೃಷ್ಟ್ವಾ ಪ್ರಹೃಷ್ಟೋಽಭೂತ್ಪ್ರವಿಷ್ಟಃ ಕಾಶಿಕಾಪುರೀಂ||೧೬೫||

ಇತಿ ತದ್ವಚನಂ ಶ್ರುತ್ವಾ ಸ ಮೃಗೇಂದ್ರೋಽಪಿ ವಿಸ್ಮಿತಃ ।
ಅನ್ಯಂ ಧರ್ಮವರಂ ಬ್ರೂಹಿ ಮಹ್ಯಮಿತ್ಯಾಹ ಸಾದರಂ ||೧೬೬||

|| ಶಿವಢುಂಢಿರುವಾಚ ||

ವೇದೈರ್ಧರ್ಮವರತ್ವೇನ ಶ್ರುತಂ ಶಂಕರಪೂಜನಂ ।
ನ ತಸ್ಮಾದಧಿಕೋ ಧರ್ಮಸ್ಸತ್ಯಮುದ್ಯೋಚ್ಯತೇ ಮಯಾ ||೧೬೭||

ಈ ರೀತಿಯಾಗಿ ಕೋಪದಿಂದ ವಿಷ್ಣುವಿಗೆ ಶಾಪವನ್ನಿತ್ತು, ಆ ವಿಷ್ಣುವಿನ ದರ್ಶನದಿಂದುಂಟಾದ ಕೋಪ ಮತ್ತು ಪಾಪಗಳನ್ನು ಕಳೆದುಕೊಳ್ಳಲು, ಮತ್ತು ಮನಶ್ಶಾಂತಿಯನ್ನು ದೃಢಪಡಿಸಿಕೊಳ್ಳಲು ಕಾಶೀಕ್ಷೇತ್ರಕ್ಕೆ ತೆರಳಿದನು. ||೧೬೪||

ವಿಷ್ಣುವನ್ನು ಕಂಡು ಆತನ ಮೇಲೆ ಕೋಪಕಾರಿದ್ದರಿಂದುಂಟಾದ ಪಾಪವು ಕಾಶೀಕ್ಷೇತ್ರವನ್ನು ಸಂದರ್ಶಿಸಿದ ಮಾತ್ರದಿಂದಲೇ ದೂರವಾಗುವುದೆಂದು ಯೋಚಿಸಿ ಭೃಗುಮುನಿಯು ಕೂಡಲೇ ಕಾಶೀಕ್ಷೇತ್ರವನ್ನು ಸೇರಿದನು. ||೧೬೫||

ಎಂದು ವೃತ್ತಾಂತವನ್ನು ಮುಗಿಸಲು ಸಿಂಹವು ಅವುಗಳನ್ನು ಕೇಳಿ ಪರಮಾಶ್ಚರ್ಯಪಡುತ್ತಾ ತನಗೆ ಮತ್ತೂ ಶ್ರೇಷ್ಠವಾದ ಧರ್ಮವನ್ನು ತಿಳಿಯಪಡಿಸಬೇಕೆಂದು ಶಿವಢುಂಢಿಯನ್ನು ಕೇಳಿಕೊಂಡಿತು. ||೧೬೬||

ಎಲೈ ಮೃಗೇಂದ್ರನೇ, ನಿಜವನ್ನು ಹೇಳುತ್ತೇನೆ ಕೇಳು. ಎಲ್ಲಾ ಧರ್ಮಗಳಿಗಿಂತಲೂ ಶಿವಪೂಜನಧರ್ಮವೇ ಪರಮಶ್ರೇಷ್ಠವೆಂದು ವೇದಗಳೇ ಹೇಳುತ್ತಿವೆ. ಅದಕ್ಕಿಂತ ಹೆಚ್ಚಿನದಾದ ಬೇರೆ ಧರ್ಮವು ಯಾವುದೂ ಕಾಣುವುದಿಲ್ಲ. ಇದು ಸತ್ಯವೆಂದು ತಿಳಿ. ||೧೬೭||

ವಿಹಿತಂ ಶಿವಲಿಂಗಪೂಜನಂ
ಶ್ರುತಿಭಿಃ ಕೇವಲಮಿತ್ಯಘಾಪಹಂ ।
ಕ್ರಿಯತೇ ಶಿವಲಿಂಗಪೂಜನಂ
ದ್ವಿಜವರ್ಯೈರಿತರೈಶ್ಚ ಸಾದರಂ ॥೧೬೮॥

ಲಿಂಗಾರ್ಚನೇನ ವಿಹಿತಂ ನ ಸಮಂ ಶ್ರುತಂ ವಾ
ಪುಣ್ಯಂ ತದೇವ ಸಕಲೇಷ್ಟದಮಿತ್ಯವೈಮಿ ।
ತೇನೈವ ಮುಕ್ತಿಮುಪಯಾಂತಿ ಮೃಗೇಂದ್ರ ತಸ್ಮಾತ್
ಈಶಾರ್ಚನಂ ಪರಮಿತಿ ಪ್ರವದಂತಿ ಧನ್ಯಾಃ ॥೧೬೯॥

ಅನ್ನಾನಾಂ ಪತಿರಿಂದುಖಂಡವಿಲಸನ್ಮೌಳಿಸ್ತ್ವದೀಯಾಂ ಮುದಾ
ದಿವ್ಯಾನ್ನಂ ವಿನಿವೇದಿತಂ ಶಿವ ಮಹಾದೇವೇತಿ ತುಭ್ಯಂ ಮಯಾ ।
ಕೃತ್ವೈವೋದರಪೋಷಣಂ ಮುಹುರುಮಾಕಾಂತೇತಿ ಶರ್ವೇತಿ ವಾ
ತ್ವನ್ನಾಮಸ್ಮರಣೋದ್ಯತೋ ಭವ ಭವಾಮೀತಿ ಸ್ಮರಂತಿ ಧ್ರುವಂ ॥೧೭೦॥

ಶಿವಲಿಂಗಪೂಜೆಯೊಂದೇ ಸಕಲ ಪಾಪಹಾರಿ ಎಂದು ವೇದದಲ್ಲಿ ವಿಹಿತವಾಗಿರುವುದು. ಆದ್ದರಿಂದಲೇ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಎಂಬ ಭೇದವಿಲ್ಲದೆ ಎಲ್ಲರೂ ಭಕ್ತಿಯಿಂದ ಶಿವಲಿಂಗಪೂಜೆಯನ್ನು ಮಾಡುವರು. ||೧೬೮||

ಲಿಂಗಾರ್ಚನೆಗೆ ಸದೃಶವಾದ ಬೇರೆ ಯಾವ ಧರ್ಮವೂ ವಿಹಿತವಾಗಿರುವುದಿಲ್ಲ. ಅಥವಾ ಅಂಥ ಧರ್ಮವನ್ನು ಕೇಳಿಯೂ ಇಲ್ಲ. ಆ ಶಿವಲಿಂಗಾರ್ಚನೆಯೇ ಪರಮ ಪುಣ್ಯತಮವಾದದ್ದು. ಸಕಲ ಇಷ್ಟಾರ್ಥಗಳನ್ನೂ ಪ್ರದಾನಮಾಡಬಲ್ಲುದು. ಎಲೈ ಮೃಗೇಂದ್ರನೇ! ಆ ಶಿವಲಿಂಗಾರ್ಚನೆಯಿಂದಲೇ ಎಲ್ಲರೂ ಮೋಕ್ಷವನ್ನು ಸಂಪಾದಿಸುವರು. ಆದುದರಿಂದ ಶಿವಾರಾಧನೆಯೇ ಪರಮ ಶ್ರೇಷ್ಠವೆಂದು ತಿಳಿ. ||೧೬೯||

ಮಹಾಮಹಿಮರಾದವರು ನಿತ್ಯವೂ ಈರೀತಿ ಶಿವಾರಾಧನೆಯನ್ನು ಮಾಡಿ ಧ್ಯಾನಿಸುವರು. ಶಂಕರನೇ, ನೀನು ಸಕಲ ಆಹಾರವಸ್ತುಗಳಿಗೂ ಅಧಿಪತಿಯಾಗಿರುವೆ. ನಿನಗೆ ದಿವ್ಯಾನ್ನವನ್ನು ನೈವೇದ್ಯಮಾಡುವೆನು. ಶಿವನೇ, ಮಹಾದೇವನೇ, ಇದನ್ನು ಸ್ವೀಕರಿಸಿ ಅನುಗ್ರಹಮಾಡು. ಉಮಾಕಾಂತನೇ! ನಿನ್ನ ಪ್ರಸಾದವನ್ನೇ ನಾನು ಸದಾ ಭುಂಜಿಸುವೆನು. ಭವನೇ? ನಿನ್ನ ಪುಣ್ಯನಾಮಾವಳಿಯನ್ನೇ ಸದಾ ಧ್ಯಾನಿಸಿ

ಏವಂ ಚ ಸರ್ವಭಾವೇನ ಯೇ ಭವಂ ಶರಣಂ ಗತಾಃ ।
ತೇ ಧನ್ಯಾ ಇತಿ ವಿಜ್ಞೇಯಾಸ್ತದನ್ಯೇ ದುರ್ಭಗಾಃ ಸ್ಮೃತಾಃ ॥೧೭೧॥

ಇತಿ ತದ್ವಚನಂ ಶ್ರುತ್ವಾ ಮೃಗೇಂದ್ರೋ ಹೃಷ್ಟಮಾನಸಃ ।
ಮುಕ್ತಾಫಲಾನ್ಯಪಾರಾಣಿ ದದೌ ತಸ್ಮೈ ನರಾಧಿಪ ॥೧೭೨॥

ಉನ್ಮತ್ತಕುಂಭಿಕುಂಭೇಭ್ಯಸ್ತಾನಿ ಜಾತಾನಿ ಭೂಪತೇ ।
ಸಂಚಿತಾನಿ ದದೌ ತಸ್ಮೈ ಸ ಮೃಗೇಂದ್ರಃ ಪ್ರಹೃಷ್ಟಧೀಃ ॥೧೭೩॥

ವಿಲೋಕ್ಯ ತಾನಿ ರಮ್ಯಾಣಿ ಶಿವಘುಂಘಿಸ್ಸ ವಿಸ್ಮಿತಃ ।
ಮುಕ್ತಾಫಲೈರ್ಮಹಾದೇವಂ ಪೂಜಯಾಮಾಸ ಸಾದರಂ ॥೧೭೪॥

ಭಜಿಸುವೆನು. ಹೀಗೆಂದು ಆ ಚಂದ್ರಶೇಖರನನ್ನು ಭಜಿಸುವರು. ಆತನ ನೈವೇದ್ಯ ವನ್ನೇ ಭುಂಜಿಸುತ್ತಾ ಆತನನ್ನೇ ಸದಾ ಧ್ಯಾನಿಸುವರು. ||೧೭೦||

ಹೀಗೆ ಸರ್ವಾಕಾರದಿಂದಲೂ ಸರ್ವವಿಧದಿಂದಲೂ ಯಾರು ಪರಮೇಶ್ವರನೇ ಗತಿ ಎಂದು ಶಿವನನ್ನು ಶರಣು ಹೊಂದುವರೋ ಅವರೇ ಧನ್ಯರು. ಯಾರು ಈ ರೀತಿ ಶಿವನನ್ನು ಶರಣೆನ್ನದೇ ಶಿವಪೂಜಾವರ್ಜಿತರಾಗಿರುತ್ತಾರೆಯೋ ಅವರೇ ದುರ್ಭಗರು, ಪಾಪಿಗಳು ಎಂದು ತಿಳಿಯತಕ್ಕದ್ದು. ||೧೭೧||

ಶಿವಘುಂಘಿಯು ಈರೀತಿಯಾಗಿ ಕಥೆಗಳನ್ನು ಹೇಳಲು ಅವುಗಳನ್ನು ಕೇಳಿ ಆ ಸಿಂಹಕ್ಕೆ ಪರಮಾನಂದವಾಯಿತು. ಆಗ ಅದು ಸಂತೋಷದಿಂದ ಮುತ್ತಿನಹಾರ ಮುಂತಾದ ಆಭರಣಗಳನ್ನು ಶಿವಘುಂಘಿಗೆ ಒಪ್ಪಿಸಿತು. ||೧೭೨||

ಎಲೈ ರಾಜನೇ ! ಆ ಸಿಂಹಕ್ಕೆ ಮುತ್ತುಗಳು ಎಲ್ಲಿಂದ ದೊರೆತವು ಎಂದು ನೀನು ಕೇಳಬಹುದು. ಇವು ಆನೆಯ ಕುಂಭಸ್ಥಳದಲ್ಲಿ ಹುಟ್ಟುವುವು. ಹಿಂದೆ ಆ ಸಿಂಹವು ಆನೆಗಳನ್ನು ಕೊಂದು ಅವುಗಳ ಕುಂಭಸ್ಥಳದಿಂದ ಕಿತ್ತು ಶೇಖರಿಸಿಟ್ಟು ಕೊಂಡಿತ್ತು. ಅವುಗಳನ್ನೆಲ್ಲಾ ಸಂತೋಷದಿಂದ ಶಿವಘುಂಘಿಗೆ ಆಗ ಅರ್ಪಿಸಿತು. ||೧೭೩||

ಆ ಮುತ್ತುಗಳನ್ನು ನೋಡಿ ಶಿವಘುಂಘಿಗೆ ಪರಮಾಶ್ಚರ್ಯವಾಯಿತು. ಆತನು ಆನಂದದಿಂದ ಅವುಗಳೆಲ್ಲವನ್ನೂ ಶಿವಲಿಂಗಕ್ಕೆ ಪೂಜೆಮಾಡಿ ಅರ್ಪಿಸಿದನು. ||೧೭೪||

ತತಸ್ಸ ಮುನಿದಾರೇಭ್ಯೋ ದದೌ ತಾನಿ ಪ್ರಯತ್ನತಃ ।
ಸಂತೋಷಂ ಜನಯನ್ ತೇಷಾಂ ಶಾಂಭವಾನಾಂ ವಿಶೇಷತಃ॥೧೭೫॥

ಸ ಮೃಗೇಂದ್ರಾಜ್ಞಯಾ ತತ್ರ ಚಕಾರ ವಸತಿಂ ಮುನಿಃ ।
ಸಹೈವ ಮುನಿಭಿಸ್ಸರ್ವೈಸ್ಸಕುಟುಂಬೈಸ್ಸಮಾಗತೈಃ ॥೧೭೬॥

ತಾನುವಾಚ ಮೃಗೇಂದ್ರೋಽಪಿ ಶಿವಭಕ್ತಾನ್ ವಿಲೋಕಯನ್ ।
ಭೂತಿರುದ್ರಾಕ್ಷಪೂತಾಂಗಾಂಛಿವನಾಮಜಪೋತ್ಸುಕಾನ್ ॥೧೭೭॥

॥ ಮೃಗೇಂದ್ರ ಉವಾಚ ॥

ಬಿಲ್ವಭೂರುಹಸಂವೀತಮಿದಂ ವನಮಘಾಪಹಂ ।
ಫಲವೃಕ್ಷಾಶ್ಚ ಸಂತ್ಯತ್ರ ಕೋಟಿಶೋಽಪಿ ಮನೋಹರಾಃ ॥೧೭೮॥

ಸರಾಂಸಿ ವಿಮಲಾನ್ಯತ್ರ ಮಧುದ್ರೋಣ್ಯಶ್ಚ ಕೋಟಿಶಃ ।
ವನಗಾವಃ ಕೋಟಿಶೋಽತ್ರ ಧಾನ್ಯಾನಿ ವಿವಿಧಾನ್ಯಪಿ ॥೧೭೯॥

ಅನಂತರ ಆ ಮುತ್ತುಗಳೆಲ್ಲವನ್ನೂ ಮುನಿಪತ್ನಿಯರಿಗೆ ಹಂಚಿಕೊಟ್ಟು ಬಿಟ್ಟನು. ಇದರಿಂದ ಅಲ್ಲಿ ನೆರೆದಿದ್ದ ಮುನಿಗಳಿಗೆಲ್ಲರಿಗೂ ಅತ್ಯಂತ ಸಂತೋಷ ವಾಯಿತು. ಆ ಮುನಿಪತ್ನಿಯರೂ ಪರಮಾನಂದಿತರಾದರು. ॥೧೭೫॥

ಅನಂತರ ಆ ಶಿವಧುಂಧಿಯು ಆ ಸಿಂಹದ ಪ್ರಾರ್ಥನೆಯ ಮೇರೆಗೆ ಅದೇ ಅರಣ್ಯದಲ್ಲಿ ವಾಸಮಾಡುತ್ತಿದ್ದನು. ಆತನ ಜೊತೆಯಲ್ಲಿದ್ದ ಸ್ತ್ರೀಪುರುಷರೆಲ್ಲರೂ ಅಲ್ಲಿಯೇ ವಾಸಿಸುತ್ತಿದ್ದರು. ॥೧೭೬॥

ಹೀಗೆಯೇ ನಿತ್ಯವೂ ಆ ಮುನಿಗಳು ಭಸ್ಮರುದ್ರಾಕ್ಷಮಾಲೆಗಳನ್ನು ಧರಿಸಿ ಕೊಂಡು ಪವಿತ್ರರಾಗಿ ಶಿವಭಕ್ತಿಯಿಂದ ಶಿವನಾಮಗಳನ್ನು ಜಪಿಸುತ್ತಾ ಕಾಲ ಕಳೆಯುತ್ತಿರಲು ಈ ಸಿಂಹವು ಅವರನ್ನು ಕುರಿತು ಒಮ್ಮೆ ಹೀಗೆ ಹೇಳಿತು. ॥೧೭೭॥

ಬಿಲ್ವವೃಕ್ಷಗಳಿರುವ ಈ ವನವು ಪರಮ ಪವಿತ್ರವಾಗಿರುವುದರಿಂದ ಪಾಪ ನಾಶಕವೂ ಆಗಿರುತ್ತದೆ. ಇದೇ ವನದಲ್ಲಿ ಇನ್ನಿತರ ಫಲಗಳನ್ನು ಕೊಡುವ ವೃಕ್ಷ ಗಳೂ ಕೋಟಿಗಟ್ಟಳೆ ಇರುತ್ತವೆ. ॥೧೭೮॥

ಈ ವನದಲ್ಲಿ ಸ್ವಚ್ಛವಾದ ಸರೋವರಗಳೂ ಜಲಾಶಯಗಳೂ ಕಾಣುತ್ತವೆ. ಅನೇಕ ಮದ್ಯದ ಬಾನಿಗಳಿವೆ. ಧಾನ್ಯಗಳೂ ಕಾಡುಗೋವುಗಳೂ ಹೇರಳವಾಗಿವೆ.

ಸ್ವಪ್ರಕಾಶಾಶ್ಚ ಮಣಯಃ ಕೋಟಿಶಸ್ಸಂತಿ ತೇ ನಿಶಿ ।
ಅತಿಪ್ರಭಾಸಮಾಕೀರ್ಣಾಸ್ತೇ ದೀಪಸದೃಶಾಸ್ಸದಾ ॥೧೮೦॥

ನ ಚಾತ್ರ ವ್ಯಾಘ್ರಪೀಡಾಪಿ ಕುಂಭೀಪೀಡಾಪಿ ಸರ್ವಥಾ ।
ಕುಂಭೀನಸೀನಾಂ ಪೀಡಾಪಿ ಚೋರಪೀಡಾ ಕಥಂ ಭವೇತ್ ॥೧೮೧॥

ಶಿವಾರ್ಚನಾರ್ಹಂ ವನಮೇತದೇವ
ಶಂಗಾನಿ ಲಿಂಗಾನ್ಯಮಲಾನಿ ತಾನಿ ।
ತುಂಗಾನಿ ಬಿಲ್ವೀತರುಮೂಲಭಾಗೇ
ತಿಷ್ಠಂತ್ಯಪಾರಾಣಿ ಮುನೀಂದ್ರ ಪಶ್ಯ ॥೧೮೨॥

ಇದಂ ಮಹದ್ಬಿಲ್ವವನಂ ಕದಾಪಿ
ವಿವರ್ಜಿತಂ ಬಿಲ್ವದಳೈರ್ನ ನೂನಂ ।
ಅಖಂಡಬಿಲ್ವೀದಳಭೂರುಹಾಸ್ತೇ
ಪಶ್ಯಾಧುನಾ ಪರ್ವತಸಾನುಭಾಗೇ ॥೧೮೩॥

ರಾತ್ರಿಯಲ್ಲಿ ಬೆಳಕನ್ನು ಕೊಡುವ ಸ್ವಪ್ರಕಾಶಗಳಾದ ಜ್ಯೋತಿಷ್ಮತೀ ಮಣಿಗಳೂ ಬೇಕಾದಷ್ಟಿವೆ. ಅವುಗಳು ದೀಪದಂತೆಯೇ ತೋರುತ್ತವೆ. ಹೀಗೆ ಮನುಷ್ಯರ ವಾಸಕ್ಕೆ ಬೇಕಾದ ಸಕಲ ಅನುಕೂಲಗಳೂ ಇಲ್ಲಿರುತ್ತವೆ. ॥೧೭೯-೧೮೦॥

ಇಲ್ಲಿ ಹುಲಿಯ ಭಯವಿಲ್ಲ. ಕಾಡಾನೆಗಳಿಂದ ಹೆದರಿಕೆ ಇಲ್ಲ. ಸರ್ಪಗಳ ಕಾಟವಿಲ್ಲ. ಕಳ್ಳರಂತೂ ಇಲ್ಲಿ ಸುಳಿಯುವುದೇ ಇಲ್ಲ. ॥೧೮೧॥

ಈ ವನದಲ್ಲಿ ಶಿವಾರ್ಚನೆಯನ್ನು ಮಾಡುವುದಕ್ಕೆ ಎಲ್ಲಾ ಅನುಕೂಲಗಳೂ ಇರುತ್ತವೆ. ಇಲ್ಲಿ ಬೇಕಾದಷ್ಟು ಬಿಲ್ವವೃಕ್ಷಗಳಿವೆ. ಅವುಗಳ ಮೂಲದಲ್ಲಿ ಅನೇಕ ಶಿವಲಿಂಗಗಳೂ ಕಾಣುತ್ತವೆ. ಆದುದರಿಂದ ಈ ವನವೇ ಶಿವಾರ್ಚನೆಗೆ ಯೋಗ್ಯವಾದ ಸ್ಥಳವಾಗಿರುವುದು. ॥೧೮೨॥

ಈ ವನವು ಬಹಳ ವಿಸ್ತಾರವಾಗಿರುವುದರಿಂದ ಬಿಲ್ವದಳವು ಸದಾ ಸಿಕ್ಕುವುದು. ಇಲ್ಲಿ ಯಾವಾಗಲೂ ಬಿಲ್ವಪತ್ರೆ ಇಲ್ಲದೇ ಇರುವುದಿಲ್ಲ. ಒಂದಲ್ಲ ಒಂದು ಬಿಲ್ವವೃಕ್ಷದಲ್ಲಿ ಸದಾ ಅಚ್ಛಿದ್ರವಾದ ಬಿಲ್ವಪತ್ರೆಗಳು ಹೇರಳವಾಗಿ ಸಿಕ್ಕುವುವು. ಆ ಬೆಟ್ಟದ ತಪ್ಪಲಲ್ಲಿ ದಟ್ಟವಾಗಿ ಪತ್ರೆಗಳುಳ್ಳ ಅನೇಕ ಬಿಲ್ವವೃಕ್ಷಗಳಿರುತ್ತವೆ. ॥೧೮೩॥

ಗಂಗೇಯಮುತ್ತುಂಗತರಂಗಭಂಗಾ
ತಾನ್ಯೇವ ತಾವತ್ಕದಲೀವನಾನಿ ।
ಪಕ್ವಾನ್ಯಸಾರಾಣಿ ಫಲಾನಿ ತೇಷು
ಕಪಿತ್ಥಪೀನಾನಿ ವನಾನಿ ಪಶ್ಯ ॥೧೮೪॥

ಖರ್ಜೂರಸಾರ್ಯೈರಪಿ ಬೀಜಪೂರ್ಯೈಃ
ತೈರ್ನಾರಿಕೇಳ್ಯೈರಪಿ ಸಂವೃತಾನಿ ।
ವನಾನಿ ಜಂಬೀರಫಲಾವೃತಾನಿ
ಸ ಶೃಂಗಬೇರ್ಯೈರಪಿ ಸಂವೃತಾನಿ ॥೧೮೫॥

ಏತಾದೃಶಂ ನಾಸ್ತಿ ವನಂ ಮುನೀಶ
ಕ್ವಾಪೀತಿ ಮನ್ಯೇ ಭುವನತ್ರಯೇಽಪಿ ।
ನ ಶಾಂಭವಾಗ್ರೇಸರವಾಸಯೋಗ್ಯಂ
ಸ್ಥಲಂ ಚ ಲೋಕೇ ಕಿಲ ಕಾಮದಂ ಚ ॥೧೮೬॥

ಇಲ್ಲಿ ಗಂಗಾನದಿಯು ಸುಂದರವಾದ ಅಲೆಗಳನ್ನು ಓಲಾಡಿಸುತ್ತಾ ಸಾಂದ್ರ ಗಂಭೀರವಾಗಿ ಹರಿಯುತ್ತಿದೆ. ಅದೋ ಅಲ್ಲಿ ದೊಡ್ಡಬಾಳೆಯ ತೋಟವಿದೆ. ಅವುಗಳಲ್ಲಿ ಬೇಕಾದಷ್ಟು ಪಕ್ವವಾದ ಬಾಳೆಹಣ್ಣುಗಳು ದೊರೆಯುವುವು. ಅಲ್ಲದೇ ಈ ವನದಲ್ಲಿ ಬೇಲದಮರಗಳು ದಪ್ಪವಾದ ಬೇಲದಹಣ್ಣುಗಳನ್ನು ನೀಡುವುವು. ॥೧೮೪॥

ಇಲ್ಲಿ ನೋಡಿರಿ. ಖರ್ಜೂರದ ಫಲಗಳು, ಸೀಬೆಹಣ್ಣುಗಳು, ತೆಂಗಿನಕಾಯಿಗಳು, ನಿಂಬೆಹಣ್ಣುಗಳು ಮತ್ತು ಔಷಧಕ್ಕೆ ಬೇಕಾಗುವ ಹಸಿಶುಂಠಿಗಳೂ ಇಲ್ಲಿ ದೊರೆಯುತ್ತವೆ. ॥೧೮೫॥

ಇಷ್ಟು ವಸ್ತುಸಮೃದ್ಧವಾದ ವನವು ಮತ್ತೆಲ್ಲಿಯೂ ಸಿಕ್ಕುವುದಿಲ್ಲವೆಂದು ಹೇಳಬಹುದು. ಮಹಾತ್ಮರು ವಾಸಮಾಡಲು ಸಾಕಾದಷ್ಟು ಅನುಕೂಲತೆಗಳಿರುವುವು. ಇದರ ಹಾಗೆ ವಾಸಯೋಗ್ಯವಾದ ಮತ್ತು ಇಷ್ಟಾರ್ಥಪ್ರದವಾದ ಸ್ಥಾನವು ಮತ್ತೆಲ್ಲಿಯೂ ಇರುವುದಿಲ್ಲ. ॥೧೮೬॥

ವಯಂ ನ ತಾವನ್ಮೃಗಯೋನಿಜಾತಾಃ
ಪರಂ ತು ಗಾಂಧರ್ವರವಾಃ ಪ್ರಸನ್ನಾಃ ।
ಅನೇನ ವೇಷೇಣ ಶಿವಾಲಯೇಽಸ್ಮಿನ್
ನಿತ್ಯಂ ವಸಾಮಶ್ಶಿವಪೂಜನಾಯ ||೧೮೭||

ಅನ್ಯೈಸ್ತಾವದ್ ಜ್ಞಾಯತೇ ನಾಸ್ಮದೀಯಂ
ತತ್ತ್ವಂ ತುಭ್ಯಂ ಜ್ಞಾಪನೀಯಂ ವಿಶಿಷ್ಯ ।
ಶೈವೋಽಸೀತಿ ಶ್ರೀಮಹಾದೇವಪೂಜಾ
ಮಸ್ಮಿನ್ ಲಿಂಗೇ ಸಾವಧಾನಂ ಕುರುಷ್ವ ||೧೮೮||

|| ಸತ್ಯಮೂರ್ತಿರುವಾಚ ||

ಇತ್ಯುಕ್ತಂ ತದ್ವಚಶ್ಶ್ರುತ್ವಾ ಪ್ರಹೃಷ್ಟಾಸ್ತೇ ಮುನೀಶ್ವರಾಃ ।
ಶಿವಘುಂಘಿಪ್ರಭೃತಯಶ್ಚಕ್ರುರ್ವಾಸಂ ಮಹಾವನೇ ||೧೮೯||

ನಾವು ಸಹ ಕೇವಲ ಮೂಢವಾದ ಪಶುಪ್ರಾಣಿಗಳಲ್ಲ. ನಾವು ಗಂಧರ್ವರು. ನಿತ್ಯವೂ ಹೊತ್ತುಹೊತ್ತಿಗೆ ಸರಿಯಾಗಿ ಶಿವಾರ್ಚನೆಯನ್ನು ಮಾಡಲು ಅನುಕೂಲವಾಗುವಂತೆ ಇಲ್ಲಿ ಈ ವೇಷವನ್ನು ಧರಿಸಿಕೊಂಡಿರುತ್ತೇವೆ. ಆದರೆ ನಿತ್ಯವೂ ಈ ಶಿವಮಂದಿರದಲ್ಲಿ ಶಿವಾರ್ಚನೆಯನ್ನು ಮಾಡುತ್ತೇವೆ. ||೧೮೭||

ಈ ನಮ್ಮ ಯಥಾರ್ಥವಾದ ಸ್ವರೂಪಜ್ಞಾನವು ಯಾರಿಗೂ ತಿಳಿದಿರುವುದಿಲ್ಲ. ಬಹಳ ಗೋಪ್ಯವಾಗಿ ವರ್ತಿಸುತ್ತಿರುವೆವು. ಆದರೆ ನೀನು ಪರಮ ಶಿವಭಕ್ತನು. ನಿನ್ನಲ್ಲಿ ಏನನ್ನು ಮರೆಮಾಚುವುದೂ ಯೋಗ್ಯವಲ್ಲವೆಂದು ನಿನಗೆ ಹೇಳಿದ್ದೇನೆ. ಆದುದರಿಂದ ನೀನು ನಿರ್ಭೀತಿಯಿಂದ ಇಲ್ಲಿಯೇ ವಾಸವಾಗಿದ್ದು ನಿನ್ನಿಷ್ಟದಂತೆ ಈ ಶಿವಲಿಂಗದಲ್ಲಿ ಶಿವಾರಾಧನೆಯನ್ನು ಮಾಡುತ್ತಿರು. ||೧೮೮||

ಆ ಸಿಂಹದ ಮಾತನ್ನು ಕೇಳಿ ಮುನಿಗಳೆಲ್ಲರಿಗೂ ಬಹಳ ಆನಂದವಾಯಿತು. ಅವರೆಲ್ಲರೂ ನಿರ್ಭೀತರಾಗಿ ಆ ಮಹಾರಣ್ಯದಲ್ಲಿಯೇ ವಾಸವಾಗಿದ್ದರು. ||೧೮೯||

ಬಹುಕಾಲಮುಷಿತ್ವಾ ತೇ ಮೃಗೇಂದ್ರವಚನಾದ್ವನೇ ।
ಸಂತೋಷಂ ಪರಮಂ ಪ್ರಾಪುಃ ಕೃತ್ವಾ ಬಿಲ್ವೈಶ್ಶಿವಾರ್ಚನಂ ॥೯೦॥

ಸಂತೋಷಂ ಜನಯಂತಸ್ತೇ ಮೃಗೇಂದ್ರಾಯ ಮಹಾತ್ಮನೇ ।
ಮಹಾದೇವಕಥಾಲಾಪೈಃ ಪುತ್ರಪೌತ್ರಾದಿಸಂಯುತಾಃ ॥೯೧॥

ತತಃಪರಂ ಮಹಾದೇವಂ ಪೂಜಯಿತ್ವಾ ಕದಾಚನ ।
ಶಿವಢುಂಢಿರುವಾಚೇದಂ ವಚನಂ ಶಂಕರಾಲಯೇ ॥೯೨॥

ಅಗ್ರೇ ಕಾಲಃ ಕಥಂ ಭಾವಿ ಕಾಲಕಾಲಾರ್ಚನೇ ಮತಿಃ ।
ಭವಿಷ್ಯತಿ ಮಯಾ ತತ್ವಂ ನ ಮಯಾ ಜ್ಞಾಯತೇಽಧುನಾ ॥೯೩॥

ನಾರಾಯಣಾದ್ಯಾಸ್ಸರ್ವೇಽಪಿ ಯಯಾ ಶಂಕರಮಾಯಯಾ ।
ಮೋಹಂ ಪ್ರಾಪ್ತಾಸ್ಸುರಾಸ್ಸರ್ವೇ ಗಣನಾ ತತ್ರ ಕಾ ಮಮ ॥೯೪॥

ಸಿಂಹದ ಪ್ರಾರ್ಥನೆ ಮೇರೆಗೆ ಶಿವಢುಂಢಿಯೇ ಮೊದಲಾದ ಆ ಮುನಿಗಳು ಪ್ರತಿದಿನವೂ ಯಥೇಚ್ಛವಾಗಿ ಬಿಲ್ವಪತ್ರೆಗಳಿಂದ ಶಿವಾರ್ಚನೆಯನ್ನು ಮಾಡಿ ಆನಂದ ಪಡುತ್ತಾ ಅನೇಕ ದಿವಸಗಳನ್ನು ಅಲ್ಲಿಯೇ ಕಳೆದರು. ೯೦॥

ಆಗಿಂದಾಗ ಆ ಮುನಿಗಳು ಶಿವಕಥೆಗಳನ್ನೂ ಶಿವಪ್ರಸಂಗಗಳನ್ನೂ ನಡೆಯಿಸಿ ಆ ಮೃಗರಾಜನಾದ ಸಿಂಹಕ್ಕೆ ಸಂತೋಷವನ್ನುಂಟುಮಾಡುತ್ತಾ ತಾವೂ ಪತ್ನೀಪುತ್ರ ಪೌತ್ರಾದಿಗಳೊಂದಿಗೆ ಆನಂದವಾಗಿದ್ದರು. ॥೯೧॥

ಹೀಗೆಯೇ ಕಾಲವನ್ನು ಕಳೆಯುತ್ತಿರಲು ಒಂದುದಿನ ಶಿವಢುಂಢಿಯು ಶಿವ ಮಂದಿರದಲ್ಲಿ ಶಿವಾರ್ಚನೆಯನ್ನು ಮಾಡಿದ ಬಳಿಕ ಹೀಗೆ ಅಭಿಪ್ರಾಯಪಟ್ಟನು. ॥೯೨॥

ಕಾಲವು ಒಂದೇ ಸಮನಾಗಿ ಕಳೆಯುತ್ತಿದೆ. ಆದರೆ ಮುಂದೆ ಎಂತಹ ವಿಷಮಕಾಲವು ಬರುವುದೋ ತಿಳಿದವರಾರು ? ಅಂತಹ ಕಾಲದಲ್ಲಿ ಶಿವಾರ್ಚನೆಯ ಬುದ್ಧಿಯು ಉಂಟಾಗುವುದೋ ಅಥವಾ ಇಲ್ಲವೋ ಹೇಗೆ ಹೇಳುವುದಕ್ಕಾದೀತು ? ಆ ಭವಿಷ್ಯತ್ಕಾಲವು ಹೇಗೆ ನಡೆಯುವುದೋ ಅದು ನನಗೆ ತಿಳಿಯದಾಗಿದೆ. ॥೯೩॥

ಅಂಥ ಮಹಾವಿಷ್ಣುವೇ ಮುಂತಾದವರೂ ಕೂಡ ಶಿವಮಾಯೆಯಿಂದ ಆವೃತ ರಾಗಿರುತ್ತಾರೆ. ದೇವತೆಗಳಿಗೂ ಸಹ ಆ ಮಾಯಾಮೋಹವಿರುತ್ತದೆ. ಅಂದಮೇಲೆ

ಶಿವಾರ್ಚನಂ ಪರಿತ್ಯಜ್ಯ ಸ್ಥಿತಾಃ ಪೂರ್ವಂ ಸುರಾಸ್ತತಃ ।
ಕುಯೋನಿಮಪಿ ಸಂಪ್ರಾಪ್ತಾಃ ದುಃಖಂ ಪ್ರಾಪ್ತಮನೇಕಧಾ ॥೧೯೫॥

ನಾರಾಯಣೋಽಪಿ ಭೃಗುಣಾ ಶಪ್ತಸ್ತ್ಯಕ್ತಶಿವಾರ್ಚನಃ ।
ತಸ್ಮಾದವಾಚ್ಯೋ ಜಾತೋಽಪಿ ಪ್ರದೋಷೇಷು ವಿಶೇಷತಃ ॥೧೯೬॥

ಶಿವಮಾಯಾವಿಮೋಹಿತಾನಾಂ ಸುರಾಣಾಮಪಿ ದುರ್ಗತಿಃ ।
ಭವತ್ಯೇವ ತತಸ್ಸಾ ತು ಶಿವಮಾಯಾ ಬಲೀಯಸೀ ॥೧೯೭॥

ಯಾವನ್ನ ಮೋಹಾಕುಲಮಸ್ಯ ಚಿತ್ತಂ
ತಾವದ್ವಿಶೇಷೇಣ ಮನೇ ವಿಭೂತ್ಯಾ ।
ಪೂತೈರ್ನವೈರ್ಬಿಲ್ವದಳೈರ್ಮಹೇಶಂ
ಸಮರ್ಚಯಿತ್ವಾ ವಿಜಹಾಮಿ ದೇಹಂ ॥೧೯೮॥

ನನ್ನಂಥ ಅಲ್ಪನ ಪಾಡೇನು. ಮುಂದೆಲ್ಲಾದರೂ ನಾನೂ ಮಾಯೆಗೆ ಒಳಗಾದರೆ ನನ್ನ ಗತಿ ಏನಾಗುವುದೋ ಏನೋ ? ||೧೯೪||

ಆ ಶಿವಮಹಾಮಾಯೆಯಿಂದ ಒಂದುಸಲ ಮೂಢರಾಗಿ ದೇವತೆಗಳು ಹೀನ ಜನ್ಮದಲ್ಲಿ ಜನ್ಮತಳೆದು ಶಿವಾರ್ಚನೆಗೆ ಅವಕಾಶವಿಲ್ಲದೇ ಅದನ್ನು ತ್ಯಾಗಮಾಡಿ ಅನೇಕ ದುಃಖಗಳನ್ನು ಅನುಭವಿಸಿದರು. ||೧೯೫||

ಆ ಶಿವಮಾಯೆಗೆ ಒಳಗಾಗಿ ವಿಷ್ಣುವೂ ಸಹ ಶಿವಪೂಜೆಯನ್ನು ತ್ಯಾಗಮಾಡಿ ಭೃಗುಮುನಿಯಿಂದ ಶಾಪಪಡೆದನು. ಆದರ ಫಲವಾಗಿ ಪ್ರದೋಷ ಸಮಯದಲ್ಲಿ ವಿಷ್ಣುವು ಅಸ್ಪೃಶ್ಯನೂ ಅವಾಚ್ಯನೂ ಆದನು. ಶಿವಮಾಯೆಯು ಘಟಿಸಿದರೆ ಹೀಗೆಯೇ ಅನೇಕ ಅನರ್ಥಗಳು ಸಂಘಟಿತವಾಗುವುವು. ||೧೯೬||

ಎಂಥ ದೇವತೆಗಳೇ ಆಗಿರಲಿ, ಅವರು ಶಿವಮಾಯೆಯ ಜಾಲದಲ್ಲಿ ಬಿದ್ದು ಮೋಹಿತರಾದರೆ ಅವರಿಗೆ ದುರ್ಗತಿಯೇ ಒದಗುವುದು. ಆದುದರಿಂದ ಅದನ್ನು ಮೀರುವುದು ದುಸ್ಸಾಧ್ಯ. ಶಿವಮಾಯೆಯು ಅಂತಹ ಮಹತ್ತರವಾದುದು. ||೧೯೭||

ಆದುದರಿಂದ ನನ್ನ ಮನಸ್ಸು ಆ ಶಿವಮಾಯೆಗೆ ಒಳಗಾಗುವ ಮೊದಲೇ, ಅಜ್ಞಾನ, ಮೋಹ ಇವುಗಳ ಬಲೆಗೆ ಬೀಳುವುದಕ್ಕಿಂತ ಮುಂಚಿತವಾಗಿಯೇ ಈ ದೇಹವನ್ನು ಬಿಡುವೆನು. ಪ್ರಥಮತಃ ಭಸ್ಮರುದ್ರಾಕ್ಷಮಾಲೆಗಳಿಂದ ಪವಿತ್ರನಾಗಿ

॥ ಸತ್ಯಮೂರ್ತಿರುವಾಚ ॥

ಇತ್ಯಾಲೋಚ್ಯ ಸ ಪೂತಾತ್ಮಾ ಪೂಜಯಾಮಾಸ ಶಂಕರಂ ।
ಬಿಲ್ವೀದಳೈಃ ಫಲೈಃ ಪುಷ್ಪೈರ್ಧೂಪದೀಪಾದಿಭಿರ್ಮುಹುಃ ॥೧೯೯॥

ತತಸ್ಸರ್ವೇಷು ಪಶ್ಯತ್ಸು ಜಹೌ ಪ್ರಾಣಾನ್ಮುನೀಶ್ವರಃ ।
ಯೋಗೇನೈವ ಮಹೇಶಾಯ ಪ್ರಾಣಾನುಚ್ಚಾರಯಂಛಿವಂ ॥೨೦೦॥

ತದಾನೀಂ ಪ್ರೇಷಯಾಮಾಸ ವಿಮಾನಂ ವರಮೀಶ್ವರಃ ।
ತದ್ವಿಮಾನಂ ಸಮಾರುಹ್ಯ ಶಿವಢುಂಢಿರ್ಯಯೌ ಶಿವಂ ॥೨೦೧॥

ಮಂದಾರಕುಸುಮಾಸಾರಸ್ತದಾ ಸಮಭವನ್ನೃಪ ।
ದೇವದುಂದುಭಯೋ ನೇದುರ್ಜಗುರ್ಗಂಧರ್ವಗಾಯಕಾಃ ॥೨೦೨॥

ಸುರಾಶ್ಚ ದೃಷ್ಟ್ವಾ ತಂ ಹೃಷ್ಟಾಸ್ಸರ್ವೇ ನಾರಾಯಣಾದಯಃ ।
ಶಿವಢುಂಢಿರ್ಮಹಾಪುಣ್ಯ ಇತಿ ತೇ ನೃಪಸತ್ತಮ ॥೨೦೩॥

ಪರಮೇಶ್ವರನನ್ನು ಬಿಲ್ವಾದಿಗಳಿಂದ ಯಥೇಚ್ಛವಾಗಿ ಪೂಜಿಸಿ ಅನಂತರ ಈ ಶರೀರವನ್ನು ತ್ಯಾಗಮಾಡುವೆನು. ॥೧೯೮॥

ಹೀಗೆಂದು ಶಿವಢುಂಢಿಯು ತಾನು ಆಲೋಚಿಸಿದ್ದನ್ನು ಹೇಳಿ, ಕೂಡಲೇ ಬಿಲ್ವಪತ್ರೆ, ಪುಷ್ಪ, ಫಲ, ಧೂಪ ಮತ್ತು ದೀಪ ಇವುಗಳಿಂದ ಮನಸ್ವಿಯಾಗಿ ಆನಂದವಾಗುವ ವರೆಗೂ ಶಿವಪೂಜೆಯನ್ನು ನಡೆಸಿದನು. ॥೧೯೯॥

ಅನಂತರ ಎಲ್ಲಾ ಮುನಿಗಳೂ ನೋಡುತ್ತಿರುವಾಗಲೇ ಶಿವಢುಂಢಿಯು ಶಿವನನ್ನೇ ಧ್ಯಾನಿಸುತ್ತಾ ಯೋಗಸಿದ್ಧಿಯಿಂದ ಪ್ರಾಣಗಳನ್ನು ತ್ಯಜಿಸಿದನು. ॥೨೦೦॥

ಆಗ ಶಂಕರನು ಶಿವಢುಂಢಿಗಾಗಿ ಶ್ರೇಷ್ಠವಾದ ವಿಮಾನವನ್ನು ಕಳುಹಿಸಿದನು. ಶಿವಢುಂಢಿಯು ಆ ವಿಮಾನವನ್ನೇರಿ ಶಿವಧಾಮಕ್ಕೆ ತೆರಳಿದನು. ॥೨೦೧॥

ಆಗ ದೇವಲೋಕದಿಂದ ಮಂದಾರಾದಿ ದಿವ್ಯ ಕುಸುಮವೃಷ್ಟಿಯು ಸುರಿಯಿತು. ದುಂದುಭಿಯೇ ಮೊದಲಾದ ದೇವವಾದ್ಯಗಳು ಮೊಳಗಿದವು. ಗಾಯಕರಾದ ಗಂಧರ್ವರು ದಿವ್ಯ ಗಾನಮಾಡಿದರು. ॥೨೦೨॥

ವಿಷ್ಣುವೇ ಮೊದಲಾದ ಎಲ್ಲಾ ದೇವತೆಗಳೂ ಇವನನ್ನು ನೋಡಿ ಆನಂದದಿಂದ ಶಿವಢುಂಢಿಯೇ ಮಹಾಪುಣ್ಯಾತ್ಮನು ಎಂದು ಅನೇಕಪ್ರಕಾರವಾಗಿ ಶ್ಲಾಘಿಸಿದರು. ॥೨೦೩॥

ತತಃ ಪರಂ ತದ್ವನಪಾಲಕೋಽಪಿ
ಶ್ರುತ್ವಾ ಕದಾಚಿಚ್ಛಿವಢುಂಢಿವಾರ್ತಾಂ ।
ಸ ದುಃಖಿತಸ್ತಾದೃಶಪುಣ್ಯಮೂರ್ತಿಃ
ನ ಕ್ವಾಪಿ ದೃಷ್ಟೋಽಸ್ತಿ ಮಯೇತಿ ರಾರ್ಜ ॥೨೦೪॥

ತತಃ ಪರಂ ಸೋಽಪಿ ಚ ಬಿಲ್ವಮಧ್ಯೇ
ಲಿಂಗಾನಿ ದೃಷ್ಟ್ವಾತಿಮನೋಹರಾಣಿ ।
ಚಕಾರ ಪೂಜಾಂ ನವಬಿಲ್ವಪತ್ರೈಃ
ಸ್ವಾರೋಪಿತಾಪಾರವನಪ್ರಭೂತೈಃ ॥೨೦೫॥

ತತಃ ಸ್ವಪುತ್ರಾನಾಹೂಯ ಸ ಏವ ವನಪಾಲಕಃ ।
ತಾನುವಾಚ ಪ್ರಯತ್ನೇನ ಭಾರ್ಯಾಂ ಕನ್ಯಾಂ ಚ ಸೋದರಾ ॥೨೦೬॥

॥ ವನಪಾಲಕ ಉವಾಚ ॥

ಏತೇ ಬಿಲ್ವಾಃ ಪೋಷಿತಾಃ ಪ್ರಾಪುರೇವಂ
ವೃದ್ಧಿಂ ಸಿದ್ಧಿಸ್ತಾವದೇತೈರ್ಮಮಾಪಿ ।

ಕ್ರಮೇಣ ಈ ಶಿವಢುಂಢಿಯ ಮರಣವಾರ್ತೆಯು ಆ ಮೊದಲಿನ ಬಿಲ್ವವನ ಪಾಲಕನಿಗೂ ತಿಳಿಯಿತು. ಈ ವೃತ್ತಾಂತವನ್ನು ಕೇಳಿ ಆ ವನಪಾಲಕನು ಅತ್ಯಂತ ದುಃಖಿತನಾದನು. ಇಂಥ ಪರಮ ಪುಣ್ಯಾತ್ಮನನ್ನು ಎಲ್ಲಿಯೂ ನೋಡಿಲ್ಲವೆಂದು ನೆನೆದು ನೆನೆದು ಆತನು ಬಹುವಾಗಿ ಶೋಕಿಸಿದನು. ॥೨೦೪॥

ಅನಂತರ ಆತನು ತನ್ನ ಬಿಲ್ವವನದಲ್ಲಿ ವೃಕ್ಷಮೂಲಗಳಲ್ಲಿದ್ದ ಮನೋಹರ ವಾದ ಶಿವಲಿಂಗಗಳನ್ನು ನೋಡಿ ಅವುಗಳಿಗೆ ತಾನೇ ಬೆಳೆಯಿಸಿದ ಬಿಲ್ವವೃಕ್ಷಗಳಿಂದ ಪತ್ರೆಗಳನ್ನು ತಂದು ಯಥೇಷ್ಟವಾಗಿ ಪೂಜೆ ಮಾಡಿದನು. ॥೨೦೫॥

ಹೀಗೆ ಪೂಜೆಯು ಪೂರೈಸಿದ ಬಳಿಕ ಆತನು ತನ್ನ ಹೆಂಡತಿ ಮಕ್ಕಳನ್ನೂ ಸಹೋದರರನ್ನೂ ಎಲ್ಲಾ ತನ್ನ ಕುಟುಂಬದವರನ್ನೂ ಕರೆದು ಹೀಗೆ ಹೇಳಿದನು. ॥೨೦೬॥

" ಇಲ್ಲಿ ನೋಡಿರಿ. ಅನೇಕ ಬಿಲ್ವವೃಕ್ಷಗಳಿವೆ. ಇವುಗಳನ್ನು ಸ್ವತಃ ನಾನು ಬೆಳೆಯಿಸಿ ಕಾಪಾಡಿದ್ದೇನೆ. ಇವುಗಳ ಸೇವೆಯಿಂದಲೇ ನನಗೆ ಯೋಗಸಿದ್ಧಿಯೂ

ಏತೇ ಸರ್ವೇ ಪೋಷಣೀಯಾಃ ಪ್ರಯತ್ನೈಃ
ಲಿಂಗಾನ್ಯೇತಾನ್ಯರ್ಚನೀಯಾನಿ ನಿತ್ಯಂ ॥೨೦೭॥

ಯದ್ಯತ್ರ ಮುನಯಃ ಕೇಽಪಿ ಬಿಲ್ವಪತ್ರಾರ್ಥಮಾದರಾತ್ ।
ನ ತೇಷಾಂ ವಾರಣಂ ಕಾರ್ಯಂ ತದಾ ಸರ್ವಾತ್ಮನಾ ಖಲು ॥೨೦೮॥

ತೇ ತಾವದರ್ಚಯಿಷ್ಯಂತಿ ಬಿಲ್ವಪತ್ರೈರ್ಮನೋಹರೈಃ ।
ಶಾಂಗಲಿಂಗಾನಿ ತುಂಗಾನಿ ಗಂಗಾತೀರೇ ಮನೋಹರೇ ॥೨೦೯॥

ಅದ್ಯ ಪ್ರಭೃತಿ ಕಸ್ಯಾಪಿ ಮಾ ಬಿಲ್ವಸ್ಯಾಸ್ತು ಶೋಷಣಂ ।
ಕರ್ತವ್ಯಂ ಪೋಷಣಂ ತೇಷಾಂ ಛೇದನಂ ಮಾಸ್ತು ಸರ್ವಥಾ ॥೨೧೦॥

ಬಾಲಬಿಲ್ವತರವೋಽಪಿ ಕೋಟಿಶಃ
ಪೋಷಿತಾಃ ಖಲು ವನೇ ವನ್ಯೈರ್ಮಯಾ ।
ತೇ ಸದಾಽಪಿ ಜಲದಾನತಃ ಪುನಃ
ವೃದ್ಧಿಮೇವಮುಪಯಾಂತು ಬಾಲಕಾಃ ॥೨೧೧॥

ಲಭಿಸಿರುವುದು. ಆದುದರಿಂದ ಅವು ಮಹಾಪುಣ್ಯತಮವಾದವುಗಳು. ನೀವು ಇನ್ನು ಮುಂದೆ ಇವುಗಳನ್ನು ಎಚ್ಚರಿಕೆಯಿಂದ ಕಾಪಾಡಿರಿ. ಮತ್ತು ಈ ಶಿವಲಿಂಗಗಳನ್ನು ನಿತ್ಯವೂ ಪೂಜಿಸಿರಿ. ||೨೦೭||

ಈ ವನಕ್ಕೆ ಯಾರಾದರೂ ಮುನಿಗಳು ಬಿಲ್ವಪತ್ರೆಗಳಿಗಾಗಿ ಬಂದರೆ ಅವರನ್ನು ತಡೆಯಕೂಡದು. ಅವರನ್ನು ಸ್ವಲ್ಪವೂ ತೊಂದರೆಗೆ ಈಡುಮಾಡಬಾರದು. ||೨೦೮||

ಆ ಮುನಿಗಳು ಇಲ್ಲಿಗೆ ಬಂದಾಗ ಇಲ್ಲಿರುವ ಶಿವಲಿಂಗಗಳಿಗೆಲ್ಲಾ ಬಿಲ್ವಪತ್ರೆಗಳಿಂದ ಯಥೇಷ್ಟವಾಗಿ ಪೂಜೆಗಳನ್ನು ನಡೆಸುವರು. ||೨೦೯||

ಇನ್ನು ಮುಂದೆ ಒಂದು ಬಿಲ್ವವೃಕ್ಷವೂ ನೀರಿಲ್ಲದೆ ಒಣಗದಂತೆ ನೋಡಿಕೊಂಡು ಕಾಲಕಾಲಕ್ಕೆ ನೀರನ್ನು ಹಾಯಿಸಿ ಇವುಗಳನ್ನು ನೀವು ಕಾಪಾಡಬೇಕು. ಯಾವಾಗಲೂ ಯಾವ ಮರವನ್ನೂ ಕಡಿಯಬೇಡಿರಿ. ಕತ್ತರಿಸಬೇಡಿರಿ. ||೨೧೦||

ಎಲೈ ಪುತ್ರರೇ, ನಾನು ಅನೇಕ ಬಿಲ್ವಸಸಿಗಳನ್ನೂ ಗಿಡಗಳನ್ನೂ ನೀರನ್ನು ಹಾಕಿ ಕಾಪಾಡುತ್ತ ಬಂದಿದ್ದೇನೆ. ನೀವು ಸಹ ಅವುಗಳಿಗೆ ನೀರನ್ನು ತಪ್ಪದೇ ಹಾಕುತ್ತ ಬನ್ನಿರಿ. ಆ ಗಿಡಗಳು ದಿನದಿಂದ ದಿನಕ್ಕೆ ಅಭಿವೃದ್ಧಿಯನ್ನು ಹೊಂದಲಿ. ||೨೧೧||

ಏತದ್ವಿಯೋಗೇನ ಮತಿರ್ಮಮಾಪಿ
ಸಂಜಾಯತೇ ಜಾತು ತನುರ್ವ್ಯಯೋಽಪಿ ।
ಅತ್ರಾಸ್ತು ಮೇ ಪಾವನಮೇತದೇವ
ವನಂ ಶಿವಾರಾಧನಸಾಧನಂ ಮೇ ॥೨೧೨॥

ಇತ್ಯುಕ್ತ್ವಾ ತಾನ್ ಪುನರ್ದೃಷ್ಟ್ವಾ ಪೋಷಿತಾನ್ ಬಿಲ್ವಭೂರುಹಾನ್ ।
ಲಿಂಗಾನ್ಯಪಿ ವಿಲೋಕ್ಯೈವ ಜಹೌ ಪ್ರಾಣಾಂತ್ಸ ಭೂಪತೇ ॥೨೧೩॥

ತತಃ ಪರಂ ರತ್ನವಿಮಾನಮೇಕ
ಮಾನೀತಮೀಶಸ್ಯ ಗಣೈರ್ವಿಚಿತ್ರಂ ।
ಯಯೌ ಸಮಾರುಹ್ಯ ಗಣಸ್ತುತೋಽಪಿ
ಸ್ತುತಸ್ಸ ಕಾಲೇನ ಸ ಪೂಜಿತೋಽಪಿ ॥೨೧೪॥

ಇಂದ್ರೇಣಾಪಿ ಸ ಪೂಜಿತೋ ಬಹುವಿಧೈಃ ಪುಷ್ಪೈರ್ವಿಶೇಷಸ್ತ್ವನ್ಯೈಃ
ಇಂದ್ರೇಣಾಪಿ ಸಮನ್ವಿತೋ ವಿಧಿಪುರಂ ಸಂಪ್ರಾಪ್ಯ ತೇನಾರ್ಚಿತಃ ।

ಇವುಗಳನ್ನು ನಾನು ಯಾವಾಗಲೂ ಬಿಟ್ಟಿದ್ದಿಲ್ಲ. ಈಗಲೂ ಇವುಗಳ ವಿರಹವು ನನ್ನ ಮನಸ್ಸಿಗೆ ಮಹಾವ್ಯಥೆಯನ್ನುಂಟುಮಾಡುವುದು. ವ್ಯಥೆಯಿಂದ ಶರೀರವೂ ಸಹ ಕ್ಷೀಣವಾಗುವುದು. ಈ ಪವಿತ್ರವಾದ ಬಿಲ್ವವನವೇ ನನ್ನ ಶಿವಾರಾಧನೆಗೆ ಸಾಧನವೂ ಉಪಾಯವೂ ಆಗಿದ್ದಿತು. ಆದುದರಿಂದ ಇನ್ನು ಮುಂದಕ್ಕೆ ನೀವು ಬಹಳ ಎಚ್ಚರಿಕೆಯಿಂದ ಕಾಪಾಡಿರಿ." ||೨೧೨||

ಆ ವನಪಾಲಕನು ತನ್ನ ಮಕ್ಕಳಿಗೆ ಹೀಗೆಂದು ಹೇಳಿ ಪುನಃಪುನಃ ತಾನು ಕಾಪಾಡಿದ ಆ ಬಿಲ್ವವೃಕ್ಷಗಳನ್ನು ನೋಡಿ ಶಿವಲಿಂಗಗಳನ್ನು ಸಂದರ್ಶಿಸಿ ಶಿವನನ್ನೇ ಧ್ಯಾನಿಸುತ್ತಾ ಪ್ರಾಣಗಳನ್ನು ತ್ಯಜಿಸಿದನು. ||೨೧೩||

ಅನಂತರ ಶಿವದೂತರು ಒಂದು ರತ್ನವಿಮಾನವನ್ನು ತಂದು ಅದನ್ನೇರಲು ವನಪಾಲಕನನ್ನು ಪ್ರಾರ್ಥಿಸಿದರು. ಅವರ ಆಜ್ಞೆಯಂತೆ ಆತನು ವಿಮಾನವನ್ನು ಹತ್ತಿದನು. ಆಗ ಶಿವದೂತರೂ ಮತ್ತು ಯಮಧರ್ಮನೂ ಸಹ ಆತನ ಮಹಿಮೆಯನ್ನು ಸ್ತುತಿಸುತ್ತಿದ್ದರು. ||೨೧೪||

ಶಿವದೂತರೊಡನೆ ಆ ವನಪಾಲಕನು ವಿಮಾನವನ್ನೇರಿ ದೇವಲೋಕದ ಇಂದ್ರನ ಮನೆಗೆ ಹೋದನು. ಅಲ್ಲಿ ಇಂದ್ರನು ಆತನಿಗೆ ಅನೇಕ ವಿಧವಾದ ಪೂಜೆ

ತೇನಾಪಿ ಸ್ತುತ ಏವ ತೇನ ವಿಧಿನಾ ಸಮ್ಯಕ್ ಸಮಾರಾಧಿತೋ
ವೈಕುಂಠಂ ಪ್ರಯಯೌ ಗಣೈರಪಿ ಯುತೋ ನಾರಾಯಣೇನಾರ್ಚಿತಃ ॥೨೧೫॥

ತತೋ ಮಹೋತ್ಸವೈರ್ಯುಕ್ತೋ ಯಯೌ ಕೈಲಾಸಮಂದಿರಂ ।
ರತ್ನಸುಂದರಮುತ್ಕೃಷ್ಟಂ ಯತ್ರ ಕ್ರೀಡತಿ ಶಂಕರಃ ॥೨೧೬॥

ನ ಬಿಲ್ವವನಪೋಷಣಪ್ರಭವಪುಣ್ಯತುಲ್ಯಂ ಪರಂ
ಶ್ರುತಂ ಸುಕೃತಮಿತ್ಯತಶ್ಶಿವಮವಾಪ ಸೋಽಪಿ ಶ್ರಿಯಾ ।
ತದಕ್ಷಯಫಲಪ್ರದಂ ವನಮಪಾರಪುಣ್ಯಪ್ರದಂ
ಶಿವಾಲಯಮಿತಿ ಶ್ರುತಂ ಗಿರಿಶಲಿಂಗಸಂವೇಷ್ಟಿತಂ ॥೨೧೭॥

ಯೇ ಯೇ ಶಂಕರಪೂಜಕಾಸ್ಸಿತಲಸದ್ಭಸ್ಮತ್ರಿಪುಂಡ್ರಾಂಕಿತಾಃ
ತೇ ರುದ್ರಾಕ್ಷವಿಭೂಷಣಾಶ್ಶಿವಮತಾಸ್ತಲ್ಲಿಂಗಸಂಸೇವಕಾಃ ।

ಗಳನ್ನು ಮಾಡಿ ಸ್ತುತಿಸಿದನು. ಅನಂತರ ಇಂದ್ರನೊಡನೆ ಬ್ರಹ್ಮಲೋಕಕ್ಕೆ ಹೋಗಿ ಬ್ರಹ್ಮನಿಂದ ಪೂಜಿತನಾಗಿ ಶ್ಲಾಘಿಸಿಕೊಂಡು, ಬಳಿಕ ವೈಕುಂಠಕ್ಕೆ ತೆರಳಿ ಅಲ್ಲಿಯೂ ವಿಷ್ಣುವಿನಿಂದ ಮಾಡಲ್ಪಟ್ಟ ಪೂಜಾ ಸತ್ಕಾರಗಳನ್ನು ಸ್ವೀಕರಿಸಿದನು. ॥೨೧೫॥

ಅನಂತರ ವೈಕುಂಠದಿಂದ ಪ್ರಯಾಣ ಮಾಡಿ ಸಾಕ್ಷಾತ್ ಪರಮೇಶ್ವರನ ಕ್ರೀಡಾಧಾಮವೂ ಸುಂದರವಾದ ರತ್ನಪ್ರಾಸಾದಗಳಿಂದ ಅಲಂಕೃತವೂ ಆಗಿರುವ ಕೈಲಾಸಕ್ಕೆ ಮಹಾಸಂಭ್ರಮದಿಂದ ಹೋದನು. ॥೨೧೬॥

ಬಿಲ್ವವನವನ್ನು ಪೋಷಿಸಿ ಕಾಪಾಡುವುದರಿಂದ ಲಭಿಸುವ ಪುಣ್ಯಕ್ಕೆ ಸದೃಶವಾದದ್ದು ಬೇರೊಂದೂ ಇಲ್ಲ. ಆ ಪುಣ್ಯವು ಅಪಾರವಾದುದು. ಅದೇ ಪರಮ ಸುಕೃತವೆಂದು ಹೇಳುವರು. ಎಂದು ನೆನೆಯುತ್ತಾ ಆ ವನಪಾಲಕನು ಶಿವಸಾನ್ನಿಧ್ಯವನ್ನು ಪಡೆದನು. ಆದುದರಿಂದ ಬಿಲ್ವವನವು ಅಪಾರವಾದ ಪುಣ್ಯವನ್ನು ನೀಡುವುದು. ಬಿಲ್ವವೃಕ್ಷ ಪೋಷಣೆಯಿಂದ ಅವಿನಾಶಿಯಾದ ಪುಣ್ಯಫಲವು ದೊರೆಯುವುದು. ಹಾಗೆಯೇ ಶಿವಲಿಂಗವುಳ್ಳ ಶಿವಾಲಯದ ಸಂಸೇವನೆಯಿಂದಲೂ ಮಹತ್ತರವಾದ ಸದ್ಗತಿಯು ಲಭಿಸುವುದು. ॥೨೧೭॥

ಯಾರು ಯಾರು ಶಿವಭಕ್ತರಾಗಿದ್ದು ನಿತ್ಯವೂ ಭಸ್ಮತ್ರಿಪುಂಡ್ರವನ್ನು ಧರಿಸುವರೋ, ರುದ್ರಾಕ್ಷ ಮಾಲೆಗಳಿಂದಲೇ ಅಲಂಕರಿಸಿಕೊಳ್ಳುವರೋ, ಹಾಗೂ ಶಿವಲಿಂಗವನ್ನು ಸೇವಿಸಿ ಪೂಜಿಸುವರೋ ಅವರೇ ಶಿವನ ಪ್ರೀತಿಗೆ ಪಾತ್ರರಾಗುವರು. ಇಂಥ

ತೇ ತಾವತ್ಸುರವಂದ್ಯತಾಮುಪಗತಾಃ ಪ್ರಾಣಾತ್ಯಯೇ ಶಂಕರಂ
ಧ್ಯಾತ್ವಾ ಮುಕ್ತಿಮವಾಪ್ನುವಂತಿ ಪರಮಾ ತೇ ತೇ ನಮಸ್ಯಾಸ್ಸದಾ ॥೨೧೮॥

ಜ್ಞೇಯಂ ತತ್ ಖಲುಜನ್ಮನಃ ಫಲಮಿತಿ ಶ್ರೀಮನ್ಮಹೇಶಾರ್ಚನಂ
ತಲ್ಲಿಂಗೇ ನವಬಿಲ್ವಪಲ್ಲವಲಸನ್ಮಾಲಾಕುಲೈರುಜ್ಜ್ವಲೈಃ
ನೀರೈರ್ವಾ ಕುಸುಮೈರ್ಮನೋಹರವರೈರ್ದೂರ್ವಾಂಕುರೈರ್ವಾ ಶಿವಃ
ಸುಪ್ರೀತಸ್ಸ ತನೋತಿ ಭಾಗ್ಯಮತುಲಂ ಶ್ರೀಕಾಲಕಾಲಃ ಖಲು ॥೨೧೯॥

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಉತ್ತರಾರ್ಧೇ
ಶಿವಘುಂಢಿಚರಿತವರ್ಣನೇ ಶಿವರಾತ್ರಿತಿಥಿನಿರ್ಣಯಃ
ಶಿವಪೂಜಾ ಮಹಾಫಲವರ್ಣನಂ ನಾಮ ಸಪ್ತಚತ್ವಾರಿಂಶೋಽಧ್ಯಾಯಃ

ಶಿವಭಕ್ತರನ್ನು ದೇವತೆಗಳೂ ಸಹ ವಂದಿಸುವರು ಮತ್ತು ಪೂಜಿಸುವರು. ಆ ಶಿವಭಕ್ತರೇ ಸತತವಾದ ಸಂಸ್ಕಾರ ಬಲದಿಂದ ಮರಣಕಾಲದಲ್ಲಿಯೂ ಶಿವನನ್ನು ಧ್ಯಾನಿಸುವರು. ಹಾಗೆಯೇ ಈ ದುಃಖ ಭೂಯಿಷ್ಠವಾದ ಸಂಸಾರದಿಂದ ಬಿಡುಗಡೆಯನ್ನು ಹೊಂದಿ ಮುಕ್ತರಾಗುವರು. ಅವರೇ ನಿಜವಾಗಿ ಪೂಜ್ಯರು. ॥೨೧೮॥

ಈ ತತ್ವಗಳನ್ನೆಲ್ಲಾ ತಿಳಿದುಕೊಂಡು ಈ ಮನುಷ್ಯ ಜನ್ಮವು ಲಭಿಸಿರುವುದಕ್ಕೆ ಆ ಶಿವಾರ್ಚನೆಯೇ ಪರಮ ಗುರಿ ಎಂದೂ, ಅದೇ ಮುಖ್ಯಧ್ಯೇಯವೆಂದೂ ತಿಳಿಯತಕ್ಕದ್ದು. ಶಿವಾರ್ಚನೆಯನ್ನು ಮಾಡಿದರೇ ಈ ಜನ್ಮವು ಸಾರ್ಥಕವಾಗುವುದು. ಮತ್ತು ಸಫಲವಾಗುವುದು. ಇದನ್ನರಿತುಕೊಂಡು ಶಿವಲಿಂಗದ ಆರಾಧನೆಯನ್ನು ಮಾಡಬೇಕು. ಕೋಮಲವಾದ ಬಿಲ್ವಪತ್ರೆಗಳನ್ನೂ, ನಾನಾ ವಿಧವಾದ ಪುಷ್ಪಗಳನ್ನೂ, ನಿರ್ಮಲವಾದ ಜಲವನ್ನೂ, ದೂರ್ವೆಗಳನ್ನೂ, ಹೊಂದಿಸಿಕೊಂಡು ಶಿವಪೂಜೆಯನ್ನು ನೆರವೇರಿಸಬೇಕು. ಹೀಗೆ ಭಕ್ತಿಯಿಂದ ಆರಾಧಿಸಿದರೆ ಪರಮೇಶ್ವರನು ಸುಪ್ರೀತನಾಗುವನು. ವಿಶಾಲವಾದ ಭಾಗ್ಯಗಳನ್ನು ದಯಪಾಲಿಸುವನು. ಅಲ್ಲದೇ ಮೋಕ್ಷವನ್ನೂ ಸಹ ಅನುಗ್ರಹಿಸುವನು. ಎಂದು ಸತ್ಯವ್ರತನು ಮಹಾರಥರಾಜನಿಗೆ ಶಿವಪೂಜಾಮಹಿಮೆಯನ್ನು ವಿವರಿಸಿದನು. ॥೨೧೯॥

ಇಲ್ಲಿಗೆ ಶ್ರೀಶಿವರಹಸ್ಯದ ತೃತೀಯಾಂಶದ ಉತ್ತರಾರ್ಧದಲ್ಲಿ
ನಲವತ್ತೇಳನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

|| ಓಂ ನಮಃಶ್ಶಿವಾಯ ||

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ಅಷ್ಟಚತ್ವಾರಿಂಶೋಽಧ್ಯಾಯಃ

|| ರತ್ನಾಕರ ಉವಾಚ ||

ಇತಿ ತದ್ವಚನಂ ಶ್ರುತ್ವಾ ಸ ರಾಜಾ ಪ್ರೀತಮಾನಸಃ ।
ಪ್ರಣಮ್ಯ ತಂ ಮುನಿಂ ಭಕ್ತ್ಯಾ ಯಯೌ ಸ್ವನಗರಂ ಪ್ರತಿ ॥೧॥

ಸ ರಾಜಾ ಸ್ವಸುತಾನ್ ಸರ್ವಾನಾಹೂಯ ಶಿವತತ್ಪರಾನ್ ।
ಸತ್ಯವ್ರತೋಕ್ತೇತಿಹಾಸಾನ್ ಶ್ರಾವಯಾಮಾಸ ಸಾದರಂ ॥೨॥

ನಲವತ್ತೆಂಟನೆಯ ಅಧ್ಯಾಯ

ಸತ್ಯವ್ರತನು ಈ ಪ್ರಕಾರವಾಗಿ ನಾನಾಬಗೆಯ ಶಿವಪಾರಮ್ಯವನ್ನು ವರ್ಣಿಸಲು ಅವೆಲ್ಲವನ್ನೂ ಕೇಳಿ ರಾಜನಾದ ಮಹಾರಥನಿಗೆ ಪರಮಾನಂದವಾಯಿತು. ಹೀಗೆಯೇ ಶಿವಕಥಾಕಾಲಕ್ಷೇಪಮಾಡಿದ ಬಳಿಕ ಆ ರಾಜನು ಸತ್ಯವ್ರತನಿಗೆ ಆದರದಿಂದ ನಮಸ್ಕರಿಸಿ ತನ್ನ ಪಟ್ಟಣಕ್ಕೆ ತೆರಳಿದನು. ||೧||

ಆ ರಾಜನು ಅರಮನೆಯನ್ನು ಸೇರಿದ ಬಳಿಕ ತನ್ನ ಮಕ್ಕಳೆಲ್ಲರನ್ನೂ ಕುರಿತು ಪ್ರೀತಿಯಿಂದ ಸತ್ಯವ್ರತನು ಹೇಳಿದ ಎಲ್ಲಾ ಇತಿಹಾಸಗಳನ್ನೂ ಹೇಳಿದನು. ಆತನ ಪುತ್ರರೆಲ್ಲರೂ ಸ್ವಭಾವವಾಗಿಯೇ ಪರಮಶಿವಭಕ್ತರಾಗಿದ್ದರು. ||೨||

ಶ್ರುತ್ವಾ ತಾನಿತಿಹಾಸಾಂಸ್ತೇ ಪ್ರಹೃಷ್ಟಾಶ್ಶಿವತತ್ಪರಾಃ ।
ರಾಜಾನಮೂಹುರೀಶಾನ ಮಹಾದೇವೇತಿ ವಾದಿನಂ ॥೩॥

॥ ರಾಜಪುತ್ರಾ ಊಚುಃ ॥

ಶಿವಧರ್ಮೋಪದೇಶೇನ ಕೃತಾರ್ಥಾಃ ಸ್ಮಃ ಪರಂತಪ ।
ಅಸ್ಮಾಕಮಧುನಾ ರಾಜ್ಯೇ ತೃಷ್ಣಾ ಭೋಗೇ ವಿನಿರ್ಗತಾ ॥೪॥

ಆಜ್ಞಾ ದೇಯಾ ಸದಾರಾಣಾಂ ಶಂಕರಾರಾಧನಾಯ ನಃ ।
ರೇವಾತೀರೇ ಸಂವಸಾಮಃ ಕೃತ್ವಾ ಬಿಲ್ವವನಂ ನವಂ ॥೫॥

ಇತ್ಯುಕ್ತ್ವಾ ಪ್ರಣತಾಸ್ಸರ್ವೇ ಪುತ್ರಾಸ್ತೇ ಗಂತುಮುದ್ಯತಾಃ ।
ತಾನಾಹ ಸೋಽಪಿ ಭೂಪಾಲಃ ಕೃತಾರ್ಥೋಽಸ್ಮೀತಿ ವಿಸ್ಮಿತಃ ॥೬॥

ಆ ಶಿವಮಹಿಮೆಯ ಪಾರಮ್ಯವನ್ನು ವಿವರಿಸುವ ಇತಿಹಾಸಗಳನ್ನು ಕೇಳಿ ರಾಜಪುತ್ರರಿಗೆ ಬಹಳ ಆನಂದವಾಯಿತು. ಅಲ್ಲದೇ ಅವರಿಗೆ ಸಂಸಾರದಲ್ಲಿ ವಿರಕ್ತಿಯೂ ಉಂಟಾಯಿತು. ಆಗ ಈಶಾನ, ಮಹಾದೇವ ಎಂದು ಮುಂತಾಗಿ ಸ್ಮರಿಸಿಕೊಂಡು ರಾಜನು ಆನಂದಿಸುತ್ತಿರಲು ಆತನನ್ನು ಕುರಿತು ರಾಜಪುತ್ರರು ಹೀಗೆ ಬಿನ್ನವಿಸಿದರು. ॥೩॥

ಜನಕನೇ, ಶಿವಧರ್ಮವನ್ನು ನಮಗೆ ಉಪದೇಶಮಾಡಿದ್ದರಿಂದ ನಾವು ಕೃತಾರ್ಥರಾದೆವು. ಈಗ ನಮಗೆ ರಾಜ್ಯದಲ್ಲಿ ಆಸೆ ಇಲ್ಲ. ನಮಗೆ ಈ ಸಂಸಾರದ ಸುಖಭೋಗಗಳಲ್ಲಿಯೂ ಪ್ರೀತಿ ಇರುವುದಿಲ್ಲ. ನಮ್ಮ ಮಾಯೆ ಮೋಹಗಳು ಇಂದು ದೂರವಾದವು. ॥೪॥

ಇನ್ನು ನಮ್ಮ ಪತ್ನಿಯರೊಂದಿಗೆ ಸರ್ವದಾ ಶಿವಾರಾಧನೆಯನ್ನು ಮಾಡುತ್ತಾ ಕಾಲ ಕಳೆಯುವೆವು. ಇದಕ್ಕಾಗಿ ನಾವು ನರ್ಮದಾತೀರದಲ್ಲಿ ವಾಸಿಸಲು ಹೋಗುವೆವು. ಅಲ್ಲಿ ನೂತನವಾದ ಬಿಲ್ವವನವನ್ನು ನಿರ್ಮಿಸಿ ಶಿವಾರ್ಚನೆಯನ್ನು ಮಾಡುತ್ತಾ ವಾಸಮಾಡಿಕೊಂಡಿರಲು ನಮಗೆ ಅಪ್ಪಣೆಯನ್ನು ಕರುಣಿಸಬೇಕು. ॥೫॥

ಹೀಗೆಂದು ಕೇಳಿಕೊಂಡು ಆ ಪುತ್ರರೆಲ್ಲರೂ ರಾಜನಿಗೆ ನಮಸ್ಕರಿಸಿ, ಹೊರಡಲು ಅನುಜ್ಞೆಯನ್ನು ಕೇಳಲು, ಅವರ ಸತ್ಪ್ರವೃತ್ತಿಯನ್ನು ಕಂಡು ರಾಜನಿಗೆ ಪರಮಾಶ್ಚರ್ಯವೂ ಆನಂದವೂ ಆಯಿತು. ಆಗ ತಾನು ಕೃತಾರ್ಥನೆಂದು ಶ್ಲಾಘಿಸಿಕೊಂಡು ಸಂತುಷ್ಟನಾಗಿ ಪುತ್ರರನ್ನು ಕುರಿತು ಹೀಗೆ ಹೇಳಿದನು. ॥೬॥

ವನಮೇಕಂ ತು ಕರ್ತವ್ಯಂ ಸರ್ವೈರ್ಬಿಲ್ವಕುಲೋಜ್ವಲಂ ।
ತತ್ರ ಸ್ಥಾತವ್ಯಮಸ್ಮಾಭಿರಧುನಾ ಕ್ವಾಪಿ ಗಮ್ಯತೇ ॥೭॥

ಅಭಿಷಿಕ್ತೋಽಪಿ ಕರ್ತವ್ಯೋ ಜ್ಯೇಷ್ಠೋ ಮೃಡ ಇತಿ ಶ್ರುತಃ ।
ಸೋಽಯಂ ಶೂರೋ ರಾಜ್ಯರಕ್ಷಾಂ ಕರ್ತುಂ ದಕ್ಷೋ ನ ಸಂಶಯಃ ॥೮॥

ರಾಜ್ಞಾಂ ಕಿಲಾಯಂ ಧರ್ಮೋಽಪಿ ರಾಜ್ಯಸ್ಯ ಪರಿಪಾಲನಂ ।
ನ ತಸ್ಯ ಪಾಲನಾಭಾವೇ ಪ್ರಜಾಸ್ಸಂತುಷ್ಟಮಾನಸಾಃ ॥೯॥

ಶಿವಾರ್ಚನಂ ಚ ಚಲತಿ ರಾಜ್ಯಸ್ಯ ಪರಿಪಾಲನೇ ।
ಅನ್ಯಥಾ ಘಾತುಕಾಕ್ರಾಂತೇ ವನೇ ಸ್ಥಾತುಂ ನ ಶಕ್ಯತೇ ॥೧೦॥

ಪುತ್ರರೇ, ನೀವು ಹೇಳುವುದೇನೋ ಶ್ಲಾಘ್ಯವೇ ಸರಿ. ಸರ್ವರೂ ಬಿಲ್ವವನವನ್ನು ನಿರ್ಮಿಸಿಕೊಂಡು ಶಿವಾರಾಧನೆಯನ್ನು ಮಾಡುತ್ತಿರುವುದೇನೋ ಶ್ರೇಯಸ್ಕರ. ಆದರೆ ಇದಕ್ಕಾಗಿ ಬೇರೆ ಕಡೆಗೆ ಏತಕ್ಕೆ ಹೋಗಬೇಕು? ಇಲ್ಲಿಯೇ ಸಮೀಪದಲ್ಲಿ ಒಂದು ಶ್ರೇಷ್ಠವಾದ ಬಿಲ್ವವನವನ್ನು ನಾವು ಕಲ್ಪಿಸಿಕೊಂಡು ಅದರಲ್ಲಿಯೇ ವಾಸಿಸೋಣ. ||೭||

ಜ್ಯೇಷ್ಠಪುತ್ರನಾದ ಮೃಡನಿಗೆ ಈ ರಾಜ್ಯದಲ್ಲಿ ಪಟ್ಟವನ್ನು ಕಟ್ಟಬೇಕು. ಆತನು ಶೂರನಾಗಿರುವನು. ಈ ರಾಜ್ಯದ ಸಂರಕ್ಷಣೆ ಮಾಡುವುದಕ್ಕೂ ಆತನು ಸಮರ್ಥನಾಗಿದ್ದಾನೆ. ||೮||

ಅಲ್ಲದೇ ರಾಜರಿಗೆ ರಾಜ್ಯಸಂರಕ್ಷಣೆಯೇ ಮುಖ್ಯ ಧರ್ಮವೆಂದು ಧರ್ಮಜ್ಞರು ಹೇಳುವರು. ರಾಜ್ಯವನ್ನು ಸರಿಯಾಗಿ ಕಾಪಾಡದಿದ್ದರೆ ಪ್ರಜೆಗಳು ಪ್ರಕ್ಷುಬ್ಧರಾಗುವರು. ಆದುದರಿಂದ ಅವಶ್ಯವಾಗಿ ರಾಜ್ಯವನ್ನು ಸಮರ್ಥರಾದವರೇ ಆಳಬೇಕು. ||೯||

ರಾಜನು ಸಮರ್ಥನಾಗಿ ರಾಜ್ಯವನ್ನು ಅತ್ಯಂತ ಶ್ರದ್ಧೆಯಿಂದ ಕಾಪಾಡುತ್ತಿದ್ದರೆ ಶಿವಾರ್ಚನೆಯನ್ನು ಮಾಡಿದಂತಾಗುವುದು. ರಕ್ಷಣೆಯಿಲ್ಲದಿದ್ದರೆ ಎಲ್ಲಿಯೂ ಶಿವನ ಆರಾಧನೆಯು ನಡೆಯಲಾರದು. ನಾವು ಅರಣ್ಯಕ್ಕೆ ಹೋದರೂ ಅಲ್ಲಿ ದರೋಡೆಗಾರರು ನಮ್ಮನ್ನು ತೊಂದರೆಗೀಡುಮಾಡುವರು. ಅಲ್ಲಿ ವಾಸಿಸುವುದೂ ದುರ್ಭರವೇ ಆದೀತು. ||೧೦||

ಇತ್ಯುಕ್ತಂ ತದ್ವಚಶ್ಶ್ರುತ್ವಾ ಜ್ಯೇಷ್ಠೋಽಯಂ ರಾಜ್ಯಪಾಲಕಃ ।
ಭವತ್ವಸ್ಮಾಕಮತ್ರಾಸ್ತಿ ಕಿಂ ವಾ ಕಾರ್ಯಂ ನೃಪೋತ್ತಮ ॥೧೧॥

ಜ್ಯೇಷ್ಠೇನ ರಾಜ್ಯಂ ಕರ್ತವ್ಯಂ ಯಥಾರ್ಹಂ ತ್ವದನುಜ್ಞಯಾ ।
ಅಸ್ಮಾಭಿರ್ವನಮಾಶ್ರಿತ್ಯ ಸ್ಥಾತವ್ಯಂ ಬಿಲ್ವಸಂಕುಲಂ ॥೧೨॥

ನವಬಿಲ್ವವನಾರಂಭಃ ಕದಾ ಭವತಿ ತದ್ವನಂ ।
ಪ್ರವೃದ್ಧಂ ಚ ಭವೇತ್ತಾವದಾಯುಃ ಕೇನ ವಿನಿಶ್ಚಿತಂ ॥೧೩॥

ಅತಃ ಪರಂ ನ ನಗರೇ ಸ್ಥಾತುಂ ಬುದ್ಧಿಃ ಪ್ರಜಾಯತೇ
ತ್ವಯಾಪಿ ನಾತ್ರ ಸ್ಥಾತವ್ಯಂ ವೃದ್ಧೇನ ನಗರೇ ನೃಪ ॥೧೪॥

ರಾಜನ ಆ ಮಾತನ್ನು ಕೇಳಿ ರಾಜಪುತ್ರರೆಂದರು ; ಮಹಾರಾಜನೇ, ನಮ್ಮಲ್ಲಿ ಜ್ಯೇಷ್ಠನಾದ ಜ್ಯೇಷ್ಠನೊಬ್ಬನು ಮಾತ್ರ ರಾಜ್ಯವನ್ನು ಪರಿಪಾಲಿಸಿಕೊಂಡು ಪಟ್ಟಣದಲ್ಲಿಯೇ ಇರಲಿ. ಉಳಿದ ನಮಗೆ ಇಲ್ಲೇನು ಕೆಲಸವಿದೆ? ನಾವು ರೇವಾ ತೀರದಲ್ಲಿ ಶಿವಾರಾಧನೆಯನ್ನು ಮಾಡುತ್ತಾ ಕಾಲ ಕಳೆಯುವೆವು. ॥೧೧॥

ಧರ್ಮಕ್ಕೆ ಅನುಸಾರವಾಗಿ ಜ್ಯೇಷ್ಠನು ರಾಜ್ಯಭಾರವನ್ನು ನಿರ್ವಹಿಸುವುದೇನೋ ನ್ಯಾಯವೇ ಸರಿ. ಅದರಂತೆ ಜ್ಯೇಷ್ಠನೊಬ್ಬನು ಇಲ್ಲಿಯೇ ಇರುವನು. ಆದರೆ ನಮಗೆ ಅನುಜ್ಞೆಯನ್ನು ಕೊಡು. ನಾವು ಬಿಲ್ವವನದಲ್ಲಿ ವಾಸಮಾಡಿಕೊಂಡು ಶಿವಾರಾಧನೆಯಿಂದ ಶಾಂತಿಯನ್ನು ಸಂಪಾದಿಸುವೆವು. ॥೧೨॥

ಅಲ್ಲದೇ ನಾವು ನೂತನವಾದ ಬಿಲ್ವವನವನ್ನು ನಿರ್ಮಿಸಬೇಕು. ಅದಕ್ಕೆ ಅನೇಕ ವರ್ಷಗಳೇ ಬೇಕಾಗುವುವು. ನಾವು ಗಿಡಗಳನ್ನು ಹಾಕುವುದೇ ತಡವಾದರೆ ಅದು ಬೆಳೆದು ಮರವಾಗಿ ವನವಾಗುವುದು ಎಂದು? ನಮ್ಮ ಆಯುಷ್ಯವಾದರೂ ಎಷ್ಟಿದೆ ಎಂದು ಹೇಗೆ ನಿರ್ಣಯಮಾಡಿಕೊಳ್ಳುವುದು? ಆದುದರಿಂದ ನಾವು ಕಾಲವನ್ನು ಕಳೆಯದೇ ಜಾಗ್ರತೆ ಅಲ್ಲಿಗೆ ಹೋಗಬೇಕು. ॥೧೩॥

ಇನ್ನು ನಮಗೆ ಈ ಪಟ್ಟಣದಲ್ಲಿ ವಾಸಿಸಲು ಖಂಡಿತ ಮನಸ್ಸು ಬಾರದು. ಅಲ್ಲದೇ ಮಹಾರಾಜನೇ, ನಿನಗೂ ಸಹ ವಯಸ್ಸು ಮೀರಿರುತ್ತದೆ. ವೃದ್ಧನಾದ ನೀನು ಈ ಪಟ್ಟಣದಲ್ಲಿ ವಾಸಿಸುವುದು ಯುಕ್ತವಾಗಿ ಕಾಣುವುದಿಲ್ಲ. ॥೧೪॥

ಭೋಗಾಸ್ತಾವತ್ತ್ವಯಾ ಭುಕ್ತಾಃ ಪಲಿತಾಶ್ಚ ಶಿರೋರುಹಾಃ ।
ರಾಜ್ಯತೃಷ್ಣಾ ಪರಿತ್ಯಾಜ್ಯಾ ಮೃತ್ಯುಸ್ಸನ್ನಿಹಿತೋ ಯತಃ ॥೧೫॥

ನ ರಾಜ್ಯಮಾಯಾಸ್ಯತಿ ಮೃತ್ಯುಕಾಲೇ
ಪ್ರಾಪ್ತಂ ನ ರತ್ನಾಭರಣಾನಿ ದಾರಾಃ ।
ಶೂರಾಃ ಕುಮಾರಾ ಅಪಿ ಶಾಂಕರತ್ವಂ
ಪ್ರಾಪ್ಯಾಧುನಾ ಶಂಕರಮರ್ಚಯಾಶು ॥೧೬॥

ರತ್ನೈರಪಾರ್ಯೈರಮಿತೈರ್ಧನೈಶ್ಚ
ಸರ್ವಂ ಸಮಾರಾಧಯ ಸಾವಧಾನಂ ।
ತಾನಿ ಪ್ರಯಚ್ಛಾತಿಮನೋಹರಾಣಿ ।
ಶೈವೇಭ್ಯ ಏವೇತಿ ಮುದಾ ನೃಪೇಂದ್ರ ॥೧೭॥

ನೀನು ಈವರೆಗೆ ಸಂಸಾರದ ಅನೇಕ ಸುಖಗಳನ್ನು ಅನುಭವಿಸಿರುವೆ. ಅದೇ ಸುಖಾನುಭವದಿಂದಲೇ ನಿನಗೆ ಈಗ ವಾರ್ಧಕ್ಯವೂ ಪ್ರಾಪ್ತವಾಗಿರುವುದಲ್ಲದೇ ಬಹುಶಃ ಮೃತ್ಯುವೂ ಸನ್ನಿಹಿತವಾಗಿರಬಹುದು. ಆದುದರಿಂದ ಇನ್ನು ರಾಜ್ಯದಲ್ಲಿ ಅಥವಾ ಸುಖಭೋಗಗಳಲ್ಲಿ ಆಸೆಯನ್ನು ದೂರಮಾಡಬೇಕು. ||೧೫||

ಮರಣಕಾಲವು ಒದಗಿತೆಂದರೆ ಆಗ ಜೊತೆಯಲ್ಲಿ ರಾಜ್ಯವಾಗಲಿ ರತ್ನಾಭರಣಗಳಾಗಲಿ ಬರುವುದಿಲ್ಲ. ಎಷ್ಟೇ ಶೂರರಾಗಿದ್ದರೂ ಮಕ್ಕಳು ಆಗ ಸಂಗಡಿಗರಾಗುವುದಿಲ್ಲ. ಹೆಂಡತಿಯರು ಸಹ ಒಡನೆ ಬರುವುದಿಲ್ಲ. ಆದುದರಿಂದ ವಿವೇಕವನ್ನು ತಳೆದುಕೊಂಡು ನೀನೂ ಸದಾ ಶಿವಭಕ್ತನಾಗಿ ಸದಾ ಶಿವನನ್ನೇ ಆರಾಧಿಸಬೇಕು. ||೧೬||

ಎಲೈ ಮಹಾರಾಜನೇ, ನೀನು ಈವರೆಗೆ ಸಂಪಾದಿಸಿ ಕೂಡಿಟ್ಟುಕೊಂಡಿರುವ ಉತ್ತಮವಾದ ರತ್ನಗಳನ್ನೂ ಐಶ್ವರ್ಯಸಾಮಗ್ರಿಗಳನ್ನೂ ಶಿವಾರಾಧನೆಗಾಗಿ ಉಪಯೋಗಿಸು. ಸಕಲ ಸಂಪತ್ಸಾಮಗ್ರಿಗಳಿಂದಲೂ ವೈಭವದಿಂದಲೂ ಶಿವಾರ್ಚನೆಯನ್ನು ಮಾಡು. ಎಲ್ಲಾ ಶೈವರಿಗೂ ಯಥೇಚ್ಛವಾಗಿ ರತ್ನಾಭರಣಗಳ ಧರ್ಮಗಳನ್ನು ಮಾಡು. ||೧೭||

ಶೈವಾರ್ಚನಂ ಶಂಕರಪೂಜನಂ ಹಿ
ತೇನೈವ ಮುಕ್ತಿರ್ಭವತೀತಿ ಮನ್ಯೇ ।
ರಾಜ್ಯೇಷಣಾಂ ತಾವದಿಮಾಂ ವಿಹಾಯ ।
ಭಜಸ್ವ ಶಂಭುಂ ಭವಭೀತಿಶಾಂತ್ಯೈ ॥೧೮॥

ಇತ್ಯುಕ್ತಂ ತದ್ವಚಃಶ್ರುತ್ವಾ ತಾನಾಲಿಂಗ್ಯ ಸುತಾನ್ನೃಪಃ ।
ಭವದುಕ್ತಿಸುಧಾ ಪೀತಾ ಧನ್ಯೋಽಸ್ಮೀತ್ಯಾಹ ಸಾದರಂ ॥೧೯॥

ತತಃ ಪರಂ ಮೃಡಂ ಪ್ರಾಹ ಜ್ಯೇಷ್ಠಂ ರಾಜ್ಯಾಧಿಕಾರಿಣಂ ।
ರಾಜ್ಯಸ್ಯ ಪಾಲನಂ ಕಾರ್ಯಂ ತ್ವಯಾ ತಾವದತಃ ಪರಂ ॥೨೦॥

ವೃದ್ಧಸ್ಯ ಸದನೇ ವಾಸೋ ನೋಚಿತೋ ಮಮ ಸರ್ವಥಾ ।
ರೇವಾತೀರೇ ವನೇ ಸ್ಥೇಯಂ ಬಿಲ್ವಭೂರುಹಶೋಭನೇ ॥೨೧॥

ಶೈವಪರಿಚರ್ಯೆಯೂ ಶಿವಾರಾಧನೆಯೇ ಆಗಿರುವುದರಿಂದ ಶಾಂಭವರನ್ನು ಆರಾಧಿಸಲೇ ಬೇಕು. ಈ ವಿಧವಾದ ಶಿವಧರ್ಮಾನುಷ್ಠಾನದಿಂದ ಮೋಕ್ಷವೇ ಲಭಿಸುವುದು. ಇನ್ನು ಈ ರಾಜ್ಯಲೋಭವನ್ನು ಬಿಟ್ಟು ಈ ಸಂಸಾರಕ್ಲೇಶದಿಂದ ದೂರವಾಗಿ ಪರಮಶಾಂತಿಲಾಭಕ್ಕಾಗಿ ಶಿವನನ್ನೇ ಆರಾಧಿಸು. ॥೧೮॥

ರಾಜಪುತ್ರರು ಈ ರೀತಿಯಾಗಿ ಹೇಳಲು ಅವರ ಮಾತನ್ನು ಕೇಳಿ ರಾಜನು ಆ ಪುತ್ರರನ್ನು ಆಲಿಂಗಿಸಿಕೊಂಡು ನಾನೇ ಧನ್ಯನು. ಕೃತಕೃತ್ಯನು. ನಿಮ್ಮ ಮಾತು ಅಮೃತದಂತೆ ಪರಮಾನಂದವನ್ನುಂಟುಮಾಡಿತು ಎಂದು ಶ್ಲಾಘಿಸಿದನು. ॥೧೯॥

ಅನಂತರ ಜ್ಯೇಷ್ಠಪುತ್ರನನ್ನು ಕರೆದು “ ಮೃಡನೇ, ನೀನು ರಾಜ್ಯಾಧಿಪತ್ಯಕ್ಕೆ ಅಧಿಕಾರಿಯಾಗಿದ್ದೀಯೆ. ಇನ್ನುಮುಂದೆ ನೀನು ಶ್ರದ್ಧೆಯಿಂದ ರಾಜ್ಯವನ್ನು ಪರಿಪಾಲಿಸತಕ್ಕದ್ದು. ಆದರದಿಂದ ಪ್ರಜೆಗಳನ್ನು ನೀನು ಕಾಪಾಡಬೇಕು. ॥೨೦॥

ಪ್ರಾಯವೆಲ್ಲಾ ಕಳೆದು ನನಗೆ ವಾರ್ಧಕ್ಯವು ಪ್ರಾಪ್ತವಾಗಿರುವುದರಿಂದ ಇನ್ನು ನಾನು ಮನೆಯಲ್ಲಿಯೇ ಇರುವುದು ಯುಕ್ತವಲ್ಲ. ನಾನು ರೇವಾತೀರಕ್ಕೆ ಹೋಗಿ ಬಿಲ್ವವನದಲ್ಲಿ ವಾಸಮಾಡಬೇಕು. ॥೨೧॥

ಪುತ್ರಕೃತ್ಯಂ ತ್ವಯಾ ಕಾರ್ಯಂ ಜ್ಯೇಷ್ಠೇನ ಪಿತೃಸೇವನಂ ।
ಕರ್ತವ್ಯಂ ತದ್ವನಾವಾಸಸಂಪಾದನಮಿತಿ ಸ್ಮರ ॥೨೨॥

ನ ತಥಾ ಶತ್ರವೋ ರಾಜ್ಯೇ ನಿಷ್ಕಂಟಕಮಹೀತಲೇ
ಸ್ಥಾತವ್ಯಮಧುನಾ ರಾಜ್ಯಂ ಪರಿಪಾಲಯ ಸಾದರಂ ॥೨೩॥

ಪ್ರಜಾಪೀಡಾ ನ ಕರ್ತವ್ಯಾ ಕರ್ತವ್ಯಂ ಶಂಕರಾರ್ಚನಂ ।
ಶಾಂಕರಾಃ ಪೋಷಣೀಯಾಶ್ಚ ವಿಶೇಷೇಣ ಪ್ರಯತ್ನತಃ ॥೨೪॥

ಯದಿ ಪೀಡಾ ಶಾಂಭವಸ್ಯ ಯಸ್ಯ ಕಸ್ಯಾಪಿ ಸಾ ಪರಂ ।
ರಾಜ್ಯನಾಶಾಯ ಸಹಸಾ ಭವಿಷ್ಯತಿ ನ ಸಂಶಯಃ ॥೨೫॥

ಜ್ಯೇಷ್ಠಪುತ್ರನಾದ ನೀನು ಪಿತೃಸೇವೆಯನ್ನು ಅವಶ್ಯವಾಗಿ ಮಾಡಬೇಕು. ಆದುದರಿಂದ ನನಗೆ ಎಲ್ಲಾ ವಿಧವಾದ ಅನುಕೂಲಗಳನ್ನೂ ನೀನು ಕಲ್ಪಿಸಿಕೊಡು. ನಾನು ನಿಶ್ಚಿಂತನಾಗಿ ಬಿಲ್ವವನದಲ್ಲಿ ವಾಸವಾಗಿರುವಂತೆ ಏರ್ಪಡಿಸುವುದು ನಿನ್ನದೇ ಕರ್ತವ್ಯವೆಂಬುದನ್ನು ಚೆನ್ನಾಗಿ ನೆನಪಿನಲ್ಲಿಡು. ॥೨೨॥

ನೀನು ಬಹಳ ಎಚ್ಚರಿಕೆಯಿಂದ ದೇಶವನ್ನು ಕಾಪಾಡಬೇಕು. ಎಲ್ಲಿಯೂ ಶತ್ರುಗಳ ಉಪದ್ರವವಿಲ್ಲದಂತೆಯೂ ಪ್ರಜಾಕ್ಷೋಭೆಯು ಕಾಣದಂತೆಯೂ ನೋಡಿಕೊಂಡು ಶಿಷ್ಟರಕ್ಷಣ ದುಷ್ಟನಿಗ್ರಹ ಮುಂತಾದ ಕೆಲಸಗಳನ್ನು ದಕ್ಷತೆಯಿಂದ ನಿರ್ವಹಿಸಿ ರಾಜ್ಯವನ್ನು ಪರಿಪಾಲಿಸು. ॥೨೩॥

ಪ್ರಜೆಗಳಿಗೆ ಎಂದೂ ಪೀಡೆಯನ್ನುಂಟುಮಾಡಕೂಡದು. ಅವರಿಗೆ ಒದಗುವ ಎಲ್ಲಾ ತೊಂದರೆಗಳನ್ನೂ ಪರಿಹರಿಸಿ ಅವರ ವಿಶ್ವಾಸಕ್ಕೆ ಪಾತ್ರನಾಗಬೇಕು. ಸದಾ ಶಿವನನ್ನು ಆರಾಧಿಸಬೇಕಲ್ಲದೇ ಶಾಂಕರರನ್ನು ವಿಶೇಷವಾಗಿ ಆದರದಿಂದ ಕಾಪಾಡಬೇಕು. ॥೨೪॥

ಎಲ್ಲಿಯಾದರೂ ಒಬ್ಬ ಶಾಂಭವನಿಗೆ ಪೀಡೆಯುಂಟಾದರೂ ಮಹಾ ಅನರ್ಥವೇ ಒದಗುವುದು. ಶೈವಪೀಡೆಯಿಂದ ಖಂಡಿತವಾಗಿಯೂ ರಾಜ್ಯ ನಾಶಹೊಂದುವುದು. ॥೨೫॥

ರೋಗೋದ್ರೇಕೋಽಪಿ ದುರ್ಭಿಕ್ಷಂ ಮರಣಂ ಚ ಪ್ರತಿಕ್ಷಣಂ ।
ಭವಿಷ್ಯತ್ಯೇವ ರಾಜ್ಯೇಷು ನೂನಂ ಶಾಂಕರಪೀಡಯಾ ॥೨೬॥

ಶಾಂಕರಾಚಾರನಿರತಾಶ್ಚಾಂಡಾಲಾ ಅಪಿ ತೇ ಸುತ ।
ಪಾಲನೀಯಾಃ ಪ್ರಯತ್ನೇನ ತತ್ಪೀಡಾ ನ ತವೋಚಿತಾ ॥೨೭॥

ಅಶಾಂಕರಾಣಾಂ ವಿಲಯೇ ಯತ್ನಃ ಕಾರ್ಯೋ ವಿಶೇಷತಃ ।
ಅಶಾಂಕರಲಯೇ ಜಾತೇ ನ ರಾಜ್ಯೇ ಮರಣಾದಿಕಂ ॥೨೮॥

ಅಶಾಂಕರೋ ಯದಿ ಭವೇದ್ರಾಜ್ಯೇ ರಾಜ್ಯಂ ವಿನಶ್ಯತಿ ।
ದುರ್ಭಿಕ್ಷರೋಗಚೋರಾದ್ಯೈರತಸ್ತದ್ವಿಲಯಂ ಕುರು ॥೨೯॥

ಶಿವಪೂಜಾಂ ಪ್ರಯತ್ನೇನ ಕುರು ಬಿಲ್ವಾದಿಸಾಧನೈಃ ॥೩೦॥

ಈಶ್ವರಭಕ್ತರಿಗೆ ತೊಂದರೆಯಾಗಲಿ ಪೀಡೆಯಾಗಲಿ ಉಂಟಾದರೆ ರಾಜ್ಯದಲ್ಲಿ ದುರ್ಭಿಕ್ಷವೊದಗುವುದು. ಅನೇಕ ರೋಗಾದ್ಯುಪದ್ರವಗಳು ತಲೆದೋರುವುವು. ಪ್ರತಿ ಕ್ಷಣದಲ್ಲಿಯೂ ಮರಣ ಸಂಖ್ಯೆಯು ಹೆಚ್ಚಿ ಪ್ರಜಾಕ್ಷಯವಾಗುವುದು. ॥೨೬॥

ಸ್ವತಃ ಚಂಡಾಲನೇ ಆಗಿದ್ದರೂ ಆತನು ಶಿವಧರ್ಮಾನುಯಾಯಿಯಾಗಿದ್ದರೆ ಅಂತಹವನನ್ನು ನೀನು ಜಾಗ್ರತೆಯಿಂದ ಕಾಪಾಡಬೇಕು. ಶಿವಧರ್ಮನಿರತರಾದವರಿಗೆ ಎಂದೂ ಪೀಡೆಯುಂಟಾಗದಂತೆ ನೀನು ನೋಡಿಕೊಂಡಿರು. ॥೨೭॥

ಶಿವಪೂಜಕರಲ್ಲದವರನ್ನು ಮತ್ತು ಶಿವದೂಷಕರನ್ನು ನೀನು ನಾಶಮಾಡು. ಅಂಥ ಪಾಪಿಗಳು ಎಲ್ಲಿ ಎಲ್ಲಿ ಇದ್ದಾರೆಂಬುದನ್ನು ತಿಳಿದು ಅವರನ್ನು ನಿರ್ಮೂಲವಾಗಿ ನಾಶಪಡಿಸಲು ಪ್ರಯತ್ನಪಡು. ಅಶೈವರು ನಾಶಹೊಂದಿದರೆ ರಾಜ್ಯದಲ್ಲಿ ಎಂದೂ ಅಕಾಲಮರಣಗಳು ಸಂಭವಿಸುವುದಿಲ್ಲ. ॥೨೮॥

ರಾಜ್ಯದಲ್ಲಿ ಶಿವನಿಂದಕರಿದ್ದರೆ ಅನೇಕ ಅನಿಷ್ಟಗಳುಂಟಾಗುವುವು. ದುರ್ಭಿಕ್ಷ, ರೋಗೋಪದ್ರವಗಳು ಮತ್ತು ಚೋರಭಯ ಮುಂತಾದುವು ಹೆಚ್ಚುವುವು. ಅಲ್ಲದೇ ಕ್ರಮೇಣ ರಾಜ್ಯವೇ ನಾಶಹೊಂದುವುದು. ॥೨೯॥

ಸರ್ವಕಾಲದಲ್ಲಿಯೂ ಶ್ರದ್ಧಾಭಕ್ತಿಸಮನ್ವಿತನಾಗಿ ಅತ್ಯಾಸಕ್ತಿಯಿಂದ ಶಿವನನ್ನು ಆರಾಧಿಸು. ಬಿಲ್ವಾದಿ ಸಕಲ ಸನ್ನಾಹಗಳಿಂದ ಶಿವಾರ್ಚನೆಯನ್ನು ಮಾಡುತ್ತಿರುವ ಪರಮ ಶ್ರೇಯಸ್ಕರಗಳಾದ ಶಿವಕಥೆಗಳನ್ನೇ ಸದಾ ಶ್ರವಣ ಮಾಡುತ್ತಿರು. ॥೩೦॥

ಭುಂಕ್ಷ್ವಾನ್ನಾನಿ ಮಹೇಶಾಯ ನಿವೇದ್ಯ ಪ್ರತ್ಯಹಂ ಸುತ ।
ತಾನ್ಯನ್ನಪತಿದತ್ತಾನಿ ಭುಕ್ತ್ವಾ ಸುಖಮವಾಪ್ಸ್ಯಸಿ ॥೩೧॥

ಭಸ್ಮನೋದ್ಧೂಳನಂ ಕೃತ್ವಾ ಕೃತ್ವಾ ರುದ್ರಾಕ್ಷಧಾರಣಂ ।
ಪೂಜಯಸ್ವ ಮಹಾದೇವಮಪ್ರಮಾದೇನ ಸಾದರಂ ॥೩೨॥

ಕೃತಾಯಾಂ ಶಿವಪೂಜಾಯಾಂ ರಾಜ್ಯವೃದ್ಧಿರ್ಭವಿಷ್ಯತಿ ।
ಶತ್ರುಹಾನಿರ್ದುಃಖನಾಶೋ ರೋಗನಾಶೋಽಪಿ ಸರ್ವಥಾ ॥೩೩॥

ಶೃಣ್ವಂಛಿವಕಥಾಮೇವ ಪಂಚಾಕ್ಷರಜಪಂ ಕುರು ।
ತೇನ ಪಾತಕಸಂಘಾತಭಯಂ ಚ ನ ಭವಿಷ್ಯತಿ ॥೩೪॥

ಋತುಕಾಲೇ ಸ್ವದಾರೇಷು ರತಿಂ ಕುರು ಕುಮಾರ ತೇ ।
ತತ್ರಾಸ್ಥಾಪಿ ನ ಕರ್ತವ್ಯಾ ತದಾಪಿ ಸ್ಮರ ಶಂಕರಂ ॥೩೫॥

ಪ್ರತಿದಿನವೂ ಪರಮೇಶ್ವರನಿಗೆ ಭಕ್ಷಭೋಜ್ಯಗಳನ್ನು ನಿವೇದನ ಮಾಡು. ಅಂಥ ಶಿವನಿವೇದಿತಗಳಾದ ಅನ್ನಾಹಾರಗಳನ್ನೇ ಸಾಕ್ಷಾತ್ ಅನ್ನಪತಿಯು ಅನುಗ್ರಹಿಸಿರುವನೆಂದು ಆದರವಿಟ್ಟು ಭುಂಜಿಸು. ಇದರಿಂದಲೇ ನಿನಗೆ ಸಕಲ ಸುಖಶಾಂತಿಗಳೂ ಲಭಿಸುವುವು. ॥೩೧॥

ಪ್ರತಿದಿನವೂ ಭಸ್ಮತ್ರಿಪುಂಡ್ರಗಳನ್ನೂ ರುದ್ರಾಕ್ಷಮಾಲೆಗಳನ್ನು ಧರಿಸಿಕೊಂಡು ಶಿವಪೂಜೆಯನ್ನು ಮಾಡುತ್ತಿರು. ಇಂಥ ಶಿವಧರ್ಮಗಳನ್ನು ಆಚರಿಸಲು ಎಂದೂ ತಪ್ಪಬೇಡ. ॥೩೨॥

ನಿತ್ಯವೂ ಶಿವಪೂಜೆಯನ್ನು ಮಾಡುವುದರಿಂದ ದಿನೇ ದಿನೇ ನಿನ್ನ ರಾಜ್ಯವು ಅಭಿವೃದ್ಧಿಹೊಂದುವುದು. ದೇಶದಲ್ಲಿ ಎಲ್ಲಿಯೂ ರೋಗಾದ್ಯುಪದ್ರವಗಳುಂಟಾಗುವುದಿಲ್ಲ. ಶತ್ರುಗಳೆಲ್ಲಾ ನಾಶಹೊಂದುವರು. ಅಲ್ಲದೇ ಸಕಲ ವಿಧವಾದ ದುಃಖಗಳೂ ತಾಪತ್ರಯಗಳೂ ದೂರವಾಗುವುವು. ॥೩೩॥

ಸದಾ ಶಿವಕಥೆಯನ್ನೇ ಶ್ರವಣಮಾಡುತ್ತಿರು. ಹಾಗೂ ಸರ್ವದಾ ಶ್ರೀಶಿವಪಂಚಾಕ್ಷರೀಮಂತ್ರವನ್ನೇ ಜಪಿಸುತ್ತಿರು. ಇದರಿಂದ ಯಾವ ಪಾಪಭೀತಿಯೂ ಎಂದೂ ಉಂಟಾಗುವುದಿಲ್ಲ. ॥೩೪॥

ಎಲೈ ಕುಮಾರನೇ, ನೀನು ಕೇವಲ ನಿನ್ನ ಧರ್ಮಪತ್ನಿಯಲ್ಲಿಯೇ ಆಸಕ್ತನಾಗಿ ತೃಪ್ತನಾಗಬೇಕು. ಅದರಲ್ಲೂ ಋತುಕಾಲದಲ್ಲಿ ಮಾತ್ರವೇ ಸ್ತ್ರೀ ಸಂಗಸುಖ

ಕುಮಾರಾಸ್ತೇ ಭವಿಷ್ಯಂತಿ ತೇಷಾಂ ಶಿಕ್ಷಾಂ ತ್ವಯಾ ಮುಹುಃ ।
ಕರ್ತವ್ಯಾ ಶಿವಪೂಜೈವ ಕರ್ತವ್ಯೇತಿ ಪುನಃ ಪುನಃ ॥೩೬॥

ದಾರಾಸ್ತೇ ಶಿಕ್ಷಣೀಯಾಸ್ತೇ ಸ್ವತಸ್ತೇ ಶಾಂಕರಾ ಅಪಿ ।
ಪುನಃ ಪುನಃ ಶಿವಾಚಾರಃ ಕರ್ತವ್ಯ ಇತಿ ಸಾದರಂ ॥೩೭॥

ರೇವಾತೀರೇಷ್ವದೂರೇಷು ಸ್ಥಾತವ್ಯಂ ಚ ಮಯಾ ಸುತ ।
ತ್ವಯಾ ಪ್ರತ್ಯಹಮಾಗತ್ಯ ದ್ರಷ್ಟವ್ಯಸ್ಸಬಲಾಹಕಃ ॥೩೮॥

ಇತಿ ತದ್ವಚನಂ ಶ್ರುತ್ವಾ ರಾಜಾನಂ ತಮುವಾಚ ಹ ।
ವಿಲೋಕ್ಯ ಜನನೀಂ ವೃದ್ಧಾಂ ಭ್ರಾತೄನಪ್ಯತಿಬಾಲಕಾನ್ ॥೩೯॥

॥ ಮೃಡ ಉವಾಚ ॥

ನ ರಾಜ್ಯತೃಷ್ಣಾ ಮಮ ಸರ್ವಥಾಪಿ
ನ ಭೋಗತೃಷ್ಣಾಪಿ ಪರಂ ತು ನಿತ್ಯಂ ।

ವನ್ನು ಅನುಭವಿಸಬೇಕು. ಸ್ತ್ರೀಸುಖದಲ್ಲಿ ಎಂದೂ ಮೈಮರೆಯದೇ ಆ ಸಮಯ ದಲ್ಲಿಯೂ ಸಹ ಶಿವನನ್ನೇ ಧ್ಯಾನಿಸುತ್ತಿರು. ॥೩೫॥

ನಿನಗೆ ಮುಂದೆ ಸತ್ಪುತ್ರರು ಹುಟ್ಟುವರು. ಅವರಿಗೂ ಸರ್ವದಾ ಶಿವಪೂಜೆ ಯನ್ನೇ ಮಾಡುತ್ತಿರುವಂತೆ ಉಪದೇಶಮಾಡು. ॥೩೬॥

ನಿನ್ನ ಪತ್ನಿಯರು ಸ್ವತಃ ಶಿವಭಕ್ತರಾಗಿದ್ದರೂ ಅವರಿಗೆ ಪದೇ ಪದೇ ಶಿವಧರ್ಮವನ್ನೇ ಬೋಧಿಸುತ್ತಿರು. ಅವರು ಶಿವಧರ್ಮವನ್ನು ಎಂದೂ ತಪ್ಪದಂತೆ ಶಿಕ್ಷಣವನ್ನು ಕೊಡು. ॥೩೭॥

ನಾನು ಕೂಡ ಹತ್ತಿರದಲ್ಲೇ ಇರುವ ನರ್ಮದೆಯ ತೀರದಲ್ಲಿ ವಾಸಮಾಡಿ ಕೊಂಡು ಶಿವಾರಾಧನೆಯನ್ನು ಮಾಡುತ್ತಿರುವೆನು. ನೀನು ಪ್ರತಿದಿನವೂ ಪತ್ನೀಪುತ್ರ ರೊಂದಿಗೆ ಅಲ್ಲಿಗೆ ಬಂದು ಸಂದರ್ಶನಮಾಡುತ್ತಿರು." ॥೩೮॥

ಹೀಗೆಂದು ರಾಜನು ಹೇಳಲು ಮೃಡನು ಅದನ್ನು ಕೇಳಿ, ತನ್ನ ಚಿಕ್ಕ ಸಹೋದರರನ್ನೂ ತಾಯಿಯನ್ನೂ ನೋಡಿ ಕನಿಕರಪಡುತ್ತಾ ಹೀಗೆ ಹೇಳಿದನು. ॥೩೯॥

"ನನಗೆ ರಾಜ್ಯದಲ್ಲಿ ಸರ್ವಥಾ ಅಪೇಕ್ಷೆ ಇಲ್ಲ. ಸುಖಭೋಗಗಳಲ್ಲಿಯೂ

ಮಹೇಶ್ವರಾಧನಮೇವ ಕಾರ್ಯಂ
ರೇವಾಸರಿತ್ತೀರವನೇ ಮಯಾಪಿ ॥೪೦॥

ರಾಜ್ಯಂ ವಿನಶ್ವರಮಿತಿ ಸ್ಮರ ಸರ್ವಥಾಪಿ
ನೂನಂ ಶರೀರಮಪಿ ನಶ್ವರಮೇವ ರಾಜನ್ ।
ರಾಜ್ಯೇಷು ಕಸ್ಯ ಚಿರಸಂಸ್ಥಿತಾ ಮತಿಃ ಸ್ಯಾತ್
ಜಾತಂ ಸ್ವನಾಶಸಮಯಂ ಸಮಪೇಕ್ಷತೇಚ ॥೪೧॥

ಕಾಲಸ್ಯ ತಾವತ್ಕರುಣಾಲವೋಽಪಿ
ನೇತಿ ಸ್ಮರಾಮಿ ಸ್ಮರ ವೈರಿರೂಪಂ ।
ಅತಃ ಪರಂ ಕಾ ತವ ರಾಜ್ಯಚಿಂತಾ
ನ ದೇಹಚಿಂತಾಪ್ಯುಚಿತಾ ತವಾದ್ಯ ॥೪೨॥

ಮೃತ್ಯುಸ್ಸನ್ನಿಹಿತೋ ಭವೇದ್ಯದಿ ತದಾ ರಾಜ್ಯಸ್ಯ ವಾರ್ತಾ ಕುತಾ
ಭೋಗಸ್ಯಾಪಿ ಧನಸ್ಯ ವಾಜಿನಿಕರೇಷ್ವಾಡೋಹಭಾಗ್ಯಸ್ಯ ಚ ।

ನನಗೆ ಆಸೆಯಿಲ್ಲ. ನಾನೂ ಅವಶ್ಯವಾಗಿ ಶಿವಾರಾಧನೆಯನ್ನೇ ಮಾಡಲು ಅಪೇಕ್ಷಿಸುತ್ತೇನೆ. ನರ್ಮದಾತೀರದಲ್ಲೇ ವಾಸಮಾಡಲು ನಾನು ಬಯಸುತ್ತೇನೆ. ॥೪೦॥

ಮಹಾರಾಜನೇ, ರಾಜ್ಯವು ಸರ್ವಥಾ ಅನಿತ್ಯವಾದದ್ದಷ್ಟೆ. ಈ ಭೌತಿಕ ಶರೀರವೂ ನಿತ್ಯವಾದದ್ದಲ್ಲ. ಇಂಥ ಕ್ಷಣಭಂಗುರವಾದ ರಾಜ್ಯದಲ್ಲಿ ಯಾರ ಮನಸ್ಸು ತಾನೇ ಆಸಕ್ತವಾದೀತು? ಈ ಶರೀರಕ್ಕೆ ಸದಾ ಮೃತ್ಯುವು ಆವರಿಸಿಕೊಂಡಿರುವುದರಿಂದ ಇದರಲ್ಲಿ ಯಾವ ನಂಬಿಕೆಯೂ ಇಲ್ಲ. ॥೪೧॥

ಮೃತ್ಯುವಿಗೆ ಯಾವ ಮಾನವನಲ್ಲಿಯೂ ಕೊಂಚವೂ ದಯೆಯಿರುವುದಿಲ್ಲವೆಂದು ತಿಳಿದೇ ನಾನು ಸರ್ವದಾ ಕಾಮನಾಶಕನಾದ ಶಂಕರನನ್ನು ಧ್ಯಾನಿಸುವೆನು. ಆದುದರಿಂದ ನಿನಗಾಗಲಿ ನನಗಾಗಲಿ ಇನ್ನು ಈ ರಾಜ್ಯದ ಚಿಂತೆಯನ್ನು ಕಟ್ಟಿಕೊಂಡು ಆಗಬೇಕಾದುದೇನು? ಅಥವಾ ಈ ದೇಹಾಭಿಮಾನದಿಂದ ಯಾವ ಪ್ರಯೋಜನವು ತಾನೆ ಲಭಿಸೀತು? ॥೪೨॥

ಎಂದಿನವರೆಗೆ ಮೃತ್ಯುವಿನಿಂದ ಅಪಾಯವು ಸಂಭಾವಿತವಾಗಿರುವುದಿಲ್ಲವೋ ಅಂದಿನವರೆಗೆ ಮಾತ್ರ, ಪತ್ನೀ ಪುತ್ರರು, ಧನಕನಕವಸ್ತುವಾಹನಗಳು, ಸುಖಕರ

ಕಿಂ ದಂತಿಪ್ರವರೈರುದಾರಚರಿತೈರ್ದಾರೈಶ್ಚ ತಸ್ಮಾದಿದಂ
ವ್ಯರ್ಥಂ ಸರ್ವಮಿತಿ ಸ್ಮರ ಸ್ಮರಹರಂ ವೀರೇಶ್ವರಂ ಸಂಸ್ಮರ ॥೪೩॥

ಅದ್ಯಾಪಿ ಭೋಗೇಷಣಯಾ ವಯಃ ಕಿಂ
ನೇಯಂ ಮಯಾ ಮೃತ್ಯುರುಪಾಗತಶ್ಚೇತ್ ।
ತದ್ವಾರಕಃ ಕೋಽಪಿ ನ ಲೌಕಿಕೋಽಪಿ
ನಾಲೌಕಿಕೋಽಪೀತಿ ಹರಂ ಸ್ಮರಾಮಿ ॥೪೪॥

ಇತಿ ತದ್ವಚನಂ ಶ್ರುತ್ವಾ ಸ ರಾಜಾಪಿ ತಥಾಸ್ತ್ವಿತಿ ।
ತಮುಕ್ತ್ವಾ ನಿರ್ಗತೋ ಗೇಹಾತ್ಸದಾರಃ ಸ್ವಸುತೈಸ್ಸಹ ॥೪೫॥

ಗಳೆಂದು ನಾವು ಅಭಿಮಾನಪಡುತ್ತೇವೆ. ಆದರೆ ಮರಣಕಾಲವು ಸನ್ನಿಹಿತವಾಯಿತೆಂದರೆ, ಯಾವ ಸುಖಸಾಧನಗಳೂ ಕಣ್ಣಿಗೆ ಗೋಚರಿಸುವುದಿಲ್ಲ. ಪತ್ನೀಪುತ್ರರು ಎಲ್ಲಿಯೋ ಮಾಯವಾಗುತ್ತಾರೆ. ಅಶ್ವಾದಿವಾಹನಗಳೂ ನಮಗೆ ಜೊತೆಯಾಗುವುದಿಲ್ಲ. ನಮ್ಮ ಯಾವ ಸಂಪತ್ತೂ ನಂಬಲರ್ಹವಾಗಿರುವುದಿಲ್ಲ. ಆದುದರಿಂದ ನಾವು ಮುಖ್ಯವಾಗಿ ಪರಮೇಶ್ವರನನ್ನೇ ಶರಣುಹೊಂದಬೇಕು. ಆ ವೀರೇಶ್ವರಸ್ವರೂಪನಾದ ಶಿವನನ್ನೇ ನಾವು ಸದಾ ಧ್ಯಾನಿಸೋಣ. ॥೪೩॥

ಜನಕನೇ, ಇನ್ನೂ ನಾನು ಈ ತುಚ್ಛವಾದ ಭೋಗವಿಲಾಸಗಳನ್ನು ಬಯಸಿಕೊಂಡು ಮೂಢನಾಗಿರಲೇ? ಇದು ನನ್ನಿಂದ ಸಾಧ್ಯವಿಲ್ಲ. ಕೇವಲ ಸುಖಲಾಲಸೆಯಿಂದ ನನ್ನ ಆಯುಷ್ಯವನ್ನು ವ್ಯರ್ಥಪಡಿಸಿಕೊಳ್ಳಲಾರೆ. ನನಗೆ ಮೃತ್ಯುವು ಪ್ರಾಪ್ತವಾಯಿತೆಂದರೆ ಆಗ ಅದನ್ನು ನಿವಾರಣೆಮಾಡತಕ್ಕವರು ಯಾರು? ಇಹದಲ್ಲಾಗಲಿ ಪರದಲ್ಲಾದಲಿ ಆಗ ನನ್ನನ್ನು ಕಾಪಾಡುವವರು ಯಾರಿರುವರು? ಆದುದರಿಂದ ನಾನು ನಿರ್ವಂಚನೆಯಿಂದ ಸದಾ ಶಿವನನ್ನೇ ಧ್ಯಾನಿಸುತ್ತೇನೆ." ॥೪೪॥

ನೃಪನು ಈ ಪ್ರಕಾರವಾಗಿ ತನ್ನ ನಿಶ್ಚಿತವಾದ ಅಭಿಪ್ರಾಯವನ್ನು ಶ್ರುತಪಡಿಸಲು ಆಗ ರಾಜನು ನಿನ್ನಿಷ್ಟದಂತೆಯೇ ಆಗಲಿ ಎಂದು ಆಶ್ವಾಸನವಿತ್ತನು. ಅನಂತರ ತನ್ನ ಸಕಲ ಪತ್ನೀಪುತ್ರರೊಂದಿಗೆ ರೇವಾತೀರಕ್ಕೆಂದು ಮನೆಯಿಂದ ಹೊರಡಲನುವಾದನು. ॥೪೫॥

ತದಾನೀಮಾಗತಃ ಕಶ್ಚಿದಮಾತ್ಯಸ್ತಸ್ಯ ಭೂಪತೇಃ ।
ಬಲವಾನಿತಿ ವಿಜ್ಞಾತಃ ಪ್ರಾಹ ರಾಜಾನಮಾಸ್ತಿಕಂ ॥೪೬॥

॥ ಬಲವಾನುವಾಚ ॥

ರಾಜನ್ ಕಿಮಿದಮಾರಬ್ಧಂ ರಾಜ್ಯನಾಶೇ ಸತಿ ತ್ವಯಾ ।
ಕ್ವ ಸ್ಥಾತವ್ಯಂ ಪುತ್ರದಾರಪರಿವಾರೈಸ್ಸಹಾಧುನಾ ॥೪೭॥

ಚೋರಾಕ್ರಾಂತೇ ವನೇ ಕ್ವಾಪಿ ಸ್ಥಾತುಮೇವ ನ ಶಕ್ಯತೇ ।
ತಪೋಧನಾನಾಂ ಪೀಡಾ ಸ್ಯಾದ್ರೇವಾತೀರನಿವಾಸಿನಾಂ ॥೪೮॥

ರಾಜ್ಯಭ್ರಂಶೇ ಕ್ವ ವಾಸ್ಮಾಕಮನ್ನಪಾನಾದಿಕಂ ನೃಪ ।
ತದಭಾವೇ ಕಥಂ ವಾ ಸ್ಯಾತ್ತಪಸ್ಯಾ ಜೀವನಾನಿ ಚ ॥೪೯॥

ಆಗ ಬಲವಂತನೆಂಬ ಮಂತ್ರಿಯು ಈ ಎಲ್ಲಾ ಸನ್ನಾಹಗಳನ್ನೂ ನೋಡಿ ಕೂಡಲೇ ರಾಜನ ಸಮೀಪಕ್ಕೆ ಬಂದು ಈರೀತಿ ಬಿನ್ನವಿಸಿದನು. ॥೪೬॥

ಎಲೈ ಮಹಾರಾಜನೇ, ಇದೇನು ಮಹಾಸಂರಂಭವು ತೋರುತ್ತಿದೆ. ನೀವು ಹೊರಟುಹೋದರೆ ರಾಜ್ಯವನ್ನು ಶಾಂತಿಯಿಂದ ಕಾಪಾಡುವವರು ಯಾರು ? ನೀವು ಹೀಗೆ ಎಲ್ಲರೂ ಪ್ರಯಾಣಮಾಡಿದರೆ ರಾಜ್ಯವು ನಾಶವನ್ನೇ ಹೊಂದುವುದು. ಅನಂತರ ನೀವೂ ಪರಿವಾರವೂ ಹೇಗೆ ನಿರಾತಂಕವಾಗಿ ಇರಲು ಸಾಧ್ಯವಾದೀತು ? ನಿಮಗೆ ಯಾವ ಸ್ಥಾನವು ತಾನೇ ವಾಸಕ್ಕೆ ಯೋಗ್ಯವಾದೀತು ? ॥೪೭॥

ರಾಜ್ಯವನ್ನು ಕಾಪಾಡುವವರಿಲ್ಲದಿದ್ದರೆ ದೇಶದಾದ್ಯಂತದಲ್ಲಿಯೂ ಕಳ್ಳಕಾಕರ ಭಯವು ತಲೆದೋರುವುದಲ್ಲದೇ ನರ್ಮದಾ ತೀರದಲ್ಲೂ ಇತರ ವನಗಳಲ್ಲೂ ಚೋರರು ಉದ್ಧತರಾಗಿ ಮುನಿಗಳಿಗೂ ನಿಮಗೂ ಅನೇಕ ವಿಧವಾದ ಪೀಡೆಗಳನ್ನುಂಟುಮಾಡುವರು. ಎಲ್ಲಿಯೂ ವಾಸಮಾಡುವುದೇ ಅಸಾಧ್ಯವಾಗುವುದು. ॥೪೮॥

ರಾಜ್ಯವೆಲ್ಲವೂ ಅರಾಜಕವಾಗಿ ನಾಶಹೊಂದಿದ ಮೇಲೆ ನಮ್ಮ ಅನ್ನಾಹಾರಗಳ ವ್ಯವಸ್ಥೆಯು ಹೇಗೆ ನಡೆದೀತು ? ಎಲ್ಲಾ ಸಸ್ಯಗಳೂ ಆಹಾರಗಳೂ ನಾಶಹೊಂದುವುವು. ಅನ್ನಾಹಾರಗಳು ದೊರೆಯದ ಮೇಲೆ ತಪಸ್ಸನ್ನು ಹೇಗೆ ಮಾಡುವುದು ? ಬದುಕುವುದಾದರೂ ಎಂತು ? ॥೪೯॥

ಯದ್ಯಪ್ಯದ್ಯಾಪಿ ವೃದ್ಧಸ್ಯ ವನೇ ಯುಕ್ತಾ ತವ ಸ್ಥಿತಿಃ
ಬಾಲಕಾನಾಮುವಸ್ಥಾನಂ ದಾರಾಣಾಂ ಚ ಕಥಂ ಭವೇತ್ ॥೫೦॥

ಏತಾವತ್ಕಾಲಪರ್ಯಂತಂ ಕಥಂ ರಾಜ್ಯಂ ಕೃತಂ ತ್ವಯಾ ।
ಅದ್ಯೈವ ಸರ್ವನಾಶಾರ್ಥಂ ಪ್ರವೃತ್ತಮುಚಿತಂ ಕಥಂ ॥೫೧॥

ಏತೇ ಯುವಾನಸ್ಸರ್ವೇಽಪಿ ಕುಮಾರಾಸ್ತವ ಭೂಪತೇ ।
ಅಭುಕ್ತಭೋಗಾಃ ಕಾ ವಾ ಸ್ಯಾತ್ತಪಸ್ಯಾಪಿ ವಿಮುಕ್ತಯೇ ॥೫೨॥

ಅಯಂ ಜ್ಯೇಷ್ಠಃ ಕುಮಾರಸ್ತೇ ಮೃಡೋ ಮೃಡ ಇವಾಪರಃ ।
ಕರೋತು ಪಾಲನಂ ರಾಜನ್ ರಾಜ್ಯಸ್ಯಾಸ್ಯ ವಿಶೇಷತಃ ॥೫೩॥

ನೀನು ವೃದ್ಧನಾಗಿರುವುದರಿಂದ ಆರಣ್ಯದಲ್ಲಿ ವಾಸಮಾಡಿಕೊಂಡು ತಪಸ್ಸನ್ನಾಚರಿಸುವುದು ನಿನಗೆ ಯುಕ್ತವೇ ಇರಬಹುದು. ಆದರೆ ರಾಜಪುತ್ರರು ಇನ್ನೂ ತರುಣರಾಗಿರುವರು. ಆದುದರಿಂದ ಅವರೂ ಅವರ ಪತ್ನಿಯರೂ ವನವಾಸಕ್ಕೆ ಹೇಗೆ ಯೋಗ್ಯರಾದಾರು ? ॥೫೦॥

ಹೀಗೆ ಥಟಕ್ಕನೆ ವೈರಾಗ್ಯಹೊಂದಲು ಇಷ್ಟುದಿನದವರೆಗೆ ರಾಜ್ಯವನ್ನು ಏತಕ್ಕಾದರೂ ಕಾಪಾಡಿಕೊಂಡು ಬಂದೆ ? ಇಷ್ಟು ಅಭಿವೃದ್ಧಿಪಡಿಸಿ ಅಕಸ್ಮಾತ್ ನಾಶಪಡಿಸಲು ಮನವಾದರೂ ಹೇಗೆ ಬರುವುದು ? ಇಂಥ ಸಮೃದ್ಧವಾದ ರಾಜ್ಯವನ್ನು ನಾಶಪಡಿಸುವುದು ಉಚಿತವಾಗುವುದೇ ? ॥೫೧॥

ನಿನ್ನ ಪುತ್ರರೆಲ್ಲರೂ ಈಗ ಪ್ರವರ್ಧಮಾನರಾಗಿ ಯುವಕರಾಗಿರುತ್ತಾರೆ. ಇವರು ಕೇವಲ ಸುಖಾನುಭವಕ್ಕೆ ಯೋಗ್ಯರಾಗಿರುವರಲ್ಲದೇ ತಪಸ್ಸಿಗೆ ಯೋಗ್ಯರಲ್ಲ. ಅಲ್ಲದೇ ಸುಖವನ್ನು ಮೊದಲು ಅನುಭವಿಸದೆ ಮಾಡಿದ ಯಾವ ತಪಸ್ಸು ತಾನೇ ಮೋಕ್ಷಕ್ಕೆ ಸಾಧನವಾದೀತು ? ॥೫೨॥

ನಿನ್ನ ಜ್ಯೇಷ್ಠಪುತ್ರನಾದ ಮೃಡನು ಅತ್ಯಂತ ಯೋಗ್ಯನಾಗಿರುವನು. ಆತನು ಸಾಕ್ಷಾತ್ ಪರಮೇಶ್ವರನಂತೆಯೇ ಇರುವನು. ಆತನು ಅವಶ್ಯವಾಗಿ ಈ ರಾಜ್ಯವನ್ನು ಪಾಲಿಸಬೇಕೆಂಬುದೇ ನಮ್ಮ ಅಪೇಕ್ಷೆ. ॥೫೩॥

ವಾರ್ಧಕೇ ಸಮನುಪ್ರಾಪ್ತೇ ತಪಸ್ಯಾರ್ಥಂ ಪ್ರಯಾಸ್ಯತು ।
ಕೃತ್ವಾ ಕುಮಾರಂ ರಾಜ್ಯಸ್ಯ ಪಾಲಕಂ ಸಕಲಸ್ಯ ಚ ॥೫೪॥

ಅಥವಾ ಭ್ರಾತರಸ್ಸಂತಿ ತೇ ವಾ ತತ್ಪರಿಪಾಲನಂ
ಕರಿಷ್ಯಂತ್ಯಧುನಾ ತಾವತ್ಸರ್ವೇಷಾಂ ಗಮನಂ ಕಥಂ ॥೫೫॥

ಇತ್ಯಮಾತ್ಯವಚಃ ಶ್ರುತ್ವಾ ಸ ರಾಜಾ ಮೃಡನಾಮಕಂ ।
ಪುತ್ರಂ ಪ್ರಾಹ ಶೃಣುಷ್ವೇತದಮಾತ್ಯವಚನಂ ಸುತ ॥೫೬॥

ಪುತ್ರಕೃತ್ಯಂ ತ್ವಯಾ ಕಾರ್ಯಂ ಕಿಯತ್ಕಾಲಂ ತತಃ ಪರಂ ।
ತಪಸ್ಯಾರ್ಥಂ ಸಮಾಯಾಹಿ ಕೃತ್ವಾ ರಾಜ್ಯಸ್ಯ ರಕ್ಷಕಂ ॥೫೭॥

ಮೃಡನು ಅನೇಕ ವರ್ಷದ ವರೆಗೆ ರಾಜ್ಯವನ್ನು ಪರಿಪಾಲಿಸಿಕೊಂಡಿದ್ದು ಮುಪ್ಪು ಬಂದನಂತರ ತನ್ನ ಮಗನಿಗೆ ಪಟ್ಟಕಟ್ಟಿ ರಾಜ್ಯಭಾರವನ್ನು ವಹಿಸಿ, ಬೇಕಾದರೆ ಅರಣ್ಯಕ್ಕೆ ತಪಸ್ಸಿಗಾಗಿ ಹೋಗಲಿ. ಆದರೆ ಈಗ ಆತನೂ ಅರಣ್ಯಕ್ಕೆ ಹೋಗಕೂಡದೆಂಬುದೇ ನಮ್ಮ ಅಪೇಕ್ಷೆ. ಮೃಡನಿಗೆ ರಾಜ್ಯಭಾರವನ್ನು ಒಪ್ಪಿಸಿ ನೀನು ಬೇಕಾದರೆ ತಪಸ್ಸಿಗೆ ಹೋಗಬಹುದು. ||೫೪||

ಮೃಡನೊಲ್ಲದಿದ್ದರೆ ಆತನ ಭ್ರಾತೃಗಳಾದರೂ ಈ ರಾಜ್ಯವನ್ನು ಕಾಪಾಡಲೇ ಬೇಕು. ನೀವೆಲ್ಲರೂ ಹೀಗೆ ಒಟ್ಟಿಗೆ ಕಾಡಿಗೆ ಹೋದರೆ ಹೇಗೆ? ರಾಜ್ಯವು ಅರಾಜಕವಾಗುವುದು. ||೫೫||

ಹೀಗೆಂದು ಮಂತ್ರಿಯು ಬಿನ್ನವಿಸಿಕೊಳ್ಳಲು ಆಗ ರಾಜನು ಮೃಡನನ್ನು ಕುರಿತು, ಕುಮಾರನೇ ಕೇಳಿದೆಯಾ, ಮಂತ್ರಿಯ ಮಾತನ್ನು ಲಾಲಿಸಿದೆಯಾ? ಈತನ ಮಾತು ಯುಕ್ತವಾಗಿರುವುದು ಮತ್ತು ಅವಶ್ಯ ನಡೆಸಬೇಕಾದದ್ದು. ||೫೬||

ಕೆಲವು ಕಾಲ ನೀನು ರಾಜ್ಯಭಾರವನ್ನು ನಡೆಯಿಸಿ ಪುತ್ರಕರ್ತವ್ಯವನ್ನು ಮಾಡು. ಮುಂದೆ ರಾಜ್ಯಾಧಿಕಾರಿಯೊಬ್ಬನು ದೊರೆತನಂತರ ಆತನಿಗೆ ಪಟ್ಟಗಟ್ಟಿ ರಾಜ್ಯದ ಸಂರಕ್ಷಕನನ್ನಾಗಿ ಮಾಡಿ, ಬಳಿಕ ತಪಸ್ಸನ್ನಾಚರಿಸಲು ಅರಣ್ಯಕ್ಕೆ ಬಾ. ||೫೭||

ಕಿಂ ಚಾಧುನಾಪಿ ನಾಸ್ಮಾಕಂ ವನ್ಯಾಹಾರೇಣ ಜೀವನಂ ।
ಆದೌ ಮಮಾತಿವೃದ್ಧಸ್ಯ ಗ್ರಾಮ್ಯಮನ್ನಮುಪೇಕ್ಷಿತಂ ॥೫೮॥

ರಾಜ್ಯನಾಶೇ ಕಥಂ ತತ್ಸ್ಯಾದ್ಬಾಲಾನಾಮಪಿ ರಕ್ಷಣಂ ।
ಪಿತರಾವತಿವೃದ್ಧೌ ಕಿಂ ನ ಪೋಷ್ಯಾ ತವ ಪುತ್ರಕ ॥೫೯॥

ಇತಿ ತದ್ವಚನಂ ಶ್ರುತ್ವಾ ಸಿಂಹಾಸನಮಧಿಷ್ಠಿತಃ ।
ಜ್ಯೇಷ್ಠಂ ಕುಮಾರಂ ತಂ ದೃಷ್ಟ್ವಾ ಪ್ರಹೃಷ್ಟಸ್ಸೋಽಪಿ ಭೂಪತಿಃ ॥೬೦॥

ತದಾನೀಮುತ್ಸವಂ ಕೃತ್ವಾ ಸ್ಥಿತ್ವಾ ತಸ್ಮಿನ್ ದಿನೇ ನೃಪಃ ।
ತದಧೀನಂ ಚಕಾರಾಶು ರಾಜ್ಯಂ ಸಾಮಾತ್ಯಮಂಡಲಂ ॥೬೧॥

ಅಲ್ಲದೇ ಇನ್ನೊಂದು ವಿಷಯವಿರುವುದು. ನಾನು ಅತ್ಯಂತ ವೃದ್ಧನಾಗಿರುವುದರಿಂದ ಕಾಡಿನ ಆಹಾರವನ್ನು (ಗೆಡ್ಡೆ ಗೆಣಸು) ತೆಗೆದುಕೊಳ್ಳುವುದು ಕಷ್ಟವಾಗುವುದು. ಮೊದಲು ಮೊದಲು ನಾನು ನಗರವಾಸಿಗಳ ಸಾತ್ವಿಕವಾದ ಸಸ್ಯಾಹಾರವನ್ನು ತೆಗೆದುಕೊಳ್ಳಬೇಕಾಗುವುದು. ॥೫೮॥

ರಾಜ್ಯವು ನಾಶವಾಗಿಹೋದರೆ ಆತೆರನ್ನಾದ ಅನುಕೂಲವು ಹೇಗೆ ದೊರೆತೀತು? ಅದಕ್ಕೆ ರಾಜ್ಯವು ಅವಶ್ಯವಾಗಿ ಸುವ್ಯವಸ್ಥಿತವಾಗಿರಬೇಕಾಗುವುದು. ಬಾಲಕರ ಸಂರಕ್ಷಣೆಗಾಗಿಯೂ ರಾಜ್ಯವು ಸಂರಕ್ಷಿತವಾಗಿರಬೇಕು. ವೃದ್ಧರಾದ ಮಾತಾಪಿತೃಗಳನ್ನು ನೀನೇ ಸರಿಯಾಗಿ ಪೋಷಿಸಬೇಕಷ್ಟೆ. ॥೫೯॥

ಮಹಾರಾಜನ ಆ ಮಾತನ್ನು ಕೇಳಿ ರಾಜಪುತ್ರನಾದ ಮೃಡನು ರಾಜ್ಯಭಾರವನ್ನು ವಹಿಸಿಕೊಳ್ಳಲು ಸಮ್ಮತಿಸಿ ಸಿಂಹಾಸನವನ್ನೇರಿದನು. ಇದರಿಂದ ಮಹಾರಥ ರಾಜನಿಗೆ ಬಹಳ ಸಂತೋಷವಾಯಿತು. ॥೬೦॥

ಆಗ ಮೃಡನಿಗೆ ಪಟ್ಟಾಭಿಷೇಕವನ್ನೂ, ಸಂಭ್ರಮವಾಗಿ ಉತ್ಸವವನ್ನೂ ನೆರವೇರಿಸಿ ರಾಜನು ಆದಿನ ಅಲ್ಲಿಯೇ ಇದ್ದನು. ಸಕಲ ರಾಜ್ಯವನ್ನೂ ಮಂತ್ರಿಮಂಡಲ ಮತ್ತು ಕೋಶ ಮುಂತಾದುವನ್ನೂ ಮೃಡನಿಗೆ ಒಪ್ಪಿಸಿ ತಾನು ನಿಶ್ಚಿಂತನಾದನು. ಇದರಿಂದ ಮಂತ್ರಿಗಳಿಗೂ ಮತ್ತು ಪ್ರಜೆಗಳಿಗೂ ತಮಗೆ ದಕ್ಷನಾದ ರಾಜನು ದೊರೆತನೆಂದು ಪರಮಾನಂದವಾಯಿತು. ॥೬೧॥

ಕಿಯತ್ಕಾಲಂ ಗೃಹೇ ಸ್ಥಿತ್ವಾ ಸ ಭೂಪೋ ಮಹಿಲಾಯುತಃ ।
ರೇವಾತೀರವನೇ ವಾಸಂ ಚಕಾರ ಶಿವತತ್ಪರಃ ॥೬೨॥

ಪಿತ್ರಾ ಸಹ ಕುಮಾರಾಶ್ಚ ನಿರ್ಗತಾಃ ಕೇಚಿದಾದರಾತ್ ।
ಸ್ವಸ್ವದಾರಾನ್ವಿತಾ ಏವ ಶಿವಪೂಜಾಪರಾಯಣಾಃ ॥೬೩॥

ತತ್ರ ತೇನ ಸ್ಥಿತಂ ರಾಜ್ಞಾ ರೇವಾತೀರೇ ಮನೋಹರೇ ।
ಹರಾರಾಧನಸಂಪತ್ತ್ಯಾ ಸವೃದ್ಧಃ ಸುತಸೇವಿತಃ ॥೬೪॥

ಸ ಪುತ್ರಃ ಪ್ರೇಷಯಾಮಾಸ ಜ್ಯೇಷ್ಠಪುತ್ರಃ ಸ್ವಕಂ ಬಲಂ ।
ವನೇ ತದ್ರಕ್ಷಣಂ ಕರ್ತುಮನ್ನಾನಿ ವಿವಿಧಾನ್ಯಪಿ ॥೬೫॥

ಹೀಗೆ ಸಕಲ ಉತ್ಸವಗಳನ್ನೂ ಸಂಭ್ರಮದಿಂದ ನಡೆಸಿ ಮಹಾರಥನು ಕೆಲವು ದಿನ ಪಟ್ಟಣದಲ್ಲಿದ್ದು ರಾಜ್ಯವನ್ನು ಸುವ್ಯವಸ್ಥೆಗೊಳಿಸಿದನಂತರ ರೇವಾತೀರಕ್ಕೆ ಹೊರಟುಹೋದನು. ಅಲ್ಲಿ ತನ್ನ ಪತ್ನಿಯೊಡನೆ ಸರ್ವದಾ ಶಿವಾರಾಧನೆ ಮಾಡುತ್ತಾ ವಾಸಮಾಡುತ್ತಿದ್ದನು. ||೬೨||

ಆಗ ತಂದೆಯೊಡನೆ ಕೆಲವು ಜನ ರಾಜಪುತ್ರರೂ ಸುಮನಸ್ಕರಾಗಿ ತಮ್ಮ ತಮ್ಮ ಪತ್ನಿಯರೊಂದಿಗೆ ನರ್ಮದಾತೀರಕ್ಕೆ ಹೋದರು. ಮತ್ತು ಸದಾ ಶಿವಪೂಜೆಯನ್ನೇ ಮಾಡುತ್ತ ಅಲ್ಲಿ ಕಾಲ ಕಳೆಯುತ್ತಿದ್ದರು. ||೬೩||

ಆ ನರ್ಮದಾತೀರವು ಸದಾ ಶಾಂತವಾಗಿಯೂ ಮನೋಹರವಾಗಿಯೂ ಇದ್ದುದರಿಂದ ಅವರಿಗೆ ಶಿವಾರಾಧನೆಯನ್ನು ಮಾಡಲು ಯಾವ ಅಡ್ಡಿ ಆತಂಕಗಳೂ ಒದಗುತ್ತಿರಲಿಲ್ಲ. ಅವರು ಅವಿಚ್ಛಿನ್ನವಾಗಿ ಅನೇಕ ಸಾಧನಗಳಿಂದ ಶಿವನನ್ನೇ ಪೂಜಿಸುತ್ತಾ ಕಾಲಹರಣಮಾಡುತ್ತಿದ್ದರು. ಆ ರಾಜಪುತ್ರರೂ ಸಹ ಭಕ್ತಿಯಿಂದ ವೃದ್ಧನಾದ ತಂದೆಯನ್ನು ಸೇವಿಸುತ್ತಿದ್ದರು. ||೬೪||

ಜ್ಯೇಷ್ಠಪುತ್ರನಾದ ನೃಪನೂ ಸಹ ತನ್ನ ಮಾತಾಪಿತೃಗಳ ರಕ್ಷಣೆಗಾಗಿ ದೊಡ್ಡ ಸೈನ್ಯವನ್ನೇ ಕಳುಹಿಸಿದನು. ಇದರಿಂದ ಅವರಿಗೆ ಯಾವಾಗಲೂ ಯಾವ ವಿಘ್ನವೂ ಉಂಟಾಗುತ್ತಿರಲಿಲ್ಲ. ನೃಪನು ಆಗಾಗ ಅನೇಕವಿಧವಾದ ಅನ್ನಾಹಾರ ಸಾಮಗ್ರಿಗಳನ್ನೂ ಕಳುಹಿಸುತ್ತಿದ್ದನು. ||೬೫||

ಗೋಸಹಸ್ರಾಣಿ ಬದ್ಧಾನಿ ತಸ್ಮಿನ್ನೇವ ವನೇ ಸದಾ ।
ದಧಿದುಗ್ಧಾದಿಲಾಭಾಯ ತೇನ ಪುತ್ರೇಣ ಧೀಮತಾ ॥೬೬॥

ರಾಜಾ ವನಮುಪಾಶ್ರಿತ್ಯ ತಿಷ್ಠತೀತಿ ಮುನೀಶ್ವರಾಃ ।
ನಿರ್ಭಯಾ ಏವ ತೇ ಸರ್ವೇ ತೇನ ರಾಜ್ಞಾ ಸಮರ್ಚಿತಾಃ ॥೬೭॥

ಸಂಪೂಜಯತಿ ಗೌರೀಶಂ ದಧಿಕ್ಷೀರಘೃತಾದಿಭಿಃ ।
ರೇವಾಲಿಂಗೇಷ್ವಪಾರೇಷು ಚಂದನಾದ್ಯೈರ್ಮನೋಹರೈಃ ॥೬೮॥

ಅನ್ನರಾಶಿಭಿರೀಶಾನಂ ಪೂಜಯಾಮಾಸ ಸಾದರಂ ।
ಶಿವಾರ್ಪಿತಾನ್ನೈರ್ವಿಪ್ರಾಶ್ಚ ಭೋಜಿತಾಸ್ತೇನ ಕೋಟಿಶಃ ॥೬೯॥

ಮೃಡನು ಮಹಾವಿವೇಕಿಯಾಗಿದ್ದುದರಿಂದ ತಂದೆತಾಯಿಗಳಿಗೆ ಯಾವಾಗ ಏನೇನು ಬೇಕಾಗುತ್ತದೆಂಬುದನ್ನು ಅರಿತುಕೊಂಡು ಎಲ್ಲ ಪದಾರ್ಥಗಳನ್ನೂ ಸಿದ್ಧಪಡಿಸುತ್ತಿದ್ದನು. ಕಾಲಕಾಲಕ್ಕೆ ಸರಿಯಾಗಿ ಹಾಲು ಮೊಸರು ಮುಂತಾದವುಗಳು ಲಭಿಸುವಂತೆ ಆ ವನದಲ್ಲೇ ಅನೇಕ ಗೋವುಗಳನ್ನು ತಂದು ಕಟ್ಟಿಸಿದನು. ಮತ್ತು ಅವುಗಳನ್ನು ಪೋಷಿಸುವುದಕ್ಕೆ ವ್ಯವಸ್ಥೆಮಾಡಿದನು. ||೬೬||

ರಾಜನೂ ಸಹ ತಮ್ಮೊಂದಿಗೆ ವನದಲ್ಲೇ ಇದ್ದುಕೊಂಡು ತಪಸ್ಸನ್ನಾಚರಿಸುವನೆಂದು ತಿಳಿದು ಮುನಿಗಳಿಗೆಲ್ಲರಿಗೂ ಬಹಳ ಸಂತೋಷವಾಯಿತು. ಇನ್ನು ತಪಸ್ಸಿಗೆ ಯಾವ ವಿಘ್ನವಾಗಲಿ ಭಯವಾಗಲಿ ಉಂಟಾಗಲಾರದೆಂದು ಅವರು ನಿಶ್ಚಿಂತರಾದರು. ಅಲ್ಲದೇ ರಾಜನು ಆಗಾಗ ಮುನಿಗಳೆಲ್ಲರನ್ನೂ ಅನೇಕವಿಧವಾಗಿ ಪುರಸ್ಕರಿಸುತ್ತಿದ್ದನು. ||೬೭||

ಅಲ್ಲಿ ಶಿವಪೂಜೆಗಾಗಿ ಹಾಲು, ಮೊಸರು, ತುಪ್ಪ ಇವುಗಳು ಸದಾ ಸಿದ್ಧವಾಗಿರುತ್ತಿದ್ದವು. ಅವುಗಳಿಂದ ನರ್ಮದಾಲಿಂಗಗಳನ್ನು ವಿಧಿವತ್ತಾಗಿ ಸದಾ ರಾಜನು ಪೂಜಿಸುತ್ತಿದ್ದನು. ||೬೮||

ನಾನಾವಿಧವಾದ ಅನ್ನಗಳನ್ನೂ ಭಕ್ಷ್ಯಭೋಜ್ಯಗಳನ್ನೂ ಶಿವನಿಗೆ ನಿವೇದಿಸುತ್ತಿದ್ದನು. ಪೂಜೆಯಾದ ಬಳಿಕ ಅನೇಕ ಬ್ರಾಹ್ಮಣರಿಗೆ ಆ ಶಿವನೈವೇದ್ಯದಿಂದ ಅನ್ನಸಂತರ್ಪಣೆಯನ್ನು ನಡೆಸಿ ತೃಪ್ತಿಪಡಿಸುತ್ತಿದ್ದನು. ||೬೯||

ಕರ್ಪೂರದೀಪಮಾಲಾಭಿರ್ನರ್ಮದಾತೀರಸಂಕುಲಂ ।
ಸಾಯಂಕಾಲೇ ಸಮಾರಾಧ್ಯ ಯಾವತ್ಸೂರ್ಯೋದಯಂ ಕೃತಂ॥೭೦॥

ಧೂಪಾನಾಂ ಪರ್ವತಾ ಏವ ಸಾಗ್ನಯೋ ವನರಾಜಿಭಿಃ ।
ವಿರಾಜಮಾನಾಸ್ಸತತಂ ರೇವಾತೀರೇ ವಿಶೇಷತಃ ॥೭೧॥

ಪ್ರತ್ಯಹಂ ಸ ಸುತಸ್ತತ್ರ ಸಮಾಗತ್ಯ ವಿಲೋಕ್ಯ ತೌ ।
ಪಿತರೌ ಪೂಜನಂ ಕೃತ್ವಾ ಪ್ರಯಾತಿ ನಿಜಮಂದಿರಂ ॥೭೨॥

ಸ ರಾಜ್ಯಪಾಲನೋದ್ಯುಕ್ತಶ್ಶಿವಾರಾಧನತತ್ಪರಃ ।
ಪಿತೃಸೇವಾಪರೋ ಜಾತಸ್ತದಭೀಷ್ಟಾರ್ಥದಾನತಃ ॥೭೩॥

ಸ ಕೃತ್ವಾ ಸರ್ವದಾ ಪೂಜಾಂ ಮಹಾದೇವಸ್ಯ ಸಾಧನೈಃ ।
ಅಪಾರೈರತಿಸಂತುಷ್ಟಃ ಶೃಣ್ವಂಛಿವಕಥಾಶ್ಶುಭಾಃ ॥೭೪॥

ಆ ರಾಜನು ಪ್ರತಿದಿನವೂ ಮಹೋತ್ಸವದಿಂದ ಶಿವಾರಾಧನೆಯನ್ನು ಮಾಡುತ್ತಿದ್ದನಲ್ಲದೇ ವಿಶೇಷವಾಗಿ ಸಾಯಂಕಾಲದಲ್ಲಿ ಪೂಜೆಯನ್ನು ಆರಂಭಿಸಿ ರಾತ್ರಿ ವೇಳೆಯಲ್ಲಿ ಸೂರ್ಯೋದಯವಾಗುವವರೆಗೂ ಆ ನರ್ಮದಾ ತೀರವನ್ನು ಕರ್ಪೂರದೀಪದಿಂದಲೇ ಬೆಳಗಿಸಿ ಶಿವಪೂಜೆಯನ್ನು ಮಾಡುತ್ತಿದ್ದನು. ॥೭೦॥

ಶಿವಾರಾಧನೆಗಾಗಿ ಆತನು ಧೂಪಗಳ ರಾಶಿಯನ್ನೇ ನಿರ್ಮಿಸಿ ಅವುಗಳಿಗೆ ಬೆಂಕಿಯನ್ನು ಹೊತ್ತಿಸುತ್ತಿದ್ದನು. ಆ ಬೆಳಕಿನಿಂದಲೂ ಸುವಾಸನೆಯಿಂದಲೂ ರೇವಾತೀರದ ಆ ವನವು ಅತ್ಯಂತ ಮನೋಹರವಾಗಿ ಶೋಭಿಸುತ್ತಿದ್ದಿತು. ॥೭೧॥

ಜ್ಯೇಷ್ಠಪುತ್ರನಾದ ಮೃಡನು ಪ್ರತಿದಿನವೂ ಬಂದು ಮಾತಾಪಿತೃಗಳ ಸಂದರ್ಶನವನ್ನೂ ಪೂಜಾಸೇವೆಗಳನ್ನೂ ಮಾಡಿಕೊಂಡು ಹೋಗುತ್ತಿದ್ದನು. ॥೭೨॥

ಆ ಮೃಡನು ಬಹಳ ಆಸಕ್ತಿಯಿಂದ ರಾಜ್ಯವನ್ನು ಪರಿಪಾಲಿಸುವುದರಲ್ಲಿಯೂ, ಶ್ರದ್ಧೆಯಿಂದ ಶಿವನನ್ನು ಆರಾಧಿಸುವುದರಲ್ಲಿಯೂ ನಿರತನಾಗಿದ್ದನಲ್ಲದೇ ತಂದೆ ತಾಯಿಗಳಿಗೆ ಬೇಕುಬೇಕಾದ ಪದಾರ್ಥಗಳನ್ನು ಒದಗಿಸಿಕೊಡುತ್ತಾ ಸದಾ ಪಿತೃಸೇವೆಯಲ್ಲೂ ತತ್ಪರನಾಗಿದ್ದನು. ॥೭೩॥

ಆತನು ಅನೇಕ ಸಾಮಗ್ರಿಗಳಿಂದ ಸದಾ ಶಿವಪೂಜೆಯನ್ನು ಮಾಡುತ್ತಿದ್ದನಲ್ಲದೇ ಶ್ರೇಯಸ್ಕರಗಳಾದ ಶಿವಕಥೆಯನ್ನು ಸದಾ ಶ್ರವಣಮಾಡುತ್ತಾ ಆನಂದವಾಗಿರುತ್ತಿದ್ದನು. ॥೭೪॥

ಏವಂ ವನೇ ಸ್ಥಿತೋ ರಾಜಾ ದೇವೈರಪಿ ಸಮರ್ಚಿತಃ ।
ಮುನಿಭಿಸ್ಸಂಸ್ತುತೋ ನಿತ್ಯಂ ಗಂಧರ್ವೈರಪಿ ಕಿನ್ನರೈಃ ॥೭೫॥

ತತಃ ಕದಾಚಿದಾಗತ್ಯ ಮುನಯಶ್ಶಿವಪೂಜಕಂ ।
ತಂ ದೃಷ್ಟ್ವಾ ಭೂಪತಿಂ ಪ್ರಾಹುಃ ಕೃತಾರ್ಥೋಽಸೀತಿ ವಿಸ್ಮಿತಾಃ ॥೭೬॥

ತಪಸ್ಯಾ ಸೇಯಮುತ್ಕೃಷ್ಟಾ ಶಿವಪೂಜನಲಕ್ಷಣಾ ।
ಏತದನ್ಯಾ ವೃಥಾ ಸರ್ವಾ ದೇಹಶೋಷಣಕಾರಣಂ ॥೭೭॥

ಕೋಟಿಶಶ್ಶಾಂಭವಾ ಏವ ಶಿವನೈವೇದ್ಯಭೋಜನೈಃ ।
ತೃಪ್ತಾಃ ಕೃತಾಃ ಪವಿತ್ರಾಶ್ಚ ತವ ಭಾಗ್ಯಮಿದಂ ಮಹತ್ ॥೭೮॥

ಹೀಗೆಯೇ ಮಹಾರಥ ರಾಜನು ರೇವಾತೀರದ ವನದಲ್ಲಿ ಶಿವಾರಾಧನೆಯನ್ನು ಮಾಡುತ್ತಾ ಕಾಲಕಳೆಯುತ್ತಿರಲು ಆತನ ದರ್ಶನಾರ್ಥವಾಗಿ ಎಲ್ಲಾ ದೇವತೆಗಳೂ ಮುನಿಗಳೂ ಗಂಧರ್ವ ಕಿನ್ನರರೂ ಸಹ ಬಂದು ಆತನನ್ನು ಬಹುವಾಗಿ ಶ್ಲಾಘಿಸುತ್ತಿದ್ದರು ಮತ್ತು ಪೂಜಿಸಿ ಪುರಸ್ಕರಿಸುತ್ತಿದ್ದರು. ॥೭೫॥

ಹೀಗೆಯೇ ಒಂದು ಸಲ ಕೆಲವು ಮುನಿಗಳು ಬಂದು ಆತನ ದರ್ಶನಮಾಡಿ ಅತ್ಯಂತ ಸಂತೋಷದಿಂದ ಶ್ಲಾಘಿಸಿ ಹೀಗೆ ಹೇಳಿದರು. ಎಲೈ ರಾಜನೇ, ಶಿವಪೂಜಕನಾದ ನೀನೇ ಅತ್ಯಂತ ಧನ್ಯನಾಗಿರುವೆ. ॥೭೬॥

ನಿಜವಾಗಿಯೂ ತಪಸ್ಸೆಂದರೆ ಶಿವಪೂಜೆಯೇ ಸರಿ. ಇದೇ ಪರಮ ಶ್ರೇಷ್ಠವಾದುದು. ಇನ್ನುಳಿದ ಎಲ್ಲ ವ್ರತಗಳೂ ತಪಸ್ಸೂ ಸಹ ಕೇವಲ ಶರೀರಕ್ಕೆ ಆಯಾಸವನ್ನುಂಟುಮಾಡತಕ್ಕವುಗಳೇ ಸರಿ. ಅವುಗಳಿಂದ ನಿಜವಾಗಿಯೂ ಪ್ರಯೋಜನವಿಲ್ಲ. ಕೇವಲ ದೇಹಶ್ರಮವೊಂದೇ ಫಲ. ॥೭೭॥

ನೀನು ಅನೇಕ ಶಿವಭಕ್ತರಿಗೆ ಶಿವನಿವೇದಿತವಾದ ಅನ್ನವನ್ನು ಭೋಜನ ಮಾಡಿಸಿ ಅವರನ್ನು ತೃಪ್ತಿಪಡಿಸಿದೆಯಲ್ಲದೇ ಪವಿತ್ರರನ್ನೂ ಮಾಡಿರುತ್ತೀಯೆ. ಈ ಎಲ್ಲಾ ಸತ್ಪ್ರವೃತ್ತಿಯಿಂದ ನೀನೇ ಪುಣ್ಯವಂತನೂ ಮತ್ತು ಭಾಗ್ಯಶಾಲಿಯೂ ಆಗಿದ್ದೀಯೆ. ॥೭೮॥

ವನೇ ಫಲಾನ್ಯಸಾರಾಣಿ ತ್ಯಕ್ತ್ವಾಪಿ ಮುನಿಪುಂಗವಾಃ ।
ಆಯಾಂತಿ ಸತತಂ ಕರ್ತುಂ ಶಿವನೈವೇದ್ಯಭೋಜನಂ ॥೭೯॥

ಸಾಪೂಪೈಃ ಪರಮಾನ್ನೈಶ್ಚ ಘೃತೈರಪಿ ಮನೋಹರೈಃ ।
ಭುಕ್ತೈಶ್ಶಿವಾರ್ಪಿತೈಃ ಪುಷ್ಟಾಸ್ಸರ್ವೇಽಪಿ ಮುನಿಪುಂಗವಾಃ ॥೮೦॥

ಅಸ್ಥಿಮಾತ್ರಾವಶಿಷ್ಟಾಸ್ತೇ ಪೂರ್ವಮಾಹಾರವರ್ಜಿತಾಃ ।
ಅಧುನಾ ಶಿವನೈವೇದ್ಯೈಃ ಪುಷ್ಟಾಸ್ತುಷ್ಟಾಶ್ಚ ತೇ ನೃಪ ॥೮೧॥

ಅರಣ್ಯೇ ಸ್ವೇಚ್ಛಯಾ ಗತ್ವಾ ಬಿಲ್ವೈರೇವ ಸುದುರ್ಲಭೈಃ ।
ಆಮಧ್ಯಾಹ್ನಂ ಪೂಜಯಂತಿ ರೇವಾಲಿಂಗಾನಿ ಶಾಂಕರಾಃ ॥೮೨॥

ಇಲ್ಲಿರುವ ಸಕಲ ಮುನಿಗಳೂ ಅರಣ್ಯದಲ್ಲಿ ಗೆಡ್ಡೆಗೆಣಸುಗಳನ್ನೂ ಹಣ್ಣು ಹಂಪಲುಗಳನ್ನೂ ಬಿಟ್ಟು ಶಿವನೈವೇದ್ಯವನ್ನೇ ಭುಂಜಿಸಬೇಕೆಂದು ದಿನವೂ ನಿನ್ನಲ್ಲಿಗೇ ಬರುತ್ತಿರುವರು. ॥೭೯॥

ಆ ಮುನಿಗಳು ನಿನ್ನಲ್ಲಿ ಅತ್ಯಂತ ಸ್ವಾದಿಷ್ಟವೂ ಶಿವನೈವೇದ್ಯವೂ ಆದ ಆಪೂಪ, ಮೋದಕ, ಪರಮಾನ್ನ ಮುಂತಾದ ಭಕ್ಷ್ಯಭೋಜ್ಯಗಳನ್ನೂ ಉತ್ಕೃಷ್ಟವಾದ ತುಪ್ಪ, ಮೊಸರು, ಇವುಗಳನ್ನೂ ಭುಂಜಿಸಿ ಈಗ ಪುಷ್ಟರೂ ನೀರೋಗಿಗಳೂ ಆಗಿರುವರು. ॥೮೦॥

ಇದೇ ಮುನಿಗಳು ಮೊದಲು ಸರಿಯಾಗಿ ಆಹಾರವು ಸಿಕ್ಕದಿದ್ದುದರಿಂದ ಅತ್ಯಂತ ಕೃಶರಾಗಿಹೋಗಿದ್ದರು. ಅವರ ದೇಹದಲ್ಲಿ ಕೇವಲ ಎಲುಬುಗಳೇ ಎದ್ದು ತೋರುತ್ತಿದ್ದುವು. ಅವರಿಗೆ ಯಾವ ಧರ್ಮಾನುಷ್ಠಾನಕ್ಕೂ ಶಕ್ತಿಯೇ ಇರಲಿಲ್ಲ. ಈಗ ನಿನ್ನಿಂದ ಶಿವನಿವೇದಿತವಾದ ಶ್ರೇಷ್ಠವಾದ ಅನ್ನಾಹಾರಗಳನ್ನು ಭುಂಜಿಸಿ ಅತ್ಯಂತ ಪುಷ್ಟರಾಗಿ ಬಲಿಷ್ಠರಾಗಿದ್ದಾರೆ ಮತ್ತು ಆನಂದದಿಂದಿದ್ದಾರೆ. ॥೮೧॥

ಈಗ ಪರಮಭಕ್ತರಾದ ಮುನಿಗಳು ಶಕ್ತರಾಗಿರುವುದರಿಂದ ಬಿಲ್ವಪತ್ರೆಯು ಎಷ್ಟೇ ದುರ್ಲಭವಾಗಿದ್ದರೂ ಅರಣ್ಯಗಳಿಗೆ ನಿರ್ಭಯರಾಗಿ ಹೋಗಿ ಹುಡುಕಿ ತಂದು ಶಿವಪೂಜೆಯನ್ನು ನಡೆಸುವರು. ಮಧ್ಯಾಹ್ನದ ವರೆಗೂ ನಿಶ್ಚಿಂತರಾಗಿ ಯಥೇಚ್ಛವಾಗಿ ಬಿಲ್ವಪತ್ರೆಗಳಿಂದ ಅನೇಕ ನರ್ಮದಾಲಿಂಗಗಳನ್ನು ಪೂಜಿಸುವರು. ॥೮೨॥

ಪುನಃಪುನಃ ಪೂಜಯಂತಿ ಕೋಮಲೈರ್ಬಿಲ್ವಪಲ್ಲವೈಃ ।
ಆಸಾಯಂ ಗಿರಿಜಾಕಾಂತಂ ಪ್ರಣಮಂತಿ ಸ್ತುವಂತಿ ಚ ॥೮೩॥

ಸಾಯಂ ಶಿವಾರ್ಚನಂ ಕೃತ್ವಾ ಸಮಾಯಾಂತ್ಯತ್ರ ಕೋಟಿಶಃ ।
ಮುನಯಶ್ಶಿವನೈವೇದ್ಯಭೋಜನಾರ್ಥಂ ನೃಪೋತ್ತಮ ॥೮೪॥

ಕೇನ ಪುಣ್ಯವತಾ ಪೂರ್ವಮುಪದಿಷ್ಟೋಽಸಿ ಭೂಪತೇ ।
ಯೇನೈವಂ ಶಿವಪೂಜಾಯಾಂ ಪ್ರವೃತ್ತಿರಭವತ್ತವ ॥೮೫॥

ತುಷಾರಗಿರಿವದ್ಭಾಂತಿ ಸರ್ವದಾಪ್ಯನ್ನರಾಶಯಃ ।
ರೇವಾಲಿಂಗಾಂಗಣೇ ರಾಜನ್ ತದಿದಂ ಭಾಗ್ಯಮುತ್ತಮಂ ॥೮೬॥

ಏತಾದೃಶಃ ಪುಣ್ಯಮೂರ್ತಿರ್ಭೂಪಾಲೋ ನ ಶ್ರುತಃ ಪುರಾ ।
ಮಹೇಶಾರಾಧನಪರಸ್ತಪಸ್ಯಾಫಲಪರ್ವತಃ ॥೮೭॥

ಮಧ್ಯಾಹ್ನವಾದ ಮೇಲೂ ಮತ್ತೆ ಪೂಜೆಯನ್ನು ನಡೆಸುತ್ತಾರೆ. ಕೋಮಲವಾದ ಬಿಲ್ವಪತ್ರೆಗಳಿಂದ ಶಿವನನ್ನು ಪೂಜಿಸುತ್ತಾರೆ. ಈಗ ಶಕ್ತಿಸಂಪನ್ನರಾಗಿರುವುದರಿಂದ ಪದೇ ಪದೇ ಪ್ರದಕ್ಷಿಣ ನಮಸ್ಕಾರವನ್ನು ಯಥೇಚ್ಛವಾಗಿ ಮಾಡಿ ಶಂಭುವನ್ನು ಸ್ತುತಿಸುತ್ತಾರೆ. ||೮೩||

ಸಾಯಂಕಾಲದಲ್ಲಿಯೂ ಪರಿಷ್ಕಾರವಾಗಿ ಶಿವಪೂಜೆಯನ್ನು ನಿರ್ವಹಿಸಿ ಎಲ್ಲಾ ಮುನಿಗಳೂ ಶಿವನೈವೇದ್ಯವನ್ನು ಭುಂಜಿಸಲು ನಿನ್ನಲ್ಲಿಗೆ ಬರುವರು. ||೮೪||

ಯಾವ ಪುಣ್ಯಾತ್ಮನು ನಿನಗೆ ಮೊದಲೇ ಈ ರೀತಿಯಾಗಿ ಸತ್ಕರ್ಮವನ್ನು ಮಾಡಬೇಕೆಂದು ಉಪದೇಶಮಾಡಿರುವನು? ಇದು ಪರಮಾಶ್ಚರ್ಯವೇ ಸರಿ. ನಿನಗೆ ಇಂಥ ಸತ್ಕರ್ಮವೆನಿಸಿದ ಶಿವಪೂಜೆಯಲ್ಲಿ ಹೇಗೆ ಪ್ರವೃತ್ತಿಯುಂಟಾಯಿತು? ಅಹೋಭಾಗ್ಯ. ನಿನ್ನ ಪುಣ್ಯಕ್ಕೆ ಪಾರವೇ ಇರುವುದಿಲ್ಲ. ||೮೫||

ನೀನು ನಿತ್ಯವೂ ಪರಮೇಶ್ವರನಿಗೆ ಅಪಾರವಾಗಿ ಅನ್ನವನ್ನು ನೈವೇದ್ಯ ಮಾಡುತ್ತಿರುವೆ. ಶಿವಲಿಂಗದ ಎದುರಿನಲ್ಲಿ ಅನ್ನದ ರಾಶಿಯು ಹಿಮದ ಬೆಟ್ಟದಂತೆಯೇ ಹೊಳೆಯುತ್ತಿರುವುದು. ಈ ರೀತಿಯಾಗಿ ಶಿವಾರಾಧನೆಯನ್ನು ಮಾಡುವುದು ಪರಮಭಾಗ್ಯವೇ ಸರಿ. ||೮೬||

ಇಷ್ಟು ಪುಣ್ಯಾತ್ಮನಾದ ರಾಜನನ್ನು ನಾವು ಮತ್ತೆಲ್ಲಿಯೂ ನೋಡಲಿಲ್ಲ. ಅಥವಾ ಕೇಳಿಯೂ ಇಲ್ಲ. ನೀನು ಸದಾ ಶಿವಾರಾಧನತತ್ಪರನಾಗಿರುವುದರಿಂದ ನಿನ್ನ

ಧನ್ಯಃ ಪಿತಾ ತೇ ಜನನೀ ಚ ಧನ್ಯಾ
ಧನ್ಯಾಸ್ಸುತಾಸ್ತೇ ಮಹಿಲಾಶ್ಚ ಧನ್ಯಾಃ ।
ಯತೋ ಮಹಭ್ಭಾಗ್ಯಮವಾಪ್ಯ ನಿತ್ಯಂ
ಸಮರ್ಚ್ಯತೇ ಚಂದ್ರಕಲಾವತಂಸಃ ॥೮೮॥

ಭಾಗ್ಯಾನಾಮಿದಮೇವ ತಾವದಧುನಾ ನಿರ್ಣೀತಮೇತತ್ಫಲಂ ।
ಶರ್ವಾರಾಧನಲಕ್ಷಣಂ ಕ್ಷಣಮಪಿ ಪ್ರತ್ಯಕ್ಷಮಾವೇಕ್ಷಿತಂ
ಮೋಕ್ಷಂ ನೋ ವಿಷಮೇಕ್ಷಣಾಕ್ಷಯಕೃಪಾಭಾವೇಽಪಿ ದಕ್ಷಂ ಕ್ಷಣಾತ್ ।
ಏತತ್ಪ್ರೇಕ್ಷಣಮೇವ ಮೋಕ್ಷಜನಕಂ ಫಾಲೇಕ್ಷಣೇನಾಪಿ ಕಿಂ ॥೮೯॥

॥ ರತ್ನಾಕರ ಉವಾಚ ॥

ಇತಿ ಸ್ತುತ್ವಾ ನೃಪಂ ಸರ್ವೇ ರೇವಾತೀರನಿವಾಸಿನಃ ।
ಮುನಯಶ್ಶಾಂತಹೃದಯಾಃ ಸ್ಥಿತಾಶ್ಶಿವಪರಾಯಣಾಃ ॥೯೦॥

ಪುಣ್ಯರಾಶಿಯು ಅಪಾರವಾದದ್ದು. ನಿನ್ನನ್ನು ಪುತ್ರನನ್ನಾಗಿ ಪಡೆದ ತಂದೆತಾಯಿಗಳೇ ಧನ್ಯರು. ನಿನ್ನ ಪತ್ನಿಯರೂ ಪುತ್ರರೂ ಕೃತಕೃತ್ಯರಾಗಿರುವರು. ಏಕೆಂದರೆ ಪುಣ್ಯಾತ್ಮನಾದ ನಿನ್ನ ಒಡನಾಡುವವರು ಶಿವನನ್ನು ಆರಾಧಿಸಿ ಮಹಾ ಭಾಗ್ಯಶಾಲಿಗಳಾಗಿ ಪುನಃ ಪುನಃ ಆ ದೇವದೇವನಾದ ಚಂದ್ರಶೇಖರನನ್ನೇ ಪೂಜಿಸುತ್ತಿರುವರು. ॥೮೭-೮೮॥

ಈರೀತಿಯಾಗಿ ಶಿವಾರಾಧನೆಯನ್ನು ಪ್ರಶಸ್ತವಾಗಿ ಮಾಡುತ್ತಿರುವುದೇ ಪರಮ ಸೌಭಾಗ್ಯವು. ಇದೇ ಎಲ್ಲಾ ಭಾಗ್ಯಗಳಿಂದ ಶ್ರೇಷ್ಠತಮವಾದದ್ದು ಮತ್ತು ಎಲ್ಲಾ ಪುಣ್ಯಗಳಿಗೂ ಫಲಸ್ವರೂಪವಾದದ್ದು. ಯದ್ಯಪಿ ನಾವು ಪರಮೇಶ್ವರನ ಅಪಾರ ಕೃಪೆಗೆ ಪಾತ್ರರಾಗಿಲ್ಲವಾದರೂ ನೀನು ಪೂಜಿಸಿರುವ ಶಿವಲಿಂಗದರ್ಶನದಿಂದ ನಾವು ಮುಕ್ತಿಯನ್ನು ಪಡೆಯಲು ಯೋಗ್ಯರಾಗುವೆವು. ಶಿವಪೂಜೆಯನ್ನೂ ಶಿವಲಿಂಗವನ್ನೂ ಸಂದರ್ಶಿಸುವುದರಿಂದಲೇ ಮೋಕ್ಷವು ಲಭಿಸುವುದು. ಇದರಲ್ಲಿ ಸಂಶಯವಿಲ್ಲ. ॥೮೯॥

ಹೀಗೆಂದು ಆ ರೇವಾತೀರವಾಸಿಗಳಾದ ಮುನಿಗಳು ರಾಜನನ್ನು ಬಹಳವಾಗಿ ಶ್ಲಾಘಿಸಿದರು. ಇಂಥ ಸುಲಭ ಸನ್ನಿವೇಶವು ದೊರೆತದ್ದರಿಂದ ಅವರೆಲ್ಲರೂ ಪರಮ

ಜ್ಯೇಷ್ಠಪುತ್ರೋಽಪಿ ಕಾಲೇನ ರಾಜ್ಯಭೋಗಪರಾಙ್ಮುಖಃ ।
ಸುಕುಮಾರಂ ಪರಂ ಚಕ್ರೇ ರಾಜ್ಯಪಾಲನತತ್ಪರಂ ॥೯೧॥

ತತಃ ಪರಂ ಸ ರೇವಾಯಾಂ ಕುರ್ವನ್ ಲಿಂಗಾರ್ಚನಂ ಸದಾ ।
ಪಿತ್ರಾ ಸಹ ಸ್ಥಿತೋ ಭಕ್ತ್ಯಾ ಶೃಣ್ವಂಛಿವಕಥಾರ್ಣವಾನ್ ॥೯೨॥

ನೀತಃ ಕಾಲಃ ಪುಣ್ಯರೂಪಸ್ತಥಾ ತೈಃ
ಪೂತೈರ್ಭೂತ್ಯಾ ಭೂರಿರುದ್ರಾಕ್ಷಭೂಷೈಃ ।
ರೇವಾತೀರಂ ತೈರಪಾರೈಸ್ಸದಾಪಿ
ವ್ಯಾಪ್ತಂ ಲಿಂಗಾರಾಧನೋದ್ಯುಕ್ತಚಿತ್ತೈಃ ॥೯೩॥

ಪುತ್ರೇಷು ತೇಷು ಬಹುಷು ಪ್ರಸ್ಥಿತೇಷು ತಸ್ಮಿನ್
ದಾರೇಷು ತೇಷು ವಿವಿಧೇಷ್ವಪಿ ಸಂಸ್ಥಿತೇಷು ।

ಶಾಂತರಾಗಿದ್ದರಲ್ಲದೇ ಸತತವೂ ಶಿವಾರಾಧನೆಯಲ್ಲಿಯೇ ಆಸಕ್ತರಾಗಿರುತ್ತಿದ್ದರು. ॥೯೦॥

ಆ ಜ್ಯೇಷ್ಠಪುತ್ರನಾದ ಮೃಡನೂ ಕೆಲವು ಕಾಲ ಕಳೆದನಂತರ ರಾಜ್ಯದಲ್ಲಿಯೂ ಸುಖೋಪಭೋಗಗಳ ವಿಷಯದಲ್ಲಿಯೂ ವಿರಕ್ತನಾದನು. ಆಗ ಆತನು ತನ್ನ ಸತ್ಪುತ್ರನಿಗೆ ರಾಜ್ಯಾಭಿಷೇಕವನ್ನು ಒಪ್ಪಿಸಿ ಆತನೇ ರಾಜ್ಯಭಾರವನ್ನು ನಿರ್ವಹಿಸುವಂತೆ ನೇಮಕಮಾಡಿದನು. ॥೯೧॥

ಅನಂತರ ಆತನೂ ತನ್ನ ತಂದೆಯು ವಾಸಿಸುತ್ತಿದ್ದ ರೇವಾತೀರಕ್ಕೆ ಹೋಗಿ ಅಲ್ಲಿ ತಂದೆಯೊಡನೆ ಸರ್ವದಾ ಶಿವಲಿಂಗಾರ್ಚನೆಯನ್ನು ಮಾಡುತ್ತಾ, ಭಕ್ತಿಯಿಂದ ಶಿವಕಥೆಗಳನ್ನು ಶ್ರವಣಮಾಡುತ್ತಾ ಕಾಲಕಳೆಯುತ್ತಿದ್ದನು. ॥೯೨॥

ಹೀಗೆಯೇ ಆ ರಾಜನ ಪರಿವಾರದವರೆಲ್ಲರೂ ಭಸ್ಮರುದ್ರಾಕ್ಷಿಗಳ ಧಾರಣೆಯಿಂದ ಪವಿತ್ರಾಂಗರಾಗಿ ಆ ರೇವಾತೀರದಲ್ಲಿಯೇ ವಾಸಿಸುತ್ತಿದ್ದರು. ಅವರು ಕೇವಲ ಧ್ಯಾನತತ್ಪರರಾಗಿ ಶಿವಾರಾಧನನಿರತರಾಗಿ ಸರ್ವದಾ ಪುಣ್ಯಚಿಂತನದಿಂದಲೇ ಪ್ರಶಾಂತರಾಗಿ ಜೀವಿಸುತ್ತಿದ್ದರು. ॥೯೩॥

ಹೀಗೆಯೇ ಅನೇಕ ಕಾಲವು ಕಳೆಯುತ್ತಿರಲು ಆಗಾಗ ಕೆಲವು ಪುತ್ರರೂ ಮತ್ತು ಪತ್ನಿಯರೂ ಮರಣವನ್ನೈದಿದರೂ ಆ ರಾಜನು ಸ್ವಲ್ಪವೂ ವಿಚಲನಾಗದೆ

ರೇವಾತಟೇಷು ನವಬಿಲ್ವವನಾನಿ ಚಕ್ರೇ ।
ರಾಜಾ ಮಹೇಶ್ವರಸಮರ್ಚನಸಾಧನಾನಿ ॥೯೪॥

ಪುತ್ರೈಸ್ಸಹ ಜಲಂ ದತ್ವಾ ಸುವರ್ಣಕಲಶೈರ್ನವೈಃ ।
ಪೋಷಯಾಮಾಸ ತತ್ತೀರೇ ಭೂಪಾಲೋ ಬಿಲ್ವಭೂರುಹಾನ್ ॥೯೫॥

ತೈರೇವ ರೇವಾತಟಮಾವೃತಂ ಚ
ಛನ್ನಂ ಚ ರೇವಾವನಬಿಲ್ವವೃಕ್ಷೈಃ ।
ಛತ್ರಾಯಮಾನಾ ಚ ಸುಖಾಯ ಜಾತಾ
ಲಿಂಗೇಷು ರೇವಾನಿಲಯೇಷು ತೇಷು ॥೯೬॥

ತಾನ್ ದೃಷ್ಟ್ವಾ ಭೂಪತಿರ್ನಿತ್ಯಂ ಹೃಷ್ಟಶ್ಶಿವಪರಾಯಣಃ ।
ತದ್ಬಿಲ್ವಭೂರುಹದಳೈಃ ಪೂಜಯಾಮಾಸ ಶಂಕರಂ ॥೯೭॥

ಕುಂಠಿತನಾಗದೆ ಒಂದೇ ಸಮನಾಗಿ ಕಾಣುತ್ತಿದ್ದನು. ಮತ್ತು ಅದೇ ರೇವಾತೀರದಲ್ಲಿ ಮತ್ತೂ ನೂತನವಾದ ಬಿಲ್ವವನವನ್ನು ನಿರ್ಮಿಸಿ ಪೋಷಿಸುತ್ತಿದ್ದನು. ಆದರಿಂದಲೇ ಶಿವಪೂಜೆಗೆ ಬೇಕಾದಷ್ಟು ಬಿಲ್ವಪತ್ರೆಗಳು ದೊರೆಯುತ್ತಿದ್ದವು. ॥೯೪॥

ನರ್ಮದಾ ದಡದಲ್ಲಿ ಚಿಕ್ಕ ಚಿಕ್ಕ ಬಿಲ್ವಗಿಡಗಳನ್ನು ನೆಟ್ಟು ದೊಡ್ಡ ವನವನ್ನೇ ನಿರ್ಮಿಸಿದನು. ರಾಜನು ಪ್ರತಿದಿನವೂ ತನ್ನ ಪುತ್ರರೊಡನೆ ಆ ಬಿಲ್ವವೃಕ್ಷಗಳಿಗೆ ಚಿನ್ನದ ಕಲಶಗಳಿಂದ ನೀರನ್ನು ಎರೆದು ಬೆಳೆಯಿಸಿ ಕಾಪಾಡುತ್ತಿದ್ದನು. ॥೯೫॥

ರೇವಾತೀರದಲ್ಲಿ ಬಿಲ್ವವೃಕ್ಷಗಳು ಬಹಳ ಕೋಮಲಗಳಾಗಿಯೂ ಅತ್ಯಂತ ದಟ್ಟವಾಗಿಯೂ ಬೆಳೆದವು. ಆ ವನದ ತುಂಬ ಕೇವಲ ಬಿಲ್ವವೃಕ್ಷಗಳೇ ಆದವಲ್ಲದೇ ಅವುಗಳಲ್ಲಿ ಕೊಂಬೆಗಳೂ ಎಲೆಗಳೂ ತುಂಬಿದ್ದುದರಿಂದ ಅವು ಛತ್ರಿಯಂತೆ ಮೇಲುಗಡೆಯೆಲ್ಲಾ ಸಾಂದ್ರವಾಗಿ ಮುಚ್ಚಿಕೊಂಡಿರುತ್ತಿದ್ದವು. ಅಲ್ಲಿದ್ದ ಶಿವಲಿಂಗಗಳಿಗೆ ಇವೇ ಒಂದು ದೊಡ್ಡ ಛತ್ರಿಯಂತೆ ಸದಾ ನೆರಳನ್ನು ಕೊಡುತ್ತಿದ್ದುವು. ॥೯೬॥

ಈ ರೀತಿ ಅತ್ಯಂತ ಸೊಂಪಾಗಿ ಬೆಳೆದ ಬಿಲ್ವವೃಕ್ಷಗಳನ್ನು ನೋಡಿ ರಾಜನಿಗೆ ಸರ್ವದಾ ಪರಮಾನಂದವಾಗುತ್ತಿದ್ದಿತು. ಅವುಗಳನ್ನೇ ನಿತ್ಯವೂ ನೋಡುತ್ತಾ ಆನಂದಪರವಶನಾಗುತ್ತಿದ್ದನು. ಅದೇ ವೃಕ್ಷಗಳ ಪತ್ರೆಗಳನ್ನು ಕೊಯಿದು ತಂದು ನಿತ್ಯವೂ ಸಮೃದ್ಧವಾಗಿ ಶಿವನನ್ನು ಪೂಜಿಸುತ್ತಿದ್ದನು. ॥೯೭॥

ಬಿಲ್ವಭೂರುಹಮೂಲೇಷು ರೇವಾಲಿಂಗಾನಿ ಕೋಟಿಶಃ ।
ಸ್ಥಾಪಯಾಮಾಸ ಭೂಪಾಲಸ್ಸ ಕೃತ್ವಾ ರತ್ನಮಂದಿರಂ ॥೯೮॥

ರತ್ನೈಸ್ಸ ಭೂಪಶ್ಶಿವಮಂದಿರಾಣಿ ।
ಪ್ರಾಸಾದರಮ್ಯಾಣ್ಯಮಿತಾನಿ ತಾನಿ ।
ಸ ಕಾರಯಾಮಾಸ ಶಿವಾರ್ಚನಾನಿ ।
ಚಕಾರ ತೇಷ್ವೇವ ಮನೋಹರಾಣಿ ॥೯೯॥

ಬಿಲ್ವಪಲ್ಲವಪೂರ್ಣಾನಿ ಕುಸುಮೈರಾವೃತಾನ್ಯಪಿ ।
ಲಿಂಗಾನಿ ದೃಷ್ಟ್ವಾ ಸಂತುಷ್ಟಸ್ಸಕುಮಾರಸ್ಸ ಭೂಪತಿಃ ॥೧೦೦॥

ಬಿಲ್ವಪಲ್ಲವಶಾಖಾಭಿರಾನಮ್ರಾಭಿಸ್ಸಪಲ್ಲವಾ ।
ಗೃಹೀತ್ವಾ ಗಿರಿಶಂ ಭಕ್ತ್ಯಾ ಪೂಜಯಾಮಾಸ ಭೂಪತಿಃ ॥೧೦೧॥

ಅನಂತರ ರಾಜನು ಆ ಬಿಲ್ವವೃಕ್ಷಗಳ ಕೆಳಗೆ ಸುಂದರವಾದ ಒಂದು ರತ್ನ ಮಂದಿರವನ್ನು ಕಟ್ಟಿಸಿ ಆ ಶಿವಾಲಯದಲ್ಲಿ ಕೋಟ್ಯಂತರ ನರ್ಮದಾಲಿಂಗ ಗಳನ್ನು ಪ್ರತಿಷ್ಠೆಮಾಡಿಸಿದನು. ॥೯೮॥

ಅಲ್ಲದೇ ಅದೇ ಬಿಲ್ವವನದಲ್ಲಿ ಇನ್ನೂ ಅನೇಕ ಶಿವಮಂದಿರಗಳನ್ನೂ ಕಟ್ಟಿಸಿದನು. ಅವುಗಳೆಲ್ಲಾ ನೋಡುವುದಕ್ಕೆ ಅರಮನೆಯಂತೆ ಸುಂದರವಾಗಿರು ತ್ತಿದ್ದವು. ಆ ಮಂದಿರಗಳಲ್ಲಿ ಶಿವಲಿಂಗಗಳನ್ನು ಸ್ಥಾಪಿಸಿ ನಿತ್ಯವೂ ತಾನು ಪೂಜಿಸು ತ್ತಿದ್ದನಲ್ಲದೇ ಇತರರಿಂದಲೂ ಪೂಜೆಯನ್ನು ಮಾಡಿಸುತ್ತಿದ್ದನು. ॥೯೯॥

ಆ ರಾಜನು ತನ್ನ ಪುತ್ರರೊಂದಿಗೆ ಸಂತೋಷದಿಂದ ಶಿವಲಿಂಗಗಳನ್ನು ಪೂಜಿಸಿ ಅನಂತರ ಕೋಮಲವಾದ ಬಿಲ್ವಪತ್ರೆಗಳಿಂದಲೂ ಉತ್ತಮ ಪುಷ್ಪಗಳಿಂದಲೂ ಅಲಂಕೃತವಾದ ಶಿವಲಿಂಗಗಳನ್ನು ಸಂದರ್ಶಿಸಿ ಪರಮಸಂತುಷ್ಟನಾಗುತ್ತಿದ್ದನು. ॥೧೦೦॥

ಬಿಲ್ವವೃಕ್ಷಗಳಲ್ಲಿ ಕೆಳಮುಖನಾಗಿ ಜೋತಾಡುತ್ತಿದ್ದ ಕೊಂಬೆಗಳಿಂದ ಚಿಗುರಾದ ಬಿಲ್ವದಳಗಳನ್ನು ಕುಯಿದು ತಂದು ಆ ರಾಜನು ನಿತ್ಯವೂ ಪರಮ ಭಕ್ತಿಯಿಂದ ಶಿವನನ್ನು ಅರ್ಚಿಸುತ್ತಿದ್ದನು. ॥೧೦೧॥

ಪಂಚಾಮೃತಪ್ರವಾಹಾದ್ಯೈಃ ಶಿವಲಿಂಗಾರ್ಚನೈರ್ನವೈಃ ।
ರೇವಾ ಕ್ಷೀರಾಂಬುಧಿಪ್ರಾಯಾ ಘೃತಪ್ರಾಯಾಪಿ ಸಾ ಬಭೌ ॥೧೦೨॥

ಏವಂ ಭಕ್ತ್ಯಾ ಸಮಾರಾಧ್ಯ ಮಹಾದೇವಂ ಸ ಭೂಪತಿಃ ।
ಕದಾಚಿದ್ವಿಜಹೌ ಪ್ರಾಣಾನ್ ಪೂಜಯನ್ ಗಿರಿಜಾಪತಿಂ ॥೧೦೩॥

ಲಿಂಗಮಂಡಲಮಧ್ಯಸ್ಥಂ ಭೂತಿರುದ್ರಾಕ್ಷಭೂಷಣಂ ।
ಪೃಷ್ಠಭಾಗಸ್ಥಲಿಂಗಾಗ್ರಪತಿತಂ ದದೃಶುಸ್ಸುತಾಃ ॥೧೦೪॥

ತದಾ ಗತಾಸುಂ ವಿಜ್ಞಾಯ ಕುಮಾರಾಸ್ತಸ್ಯ ಶಾಂಕರಾಃ ।
ಸ್ನೇಹಪಾಶವಶಾಸ್ಸರ್ವೇ ಚುಕ್ರುಶುರ್ಭೂತಿಭೂಷಣಾಃ ॥೧೦೫॥

ಆ ರಾಜನು ಶಿವಲಿಂಗಗಳಿಗೆ ಪಂಚಾಮೃತದಿಂದ ಅಭಿಷೇಕ ಮಾಡುತ್ತಿದ್ದನು. ಆ ಅಭಿಷೇಕವು ಅತಿಶಯವಾಗಿ ನಡೆಯುತ್ತಿದ್ದುದರಿಂದ ಅದೊಂದು ಪ್ರವಾಹದಂತೆಯೇ ಆಗಿ ಸಮೀಪದಲ್ಲಿದ್ದ ರೇವಾನದಿಗೆ ಹೋಗಿ ಸೇರುತ್ತಿದ್ದಿತು. ಇದರಿಂದ ಆ ರೇವಾನದಿಯೂ ಪಂಚಾಮೃತದಿಂದ ತುಂಬಿಹೋಗಿ ಅದು ಕ್ಷೀರಸಮುದ್ರವೋ ಅಥವಾ ತುಪ್ಪದ ಪ್ರವಾಹವೋ ಎಂಬಂತೆ ತೋರುತ್ತಿದ್ದಿತು. ||೧೦೨||

ಆ ರಾಜನು ಹೀಗೆಯೇ ಅನೇಕ ದಿವಸಗಳವರೆಗೆ ಪರಮೇಶ್ವರನನ್ನು ಭಕ್ತಿಯಿಂದ ಆರಾಧಿಸುತ್ತಿದ್ದು ಒಂದು ದಿನ ಶಿವಪೂಜೆಯನ್ನು ಮಾಡುತ್ತಿದ್ದಂತೆಯೇ ಸ್ವೇಚ್ಛೆಯಿಂದ ಪ್ರಾಣಗಳನ್ನು ತ್ಯಜಿಸಿದನು. ||೧೦೩||

ಆ ಕೂಡಲೇ ಆತನ ಪುತ್ರರು ರಾಜನು ಮೃತನಾದನೆಂದು ನೋಡಿದರು. ರಾಜನು ಶಿವಲಿಂಗಗಳ ಮಧ್ಯದಲ್ಲಿ ಮಲಗಿದ್ದನು. ಹಿಂದೂ ಮುಂದೂ ಎಲ್ಲಾ ಕಡೆಯಲ್ಲಿಯೂ ಶಿವಲಿಂಗಗಳೇ ಇದ್ದವು. ರಾಜನು ಮಾತ್ರ ಭಸ್ಮರುದ್ರಾಕ್ಷಮಾಲೆಗಳನ್ನು ಧರಿಸಿಕೊಂಡು ಪವಿತ್ರಾತ್ಮನಾಗಿ ಮರಣವನ್ನೈದಿದ್ದನು. ||೧೦೪||

ಭಸ್ಮಪೂತಾಂಗರಾದ ಆ ರಾಜಕುಮಾರರು ಕೂಡಲೇ ಸಮೀಪಕ್ಕೆ ಬಂದು ನೋಡಿ ಸರ್ವಥಾ ರಾಜನು ಮೃತನಾದನೆಂದು ತಿಳಿದು ತಂದೆಯಲ್ಲಿ ಅತ್ಯಂತ ಪ್ರೇಮವಿದ್ದಿತಾದ್ದರಿಂದ ಅವನ ವಿಯೋಗವನ್ನು ಸಹಿಸಲಾರದೇ ಬಹಳ ಶೋಕದಿಂದ ರೋದಿಸಿದರು. ||೧೦೫||

ತದಾನೀಮಾಗತೋ ನಂದೀ ವಿಮಾನವರಮಾಶ್ರಿತಃ ।
ಗಣೈರ್ನಾರಾಯಣಾದ್ಯೈಶ್ಚ ಸೇವಿತಶ್ಶಿವಲೀಲಯಾ ॥೧೦೬॥

ನಂದಿಕೇಶ್ವರಮಾಲೋಕ್ಯ ಕುಮಾರಾಸ್ತಮುಪಾಗತಂ ।
ಪ್ರಾಹುರಶ್ರುಪರಾಕ್ರಾಂತಾಶ್ಶಿವಸ್ಮರಣಪೂರ್ವಕಂ ॥೧೦೭॥

॥ ಕುಮಾರಾ ಊಚುಃ ॥

ನಂದಿನ್ನಾಗತಮದ್ಯ ತಾವದಧುನಾ ಸಮ್ಯಕ್ ತ್ವಯಾ ಭೂಪತಿಃ ।
ದ್ರಷ್ಟವ್ಯಃ ಖಲು ಶಾಂಭವೋತ್ತಮ ಇತಿ ಜ್ಞಾತಸ್ಸುರೈರಪ್ಯಯಂ ।
ವಿಘ್ನಃ ಕಿಂ ಸಮಭೂದುಮಾಪತಿಪದಾಂಭೋಜಾರ್ಚಕಃ ಕಿಂ ನರೋ ।
ಮೃತ್ಯುಂ ಯಾತಿ ಮಹೇಶ್ವರಸ್ಯ ವಿಭವಃ ಕೋ ವಾ ವದಾದ್ಯಾಧುನಾ ॥೧೦೮॥

ಆಗ ಅಲ್ಲಿಗೆ ನಂದಿಕೇಶನು ಬಂದನು. ಜೊತೆಯಲ್ಲಿ ಉತ್ತಮವಾದ ವಿಮಾನವನ್ನೂ ತಂದಿದ್ದನು. ಅವನೊಡನೆ ವಿಷ್ಣುವೇ ಮೊದಲಾದ ದೇವತೆಗಳೂ ಶಿವಗಣಶ್ರೇಷ್ಠರೂ ಬಂದಿದ್ದರು. ॥೧೦೬॥

ಸಮೀಪಕ್ಕೆ ಬಂದ ನಂದೀಶ್ವರನನ್ನು ನೋಡಿ ರಾಜಪುತ್ರರು ಮತ್ತೂ ಗಟ್ಟಿಯಾಗಿ ರೋದಿಸಿ ಕಣ್ಣೀರಿಟ್ಟರು. ಅನಂತರ ಶಿವಸ್ಮರಣೆಯನ್ನು ಮಾಡುತ್ತಾ ಸ್ವಲ್ಪ ಶಾಂತರಾಗಿ ನಂದಿಯನ್ನು ಕುರಿತು ಹೀಗೆಂದು ಹೇಳಿದರು. ॥೧೦೭॥

ಎಲೈ ನಂದಿಕೇಶನೇ, ನೀನು ಈ ಸಮಯದಲ್ಲಿ ಬಂದದ್ದು ಬಹಳ ಒಳ್ಳೆಯದಾಯಿತು. ಇದೋ ನೋಡು, ಈ ನಮ್ಮ ತಂದೆ ಮಹಾರಾಜನು ಪರಮ ಶಿವಭಕ್ತನೆಂಬುದನ್ನು ಎಲ್ಲಾ ದೇವತೆಗಳೂ ತಿಳಿದಿದ್ದಾರೆ ಮತ್ತು ನೋಡಿರುತ್ತಾರೆ. ಇಂತಹ ಪುಣ್ಯಾತ್ಮನಿಗೂ ಇಂದು ಮರಣವು ಪ್ರಾಪ್ತವಾಗಿರುವುದು. ಸಕಲರ ಶಿವಾರಾಧನೆಗೂ ಈಗ ದೊಡ್ಡ ವಿಘ್ನವೇ ಉಂಟಾಗಿರುವುದು. ಮನುಷ್ಯನೇ ಆಗಿದ್ದರೂ ಆ ಪರಮೇಶ್ವರನ ಭಕ್ತನೆನಿಸಿದವನಿಗೆ ಮೃತ್ಯುವು ಒದಗಬಹುದೇ? ಶಿವಭಕ್ತನಿಗೂ ಮರಣವು ಸಂಭವಿಸುವುದಾದಮೇಲೆ ಆ ಶಿವನ ಮಹಿಮೆಯಾದರೂ ಏನು ಉಳಿದೀತು? ಆದಕ್ಕೇಕೆ ಅಷ್ಟು ಪ್ರಾಶಸ್ತ್ಯ? ಶಿವಮಹಿಮೆಯು ಮಹತ್ತರವಾದದ್ದೆಂದು ಹೇಗೆ ಒಪ್ಪುವುದು? ನೀನೇ ಹೇಳು ನೋಡೋಣ ॥೧೦೮॥

ಮೃತ್ಯುಂಜಯಾರ್ಚನೋದ್ಯುಕ್ತೋ ಯದಿ ಮೃತ್ಯುವಶೋ ಭವೇತ್ ।
ತದಾ ಕಾ ಶಿವಪೂಜಾಯಾಶ್ಶಕ್ತಿರತ್ಯದ್ಭುತಾ ವದ ॥೧೦೯॥

ಯದಿಕ್ಷಿತಾಯುರಿತ್ಯಾದಿ ವೇದೋಽಪ್ಯುಕ್ತಶ್ಶಿವೋಽಪಿ ಯಃ ।
ತಸ್ಮಿನ್ ತಾವದವಿಶ್ವಾಸೋ ಜಾತಸ್ತೇನ ಸುಖಂ ಕುತಃ ॥೧೧೦॥

ಪ್ರಾಣಾನಾಮಪಿ ರಕ್ಷಣೇ ಯದಿ ಮಹಾದೇವಾರ್ಚನಸ್ಯಾಧುನಾ
ಶಕ್ತಿರ್ನೇತ್ಯವಧಾರಣಾ ಭವತಿ ಸಾ ತರ್ಹ್ಯದ್ಭುತಾಘಕ್ಷಯೇ ।
ಸಂಸಾರಾರ್ಣವತಾರಣಾದಿಷು ಕಥಂ ಸಾ ಸ್ಯಾತ್ಸಮರ್ಥಾ ತೃಣಂ ।
ದಗ್ಧುಂ ಚೇದಸಮರ್ಥ ಏವ ಸ ದವಃ ಕಿಂ ವಾ ಗಿರೇರ್ನಾಶಕಃ ॥೧೧೧॥

ಆ ಸಾಕ್ಷಾತ್ ಮೃತ್ಯುಂಜಯನ ಪೂಜೆಯಲ್ಲಿಯೇ ತತ್ಪರನಾಗಿರುವವನೂ ಮೃತ್ಯುವಿಗೆ ತುತ್ತಾಗುವುದಾದರೆ ಆ ಶಿವಪೂಜೆಗೆ ಮಹಿಮೆಯು ಎಲ್ಲಿಯದು? ಶಿವಪೂಜೆಗೆ ಅತ್ಯದ್ಭುತಶಕ್ತಿ ಇರುವುದೆಂದು ಹೇಗೆ ನಂಬುವುದು? ||೧೦೯||

ಯದ್ಯಪಿ ವೇದಗಳು ಶಿವನನ್ನು "ಯದಿ ಕ್ಷಿತಾಯುಃ" ಎಂದು ಮುಂತಾಗಿ ಸ್ತುತಿಸಿರುತ್ತವೆ. ಅಂದರೆ ಆಸನ್ನಮರಣನಾದವನೂ, ಮೃತ್ಯುಸಮೀಪಕ್ಕೆ ಹೋದವನೂ ಸಹ ಶಿವಾರ್ಚನೆಯಿಂದ ಬದುಕುವನು ಎಂದು ಹೇಳಿದೆ. ಆದರೆ ಈ ಪರಿಸ್ಥಿತಿಯನ್ನು ನೋಡಿದರೆ ಆ ವೇದದಲ್ಲಿಯೂ ನಮಗೆ ನಂಬಿಕೆ ಹುಟ್ಟಲಾರದು. ಹೀಗೆ ಎಲ್ಲವೂ ಸಂದಿಗ್ಧವಾಗಿರಲು ಮನುಷ್ಯನಿಗೆ ನಿಜವಾದ ಸುಖವು ಮತ್ತೆ ಯಾವುದರಿಂದ ಲಭಿಸುವುದು? ||೧೧೦||

ಇಂಥ ಅಲ್ಪವಾದ ಪ್ರಾಣಸಂರಕ್ಷಣೆ ಮಾಡುವುದಕ್ಕೂ ಶಿವಾರ್ಚನೆಗೆ ಶಕ್ತಿ ಇಲ್ಲವೆಂದು ನಿರ್ಣಯವಾದ ಬಳಿಕ ಅದರಿಂದ ಅಪಾರಪಾಪಗಳು ನಾಶವಾಗುವುವೆಂಬುದನ್ನು ನಂಬುವುದು ಹೇಗೆ? ಅಥವಾ ಆ ಶಿವಾರ್ಚನೆಗೆ ಬದ್ಧಮೂಲವಾದ ಈ ಸಂಸಾರಬಂಧನವನ್ನು ನಾಶಮಾಡಲು ಸಾಮರ್ಥ್ಯವು ಹೇಗೆ ಇದ್ದೀತು? ಇದನ್ನು ನೀನೇ ಹೇಳು ನೋಡೋಣ. ಒಂದು ಚಿಕ್ಕ ಹುಲ್ಲುಕಡ್ಡಿಯನ್ನು ಸುಡಲಾರದ ಬೆಂಕಿಯು ಬೆಟ್ಟವನ್ನು ಸುಡಬಲ್ಲದೇ? ಎಂದೂ ಸಾಧ್ಯವಿಲ್ಲ. ||೧೧೧||

ನ ಸಮಾಪ್ತಾ ಲಿಂಗಪೂಜಾ ಧೂಪದೀಪಾದಯೋಽಪಿ ಚ ।
ತೇ ನಾರ್ಪಿತಾಃ ಕಿಲಾದ್ಯಾಪಿ ಕೋಽಯಂ ವಿಘ್ನಸ್ಸಮಾಗತಃ ॥೧೧೨॥

ಕೋಟಿಶಶ್ಶಾಂಕರಾಸ್ತಾವಚ್ಛಿವನೈವೇದ್ಯಭೋಜನಂ ।
ಕರ್ತುಮೇವಾಗತಾಸ್ಸಂತಿ ನೈವೇದ್ಯಂ ದಾತುಮೇವ ನ ॥೧೧೩॥

ಪಶ್ಯಾನ್ನಪರ್ವತಾನ್ ಪಶ್ಯ ಮೋದಕಾಪೂಪಪರ್ವತಾನ್ ।
ಘೃತಪಾಯಸಕುಲ್ಯಾನಿ ಕುರು ತಾವದ್ವಿಲೋಕನಂ ॥೧೧೪॥

ಅಪಾರಶಾಕಗಿರಯಃ ಪತಿತಾಸ್ಸಂತಿ ಪಶ್ಯ ತಾನ್ ।
ದಧಿಕ್ಷೀರಪ್ರವಾಹಾಂಶ್ಚ ಪಶ್ಯ ಪಶ್ಯ ಪ್ರಯತ್ನತಃ ॥೧೧೫॥

ಇದೋ ಇಲ್ಲಿ ನೋಡು. ಎಂಥ ಅನರ್ಥವು ಒದಗಿರುವುದು. ಇನ್ನೂ ಶಿವಲಿಂಗ ಪೂಜೆಯು ಸಂಪೂರ್ಣವಾಗಿಲ್ಲ. ಧೂಪದೀಪಾರ್ಚನೆಗಳೂ ವಿಧಿವತ್ತಾಗಿ ನೆರವೇರಿಲ್ಲ. ಅಷ್ಟರಲ್ಲಿ ಈ ದೊಡ್ಡ ವಿಘ್ನವು ಪ್ರಾಪ್ತವಾಗಿರುವುದು. ಈ ವಿಪತ್ತು ಹೇಗೆ ಎಲ್ಲಿಂದ ಉಂಟಾಯಿತು ? ॥೧೧೨॥

ಇದೋ ನೋಡು. ಎಷ್ಟು ಜನ ಶಾಂಕರರು ನೆರೆದಿರುವರು. ಇವರೆಲ್ಲರೂ ಶಿವನೈವೇದ್ಯವನ್ನು ಸ್ವೀಕರಿಸಬೇಕೆಂದು ಕಾದು ಕುಳಿತಿದ್ದಾರೆ. ಆದರೆ ಇನ್ನೂ ನೈವೇದ್ಯವೇ ಆಗಿಲ್ಲ. ಅಂದಮೇಲೆ ಇವರಿಗೆ ಹೇಗೆ ಪ್ರಸಾದವನ್ನು ಹಂಚುವುದು ? ॥೧೧೩॥

ಇಲ್ಲಿನೋಡು ; ಶಿವನೈವೇದ್ಯಕ್ಕಾಗಿ ಅನ್ನದ ರಾಶಿಯೇ ಸಿದ್ಧವಾಗಿದೆ. ಕಡುಬುಗಳೂ ಒಬ್ಬಟ್ಟು ಮುಂತಾದ ಭಕ್ಷ್ಯಭೋಜ್ಯಗಳೂ ನಿರ್ಮಿತಗಳಾಗಿವೆ. ಇವೇ ಅಲ್ಲದೆ ಪಾಯಸಗಳೂ ಹಾಲು ಮೊಸರು ತುಪ್ಪಗಳೂ ನೈವೇದ್ಯಕ್ಕೆ ಕಲ್ಪಿತವಾಗಿವೆ. ॥೧೧೪॥

ಶಿವನಿವೇದನಕ್ಕೆಂದು ಅನೇಕವಿಧವಾದ ಕಾಯಿಪಲ್ಯಗಳಿಂದ ಸಿದ್ಧಪಡಿಸಿದ ಪಲ್ಯ ಮತ್ತು ವ್ಯಂಜನಸಾಮುಗ್ರಿಗಳ ರಾಶಿಯೇ ಬಿದ್ದಿರುತ್ತದೆ. ಮೊಸರು, ಹಾಲು ಇವು ಪ್ರವಾಹರೂಪದಿಂದ ಸಿದ್ಧವಾಗಿದೆ. ॥೧೧೫॥

ಕರ್ಪೂರನೀರಾಜನಪಾತ್ರಕೋಟಿಂ
ಪಶ್ಯಾಧುನಾ ಧೂಪಗಿರಿಪ್ರಧೂರ್ಪಾ ।
ತಾಂಬೂಲವಲ್ಲೀದಳಪರ್ವತಾಂಶ್ಚ
ಪೂಗೀಫಲಾನಾಮಪಿ ತುಂಗರಾಶೀನ್ ॥೧೧೬॥

ಏಲಾಲವಂಗಶೈಲಾಂಶ್ಚ ಪಶ್ಯ ಪಶ್ಯ ಪ್ರಯತ್ನತಃ ।
ಏತೇ ಶಿವೋಪಹಾರಾರ್ಹಾಃ ಪಶ್ಯಂತ್ಯವಸರಂ ಮುಹುಃ ॥೧೧೭॥

ಅಧುನಾ ಮರಣೇ ನೃಪಸ್ಯ ಸರ್ವಂ
ಕಥಮೇತನ್ನ ವೃಥಾ ಭವಿಷ್ಯತೀತಿ ।
ತವ ಬುದ್ಧಿರುಪೈತಿ ಕಿಂ ವಿಮಾನೈಃ
ಫಲಮಸ್ಮಾಕಮಿಹಾಸ್ತಿ ಸರ್ವನಾಶೇ ॥೧೧೮॥

ಸರ್ವಸ್ವಂ ಶಿವಪೂಜನಂ ಖಲು ಮಹದ್ಭಾಗ್ಯಂ ತದೇವಾಧುನಾ
ಸಪ್ರತ್ಯೂಹಮತಃಪರಂ ವದ ಪರಂ ನಿರ್ವಿಘ್ನಮೇಕಂ ಪುನಃ ।

ಶಿವನಿಗೆ ಸಮೃದ್ಧವಾಗಿ ಮಂಗಲನೀರಾಜನ ಸೇವೆಯನ್ನು ಮಾಡಬೇಕೆಂದು ಅನೇಕ ಕರ್ಪೂರದಾರತಿಗಳು ಸಿದ್ಧವಾಗಿರುತ್ತವೆ. ಇಲ್ಲಿ ನೋಡು. ಧೂಪಾರಾಧನೆಗಾಗಿ ಧೂಪದ ಗಿರಿಯೇ ಇರುತ್ತದೆ. ತಾಂಬೂಲವನ್ನರ್ಪಿಸಲು ಶ್ರೇಷ್ಠವಾದ ವಿಳ್ಳೆಯೆಲೆಗಳೂ ಅಡಕೆಗಳೂ ರಾಶಿರಾಶಿಯಾಗಿ ಬಿದ್ದಿರುತ್ತವೆ. ॥೧೧೬॥

ಇದೋ ನೋಡು; ಶಿವಾರಾಧನೆಗಾಗಿ ಏಲಕ್ಕಿ ಲವಂಗ ಮುಂತಾದ ಪದಾರ್ಥಗಳ ರಾಶಿಯೇ ಬಿದ್ದಿದೆ. ಇದು ತಾನು ಎಷ್ಟು ಹೊತ್ತಿಗೆ ಶಿವನಿಗೆ ಅರ್ಪಿತವಾದೇನು ಎಂದು ಕಾದುಕೊಂಡಿರುವಂತೆ ತೋರುತ್ತಿದೆ. ॥೧೧೭॥

ಎಲೈ ನಂದಿಕೇಶನೇ, ನೀನೇ ಯೋಚಿಸಿ ನೋಡು. ಈಗ ಮಹಾರಾಜನು ಮೃತಿಯನ್ನೈದಿರುವುದರಿಂದ ಈ ಎಲ್ಲಾ ಸಂಭಾರಗಳೂ ವ್ಯರ್ಥವಾಗುವುದಿಲ್ಲವೇ? ಈಗ ಈ ನಿನ್ನ ವಿಮಾನದಿಂದ ಯಾವ ಪ್ರಯೋಜನವಾದೀತು? ಇಂದು ನಮ್ಮ ಸರ್ವಸ್ವವೂ ನಾಶವಾದಂತೆಯೇ ಸರಿ. ॥೧೧೮॥

ನಮಗೆ ಸರ್ವಸ್ವಪ್ರಾಯವಾದುದು ಶಿವಪೂಜೆಯೇ ಆಗಿದ್ದಿತು. ಅದೇ ನಮ್ಮ ಪರಮ ಸೌಭಾಗ್ಯವೆಂದು ಅಭಿಮಾನಪಡುತ್ತಿದ್ದೆವು. ಆದರೆ ಈಗ ಅದೇ ಶಿವಾರ್ಚನೆಗೆ ದೊಡ್ಡ ವಿಘ್ನವು ಪ್ರಾಪ್ತವಾಗಿರುವುದು. ಇಂಥ ಮಹತ್ತರವಾದ

ದುಃಖಾಂಭೋಧಿಲಯಾಯ ತಾವದಧುನಾ ಲಿಂಗಾರ್ಚನಂ ಜಾಯತೇ
ಲಿಂಗಾರಾಧನಸಾಧನಾನ್ಯಪಿ ಮುದಾ ಸಂಪಾದಿತಾನ್ಯಾದರೈಃ ॥೧೧೯॥

॥ ರತ್ನಾಕರ ಉವಾಚ ॥

ಇತಿ ತದ್ವಚನಂ ಶ್ರುತ್ವಾ ನಂದಿಕೇಶೋಽಪಿ ವಿಸ್ಮಿತಃ ।
ಶಿವಪೂಜನಸಾಮಗ್ರೀಂ ದೃಷ್ಟ್ವಾ ಪ್ರಾಹ ಮನೋಹರಾಂ ॥೧೨೦॥

॥ ನಂದಿಕೇಶ್ವರ ಉವಾಚ ॥

ಅನಿತ್ಯಂ ಶರೀರಂ ಕದಾಚಿದ್ವಿನಾಶಂ
ಪ್ರಯಾಸ್ಯತ್ಯವಶ್ಯಂ ತತಸ್ತದ್ವಿಯೋಗೇ ।
ನ ದುಃಖಾನಿ ಕಾರ್ಯಾಣಿ ತತ್ವಾವಬೋಧಃ
ಕಥಂ ವಾ ನ ಚಿತ್ತಂ ವದತ್ಯಾದರೇಣ ॥೧೨೧॥

ಶಿವಪೂಜೆಗೆ ವಿಘ್ನವು ಬಂದು ಬಾಧೆಯನ್ನುಂಟುಮಾಡುತ್ತಿರಲು, ನಿರ್ವಿಘ್ನವಾಗಿ ನಡೆಯುವ ಕಾರ್ಯವು ಮತ್ತಾವುದು ಈ ಪ್ರಪಂಚದಲ್ಲಿದೆ? ಸಕಲ ದುಃಖಗಳನ್ನೂ ನಾಶಮಾಡತಕ್ಕದ್ದು ಲಿಂಗಾರ್ಚನೆ ಎಂದು ಈಗ ಹೇಗೆ ನಂಬುವುದು? ಶಿವಲಿಂಗಾರ್ಚನೆಯನ್ನು ಮಾಡಲೋಸುಗವೇ ಅನೇಕ ಸಾಧನ ಸಾಮಗ್ರಿಗಳು ಅಣಿಯಾಗಿ ಮಾಡಲ್ಪಟ್ಟಿರುವುವು. ಆದರೆ ಈಗ ಎಲ್ಲಾ ಸನ್ನಾಹಗಳೂ ಸಂಭ್ರಮಗಳೂ ಕೇವಲ ವ್ಯರ್ಥವಾಗಿ ಹೋದುವು. ॥೧೧೯॥

ಈ ಪ್ರಕಾರ ದುಃಖಾತಿಶಯದಿಂದ ಉದ್ವಿಗ್ನರಾಗಿ ರಾಜಪುತ್ರರು ಹೇಳಲು ನಂದಿಕೇಶನಿಗೆ ವಿಸ್ಮಯವೂ ಆ ಪೂಜಾಸಂಭಾರಗಳನ್ನು ನೋಡಿ ವಿಷಾದವೂ ಆಯಿತು. ಆದರೂ ಆತನು ಈ ರೀತಿ ಹೇಳಿದನು. ॥೧೨೦॥

ರಾಜಪುತ್ರರೇ, ಏತಕ್ಕೆ ಇಷ್ಟೊಂದು ವ್ಯಾಕುಲರಾಗುತ್ತೀರಿ? ಅತಿಯಾಗಿ ಶೋಕಿಸಿ ಪ್ರಯೋಜನವೇನು? ಮಾನವ ಶರೀರವು ಸರ್ವಥಾ ಅನಿತ್ಯ. ಅದು ಎಂದಾದರೊಂದುದಿನ ನಾಶವೇ ಆಗಬೇಕು. ಇದನ್ನು ನೀವು ಅರಿತು ಶಾಂತರಾಗಿರಿ. ಮಹಾರಾಜನ ವಿಯೋಗದಿಂದ ನೀವು ಹೆಚ್ಚು ದುಃಖಾಕ್ರಾಂತರಾಗಬೇಡಿರಿ. ಚಿತ್ತದಲ್ಲಿ ಸ್ಥೈರ್ಯವನ್ನು ತಂದುಕೊಂಡು ತತ್ವಾರ್ಥವನ್ನು ವಿಚಾರಮಾಡಿರಿ. ಈ ಸಂಸಾರದ ವಿಷಯದಲ್ಲಿ ಪರ್ಯಾಲೋಚಿಸಿದರೆ ಇದರ ಮರ್ಮವು ನಿಮಗೆ ತಿಳಿಯುವುದಿಲ್ಲವೇ? ಈಗ ಎಲ್ಲರೂ ಸಮಾಧಾನವನ್ನು ಪಡೆಯಿರಿ. ॥೧೨೧॥

ಇತಿ ತದ್ವಚನಂ ಶ್ರುತ್ವಾ ಕೋಪವ್ಯಾಕುಲಮಾನಸಃ ।
ಧಿಗ್ಧಿಕ್ತತ್ತ್ವವಬೋಧೋಽಪಿ ತವೇತ್ಯಾಹುರ್ವಿಚಕ್ಷಣಾಃ ॥೧೨೨॥

ತತಸ್ಸಮುದ್ಯತಾಃ ಪುತ್ರಾಃ ಪವಿತ್ರಾಶ್ಶಿವಪೂಜಯಾ ।
ದ್ವಿತ್ರಾಸ್ತಂ ಮೃತ್ಯುಮಾನೇತುಂ ಯಮಲೋಕಂ ಯಯುಸ್ತತಃ ॥೧೨೩॥

ತದ್ವಿಮಾನಂ ಸಮಾರುಹ್ಯ ಗತ್ವಾ ತೇ ಯಮಮಂದಿರಂ ।
ಬಧ್ವಾ ಪಾಶೈರ್ಯಮಂ ತೀವ್ರಂ ಪ್ರಾಹುಶ್ಶಂಕರಪೂಜಕಾಃ ॥೧೨೪॥

॥ ರಾಜಕುಮಾರಾ ಊಚುಃ ॥

ರೇ ರೇ ಕಾಲ ದುರಾಚಾರ ಕಾಲಕಾಲಾರ್ಚನಪ್ರಿಯಃ ।
ಮೃತೋ ಮಹಾರಥಃ ಕೇನ ಕರ್ಮಣಾ ತದ್ವದಾಧುನಾ ॥೧೨೫॥

ಈರೀತಿ ನಂದಿಕೇಶನು ಉಪನ್ಯಾಸಕ್ಕೆ ಮೊದಲಿಡಲು, ಅದರಿಂದ ಆ ರಾಜಪುತ್ರರಿಗೆ ದುಃಖದ ಜೊತೆಯಲ್ಲಿ ಕೋಪವೂ ಉಂಟಾಯಿತು. ಅವರು ಅತ್ಯಂತ ತಿರಸ್ಕಾರದಿಂದ ಧಿಕ್, ಧಿಕ್, ತತ್ವಶಾಸ್ತ್ರವು ಹಾಳಾಗಲಿ ಎಂದು ಮುಂತಾಗಿ ನಿಂದಿಸಲು ಪ್ರಾರಂಭಿಸಿದರು. ॥೧೨೨॥

ಆ ರಾಜಪುತ್ರರು ಮೊದಲೇ ಶಿವಪೂಜೆಯಿಂದ ಮಹಾ ಮಹಿಮಶಾಲಿಗಳಾಗಿದ್ದರು. ಆಗ ಅವರಿಗೆ ಪಿತೃವಿಯೋಗಕ್ಕೆ ಮೃತ್ಯುವೇ ಕಾರಣವೆಂಬ ಯೋಚನೆಯಿಂದ ಬಹಳ ಸಿಟ್ಟು ಬಂದಿತು. ಆ ಕೂಡಲೇ ಅವರಲ್ಲಿ ಇಬ್ಬರು ಮೂವರು ಮೃತ್ಯುವನ್ನೇ ಎಳೆದುಕೊಂಡು ಬರಬೇಕೆಂದು ಯಮಲೋಕಕ್ಕೆ ಹೋದರು.॥೧೨೩॥

ನಂದಿಕೇಶನು ತಂದಿದ್ದ ವಿಮಾನವನ್ನೇ ಏರಿ ಆ ರಾಜಪುತ್ರರು ಯಮನ ಮನೆಗೆ ಹೋದರು. ಅಲ್ಲಿ ಯಮನನ್ನು ಕಂಡ ಕೂಡಲೇ ಆತನನ್ನು ಪಾಶದಿಂದ ಬಿಗಿಯಾಗಿ ಬಂಧಿಸಿ ಕೋಪದಿಂದಲೇ ಹೀಗೆ ಹೇಳತೊಡಗಿದರು. ॥೧೨೪॥

ಎಲೈ ಅತ್ಯಾಚಾರಿಯಾದ ಯಮನೇ, ನಾವು ಕೇಳುವುದಕ್ಕೆ ಜಾಗ್ರತೆ ಸರಿಯಾದ ಉತ್ತರವನ್ನು ಹೇಳು. ಕಾಲಕಾಲನಾದ ಪರಮೇಶ್ವರನನ್ನೇ ಸರ್ವದಾ ಪೂಜಿಸಿ ಪುಣ್ಯಾತ್ಮನೆನಿಸಿದ ಮಹಾರಥನಿಗೆ ಹೇಗೆ ಮರಣವು ಸಂಭವಿಸಿತು ? ಯಾವ ಕರ್ಮವು ಆತನನ್ನು ಮೃತ್ಯುವಿಗೆ ಈಡುಮಾಡಿತು ? ಇದನ್ನು ಹೇಳಬಲ್ಲೆಯಾ ? ॥೧೨೫॥

ಪೂರ್ವಜನ್ಮಾರ್ಜಿತಾಘಾನಿ ನಷ್ಟಾನಿ ಶಿವಪೂಜಯಾ ।
ಅಧುನಾ ಪಾಪಸಂಬಂಧಃ ತಸ್ಯ ನಾಸ್ತ್ಯೇವ ಸರ್ವಥಾ ॥೧೨೬॥

ಶಿವಾರ್ಚನಾಂತರಾಯೋಽಪಿ ಕಥಂ ಜಾತೋ ವದಾಧುನಾ ॥೧೨೭॥

॥ ರತ್ನಾಕರ ಉವಾಚ ॥

ಇತಿ ತದ್ವಚನಂ ಶ್ರುತ್ವಾ ಯಮಃ ಪ್ರಾಣಾನ್ ಪ್ರದರ್ಶಯನ್ ।
ಪ್ರಾಹಾಸ್ಮಾಕಂ ನಾಪರಾಧಃ ಕಾಲಮೃತ್ಯುರ್ನೃಪಸ್ಯ ಸಃ ॥೧೨೮॥

ತತಃಪರಂ ನೃಪಪ್ರಾಣಾನಾನೀಯಾಹುರ್ನೃಪಾತ್ಮಜಾಃ ।
ತದಾ ತಾನ್ ಕಂಪಸಂಪನ್ನಾನ್ ಕ್ರೋಧಾರುಣವಿಲೋಚನಾಃ ॥೧೨೯॥

॥ ರಾಜಕುಮಾರಾ ಊಚುಃ ॥

ಕ್ವ ಗಮ್ಯತೇ ಶಿವಾಚಾರನಿರತಾರಾಧಿತಂ ನೃಪಂ ।
ತ್ಯಕ್ತ್ವಾ ಕ್ವ ತಾದೃಶಂ ಸ್ಥಾನಂ ಭವತಾಮಪಿ ವರ್ತತೇ ॥೧೩೦॥

ಕಣ್ಣಿಗೆ ಕಾಣುವಂತೆ ಆತನಲ್ಲಿ ಯಾವ ಪಾಪಸಂಬಂಧವೂ ಇರುವುದಿಲ್ಲ. ಒಂದು ವೇಳೆ ಪೂರ್ವಜನ್ಮದಲ್ಲಿ ಏನಾದರೊಂದು ಪಾಪಕಾರ್ಯವನ್ನು ಮಾಡಿದ್ದರೂ ಈಗ ಶಿವಾರ್ಚನೆಯ ಪುಣ್ಯದಿಂದ ಆ ಪಾಪವೆಲ್ಲಾ ನಶಿಸಿಹೋಗಿರುತ್ತದೆ. ಈ ಜನ್ಮದಲ್ಲಂತೂ ಸರ್ವದಾ ಶಿವಾರ್ಚನತತ್ಪರನಾಗಿದ್ದ ಆತನಿಗೆ ಪಾಪಸಂಬಂಧವೇ ಇರುವುದಿಲ್ಲ. ॥೧೨೬॥

ಹೀಗಿರಲು ಈಗ ಅಕಸ್ಮಾತ್ ಶಿವಪೂಜೆಗೆ ವಿಘ್ನವು ಹೇಗೆ ಉಂಟಾಯಿತು ? ಆತನಿಗೆ ಮರಣವು ಏಕೆ ಪ್ರಾಪ್ತವಾಯಿತು ಎಂಬುದನ್ನು ಜಾಗ್ರತೆ ಹೇಳು. ॥೧೨೭॥

ಈ ಪ್ರಕಾರವಾದ ರಾಜಪುತ್ರರ ಮಾತನ್ನು ಕೇಳಿ ಯಮಧರ್ಮನು ಭಯದಿಂದ ನಾನು ಯಾವ ತಪ್ಪನ್ನೂ ಮಾಡಿಲ್ಲವೆಂದೂ, ರಾಜನ ಆಯುಷ್ಯವು ತೀರಿದ್ದರಿಂದ ಆತನಿಗೆ ಮರಣವು ಪ್ರಾಪ್ತವಾಗಿದೆ ಎಂದು ಹೇಳಿ ಆ ರಾಜನ ಪ್ರಾಣಾಭಿಮಾನದೇವತೆಗಳನ್ನು ತೋರಿಸಿದನು. ॥೧೨೮॥

ಅನಂತರ ಆ ರಾಜಪುತ್ರರಿಗೆ ಮತ್ತೂ ಕೋಪವು ಅಧಿಕವಾಯಿತು. ಅವರು ರಾಜನ ಜೀವಗಳನ್ನು ಎದುರಿಗೆ ತರಿಸಿಕೊಂಡು ಹೆದರಿಸುತ್ತಾ ಹೀಗೆ ಹೇಳಿದರು. ॥೧೨೯॥

ಎಲೈ ಪ್ರಾಣಗಳೇ, ಎಲ್ಲಿಗೆ ಹೋಗುತ್ತಿರುವಿರಿ ? ಅಂಥ ಶಿವಧರ್ಮಪೂತನಾದ

ತ್ವರಯಾ ಪ್ರವಿಶಂತ ಭೂಪಕಂ
ಶಿವಪೂಜಾನಿರತಂ ಮಹಾತ್ಮಕಂ ।
ಶಿವಪೂಜಕಸಾಧಕಾಶ್ಚ ಯೂಯಂ
ಪ್ರಿಯಭೂತಾಃ ಖಲು ತಸ್ಯ ಸರ್ವಥಾ ॥೧೩೧॥

ಮಹಾಮೃತ್ಯುಂಜಯಸ್ಯಾಪಿ ವಿಘ್ನಿತಂ ಪೂಜನಂ ಯದಿ ।
ಭವತ್ಕೃತಂ ತದಾ ತಾವತ್ಕ್ರುದ್ಧಃ ಸ್ಯಾದಪಿ ಶಂಕರಃ ॥೧೩೨॥

ಇತಿ ತದ್ವಚನಂ ಶ್ರುತ್ವಾ ತಂ ಪ್ರಾಹುಃ ಪ್ರಾಣದೇವತಾಃ ।
ನಾಸ್ಮಾಕಮಪರಾಧೋಽಸ್ತಿ ಮಹಾಮೃತ್ಯೋರಯಂ ಪರಂ ॥೧೩೩॥

ಮಹಾಮೃತ್ಯುಸ್ಸಮಾಗತ್ಯ ಪ್ರೇರಯಾಮಾಸ ಸತ್ವರಂ ।
ಇತೋ ಗಂತವ್ಯಮಿತ್ಯೇವ ತೇನಾಸ್ಮಾಭಿಸ್ಸಮಾಗತಂ ॥೧೩೪॥

ಮಹಾರಾಜನನ್ನು ಬಿಟ್ಟು ಹೋಗುವುದು ಉಚಿತವೆ? ಅವನಿಗಿಂತಲೂ ಮಿಗಿಲಾದ ಪುಣ್ಯತಮವಾದ ಸ್ಥಾನವು ನಿಮಗೆ ಬೇರೆ ಎಲ್ಲಿಯಾದರೂ ಇದೆಯೇ? ॥೧೩೦॥

ಎಲೈ ಪ್ರಾಣಗಳೇ, ಮತ್ತೆಲ್ಲಿಗೂ ಹೋಗಬೇಡಿರಿ. ಶಿವಪೂಜೆಯಲ್ಲಿಯೇ ಆಸಕ್ತನಾಗಿರುವ ಮಹಾತ್ಮನಾದ ಮಹಾರಾಜನ ದೇಹವನ್ನೇ ಮತ್ತೆ ಪ್ರವೇಶಿಸಿರಿ. ನೀವು ಶಿವಪೂಜೆಗೆ ಮುಖ್ಯಸಾಧಕಗಳಾಗಿರುವುದರಿಂದ ರಾಜನ ಪರಮಪ್ರೀತಿಗೆ ಪಾತ್ರರಾಗಿರುತ್ತೀರಿ. ನೀವು ಜಾಗ್ರತೆ ರಾಜನ ಶರೀರವನ್ನೇ ಬಂದು ಸೇರಿರಿ.॥೧೩೧॥

ಪರಮೇಶ್ವರನ ಪೂಜೆಯು ಮಧ್ಯೆ ವಿಘ್ನದಿಂದ ವಿಚ್ಛಿನ್ನವಾದರೆ ಪರಮೇಶ್ವರನು ಕೋಪಗೊಳ್ಳುವನು. ಈ ವಿಘ್ನವು ನಿಮ್ಮಿಂದಲೇ ಆಗಿರುವುದೆಂದು ತಿಳಿದರೆ ಶಂಕರನು ನಿಮ್ಮ ಮೇಲೆಯೇ ಸಿಟ್ಟುಗೊಳ್ಳುವನು. ಆದುದರಿಂದ ಆ ದೇವದೇವನ ಕೋಪಕ್ಕೆ ನೀವು ಪಾತ್ರರಾಗಬೇಡಿರಿ. ಬೇಗನೆ ಬಂದು ರಾಜನ ಶರೀರಕ್ಕೆ ಸೇರಿಕೊಳ್ಳಿರಿ. ॥೧೩೨॥

ರಾಜಪುತ್ರರು ಈ ರೀತಿಯಾಗಿ ಹೇಳಲು ಅದನ್ನು ಕೇಳಿ ಆ ಪ್ರಾಣಗಳು ಹೇಳಿದವು. "ಎಲೈ ರಾಜಪುತ್ರರೇ, ನಾವೇನೂ ಅಪರಾಧವನ್ನು ಮಾಡಿರುವುದಿಲ್ಲ. ಅದು ಏನಿದ್ದರೂ ಆ ಮಹಾಮೃತ್ಯುವಿನ ಕೆಲಸ. ಆತನು ಬಂದು ನೀವು ಈ ಕೂಡಲೇ ಇಲ್ಲಿಂದ ಹೊರಟುಹೋಗಿರೆಂದು ಹೇಳಿ ಪ್ರೇರಿಸಿದನು. ಆತನ ಅಪ್ಪಣೆ

ಇತಿ ತದ್ವಚನಂ ಶ್ರುತ್ವಾ ಕ್ರುದ್ಧಾಸ್ತೇಽಪಿ ನೃಪಾತ್ಮಜಾಃ ।
ಮಹಾಮೃತ್ಯುಂ ಪಾಶಬದ್ಧಂ ಚಕ್ರುರತ್ಯದ್ಭುತಾಸ್ತತಃ ॥೧೩೫॥

ತತಃ ಪ್ರವಿಷ್ಟಾಃ ಪ್ರಾಣಾಸ್ತೇ ನೃಪಮಾಶು ಶಿವಾರ್ಚಕಂ ।
ರಾಜಾ ಸಮುತ್ಥಿತಃ ಪಶ್ಚಾತ್ ಪಶ್ಯನ್ ಸ್ವಪ್ನಮಿವಾದ್ಭುತಂ ॥೧೩೬॥

ತತಃ ಪರಂ ಮಹಾಮೃತ್ಯುಂ ಕಾಲಮೃತ್ಯುಂ ಚ ಸತ್ವರಂ ।
ಆನೀಯ ಪಾತಯಾಮಾಸುರಗಾಧೇ ನರ್ಮದಾಹ್ರದೇ ॥೧೩೭॥

ತತಃ ಪರಂ ಸ ಭೂಪಾಲೋ ಭಸ್ಮೋದ್ಧೂಳಿತವಿಗ್ರಹಃ ।
ರುದ್ರಾಕ್ಷಮಾಲಾಭರಣಃ ಪೂಜಯಾಮಾಸ ಶಂಕರಂ ॥೧೩೮॥

ದೇವದುಂದುಭಯೋ ನೇದುಃ ಪುಷ್ಪವೃಷ್ಟಿರಭೂತ್ತದಾ ।
ಉತ್ಸಾಹಃ ಪರಮೋ ವೃತ್ತಶ್ಯಾಂಕರಾಣಾಂ ಮಹಾತ್ಮನಾಂ ॥೧೩೯॥

ಮೇರೆಗೆ ನಾವು ಹೊರಟು ಬಂದಿದ್ದೇವೆ. ನಾವು ಪರಾಧೀನರಾಗಿರುವುದರಿಂದ ಅಪರಾಧಿಗಳಲ್ಲ. ||೧೩೪||

ಪ್ರಾಣಗಳು ಈ ರೀತಿ ಹೇಳಲು ರಾಜಪುತ್ರರಿಗೆ ಮತ್ತು ಕೋಪವು ಇಮ್ಮಡಿಸಿತು. ಆ ಕೂಡಲೇ ಅವರು ಮಹಾಮೃತ್ಯುವನ್ನೇ ಹಿಡಿದು ಸಾಹಸಮಾಡಿ ಆತನನ್ನು ಪಾಶದಿಂದ ದೃಢವಾಗಿ ಕಟ್ಟಿದರು. ||೧೩೫||

ಅನಂತರ ಆ ಪ್ರಾಣಗಳು ರಾಜನ ದೇಹವನ್ನು ಪ್ರವೇಶಿಸಿದುವು. ಶರೀರಕ್ಕೆ ಪ್ರಾಣಗಳು ಸೇರಿದ ಕೂಡಲೇ ರಾಜನು ನಿದ್ದೆಯಿಂದ ಎಚ್ಚೆತ್ತವನಂತೆ ಎದ್ದು ಕುಳಿತನು. ಆತನಿಗೆ ಅದೆಲ್ಲಾ ಅದ್ಭುತಸ್ವಪ್ನದಿಂತಿದ್ದಿತು. ||೧೩೬||

ಅನಂತರ ರಾಜಪುತ್ರರು ಮಹಾಮೃತ್ಯುವನ್ನೂ ಮತ್ತು ಕಾಲಮೃತ್ಯುವನ್ನೂ ಕಟ್ಟಿ ಸೆಳೆದು ತಂದು ನರ್ಮದಾ ತೀರದಲ್ಲಿದ್ದ ಒಂದು ಆಳವಾದ ಮಡುವಿನಲ್ಲಿ ಹಾಕಿಬಿಟ್ಟರು. ||೧೩೭||

ಆಗ ಪುನಃ ರಾಜನು ಮೈಗೆಲ್ಲಾ ಭಸ್ಮವನ್ನು ತಳೆದು ರುದ್ರಾಕ್ಷಮಾಲೆಗಳನ್ನೂ ಧರಿಸಿ ಶುಚಿರ್ಭೂತನಾಗಿ ವೈಭವದಿಂದ ಶಂಕರನನ್ನು ಆರಾಧಿಸತೊಡಗಿದನು. ಆಗ ದೇವಲೋಕದಿಂದ ಪುಷ್ಪವೃಷ್ಟಿಯು ಸುರಿಯಿತು. ಆಕಾಶದಲ್ಲಿ ಮಂಗಳವಾದ್ಯಗಳು ಮೊಳಗಿದುವು. ಆ ಸಮಯದಲ್ಲಿ ರಾಜಪುತ್ರರಿಗೂ ಮಹಾತ್ಮ

ಶಿವಾರಾಧನವಿಶ್ವಾಸಃ ಪ್ರವೃದ್ಧೋಽಪ್ಯಭವತ್ತದಾ ।
ತದಾ ಪುನಸ್ಸಮಾರಬ್ಧಂ ಶಾಂಕರೈಶ್ಶಂಕರಾರ್ಚನಂ ॥೧೪೦॥

ರಾಜದಾರೈಃ ಕುಮಾರೈಶ್ಚ ಕೃತಂ ಶಂಕರಪೂಜನಂ ।
ಅಮಾತ್ಯೈರಪಿ ವಾರ್ತೇಯಂ ಶ್ರುತಾ ಸಂತೋಷವರ್ಧಿನೀ ॥೧೪೧॥

ರಾಜ್ಞಾ ರಾಜ್ಯಾಭಿಷಿಕ್ತೇನ ರಾಜಪುತ್ರೇಣ ಚ ಶ್ರುತಾ ।
ಸದಾಶಿವಾಭಿಧಾನೇನ ಸಾ ವಾರ್ತಾ ಪರಮಾದ್ಭುತಾ ॥೧೪೨॥

ಅಲಂಕೃತಂ ಚ ನಗರಂ ತೂರ್ಯವ್ಯಾಪ್ತಂ ಚ ತತ್ಪುರಂ ।
ಶ್ರುತಾ ನಾಗರಿಕೈಸ್ಸರ್ವೈಸ್ಸಾ ವಾರ್ತಾತಿಮನೋಹರಾಃ ॥೧೪೩॥

ಮುಕ್ತಾತೋರಣಸಂಬದ್ಧಂ ಸರ್ವಂ ನಗರಮಂಡಲಂ ।
ಮಂಡಿತಂ ಚ ವನಂ ಸರ್ವಂ ಮುಕ್ತಾತೋರಣಕೋಟಿಭಿಃ ॥೧೪೪॥

ರಾದ ಮುನಿಗಳಿಗೂ ಪರಮವಾದ ಉತ್ಸಾಹವೂ ಆನಂದವೂ ಉಂಟಾಯಿತು. ||೧೩೮-೧೩೯||

ಈ ಅದ್ಭುತವಾದ ಘಟನೆಯ ಅನುಭವದಿಂದ ಎಲ್ಲರಿಗೂ ಶಿವಪೂಜೆಯ ಮಾಹಾತ್ಮ್ಯೆಯಲ್ಲಿ ದೃಢವಾದ ನಂಬಿಕೆಯುಂಟಾಯಿತು. ಎಲ್ಲಾ ಶಿವಭಕ್ತರೂ ಪದೇ ಪದೇ ಶಿವಾರಾಧನೆಯನ್ನು ಮಾಡತೊಡಗಿದರು. ||೧೪೦||

ಈ ಅದ್ಭುತವಾದ ಸಂಗತಿಯು ಕರ್ಣಾಕರ್ಣಿಕೆಯಾಗಿ ರಾಜಧಾನಿಯಲ್ಲಿ ಎಲ್ಲೆಡೆಯೂ ಹಬ್ಬಿತು. ಆಗ ಅಲ್ಲಿ ಪಟ್ಟಾಭಿಷಿಕ್ತನಾಗಿ ರಾಜ್ಯಭಾರವನ್ನು ನಡೆಸುತ್ತಿದ್ದ ಸದಾಶಿವ ರಾಜನಿಗೂ ಮತ್ತು ಅತನ ಮಂತ್ರಿ ಪುರೋಹಿತರಿಗೂ ಅಂತಃಪುರದ ಸ್ತ್ರೀಯರಿಗೂ ಕುಮಾರರಿಗೂ ಸಹ ತಿಳಿಯಿತು. ಆ ವಾರ್ತೆಯನ್ನು ಕೇಳಿ ದೊಡ್ಡಮಹಾರಾಜನು ಮತ್ತೆ ಬದುಕಿದನೆಂದು ಅತ್ಯಂತ ಆನಂದೋತ್ಸಾಹಗಳಿಂದ ಶಿವಾರ್ಚನೆಯನ್ನೂ ಮಹತ್ತರಗಳಾದ ಉತ್ಸವಗಳನ್ನೂ ನಡೆಸಿದರು. ||೧೪೧-೧೪೨||

ಆ ಆನಂದಕರವಾದ ವೃತ್ತಾಂತವು ಪಟ್ಟಣಿಗರ ಕಿವಿಯ ಮೇಲೆ ಬಿದ್ದೊಡನೆಯೇ ಅವರೆಲ್ಲರೂ ಅತ್ಯುತ್ಸಾಹದಿಂದ ರಾಜಧಾನಿಯನ್ನೆಲ್ಲಾ ಸೊಗಸಾಗಿ ಅಲಂಕರಿಸಿದರು. ಮತ್ತು ಮಂಗಳ ವಾದ್ಯಗಳೊಡನೆ ಉತ್ಸವ ನಡೆಸಿದರು. ||೧೪೩||

ಪಟ್ಟಣವನ್ನೆಲ್ಲಾ ಮುತ್ತಿನ ತೋರಣದಿಂದ ಸಿಂಗರಿಸಿದರು. ಉದ್ಯಾನ

ತತಃ ಪರಂ ತತ್ರ ಮಹಾರಥೋಽಪಿ
ಮಹೋತ್ಸವೇನೈವ ಮಹೇಶ್ವರಾರ್ಚಾಂ
ಕೃತ್ವಾಥ ನಂದೀಶ್ವರಪೂಜನಂ ಚ
ಜಗಾದ ತಂ ಸೋತ್ಸವಮಾದರೇಣ ॥೧೪೫॥

॥ ಮಹಾರಥ ಉವಾಚ ॥

ನಂದಿಕೇಶ್ವರ ಸಮಾಗತಂ ತ್ವಯಾ
ಶಂಕರಾನುಚರ ಚಂದ್ರಶೇಖರಃ ।
ಮಯ್ಯಪಾರಕರುಣಾಂ ಕರೋತಿ ಕಿಂ
ಕಿಂ ಕರೋಮಿ ವದ ತಸ್ಯ ಪೂಜನಂ ॥೧೪೬॥

ಯಸ್ಯ ಪ್ರಸಾದೇನ ವಿರಂಚಿರಾಸೀತ್
ನಾರಾಯಣೋ ನಾಕಪತಿಶ್ಚ ಕಾಲಃ ।

ತೋಪುಗಳಲ್ಲಿಯೂ ನಾನಾ ವಿಧವಾಗಿ ಮುತ್ತಿನ ತೋರಣಗಳನ್ನು ಕಟ್ಟಿ ಅಲಂಕರಿಸಿದರು. ॥೧೪೪॥

ಇತ್ತಲಾಗಿ ಮಹಾರಥ ರಾಜನೂ ಅತ್ಯಂತ ಉತ್ಸವ ಪೂರ್ವಕವಾಗಿ ಶಿವಾರ್ಚನೆಯನ್ನು ನೆರವೇರಿಸಿದನು. ಅನಂತರ ಅಲ್ಲಿಯೇ ಬಂದಿದ್ದ ನಂದಿಕೇಶ್ವರನಿಗೂ ಪೂಜಾಪುರಸ್ಸರವಾಗಿ ಉಪಚರಿಸಿದನು. ಬಳಿಕ ಆದರಪೂರ್ವಕವಾಗಿ ಈ ರೀತಿ ಮಾತನಾಡಿದನು. ॥೧೪೫॥

ನಂದಿಕೇಶನೇ ! ಶಿವಭಕ್ತಶ್ರೇಷ್ಠನೇ, ನಾನು ನಿನಗೆ ಸುಖಾಗಮನವನ್ನು ಬಯಸುತ್ತೇನೆ. ಈಗ ನಾನು ಮಾಡುತ್ತಿರುವ ಆರಾಧನೆಯಿಂದ ಶಂಕರನು ಪ್ರಸನ್ನನಾಗಿರುತ್ತಾನೆಯೇ? ಆ ಚಂದ್ರಶೇಖರನು ನನ್ನ ಮೇಲೆ ಸದಾ ದಯೆಯನ್ನು ತೋರಿಸುತ್ತಿರುವನೇ? ಆತನ ಅಪಾರ ದಯೆಯನ್ನು ಸಂಪಾದಿಸಲು ನಾನು ಇನ್ನೂ ಯಾವ ಯಾವ ಸೇವೆಯನ್ನು ಮಾಡಲಿ? ದಯೆಯಿಂದ ಎಲ್ಲವನ್ನೂ ಹೇಳು. ॥೧೪೬॥

ಯಾವ ಪರಮೇಶ್ವರನ ದಯಾಯುಕ್ತವಾದ ಪ್ರೇರಣೆಯಿಂದ ಬ್ರಹ್ಮನು ಸತ್ಯಲೋಕದಲ್ಲಿಯೂ, ವಿಷ್ಣುವು ವೈಕುಂಠದಲ್ಲಿಯೂ, ದೇವೇಂದ್ರನು ಸ್ವರ್ಗದಲ್ಲಿಯೂ

ತಂ ಕಾಲಕಾಲಂ ಶರಣಂ ವ್ರಜಾಮಿ
ದಾರೈಃ ಕುಮಾರೈರಪಿ ಶಾಂಕರೈಸ್ತೈಃ ॥೧೪೭॥

ಯಸ್ಯ ಪ್ರಭಾವೋನ್ನಮಿತೋಽಪಿ ವೇದೈಃ
ಬ್ರಹ್ಮಾದಿಭಿರ್ವಾ ಸ ಮಹೇಶ್ವರೋ ಮೇ ।
ಪಿತಾಪಿ ಮಾತಾಪಿ ಸಖಾಪಿ ದಾತಾ
ಪ್ರಭುಶ್ಚ ಸರ್ವಾಮರಸಾರ್ವಭೌಮಃ ॥೧೪೮॥

ಇತಿ ತದ್ವಚನಂ ಶ್ರುತ್ವಾ ನಂದಿಕೇಶೋ ಮಹಾಮತಿಃ ।
ಪ್ರಾಹ ರಾಜಾನಮಾಜಾನುರುದ್ರಾಕ್ಷಕವಚಾವೃತಂ ॥೧೪೯॥

॥ ನಂದಿಕೇಶ್ವರ ಉವಾಚ ॥

ಧನ್ಯೋಽಸಿ ರಾಜನ್ ಶಿವಪೂಜನೇನ
ಮೃತ್ಯುರ್ಜಿತಃ ಕಾಲಭಯಂ ಕುತಸ್ತೇ ।

ಯಮನು ಧರ್ಮದಲ್ಲಿಯೂ ಆಧಿಪತ್ಯವನ್ನು ಪಡೆದು ಜಗತ್ತನ್ನು ನಡೆಸುತ್ತಿರುವರೋ ಅಂಥ ಮೃತ್ಯುಂಜಯಸ್ವಾಮಿಯೇ ನನಗೆ ಗತಿ ಎಂದು ನಾನು ನಂಬಿರುತ್ತೇನೆ. ಹಾಗೆಯೇ ನನ್ನ ಪತ್ನೀಪುತ್ರರೂ ಸಹ ಶಿವನನ್ನೇ ರಕ್ಷಕನೆಂದು ಶರಣು ಹೊಕ್ಕಿರುವರು. ॥೧೪೭॥

ಯಾವಾತನ ಮಹಿಮೆಯು ಅಮೋಘವೆಂದೂ ಅಪಾರವೆಂದೂ ಸ್ತುತಿಸುತ್ತಾ ವೇದಗಳೂ ಮತ್ತೂ ಬ್ರಹ್ಮಾದಿಗಳೂ ಪದೇ ಪದೇ ನಮಿಸುತ್ತಿರುವರೋ ಆ ದೇವದೇವನೇ ನನಗೆ ತಂದೆಯು. ಆತನೇ ನನ್ನ ತಾಯಿ, ಮಿತ್ರ, ಪುತ್ರ, ದಾತಾ ಸರ್ವಸ್ವವೂ ಆತನೇ. ಆ ದೇವತಾಸಾರ್ವಭೌಮನೇ ನನ್ನ ರಕ್ಷಕನಾದ ಅಧಿಪತಿ ಎಂದು ನಾನು ದೃಢವಾಗಿ ನಂಬಿರುತ್ತೇನೆ. ॥೧೪೮॥

ರಾಜನ ಈ ವಿವೇಕಯುಕ್ತವಾದ ಮಾತನ್ನು ಕೇಳಿ ಅತ್ಯಾನಂದದಿಂದ ನಂದಿಕೇಶನು ಆಶ್ಚರ್ಯಪಟ್ಟನು. ಮೊಳಕಾಲಿನವರೆಗೂ ರುದ್ರಾಕ್ಷಮಾಲೆಗಳನ್ನು ಕವಚದೋಪಾದಿಯಲ್ಲಿ ಧರಿಸಿಕೊಂಡು ಶಿವಪೂಜಾತತ್ಪರನಾಗಿದ್ದ ಆ ಮಹಾರಥ ರಾಜನನ್ನು ಶ್ಲಾಘಿಸುತ್ತಾ ನಂದಿಯು ಈರೀತಿ ಹೇಳಿದನು. ॥೧೪೯॥

ಮಹಾರಾಜನೆ, ನೀನೇ ಧನ್ಯನು. ಶಿವಪೂಜೆಯಿಂದ ನೀನೇ ಪರಮ ಕೃತಕೃತ್ಯನಾಗಿರುವೆ. ನೀನು ಮಹಾಮೃತ್ಯುವನ್ನೇ ಜಯಿಸಿರುವೆ. ಇನ್ನು ನಿನಗೆ

ಶಿವಪ್ರಭಾವೋಽಯಮುಮಾಸಹಾಯಃ
ಸುಪ್ರೀತ ಏವ ತ್ವಯಿ ಸರ್ವಥಾಪಿ ॥೧೫೦॥

ಶಿವಸ್ಸ ಸರ್ವಜ್ಞಶಿರೋಮಣಿಸ್ತೇ
ಜಾನಾತಿ ಚಿತ್ತಂ ಸ್ವಪದಾಬ್ಜಸಕ್ತಂ ।
ಮಹೇಶ್ವರಾರಾಧನಸಕ್ತಮೇವ
ತದಪ್ರಮತ್ತಂ ಶಿವದತ್ತಮೇವ ॥೧೫೧॥

ಹಾರಾಃ ಕುಮಾರಾಸ್ತವ ತೇಽಪಿ ಶೂರಾಃ
ತೈರುದ್ಧತೈರದ್ಯ ಯಮೋ ಹತೋಽಪಿ ।
ರೇವಾಹ್ರದೇ ತೈಸ್ಸ ನಿಪಾತಿತೋಽಪಿ
ರಾಜನ್ ಮಹಾಮೃತ್ಯುಸಮನ್ವಿತೋಽಪಿ ॥೧೫೨॥

ಕಾಲನಭಯವು ಎಲ್ಲಿಯದು? ಇದೆಲ್ಲವೂ ಆ ಪರಶಿವನ ಮಹಿಮೆಯ ವಿಲಾಸವೇ ಸರಿ. ನಿನ್ನಲ್ಲಿ ಭವಾನೀ ಪತಿಯು ಸರ್ವ ವಿಧದಲ್ಲಿಯೂ ಸುಪ್ರೀತನಾಗಿರುವನು. ಇದಕ್ಕೆ ನಿನ್ನ ಈ ಔಚಿತ್ಯಯುತವಾದ ಕಾರ್ಯವೇ ನಿದರ್ಶನವಾಗಿರುವುದು. ||೧೫೦||

ಆ ಶಿವನು ಸರ್ವಜ್ಞಶಿರೋಮಣಿಯಾಗಿರುವನು. ಆತನು ಸಕಲವನ್ನೂ ತಿಳಿದಿರುವವನಾದ್ದರಿಂದ ತನ್ನ ಚರಣಕಮಲಗಳಲ್ಲಿಯೇ ಆಸಕ್ತವಾಗಿರುವ ನಿನ್ನ ಚಿತ್ತವನ್ನೂ ಅವನು ಅರಿತಿರುವನು. ಸ್ವಲ್ಪವೂ ಪ್ರಮಾದವಿಲ್ಲದಂತೆ ಶಿವಾರಾಧನೆಯಲ್ಲಿಯೇ ನೀನು ತತ್ಪರನಾಗಿರುವುದೂ ಆತನಿಗೆ ಪ್ರತ್ಯಕ್ಷವೇ ಆಗಿದೆ. ಈ ನಿನ್ನ ಎಲ್ಲಾ ಸೌಭಾಗ್ಯಗಳೂ ಶಿವದತ್ತವೇ ಆಗಿರುತ್ತವೆಯಲ್ಲವೆ. ||೧೫೧||

ರಾಜನೇ, ಇಂಥ ಶೂರರಾದ ಪುತ್ರರು ನಿನಗಿರಲು ನಿನಗೆ ಅಸಾಧ್ಯವಾದುದಾದರೂ ಏನಿದೆ? ನಿನ್ನ ಪುತ್ರರು ಪರಮಶಿವಭಕ್ತರಾಗಿರುವಂತೆ ಮಹಿಮಾಶಾಲಿಗಳಾದ ಪರಾಕ್ರಮಿಗಳೂ ಆಗಿರುವರು. ಅವರ ಧೈರ್ಯವನ್ನು ಎಷ್ಟೆಂದು ಹೇಳುವುದು? ಅವರು ಇಂದು ಸಾಕ್ಷಾತ್ ಮಹಾಮೃತ್ಯುವನ್ನು ಮತ್ತು ಯಮನನ್ನೂ ರೇವಾನದಿಯ ಮಡುವಿನಲ್ಲಿ ತಳ್ಳಿರುವರು. ಮತ್ತು ಅವರನ್ನು ಶಿಕ್ಷಿಸಿರುವರು. ||೧೫೨||

ಇದಂ ಬಲಂ ಶಂಕರಪೂಜನೇನ
ಪ್ರಾಪ್ತಂ ಮಹಾಮೃತ್ಯುವಿನಾಶದಕ್ಷಂ ।
ಕೋ ವಾ ವಿರೂಪಾಕ್ಷಪದಾರವಿಂದ
ಪೂಜಾರತಾದಪ್ಯಧಿಕಸ್ತ್ರಿಲೋಕ್ಯಾಂ ॥೧೫೩॥

ಧನ್ಯಂ ಕುಲಂ ತೇ ತವ ಮೃತ್ಯುಮೃತ್ಯುಃ
ಮಹೇಶ್ವರಸ್ತ್ವತ್ಕುಲಜಾರ್ಚಿತೋಽತಃ ।
ಅತೋಽತಿಧನ್ಯೋಽಸಿ ತವಾಸ್ತು ಭಕ್ತಿಃ
ಶ್ರೀಮನ್ಮಹಾದೇವಪದಾರ್ಚನೇಷು ॥೧೫೪॥

ಕೌತುಕಂ ತು ಮಹಾದೇವಃ ಕರೋತಿ ನಿಜಲೀಲಯಾ ।
ಭಕ್ತಿಪ್ರಭಾವಾನುಭವಪ್ರದರ್ಶನಪರಃ ಪರಂ ॥೧೫೫॥

ರತ್ನಸಿಂಹಾಸನಾಸೀನೋ ರತ್ನಮಂಟಪಕಾಂತಿಭಿಃ ।
ಸೇವಿತಶ್ಛತ್ರಸಂಕಾಶೈರ್ಮಹಾರ್ಹಂ ಗಿರಿಜಾಪತಿಃ ॥೧೫೬॥

ಈ ಸಮಸ್ತ ವಿಧವಾದ ಶಕ್ತಿಸಾಮರ್ಥ್ಯಗಳೂ ಶಿವಾರಾಧನೆಯಿಂದ ಪ್ರಾಪ್ತವಾಗಿರುತ್ತವೆಂದು ತಿಳಿ. ಶಿವಪೂಜಾಬಲದಿಂದ ಮಹಾಮೃತ್ಯುವನ್ನೂ ಗೆಲ್ಲಬಹುದು. ಶಿವಪೂಜಾತತ್ಪರನಾಗಿರುವವನೇ ಪರಮಶ್ರೇಷ್ಠನು. ಆತನಿಗಿಂತ ಶ್ರೇಷ್ಠರಾದವರು ಈ ಮೂರು ಲೋಕದಲ್ಲಿ ಯಾರೂ ಇರುವುದಿಲ್ಲ. ॥೧೫೩॥

ಮಹಾರಥನೇ, ನಿನ್ನ ವಂಶವೇ ಧನ್ಯವಾದದ್ದು. ನಿನ್ನ ಕುಲದಲ್ಲಿ ಹುಟ್ಟಿದವರೆಲ್ಲರೂ ಕಾಲಕಾಲನಾದ ಮಹಾದೇವನನ್ನೇ ಆರಾಧಿಸುವುದರಿಂದ ನಿನ್ನ ಸಂತಾನವು ಪರಮಧನ್ಯವೆನಿಸಿದೆ. ನೀನು ಈಗ ಶಿವಾರಾಧನೆಯಿಂದ ಧನ್ಯನಾಗಿರುವಂತೆ ಮುಂದೂ ಸಹ ಶಿವಪೂಜಾನಿರತನಾಗಿರು. ಶಂಕರನಲ್ಲಿ ನಿನ್ನ ಭಕ್ತಿಯು ಇನ್ನೂ ಹೆಚ್ಚು ಅಭಿವೃದ್ಧಿಯಾಗಿ ಶಾಶ್ವತವಾಗಿರಲಿ. ॥೧೫೪॥

ಆ ಪರಮೇಶ್ವರನು ತಾನಿದ್ದಲ್ಲಿಂದಲೇ ಸ್ವಲೀಲೆಯಿಂದ ತನ್ನ ಭಕ್ತರ ಮಹಿಮೆಯನ್ನೂ ಸಾಮರ್ಥ್ಯವನ್ನೂ ಪ್ರಕಟಗೊಳಿಸುವನು. ಅತ್ಯದ್ಭುತಗಳಾದ ಘಟನೆಗಳನ್ನು ನಡೆಯಿಸಿ ತನ್ನ ಭಕ್ತರ ಮಹಿಮೆಯನ್ನು ಹೆಚ್ಚಿಸುತ್ತಾನೆ. ॥೧೫೫॥

ರತ್ನಮಯವಾದ ಮಂಟಪದಲ್ಲಿ ರತ್ನಸಿಂಹಾಸನದ ಮೇಲೆ ಸುಖಾಸೀನನಾಗಿ ಸಕಲ ಸೇವೆಗಳನ್ನೂ ಸ್ವೀಕರಿಸುತ್ತಿರುವ ಆ ದೇವದೇವನು ಇಂದು

ಮಹಾರಥಸ್ಸಮಾನೇಯಃ ಪುಷ್ಪಕೇನೇತಿ ಸತ್ವರಂ ।
ಪಶ್ಯತ್ಸ್ವೇವ ಗಣೇಷ್ವನ್ಯೇಷ್ವಾಹೂಯಾಹ ಮನೋಹರಃ ॥೧೫೭॥

ಧೃತಾವದಾತಶಿರಸಾ ಪುಷ್ಪಕೇನ ಸಮಾಗತಂ ।
ಮಯಾಪಿ ತ್ವರಯಾ ರಾಜರ್ಷ ಸಹೈವ ಗಣಕೋಟಿಭಿಃ ॥೧೫೮॥

ಪಶ್ಯ ಪಶ್ಯ ಗಣಾನ್ ಸರ್ವಾನರ್ಥವಾದೋ ನ ತತ್ರ ಮೇ ।
ರೇವಾತೀರಮಭಿವ್ಯಾಪ್ಯ ತಿಷ್ಠಂತಿ ಶಿವತತ್ಪರಾಃ ॥೧೫೯॥

ಯದ್ವಿಮಾನಂ ಸಮಾನೀತಂ ತದಾರುಹ್ಯ ಸುತೈಸ್ತವ ।
ಮಹಾಮೃತ್ಯುಶ್ಚಮೃತ್ಯುಶ್ಚ ಸಮಾನೀತೋ ಯಮಾಲಯಾತ್ ॥೧೬೦॥

ಚಿತ್ರಗುಪ್ತಾದಿಭಿಸ್ಸಾಕಂ ಪತಿತೋಽತ್ರ ಮಹಾಹ್ರದೇ ।
ಏತಾದೃಶಂ ಮಹದ್ಭಾಗ್ಯಂ ಫಾಲಲೋಚನಪೂಜಯಾ ॥೧೬೧॥

ನನ್ನನ್ನು ಕುರಿತು, ಶಿವಗಣಗಳೊಂದಿಗೆ ಪುಷ್ಪಕವಿಮಾನವನ್ನು ತೆಗೆದುಕೊಂಡು ಹೋಗಿ ಮಹಾರಥರಾಜನನ್ನು ಕರೆದುಕೊಂಡು ಬಾ ಎಂದು ಅಪ್ಪಣೆಮಾಡಿರುವನು. ||೧೫೬-೧೫೭||

ಇದೋ ನೋಡು, ಪರಮೇಶ್ವರನ ಆಜ್ಞಾನುಸಾರವಾಗಿ ಕೋಟ್ಯಂತರ ಶಿವದೂತರೊಂದಿಗೆ ವಿಮಾನವನ್ನು ತಂದಿರುವೆನು. ನಾನು ಹೇಳುವುದು ಅತ್ಯುಕ್ತಿಯಲ್ಲ. ನೋಡು, ಶಿವಾರಾಧನ ತತ್ಪರರಾದ ಶಿವಗಣಶ್ರೇಷ್ಠರಿಂದ ಅಖಂಡವಾಗಿ ರೇವಾ ತೀರವೆಲ್ಲಾ ತುಂಬಿಹೋಗಿದೆ. ||೧೫೮-೧೫೯||

ನಾನು ತಂದಿದ್ದ ವಿಮಾನದಲ್ಲಿಯೇ ಕುಳಿತುಕೊಂಡು ಹೋಗಿ ನಿನ್ನ ಪುತ್ರರು ಯಮನ ಮನೆಯಲ್ಲಿ ಯಮನನ್ನೂ ಮಹಾಮೃತ್ಯುವನ್ನೂ ಬಂಧಿಸಿ ಅಲ್ಲಿಂದ ಸೆಳೆದುಕೊಂಡು ಬಂದಿರುತ್ತಾರೆ. ||೧೬೦||

ನಿನ್ನ ಪುತ್ರರು ಚಿತ್ರಗುಪ್ತಾದಿಗಳೊಡನೆ ಯಮನನ್ನೂ ಮತ್ತು ಮಹಾಮೃತ್ಯುವನ್ನೂ ಪಾಶದಿಂದ ಬಂಧಿಸಿ ಸೆಳೆದುಕೊಂಡು ಬಂದು, ಈ ನರ್ಮದೆಯ ಆಳವಾದ ಗುಂಡಿಯಲ್ಲಿ ಹಾಕಿದ್ದಾರೆ. ಈ ಎಲ್ಲಾ ಸಾಮರ್ಥ್ಯಗಳೂ ಮಹಾಭಾಗ್ಯಗಳೂ ಆ ಶಂಕರನ ಆರಾಧನೆಯಿಂದಲೇ ಲಭಿಸಿರುವುವು. ಅದಿರಲಿ. ||೧೬೧||

ಅತಃ ಪರಂ ಮಯಾ ಗತ್ವಾ ಕಿಂ ವಕ್ತವ್ಯಂ ಶಿವಾಂತಿಕೇ ।
ತದ್ವದಾಶು ಕುಮಾರಾಣಾಮಶಕ್ಯಂ ನ ಜಗತ್ತ್ರಯೇ ॥೧೬೨॥

ದಯಯಾ ಮಯ್ಯಪಿ ಪ್ರೀತಿಃ ಕ್ರಿಯತೇ ಕಾಪಿ ತೈರಪಿ ।
ಕಿಮಸ್ತ್ಯಶಕ್ಯಂ ವದ ಮೇ ಹಾರಾಣಾಂ ಭುವಿ ದುರ್ಲಭಂ ॥೧೬೩॥

ಗಂತವ್ಯಂ ಶಿವಸನ್ನಿಧಾನಮಧುನಾ ವಿಶ್ವೇಶ್ವರಾರಾಧನಂ
ರೇವಾಲಿಂಗಸಮುಚ್ಚಯೇಷು ಬಹುಧಾ ಕಾರ್ಯಂ ತ್ವಯಾ ಸಾದರಂ
ಸ್ನೇಹಃ ಕಿಂ ನ ವಿಧೇಯ ಏವ ಮಯಿ ತೇ ಹಾರೇಷು ಸಂಖ್ಯಾಸ್ತು ಮೇ
ಪ್ರೀತಿರ್ವೃದ್ಧಿಮುಪೈತು ಸಾಂಬಚರಣಾಂಭೋಜೇ ಮಮಾಪ್ಯನ್ವಹಂ॥೧೬೪॥

ನಾನೇನೋ ತಿರುಗಿ ಹೋಗುವೆನು. ಆದರೆ ಶಿವಾಜ್ಞೆಯನ್ನು ಪಾಲಿಸಲು ನನಗೆ ಸಾಧ್ಯವಾಗಲಿಲ್ಲ. ಈಗ ನಾನು ಶಿವಸನ್ನಿಧಿಯಲ್ಲಿ ಏನೆಂದು ಹೇಳಲಿ ? ನನಗೊಂದೂ ತೋಚುವುದಿಲ್ಲ. ಇತ್ತ ನಿನ್ನ ಪುತ್ರರ ಸಾಮರ್ಥ್ಯವಾದರೋ ಲೋಕೋತ್ತರವಾಗಿದೆ. ಅವರಿಗೆ ಅಸಾಧ್ಯವಾದ ಕಾರ್ಯವೇ ಕಾಣುವುದಿಲ್ಲ. ಶಿವನಲ್ಲಿ ಏನೆಂದು ಅರಿಕೆ ಮಾಡಿಕೊಳ್ಳಲಿ? ಈ ಉಪಾಯವನ್ನು ನೀನೇ ಹೇಳು. ||೧೬೨||

ಆದರೆ ನಿನ್ನ ಪುತ್ರರು ನನ್ನನ್ನೇನೂ ಪೀಡಿಸಲಿಲ್ಲ. ನನ್ನಲ್ಲಿ ಅತ್ಯಂತವಾದ ಪ್ರೀತಿ ಸೌಜನ್ಯಗಳನ್ನೇ ತೋರಿಸಿರುತ್ತಾರೆ. ಸಾಕ್ಷಾತ್ ಮಹಾಮೃತ್ಯುವನ್ನೇ ಸೆರೆ ಹಿಡಿದು ತಂದಿರಬೇಕಾದರೆ ನಿನ್ನ ಪುತ್ರರು ಮತ್ತೇನನ್ನು ತಾನೇ ಮಾಡಲಾರರು ? ಈಶ್ವರ ಭಕ್ತರಿಗೆ ಪ್ರಪಂಚದಲ್ಲಿ ಅಸಾಧ್ಯವಾದುದಾಗಲಿ, ದುರ್ಲಭವಾದುದಾಗಲಿ ಏನಿದೆ ಹೇಳು? ||೧೬೩||

ಎಲೈ ಮಹಾರಾಜನೇ! ನನ್ನಲ್ಲಿಯೂ ವಿಶ್ವಾಸವನ್ನು ತೋರು. ಏನಿಲ್ಲೆಂದರೂ ಇಷ್ಟನ್ನಾದರೂ ಅನುಗ್ರಹಿಸು. ಶಿವಭಕ್ತಕೋಟಿಯಲ್ಲಿ ನಾನೂ ಒಬ್ಬನೆಂದು ಪರಿಗಣಿಸಿ ನನ್ನಲ್ಲಿ ಪ್ರೀತಿಯನ್ನಿಡು. ನಮ್ಮಿಬ್ಬರಿಗೂ ಆ ಪರಮೇಶ್ವರನ ಕಮಲದಲ್ಲಿ ಶಾಶ್ವತವಾದ ಭಕ್ತಿಯು ನೆಲೆಸಿರಲೆಂದು ನಾನು ಸದಾ ಹಾರೈಸುತ್ತೇನೆ. ಆದರೆ ಈಗ ನಾವೆಲ್ಲರೂ ಶಿವಸನ್ನಿಧಿಗೆ ಹೋಗೋಣ. ಮತ್ತೆ ಈ ನರ್ಮದಾ ಲಿಂಗಗಳಿಗೆ ವಿಶೇಷವಾದ ರೀತಿಯಲ್ಲಿ ಪೂಜೆಯನ್ನು ಮಾಡು. ||೧೬೪||

ಇತ್ಯುಕ್ತಂ ತದ್ವಚಶ್ಶ್ರುತ್ವಾ ಕುಮಾರಾನಾಹ ಭೂಪತಿಃ ।
ವಿನಯಾವನತಾನ್ ಹಾರಾನ್ ಭೂತಿರುದ್ರಾಕ್ಷಭೂಷಣಾನ್ ॥೧೬೫॥

॥ ರಾಜೋವಾಚ ॥

ಕಿಮೇವಮುಚ್ಯತೇ ಬಾಲಾಃ ಕೋಮಲಂ ಕಿಂ ನ ಮಾನಸಂ ।
ಕಥಂ ಹ್ರದೇ ಮಹಾಮೃತ್ಯುಃ ಪಾತಿತಸ್ಸ ಯಮಾನ್ವಿತಃ ॥೧೬೬॥

ಆನೀಯ ಪ್ರೀಣನೀಯೋಽಪಿ ದಯನೀಯಸ್ಸ ಶಾಂಭವಃ ।
ಅಶಾಂಭವಾಶನಿಃ ಕಾಲೋ ಮಹಾಮೃತ್ಯುಶ್ಚ ಬಾಲಕಾಃ ॥೧೬೭॥

ಇತಿ ರಾಜವಚಶ್ಶ್ರುತ್ವಾ ಕುಮಾರಾಸ್ತೇಽಪಿ ಶಾಂಕರಾಃ ।
ತಮಾನೇತುಂ ಮಹಾಮೃತ್ಯುಂ ದ್ರುತಮಾಹುರ್ಯಮಂ ಚ ತಂ ॥೧೬೮॥

ಹೀಗೆಂದು ನಂದಿಕೇಶನು ಹೇಳುತ್ತಿರುವಾಗ ಸಮೀಪದಲ್ಲಿಯೇ ರಾಜಪುತ್ರರೂ ಭಸ್ಮರುದ್ರಾಕ್ಷಭೂಷಿತರಾಗಿ ವಿನಯದಿಂದ ನಿಂತಿದ್ದರು. ನಂದೀಶ್ವರನ ಮಾತನ್ನು ಕೇಳಿ ರಾಜನು ತನ್ನ ಪುತ್ರರನ್ನು ಕುರಿತು ಹೀಗೆ ಹೇಳಿದನು. ||೧೬೫||

ಎಲೈ ಕುಮಾರರೇ ! ಇದೇನಿದು ? ಯಮನನ್ನೂ ಮಹಾಮೃತ್ಯುವನ್ನೂ ದೊಡ್ಡ ಹಳ್ಳಕ್ಕೆ ಹಾಕಿರುವಿರೆಂದು ನಂದಿಕೇಶನು ಹೇಳುತ್ತಿರುವನು. ಇದು ನಿಜವೇ ? ನಿಜವಾಗಿದ್ದರೆ ಇಂಥ ಕಠೋರವಾದ ಕೃತ್ಯವನ್ನು ಹೇಗೆ ಮಾಡಿದಿರಿ ? ನಿಮ್ಮ ಹೃದಯದಲ್ಲಿ ಸ್ವಲ್ಪವೂ ದಯೆಯೇ ಇರುವುದಿಲ್ಲವೇ ? ಇಷ್ಟು ತೀಕ್ಷ್ಣವಾಗಿ ಶಿಕ್ಷೆ ಮಾಡುವಷ್ಟು ನಿಮ್ಮ ಹೃದಯವು ಕಠೋರವಾಗಿದೆಯೇ ? ||೧೬೬||

ಈ ಕೂಡಲೇ ಹೋಗಿ ಅವರನ್ನು ಕರೆದು ತನ್ನಿರಿ. ಅವರು ಸದಾ ಶಿವನ ಪ್ರೀತಿಗೆ ಪಾತ್ರರಾದವರು. ಅವರನ್ನು ಎಂದಿಗೂ ಹಿಂಸೆಗೊಳಪಡಿಸಕೂಡದು. ಅವರು ಪರಮೇಶ್ವರ ಭಕ್ತರು. ಯಮನು ಶಿವನಿಂದಕರನ್ನು ಧ್ವಂಸಮಾಡುವನು. ಆತನೂ ಮತ್ತು ಮಹಾಮೃತ್ಯುವೂ ಅಶೈವರಿಗೆ ಸಿಡಿಲಿನಂತೆ ಇರುತ್ತಾರೆ. ಹೀಗೆ ಇಬ್ಬರೂ ಶಿವಾರಾಧಕರಾಗಿರುವುದರಿಂದ ಸ್ನೇಹಕ್ಕೆ ಯೋಗ್ಯರಾಗಿರುತ್ತಾರೆ. ||೧೬೭||

ಹೀಗೆಂದ ರಾಜನ ಮಾತನ್ನು ಕೇಳಿ ರಾಜಪುತ್ರರು ಕೂಡಲೇ ಯಮನನ್ನೂ ಮಹಾಮೃತ್ಯುವನ್ನೂ ಕರೆದುತರುವಂತೆ ತಮ್ಮ ದೂತರಿಗೆ ಆಜ್ಞಾಪಿಸಿದರು. ||೧೬೮||

|| ರಾಜಪುತ್ರಾ ಊಚುಃ ||

ಪತಿತೋಽಸ್ತಿ ಮಹಾಮೃತ್ಯುರಗಾಧೇ ನರ್ಮದಾಹ್ರದೇ ।
ಯಮೋಽಪಿ ಸ ಸಮಾನೇಯಶ್ಚಿತ್ರಗುಪ್ತಾದಿಭಿಸ್ಸಹ ||೧೬೯||

ಇತಿ ತದ್ವಚನಂ ಶ್ರುತ್ವಾ ಗತ್ವಾ ತೇ ತಸ್ಯ ಕಿಂಕರಾಃ ।
ಪಾಶಬದ್ಧಾನ್ ಸಮಾನೀಯ ಹ್ರದಾತ್ತೀರಮುಪಾಗತಾಃ ||೧೭೦||

ತತಃ ಪರಂ ಶಂಕರಮಂದಿರಸ್ಯ
ಪುರಸ್ಸಮಾನೀಯ ತಮೂಚುರೇವಂ ।
ರಾಜನ್ ಯಮೋ ಮೃತ್ಯುಸಮೇತ ಏವ
ಸೋಽಯಂ ಸಮಾನೀತ ಇತೀಹ ದೂತಾಃ ||೧೭೧||

ತತಃಪರಂ ಸ ರಾಜಾಪಿ ದೃಷ್ಟ್ವಾ ತಂ ವಿಸ್ಮಯಂ ಗತಃ ।
ಶಾಂಕರಾಶ್ಚ ಯಮಂ ದೃಷ್ಟ್ವಾ ಮಹಾಮೃತ್ಯುಸಮನ್ವಿತಂ ||೧೭೨||

ಎಲೈ ದೂತರಿರಾ, ನರ್ಮದೆಯ ಆಳವಾದ ಮಡುವಿನಲ್ಲಿ ಯಮನೂ ಮಹಾಮೃತ್ಯುವೂ, ಚಿತ್ರಗುಪ್ತನೇ ಮುಂತಾದವರೂ ಬಿದ್ದಿರುವರು. ಅವರೆಲ್ಲರನ್ನೂ ಜಾಗ್ರತೆ ಕರೆದುಕೊಂಡು ಬನ್ನಿರಿ ಎಂದು ಅಪ್ಪಣೆಯನ್ನಿತ್ತರು. ||೧೬೯||

ರಾಜಪುತ್ರರ ಅಪ್ಪಣೆಯನ್ನು ಕೇಳಿದ ಕೂಡಲೇ ಅವರ ದೂತರು ನರ್ಮದೆಯ ಮಡುವಿಗೆ ಹೋಗಿ ನೋಡಲು ಅಲ್ಲಿ ಯಮನೇ ಮುಂತಾದವರೆಲ್ಲರೂ ಪಾಶದಿಂದ ಬಂಧಿತರಾಗಿ ಬಿದ್ದಿದ್ದರು. ಅವರೆಲ್ಲರನ್ನೂ ಅಲ್ಲಿಂದ ದಡಕ್ಕೆ ಕೂಡಲೇ ತಂದರು. ||೧೭೦||

ಅನಂತರ ದೂತರು ಆ ಯಮನೇ ಮೊದಲಾದವರನ್ನೆಲ್ಲಾ ಶಿವಮಂದಿರದ ಮುಂಭಾಗಕ್ಕೆ ಕರೆದುಕೊಂಡು ಬಂದು, ರಾಜನನ್ನು ಕುರಿತು, ಎಲೈ ಮಹಾರಾಜನೇ, ಇದೋ, ಮಹಾಮೃತ್ಯು ಮತ್ತು ಚಿತ್ರಗುಪ್ತಾದಿ ಸಮೇತನಾದ ಯಮನನ್ನು ಕರೆದು ತಂದಿರುವೆವು ಎಂದು ಹೇಳಿದರು. ||೧೭೧||

ಆಗ ಮಹಾರಥರಾಜನು ಪಾಶದಿಂದ ಬಂಧಿತರಾದ ಆ ಯಮಾದಿಗಳನ್ನು ನೋಡಿ ವಿಸ್ಮಿತನಾದನು. ಈ ದುರವಸ್ಥೆಯಲ್ಲಿರುವ ಯಮಾದಿಗಳನ್ನು ಅಲ್ಲಿ ನೆರೆದಿದ್ದವರು ನೋಡಿ ಆಶ್ಚರ್ಯಾನ್ವಿತರಾದರು. ||೧೭೨||

ಯಮಂ ದೃಷ್ಟ್ವಾ ನಂದಿಕೇಶೋ ವಿಸ್ಮಯಂ ಪರಮಂ ಗತಃ ।
ಪಾಶಬದ್ಧಂ ಬಲಾತ್ಕಾರಂ ಪ್ರಾಪುರ್ವಿಸ್ಮಯಮಾಸ್ತಿಕಾಃ ॥೧೭೩॥

ಯಃ ಶ್ರುತಃ ಪರ್ವತಾಕಾರೋ ಮಹಾಮೃತ್ಯುರ್ಯಮಃ ಪುರಾ ।
ಸ ಏವ ದೃಷ್ಟಃ ಕಥಮಿತ್ಯಾಹುರತ್ಯಂತಮಾಸ್ತಿಕಾಃ ॥೧೭೪॥

ತತಃ ಪರಂ ರಾಜವಿಲೋಕನೇನ
ವಿಚ್ಛಿನ್ನಪಾಶಸ್ಸ ಯಮೋಽಪಿ ಮೃತ್ಯುಃ ।
ನಂದೀಶ್ವರಂ ಲಜ್ಜಿತ ಏವ ದೃಷ್ಟ್ವಾ
ರಾಜಾನಮಾಲೋಕ್ಯ ಸ ವಿಸ್ಮಿತೋಽಪಿ ॥೧೭೫॥

ಅಪಾರೋರುಹಾರಾಣಿ ಲಿಂಗಾನಿ ದೃಷ್ಟ್ವಾ
ಲಸದ್ಬಿಲ್ವಮಾಲಾಪ್ರಸೂನಾನ್ವಿತಾನಿ
ಪ್ರಣಮ್ಯಾಶು ಭಕ್ತ್ಯಾ ನ ವಿಜ್ಞಾತಮೇವಂ
ಸ್ವರೂಪಂ ಚ ರಾಜ್ಞೋ ಮಮೇತ್ಯಾಹ ಮೃತ್ಯುಃ ॥೧೭೬॥

ಬಲಾತ್ಕಾರವಾಗಿ ಪಾಶದೊಳಗೆ ಸಿಲುಕಿಕೊಂಡು ಪರಾಧೀನನಾಗಿ ಒದ್ದಾಡುತ್ತಿರುವ ಯಮನ ಅವಸ್ಥೆಯನ್ನು ನಂದಿಕೇಶನೂ ನೋಡಿದನು. ಈ ಅದ್ಭುತವಾದ ಘಟನೆಯನ್ನು ನೆನೆಯುತ್ತಾ ಆತನಿಗೆ ಅತ್ಯಂತ ಆಶ್ಚರ್ಯವುಂಟಾಗುತ್ತಿದ್ದಿತು. ||೧೭೩||

ಎಲ್ಲರೂ ಯಮನು ಮತ್ತು ಮಹಾಮೃತ್ಯುವೂ ಪರ್ವತಗಳಂತಿರುವರೆಂದೂ ಹಾಗೂ ಅಜೇಯರಾದ ಮಹಾಬಲಿಷ್ಠರೆಂದೂ ತಿಳಿದಿದ್ದರು. ಆದರೆ ಈಗ ಈಪರಿಯಾಗಿ ಸೆರೆಗೊಳಗಾಗಿರುವುದನ್ನು ಕಂಡು ಎಲ್ಲರೂ, ಇದೇನಿದು ? ಇದು ಹೇಗೆ ಸಂಭವಿಸಿತು ? ಎಂದು ವಿಸ್ಮಯದಿಂದ ವಿಚಾರಮಾಡತೊಡಗಿದರು. ||೧೭೪||

ಯಮನೂ ಮೃತ್ಯುವೂ ಆಗ ರಾಜನನ್ನೂ ನಂದಿಕೇಶನನ್ನೂ ನೋಡಿ ಅತ್ಯಂತ ಲಜ್ಜಿತರಾದರು. ಆದರೆ ರಾಜನ ದರ್ಶನವಾದ ಕೂಡಲೇ ಅವರ ಪಾಶ ಬಂಧನವು ಸ್ವತಃ ಕಳಚಿಹೋಯಿತು. ರಾಜನು ಪುನಃ ಜೀವಂತನಾದುದನ್ನು ಕಂಡು ಅವರಿಗೂ ಅತ್ಯಂತ ವಿಸ್ಮಯವಾಯಿತು. ||೧೭೫||

ಆ ಶಿವಮಂದಿರದಲ್ಲಿದ್ದ ಅಪಾರ ಶಿವಲಿಂಗಗಳನ್ನು ಸಂದರ್ಶಿಸಿ ಮೃತ್ಯುವಿಗೆ ಅತ್ಯಂತ ಆನಂದವುಂಟಾಯಿತು. ಆ ದೊಡ್ಡ ದೊಡ್ಡ ಶಿವಲಿಂಗಗಳೆಲ್ಲವೂ ಬಿಲ್ವ

ಕ್ಷಂತವ್ಯೋಽಪಿ ಮಮಾಪರಾಧ ಇತಿ ತಂ ಹಾರಂ ನರಾಧೀಶ್ವರಂ
ನತ್ವಾ ಹಾರಕುಮಾರವನ್ಮಮ ಪಿತಾ ದಾರಾನುದಾರಾನಪಿ ।
ಏತದ್ಭಾಗ್ಯವಿಲೋಕನಾರ್ಥಮಧುನಾ ಪ್ರಾಪ್ತಂ ಮಹೇಶಾಜ್ಞಯಾ
ಪ್ರಾಯಃ ಪ್ರಾಪ್ತಮಪಾರಮೇವ ಸುಕೃತಂ ಹಾರೋತ್ತಮಾಲೋಕನೈಃ
॥೧೭೭॥

ಜನ್ಮೇದಂ ಸಫಲಂ ಶಿವಾರ್ಚನರತಂ ಶ್ರೀಪಾದುಕಾಲೋಕನಾತ್
ಲೋಕೇ ಕೋಽಪಿ ನ ದೃಶ್ಯತೇ ಶಿವರತಾದನ್ಯೋ ನ ಧನ್ಯೋ ಜನಃ ।
ನ ಪ್ರಾಗೇವ ನ ಭೂತಪೂರ್ವವಿಭವೋ ಭಾವೋ ನ ಸಂಭಾವಿತೋ
ಭಾವಂ ಪ್ರಾಪ್ತಮಿದಂ ಮನೋರಥಕುಟೀರೇವಾತಟಂ ಧೂರ್ಜಟೇಃ॥೧೭೮॥

ಮಾಲೆಗಳಿಂದಲೂ ನಾನಾ ವಿಧವಾದ ಪುಷ್ಪಗಳಿಂದಲೂ ಅಲಂಕೃತವಾಗಿದ್ದವು. ಅವುಗಳನ್ನೆಲ್ಲಾ ನೋಡಿ ಮೃತ್ಯುವು ಭಕ್ತಿಯಿಂದ ನಮಸ್ಕರಿಸಿದನು. ಇಂಥ ಮಹಾತ್ಮನ ಯೋಗ್ಯತೆಯು ಈವರೆಗೂ ತನಗೆ ತಿಳಿಯದಿದ್ದರಿಂದ ಪಶ್ಚಾತ್ತಾಪ ಪಡುತ್ತಾ ಹೀಗೆಂದು ಹೇಳಿದನು. ॥೧೭೬॥

ಮಹಾರಾಜನೇ, ಪರಮ ಶಿವಭಕ್ತನೇ! ನಿನಗೆ ನಮಸ್ಕಾರ. ನನ್ನ ಅಪರಾಧ ವನ್ನು ಕ್ಷಮಿಸು ಎಂದು ಹೇಳಿ ಮೃತ್ಯುವು ರಾಜನನ್ನೂ ರಾಜಪತ್ನೀ ಪುತ್ರರನ್ನೂ ವಂದಿಸಿ ಆನಂದದಿಂದ ಉಸುರಿದನು. ನನಗೆ ಒದಗಿದ್ದ ಅವಮಾನ ಪ್ರಸಂಗವೂ ಪರಮ ಲಾಭದಾಯಕವೇ ಆಗಿರುತ್ತದೆ. ಪರಮೇಶ್ವರನ ಸಂಕೇತದಿಂದಲೇ ನನಗೆ ಇಂದು ಇಂಥ ಪರಮಶಿವಭಕ್ತರ ದರ್ಶನ ಭಾಗ್ಯವು ಲಭಿಸಿತು. ॥೧೭೭॥

ನನ್ನ ಜನ್ಮವು ಇಂದು ಸಾರ್ಥಕವಾಯಿತು. ಈಶ್ವರ ಭಕ್ತರ ಚರಣ ಸಂದರ್ಶನದಿಂದ ನಾನು ಧನ್ಯನಾದೆನು. ಲೋಕದಲ್ಲಿ ಈಶ್ವರ ಭಕ್ತರಿಗಿಂತ ಶ್ರೇಷ್ಠ ರಾದವರಾಗಲಿ ಧನ್ಯರಾದವರಾಗಲಿ ಮತ್ತೆ ಯಾರೂ ಕಾಣುವುದಿಲ್ಲ. ಇಂದು ನನಗೆ ಪರಮ ಲಾಭವಾಗಿರುತ್ತದೆ. ಇಂಥ ಸುಯೋಗವು ನನಗೆ ಹಿಂದೆಂದೂ ಲಭಿಸಿರಲಿಲ್ಲ. ಪರಮ ಮಹಿಮಾಶಾಲಿಯಾದ ಆಸ್ತಿಕನನ್ನು ನಾನು ಎಂದೂ ದರ್ಶನಾದಿಗಳಿಂದ ಪುರಸ್ಕರಿಸಲಿಲ್ಲ. ಇಂದು ಸಾಕ್ಷಾತ್ ಪರಮೇಶ್ವರನ ಹೃದಯಮಂದಿರದಂತಿರುವ ಈ ರೇವಾತೀರವೂ ಶಿವಭಕ್ತರೂ ದರ್ಶನಕ್ಕೆ ನನಗೆ ಲಭಿಸಿರುವರು. ಅಹೋ ನನ್ನ ಭಾಗ್ಯ, ಹೀಗೆಂದು ಮೃತ್ಯುವು ಹೇಳಿದನು. ॥೧೭೮॥

ಇತಿ ತದ್ವಚನಂ ಶ್ರುತ್ವಾ ರಾಜಾ ಸಂತುಷ್ಟಮಾನಸಃ ।
ನಂದಿಕೇಶ್ವರಮಾಲೋಕ್ಯ ಬಭಾಷೇ ವಚನಂ ಮುದಾ ॥೧೭೯॥

॥ ಮಹಾರಥ ಉವಾಚ ॥

ಶ್ರಾಂತಃ ಕಿಲಾಯಮಂ ಶಿವಪೂಜನಮತ್ರ ಕಾರ್ಯಂ
ಹಾರೋಪಹಾರನಿಕರೈರುದರಂ ಚ ಪೂರ್ಣಂ ।
ತೂರ್ಣಂ ವಿಧೇಯಮಧುನಾ ವಿಧುಖಂಡಮೌಳಿ
ಪೂಜಾವಿಲೋಕನಪುರಸ್ಸರಮಾದರೇಣ ॥೧೮೦॥

ಇತ್ಯುಕ್ತ್ವಾ ಸ ಮಹಾದೇವಂ ಪುನರಪ್ಯಾದರಾನ್ನವೈಃ ।
ಬಿಲ್ವಾದಿಭಿಃ ಪ್ರಸೂನಾದ್ಯೈಃ ಪೂಜಯಾಮಾಸ ಭೂಪತಿಃ ॥೧೮೧॥

ಅಪಾರಸ್ವರ್ಣಪಾತ್ರಾಣಿ ಪರಮಾನ್ನಾದಿಸಾಧನೈಃ ।
ಸಂಪೂರ್ಣಾನಿ ಮಹೇಶಾಗ್ರೇ ಸ್ಥಾಪಯಾಮಾಸುರಾಸ್ತಿಕಾಃ ॥೧೮೨॥

ಮೃತ್ಯುವಿನ ಆ ಮಾತನ್ನು ಕೇಳಿ ಮಹಾರಥರಾಜನಿಗೆ ಆನಂದವಾಯಿತು. ಅನಂತರ ರಾಜನು ನಂದೀಶ್ವರನನ್ನು ಕುರಿತು ಹೀಗೆ ನುಡಿದನು. ||೧೭೯||

ನಂದಿಕೇಶನೇ, ಯಮನು ಬಹಳ ಆಯಾಸಗೊಂಡಿರುವನು. ಇನ್ನು ಈತನನ್ನು ಹೀಗೆಯೇ ಮಾತನಾಡಿಸುತ್ತಾ ನಿಲ್ಲುವುದು ಯುಕ್ತವಲ್ಲ. ಜಾಗ್ರತೆ ಶಿವನೈವೇದ್ಯಭೋಜನದಿಂದ ಈತನನ್ನು ತೃಪ್ತಿಗೊಳಿಸಬೇಕು. ಅದಕ್ಕಿಂತ ಮೊದಲು ಶಿವಪೂಜೆಯನ್ನು ನಡೆಯಿಸಿ ಆತನಿಗೆ ತೋರಿಸಬೇಕು. ಆದುದರಿಂದ ಶೀಘ್ರವಾಗಿ ಮುಂದಿನ ವ್ಯವಸ್ಥೆಗಳನ್ನು ನಡೆಸು. ||೧೮೦||

ಹೀಗೆಂದು ಹೇಳಿ ಮಹಾರಥನು ಪುನಃ ಶಿವಪೂಜೆಯನ್ನಾರಂಭಿಸಿದನು. ಮತ್ತೆ ಹೊಸ ಹೊಸ ಬಿಲ್ವದಳಗಳಿಂದಲೂ ಹೂವೇ ಮೊದಲಾದ ಸಾಮಗ್ರಿಗಳಿಂದಲೂ ಮಹಾ ವೈಭವಪೂರ್ವಕವಾಗಿ ಪೂಜೆಯನ್ನು ನಡೆಸಿದನು. ||೧೮೧||

ಆಗ ಶಿವನೈವೇದ್ಯಕ್ಕಾಗಿ ಪುನಃ ಭಕ್ಷ್ಯಭೋಜ್ಯಗಳನ್ನು ಸಿದ್ಧಪಡಿಸಿದರು. ಅನೇಕ ಸುವರ್ಣ ಪಾತ್ರೆಗಳಲ್ಲಿ ಪಾಯಸವೇ ಮೊದಲಾದುವುಗಳನ್ನು ಈಶ್ವರನ ಮುಂಭಾಗದಲ್ಲಿ ತಂದಿರಿಸಿದರು. ||೧೮೨||

ಧೂಪಪ್ರಧೂಮ್ರೈರಿವ ದೀಪಮಾಲಾ
ಕುಲ್ಯೈರಪಿ ವ್ಯಾಪ್ತಮಥಾನುಲಿಪ್ತಂ ।
ತಂ ನರ್ಮದಾತೀರಮಪಾರಹಾರಂ
ದೃಷ್ಟ್ವಾ ಪ್ರಹೃಷ್ಟೋಽಪಿ ಸ ನಂದಿಕೇಶಃ ॥೧೮೪॥

ತತಃ ಪರಂ ದುಗ್ಧಘೃತಾದಿಕುಲ್ಯಾಂ
ಪರಿಷ್ಕೃತಾಪಾರನವಾನ್ನರಾಶೀನ್ ।
ನಿವೇದ್ಯ ಸಾಂಬಾಯ ಸದಾಶಿವಾಯ
ನೀರಾಜನಾನಿ ಪ್ರದದೌ ಸ ಭೂಪಃ ॥೧೮೫॥

ತತಃ ಪುಷ್ಪಾಂಜಲಿಂ ಕೃತ್ವಾ ಪ್ರಣಮ್ಯ ಚ ಪುನಃ ಪುನಃ ।
ನೃತ್ಯಂ ಕೃತ್ವಾ ಪುನಃ ಪೂಜಾಂ ಚಕಾರ ಗಿರಿಶಾಯ ಸಃ ॥೧೮೬॥

ತತಃ ಪರಂ ಹೇಮವಿರಾಜಮಾನ
ಪಾತ್ರೇಷು ಹಾರ್ದಾ ಪರಮಾನ್ನರಾಶೀನ್
ದದೌ ಶಿವಾಚಾರರತೇಭ್ಯ ಏವ
ಸ ಕೋಟಿಶೋ ಭೂಪತಿರಾದರೇಣ ॥೧೮೭॥

ಶಿವಲಿಂಗಗಳಿಗೆ ಅನೇಕ ವಿಧವಾದ ಗಂಧಗಳನ್ನು ಅರ್ಪಿಸಿದ ಬಳಿಕ ಧೂಪವನ್ನು ಆಘ್ರಾಪಿಸಿ ದೀಪಮಾಲೆಗಳಿಂದ ಸೇವೆಯನ್ನು ಸಲ್ಲಿಸಿದರು. ಅತಿವೈಭವ ಯುಕ್ತವಾದ ಶಿವಾರಾಧನೆಯನ್ನು ಆ ರೇವಾತೀರದಲ್ಲಿ ತುಂಬಿರುವ ಶಿವಭಕ್ತರನ್ನೂ ನೋಡಿ ನಂದಿಕೇಶನಿಗೆ ಪರಮಾನಂದವಾಯಿತು. ॥೧೮೪॥

ಪತ್ರಪುಷ್ಪಪೂಜಾದಿಗಳೆಲ್ಲವೂ ನೆರವೇರಿದ ಮೇಲೆ ನೈವೇದ್ಯವನ್ನು ಅರ್ಪಿಸಿದನು. ನಾನಾ ವಿಧವಾದ ಪಕ್ವಾನ್ನಗಳನ್ನೂ, ಹಾಲು ತುಪ್ಪ ಮೊಸರುಗಳನ್ನೂ ಮತ್ತು ಬೇರೆ ಅನೇಕ ವಿಧವಾದ ಭಕ್ಷ್ಯಭೋಜ್ಯಗಳನ್ನೂ ನಿವೇದನ ಮಾಡಿಸಿದನು. ಅನಂತರ ಮಹಾದೇವನಿಗೆ ವೈಭವದಿಂದ ಮಂಗಳಾರತಿಯನ್ನು ಬೆಳಗಿದನು. ॥೧೮೫॥

ಅನಂತರ ಸುವರ್ಣಪುಷ್ಪಾರ್ಪಣೆಯನ್ನೂ ಪ್ರದಕ್ಷಿಣ ನಮಸ್ಕಾರವನ್ನೂ ಮಾಡಿ ನರ್ತನದಿಂದ ಈಶ್ವರನನ್ನು ತೃಪ್ತಿಗೊಳಿಸಿ ಉತ್ತರಾಂಗವಾದ ಪುನಃ ಪೂಜೆಯನ್ನೂ ಮಾಡಿದನು. ॥೧೮೬॥

ಸಮಗ್ರವಾಗಿ ಶಿವಪೂಜೆಯು ನೆರವೇರಿದನಂತರ ರಾಜನು ಅನೇಕ ಭಕ್ತರನ್ನು

ಹಾರೋಪಹಾರೇಣ ಸ ನಂದಿಕೇಶಃ
ತುಷ್ಟೋಽಪಿ ವಿಪುಷ್ಟೋಽಪಿ ಯಮೋಽಪಿ ಪುಷ್ಟಃ ।
ಪುಷ್ಟೋ ಮಹಾಮೃತ್ಯುರಪಿ ಪ್ರಪುಷ್ಟಃ
ಸ ಚಿತ್ರಗುಪ್ತೋಽಪಿ ತಥಾ ಪ್ರಹೃಷ್ಟಃ ॥೧೮೭॥

ತತಃ ಪರಮಹಾರಾಣಿ ದದಾವಾಭರಣಾನ್ಯಪಿ ।
ತಾಂಬೂಲಾನಿ ದುಕೂಲಾನಿ ಭೂಪಾಲಸ್ತೇಭ್ಯ ಏವ ಸಃ ॥೧೮೮॥

ತತಸ್ತಾದೃಶಸಾಮಗ್ರೀಂ ಶಂಕರಾರಾಧನೋತ್ಸವಂ ।
ದೃಷ್ಟ್ವಾ ಸ ನಂದಿಕೇಶೋಽಪಿ ರಾಜಾನಂ ಪ್ರಾಹ ಶಾಂಭವಂ ॥೧೮೯॥

ಶಿವಾಜ್ಞಾಪಾಲಕೋ ನಾಹಂ ಪ್ರಿಯೋ ಮೃತ್ಯುಂಜಯಸ್ಯ ಚ ।
ನ ತವಾಗಮನಂ ತತ್ರ ತ್ರಿನೇತ್ರಃ ಕಿಂ ವದಿಷ್ಯತಿ ॥೧೯೦॥

ಭೋಜನಕ್ಕೆ ಕುಳ್ಳಿರಿಸಿದನು. ಬಂಗಾರದ ಪಾತ್ರೆಗಳಲ್ಲಿ ಪರಮಾನ್ನವೇ ಮೊದಲಾದ ಅನೇಕ ಭಕ್ಷ್ಯಭೋಜ್ಯಗಳನ್ನು ಎಲ್ಲರಿಗೂ ಬಡಿಸಿ ತೃಪ್ತಿಪಡಿಸಿದನು. ॥೧೮೬॥

ಹೀಗೆ ಶಿವನೈವೇದ್ಯವನ್ನು ಭೋಜನ ಮಾಡಿ ನಂದಿಕೇಶನು ತೃಪ್ತಿಪಡೆದನು. ಹಾಗೆಯೇ ನೈವೇದ್ಯ ಭೋಜನದಿಂದ ಯಮನೂ, ಮಹಾ ಮೃತ್ಯುವೂ, ಮತ್ತು ಚಿತ್ರಗುಪ್ತನೂ ತೃಪ್ತರಾಗಿ ಹೃಷ್ಟಪುಷ್ಟರಾದರು. ॥೧೮೭॥

ಎಲ್ಲರಿಗೂ ಭೋಜನವಾದ ಮೇಲೆ ರಾಜನು ನಾನಾ ವಿಧವಾದ ವಸ್ತ್ರಾಭರಣಗಳನ್ನೂ ತಾಂಬೂಲಗಳನ್ನೂ ಸರ್ವರಿಗೂ ಕೊಟ್ಟನು. ॥೧೮೮॥

ಈ ಪ್ರಕಾರ ರಾಜನ ವಿಶಾಲ ಸಾಧನಸಂಪತ್ತನ್ನೂ ಮಹಾವೈಭವಯುಕ್ತವಾದ ಶಿವಾರಾಧನ ಮಹೋತ್ಸವವನ್ನೂ ನೋಡಿ ನಂದಿಕೇಶನಿಗೆ ಅತ್ಯಾಶ್ಚರ್ಯವೂ ಆನಂದವೂ ಆಯಿತು. ಆಗ ಅವನು ರಾಜನನ್ನು ಕುರಿತು ಹೀಗೆ ನುಡಿದನು. ॥೧೮೯॥

ಮಹಾರಾಜನೇ! ಯದ್ಯಪಿ ನಿನ್ನ ಆಚಾರವಿಚಾರಗಳಿಂದ ನನಗೆ ಪರಮಾನಂದವಾಗಿರುತ್ತದೆ. ಆದರೆ ನಾನು ನಿನ್ನನ್ನು ಶಿವಸನ್ನಿಧಿಗೆ ಕರೆದುಕೊಂಡು ಹೋಗಬೇಕೆಂದು ಇಲ್ಲಿಗೆ ಬಂದೆನು. ಹಾಗೆಯೇ ಶಿವನ ಆಜ್ಞೆಯೂ ಆಗಿದ್ದಿತು. ಆದರೆ ಈಗ ನೀನು ನನ್ನ ಜೊತೆಯಲ್ಲಿ ಬಾರದಿದ್ದರೆ ನಾನು ಶಿವಾಜ್ಞೆಯನ್ನು ನೆರವೇರಿಸಿದಂತಾ

ನ ಜಾನೇ ಗಿರಿಜಾಕಾಂತಪ್ರಭಾವಂ ಭಾವನೇವ ವಾ ।
ಭಾವಂ ಭವಾರ್ಚನಸ್ಯಾಪಿ ಪ್ರಭಾವಂ ಭವಸನ್ನಿಭಂ ॥೧೯೧॥

ತತ್ರಾಗತ್ಯ ಮಹೇಶ್ವರಾಯ ಸಕಲಂ ವಿಜ್ಞಾಪ್ಯ ಯದ್ಯತ್ರ ತೇ
ಪ್ರೀತಿಸ್ತರ್ಹಿ ಶಿವಾಜ್ಞಯಾ ಪುನರಿದಂ ಪ್ರಾಪ್ತವ್ಯಮೇವ ಸ್ಥಲಂ ।
ಏತತ್ಕಾಮಗಮೇವ ಪುಷ್ಪಕಮತಶ್ಚಿತ್ತಂ ಕಥಂ ತೇ ವದ
ವ್ಯಕ್ತಂ ತ್ಯಕ್ತಶಿವೇತರಾರ್ಚನಹರಾಪಾರಪ್ರಭಾವಾದರಃ ॥೧೯೨॥

ಇತ್ಯುಕ್ತಂ ತದ್ವಚಃ ಶ್ರುತ್ವಾ ಸ್ಮೃತ್ವಾ ಶಂಕರಮಾದರಾತ್ ।
ಪ್ರಣಮ್ಯ ನಂದಿಕೇಶಂ ಚ ಪ್ರಾಹ ಹಾರಾದರೇಶ್ವರಃ ॥೧೯೩॥

ಗುವುದಿಲ್ಲ. ನನ್ನ ಮೇಲಿನ ಶಿವಪ್ರೀತಿಯೂ ಕಡಮೆಯಾಗುವುದು. ಅಲ್ಲದೇ ನಾನೊಬ್ಬನೇ ತಿರುಗಿಹೋದರೆ ತ್ರಿಲೋಚನನು ಏನನ್ನು ಹೇಳುವನೋ? ಯಾವ ಉತ್ತರವನ್ನೀಯಲಿ? ॥೧೯೦॥

ಈ ಶಿವಸಂಬಂಧವಾಗಿ ಎಷ್ಟೆಷ್ಟು ಯೋಚಿಸುತ್ತೇನೆಯೋ ನನಗೆ ಅಷ್ಟಷ್ಟು ದುರ್ಬೋಧವಾಗಿದೆ. ಇಷ್ಟಾದರೂ ನನಗೆ ಶಿವಪ್ರಭಾವವೂ ಶಿವಭಕ್ತಪ್ರಭಾವವೂ ಶಿವಾರ್ಚನ ಪ್ರಭಾವವೂ ತಿಳಿಯದಾಗಿದೆ. ಎಲ್ಲವೂ ಸಾಕ್ಷಾತ್ ಶಿವಾತ್ಮಕವೆಂತಲೇ ನನ್ನ ಅಭಿಪ್ರಾಯ. ॥೧೯೧॥

ಮಹಾರಾಜನೇ! ನೀನು ಅನನ್ಯ ಮನಸ್ಕನಾಗಿ ಶಿವಧ್ಯಾನದಲ್ಲಿ ಆಸಕ್ತನಾಗಿರುವುದು ಎಲ್ಲರಿಗೂ ತಿಳಿದೇ ಇದೆ. ಆದರೆ ಈಗ ನನ್ನೊಡನೆ ಶಿವಸನ್ನಿಧಿಗೆ ನೀನೂ ಬರಬೇಕೆಂದು ನನ್ನ ಸೂಚನೆ. ನೀನು ಪರಮೇಶ್ವರನನ್ನು ಮೊದಲು ಒಂದು ಸಲ ಸಂದರ್ಶನ ಮಾಡು. ಬಳಿಕ ನಿನಗೆ ಇಲ್ಲಿಗೇ ಬಂದು ವಾಸಿಸಬೇಕೆಂಬ ಅಭಿಲಾಷೆ ಇದ್ದರೆ ಮಹೇಶ್ವರನಲ್ಲಿ ವಿಜ್ಞಾಪಿಸಿಕೊಂಡು ಅನುಜ್ಞೆಯನ್ನು ಪಡೆದು ಹಿಂದಕ್ಕೆ ಬರುವೆಯಂತೆ. ಇದೋ, ಈ ವಿಮಾನವು ನಿನ್ನ ಮನಸ್ಸನ್ನನುಸರಿಸಿ ಎಲ್ಲಿಗೆ ಹೋಗಬೇಕಾದರೂ ಸಿದ್ಧವಾಗಿರುತ್ತದೆ. ಆದುದರಿಂದ ನನ್ನ ಸಂಗಡ ನೀನೂ ಹೊರಡು. ಇದರಮೇಲೆ ನಿನ್ನ ಅಭಿಪ್ರಾಯವೇನು? ಅದನ್ನಾದರೂ ನನಗೆ ತಿಳಿಸು. ಹೀಗೆಂದು ನಂದೀಶ್ವರನು ಕೇಳಲು, ॥೧೯೨॥

ದುಷ್ಪ್ರಾಪಂ ತಪಸಾಪಿ ಕೇವಲಮುಮಾಕಾಂತಾಂಘ್ರಿಪಂಕೇರುಹಂ ।
ಧ್ಯಾನೈರ್ವಾ ಶಿವಲಿಂಗಪೂಜನವರೈರ್ಹಾರ್ಯೈರಪಾರ್ಯೈರಪಿ ।
ಧರ್ಮೈರ್ವಾ ಶಿವಸನ್ನಿಧಾನಮಿತಿ ಮೇ ಭಾತ್ಯೇವ ಸತ್ಯಂ ಪರಂ
ತತ್ರಾಪ್ಯಂಬಿಕಯಾ ಸಹಾತಿವಿಮಲೇ ಲಿಂಗೇ ಶಿವಸ್ತಿಷ್ಠತಿ ॥೧೯೪॥

ಅತ್ರಾಪಾರಮಹೋತ್ಸವೈರನುದಿನಂ ಲಿಂಗಾರ್ಚನೈರ್ನೀಯತೇ
ಕಾಲಃ ಕೋಽಪಿ ಸುಧಾಮಯಃ ಸ್ವಸಮಯಸ್ಸರ್ವಾತ್ಮನಾ ದುರ್ಲಭಃ ।
ಏತತ್ತಾವದುಮಾಸಹಾಯನಿಲಯಂ ತ್ಯಕ್ತುಂ ನ ವಾಂಛಾಪಿ ಮೇ
ಬ್ರಹ್ಮಾದಿಪ್ರಲಯೇಽಪಿ ಶಾಂಗನಿಲಯೇ ಲಿಂಗೇ ವಸಾಮಿ ಧ್ರುವಂ ॥೧೯೫॥

ಪರಮ ಶಿವಭಕ್ತನಾದ ರಾಜನು ನಂದಿಕೇಶನ ಮಾತನ್ನು ಆದರದಿಂದ ಕೇಳಿ ಅನಂತರ ಅವನು ಶಿವನನ್ನೇ ಧ್ಯಾನಿಸುತ್ತಾ ನಂದೀಶನಿನೂ ನಮಸ್ಕರಿಸಿ ಹೀಗೆಂದನು ||೧೯೩||

ನಂದಿಕೇಶನೇ! ಆ ಉಮಾಕಾಂತನ ಚರಣಕಮಲವು ಅತ್ಯಂತ ದುರ್ಲಭ ವಲ್ಲವೆ! ಮಹಾಮಹಾತಪಸ್ಸಿಂದಲೂ ಲಭ್ಯವಾಗಲಾರದು. ಶಿವಸನ್ನಿಧಿಯು ಮತ್ತೆ ಯಾವ ಉಪಾಯದಿಂದಲೂ ಲಭಿಸಲಾರದು. ಅದಕ್ಕೆ ಇರುವುದು ಒಂದೇ ಉಪಾಯ. ಶಿವಾರಾಧನೆಯೇ ಅದರ ಮುಖ್ಯ ಸಾಧನ. ಆ ಶಿವನನ್ನೇ ಸದಾ ಧ್ಯಾನಿಸಬೇಕು. ಸರ್ವದಾ ಶಿವಲಿಂಗವನ್ನೇ ಪೂಜಿಸಬೇಕು. ಅನವರತವೂ ಶಿವಧರ್ಮಗಳನ್ನೇ ಅನುಷ್ಠಿಸಬೇಕು. ಹಾಗೆ ನಡೆದರೇ ಶಿವಸಾನ್ನಿಧ್ಯವು ಲಭಿಸುವುದು. ಇದು ಸತ್ಯ. ಆದರೆ ಆ ಪಾರ್ವತೀಸಮೇತನಾದ ಪರಮೇಶ್ವರನು ವಿಮಲವಾದ ಶಿವಲಿಂಗದಲ್ಲಿಯೂ ವಾಸಮಾಡುವನೆಂದು ನಾನು ತಿಳಿದುಕೊಂಡಿರುತ್ತೇನೆ. ||೧೯೪||

ನಂದಿಕೇಶನೇ! ನಾನು ಇಲ್ಲಿ ಪ್ರತಿದಿನವೂ ಶಿವಲಿಂಗಾರ್ಚನೆಯನ್ನು ನಿರಾತಂಕವಾಗಿಯೂ ಮಹಾ ವೈಭವದಿಂದಲೂ ಮಾಡುತ್ತಿರುವೆನು. ಇಂತಹ ಪರಮ ಶ್ರೇಯಸ್ಕರವಾದ ಸುಯೋಗವು ಅತ್ಯಂತ ದುರ್ಲಭವಾಗಿರುವುದಲ್ಲವೆ! ಮನುಷ್ಯನ ಆಯುಷ್ಯದಲ್ಲಂತೂ ಈ ರೀತಿಯ ಪರಮ ಸುಖಪ್ರದವಾದ ಸುಸಂದರ್ಭವು ದೊರೆಯುವುದು ಅತ್ಯಂತ ವಿರಳ. ಇದೋ ನೋಡು, ಈ ಶಿವಾಲಯವು ಸಾಕ್ಷಾತ್ ಉಮಾಪತಿಯ ಆವಾಸಸ್ಥಾನವಾಗಿರುವುದು. ಇಂಥ ಪುಣ್ಯತಮವಾದ ಮತ್ತು ಆನಂದಮಯವಾದ ಸ್ಥಾನವನ್ನು ತ್ಯಜಿಸಲು ನನಗೆ ಅಪೇಕ್ಷೆಯೇ ಆಗುವುದಿಲ್ಲ.

ಪಶ್ಯೇದಂ ನವಬಿಲ್ವಪಲ್ಲವಕುಲವ್ಯಾಪ್ತಂ ಮಯೇದಂ ಕೃತಂ
ರೇವಾತೀರಸಮನ್ವಿತಂ ವನಮಿದಂ ಲಿಂಗೈಶ್ಚ ತುಂಗೈರ್ವೃತಂ ।
ಏತೇನೈವ ಮಮಾಕ್ಷಯಂ ಸುಖಮಪಿ ಪ್ರಾಯಃ ಪ್ರವೃದ್ಧಂ ಭವೇತ್
ಇತ್ಯೇವ ಸ್ಫುರತೀತಿ ಶಂಕರಪದಾಂಭೋಜೇ ಭಜೇ ನಿರ್ಭಯಃ ॥೯೬॥

ಇತ್ಯಾಕರ್ಣ್ಯ ವಚಸ್ತಸ್ಯ ಸಮ್ಯಗಿತ್ಯಭಿನಂದಿತಂ ।
ಯಯೌ ಯಮಾದಿಸಂಯುಕ್ತೋ ನಂದಿಕೇಶಃ ಪ್ರಹರ್ಷವಾನ್ ॥೯೭॥

ಮಹಾ ಪ್ರಲಯದವರೆಗೂ ಈ ಸ್ಥಳವನ್ನು ಬಿಡಲು ಇಚ್ಛಿಸುವುದಿಲ್ಲ. ಪರಮಾಂತ್ಯದ ವರೆಗೂ ನಾನು ಶಿವಾರಾಧನೆಯನ್ನೇ ಮಾಡುತ್ತ ಇಲ್ಲೇ ವಾಸಮಾಡಿಕೊಂಡಿರುವೆನು. ॥೯೫॥

ಎಲೈ ನಂದಿಕೇಶನೇ! ನಾನು ಅವಿಚ್ಛಿನ್ನವಾಗಿ ಶಿವಾರಾಧನೆಯನ್ನು ಮಾಡುವ ಅಭಿಲಾಷೆಯಿಂದಲೇ ಮಹಾ ಶ್ರಮಪಟ್ಟು ಈ ಬಿಲ್ವವನವನ್ನು ನಿರ್ಮಿಸಿ ಪೋಷಿಸಿರುವೆನು. ಇದು ನಿನಗೆ ತೋರುತ್ತಿಲ್ಲವೇ? ಶಿವಾರಾಧನೆಯ ನಿಮಿತ್ತವಾಗಿಯೇ ಈ ಎಲ್ಲಾ ಶಿವಾಲಯಗಳನ್ನು ಕಟ್ಟಿಸಿ ಇವುಗಳಲ್ಲಿ ನರ್ಮದಾ ಲಿಂಗಗಳನ್ನು ಸ್ಥಾಪಿಸಿರುವೆನು. ಶಿವಾರಾಧನೆಯಿಂದ ಸುಖವಾಗಿ ಆಯುಷ್ಯವನ್ನು ಕಳೆಯಬೇಕೆಂಬ ಅಪೇಕ್ಷೆಯಿಂದ ಈ ನರ್ಮದಾತೀರದಲ್ಲಿ ಇಷ್ಟೆಲ್ಲಾ ವ್ಯವಸ್ಥೆಗಳನ್ನು ಕಲ್ಪಿಸಿಕೊಂಡಿರುವೆನು. ಇಲ್ಲೇ ಸತತವೂ ಶಿವಸೇವೆಯನ್ನು ಮಾಡುತ್ತಾ ಕಾಲ ಕಳೆದರೆ ಇದರಿಂದಲೇ ನನಗೆ ಅವಿನಾಶಿಯಾದ ಪರಮ ಸುಖವು ಲಭಿಸುವುದೆಂದು ನನ್ನ ದೃಢವಾದ ನಂಬಿಕೆ. ಈಶಭಜನೆಯಿಂದ ನನ್ನ ಸುಖಾನಂದಗಳು ಅಭಿವೃದ್ಧವಾಗುತ್ತವೆಂದು ತಿಳಿದು ನಾನು ಸರ್ವದಾ ಶಂಕರನ ಚರಣಕಮಲಗಳನ್ನೇ ಭಜಿಸುವೆನು ಮತ್ತು ಧ್ಯಾನಿಸುವೆನು. ಆದ್ದರಿಂದ ಇದಕ್ಕಿಂತ ಪ್ರತ್ಯೇಕವಾದ ಶಿವಸ್ಥಾನವು ಮತ್ತೆಲ್ಲಿರುವುದು? ॥೯೬॥

ಈರೀತಿ ಮಹಾರಥನು ಹೇಳಲು ಅವನ ಮಾತನ್ನೂ ಮತ್ತು ಅಭಿಲಾಷೆಯನ್ನೂ ನಂದಿಕೇಶನು ಬಹುವಾಗಿ ಅಭಿನಂದಿಸಿದನು. ಅನಂತರ ರಾಜನ ಅನುಜ್ಞೆಯನ್ನು ಪಡೆದು ನಂದೀಶ್ವರನು ಯಮಾದಿಗಳೊಡನೆ ಆನಂದಪಡುತ್ತಾ ಅಲ್ಲಿಂದ ಕೈಲಾಸಕ್ಕೆ ತೆರಳಿದನು. ॥೯೭॥

ಪ್ರಭಾವಂ ಸಂಸ್ಮರನ್ನೇವ ಭೂಪತೇಸ್ಸ ಪುನಃಪುನಃ ।
ಯಮಮಂದಿರಪರ್ಯಂತಂ ಯಯೌ ನಂದೀಶ್ವರೋ ಮುದಾ ॥೧೯೮॥

ತದಾನೀಂ ಯಮಮಾಲೋಕ್ಯ ಪ್ರಾಹ ನಂದೀ ತನೂದರಾತ್ ।
ಚಿತ್ರಗುಪ್ತಾದಿಕಂ ದೃಷ್ಟ್ವಾ ಮಹಾಮೃತ್ಯುಂ ಚ ಶಾಂಭವಃ ॥೧೯೯॥

॥ ನಂದಿಕೇಶ್ವರ ಉವಾಚ ॥

ದೃಷ್ಟಃ ಕಿಲಾಯಂ ಮಹಿಮಾ ಶಿವಸ್ಯ
ಸ ಶಾಂಭವೋ ಭೂಪತಿರುದ್ಧತೋಽಪಿ ।
ಕಥಂ ಪ್ರವೃದ್ಧೋಽಸಿ ದೃಢೋರುಪಾಶೈಃ
ಪ್ರಪಾತಿತೋಽಸಿ ಪ್ರಬಲೈರ್ಹ್ರದೇಽಪಿ ॥೨೦೦॥

ಶಿವಪೂಜಾಬಲಂ ತೇಷಾಂ ತತ್ತುಲ್ಯಂ ನ ಬಲಂ ಖಲು ।
ಶಿವಪೂಜಾಬಲೇನೈವ ಜಿತಂ ಲೋಕತ್ರಯಂ ಚ ತೈಃ ॥೨೦೧॥

ನಂದೀಶ್ವರನು ಮಾರ್ಗದಲ್ಲಿಯೂ ಮಹಾರಥರಾಜನ ಮಹಿಮೆಯನ್ನೇ ನೆನೆದು ಕೊಂಡಾಡುತ್ತಾ ಯಮನಿಲಯದವರೆಗೂ ಬಂದನು. ॥೧೯೮॥

ಅನಂತರ ಯಮನನ್ನು ನೋಡಿ ನಂದಿಕೇಶನು ತನ್ನ ಸಮೀಪದಲ್ಲಿದ್ದ ಮಹಾಮೃತ್ಯು, ಚಿತ್ರಗುಪ್ತ ಇವರನ್ನು ಕುರಿತು ಹೀಗೆಂದು ನುಡಿದನು. ॥೧೯೯॥

ಎಲೈ ಯಮಧರ್ಮನೇ, ಈಗ ಶಿವಮಹಿಮೆಯು ಸರಿಯಾಗಿ ತಿಳಿಯಿತೇ ? ಶಿವನಲ್ಲಿ ದೃಢಮನಸ್ಸುಳ್ಳ ರಾಜನ ಮಹಿಮೆಯನ್ನು ಮನಗಂಡೆಯಾ? ನೀನು ಅತ್ಯಂತ ಬಲಿಷ್ಠನೂ ಸಾಹಸಿಯೂ ಆಗಿದ್ದರೂ, ನೋಡು, ಎಷ್ಟು ಶಿಕ್ಷೆಯನ್ನು ಅನುಭವಿಸಿದೆ? ಆ ಶಿವಾಶ್ರಯದಿಂದ ಅತ್ಯಂತ ಪ್ರಬಲರಾದ ರಾಜಪುತ್ರರು ನಿಮ್ಮೆಲ್ಲರನ್ನೂ ಪಾಶಗಳಿಂದ ದೃಢವಾಗಿ ಬಂಧಿಸಿ ಆಳವಾದ ಮಡುವಿನಲ್ಲಿ ಮುಳುಗಿಸಿ ಬಿಟ್ಟರಲ್ಲವೇ ? ॥೨೦೦॥

ಆ ರಾಜಪುತ್ರರಿಗೆ ಈ ಎಲ್ಲಾ ಸಾಮರ್ಥ್ಯಗಳು ಲಭಿಸಿರುವುದೂ ಆ ಶಿವಪೂಜೆಯಿಂದಲೇ ಎಂದು ತಿಳಿಯಿರಿ. ಶಿವಪೂಜೆಯಿಂದ ಲಬ್ಧವಾದ ಬಲಕ್ಕೆ ಸದೃಶವಾದ ಯಾವ ಬಲವೂ ಲೋಕದಲ್ಲಿ ಕಾಣುವುದಿಲ್ಲ. ಶಿವಾರ್ಚನೆಯ ಬಲದಿಂದ ಅಖಂಡ

ಅತಃ ಪರಂ ಶಾಂಭವಾನಾಂ ಮಾರ್ಗೇ ಗಂತವ್ಯಮೇವ ನ ।
ತವಾಯಮುಪದೇಶೋಽದ್ಯ ಸ್ಮರ್ತವ್ಯಃ ಖಲು ಸರ್ವದಾ ॥೨೦೨॥

ನ ತೇಷಾಂ ಗಣನೀಯಾಸ್ತೇ ಬ್ರಹ್ಮನಾರಾಯಣಾದಯಃ ।
ತೇ ತಾನ್ ತ್ವಾಂ ಯಮವಸಂ ಕೃತ್ವಾ ಧೀರಾಸ್ತಿಷ್ಠಂತಿ ಶಾಂಕರಾಃ॥೨೦೩॥

ಕಶ್ಶಾಂಭವಸಮೋ ಲೋಕೇ ಭಾಗ್ಯವಾನಮಿತಪ್ರಭಃ ।
ಭವಾರ್ಚನಾದ್ಭವತ್ಯೇವ ಭಾಗ್ಯವಾನ್ ಭವಪೂಜಕಃ ॥೨೦೪॥

ಅದ್ಯ ಪ್ರಭೃತಿ ಕಸ್ಯಾಪಿ ಶಾಂಕರಸ್ಯ ಮಹಾತ್ಮನಃ ।
ತ್ವಯಾ ಪ್ರತಿಭಟತ್ವೇನ ನ ಸ್ಥೇಯಂ ಮೃತ್ಯುನಾಪಿ ವಾ ॥೨೦೫॥

ಮೂರು ಲೋಕಗಳನ್ನೂ ಗೆಲ್ಲಬಹುದು. ಅಂಥ ಬಲಕ್ಕೆ ಪ್ರತಿಸ್ಪರ್ಧಿಯೇ ಇಲ್ಲ. ॥೨೦೧॥

ಆದುದರಿಂದ ಇನ್ನುಮುಂದೆ ಎಂದೂ ಈಶ್ವರ ಭಕ್ತರ ತಂಟೆಗೆ ಹೋಗಬೇಡಿರಿ. ಈಗ ನಿಮಗೆ ಬುದ್ಧಿವಾದವನ್ನು ಹೇಳುತ್ತಿದ್ದೇನೆ. ಇದನ್ನು ಮರೆಯಬೇಡಿರಿ. ಎಲ್ಲಾದರೂ ನೀವು ಮತ್ತೆ ಇಂತಹವರ ಮೇಲೆ ಕೈಮಾಡಿದರೆ ಅಪಾಯಕ್ಕೊಳಗಾಗುವಿರಿ. ಜ್ಞಾಪಕವಿರಲಿ. ॥೨೦೨॥

ಇಂತಹವರಿಗೆ ಮಹಾಮಹಾ ದೇವತೆಗಳಾದ ಬ್ರಹ್ಮ ವಿಷ್ಣು ಮುಂತಾದವರು ಸಹ ಲಕ್ಷ್ಯವಿರುವುದಿಲ್ಲ. ಅವರು ಯಾರಿಗೂ ಸಮನಾಗಲಾರರು. ಈಶ್ವರ ಭಕ್ತರು ಬ್ರಹ್ಮಾದಿ ದೇವತೆಗಳನ್ನೂ ನಿನ್ನನ್ನೂ ಸಹ ಹೊಟ್ಟನ್ನು ಕಿವಿಚುವಂತೆ ಕಿವಿಚಬಲ್ಲವರಾಗಿದ್ದಾರೆ. ಅಂಥಾ ಮಹಾ ಬಲಿಷ್ಠರವರು. ॥೨೦೩॥

ಶಾಂಭವನಿಗೆ ಜೋಡಿಯಾದವನು ಈ ಪ್ರಪಂಚದಲ್ಲಿ ಯಾವನಿರುವನು? ಶೈವನಂತೆ ಭಾಗ್ಯಶಾಲಿಯೂ ಮಹಿಮಾಶಾಲಿಯೂ ಆದವನು ಈ ಲೋಕದಲ್ಲಿರುವುದಿಲ್ಲ. ಏಕೆಂದರೆ ಆ ದೇವದೇವನಾದ ಪರಮೇಶ್ವರನ ಆರಾಧನೆಯಿಂದ ಅವನ ಭಕ್ತರು ಸದಾ ಊರ್ಜಿತರಾಗುತ್ತಿರುವರು. ॥೨೦೪॥

ಆದುದರಿಂದ ಯಮಧರ್ಮನೇ! ಇನ್ನುಮುಂದೆ ನೀವು ಆ ಮಹಾತ್ಮರಾದ ಪರಮೇಶ್ವರ ಭಕ್ತರಿಗೆ ವಿರೋಧವಾಗಿ ನಡೆಯಬೇಡಿರಿ. ಅವರಿಗೆ ನೀವು ಎಂದೂ ಪ್ರತಿಸ್ಪರ್ಧಿಗಳಾಗಬೇಡಿರಿ. ಅವರಿಗೆ ಪ್ರತಿಕೂಲವಾಗುವಂತೆ ನೀವು ಎಂದೂ ಹೋಗಕೂಡದು. ಮೃತ್ಯುವೂ ಹೋಗುವುದು ಬೇಡ. ಇದು ಜ್ಞಾಪಕವಿರಲಿ. ॥೨೦೫॥

ಮಯಾ ತತ್ರ ಸ್ಥಿತಂ ರಾಜಾ ಬೋಧಿತೋಽಪಿ ವಿಶೇಷತಃ ।
ಭವದ್ಬಂಧವಿಮೋಕಾಯ ಮೋಕ್ಷಃ ಸ್ಯಾದನ್ಯಥಾ ಕಥಂ ॥೨೦೬॥

ತೇ ಶಾಂಕರಾಶ್ಚ ಶೂರಾಶ್ಚ ಕುಮಾರಾಸ್ತಸ್ಯ ಭೂಪತೇಃ ।
ತೇಷಾಂ ಪರಾಭವಃ ಕ್ವಾಪಿ ನ ಕದಾಪಿ ಭವಿಷ್ಯತಿ ॥೨೦೭॥

ಹ್ರದೇ ಪ್ರಪಾತಿತಾಸ್ಸರ್ವೇ ಭವಂತಸ್ತತ್ಸುತೈರ್ಯದಾ ।
ತದಾ ಕೈರಪಿ ನ ಜ್ಞಾತಾ ದುರ್ದಶಾ ಭವತಾಂ ಖಲು ॥೨೦೮॥

ಅತಸ್ತನ್ನಗರೇ ತಾವದ್ಭವದ್ಭಿಃ ಕಿಂಕರೈರಪಿ ।
ನ ಗಂತವ್ಯಂ ನ ತದ್ದೇಶೇಽಪ್ಯತೀವ ಪ್ರಬಲಾಃ ಕಿಲ ॥೨೦೯॥

ನೀವೆಲ್ಲರೂ ಆಗ ಪಾಶಬಂಧಿತರಾಗಿ ಮಡುವಿನಲ್ಲಿ ಬಿದ್ದಿರುವಾಗ ನಾನು ಆ ಮಹಾರಾಜನಿಗೆ ನಿಮ್ಮ ಸಂಕಟವನ್ನು ಬಹು ಪರಿಯಾಗಿ ತಿಳಿಯಪಡಿಸಿ ನಿಮ್ಮನ್ನು ಬಿಟ್ಟುಬಿಡಬೇಕೆಂದು ಹೇಳಿದೆ. ಅದೇ ಮೇರೆಗೆ ನಿಮಗೆ ಬಿಡುಗಡೆ ಯಾಯಿತು. ನಾನು ನಿಮ್ಮ ಬಿಡುಗಡೆಗಾಗಿ ಅಷ್ಟೊಂದು ಪ್ರಯತ್ನ ಮಾಡದಿದ್ದಲ್ಲಿ ನಿಮ್ಮ ಬಿಡುಗಡೆಯಾದರೂ ಹೇಗಾಗುತ್ತಿತ್ತು? ನೀವು ಅಲ್ಲಿಯೇ ಬಿದ್ದು ನರಳ ಬೇಕಾಗುತ್ತಿತ್ತು. ॥೨೦೬॥

ಆ ರಾಜನೂ ಆತನ ಪುತ್ರರೂ ಸಹ ಶಿವಭಕ್ತರಾಗಿ ಶಿವಾರಾಧನೆಯನ್ನು ಮಾಡುತ್ತಿರುವುದರಿಂದ ಪರಮಬಲಿಷ್ಠರಾಗಿರುತ್ತಾರೆ. ಮತ್ತು ಮಹಾಮಹಿಮಾಶಾಲಿ ಗಳಾಗಿರುತ್ತಾರೆ. ಅವರಿಗೆ ಪರಾಭವವಾಗಲಿ ಅಪಜಯವಾಗಲಿ ಎಂದೂ ಆಗುವುದಿಲ್ಲ. ಎಲ್ಲೂ ಅವರಿಗೆ ಪ್ರತಿಬಂಧಕವಿರುವುದಿಲ್ಲ. ॥೨೦೭॥

ಆ ರಾಜಪುತ್ರರಿಂದ ಈ ತೆರನಾಗಿ ಘಾಸಿಹೊಂದಿ ನೀವು ಆಳವಾದ ಮಡುವಿ ನಲ್ಲಿ ಬಿದ್ದಾಗಲೂ ನಿಮಗೆ ಯಾರೂ ಸಹಾಯಮಾಡಲಿಲ್ಲ. ನೋಡಿರಿ. ನಿಮ್ಮ ದುಃಸ್ಥಿತಿಯನ್ನು ಯಾರೂ ಲೆಕ್ಕಿಸಲೇ ಇಲ್ಲ. ಯಾರಿಗೂ ಇದು ತಿಳಿದೇ ಇಲ್ಲವೆಂಬ ರೀತಿಯಲ್ಲಿ ಎಲ್ಲರೂ ನಿಮ್ಮನ್ನು ಉದಾಸೀನಮಾಡಿದರು. ಹೀಗೆ ಕಷ್ಟಬಂದಾಗ ಯಾರೂ ಎದುರು ನಿಲ್ಲುವುದಿಲ್ಲ. ತಿಳಿಯಿರಿ. ॥೨೦೮॥

ಆದುದರಿಂದ ನೀವು ಮತ್ತು ನಿಮ್ಮ ದೂತರು ಎಂದೂ ಆ ರಾಜನ ಹತ್ತಿರಕ್ಕೆ ಸುಳಿಯಬೇಡಿರಿ. ಆತನ ಪಟ್ಟಣಕ್ಕಾಗಲಿ ಅಥವಾ ದೇಶಕ್ಕಾಗಲೀ ಎಂದೂ ಹೋಗ ಬೇಡಿರಿ. ಅಲ್ಲಿರುವವರೆಲ್ಲರೂ ಪರಮ ಬಲಿಷ್ಠರಾಗಿರುವರು. ॥೨೦೯॥

ಕಾಲಕಾಲಾರ್ಚನಬಲಾತ್ಪ್ರಬಲಾ ಏವ ಕೇವಲಂ ।
ತೇ ನಮಸ್ಯಾಶ್ಚ ಸತತಂ ತಥಾ ತದ್ದೇಶವಾಸಿನಃ ॥೨೧೦॥

ಸ್ವಪ್ನೇಽಪಿ ತತ್ರ ಸಹಸಾ ನ ಗಂತವ್ಯಂ ಭವಾದೃಶೈಃ ।
ನ ವಿಸ್ಮರ್ತವ್ಯಮೇವೇದಂ ವಚನಂ ಮದುದೀರಿತಂ ॥೨೧೧॥

ಇತ್ಯುಕ್ತ್ವಾ ಸ ಯಮೇನಾಪಿ ಪೂಜಿತೋ ನಂದಿಕೇಶ್ವರಃ ।
ಸತ್ಯಲೋಕಂ ಯಯೌ ತತ್ರ ಬ್ರಹ್ಮಣಾಪಿ ಸಮರ್ಚಿತಃ ॥೨೧೨॥

ಅಪೂರ್ವಂ ರಾಜವೃತ್ತಾಂತಂ ಯತ್ಪೃಷ್ಟಂ ಬ್ರಹ್ಮಣಾ ಮುದಾ ।
ತತ್ಸರ್ವಮುಕ್ತಂ ಸಂತೋಷೈರ್ಬ್ರಹ್ಮಣೇ ನಂದಿನಾ ತದಾ ॥೨೧೩॥

ತದ್ವೃತ್ತಾಂತಂ ಸಮಾಕರ್ಣ್ಯ ಸರ್ವೇ ಬ್ರಹ್ಮಸಭಾಸದಃ ।
ಪುಲಕಾಂಚಿತಸರ್ವಾಂಗಾಸ್ತುಷ್ಟುವುಶ್ಶಿವಮೈಭವಂ ॥೨೧೪॥

ಆ ಮಹಾದೇವನ ಆರಾಧನೆಯಿಂದ ಆ ದೇಶನಿವಾಸಿಗಳೆಲ್ಲರೂ ಮಹಾ ಮಹಿಮಾಶಾಲಿಗಳಾಗಿರುವರು. ಆದುದರಿಂದ ಅವರೆಲ್ಲರಿಗೂ ನೀವು ನಮಸ್ಕರಿಸ ಬೇಕು. ನೀವು ಸದಾ ಅವರನ್ನು ಪೂಜಿಸಬೇಕು. ಸ್ವಪ್ನದಲ್ಲಿಯೂ ಆ ದೇಶಕ್ಕೆ ಹೋಗ ಬೇಕೆಂದು ಯೋಚಿಸಬೇಡಿರಿ. ನನ್ನ ಮಾತು ಜ್ಞಾಪಕದಲ್ಲಿರಲಿ. ॥೨೧೦-೨೧೧॥

ಹೀಗೆಂದು ನಂದಿಕೇಶನು ಹೇಳಲು ಯಮನು ಅವನ ಮಾತನ್ನು ಸಾವಧಾನ ದಿಂದ ಕೇಳಿ, ಅನಂತರ ನಾನಾವಿಧವಾಗಿ ಆತನನ್ನು ಸತ್ಕರಿಸಿ ಬೀಳ್ಕೊಟ್ಟನು. ಬಳಿಕ ನಂದಿಕೇಶನು ಸತ್ಯಲೋಕಕ್ಕೆ ಹೋದನು. ಅಲ್ಲಿಯೂ ಬ್ರಹ್ಮನು ನಂದೀಶ್ವರನನ್ನು ಬಹುವಾಗಿ ಉಪಚರಿಸಿದನು. ॥೨೧೨॥

ಬಳಿಕ ಬ್ರಹ್ಮನು ಪ್ರಾಸಂಗಿಕವಾಗಿ ಪ್ರಶ್ನೆಮಾಡಲು, ನಂದಿಕೇಶನು ರಾಜನ ಈ ಅಪೂರ್ವವಾದ ಮತ್ತು ಅದ್ಭುತವಾದ ಸಕಲ ವೃತ್ತಾಂತವನ್ನು ವಿಸ್ತಾರವಾಗಿ ಹೇಳಿದನು. ॥೨೧೩॥

ಬ್ರಹ್ಮನ ಸಭೆಯಲ್ಲಿದ್ದವರೆಲ್ಲರೂ ಮಹಾರಥನ ಅತ್ಯಾಶ್ಚರ್ಯಕರವಾದ ವೃತ್ತಾಂತವನ್ನು ಕೇಳಿ ವಿಸ್ಮಯದಿಂದ ರೋಮಾಂಚಿತರಾದರು. ಅವರೆಲ್ಲರೂ ಆಗ ಏಕಕಂಠದಿಂದ ಶಿವಮಹಿಮೆಯನ್ನು ಕೊಂಡಾಡಿ ಸ್ತೋತ್ರಮಾಡಿದರು. ॥೨೧೪॥

ತತಃ ಪರಂ ಸ ವೈಕುಂಠಂ ಯಯೌ ವಿಧಿಸಮನ್ವಿತಃ ।
ಅರ್ಚಿತಸ್ತತ್ರ ನಂದೀಶಸ್ತೇನ ನಾರಾಯಣೇನ ಸಃ ॥೨೧೫॥

ತತ್ರಾಪಿ ತೇನ ವೃತ್ತಾಂತಂ ಶ್ರುತಂ ತಸ್ಯೈವ ಭೂಪತೇಃ ।
ತೇನ ಸ್ತುತೋಽಪಿ ವಿನತೋ ಯಯೌ ಕೈಲಾಸಮಂದಿರಂ ॥೨೧೬॥

ತತ್ರ ಗತ್ವಾ ಪ್ರಣಮ್ಯಾಶು ಮಹಾದೇವಂ ಕೃತಾಂಜಲಿಃ ।
ಸರ್ವಂ ನಿವೇದಯಾಮಾಸ ಸರ್ವಜ್ಞಾಧೀಶ್ವರಾಯ ಸಃ ॥೨೧೭॥

ಗಣಾಶ್ಚ ತಸ್ಯ ವೃತ್ತಾಂತಂ ಶ್ರುತ್ವಾ ಹೃಷ್ಟಾಃ ಪರಸ್ಪರಂ ।
ತದ್ವಾರ್ತಯಾ ಪರಂ ನೀತ್ವಾ ಸಮಯಂ ತೇ ಸ್ಥಿತಾಃ ಪರಂ ॥೨೧೮॥

ಶಂಕರೋಽಪ್ಯಂಬಿಕಾಂ ದೃಷ್ಟ್ವಾ ಸ್ವಾಂಕಪಂಕೇರುಹಸ್ಥಿತಾಂ ।
ಶೃಣು ಪ್ರಭಾವಮಿತ್ಯಾಹ ಭಾವಾನಾಂ ಭಾಗ್ಯಮೀದೃಶಂ ॥೨೧೯॥

ಅಲ್ಲಿಂದ ನಂದಿಕೇಶನು ವೈಕುಂಠಕ್ಕೆ ಹೊರಡಲು ಜೊತೆಯಲ್ಲಿ ಬ್ರಹ್ಮನೂ ಬಂದಿದ್ದನು. ವೈಕುಂಠದಲ್ಲಿ ವಿಷ್ಣುವು ನಂದಿಯನ್ನು ಕಂಡೊಡನೆಯೇ ಆತನಿಗೆ ನಾನಾವಿಧವಾಗಿ ಸತ್ಕರಿಸಿದನು. ಹಾಗೆಯೇ ಪ್ರಾಸಂಗಿಕವಾಗಿ ಸಂಭಾಷಣೆಯನ್ನು ಮಾಡುತ್ತಿರಲು, ನಂದಿಯು ಮಹಾರಥನ ಈ ಅದ್ಭುತವಾದ ಕಥೆಯನ್ನು ಹೇಳಿದನು. ಅದನ್ನು ಕೇಳಿ ವಿಷ್ಣುವೂ ಸಹ ಅತ್ಯಾಶ್ಚರ್ಯಪಟ್ಟು ಶಿವಮಹಿಮೆಯನ್ನು ಕೊಂಡಾಡಿದನು. ಹಾಗೆ ವಿಷ್ಣುವಿನಿಂದ ಉಪಚರಿತನಾಗಿ ನಂದಿಕೇಶನು ಬೀಳ್ಕೊಂಡು ಕೈಲಾಸಕ್ಕೆ ತೆರಳಿದನು. ॥೨೧೬॥

ಆತನು ಕೂಡಲೇ ಶಿವನ ಸನ್ನಿಧಾನಕ್ಕೆ ಹೋಗಿ ಸಾಷ್ಟಾಂಗನಮಸ್ಕಾರ ಮಾಡಿ ಕೈಮುಗಿದು ಸರ್ವಜ್ಞನಾದ ಶಂಕರನಿಗೆ ಮಹಾರಥರಾಜನ ಎಲ್ಲಾ ವೃತ್ತಾಂತಗಳನ್ನೂ ಶ್ರುತಪಡಿಸಿದನು. ॥೨೧೭॥

ಅನಂತರ ಶಿವಗಣದವರೆಲ್ಲರೂ ಈ ಅದ್ಭುತ ಚಾರಿತ್ರವನ್ನು ಕೇಳಿ ಪರಮಾನಂದಭರಿತರಾದರು. ಎಷ್ಟೋ ಕಾಲದವರೆಗೆ ಅವರು ಕೇವಲ ಇದೇ ಕಥೆಯ ಸಲ್ಲಾಪದಿಂದ ಕಾಲಕಳೆಯುತ್ತಾ ಸಂತೋಷವನ್ನನುಭವಿಸುತ್ತಿದ್ದರು. ॥೨೧೮॥

ಪರಮೇಶ್ವರನೂ ಸಹ ತನ್ನ ಕಮಲಸದೃಶವಾದ ಎಡತೊಡೆಯ ಮೇಲೆ ಸುಖಾಸೀನಳಾದ ಪಾರ್ವತಿಯನ್ನು ಕುರಿತು ಪ್ರೀತಿಯಿಂದ ಈ ಎಲ್ಲಾ

ರೇವಾತೀರವನೇ ವಸಾಮಿ ಸತತಂ ತಲ್ಲಿಂಗಪೂಜಾಂ ಮುಹುಃ
ದೃಷ್ಟ್ವಾ ಭೂಪಮಹಾಪ್ರಭಾವವಿಭವಪ್ರಖ್ಯಾಪನಾರ್ಥಂ ಪರಂ ।
ನಂದೀಪ್ರೇರಿತ ಇತ್ಯನೇನ ನ ಯತೋ ಭೀತಿರ್ಮಹಾಮೃತ್ಯುತೋ
ಮದ್ಭಕ್ತಸ್ಯ ವರಾನನೇ ಸ ಕುಶಲೀ ಶೈವಶ್ಚಿರಂ ಜೀವತು ॥೨೨೦॥

ಇತ್ಯಾಶೀರ್ವಚನೈರ್ಮಹೇಶ್ವರಕೃತೈರ್ಹರ್ಾರಾಃ ಪರಂ ಸಾದರಾಃ
ತಲ್ಲಿಂಗಾರ್ಚನಸಾಧನೇಷು ವಿವಿಧೇಷ್ವಾಹಾರವಾತ್ರಾದರಾಃ ।

ಕಥೆಯನ್ನೂ ಹೇಳಿ ಹೀಗೆಂದನು. ಪಾರ್ವತಿಯೇ ನೋಡು, ನನ್ನ ಭಕ್ತರ ಮಹಿಮೆಯು ಎಷ್ಟು ಅಪಾರವಾದದ್ದು! ಪರಮಾಶ್ಚರ್ಯಕರವಾದ ನನ್ನ ಭಕ್ತಿಮಹಿಮೆಯು ಸಾಮರ್ಥ್ಯದರ್ಶಕವಾದ ಕಥೆಯನ್ನು ಕೇಳಿದೆಯಾ? ನನ್ನ ಭಕ್ತರು ಲೋಕೋತ್ತರರೆಂದು ತಿಳಿ. ||೨೧೯||

ಪ್ರಿಯೆ ಗಿರಿಜೇ, ಆ ಭಕ್ತಪ್ರವರನಾದ ರಾಜನು ನನಗೆ ಬಹು ಇಷ್ಟನಾಗಿರುವನು. ನನ್ನ ಗಮನವು ಸದಾ ಅವನ ಕಡೆಗೇ ಇರುತ್ತದೆ. ನಾನು ಸದಾ ಆ ರೇವಾತೀರದಲ್ಲಿಯೇ ವಾಸಮಾಡುವೆನು. ರಾಜನು ಪೂಜಿಸುತ್ತಿರುವ ಶಿವಲಿಂಗದಲ್ಲಿಯೇ ಸತತವೂ ಅಧ್ಯಾಸೀನನಾಗಿ ಆತನು ಅರ್ಪಿಸುವ ಪೂಜೆಯನ್ನು ಪ್ರೀತಿಯಿಂದ ಸ್ವೀಕರಿಸುವೆನು. ಆತನ ಶ್ರದ್ಧಾಭಕ್ತಿಗಳನ್ನು ನೋಡಿ ಪರಮಾನಂದವನ್ನು ಪಡೆಯುವೆನು. ಈಗ ನಾನೇ ಆ ರಾಜನ ಮಹಿಮೆಯನ್ನು ಪ್ರಕಟಿಸಿ ತೋರಿಸುವುದಕ್ಕಾಗಿ ಹೀಗೆ ನಂದಿಕೇಶನನ್ನು ಆತನ ಬಳಿಗೆ ಕಳುಹಿಸಿದ್ದೆನು. ಅಂಥಾ ನನ್ನ ಪರಮಭಕ್ತನಿಗೆ ಮೃತ್ಯುವಿಂದ ಭಯವುಂಟಾಗುವುದೆಂದರೇನು? ಅಥವಾ ಆಪಾಯವೊದಗುವುದು ಹೇಗೆ? ನನ್ನ ಭಕ್ತನು ಸದಾ ಅಪ್ರತಿಹತನು. ಆತನಿಗೆ ಎಂದೂ ಪರಾಭವವುಂಟಾಗಲಾರದು. ಅಲ್ಲದೇ ಆ ರಾಜನು ಇನ್ನೂ ಅನೇಕ ಕಾಲ ಹೀಗೆಯೇ ಧರ್ಮಪರಾಯಣನಾಗಿ ಚಿರಕಾಲ ಬದುಕಿಕೊಂಡಿರಲಿ ಎಂದು ನಾವು ಹಾರೈಸೋಣ. ||೨೨೦||

ಹೀಗೆಯೇ ಪರಶಿವಭಕ್ತರಾದವರು ಪರಮೇಶ್ವರನ ಪ್ರೀತಿಗೆ ಪಾತ್ರರಾಗಿ ಮಹಾಮೃತ್ಯುವನ್ನೂ ಜಯಿಸುತ್ತಾರೆ. ಸಾಕ್ಷಾತ್ ಪರಮೇಶ್ವರನ ಆಶೀರ್ವಾದವನ್ನು ಪಡೆದು ಸದಾ ಆನಂದಸಂತೃಪ್ತರಾಗಿರುತ್ತಾರೆ. ಅವರು ಸತತವೂ ಶಿವಾರಾಧನೆಯ ಸಾಮಗ್ರಿಗಳ ಶೇಖರಣೆಯಲ್ಲಿಯೂ ಶಿವಲಿಂಗಾರ್ಚನೆಯಲ್ಲಿಯೂ ಶ್ರದ್ಧಾವಂ

ರೇವಾತೀರಮುಪಾಶ್ರಿತಾಶ್ಶಿವಪರಾ ಧ್ಯಾನೇನ ನೀತ್ವಾ ದಿನಂ
ತಿಷ್ಠಂತ್ಯೇವ ಸುಖೇನ ಶಾಂಕರವರೈಸ್ಸಾಕಂ ಮಹಾಶಾಂಕರಾಃ ॥೨೨೧॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಉತ್ತರಭಾಗೇ
ಪುಣ್ಯಮೂರ್ತಿ ರತ್ನಾಕರಸಂವಾದೇ ಮಹಾರಥನಾಮಕ
ರಾಜಚಾರಿತ್ರವರ್ಣನಂ ನಾಮಾಷ್ಟಚತ್ವಾರಿಂಶೋಽಧ್ಯಾಯಃ

ತರಾಗಿ ಧರ್ಮಪರಾಯಣರಾಗಿರುತ್ತಾರೆ. ರೇವಾತೀರದ ಪುಣ್ಯಕ್ಷೇತ್ರದಲ್ಲಿ ಶಿವಭಕ್ತರಾದವರೊಡನೆ ವಾಸಮಾಡಿಕೊಂಡಿದ್ದು ಸರ್ವದಾ ಶಿವನನ್ನೇ ಧ್ಯಾನಮಾಡಿಕೊಂಡಿರುವರು. ಅಂಥ ಮಹಾಭಕ್ತರು, ಪರಮಶಿವಭಕ್ತರು ಅಕ್ಷಯವಾದ ಸುಖವನ್ನೇ ಪಡೆಯುವರು ಎಂದು ಶಂಕರನು ಪಾರ್ವತಿಗೆ ಹೇಳಿದ ಅಂಶವನ್ನು ರತ್ನಾಕರನು ಪುಣ್ಯಮೂರ್ತಿಗಳಿಗೆ ವಿವರಿಸಿದನು. ॥೨೨೧॥

ಇಲ್ಲಿಗೆ ಶ್ರೀಶಿವರಹಸ್ಯದ ತೃತೀಯಾಂಶದ ಉತ್ತರಾರ್ಧದಲ್ಲಿ
ನಲವತ್ತೆಂಟನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

|| ಓಂ ನಮಶ್ಶಿವಾಯ ||

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ಏಕೋನಪಂಚಾಶೋಽಧ್ಯಾಯಃ

|| ರಾಜಕನ್ಯೋವಾಚ ||

ಇತಿ ರತ್ನಾಕರೇಣೋಕ್ತಾಂ ಕಥಾಂ ಪಾಪಪ್ರಣಾಶಿನೀಂ ।
ಶಿವನಾಮಾಂಕಿತಾಂ ಶ್ರುತ್ವಾ ಪ್ರಹೃಷ್ಟಾಃ ಪುಣ್ಯವಿಗ್ರಹಾಃ ॥೧॥

ಶಾಂಕರಾನ್ ಸ ಸಮುದ್ರೋಽಪಿ ಪುಣ್ಯರೂಪಾನ್ ಶಿವಾರ್ಚನೇ ।
ಸಮುದ್ಯುಕ್ತಾನ್ ವಿಲೋಕ್ಯಾಹ ಧನ್ಯೋಽಸ್ಮೀತಿ ಮುಹುರ್ಮುಹುಃ ॥೨॥

ನಲವತ್ತೊಂಬತ್ತನೆಯ ಅಧ್ಯಾಯ

ಈ ಪ್ರಕಾರವಾಗಿ ಸಮುದ್ರನು (ರತ್ನಾಕರನು) ವಿಸ್ತಾರವಾಗಿ ಶಿವಕಥೆಯನ್ನು ಹೇಳುತ್ತಿರಲು ಆ ಪಾಪನಾಶಕವಾದ ಕಥೆಯನ್ನು ಕೇಳಿ ಆ ಪುಣ್ಯಮೂರ್ತಿಗಳು ಪರಮಾನಂದಭರಿತರಾದರು. ಮಧ್ಯೆ ಮಧ್ಯೆ ಪರಮೇಶ್ವರನ ಪುಣ್ಯನಾಮಗಳನ್ನು ಕೇಳಿ ಅವರಿಗೆ ಅತ್ಯಂತ ಸಂತೋಷವಾಗುತ್ತಿದ್ದಿತು. ಎಂದು ರಾಜಕನ್ಯೆಯು ಕಿನ್ನರನಿಗೆ ಹೇಳುತ್ತಾ ಪುಣ್ಯಮೂರ್ತಿಗಳ ಕಥೆಯನ್ನು ಮುಂದುವರಿಸಿದಳು. ||೧||

ಅನಂತರ ಆ ಪುಣ್ಯಮೂರ್ತಿಗಳು ಆಗ ಶಿವಪೂಜೆಯನ್ನು ಮಾಡಲು ಉದ್ಯುಕ್ತರಾಗುತ್ತಿರಲು ಪುಣ್ಯಾತ್ಮರಾದ ಅವರನ್ನು ನೋಡಿ, ರತ್ನಾಕರನು ಅತ್ಯಂತ ಸಂತುಷ್ಟನಾಗಿ ಇಂಥವರನ್ನು ನೋಡಿದ್ದರಿಂದ ತಾನೇ ಧನ್ಯನೆಂದುಕೊಂಡನು. ||೨||

ತೇ ಕೃತ್ವಾ ಬಿಲ್ವಪತ್ರಾದ್ಯೈರ್ಹಾಟಕೇಶ್ವರಪೂಜನಂ ।
ಸ್ವಸ್ಥಾನಂ ಗಂತುಮುದ್ಯುಕ್ತಾಸ್ತಮಾಹುಃ ಪುನರಾದರಾತ್ ॥೩॥

ಅಸ್ಮದಾಗಮನಸ್ಯಾತ್ರ ಕೃತ್ಯಮಾಸೀನ್ಮಹತ್ತರಂ ।
ಯತಶ್ಶಿವಕಥಾರೂಪಸುಧಾಪಾನಂ ಕೃತಂ ಮುಹುಃ ॥೪॥

ಧನ್ಯಾಃ ಸ್ಮಃ ಕೃತಕೃತ್ಯಾಃ ಸ್ಮಶ್ಶಿವಭಕ್ತಾವಲೋಕನಾತ್ ।
ಶಂಕರಾನುಗ್ರಹಾಜ್ಜಾತಮದ್ಯ ಶಾಂಕರದರ್ಶನಂ ॥೫॥

ಇತಿ ತದ್ವಚನಂ ಶ್ರುತ್ವಾ ಸಾಗರೋ ನಿಜಮಂದಿರಂ ।
ತೈಸ್ಸಹೈವ ಯಯೌ ಪ್ರೀತ್ಯಾ ಶಾಂಭವಾಗ್ರೇಸರಪ್ರಿಯಃ ॥೬॥

ಸಮುದ್ರಮಧ್ಯೇ ನಗರಂ ಮನೋಹರಂ
ರತ್ನಪ್ರಭಾಮಂಡಲಮಂಡಿತಾನಿ ।

ಆ ಪುಣ್ಯಶರೀರಿಗಳು ಅನೇಕ ಬಿಲ್ವಾದಿ ಸಾಮಗ್ರಿಗಳಿಂದ ಹಾಟಕೇಶ್ವರನ ಪೂಜೆಯನ್ನು ವೈಭವಪೂರ್ವಕವಾಗಿ ನೆರವೇರಿಸಿದ ಬಳಿಕ ತಮ್ಮ ತಮ್ಮ ಸ್ಥಳಗಳಿಗೆ ಹೊರಡಲನುವಾಗಿ ಪುನಃ ರತ್ನಾಕರನನ್ನು ಕುರಿತು ಹೀಗೆ ನುಡಿದರು. ||೩||

ಎಲೈ ಸಮುದ್ರನೇ ! ನಾವು ಇಲ್ಲಿಗೆ ಬಂದುದು ಸಾರ್ಥಕವೇ ಆಯಿತು. ನಮಗೆ ಬಹಳ ಲಾಭವು ದೊರೆದಂತಾಯಿತು. ಅಮೃತಸದೃಶವಾದ ಶಿವಕಥೆಯನ್ನು ನಾವು ಕೇಳಿದ್ದರಿಂದ ಮಹತ್ತರವಾದ ಕಾರ್ಯವನ್ನು ಸಾಧಿಸಿದಂತಾಯಿತು. ||೪||

ಇಂಥ ಶಿವಭಕ್ತಾಗ್ರಣಿಯಾದ ನಿನ್ನನ್ನು ನೋಡಿದ್ದರಿಂದ ನಾವೇ ಧನ್ಯರು. ಇಂದು ನಾವು ಕೃತಕೃತ್ಯರಾದೆವು. ಆ ಪರಮೇಶ್ವರನ ಅನುಗ್ರಹದಿಂದಲೇ ಪರಮ ಶಿವಭಕ್ತನಾದ ನಿನ್ನ ದರ್ಶನವು ಇಂದು ನಮಗೆ ಲಭಿಸಿತು. ||೫||

ಹಾಗೆಂದು ಪುಣ್ಯಮೂರ್ತಿಗಳು ನುಡಿಯುತ್ತಿರಲು ಸಮುದ್ರನು ಕೇಳಿ ಸಂತೋಷದಿಂದ ನೀವೂ ನನ್ನ ಮನೆಗೆ ಬರಬೇಕೆಂದು ಹೇಳಿ ಅವರನ್ನೂ ಕರೆದು ಕೊಂಡು ತನ್ನ ಮನೆಗೆ ಹೋದನು. ||೬||

ಸಮುದ್ರಮಧ್ಯದಲ್ಲಿ ಆತನ ವಿಶಾಲವಾದ ಪಟ್ಟಣವಿದ್ದಿತು. ಅಲ್ಲಿ ರತ್ನಮಯ ವಾದ ಉಪ್ಪರಿಗೆ ಮನೆಗಳಿದ್ದವಲ್ಲದೇ ಅನೇಕ ರತ್ನಶಿವಮಂದಿರಗಳೂ ಇದ್ದುವು.

ಉತ್ತುಂಗಲಿಂಗಾಮಿತಮಂದಿರಾಣಿ
ಸ ದರ್ಶಯಾಮಾಸ ಮನೋಹರಾಣಿ ॥೭॥

ಅಪಾರರತ್ನಚೀರ್ಣಾನಿ ಗೋಪುರಾಣ್ಯಪಿ ಕೋಟಿಶಃ ।
ತೇಭ್ಯಃ ಪ್ರದರ್ಶಯಾಮಾಸ ಸಾಗರಶ್ಶಾಂಕರಪ್ರಿಯಃ ॥೮॥

ತತಃ ಸ್ವಭವನಂ ರಮ್ಯಂ ಲಿಂಗಕೋಟಿವಿರಾಜಿತಂ ।
ಅಪಾರಭೂಷಣೋಪೇತಂ ದರ್ಶಯಾಮಾಸ ಭಕ್ತಿತಃ ॥೯॥

ತತಸ್ತೇ ತಾನಿ ಲಿಂಗಾನಿ ದೃಷ್ಟ್ವಾ ರತ್ನಮಯಾನ್ಯಪಿ ।
ಅಲಂಕೃತಾನಿ ಪುಷ್ಪಾದ್ಯೈರ್ದದೃಶುಃ ಪ್ರಿಯಮಾನಸಾಃ ॥೧೦॥

ದೃಷ್ಟ್ವಾ ಪ್ರಣಮ್ಯ ಭಕ್ತ್ಯಾ ತಂ ತದ್ದತ್ತಮಣಿಕೋಟಿಭಿಃ ।
ಪೂಜಯಾಮಾಸುರೀಶಾನಂ ಪ್ರಸೂನಾದ್ಯೈಶ್ಚ ಕೋಟಿಭಿಃ ॥೧೧॥

ಆ ಶಿವಾಲಯಗಳಲ್ಲಿ ಅಪರಿಮಿತವಾಗಿ ಸ್ಥೂಲಗಳಾದ ಶಿವಲಿಂಗಗಳಿದ್ದವು. ಅವೆಲ್ಲವುಗಳನ್ನೂ ಸಮುದ್ರನು ಆ ಪುಣ್ಯಮೂರ್ತಿಗಳಿಗೆ ತೋರಿಸಿದನು. ॥೭॥

ಶಾಂಭವಮಿತ್ರನಾದ ಸಮುದ್ರನು ಆ ಪುಣ್ಯಮೂರ್ತಿಗಳನ್ನು ತನ್ನ ಪಟ್ಟಣದ ಎಲ್ಲಾ ಕಡೆಗೂ ಕರೆದುಕೊಂಡು ಹೋಗಿ ಅಲ್ಲಿದ್ದ ವಿಶೇಷ ಸೌಂದರ್ಯವನ್ನೂ ಅನೇಕ ರತ್ನಮಯವಾದ ಅರಮನೆಗಳನ್ನೂ ಮತ್ತು ಗೋಪುರಗಳನ್ನೂ ತೋರಿಸಿದನು. ॥೮॥

ಅನಂತರ ಅವರನ್ನು ತನ್ನ ಅರಮನೆಗೆ ಕರೆದುಕೊಂಡು ಹೋದನು. ಆ ಅರಮನೆಯು ಬಹಳ ಮನೋಹರವಾಗಿದ್ದಿತು. ಅಲ್ಲಿ ಅನೇಕ ಶಿವಲಿಂಗಗಳು ಸ್ಥಾಪಿತವಾಗಿದ್ದವು. ಅಲ್ಲದೇ ಅಪಾರವಾದ ಸಂಪತ್ತಿನಿಂದಲೂ ಸಾಧನಸಾಮಗ್ರಿಗಳಿಂದಲೂ ತುಂಬಿದ್ದಿತು. ರತ್ನಾಕರನು ಅವುಗಳೆಲ್ಲವನ್ನೂ ಅವರಿಗೆ ತೋರಿಸಿದನು. ॥೯॥

ಅಲ್ಲಿದ್ದ ಶಿವಲಿಂಗಗಳು ಸ್ಥೂಲಗಳಾಗಿದ್ದವಲ್ಲದೇ ರತ್ನಮಯಗಳಾಗಿದ್ದವು. ಅವುಗಳೆಲ್ಲಾ ನಾನಾವಿಧವಾದ ಪುಷ್ಪಗಳಿಂದ ಅಲಂಕೃತವಾಗಿದ್ದುವು. ಅಂತಹ ಪವಿತ್ರ ವಸ್ತುಗಳನ್ನು ನೋಡಿ ಪುಣ್ಯಮೂರ್ತಿಗಳಿಗೆ ಪರಮಾನಂದವಾಯಿತು.॥೧೦॥

ಅವರು ಶಿವಲಿಂಗಗಳನ್ನು ಸಂದರ್ಶಿಸಿದ ಕೂಡಲೇ ಭಕ್ತಿಯಿಂದ ಅವುಗಳಿಗೆ ನಮಸ್ಕರಿಸುತ್ತಿದ್ದರು. ಅನಂತರ ಸಮುದ್ರನು ಸಿದ್ಧಪಡಿಸಿಕೊಟ್ಟ ಮಣಿಗಳೇ

ಪೂಜಾಂತೇ ಶಂಕರಂ ಸ್ಮೃತ್ವಾ ನತ್ವಾ ತೇಽಪಿ ಮುಹುರ್ಮುಹುಃ ।
ರತ್ನಾಸನೇಷೂಪವಿಷ್ಟಾಃ ಪ್ರಹೃಷ್ಟಾಶ್ಶಿವಪೂಜಕಾಃ ॥೧೨॥

ತದಾನೀಂ ಸಾಗರಸ್ಯಾಪಿ ದಾರಾಸ್ತಾವನ್ಮನೋಹರಾಃ ।
ಅಪಾರಾಶ್ಶಂಕರಂ ದ್ರಷ್ಟುಮಾಗತಾಸ್ತುಷ್ಟುವುಶ್ಚ ತಂ ॥೧೩॥

ಪಶ್ಚಾನ್ಮನೋಹರೈರ್ಹಾರೈರಪಾರೈಶ್ಶಂಕರಾರ್ಚನಂ ।
ಕೃತ್ವಾ ನಾಟ್ಯೋದ್ಯತಾಸ್ಸರ್ವೇ ತನ್ಮಹೇಶಾಂಗಣೇ ಮುದಾ ॥೧೪॥

ಶಿವಂ ನಾಟ್ಯವಿಶೇಷೈಸ್ತೇ ತೋಷಯಿತ್ವಾ ಪ್ರಯತ್ನತಃ ।
ನೀರಾಜನಾನಿ ದತ್ವಾಪಿ ಯಯುರಂತಃಪುರಾಂತರಂ ॥೧೫॥

ಸೌಂದರ್ಯವಾಹಿನೀರೂಪಾನಪಾರಾಭರಣಾನ್ವಿತಾನ್ ।
ತ್ರಿಪುಂಡ್ರರುದ್ರಾಕ್ಷಧರಾನ್ ದಾರಾನ್ ದದೃಶುರಾದರಾತ್ ॥೧೬॥

ಮುಂತಾದ ಪೂಜಾಸಾಮಗ್ರಿಗಳಿಂದಲೂ ನಾನಾಬಗೆಯ ಪುಷ್ಪಗಳಿಂದಲೂ ಆ ಶಿವಲಿಂಗಗಳಿಗೆ ಯಥೇಚ್ಛವಾಗಿ ಪೂಜೆಯನ್ನು ನಡೆಯಿಸುತ್ತಿದ್ದರು. ||೧೧||

ಸಾಂಗವಾಗಿ ಶಿವಪೂಜೆಯು ನೆರವೇರಿದ ಬಳಿಕ ಆ ಮೂರ್ತಿಗಳೆಲ್ಲಾ ಈಶ್ವರನನ್ನು ಪ್ರದಕ್ಷಿಣ ನಮಸ್ಕಾರಗಳಿಂದ ವಂದಿಸಿ ರತ್ನಾಸನಗಳಲ್ಲಿ ಕುಳಿತು ಕೊಂಡು ಧ್ಯಾನಿಸುತ್ತಿದ್ದರು. ||೧೨||

ಆ ಪೂಜೆಯ ಸಮಯದಲ್ಲಿ ಸಮುದ್ರರಾಜನ ಪತ್ನಿಯರೂ ಸಹ ಶಿವದರ್ಶನ ಮಾಡಲು ಬಂದಿದ್ದರು. ಆ ಸುಂದರ ಸ್ತ್ರೀಯರೂ ಸಹ ಪರಮೇಶ್ವರನನ್ನು ಭಕ್ತಿಯಿಂದ ನಮಸ್ಕರಿಸಿ ಸ್ತುತಿಸಿದರು. ||೧೩||

ಅನಂತರ ಆ ಸ್ತ್ರೀಯರು ದಿವ್ಯವಾದ ಪುಷ್ಪಹಾರಗಳಿಂದ ಶಿವನನ್ನು ಪೂಜಿಸಿ ಆ ಶಿವಲಿಂಗದ ಎದುರಿನಲ್ಲಿ ಭಕ್ತಿಯಿಂದ ನಾಟ್ಯವಾಡಿದರು. ||೧೪||

ಅಲ್ಲಿ ಅನೇಕ ವಿಧವಾದ ನಾಟ್ಯಗಳನ್ನು ಮಾಡಿ ಭಕ್ತಿಯಿಂದ ಶಿವನ ಸೇವೆಯನ್ನು ನಡೆಸಿದರು. ಅನಂತರ ಶಿವನಿಗೆ ಆರತಿಯನ್ನು ಬೆಳಗಿ ಬಳಿಕ ಅವರೆಲ್ಲರೂ ತಮ್ಮ ಅಂತಃಪುರಕ್ಕೆ ಹೋದರು. ||೧೫||

ಆ ಸ್ತ್ರೀಯರು ಅಮಿತ ಸೌಂದರ್ಯಶಾಲಿನಿಯರಾಗಿದ್ದರು. ಅವರು ಅನೇಕ ಆಭರಣಗಳನ್ನು ಧರಿಸಿದ್ದರಲ್ಲದೇ ಭಸ್ಮತ್ರಿಪುಂಡ್ರವನ್ನೂ ರುದ್ರಾಕ್ಷಮಾಲೆಗಳನ್ನೂ

ತತಃ ಪರಂ ತಮೂಚುಸ್ತೇ ಸಾಗರಂ ಶಾಂಕರೋತ್ತಮಾಃ ।
ಅತಿವಿಸ್ಮಯಮಾಪನ್ನಾಃ ಕೃತಾಂಜಲಿಪುಟಂ ಮುದಾ ॥೧೭॥

ಹಾರದಾರಾಸ್ತವೋದಾರಾಸ್ಸಹಾರಾಶ್ಶಂಕರಾದರಾಃ ।
ಕಸ್ಮಿನ್ ಕಾಲೇ ಸಮುತ್ಪನ್ನಾ ಕಿಂ ವಃ ಪುಣ್ಯಂ ಪುರಾತನಂ ॥೧೮॥

ಸೌಂದರ್ಯಧಾರಾರೂಪಾಸ್ತೇ ಯೌವನೋನ್ಮಾದಮಂಥರಾಃ ।
ಪರಮೈಶ್ವರ್ಯಸಂಪನ್ನಾಃ ಕೇನ ಪುಣ್ಯೇನ ತದ್ವದ ॥೧೯॥

ಧರಿಸಿದ್ದರು. ಶಿವಭಕ್ತರಿಗೆ ಆ ಸ್ತ್ರೀಯ ಶಿವಧರ್ಮಪರಾಯಣತೆಯನ್ನು ನೋಡಿ ಪರಮಾನಂದವುಂಟಾಯಿತು. ||೧೬||

ಶಿವಭಕ್ತರಿಗೆ ಆ ಸಮುದ್ರನ ಮನೆಯಲ್ಲಿನ ಶಿವಧರ್ಮಪರಾಯಣತೆಯನ್ನು ಕಂಡು ಅತ್ಯಾಶ್ಚರ್ಯವುಂಟಾಗುತ್ತಿದ್ದಿತು. ಅವರು ಭಕ್ತಿವಿನತನಾದ ಸಮುದ್ರನನ್ನು ಕುರಿತು ಆದರಪೂರ್ವಕವಾಗಿ ಹೀಗೆ ನುಡಿದರು. ||೧೭||

"ಎಲೈ ಸಮುದ್ರರಾಜನೇ, ನಿನ್ನ ಮನೆಯ ಎಲ್ಲಾ ವಿದ್ಯಮಾನಗಳೂ ಬಹಳ ಪ್ರಶಸ್ತಗಳಾಗಿವೆ. ನಿನ್ನ ಪತ್ನಿಯರ ಶಿವತತ್ಪರತೆಯು ನಮಗೆ ವಿಶೇಷವಾಗಿ ಸಂತೋಷವನ್ನುಂಟುಮಾಡುತ್ತಿದೆ. ಅವರು ಹಾರಾದ್ಯಾಭರಣಗಳಿಂದ ಉಜ್ವಲವಾಗಿ ಅಲಂಕಾರಮಾಡಿಕೊಂಡಿದ್ದರೂ ಕೇವಲ ವಿಲಾಸಿಗಳಾಗಿಲ್ಲ. ಇಂಥ ಪುಣ್ಯಶಾಲಿನಿಯರು ಎಲ್ಲಿ ಜನಿಸಿದರು? ಹೀಗೆ ಪರಸ್ಪರ ಸಹವಾಸ ಸಮಾಗಮವು ಉಂಟಾಗಲು ನೀವು ಪೂರ್ವದಲ್ಲಿ ಎಂತಹ ಪುಣ್ಯಗಳನ್ನು ಸಂಪಾದಿಸಿದ್ದೆ? ||೧೮||

ನಿನ್ನ ಸ್ತ್ರೀಯರೆಲ್ಲರೂ ಪರಮ ಸೌಂದರ್ಯಶಾಲಿನಿಯರಾಗಿರುವರು. ಅವರು ಸಾರ್ವಕಾಲಿಕವಾದ ನವತಾರುಣ್ಯವನ್ನು ಪಡೆದು ಅತ್ಯಂತ ಉಜ್ವಲರಾಗಿ ತೋರುತ್ತಿದ್ದಾರೆ. ಅಲ್ಲದೇ ಅವರಲ್ಲಿ ಪರಮೈಶ್ವರ್ಯಸೂಚಕಗಳಾದ ಅನೇಕ ಸುಲಕ್ಷಣಗಳು ತುಂಬಿರುತ್ತವೆ. ಇವುಗಳೆಲ್ಲವೂ ಕೇವಲ ಪುಣ್ಯಾತ್ಮರಿಗೆ ತಾನೆ ಲಭ್ಯವಾದೀತು! ನಿನ್ನ ಸ್ತ್ರೀಯರು ಅಂಥ ಮಹತ್ತರವಾದ ಯಾವ ಪುಣ್ಯಗಳಿಸಿರುವರು? ||೧೯||

ಹಾರತ್ವಮುಷ್ಯಸಾರಾಣಾಂ ಪುಣ್ಯಾನಾಂ ಖಲು ತತ್ಫಲಂ ।
ಸೌಂದರ್ಯಂ ಮಹದೈಶ್ವರ್ಯಂ ಯೌವನಂ ಚ ನವಂ ನವಂ ॥೨೦॥

ಅಲಂಕೃತಾನಿ ತೈರೇವ ಮಂದಿರಾಣಿ ತವಾಧುನಾ ।
ಏತಾದೃಶಂ ಮಹದ್ಭಾಗ್ಯಂ ಕೇನ ಲಬ್ಧಂ ತ್ವಯಾ ವದ ॥೨೧॥

ತವಾಪಿ ಮಹದೈಶ್ವರ್ಯಂ ಕೇನ ಪುಣ್ಯೇನ ತದ್ವದ ।
ವಿಚಾರ್ಯ ಪೂರ್ವವೃತ್ತಾಂತಮುಪ್ರಮಾದೇನ ಸಾದರಂ ॥೨೨॥

|| ರತ್ನಾಕರ ಉವಾಚ ||

ಸಾಧು ಪೃಷ್ಟಮಿದಂ ತಾವದಧುನಾ ಸಾಗರಂ ಪರಂ ।
ಶೃಣುಧ್ವಂ ಸಾವಧಾನೇನ ತದ್ವೃತ್ತಾಂತಂ ಯಥಾಕ್ರಮಂ ॥೨೩॥

ಸೌಂದರ್ಯ, ಐಶ್ವರ್ಯ, ಶಾಶ್ವತವಾದ ನವತಾರುಣ್ಯ ಮುಂತಾದುವುಗಳು ಅಪಾರವಾದ ಪುಣ್ಯರಾಶಿಗಳ ಫಲವಾಗಿರುತ್ತವೆ. ಅದರಲ್ಲೂ ಶಿವಭಕ್ತಿಯುದಯಿಸಲು ವಿಶೇಷವಾದ ಪುಣ್ಯಫಲಗಳೇ ಬೇಕಾಗಿರುವುವು. ಇವರಲ್ಲಿ ಆ ಎಲ್ಲಾ ಫಲಗಳೂ ಕಂಡುಬರುತ್ತವೆ. ಆದುದರಿಂದ ಈ ಸ್ತ್ರೀಯರು ಯಾವ ಮಹತ್ತರವಾದ ಸುಕೃತವನ್ನು ಗಳಿಸಿರುವರು ? ||೨೦||

ಈ ಸ್ತ್ರೀಯರೆಲ್ಲರೂ ನಿನ್ನ ಶಿವಕೈಂಕರ್ಯಕ್ಕೆ ಬಹಳ ಸಹಾಯಕರಾಗಿರುವರು. ನಿನ್ನ ವಾಸಗೃಹವನ್ನೂ ಇಲ್ಲಿನ ಶಿವಮಂದಿರಗಳನ್ನೂ ಈ ಸ್ತ್ರೀಯರು ಸ್ವಹಸ್ತದಿಂದಲೇ ಅಲಂಕರಿಸಿ ಅಣಿಮಾಡಿರುವರು. ಇಂಥ ಅನುರೂಪರಾದ ಪತ್ನಿಯರು ನಿನಗೆ ಹೇಗೆ ಲಭಿಸಿದರು ? ಇಂಥ ಪರಮ ಸೌಭಾಗ್ಯವು ನಿನಗೆ ಹೇಗೆ ಪ್ರಾಪ್ತವಾಯಿತು ? ನಿನ್ನ ಪುಣ್ಯವಾದರೂ ಎಂತಹುದು ? ||೨೧||

ಎಲೈ ಸಮುದ್ರರಾಜನೇ, ನಿನ್ನ ಐಶ್ವರ್ಯವೂ ಮಹಾವಿಶಾಲವಾಗಿದೆ. ಇವುಗಳನ್ನೆಲ್ಲಾ ನೋಡಿ ನಮಗೆ ಪರಮಾಶ್ಚರ್ಯವುಂಟಾಗಿದೆಯಲ್ಲದೇ ನಿನ್ನ ಪ್ರಾಕ್ಸಂಚಿತವಾದ ಪುಣ್ಯದ ವೃತ್ತಾಂತವನ್ನೂ ಕೇಳಬೇಕೆಂದು ಆಸೆಯುಂಟಾಗುತ್ತಿದೆ. ಆದುದರಿಂದ ನಿನ್ನ ವೃತ್ತಾಂತಗಳೊಂದನ್ನೂ ಬಿಡದೇ ಸಮಗ್ರವಾಗಿ ಹೇಳು. ಹೀಗೆಂದು ಆ ಪುಣ್ಯಮೂರ್ತಿಗಳು ಪ್ರಶ್ನಿಸಲು ಸಮುದ್ರನು ಮತ್ತೆ ಹೇಳತೊಡಗಿದನು. ||೨೨||

ಪುಣ್ಯಮೂರ್ತಿಗಳೇ, ನೀವು ಒಳ್ಳೆಯ ಪ್ರಶ್ನೆಯನ್ನೇ ಮಾಡಿದಿರಿ. ಆಗಲಿ.

ಅಹಂ ಪೂರ್ವಭವೇ ವಿಪ್ರಃ ಪಿತಾ ಮೇ ಕಾಟಕೋಟರಃ ।
ಸ ಶಾಂಭವವರಸ್ತೇನ ತುಲ್ಯಶ್ಶೈವೋ ನ ಭೂತಲೇ ॥೨೪॥

ಶಿವಾಪರಾಧದುಷ್ಟೋಽಭೂತ್ತಸ್ಯೈವ ಜನಕಃ ಪುರಾ ।
ಸ ಹತಃ ಪಾದಘಾತೇನ ತೇನೈವ ಹಿ ಮಹಾತ್ಮನಾ ॥೨೫॥

ಸ್ವಯಂ ಶಿವಾರಾಧನಸಂಭ್ರಮೇಣ
ಸ್ಥಿತಃ ಪಿತಾ ಮೇ ಶಿವಲಿಂಗಮೂರ್ಧ್ನಿ ।
ಕ್ಷಿಪ್ತಂ ಪದಂ ಗೋಮಯಲಿಂಗರೂಪೇ
ಪಿತಾಮಹೇನಾಶು ಮಮ ಭ್ರಮೇಣ ॥೨೬॥

ತದಾ ಕುಠಾರಮಾದಾಯ ಛಿನ್ನಂ ತಚ್ಚರಣದ್ವಯಂ ।
ತತಃ ಪರಂ ಮೃತಸ್ಸೋಽಪಿ ತದ್ದೃಷ್ಟ್ವಾ ಹೃಷ್ಟಧೀಃ ಪಿತಾ ॥೨೭॥

ನಿಮ್ಮಿಷ್ಟದಂತೆ ನನ್ನ ವೃತ್ತಾಂತವನ್ನು ಹೇಳುವೆನು. ಸಾವಧಾನಚಿತ್ತದಿಂದ ಆಲಿಸಿರಿ. ||೨೩||

ನಾನು ಪೂರ್ವಜನ್ಮದಲ್ಲಿ ಬ್ರಾಹ್ಮಣನಾಗಿದ್ದೆನು. ಆಗ ನನ್ನ ತಂದೆಯು ಪರಮಶಾಂಭವನಾಗಿದ್ದನು. ಅವನಂತಹ ಭಕ್ತಾಗ್ರಣಿಯು ಭೂಲೋಕದಲ್ಲಿಯೇ ಇರಲಿಲ್ಲ. ||೨೪||

ನನ್ನ ಪಿತಾಮಹನು ಶಿವನಿಂದೆಯನ್ನು ಮಾಡುತ್ತಿದ್ದುದರಿಂದ ದುಷ್ಟನೂ ಮತ್ತು ಶಿವಾಪರಾಧಿಯೂ ಆಗಿದ್ದನು. ಇದನ್ನು ನೋಡಿ ಒಂದುದಿನ ನನ್ನ ತಂದೆಯು ತನ್ನ ತಾತನನ್ನೇ ಕಾಲಿನಿಂದ ಒದ್ದು ಕೊಂದನು. ಅದು ಹೇಗೆಂದರೆ— ||೨೫||

ನನ್ನ ತಂದೆಯು ಪರಶಿವಭಕ್ತನಾಗಿದ್ದುದರಿಂದ ಒಂದು ದಿನ ಶಿವಲಿಂಗಕ್ಕೆ ವೈಭವದಿಂದ ಪೂಜೆಮಾಡುತ್ತಿದ್ದನು. ಆ ಲಿಂಗವು ಗೋಮಯದ್ದಾಗಿದ್ದಿತು. ನನ್ನ ಪಿತಾಮಹನು ಮೊದಲಿಂದಲೂ ಶಿವಪೂಜಾವಿಮುಖನಾಗಿದ್ದುದರಿಂದ ಅಟ್ಟಹಾಸ ಮಾಡುತ್ತಾ ಆ ಶಿವಲಿಂಗವನ್ನು ಕಾಲಿನಿಂದ ತುಳಿದುಬಿಟ್ಟನು. ಅವನಿಗೆ ಶಿವಲಿಂಗ ಮಹಿಮೆಯ ಜ್ಞಾನವು ಎಳ್ಳಷ್ಟೂ ಇರಲಿಲ್ಲ. ||೨೬||

ತನ್ನ ತಂದೆಗೆ ಆ ಅತ್ಯಾಚಾರವನ್ನು ಕಂಡೊಡನೆಯೇ ತಾಳ್ಮೆ ತಪ್ಪಿ ಬಹಳ ಕೋಪವುಂಟಾಯಿತು. ಆ ಕೂಡಲೇ ಆತನು ಕೊಡಲಿಯಿಂದ ತಂದೆಯ

ಶಿವಾಪರಾಧೇನ ಭವಂತಿ ದುಃಖಾ
ನ್ಯಪಾರದುಃಖಾಕರಕಾಲಗೇಹೇ ।
ಅತಸ್ಸತಾಂ ಶಾಂಕರದುಃಖಬೀಜ
ಸಂಪಾದನೇನ ಭ್ರಮತೋಽಪಿ ದುಃಖಂ ॥೨೮॥

ತೇನ ಪಿತ್ರಾ ಶಿಕ್ಷಿತೋಽಹಂ ಸರ್ವದಾ ಶಿವಪೂಜನೇ ।
ತತಃ ಪರಂ ಪಿತಾ ಪ್ರಾಪ ವಿಮಾನೈಶ್ಶಿವಮಂದಿರಂ ॥೨೯॥

ಮಯಾ ಯೌವನಮಾಸಾದ್ಯ ದಾರೋದಾರವಿಹಾರಭೂಃ ।
ನ ತ್ಯಕ್ತಾ ಶಂಕರಾರ್ಚಾಪಿ ನ ತ್ಯಕ್ತಾ ಸರ್ವಥಾ ಮಯಾ ॥೩೦॥

ಕಾಲುಗಳನ್ನು ಕತ್ತರಿಸಿದನು. ಆದೇ ಯಾತನೆಯಿಂದ ನನ್ನ ಪಿತಾಮಹನು ಮೃತನಾಗಲು ಶಿವನಿಂದಕನು ನಾಶಹೊಂದಿದನೆಂದು ನನ್ನ ತಂದೆಗೆ ಸಂತೋಷವೇ ಆಯಿತು. ॥೨೭॥

ಶಿವನನ್ನು ನಿಂದಿಸಿ ಶಿವಾಪಚಾರವನ್ನು ಮಾಡಿದರೆ ಯಮಾಲಯದಲ್ಲಿ ಅಪಾರವಾದ ದುಃಖಗಳುಂಟಾಗುವುವು. ಹಾಗೆಯೇ ಶಿವಭಕ್ತರಿಗೆ ತೊಂದರೆಗಳನ್ನುಂಟುಮಾಡಿದರೂ ಮಹಾದುಃಖಕ್ಕೆ ಕಾರಣವಾಗುವುದು. ಹೀಗೆಯೇ ಶಿವಪರಾಙ್ಮುಖರು ಸರ್ವವಿಧದಲ್ಲಿಯೂ ದುಃಖವನ್ನೇ ಅನುಭವಿಸಬೇಕಾಗುವುದು. ॥೨೮॥

ಆ ನನ್ನ ಪೂಜ್ಯನಾದ ತಂದೆಯೇ ನನಗೆ ಶಿವಪೂಜೆಯನ್ನು ಉಪದೇಶ ಮಾಡಿಸಿದನು. ಹೀಗೆಯೇ ಕೆಲವುಕಾಲ ಕಳೆದ ನಂತರ ನನ್ನ ತಂದೆಯು ಮೃತಿಯನ್ನೈದಿ ವಿಮಾನವನ್ನೇರಿ ಕೈಲಾಸವನ್ನು ಸೇರಿದನು. ॥೨೯॥

ಅನಂತರ ನಾನು ಪ್ರಾಪ್ತವಯಸ್ಕನಾಗಿ ಯೌವನದಲ್ಲಿ ಪತ್ನಿಯನ್ನೂ ನಾನಾವಿಧವಾದ ಸುಖವಿಲಾಸಗಳನ್ನೂ ಉಪಭೋಗಿಸಲು ಯೋಗ್ಯನಾದೆನು. ನಾನು ಎಂದೂ ಶಿವಾರ್ಚನೆಯನ್ನು ಬಿಡಲಿಲ್ಲ. ನಿತ್ಯವೂ ತಪ್ಪದೇ ಶಿವಾರಾಧನೆಯನ್ನು ನಡೆಸುತ್ತ ಬರುತ್ತಿದ್ದೇನೆ. ॥೩೦॥

ಪ್ರಗೇ ಮಧ್ಯಾಹ್ನಕಾಲೇಽಪಿ ಸಾಯಂಕಾಲೇ ವಿಶೇಷತಃ ।
ಶಿವಾರ್ಚನಂ ಕೃತಂ ಪೂರ್ವಂ ಬಿಲ್ವಪತ್ರಾದಿಭಿರ್ಮಯಾ ॥೩೧॥

ತತಃ ಕದಾಚಿದ್ವಿಪಿನೇ ಬಿಲ್ವಭೂರುಹಸಂಕುಲೇ ।
ಪ್ರವಿಷ್ಟಂ ಬಿಲ್ವಪತ್ರಾರ್ಥಂ ದ್ವಿತ್ರೈಸ್ಸಹಚರೈಸ್ಸಹ ॥೩೨॥

ತತ್ರಾದ್ಭುತಂ ದೃಷ್ಟಮೇಕಂ ಸುಂದರಂ ಶಿವಮಂದಿರಂ ।
ಲಿಂಗಾನಿ ತತ್ರ ದೃಷ್ಟಾನಿ ತುಂಗಾನಿ ಗಿರಿಶಾಲಯೇ ॥೩೩॥

ಬಿಲ್ವಪಲ್ಲವಪುಷ್ಪಾದ್ಯೈರಾಕ್ರಾಂತಾನ್ಯೇವ ತಾನ್ಯಪಿ ।
ಸರಾಂಸಿ ತತ್ರ ದೃಷ್ಟಾನಿ ಕಮಲವ್ಯಾಕುಲಾನ್ಯಪಿ ॥೩೪॥

ತತ್ರ ಪುಣ್ಯವನಂ ದೃಷ್ಟಂ ಸದಾ ವನಸಮನ್ವಿತಂ ।
ಕನಕಾನ್ಯಪಿ ದೃಷ್ಟಾನಿ ಸುವರ್ಣಕಮಲಾನ್ಯಪಿ ॥೩೫॥

ಪ್ರತಿದಿನವೂ ಪ್ರಾತಃಕಾಲದಲ್ಲಿಯೂ ಮಧ್ಯಾಹ್ನದಲ್ಲಿಯೂ ಮತ್ತು ಸಾಯಂಕಾಲದಲ್ಲಿಯೂ ವಿಶೇಷವಾಗಿ ಬಿಲ್ವಪತ್ರೆಯೇ ಮೊದಲಾದ ಪೂಜಾದ್ರವ್ಯಗಳಿಂದ ಶಿವಪೂಜೆಯನ್ನು ಮೊದಲಿಂದಲೂ ಮಾಡುತ್ತ ಬಂದಿದ್ದೇನೆ. ॥೩೧॥

ಹೀಗೆಯೇ ಇರಲು ಒಂದು ದಿನ ನಾನು ಬಿಲ್ವಪತ್ರೆಗಳನ್ನು ಸಂಗ್ರಹಿಸುವುದಕ್ಕಾಗಿ ಇಬ್ಬರು ಮೂವರು ಸಂಗಡಿಗರೊಡನೆ ಒಂದು ಬಿಲ್ವವನಕ್ಕೆ ಹೋದೆನು. ॥೩೨॥

ಆ ನಾವು ಹೋದ ವನವು ಅತ್ಯದ್ಭುತವಾಗಿದ್ದಿತು. ಅಲ್ಲಿ ಒಂದು ಸುಂದರವಾದ ಶಿವಾಲಯವಿದ್ದಿತು. ಆ ಶಿವಮಂದಿರದಲ್ಲಿ ದೊಡ್ಡ ದೊಡ್ಡ ಶಿವಲಿಂಗಗಳಿದ್ದವು. ಆ ಲಿಂಗಗಳೆಲ್ಲವೂ ಬಿಲ್ವಪತ್ರೆಗಳಿಂದಲೂ ಹೂಗಳಿಂದಲೂ ಅಲಂಕೃತವಾಗಿದ್ದವು. ॥೩೩॥

ಆ ವನದಲ್ಲಿ ಸ್ವಚ್ಛವಾದ ನೀರುಳ್ಳ ಅನೇಕ ಸರೋವರಗಳಿದ್ದವು. ಅವುಗಳಲ್ಲಿ ಕಮಲಗಳು ತುಂಬಿರುತ್ತಿದ್ದವು. ಅಲ್ಲದೇ ಸುವರ್ಣಕಮಲಗಳೂ ಸಂಪಿಗೆಯೇ ಮೊದಲಾದ ಸುಗಂಧಮಯವಾದ ಪುಷ್ಪಗಳೂ ಇದ್ದುವು. ಇಂಥ ರಮ್ಯವಾದ ವನವನ್ನು ನೋಡಿ ನಾವು ಅತ್ಯಂತ ಹರ್ಷಿತರಾದೆವು. ಅಲ್ಲದೇ ಅದು ಮಹಾಪುಣ್ಯವನವೆಂದು ನೆನೆದುಕೊಂಡು ಅಲ್ಲಲ್ಲಿ ಅಲೆದಾಡುತ್ತಿದ್ದೆವು. ॥೩೪-೩೫॥

ತತ್ರ ಗಂಧರ್ವತನಯಾಃ ಕೋಟಿಶಸ್ಸಮುಪಾಗತಾಃ ।
ಏಕಾಂತಂ ಶಿವಪೂಜಾರ್ಥಂ ತಸ್ಮಿನ್ನಭಿನವೇ ವನೇ ॥೩೬॥

ತತ್ಸೌಂದರ್ಯಪ್ರಭಾವಸ್ತು ವಕ್ತುಮೇವ ನ ಶಕ್ಯತೇ ।
ಮಹದೈಶ್ವರ್ಯಸಂಪನ್ನಾಸ್ತಾಸ್ಸರ್ವಾಭರಣಾನ್ವಿತಾಃ ॥೩೭॥

ತಾಸ್ಸಮಾಗತ್ಯ ವೇಗೇನ ಸ್ನಾತ್ವಾ ಸರಸಿ ನಿರ್ಮಲೇ ।
ಭೂತಿರುದ್ರಾಕ್ಷವಿಮಲಾಶ್ಚಕ್ರುಶ್ಶಂಕರಪೂಜನಂ ॥೩೮॥

ರತ್ನೈರಪಾರೈಃ ಪುಷ್ಪಾದ್ಯೈರ್ಧೂಪದೀಪಾದಿಭಿರ್ಮುದಾ ।
ಕೃತ್ವಾ ಶಿವಾರ್ಚನಂ ಸರ್ವಾಃ ಪ್ರಹೃಷ್ಟಾಶ್ಶಿವತತ್ಪರಾಃ ॥೩೯॥

ತತಃ ಪರಂ ಕೃತಂ ನಾಟ್ಯಂ ತಾಭಿರತ್ಯಂತಮಾದರಾತ್ ।
ಶಂಕರಾಗ್ರೇ ಶಿವಾಚಾರನಿರತಾಭಿರ್ಯಥೇಚ್ಛಯಾ ॥೪೦॥

ಆ ವನವು ಅತ್ಯಂತ ರಮ್ಯವಾಗಿದ್ದುದರಿಂದ ಯಾವಾಗಲೂ ಹೊಸಹೊಸದಾಗಿಯೇ ತೋರುತ್ತಿತ್ತು. ಅಲ್ಲದೇ ಅಲ್ಲಿನ ವಾತಾವರಣವು ಬಹಳ ಶಾಂತಗಂಭೀರವಾಗಿದ್ದಿತು. ನಾವು ಅಲ್ಲಿಯೇ ಸಂಚರಿಸುತ್ತಿದ್ದಾಗ ಅನೇಕ ಗಂಧರ್ವಕನ್ಯಕೆಯರು ಅಲ್ಲಿಗೆ ಬಂದರು. ಅವರೂ ಆ ಏಕಾಂತದಲ್ಲಿ ಶಿವಾರ್ಚನೆಯನ್ನು ಮಾಡಲು ಬಂದಿದ್ದರು. ॥೩೬॥

ಆ ಕನ್ನಿಕೆಯರು ಅತ್ಯಂತ ಸೌಂದರ್ಯಶಾಲಿನಿಯರಾಗಿದ್ದರು. ಅವರ ಸೌಂದರ್ಯವು ಹೀಗೆಯೇ ಇತ್ತೆಂದು ಬಾಯಿಂದ ಹೇಳುವುದಕ್ಕೇ ಸಾಧ್ಯವಿಲ್ಲ. ಅಲ್ಲದೇ ಆ ಸ್ತ್ರೀಯರು ಸಕಲಾಭರಣಗಳಿಂದಲೂ ಅಲಂಕೃತರಾಗಿದ್ದರು. ಅದರಿಂದಲೇ ಅವರು ಮಹದೈಶ್ವರ್ಯಸಂಪನ್ನರೆಂದೂ ತಿಳಿಯುತ್ತಿದ್ದಿತು. ॥೩೭॥

ಆ ಗಂಧರ್ವಕನ್ನಿಕೆಯರು ಆ ವನಕ್ಕೆ ಬಂದೊಡನೆಯೇ ಸರೋವರದಲ್ಲಿ ಸ್ನಾನಮಾಡಿ ಭಸ್ಮರುದ್ರಾಕ್ಷಿಗಳನ್ನೂ ಧರಿಸಿಕೊಂಡು ಶುಚಿರ್ಭೂತರಾಗಿ ಭಕ್ತಿಯಿಂದ ಶಿವಾರ್ಚನೆ ಮಾಡಿದರು. ॥೩೮॥

ಆ ಸ್ತ್ರೀಯರು ಅನೇಕವಾಗಿ ಸ್ವರ್ಣಪುಷ್ಪಗಳಿಂದಲೂ ರತ್ನಮಣಿಗಳಿಂದಲೂ ಅರ್ಚನೆಯನ್ನು ನಡೆಸಿ, ಬಳಿಕ ಧೂಪ ದೀಪ ನೈವೇದ್ಯ ಮುಂತಾದುವುಗಳಿಂದ ಸಕಲ ಸೇವೆಯನ್ನೂ ಮಾಡಿದರು. ಅನಂತರ ಆ ಶಿವಸನ್ನಿಧಿಯಲ್ಲಿ ಸೇವಾರ್ಥವಾಗಿ

ತದ್ದರ್ಶನೇ ಮಮ ಪ್ರೀತಿರ್ಜಾತಾ ತಾವತ್ತದಾ ಖಲು ।
ತಾಸಾಮಪಿ ಮಯಿ ಪ್ರೀತಿಸ್ಸುಂದರೇ ಶಿವತತ್ಪರೇ ॥೪೧॥

ಅಹಂ ತಾಭಿಸ್ಸಮಾಹೂತಸ್ತದಾ ತನ್ನಿಕಟಂ ಪ್ರತಿ ।
ಇತ್ಥಮುಕ್ತಂ ತಾಭಿರೇವ ತಚ್ಛೃಣುಧ್ವಂ ಪ್ರಯತ್ನತಃ ॥೪೨॥

॥ ಗಂಧರ್ವಕನ್ಯಾ ಊಚುಃ ॥

ಸೌಂದರ್ಯನಿಧಿರೇವಾಸಿ ಯುವಾ ಶಿವಪರಾಯಣಃ ।
ಕಸ್ಮಿನ್ ವಾ ನಗರೇ ವಾಸಸ್ಸದನಂ ಕುತ್ರ ವಾ ತವ ॥೪೩॥

ಕಃ ಪಿತಾ ಕಾಪಿ ವಾ ಮಾತಾ ಸಂತಿ ಕಿಂ ಭ್ರಾತರಸ್ತವ ।
ಕಿಂ ತೇ ಕುಲಂ ಚ ಶೀಲಂ ಚ ಬಲಂ ಚ ವಿಪುಲಂ ವದ ॥೪೪॥

ತಮ್ಮ ಸಾಮರ್ಥ್ಯ ಚಾತುರ್ಯಗಳನ್ನೆಲ್ಲಾ ಬಳಸಿಕೊಂಡು ಅದ್ಭುತವಾಗಿ ನರ್ತನ ಮಾಡಿದರು. ॥೩೯-೪೦॥

ಆ ಸ್ತ್ರೀಯರ ಸೌಭಾಗ್ಯ ಸೌಂದರ್ಯಗಳನ್ನೂ ಶಿವಭಕ್ತಿಯನ್ನೂ ನೋಡಿ ನನಗೆ ಅವರಲ್ಲಿ ಪ್ರೇಮವುಂಟಾಯಿತು. ಆ ಸ್ತ್ರೀಯರೂ ನನ್ನನ್ನು ನೋಡಿ ಸುಂದರನಾಗಿದ್ದಾನೆಂದು ಯೋಚಿಸಿ ನನ್ನ ಶಿವಭಕ್ತಿಯನ್ನು ವಿಮರ್ಶಿಸಿ ನನ್ನನ್ನು ಪ್ರೇಮದಿಂದ ನೋಡತೊಡಗಿದರು. ॥೪೧॥

ಆಗ ಆ ಕನ್ನಿಕೆಯರು ತಮ್ಮ ಸಮೀಪಕ್ಕೆ ಬರಬೇಕೆಂದು ಸಂಕೇತಮಾಡಿ ನನ್ನನ್ನು ಕರೆಯಲು ನಾನು ಅವರ ಹತ್ತಿರಕ್ಕೆ ಹೋದೆನು. ಆಗ ಅವರು ಹೇಳಿದುದನ್ನು ಕೇಳಿರಿ. ॥೪೨॥

ಸುಂದರಾಂಗನೇ, ನವತಾರುಣ್ಯದಿಂದ ಒಪ್ಪುವ ನೀನು ಯಾರು? ಪರಮ ಶಿವಭಕ್ತನಾದ ನೀನು ಯಾವ ಪಟ್ಟಣದಲ್ಲಿ ವಾಸಮಾಡುತ್ತಿರುವೆ? ನಿನ್ನ ಮನೆಯು ಯಾವ ಊರಲ್ಲಿದೆ? ॥೪೩॥

ನಿನಗೆ ತಂದೆತಾಯಿಗಳಿರುವರೇ? ಅವರು ಎಲ್ಲಿರುವರು? ನಿನಗೆ ಸಹೋದರರಿದ್ದಾರೆಯೇ? ನಿನ್ನ ಕುಲಗೋತ್ರಗಳು ಯಾವುವು? ನಿನ್ನ ಜೀವನದ ಮತ್ತು ಶೀಲಗಳ ವೃತ್ತಾಂತವೇನು? ॥೪೪॥

ದಾರಾಸ್ಸಂತಿ ನ ವಾ ಭಾಗ್ಯಂ ಕಿಮಸ್ತಿ ವದ ಶಾಂಕರ ।
ಇಚ್ಛಾ ಕಿಮಧುನಾ ಕಾಪಿ ವದ ದಾರಪರಿಗ್ರಹೇ ॥೪೫॥

ದಾರಾಪೇಕ್ಷಾ ಯದಿ ತದಾ ವಯಂ ಗಂಧರ್ವಕನ್ಯಕಾಃ ।
ಯೋಗ್ಯಃ ಪರಿಣಯಃ ಕಾರ್ಯಃ ಕಾರ್ಯಮನ್ಯದ್ಭವಿಷ್ಯತಿ ॥೪೬॥

ರತ್ನಾಕರತ್ವಮೀಶೇನ ತುಭ್ಯಂ ದೇಯಮಸಂಶಯಂ ।
ಅಸ್ಮತ್ಪ್ರಾರ್ಥನಯಾ ಶರ್ವಃ ಪ್ರಸನ್ನೋಽಪಿ ಭವಿಷ್ಯತಿ ॥೪೭॥

ಸಮುದ್ರಸ್ಯಾಧಿಕಾರೋಽದ್ಯ ಗಮಿಷ್ಯತಿ ವಿಶೇಷತಃ ।
ಶಿವದ್ರೋಹರತೋ ಜಾತಸ್ಸ ಸಮುದ್ರೋ ಯತೋಽಧುನಾ ॥೪೮॥

ನಿನ್ನ ಐಶ್ವರ್ಯದ ಸ್ಥಿತಿಗತಿ ಏನು ? ನಿನಗೆ ಪತ್ನಿಯರಿದ್ದಾರೆಯೇ ? ಅಥವಾ ಈಗ ನೀನು ಪತ್ನಿಯರನ್ನು ಸ್ವೀಕರಿಸಬೇಕೆಂದು ಅಪೇಕ್ಷಿಸುತ್ತಿರುವೆಯಾ ? ಇದನ್ನು ದಯೆಯಿಟ್ಟು ನಮಗೆ ಹೇಳು. ॥೪೫॥

ನಿನಗೆ ವಿವಾಹಮಾಡಿಕೊಳ್ಳಬೇಕೆಂಬ ಅಪೇಕ್ಷೆ ಇದ್ದರೆ ಹೇಳು. ಇದೋ ನಾವು ನಿನ್ನನ್ನು ವರಿಸಲು ಸಿದ್ಧರಾಗಿರುವೆವು. ನಮ್ಮ ವಿಷಯದಲ್ಲಿ ನೀನು ಅನುಮಾನಿಸಬೇಡ. ನಾವು ಗಂಧರ್ವಕನ್ನಿಕೆಯರು. ವಿಧ್ಯುಕ್ತವಾದ ರೀತಿಯಲ್ಲಿ ನಮ್ಮ ಪಾಣಿಗ್ರಹಣವನ್ನು ನೀನು ಮಾಡಬಹುದು. ॥೪೬॥

ಎಲೈ ಸುಂದರನೇ, ಮತ್ತೊಂದು ಮುಖ್ಯವಿಷಯವಿರುವುದು. ನೀನು ನಮ್ಮನ್ನು ಸ್ವೀಕರಿಸಿದರೆ ನಿನಗೆ ವಿಶೇಷವಾದ ಲಾಭವಾಗುವುದು. ನಿನಗೆ ಸಮುದ್ರ ರಾಜತ್ವವು ಲಭಿಸುವುದು. ಹಾಗೆಯೇ ನಾವೂ ಪರಮೇಶ್ವರನನ್ನು ಕುರಿತು ಪ್ರಾರ್ಥಿಸುತ್ತೇವೆ. ನಮ್ಮ ಪ್ರಾರ್ಥನೆ ಮೇರೆಗೆ ಶಿವನು ನಿನ್ನನ್ನೇ ಸಮುದ್ರರಾಜ ನನ್ನಾಗಿ ಮಾಡುವನು. ಈಗಿರುವ ಸಮುದ್ರನಿಗೆ ಅಧಿಕಾರವು ಕಳೆದುಹೋಗುವುದು. ಏಕೆಂದರೆ ಆತನು ಹಿಂದೆ ಶಿವನಿಗೆ ಮೋಸಮಾಡಿದ್ದನು. ಆದುದರಿಂದ ಆತನ ಅಧಿಕಾರವನ್ನು ತಪ್ಪಿಸಿ ನೀನೇ ಸಮುದ್ರಾಧಿಪತಿಯಾಗುವಂತೆ ಶಿವನು ಅನುಗ್ರಹಿಸ ಲಿರುವನು. ॥೪೭-೪೮॥

ಇತಿ ತದ್ವಚನಂ ಶ್ರುತ್ವಾ ಮಯೋಕ್ತಂ ಕಿಮಭೂತ್ತಥಾ ।
ಯೇನಾಧಿಕಾರವಿಲಯಸ್ಸಮುದ್ರಸ್ಯಾಪಿ ಜಾಯತೇ ॥೪೯॥

ತತಃ ಪರಂ ತಾಭಿರುಕ್ತಂ ಶ್ರೋತವ್ಯಂ ತದಿಹಾದರಾತ್ ।
ತೇನಾಪಿ ತಾವದಧುನಾ ಸಂತೋಷೋ ವೃದ್ಧಿಮೇಷ್ಯತಿ ॥೫೦॥

ಗತಸ್ಸಮುದ್ರಂ ಶ್ರೀರುದ್ರೋ ಹಾರಾನ್ ದ್ರಷ್ಟುಂ ಮನೋಹರಾನ್ ।
ತತಸ್ತಮಾಗತಂ ದೃಷ್ಟ್ವಾ ಭ್ರಾಂತಿಮಾಪ ಸ ಸಾಗರಃ ॥೫೧॥

ವೇಷಾಂತರೇಣ ಸಂಪ್ರಾಪ್ತೋ ಮಹಾದೇವೋ ನ ಪೂಜಿತಃ ।
ತೇನ ಹಾರಃ ಪ್ರಾರ್ಥಿತೋಽಪಿ ನ ದತ್ತಃ ಪರಮಾದರಾತ್ ॥೫೨॥

ಹೀಗೆಂದು ಗಂಧರ್ವಕನ್ಯಕೆಯರು ಹೇಳಲು ಆ ಮಾತನ್ನು ಕೇಳಿ ನಾನು ಆಶ್ಚರ್ಯಪಟ್ಟು "ಇದೇನು ಹೀಗೆ ಹೇಳುತ್ತಿರುವಿರಿ? ಸಮುದ್ರರಾಜನಿಗೆ ಏಕೆ ಅಧಿಕಾರವು ತಪ್ಪುವುದು? ಅವನು ಯಾವ ಅಪರಾಧವನ್ನು ಮಾಡಿರುವನು? ನಿಮ್ಮ ಮಾತಿನಲ್ಲಿ ನನಗೆ ಸಂಶಯವುಂಟಾಗಿರುವುದು. ವಿಶದವಾಗಿ ಹೇಳಿ ನನ್ನ ಸಂದೇಹವನ್ನು ಪರಿಹರಿಸಿರಿ." ಎಂದು ಪ್ರಶ್ನಿಸಲು, ॥೪೯॥

ನನ್ನ ಪ್ರಶ್ನೆಯನ್ನು ಕೇಳಿ ಆ ಕನ್ನಿಕೆಯರು ಸಂತೋಷದಿಂದ ಹೇಳತೊಡಗಿದರು. ಕೋಮಲಾಂಗನೇ! ಆ ಕಥೆಯನ್ನು ಹೇಳಲು ನಮಗೂ ತವಕವೇ ಉಂಟಾಗುತ್ತಿರುವುದು. ಆ ವೃತ್ತಾಂತವನ್ನೇ ಹೇಳುವೆವು. ಆಲಿಸು. ॥೫೦॥

ಹಿಂದೊಂದು ದಿನ ಪರಮೇಶ್ವರನು ಸಮುದ್ರರಾಜನಲ್ಲಿರುವ ಮುತ್ತಿನ ಹಾರಗಳನ್ನು ನೋಡುವುದಕ್ಕಾಗಿ ಹೋದನು. ಆಗ ಶಿವನು ನಿಜರೂಪವನ್ನು ಮರೆಮಾಡಿ ಬೇರೆ ರೂಪವನ್ನು ಧರಿಸಿದ್ದನು. ಅಜ್ಞಾನಿಯಾದ ಸಮುದ್ರನಿಗೆ ಆಗಂತುಕನು ಸಾಕ್ಷಾತ್ ಪರಶಿವನೆಂಬುದು ತಿಳಿಯಲಿಲ್ಲ. ಅಲ್ಲದೇ ಆತನು ಈಶ್ವರನನ್ನು ಪೂಜಾದಿಗಳಿಂದ ಸತ್ಕರಿಸಲೂ ಇಲ್ಲ. ಕೇವಲ ಔದಾಸೀನ್ಯವನ್ನೇ ತೋರಿಸಿದನು. ॥೫೧॥

ಸಮುದ್ರನು ಸ್ವತಃ ಶಿವನಿಗೆ ಹಾರಾದಿಗಳನ್ನು ಅರ್ಪಿಸಬೇಕಾಗಿದ್ದರೂ ಶಿವನೇ ನನಗೆ ಮುತ್ತಿನ ಹಾರವನ್ನು ಕೊಡೆಂದು ಕೇಳಿದರೂ ಆತನು ತಿರಸ್ಕರಿಸಿ

ತತಃ ಪರಂ ಮಹೇಶೇನ ತಂ ಪ್ರತ್ಯುಕ್ತಂ ವಚಃ ಕಿಲ ।
ತದಪ್ಯಭಿನವಂ ವಕ್ಷ್ಯೇ ಶೃಣುಧ್ವಮತಿ ಸಾದರಂ ॥೫೩॥

॥ ಶ್ರೀ ಸದಾಶಿವ ಉವಾಚ ॥

ಅಪಾರಾಸ್ತೇ ಮಹೋದಾರಾ ಹಾರಾಸ್ಸಂತಿ ತವಾಧುನಾ ।
ತತ್ರೈಕೋ ವಾ ಪ್ರದೇಯೋ ಮೇ ಹಾರೋ ಹಾರಾಯ ಸಾದರಂ ॥೫೪॥

ಹರೋ ಹಾರಪ್ರದಾನೇನ ಹಾರಾಯಾದರಪೂರ್ವಕಂ ।
ಸಂತುಷ್ಟೋ ಮಹತೀಂ ವೃದ್ಧಿಂ ತುಭ್ಯಂ ದಾಸ್ಯತ್ಯಸಂಶಯಂ ॥೫೫॥

ಐಶ್ವರ್ಯೇ ಸತಿ ಹಾರಸ್ಯ ಯಃ ಪೂಜಾಂ ನ ಕರಿಷ್ಯತಿ ।
ತದೈಶ್ವರ್ಯಂ ಲಯಂ ಯಾತಿ ದರಿದ್ರೋಽಪಿ ಸ ಜಾಯತೇ ॥೫೬॥

ದನು. ಅಹಂಕಾರಿಯಾದ ಸಮುದ್ರರಾಜನು ತನಗೆ ಏನನ್ನೂ ಅರ್ಪಿಸದೆ ಗರ್ವವನ್ನು ಪ್ರಕಟಿಸಲು ಪರಮೇಶ್ವರನು ಈ ರೀತಿ ಹೇಳಿದನು. ಅದೂ ಒಂದು ವಿಚಿತ್ರವಾಗಿದೆ. ॥೫೨-೫೩॥

ಎಲೈ ಸಮುದ್ರರಾಜನೇ! ನೀನು ಅನೇಕ ಉತ್ತಮೋತ್ತಮ ಮುಕ್ತಾಹಾರಗಳನ್ನು ಹೊಂದಿರುವೆ. ಅವುಗಳಲ್ಲಿ ಒಂದನ್ನಾದರೂ ನನಗೆ ಕೊಡು. ನಿನ್ನಲ್ಲಿ ಹಾರಗಳು ಅಕ್ಷಯಗಳಾಗಿರುವುವು. ನಾನೂ ಸಹ ಹರಭಕ್ತನಾಗಿರುವೆನು. ಹೀಗೆ ದಾನಸಂದರ್ಭವು ಒದಗಿ ಸತ್ಪಾತ್ರನಾದ ನಾನು ನಿನ್ನನ್ನು ಕೇಳುತ್ತಿರುವೆನು. ಒಂದು ಹಾರವನ್ನು ಕೊಡು. ॥೫೪॥

ಮುತ್ತಿನ ಹಾರಗಳನ್ನು ಪಡೆದುಕೊಂಡಿರುವ ಶಿವಭಕ್ತನು ಈಶ್ವರಭಕ್ತರಾದವರಿಗೆ ಹಾರಗಳನ್ನು ಭಕ್ತಿಯಿಂದ ದಾನ ಮಾಡಿದರೆ ಅದರಿಂದ ಶಿವನು ಸಂತುಷ್ಟನಾಗಿ ಮತ್ತೂ ಅಧಿಕವಾದ ಐಶ್ವರ್ಯವನ್ನು ಅನುಗ್ರಹಿಸುವನು. ॥೫೫॥

ಯಾವನು ತನಗೆ ಐಶ್ವರ್ಯವಿದ್ದರೂ ಈಶ್ವರಭಕ್ತರಿಗೆ ದಾನಪೂಜಾದಿಗಳನ್ನು ಮಾಡುವುದಿಲ್ಲವೋ, ಅಂತಹವರ ಐಶ್ವರ್ಯವು ಸ್ವಲ್ಪ ದಿನಗಳಲ್ಲಿಯೇ ನಾಶವಾಗುವುದು. ಅಲ್ಲದೇ ಅಂತಹವನು ಕಡುದರಿದ್ರನಾಗುವನು. ॥೫೬॥

ಕಿಂ ತೇನ ವದ ಭಾಗ್ಯೇನ ಯದ್ಭಾಗ್ಯಾದಾರ್ಯಂ ನ ತೇ ತದಾ ।
ಪಾತ್ರಂ ಹಾರಂ ಸಮಾಸಾದ್ಯ ಕೋ ವಾ ಸ್ಯಾತ್ತದನಾದರಂ ॥೫೭॥

ಕಿಮೈಶ್ವರ್ಯಮದಾಂಧೇನ ಹಾರವೀರಪರಾಭವಃ ।
ಕ್ರಿಯತೇ ಸ ಕೃತಃ ಪ್ರಾಯಸ್ಸ ಪರಾಭವಮಿಚ್ಛತಿ ॥೫೮॥

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ ।
ತಚ್ಛೃಣುಷ್ವಾತಿಯತ್ನೇನ ಭಜ ಭಾಗ್ಯಮಿದಂ ಮುಹುಃ ॥೫೯॥

ಪುರಾ ಕಶ್ಚಿದಭೂದ್ರಾಜಾ ಪರಂತಪ ಇತಿ ಶ್ರುತಃ ।
ರಿಪವೋ ವಿಜಿತಾಸ್ತೇನ ಶೂರೇಣಾಮಿತತೇಜಸಾ ॥೬೦॥

ನೀನು ಐಶ್ವರ್ಯವನ್ನು ಪಡೆದುಕೊಂಡಿದ್ದರೂ ದಾನ ಧರ್ಮಾದಿಗಳನ್ನು ಮಾಡದ ಮೇಲೆ ನಿನ್ನಲ್ಲಿ ಐಶ್ವರ್ಯವಿದ್ದರೇನು ಫಲ ! ನೀನು ನಿನ್ನ ಭಾಗ್ಯಕ್ಕೆ ತಕ್ಕಂತೆ ಹೆಚ್ಚು ಉದಾರನಾಗಿರಬೇಕಾಗಿತ್ತು. ಆದರೆ ನೀನು ಮಹಾ ಕೃಪಣನು. ದಾನಪಾತ್ರನು ತಾನಾಗಿ ಬಂದು ಕೇಳುತ್ತಿರುವಾಗಲೂ ಯಾವ ದಾನಿಯು ತಾನೇ ಆತನನ್ನು ತಿರಸ್ಕರಿಸುವನು ? ॥೫೭॥

ಯಾವನು ಶಾಂಭವಶ್ರೇಷ್ಠರಿಗೆ ದಾನ ಧರ್ಮಗಳನ್ನು ಮಾಡಿ ತುಷ್ಟಿಯನ್ನುಂಟುಮಾಡುವುದಿಲ್ಲವೋ ಅಂಥ ಐಶ್ವರ್ಯ ಮದಾಂಧರಿಂದ ಏನು ಪ್ರಯೋಜನ? ಅವರು ಕೇವಲ ಭೂಭಾರವೇ ಸರಿ. ಅಲ್ಲದೇ ತನ್ನಲ್ಲಿದ್ದು ಯಾವನು ನಾಸ್ತಿ ಎಂದು ಹೇಳುವನೋ ಅವನು ತಾನೇ ತನಗೆ ದುರ್ಗತಿಯನ್ನು ಆಹ್ವಾನಿಸುವನೆಂದು ತಿಳಿ. ॥೫೮॥

ಇದೇ ವಿಚಾರದಲ್ಲಿ ಇತಿಹಾಸಜ್ಞರು ಒಂದು ಕಥೆಯನ್ನು ಹೇಳುವರು. ಅದನ್ನೇ ಹೇಳುವೆನು ಕೇಳು. ಇದನ್ನು ತಿಳಿದುಕೊಂಡಾದರೂ ಉದಾರನಾಗಿ ಮುಂದಕ್ಕೆ ಭಾಗ್ಯವನ್ನು ಸ್ಥಿರವಾಗಿ ಪಡೆದುಕೊಂಡಿರುವುದಕ್ಕೆ ಯತ್ನಿಸು. ॥೫೯॥

ಪೂರ್ವಕಾಲದಲ್ಲಿ ಪರಂತಪನೆಂಬ ಮಹಾ ಪರಾಕ್ರಮಶಾಲಿಯಾದ ರಾಜನಿದ್ದನು. ಒಂದು ಸಂದರ್ಭದಲ್ಲಿ ಈ ರಾಜನಿಗೂ ಆತನ ಶತ್ರುಗಳಿಗೂ ಘೋರವಾದ ಯುದ್ಧವಾಯಿತು. ಪರಂತಪನು ಅತ್ಯಂತ ಶೂರನಾಗಿದ್ದುದರಿಂದ ಕೊನೆಗೆ ಎಲ್ಲಾ ಶತ್ರುಗಳನ್ನೂ ಸೋಲಿಸಿ ವಿಜಯಶಾಲಿಯಾದನು. ॥೬೦॥

ಹತೇಷ್ವರಿಷು ತದ್ರಾಜ್ಯಮಾಕ್ರಾಂತಂ ತೇನ ಶತ್ರವಃ ।
ಬಹುವಾರಂ ಹತಾಸ್ಸರ್ವೇ ರಿಪುಸೈನ್ಯಂ ಮಹೀತಲಂ ॥೬೧॥

ಯಾವದ್ರಿಪುಧನಂ ತಾವತ್ಸಮಾನೀಯ ಸ್ವಮಂದಿರಂ ।
ಪೂರ್ಣಂ ಕೃತಂ ಗಜಾಶ್ವಾದ್ಯಾಃ ಕೋಟಿಶಸ್ತಸ್ಯ ಭೂಪತೇಃ ॥೬೨॥

ತಸ್ಯ ಪ್ರತಿಭಟಃ ಕೋಽಪಿ ನ ದೃಷ್ಟಃ ಖಲು ಭೂತಲೇ ।
ಸುವರ್ಣಮಂದಿರಾಣ್ಯೇವ ತೇನ ಸಂಪಾದಿತಾನ್ಯಪಿ ॥೬೩॥

ರತ್ನಪ್ರಾಕಾರಸಂವೀತಂ ಪುರಂ ತೇನ ಕೃತಂ ಪುರಾ ।
ಸರ್ವದಾ ರತ್ನಮಾಲಾಭಿರ್ನಗರಂ ತದಲಂಕೃತಂ ॥೬೪॥

ಆ ಯುದ್ಧದಲ್ಲಿ ಅನೇಕ ಶತ್ರುರಾಜರು ಸತ್ತುಹೋದರು. ಪರಂತಪನು ತಾನೇ ಅಸಹಾಯ ಶೂರನಾಗಿ ಮೇಲೆ ಮೇಲೆ ಬಿದ್ದು ಶತ್ರುಸೇನೆಯನ್ನೆಲ್ಲಾ ಕೊಂದಿದ್ದನು. ಅಂತ್ಯದಲ್ಲಿ ಜಯಪ್ರಾಪ್ತವಾದ ಬಳಿಕ ಆ ರಾಜನು ಶತ್ರುರಾಜ್ಯಕ್ಕೆ ಹೋಗಿ ಅಲ್ಲಿದ್ದ ಸಕಲ ವಸ್ತುವಾಹನಗಳನ್ನೂ ಸ್ವಾಧೀನಪಡಿಸಿಕೊಂಡನು. ॥೬೧॥

ಆ ಶತ್ರುರಾಜ್ಯಗಳಲ್ಲಿ ಎಷ್ಟೆಷ್ಟು ಸಂಪತ್ತಿದ್ದಿತೋ ಅಷ್ಟನ್ನೂ ಸ್ವಾಧೀನ ಪಡಿಸಿಕೊಂಡು ಅವುಗಳನ್ನೆಲ್ಲಾ ತನ್ನ ಅರಮನೆಗೇ ತಂದನು. ಆ ಅಪರಿಮಿತವಾದ ಧನಕನಕ ವಸ್ತುವಾಹನಗಳಿಂದ ಆಖಂಡ ಅರಮನೆಯೇ ತುಂಬಿಹೋಯಿತು. ॥೬೨॥

ಆ ಪರಂತಪರಾಜನು ಇನ್ನೂ ಅನೇಕ ದಿಗ್ವಿಜಯಯಾತ್ರೆಗಳನ್ನು ಮಾಡಿ ಎಲ್ಲಾ ರಾಜರನ್ನೂ ಗೆದ್ದಿದ್ದನು. ಅನಂತರ ಆತನಿಗೆ ಭೂಮಿಯಲ್ಲಿ ಯಾರೂ ಶತ್ರುಗಳಾಗಲಿ ಎದುರಾಳುಗಳಾಗಲಿ ಇರಲಿಲ್ಲ. ಅಂಥ ಅಪ್ರತಿಮನಾದ ರಾಜನು ಮಹಾ ಸಂಪದ್ಯುಕ್ತನಾಗಿದ್ದನಲ್ಲದೇ ತನ್ನ ಎಲ್ಲಾ ಅರಮನೆಗಳನ್ನೂ ಅಪ್ಪಟವಾದ ಚಿನ್ನದಿಂದಲೇ ಕಟ್ಟಿಸಿಕೊಂಡಿದ್ದನು. ॥೬೩॥

ಆ ರಾಜನು ತನ್ನ ಪಟ್ಟಣದ ಸುತ್ತಲೂ ರತ್ನಮಯವಾದ ಪ್ರಾಕಾರವನ್ನೇ ನಿರ್ಮಿಸಿದ್ದನು. ಆತನ ರಾಜಧಾನಿಯು ಕೂಡ ಸತತವೂ ರತ್ನತೋರಣಗಳಿಂದಲೂ ನಾನಾಬಗೆಯ ಮಾಲೆಗಳಿಂದಲೂ ಅಲಂಕೃತವಾಗಿರುತ್ತಿದ್ದಿತು. ॥೬೪॥

ತಸ್ಮಿನ್ ಶಾಸತಿ ಭೂಪಾಲೇ ಸಭಯಾ ಏವ ಸಜ್ಜನಾಃ ।
ಅಶಾಂಭವಪರಿಕ್ರಾಂತಂ ತದ್ರಾಷ್ಟ್ರಮಘಸಂಕುಲಂ ॥೬೫॥

ತಸ್ಮಿನ್ ರಾಷ್ಟ್ರೇ ವನೇ ಕಶ್ಚಿದ್ಬ್ರಾಹ್ಮಣಶ್ಶಿವತತ್ಪರಃ ।
ಸಕುಟುಂಬಃ ಸ್ಥಿತಸ್ತತ್ರ ಕೃತ್ವಾ ಪರ್ಣಕುಟೀಂ ವಟೇ ॥೬೬॥

ತತ್ರ ರಾಜಾ ಗತೋ ದೈವಾತ್ಸಂಚರನ್ ವಿಪಿನಂ ಪರಂ ।
ತೃಷಾರ್ತೋಽಪಿ ಕ್ಷುಧಾರ್ತೋಽಪಿ ಹಯಮಾರುಹ್ಯ ಕೇವಲಂ ॥೬೭॥

ಸ್ಥಿತಮನ್ಯತ್ರ ತತ್ಸೈನ್ಯಂ ಸ್ಥಿತಂ ಚ ಪರಿಚಾರಕೈಃ ।
ಏಕಾಕೀ ಸ್ವಯಮಾಗತ್ಯ ವಟಚ್ಛಾಯಾಮುಪಾಶ್ರಿತಃ ॥೬೮॥

ಆ ರಾಜನು ಧರ್ಮಿಷ್ಠನಾಗಿರಲಿಲ್ಲ. ಅಲ್ಲದೇ ಅತ್ಯಂತ ದರ್ಪದಿಂದ ರಾಜ್ಯದಾಡಳಿತವನ್ನು ನಡಸುತ್ತಿದ್ದನು. ಆ ಸಮಯದಲ್ಲಿ ಶಿವಭಕ್ತರು ಆತನ ರಾಜ್ಯದಲ್ಲಿ ವಾಸಿಸುವುದೇ ಕಷ್ಟವಾಗಿದ್ದಿತು. ಅಲ್ಲಿ ಅವರು ಅತ್ಯಂತ ವಿರಳರಾಗಿರುವರು. ಧರ್ಮಿಷ್ಠರಿಗೂ ಪದೇ ಪದೇ ತೊಂದರೆಗಳು ಒದಗುತ್ತಿದ್ದವು. ಹೀಗೆ ಆತನ ರಾಜ್ಯವು ಕೇವಲ ಪಾಪಭೂಯಿಷ್ಠವಾಗಿದ್ದಿತು. ॥೬೫॥

ಅದೇ ರಾಜ್ಯಕ್ಕೆ ಒಳಪಟ್ಟಿದ್ದ ಒಂದು ಅರಣ್ಯದಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಆತನು ಪರಶಿವಭಕ್ತನಾಗಿದ್ದನು. ಒಂದು ಆಲದ ಮರದ ಕೆಳಗೆ ಗುಡಿಸಲನ್ನು ಕಟ್ಟಿಕೊಂಡು ಅಲ್ಲಿಯೇ ತನ್ನ ಕುಟುಂಬದೊಡನೆ ವಾಸಿಸುತ್ತಿದ್ದನು. ॥೬೬॥

ಆ ಪರಂತಪರಾಜನು ಅರಣ್ಯದಲ್ಲಿ ಕುದುರೆಯನ್ನೇರಿ ತಿರುಗಾಡುತ್ತಿದ್ದಾಗ ಅಕಸ್ಮಾತ್ ಆ ಬ್ರಾಹ್ಮಣನು ವಾಸಿಸುತ್ತಿದ್ದ ಸ್ಥಳಕ್ಕೇಹೋದನು. ಆಗ ಆ ರಾಜನಿಗೆ ಬಹಳ ಹಸಿವು ಬಾಯಾರಿಕೆಯಾಯಿತು. ॥೬೭॥

ಆತನ ಸೈನ್ಯವೂ ಪರಿಚಾರಕರಾದ ದಾಸದಾಸಿಯರೂ ಬೇರೆ ಕಡೆಯಲ್ಲಿ ಬಹಳ ದೂರದಲ್ಲಿದ್ದರು. ಆತನು ಒಂಟಿಯಾಗಿಯೇ ಬಹಳ ದೂರ ಬಂದಿದ್ದನು. ಆಗ ಆತನು ಬಳಲಿ ಆಯಾಸಗೊಂಡಿದ್ದರಿಂದ ಕುದುರೆಯಿಂದಿಳಿದು ಅದೇ ಆಲದ ಮರದ ಮೂಲಕ್ಕೇ ವಿಶ್ರಾಂತಿಗಾಗಿ ಹೋದನು. ॥೬೮॥

ತದಾನೀಂ ತೃಷಿತೋ ರಾಜಾ ಯಯಾಚೇ ಜಲಮಾಪರಾತ್ ।
ಮುನಿಕನ್ಯಾಂ ಸಮಾಲೋಕ್ಯ ವಟಮೂಲಸ್ಥಿತಾಂ ತದಾ ॥೬೯॥

ಸಾ ದದೌ ಜಲಮಾನೀಯ ಫಲಾನಿ ವಿಮಲಾನ್ಯಪಿ ।
ಸ ತತ್ಪೀತ್ವಾ ಜಲಂ ಶ್ರಾಂತೋ ಜಗೃಹೇ ಸ ಫಲಾನ್ಯಪಿ ॥೭೦॥

ಮೂಲಾನಿ ಪರಿಪಕ್ವಾನಿ ತಯಾ ದತ್ತಾನಿ ಕಾನಿಚಿತ್ ।
ತೈರಾಶು ಪೂರಯಾಮಾಸ ಸ್ವೋದರಂ ಸ ನರಾಧಿಪಃ ॥೭೧॥

ತದಾ ತಮಾಹ ಸಾ ಕನ್ಯಾ ತತ್ಕಂಠೇ ಹಾರಮುತ್ತಮಂ ।
ದೃಷ್ಟ್ವಾ ಪ್ರಹೃಷ್ಟಂ ರಾಜಾನಂ ಜಲಮೂಲಾದಿಭಿಸ್ತದಾ ॥೭೨॥

॥ ಕನ್ಯಕಾ ಉವಾಚ ॥

ಗೌರೀವ್ರತಂ ಸಮಾರಬ್ಧಂ ಗೌರೀಮೂರ್ತಿರಿಯಂ ಕೃತಾ ।
ಪುಷ್ಪೈರಲಂಕೃತಾ ವನ್ಯೈಃ ಪಾಂಡುಪರ್ಣಾದಿಭಿಸ್ತಥಾ ॥೭೩॥

ರಾಜನಿಗೆ ತಡೆಯಲಾಗದಷ್ಟು ಬಾಯಾರಿಕೆಯಾಯಿತು. ಆದುದರಿಂದ ಆ ಆಲದಮರದ ಕೆಳಗೆ ನಿಂತಿದ್ದ ವಿಪ್ರಕನ್ಯೆಯನ್ನು ಕುರಿತು ಅತ್ಯಂತ ದೈನ್ಯದಿಂದ ತನಗೆ ನೀರನ್ನು ಕೊಡೆಂದು ಕೇಳಿದನು. ॥೬೯॥

ಆ ಕನ್ಯೆಯು ಕೂಡಲೇ ನೀರನ್ನೂ ಕೆಲವು ಹಣ್ಣುಗಳನ್ನೂ ತಂದು ಕೊಟ್ಟಳು. ರಾಜನು ಮೊದಲು ನೀರನ್ನು ಕುಡಿದು ಸ್ವಲ್ಪ ಸಮಾಧಾನ ಹೊಂದಿದ ಮೇಲೆ ಹಣ್ಣುಗಳನ್ನೂ ಸ್ವೀಕರಿಸಿದನು. ॥೭೦॥

ಆ ಕನ್ಯೆಯು ಕೆಲವು ಗೆಡ್ಡೆಗೆಣಸುಗಳನ್ನೂ ಮತ್ತು ಮಾಗಿದ ಹಣ್ಣುಗಳನ್ನೂ ತಂದುಕೊಟ್ಟಿದ್ದಳು. ರಾಜನು ಅವುಗಳನ್ನೇ ತಿಂದು ಆಗ ತೃಪ್ತನಾದನು. ತನಗೆ ಈ ರೀತಿ ಸಹಾಯಮಾಡಿದ್ದಕ್ಕಾಗಿ ರಾಜನು ತನ್ನ ಮೆಚ್ಚುಗೆಯನ್ನೂ ಪ್ರಕಟಿಸಿದನು. ॥೭೧॥

ರಾಜನ ಕತ್ತಿನಲ್ಲಿ ಮುಕ್ತಾಹಾರವನ್ನು ಕಂಡು, ಮತ್ತು ಆತನು ತನ್ನ ಆಹಾರದಿಂದ ತೃಪ್ತಿಪಟ್ಟಿದ್ದನ್ನೂ ತಿಳಿದು ಆ ಕನ್ಯೆಯು ತವಕದಿಂದ ಹೀಗೆ ಕೇಳಿದಳು. ॥೭೨॥

“ಎಲೈ ರಾಜನೇ, ನಾನು ಗೌರೀವ್ರತವನ್ನು ಆರಂಭಿಸಿದ್ದೇನೆ. ಇದೋ ನೋಡು, ಗೌರಿಯ ವಿಗ್ರಹವನ್ನು ನಿರ್ಮಿಸಿ ಅರಣ್ಯಪುಷ್ಪಗಳಿಂದ ಅಲಂಕರಿಸಿದ್ದೇನೆ.

ನ ಧನಂ ಮುನಿಕನ್ಯಾನಾಂ ಗೌರೀಪೂಜಾರ್ಥಮುತ್ತಮಂ ।
ಮುಕ್ತಾಹಾರಸ್ತ್ವಯಾ ದೇಯಸ್ತಾರತಾರಾಮಲೋ ನೃಪ ॥೭೪॥

ವಾಜಿಸ್ಕಂಧೇಽಪಿ ತಿಷ್ಠಂತಿ ಮುಕ್ತಾಗುಚ್ಛಾಸ್ಸಹಸ್ರಶಃ ।
ತೇಷ್ವೇಕೋ ವಾ ಪ್ರದಾತವ್ಯೋ ಮುಕ್ತಾಗುಚ್ಛೋ ಮನೋಹರಃ ॥೭೫॥

ಮುಕ್ತಾಫಲಾಲಂಕೃತಾಯಾಶ್ಶಿವಾಯಾಶ್ಚ ವಿಲೋಕನೇ ।
ಪ್ರವೃತ್ತಂ ಮೇ ಮನೋ ರಾಜಂಸ್ತತ್ಫಲಂ ಶ್ರೂಯತೇ ಮಯಾ ॥೭೬॥

ಮುಕ್ತಾಹಾರಾದಿಭಿರ್ಗೌರೀಂ ಯಃ ಪೂಜಯತಿ ಸಾದರಂ ।
ಸ ಮುಕ್ತಾಯಾನಮಾಸಾದ್ಯ ಪ್ರಯಾತಿ ಹರಮಂದಿರಂ ॥೭೭॥

ರತ್ನಾಭರಣಸಂಯುಕ್ತಾಮುಮಾಂ ಶಂಕರವಲ್ಲಭಾಂ ।
ದೃಷ್ಟ್ವಾ ರಾಜ್ಯಮವಾಪ್ನೋತಿ ಭೋಗೇಚ್ಛಾಯಾಮಿತಿ ಶ್ರುತಂ ॥೭೮॥

ನಾವು ಮುನಿಕನ್ಯೆಯರು, ನಮಗೆ ಉತ್ತಮವಾದ ಪೂಜಾಸಾಮಗ್ರಿಗಳು ಎಲ್ಲಿಂದ ಬರಬೇಕು? ಅವುಗಳನ್ನು ಸಂಪಾದಿಸಲು ನಮ್ಮ ಹತ್ತಿರ ಹಣವೂ ಇರುವುದಿಲ್ಲ. ಕೇವಲ ಒಣಗಿದ ತರಗು, ಬಾಡಿದ ಕಾಡುಪುಷ್ಪ ಇವುಗಳಿಂದಲೇ ಪೂಜಿಸಿದ್ದೇವೆ ಆದರೆ ರಾಜನೇ, ಗೌರೀಪೂಜೆಗಾಗಿ ನಕ್ಷತ್ರಗಳಂತೆ ಮಿರುಗುವ ಮುಕ್ತಾಹಾರವನ್ನು ಕೊಡು .||೭೩-೭೪||

ನಿನ್ನ ಕುದುರೆಯ ಭುಜದ ಮೇಲೂ ಅನೇಕ ಮುತ್ತಿನ ಗೊಂಚಲುಗಳಿರುವುವು. ಅವುಗಳಲ್ಲಾದರೂ ಒಂದು ಗೊಂಚಲನ್ನು ಪೂಜೆಗಾಗಿ ಕೊಟ್ಟು ಅನುಗ್ರಹಿಸು. ||೭೫||

ಗೌರಿಗೆ ಮುತ್ತುಗಳಿಂದ ಅಲಂಕಾರಮಾಡಿ ದರ್ಶನಮಾಡಿದರೆ ಅನಂತ ಫಲಗಳು ದೊರೆಯುವುವೆಂದು ನಾನು ಕೇಳಿರುವೆನು. ಆದುದರಿಂದ ಅಂಥ ಸೇವೆಯನ್ನು ಸಲ್ಲಿಸಿದೇವಿಯ ದರ್ಶನವನ್ನು ಮಾಡಬೇಕೆಂದು ನನ್ನ ಮನಸ್ಸು ಬಹಳ ಆಸೆಪಡುತ್ತಿದೆ. ||೭೬||

ಮುತ್ತಿನ ಹಾರಗಳಿಂದ ಗೌರಿಯನ್ನು ಅಲಂಕರಿಸಿ ಭಕ್ತಿಯಿಂದ ಪೂಜಿಸಿದರೆ ಮುತ್ತಿನ ವಾಹನವೂ ಕಾಲಾಂತ್ಯದಲ್ಲಿ ಕೈಲಾಸವೂ ಲಭಿಸುವುದು. ಹಾಗೆ ಪೂಜಿಸಿದವನು ಮುತ್ತಿನ ಯಾನವನ್ನೇರಿಕೊಂಡು ಶಿವಸನ್ನಿಧಿಗೆ ಹೋಗುವನು.

ಅಲಂಕೃತಾಂ ಶಿವಾಂ ದೃಷ್ಟ್ವಾ ಗೌರೀಂ ಹಾರಾದಿಭಿರ್ಮುದಾ ।
ವಿರಕ್ತೋಽಪಿ ವಿಮುಕ್ತಃ ಸ್ಯಾದ್ಘೋರಸಂಸಾರಬಂಧನಾತ್ ॥೭೯॥

ಹಾರೈರಭ್ಯರ್ಚಿತಾ ಗೌರೀ ಸ್ವಸ್ವಾಭೀಷ್ಟಫಲಪ್ರದಾ ।
ಸುವರ್ಣಾಭರಣಪ್ರೀತಾ ನಿರ್ವಾಣಮಪಿ ದಾಸ್ಯತಿ ॥೮೦॥

ಸರ್ವಸೌಭಾಗ್ಯಸಂಪನ್ನಾ ಸಾ ಗೌರೀ ಭವವಲ್ಲಭಾ ।
ಗೃಹ್ಣಾತಿ ಭಕ್ತದತ್ತಾನಿ ಫಲಂ ದಾತುಂ ಹಿ ಕೇವಲಂ ॥೮೧॥

ತಸ್ಯಾಃ ಪ್ರೀತಿರ್ಧೀರಹಾರಪ್ರದಾನೇ
ಕಾಪಿ ಸ್ಯಾದಿತ್ಯೇವ ಯಾಚ್ಞಾ ಕೃತಾಪಿ ।
ಅನ್ಯಥಾ ಚೇತ್ಸ ತದಾ ಸಾರ್ಥಕಂ ತೇ
ಭಾಗ್ಯಂ ನೋ ಚೇದಸ್ತು ಕಿಂ ತೇನ ಕೃತ್ಯಂ ॥೮೨॥

ಶಿವಾರ್ಧಾಂಗಿನಿಯಾದ ಗೌರಿಯನ್ನು ಯಾರು ರತ್ನಾಭರಣಗಳಿಂದ ಅಲಂಕರಿಸಿ ಸಂದರ್ಶನಮಾಡುವರೋ, ಅವರು ಸಕಲ ವಿಧವಾದ ರಾಜ್ಯಭೋಗಗಳನ್ನೂ ಪಡೆಯುವರೆಂದು ಹೇಳುವರು. ||೭೭-೭೮||

ಯಾರು ಇತರ ಆಭರಣಗಳಿಂದಲೂ ಮುಕ್ತಾಹಾರಗಳಿಂದಲೂ ಗೌರಿಯನ್ನು ಅಲಂಕರಿಸಿ ಸಂದರ್ಶನಮಾಡುವರೋ ಅವರು ವಿರಕ್ತರೂ ಈ ಘೋರವಾದ ಸಂಸಾರದುಃಖಬಂಧನದಿಂದ ಮುಕ್ತರೂ ಆಗುವರು. ||೭೯||

ಗೌರಿಯು ಸ್ವತಃ ಅಷ್ಟೈಶ್ವರ್ಯಸಮನ್ವಿತಳಾಗಿದ್ದರೂ ಭಕ್ತರು ಆದರದಿಂದ ಅರ್ಪಿಸಿದ ಅಲಂಕಾರ ಮತ್ತು ಆಭರಣ ಇವುಗಳನ್ನು ಸ್ವೀಕರಿಸಿ ಸಂತುಷ್ಟಳಾಗುವಳು. ಆ ದೇವಿಯು ಅತ್ಯಂತ ಪ್ರಸನ್ನಳಾದರೆ ಮೋಕ್ಷವನ್ನೂ ಸಹ ದಯಪಾಲಿಸುವಳು. ದೇವಿಯು ಕೇವಲ ಫಲವನ್ನು ಅನುಗ್ರಹಿಸುವುದಕ್ಕಾಗಿಯೇ ಭಕ್ತರ ಸೇವೆಯನ್ನೂ ಪೂಜೆಯನ್ನೂ ಅವರು ಅರ್ಪಿಸಿದ ವಸ್ತುಗಳನ್ನೂ ಸ್ವೀಕರಿಸುವಳು. ||೮೦-೮೧||

ಮುತ್ತಿನಮಾಲೆ ಮುಂತಾದ ಆಭರಣಗಳನ್ನು ಅರ್ಪಿಸಿದರೆ ಗೌರಿಯು ಸಂತುಷ್ಟಳಾಗುವಳೆಂದು ಭಾವಿಸಿ ಅದೇ ಪೂಜೆಗಾಗಿಯೇ ನಿನ್ನಿಂದ ಮುಕ್ತಾಹಾರವನ್ನು ಬೇಡುತ್ತಿದ್ದೇನೆ. ಈ ರೀತಿ ಗೌರಿಪೂಜೆಯಲ್ಲಿ ನಿನ್ನ ರತ್ನಹಾರವು ಸದ್ವಿನಿಯೋಗವಾದರೆ ಸಾರ್ಥಕವಾದಂತಾಗುವುದಿಲ್ಲವೇ ? ನಿನ್ನ ಭಾಗ್ಯವೂ

ಇತಿ ತದ್ವಚನಂ ಶ್ರುತ್ವಾ ಕೃತ್ವಾ ತದವಧೀರಣಾಂ ।
ಯಯೌ ವಾಜಿನಮಾರುಹ್ಯ ತದಾ ಸರ್ಪಸ್ಸಮಾಗತಃ ॥೮೩॥

ಕೋಽಪಿ ಕೋಟರಮಾರ್ಗೇಣ ರಾಜಕಂಠಮುಪಾಗತಃ ।
ತೇನ ದಷ್ಟಸ್ಸ ಭೂಪಾಲೋ ಮೃತಸ್ಸಾಶ್ವೋ ಮಹಾವನೇ ॥೮೪॥

ತತಃ ಪರಂ ತು ತದ್ರಾಷ್ಟ್ರಂ ತತ್ರ ತತ್ರ ಲಯಂ ಗತಂ ।
ಸೈನ್ಯಂ ಚ ತನ್ಮೃತಂ ಸರ್ವಂ ಗಜಾಶ್ವಾದಿಕುಲಂ ತಥಾ ॥೮೫॥

ತಸ್ಮಾದ್ಭಾಗ್ಯಮಪಿ ಪ್ರಾಪ್ಯ ದಾನಪಾತ್ರಮನುತ್ತಮಂ ।
ನ ದದಾತಿ ಧನಂ ಯಸ್ತು ಸ ವಿನಶ್ಯತಿ ಸರ್ವಥಾ ॥೮೬॥

ಪುಣ್ಯಕಾರ್ಯಗಳಲ್ಲಿ ಉಪಯುಕ್ತವಾಗಬೇಕಷ್ಟೆ. ಹಾಗಿಲ್ಲದೇ ಪುಣ್ಯಕಾರ್ಯಕ್ಕೆ ಬಾರದ ಭಾಗ್ಯದಿಂದ ಪ್ರಯೋಜನವೇನು?" ||೮೨||

ಆ ಕನ್ಯೆಯು ಈ ರೀತಿ ಕೇಳಲು ಪರಂತಪರಾಜನು ಆಕೆಯ ಮಾತನ್ನು ತಿರಸ್ಕರಿಸಿ ಕೂಡಲೇ ಅಲ್ಲಿಂದ ಹೊರಟುಹೋದನು. ಕುದುರೆಯನ್ನೇರಿ ಆತನು ಅಡವಿಯಲ್ಲಿ ಬರುತ್ತಿದ್ದಾಗ ಹತ್ತಿರದಲ್ಲೇ ಇದ್ದ ಒಂದು ಪೊಟರೆಯಿಂದ ಸರ್ಪವು ಈತನ ಬೆನ್ನುಹತ್ತಿತು. ರಾಜನು ಎಷ್ಟು ಪ್ರಯತ್ನಪಟ್ಟರೂ ಆದರ ಕೈಯ್ಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಸರ್ಪವು ಆತನ ಕತ್ತಿಗೆ ಸುತ್ತಿಕೊಂಡು ಕಚ್ಚಿಯೇ ಬಿಟ್ಟಿತು. ಆ ಕೂಡಲೇ ವಿಷವ್ಯಾಪನೆಯಾಗಿ ಆ ರಾಜನು ಅಲ್ಲಿಯೇ ಮೃತನಾದನು. ||೮೩-೮೪||

ಆ ರಾಜನು ಕಷ್ಟಪಟ್ಟು ಸಂಪಾದಿಸಿದ ರಾಜ್ಯವೆಲ್ಲವೂ ಇದ್ದಕ್ಕಿದ್ದಂತೆಯೇ ನಾಶವಾಗುತ್ತ ಬಂದಿತು. ಆತನ ಸೈನ್ಯವೂ ದಿನೇ ದಿನೇ ಹಾಳಾಗಿ ಹೋಯಿತು. ಸಕಲ ಧನಕನಕ ವಸ್ತುವಾಹನಗಳೂ ಹೇಳಲು ಹೆಸರಿಲ್ಲದಂತೆ ಎಲ್ಲವೂ ನಾಶವಾದವು. ||೮೫||

ಆದುದರಿಂದ ಎಲೈ ಸಮುದ್ರರಾಜನೇ! ನೀನೂ ದಾನಗಳನ್ನು ಮಾಡಬೇಕು. ಯಾವನು ಬೇಕಾದಷ್ಟು ಭಾಗ್ಯಸಂಪತ್ತುಗಳನ್ನು ಹೊಂದಿದ್ದರೂ ಯೋಗ್ಯನಾದ ದಾನಪಾತ್ರನು ದೊರೆತಾಗ ದ್ರವ್ಯವನ್ನು ದಾನವಾಗಿ ಕೊಡುವುದಿಲ್ಲವೋ ಅಂತಹವನು ಖಂಡಿತವಾಗಿಯೂ ನಾಶವನ್ನೇ ಹೊಂದುವನು. ||೮೬||

ಅತ್ಯುತ್ಕೃಷ್ಟಸ್ಯ ಭಾಗ್ಯಸ್ಯ ಫಲಂ ಖಲು ತದೇವ ಯತ್ ।
ಸತ್ಪಾತ್ರದಾನಮನ್ಯತ್ತು ವಿಫಲತ್ವೇನ ಕೀರ್ತಿತಂ ॥೮೭॥

ದೇಯಂ ದುರ್ಲಭಮೇವಾದೌ ದಾನಪಾತ್ರಂ ಚ ದುರ್ಲಭಂ ।
ದಾತೃತ್ವಮಪಿ ಲೋಕೇಽಸ್ಮಿನ್ ಸುತರಾಮಪಿ ದುರ್ಲಭಂ ॥೮೮॥

ಧನೇ ಸತಿ ಮಯಾ ದೇಯಂ ಧನಮಿತ್ಯಪಿ ಕೇಚನ ।
ಪ್ರಾಪ್ತೇ ಧನೇ ನ ದಾನೇಚ್ಛಾಂ ಕುರ್ವಂತ್ಯತ್ಯಂತಲೋಭತಃ ॥೮೯॥

ಭಾಗ್ಯವಂತಃ ಪ್ರಯಚ್ಛಂತಿ ಧನಂ ಪಾತ್ರೇ ಸಮಾಗತೇ ।
ಅಭಾಗ್ಯಾ ನ ಪ್ರಯಚ್ಛಂತಿ ತದಭಾಗ್ಯಮದಾನತಃ ॥೯೦॥

ಯೋಗ್ಯನಾದ ಪಾತ್ರನನ್ನು ಕರೆದು ದಾನಮಾಡುವುದೇ ಉತ್ತಮ ಭಾಗ್ಯಕ್ಕೆ ಮುಖ್ಯವಾದ ಫಲ. ಅದರಿಂದಲೇ ಸಾರ್ಥಕತೆಯುಂಟಾಗುತ್ತದೆ. ಏಕೆಂದರೆ ದಾನದಿಂದ ಭಾಗ್ಯವು ಪುನಃ ಅಭಿವೃದ್ಧಿಯಾಗುವುದು. ಮತ್ತಿತರ ಭೋಗ ವಿಲಾಸಗಳನ್ನು ಅನುಭವಿಸುವುದು ಭಾಗ್ಯಕ್ಕೆ ಸಾರ್ಥಕತೆಯನ್ನುಂಟುಮಾಡುವುದಿಲ್ಲ. ಏಕೆಂದರೆ ಐಶ್ವರ್ಯವನ್ನು ಭೋಗಿಸುವುದರಿಂದ ಭಾಗ್ಯವು ಅಭಿವೃದ್ಧಿಹೊಂದುವುದಿಲ್ಲ. ॥೮೭॥

ಮೊದಲನೆಯದಾಗಿ ದಾನಮಾಡಲು ದ್ರವ್ಯವಿರುವುದೇ ಕಷ್ಟ. ಮತ್ತೆ ಅದರಲ್ಲೂ ಸತ್ಪಾತ್ರನು ದೊರಕುವುದು ಅತ್ಯಂತ ಕಷ್ಟ. ಹೀಗೆ ಈ ಪದಾರ್ಥಗಳೆಲ್ಲವೂ ಅತ್ಯಮೋಘವಾಗಿರುವುದರಿಂದ ದಾತೃತ್ವವು ಲಭಿಸಿ ದಾನವು ನಡೆದರೆ ಅದೇ ಪರಮಪುಣ್ಯಕಾರಣವಾಗುವುದು. ॥೮೮॥

ಪ್ರಪಂಚದಲ್ಲಿ ಎಷ್ಟೋ ಜನರು ತಮಗೆ ಧನವು ಲಭಿಸಿದರೆ ತಾವು ದಾನಮಾಡುವರೆಂದು ಮೊದಲು ಹೇಳಿಕೊಳ್ಳುವರು. ಆದರೆ ಅಕಸ್ಮಾತ್ ಧನವು ಪ್ರಾಪ್ತವಾದರೆ ಆಗ ದಾನವೆಂಬ ಸುದ್ದಿಯನ್ನೇ ಎತ್ತುವುದಿಲ್ಲ. ಆ ಧನದ ಮೇಲಿನ ಲೋಭದಿಂದ ಕಿಂಚಿತ್ತೂ ದಾನಮಾಡುವುದಿಲ್ಲ. ಇದಕ್ಕೆ ಲೋಭವೇ ಕಾರಣ. ॥೮೯॥

ವಿವೇಕಿಗಳಾದ ಭಾಗ್ಯಶಾಲಿಗಳು ಯೋಗ್ಯನಾದ ಪಾತ್ರನು ಸಿಕ್ಕಿದಾಗಲೆಲ್ಲಾ ಧನಧಾನ್ಯಗಳನ್ನು ಅವನಿಗೆ ಅರ್ಪಿಸುವರು. ಭಾಗ್ಯಹೀನರಾದವರು ಮಾತ್ರ ದಾನ ಕೊಡುವುದಿಲ್ಲ. ಹಾಗೆ ದಾನಮಾಡದೇ ಇರುವುದರಿಂದಲೇ ಅವರಿಗೆ ದಾರಿದ್ರ್ಯವು ಹೆಚ್ಚುವುದು. ॥೯೦॥

ಅದಾನಾದ್ದರಿದ್ರೋ ಭವತ್ಯೇವ ಹಾರಂ
ಪರಂ ಪಾತ್ರಮಾಸಾದ್ಯ ಮೃತ್ಯುಂ ಪ್ರಯಾತಿ ।
ಪುನಸ್ಸ್ಯಾದ್ದರಿದ್ರಃ ಪುನರ್ಮೃತ್ಯುಮೇತೀ
ತ್ಯವಶ್ಯಂ ದರಿದ್ರೋ ಭವತ್ಯೇವ ಹೀನಃ ॥೯೧॥

ಸ್ವಶಕ್ತ್ಯಾ ದೇಯಮಲ್ಪಂ ವಾ ಸಂಪಾದ್ಯಾಪಿ ಸ್ವಶಕ್ತಿತಃ ।
ದುರ್ಮುಖಾಸ್ತೇ ಭವಂತ್ಯೇವ ಧನದಾನಪರಾಙ್ಮುಖಾಃ ॥೯೨॥

ಪುರಾ ಕಶ್ಚಿದಭೂದ್ವಿಪ್ರಃ ಕಣಯಾಚನತತ್ಪರಃ ।
ಸ ಜೀವತಿ ಕುಟುಂಬೇನ ಕಷ್ಟೈಃ ಕ್ಲೇಶಸಮಾರ್ಜಿತೈಃ ॥೯೩॥

ಸತ್ಪಾತ್ರನಾದ ಈಶ್ವರ ಭಕ್ತನು ಬಂದು ಕೇಳಿದಾಗಲೂ ಯಾವನು ದಾನ ಕೊಡುವುದಿಲ್ಲವೋ ಆತನು ಕ್ರೂರನಾದ ಮೃತ್ಯುವಿಗೆ ತುತ್ತಾಗುವನು. ಆಗ ಯಾತನೆಗಳನ್ನು ಅನುಭವಿಸಿದ ಬಳಿಕ ಮತ್ತೆ ದುಃಖಗಳನ್ನನುಭವಿಸಲು ಈ ಸಂಸಾರದಲ್ಲಿ ದರಿದ್ರನಾಗಿ ಹುಟ್ಟುವನು. ಅನಂತರ ಮತ್ತೆ ಮರಣ ಹೊಂದುವನು. ಪುನಃ ಹೀನನಾಗಿಯೋ ಕಡುದರಿದ್ರನಾಗಿಯೋ ಹುಟ್ಟುವನು. ಹೀಗೆ ಕೃಪಣನು ಈ ಸಂಸಾರದಲ್ಲಿ ಹುಟ್ಟುಸಾವುಗಳ ದುಃಖಗಳನ್ನು ಅನುಭವಿಸುತ್ತಾ ಭ್ರಮಿಸುತ್ತಲೇ ಇರುವನು. ॥೯೧॥

ದಾನಧರ್ಮಗಳನ್ನು ಮಾಡುವುದಕ್ಕಾಗಿಯೇ ಮನುಷ್ಯನು ಸ್ವಸಾಮರ್ಥ್ಯದಿಂದ ಧನವನ್ನು ಸಂಪಾದಿಸಬೇಕು. ತನಗೆ ಅಲ್ಪಧನವೇ ಪ್ರಾಪ್ತವಾಗಿದ್ದರೂ ಅದರಲ್ಲಿ ಅಲ್ಪವನ್ನೇ ಆದರೂ ತನ್ನ ಶಕ್ತಿಗೆ ಅನುಗುಣವಾಗಿ ದಾನಮಾಡಬೇಕು. ಯಾರು ದಾನಧರ್ಮಗಳನ್ನು ಮಾಡುವುದಿಲ್ಲವೋ ಅವರು ದುರ್ಮುಖರೆಂದೆನಿಸಿಕೊಳ್ಳುವರು. ಕೃಪಣರ ಮುಖದರ್ಶನವು ಅಮಂಗಳಕಾರಿಯಾದುದು. ॥೯೨॥

ಎಲೈ ಸಮುದ್ರರಾಜನೇ, ಇದೇ ವಿಚಾರದಲ್ಲಿ ಮತ್ತೊಂದು ಇತಿಹಾಸವನ್ನು ಹೇಳುವೆನು ಕೇಳು. ಪೂರ್ವಕಾಲದಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಅವನು ಸುಗ್ಗಿಯ ಕಾಲದಲ್ಲಿ ಕಣಗಳಿಗೆ ಹೋಗಿ ಧಾನ್ಯಗಳನ್ನು ಯಾಚಿಸುತ್ತಿದ್ದನು. ಇದೇ ಅವನ ಉಪಜೀವಿಕೆಯಾಗಿದ್ದಿತು. ಬಹಳ ಕಷ್ಟಗಳನ್ನನುಭವಿಸಿ ಭಿಕ್ಷೆಯನ್ನು ಬೇಡಿ ಧಾನ್ಯವನ್ನು ಸಂಪಾದಿಸಿ ಅದರಿಂದಲೇ ತನ್ನ ಕುಟುಂಬದ ಜೀವಿಕೆಯನ್ನು ನಡೆಸುತ್ತಿದ್ದನು. ॥೯೩॥

ಸ ಕದಾಚಿತ್ಸ್ವದಾರೇಭ್ಯಃ ಕಣಾನ್ ದತ್ವಾ ವನಂ ಗತಃ ।
ಕಾಷ್ಠಾದ್ಯಾಹರಣಂ ಕರ್ತುಂ ತತ್ರ ದೃಷ್ಟಶ್ಶಿವಾರ್ಚಕಃ ॥೯೪॥

ತದಾ ವಾತ್ಯಾ ಸಮಾನೀತೋ ದವಭಸ್ಮಸಮಾವೃತಃ ।
ಸ ಕಾಷ್ಠಾಹರಣೋದ್ಯುಕ್ತೋ ದೃಷ್ಟಶ್ಶೈವೇನ ಸಾದರಂ ॥೯೫॥

ಸ ಪೃಷ್ಟಸ್ತೇನ ಶೈವೇನ ದವಭಸ್ಮಕಣಾವೃತಃ ।
ಶೈವೋಽಯಮಿತಿ ಬುದ್ಧ್ಯೈವ ಭಸ್ಮಭೂಷಿತವಿಗ್ರಹಃ ॥೯೬॥

॥ ಶೈವ ಉವಾಚ ॥

ಕಿಮೇವಂ ಖಿನ್ನಮಧುನಾ ಮುಖಂ ತವ ಮಹಾವನೇ ।
ಕಥಮಭ್ಯಾಗತಂ ಕೃತ್ಯಂ ಕಿಂ ವಾ ವದ ತವಾಧುನಾ ॥೯೭॥

ಹೀಗೆಯೇ ಆತನು ಕಾಲಕಳೆಯುತ್ತಿರಲು ಒಂದುದಿನ ಭಿಕ್ಷೆಬೇಡಿಕೊಂಡು ತಂದ ಅಲ್ಪ ಸ್ವಲ್ಪ ಧಾನ್ಯವನ್ನು ತನ್ನ ಹೆಂಡತಿಯ ಕೈಗೆ ಕೊಟ್ಟು ಅವನು ಸೌದೆಯನ್ನು ತರಲು ಕಾಡಿಗೆ ಹೋದನು. ಅಕಸ್ಮಾತ್ ಅಲ್ಲಿಯೇ ಇದ್ದ ಒಬ್ಬ ಶೈವಶ್ರೇಷ್ಠನೂ ಈತನ ದೃಷ್ಟಿಗೆ ಗೋಚರನಾದನು. ॥೯೪॥

ಅಕಸ್ಮಾತ್ ಆ ಕಾಡಿನಲ್ಲಿ ಬಿರುಗಾಳಿ ಎದ್ದಿತ್ತು. ಆ ಗಾಳಿಯು ಸೌದೆಯನ್ನು ತರಲು ಹೋದ ಬ್ರಾಹ್ಮಣನ ಮೇಲೆಲ್ಲಾ ಕಾಡುಗಿಚ್ಚಿಂದ ಉಂಟಾದ ಬೂದಿಯನ್ನು ತಂದು ಹಾಕಿದ್ದಿತು. ಹೀಗೆ ಆ ಭಸ್ಮದಿಂದಲೇ ಅಲಂಕೃತನಾದ ಆ ಬ್ರಾಹ್ಮಣನನ್ನು ಶಿವಭಕ್ತನೆಂದು ತಿಳಿದುಕೊಂಡು ಅರಣ್ಯದಲ್ಲಿದ್ದ ಶಿವಭಕ್ತನು ಅತಿಶಯವಾಗಿ ಆದರಿಸಿದನು. ॥೯೫॥

ಆ ಶೈವನು ಕಾಡುಗಿಚ್ಚಿನ ಬೂದಿಯಿಂದ ಆವೃತನಾದ ಆ ಬ್ರಾಹ್ಮಣನನ್ನು ಭಸ್ಮಾಲಂಕೃತನಾದ ಶಾಂಭವನೆಂದು ಭಾವಿಸಿ ಆದರದಿಂದ ಹೀಗೆ ಕೇಳಿದನು. ॥೯೬॥

ಶೈವವರ್ಯನೇ, ಇದೇನು ನಿನ್ನ ಮುಖವು ಖಿನ್ನವಾಗಿರುವುದು ? ಏತಕ್ಕೆ ಈ ಮಹಾರಣ್ಯಕ್ಕೆ ಬಂದಿರುವೆ ? ನಿನ್ನ ಕೆಲಸವೇನು ? ಪರಶಿವಭಕ್ತನಾದ ನಿನಗೆ ವ್ಯಸನವೇತಕ್ಕೆ ಉಂಟಾಗಿರುವುದು ? ಹೇಳು. ॥೯೭॥

ಇತಿ ತದ್ವಚನಂ ಶ್ರುತ್ವಾ ತಂ ಪ್ರಣಮ್ಯ ಶಿವಾರ್ಚಕಂ ।
ಸ್ವರೂಪಂ ಜ್ಞಾಪಯಾಮಾಸ ತಸ್ಮೈ ತೇನ ಸುದುಃಖಿತಃ ॥೯೮॥

ತಮುವಾಚ ತತಃ ಪ್ರೀತ್ಯಾ ಕರ್ತವ್ಯಮಿದಮುಚ್ಯತೇ ।
ತ್ವಯಾ ಯತ್ನೇನ ದಾತವ್ಯಂ ಶೈವಾಯಾನ್ನಂ ವಿಶೇಷತಃ ॥೯೯॥

ಯದೇವ ಯಾಚ್ಞಯಾ ಲಬ್ಧಂ ತತ್ರ ಕಿಂಚಿತ್ಪ್ರಯತ್ನತಃ ।
ದೇಯಂ ತೇನ ಸಮೃದ್ಧಿಸ್ತೇ ಭವಿಷ್ಯತಿ ನ ಸಂಶಯಃ ॥೧೦೦॥

ನೈವಾನ್ನಪತಯೇ ದತ್ತಂ ಯೇನಾನ್ನಂ ಕಿಂಚಿದಾದರಾತ್ ।
ಸ ಭವತ್ಯೇವ ಸಹಸಾ ದರಿದ್ರೋ ನಾತ್ರ ಸಂಶಯಃ ॥೧೦೧॥

ಅನ್ನಂ ಹಾರಮುಖೇ ದೇಯಂ ಗ್ರಾಸಮಾತ್ರಮಪಿ ಪ್ರಿಯಂ ।
ತೇನ ತುಷ್ಟೋ ಮಹಾದೇವೋ ದೌರ್ಭಾಗ್ಯಂ ತೇನ ನಶ್ಯತಿ ॥೧೦೨॥

ಹೀಗೆಂದು ಶೈವನು ಪ್ರಶ್ನಿಸಲು ಆ ಬ್ರಾಹ್ಮಣನಿಗೆ ಮತ್ತೂ ದುಃಖವು ಉಕ್ಕಿಬಂದಿತು. ಅನಂತರ ಬ್ರಾಹ್ಮಣನು ನಿಧಾನವಾಗಿ ತನ್ನ ವಿದ್ಯಮಾನವನ್ನೂ ದಾರಿದ್ರ್ಯ ಮತ್ತು ಕಷ್ಟ ಇವುಗಳನ್ನೂ ಆ ಶೈವನಿಗೆ ವಿನಯದಿಂದ ಹೇಳಿದನು. ||೯೮||

ಬ್ರಾಹ್ಮಣನ ಕಷ್ಟಸ್ಥಿತಿಯನ್ನು ಕೇಳಿ ಆ ಶೈವನಿಗೂ ವಿಷಾದವುಂಟಾಯಿತು. ಆಗ ಶೈವನು ಪ್ರೀತಿಯಿಂದ ಕಷ್ಟಪರಿಹಾರೋಪಾಯವನ್ನು ಆತನಿಗೆ ಹೇಳಿದನು. ನೀನು ಮುಂದೆ ಒಳ್ಳೆಯ ಸ್ಥಿತಿಯನ್ನು ಪಡೆಯಬೇಕಾದರೆ ವಿಶೇಷವಾದ ಯತ್ನದಿಂದ ಶೈವರಿಗೆ ಅನ್ನದಾನ ಮಾಡಬೇಕು. ||೯೯||

ಭಿಕ್ಷಾವೃತ್ತಿಯಿಂದ ನಿನಗೆ ಎಷ್ಟೆಷ್ಟು ದೊರೆಯುವುದೋ ಆದರಿಂದಲೇ ಅಲ್ಪವನ್ನಾದರೂ ಪ್ರಯತ್ನಪುರಸ್ಸರವಾಗಿ ದಾನಮಾಡು. ಅದರಿಂದ ಮುಂದೆ ನಿನಗೆ ಸಂಪತ್ತು ಲಭಿಸುವುದು. ||೧೦೦||

ಯಾವನು ಅನ್ನಪತಿಯಾದ ಪರಮೇಶ್ವರನಿಗೆ ಸ್ವಲ್ಪ ಅನ್ನವನ್ನೂ ಕೂಡ ಅರ್ಪಿಸುವುದಿಲ್ಲವೋ ಆತನು ಖಂಡಿತವಾಗಿಯೂ ಕಡುದರಿದ್ರನಾಗುವನು. ||೧೦೧||

ಅನ್ನವನ್ನು ಪರಮೇಶ್ವರನಿಗೆ ಅರ್ಪಿಸಬೇಕಾದರೆ ಒಂದೇ ಒಂದು ತುತ್ತನ್ನಾದರೂ ಮೊದಲು ಸದಾ ಶಿವಭಕ್ತರಿಗೆ ಭೋಜನ ಮಾಡಿಸಬೇಕು.

ಯದಿ ಹಾರಮುಖೇ ದಾತುಂ ನ ಶಕ್ತಿಸ್ಸರ್ವಥಾ ತದಾ ।
ಅನ್ನಂ ಶಿವಾರ್ಪಣಂ ಕೃತ್ವಾ ಭೋಕ್ತವ್ಯಂ ನಿತ್ಯಮಾದರಾತ್ ॥೧೦೩॥

ಅನರ್ಪಿತಂ ಮಹೇಶಾಯ ಭುಂಕ್ತೇ ಯೋಽನ್ನಂ ಸ ಪಾಪಧೀಃ ।
ಪ್ರತಿಜನ್ಮನಿ ಪಾಪಿಷ್ಠೋ ದರಿದ್ರೋ ಭವತಿ ಧ್ರುವಂ ॥೧೦೪॥

ಅನ್ನಾನಾಂ ಪತಯೇ ನಮೋ ನಮ ಇತಿ ಸ್ಮೃತ್ವಾ ಪ್ರದೇಯಂ ಮುದಾ
ಶರ್ವಾಯಾನ್ನಮುದಾದರಂ ಚ ಪುರತಃ ಕೃತ್ವಾ ಪ್ರಣಮ್ಯಾದರಾತ್ ।
ತೇನಾನ್ನಾನಿ ಸಮೃದ್ಧಿಮೇತ್ಯ ಸದನೇ ತಿಷ್ಠಂತಿ ಯನ್ನಿಷ್ಠುರಾತ್
ತದ್ಗೇಹಾದ್ವಿನಿವೃತ್ಯ ಯಾಂತಿ ವಿಪಿನಂ ಯದ್ವಾ ತದನ್ಯಾಲಯಂ ॥೧೦೫॥

ಹಾಗಿದ್ದರೇ ಅದು ಪರಮೇಶ್ವರನಿಗೆ ತಲಪುವುದು ಮತ್ತು ಅದರಿಂದ ಶಿವನು ತೃಪ್ತನಾಗುವನು. ಸಕಲ ದೌರ್ಭಾಗ್ಯಗಳೂ ಇದರಿಂದಲೇ ನಾಶವಾಗುವುವು. ॥೧೦೨॥

ಹಾಗೆ ಈಶ್ವರಭಕ್ತರಿಗೆ ಭೋಜನವನ್ನು ಮಾಡಿಸಲು ಸರ್ವಥಾ ಸಾಧ್ಯವಾಗದಿದ್ದರೆ ಅನ್ನವನ್ನು ಶಿವಾರ್ಪಿತವೆಂದು ಸಂಕಲ್ಪಿಸಿ ಭಕ್ತಿಯಿಂದ ನಿವೇದನಮಾಡಿ ನಿತ್ಯವೂ ಅಂಥ ಶಿವನೈವೇದ್ಯವನ್ನೇ ಮಹಾಪ್ರಸಾದವೆಂದು ತಿಳಿದು ಊಟಮಾಡಬೇಕು. ॥೧೦೩॥

ಶಿವನಿಗೆ ನಿವೇದನಮಾಡದಿರುವ ಅನ್ನವನ್ನು ಯಾವ ಪಾಪಬುದ್ಧಿಯುಳ್ಳವನು ತಿನ್ನುವನೋ, ಆತನು ಪ್ರತಿಯೊಂದು ಜನ್ಮದಲ್ಲಿಯೂ ಪಾಪಿಷ್ಠನೂ ಕಡುದರಿದ್ರನೂ ಆಗಿ ಹುಟ್ಟುವನು; ಮತ್ತು ಮಹಾ ದುಃಖಗಳನ್ನೂ ಅನುಭವಿಸುವನು. ॥೧೦೪॥

ತಾನು ಸಂಪಾದಿಸಿರುವ ಅನ್ನವನ್ನು ಈಶ್ವರನೆದುರಿನಲ್ಲಿರಿಸಿ ಮೊದಲು ನಿವೇದನ ಮಾಡಬೇಕು. ಓ ಅನ್ನಪತಿಯೇ! ನಿನಗೆ ನಮಸ್ಕಾರ ಎಂದು ಧ್ಯಾನಿಸುತ್ತಾ ಭಕ್ತಿಯಿಂದ ನಮಸ್ಕರಿಸಿ ಅನ್ನನೈವೇದ್ಯವನ್ನು ಮಾಡುವೆನೆಂದು ಸಂಕಲ್ಪಿಸಿ ಅನ್ನವನ್ನೆಲ್ಲಾ ಈಶ್ವರನಿಗೆ ಮನಸಾ ಅರ್ಪಿಸಬೇಕು. ಹೀಗೆ ಯಾವನು ಮಾಡುವನೋ ಆತನ ಅನ್ನಸಂಪತ್ತು ದಿನೇ ದಿನೇ ಅಭಿವೃದ್ಧವಾಗುವುದು. ಆತನ ಮನೆಯನ್ನು ಬಿಟ್ಟು ಹಠದಿಂದ ಬೇರೆ ಕಡೆಗೆ ಹೋಗಬೇಕೆಂದಿದ್ದ ಎಲ್ಲಾ ಸಂಪತ್ತು ಆತನಲ್ಲಿಯೇ ನಿಲ್ಲುವುದು. ಮತ್ತು ಹೆಚ್ಚಾಗುವುದು. ॥೧೦೫॥

ಇತಿ ತದ್ವಚನಂ ಶ್ರುತ್ವಾ ತಮಾಹ ದ್ವಿಜಪುಂಗವಃ ।
ಕಿಮನ್ನಪತಿರೂಪಂ ಮೇ ವದೇತಿ ಪ್ರೀತಮಾನಸಃ ॥೧೦೬॥

॥ ಶಾಂಭವ ಉವಾಚ ॥

ರುದ್ರಾಧ್ಯಾಯೇನ ತದ್ರೂಪಂ ಕಥಂಚಿತ್ಸಮುದೀರಿತಂ ।
ತದೇವರೂಪಂ ವಿಜ್ಞೇಯಂ ತ್ವಯಾ ಗುರುಮುಖಾತ್ಫಲು ॥೧೦೭॥

ಶಿವರೂಪಮಿತಿ ಜ್ಞಾನಂ ಯದ್ಯಪ್ಯತ್ಯಂತದುರ್ಲಭಂ ।
ತಥಾಪ್ಯಭ್ಯಸನೇನೈವ ತಜ್ಜ್ಞಾನಂ ಚ ಭವಿಷ್ಯತಿ ॥೧೦೮॥

ಹರೋ ಹಾರಮುಖೇ ದತ್ತಮಾಹಾರಮತಿಸಾದರಂ ।
ಗೃಹ್ಣಾತಿ ದಾತುಮೇವಾದಾವ್ರದಾರಸ್ಸ ಸಹಸ್ರಧಾ ॥೧೦೯॥

ಈ ರೀತಿ ಶೈವನು ಉಪಾಯವನ್ನು ಉಪದೇಶಿಸಲು ಆ ಬ್ರಾಹ್ಮಣನಿಗೆ ಧೈರ್ಯವೂ ಆನಂದವೂ ಆಯಿತು. ಆಗ ಆ ಬ್ರಾಹ್ಮಣನು ಮತ್ತೆ ಪ್ರಶ್ನಿಸಿದನು. ಅನ್ನಪತಿ ಎಂದರೆ ಯಾರು? ಆತನ ಸ್ವರೂಪವೇನು? ಮಹಿಮೆ ಏನು? ಎಂಬುದನ್ನು ನನಗೆ ಹೇಳಬೇಕೆಂದು ಕೇಳಿಕೊಳ್ಳಲು ಆ ಶೈವನು ಹೀಗೆ ಹೇಳತೊಡಗಿದನು. ॥೧೦೬॥

"ಎಲೈ ಬ್ರಾಹ್ಮಣನೇ! ರುದ್ರಾಧ್ಯಾಯದಲ್ಲಿ ಆ ಅನ್ನಪತಿಯ ಸ್ವರೂಪವು ಸಾಧಾರಣವಾಗಿ ಪ್ರತಿಪಾದಿತವಾಗಿದೆ. ಅದೇ ಆತನ ಸ್ವರೂಪವೆಂದೂ ಅಲ್ಲಿ ಹೇಳಿರುವುದೇ ಮಹಿಮೆ ಎಂದೂ ತಿಳಿ. ಅವುಗಳೆಲ್ಲವನ್ನೂ ನೀನು ಗುರುಮುಖದಿಂದ ಚೆನ್ನಾಗಿ ಉಪದೇಶ ಪಡೆದುಕೊಂಡು ಮನನಮಾಡು. ॥೧೦೭॥

ಶಿವಸ್ವರೂಪಜ್ಞಾನವು ಎಷ್ಟೇ ಕಷ್ಟಪಟ್ಟರೂ ಸರಿಯಾಗಿ ಗೋಚರವಾಗುವುದಿಲ್ಲ. ಆ ಜ್ಞಾನವು ಅನುಭವಕ್ಕೆ ಬರುವುದು ಬಹಳ ಕಷ್ಟಸಾಧ್ಯ. ಆದರೂ ಆ ಜ್ಞಾನದ ಸಾಧಾರಣ ಆಕಾರವನ್ನು ಗುರುಮುಖದಿಂದ ತಿಳಿದುಕೊಂಡು ತದೇಕಭಾವನೆಯಿಂದ ಅನುಸಂಧಾನ ಮಾಡುತ್ತಿದ್ದರೆ ಅದರ ಮಹಿಮೆಯು ಆಗ ಅನುಭವಕ್ಕೆ ಬರುವುದು. ॥೧೦೮॥

ಪರಶಿವಭಕ್ತರಿಗೆ ಅರ್ಪಿಸಿದ ಅನ್ನದಿಂದ ಪರಮೇಶ್ವರನು ಸುಪ್ರೀತನಾಗುತ್ತಾನೆ. ಶೈವಸ್ವೀಕೃತವಾದದ್ದನ್ನೇ ಆತನು ಪ್ರೀತಿಯಿಂದ ಸ್ವೀಕರಿಸುತ್ತಾನೆ. ಭಕ್ತರಿಗೆ

ನ ತಥಾ ಗ್ರಾಹಕೋ ಲೋಕೇ ದಾತಾಪಿ ನ ಹರಾತ್ಪರಃ ।
ನ ಹರ್ತಾಪಿ ನ ಭರ್ತಾಪಿ ನ ಕರ್ತಾಪೀತಿ ಮನ್ಯತಾಂ ॥೧೧೦॥

ಸರ್ವಸೌಭಾಗ್ಯದಾತಾರಂ ಶಂಕರಂ ಲೋಕಶಂಕರಂ ।
ಗೌರೀಭರ್ತಾರಮಜ್ಞಾತ್ವಾ ದುಃಖಿತೋ ಮಾನವೋ ಭವೇತ್॥೧೧೧॥

ನ ಜಾನಂತ್ಯೇವ ಗೌರೀಶಂ ಮೋಹಪಾಶಸಮಾವೃತಾಃ ।
ಅತ ಏವ ಮಹದ್ದುಃಖಂ ಪ್ರಾಪ್ನುವಂತಿ ಪದೇ ಪದೇ ॥೧೧೨॥

ಕೇಚಿತ್ಸಾವದ್ಧನೋನ್ಮಾದಾದ್ವಿಸ್ಮರಂತಿ ಮಹೇಶ್ವರಂ ।
ವಿಸ್ಮರಂತಿ ಭ್ರಮಾತ್ಕೇಚಿನ್ಮಹಾಪಾತಕರಾಶಿಭಿಃ ॥೧೧೩॥

ವಿಶಾಲವಾದ ಸಂಪತ್ತನ್ನು ಅನುಗ್ರಹಿಸುವುದಕ್ಕಾಗಿಯೇ ಶಿವನು ಮೊದಲು ಅವರು ಅರ್ಪಿಸಿದ ವಸ್ತುವನ್ನು ಸ್ವೀಕರಿಸುವನು. ||೧೯||

ಪರಮೇಶ್ವರನೇ ಸರ್ವವಿಧದಲ್ಲಿಯೂ ಉತ್ತಮನು. ಅವನಂತೆ ಕೊಟ್ಟದ್ದನ್ನು ಸ್ವೀಕರಿಸುವವನೂ ಇಲ್ಲ. ಆತನ ಹಾಗೆ ದಾನಮಾಡುವವನೂ ಇಲ್ಲ. ಶಿವನಂತೆ ಸೃಷ್ಟಿ ಸ್ಥಿತಿ ಲಯಕಾರಿಯಾದವನು ಪ್ರಪಂಚದಲ್ಲಿ ಬೇರೆ ಯಾರೂ ಇಲ್ಲ. ||೧೧೦||

ಆ ಶಂಕರನು ಸಕಲ ಸೌಭಾಗ್ಯಗಳನ್ನು ಕೊಡುವನು. ಅವನೇ ಲೋಕ ಕಲ್ಯಾಣಕಾರಿಯು. ಹೀಗೆಂಬುದನ್ನು ತಿಳಿಯದೇ ಯಾವ ಮನುಷ್ಯನು ಶಿವಸೇವೆ ಯನ್ನು ಮಾಡುವುದಿಲ್ಲವೋ ಆತನು ಅನೇಕ ದುಃಖಗಳಿಗೀಡಾಗುವನು. ||೧೧೧||

ಮಮತೆ, ಮಾಯೆ, ಇವುಗಳಿಂದ ಆವೃತರಾಗಿ ಮೂಢರಾದವರು ಆ ಗೌರೀಪತಿಯ ಸ್ವರೂಪವನ್ನೂ ಮಹಿಮೆಯನ್ನೂ ತಿಳಿಯುವುದಿಲ್ಲ. ಆ ದೇವದೇವ ನನ್ನು ಭಜಿಸದಿರುವುದರಿಂದಲೇ ಅಂಥ ಮೂಢರು ಪದೇಪದೇ ದುಃಖವನ್ನು ಪಡೆಯು ವರು. ||೧೧೨||

ಪ್ರಪಂಚದಲ್ಲಿ ಅನೇಕರು ಅಪಾರೈಶ್ವರ್ಯಲಾಭದಿಂದ ಮತ್ತರಾಗಿ ಮಹೇಶ್ವರ ನನ್ನು ಮರೆಯುವರು. ಕೆಲವರಿಗೆ ಅವರ ಪಾಪದೋಷದಿಂದ ಭ್ರಮೆಯುಂಟಾಗಿ ಪರಮೇಶ್ವರನ ಸ್ಮೃತಿಯು ತಪ್ಪುವುದು. ಹೀಗೆ ಇವರು ಪರಮೇಶ್ವರನನ್ನು ಆರಾಧಿಸದೆ ಮಹಾ ಕಷ್ಟಗಳಿಗೆ ಸಿಲುಕುವರು. ||೧೧೩||

ಜ್ಞಾತ್ವಾ ಕಥಂಚಿದಾಲಸ್ಯಾನ್ನಾರಾಧಯತಿ ಕಶ್ಚನ ।
ಅಧಮಾಧಮತಾಂ ಪ್ರಾಪ್ಯ ದುಃಖಿತಸ್ಸ್ಯಾದಸಂಶಯಂ ॥೧೧೪॥

ಜಲೈರ್ಬಿಲ್ವದಳೈರ್ವಾಪಿ ಪೂಜಿತೋ ಗಿರಿಜಾಪತಿಃ ।
ದದಾತಿ ಪರಮಾಮೃದ್ಧಿಮಿತಿ ಧನ್ಯೈಃ ಪರಂ ಮಿತಃ ॥೧೧೫॥

ಅತಃ ಪ್ರಮಾದಮುತ್ಸೃಜ್ಯ ಶಾಂಗಂ ಲಿಂಗಂ ಸಮರ್ಚಯ ।
ನೈವೇದ್ಯಾನ್ನಾನಿ ತತ್ರೈವ ಭುಂಕ್ಷ್ವ ಚಿಂತಯ ಶಂಕರಂ ॥೧೧೬॥

ಪಾಪನಾಶೋ ಭವತ್ಯೇವ ಭವಾನೀವಲ್ಲಭೇ ಸ್ಮೃತೇ ।
ತತಃಪರಂ ಭಾಗ್ಯವೃದ್ಧಿರ್ಭವತ್ಯೇವ ಪದೇಪದೇ ॥೧೧೭॥

ಕೆಲವರು ಆ ಮಹಾದೇವನ ಸ್ವರೂಪ ಜ್ಞಾನವನ್ನು ಸ್ವಲ್ಪ ತಿಳಿದಿದ್ದರೂ ಆತನ ಮಹಿಮೆಯ ಪಾರಮ್ಯವನ್ನು ಅರಿತಿದ್ದರೂ ಉದಾಸೀನತೆಯಿಂದ ಶಿವನನ್ನು ಆರಾಧಿಸುವುದಿಲ್ಲ. ಅಂತಹವರು ಮಹಾನೀಚರಾಗಿ ದುಃಸ್ಥಿತಿಯನ್ನು ಹೊಂದುವರಲ್ಲದೇ ಅನೇಕ ದುಃಖಯಾತನೆಗಳನ್ನೂ ಅನುಭವಿಸುವರು. ||೧೧೪||

ಗಿರಿಜಾರಮಣನನ್ನು ಕೇವಲ ಜಲದಿಂದ ಬಿಲ್ವದಳಗಳಿಂದ ಅರ್ಚಿಸಿದರೂ ಸುಪ್ರೀತನಾಗಿ ಉತ್ತಮವಾದ ಐಶ್ವರ್ಯವನ್ನು ಅನುಗ್ರಹಿಸುವನೆಂದು ಜ್ಞಾನಿಗಳು ಆತನು ಪ್ರಮಾಣಪೂರ್ವಕವಾಗಿ ಸಿದ್ಧಾಂತ ಮಾಡಿರುತ್ತಾರೆ. ||೧೧೫||

ಆದುದರಿಂದ ಎಲೈ ಬ್ರಾಹ್ಮಣನೇ! ಇನ್ನು ಮುಂದೆ ಅಜ್ಞಾನಾಲಸ್ಯಗಳನ್ನು ಬಿಟ್ಟು ಶಿವಲಿಂಗವನ್ನು ನಿಯಮದಿಂದ ಪೂಜಿಸು. ಶಿವನಿವೇದಿತವಾದ ಅನ್ನವನ್ನು ಶಿವಸನ್ನಿಧಾನದಲ್ಲಿಯೇ ಶಿವನನ್ನು ಧ್ಯಾನಿಸುತ್ತಾ ಭೋಜನ ಮಾಡು. ಸರ್ವದಾ ಶಿವಸ್ವರೂಪವನ್ನು ಆದರದಿಂದ ಅನುಸಂಧಾನ ಮಾಡುತ್ತಿರು. ||೧೧೬||

ಆ ಗಿರಿಜಾರಮಣನನ್ನೇ ಕುರಿತು ಚಿಂತನೆ ಮಾಡುತ್ತಿದ್ದರೆ ಮೊದಲು ದೌರ್ಭಾಗ್ಯಗಳೂ ಪಾಪಗಳೂ ನಾಶ ಹೊಂದುವುವು. ಅನಂತರ ಸುಕೃತಗಳೂ ಭಾಗ್ಯಗಳೂ ದಿನದಿಂದ ದಿನಕ್ಕೆ ಖಂಡಿತವಾಗಿಯೂ ಅಭಿವೃದ್ಧಿಯಾಗುವುವು. ||೧೧೭||

ಭಕ್ತ್ಯಾ ಪರಂ ಮಹೇಶಸ್ಯ ಭಜನಂ ಯದಿ ಜಾಯತೇ ।
ತದಾ ನ ಭಯಲೇಶೋಽಪಿ ಭವಭೂತಸಮುದ್ಭವಂ ॥೧೧೮॥

ಯಸ್ಮಾದ್ಭವತಿ ಭೂಮ್ಯೇಷಾ ಭೂತಾನ್ಯಪಿ ಭವಂತ್ಯಪಿ ।
ತಂ ಭವಂ ಭಾವನಾಲಭ್ಯಂ ಭಾವಯಾಶು ಭಯಾಪಹಂ ॥೧೧೯॥

ಇತಿ ತದ್ವಚನಂ ಶ್ರುತ್ವಾ ನತ್ವಾ ಚೈವೋಪಕಾರಿಣಂ ।
ಯಯೌ ಸ್ವಮಂದಿರಂ ವಿಪ್ರಃ ಸ್ಮರಂಸ್ತದ್ವಚನಾನ್ಯಪಿ ॥೧೨೦॥

ತತಃ ಪರಂ ಲಿಂಗಮೇಕಂ ತೇನ ಸಂಪಾದಿತಂ ನವಂ ।
ತತ್ರಾರ್ಚನಂ ಕೃತಂ ತೇನ ಬಿಲ್ವಪತ್ರಾದಿಸಾಧನೈಃ ॥೧೨೧॥

ಪರಮೇಶ್ವರನ ಭಜನೆಯನ್ನು ಸತತವೂ ಯಾವನು ಭಕ್ತಿಯಿಂದ ಮಾಡುತ್ತಾನೆಯೋ ಆತನಿಗೆ ಯಾವ ಭಯವೂ ಇರುವುದಿಲ್ಲ. ಈ ಸಂಸಾರ ತಾಪತ್ರಯಗಳ ಭಯವೂ ಆತನಿಗೆ ತಪ್ಪುವುದು. ॥೧೧೮॥

ಈ ಭೂಮಿಯೂ ಸಕಲ ಪ್ರಾಣಿವರ್ಗವೂ ಪರಮೇಶ್ವರನಿಂದಲೇ ಉತ್ಪನ್ನಗಿರುವುವು. ಅಂಥ ಪರಶಿವನು ಸುಲಭವಾಗಿ ನಮಗೆ ಗೋಚರನಾಗುವುದಿಲ್ಲ. ಸಾರ್ವಕಾಲಿಕವಾದ ಆತನ ಚಿಂತನದಿಂದಲೂ ಭಾವನಾವಿಶೇಷದಿಂದಲೂ ಪ್ರತ್ಯಕ್ಷೀಕರಿಸಿಕೊಂಡು ಧ್ಯಾನಿಸುತ್ತಿರು." ॥೧೧೯॥

ಈ ರೀತಿ ಹೇಳಿದ್ದನ್ನು ಕೇಳಿ ಬ್ರಾಹ್ಮಣನಿಗೆ ಅತ್ಯಂತ ಹರ್ಷವುಂಟಾಯಿತು. ಆತನು ತನ್ನ ದುಃಸ್ಥಿತಿಯನ್ನು ಹೋಗಲಾಡಿಸಿಕೊಳ್ಳಲು ಉಪಾಯವನ್ನು ಹೇಳಿ ಉಪಕಾರಮಾಡಿದ್ದಕ್ಕೆ ಆ ಶಿವಭಕ್ತನಿಗೆ ತನ್ನ ಕೃತಜ್ಞತೆಯನ್ನು ಪ್ರಕಟಿಸಿ ನಮಸ್ಕರಿಸಿದ ಬಳಿಕ ಆತನ ಮಾತನ್ನೇ ನೆನೆದುಕೊಳ್ಳುತ್ತಾ ತನ್ನ ಮನೆಗೆ ಹೋದನು. ॥೧೨೦॥

ಅನಂತರ ಆ ಬ್ರಾಹ್ಮಣನು ಒಂದು ಶಿವಲಿಂಗವನ್ನು ಸಂಪಾದಿಸಿದನು. ಆ ಶಿವಲಿಂಗಕ್ಕೆ ಬಿಲ್ವಪತ್ರೆಯೇ ಮೊದಲಾದ ಸಾಮಗ್ರಿಗಳಿಂದ ಭಕ್ತಿಪೂರ್ವಕವಾಗಿ ಅರ್ಚನೆಯನ್ನು ಮಾಡಲಾರಂಭಿಸಿದನು. ॥೧೨೧॥

ಯದನ್ನಮಾರ್ಜಿತಂ ಸ್ವೇನ ತತ್ಸರ್ವಮಪಿ ಸಾದರಂ ।
ನಿವೇದ್ಯ ಶಂಭವೇ ಭುಕ್ತ್ವಾ ಸ್ಥಿತಃ ಸ್ಮೃತ್ವಾ ಮಹೇಶ್ವರಂ ॥೧೨॥

ಏವಂ ಸಂವಸತಾ ತೇನ ರೇವಾತೀರೇ ಗತಂ ಕ್ವಚಿತ್ ।
ತತ್ತೀರೇ ಲಿಂಗಮಭ್ಯರ್ಚ್ಯ ಸ್ಥಿತೋ ಬಿಲ್ವದಳಾದಿಭಿಃ ॥೧೩॥

ತದಾನೀಮಾಗತಃ ಕಶ್ಚಿದ್ರಾಜಾ ಶಿವಪರಾಯಣಃ ।
ತೇನ ದೃಷ್ಟಸ್ಸ ವಿಪ್ರೋಽಪಿ ವನಭಸ್ಮವಿಭೂಷಣಃ ॥೧೪॥

ತತಃ ಪರಂ ತಮಾಗತ್ಯ ರಾಜಾ ಪ್ರಾಹ ಶಿವಾರ್ಚಕಂ ।
ಕೋಽಸಿ ಕುತ್ರ ಸ್ಥಿತಿಸ್ತತ್ರ ಕ್ವ ವಾ ತವ ಪರಿಗ್ರಹಃ ॥೧೫॥

ಕ್ವ ವಾ ವಿದ್ಯಾಸಮುಭವಃ ಕಥಮಭ್ಯರ್ಚ್ಯತೇ ಶಿವಃ ।
ಕಥಂ ಧ್ಯೇಯೋ ಮಹಾದೇವಸ್ತತ್ಸ್ವರೂಪಂ ಚ ಕೀದೃಶಂ ॥೧೬॥

ಆತನು ತಾನು ಸಂಪಾದಿಸಿದ ಅನ್ನವನ್ನೆಲ್ಲಾ ಮೊದಲು ಪರಮೇಶ್ವರನಿಗೆ ಭಕ್ತಿಯಿಂದ ನೈವೇದ್ಯಮಾಡಿದನು. ಅನಂತರ ಆ ಶಿವನೈವೇದ್ಯವನ್ನು ಆದರದಿಂದ ತಾನು ಭುಂಜಿಸಿ ಸತತವೂ ಶಿವನನ್ನೇ ಧ್ಯಾನಿಸುತ್ತಿದ್ದನು. ॥೧೨॥

ಹೀಗೆಯೇ ಆ ಬ್ರಾಹ್ಮಣನು ಅನೇಕ ದಿವಸಗಳ ವರೆಗೆ ಶಿವಾರಾಧನೆಯನ್ನು ಮಾಡುತ್ತಲೇ ಕಾಲ ಕಳೆದು, ಅನಂತರ ನರ್ಮದಾ ತೀರಕ್ಕೆ ಹೋಗಿ ಅಲ್ಲಿಯೂ ಶಿವಲಿಂಗಕ್ಕೆ ಬಿಲ್ವಾದಿಗಳಿಂದ ಪೂಜಿಸುತ್ತಾ ವಾಸಮಾಡತೊಡಗಿದನು. ॥೧೩॥

ಈ ವಿಪ್ರನು ಕಾಡುಭಸ್ಮವನ್ನೇ ಮೈಗೆಲ್ಲಾ ಹಚ್ಚಿಕೊಂಡು ಶಿವಾರಾಧನೆಯನ್ನು ಮಾಡುತ್ತಿರಲು ಒಂದು ದಿನ ಒಬ್ಬ ಶಿವಭಕ್ತನಾದ ರಾಜನು ಅಲ್ಲಿಗೆ ಬಂದನು. ॥೧೪॥

ಆಗಂತುಕನಾದ ರಾಜನು ಈ ಬ್ರಾಹ್ಮಣನ ಶಿವಾರಾಧನ ತತ್ಪರತೆಯನ್ನು ಕಂಡು ವಿಸ್ಮಯದಿಂದ, ಅಯ್ಯಾ, ನೀನು ಯಾರು? ನಿನ್ನ ವಾಸಸ್ಥಾನವು ಯಾವುದು? ನಿನಗೆ ಹೆಂಡತಿ, ಮನೆ, ಭೂಮಿಕಾಣಿಗಳಿರುತ್ತವೆಯೇ? ॥೧೫॥

ನೀನು ಎಲ್ಲಿ ವಿದ್ಯಾರ್ಜನೆಯನ್ನು ಮಾಡಿದೆ? ನಿನ್ನ ಶಿವಪೂಜೆಯ ಕ್ರಮವು ಯಾವುದು? ಆ ಪರಶಿವನ ಸ್ವರೂಪವು ಎಂಥದು? ಆತನನ್ನು ಹೇಗೆ ಆರಾಧಿಸುವುದು? ಧ್ಯಾನಮಾಡುವುದಾದರೂ ಹೇಗೆ? ॥೧೬॥

ಕಿಂ ತಜ್ಞಾನಫಲಂ ವಾ ಸ್ಯಾತ್ತದಜ್ಞಾನಫಲಂ ಚ ಕಿಂ ।
ತತ್ಸರ್ವಂ ವದ ಮೇ ವಿದ್ವನ್ ಶಾಂಭವಾಗ್ರೇಸರಾಧುನಾ ॥೧೨೭॥

ದುರ್ಲಭಶ್ಶಾಂಭವೋ ಲೋಕೇ ಶಿವಜ್ಞಾನಪರಾಯಣಃ ।
ರೇವಾತೀರಂ ದುರ್ಲಭಂ ಚ ಲಿಂಗಮತ್ಯಂತದುರ್ಲಭಂ ॥೧೨೮॥

ರೇವಾಲಿಂಗಸ್ಯ ಮಹಿಮಾ ತದರ್ಚನಫಲಂ ಚ ಕಿಂ ।
ಲಿಂಗಬೋಧಕದೇವೋಽಪಿ ತತ್ಪೂಜಾಬೋಧಕೋಽಪಿ ವಾ ॥೧೨೯॥

ವೈರಾಗ್ಯಂ ವಾ ಕಥಂ ಜಾತಂ ಕಿಂ ವಾ ತಸ್ಯ ಫಲಂ ವದ ।
ಇತಿ ಪೃಷ್ಟಸ್ಸ ರಾಜಾನಂ ಪ್ರಾಹ ವಿಪ್ರಸ್ಸ ಚಿಂತಯಾ ॥೧೩೦॥

ಆ ಶಿವನ ಸ್ವರೂಪವನ್ನು ತಿಳಿದುಕೊಂಡರೆ ಯಾವ ಫಲವು ಲಭಿಸುವುದು? ಅಥವಾ ಅದನ್ನು ತಿಳಿದುಕೊಳ್ಳದಿದ್ದರೆ ಏನಾಗುವುದು? ಇದೆಲ್ಲವನ್ನೂ ನನಗೆ ಹೇಳು. ಎಲೈ ಶಾಂಭವನೇ, ನೀನು ವಿದ್ವಾಂಸನಾಗಿರುವುದರಿಂದ ಎಲ್ಲಾ ವಿಷಯಗಳನ್ನೂ ತಿಳಿದವನಿದ್ದೀಯೆ. ನನಗೂ ಅವುಗಳನ್ನು ಬೋಧಿಸು. ॥೧೨೭॥

ಶಿವಸ್ವರೂಪವನ್ನೂ ಶಿವತತ್ವವನ್ನೂ ತಿಳಿದುಕೊಂಡಿರುವವನು ಪ್ರಪಂಚದಲ್ಲಿ ಅತ್ಯಂತ ವಿರಳ. ಅಂತಹವನು ದೊರೆಯುವುದೇ ಕಷ್ಟ. ಹಾಗೆಯೇ ಪವಿತ್ರವಾದ ನರ್ಮದಾ ತೀರ ಮತ್ತು ಶಿವಲಿಂಗ ಇವು ಸಹ ಪರಮೋತ್ಕೃಷ್ಟವಾದವುಗಳು. ಮತ್ತು ಅತ್ಯಂತ ದುರ್ಲಭಗಳು. ॥೧೨೮॥

ಎಲೈ ಬ್ರಾಹ್ಮಣನೇ, ನರ್ಮದಾಲಿಂಗವು ಪರಮೋತ್ಕೃಷ್ಟವಾದದ್ದೆಂದು ಕೇಳಿದ್ದೇನೆ. ಅದು ಹೇಗೆಂಬುದನ್ನು ನನಗೆ ವಿವರಿಸಿ ಹೇಳು. ಆ ಲಿಂಗಕ್ಕೆ ಅಧಿಷ್ಠಾನದೇವತೆ ಯಾರು? ಆ ಲಿಂಗವನ್ನು ಹೇಗೆ ಪೂಜಿಸಬೇಕು? ಆ ಪೂಜೆಯಿಂದ ಯಾವ ಫಲವು ದೊರೆಯುವುದು? ಇವುಗಳೆಲ್ಲವನ್ನೂ ನನಗೆ ತಿಳಿಸು. ನೀನು ಸಹ ಪರಮ ವಿರಾಗಿಯಾಗಿ ಶಿವಾರಾಧನೆಯಲ್ಲಿಯೇ ಆಸಕ್ತನಾಗಿದ್ದೀಯೆ. ಆ ವೈರಾಗ್ಯದ ಫಲವೇನು? ದಯೆಯಿಟ್ಟು ಎಲ್ಲವನ್ನೂ ತಿಳಿಸು. ಹೀಗೆಂದು ರಾಜನು ಪ್ರಶ್ನಿಸಲು ಆ ಬ್ರಾಹ್ಮಣನು ಧ್ಯಾನಪುರಸ್ಸರವಾಗಿ ಹೀಗೆ ಹೇಳಲಾರಂಭಿಸಿದನು. ॥೧೨೯-೧೩೦॥

॥ ವಿಪ್ರ ಉವಾಚ ॥

ಮಹೇಶತತ್ವಂ ನಿಗಮೈರ್ನ ಬುದ್ಧಂ
ವೇದ್ಯೈರ್ಮುನೀಂದ್ರೈರಪಿ ಸಿದ್ಧಸಂಘೈಃ ।
ತಜ್ಜ್ಞಾನವೇದಸ್ಯ ಕಥಂ ವದಾದ್ಯ
ಪ್ರತಾರಕತ್ವಂ ಚ ನ ಯುಕ್ತಮೇವ ॥೧೩೧॥

ಅನಂತವೇದಾಂತವಿಚಾರತಾಂತಾಃ
ಶಾಂತಾಃ ಪ್ರಜಾನಂತಿ ಮಹೇಶತತ್ವಂ ।
ಯಥಾಕಥಂಚಿತ್ಕಣಶೋ ಮಹೇಶಂ
ಪ್ರಸಾದಲೇಶೇ ಸತಿ ಪುಣ್ಯಲಭ್ಯೇ

ಲಿಂಗತತ್ವಂ ವಿದುರ್ಜ್ಞೇಯಂ ಲಿಂಗಪೂಜಾಫಲಂ ತಥಾ ।
ರೇವಾಸ್ವರೂಪಂ ಜ್ಞಾನಂ ಚ ದುರ್ಲಭಂ ಸುತರಾಮಪಿ ॥೧೩೩॥

ಎಲೈ ರಾಜನೇ, ಶಿವತತ್ವವು ಅತ್ಯಂತ ದುರ್ಗಮವಾದುದು. ಅದು ವೇದಗಳಿಗೂ ಸಹ ಗೋಚರವಾದುದಲ್ಲ. ಹಾಗೆಯೇ ಮಹಾ ಮಹಾ ಮುನಿಗಳೂ ಸಿದ್ಧವಿದ್ಯಾಧರರೂ ಸಹ ಸಂಪೂರ್ಣವಾಗಿ ಆ ಜ್ಞಾನವನ್ನು ಪಡೆದುಕೊಂಡಿಲ್ಲ. ಹೀಗಿರಲು ನನ್ನ ಪಾಡೇನು? ನಾನೇನನ್ನು ತಾನೆ ತಿಳಿಯಬಲ್ಲೆನು? ಏನನ್ನು ತಾನೇ ಹೇಳಬಲ್ಲೆನು? ಆ ಶಿವತತ್ವಜ್ಞಾನವನ್ನು ವಿವರಿಸಲು ನನಗೆ ಸಂಪೂರ್ಣ ಶಕ್ತಿಯಿದೆ ಎಂದು ಹೇಳುವುದು ಒಂದು ಮೋಸವೇ ಸರಿ. ನನಗೆ ಶಿವತತ್ತ್ವವೆಲ್ಲಾ ಗೊತ್ತಿದೆ ಎಂದು ಹೇಳಿಕೊಳ್ಳುವುದು ಯುಕ್ತವಾದುದಲ್ಲ. ॥೧೩೧॥

ಅಪಾರವಾದ ವೇದಾಂತವಿಚಾರಗಳನ್ನು ಮಹಾಪರಿಶ್ರಮದಿಂದ ಪರ್ಯಾಲೋಚಿಸುವ ಶಾಂತಚಿತ್ತರಾದ ಮುನಿಗಳೂ ಸಹ ಕೇವಲ ಆ ಪರಮೇಶ್ವರನ ಅನುಗ್ರಹದಿಂದಲೇ ಆ ಜ್ಞಾನವನ್ನು ಅಲ್ಪಾಲ್ಪವಾಗಿ ತಿಳಿದುಕೊಂಡಿರುತ್ತಾರೆ. ಆ ಮಹೇಶತತ್ವವನ್ನು ತಿಳಿಯಬೇಕಾದರೆ ಮಹಾಶ್ರಮಪಡಬೇಕಾಗುವುದಲ್ಲದೇ ಅಪಾರ ಪುಣ್ಯವೂ ಸಂಚಿತವಾಗಿರಬೇಕು. ಅಂತಹವರಿಗೆ ಮಾತ್ರವೇ ಅದು ಸಾಧ್ಯವಾಗುವುದು. ॥೧೩೨॥

ಈ ಶಿವತತ್ವಗಳು ದುರ್ಲಭವಾಗಿರುವಂತೆ ಪರಮ ಉತ್ಕೃಷ್ಟವೂ ಆಗಿರುವುದರಿಂದ ಅವುಗಳನ್ನು ಅವಶ್ಯ ತಿಳಿದುಕೊಳ್ಳಬೇಕೆಂದು ತಿಳಿದವರು ಹೇಳುವರು. ಶಿವ

ದುಜ್ಞೇ೯ಯ ಏವ ಗಿರಿಜಾರಮಣಪ್ರಭಾವಃ
ತಜ್ಜ್ಞಾನಮಸ್ಯ ನಿಗಮಾವಿಷಯಂ ಕಥಂ ವಾ ।
ದುಜ್ಞೇ೯ಯವಸ್ತುವಿಷಯಾನವಗಾಹನೇಽಪಿ
ನಾಸ್ಯಾಪರಾಧ ಇತಿ ಮೇ ಪ್ರತಿಭಾತಿ ರಾಜನ್ ॥೧೩೪॥

ಇತ್ಯಾಕರ್ಣ್ಯ ವಚಸ್ತಸ್ಯ ತಮುವಾಚ ಸ ಭೂಪತಿಃ ।
ಪೂಜಾಕ್ರಮಂ ವಾ ವದ ಮೇ ಲಿಂಗಸ್ಯೇತಿ ವಿಶೇಷತಃ ॥೧೩೫॥

ನ ಪೂಜಾಪಿ ಪರಿಜ್ಞಾತಾ ನ ಜ್ಞಾತೋಽಪಿ ಕ್ರಮೋ ಮಯಾ ।
ಬ್ರಹ್ಮಾದೀನಾಂ ಚ ತಜ್ಜ್ಞಾನಂ ದುರ್ಲಭಂ ಖಲು ವಸ್ತುತಃ ॥೧೩೬॥

ಲಿಂಗಸ್ವರೂಪ, ಶಿವಲಿಂಗಪೂಜಾತತ್ವ, ಶಿವಪೂಜಾಫಲತತ್ವ, ಮತ್ತು ರೇವಾನದಿಯ ಮಹಿಮೆ ಇವುಗಳನ್ನೂ ಎಷ್ಟೇ ಶ್ರಮದಿಂದಾದರೂ ತಿಳಿದುಕೊಳ್ಳಲು ಪ್ರಯತ್ನಿಸ ಬೇಕು. ||೧೩೩||

ಆದರೆ ನಾನು ಈವರೆಗೂ ಆ ಪರಮತತ್ವವನ್ನು ಪ್ರತ್ಯಕ್ಷೀಕರಿಸಿಕೊಂಡಿಲ್ಲ. ವೇದಗಳಿಗೂ ಅಗೋಚರವಾಗಿರುವ ಆ ಶಿವತತ್ವಜ್ಞಾನವು ಎಲ್ಲಿಯಾದರೂ ಸುಲಭ ವಾಗಿ ಸಿಕ್ಕುವುದೇ? ಅದು ಮಹಾ ದುರ್ಗಮವಲ್ಲವೆ! ಅಂಥ ದುಜ್ಞೇ೯ಯವಾದ ವಿಷಯವನ್ನು ತಿಳಿಯದಿದ್ದರೂ ನಾನು ನನ್ನಲ್ಲಿ ಅಪರಾಧವಾಗಿದೆ ಎಂದು ಎಣಿಸು ವುದಿಲ್ಲ. ಏಕೆಂದರೆ ಆ ತತ್ವವು ಅಂಥ ಮಹಾ ವೇದಗಳಿಗೂ ಮುನಿಗಳಿಗೂ ತಿಳಿಯದಿ ರುವಾಗ ನನ್ನಂಥ ಅಲ್ಪನಿಗೆ ಹೇಗೆ ತಿಳಿದೀತು? ಆದ್ದರಿಂದ ನಾನು ಆ ತತ್ವದ ವಿಷಯದಲ್ಲಿ ಕೇವಲ ಶ್ರದ್ಧಾಭಕ್ತಿಗಳನ್ನು ತಿಳಿದುಕೊಂಡು ಶಿವಾರಾಧನೆಯನ್ನು ಮಾತ್ರ ನನ್ನ ಕೈಲಾದ ಮಟ್ಟಿಗೂ ಮಾಡುತ್ತಿರುವೆನು. ||೧೩೪||

ಈರೀತಿಯಾಗಿ ಬ್ರಾಹ್ಮಣನು ಹೇಳಿದ್ದನ್ನು ಕೇಳಿ ಆ ರಾಜನು ತನಗೆ ಶಿವ ಲಿಂಗಾರ್ಚನೆಯ ಕ್ರಮವನ್ನಾದರೂ ವಿವರಿಸಿ ಹೇಳಬೇಕೆಂದು ಪುನಃ ಕೇಳಿಕೊಳ್ಳಲು ಆಗ ಆ ವಿಪ್ರನು ಈರೀತಿ ಹೇಳಿದನು. ||೧೩೫||

ರಾಜನೇ! ಯಥಾರ್ಥವಾಗಿ ಶಾಸ್ತ್ರೀಯವಾದ ಶಿವಪೂಜೆ ಯಾವುದು? ಆ ಪೂಜಾ ವಿಧಾನವು ಹೇಗೆ ಎಂಬುದೂ ನನಗೆ ಗೊತ್ತಿಲ್ಲ. ಆ ಪೂಜಾಕ್ರಮದ ಸಂಪೂರ್ಣಜ್ಞಾನವು ಬ್ರಹ್ಮಾದಿಗಳಿಗೂ ಸಹ ಇರಲಾರದೆಂದು ನನ್ನ ಊಹೆ. ||೧೩೬||

ತತ್ಪೂಜಾಜ್ಞಾನವಿರಹೇಽಪ್ಯೇವಂ ಕಿಂಚಿಜ್ಜಲಾದಿಕಂ ।
ದೇಯಂ ಲಿಂಗೇ ಪ್ರಯತ್ನೇನ ತಾವತಾ ಪಾತಕಕ್ಷಯಃ ॥೧೩೭॥

ದ್ವಿತ್ರಾಣಿ ಬಿಲ್ವಪತ್ರಾಣಿ ಕ್ಷಿಪ್ತಾನಿ ಶಿವಮಸ್ತಕೇ ।
ಅಭಕ್ತ್ಯಾಪಿ ಹರಂತ್ಯೇವ ಪಾತಕಾನಿ ಬಹೂನ್ಯಪಿ ॥೧೩೮॥

ಅಗ್ನಿರ್ದಾಹಕ ಏವ ಕಿಂ ಕರತಲಸ್ಪೃಷ್ಟೋ ನ ತದ್ವತ್ಕಥಂ
ಲಿಂಗಾರಾಧನಮಪ್ಯಘೌಘಹರಣೇ ದಕ್ಷಂ ವಿರೂಪಾಕ್ಷತಾಂ ।
ದಾಸ್ಯತ್ಯೇವ ತದಕ್ಷಯಂ ಫಲಮಿತಿ ಜ್ಞಾತಂ ಕಥಂಚಿನ್ಮಯಾ ।
ತದ್ಭಿನ್ನಂ ತು ನ ತತ್ಫಲಂ ಕಿಮಧುನಾ ತದ್ಭಿನ್ನಸಾಧ್ಯೇನ ವಾ ॥೧೩೯॥

ಆ ಶಿವಪೂಜಾತತ್ವಜ್ಞಾನವು ಇಲ್ಲದಿದ್ದರೆ ಹೋಗಲಿ. ಅದನ್ನು ತಿಳಿದುಕೊಳ್ಳ ಬೇಕೆಂದು ವ್ಯರ್ಥವಾಗಿ ಕಾಲಕಳೆಯಕೂಡದು. ಹೇಗಾದರೂ ಆಗಲಿ, ಶಿವಾರ್ಚನೆ ಯನ್ನು ಮಾಡುತ್ತಿರಬೇಕು. ಸ್ವಲ್ಪ ನೀರು ಬಿಲ್ವಪತ್ರೆ ಇವುಗಳನ್ನಾದರೂ ಶಿವಲಿಂಗ ಮಸ್ತಕದ ಮೇಲೆ ಭಕ್ತಿಯಿಂದ ಇರಿಸಬೇಕು. ಇಷ್ಟರಿಂದಲೇ ಸಕಲ ಪಾಪಗಳೂ ನಾಶಹೊಂದುವುವು. ॥೧೩೭॥

ಭಕ್ತಿ ಇದ್ದರೂ ಸರಿಯೇ ಇಲ್ಲದಿದ್ದರೂ ಸರಿಯೆ. ಶಿವಲಿಂಗಮಸ್ತಕದಲ್ಲಿ ಎರಡುಮೂರು ಬಿಲ್ವಪತ್ರೆಗಳನ್ನು ಧರಿಸಿದರೂ ಅದರಿಂದ ಅನೇಕ ಮಹಾ ಪಾಪಗಳು ನಾಶವಾಗುತ್ತವೆ. ಅದು ಹೇಗೆಂದರೆ ॥೧೩೮॥

ಬೆಂಕಿಯನ್ನು ಮುಟ್ಟುವವನು ಸುಡುವುದೆಂದು ತಿಳಿದುಕೊಂಡಿದ್ದರೂ, ಅದು ಸುಡುವುದು. ತಿಳಿಯದಿದ್ದರೂ ಅದು ಸುಡುವುದು ನಿಜ. ಮುಟ್ಟಿದೊಡನೆ ಸುಡುವುದೇ ಬೆಂಕಿಯ ಗುಣ ಹೇಗೋ ಹಾಗೆಯೇ, ಶಿವತತ್ವಜ್ಞಾನವಿದ್ದು ಅಥವಾ ಆಜ್ಞಾನ ವಿಲ್ಲದೇ ಶಿವಾರಾಧನೆಯನ್ನು ಮಾಡಿದರೂ ಆಗತಕ್ಕ ಕಾರ್ಯವು ಆಗಿಯೇ ತೀರು ವುದು. ಆ ಶಿವಲಿಂಗಾರಾಧನೆಯು ಮೊದಲು ಅಪಾರವಾದ ಪಾಪಗಳೆಲ್ಲವನ್ನೂ ನಾಶ ಮಾಡುವುದು. ಅಲ್ಲದೇ ಕೊನೆಯದಾಗಿ ಶಿವಸಾರೂಪ್ಯ ಸಾಲೋಕ್ಯಗಳನ್ನೂ ಸಹ ಒದಗಿಸಿಕೊಡುವುದು. ಹೀಗೆಯೇ ಇನ್ನೂ ಎಷ್ಟೋ ಅನಂತವಾದ ಪುಣ್ಯಫಲ ಗಳನ್ನು ತಂದುಕೊಡುವುದೆಂದು ನಾನು ಮಹಾಪ್ರಯತ್ನಪಟ್ಟು ತಿಳಿದುಕೊಂಡಿ ದ್ದೇನೆ. ಆದುದರಿಂದ ಶಿವಾರಾಧನೆಯಿಂದ ಲಭಿಸುವ ಫಲವೇ ನಿಜವಾದ ಪುಣ್ಯ ಫಲವು. ಬಾಕಿ ಉಳಿದ ಎಲ್ಲಾ ಫಲಗಳನ್ನೂ ಫಲವೆಂದೇ ಹೇಳಲು ಶಕ್ಯವಿಲ್ಲ.

ಅಸ್ಮಾಭಿರ್ದುರದೃಷ್ಟನಾಶಕಮಿತಿ ಜ್ಞಾತಂ ಶಿವಾರಾಧನಂ
ತತ್ತತ್ಸಾಧನಸಾಧಿತಂ ಧನಮಿತಿ ಜ್ಞಾತಂ ನಿಧಿತ್ವೇನ ಚ ।
ತತ್ತಾವತ್ಸುಲಭಂ ಜಲೈರಪಿ ಕೃತಂ ಸಂಸಾರದಾವಾನಲ
ವ್ಯಸ್ಥಾನಂ ಕುರುತೇ ಹ್ಯಪಾರವಿಭವಂ ತತ್ಕೇನ ವಾ ಜ್ಞಾಯತೇ ॥೧೪೦॥

ರೇವಾತೀರೇ ನೀರಮಾತ್ರೇಣ ಲಿಂಗಂ
ತುಂಗಂ ಬಿಲ್ವೀಪಲ್ಲವೈರ್ವಾ ಫಲೈರ್ವಾ ।
ಭಕ್ತ್ಯಾ ನಿತ್ಯಂ ಪೂಜಯನ್ಯಾತಿ ಮುಕ್ತಿಂ
ಸಂಸಾರಾಬ್ಧಿವ್ಯಾಧಿನಾಶೇನ ಸತ್ಯಂ ॥೧೪೧॥

ಹಾಗೆಯೇ ಶಿವಾರಾಧನೆಯನ್ನು ಬಿಟ್ಟು ಶ್ರೇಯಸ್ಸಿಗೆ ಉಪಾಯವು ಬೇರೊಂದು ಅವ್ಯಭಿಚಾರಿಯಾದದ್ದು ಇದೆ ಎಂದೂ ಹೇಳಲು ಸಾಧ್ಯವಿಲ್ಲ. ॥೧೩೯॥

ಆ ಶಿವಾರಾಧನೆಯ ಫಲಪರಿಮಾಣವನ್ನು ನಾವೇನು ತಿಳಿದಿದ್ದೇವೆ? ನಾವು ಕೇವಲ ದುರದೃಷ್ಟನಾಶಕವೆಂದು ಮಾತ್ರ ಅರಿತಿರುವೆವು. ಆದರೆ ಅದರ ಫಲವು ಅನಂತವಾಗಿದೆ. ಹಣವು ಹೇಗೆ ನಮಗೆ ಸಕಲ ಸುಖಗಳನ್ನೂ ಕೊಡಬಲ್ಲುದೋ ಹಾಗೆಯೇ ಶಿವಾರಾಧನೆಯೂ ಎಂದು ತಿಳಿ. ಅಷ್ಟೇಕೆ? ಅಕ್ಷಯವಾದ ನಿಧಿ ಎಂದು ತಿಳಿ. ಆದರೆ ಆ ಹಣವಾಗಲಿ. ನಿಧಿಯಾಗಲಿ, ಶಿವಾನುಗ್ರಹವನ್ನು ಸಂಪಾದಿಸಲು ಅವಶ್ಯವಾಗಿ ಇರಬೇಕೆಂಬ ವಿಧಿಯಿಲ್ಲ, ಈ ಪುಣ್ಯಫಲವು ಅತ್ಯಂತ ಸುಲಭೋಪಾಯದಿಂದ ಲಭಿಸುವುದು. ಕೇವಲ ನೀರು ಮತ್ತು ಬಿಲ್ವಪತ್ರೆ ಇವುಗಳಿಂದಲೇ ಆ ವೈಭವವು ಕೈಗೂಡುವುದು. ಈ ಪೂಜಾವಿಧಾನವು ಇಷ್ಟು ಸಂಕ್ಷೇಪವಾಗಿದ್ದರೂ ಇದನ್ನೇ ಭಕ್ತಿಯಿಂದ ಮಾಡುತ್ತಿದ್ದರೆ ಅಪಾರವಾದ ಸಂಪತ್ತು ಲಭಿಸುವುದು. ಈ ಸಂಸಾರವೆಂಬ ಕಾಡುಗಿಚ್ಚು ಹೇಳ ಹೆಸರಿಲ್ಲದಂತೆ ನಾಶವಾಗುವುದು. ಎಲೈ ರಾಜನೇ! ಹೀಗಿರಲು ಆ ಶಿವಾರಾಧನೆಯ ಫಲವನ್ನು ಸಮಗ್ರವಾಗಿ ಯಾರು ತಾನೆ ತಿಳಿದಿರಬಲ್ಲರು? ॥೧೪೦॥

ಈ ನರ್ಮದಾ ತೀರದಲ್ಲಿರುವ ಶಿವಲಿಂಗಕ್ಕೆ ಕೇವಲ ಜಲದಿಂದಲೋ ಬಿಲ್ವದಳಗಳಿಂದಲೋ ಅಥವಾ ಹಣ್ಣುಕಾಯಿಗಳಿಂದಲೋ ಭಕ್ತಿಪುರಸ್ಸರವಾಗಿ ನಿತ್ಯವೂ ಪೂಜಿಸುತ್ತಿದ್ದರೆ ಸಕಲ ದುಃಖಗಳನ್ನೂ ಕಳೆದುಕೊಂಡು ಸಂಸಾರ ಸಾಗರವನ್ನೂ ದಾಟಬಹುದು. ಅಷ್ಟೇಕೆ! ಆ ಪರಮಪದವಾದ ಮೋಕ್ಷವನ್ನೂ ಇದರಿಂದಲೇ ಖಂಡಿತವಾಗಿಯೂ ಸಂಪಾದಿಸಬಹುದು. ॥೧೪೧॥

ರೇವಾತೀರಪ್ರಾಪಕಂ ಪುಣ್ಯಮೇಕಂ
ನೈಕಂ ಕಿಂ ತು ಪ್ರಾಪಕಾಣಾಂ ಸಹಸ್ರೈಃ ।
ಧರ್ಮೈಃ ಪ್ರಾಪ್ತಂ ಧರ್ಮಹೇತುಸ್ವರೂಪೈಃ
ಧರ್ಮಾವಾಪ್ತಿಸ್ತೈಃ ಪುನರ್ಜಾಯತೇ ನಃ ॥೧೪೨॥

ಜಾನಂತಿ ಕೇಚಿದ್ಗಿರಿಜಾಸಹಾಯ
ಪೂಜಾವಿಧಾನಾನಿ ತಥಾಪಿ ತಾನಿ ।
ನ ಭಾವನಾಯಾಃ ಪರಿಪೂರಕಾಣಿ
ಕಾಮ್ಯಾನಿ ನಿತ್ಯಾನ್ಯಪಿ ತಾನಿ ನೂನಂ ॥೧೪೩॥

ಇದಿಷ್ಟೂ ಶ್ರೇಯಸ್ಸುಗಳನ್ನು ಪಡೆದುಕೊಳ್ಳುವುದಕ್ಕೆ ಮೊದಲನೆಯದಾಗಿ ಪುಣ್ಯವಿರಬೇಕು. ರೇವಾತೀರದಲ್ಲಿ ವಾಸಮಾಡುವ ಸುಯೋಗವು ಸುಲಭವಾಗಿ ಎಲ್ಲರಿಗೂ ಸಿಕ್ಕುವುದಿಲ್ಲ. ಅದಕ್ಕಾಗಿ ಪುಣ್ಯರಾಶಿಯನ್ನೇ ಗಳಿಸಿಕೊಂಡಿರಬೇಕು. ಆ ಪುಣ್ಯಗಳು ಸಾಕ್ಷಾತ್ ಧರ್ಮವರ್ಧಕಗಳೇ ಆಗಿರುತ್ತವೆ. ಅಲ್ಲದೇ ಇದೇ ಧರ್ಮವು ಮುಂದಿನ ಧರ್ಮಗಳಿಗೂ ಕಾರಣವಾಗುತ್ತದೆ. ಮೊದಲಿನ ಧರ್ಮಬಲದಿಂದ ರೇವಾತೀರವಾಸವೂ ಶಿವಲಿಂಗಾರಾಧನೆಯೂ ಮತ್ತು ಅಕ್ಷಯವಾದ ಧರ್ಮಸಂಗ್ರಹವೂ ಆಗುವುದು. ॥೧೪೨॥

ಕೆಲವರು ಶಿವಾರಾಧನೆಯ ಕ್ರಮವು ಅನೇಕವಿಧವಾಗಿದೆ ಎಂದು ಹೇಳುವರು. ಅವರು ಹಾಗೆಯೇ ತಿಳಿದುಕೊಂಡು ಅನೇಕ ಕ್ರಮಗಳಿಂದ ಆರಾಧಿಸುವರು. ಆದರೆ ಅವುಗಳಿಂದ ಮನುಷ್ಯನ ಮನೋಭಾವನೆಗೆ ಏನೊಂದೂ ಪರಿಷ್ಕಾರವು ಉಂಟಾಗುವುದಿಲ್ಲ. ಶಿವಾರಾಧನೆಗೆ ಮುಖ್ಯವಾಗಿ ಭಾವನಾಶುದ್ಧಿ ಇರಬೇಕು. ಅಂಥ ಉಚ್ಚ ಭಾವನೆಯೊಂದು ಇದ್ದರೆ ಸಾಕು. ಮಿಕ್ಕ ವಿಧಿವಿಧಾನಗಳು ಮುಖ್ಯತೆಯನ್ನು ಹೊಂದಲಾರವು. ಅಲ್ಲದೇ ಆ ಕ್ರಮಗಳು ಕೇವಲ ನಿತ್ಯ ಮತ್ತು ಕಾಮ್ಯ ಇವುಗಳ ವ್ಯವಸ್ಥೆಯಿಂದ ಭಿನ್ನವಾಗಿರುತ್ತವೆ. ಆದರೆ ಅನಾಸಕ್ತಿಯೋಗದಿಂದ ಆರಾಧಿಸತಕ್ಕವನಿಗೆ ಆ ವಿಭಿನ್ನಕ್ರಮಗಳಿಂದ ಆಗಬೇಕಾದದ್ದೇನೂ ಇರುವುದಿಲ್ಲ. ಕೇವಲ ಭಾವನಾಮಯನಾಗಿ ತನಗೆ ಎಷ್ಟು ಸೌಕರ್ಯವಿರುತ್ತದೆಯೋ ಅಷ್ಟರಿಂದಲೇ ಶಿವಪೂಜೆಯನ್ನು ನಡೆಸಿದರೂ ಅಕ್ಷಯವಾದ ಫಲಗಳು ಲಭಿಸಿಯೇ ಲಭಿಸುವುವು. ॥೧೪೩॥

ಕಸ್ತತ್ಪ್ರಭಾವಪರಿಭಾವನಯಾ ಮಹೇಶ
ಧ್ಯಾನಪ್ರವೃತ್ತ ಇತಿ ತಂ ವದ ಸಾವಧಾನಂ ।
ಅಂಗವ್ಯಪಾಯನಿಯಮೈರ್ನಿಯಮೇನ ತೇನ
ಸಾ ಭಾವನಾಪಿ ವಿಫಲಾ ಖಲು ಸತ್ಯಮೇವ ॥೧೪೪॥

ಇತ್ಯಾಕರ್ಣ್ಯ ವಚಸ್ತಸ್ಯ ತಮಾಹೂಯ ಸ್ವಕಂ ಗೃಹಂ ।
ಯಯೌ ಯಾನವರಸ್ಥೇನ ಸಹ ತೇನ ಮಹಾತ್ಮನಾ ॥೧೪೫॥

ತೇನ ತನ್ಮಂದಿರಂ ದೃಷ್ಟಂ ಮಣಿಮಂಡಲಮಂಡಿತಂ ।
ತುಂಗಲಿಂಗಸಮಾಕ್ರಾಂತಂ ಹಾರಕೋಟಿಸಮಾವೃತಂ ॥೧೪೬॥

ಆ ಪರಮೇಶ್ವರನ ಅಪಾರ ಮಹಿಮೆಯನ್ನು ತಿಳಿಯದೇ ಕೇವಲ ನಿಂದಿಸುವವನು, ಅಥವಾ ಆತನ ಮಹಿಮೆಯ ಅನುಸಂಧಾನದಿಂದ ಮುಗ್ಧನಾಗದೇ ಇರುವ ಯಾವ ಮನುಷ್ಯನು ತಾನೆ ಶಿವಾರಾಧನೆಯನ್ನು ಮಾಡಬಲ್ಲನು? ಶಿವಮಹಿಮೆಯಲ್ಲಿ ಅನುರಕ್ತನಾಗದ ಮನುಷ್ಯನು ಶಿವಾರಾಧನೆಯ ಗೋಜಿಗೇ ಬರುವುದಿಲ್ಲ. ಏಕೆಂದರೆ ಆತನಿಗೆ ಆ ಭಾವನೆ ಇರುವುದಿಲ್ಲ. ಭಾವನಾಮಯತೆ ಇಲ್ಲದಿದ್ದರೆ ಆರಾಧನೆಯೇ ನಡೆಯುವುದಿಲ್ಲ. ಹೀಗಿರಲು ಆ ವಿಭಿನ್ನಕ್ರಮವಿಭಾಗದಿಂದ ಅಥವಾ ಆ ನಿತ್ಯ ನೈಮಿತ್ತಿಕ ಅಂಗಗಳ ವ್ಯವಸ್ಥೆಯಿಂದ ಏನು ಪ್ರಯೋಜನ? ಅಥವಾ ಕೇವಲ ಅಂಗಗಳ ವ್ಯವಸ್ಥೆಯಿಂದತಾನೆ ಪ್ರಯೋಜನವೇನು? ಅಥವಾ ಕೇವಲ ಅಂಗವ್ಯವಸ್ಥೆಯಲ್ಲಿ ಮಾತ್ರವೇ ಆಗ್ರಹದಿಂದ ಒಂದು ಭಾವನೆಯು ಬೆಳೆದಿದ್ದರೂ ಅದರಿಂದ ಯಾವ ಇಷ್ಟವಾದ ಪುಣ್ಯಫಲವೂ ನಿಜವಾಗಿ ದೊರೆಯಲಾರದು. ॥೧೪೪॥

ಈ ರೀತಿಯಾಗಿ ಆ ಬ್ರಾಹ್ಮಣನು ನುಡಿಯಲು ರಾಜನು ಸಂತೋಷಪಟ್ಟು ಆತನನ್ನು ತನ್ನ ಮನೆಗೆ ಬರಬೇಕೆಂದು ಕೇಳಿಕೊಂಡನು. ಆ ಬ್ರಾಹ್ಮಣನು ಅದಕ್ಕೆ ಸಮ್ಮತಿಸಲು ಆತನನ್ನು ಉತ್ತಮವಾದ ವಾಹನದ ಮೇಲೆ ಕುಳ್ಳಿರಿಸಿಕೊಂಡು ರಾಜನು ತನ್ನ ಪಟ್ಟಣಕ್ಕೆ ತೆರಳಿದನು. ॥೧೪೫॥

ಆ ರಾಜನ ಮನೆಯನ್ನು ಪ್ರವೇಶಿಸಿದ ಬಳಿಕ ಅಲ್ಲಿನ ಸಂಪತ್ಸಮೃದ್ಧಿಯನ್ನು ನೋಡಿ ಬ್ರಾಹ್ಮಣನಿಗೆ ಪರಮಾಶ್ಚರ್ಯವುಂಟಾಯಿತು. ಆ ಅರಮನೆಯು ರತ್ನಮಣಿಗಳಿಂದಲೇ ಅಲಂಕೃತವಾಗಿದ್ದಿತು. ಅಲ್ಲಿ ದೊಡ್ಡ ದೊಡ್ಡ ಶಿವಲಿಂಗಗಳು ಸ್ಥಾಪಿತವಾಗಿದ್ದವು. ಅಲ್ಲದೇ ಅನೇಕ ಶಿವಭಕ್ತರು ಶಿವಭಜನೆಯನ್ನು ಮಾಡು

ತಂ ದೃಷ್ಟ್ವಾ ವಿಸ್ಮಯಾವಿಷ್ಟಃ ಪ್ರಣತಶ್ಶಾಂಕರಾನ್ ಪುನಃ ।
ಪೂಜಯಾಮಾಸ ಲಿಂಗಾನಿ ನವಬಿಲ್ವದಳಾದಿಭಿಃ ॥೧೪೭॥

ತತಃ ಪ್ರದೋಷಪೂಜಾಂ ಚ ಸ ಚಕಾರ ಮಹೀಪತಿಃ ।
ತತಸ್ತಂ ಭೋಜಯಾಮಾಸ ಪಕ್ವಾನ್ನೈರ್ಹಾರಸಂಯುತಂ ॥೧೪೮॥

ಭೋಜನಾಂತೇ ಮಹಾದೇವಕಥಯಾ ಪ್ರೀತಮಾನಸಃ ।
ದದೌ ತಸ್ಮೈ ಮಹಾರ್ಹಾಣಿ ಭೂಷಣಾನಿ ಮಹೀಪತಿಃ ॥೧೪೯॥

ದುಕೂಲಾನ್ಯಪಿ ದಿವ್ಯಾನಿ ವಾಹನಾನ್ಯುತ್ತಮಾನ್ಯಪಿ ।
ಗೋಕುಲಾನ್ಯಪಿ ದತ್ತಾನಿ ಧನಾನಿ ವಿವಿಧಾನ್ಯಪಿ ॥೧೫೦॥

ತತ್ಸರ್ವಂ ಸಮುಪಾದಾಯ ಸ ತಾವತ್ಸ್ವಗೃಹಂ ಯಯೌ ।
ತಂ ದೃಷ್ಟ್ವಾ ವಿಸ್ಮಯಾವಿಷ್ಟಾಸ್ತದ್ದಾರಾಸ್ತತ್ಸುತಾ ಅಪಿ ॥೧೫೧॥

ತ್ತಿದ್ದರು. ಇವರೆಲ್ಲರನ್ನೂ ನೋಡಿದ ಕೂಡಲೇ ಆ ಬ್ರಾಹ್ಮಣನು ಭಕ್ತಿಯಿಂದ ಶಿವಲಿಂಗಗಳಿಗೆ ನಮಸ್ಕರಿಸಿದನು. ಅನಂತರ ಅಲ್ಲೇ ಸನ್ನಿಹಿತವಾಗಿದ್ದ ಬಿಲ್ವದಳಾದಿಗಳಿಂದ ಆ ಶಿವಲಿಂಗಗಳನ್ನೆಲ್ಲಾ ಪೂಜಿಸಿದನು. ||೧೪೬-೧೪೭||

ಅನಂತರ ಪ್ರದೋಷಕಾಲವು ಪ್ರಾಪ್ತವಾಗಲು ರಾಜನು ಅತ್ಯಂತ ವೈಭವದಿಂದ ಪ್ರದೋಷಪೂಜೆಯನ್ನು ಮಾಡಿ, ಬಳಿಕ ಆ ಬ್ರಾಹ್ಮಣನಿಗೂ ಎಲ್ಲಾ ಶಾಂಭವರಿಗೂ ಮೃಷ್ಟಾನ್ನದಿಂದ ಭೋಜನಮಾಡಿಸಿದನು. ||೧೪೮||

ಎಲ್ಲರಿಗೂ ಭೋಜನವಾದ ಬಳಿಕ ರಾಜನು ಶಿವಕಥಾಪ್ರಸಂಗವನ್ನು ನಡೆಯಿಸಿದನು. ಆ ಶಿವಕಥೆಗಳನ್ನು ಕೇಳಿ ರಾಜನಿಗೆ ಪರಮಾನಂದವುಂಟಾಯಿತು. ಆಗ ರಾಜನು ಆ ಬ್ರಾಹ್ಮಣನಿಗೆ ಯಥೇಚ್ಛವಾಗಿ ದಾನಮಾಡಿ, ಉತ್ತಮೋತ್ತಮಗಳಾದ ವಸ್ತ್ರಗಳನ್ನೂ ಆಭರಣಗಳನ್ನೂ ಗೋವುಗಳನ್ನೂ ಅಲ್ಲದೇ ಬೇಕಾದಷ್ಟು ಧನಕನಕ ವಸ್ತುವಾಹನಗಳನ್ನೂ ಸಮರ್ಪಿಸಿದನು. ||೧೪೯-೧೫೦||

ರಾಜನು ಕೊಟ್ಟ ಎಲ್ಲಾ ವಸ್ತುಗಳನ್ನೂ ತೆಗೆದುಕೊಂಡು ಆ ಬ್ರಾಹ್ಮಣನು ಸಂತೋಷದಿಂದ ತನ್ನ ಮನೆಗೆ ತಿರುಗಿ ಬಂದನು. ಈರೀತಿ ಅನೇಕ ಸಂಪತ್ಸಮೇತನಾಗಿ ಬ್ರಾಹ್ಮಣನು ಬಂದದ್ದನ್ನು ನೋಡಿ ಆತನ ಪತ್ನೀಪುತ್ರರಿಗೆ ಅತ್ಯಂತ ಆನಂದವೂ ಮೇಲಾಗಿ ಪರಮಾಶ್ಚರ್ಯವೂ ಉಂಟಾಯಿತು. ||೧೫೧||

ಮಹದೈಶ್ವರ್ಯಸಂಪನ್ನಂ ದೃಷ್ಟ್ವಾ ತದ್ಗ್ರಾಮವಾಸಿನಃ ।
ತಮೂಚುರಾದರಾನ್ನತ್ವಾ ಕಸ್ಯೇದಂ ಫಲಮಿತ್ಯಪಿ ॥೧೫೨॥

ಪೂರ್ವೇದ್ಯುರೇವಾಗತಮಸ್ಮದೀಯ
ಗೇಹೇ ಕಣಾರ್ಥಂ ಕಣಭಕ್ಷಣಂ ಚ ।
ಕೃತಂ ಕ್ಷುಧಾರ್ತೇನ ಪಿಪಾಸುನಾಪಿ
ಪೀತಂ ಜಲಂ ಕ್ಷಾರಮಲಕ್ಷಿತೇನ ॥೧೫೩॥

ರಾಜ್ಞಾ ದತ್ತಂ ಕೇನ ತುಭ್ಯಂ ಧನಂ ವಾ
ಕಾ ವಾ ವಿದ್ಯಾ ತೇ ಧನಾವಾಪ್ತಿಹೇತುಃ ।
ಮಂತ್ರೋಽಪ್ಯೇಕೋ ಜ್ಞಾಯತೇ ನ ತ್ವಯಾ ತು
ವ್ಯಾಪ್ತಂ ಗೇಹಂ ವಾಜಿಭಿರ್ಗೋಕುಲೈಶ್ಚ ॥೧೫೪॥

ಇದ್ದಕ್ಕಿದ್ದಂತೆ ಈ ಬ್ರಾಹ್ಮಣನು ಐಶ್ವರ್ಯವಂತನಾದುದನ್ನು ನೋಡಿ ಆ ಊರಿನ ಜನರಿಗೆ ಅತ್ಯಂತ ಕೌತುಕವುಂಟಾಯಿತು. ಅವರು ಈ ವಿಪ್ರನೊಡನೆ ತಮ್ಮ ಪ್ರೀತ್ಯಾದರಗಳನ್ನು ತೋರಿ ಈ ಸಂಪತ್ತುಗಳೆಲ್ಲವೂ ನಿನಗೆ ಹೇಗೆ ಪ್ರಾಪ್ತವಾದುವು ? ಇದು ಯಾವ ಪುಣ್ಯಕ್ಕೆ ಫಲವಾಗಿ ದೊರೆತಿದೆ? ನೀನು ಯಾವ ಮಹತ್ತರವಾದ ಪುಣ್ಯವನ್ನು ಮಾಡಿದ್ದೆ ಎಂದು ಮುಂತಾಗಿ ಕೇಳಿದರು. ॥೧೫೨॥

ಎಲೈ ಬ್ರಾಹ್ಮಣನೇ! ಇನ್ನೂ ನಿನ್ನೆ ತಾನೆ ನೀನು ದಾರಿದ್ರ್ಯದ ಬೇಗೆಯಿಂದ ಕಂಗಾಲಾಗಿದ್ದೆ. ನಿನ್ನ ಮನೆಯಲ್ಲಿ ಯಾವ ವಸ್ತುವೂ ಇರಲಿಲ್ಲ. ನಮ್ಮ ಮನೆಗಳಿಗೆ ಬಂದು ಕಾಳುಕಡ್ಡಿಗಳನ್ನು ತೆಗೆದುಕೊಂಡುಹೋಗಿ ತಿನ್ನುತ್ತಿದ್ದೆ. ಕಾಲಕಾಲಕ್ಕೆ ಆಹಾರಕ್ಕೂ ಗತಿ ಇಲ್ಲದೇ ಹಸಿವಿನಿಂದ ಪೀಡಿತನಾಗಿ ಕೇವಲ ನೀರನ್ನು ಕುಡಿಯುತ್ತಿದ್ದೆಯಲ್ಲವೇ ? ನಿನಗೆ ಒಳ್ಳೆಯ ನೀರೂ ಸಹ ದೊರೆಯುತ್ತಿರಲಿಲ್ಲ. ಉಪ್ಪುನೀರನ್ನೂ ಸಹ ನಿರ್ಯೋಚನೆಯಿಂದ ಕುಡಿಯುತ್ತಿದ್ದೆ. ಬೇರೆ ಯಾವುದೂ ನಿನಗೆ ಲಭ್ಯವೇ ಇರುತ್ತಿರಲಿಲ್ಲ ॥೧೫೩॥

ಅಥವಾ ಯಾವನಾದರೂ ರಾಜನು ನಿನಗೆ ಈ ಐಶ್ವರ್ಯವನ್ನು ಕೊಟ್ಟಿರುವನೇ ? ಅಂಥ ರಾಜಾವರ್ಜಕವಾದ ವಿದ್ಯೆಯಾದರೂ ನಿನ್ನಲ್ಲಿ ಯಾವುದಿದೆ ? ನಿನ್ನ ಯಾವ ವಿದ್ಯಾವೈಶದ್ಯವನ್ನು ನೋಡಿ ನಿನಗೆ ಇಷ್ಟೊಂದು ಐಶ್ವರ್ಯವನ್ನು ಕೊಟ್ಟನು ? ಹೆಸರನ್ನು ಹೇಳುವುದಕ್ಕೂ ಸಹ ನಿನ್ನಲ್ಲಿ ಒಂದು ವಿದ್ಯೆಯ ಗಂಧವೂ

ದಿವ್ಯೈರಾಭರಣೈರ್ಧನೈಶ್ಚ ವಿವಿಧೈರ್ವ್ಯಾಪ್ತಂ ಕಥಂ ಮಂದಿರಂ
ಮತ್ತೇಭೈರಮಿತೈರ್ಮದದ್ರವಜಲೈರ್ವ್ಯಾಪ್ತಂ ಗೃಹಸ್ಯಾಂಗಣಂ ।
ಚಿತ್ರೈರ್ಹೇಮರಥೈರಪಾರವಿಭವೈಶ್ಛತ್ರೈಶ್ಚ ಮುಕ್ತಾಫಲ ।
ವ್ಯಾಪ್ತೈಸ್ಸೂರ್ಯನಿವಾರಕೈರ್ಧ್ವಜಪಟೈಃ ಕೋಽಯಂ ಪ್ರಭಾವಸ್ತವ ॥೧೫೫॥

ಇತಿ ಪೃಷ್ಟಸ್ಸ ತೈಸ್ಸರ್ವೈಸ್ಸೋಽಪಿ ವಿಸ್ಮಿತಮಾನಸಾನ್ ।
ಪ್ರಾಹ ಶಂಕರಲೀಲೇಯಮಿತಿ ಸ್ಮೇರಾನನಸ್ಸದಾ ॥೧೫೬॥

ಕಿಂ ವಿದ್ಯಯಾ ಕಿಂ ತಪಸಾಪಿ ಭಾಗ್ಯಂ
ಮಹೇಶ್ವರಾನುಗ್ರಹಮಂತರೇಣ ।
ಅನುಗ್ರಹೇ ತಸ್ಯ ಭವಂತಿ ಮಾನ್ಯಾಃ
ಸಾಮಾನ್ಯತೋ ಧನ್ಯತಮಾಶ್ಚ ಸತ್ಯಂ ॥೧೫೭॥

ಇರುವುದಿಲ್ಲ. ಅಥವಾ ಇದು ಮಂತ್ರಸಿದ್ಧಿಯ ಫಲವೇ? ಆದರೆ ನಾವು ಕಂಡಹಾಗೆ ನಿನಗೆ ಒಂದು ಮಂತ್ರವೂ ತಿಳಿದಿರಲಿಲ್ಲವಲ್ಲ. ಇದು ಹೇಗೆ ಸಂಭವಿಸಿತು? ಈಗ ನಿನ್ನ ಮನೆಯಲ್ಲಿ ಹಸು, ಕುದುರೆ ಮುಂತಾದ ಸಕಲ ಸಂಪತ್ತುಗಳೂ ಸಮೃದ್ಧವಾಗಿವೆ. ಇದಕ್ಕೆ ಕಾರಣವೇನು? ||೧೫೪||

ನಿನ್ನ ಮನೆಯಲ್ಲಿ ದಿವ್ಯವಾದ ಧನಕನಕಗಳೂ ವಸ್ತ್ರಾಭರಣಗಳೂ ತುಂಬಿರುತ್ತವೆ. ನಿನ್ನ ಮನೆಯ ಅಂಗಳದಲ್ಲಿ ಮದ್ದಾನೆಗಳು ನಿಂತಿರುತ್ತವೆ. ನಿನ್ನ ಪ್ರಯಾಣಕ್ಕೆಂದು ಚಿನ್ನದ ರಥವೇ ಸಿದ್ಧವಾಗಿರುತ್ತದೆ. ಮುತ್ತು ರತ್ನ ಇವುಗಳಿಂದ ಖಚಿತವಾದ ಛತ್ರ ಧ್ವಜ ಪತಾಕೆಗಳೂ ನಿನಗಿರುತ್ತವೆ. ಇಷ್ಟು ವೈಭವವು ನಿನಗೆ ಹೇಗೆ ಪ್ರಾಪ್ತವಾಯಿತು? ||೧೫೫||

ಈ ರೀತಿಯಾಗಿ ಆ ಊರಿನವರೆಲ್ಲರೂ ಬಂದು ಕೇಳಲು ಬ್ರಾಹ್ಮಣನು ಅವರನ್ನು ಕುರಿತು ಹೀಗೆ ಹೇಳಿದನು. ಏತಕ್ಕೆ ಇಷ್ಟು ಆಶ್ಚರ್ಯಚಕಿತರಾಗುತ್ತಿರುವಿರಿ? ಇದೇನೂ ಮಹಾ ಆಶ್ಚರ್ಯವಿಷಯವಲ್ಲ. ಇದಕ್ಕಿಂತಲೂ ಪರಮೇಶ್ವರನ ಲೀಲೆಯು ಅತ್ಯದ್ಭುತವಾಗಿರುತ್ತದೆ. ಆ ಶಿವನ ಲೀಲೆಯಿಂದಲೇ ನನಗೆ ಈ ವಿಭವವು ಲಭಿಸಿರುವುದು. ||೧೫೬||

ಪರಮೇಶ್ವರನ ಅನುಗ್ರಹವೊಂದಿಲ್ಲದ ಮೇಲೆ ಯಾವ ವಿದ್ಯೆಯಿಂದ ಏನು ಪ್ರಯೋಜನ? ಅಥವಾ ಯಾವ ತಪಸ್ಸಿನಿಂದ ತಾನೆ ಫಲವು ಲಭಿಸೀತು?

ವಿದ್ಯಾ ತು ಕಾಪಿ ನಾಭ್ಯಸ್ತಾ ನ ತಪಶ್ಚ ಕೃತಂ ಮಯಾ ।
ನಾರಾಧಿತೋಽಪಿ ಗಿರಿಶಸ್ಸಮ್ಯಗಿತ್ಯವಧಾರಿತಂ ॥೧೫೮॥

ದ್ವಿತ್ರಾಣಿ ಬಿಲ್ವಪತ್ರಾಣಿ ಜಲಾನ್ಯಪಿ ಮಯಾ ಪರಂ ।
ಲಿಂಗೇ ಕ್ಷಿಪ್ತಾನ್ಯಭಾಗ್ಯೇನ ವಿಶ್ವಾಸೋಽಪಿ ನ ಮೇ ತದಾ ॥೧೫೯॥

ಜ್ಞಾತೋಽಪಿ ಸ ಮಹಾದೇವಸ್ಸ ಸರ್ವಾರಾಧ್ಯ ಇತ್ಯಪಿ ।
ಸ ಸರ್ವವೇದವೇದಾಂತಜ್ಞೇಯ ಇತ್ಯಪಿ ನಾರ್ಚಿತಃ ॥೧೬೦॥

ಶಿವಾನುಗ್ರಹವನ್ನುಳಿದು ಮತ್ತೆ ಯಾವುದರಿಂದಲೂ ನಮ್ಮ ಇಷ್ಟಾರ್ಥವು ನೆರವೇರಲಾರದು. ಶಿವಾನುಗ್ರಹಕ್ಕೆ ಯಾರು ಪಾತ್ರರಾಗುವರೋ ಅವರೇ ಈ ಪ್ರಪಂಚದಲ್ಲಿ ಪೂಜ್ಯರು ಮಾನ್ಯರೂ ಆಗುವರು. ಆದುದರಿಂದ ಆ ಅಮೋಘವಾದ ಶಿವಾನುಗ್ರಹವನ್ನು ಸಂಪಾದಿಸಿಕೊಂಡಿರತಕ್ಕವರೇ ನಿಜವಾಗಿಯೂ ಧನ್ಯರು. ||೧೫೭||

ನನ್ನ ಸ್ಥಿತಿಗತಿಗಳು ನಿಮಗೆ ತಿಳಿದೇ ಇರುತ್ತವೆ. ನಾನು ಯಾವ ವಿದ್ಯಾಭ್ಯಾಸವನ್ನೂ ಮಾಡಿದವನಲ್ಲ. ತಪಸ್ಸನ್ನೂ ಆಚರಿಸಿದವನಲ್ಲ. ಅಷ್ಟೇಕೆ? ಪರಮೇಶ್ವರನನ್ನು ಆರಾಧಿಸಬೇಕೆಂಬುದಿಷ್ಟನ್ನು ಮಾತ್ರ ತಿಳಿದುಕೊಂಡಿರುವೆನೇ ವಿನಾ ಆ ದೇವದೇವನಿಗೆ ಸರಿಯಾಗಿ ಸಕಲೋಪಚಾರಗಳೊಡನೆ ನಾನು ಪೂಜಿಸಿದವನಲ್ಲ. ||೧೫೮||

ನಾನು ಮಂದಭಾಗ್ಯನಾಗಿದ್ದೆ. ದರಿದ್ರನಾಗಿದ್ದಂತೆ ಕೃಪಣನೂ ಆಗಿದ್ದೆ. ಆದರೆ ನಿತ್ಯವೂ ಶಿವಲಿಂಗಕ್ಕೆ ಜಲದಿಂದ ಅಭಿಷೇಕವನ್ನು ಮಾಡಿ ಎರಡು ಮೂರು ಬಿಲ್ವಪತ್ರೆಗಳನ್ನು ಮಾತ್ರ ಏರಿಸುತ್ತಿದ್ದೆ. ಇದರಿಂದ ಮಹಾಭಾಗ್ಯವು ಲಭಿಸೀತೆಂಬ ನಂಬಿಕೆಯೂ ಆಗ ನನಗಿರಲಿಲ್ಲ. ಇದಕ್ಕಿಂತಲೂ ಹೆಚ್ಚು ಸೇವೆಯನ್ನು ಮಾಡಲು ನನಗೆ ಯೋಗ್ಯತೆಯೂ ಇರಲಿಲ್ಲ. ||೧೫೯||

ಆ ಮಹಾದೇವನು ಸಕಲಜನ ವಂದ್ಯನೆಂದೂ ಸರ್ವಪೂಜ್ಯನೆಂದೂ ನನಗೆ ಮೊದಲು ತಿಳಿದೇ ಇರಲಿಲ್ಲ. ನಾನು ಕೇವಲ ಅಜ್ಞನಾಗಿದ್ದೆ. ಆ ದೇವದೇವನನ್ನೇ ವೇದಗಳೂ ವೇದಾಂತಗಳೂ ತಮ್ಮ ಜ್ಞೇಯವಸ್ತುವನ್ನಾಗಿ ಮಾಡಿಕೊಂಡಿವೆ ಎಂಬ ಉಚ್ಚ ಭಾವನೆಯಿಂದಲೂ ನಾನು ಆತನನ್ನು ಪೂಜಿಸಲಿಲ್ಲ. ||೧೬೦||

ಅಕರ್ಣಿತಾಪಿ ನ ಮಹೇಶಕಥಾಸುಧಾಪಿ
ತತ್ಪಾನಪೀನಹೃದಯೋಽಪಿ ತದಾ ತಥಾಪಿ ।
ದತ್ತಂ ಶಿವೇನ ಧನಮೇತದಪಾರಮೇವ
ನಾನಿಾಭಿರಾಯುತಮಪಾರಬಲಾವೃತಾಭಿಃ ॥೧೬೧॥

ರತ್ನಾಭರಣಮಾಲಾನಾಮಮಲಾನಾಮನೇಕಧಾ ।
ಕಾಂತಿರಾಚ್ಛಾದಯತ್ಯೇವ ಮಂದಿರಾಣ್ಯಮಿತಾನ್ಯಪಿ ॥೧೬೨॥

ನ ದಾನಾನಿ ಕೃತಾನ್ಯೇವ ನ ವಾ ಯಾಗಾದಿಕಾನ್ಯಪಿ ।
ತಥಾಪಿ ಶಂಭುರ್ಭಗವಾನ್ ಸುಪ್ರೀತೋ ಬಿಲ್ವಪಲ್ಲವೈಃ ॥೧೬೩॥

ಕೋ ವಾ ರಸಃ ಕೋಮಲಬಿಲ್ವಪಲ್ಲವೈಃ
ಮಹೇಶ್ವರಸ್ಯಾಪಿ ಸ ತನ್ನ ವಿದ್ಮಃ ।

ನಾನು ಕರ್ಣಾನಂದಕರವಾದ ಶಿವಕಥೆಯನ್ನು ಸಹ ಕೇಳಿರಲಿಲ್ಲ. ಹೃದಯಕ್ಕೆ ಆಪ್ಯಾಯಮಾನವಾಗುವ ಆ ಶಿವಕಥಾಮೃತವನ್ನು ಪಾನಮಾಡಿ ನನ್ನ ಮನಸ್ಸು ಒಂದು ದಿನವೂ ಆನಂದವನ್ನು ಪಡೆದಿರಲಿಲ್ಲ. ಹೀಗೆ ನಾನು ಸರ್ವವಿಧದಲ್ಲಿಯೂ ಕೃತಘ್ನನಾಗಿದ್ದರೂ ಆ ದಯಾಘನನಾದ ಪರಶಿವನು ನನ್ನ ಕೇವಲ ಅತ್ಯಲ್ಪಸೇವೆಯಿಂದಲೇ ಸಂತುಷ್ಟನಾಗಿರುವನು. ಆ ದೇವದೇವನೇ ನನಗೆ ಈ ಐಶ್ವರ್ಯವನ್ನು ಮತ್ತು ಸೈನ್ಯದಂತೆ ಇರುವ ವಿಶಾಲವಾದ ಅಶ್ವಾದಿ ಸಂಪತ್ತುಗಳನ್ನೂ ಅನುಗ್ರಹಿಸಿರುವನು. ॥೧೬೧॥

ಪರಮೇಶ್ವರನ ಅನುಗ್ರಹದಿಂದ ಲಭಿಸಿರುವ ಈ ಧನಕನಕವಸ್ತುಗಳು ಎಲ್ಲವೂ ದಿವ್ಯವಾಗಿಯೇ ಇರುತ್ತವೆ. ಒಂದೊಂದೂ ರತ್ನಹಾರದ ಮತ್ತು ಮುತ್ತಿನ ಹಾರದ ಅಪಾರ ಕಾಂತಿಯಿಂದ ಮನೆಯೆಲ್ಲವೂ ತುಂಬಿಹೋಗುತ್ತಿದೆ. ॥೧೬೨॥

ನಾನು ಯಾವುದೊಂದು ದಾನ ಮಾಡದಿದ್ದರೂ ಯಜ್ಞಯಾಗಾದಿಗಳನ್ನು ನಡೆಸದಿದ್ದರೂ ಪರಮೇಶ್ವರನು ಕೇವಲ ಕೆಲವು ಬಿಲ್ವಪತ್ರೆಗಳ ಅರ್ಪಣೆಯಿಂದಲೇ ನನ್ನ ಮೇಲೆ ಸುಪ್ರೀತನಾಗಿದ್ದಾನೆ. ಆ ಭಗವಂತನ ಔದಾರ್ಯವನ್ನೂ ದಯಾಮಯತೆಯನ್ನೂ ಎಷ್ಟೆಂದು ಕೊಂಡಾಡಲು ಸಾಧ್ಯ! ॥೧೬೩॥

ಆ ಅಷ್ಟೈಶ್ವರ್ಯಸಂಪನ್ನನಾದ ಪರಮೇಶ್ವರನು ಆ ಬಿಲ್ವಪತ್ರೆಗಳನ್ನು ಏತಕ್ಕೆ ಅಷ್ಟೊಂದು ಪ್ರೀತಿಸುತ್ತಾನೆಯೋ? ಆತನಿಗೆ ಕೇವಲ ಬಿಲ್ವದಳದ

ಸ ತಂ ಯಥಾ ತೇನ ಸಮರ್ಚಿತೋಽಪಿ
ದದಾತಿ ಭಾಗ್ಯಾನ್ಯಮಿತಾನಿ ಶಂಭುಃ ॥೧೬೪॥

ಶ್ರೀಸೋಮೇಶ್ವರಕುಂಡಮಧ್ಯವಿವಿಧಾಪಾರಾನುಸರ್ಪಾಂಕಿತಾ
ವ್ಯಕ್ತಾತುಂಗತರಂಗಸಂಗತಮಹಾಲಿಂಗೇಷು ತುಂಗೇಷು ಯಃ ।
ಬಿಲ್ವಾನ್ಯಪ್ಯಮಲಾನಿ ದಾಸ್ಯತಿ ಜಲಾಭ್ಯಕ್ತಾನಿ ಭಕ್ತ್ಯಾ ಮುದಾ
ತಸ್ಮೈ ದಾಸ್ಯತಿ ಶಂಕರಃ ಕರುಣಯಾ ದೇವತ್ವಮಪ್ಯಂತತಃ ॥೧೬೫॥

ಸಂತುಷ್ಟೋ ಗಿರಿಶೋ ದದಾತ್ಯಮಿತಮಪ್ಯೈಶ್ವರ್ಯಮಂತೇ ಸ್ವಕಂ
ಸ್ಥಾನಂ ದಾಸ್ಯತಿ ಶಂಕರಃ ಖಲು ಮಹಾದಾತಾ ಸ ದೇವೋತ್ತಮಃ ।
ತಸ್ಮಾದೇವಮಿಹಾಪಿ ಕಿಂ ಯದಿ ಭವೇತ್ತುಷ್ಟಸ್ಸ ರುಷ್ಟೋಽಪಿ ವಾ
ಕಷ್ಟಂ ನಷ್ಟಮಿದಂ ಜಗತ್ತ್ರಯಮಿತಿ ಜ್ಞೇಯಂ ಸ ಮೃತ್ಯುಂಜಯಃ॥೧೬೬॥

ಮೇಲೆಯೇ ಏಕೆ ಪ್ರೇಮವಿರುವುದೋ? ಅದು ನಮಗೆ ಗೊತ್ತಿಲ್ಲ. ಆ ತತ್ವವು ನಮಗೆ ಸ್ವಲ್ಪವೂ ತಿಳಿದಿಲ್ಲ. ನೋಡಿರಿ, ಶಿವನಿಗೆ ಕೇವಲ ಬಿಲ್ವಪತ್ರೆಯನ್ನು ಸಮರ್ಪಿಸಿದರೇ ತೃಪ್ತಿಯುಂಟಾಗುತ್ತದೆಂಬುದಕ್ಕೆ ಇದೇ ದೃಷ್ಟಾಂತ. ನನಗೆ ಲಭಿಸಿರುವ ಭಾಗ್ಯಲಾಭವನ್ನೇ ನೋಡಿ ತಿಳಿದುಕೊಳ್ಳಿರಿ. ನಾನು ಮತ್ತೆ ಯಾವ ಆರಾಧನೆಯನ್ನೂ ಮಾಡದಿದ್ದರೂ ಕೇವಲ ಬಿಲ್ವಾರ್ಚನೆಯಿಂದಲೇ ನನಗೆ ಭಾಗ್ಯವನ್ನು ಕೊಟ್ಟಿದ್ದಾನೆ. ॥೧೬೪॥

ಶ್ರೀ ಸೋಮೇಶ್ವರವೆಂಬ ತೀರ್ಥಮಧ್ಯದಲ್ಲಿ ನೀರಿನ ಅಲೆಗಳಿಂದಲೂ ನಾಗಾಭರಣದಿಂದಲೂ ಅಲಂಕೃತವಾದ ಶಿವಲಿಂಗಗಳಿಗೆ ಯಾವನು ಜಲದಿಂದ ಅಭಿಷೇಕ ಮಾಡಿ ಕೋಮಲವಾದ ಬಿಲ್ವದಳಗಳನ್ನು ಭಕ್ತಿಯಿಂದ ಸಮರ್ಪಿಸುವನೋ, ಆತನಿಗೆ ಆ ಮಹಾದಾನಿಯಾದ ಶಂಕರನು ಸಕಲ ಭಾಗ್ಯಗಳನ್ನೂ ಕೊಡುವನು. ಅಂತ್ಯದಲ್ಲಿ ದೇವತ್ವವನ್ನೂ ಅನುಗ್ರಹಿಸುವನು. ॥೧೬೫॥

ಆ ದೇವೋತ್ತಮನಾದ ಶಂಕರನು ಸುಪ್ರೀತನಾದರೆ ತನ್ನ ಭಕ್ತನಿಗೆ ಕೊಡಬಾರದೆಂಬುದೊಂದೂ ಆತನಿಗೆ ಕಾಣುವುದಿಲ್ಲ. ಮೊದಲು ಅಪಾರವಾದ ಐಶ್ವರ್ಯವನ್ನೂ ಅನಂತರ ದೇವತ್ವವನ್ನೂ ಅನುಗ್ರಹಿಸುವನು. ಹೀಗೆಯೇ ಕ್ರಮಕ್ರಮೇಣ ಅಧಿಕವಾದ ಫಲಗಳನ್ನು ಕೊಡುವನು. ಅಲ್ಲದೇ ಅಂತ್ಯದಲ್ಲಿ ತನ್ನ ಸಾಮೀಪ್ಯವನ್ನೂ ಸಹ ಕರುಣಿಸುವನು. ಆದುದರಿಂದ ಈ ಪ್ರಪಂಚದಲ್ಲಿ ಕಾಣುವ ಸಕಲ

ಇತಿ ಗ್ರಾಮಜನ್ಯೈಸ್ಸಾಕಂ ಕೃತ್ವಾ ವಾರ್ತಾಮಹೋತ್ಸವಂ ।
ಯಯೌ ವನಂ ಸ ಯತ್ರಾಸೀಚ್ಛಾಂಭವಃ ಸ್ವೋಪದೇಶಕಃ ॥೧೬೭॥

ತದಾ ತನ್ಮಾರ್ಗಗಮನೇ ಕುಂಭೀಕುಂಭಸ್ಥಲಾಗತೈಃ ।
ಮದಧಾರಾಗಂಧವಾಹೈರ್ವ್ಯಾಪ್ತಮೇವ ಹಿ ತದ್ವನಂ ॥೧೬೮॥

ತದಾ ತದ್ಗಂಧಮಾಘ್ರಾಯ ಮೃಗೇಂದ್ರಾಸ್ಸಮುಪಸ್ಥಿತಾಃ ।
ತತ್ಕುಂಭೀಕುಂಭದಳನಂ ಕರ್ತುಮೇವ ಮದೋದ್ಧತಾಃ ॥೧೬೯॥

ವಸ್ತುಗಳೂ ಆ ಪರಮೇಶ್ವರನ ಅಧಿಷ್ಠಾನವೆಂತಲೇ ತಿಳಿಯಬೇಕು. ಹೇಗಾದರೂ ಮಾಡಿ ಪರಶಿವನನ್ನು ಸುಪ್ರೀತನನ್ನಾಗಿ ಮಾಡಿಕೊಳ್ಳಬೇಕು. ಆ ಮೃತ್ಯುಂಜಯನು ಕುಪಿತನಾದರೆ ಈ ಪ್ರಪಂಚವೇ ಉಳಿಯುವುದು ಕಷ್ಟ. ಸಾಮಾನ್ಯ ಒಂದೆರಡು ವ್ಯಕ್ತಿಗಳು ನಾಶಹೊಂದುವುದಂತೂ ಇರಲಿ. ಅಖಂಡ ಮೂರು ಲೋಕವೂ ಆತನ ಕೋಪಕ್ಕೆ ಪಾತ್ರವಾಗಿ ಧ್ವಂಸವಾಗುವುದು. ||೧೬೬||

ಈ ರೀತಿಯಾಗಿ ಆ ವಿಪ್ರನು ತನ್ನ ಊರಿನ ಜನರೆಲ್ಲರೊಡನೆ ಸಂಭಾಷಿಸಿ ತನ್ನ ವಿದ್ಯಮಾನವನ್ನೂ ಮತ್ತು ಪರಮೇಶ್ವರನ ಮಹಿಮೆಯನ್ನೂ ಕೊಂಡಾಡಿದನು. ಅನಂತರ ತನಗೆ ಪೂರ್ವದಲ್ಲಿ ಶಿವಾರಾಧನೆಯನ್ನು ಮಾಡಲು ಉಪದೇಶವನ್ನು ಮಾಡಿದ ಶಾಂಭವಶ್ರೇಷ್ಠನನ್ನು ಸಂದರ್ಶಿಸಬೇಕೆಂದು ಆತನು ವಾಸಿಸುತ್ತಿದ್ದ ಕಾಡಿಗೆ ಹೊರಟನು. ||೧೬೭||

ಆ ವಿಪ್ರನು ಆನೆಯ ಮೇಲೆ ಕುಳಿತು ಕಾಡುದಾರಿಯಲ್ಲಿ ಪ್ರಯಾಣ ಮಾಡುತ್ತಿದ್ದನು. ಜೊತೆಯಲ್ಲಿ ಮತ್ತೂ ಅನೇಕ ಮದಗಜಗಳಿದ್ದವು. ಆ ಗಜಗಳ ಗಂಡಸ್ಥಳದಿಂದ ಸುರಿಯುತ್ತಿದ್ದ ಮದೋದಕದ ಪರಿಮಳವನ್ನು ಹೊತ್ತುಕೊಂಡು ಹೋಗಿ ಗಾಳಿಯು ಕಾಡಿನಲ್ಲೆಲ್ಲಾ ಹರಡುತ್ತಿತ್ತು. ||೧೬೮||

ಅದೇ ಅರಣ್ಯದಲ್ಲಿ ಅನೇಕ ಸಿಂಹಗಳೂ ವಾಸಿಸುತ್ತಿದ್ದವು. ಆನೆಯ ಮದೋದಕದ ವಾಸನೆಯು ಬಂದೊಡನೆಯೇ ಸಮೀಪದಲ್ಲೇ ಮದಗಜಗಳಿವೆ ಎಂದು ಅವುಗಳಿಗೆ ಗೊತ್ತಾಯಿತು. ಆ ಕೂಡಲೇ ಸಿಂಹಗಳು ಆನೆಗಳ ಕುಂಭಸ್ಥಳವನ್ನು ಭೇದಿಸಲು ಘೀಂಕಾರಪುರಸ್ಸರವಾಗಿ ಎದುರಿಗೆ ಬಂದವು. ||೧೬೯||

ಕರಿಯೂಥಂ ವಿಲೋಕ್ಯಾಗ್ರೇ ಪಶ್ಚಾತ್ಸಿಂಹವರಾನಪಿ ।
ಕಾಲಕಾಲಂ ಸ ಸಸ್ಮಾರ ನಿಶ್ಶಂಕೋಽಪಿ ಸ ಶಾಂಕರಃ ॥೧೭೦॥

ಆನೀಲಗಿರಿಸಂಕಾಶಕರಿಪೋಷಣತತ್ಪರಃ ।
ಸಿಂಹಾನಭಿಮುಖಾನ್ ದೃಷ್ಟ್ವಾ ಪ್ರಾಹ ಶಾಂಕರಸತ್ತಮಃ ॥೧೭೧॥

ಇದಂ ಬಿಲ್ವವನಂ ತಾವತ್ಪಾವನಂ ಕಾಲಶಾಸಕಃ ।
ಲಿಂಗರೂಪಂ ಸಮಾಸಾದ್ಯ ತಿಷ್ಠತೀತ್ಯವಗಮ್ಯತೇ ॥೧೭೨॥

ನ ಚಾತ್ರ ಗಮನಂ ಯುಕ್ತಂ ವೈರೇಣ ಕರಿವೈರಿಣಂ ।
ಅವೈರೇಣ ಯಥಾಕಾಮಮತ್ರಾಸ್ಯಾಗಮನಂ ಮತಂ ॥೧೭೩॥

ಅಕಸ್ಮಾತ್ ಮುಂಭಾಗದಲ್ಲಿದ್ದ ಸಿಂಹಗಳನ್ನು ನೋಡಿ ಆ ಬ್ರಾಹ್ಮಣನು ಕ್ಷಣಕಾಲ ವಿಹ್ವಲನಾದನು. ಆನಂತರ ಮತ್ತೆ ಯಾವುದರಿಂದಲೂ ಸುಖವಿಲ್ಲವೆಂದು ನಿಶ್ಚಯಿಸಿ ಆನೆ ಮತ್ತು ಸಿಂಹಗಳ ಮಧ್ಯದಲ್ಲಿದ್ದು ನಿರ್ಭೀತಿಯಿಂದ ಪರಮೇಶ್ವರನನ್ನು ಧ್ಯಾನಿಸಲಾರಂಭಿಸಿದನು. ॥೧೭೦॥

ಅನೇಕ ಮದಗಜಗಳನ್ನು ಪಡೆದುಕೊಂಡಿದ್ದ ಆ ವಿಪ್ರನು ಸಿಂಹಗಳು ತನ್ನೆದುರಿನಲ್ಲಿ ಮೇಲೆ ಬೀಳಲು ಸಿದ್ಧವಾಗಿದ್ದರೂ ಸಮಾಧಾನದಿಂದ ಈ ರೀತಿ ತನ್ನ ಅಭಿಪ್ರಾಯವನ್ನು ಪ್ರಕಟಿಸಿದನು. ॥೧೭೧॥

ಇದು ಪವಿತ್ರವಾದ ಬಿಲ್ವವೃಕ್ಷಗಳಿಂದ ಕೂಡಿದ ವನವಾಗಿದೆ. ಆದುದರಿಂದ ಇದು ಮಹಾ ಪುಣ್ಯಕ್ಷೇತ್ರವೇ ಎನಿಸಿದೆ. ಸಾಕ್ಷಾತ್ ಮೃತ್ಯುಂಜಯನೂ ಲಿಂಗರೂಪವನ್ನು ತಳೆದುಕೊಂಡು ಇಲ್ಲಿ ವಾಸಮಾಡುತ್ತಾನೆ. ಇಂತಹ ಪಾವನವಾದ ಪ್ರದೇಶದಲ್ಲಿ ನಾವು ಯಾರಲ್ಲಿಯೂ ದ್ವೇಷಾಸೂಯೆಗಳನ್ನು ಮಾಡಕೂಡದು. ಅಷ್ಟೇಕೆ ? ನಮ್ಮ ಗಜಗಳನ್ನೇ ಕೊಲ್ಲಲು ಬಂದಿರುವ ಸಿಂಹಗಳಲ್ಲಿಯೂ ನಮಗೆ ದ್ವೇಷವಿಲ್ಲ. ಯಾರೇ ಆಗಿರಲಿ, ಈ ಪ್ರದೇಶದಲ್ಲಿ ಸೌಜನ್ಯದಿಂದ ಶಾಂತಚಿತ್ತರಾಗಿರಬೇಕು. ನಾವು ಸರ್ವ ಪ್ರಾಣಿಗಳಲ್ಲಿಯೂ ಪ್ರೇಮಯುಕ್ತರಾಗಿರುತ್ತೇವೆ. ಎಲ್ಲಾ ಪ್ರಾಣಿಗಳೂ ತಮ್ಮ ತಮ್ಮ ಇಷ್ಟದಂತೆ ಏನನ್ನು ಬೇಕಾದರೂ ಮಾಡಬಹುದು. ॥೧೭೨-೧೭೩॥

ನವಬಿಲ್ವವನಾಸಾರಪವನೋಽತೀವಪಾವನಃ ।
ಯಾವತ್ಪ್ರಸರತಿ ಸ್ವೈರಂ ತಾವದ್ವೈರೈರಲಂ ಖಲು ॥೧೭೪॥

ಇತಿ ತದ್ವಚನಂ ಶ್ರುತ್ವಾ ಸ್ತಬ್ಧಾಸ್ಸಿಂಹಾಃ ಪರಸ್ಪರಂ ।
ಪ್ರಭಾವಂ ಶಾಂಭವಂ ಸ್ಮೃತ್ವಾ ತದಾ ತಸ್ಮಿನ್ ಮಹಾವನೇ ॥೧೭೫॥

ತತಃ ಪರಂ ಸ ವಿಪ್ರೋಽಪಿ ರತ್ನಯಾನಮುಪಾಶ್ರಿತಃ ।
ಶಾಂಭವಾಶ್ರಮಮಾಗತ್ಯ ಸಂತೋಷಂ ಪ್ರಾಪ ಶಾಂಕರಃ ॥೧೭೬॥

ತತಸ್ತಂ ಗುರುಮಾಲೋಕ್ಯ ಪ್ರಣಮ್ಯ ಚ ಪುನಃ ಪುನಃ ।
ಕಥಯಾಮಾಸ ವೃತ್ತಾಂತಂ ಸ್ವಕಂ ಸರ್ವಮಶೇಷತಃ ॥೧೭೭॥

ಈ ನೂತನ ಬಿಲ್ವವೃಕ್ಷಗಳ ಸಂಪರ್ಕವನ್ನು ಪಡೆದುಕೊಂಡು ಪವಿತ್ರವಾದ ಗಾಳಿಯು ಎಷ್ಟು ದೂರದ ವರೆಗೆ ವ್ಯಾಪಿಸುವುದೋ, ಅಲ್ಲಿನವರೆಗೂ ನಾವು ಯಾರನ್ನೂ ದ್ವೇಷಮಾಡುವುದಿಲ್ಲ. ಈ ಪ್ರದೇಶದಲ್ಲಿ ಇರುವ ತನಕ ಸಕಲ ಪ್ರಾಣಿಗಳಲ್ಲಿಯೂ ನಮ್ಮ ಪ್ರೇಮ ಪೂರ್ಣವಾಗಿರುತ್ತದೆ. ॥೧೭೪॥

ಈ ರೀತಿಯಾಗಿ ಬ್ರಾಹ್ಮಣನು ಗಟ್ಟಿಯಾಗಿ ಹೇಳುತ್ತಾ ತನ್ನ ಮತವನ್ನು ಪ್ರಕಟಿಸಲು ಅದನ್ನು ಕೇಳಿ ಆ ಸಿಂಹಗಳಿಗೆ ಜ್ಞಾನವುಂಟಾಯಿತು. ಈತನು ಈಶ್ವರ ಭಕ್ತನೆಂಬುದು ಅವುಗಳಿಗೆ ತಿಳಿಯಿತು. ಶಿವಮಹಿಮೆಯು ಎಷ್ಟು ಮಹತ್ತರ ವೆಂಬುದೂ ಅವಕ್ಕೆ ಅರಿವಾಯಿತು. ಆಗ ಆ ಸಿಂಹಗಳೆಲ್ಲವೂ ಹಾಗೆಯೇ ಸ್ತಬ್ಧವಾಗಿ ನಿಂತುಕೊಂಡುಬಿಟ್ಟವು. ಯಾವ ಹಿಂಸಾಕೃತ್ಯವನ್ನೂ ಮಾಡಲಿಲ್ಲ. ॥೧೭೫॥

ಅನಂತರ ಆ ವಿಪ್ರನು ಪರಮ ಶಾಂತತೆಯಿಂದ ಸಂತೋಷವನ್ನು ಸೂಚಿಸುತ್ತಾ ರತ್ನಮಯವಾದ ಯಾನವನ್ನೇರಿ ತನ್ನ ಗುರುವಾದ ಪರಶಿವಭಕ್ತನು ವಾಸಿಸುತ್ತಿದ್ದೆಡೆಗೆ ಹೋದನು. ॥೧೭೬॥

ಆ ಆಶ್ರಮಕ್ಕೆ ತಲಪಿದ ಕೂಡಲೇ ಗುರುವನ್ನು ಸಂದರ್ಶಿಸಿ ಭಕ್ತಿಯಿಂದ ಅನೇಕಾವರ್ತಿ ನಮಸ್ಕರಿಸಿದನು. ಅನಂತರ ಸಂಭಾಷಣೆಯ ಪ್ರಸಂಗದಲ್ಲಿ ತನ್ನ ಆದ್ಯಂತ ವಿದ್ಯಮಾನವನ್ನು ಒಂದು ವಿಚಾರವೂ ಉಳಿಯದಂತೆ ಸಕಲವನ್ನೂ ಗುರುವಿಗೆ ತಿಳಿಸಿದನು. ॥೧೭೭॥

ತದಾಕರ್ಣ್ಯ ಸ ಶೈವೋಽಪಿ ತಮಾಹ ಪ್ರೀತಮಾನಸಂ ।
ಉತ್ಸಾಹಂ ಜನಯನ್ನೇವ ಪುನಶ್ಶಂಕರಪೂಜನೇ ॥೧೭೮॥

॥ ಶೈವ ಉವಾಚ ॥

ಯತ್ಪಾದುಕಾರಾಧಕಪಾದುಕಾರ್ಚಾ
ಸ್ಯಪಾರಮೈಶ್ವರ್ಯಮಯತ್ನಲಭ್ಯಂ ॥
ಕರೋತಿ ತಲ್ಲಿಂಗಸಮರ್ಚನೇನ
ಕಿಮೇವಮೈಶ್ವರ್ಯಮಿತಿ ಸ್ಮರಾಮಿ ॥೧೭೯॥

ಇಂದ್ರೋಪೇಂದ್ರಚತುರ್ಮುಖಾದಿಕಸುರಾರಾಧ್ಯಂ ಪರಾರ್ಘ್ಯಂ ಪರಂ
ಯಲ್ಲಿಂಗಂ ತದವೇಕ್ಷಿತಂ ಸಕೃದಪಿ ಪ್ರಾರಬ್ಧಲಬ್ಧಾನ್ಯಪಿ ।
ಪಾಪಾನಿ ಪ್ರಹರತ್ಯಪಾರಸುಕೃತಾಂಭೋಧಿಪ್ರವೃದ್ಧಿಂ ಕರೋ
ತ್ಯೈಶ್ವರ್ಯಾಣ್ಯತುಲಾನಿ ಮುಕ್ತಿರಿತಿ ಮೇ ತಾವತ್ಪ್ರಭಾ ಜಾಯತೇ ॥೧೮೦॥

ಆ ಎಲ್ಲಾ ಕಥೆಯನ್ನೂ ಕೇಳಿ ಆ ಶೈವನಿಗೆ ಅತ್ಯಾಶ್ಚರ್ಯವುಂಟಾಯಿತು. ಬಳಿಕ ಆ ವಿಪ್ರನನ್ನು ಅಭಿನಂದಿಸುತ್ತಾ ಹಾಗೂ ಶಿವಾರಾಧನೆಯಲ್ಲಿ ಮತ್ತೂ ಹೆಚ್ಚಾದ ಉತ್ಸಾಹವನ್ನು ಆತನಿಗೆ ಹುಟ್ಟಿಸುತ್ತಾ ಆ ಶೈವನು ಹೀಗೆ ಹೇಳಿದನು. ॥೧೭೮॥

ಯಾವ ದೇವದೇವನ ಪಾದಸೇವೆಯನ್ನು ಮಾಡುವವನ ಪಾದಸೇವೆಯನ್ನು ಮಾಡಿದರೇ ಅಪಾರವಾದ ಐಶ್ವರ್ಯವು ಸುಲಭವಾಗಿ ಲಭಿಸುವಾಗ, ಸಾಕ್ಷಾತ್ ಆ ಪರಶಿವನ ಆತ್ಮಸ್ವರೂಪವಾಗಿರುವ ಶಿವಲಿಂಗವನ್ನು ಪೂಜಿಸಿದ ಬಳಿಕಐಶ್ವರ್ಯವು ಲಭಿಸುವುದರಲ್ಲಿ ಆಶ್ಚರ್ಯವೇನು? ಅಥವಾ ಇದರಲ್ಲಿ ಅತಿಶಯವಾದರೂ ಏನಿದೆ? ॥೧೭೯॥

ಪರಮೇಶ್ವರನ ಆತ್ಮಸ್ವರೂಪವಾದ ಶಿವಲಿಂಗವನ್ನು ದೇವೇಂದ್ರನೇ ಮೊದಲಾದ ದೇವತೆಗಳೂ, ವಿಷ್ಣು ಮತ್ತು ಬ್ರಹ್ಮನೂ, ಅತಿಶಯವಾದ ರೀತಿಯಲ್ಲಿ ಪ್ರಯತ್ನದಿಂದ ಪೂಜಿಸುವರು. ಇದಕ್ಕಿಂತಲೂ ಹೆಚ್ಚಾಗಿ ಆ ಶಿವಲಿಂಗದ ಪರಮ ಮಹತ್ವವನ್ನು ಹೇಗೆ ಹೇಳಲು ಸಾಧ್ಯ! ಅಂಥ ಶಿವಲಿಂಗವನ್ನು ಸಂದರ್ಶಿಸಿದರೆ ಪ್ರಾರಬ್ಧಕರ್ಮಗಳೂ ಮತ್ತು ಮಹಾ ಪಾಪಗಳೂ ನಿಶ್ಶೇಷವಾಗಿ ನಾಶಹೊಂದುವುವು. ಅಲ್ಲದೇ ಅಪಾರವಾದ ಪುಣ್ಯರಾಶಿಯೂ ಮತ್ತು ಇಹದಲ್ಲಿ ಐಶ್ವರ್ಯವೇ ಮೊದಲಾದ

ಭೂತಿಭೂಷಿತಸರ್ವಾಂಗೋ ಲಿಂಗಾರ್ಚನಪರೋ ಭವ ।
ಇತೋಽಪಿ ಕೋಟಿಗುಣಿತಂ ತವೈಶ್ವರ್ಯಂ ಭವಿಷ್ಯತಿ ॥೧೮೧॥

ಇಂದ್ರೋಪೇಂದ್ರಾದಯಸ್ಸರ್ವೇ ಕರಿಷ್ಯಂತಿ ತದರ್ಚನಂ ।
ಪುತ್ರಪೌತ್ರಾದಿವೃದ್ಧಿಶ್ಚ ಭವಿಷ್ಯತಿ ಶಿವಾರ್ಚನಾತ್ ॥೧೮೨॥

ಮುಕ್ತಿರ್ಭವಿಷ್ಯತಿ ಚ ಪಾಪನಾಶಃ
ಸಂಸಾರರೋಗವ್ಯಸನಕ್ಷಯೋಽಪಿ ।
ಅತೋ ವಿರೂಪಾಕ್ಷಸಮರ್ಚನೇನ
ನೇಯಸ್ತ್ವಯಾಯಂ ಸಮಯೋಽಭಯೇನ ॥೧೮೩॥

ಸುಖಗಳೂ ಪರದಲ್ಲಿ ಪರಮಪದವಾದ ಮೋಕ್ಷವೂ ಅನಾಯಾಸದಿಂದ ಪ್ರಾಪ್ತವಾಗುವುವು. ||೧೮೦||

ಆದುದರಿಂದ ಎಲೈ ವಿಪ್ರನೇ! ಇನ್ನು ಮುಂದಕ್ಕೂ ಸಹ ಪ್ರಮಾದವನ್ನು ತಂದುಕೊಳ್ಳದೇ ಸರ್ವದಾ ಶಿವಾರಾಧನೆಯನ್ನು ಮಾಡು. ಭಸ್ಮರುದ್ರಾಕ್ಷಗಳನ್ನು ಧರಿಸಿ ಪವಿತ್ರಾತ್ಮನಾಗಿ ಸತತವೂ ಶಿವಲಿಂಗಾರ್ಚನೆಯನ್ನೇ ಮಾಡುತ್ತಿರು. ಆಗ ನಿನಗೆ ಈಗ ಲಭಿಸಿರುವುದಕ್ಕಿಂತಲೂ ಕೋಟಿಪಾಲು ಹೆಚ್ಚು ಐಶ್ವರ್ಯವು ಲಭಿಸುವುದು. ||೧೮೧||

ದೇವೇಂದ್ರ ಮತ್ತು ವಿಷ್ಣು ಮೊದಲಾದ ಸಮಸ್ತ ದೇವತೆಗಳೂ ಶಿವಲಿಂಗಾರ್ಚನೆಯನ್ನು ಮಾಡಿಯೇ ಅಂತಹ ಉತ್ಕೃಷ್ಟವಾದ ಮಹಿಮೆಯನ್ನು ಮತ್ತು ಐಶ್ವರ್ಯವನ್ನೂ ಸಹ ಪಡೆದುಕೊಂಡಿರುವರು. ಆ ಶಿವಾರ್ಚನೆಯಿಂದ ಪುತ್ರಸಂಪತ್ತು ಮುಂತಾದ ಇನ್ನೂ ಅನೇಕ ಸಂಪತ್ತುಗಳೂ ಸಹ ಅಭಿವೃದ್ಧಿವಾಗುವುವು. ||೧೮೨||

ಆ ದೇವದೇವನಾದ ವಿರೂಪಾಕ್ಷನ ಆರಾಧನೆಯಿಂದ ಪಾಪನಾಶವಾಗುವುದು. ಈ ಸಂಸಾರವೆಂಬ ಪ್ರಬಲವ್ಯಾಧಿಯೂ ನಿವೃತ್ತವಾಗುವುದು. ಅಂತ್ಯದಲ್ಲಿ ಮೋಕ್ಷವು ಸಹ ಲಭಿಸುವುದು. ಆದುದರಿಂದ ಇನ್ನು ನೀನು ಯಾವ ಭಯ, ಚಿಂತೆ ಅಥವಾ ಸಂಶಯಗಳಿಗೂ ಒಳಗಾಗದೇ ಸತತವೂ ಶಿವಾರ್ಚನೆಯನ್ನು ಮಾಡುತ್ತಾ ಕಾಲವನ್ನು ಕಳೆ. ಇದರಿಂದಲೇ ನಿನಗೆ ಸಕಲ ಶ್ರೇಯಸ್ಸುಗಳೂ ಕೈಗೂಡುವುವು. ||೧೮೩||

ಅತಃಪರಂ ಜನ್ಮಜರಾದಿಭೀತಿಂ
ವಿಹಾಯ ಮೃತ್ಯುಂಜಯಮಾದರೇಣ ॥
ಭಜಸ್ವ ಭಾಗ್ಯಾನಿ ಲಭಸ್ವ ಭೋಗ್ಯಾ-
ನ್ಯನುಕ್ಷಣಂ ಶ್ರೀಫಲವೃಕ್ಷಮೂಲೇ ॥೧೮೪॥

ಇತ್ಯುಕ್ತಸ್ಸ ಯಯೌ ನತ್ವಾ ತಂ ಗುರುಂ ಶಾಂಕರೋತ್ತಮಂ ।
ತದಾ ಪ್ರಭೃತಿ ತಸ್ಯಾಸೀದ್ವಿಶ್ವಾಸಶ್ಶಿವಪೂಜನೇ ॥೧೮೫॥

ತತಸ್ಸ ಕಾರಯಾಮಾಸ ಸದನಾನ್ಯಮಿತಾನ್ಯಪಿ ।
ಗಜವಾಜಿಮಹೋಷ್ಟ್ರಾದಿವಾಸಯೋಗ್ಯಾನಿ ಭೂರಿಶಃ ॥೧೮೬॥

ಪ್ರಾತಃಕಾಲಂ ಸಮಾರಭ್ಯ ಶಿವಲಿಂಗಾರ್ಚನೋದ್ಯತಃ ।
ವನಾನಿ ಕಾರಯಾಮಾಸ ಶಿವಪೂಜಾರ್ಥಮಾದರಾತ್ ॥೧೮೭॥

ಇನ್ನು ನಿನಗೆ ಜನ್ಮಾಂತರವಾಗಲಿ ವಾರ್ಧಕ್ಯವಾಗಲಿ ಬರುವುದೆಂಬ ಯೋಚನೆಯು ಬೇಡ. ಸತತವೂ ನಿಶ್ಚಿಂತನಾಗಿ ಮೃತ್ಯುಂಜಯನನ್ನೇ ಭಕ್ತಿಯಿಂದ ಭಜಿಸುತ್ತಿರು. ಸರ್ವದಾ ಬಿಲ್ವವೃಕ್ಷಮೂಲದಲ್ಲಿ ಶಿವನನ್ನು ಆರಾಧಿಸು. ನಿನಗೆ ಸಕಲ ಸೌಭಾಗ್ಯಗಳೂ ಸಂಪೂರ್ಣ ಸಂಪತ್ತುಗಳೂ ತಾವಾಗಿಯೇ ಪ್ರಾಪ್ತವಾಗುವುವು. ||೧೮೪||

ಈ ರೀತಿಯಾಗಿ ಆ ಶೈವೋತ್ತಮನಿಂದ ಉಪದೇಶವನ್ನು ಪಡೆದು ಆ ವಿಪ್ರನು ಗುರುವಿಗೆ ಭಕ್ತಿಯಿಂದ ನಮಸ್ಕರಿಸಿ ತನ್ನ ಮನೆಗೆ ತೆರಳಿದನು. ಊರಿಗೆ ಬಂದನಂತರ ಆ ಬ್ರಾಹ್ಮಣನು ಅತ್ಯಂತ ದೃಢಮನಸ್ಸಿನಿಂದ ಶಿವಾರಾಧನೆಯನ್ನು ಮಾಡಲಾರಂಭಿಸಿದನು. ಆತನಿಗೆ ಶಿವಪೂಜೆಯಲ್ಲಿ ನಂಬಿಕೆಯೂ ಆಸಕ್ತಿಯೂ ದಿನೇ ದಿನೇ ಅಭಿವೃದ್ಧಿಯಾಯಿತು. ||೧೮೫||

ಅನಂತರ ಆ ವಿಪ್ರನು ತನಗೆ ವಾಸಕ್ಕೆ ಉತ್ತಮವಾದ ಮನೆಗಳನ್ನು ಕಟ್ಟಿಸಿಕೊಂಡನಲ್ಲದೇ, ತನ್ನ ಆನೆ, ಕುದುರೆ, ಒಂಟೆ ಮುಂತಾದ ಸಕಲ ವಸ್ತುವಾಹನಗಳಿಗೂ ಸುರಕ್ಷಿತವಾಗಿರಲು ಶ್ರೇಷ್ಠವಾದ ಅನೇಕ ಮನೆಗಳನ್ನು ನಿರ್ಮಿಸಿದನು. ||೧೮೬||

ಆ ಶಿವಭಕ್ತನು ಶಿವಾರಾಧನೆಗೆ ಸೌಕರ್ಯವಾಗುವಂತೆ ಬಿಲ್ವವನ ಮತ್ತು ಪುಷ್ಪೋದ್ಯಾನ ಮೊದಲಾದವುಗಳನ್ನೂ ಕಲ್ಪಿಸಿದನು. ಬಿಲ್ವವೃಕ್ಷಗಳ ಮೂಲಗಳಲ್ಲಿ

ಬಿಲ್ವಭೂರುಹಮೂಲೇಷು ಶಾಂಗಲಿಂಗಾನಿ ಕೋಟಿಶಃ ।
ತುಂಗಾನಿ ಸ್ಥಾಪಯಾಮಾಸ ಸ ಏವ ಶಿವಪೂಜಕಃ ॥೧೮೮॥

ಪಂಚಾಮೃತಪ್ರವಾಹಾದ್ಯೈಃ ಪೂಜಯಾಮಾಸ ಶಂಕರಂ ।
ಕುಮಾರಾಶ್ಯಾಂಕರಾಸ್ತಸ್ಯ ಜಾತಾ ಏವ ಸಹಸ್ರಶಃ ॥೧೮೯॥

ತೈರರ್ಚಿತಾನಿ ಲಿಂಗಾನಿ ಕೋಟಿಶಃ ಕುಸುಮಾದಿಭಿಃ ।
ಶಿವಲಿಂಗಾರ್ಚನಂ ತ್ಯಕ್ತ್ವಾ ನಾನ್ಯತ್ಕುರ್ವಂತಿ ತತ್ಸುತಾಃ ॥೧೯೦॥

ತತ್ಪ್ರಭಾವಾನುಕಥನಂ ಕರ್ತುಮೇವ ನ ಶಕ್ಯತೇ ।
ಶಿವಾರ್ಚನೇನ ತೈರ್ಲಬ್ಧಃ ಪ್ರಭಾವಸ್ತಾದೃಶಃ ಖಲು ॥೧೯೧॥

ಇಂದ್ರಲೋಕಾದಿಲೋಕೇಷು ಗತ್ವಾ ತೇ ಕುಸುಮಾನ್ಯಪಿ ।
ಸಮಾನೀಯ ಮಹಾದೇವಂ ಪೂಜಯಂತಿ ಪ್ರಯತ್ನತಃ ॥೧೯೨॥

ಅನೇಕ ದೊಡ್ಡ ದೊಡ್ಡ ಶಿವಲಿಂಗಗಳನ್ನು ಸ್ಥಾಪಿಸಿದನು. ಆ ಶಿವಲಿಂಗಗಳಿಗೆ ನಿತ್ಯವೂ ಪ್ರಾತಃಕಾಲ ಮೊದಲುಗೊಂಡು ಅವಿಚ್ಛಿನ್ನವಾಗಿ ಪೂಜಾಸಮಾರಂಭವನ್ನು ನಡೆಸುವುದರಲ್ಲಿಯೇ ಆತನು ಆಸಕ್ತನಾಗಿರುತ್ತಿದ್ದನು. ||೧೮೭-೧೮೮||

ಆ ಬ್ರಾಹ್ಮಣನು ನಿತ್ಯವೂ ಶಿವಲಿಂಗಗಳಿಗೆ ಪಂಚಾಮೃತಾಭಿಷೇಕ ಪೂರ್ವಕವಾಗಿ ಮಹಾವೈಭವದಿಂದ ಪೂಜೆಯನ್ನು ನಡೆಸುತ್ತಿದ್ದನು. ಆತನ ಪುತ್ರರೂ ಸಹ ಮಹಾಶಿವಭಕ್ತರೇ ಆಗಿದ್ದರು. ಇಂಥ ಮಹಾಶೈವರಾದ ಸಹಸ್ರ ಪುತ್ರರು ಆತನಿಗೆ ಜನಿಸಿದರು. ||೧೮೯||

ಆ ಪುತ್ರರೆಲ್ಲರೂ ಸರ್ವದಾ ಶಿವಲಿಂಗಗಳನ್ನು ಕುಸುಮ ಮತ್ತು ಬಿಲ್ವಪತ್ರಿಗಳಿಂದ ಪೂಜಿಸುತ್ತಿದ್ದರು. ಅವರಿಗೆ ಶಿವಾರಾಧನೆಯನ್ನು ಬಿಟ್ಟು ಬೇರೆ ಯಾವುದೂ ರುಚಿಸುತ್ತ ಇರಲಿಲ್ಲ. ಅವರು ಬೇರೆ ಯಾವ ಕಾರ್ಯವನ್ನೂ ಸಹ ಮಾಡುತ್ತಲೇ ಇರಲಿಲ್ಲ. ||೧೯೦||

ಆದ್ದರಿಂದಲೇ ಆ ಪುತ್ರರು ಮಹಾ ಮಹಿಮಾಶಾಲಿಗಳಾಗಿದ್ದರು. ಅವರ ಮಹಿಮೆಯ ಪರಾಕಾಷ್ಠತೆಯನ್ನು ವರ್ಣಿಸಲು ಯಾರಿಂದಲೂ ಸಾಧ್ಯವೇ ಇರಲಿಲ್ಲ. ಇಂದ್ರಲೋಕವೇ ಮುಂತಾದ ದಿವ್ಯಲೋಕಗಳಿಗೂ ಅವರು ಹೋಗಿ ಅಲ್ಲಿಂದ ಅಮೂಲ್ಯವಾದ ಪುಷ್ಪಗಳನ್ನು ತಂದು ಶಿವಾರಾಧನೆ ಮಾಡುತ್ತಿದ್ದರು. ಆ

ತೇ ನಂದನವನಂ ಗತ್ವಾ ತತ್ರ ಮಂದಾರಸಂಭವೈಃ ।
ಲಿಂಗಾನಿ ಪೂಜಯಾಮಾಸುಃ ಪ್ರಸನ್ನೈರಮಿತೈರಪಿ ॥೧೯೩॥

ಪ್ರಸೂನಮಾತ್ರರಹಿತಂ ತದ್ವನಂ ಸಮಭೂತ್ತದಾ ।
ತತಸ್ತತ್ಪಲ್ಲವೈಶ್ಚಕ್ರುಶ್ಶಾಖಾಭಿರಪಿ ಪೂಜಿತಂ ॥೧೯೪॥

ತದಾನೀಮಾಗತೈರ್ದೂತೈರಪಾರ್ಶ್ವೈರ್ವನಪಾಲಕೈಃ ।
ನಿವಾರಿತಾಃ ಕುಮಾರಾಸ್ತೇ ಶಾಖಾದಿಚ್ಛೇದನಾದಪಿ ॥೧೯೫॥

ತತಸ್ತಾನಾಗತಾನ್ ಹತ್ವಾ ತೇ ಸರ್ವೇ ವನಪಾಲಕಾನ್ ।
ಶಾಖಾಭಿರಪಿ ಲಿಂಗಾನಿ ಪೂಜಯಾಮಾಸುರಾದರಾತ್ ॥೧೯೬॥

ಶಿವಾರ್ಚನೆಯಿಂದಲೇ ಅವರ ಸಾಮರ್ಥ್ಯವೂ ಮಹಿಮೆಯೂ ದಿನೇ ದಿನೇ ಅಭಿವೃದ್ಧ ವಾಗುತ್ತಿದ್ದಿತು. ॥೧೯೧-೧೯೨॥

ಆ ಕುಮಾರರು ದೇವಲೋಕದ ನಂದನವನೋದ್ಯಾನಕ್ಕೂ ಹೋಗಿ ಅಲ್ಲಿದ್ದ ಶಿವಲಿಂಗಗಳಿಗೆ ಮಂದಾರಪುಷ್ಪವೇ ಮೊದಲಾದ ದಿವ್ಯ ಪುಷ್ಪಗಳಿಂದ ಸಮೃದ್ಧವಾಗಿ ಪೂಜೆಯನ್ನು ಸಲ್ಲಿಸುತ್ತಿದ್ದರು. ॥೧೯೩॥

ಪ್ರತಿದಿನವೂ ಅಖಂಡವಾಗಿ ಮನತೋಚಿದಂತೆ ಎಲ್ಲಾ ಪುಷ್ಪಗಳನ್ನೂ ಅವರು ಪೂಜಿಸುತ್ತಾ ಬಂದಿದ್ದರಿಂದ ಆ ನಂದನೋದ್ಯಾನವು ಪುಷ್ಪವೇ ಇಲ್ಲದಂತೆ ಬರಿದಾಯಿತು. ಆಗ ಆ ಭಕ್ತಬಾಲಕರು ವೃಕ್ಷಗಳ ಪತ್ರಗಳಿಂದಲೇ ಪೂಜಿಸಲಾರಂಭಿಸಿದರು. ಮೇಲೆ ಮೇಲೆ ಕುಯ್ಯುತ್ತಾ ಬಂದಿದ್ದರಿಂದ ಎಲೆಗಳೂ ಮುಗಿದುಹೋಗಲು ಚಿಕ್ಕ ಚಿಕ್ಕ ಕೊಂಬೆಗಳನ್ನೇ ಮುರಿದುಕೊಂಡು ಶಿವಾರ್ಚನೆ ಮಾಡಲಾರಂಭಿಸಿದರು. ॥೧೯೪॥

ಹೀಗೆ ಕ್ರಮೇಣ ಉದ್ಯಾನವು ನಾಶವಾಗುತ್ತಿರುವುದನ್ನು ನೋಡಿ ಸಹಿಸಲಾರದೇ ವನಪಾಲಕರಾದ ದೇವದೂತರು ಬಂದು ಆ ಬಾಲಕರನ್ನು ತಡೆದರು. ಮತ್ತು ಇನ್ನು ಮುಂದೆ ಉದ್ಯಾನದಲ್ಲಿ ಒಂದು ವೃಕ್ಷವನ್ನೂ ಮುಟ್ಟಕೂಡದೆಂದು ಕಟ್ಟಪ್ಪಣೆಮಾಡಿದರು. ॥೧೯೫॥

ಆ ಕುಮಾರರು ದೂತರ ಮಾತನ್ನು ಕೇಳಲಿಲ್ಲ. ಅನಂತರ ಕಲಹವುಂಟಾಗಲು ಅನೇಕ ದೂತರ ಮೇಲೆ ಬಲಪ್ರಹಾರಮಾಡಿ ಹೊಡೆದರು. ಆ ದೂತರೆಲ್ಲರೂ ಪೆಟ್ಟನ್ನು ಸಹಿಸಲಾರದೇ ಸತ್ತಂತೆ ಅಲ್ಲಿಯೇ ಬಿದ್ದರು. ಪುನಃ ಆ

ತೇಷು ದೂತೇಷು ಯಃ ಕಶ್ಚಿತ್ತೈರ್ಹತೋಽಪಿ ಶನೈಶ್ಶನೈಃ ।
ಗತ್ವಾ ಜಯಂತಂ ವೃತ್ತಾಂತಂ ವನಸ್ಯಾಹಾತಿದುಃಖಿತಃ ॥೧೯೭॥

ತತೋ ಜಯಂತಃ ಕ್ರೋಧೇನ ನಿರ್ಗತಸ್ತದ್ವನಂ ಪ್ರತಿ ।
ಗತ್ವಾ ತಾನಾಹ ದುಷ್ಟಾತ್ಮಾ ವಚನಂ ಕ್ರೋಧಸಾಧನಂ ॥೧೯೮॥

ತೇ ತದ್ವಚನಮಾಕರ್ಣ್ಯ ಶಿವಾರಾಧನತತ್ಪರಾಃ ।
ಕ್ರೋಧಾನಲೇನ ಸಂದಗ್ಧಂ ಜಯಂತಂ ಚಕ್ರುರುದ್ಧತಾಃ ॥೧೯೯॥

ತತಃಪರಂ ತಮಾಕರ್ಣ್ಯ ಜಯಂತಂ ದಗ್ಧಮುದ್ಧತೈಃ ।
ಇಂದ್ರಸ್ಸಮಾಯಯೌ ತತ್ರ ತಾನಾಹಾತೀವದುಃಖಿತಃ ॥೨೦೦॥

ಕುಮಾರರು ವೃಕ್ಷಗಳ ಕೊಂಬೆಗಳನ್ನು ಮುರಿದು ಶಿವಪೂಜೆಯನ್ನು ಮಾಡಲಾರಂಭಿಸಿದರು. ॥೧೯೬॥

ಬಲವಾದ ಪೆಟ್ಟುಗಳನ್ನು ತಿಂದು ಬಿದ್ದಿದ್ದ ಆ ದೂತರಲ್ಲಿ ಒಬ್ಬ ದೂತನು ತನ್ನ ಕಷ್ಟವನ್ನು ಹೇಗೋ ಸಹಿಸಿಕೊಂಡು ಜಯಂತನ ಬಳಿಗೆ ಹೋಗಿ ರೋದಿಸುತ್ತಾ ತಮ್ಮ ದುಸ್ಥಿತಿಯನ್ನೂ ಉದ್ಯಾನದ ದುರ್ಗತಿಯನ್ನೂ ತಿಳಿಸಿದನು. ॥೧೯೭॥

ಆ ವಿದ್ಯಮಾನವನ್ನು ಕೇಳಿದ ಕೂಡಲೇ ಜಯಂತನು ಮಹಾಕ್ರೋಧ ಸಂತಪ್ತನಾದನು. ಆತನು ಕೂಡಲೇ ಕೋಪಾಟೋಪದಿಂದ ವನಕ್ಕೆ ಹೋಗಿ ಆ ಬಾಲಕರನ್ನು ಕುರಿತು ಮನಸ್ವಿಯಾಗಿ ನಿಂದಿಸಿದನು. ಮತ್ತು ಕ್ರೋಧಾಂಧನಾಗಿ ಆ ಕುಮಾರರನ್ನು ಪ್ರತಿಬಂಧಿಸಲು ತೊಡಗಿದನು. ॥೧೯೮॥

ಜಯಂತನ ನಿಷ್ಠುರವಾದ ಮಾತಿನಿಂದಲೂ ಮತ್ತು ಪ್ರತಿಬಂಧಕದಿಂದಲೂ ಆ ಕುಮಾರರಿಗೆ ಕೋಪವುಂಟಾಯಿತು. ಆಗ ಅತ್ಯಂತ ಸಮರ್ಥರಾದ ಆ ಬಾಲಕರು ಕೇವಲ ಕ್ರೋಧಾಗ್ನಿಯಿಂದಲೇ ಜಯಂತನನ್ನು ಸುಟ್ಟು ಭಸ್ಮಮಾಡಿದರು.॥೧೯೯॥

ಆಗ ದೂತರ ಮೂಲಕ ಜಯಂತನ ಅವಸಾನವಾರ್ತೆಯನ್ನು ಕೇಳಿ ಇಂದ್ರನಿಗೆ ಬಹಳ ದುಃಖವುಂಟಾಯಿತು. ಕೂಡಲೇ ಇಂದ್ರನು ಉದ್ಯಾನಕ್ಕೆ ಬಂದು ಶಿವಪೂಜಾತತ್ಪರರಾದ ಆ ಕುಮಾರರನ್ನು ನಿಂದಿಸಲಾರಂಭಿಸಿದನು. ॥೨೦೦॥

ನಿಷ್ಠುರಂ ವಚನಂ ತೇನ ಯದುಕ್ತಮತಿದುಸ್ಸಹಂ ।
ತದಾಕರ್ಣನಮಾತ್ರೇಣ ತೇಽಪಿ ಕ್ರೋಧಸಮಾಕುಲಾಃ ॥೨೦೧॥

ತತಸ್ತಮಿಂದ್ರಂ ತೇ ಸರ್ವೇ ಸ್ವಪಾದತಲಘಾತನೈಃ ।
ಅಸ್ಥಿಮಾತ್ರಾವಶಿಷ್ಟಂ ಚ ಚಕ್ರುಃ ಕ್ರೋಧಾನಲೈರ್ಮುಹುಃ ॥೨೦೨॥

ಇಂದ್ರೇಽಪಿ ನಿಹತೇ ತಸ್ಮಿನ್ ತತ್ಕ್ರೋಧಶ್ಶಾಂತಿಮಾಪ ಸಃ ।
ತತಸ್ಸಮಾಗತಾಸ್ಸರ್ವೇ ಸುರಾಸ್ಸೂರ್ಯಾದಯಸ್ತದಾ ॥೨೦೩॥

ತೇ ಸಮಾಗತ್ಯ ತಾನಾಹುಃ ಪುರಸ್ಕೃತ್ಯ ಗುರುಂ ಸುರಾಃ ।
ಕ್ಷಮಧ್ವಂ ಚ ಕ್ಷಮಧ್ವಂ ಚ ಕ್ಷಮಧ್ವಮಿತಿ ತತ್ಸ್ವರಾಃ ॥೨೦೪॥

ತತೋ ಗುರುರುವಾಚೇದಂ ವಚನಂ ಶೈವಪುಂಗವಾನ್ ।
ಪ್ರಣಮ್ಯ ವಿನಯೇನೈವ ಕೃತಾಂಜಲಿಪುಟೋ ಮುಹುಃ ॥೨೦೫॥

ಇಂದ್ರನು ಬಹುವಾಗಿ ನಿಂದಿಸಲು ಆಗ ಆ ಕುಮಾರರಿಗೂ ಸಹಿಸಲಾಗಲಿಲ್ಲ. ಅವರಿಗೂ ಬಹಳ ಕೋಪವುಂಟಾಯಿತು. ||೨೦೧||

ಆ ಕುಮಾರರ ಕ್ರೋಧವು ಬಹಳ ಉಗ್ರವಾಯಿತು. ಆಗ ಅವರು ಇಂದ್ರನ ಮೇಲೇರಿ ಹೋಗಿ ಆತನನ್ನು ಕಾಲಿನ ಕೆಳಗೆ ಕೆಡವಿಕೊಂಡು ಚೆನ್ನಾಗಿ ತುಳಿದು ಹಿಚಿಕಿದರು. ಇಂದ್ರನ ಅವಸ್ಥೆಯು ಅತ್ಯಂತ ಶೋಚನೀಯವಾಯಿತು. ಆತನ ಎಲಬುಗಳು ಮಾತ್ರ ಉಳಿದುವು. ಅಷ್ಟರ ವರೆಗೂ ಅವಿಚ್ಛಿನ್ನವಾಗಿ ತುಳಿದ ಮೇಲೆಯೇ ಆ ಕುಮಾರರ ಕೋಪವು ಶಾಂತವಾಯಿತು. ||೨೦೨||

ಈ ವರ್ತಮಾನವು ದೇವತೆಗಳಿಗೆ ಮುಟ್ಟಲು ಆ ಕೂಡಲೇ ಸೂರ್ಯನೇ ಮೊದಲಾದ ಸಮಸ್ತ ದೇವತೆಗಳೂ ಬೃಹಸ್ಪತಿಯನ್ನು ಮುಂದುಮಾಡಿಕೊಂಡು ಬಂದು ಆ ಕುಮಾರರ ಕೈಕಾಲುಗಳಿಗೆ ಅಡ್ಡಬಿದ್ದು, ಸರ್ವಾಪರಾಧವಾಯಿತು ಕ್ಷಮಿಸಬೇಕು ಕಾಪಾಡಬೇಕು ಎಂದು ಪ್ರಾರ್ಥಿಸಿ ಗೋಳಿಟ್ಟರು. ಪುನಃ ಪುನಃ ಸಾಷ್ಟಾಂಗಪ್ರಣಾಮುಮಾಡುತ್ತಿದ್ದರು. ||೨೦೩-೨೦೪||

ಅಲ್ಲಿಗೆ ಬಂದಿದ್ದ ಬೃಹಸ್ಪತಿಯು ಅತ್ಯಂತ ವಿನಯದಿಂದ ಕುಮಾರರಿಗೆ ನಮಸ್ಕರಿಸಿ ಕೈಗಳನ್ನು ಕಟ್ಟಿಕೊಂಡು ನಯಮಧುರವಾಗಿ ಹೀಗೆಂದನು. ||೨೦೫||

ಶಿವಾಜ್ಞಯಾ ಜಾತಮಿದಂ ಸಮಸ್ತಂ
ಯದ್ಭಾವಿ ತದ್ಭಾವಿ ನ ಸಂಶಯೋಽತ್ರ ।
ಅತಃ ಪರಂ ಕೋಽತ್ರ ಶಚೀಪತಿಸ್ಸ್ಯಾತ್
ಸಿಂಹಾಸನಸ್ಯಾಧಿಪತಿಸ್ಸ ಏವ ॥೨೦೬॥

ಇದಂ ವನಂ ಶಂಕರಪೂಜನಾಯ
ವಿನಿರ್ಮಿತಂ ನಂದನನಾಮಕಂ ಚ ।
ಇಂದ್ರೇಣ ಪೂರ್ವಂ ಪರತೋಽಧುನಾಸ್ಯ
ಕಃ ಪಾಲಕಃ ಸ್ಯಾಚ್ಛಿವಪೂಜಕೋಽಪಿ ॥೨೦೭॥

ಅನಾಯಕಂ ಚೇದ್ವನಮೇತದದ್ಯ
ಶಿವಾರ್ಚನಾಯ ಪ್ರಸವಾಃ ಕುತಃ ಸ್ಯುಃ ।

"ಸಕಲ ಭೂತಭವಿಷ್ಯದ್ವರ್ತಮಾನಗಳೂ ಸರ್ವಸ್ವತಂತ್ರನಾದ ಆ ಪರಮೇಶ್ವರನ ಸಂಕೇತದ ಮೇರೆಗೇ ನಡೆಯುವುವು. ಈಗ ಯಾವ ವಿದ್ಯಮಾನವು ನಡೆದಿರುವುದೋ ಅದೂ ಶಿವಾಜ್ಞೆಯಿಂದಲೇ. ಮುಂದೆ ಏನೇನು ನಡೆಯುವುದೋ ಅದೆಲ್ಲವೂ ನಿಸ್ಸಂಶಯವಾಗಿ ಶಿವಾಜ್ಞೆಯ ಮೇರೆಗೇ ಎಂದು ತಿಳಿಯಿರಿ. ಆದರೆ ಈಗ ಈ ದೇವಲೋಕದ ಸಿಂಹಾಸನವು ಬರಿದಾಗಿ ಹೋಯಿತು. ಅನ್ಯರು ಯಾರೂ ಇದರ ಆಧಿಪತ್ಯವನ್ನು ವಹಿಸಿಕೊಳ್ಳಲಾರರು. ಏಕೆಂದರೆ ಮಹಾಪತಿವ್ರತೆಯಾದ ಶಚೀದೇವಿಗೆ ಯಾರು ಪತಿಯಾಗಿರುವರೋ ಅವರೇ ಈ ಸಿಂಹಾಸನಕ್ಕೆ ಯೋಗ್ಯರೇನಿಸುವರು. ಆದುದರಿಂದ ಈಗ ಶಚೀದೇವಿಗೆ ಪತಿಯಾಗುವಂಥವರು ಯಾರಿರುವರು ? ||೨೦೬||

ಈ ನಂದನವನವನ್ನು ಶಿವಾರಾಧನೆಗೆಂತಲೇ ಇಂದ್ರನು ನಿರ್ಮಿಸಿದ್ದನು. ಅದಕ್ಕಾಗಿಯೇ ಸರಿಯಾದ ರಕ್ಷಣೆಯನ್ನು ಕಲ್ಪಿಸಿ ಕಾಪಾಡುತ್ತಿದ್ದನು. ಆದರೆ ಈಗ ಇಂದ್ರನು ಹೋದ ಮೇಲೆ ಈ ಸುಂದರವಾದ ಉದ್ಯಾನವನ್ನು ಪೋಷಿಸುವವನು ಯಾರು? ಕಾಪಾಡುವವರು ಯಾರು? ಅಥವಾ ಇಲ್ಲಿ ಉತ್ಪನ್ನವಾದ ಪದಾರ್ಥಗಳು ಸಾರ್ಥಕವಾಗುವಂತೆ ಶಿವಪೂಜೆಯನ್ನು ತಾನೇ ಯಾರು ಮಾಡಲಿರುವರು? ಈಗ ಎಲ್ಲಾ ಶಿವಸಂಕಲ್ಪಗಳೂ ಒಂದಾದಂತೆ ಆದವು. ||೨೦೭||

ಇಲ್ಲಿ ಹೊಸ ಹೊಸದಾಗಿ ಬೆಳೆಯುತ್ತಿದ್ದ ಹೂಗಳಿಂದ ಇಲ್ಲಿರುವ ಶಿವಲಿಂಗಗಳಿಗೆ ಎಲ್ಲಾ ದೇವತೆಗಳೂ ನಿತ್ಯವೂ ಬಂದು ಪೂಜಿಸುತ್ತಿದ್ದರು. ಆದರೆ ಈಗ

ಏತಾನಿ ಲಿಂಗಾನಿ ನವಪ್ರಸೂನೈಃ
ಪೂಜ್ಯಾನಿ ಸರ್ವೈರಮರ್ತ್ಯೈಃ ಪ್ರಯತ್ನೈಃ ॥೨೦೮॥

ಇತಿ ತದ್ವಚನಂ ಶ್ರುತ್ವಾ ತೇ ಸರ್ವೇ ಹೃಷ್ಟಮಾನಸಾಃ ।
ಜ್ಯೇಷ್ಠಂ ಭ್ರಾತರಮೂಚುಸ್ತೇ ಫಾಲಲೋಚನನಾಮಕಂ ॥೨೦೯॥

॥ ಕುಮಾರಾ ಊಚುಃ ॥

ಇಂದ್ರೋ ಹತೋ ದೈವಯೋಗಾದಿಂದ್ರಸ್ಥಾನೇ ಭವಾನ್ ಭವ ।
ಅನ್ಯಥಾಸ್ಯ ವನಸ್ಯಾಪಿ ಪಾಲನಂ ನ ಭವಿಷ್ಯತಿ ॥೨೧೦॥

ಇತಿ ತದ್ವಚನಂ ಶ್ರುತ್ವಾ ಪ್ರಾಹ ತಾನ್ ಫಾಲಲೋಚನಃ ।
ಪ್ರಹಸ್ಯ ಕಿಂಚಿದುತ್ಸಾಹಂ ವರ್ಧಯನ್ನೇವ ತಾನ್ ಪ್ರತಿ ॥೨೧೧॥

ಈ ವನವನ್ನು ಸಂರಕ್ಷಿಸುವವನು ಇಲ್ಲದ ಬಳಿಕ ಇಲ್ಲಿ ಪುಷ್ಪಗಳು ಹೇಗೆ ಉತ್ಪನ್ನ ವಾಗುವುವು? ಮತ್ತು ಶಿವಾರ್ಚನೆಗೆ ಅಷ್ಟು ಕುಸುಮಗಳನ್ನು ಎಲ್ಲಿಂದ ತರಲಾದೀತು? ಹೀಗೆ ಸರ್ವವಿಧದಿಂದಲೂ ಈಗ ಶಿವಾರ್ಚನೆಗೇ ವಿಘ್ನವೊದಗಿ ದಂತಾಗಿರುವುದು." ॥೨೦೮॥

ಈ ಪರಿಯಾಗಿ ಬೃಹಸ್ಪತಿಯು ಹೇಳಲು ಆತನ ಮಾತನ್ನು ಕೇಳಿ ಆ ಕುಮಾರರಿಗೆ ಸಮಾಧಾನವುಂಟಾಯಿತಲ್ಲದೇ ಇಂಥ ವಿಪರೀತ ಕೆಲಸ ನಡೆದು ಹೋಯಿತೆಂದು ಸ್ವಲ್ಪ ಚಿಂತೆಯೂ ಆಯಿತು. ಈಗ ಅವರು ತಮ್ಮಲ್ಲಿ ಜ್ಯೇಷ್ಠನಾ ಗಿದ್ದ ಫಾಲಲೋಚನನೆಂಬುವನನ್ನು ಕುರಿತು ಹೀಗೆಂದು ಹೇಳಿದರು. ॥೨೦೯॥

"ಈಗ ಇಂದ್ರನು ದುರದೃಷ್ಟದಿಂದ ಮೃತನಾದನು. ಏನು ಮಾಡಲಾದೀತು. ಕಾರ್ಯವು ಮಿಂಚಿಹೋಯಿತು. ಈಗ ಚಿಂತಿಸಿ ಫಲವಿಲ್ಲ. ಆದುದರಿಂದ ನೀನು ಇಂದ್ರನ ಸ್ಥಾನವನ್ನು ವಹಿಸಿಕೊಳ್ಳಲೇಬೇಕು. ಇಲ್ಲದಿದ್ದರೆ ಈ ಉದ್ಯಾನವನ್ನು ಕಾಪಾಡುವವರೇ ಇಲ್ಲದೇ ಹೋಗುವರು. ಮತ್ತು ಶಿವಪೂಜೆಯು ತಪ್ಪುವುದಲ್ಲದೇ ಶಿವಾಜ್ಞೆಗೂ ಅಡ್ಡಿ ಬರುವುದು." ॥೨೧೦॥

ಅವರ ಮಾತನ್ನು ಕೇಳಿ ಆ ಫಾಲಲೋಚನನು ಇಂದ್ರನ ಸ್ಥಾನವನ್ನು ವಹಿಸಿಕೊಳ್ಳಲು ತನಗೆ ಸಾಧ್ಯವಿಲ್ಲವೆಂದು ತಿಳಿಸಿದನು. ಅನಂತರ ತಾನೇ ಸ್ವಲ್ಪ

ಮನೋಂದ್ರತ್ವಪದೇ ವಾಂಛಾ ಕಥಂ ತುಚ್ಛೇ ಭವಿಷ್ಯತಿ ।
ಬಾಲಕಾನಾಂ ತಥಾ ವಾಂಛಾ ಕದಾಚಿತ್ಖಲು ಜಾಯತೇ ॥೨೧೨॥

ಅಯಂ ಕನಿಷ್ಠ ಏವೇಂದ್ರೋ ಭವಿತಾ ಭವನಾಮಕಃ ।
ಬಾಲಕತ್ವಾದ್ಬಾಲಕೋಽಯಂ ಸ್ಯಾಚ್ಛಚೀನಾಯಕಃ ಖಲು ॥೨೧೩॥

ಅಯಂ ಲಿಂಗಾರ್ಚನೇ ನಿತ್ಯಂ ಸಾದರೋ ನಂದನೋದ್ಭವೈಃ ।
ಪುಷ್ಪೈರ್ಲಿಂಗಾರ್ಚನಂ ಕೃತ್ವಾ ಸ್ಥಾಸ್ಯತ್ಯತ್ರ ನ ಸಂಶಯಃ ॥೨೧೪॥

ನಿತ್ಯಂ ಲಿಂಗಶತಪ್ರಪೂಜನರತಸ್ಸೋಽಯಂ ಯುವಾ ನಂದನೇ
ಸ್ಥಿತ್ವಾ ಶಕ್ರಪದಂ ಮನೋಹರಮಿದಂ ಸಿಂಹಾಸನಂ ಸ್ವಾಸನಂ ।
ಕೃತ್ವಾ ಪ್ರಾಪ್ಯ ಶಚೀಪತಿತ್ವಮಧುನಾ ತಿಷ್ಠತ್ವಪಾರಂ ಸುಖಂ
ಪ್ರಾಪ್ಸ್ಯಂತೇ ಶಿವಮಂದಿರಂ ಪ್ರತಿ ಸಮಾಯಾಸ್ಯತ್ಯುಮಾವಲ್ಲಭಂ ॥೨೧೫॥

ಆಲೋಚನೆಮಾಡಿ ಈ ಉಪಾಯವನ್ನು ಮಾಡಿದರೆ ಅನುಕೂಲವಾದೀತೆಂದು ಅವರಿಗೆ ಉತ್ಸಾಹ ಕೊಡುತ್ತಾ ನುಡಿದನು. ||೨೧೧||

ಅಯ್ಯಾ ಸಹೋದರರಿರಾ! ಏನು ಹೀಗೆ ಹೇಳುತ್ತಿರುವಿರಿ? ನಾನು ಇಂದ್ರಪದವಿಗೆ ಆಸೆ ಪಡುವೆನೆ? ಏನೂ ತಿಳಿವಳಿಕೆ ಇಲ್ಲದ ಬಾಲಕರಿಗೆ ಮಾತ್ರ ಆ ತುಚ್ಛವಾದ ಪದವಿಯಲ್ಲಿ ಆಸೆ ಇರಬಹುದು. ನಾನು ಇಷ್ಟು ಅಭ್ಯಾಸ ಪರಿಶ್ರಮಗಳ ಅನುಭವವನ್ನು ಪಡೆದುಕೊಂಡಮೇಲೆ ಮೋಸಹೊಂದುವೆನೇ? ಎಂದೂ ಇಲ್ಲ. ನನಗೆ ಇದು ಯಾವುದೂ ಬೇಕಾಗಿಲ್ಲ. ||೨೧೨||

ನಮ್ಮಲ್ಲಿ ಎಲ್ಲರಿಗಿಂತಲೂ ಚಿಕ್ಕವನಾದ ಭವನು ಇಂದ್ರನಾಗಲಿ. ಇನ್ನೂ ಆತನ ವಯಸ್ಸು ಕಡಿಮೆ ಇರುವುದರಿಂದ ಆತನು ಬಾಲಕಸ್ವಭಾವದವನಿರುವನು. ಆತನಿಗೆ ಇಂದ್ರಪದವಿಯೂ ಒಪ್ಪುವುದು. ಆದುದರಿಂದ ಈತನೇ ಶಚಿಗೆ ಪತಿಯಾಗಿ ಇಂದ್ರನಾಗಲಿ. ||೨೧೩||

ಈ ಭವನು ನಿತ್ಯವೂ ನಂದನೋದ್ಯಾನದಲ್ಲಿ ಉತ್ಪನ್ನವಾಗುವ ಹೂಗಳಿಂದ ಶಿವಲಿಂಗಾರ್ಚನೆಯನ್ನು ಮಾಡುತ್ತಾ ಇಲ್ಲಿಯೇ ಇರಲಿ. ಆತನೂ ಬಹುಶಃ ಇದಕ್ಕೆ ಸಮ್ಮತಿಸಬಹುದು ಅಥವಾ ಹಾಗೆಯೇ ಆಗಲು ಅಪೇಕ್ಷಿಸುತ್ತಿರುವನು. ||೨೧೪||

ಭವನು ಇನ್ನೂ ನವಯುವಕನಾಗಿರುವುದರಿಂದ ಭೋಗವಿಲಾಸಕ್ಕೆ ಯೋಗ್ಯನಾಗಿದ್ದಾನೆ. ಆತನೇ ಶಚೀಪತಿಯಾಗಿ ದೇವಲೋಕದ ಸಿಂಹಾಸನವ

ಇತ್ಯುಕ್ತ್ವಾ ಭ್ರಾತರಂಜ್ಯೇಷ್ಠಸ್ತಮುಪೂವಲ್ಲಭಾಭಿಧಂ ।
ಪುನಶ್ಶಿವಾರ್ಚನೋದ್ಯುಕ್ತಸ್ತತ್ರದೂರ್ವಾಂಕುರಾದಿಭಿಃ ॥೨೧೬॥

ತತಸ್ಸೂರ್ಯಾದಯಸ್ಸರ್ವೇ ತಮೇವ ಭವನಾಮಕಂ ।
ಇಂದ್ರಂ ಚಕ್ರುಸ್ಸ ಏವಾಸೀಚ್ಛಚೀಕಾಂತಶ್ಶಿವಾರ್ಚಕಃ ॥೨೧೭॥

॥ ಸದಾಶಿವ ಉವಾಚ ॥

ಶಿವಾರ್ಚನಾದ್ಯೈಸ್ಸಂಪ್ರಾಪ್ತನ್ಯೈಶ್ವರ್ಯಂ ಶಿವಪೂಜಕೈಃ ।
ತಾದೃಶಂ ತತ್ಫಲಂ ತಾವತ್ತತೋಽಪ್ಯಧಿಕಮೇವ ಹಿ ॥೨೧೮॥

ಅತಸ್ಸಮರ್ಚಯ ಪ್ರೀತ್ಯಾ ಶಂಕರಂ ಶಾಂಕರಾನಪಿ ।
ಕ್ಷೀರಹಾರಾದಿದಾನಾದ್ಯೈಃ ಕುರು ಶಾಂಕರತೋಷಣಂ ॥೨೧೯॥

ನ್ನೇರಲಿ. ಈ ನಂದನೋದ್ಯಾನವನ್ನು ಸರಿಯಾಗಿ ಕಾಪಾಡಿಕೊಂಡು ನಿತ್ಯವೂ ಆತನು ನೂರಾರು ಶಿವಲಿಂಗಗಳಿಗೆ ವೈಭವದಿಂದ ಆರಾಧನೆಯನ್ನು ನಡೆಸುವನು. ಹಾಗೆಯೇ ಅನೇಕ ಕಾಲದ ವರೆಗೆ ಅಪಾರವಾದ ಸುಖಸಾಮ್ರಾಜ್ಯವನ್ನು ಅನುಭವಿಸುವನು. ಅಂತ್ಯದಲ್ಲಿ ಆತನು ಶಿವಧಾಮವಾದ ಕೈಲಾಸವನ್ನೂ ಪಡೆಯುವನು. ॥೨೧೫॥

ಎಂದು ಜ್ಯೇಷ್ಠಪುತ್ರನು ಹೇಳಿ, ಭವನಿಗೆ ಇಂದ್ರಪದವಿಯನ್ನು ಹೊಂದುವಂತೆ ಆಜ್ಞಾಪಿಸಿ, ತಾನು ದೂರ್ವಾಂಕುರಗಳಿಂದ ಅಲ್ಲಿಯೇ ಶಿವಪೂಜೆ ಮಾಡತೊಡಗಿದನು. ॥೨೧೬॥

ಆ ಜ್ಯೇಷ್ಠನಾದ ಫಾಲಲೋಚನನ ಮಾತಿನ ಮೇರೆಗೆ ಸೂರ್ಯನೇ ಮೊದಲಾದ ದೇವತೆಗಳು ಆ ಭವನೆಂಬ ಕುಮಾರನನ್ನೇ ಕರೆದುಕೊಂಡುಬಂದು ಸಿಂಹಾಸನದ ಮೇಲೆ ಕುಳ್ಳಿರಿಸಿದರು. ಆ ಭವನೇ ಶಚೀದೇವಿಗೆ ಪತಿಯೂ ಮತ್ತು ಇಂದ್ರನೂ ಆದನು. ॥೨೧೭॥

ಆದುದರಿಂದ ಎಲೈ ಸಮುದ್ರರಾಜನೇ! ಶಿವಾರ್ಚನೆಯು ಅತ್ಯಂತ ಘನತರವಾದದ್ದು. ಅನೇಕ ಜನ ಭಕ್ತರು ಹೀಗೆಯೇ ಕೇವಲ ಶಿವಾರ್ಚನೆಯ ಮಹಿಮೆಯಿಂದಲೇ ಪರಮೈಶ್ವರ್ಯವನ್ನೂ ಪಡೆದುಕೊಂಡಿರುವರು. ಇದೇನು! ಸದಾ ಶಿವಾರ್ಚನೆಯಿಂದ ಇನ್ನೂ ಅನೇಕ ಅಧಿಕಫಲಗಳೂ ಸಹ ಲಭಿಸುವುವು. ॥೨೧೮॥

ಆದುದರಿಂದ ಎಲೈ ಸಮುದ್ರನೇ! ಭಕ್ತಿಯಿಂದ ಶಿವಾರ್ಚನೆಯನ್ನು ಮಾಡು. ಹಾಗೆಯೇ ಆದರದಿಂದ ಪರಶಿವಭಕ್ತರನ್ನೂ ಪೂಜಿಸು. ಯೋಗ್ಯರಾದ ಶಾಂಭವರಿಗೆ

ಇತ್ಯುಕ್ತೋಽಪಿ ಮಹೇಶೇನ ವಿಪ್ರವೇಷೇಣ ಸಾದರಂ ।
ಹಾರಂ ಮನೋಹರಂ ತಸ್ಮೈ ನ ದದೌ ದುರ್ಮತಿಸ್ತದಾ ॥೨೨೦॥

ತತಸ್ಸ ಕುಪಿತಶ್ಶಂಭುಸ್ತತ್ಕೋಪೇನ ಸ ಸಾಗರಃ ।
ನಿಹತೋ ದುಃಖಿತೋ ವಿಪ್ರಸ್ಸದಾರಸ್ಸಸುಹೃದ್ಗಣಃ ॥೨೨೧॥

ಅಸ್ಮಭ್ಯಮಧುನಾ ಶಂಭುಃ ಪ್ರಸನ್ನೋಽಪಿ ಭವಿಷ್ಯತಿ ।
ತುಭ್ಯಂ ರತ್ನಾಕರತ್ವಂ ಚ ದಾಸ್ಯತ್ಯಸ್ಮದಭೀಪ್ಸಿತಂ ॥೨೨೨॥

॥ ರತ್ನಾಕರ ಉವಾಚ ॥

ಇತಿ ತದ್ವಚನಂ ಶ್ರುತ್ವಾ ತಥಾಸ್ತ್ವಿತ್ಯುಕ್ತವಾನಾದರಾತ್ ।
ಮಹ್ಯಂ ರತ್ನಾಕರತ್ವಂ ಚ ದದೌ ತತ್ಪ್ರಾರ್ಥಿತಶ್ಶಿವಃ ॥೨೨೩॥

ಅಪಾರವಾದ ಮುಕ್ತಾಹಾರ ಮುಂತಾದವುಗಳನ್ನು ಕೊಟ್ಟು ಸಂತುಷ್ಟಿಗೊಳಿಸು.” ॥೨೧೯॥

ಹೀಗೆಂದು ಬ್ರಾಹ್ಮಣವೇಷವನ್ನು ಧರಿಸಿದ ಪರಮೇಶ್ವರನು ಒಳ್ಳೆಯ ಮಾತಿನಿಂದ ಎಷ್ಟೇ ಹೇಳಿದರೂ ಆ ಸಮುದ್ರರಾಜನು ಗಮನಕೊಡಲಿಲ್ಲ. ದುರ್ಬುದ್ಧಿಯಿಂದ ಮೂಢನಾಗಿದ್ದ ಆತನು ಸಾಕ್ಷಾತ್ ಪರಶಿವನೇ ಬಂದು ಕೇಳಿದರೂ ಮುಕ್ತಾಹಾರವನ್ನು ಕೊಡಲಿಲ್ಲ. ॥೨೨೦॥

ಆಗ ಆ ಸಮುದ್ರರಾಜನ ಲೋಭವನ್ನು ನೋಡಿ ಶಿವನಿಗೆ ಕೋಪವುಂಟಾಯಿತು. ಆ ಕೋಪದಿಂದಲೇ ಸಮುದ್ರನು ಮತ್ತು ಆತನ ಪತ್ನಿಯೇ ಮೊದಲಾದ ಪರಿವಾರದವರೂ ಆಹತರಾದರು. ಮೊದಲು ಮೊದಲು ಮಹಾದುಃಖವನ್ನು ಅನುಭವಿಸಿ ಕ್ರಮೇಣ ನಾಶಹೊಂದುತ್ತಾ ಬಂದರು. ॥೨೨೧॥

ಹೀಗೆ ಆ ಸಮುದ್ರರಾಜನು ತನ್ನ ಅಧಿಕಾರವನ್ನು ಕಳೆದುಕೊಂಡಿರುವುದರಿಂದ ಈಗ ಶಿವನು ನಮ್ಮನ್ನು ಅನುಗ್ರಹಿಸುವನು. ನಾವು ಅಪೇಕ್ಷಿಸಿ ಪ್ರಾರ್ಥಿಸುವ ಮೇರೆಗೆ ನಿನಗೇ ಸಮುದ್ರದ ಆಧಿಪತ್ಯವನ್ನು ಕೊಡುವನು. ಹೀಗೆಂದು ಆ ಕನ್ನಿಕೆಯರು ಹಿಂದಿನ ಕಥೆಯನ್ನು ಹೇಳಲು, ॥೨೨॥

ಅದನ್ನು ಕೇಳಿ ನಾನು ಸಂತೋಷದಿಂದ ನಿಮ್ಮಿಷ್ಟದಂತೆಯೇ ಆಗಲೆಂದು ಒಪ್ಪಿ ಅವರ ಪಾಣಿಗ್ರಹಣವನ್ನು ಮಾಡಿಕೊಳ್ಳಲು ಸಮ್ಮತಿಸಿದೆನು. ಆಗ ಆ

ತತಸ್ತಾಭಿರಹಂ ತತ್ರ ಜಾತೋ ಭೂಯಾನ್ ಮಹೋತ್ಸವಃ ।
ಏತಾಸ್ಸರ್ವಾಶ್ಶಿವಾರ್ಚಾಯಾಂ ನಿರತಾಶ್ಶಾಂಕರಾರ್ಚಕಾಃ ॥೨೨೪॥

ಮಮ ದಾರಾ ಮಹೋದಾರಾಶ್ಶಿವಭಕ್ತ್ಯೈಕತತ್ಪರಾಃ ।
ಏತಾದೃಶಂ ಮಹದ್ಭಾಗ್ಯಂ ಪ್ರಾಪ್ತಂ ಶಂಕರಪೂಜಯಾ ॥೨೨೫॥

ಸಂಪ್ರಾಪ್ತಂ ಮಹದೈಶ್ವರ್ಯಂ ಪೂರ್ವೈಸ್ಸರ್ವೈಸ್ಸುರಾಸುರೈಃ ।
ಶಿವಲಿಂಗಾರ್ಚನೇನೈವ ವೇದೋಕ್ತೇನ ಮುನೀಶ್ವರೈಃ ॥೨೨೬॥

ಲಿಂಗಾರ್ಚನೇನಾಪಿ ಸಮಂ ನ ಪುಣ್ಯಂ
ತತೋಽಪಿ ನೈವಾಧಿಕಮಸ್ತಿ ಪುಣ್ಯಂ ।

ಕನ್ನಿಕೆಯರು ಪರಮೇಶ್ವರನನ್ನು ಪ್ರಾರ್ಥಿಸಲು ಶಿವನು ಸುಪ್ರೀತನಾಗಿ ನನಗೆ ಸಮುದ್ರದ ಆಧಿಪತ್ಯವನ್ನು ಕೊಟ್ಟನು. ಆಗ ನಾನೇ ರಾಜನಾಗಿ ರತ್ನಾಕರನೆಂಬ ಪ್ರಶಸ್ತಿಯನ್ನು ಪಡೆದೆನು. ॥೨೨೩॥

ಅನಂತರ ಅಲ್ಲಿಯೇ ಆ ಕನ್ನಿಕೆಯರೊಡನೆ ನನ್ನ ಪಾಣಿಗ್ರಹಣಮಹೋತ್ಸವವು ನಡೆಯಲು ಆಗ ನಾನು ಸಂತೋಷಹೊಂದಿದೆನು. ಆ ಕನ್ನಿಕೆಯರೇ ಈಗ ಇಲ್ಲಿ ಶಿವಲಿಂಗದೆದುರಿನಲ್ಲಿ ನಾಟ್ಯವಾಡಿದವರು. ಅವರು ಸದಾ ಶಿವಾರ್ಚನೆಯಲ್ಲಿ ಆಸಕ್ತರಾಗಿರುವರಲ್ಲದೇ ಶಿವಭಕ್ತರಲ್ಲಿಯೂ ಬಹಳ ಆದರವುಳ್ಳವರಾಗಿರುವರು. ಸರ್ವದಾ ಶೈವರನ್ನೇ ಪೂಜಿಸುವರು. ॥೨೨೪॥

ಹೀಗೆ ನನ್ನ ಪತ್ನಿಯರು ಸರ್ವದಾ ಶಿವಭಕ್ತಿನಿಷ್ಠರಾಗಿರುವರು. ಆದುದರಿಂದ ನಾನೇ ಮಹಾಭಾಗ್ಯಶಾಲಿ. ಇಂಥ ಪರಮಸೌಖ್ಯವು ನನಗೆ ಶಿವಾರ್ಚನೆಯಿಂದಲೇ ಲಭಿಸಿರುವುದು. ॥೨೨೫॥

ಹೀಗೆಯೇ ಪೂರ್ವಕಾಲದಲ್ಲಿ ಅನೇಕ ದೇವದಾನವರೂ ಮತ್ತು ಮುನಿಗಳೂ ಈ ವೇದೋಕ್ತವಾದ ಶಿವಲಿಂಗಾರ್ಚನೆಯನ್ನು ಮಾಡಿ ನಾನಾವಿಧವಾದ ವಿಶಾಲ ಸಂಪತ್ತುಗಳನ್ನು ಪಡೆದುಕೊಂಡಿರುವರು. ಮಹಾಸೌಭಾಗ್ಯಸೌಖ್ಯಗಳನ್ನೂ ಹೊಂದಿರುವರು. ॥೨೨೬॥

ಆದುದರಿಂದ ಶಿವಲಿಂಗಾರ್ಚನೆಗಿಂತಲೂ ಮಿಗಿಲಾದದ್ದು ಬೇರೊಂದಿಲ್ಲ. ಇದಕ್ಕೆ ಸದೃಶವಾದ ಯಾವ ಸುಖಸಾಧನವೂ ಮತ್ತೆ ಯಾವುದೂ ಕಾಣುವುದಿಲ್ಲ.

ಅತಸ್ತದೇವಾಮಿತಪುಣ್ಯಪುಂಜಾಃ
ಕುರ್ವಂತಿ ನಿತ್ಯಂ ಖಲು ಸಾವಧಾನಂ ॥೨೨೭॥

ನಿತ್ಯಂ ಶಂಕರಪೂಜನೇನ ಸುಧಿಯಃ ಕಾಲಂ ನಯಂತ್ಯಾದರಾತ್
ಭೂತಿವ್ಯಾವೃತಫಾಲಭಾಗಲಲಿತಾಃ ಪಂಚಾಕ್ಷರಾತ್ಯುತ್ಸವಾಃ ।
ರುದ್ರಾಕ್ಷಾಭರಣಾಃ ಕ್ಷಣಾರ್ಧಮಪಿ ತೇ ಫಾಲಾಕ್ಷಪೂಜಾಂ ವಿನಾ
ತಿಷ್ಠಂತ್ಯೇವ ನ ಸರ್ವಥಾ ಶಿವಕಥಾಪೀಯೂಷಪಾನೋದ್ಧತಾಃ ॥೨೨೮॥

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಉತ್ತರಾರ್ಧೇ
ಶಿವಭಕ್ತಗಂಧರ್ವಕನ್ಯಕಾಸಂವಾದೇ ಅಶಾಂಭವದೇಶಸ್ಥರಾಜ
ಕಣಯಾಚಕಬ್ರಾಹ್ಮಣಯೋಶ್ಚಾರಿತ್ರನಿರೂಪಣಂ
ನಾಮೈಕೋನಪಂಚಾಶೋಽಧ್ಯಾಯಃ

ಇದನ್ನು ತಿಳಿದುಕೊಂಡು ಪುಣ್ಯಾತ್ಮರಾದ ವಿವೇಕಿಗಳು ಸ್ವಲ್ಪವೂ ಪ್ರಮಾದವನ್ನು ತಂದುಕೊಳ್ಳದೇ ನಿತ್ಯವೂ ಲಿಂಗಾರ್ಚನೆಯನ್ನು ಮಾಡುವರು. ॥೨೨೭॥

ಹೀಗೆಯೇ ಧೀಮಂತರು ಸರ್ವದಾ ಶಿವಾರಾಧನೆಯನ್ನು ಮಾಡುತ್ತಲೇ ಕಾಲಕಳೆಯುವರು. ಅಂಥ ಶಿವಭಕ್ತಿನಿಷ್ಠರು ಸರ್ವಾಂಗಗಳಿಗೂ ಭಸ್ಮಲೇಪನ ಮಾಡಿಕೊಳ್ಳುವರು. ಮತ್ತು ಹಣೆಯಲ್ಲಿ ಸದಾ ಭಸ್ಮತ್ರಿಪುಂಡ್ರವನ್ನು ಧರಿಸಿ ಶಿವಪಂಚಾಕ್ಷರೀ ಮಂತ್ರವನ್ನೇ ಜಪಿಸುವರು. ಅವರು ಶಿವಕಥೆಯನ್ನು ಅಮೃತ ರಸವನ್ನು ಆಸ್ವಾದಿಸುವಂತೆ ಅತ್ಯಾದರದಿಂದ ಶ್ರವಣಮಾಡುವರು. ಹೀಗೆಯೇ ಶಿವಸೇವೆಯಲ್ಲಿ ಕಾಲಕಳೆಯುವರೇ ವಿನಾ ಶಿವಾರಾಧನೆಯನ್ನು ಬಿಟ್ಟು ಒಂದು ಕ್ಷಣಕಾಲವನ್ನೂ ಅವರು ವ್ಯರ್ಥವಾಗಿ ಕಳೆಯುವುದಿಲ್ಲ. ಅವರು ಅನಿಶವೂ ಈಶ ಸೇವೆಯನ್ನು ಮಾಡಿ ತಮ್ಮ ಜನ್ಮವನ್ನು ಸಾರ್ಥಕಪಡಿಸಿಕೊಳ್ಳುವರು ಎಂದು ರತ್ನಾಕರನು ಪುಣ್ಯಮೂರ್ತಿಗಳಿಗೆ ಹೇಳಿದನು. ॥೨೨೮॥

ಇಲ್ಲಿಗೆ ಶಿವರಹಸ್ಯ ತೃತೀಯಾಂಶ ಉತ್ತರಾರ್ಧದಲ್ಲಿ ನಲವತ್ತೊಂಬತ್ತನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಓಂ ನಮಶ್ಶಿವಾಯ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ಪಂಚಾಶೋಽಧ್ಯಾಯಃ

॥ ಧರ್ಮಸೇನಕುಮಾರಿಕೋವಾಚ ॥

ಇತ್ಥಂ ಕಥಾ ನಾರದೇನ ಪ್ರೋಕ್ತಾ ಪಾಪವಿನಾಶಿನೀ ।
ಮಯಾ ಶ್ರುತಾ ತಯಾ ಭಕ್ತಿಶ್ಶಿವಲಿಂಗಾರ್ಚನೇ ಮಮ ॥೧॥

ಅತಶ್ಶಂಕರಪೂಜಾ ಮೇ ಕರ್ತವ್ಯಾ ಜನ್ಮನಃ ಫಲಂ ।
ಶಿವಾರ್ಚನಂ ಪರಂ ಮನ್ಯೇ ತದನ್ಯಂ ನಾಧಿಕಂ ಫಲಂ ॥೨॥

ಇತಿ ತದ್ವಚನಂ ಶ್ರುತ್ವಾ ಸ ಗಂಧರ್ವೋಽಪಿ ವಿಸ್ಮಿತಃ ।
ತಾಮೇವಾಹ ಪುನಃ ಪ್ರೀತ್ಯಾ ಶಿವಪೂಜನಲಾಲಸಾಂ ॥೩॥

ಐವತ್ತನೆಯ ಅಧ್ಯಾಯ

ಈ ಕಥೆಯನ್ನು ನನಗೆ ಪೂರ್ವದಲ್ಲಿ ನಾರದನು ಹೇಳಿದ್ದನು. ಈ ಕಥೆಯು ಪಾಪನಾಶಕವು ಮತ್ತು ಪುಣ್ಯಕಾರಕವೂ ಆಗಿರುತ್ತದೆ. ಇದನ್ನು ಕೇಳಿಯೇ ನನಗೆ ಶಿವಲಿಂಗಾರ್ಚನೆಯನ್ನು ಮಾಡಬೇಕೆಂಬ ಪ್ರವೃತ್ತಿಯುಂಟಾಯಿತು. ॥೧॥

ಆದುದರಿಂದ ನಾನು ಅವಶ್ಯವಾಗಿ ಸರ್ವದಾ ಶಿವಪೂಜೆಯನ್ನು ಮಾಡುವೆನು. ಅದೇ ನನ್ನ ಜನ್ಮಕ್ಕೆ ಮುಖ್ಯವಾದ ಫಲವಾಗಿರುತ್ತದೆ. ಇದಕ್ಕಿಂತಲೂ ಮಿಗಿಲಾದ ಉತ್ತಮಫಲವು ಪ್ರಪಂಚದಲ್ಲಿ ಬೇರೊಂದೂ ಇರುವುದಿಲ್ಲ. ॥೨॥

ಈ ರೀತಿಯಾಗಿ ಹೇಳಿದ ಆ ಕನ್ನಿಕೆಯ ಮಾತನ್ನು ಕೇಳಿ ಗಂಧರ್ವನಿಗೆ ಆಶ್ಚರ್ಯವಾಯಿತು. ಆಕೆಯ ಶಿವಪೂಜೆಯ ಪ್ರವೃತ್ತಿಯನ್ನು ನೋಡಿ ಪರಮ ವಿಸ್ಮಯವಾಯಿತು. ಆಗ ಆತನು ಅತ್ಯಾದರದಿಂದ ಪುನಃ ಹೀಗೆ ನುಡಿದನು. ॥೩॥

|| ಗಂಧರ್ವ ಉವಾಚ ||

ತವ ಭರ್ತಾ ಯದಿ ಭವೇದ್ಗಿರಿಶಾರಾಧನಪ್ರಿಯಃ ।
ತದಾ ತತ್ಸದನೇ ವಾಸಸ್ತವಾಸ್ತು ಕಮಲಾನನೇ ||೪||

ತಸ್ಯ ಪ್ರೀತಿರ್ಯಥಾ ವತ್ಸೇ ಮಹಾದೇವೇ ಭವಿಷ್ಯತಿ ।
ತಥೋದ್ಯೋಗೋ ಮಯಾ ಕಾರ್ಯಸ್ತ್ವಯಾ ಕಾರ್ಯಂ ಶಿವಾರ್ಚನಂ||೫||

|| ರವಿರುವಾಚ ||

ಇತ್ಯುಕ್ತ್ವಸ್ಸೋಽಪಿ ಗಂಧರ್ವಸ್ತದ್ಭರ್ತುರ್ನಿಕಟಂ ಯಯೌ ।
ತದಾ ಶಕಟಭಾಗಸ್ಥಂ ತಂ ದದರ್ಶ ನೃಪಾತ್ಮಜಂ ||೬||

ದೃಷ್ಟ್ವಾ ತಮಾಹ ಗಂಧರ್ವೋ ರಾಜಾನಮತಿಸುಂದರಂ ।
ಹಾರಂ ಕರ್ತುಂ ಮಹೋದಾರಹಾರೋ ಹಾರವರಾರ್ಚಕಃ ||೭||

ಎಲೌ ಕಲ್ಯಾಣಿ, ನೀನು ಏಕೆ ಒಂಟಿಯಾಗಿ ಇರಲು ಅಪೇಕ್ಷಿಸುವೆ. ನಿನ್ನ ಪತಿಯು ಶಿವಭಕ್ತನಾಗಿದ್ದಲ್ಲಿ ಆತನ ಮನೆಯಲ್ಲಿಯೇ ನೀನು ವಾಸಿಸುತ್ತಿದ್ದರೆ ಉಚಿತವಾಗಿರುತ್ತದೆ ಅಲ್ಲವೇ? ನೀನು ಅಲ್ಲಿ ವಾಸಿಸಿದರೆ ನಿನಗೇ ಸುಖವುಂಟಾಗುವುದಷ್ಟೆ. ನೀನು ಏಕೆ ನಿನ್ನ ಪತಿಯು ಬಳಿಗೆ ಹೋಗಿಲ್ಲ? ||೪||

ನಿನ್ನ ಪತಿಯು ಆಸ್ತಿಕನಾಗಿಲ್ಲದಿದ್ದರೆ ನಾನು ಆತನ ಬಳಿಗೆ ಹೋಗಿ ಬೋಧನೆಮಾಡುವೆನು. ಆತನಿಗೆ ಸರಿಯಾಗಿ ಬುದ್ಧಿವಾದವನ್ನು ಹೇಳಿ ಶಿವನಲ್ಲಿ ಆತನಿಗೆ ಭಕ್ತಿಯನ್ನುಂಟುಮಾಡುವೆನು. ಆಗ ನೀನು ಪತಿಯು ಬಳಿಗೆ ಹೋಗುವೆ ತಾನೆ? ನಾನು ಈ ಕೂಡಲೇ ನಿನ್ನ ಪತಿಯು ಸಮೀಪಕ್ಕೆ ಹೋಗುವೆನು. ಕಾರ್ಯವು ಸುಲಭವಾಗಿ ನೆರವೇರಲೆಂದು ಪ್ರಾರ್ಥಿಸಿ ನೀನು ಶಿವಾರ್ಚನೆಮಾಡುತ್ತಿರು." ||೫||

ಹೀಗೆಂದು ಹೇಳಿ ಆ ಗಂಧರ್ವನು ಆಕೆಯ ಪತಿಯ ಬಳಿಗೆ ಹೋದನು. ಇವನು ಹೋದಾಗ ಆ ರಾಜಪುತ್ರನು ಒಂದು ಗಾಡಿಯ ತುದಿಯಲ್ಲಿ ಕುಳಿತಿದ್ದನು. ||೬||

ಆ ರಾಜಪುತ್ರನು ಅತ್ಯಂತ ಸುಂದರನಾಗಿದ್ದನು. ಗಂಧರ್ವನು ಆತನಿಗೆ ಶಿವಧರ್ಮೋಪದೇಶಮಾಡಿ ಆತನನ್ನು ಶಿವಭಕ್ತಿಯುತನನ್ನಾಗಿಸಲು ಹೀಗೆ ಹೇಳತೊಡಗಿದನು. ||೭||

॥ ಗಂಧರ್ವ ಉವಾಚ ॥

ರೇ ರೇ ಭೂಪಾಲ ತೇ ಬಾಲ ನಿಮೀಲಿತವಿಲೋಚನ ।
ಕಿಮಪೇಕ್ಷಿತಮತ್ರಾಸ್ತಿ ವದ ತಾವನ್ನಿಶಾಮುಖೇ ॥೮॥

॥ ರಾಜೋವಾಚ ॥

ಬಾಲಾ ಮೇ ಮಹಿಲಾ ಸಾಪಿ ಕಾಲಕಾಲಾರ್ಚನಪ್ರಿಯಾ ।
ಶ್ರೀಕಾಲಕಾಲಸದನಂ ಪ್ರವಿಷ್ಟಾ ರೋಷಸಂಯುತಾ ॥೯॥

ಮಮ ತಾವನ್ನ ಗಮನೇ ಶಕ್ತಿರಸ್ತ್ಯಧುನಾ ಖಲು ।
ಮತ್ಕೃತಾಕೃತ್ಯದೋಷೇಣ ಪ್ರತಿಬದ್ಧೋಽಸ್ಮಿ ಸತ್ವರಂ ॥೧೦॥

ತಯಾ ಸಂಗಃ ಕಥಂ ಭಾವಿ ಸಾ ಸೌಂದರ್ಯನಿಧಿಃ ಖಲು ।
ತದ್ದೇಹವಾತಪೋತೇನ ಪ್ರೇತಸ್ಯ ಖಲು ಜೀವನಂ ॥೧೧॥

ಅಯ್ಯಾ ರಾಜನೇ, ಇದೇನು ಇಲ್ಲಿ ಕುಳಿತಿದ್ದೀಯೆ ! ಈ ಸಾಯಂಕಾಲದ ವೇಳೆಯಲ್ಲಿ ಏತಕ್ಕೆ ಹೀಗೆ ಕಣ್ಣುಗಳನ್ನು ಮುಚ್ಚಿಕೊಂಡು ಏನನ್ನು ಯೋಚಿಸುತ್ತಿರುವೆ? ಎಂದು ಗಂಧರ್ವನು ಪ್ರಶ್ನಿಸಲು, ಆಗ ರಾಜಪುತ್ರನು, ॥೮॥

ಅಯ್ಯಾ, ಏನುಮಾಡಲಿ? ನನಗೆ ಪತ್ನೀಸುಖವು ದೊರಕಲಿಲ್ಲ. ಅದನ್ನೇ ಇಲ್ಲಿ ಚಿಂತಿಸುತ್ತಾ ಕುಳಿತಿದ್ದೇನೆ. ನನ್ನ ಹೆಂಡತಿಯು ಕೇವಲ ಶಿವಭಕ್ತಿ, ಶಿವಪೂಜೆ ಎಂದು ಹೇಳಿಕೊಂಡು ತಿರುಗುತ್ತಿರುವಳು. ನಾನು ಅದಕ್ಕೆ ಸಮ್ಮತಿಸದಿರಲು ಆಕೆಯು ಕೋಪಗೊಂಡು ಶಿವಮಂದಿರಕ್ಕೆ ಹೊರಟುಹೋಗಿರುವಳು. ಈಗ ನನ್ನ ಜೀವನವು ಅಂಧಕಾರಮಯವಾಗಿದೆ. ॥೯॥

ನನ್ನ ಪತ್ನಿಯು ಪರಮಸೌಂದರ್ಯಶಾಲಿನಿಯಾಗಿರುವಳು. ಅವಳು ಮಹಾಮಹಿಮಾಶಾಲಿನಿಯೂ ಆಗಿರುತ್ತಾಳೆ. ಆಕೆಯ ದೇಹದ ಮೇಲೆ ಬೀಸಿದ ಗಾಳಿಯ ಸ್ಪರ್ಶದಿಂದ ಬಹುಶಃ ಪ್ರೇತವೂ ಸಹ ಶರೀರಿಯಾಗಿ ಎದ್ದು ಬರುವುದು. ಆದರೆ ನನ್ನ ಅವಸ್ಥೆಯು ಕೇವಲ ಹೀನವಾಗಿರುತ್ತದೆ. ಬಾಲ್ಯದಿಂದಲೂ ನಾನು ದುಸ್ಸಹವಾಸ, ದುರಭ್ಯಾಸ, ಇವುಗಳಲ್ಲಿ ಬಿದ್ದಿದ್ದರಿಂದ ಈಗ ಆಕೆಯನ್ನು ಸಮಾಧಾನಪಡಿಸಿಕೊಂಡು ಸುಖವನ್ನನುಭವಿಸಲು ನನಗೆ ಶಕ್ತಿ ಇಲ್ಲವಾಗಿದೆ. ನನ್ನ ದುಷ್ಕೃತ್ಯಗಳಿಂದ ನಾನು ಸರ್ವಥಾ ಆಹತನಾಗಿ ನಿರ್ವೀರ್ಯನಾಗಿದ್ದೇನೆ. ॥೧೦-೧೧॥

ಇತಿ ತದ್ವಚನಂ ಶ್ರುತ್ವಾ ಗಂಧರ್ವಃ ಪ್ರಾಹ ತಂ ನೃಪಂ ।
ಮದುಕ್ತಂ ಕುರು ಸಾ ತೇನ ನೃಪ ತ್ವದ್ವಶಮೇಷ್ಯತಿ ॥೧೨॥

ಶೈವೀಂ ದೀಕ್ಷಾಂ ಗೃಹಾಣಾದ್ಯ ಶಿವವ್ರತರತೋ ಭವ ।
ಶಪಥಂ ಕುರು ಗೌರೀಶೇ ತಥಾ ಶಂಕರಪೂಜನೇ ॥೧೩॥

ಶಿವಪೂಜೈವ ಕರ್ತವ್ಯಾ ಯಾವಜ್ಜೀವಂ ಮಯೇತ್ಯಪಿ ।
ಪ್ರತಿಜ್ಞಾ ಸಾ ಪ್ರತಿಜ್ಞೈವ ತವ ಸ್ಯಾತ್ಸುಖದಾಯಿನೀ ॥೧೪॥

ರತ್ನೈರಪಾರೈರ್ವಿವಿಧೈಃ ಪ್ರಸೂನೈರಪಿ ಕೋಟಿಶಃ ।
ಪೂಜಯಸ್ವ ಮಹಾದೇವಂ ತೇನೇಷ್ಟಂ ತವ ಸಿದ್ಧ್ಯತಿ ॥೧೫॥

ಹೀಗೆಂದು ಮಹಾ ವ್ಯಸನವನ್ನು ತೋರ್ಪಡಿಸಿ ರಾಜನು ಹೇಳಿದ ಮಾತನ್ನು ಕೇಳಿ ಆ ಗಂಧರ್ವನು, ಆ ರಾಜನನ್ನು ಸಮಾಧಾನಪಡಿಸುತ್ತಾ ನುಡಿದನು. "ಅಯ್ಯಾ ರಾಜನೇ, ನಾನು ಹೇಳಿಕೊಡುವ ಉಪಾಯವನ್ನು ಮಾಡುವೆಯಾ? ಹಾಗೆ ಮಾಡುವೆಯಾದರೆ ನಿನಗೆ ಸಕಲ ಸುಖಗಳೂ ಲಭಿಸುವುವು. ನಿನ್ನ ಹೆಂಡತಿಯು ತಾನಾಗಿಯೇ ನಿನ್ನ ವಶಳಾಗುವಳು. ಈಗ ನಾನು ಹೇಳುವಂತೆ ಮಾಡು. ನೀನು ಸುಖಿಯಾಗುವೆ. ॥೧೨॥

ಮೊದಲು ನೀನು ಶೈವದೀಕ್ಷೆಯನ್ನು ತೆಗೆದುಕೊಳ್ಳಬೇಕು. ಶಿವಧರ್ಮ ವ್ರತಸ್ಥನಾಗು. ಅದಕ್ಕೆ ಮೊದಲು ನೀನು ಪ್ರತಿಜ್ಞೆಯನ್ನು ಮಾಡಬೇಕು. ಎಂದೆಂದೂ ಶಿವಧರ್ಮಗಳನ್ನೇ ಮಾಡುವೆನೆಂದು ನಿಶ್ಚಲವಾದ ಸಂಕಲ್ಪದಿಂದ ಈಶ್ವರನ ಮೇಲೆ ಶಪಥವನ್ನಿಡಬೇಕು. ॥೧೩॥

ಮರಣಪರ್ಯಂತವೂ ಸತತವೂ ಶಿವಾರ್ಚನೆಯನ್ನು ಮಾಡುವೆನೆಂದು ನೀನು ಈ ಕೂಡಲೇ ಪ್ರತಿಜ್ಞೆಮಾಡು. ಈರೀತಿ ನೀನು ದೃಢವಾಗಿ ಸಂಕಲ್ಪಿಸಿದರೆ ಆ ಪ್ರತಿಜ್ಞೆಯೇ ನಿನಗೆ ಸಕಲ ಸುಖಗಳನ್ನೂ ಉಂಟುಮಾಡಿಕೊಡುವುದು. ॥೧೪॥

ನಿನಗೆ ಹೇಗಿದ್ದರೂ ವಿಶಾಲವಾದ ಐಶ್ವರ್ಯವಿದೆ. ಅದಕ್ಕೆ ಅನುಗುಣವಾಗಿ ನಿತ್ಯವೂ ನಾನಾವಿಧವಾದ ಸುವರ್ಣಪುಷ್ಪಗಳಿಂದಲೂ ರತ್ನಗಳಿಂದಲೂ ಶಿವನನ್ನು ಅರ್ಚಿಸು. ಇದರಿಂದ ನಿನ್ನ ಮನೋರಥಗಳೆಲ್ಲವೂ ಸಿದ್ಧಿಸುವುವು. ॥೧೫॥

ಯದಿ ಮಧ್ಯೇ ಪರಿತ್ಯಕ್ತಾ ಶಿವಪೂಜಾ ತ್ವಯಾ ತದಾ ।
ಹಾನಿಸ್ತಾವದ್ಧ್ರುವತ್ಯೇವ ಧನಧಾನ್ಯಾದಿಕಸ್ಯ ತೇ ॥೧೬॥

॥ ರವಿರುವಾಚ ॥

ಇತಿ ತದ್ವಚನಂ ಶ್ರುತ್ವಾ ಸ ರಾಜಾ ಪ್ರೀತಮಾನಸಃ ।
ಚಕಾರ ಶಪಥಂ ಪ್ರೀತ್ಯಾ ಮಹಾದೇವಪದಾಂಬುಜೇ ॥೧೭॥

ಯಾವಜ್ಜೀವಂ ಶಂಕರಾರಾಧನಂ ಮೇ
ಕಾಲೇ ಕಾಲೇ ಕಾರ್ಯಮೇವಾದರೇಣ ।
ದತ್ತಂ ಸರ್ವಂ ರತ್ನಕೋಶಾದಿಕಂ ಚ
ವಿಶ್ವೇಶಾರ್ಚಾಸಾಧನಂ ತತ್ಸಮಸ್ತಂ ॥೧೮॥

ಇತಿ ಪ್ರತಿಜ್ಞಾಂ ಕೃತ್ವೈವ ತಮುವಾಚ ಸ ಭೂಪತಿಃ ।
ಶಿವದೀಕ್ಷಾ ಕಥಂ ಪ್ರಾಪ್ಯಾ ಮಯೇತಿ ಪ್ರೀತಮಾನಸಃ ॥೧೯॥

ನೀನೆಲ್ಲಾದರೂ ಮಧ್ಯೆ ಶಿವಪೂಜೆಯನ್ನು ಬಿಟ್ಟರೆ ಅಥವಾ ಶಿವಧರ್ಮ ವನ್ನು ತ್ಯಜಿಸಿದರೆ ನೀನು ಹಾಳಾಗುವೆ. ನಿನ್ನ ಸಕಲ ಧನಧಾನ್ಯಾದಿ ಸಂಪತ್ತುಗಳೂ ನಾಶಹೊಂದುತ್ತವೆ. ನೀನು ಸರ್ವಥಾ ನಾಶವನ್ನೇ ಪಡೆಯುವೆ. ಎಚ್ಚರಿಕೆ ಇರಲಿ." ॥೧೬॥

ಹೀಗೆಂದು ಗಂಧರ್ವನು ಉಪದೇಶಿಸಲು ಈ ಸುಲಭವಾದ ಸುಖೋಪಾಯ ವನ್ನು ಕೇಳಿ ರಾಜನಿಗೆ ಅತ್ಯಂತ ಸಂತೋಷವಾಯಿತು. ಆತನು ಅತ್ಯುತ್ಸಾಹದಿಂದ ಈ ಕೂಡಲೇ ನಾನು ಶಿವಾರ್ಚನೆಯನ್ನು ಮಾಡುವೆನೆಂದು ಹೇಳಿದನು. ಮತ್ತು ಶಿವಧರ್ಮವನ್ನು ಅನುಷ್ಠಿಸುವೆನೆಂದು ಶಿವಪಾದಾರವಿಂದಗಳಲ್ಲಿ ಆಣೆಯನ್ನಿಟ್ಟು ಶಪಥಮಾಡಿದನು. ॥೧೭॥

ನಾನು ನನ್ನ ಮರಣಪರ್ಯಂತ ನಿತ್ಯವೂ ಕಾಲಕಾಲಕ್ಕೆ ಅತ್ಯಂತ ಆದರದಿಂದ ಶಿವಾರ್ಚನೆಯನ್ನು ಮಾಡುವೆನು. ನನಗೆ ಯಾವ ಯಾವ ಧನಕನಕ ವಸ್ತು ಸಂಪತ್ತುಗಳಿವೆಯೋ ಅವುಗಳೆಲ್ಲವನ್ನೂ ಶಿವಾರಾಧನೆಯಲ್ಲಿಯೇ ವಿನಿಯೋಗಿಸುವೆನು. ॥೧೮॥

ಹೀಗೆಂದು ಪ್ರತಿಜ್ಞೆಮಾಡಿದ ಬಳಿಕ ಗಂಧರ್ವನನ್ನು ಕುರಿತು ರಾಜನು ನಾನು ಶಿವದೀಕ್ಷೆಯನ್ನು ಹೇಗೆ ತೆಗೆದುಕೊಳ್ಳುವುದು? ನನಗೆ ದೀಕ್ಷೆಯನ್ನು

ತುಭ್ಯಂ ಮಯೈವ ದಾತವ್ಯಾ ಶಿವದೀಕ್ಷೇತಿ ಸಾದರಂ ।
ಯಯೌ ತೇನ ಸರಸ್ತೀರಂ ಮಹಾಲಿಂಗಸಮನ್ವಿತಂ ॥೨೦॥

ತತಃ ಪರಂ ಸ ಗಂಧರ್ವಃ ಸ್ನಾತಃ ಶಿವಸರೋವರೇ ।
ವಿಭೂತಿಭೂಷಿತಾಂಗಂ ಚ ನೃಪಮಾಹಾತಿವಿಸ್ಮಿತಃ ॥೨೧॥

ಶಿವಸನ್ನಿಧಿಮಾಯಾಹಿ ದೀಕ್ಷಾ ತತ್ರ ಭವಿಷ್ಯತಿ ।
ಸಂಪಾದನೀಯಾ ಸಾಮಗ್ರೀ ಮಮೇತ್ಯಾಹ ವಿಚಕ್ಷಣಃ ॥೨೨॥

ತತೋ ಗತ್ವಾ ಕಾಲಕಾಲಮಂದಿರಂ ಲಿಂಗಸನ್ನಿಧೌ ।
ದೀಕ್ಷಾಂ ದದೌ ಮಹಾಶೈವೀಂ ಸರ್ವಾರ್ಥಫಲಸಿದ್ಧಿದಾಂ ॥೨೩॥

ಕೊಡುವವರು ಯಾರು? ಅದಕ್ಕೆ ಮೊದಲು ಏನು ಮಾಡಬೇಕು? ನಾನು ಆ ವ್ರತವನ್ನು ಕೈಗೊಳ್ಳಲು ಸಿದ್ಧನಾಗಿದ್ದೇನೆ. ನನಗೆ ಹೇಗಾದರೂ ಆ ದೀಕ್ಷೆಯು ಲಭಿಸುವಂತೆ ಮಾಡು ಎಂದು ಕೇಳಿಕೊಂಡನು. ॥೧೯॥

ಆಗ ಗಂಧರ್ವನು ನಾನೇ ನಿನಗೆ ಶಿವದೀಕ್ಷೆಯನ್ನು ಕೊಡುವೆನೆಂದು ಹೇಳಿ, ಅನಂತರ ದೀಕ್ಷಾಗ್ರಹಣಕ್ಕೆ ಯೋಗ್ಯವಾದ ಸ್ಥಳಕ್ಕೆ ಹೋಗೋಣವೆಂದು ರಾಜನನ್ನು ಕರೆದುಕೊಂಡು, ಒಂದು ಸರೋವರದ ಬಳಿಗೆ ಹೋದನು. ಆ ಸರೋವರದ ಹತ್ತಿರದಲ್ಲಿ ಶಿವಲಿಂಗವೂ ಇದ್ದುದರಿಂದ ಅದು ಪುಣ್ಯಕ್ಷೇತ್ರವಾಗಿದ್ದಿತು. ॥೨೦॥

ಆಗ ರಾಜನು ಆ ಶಿವತೀರ್ಥದಲ್ಲಿ ಭಕ್ತಿಯಿಂದ ಸ್ನಾನಮಾಡಿದನು. ಅಂಗಾಂಗಗಳಿಗೂ ಭಸ್ಮ ಮತ್ತು ಭಸ್ಮತ್ರಿಪುಂಡ್ರವನ್ನೂ ರುದ್ರಾಕ್ಷಮಾಲೆಗಳನ್ನೂ ಧರಿಸಿದನು. ಹೀಗೆ ಶುಚಿರ್ಭೂತನಾದ ರಾಜನನ್ನು ಕುರಿತು ಗಂಧರ್ವನು ಪ್ರೀತಿಯಿಂದ ಹೀಗೆಂದನು. ॥೨೧॥

ಎಲೈ ರಾಜನೇ, ಶಿವಸನ್ನಿಧಿಗೆ ಹೋಗೋಣ; ಏಳು. ಅಲ್ಲಿ ಸಕಲ ಸಾಮಗ್ರಿಗಳನ್ನೂ ಸಿದ್ಧಪಡಿಸಿಟ್ಟಿದ್ದೇನೆ. ಅಲ್ಲೇ ನಿನಗೆ ಶಿವದೀಕ್ಷೆಯನ್ನು ಕೊಡುವೆನು. ನಡೆ ಅಲ್ಲಿಗೆ ಹೋಗೋಣವೆಂದನು. ॥೨೨॥

ಅನಂತರ ಇಬ್ಬರೂ ಶಿವಮಂದಿರದಲ್ಲಿದ್ದ ಶಿವಲಿಂಗದ ಬಳಿಗೆ ಹೋದರು. ಆ ಏಕಾಂತದಲ್ಲಿ ಗಂಧರ್ವನು ಸರ್ವೇಷ್ಟಫಲದಾಯಕವಾದ ಮಹಾಶೈವದೀಕ್ಷೆಯನ್ನು ರಾಜನಿಗೆ ವಿಧಿಪೂರ್ವಕವಾಗಿ ಉಪದೇಶವಿತ್ತನು. ॥೨೩॥

ತತಸ್ತದ್ದೇಹನಿಲಯಾಃ ಪಾಪಶೈಲಾಃ ಪರಸ್ಪರಂ ।
ನಿಲಯಂ ಗತಮಿತ್ಯುಚ್ಚೈರುಚ್ಚರಂತೋ ಗತಾಸ್ತತಃ ॥೨೪॥

ಧೂಮಾಕಾರಾನ್ ಗಿರೀನ್ ದೃಷ್ಟ್ವಾ ಪಾಪರೂಪಾನ್ ನೃಪಾತ್ಮನಃ ।
ವಿಸ್ಮಯಂ ಪರಮಂ ಪ್ರಾಪ್ಯ ಕೃತಾರ್ಥೋಽಸ್ಮೀತಿ ಸಾದರಂ ॥೨೫॥

ತತಸ್ಸ ಪೂತಃ ಪುಣ್ಯಾತ್ಮಾ ತದಾನೀಂ ಶಿವವಿದ್ಯಯಾ ।
ಚಕಾರ ಪೂಜನಂ ಶಂಭೋರಪಾರೈಸ್ಸಾಧನೈರ್ನೃಪಃ ॥೨೬॥

ತದಾ ಪ್ರತಿಜ್ಞಾಪಿ ಕೃತಾ ನೃಪೇಣ
ಶಂಭೋಃ ಪದಾಂಭೋರುಹಪೂಜನಂ ಮೇ ।
ಕರ್ತವ್ಯಮನ್ಯತ್ಪರಿಹೃತ್ಯ ಕಾರ್ಯಂ
ಇತಃ ಕಿಮನ್ಯನ್ನೃಪಹಾರ್ಯಮಿಷ್ಟಂ ॥೨೭॥

ರಾಜನು ಶಿವಮಂತ್ರೋಪದೇಶವನ್ನು ಗ್ರಹಣಮಾಡಿದ ಕೂಡಲೇ ಅತನ ದೇಹದಲ್ಲಿ ನೆಲೆಸಿದ್ದ ಪಾಪರಾಶಿಗಳು, ಅಯ್ಯೋ ಸರ್ವನಾಶವಾಯಿತು, ಎಂದು ಕೂಗಿಕೊಳ್ಳುತ್ತಾ ಅಲ್ಲಿಯೇ ಸುಟ್ಟು ಭಸ್ಮವಾಗಿಹೋದವು. ॥೨೪॥

ರಾಜನು ತನ್ನ ದೇಹದಿಂದ ಹೊರಬಿದ್ದು ಹೊಗೆಯಂತೆ ಕಪ್ಪಾಗಿದ್ದ ಆ ಪಾಪರಾಶಿಗಳನ್ನು ನೋಡಿ, ಇಷ್ಟೊಂದು ಪಾಪಗಳು ನನ್ನಲ್ಲಿ ಇದ್ದವೇ? ಹೇಗೆ ಇದ್ದವು ಎಂದು ಯೋಚಿಸುತ್ತಾ ಅತ್ಯಂತ ವಿಸ್ಮಿತನಾದನು. ಆ ಪಾಪಗಳೆಲ್ಲವೂ ಹೊರಟುಹೋದಮೇಲೆ ರಾಜನಿಗೆ ಹಗುರವಾದಂತಾಗಿ ಇಂದು ನಾನೇ ಧನ್ಯನೆಂದು ಕೊಂಡನು. ॥೨೫॥

ಹೀಗೆ ಸಮಸ್ತ ಪಾಪಗಳನ್ನು ಕಳೆದುಕೊಂಡದ್ದರಿಂದಲೂ, ಶ್ರೇಷ್ಠವಾದ ಶಿವವಿದ್ಯೆಯನ್ನು ಸ್ವೀಕರಿಸಿದ್ದರಿಂದಲೂ ಆ ರಾಜನು ಆಗಲೇ ಪುಣ್ಯಾತ್ಮನಾದನು. ಆನಂತರ ಅವನು ಅಪಾರವಾದ ಪೂಜಾಸಾಮಗ್ರಿಗಳನ್ನು ಅಣಿಮಾಡಿಕೊಂಡು ಅತ್ಯಂತ ಭಕ್ತಿಯಿಂದ ಶಿವಾರ್ಚನೆಮಾಡಿದನು. ॥೨೬॥

ಆಗ ಮತ್ತೆ ರಾಜನು ಪ್ರತಿಜ್ಞಾಪುರಸ್ಸರವಾಗಿ ಈ ರೀತಿ ಸ್ಥಿರಸಂಕಲ್ಪ ಮಾಡಿದನು. ನಾನು ಸತತವೂ ಶಿವಪಾದಾರವಿಂದಗಳನ್ನೇ ಪೂಜಿಸುವೆನು. ಮತ್ತಿತರ ಎಲ್ಲಾ ಹವ್ಯಾಸಗಳನ್ನು ಬಿಟ್ಟು ಸಕಲ ಇಷ್ಟಾರ್ಥಗಳನ್ನೂ ರಾಜಭೋಗಗಳನ್ನೂ ಒದಗಿಸಿ ಕೊಡುವ ಶಿವಪೂಜೆಯನ್ನೇ ನಿತ್ಯವೂ ಕಾಲಕಾಲಕ್ಕೆ ತಪ್ಪದೆ ಮಾಡುವೆನು. ॥೨೭॥

ಅಪಾರಾಪರಾಧಾನ್ ಕ್ಷಮಸ್ವಾದ್ಯ ಶಂಭೋ
ಮದೀಯಾನಮೋಯಾನದೇಯೋಽಪಿ ದೇಯಃ ।
ವರೋಽಯಂ ವರೋ ಮೇ ಸ ಸಂಸಾರಬಂಧಃ
ಪ್ರಯಚ್ಛನ್ನಏವಾಸ್ತು ತುಭ್ಯಂ ನಮೋ ಮೇ ॥೨೮॥

ಇತಿ ಸ್ತುತ್ವಾ ಮಹಾದೇವಂ ಲಿಂಗಾರ್ಚನರತೋ ನೃಪಃ ।
ತತಸ್ತಮಾಹ ಗಂಧರ್ವೋ ನಿಮೀಲಿತವಿಲೋಚನಂ ॥೨೯॥

ರಾಜನ್ ಪ್ರದೋಷಕಾಲಸ್ತು ಜಾತಶ್ಶಂಕರಪೂಜನಂ ।
ಜಾತಂ ಚ ಮಂದಿರಂ ಯಾಹಿ ತಯಾ ಮಹಿಲಯಾ ಸಹ ॥೩೦॥

ಇತಿ ತದ್ವಚನಂ ಶ್ರುತ್ವಾ ಗಂಧರ್ವಂ ಪ್ರಾಹ ಭೂಪತಿಃ ।
ಶಿವಲಿಂಗಂ ಸಮಾಲಿಂಗ್ಯ ಕಾಮುಕಃ ಕಾಮಿನೀಮಿವ ॥೩೧॥

ಕರುಣಾನಿಧಿಯಾದ ಪರಮೇಶ್ವರನೇ, ನನ್ನ ಸರ್ವಾಪರಾಧಗಳನ್ನು ಕ್ಷಮಿಸಿ ಕಾಪಾಡು. ನನ್ನ ಅಪಾರ ಪಾಪಗಳೂ ನಾಶಹೊಂದಲಿ. ನನ್ನ ಮೇಲೆ ಪ್ರಸನ್ನನಾಗಿ ಈ ಅಮೋಘವಾದ ವರವನ್ನು ಕರುಣಿಸು. ನನ್ನ ಈ ಅನಾದಿಯಾದ ಸಂಸಾರ ಬಂಧವು ಕಡಿದುಹೋಗಲಿ. ನಿನಗೆ ಶತಶಃ ನಮಸ್ಕಾರ. ನನಗೆ ಪುನಃ ಈ ಸಂಸಾರಬಂಧನ ಕ್ಲೇಶವು ಒದಗದಂತೆ ಅನುಗ್ರಹಿಸು. ॥೨೮॥

ಹೀಗೆಯೇ ರಾಜನು ಪದೇ ಪದೇ ಶಿವಲಿಂಗಾರ್ಚನೆಯನ್ನು ನಡೆಸಿ ಅನೇಕಾವರ್ತಿ ಶಿವನನ್ನು ಸ್ತುತಿಸಿ, ಕಣ್ಣುಗಳನ್ನು ಮುಚ್ಚಿಕೊಂಡು, ಶಿವನನ್ನೇ ಧ್ಯಾನಿಸುತ್ತಿದ್ದನು. ಆಗ ಆತನನ್ನು ಕುರಿತು ಗಂಧರ್ವನು ಹೀಗೆಂದು ನುಡಿದನು. ॥೨೯॥

ರಾಜನೇ, ನೀನು ಅವಿಚ್ಛಿನ್ನವಾಗಿ ಶಿವನನ್ನು ಅರ್ಚಿಸಿರುವೆ. ಅಲ್ಲದೇ ಈಗ ಪ್ರದೋಷಕಾಲದಲ್ಲಿ ಪ್ರದೋಷ ಪೂಜೆಯನ್ನೂ ನೀನು ನೆರವೇರಿಸಿರುವೆ. ಇನ್ನು ನೀನು ನಿನ್ನ ಪತಿಯೊಡನೆ ಮನೆಗೆ ಹೋಗಬಹುದು. ಆಕೆಯನ್ನೂ ಸಂಗಡಲೇ ಕರೆದುಕೊಂಡು ನಿನ್ನ ಮನೆಗೆ ಹೋಗೆಂದನು. ॥೩೦॥

ಗಂಧರ್ವನ ಈ ಮಾತನ್ನು ಕೇಳಿ ರಾಜನೇನೂ ಅದಕ್ಕೆ ಒಡಂಬಡಲಿಲ್ಲ. ಕಾಮುಕನು ತನ್ನ ಕಾಮಿನಿಯನ್ನು ಆಲಿಂಗಿಸಿಕೊಳ್ಳುವಂತೆ ಆತನು ಅತ್ಯಂತ

॥ ರಾಜೋವಾಚ ॥

ಅತಃ ಪರಂ ಲಿಂಗಸಮರ್ಚನೇನ
ನೇಯಂ ವಯೋ ಮೇ ಶಿವಲಿಂಗಪೂಜಾ ।
ಕೃತಾ ನ ಪೂರ್ವಂ ದುರದೃಷ್ಟಯೋಗಾತ್
ಕಷ್ಟಾನಿ ಭುಕ್ತಾನ್ಯಮಿತಾನಿ ತಾನಿ ॥೩೨॥

ಸಂಸಾರವಾಂಛಾಪಿ ಕಿಲಾತಿತುಚ್ಛಾ
ಸ್ವಚ್ಛಸ್ಯ ಸಾ ಕಿಂ ಭವತಿ ಪ್ರಬೋಧೇ ।
ಭ್ರಮಾಂಧಕಾರೋ ನ ರವಿಪ್ರಕಾಶೇ
ತೈರ್ಮಂದಿರೈರಪ್ಯಲಮೇವ ಭೋಗೈಃ ॥೩೩॥

ರತ್ನೈರಪಾರೈರ್ವಿವಿಧೈಃ ಪ್ರಕಾಮಂ
ಪುನಃ ಪುನಶ್ಶಂಕರಮಂದಿರಾಣಿ ।

ಪ್ರೀತಿಯಿಂದ ಶಿವಲಿಂಗವನ್ನು ಆಲಿಂಗಿಸಿಕೊಂಡು ಆನಂದವನ್ನನುಭವಿಸುತ್ತಾ ಈ ರೀತಿ ಗಂಧರ್ವನಿಗೆ ಹೇಳಿದನು. ॥೩೧॥

ಅಯ್ಯಾ, ಇನ್ನು ನಾನು ಸತತವೂ ಶಿವಾರಾಧನೆಯನ್ನು ಮಾಡಬೇಕು. ನನ್ನ ದೌರ್ಭಾಗ್ಯದಿಂದ ಇಷ್ಟು ದಿವಸಗಳೂ ಶಿವಾರ್ಚನೆಯನ್ನು ಮಾಡದೇ ಅನೇಕ ಕಷ್ಟಗಳನ್ನು ಅನುಭವಿಸುತ್ತಾ ವ್ಯರ್ಥವಾಗಿ ಕಾಲಕಳೆದೆನು. ಇನ್ನು ಮುಂದೆ ನಾನು ನನ್ನ ಆಯುಷ್ಯವನ್ನು ಕೇವಲ ಶಿವಲಿಂಗಪೂಜೆ ಮಾಡುತ್ತಲೇ ಕಳೆಯಬೇಕೆಂದು ನಿರ್ಧರಿಸಿರುವೆನು. ॥೩೨॥

ಅಲ್ಲದೇ ಈ ಸಾಂಸಾರಿಕ ಸುಖಭೋಗಲಾಲಸೆಯು ಅತ್ಯಂತ ತುಚ್ಛತರವಾದದ್ದಷ್ಟೆ. ಈಗ ನನಗೆ ಜ್ಞಾನೋದಯವಾಗಿರುವುದು. ಅಂದಮೇಲೆ ನಾನು ಈ ತಾಪತ್ರಯಗಳಲ್ಲಿ ಮತ್ತೆ ಬೀಳುವುದಕ್ಕೆ ಎಲ್ಲಿಯಾದರೂ ಅಪೇಕ್ಷಿಸುವೆನೇ? ಸೂರ್ಯನ ಬೆಳಕು ಪ್ರಬುದ್ಧವಾಗಿರಲು ಅಂಧಕಾರಪ್ರಸಾರಕ್ಕೆ ಅವಕಾಶವುಂಟೇ? ಹಾಗೆಯೇ ನಾನು ಪುನಃ ಆ ಮನೆ, ಮಠ, ಭೋಗವಿಲಾಸ ಮುಂತಾದ ಭ್ರಮೆಯಲ್ಲಿ ಬೀಳುವುದಿಲ್ಲ. ॥೩೩॥

ನನ್ನಲ್ಲಿರುವ ಅಪಾರವಾದ ಧನಕನಕಗಳನ್ನೂ ರತ್ನ ವೈಡೂರ್ಯಗಳನ್ನೂ ಶಿವಾರ್ಪಣಮಾಡಿ ಅನೇಕ ಶಿವದೇವಾಲಯಗಳನ್ನು ಕಟ್ಟಿಸುವೆನು. ಪ್ರಯತ್ನ

ಕಾರ್ಯಾಣಿ ಯತ್ನೇನ ಶಿವಾರ್ಚನಾನಿ
ಬಿಲ್ವಪ್ರಸೂನಾದಿಭಿರಾದರೇಣ ॥೩೪॥

ಶಿವಾಧೀನಂ ಮತ್ವಾ ಸಕಲಮತಿಪುಣ್ಯೈಶ್ಶಿವಜನೈಃ
ಕರೋಮಿ ವ್ಯಾಸಂಗಂ ಕಿಮಪಿ ಖಲು ಹಿತ್ವೈವ ಸತತಂ ।
ಮಹಾದೇವಧ್ಯಾನಂ ನವನಿಧಿಸಮಾನಾನಿ ಬಹುಧಾ
ಫಲಾನಿ ತ್ಯಕ್ತ್ವಾ ತಚ್ಛಿವಭಜನಮೇವಾಸ್ಯ ಶರಣಂ ॥೩೫॥

ಸದನಂ ಮದನಾಂತಕಾಲಯೇ ವಸನಂ ಭೂತಿರಿದಂ ಮಮಾಶನಂ ।
ಶಿವಲಿಂಗಸಮರ್ಪಿತಂ ನವಂ ಕಮಲಂ ಬಿಲ್ವಸಪಲ್ಲವಮಾಲಾ ॥೩೬॥

ಇತಿ ತದ್ವಚನಂ ಶ್ರುತ್ವಾ ವಿಮಲಾ ಮಹಿಲಾಪಿ ಸಾ ।
ತಸ್ಯ ಭೂಪಸ್ಯ ಸಸ್ಮೇರಾ ಸ್ಮಿತೈರಾನಂದಮಾಪ ಚ ॥೩೭॥

ಪುರಸ್ಸರವಾಗಿ ಸರ್ವದಾ ಶಿವಾರಾಧನೆಯನ್ನು ಮತ್ತು ಬಿಲ್ವಪತ್ರೆ ಕುಸುಮ ಮುಂತಾದವುಗಳಿಂದ ಶಿವಲಿಂಗಗಳನ್ನು ಪೂಜಿಸುವೆನು. ॥೩೪॥

ಪ್ರಾಪಂಚಿಕವಾದ ಸಕಲ ವ್ಯವಹಾರಗಳೂ ಕೇವಲ ಶಿವಾಧೀನವಾಗಿವೆಯೆಂದು ನಾನು ನಂಬಿದ್ದೇನೆ. ಆದುದರಿಂದ ಅವುಗಳಲ್ಲಿ ನಮ್ಮಿಂದೇನೂ ಆಗಬೇಕಾದದ್ದಿಲ್ಲ. ನಾನು ಈಗ ನೆಮ್ಮದಿಯಿಂದ ಸರ್ವದಾ ಶಿವಭಕ್ತರ ಸಹವಾಸ ಮಾಡುತ್ತಾ ಕೇವಲ ಶಿವಾರಾಧನೆಯನ್ನು ಮಾಡುವೆನು. ಸಕಲ ಫಲಾಪೇಕ್ಷೆಯನ್ನೂ ತ್ಯಾಗಮಾಡಿ ನಿಸ್ಸಂಗತೆಯಿಂದ ಶಿವಪೂಜೆಯನ್ನು ಮಾಡುವೆನು. ನನಗೆ ಕೇವಲ ಶಿವಭಜನೆಯೇ ನಿಧಿ ಎಂದು ಮರೆಹೊಕ್ಕು ಶಿವನನ್ನೇ ಸದಾ ಧ್ಯಾನಿಸುವೆನು. ॥೩೫॥

ನನ್ನ ವಾಸಕ್ಕೆ ಇದೇ ಶಿವದೇವಾಲಯವೇ ಸಾಕು. ನಾನು ಇಲ್ಲಿಯೇ ಇರುವೆನು. ನನ್ನ ಮೈಗೆ ಇನ್ನುಮೇಲೆ ಆಚ್ಛಾದನೆ ಅಲಂಕಾರವು, ರುದ್ರಾಕ್ಷಿಯೇ. ಶಿವನೈವೇದ್ಯವಾದ ಅನ್ನವೇ ನನಗೆ ಆಹಾರವು. ನನಗೆ ಹೂವಿನ ಹಾರ ಮುಂತಾದ ಸುಖವೆಲ್ಲವೂ ಶಿವಲಿಂಗಾರ್ಪಿತವಾಗಿ ಪ್ರಸಾದವಾಗಿರುವ ನೂತನವಾದ ಕಮಲಗಳು ಮತ್ತು ಬಿಲ್ವಪತ್ರೆಗಳು ಇವುಗಳೇ. ॥೩೬॥

ಈ ರೀತಿಯಾಗಿ ರಾಜನು ಹೇಳುತ್ತಿರುವಾಗ ಆತನ ಪತ್ನಿಯೂ ಅಲ್ಲಿಯೇ ಇದ್ದಳು. ಆಕೆಯು ತನ್ನ ಪತಿಯ ಆ ಮಾತನ್ನು ಕೇಳಿ ಪರಮಹರ್ಷಿತಳಾದಳು. ತನ್ನ ಪತಿಯು ಪರಮಶಿವಭಕ್ತನಾದನೆಂದು ಆನಂದದಿಂದ ಆತನ ಸಮೀಪವನ್ನೈದಿ

ಏತಾವತ್ತಸ್ಯ ವೃತ್ತಾಂತಂ ಧರ್ಮಧೇನುಶ್ಶಿವಾರ್ಚಕಃ ।
ಶ್ರುತ್ವಾ ವಿಸ್ಮಯಮಾಪನ್ನಸ್ಸ ಪ್ರಾಪ ಶಿವಮಂದಿರಂ ॥೩೮॥

ತತಸ್ತಂ ಭೂತಿಪೂತಾಂಗಂ ರುದ್ರಾಕ್ಷಾಭರಣಾನ್ವಿತಂ ।
ಲಿಂಗಾಲಿಂಗಿತಶಾಂಗಾಂಗಂ ದದರ್ಶ ಪ್ರೀತಮಾನಸಃ ॥೩೯॥

ತಂ ದೃಷ್ಟ್ವಾ ಕನ್ಯಕಾಂ ದೃಷ್ಟ್ವಾ ಗಂಧರ್ವಂ ಚ ಶಿವಾರ್ಚಕಂ ।
ಪ್ರಾಹ ಗಂಭೀರವಚನೈಶ್ಚತುರಸ್ಸ ನರಾಧಿಪಃ ॥೪೦॥

॥ ಧರ್ಮಧೇನುರುವಾಚ ॥

ಕೇನೋಪದಿಷ್ಟಶ್ಶಿವಲಿಂಗಪೂಜಾಂ
ಕರ್ತುಂ ಪ್ರವೃತ್ತೋಽಪಿ ನಿವೃತ್ತಕಾಮಃ ।

ದಳು. ಆಕೆಯು ರಾಜನಿಗೆ ಅನುಕೂಲವಾಗುವಂತೆ ವರ್ತಿಸಿ ಅವನನ್ನು ಸಂತೋಷಪಡಿಸಿ ತಾನೂ ಆನಂದವನ್ನನುಭವಿಸುತ್ತಿದ್ದಳು. ॥೩೭॥

ಅಷ್ಟುಹೊತ್ತಿಗೆ ಈ ಎಲ್ಲಾ ವೃತ್ತಾಂತವೂ ಆಕೆಯ ತಂದೆಯಾದ ಧರ್ಮಧೇನು (ಧರ್ಮಸೇನ)ವಿಗೆ ತಿಳಿಯಿತು. ತನ್ನ ಅಳಿಯನು ಪರಶಿವಭಕ್ತನಾದದ್ದನ್ನು ಕೇಳಿ ಆತನಿಗೆ ಆಶ್ಚರ್ಯವೂ ಸಂತೋಷವೂ ಆಯಿತು. ಆಗ ಆತನು ಅಳಿಯನನ್ನು ನೋಡಬೇಕೆಂದು ಅದೇ ಶಿವದೇವಾಲಯಕ್ಕೆ ಬಂದನು. ॥೩೮॥

ಆತನು ಬಂದಾಗ ರಾಜನು ಅಂಗಾಂಗಗಳಿಗೂ ಭಸ್ಮವನ್ನು ಧರಿಸಿಕೊಂಡು ಕೊರಳಲ್ಲಿ ರುದ್ರಾಕ್ಷಮಾಲೆಯನ್ನು ಸಹ ಧರಿಸಿ ಶಿವಲಿಂಗವನ್ನೇ ಆಲಿಂಗಿಸಿಕೊಂಡು ಶಿವಧ್ಯಾನ ತತ್ಪರನಾಗಿದ್ದನು. ಹೀಗೆ ಶಿವಾರಾಧನೆಯಲ್ಲಿಯೇ ಆಸಕ್ತನಾಗಿರುವ ರಾಜನನ್ನು ನೋಡಿ ಧರ್ಮಸೇನನಿಗೆ ಪರಮಾನಂದವಾಯಿತು. ॥೩೯॥

ಹೀಗೆ ಕೇವಲ ಶಿವಾರಾಧನನಿರತರಾದ ತನ್ನ ಮಗಳು ಮತ್ತು ಅಳಿಯ ಇವರನ್ನೂ ಆ ಗಂಧರ್ವನನ್ನೂ ಸಹ ಉದ್ದೇಶಿಸಿ, ಧರ್ಮಸೇನನು ಮೃದುಗಂಭೀರ ಧ್ವನಿಪೂರ್ವಕವಾಗಿ ಈ ರೀತಿ ನುಡಿದನು. ॥೪೦॥

ಅಯ್ಯಾ ಕಿನ್ನರನೇ, ಬಹಳ ಒಳ್ಳೆಯದಾಯಿತು. ಈತನು ಶಿವಭಕ್ತನಾದದ್ದು ಒಳ್ಳಿತಾಯಿತು. ಈಗ ಈತನಿಗೆ ಇಂಥ ಉತ್ಕೃಷ್ಟವಾದ ಶಿವಲಿಂಗಪೂಜೆಯನ್ನು

ಪ್ರವೃತ್ತಮೇತಸ್ಯ ನ ಭಾವನಾ ವಾ
ಕಾಮಿತಿ ಮನ್ಯೇ ಶಿವಪೂಜನೇನ ॥೪೧॥

ಧನ್ಯೋಪದೇಶೇನ ಭವಂತಿ ಧನ್ಯಾಃ
ಸರ್ವೇಽಪಿ ಮಾನ್ಯಾಶ್ಚ ಶಿವಾರ್ಚನೇನ ।
ಕಿಮೇತದಾಶ್ಚರ್ಯಕರಂ ಕರೋತಿ
ಸ ಶಂಕರಸ್ಸುಂದರಲೀಲಯಾಪಿ ॥೪೨॥

ಅಹೋ ಮಹದ್ಭಾಗ್ಯಮಿದಂ ಮಮಾಪಿ
ಮತ್ಕನ್ಯಕಾಯಾಶ್ಚ ವಿಶೇಷತಸ್ತು ।
ಯತೋ ಮಹಾದೇವಪದಾರವಿಂದಂ
ಆನಂದಕಂದಂ ಪರಮಾಶ್ರಿತೋಽಯಂ ॥೪೩॥

ಯಾರು ಉಪದೇಶಮಾಡಿದರು ? ಈ ರಾಜನು ಈಗ ಸಕಲ ಕಾಮವಾಸನೆಗಳನ್ನೂ ತ್ಯಜಿಸಿ ಶುದ್ಧಚಿತ್ತನಾಗಿ ಶಿವಾರ್ಚನೆಯಲ್ಲಿ ಆಸಕ್ತನಾಗಿರುವಂತಿದೆ. ಮೊದಲು ಅಷ್ಟೊಂದು ಕಾಮಲಾಲಸೆಯುಳ್ಳವನೂ ಪರಮಪಾಪಿಯೂ ಆಗಿದ್ದವನಿಗೆ ಹೇಗೆ ಇಂಥ ಸದ್ಬುದ್ಧಿಯು ಉಂಟಾಯಿತು ? ಅಥವಾ ಆ ಉಚ್ಚವಾದ ಭಕ್ತಿಭಾವನೆಯು ಹೇಗೆಹುಟ್ಟಿತು? ಈಗ ನೋಡಿದರೆ ಈತನಿಗೆ ಕೇವಲ ಶಿವಾರಾಧನೆಯೊಂದರಲ್ಲಿಯೇ ಅಭಿಲಾಷೆಯಿದ್ದಂತೆ ತೋರುವುದು. ॥೪೧॥

ಪ್ರಪಂಚದಲ್ಲಿ ಮನುಷ್ಯರು ಯೋಗ್ಯವಾದ ಉಪದೇಶವೂ ಮತ್ತು ಉಪದೇಶಕನೂ ಅಥವಾ ಸತ್ಸಹವಾಸಿ ಇವು ದೊರೆತರೆ ತಾವಾಗಿಯೇ ಧನ್ಯರಾಗುವರು. ಅಂತಹವರು ಶಿವಾರ್ಚನೆಯೇ ಮೊದಲಾದ ಪುಣ್ಯಕೆಲಸಗಳನ್ನು ಮಾಡಿ ಮಾನ್ಯರು ಎನಿಸುವರು. ಈ ಎಲ್ಲಾ ಅತ್ಯಾಶ್ಚರ್ಯಕರವಾದ ಆಟವು ಕೇವಲ ಆ ಶಂಕರನದೆಂದೇ ನಾನು ತಿಳಿದಿದ್ದೇನೆ. ॥೪೨॥

ಅಹೋಭಾಗ್ಯ, ನಾನೇ ಪರಮ ಭಾಗ್ಯಶಾಲಿಯಾದೆನು. ಅದರಲ್ಲೂ ನನ್ನ ಈ ಕುಮಾರಿಯು ಅತ್ಯಂತ ಭಾಗ್ಯಶಾಲಿನಿಯಾಗಿರುವಳು. ಏಕೆಂದರೆ ಈಕೆಯ ಪತಿಯು ಪರಮಾನಂದಪ್ರದಾನಮಾಡುವ ಪರಮೇಶ್ವರನ ಪಾದಾರವಿಂದಗಳನ್ನು ಪೂಜಿಸುವನು. ಮತ್ತು ಶಿವನೇ ತನಗೆ ಶರಣೆಂದು ಶಂಕರನನ್ನು ಮೊರೆಹೊಕ್ಕಿರುವನು. ॥೪೩॥

ಸಂಸಾರಸಾಗರಸ್ತೀರ್ಣಸ್ತೂರ್ಣಮೇತೇನ ಶಾಂಕರಃ ।
ಪ್ರಾಯಃ ಪೂರ್ವಭವೇಽಪ್ಯೇವಂ ಸೋಽಯಂ ಶಿವಪರಾಯಣಃ॥೪೪॥

ಅನ್ಯಥಾ ಕಥಮೇತಸ್ಯ ಶಿವಭಕ್ತಿರ್ದೃಢಾಧುನಾ ।
ಕಥಂ ವಾ ಸಮಭೂದೇವಮನ್ಯಾಲಭ್ಯಾ ವಿಶೇಷತಃ ॥೪೫॥

ಏವಂ ಭಕ್ತಿಶ್ಶಂಕರೇ ಯಸ್ಯ ತಸ್ಯ
ಭಾಗ್ಯಂ ನೂನಂ ತಾವದುತ್ಕೃಷ್ಟಮೇವ ।
ನಷ್ಟಂ ಕಷ್ಟಂ ಶಂಕರಾರಾಧನೇನ
ತುಷ್ಟಂ ಸ್ಪೃಷ್ಟಂ ಮಾನಸಂ ಶಾಂಕರಾಣಾಂ ॥೪೬॥

ಜನ್ಮಾಂತರಾರ್ಜಿತಮಹಾಘಲಯಾತ್ಕಿಲಾಯಂ
ಮೃತ್ಯುಂಜಯಾರ್ಚನರತೋ ವಿರತೋಽಪಿ ಭೋಗಾತ್ ।

ಈತನು ಬಹುಶಃ ಶೀಘ್ರವಾಗಿಯೇ ಈ ಸಂಸಾರಸಾಗರವನ್ನು ದಾಟುವನು. ಖಂಡಿತವಾಗಿಯೂ ಪರಮಪದವನ್ನೇ ಈತನು ಪಡೆಯುವನು. ಬಹುಶಃ ಯೋಚಿಸಿದರೆ ಈತನು ಹಿಂದಿನ ಜನ್ಮದಲ್ಲಿಯೂ ಪರಮಶಿವಭಕ್ತನೇ ಆಗಿದ್ದಿರ ಬಹುದು. ॥೪೪॥

ಹಾಗಿಲ್ಲದಿದ್ದರೆ ಈತನಿಗೆ ಇಷ್ಟು ದೃಢತರವಾದ ಭಕ್ತಿಯು ಏಕಕಾಲದಲ್ಲಿಯೇ ಹೇಗೆ ಉಂಟಾಗುತ್ತಿದ್ದಿತು? ಇಂಥ ಭಕ್ತಿಯು ಮತ್ತೆಯಾರಿಗೂ ಸುಲಭವಾಗಿ ದೊರೆಯುವುದಿಲ್ಲ. ಇಂಥ ನಿಶ್ಚಲವಾದ ಶಿವಭಕ್ತಿಯು ಅತ್ಯಮೋಘವಾದದ್ದು. ॥೪೫॥

ಈ ಪರಿಯಾದ ಶಿವಭಕ್ತಿಯು ಯಾವನಿಗೆ ಹುಟ್ಟುವುದೋ ಆತನು ನಿಜವಾಗಿಯೂ ಪುಣ್ಯಾತ್ಮನು. ಆತನ ಭಾಗ್ಯವು ಪರಮೋತ್ಕೃಷ್ಟವಾದದ್ದೇ ಸರಿ. ಇಂಥ ಭಕ್ತರ ಸಕಲ ದುಃಖಗಳೂ ಶಿವಾರಾಧನೆಯಿಂದ ಶೀಘ್ರವಾಗಿಯೇ ನಾಶ ಹೊಂದುವುವು. ಅವರ ಮನಸ್ಸು ಕೇವಲ ಶಿವಾರ್ಚನೆಯಿಂದಲೇ ಸಂತೃಪ್ತವಾಗಿ ಶಾಂತಿಯನ್ನು ಪಡೆದು ಆನಂದದ ನೆಲೆವೀಡಾಗುವುದು. ॥೪೬॥

ಈತನು ಸಕಲ ಭೋಗಲಾಲಸೆಗಳನ್ನೂ ತ್ಯಜಿಸಿ ವಿರಕ್ತನಾಗಿರುವನು. ಸರ್ವದಾ ಶಿವಾರಾಧನತತ್ಪರನಾಗಿರುವುದರಿಂದ ಈತನ ಜನ್ಮಜನ್ಮಾಂತರಗಳಲ್ಲಿ ಸಂಚಿತವಾದ ಸಮಸ್ತ ಪಾಪಗಳೂ ನಾಶಹೊಂದುವುದರಲ್ಲಿ ಸಂಶಯವಿಲ್ಲ. ಇನ್ನು ಮುಂದೆ ಈತನ ಪುಣ್ಯಗಳೂ ಭಾಗ್ಯಗಳೂ ದಿನೇ ದಿನೇ ಅಭಿವೃದ್ಧವಾಗುವುವು.

ಭಾಗ್ಯಂ ತದೇತದನುವಾಸರಮೇವಮತ್ರ
ಸಂಪ್ರಾರ್ಥನೀಯಮಿತಿ ಮೇ ಮತಿರದ್ಯ ಜಾತಾ ॥೪೭॥

ಇತ್ಯುಕ್ತ್ವಾ ಪ್ರಾಹ ಗಂಧರ್ವಂ ಸ ಚಿತ್ರರಥನಾಮಕಂ ।
ತ್ವದಾಜ್ಞಯಾ ಗೃಹಂ ಯಾತು ಸೋಽಯಂ ಮಹಿಲಯಾ ಸಹ॥೪೮॥

ತತಃ ಪರಂ ಸ ಗಂಧರ್ವಸ್ತಮಾಹ ಶಿವಪೂಜಕಂ ।
ಮಂದಿರಂ ಸುಂದರಂ ಪ್ರಾಪ್ಯ ಸ್ಥಾತವ್ಯಮಿತಿ ಸಾದರಂ ॥೪೯॥

ಭೋಕ್ತವ್ಯಂ ಶಿವನೈವೇದ್ಯಂ ಕರ್ತವ್ಯಂ ಚ ಶಿವಾರ್ಚನಂ ।
ಶಿವೋಪಹಾರಮಮೃತಂ ವೃದ್ಧಿಸಿದ್ಧಿಕರಂ ಪರಂ ॥೫೦॥

ಇತಿ ತದ್ವಚನಂ ಶ್ರುತ್ವಾ ಚಿತ್ರಾಶ್ವ ಇತಿ ಭೂಪತಿಃ ।
ತಮಾಹ ಲಿಂಗಮಾಲಿಂಗ್ಯ ಗಾಢಂ ದೃಢಮತಿರ್ದೃಢಂ ॥೫೧॥

ಆದುದರಿಂದ ಈತನೇ ಮಹಾಭಾಗ್ಯಶಾಲಿಯು. ಇಂಥ ಪರಮಭಾಗ್ಯವನ್ನೇ ಸಕಲ ಜನರೂ ಬಹುಶಃ ಅಪೇಕ್ಷಿಸುವರೆಂದು ನಾನು ಬಗೆಯುತ್ತೇನೆ. ॥೪೭॥

ಹೀಗೆಂದು ಧರ್ಮಧೇನುವು ಬಹುವಾಗಿ ಅಭಿನಂದಿಸಿದನು. ಅನಂತರ ಈ ಚಿತ್ರರಥ ಗಂಧರ್ವನನ್ನು ಕುರಿತು ಅಯ್ಯಾ, ನೀನು ಈ ರಾಜನನ್ನು ಮನೆಗೆ ಹೋಗೆಂದು ಹೇಳು. ಆತನು ಇನ್ನು ತನ್ನ ಪತ್ನಿಯೊಡನೆ ಮನೆಗೆ ತೆರಳಲಿ. ನೀನು ಹೋಗಬಹುದೆಂದು ಸಮ್ಮತಿಸಿದರೆ ಆತನು ಹೋಗಬಹುದು ಎಂದನು. ॥೪೮॥

ಅನಂತರ ಆ ಗಂಧರ್ವನು ರಾಜನನ್ನು ಕುರಿತು, ಅಯ್ಯಾ ರಾಜನೇ, ನೀನು ಇನ್ನು ಮನೆಗೆ ಹೋಗಬಹುದು. ನಿನ್ನ ಪತ್ನಿಯನ್ನೂ ಕರೆದುಕೊಂಡು ಸುಂದರವಾದ ಅರಮನೆಗೆ ಹೋಗು. ॥೪೯॥

ಪ್ರತಿನಿತ್ಯವೂ ನೀನು ಕಾಲಕಾಲಕ್ಕೆ ಸರಿಯಾಗಿ ಶಿವಾರ್ಚನೆಯನ್ನು ಮಾಡಬೇಕು. ಶಿವನಿಗೆ ನಿವೇದಿತವಾಗಿ ಪವಿತ್ರವೂ ಅಮೃತತುಲ್ಯವೂ ಆದ ನೈವೇದ್ಯವನ್ನೇ ಭುಂಜಿಸಬೇಕು. ಅದರಿಂದಲೇ ನಿನಗೆ ಸಿದ್ಧಿಯೂ ವೃದ್ಧಿಯೂಲಭಿಸುವುದು. ॥೫೦॥

ಹೀಗೆಂದು ಹೇಳಿದ ಆ ಗಂಧರ್ವನ ಮಾತನ್ನು ಕೇಳಿ ಮೊದಲು ಶಿವಲಿಂಗವನ್ನು ಗಾಢವಾಗಿ ಆಲಿಂಗಿಸಿಕೊಂಡು ಆ ಚಿತ್ರಾಶ್ವರಾಜನು ತನ್ನ ಸಂಕಲ್ಪವನ್ನು ದೃಢಪಡಿಸಿಕೊಂಡು ಈ ರೀತಿ ಹೇಳಿದನು. ॥೫೧॥

॥ ಚಿತ್ರಾಶ್ವ ಉವಾಚ ॥

ಅನೋಘೌಘಸಂಘಾನಲಾಲೋಲಶೈಲ
ಪ್ರಭಾವಾಭಿಭಾವಾಯ ಭಾವಾರ್ಚನಾಂಬು ।
ಮಹೇಶಾಭಿಷೇಕಾಂಬು ಪೀತಂ ಧೃತಂ ವಾ
ಸ್ವಮೂರ್ಧ್ನಾ ಭವತ್ಯೇತದೇವಾಮೃತಂ ಮೇ ॥೫೨॥

ಶಿವಾರಾಧನಾನಂದಸಂದೋಹವಿಘ್ನೋ
ನ ಕಾರ್ಯಸ್ತ್ವಯಾ ತಾವದಸ್ಮನ್ನಿವೃತ್ತಿಃ ।
ತವಾಸ್ತು ಪ್ರಶಸ್ತಂ ಯದೇವಾಸ್ತಿ ವಸ್ತು
ಸ್ವತಃ ಸ್ವಸ್ತಿ ತೇನೈವ ತನ್ಮೇ ಪ್ರಶಸ್ತಂ ॥೫೩॥

ದಾರೇಷಣಾದಿವಿಷಪಾನವಿಮೂಢಚಿತ್ತೈಃ
ನಾರಾಧಿತಂ ಗಿರಿಶಪಾದಪಯೋಜಮುಚ್ಚೈಃ ।
ತೇ ತಾವದಂಧತಮಸಂ ಸಮವಾಪ್ಯ ಶೋಕೈಃ
ಲೋಕೇನ ಸಂತಿ ಕಲಿಕಾಲಭಯಾಬ್ಧಿಮಗ್ನಾಃ ॥೫೪॥

ಅಸಾರವಾದ ಪಾಪರಾಶಿಯು ಬೆಂಕಿಯ ಪರ್ವತದಂತೆ ಭಯಂಕರವಾಗಿ ದಹಿಸುತ್ತಿದೆ. ಅದರ ಆಕ್ರಮಣವನ್ನು ತಡೆಯಲು ಶಿವಾರ್ಚನೆ ಎಂಬ ಜಲರಾಶಿಯು ಬೇಕಾಗುತ್ತದೆ. ಅಂಥ ಶಿವಾಭಿಷಿಕ್ತವಾದ ಜಲವನ್ನು ಇನ್ನೂ ನಾನು ಸಾಕಷ್ಟು ಸಂಪಾದಿಸಿಲ್ಲ, ಕುಡಿದಿಲ್ಲ, ಅಥವಾ ಮಸ್ತಕದ ಮೇಲೆ ಧರಿಸಿಯೂ ಇಲ್ಲ. ನನಗೆ ಶಿವಾಭಿಷಿಕ್ತತೀರ್ಥವೇ ಅಮೃತವು. ಅದೇ ನನಗೆ ಮುಖ್ಯ ಬೇಕಾದದ್ದು. ಮತ್ತೆ ಬೇರೆಯಾವುದರಲ್ಲಿಯೂ ನನಗೆ ಆಸೆ ಇಲ್ಲ. ॥೫೨॥

ಆದುದರಿಂದ ಧರ್ಮಧೇನುವೇ! ಶಿವಾರಾಧನಾನಂದಕ್ಕೆ ವಿಘ್ನವನ್ನೊಡ್ಡ ಬೇಡ. ನೀನು ಒತ್ತಾಯ ಮಾಡಿದರೆ ನನಗೆ ಬಹಳ ನಷ್ಟ ಒದಗುವುದು. ಆದುದ ರಿಂದ ನೀನು ಜಾಗ್ರತೆಯಾಗಿ ಇಲ್ಲಿಂದ ಹೊರಟು ಹೋಗುವುದೇ ಒಳ್ಳೆತು. ಈಗ ನನಗೆ ಏನು ಲಭಿಸಿರುವುದೋ ಅದೇ ನನಗೆ ತೃಪ್ತಿಕರವಾಗಿದೆ. ಇಷ್ಟೊಂದು ಶಾಶ್ವತವಾಗಿ ಇದ್ದರೇ ನನಗೆ ಸಾಕು. ॥೫೩॥

ಸ್ತ್ರೀವ್ಯಾಮೋಹ ಮತ್ತು ಭೋಗಲಾಲಸೆ ಎಂಬ ವಿಷವನ್ನು ಪಾನಮಾಡಿರು ವವರು ಮೂರ್ಛಿತರಾದಂತೆ ಮೂಢಮತಿಗಳಾಗುವರು. ಅಂತಹವರು ಈಶ್ವರನ

ಇತಿ ತದ್ವಚನಂ ಶ್ರುತ್ವಾ ಸ ರಾಜಾ ಪ್ರಾಹ ತಂ ನೃಪಂ
ಅಶ್ವಮೇಧಾದಿಕಂ ಕಾರ್ಯಂ ತತ್ಕರ್ತವ್ಯಂ ಶಿವಾರ್ಪಣಂ ॥೫೫॥

ಅಶ್ವಮೇಧಾಃ ಕೃತಾಃ ಪೂರ್ವಂ ಪೂರ್ವಜೈಸ್ತವ ಭೂಪತೇ ।
ಇಂದ್ರತ್ವಮಪಿ ಸಂಪ್ರಾಪ್ತಂ ಭುಕ್ತ್ವಾ ಭೋಗಾನನೇಕಧಾ ॥೫೬॥

ಸಂಪಾದಿತಾಃ ಕುಮಾರಾಶ್ಚ ಶೂರಾಃ ಪುರಪುರಂಜಯಾಃ ।
ಸರ್ವಾತ್ಮನಾ ನ ಸಂಸಾರಸ್ತ್ಯಾಜ್ಯೋಽಪಿ ಖಲು ಭೂಪತೇ ॥೫೭॥

ಚರಣಕಮಲಗಳನ್ನು ತಾವರೆಹೂವು ಮುಂತಾದವುಗಳಿಂದ ಪೂಜಿಸುವುದಿಲ್ಲ. ಆ ಪಾಪದಿಂದ ಅವರು ಈ ಲೋಕದಲ್ಲಿ ಅನೇಕ ದುಃಖ ಸಮುದ್ರದಲ್ಲಿ ಮುಳುಗುವರಲ್ಲದೇ, ಪರದಲ್ಲೂ ಸಹ ಅಂಧಂತಮಸ್ಸೆಂಬ ಮಹಾ ನರಕದಲ್ಲಿ ಬಿದ್ದು ಮಹಾ ಯಾತನೆಯನ್ನೂ ಶೋಕವನ್ನೂ ಅನುಭವಿಸುವರು. ॥೫೪॥

ಈ ರೀತಿಯಾಗಿ ಹೇಳಿ ಚಿತ್ರಾಶ್ವರಾಜನು ಮೌನವನ್ನು ತಾಳಿದನು. ಅನಂತರ ಧರ್ಮಧೇನುರಾಜನು ಚಿತ್ರಾಶ್ವನಿಗೆ ಈ ರೀತಿ ಹೇಳಿದನು. ಆಯ್ಯಾ ರಾಜನೇ ! ನೀನು ಮನೆಗೆ ತೆರಳುವುದು ನ್ಯಾಯ. ನಿನ್ನ ಪೂರ್ವಪುರುಷರು ಅರಮನೆಗಳಲ್ಲಿ ಗೃಹಸ್ಥರಾಗಿದ್ದು ಅನೇಕ ಅಶ್ವಮೇಧಾದಿ ಯಾಗಗಳನ್ನು ಮಾಡಿರುವರು. ಅರಮನೆಯಲ್ಲಿದ್ದಾಗ ಅನೇಕ ಭೋಗವಿಲಾಸಗಳನ್ನು ಅವರು ಅನುಭವಿಸುತ್ತಿದ್ದರು. ಆದರೆ ಯಜ್ಞಯಾಗಾದಿಗಳಿಂದ ಧರ್ಮಸಂಗ್ರಹ ಮಾಡಿಕೊಂಡು ಇಂದ್ರಪದವಿಯೇ ಮೊದಲಾದವುಗಳನ್ನು ಸಹ ಪಡೆದಿರುವರು. ನೀನೂ ಅಶ್ವಮೇಧಾದಿ ಯಾಗಗಳನ್ನು ಮಾಡಿ ಅದೆಲ್ಲವನ್ನೂ ಶಿವಾರ್ಪಣೆ ಮಾಡಿ ಧನ್ಯನಾಗು. ॥೫೫-೫೬॥

ನಿನ್ನ ಪೂರ್ವಿಕರೂ ಸಹ ಪತ್ನಿಯರೊಂದಿಗೆ ಸುಖವಾಗಿದ್ದು ಪರಾಕ್ರಮಶಾಲಿಗಳಾದ ಪುತ್ರರನ್ನು ಪಡೆದಿದ್ದರು. ಆದುದರಿಂದ ನೀನೂ ಸಹ ವಂಶವನ್ನು ಅಭಿವೃದ್ಧಿಪಡಿಸಬೇಕು. ಹೀಗಿರುವುದರಿಂದ ಸಂಸಾರವನ್ನು ಪೂರ್ತಿಯಾಗಿ ತ್ಯಜಿಸುವುದು ನ್ಯಾಯವಾಗುವುದಿಲ್ಲ. ಅಲ್ಲದೇ ನೀನು ಇಲ್ಲಿಯೇ ಇದ್ದುಬಿಟ್ಟರೆ ನಿನ್ನ ರಾಜ್ಯದ ವ್ಯವಸ್ಥೆ ಕೆಡುವುದು. ಮೊದಲೇ ನಿನ್ನ ರಾಜ್ಯದಲ್ಲಿ ಶತ್ರುಗಳು ಪ್ರಬಲರಾಗುತ್ತಿದ್ದಾರೆ. ರಾಜ್ಯವ್ಯವಸ್ಥೆಯನ್ನು ಉಪೇಕ್ಷಿಸುವುದು ನ್ಯಾಯವಾಗುವುದಿಲ್ಲ.

ತ್ವದೀಯಮಪಿ ಯದ್ರಾಜ್ಯಂ ತದ್ರಾಜ್ಯಂ ರಿಪುಸಂಕುಲಂ ।
ಉಪೇಕ್ಷಿತಂ ಭವತ್ಯೇವ ತದುಪೇಕ್ಷಾಪಿ ನೋಚಿತಾ ॥೫೮॥

ಇತಿ ಕರ್ಣಕಠೋರಾಣಿ ಶ್ರುತ್ವಾ ವಾಕ್ಯಾನಿ ಭೂಪತೇಃ ।
ಧರ್ಮಧೇನುಮುವಾಚೇದಂ ವಚನಂ ಸೋಽಪಿ ಭೂಪತಿಃ ॥೫೯॥

ಕಿಮಶ್ವಮೇಧಾವಭೃಥೈರ್ವೃಥಾ ತೈಃ
ತೀರ್ಥಾಟನೈರ್ವಾ ಸ ವರೋಟವೀಷು ।
ಮುದಾ ಜಟಾಜೂಟತಟೇಂದುಖಂಡ
ಖಂಡಾವತಂಸಂ ಭಜ ಶೈಲಜಾಂಸಂ ॥೬೦॥

ಅಲಂ ವ್ಯರ್ಥಾಲಾಪೈರಲಮಲಮಲಂ ವ್ಯಾಕುಲಲವೈಃ
ಖಲೈರ್ವ್ಯಾಲೈರ್ವಾಲಪ್ರಬಲಮಹಿಲಾಲೋಕನರಸೈಃ ।

ರಾಜ್ಯಭಾರವನ್ನು ಸರಿಯಾಗಿ ನಡೆಯಿಸಿ ಪ್ರಜೆಗಳನ್ನು ಕಾಪಾಡುವುದು ನಿನ್ನ ಪ್ರಥಮ ಕರ್ತವ್ಯ. ಆದುದರಿಂದ ನೀನು ರಾಜ್ಯಕ್ಕೆ ತೆರಳಿ ಗೃಹಸ್ಥನಾಗಿ ಯಥೋಚಿತರೀತಿಯಲ್ಲಿ ಭೋಗವನ್ನನುಭವಿಸುತ್ತಾ ರಾಜಕಾರ್ಯದಲ್ಲಿ ಮುಂದುವರಿ. ॥೫೭-೫೮॥

ಎಂದು ಹೇಳಿದ ಧರ್ಮಧೇನುರಾಜನ ಮಾತು ಚಿತ್ರಾಶ್ವನಿಗೆ ರುಚಿಸಲಿಲ್ಲ. ಆತನಿಗೆ ಆ ಮಾತು ಕರ್ಣಕಠೋರವೆನಿಸಿತು. ಆಗ ಆತನು ಈರೀತಿ ನುಡಿದನು.॥೫೯॥

ಸಾಕು ಸಾಕು. ಆ ಅಶ್ವಮೇಧಯಾಗವೂ ಬೇಡ. ಆ ಅವಭೃಥ ಮುಂತಾದ ಸಡಗರಗಳೂ ಬೇಡ. ಆ ತೀರ್ಥಾಟನ ಅಥವಾ ಆ ಅರಣ್ಯಪರ್ಯಟನ ಇವುಗಳಿಂದಲೂ ಏನೂ ನನಗೆ ಪ್ರಯೋಜನವಿಲ್ಲ. ಅವು ಯಾವುವೂ ನನಗೆ ಬೇಡ. ಆ ಪರಮೇಶ್ವರನ ಭಜನೆಯೊಂದಿದ್ದರೆ ಸಾಕು. ಜಟಾಜೂಟದಲ್ಲಿ ಸುಂದರವಾದ ಚಂದ್ರಕಲೆಯನ್ನು ಧರಿಸಿಕೊಂಡಿರುವ ಆ ಉಮಾಪತಿಯನ್ನೇ ನಾನು ಭಕ್ತಿಯಿಂದ ಭಜಿಸುವೆನು. ನೀನೂ ಆತನನ್ನೇ ಆರಾಧಿಸು. ॥೬೦॥

ನಾವು ವ್ಯರ್ಥವಾದ ವಾದವಿವಾದಗಳನ್ನು ಮಾಡಕೂಡದು. ಅದರಿಂದ ಏನೂ ಪ್ರಯೋಜನವಿಲ್ಲ. ಮತ್ತೆಲ್ಲ ವ್ಯಾಪಾರ ವ್ಯವಹಾರಗಳೂ ನಮ್ಮನ್ನು ವ್ಯಾಕುಲರನ್ನಾಗಿ ಮಾಡುತ್ತವೆ. ಸ್ತ್ರೀಲಾಲಸೆಯೂ ಭೋಗಹವ್ಯಾಸಗಳೂ ಸರ್ವಥಾ

ಅಸಾರೇ ಸಂಸಾರೇ ವಿರತಿರಧುನಾ ಸಾಧು ಜನಿತಾ
ಶಿವೇನಾತಃ ಕೃತ್ಯಂ ಕಿಮಪಿ ನ ವಿಭಾತಿ ಪ್ರತಿಭಯಾತ್ ॥೬೧॥

ಏವಂ ಸಂಭಾಷಣೇನೈವ ಗತಾ ರಾತ್ರಿಸ್ತತಃಪರಂ ।
ಪ್ರಾತರುತ್ಥಾಯ ಚ ಸ್ನಾತ್ವಾ ಶಿವಪೂಜಾರತೋಽಭವತ್ ॥೬೨॥

ಸಾ ತಸ್ಯ ಮಹಿಲಾ ದೃಷ್ಟ್ವಾ ತಂ ಪತಿಂ ಶಿವಪೂಜಕಂ ।
ಸ್ವಯಮಪ್ಯರ್ಚಯಾಮಾಸ ಸಹ ತೇನ ಮಹೇಶ್ವರಂ ॥೬೩॥

ತತಸ್ತಮಾಹ ಮಹಿಲಾ ಚಿತ್ರಾಶ್ವಂ ತಸ್ಯ ಕೋಮಲೈಃ ।
ವಚನೈಸ್ಸವಿಲಾಸೈಶ್ಚ ಮಂದಹಾಸಪುರಸ್ಸರಂ ॥೬೪॥

ಅಪಾಯಕಾರಿಗಳೇ ಆಗಿರುತ್ತವೆ. ಆದುದರಿಂದ ಈ ಸಂಸಾರವೆಲ್ಲವೂ ಕೇವಲ ಭ್ರಮರೂಪವಾದುದೂ ನಿಸ್ಸಾರವಾದದ್ದೂ ಆಗಿರುವುದರಿಂದ ಸರ್ವಥಾ ತ್ಯಾಜ್ಯಗಳಾಗಿವೆ. ಈಗ ಭಾಗ್ಯವಶಾತ್ ಪರಮೇಶ್ವರನ ದಯೆಯಿಂದ ನನಗೆ ಈ ಸಂಸಾರದಲ್ಲಿ ಜಿಹಾಸೆಯೂ ವಿರಕ್ತಿಯೂ ಉಂಟಾಗಿದೆ. ಇದರಿಂದಲೇ ಮುಂದೆ ನನಗೆ ಶ್ರೇಯಸ್ಸು ಲಭಿಸುವುದು. ಆದುದರಿಂದ ಇದಕ್ಕಿಂತಲೂ ಹೆಚ್ಚಾಗಿ ನಾನು ಏನನ್ನೂ ಮಾಡಬೇಕಾದ್ದಿಲ್ಲ. ನನಗೆ ಮತ್ತೇನೂ ಬೇಡ. ॥೬೧॥

ಆ ರಾಜನೇ ಮೊದಲಾದವರು ಹೀಗೆಯೇ ಸಂಭಾಷಣೆಯನ್ನು ಮಾಡುತ್ತ ಮಾಡುತ್ತಿದ್ದಂತೆಯೇ ಆ ರಾತ್ರಿಯು ಕಳೆದುಹೋಯಿತು. ಬೆಳಗಾಗಲು ರಾಜನು ಎದ್ದು ಸ್ನಾನಾಂತವಾಗಿ ಎಲ್ಲಾ ಕೃತ್ಯಗಳನ್ನೂ ತೀರಿಸಿಕೊಂಡು, ಶುಚಿರ್ಭೂತನಾಗಿ ಪುನಃ ಶಿವಪೂಜೆಯಲ್ಲಿ ತತ್ಪರನಾದನು. ॥೬೨॥

ರಾಜನು ಹೀಗೆ ಅವಿಚ್ಛಿನ್ನವಾಗಿ ಶಿವಪೂಜೆಯನ್ನು ಮಾಡುತ್ತಿರಲು ಆತನ ಪತ್ನಿಯೂ ಸಹ ಆತನೊಡನೆ ಅನೇಕ ವಿಧವಾಗಿ ಶಿವನನ್ನು ಪೂಜಿಸಿದಳು. ॥೬೩॥

ಅನಂತರ ಆಕೆಯು ತನ್ನ ಪತಿಯಾದ ಚಿತ್ರಾಶ್ವನ ಮನಸ್ಸನ್ನು ಆಕರ್ಷಿಸುವ ರೀತಿಯಲ್ಲಿ ಮಂದಹಾಸಪೂರ್ವಕವಾಗಿ ಹಿತವಾಗುವಂತೆ ಕೋಮಲವಾದ ನುಡಿಗಳಿಂದ ಹೀಗೆ ನುಡಿದಳು. ॥೬೪॥

॥ ಸುಲೋಚನೋವಾಚ ॥

ರಾಜನ್ ಶಿವಪ್ರಸಾದೇನ ಶಿವಪೂಜಾರತಿಸ್ತವ ।
ಜಾತಾ ಮಹದಿದಂ ಭಾಗ್ಯಮಿತಃ ಕಿಮಧಿಕಂ ಸುಖಂ ॥೬೫॥

ಪರಂತು ರತ್ನಕೋಶಸ್ಯ ಹೇಮಕೋಶಸ್ಯ ಚಾಧುನಾ ।
ಹೇಮಪ್ರಾಸಾದಕರಣೈರ್ವ್ಯಯೋಽಸ್ತು ಶಿವಪೂಜಯಾ ॥೬೬॥

ಗಜವಾಜಿಸಹಸ್ರಾಣಾಂ ಗೋಕೋಟೀನಾಂ ಚ ಕಿಂ ಫಲಂ ।
ಶಾಂಕರೇಭ್ಯಃ ಪ್ರದಾತವ್ಯಾಸ್ತೇನ ಸ್ಯಾತ್ಪುಣ್ಯಮಕ್ಷಯಂ ॥೬೭॥

ಧಾನ್ಯಾನಾಂ ಗಿರಯೋ ಗೇಹೇ ತಿಷ್ಠಂತ್ಯೇವ ನೃಪೋತ್ತಮ ।
ತದನ್ನೈಶ್ಶಿವನೈವೇದ್ಯಂ ಕರ್ತವ್ಯಮತಿಯತ್ನತಃ ॥೬೮॥

ಪ್ರಿಯ ಮಹಾರಾಜನೇ, ಶಂಕರನ ಅನುಗ್ರಹದಿಂದ ನಿನಗೆ ಸದ್ಬುದ್ಧಿಯುಂಟಾಗಿ ಶಿವಭಕ್ತಿಯೂ ಶಿವಾರ್ಚನೆಯಲ್ಲಿ ಆಸಕ್ತಿಯೂ ಹುಟ್ಟಿರುವುದು. ಇದು ನಮ್ಮ ಪರಮ ಪುಣ್ಯ. ಇದೇ ನಮ್ಮ ಪರಮ ಸುಖಕ್ಕೂ ಕಾರಣವಾಗುತ್ತದೆ. ಈಗ ನಾವು ಸನ್ಮಾರ್ಗಾವಲಂಬಿಗಳಾಗಿರುವುದರಿಂದ ನಾವೇ ಭಾಗ್ಯಶಾಲಿಗಳು. ಇದರಲ್ಲಿ ಸಂಶಯವಿಲ್ಲ. ॥೬೫॥

ಆದರೆ ನಮಗೆ ಇನ್ನೂ ಕೆಲವು ಕರ್ತವ್ಯಾಂಶಗಳಿವೆ. ಪೂರ್ವಸಂಚಿತವಾದ ರತ್ನರಾಶಿಗಳನ್ನೂ ಹೇಮಸಮೂಹಗಳನ್ನೂ ಸದ್ವ್ಯಯದಿಂದ ಸಾರ್ಥಕಪಡಿಸಬೇಕು. ಆ ಧನಕನಕಗಳನ್ನು ಶಿವನಿಗೆ ಅರ್ಪಿಸಬೇಕು.. ಅವುಗಳಿಂದ ಸುಂದರಗಳಾದ ಶಿವದೇವಾಲಯಗಳನ್ನು ಕಟ್ಟಿಸಬೇಕು. ॥೬೬॥

ನಮ್ಮ ಅರಮನೆಯಲ್ಲಿ ಆನೆ ಕುದುರೆ ಮುಂತಾದವುಗಳೂ, ಗೋವುಗಳೂ ಕೋಟ್ಯಂತರ ಇರುತ್ತವೆ. ಇವುಗಳನ್ನು ವ್ಯರ್ಥವಾಗಿ ನಮ್ಮಲ್ಲಿಯೇ ಇರಿಸಿಕೊಂಡರೆ ಫಲವಿಲ್ಲ. ಅವುಗಳನ್ನು ಸತ್ಪಾತ್ರರಾದ ಶಾಂಕರರಿಗೆ ದಾನಮಾಡಬೇಕು. ಇದರಿಂದ ನಮಗೆ ಅಕ್ಷಯವಾದ ಪುಣ್ಯವು ಲಭಿಸುವುದು. ॥೬೭॥

ಅರಮನೆಯಲ್ಲಿ ಅನೇಕ ಧಾನ್ಯರಾಶಿಗಳು ಬೆಟ್ಟದಂತೆ ಬಿದ್ದಿವೆ. ಅವುಗಳನ್ನು ಸುಮ್ಮನೇ ವ್ಯರ್ಥಪಡಿಸಬಾರದು. ಅವುಗಳೆಲ್ಲವನ್ನೂ ಶಿವನಿಗೆ ಅರ್ಪಿಸಬೇಕು. ನಿತ್ಯವೂ ಶಿವನಿಗೆ ಅನ್ನರಾಶಿಗಳನ್ನು ನಿವೇದನಮಾಡಬೇಕು. ಆ ಶಿವನೈವೇದ್ಯದಿಂದ

ಭೋಜನೀಯಾಃ ಪ್ರಯತ್ನೇನ ಶಾಂಕರಾಸ್ಸರ್ವದಾ ತ್ವಯಾ ।
ಶಿವಪೂಜೈವ ಕರ್ತವ್ಯಾ ಸರ್ವದಾ ವಿವಿಧೈರ್ಧನೈಃ ॥೬೯॥

ಇತಿ ತದ್ವಚನಂ ಶ್ರುತ್ವಾ ಗಂಧರ್ವೇಣಾಭಿನಂದಿತಃ ।
ರಾಜಾಪಿ ಸ್ವಗೃಹಂ ಪ್ರಾಪ ನೃಪೋ ಮಹಿಲಯಾ ಸಹ ॥೭೦॥

ತತ್ರ ಲಿಂಗಾನಿ ತುಂಗಾನಿ ನಾರ್ಮದಾನಿ ಸ ಭೂಪತಿಃ ।
ಸ್ಥಾಪಯಾಮಾಸ ಯತ್ನೇನ ರತ್ನಾಗಾರೇಷು ಕೋಟಿಶಃ ॥೭೧॥

ನಿತ್ಯಂ ಶಿವಾರ್ಚನರತಃ ಶೃಣ್ವನ್ ಶಿವಕಥಾಂ ಮುಹುಃ ।
ಪುತ್ರಾನುತ್ಪಾದಯಾಮಾಸ ತಸ್ಯಾಂ ಶಂಕರಪೂಜಕಾನ್ ॥೭೨॥

ಶೈವಭಕ್ತರಿಗೆ ಭೋಜನಮಾಡಿಸಿ ತೃಪ್ತಿಪಡಿಸಬೇಕು. ಹೀಗೆಯೇ ನಮ್ಮ ಸಕಲ ಧನಕನಕಗಳನ್ನೂ ಶಿವಾರ್ಚನೆಯಲ್ಲಿ ವಿನಿಯೋಗಿಸಿ ಸಾರ್ಥಕಪಡಿಸಬೇಕು. ಅದಕ್ಕಾಗಿ ನೀನು ಅವಶ್ಯ ಅರಮನೆಗೆ ತೆರಳು. ಅಲ್ಲಿ ವೈಭವದಿಂದ ಶಿವಾರ್ಚನೆಯನ್ನು ನಡೆಸೋಣ. ನಮ್ಮ ಸಂಪತ್ತುಗಳನ್ನೆಲ್ಲಾ ಶಿವಾಧೀನ ಮಾಡೋಣ. ಹೀಗೆಂದು ಸುಲೋಚನೆಯು ನುಡಿದಳು. ॥೬೮-೬೯॥

ಆ ಸುಲೋಚನೆಯ ಮಾತನ್ನು ಚಿತ್ರರಥಗಂಧರ್ವನೂ ಸಹ ಪುಷ್ಟೀಕರಿಸಿ ರಾಜನಿಗೆ ತೆರಳುವುದಕ್ಕಾಗಿ ಅನೇಕ ಸಲಹೆಗಳನ್ನಿತ್ತನು. ಅನಂತರ ರಾಜನು ಅವರೆಲ್ಲರ ಮಾತನ್ನು ಮನ್ನಿಸಿ ತನ್ನ ಪತ್ನಿಯಾದ ಸುಲೋಚನೆಯೊಂದಿಗೆ ತನ್ನ ಅರಮನೆಗೆ ತೆರಳಿದನು. ॥೭೦॥

ರಾಜನು ಪಟ್ಟಣವನ್ನು ಸೇರಿದ ಬಳಿಕ ಅಲ್ಲಿ ಅನೇಕ ರತ್ನಮಯವಾದ ಶಿವದೇವಾಲಯಗಳನ್ನು ಕಟ್ಟಿಸಿದನು. ಆ ದೇವಾಲಯಗಳಲ್ಲಿ ಅನೇಕ ರೇವಾಲಿಂಗಗಳನ್ನು ಪ್ರತಿಷ್ಠೆಮಾಡಿಸಿದನು. ॥೭೧॥

ಹೀಗೆಯೇ ನಿತ್ಯವೂ ಶಿವಾರಾಧನೆ ಮಾಡುತ್ತಿದ್ದನಲ್ಲದೇ ಸತತವೂ ಶಿವಕಥಾ ಶ್ರವಣದಿಂದಲೇ ಕಾಲವನ್ನು ಕಳೆಯುತ್ತಿದ್ದನು. ಹೀಗೆಯೇ ಕೆಲವು ಕಾಲ ಕಳೆಯಲು, ಸುಲೋಚನೆಯ ಗರ್ಭದಲ್ಲಿ ಅನೇಕ ಸುಪುತ್ರರು ಜನಿಸಿದರು. ಅವರೆಲ್ಲರೂ ಸದಾ ಶಿವಪೂಜೆಯಲ್ಲಿಯೇ ತತ್ಪರರಾಗಿದ್ದರು. ॥೭೨॥

ತಂ ತಾದೃಶಂ ನೃಪಂ ದೃಷ್ಟ್ವಾ ಧರ್ಮಧೇನುರ್ನೃಪಾತ್ಮಜಾನ್ ।
ಗಂಧರ್ವೋಽಪಿ ಸ ಸಂತುಷ್ಟೋ ಯಯೌ ಸ್ವನಗರಂ ಪ್ರತಿ ॥೭೩॥

॥ ಭಾನುರುವಾಚ ॥

ಇತಿ ಸ್ವಪ್ನೋ ಮಹಾನ್ದೃಷ್ಟಸ್ತಯಾ ಚಾರಣಭಾರ್ಯಯಾ ।
ತತಸ್ಸಮುತ್ಥಿತಾ ಸಾಪಿ ದದರ್ಶ ಶಿವಕಿಂಕರಾನ್ ॥೭೪॥

ತತಸ್ತೇ ತಾಂ ವಿಲೋಕ್ಯಾಹುರ್ವಿನಯೇನೈವ ಸುಂದರೀಂ ।
ವಿಮಾನಂ ವರಮಾನೀತಂ ತುಭ್ಯಂ ಚಾರಣಸುಂದರಿ ॥೭೫॥

ಆಯಾಹಿ ಯಾಮಃ ಕೈಲಾಸಂ ದುರ್ಲಭಂ ಯೋಗಿನಾಮಪಿ ।
ಶಿವಪ್ರಸಾದಲಭ್ಯಂ ತಂ ವಿದ್ಧಿ ಬುದ್ಧಿವಿಶಾರದೇ ॥೭೬॥

ಹೀಗೆ ಆ ರಾಜನೂ ಮತ್ತೂ ಆತನ ಪುತ್ರರೂ ಪರಮಶಿವಭಕ್ತರಾಗಿ ಶಿವಾರಾಧನೆಯಲ್ಲಿಯೇ ಆಸಕ್ತರಾಗಿರುವುದನ್ನು ನೋಡಿ ಧರ್ಮಧೇನು ರಾಜನಿಗೂ ಚಿತ್ರರಥಗಂಧರ್ವನಿಗೂ ಪರಮಾನಂದವಾಯಿತು. ಅವರು ಹೀಗೆಯೇ ಶಿವಸಮಾರಂಭಗಳನ್ನನುಭವಿಸುತ್ತಾ ಕೆಲವು ಕಾಲ ಅಲ್ಲಿಯೇ ಇದ್ದು ಬಳಿಕ ತಮ್ಮ ತಮ್ಮ ಪಟ್ಟಣಗಳಿಗೆ ಹಿಂದಿರುಗಿದರು. ॥೭೩॥

ಹೀಗೆ ಆ ಚಾರಣಸ್ತ್ರೀಗೆ ಅದ್ಭುತವಾದ ಸ್ವಪ್ನವು ಕಂಡಿತು. ಈ ಸ್ವಪ್ನವನ್ನು ಕಂಡು ಅತ್ಯಾಶ್ಚರ್ಯದೊಡನೆ ಆಕೆಗೆ ನಿದ್ದೆಯಿಂದ ಎಚ್ಚರಿಕೆಯಾಯಿತು. ಆಕೆಯು ಕಣ್ಣುಗಳನ್ನು ಬಿಟ್ಟೊಡನೆಯೇ ಅಲ್ಲಿಗೆ ಶಿವದೂತರು ಬಂದಿದ್ದರು. ಅವರನ್ನು ನೋಡಿ ವಿಸ್ಮಯದಿಂದ ಎಚ್ಚತ್ತು ಮೇಲಕ್ಕೆದ್ದಳು ಎಂದು ಸೂರ್ಯದೇವನು ಪದ್ಮಾವತೀದೇವಿಗೆ ಶಿವಮಹಿಮೆಯ ಇತಿಹಾಸವನ್ನು ಬೋಧಿಸಿದನು. (ಈ ಕಥೆಯು ೩೦ ನೆಯ ಅಧ್ಯಾಯದಿಂದ ಆರಂಭವಾಗಿದೆ.) ॥೭೪॥

ಆಗ ಆ ಶಿವದೂತರು ಆಕೆಯನ್ನು ಕುರಿತು ವಿನಯದಿಂದ ಹೀಗೆಂದರು. ಎಲೌ ಚಾರಣಸುಂದರಿಯೇ, ನಿನಗಾಗಿ ಈ ಉತ್ತಮವಾದ ವಿಮಾನವನ್ನು ತಂದಿರುವೆವು. ಇದನ್ನು ಹತ್ತು, ಶಿವಧಾಮವಾದ ಕೈಲಾಸಕ್ಕೆ ಹೋಗೋಣ. ನೀನು ಮಹಾಬುದ್ಧಿಶಾಲಿನಿಯಾಗಿರುವಂತೆ ಮಹಾಪುಣ್ಯಾತ್ಮಳೂ ಆಗಿರುವೆ. ಆದುದರಿಂದ ಶಿವಾನುಗ್ರಹದಿಂದ ಇಂಥ ಉತ್ತಮವಾದ ಗೌರವಸ್ಥಿತಿಗೆ ನೀನು ಪಾತ್ರಳಾಗಿರುವೆ. ಆ ಕೈಲಾಸವು ಮಹಾ ಮಹಾ ಯೋಗಿಗಳಿಗೂ ಸಹ ದುರ್ಲಭವಾದುದು. ಅಂಥ ಪರಮಧಾಮಕ್ಕೆ ನೀನು ಈಗ ಯೋಗ್ಯಳಾಗಿರುವೆ. ॥೭೫-೭೬॥

ಇತಿ ತದ್ವಚನಂ ಶ್ರುತ್ವಾ ಸ್ಮೃತ್ವಾ ಭೂಪಂ ಮಹಾರಥಂ ।
ಪ್ರಾಹ ಸ್ಮೇರಾನನಾ ಮಂದಂ ಭೃಂಗೀಶ್ವರಮನಾಕುಲಾ ॥೭೭॥

ದೀನವತ್ಸಲತಾ ತಾವಲ್ಲೀಲಯಾ ಪ್ರಕಟೀಕೃತಾ ।
ಶಂಕರೇಣೇತಿ ವಿಜ್ಞಾತಮನಾಥಾಯಾಮಪಿ ಧ್ರುವಂ ॥೭೮॥

ನಾರ್ಪಿತಾನಿ ಮಹೇಶಾಯ ನವಬಿಲ್ವದಳಾನಿ ವಾ ।
ದ್ವಿತ್ರಾಣಿ ಭಕ್ತ್ಯಾ ದತ್ತಂ ವಾ ನೇದಂ ಸುರಸರಿಜ್ಜಲಂ ॥೭೯॥

ನ ಚಂದನಾದಿಭಿರ್ಭಕ್ತ್ಯಾ ಲಿಂಗಮೇತತ್ಸಮರ್ಚಿತಂ ।
ಯದ್ಯಪ್ಯಥಾಪಿ ಭಗವಾನ್ ಮಾಮುದ್ಧರ್ತುಮಿಚ್ಛತಿ ॥೮೦॥

ನ ಶ್ರಾಂತೌ ಶಿವಪೂಜನೇನ ವಿಮಲೌ ಹಸ್ತೌ ಪ್ರಸೂನಾರ್ಚಿತಂ
ಲಿಂಗಂ ನಾನಿಮಿಷೇಣ ಲೋಚನಯುಗೇನಾದ್ಯಾಪಿ ಸಂವೀಕ್ಷಿತಂ ।

ಈ ರೀತಿಯಾಗಿ ಹೇಳಿದ ಶಿವದೂತರ ಮಾತನ್ನು ಕೇಳಿ ಆ ಚಾರಿಣಿಗೆ ಆಶ್ಚರ್ಯವೇನೂ ಆಗಲಿಲ್ಲ. ಆಕೆಯು ಆಗ ಶಾಂತಚಿತ್ತಳಾಗಿದ್ದಳು. ಆಕೆಗೆ ಮಹಾರಥ ರಾಜನ ಸ್ಥಿತಿಯು ಜ್ಞಾಪಕಕ್ಕೆ ಬರುತ್ತಿದ್ದಿತು. ಆಗ ಅವಳು ಮಂದಹಾಸಪೂರ್ವಕ ವಾಗಿ ಭೃಂಗೀಶ್ವರನನ್ನು ಕುರಿತು ಈ ರೀತಿ ನುಡಿದಳು. ॥೭೭॥

ಅಯ್ಯಾ ಭೃಂಗೀಶ್ವರನೇ, ಆ ಪರಮೇಶ್ವರನ ದಯೆಯು ಎಷ್ಟು ಅಮೋಘ ವಾದುದು ಎಂದು ಈಗ ನನಗೆ ತಿಳಿಯಿತು. ಆ ದೇವದೇವನು ಈ ರೀತಿ ತನ್ನ ದೀನವತ್ಸಲತೆಯನ್ನು ಪ್ರಕಟಗೊಳಿಸಿದ್ದಾನೆ. ಅನಾಥಳಾದ ನನ್ನನ್ನು ಅನುಗ್ರಹಿಸ ಲೋಸುಗವೇ ಆತನು ಈ ರೀತಿ ಮಾಡಿರುವನೆಂದು ತಿಳಿಯಿತು. ॥೭೮॥

ನಾನಾದರೋ ಅನಾಥಳಾದ ಅಬಲೆಯು. ನಾನು ಲೇಶಮಾತ್ರವಾದರೂ ಆ ಭಗವಂತನನ್ನು ಆರಾಧಿಸಲು ಶಕ್ತಳಾಗಲಿಲ್ಲ. ಸುಲಭವಾಗಿ ದೊರೆಯುವ ಬಿಲ್ವಪತ್ರೆ ಗಳಿಂದಲೂ ನಾನು ಪೂಜಿಸಲಿಲ್ಲ. ಶಿವಲಿಂಗಕ್ಕೆ ಗಂಗಾಜಲದಿಂದ ಅಭಿಷೇಕಮಾಡ ಲಿಲ್ಲ. ಚಂದನಗಂಧವನ್ನೂ ನಾನು ಅರ್ಪಿಸಲಿಲ್ಲ. ಸರ್ವಥಾ ನಾನು ಒಂದು ಸಲವೂ ಪ್ರಶಸ್ತವಾಗಿ ಶಿವನನ್ನು ಆರಾಧಿಸಲಿಲ್ಲ. ಆದರೂ ಆ ದಯಾಮಯನಾದ ಶಂಕರನು ಇಂದು ನನ್ನನ್ನು ಉದ್ಧಾರಮಾಡಲಿದ್ದಾನೆ. ॥೭೯-೮೦॥

ನನ್ನ ಹಸ್ತಗಳು ಶಿವನನ್ನು ಪೂಜಿಸಿ ಅಥವಾ ಶಿವಾರ್ಚನೆಗಾಗಿ ಪುಷ್ಪಗಳನ್ನು ಕೊಯ್ದು ಆಯಾಸವನ್ನು ಪಡೆಯಲಿಲ್ಲ. (ಅಂದರೆ-ಆಯಾಸಗೊಳ್ಳುವಷ್ಟು ಪೂಜಿಸ

ನ ಧ್ಯಾತಂ ಶಿವಲಿಂಗಮಿಂದುಶಕಲಾಲಂಕಾರಪೂಜಾಲಯಂ
ವ್ಯರ್ಥಂ ಜನ್ಮ ಗತಂ ಮಮೇದಮಧುನಾ ಕೈಲಾಸವಾಸೇನ ಕಿಂ ॥೮೧॥

ನ ಶ್ರಾಂತಾ ರಸನಾಪಿ ಶಂಕರಪದಾಂಭೋಜಸ್ತವೈರ್ಮಾನಸಂ
ನ ಕ್ರಾಂತಂ ಶಿವಚಿಂತನೈರನುದಿನಂ ಭೂರಿಪ್ರಸಾದೈರಪಿ ।
ರಮ್ಯಂ ತಾವದಿದಂ ಶರೀರಮಪಿ ಮೇ ಶ್ರಾಂತಿರ್ನ ಮೇ ಪಾದಯೋಃ
ಶ್ರೀಕಾಶೀಗಮನೇನ ಹಂತ ವದ ಮೇ ಕೈಲಾಸವಾಸೇನ ಕಿಂ ॥೮೨॥

ಕರ್ಣಾಭ್ಯಾಂ ಕರುಣಾರಸಾರ್ಣವಶಿವಾಕಾಂತಾಂತಿಕಾಂತಾಮಿತ
ಸ್ವಾಂತಾನಂದಕರಾತಿಶೋಭನಕಥಾಪೀಯೂಷಧಾರಾ ಪರಾ ।
ಪೀತಾ ನಾಪಿ ಪುರಾ ಪುರಾರಿನಗರೇ ವೀರೇಶ್ವರಾರಾಧನೈಃ
ನೀತಂ ನೈವ ವಯೋ ಮಯಾ ಚ ವದ ಮೇ ಕೈಲಾಸವಾಸೇನ ಕಿಂ ॥೮೩॥

ಬೇಕಾಗಿದ್ದಿತು. ಆದರೆ ನಾನು ಅಷ್ಟು ಶಿವಾರಾಧನೆಯನ್ನು ಮಾಡಲಿಲ್ಲ) ತೆರೆದ ಕಣ್ಣುಗಳಿಂದ ರೆಪ್ಪೆಯನ್ನೂ ಸಹ ಮುಚ್ಚದೇ ಶಿವಸಂದರ್ಶನವನ್ನು ಮಾಡಬೇಕಾಗಿತ್ತಾದರೂ ನಾನು ಅಂಥ ಸಂದರ್ಶನವನ್ನು ನಡೆಸಲಿಲ್ಲ. ಆ ಚಂದ್ರಶೇಖರಸ್ವಾಮಿಯ ಮುಖ್ಯ ಆಯತನವಾದ ಶಿವಲಿಂಗವನ್ನು ಸಂತೃಪ್ತಿಯಾಗುವಷ್ಟು ಧ್ಯಾನ ಮಾಡಲಿಲ್ಲ. ನನ್ನ ಆಯುಷ್ಯವು ಹೀಗೆಯೇ ವ್ಯರ್ಥವಾಗಿ ಕಳೆದುಹೋಯಿತು. ಈಗಲೂ ಹೀಗೆಯೇ ಕೈಲಾಸಕ್ಕೆ ತೆರಳಿಬಿಟ್ಟರೆ ನನ್ನ ಜನ್ಮಕ್ಕೆ ಸಾರ್ಥಕ್ಯವೇನು ಬಂದಂತಾಯಿತು? ಕೇವಲ ಕೈಲಾಸದಲ್ಲೇ ವಾಸಮಾಡಿಬಿಟ್ಟರೆ ಅದರಲ್ಲಿ ಯಾವ ಮಹಾ ಸುಖವುಂಟಾದೀತು? ॥೮೧॥

ನನ್ನ ನಾಲಗೆಯು ಆಯಾಸವಾಗುವಷ್ಟು ಶಿವಪಾದಾರವಿಂದಗಳನ್ನು ಸ್ತುತಿಸಲಿಲ್ಲ. ಅನಿಶವೂ ಶಿವಧ್ಯಾನ ಭಾವನೆಯಿಂದ ನನ್ನ ಮನಸ್ಸು ಮುಂದುವರಿಯಲಿಲ್ಲ. ಶಿವನೈವೇದ್ಯಾನ್ನವನ್ನು ಭುಂಜಿಸಿ ನನ್ನ ಶರೀರವು ಪವಿತ್ರವೂ ಪುಷ್ಟವೂ ಸುಂದರವೂ ಆಗಲಿಲ್ಲ. ಶ್ರೀ ಕಾಶೀಕ್ಷೇತ್ರದ ಯಾತ್ರಾರ್ಥವಾಗಿ ನಡೆದು ನಡೆದು ನನ್ನ ಕಾಲುಗಳಿಗೆ ಆಯಾಸವಾಗಲಿಲ್ಲ. ಹೀಗಿರಲು ಈಗ ನಾನು ಕೈಲಾಸಕ್ಕೆ ತೆರಳಿ ಏನು ಮಾಡಲಿ? ॥೮೨॥

ಶಿವಕಥೆಯು ಅತ್ಯಂತ ಕಲ್ಯಾಣಕಾರಿಯಾಗಿರುವಂತೆ ಸ್ವಾತ್ಮಾನಂದಕಾರಿಯೂ ಆಗಿರುವುದು. ಅದನ್ನು ಕೇಳುತ್ತಾ ಕುಳಿತರೆ ಕರುಣಾರಸಾನುಭವವಾಗಿ ಮನಸ್ಸೆ

ನಾಭೂತ್ಫಾಲತಲಂ ತ್ರಿಪುಂಡ್ರರುಚಿರಂ ರುದ್ರಾಕ್ಷಮಾಲಾಲಯಃ
ಕಾಯೋ ನಾಯುಮುಮಾಸಹಾಯವಿಲಸನ್ನೈವೇದ್ಯಪುಷ್ಟೋಽಧುನಾ।
ತುಷ್ಟಂ ನಾ ಹೃದಯಂ ಶಿವಾಂಗಣಮಹಾನಾಟ್ಯೈಸ್ಸ ನಾಟ್ಯೋತ್ಸವೈಃ
ಜಪ್ತಶ್ಶೈವಷಡಕ್ಷರೋಽಪಿ ನ ಮಯಾ ಕೈಲಾಸವಾಸೇನ ಕಿಂ ॥೮೪॥

ತೀರ್ಥೇಶೋಽಪಿ ನ ಪೂಜಿತೋ ನ ವಿಲಸದ್ಬಿಲ್ವೈರ್ದಲೈಃ ಕೋಮಲೈಃ
ಶ್ರೀಶೈಲೋಽಪಿ ನ ವೀಕ್ಷಿತಃ ಕ್ಷಣಮುಮಾ ಸಾ ಛಂದಲಾ ನೇಕ್ಷಿತಾ।
ದೃಷ್ಟಾ ನ ಭ್ರಮರಾಂಬಿಕಾಪಿ ಕಮಲೈರ್ನಾರಾಧಿತಾ ಸಾದರಂ
ಮಂದಂ ಭಾಗ್ಯಮತಃಪರಂ ತದಧುನಾ ಕೈಲಾಸವಾಸೇನ ಕಿಂ ॥೮೫॥

ಲ್ಲವೂ ಕರಗಿ ನೀರಾಗುವುದು. ಆಗ ಅಮೃತವನ್ನು ಪಾನಮಾಡಿದಂತೆ ಪರಮಸುಖ ವಾಗುವುದು. ಅಂಥ ಶಿವಕಥೆಗಳನ್ನು ನನ್ನ ಕಿವಿಗಳು ತೃಪ್ತಿಯಾಗುವಷ್ಟು ಸಲ ಕೇಳಲಿಲ್ಲ. ನಾನು ಹಿಂದೊಂದು ಸಲವೂ, ವಿಶ್ವೇಶ್ವರನಗರಿಯಲ್ಲಿ ಅಥವಾ ಶಿವಕ್ಷೇತ್ರ ಗಳಲ್ಲಿ ಎಲ್ಲಿಯೂ ಶಿವನನ್ನು ಆರಾಧಿಸುತ್ತಾ ವಾಸಮಾಡಲಿಲ್ಲ. ಇಂಥ ಪುಣ್ಯಕರ್ಮ ಗಳನ್ನೆಲ್ಲಾ ಇಲ್ಲಿ ಮಾಡುವುದನ್ನು ಬಿಟ್ಟು ಕೈಲಾಸಕ್ಕೆ ತೆರಳಿ ಅಲ್ಲೇನನ್ನು ಮಾಡಲಿ? ಹೇಳು. ॥೮೩॥

ನನ್ನ ಹಣೆಯು ಭಸ್ಮತ್ರಿಪುಂಡ್ರಧಾರಣೆಯಿಂದ ಅಲಂಕೃತವಾಗಲಿಲ್ಲ. ನನ್ನ ಶರೀರವು ರುದ್ರಾಕ್ಷಮಾಲೆಗಳ ನೆಲೆವೀಡಾಗಲಿಲ್ಲ. ಮತ್ತು ಶಂಕರನೈವೇದ್ಯಾನ್ನದಿಂದ ಪೋಷಿತವಾಗಿಲ್ಲ. ಶಿವಸನ್ನಿಧಿಯಲ್ಲಿ ನಾಟ್ಯೋತ್ಸವವನ್ನು ನಡೆಯಿಸಿ ಅಂಥ ಆನಂದವನ್ನು ನನ್ನ ಹೃದಯವು ಅನುಭವಿಸಲಿಲ್ಲ. ನಾನು ಒಂದು ದಿನವೂ ಪುಣ್ಯತಮವಾದ ಶ್ರೀಶಿವಷಡಕ್ಷರೀಮಂತ್ರವನ್ನು ಜಪಿಸಲಿಲ್ಲ. ಹೀಗಿರಲು ನಾನು ಕೈಲಾಸಕ್ಕೆ ತೆರಳಿ ಏನುಮಾಡಲಿ? ॥೮೪॥

ನೂತನವಾದ ಬಿಲ್ವದಳಗಳಿಂದಾಗಲೀ ಅಥವಾ ಕಮಲಗಳಿಂದಾಗಲಿ ಈ ವರೆಗೆ ಒಂದುಸಲವೂ ನಾನು ಶ್ರೀತೀರ್ಥೇಶ್ವರಲಿಂಗವನ್ನು ಪೂಜಿಸಲಿಲ್ಲ. ಅಥವಾ ಶ್ರೀಶೈಲವನ್ನೂ ದರ್ಶನಮಾಡಲಿಲ್ಲ. ಹಾಗೆಯೇ ಅಲ್ಲಿಯೇ ನೆಲಸಿರುವ ಶ್ರೀಛಂದಲಾ ಎಂಬ ದಿವ್ಯನಾಮಧಾರಿಣಿಯಾದ ಉಮಾದೇವಿಯ ಸಂದರ್ಶನವನ್ನೂ ನಾನು ಪಡೆಯಲಿಲ್ಲ. ಅಥವಾ ಭ್ರಮರಾಂಬಿಕೆಯನ್ನು ಸಂದರ್ಶಿಸಿ ಒಂದುಸಲವೂ ಪೂಜಿಸ ಲಿಲ್ಲ. ನನ್ನ ದೌರ್ಭಾಗ್ಯವನ್ನು ಎಷ್ಟೆಂದು ಹೇಳಲಿ? ಸರ್ವದಾ ನಾನು ಭಾಗ್ಯ ಹೀನಳು. ಹೀಗಿರಲು ನಾನು ಈಗ ಕೈಲಾಸಕ್ಕೆ ತೆರಳಿ ಮಾಡುವುದೇನು? ॥೮೫॥

ಕರ್ತವ್ಯಂ ಗಿರಿಶಾರ್ಚನಂ ಸುರಸರಿನ್ನೀರೋರುಧಾರಾಭರೈಃ
ಬಿಲ್ವೀಕೋಮಲಪಲ್ಲವೈರ್ಮೃಗಮದೈಃ ಪಾಟೀರಸಾರೈರಪಿ।
ಗೋಕ್ಷೀರಾದ್ಯುಪಹಾರಕಾರಿಭಿರತಃ ಕೈಲಾಸವಾಸೇನ ಕಿಂ
ವಕ್ತವ್ಯಸ್ಸ ಮಹೇಶ್ವರೋಽಪಿ ವಚಸೈರೇವಂ ಕೃಪಾಸಾಗರಃ ॥೮೬॥

ಅತ್ರೈವಾಮಿತರತ್ನಗೋಪುರಪುರಪ್ರಾಕಾರಧೀರಸ್ಫುರ
ತ್ಪ್ರಾಸಾದಾಮಿತಮಂದಿರೈರುರುತರೈರ್ಲಿಂಗಾಂಗಣಸ್ಥೈರಲಂ।
ಕರ್ತವ್ಯಂ ವಿಮಲಂ ಸಹಾರಮಪರೋ ಮೇರುರ್ಯಥಾ ಸುಂದರಂ
ತದ್ವನ್ಮಂದಿರಮತ್ರ ಚಿತ್ರಮಧುನಾ ಕರ್ತವ್ಯಮೇವ ಧ್ರುವಂ ॥೮೭॥

ನ ಬ್ರಹ್ಮಕಲ್ಪೋಪಶಮೇಽಪಿ ಶಾಂಗಂ
ತುಂಗಂ ಸ ಲಿಂಗಂ ಪರಿಹಾರ್ಯಮಸ್ಯಾಃ।

ಆದುದರಿಂದ ಇನ್ನು ಮುಂದಾದರೂ ನಾನು ಶಿವಾರಾಧನೆಯನ್ನು ಮಾಡಬೇಕು. ಕೂಡಲೇ ಕೈಲಾಸಕ್ಕೆ ತೆರಳಿದರೆ ನನ್ನ ಜನ್ಮಕ್ಕೆ ಏನೂ ಸಾರ್ಥಕ್ಯ ವಿಲ್ಲದೇ ಹೋಗುವುದು. ಈಗ ನಾನು ಇಲ್ಲಿಯೇ ಇದ್ದು ಗಂಗಾಜಲಧಾರೆಯಿಂದ ಶಿವಾಭಿಷೇಕವನ್ನು ನಡೆಸುವೆನು. ಕೋಮಲವಾದ ಬಿಲ್ವದಳಾರ್ಚನೆಯನ್ನು ಮಾಡುವೆನು. ಕಸ್ತೂರಿ, ಚಂದನ, ಘನಸಾರ, ಮುಂತಾದ ಸುಗಂಧದ್ರವ್ಯಗಳನ್ನು ಶಿವನಿಗೆ ಅರ್ಪಿಸುವೆನು. ಗೋಕ್ಷೀರವೇ ಮೊದಲಾದ ಉತ್ತಮ ಉಪಹಾರಗಳನ್ನು ನೈವೇದ್ಯಮಾಡುವೆನು. ಆದುದರಿಂದ ಈಗ ಆ ಕೃಪಾಸಾಗರನಾದ ಶಿವನಲ್ಲಿ ಈ ನನ್ನ ಸಂಕಲ್ಪವನ್ನೂ ದೀನವಾಣಿಯನ್ನೂ ವಿನಯದಿಂದ ನೀನು ತಿಳಿಸು. ॥೮೬॥

ಈಗ ಇಲ್ಲಿ ರತ್ನಗೋಪುರಗಳಿಂದ ಕೂಡಿದ ಅನೇಕ ಶಿವದೇವಾಲಯಗಳಿರುತ್ತವೆ. ಅವುಗಳೆನೋ ನೋಡುವುದಕ್ಕೆ ಅರಮನೆಯಂತೆಯೂ ಇವೆ. ಸುಂದರವಾಗಿ ಉನ್ನತವಾಗಿಯೂ ಇವೆ. ಆದರೆ ಇವುಗಳಿಷ್ಟೇ ಸಾಲದು. ಮತ್ತೊಂದು ಶಿವದೇವಾಲಯವನ್ನು ಕಟ್ಟಿಸಬೇಕಾಗಿದೆ. ಮೇರುಪರ್ವತದಷ್ಟು ಉನ್ನತವಾದ ಮಂದಿರವನ್ನು ನಿರ್ಮಿಸಬೇಕಾಗಿದೆ. ಅದನ್ನು ಸುಂದರವಾಗಿಯೂ ಚಿತ್ರವಿಚಿತ್ರವಾಗಿಯೂ ಕಟ್ಟಿಸಬೇಕಾಗಿದೆ. ನಾನು ಅವಶ್ಯವಾಗಿ ಅಂಥ ಶಿವಾಲಯವನ್ನು ಕಟ್ಟಿಸುವೆನು. ॥೮೭॥

ನನಗೆ ಈಗಲೇ ಕೈಲಾಸಕ್ಕೆ ತೆರಳಲು ಅಥವಾ ಕೈಲಾಸದಲ್ಲಿ ವಾಸಿಸಲು ಅಪೇಕ್ಷೆ ಇರುವುದಿಲ್ಲ. ನನ್ನ ಮನಸ್ಸು ಅವಿಚ್ಛಿನ್ನವಾಗಿ ಶಿವಾರಾಧನೆಯನ್ನು ಮಾಡ

ಲಿಂಗಾರ್ಚನೇ ಮೇ ಮತಿರಸ್ತು ನಿತ್ಯಂ
ಕೈಲಾಸವಾಸೇ ನ ಮತಿರ್ಮಮಾದ್ಯ ॥೪೮॥

ಇತ್ಯುಕ್ತಂ ತದ್ವಚಃ ಶ್ರುತ್ವಾ ಭೃಂಗೀಶೋ ವಿಸ್ಮಯಾನ್ವಿತಃ ।
ಯಯೌ ಕೈಲಾಸನಿಲಯಂ ಸ್ಮರನ್ ಶಂಕರವೈಭವಂ ॥೪೯॥

ಗತೇಷು ತೇಷು ಸರ್ವೇಷು ಗಣೇಷು ವಿಮಲಾನನಾ ।
ದೇವೇಷ್ವಪಿ ಮಹಾಶೈವಂ ಸಾ ದದರ್ಶಾತಿವಿಸ್ಮಿತಂ ॥೯೦॥

ತಂ ವಿಲೋಕ್ಯ ಪ್ರಣಮ್ಯಾಪಿ ತಮೇವ ಶಿವಪೂಜಕಂ ।
ಕೃತಾಂಜಲಿಪುಟಾ ಪ್ರಾಹ ಚಾರಣೇನ ಸಹಾದರಾತ್ ॥೯೧॥

ಬೇಕೆಂದು ಸಂಕಲ್ಪಿಸಿರುವುದು. ಕಲ್ಪಾಂತ್ಯದಲ್ಲೂ ಸಹ ಶಿವಲಿಂಗವನ್ನು ಬಿಡಬಾರದೆಂದು ನನಗೆ ಅಪೇಕ್ಷೆ ಆಗುತ್ತಿರುವುದು. ಆದುದರಿಂದ ನನ್ನ ಬುದ್ಧಿಯು ಶಿವಾರ್ಚನೆಯಲ್ಲಿಯೇ ನಿಶ್ಚಲವಾಗಿ ಇರಲಿ ಎಂದು ನೀವೂ ಸಹ ನನ್ನನ್ನು ಹರಸಿರಿ. ॥೪೮॥

ಈರೀತಿ ಆ ಚಾರಣಭಾರ್ಯೆಯು ಹೇಳಿದ ಮಾತನ್ನು ಕೇಳಿ ಭೃಂಗಿಗೆ ಪರಮವಿಸ್ಮಯವಾಯಿತು. ಆತನು ಮನಸ್ಸಿನಲ್ಲೇ ಶಿವವೈಭವವು ಎಷ್ಟು ಮಹತ್ತರವಾಗಿದೆ ಎಂದು ತಲೆದೂಗಿದನು. ಅನಂತರ ಆತನು ಆಕೆಯನ್ನು ಕುರಿತು ತಥಾಸ್ತು ಎಂದು ಹೇಳಿ ಕೈಲಾಸಕ್ಕೆ ತೆರಳಿದನು. ॥೪೯॥

ಆ ಭೃಂಗಿಯ ಜೊತೆಯಲ್ಲಿ ಬಂದಿದ್ದ ಸಕಲ ಪರಿವಾರದವರೂ, ದೇವತೆಗಳೂ ಸಹ ಅಲ್ಲಿಂದ ಹೊರಟು ಹೋದರು. ಅಲ್ಲಿಗೆ ಒಬ್ಬ ಮಹಾಶೈವನು ಬಂದಿದ್ದನು. ಆತನೊಬ್ಬನು ಮಾತ್ರ ಹೋಗಲಿಲ್ಲ. ಅವನು ಈ ಚಾರಣಸ್ತ್ರೀಯ ಮಾತನ್ನು ಕೇಳಿ ಅತ್ಯಂತ ವಿಸ್ಮಯಪಡುತ್ತಾ ಅಲ್ಲಿಯೇ ಇದ್ದನು. ॥೯೦॥

ಆ ಮಹಾಶೈವನ ಆಕಾರವನ್ನು ನೋಡಿದ ಕೂಡಲೇ ಆ ಚಾರಣಸ್ತ್ರೀಯು ಆತನು ಶಿವಪೂಜಕನೆಂಬುದನ್ನೂ ಶಿವಭಕ್ತನೆಂಬುದನ್ನೂ ತಿಳಿದು ಆತನಿಗೆ ಚಾರಣನೊಡನೆ ಭಕ್ತಿಯಿಂದ ನಮಸ್ಕರಿಸಿ ವಿನಯಪುರಸ್ಸರವಾಗಿ ಈ ರೀತಿ ಕೇಳಿಕೊಂಡಳು. ॥೯೧॥

ಶಿವವಿದ್ಯಾಂ ಪ್ರಯಚ್ಛಾದ್ಯ ಯದ್ಯಸ್ತಿ ಕರುಣಾ ಮಯಿ ।
ಅನವದ್ಯಾನವದ್ಯಾಂ ಮೇ ಸಿದ್ಧವಿದ್ಯಾಧರೇಪ್ಸಿತಾಂ ॥೯೨॥

ಶಿವಪೂಜಾಪ್ರಕಾರೋಽಪಿ ಕರ್ತವ್ಯಂ ಶಿಕ್ಷಯಾಧುನಾ ।
ಅದೇಯಮಪಿ ತೇ ದೇಯಂ ಯದ್ಯಸ್ತಿ ಮಮ ಶಾಂಭವ ॥೯೩॥

ಅತಃ ಪರಂ ನ ಸಂಸಾರೇ ರತಿರಸ್ಯಾಃ ಪ್ರಜಾಯತೇ ।
ಶಿವಾರ್ಚನರತಿರ್ಜಾತಾ ಶಂಕರಾನುಗ್ರಹಾನ್ಮಮ ॥೯೪॥

ಇದಂ ತು ಸುರಸರಿತ್ತೀರೇ ಲಿಂಗಂ ತುಂಗಂ ಮನೋಹರಂ ।
ಸೋಽಯಂ ಬಿಲ್ವತರುಶ್ಚೇತಿ ದುರ್ಲಭಂ ತದಿದಂ ತ್ರಯಂ ॥೯೫॥

ಎಲೈ ಪೂಜ್ಯ ಶೈವನೇ! ನನಗೆ ಶಿವವಿದ್ಯೆಯನ್ನು ಉಪದೇಶಿಸು. ನನ್ನ ಈವರೆಗಿನ ವ್ಯವಹಾರದಿಂದ ನಿನಗೆ ನನ್ನಲ್ಲಿ ದಯೆಯುಂಟಾಗುವುದಿಲ್ಲವೇ? ಹಾಗೆ ನನ್ನಲ್ಲಿ ಕರುಣೆ ಇದ್ದರೆ ಆ ಸಿದ್ಧವಿದ್ಯಾಧರರೂ ಸಹ ಅಪೇಕ್ಷಿಸುವ ಪರಮೋತ್ಕೃಷ್ಟವಾದ ಶಿವವಿದ್ಯೆಯನ್ನು ನನಗೆ ಉಪದೇಶಿಸು. ||೯೨||

ಶಿವಾರ್ಚನೆಯನ್ನು ಹೇಗೆ ಮಾಡಬೇಕು? ಅದಕ್ಕೆ ವಿಧಿಯೂ ಕ್ರಮವೂ ಯಾವುದು? ಅದನ್ನೂ ನನಗೆ ವಿವರಿಸಿ ಹೇಳು. ಶಿವಾರ್ಚನೆಯನ್ನು ವಿಧ್ಯುಕ್ತ ರೀತಿಯಲ್ಲಿ ಹೇಗೆಂಬುದನ್ನು ತಿಳಿದುಕೊಂಡು ಮಾಡಬೇಕೆಂಬುದು ನನ್ನ ಅಪೇಕ್ಷೆ. ಆದುದರಿಂದ ನನಗೆ ಅವುಗಳನ್ನು ಉಪದೇಶಿಸು. ಹಾಗೆ ನೀನು ಉಪದೇಶಿಸಿದರೆ ನಿನಗೆ ನಾನು ಏನನ್ನು ಬೇಕಾದರೂ ಕೊಡುವೆನು. ||೯೩||

ಇನ್ನು ಮುಂದೆ ನನ್ನ ಮನಸ್ಸು ಸಂಸಾರ ಸುಖದಲ್ಲಿ ಆಸೆ ಪಡುವುದಿಲ್ಲ. ಇಂದು ನನಗೆ ವಿರಕ್ತಿಯುಂಟಾಗಿದೆ. ಶಿವಾನುಗ್ರಹದಿಂದ ಶಿವಾರಾಧನೆಯನ್ನು ಮಾಡಬೇಕೆಂಬ ತೀವ್ರಾಸಕ್ತಿಯು ಇಂದು ನನಗುಂಟಾಗಿದೆ. ||೯೪||

ಇದೋ ನೋಡು. ಇಂದು ನನಗೆ ಅಪೂರ್ವ ಸಂದರ್ಶನವು ಲಭಿಸಿದೆ. ಇದು ಪವಿತ್ರವಾದ ದೇವ ಗಂಗಾನದಿಯು. ಇದೇ ತೀರದಲ್ಲಿ ಪುಣ್ಯತಮವಾದ ಸುಂದರವಾದ ಶಿವಲಿಂಗವಿದೆ. ಇದೋ ನೋಡು, ಇಲ್ಲಿಯೇ ಪಾವನತರವಾದ ಬಿಲ್ವವೃಕ್ಷವೂ ಇದೆ. ಪ್ರಪಂಚದಲ್ಲಿ ಈ ಮೂರು ಒಂದು ಕಡೆಯಲ್ಲಿ ಲಭಿಸುವುದೇ ದುರ್ಲಭ. ಇಂದು ನನಗೆ ನನ್ನ ಪುಣ್ಯೋದಯದಿಂದ ಈ ಮೂರರ ಸಮಾಗಮವೂ ಲಭಿಸಿದೆ. ||೯೫||

ತದೇತತ್ಕಾಮದಂ ಲಿಂಗಮಕಾಮೈರಪಿ ಪೂಜಿತಂ।
ದದಾತಿ ಪರಮೈಶ್ವರ್ಯಂ ಸುರವಂದ್ಯಮನಾಮಯಂ ॥೯೬॥

ದೃಷ್ಟ್ವಾ ವಿಮಾನಮಧುನಾ ಗಣಕೋಟಿನೀತಂ
ಮಾಂ ನೇತುಮಾಗತಮುಮಾಪತಿರಕ್ಷಿತಂ ಚ।
ತ್ಯಕ್ತಂ ತದೇತದಧುನಾ ಶಿವಲಿಂಗಪೂಜಾಂ
ಕರ್ತುಂ ಶಿವಾರ್ಚನರತಾಸ್ಮಿ ನ ಸಂಶಯೋಽತ್ರ ॥೯೭॥

॥ ರವಿರುವಾಚ ॥

ಇತ್ಯುಕ್ತಂ ತದ್ವಚಃ ಶ್ರುತ್ವಾ ದದೌ ತಸ್ಯೈ ಸ ಶಾಂಭವಃ।
ಪಂಚಾಕ್ಷರಂ ಪರಂ ಶೈವಮಶೇಷಾಘವಿನಾಶಕಂ ॥೯೮॥

ಇದೋ ನೋಡು. ಈ ಶಿವಲಿಂಗವು ಮಹಿಮಾಯುಕ್ತವಾಗಿದೆ. ಇದನ್ನು ಪೂಜಿಸಿದರೆ ಸಕಲ ಕಾಮಿತಾರ್ಥಗಳೂ ಶೀಘ್ರವಾಗಿಯೇ ಲಭಿಸುವುವು. ಕಾಮರಹಿತನಿಗೂ ಈ ಲಿಂಗವು ಪರಮೈಶ್ವರ್ಯವನ್ನು ಪ್ರದಾನ ಮಾಡುವುದು. ||೯೬||

ಅಯ್ಯಾ ಶೈವೋತ್ತಮನೇ! ನನ್ನನ್ನು ಕೈಲಾಸಕ್ಕೆ ಕರೆದುಕೊಂಡು ಹೋಗಲು ಅನೇಕ ಶಿವದೂತರು ನನಗಾಗಿಯೇ ವಿಮಾನವನ್ನೂ ತಂದರು. ಅದನ್ನು ತಿರಸ್ಕರಿಸಿ ನಾನು ಇಲ್ಲಿಯೇ ಇದ್ದು ಶಿವಲಿಂಗಾರ್ಚನೆಯನ್ನು ಮಾಡುವೆನೆಂದು ಹೇಳಿ, ಹಾಗೆಯೇ ಹಿಂದಕ್ಕೆ ಕಳುಹಿಸಿದೆನು. ನನಗೆ ಕೈಲಾಸಕ್ಕೆ ಹೋಗಲು ಅಪೇಕ್ಷೆ ಇರುವುದಿಲ್ಲ. ಕೇವಲ ಶಿವಾರ್ಚನೆಯನ್ನೇ ಮಾಡುತ್ತಿರಬೇಕೆಂಬುದು ನನ್ನ ತೀವ್ರವಾದ ಸಂಕಲ್ಪವಿದೆ. ಆದುದರಿಂದ ನನ್ನ ಈ ಮನೋಭಾವಕ್ಕೆ ತಕ್ಕಂತೆ ನನಗೆ ಉಪದೇಶಿಸು. ನನ್ನ ಈ ತೀವ್ರವಾದ ಸಂಕಲ್ಪದ ವಿಷಯದಲ್ಲಿ ನಿನಗೆ ಸ್ವಲ್ಪವೂ ಸಂಶಯ ಬೇಡ. ||೯೭||

ಈ ರೀತಿ ಆ ಚಾರಣಭಾರ್ಯೆಯು ಕೇಳಿಕೊಳ್ಳಲು, ಆ ಮಹಾಶೈವನು ಆಕೆಯ ಪ್ರಾರ್ಥನೆಯನ್ನು ಮನ್ನಿಸಿ, ವಿಧ್ಯುಕ್ತವಾದ ರೀತಿಯಲ್ಲಿ ಸಮಸ್ತಪಾಪನಾಶಕವಾದ ಶ್ರೀ ಶಿವಪಂಚಾಕ್ಷರೀ ಮಂತ್ರವನ್ನು ಆಕೆಗೆ ಉಪದೇಶ ಮಾಡಿದನು. ಆ ಉಪದೇಶ ಗ್ರಹಣದಿಂದ ಅವಳಿಗೆ ಆನಂದವೂ ಮತ್ತು ಜ್ಞಾನೋದಯವೂ ಆಯಿತು. ||೯೮||

ಸಾ ತೇನ ರುಚಿರೇ ತತ್ರ ವಿದ್ಯುದಾಭಾಮಹೋತ್ಸವೈಃ ।
ತತಶ್ಚಕಾರ ಸಾ ಪೂಜಾಂ ಶಂಗಲಿಂಗೇऽತಿನಿರ್ಮಲಾ ॥೯೯॥

ನಗರಂ ಕಲ್ಪಿತಂ ತತ್ರ ರತ್ನರಾಜಿವಿರಾಜಿತಂ ।
ಮಂದಿರಂ ಶಂಕರಸ್ಯಾಪಿ ಚಿತ್ರರತ್ನವಿಜೃಂಭಿತಂ ॥೧೦೦॥

ಅಪಾರೈರುಪಚಾರೈಸ್ಸಾ ಪೂಜಯಾಮಾಸ ಶಂಕರಂ ।
ಶ್ರುತ್ವಾ ಶಿವಕಥಾಮೇವ ಸ್ಮೃತ್ವಾ ಚ ಗಿರಿಜಾಪತಿಂ ॥೧೦೧॥

॥ ಭಾನುರುವಾಚ ॥

ಅತಸ್ತ್ವಮಪಿ ಯತ್ನೇನ ಕುರು ಶಂಕರಪೂಜನಂ ।
ಭಜ ಮೃತ್ಯುಂಜಯಂ ನಿತ್ಯಂ ಜಪಪಂಚಾಕ್ಷರಂ ಶುಭಂ ॥೧೦೨॥

ಆ ಚಾರಿಣಿಯು ಮೊದಲೇ ಪರಮಸುಂದರಿಯಾಗಿದ್ದಳು. ಉಪದೇಶವನ್ನು ಪಡೆದ ಬಳಿಕ ಅವಳು ಮತ್ತೂ ಹೆಚ್ಚಾದ ವರ್ಚಸ್ಸನ್ನು ಕಡೆದು ಅತರ್ಕಿತವಾದ ರೂಪವನ್ನು ಪಡೆದಳು. ಅನಂತರ ಅಲ್ಲಿಯೇ ಆ ಶೈವೋತ್ತಮನೊಂದಿಗೆ ಅವಳು ಶಿವಲಿಂಗಕ್ಕೆ ಮಹಾಸಂಭ್ರಮದೊಡನೆ ಉತ್ಸವ ಮತ್ತು ಪೂಜಾದಿಗಳನ್ನು ನಡೆಸಿದಳು. ॥೯೯॥

ಬಳಿಕ ಆ ಚಾರಣಭಾರ್ಯೆಯು ಆ ಶಿವಲಿಂಗವಿದ್ದ ಪ್ರದೇಶದಲ್ಲಿ ದೊಡ್ಡ ಮಂದಿರವನ್ನು ಕಟ್ಟಿಸಿದಳು. ಆ ದೇವಾಲಯವನ್ನು ಕೇವಲ ಚಿತ್ರ ವಿಚಿತ್ರವಾದ ರತ್ನ ವೈಡೂರ್ಯಗಳಿಂದಲೇ ನಿರ್ಮಿಸಿದಳು. ಮತ್ತು ಅಲ್ಲಿಯೇ ಸುಂದರವಾದ ನಗರವನ್ನೂ ಕಲ್ಪಿಸಿದಳು. ॥೧೦೦॥

ಆ ಶಿವದೇವಾಲಯದಲ್ಲಿಯೇ ಅವಳು ಸದಾ ಇದ್ದು ನಾನಾ ವಿಧವಾದ ಉಪಚಾರ ಉತ್ಸವಗಳೊಡನೆ ಶಿವನನ್ನು ಪೂಜಿಸುತ್ತಿದ್ದಳು. ಆಕೆಯು ಒಂದು ಕ್ಷಣಕಾಲವನ್ನೂ ವ್ಯರ್ಥವಾಗಿ ಕಳೆಯದೇ ಅವಿಚ್ಛಿನ್ನವಾಗಿ ಸತತವೂ ಶಿವಕಥೆಯನ್ನೇ ಹೇಳಿಸಿ ಶ್ರವಣಮಾಡುತ್ತಿದ್ದಳು. ॥೧೦೧॥

'ಆದುದರಿಂದ ಎಲೌ ಪದ್ಮಾವತಿಯೇ, ನೀನೂ ಕೂಡ ವಿಶೇಷ ಪ್ರಯತ್ನ ವನ್ನು ವಹಿಸಿ ಶಿವಪೂಜೆಯನ್ನು ಮಾಡು. ಆ ಮೃತ್ಯುಂಜಯನನ್ನು ಭಜಿಸುವುದ ರಿಂದ ಮೇಲೆ ಹೇಳಿದಂತೆ ನಿನಗೂ ಸಕಲ ಶ್ರೇಯಸ್ಸುಗಳು ಲಭಿಸುವುವು. ಆದುದ

ಯಾವತ್ಸೌಭಾಗ್ಯಮಾರೋಗ್ಯಂ ತಾವದಾಶು ಶಿವಂ ಯಜ।
ಶಿವಾರ್ಚನಂ ಪರಂ ಭಾಗ್ಯಂ ಸೂತೇ ಕಲ್ಪತರುರ್ಯಥಾ ॥೧೦೪॥

ಆಲಸ್ಯೇನ ವಿನಾ ಶಿವಾರ್ಚನರತಿರ್ಲಿಂಗೇಷು ತುಂಗೇಷು ತೇ
ಜಾತಾ ಚೇದಧುನಾ ಪರಂ ನವನಿಧಿಪ್ರಾಪ್ತಿಃ ಕರೇ ಸಂತತಂ।
ಏತತ್ತಾವದಿಹಾನುಷಂಗಿಕಮಿತಿ ಜ್ಞೇಯಂ ಫಲಂ ತತ್ಫಲಂ
ಯತ್ತದ್ವಕ್ತುಮಪಾರವೇದಶಿಖರೈರ್ವಕ್ತುಂ ನ ಶಕ್ಯಂ ಖಲು ॥೧೦೫॥

ಯಾವತ್ತೇ ಧನಮಸ್ತಿ ತಾವದಧುನಾ ಸಾಂಬಾಯ ಭಕ್ತ್ಯಾ ಪರಂ
ದೇಯಂ ತತ್ತು ಸಹಸ್ರಕೋಟಿಗುಣಿತಂ ದಾಸ್ಯತ್ಯವಶ್ಯಂ ಧನಂ।

ರಿಂದ ನೀನು ನಿತ್ಯವೂ ಶ್ರೀ ಪಂಚಾಕ್ಷರೀ ಮಹಾಮಂತ್ರವನ್ನು ಜಪಿಸು. ಆ ಮಂತ್ರವು ಮಹಾಕಲ್ಯಾಣಕರವಾದದ್ದು. ॥೧೦೩॥

ನಿನಗೆ ಆರೋಗ್ಯವೂ, ಸೌಭಾಗ್ಯವೂ ಲಭಿಸುವವರೆಗೂ ಅವಿಚ್ಛಿನ್ನವಾಗಿ ಶಿವನನ್ನು ಆರಾಧಿಸು. ಕಲ್ಪತರುವಿಗೆ ಸದೃಶವಾದ ಶಿವಾರ್ಚನೆಯೇ ನಿನಗೆ ಶೀಘ್ರ ವಾಗಿ ಸರ್ವಸ್ವವನ್ನೂ ಪ್ರದಾನಮಾಡುವುದು. ಪ್ರಪಂಚದಲ್ಲಿ ಶಿವಾರ್ಚನೆಗೆ ಮಿಗಿಲಾದ ಸೌಭಾಗ್ಯವು ಬೇರೊಂದಿಲ್ಲ. ॥೧೦೪॥

ಎಲೌ ಪದ್ಮಾವತಿ, ನಿನಗೆ ಸ್ವಲ್ಪವೂ ಆಲಸ್ಯವಿಲ್ಲದೇ ಶಿವಲಿಂಗಾರ್ಚನೆಯಲ್ಲಿ ಆಸಕ್ತಿಯುಂಟಾಗಲಿ. ಹಾಗೆ ನೀನು ಅವಿಚ್ಛಿನ್ನವಾಗಿ ಶಿವಾರಾಧನೆಯನ್ನು ಮಾಡು ತ್ತಿದ್ದರೆ ಸಾಕ್ಷಾತ್ ನವನಿಧಿಯೇ ನಿನ್ನ ಹಸ್ತಗತವಾಗುವುದು. ಆ ಶಿವಾರ್ಚನೆಗೆ ನಾನು ಏನೇನು ಫಲಗಳಿವೆ ಎಂದು ಹೇಳಿದ್ದೇನೆಯೋ ಅವು ಕೇವಲ ಆನುಷಂಗಿಕಫಲಗಳೆಂದು ತಿಳಿ. ಅವುಗಳು ಮುಖ್ಯವಾದ ಫಲಗಳಲ್ಲ. ಪುಣ್ಯ ಕಾರ್ಯಾನುಷ್ಠಾನಮಾಡುತ್ತಿರುವಾಗ ಮಧ್ಯೆ ತಾನಾಗಿಯೇ ದೊರೆಯತಕ್ಕ ಫಲಗಳು ಅವು. ಆ ಶಿವಾರಾಧನೆಗೆ ಏನೇನು ಫಲಗಳಿವೆ? ಯಾವುದು ಮುಖ್ಯಫಲ? ಎಂಬ ವಿಚಾರಗಳು ಆ ವೇದ ವೇದಾಂತಗಳಿಗೂ ತಿಳಿದಿರುವುದಿಲ್ಲ. ಅವುಗಳಿಂದಲೂ ಆ ಸಮಗ್ರಫಲಗಳನ್ನು ನಿರೂಪಿಸಲು ಸಾಧ್ಯವಿಲ್ಲ. ॥೧೦೫॥

ಎಲೌ ಪದ್ಮಾವತಿಯೇ! ನಿನ್ನಲ್ಲಿ ಎಷ್ಟು ಐಶ್ವರ್ಯವಿದೆಯೋ ಅವುಗಳೆಲ್ಲ ವನ್ನೂ ಆ ಪರಮೇಶ್ವರನಿಗೆ ಸಮರ್ಪಿಸು. ನಿನ್ನ ಸಕಲ ಧನಕನಕಗಳನ್ನೂ ಶಿವಾರ್ಚ ನೆಯಲ್ಲಿ ವಿನಿಯೋಗಿಸಿ ವೈಭವದಿಂದ ಶಿವಾರಾಧನೆ ಮಾಡು. ಪರಮೇಶ್ವರನಿಗೆ

ತಚ್ಚಾಸ್ಮದ್ವಚಸೇನ ವಾಪಿ ಬಹುಧಾ ವಿಶ್ವಾಸ ಏವಾಸ್ತ್ವತಃ
ಪಾಪಾಬ್ಧಿಪ್ರಲಯೋ ಭವಿಷ್ಯತಿ ಶುಭಾಂಭೋಧಿಶ್ಚ ಸಂಭಾವಿತಃ ॥೧೦೫॥

ಇತಿ ಭಾನುವಚಃ ಶ್ರುತ್ವಾ ಸಾಪಿ ಪದ್ಮಾವತೀ ಶುಭಾ ।
ಶುಭಂ ಸಂಭಾವಿತಂ ಸರ್ವಂ ಭವಿಷ್ಯತಿ ಭವದ್ಗಿರಾ ॥೧೦೬॥

ಯಾಜ್ಞವಲ್ಕ್ಯ ಉವಾಚ

ಇತ್ಯುಕ್ತ್ವಾ ಸಾ ಮಹೋತ್ಸಾಹೈರುತ್ಸಾಹಜನಕಂ ಶಿವಂ ।
ಪೂಜಯಾಮಾಸ ರತ್ನಾದ್ಯೈರುಪಚಾರೈರ್ನೃಪಭಾಮಿನೀ ॥೧೦೭॥

ಶಿವಾರ್ಚನಾದನ್ಯಮುಯತ್ನತೋ ವಾ
ಯತ್ನೇನ ವಾ ಸಾ ನ ಚಕಾರ ಧೀರಾ ।
ಪರಾತ್ಪರಂ ಶಂಕರಮೇಕಮೇವ
ಮತ್ವಾ ತದಾರಾಧನತತ್ಪರಾಭೂತ್ ॥೧೦೮॥

ಅರ್ಪಿತವಾದ ಅದೇ ಧನವೇ ನಿನಗೆ ಆದಕ್ಕಿಂತಲೂ ಮಿಗಿಲಾಗಿ ಕೋಟಿಪಾಲು ಹೆಚ್ಚು ಐಶ್ವರ್ಯವನ್ನು ನೀಡುವುದು. ಆದುದರಿಂದ ನನ್ನ ಮಾತಿನಲ್ಲಿ ದೃಢವಾದ ನಂಬಿಕೆಯನ್ನಿಟ್ಟುಕೊಂಡು ತೀವ್ರಭಕ್ತಿಯಿಂದ ಶಿವನನ್ನು ಆರಾಧಿಸು. ಅಂದರೆ ಆಗ ನಿನ್ನ ಸಕಲ ಪಾಪಸಮುದ್ರವೂ ಬತ್ತಿಹೋಗುವುದು. ಹಾಗೆಯೇ ನಿನ್ನಲ್ಲಿ ಕಲ್ಯಾಣ ಸಾಗರವೂ ಆನಂದಸಮುದ್ರವೂ ಅಭಿವೃದ್ಧಿಯಾಗುವುದು. ॥೧೦೫॥

ಹೀಗೆಂದು ಸೂರ್ಯದೇವನು ಉಪದೇಶಮಾಡಲು ಆ ಪದ್ಮಾವತಿಯು ಅತ್ಯಂತ ಆದರದಿಂದ “ ನೀನು ಹೇಳಿದಂತೆ ಮಾಡುವೆನು. ನಿನ್ನ ಮಾತಿನ ಮೇರೆಗೆ ನನಗೆ ಸಕಲ ಮಂಗಳ ಫಲಗಳೂ ಲಭಿಸುವುದರಲ್ಲಿ ಸಂದೇಹವಿಲ್ಲವೆಂದು ಧನ್ಯವಾದ ಪುರಸ್ಸರವಾಗಿ ಹೇಳಿದಳು. ಬಳಿಕ ಅತ್ಯಂತ ಉತ್ಸಾಹದಿಂದಲೂ ವೈಭವದಿಂದಲೂ ಶಿವಾರ್ಚನೆಗೆ ಆರಂಭಿಸಿದಳು. ಉತ್ಸಾಹಕ್ಕೆ ಮುಖ್ಯಕಾರಣನಾದ ಶಿವನನ್ನು ಆಕೆಯು ಅನೇಕ ರತ್ನವೈಡೂರ್ಯಗಳಿಂದಲೂ ನಾನಾವಿಧವಾದ ಉಪಚಾರಗಳಿಂದಲೂ ಪೂಜಿಸಿದಳು. ॥೧೦೭॥

ಆ ಪದ್ಮಾವತಿಯು ಅಂದು ಮೊದಲುಗೊಂಡು ನಿತ್ಯವೂ ಸರ್ವಕಾಲದಲ್ಲಿಯೂ ಶಿವಾರ್ಚನೆಯ ಪ್ರಯತ್ನದಲ್ಲಿಯೇ ತತ್ಪರಳಾಗಿರುತ್ತಿದ್ದಳು. ಆಕೆಯು ತಿಳಿದಾಗಲಿ

ಕೋ ವಾ ನಾರ್ಚಯತಿ ಪ್ರಭಾವಮತುಲಂ ಭಾವಂ ಭವಾರಾಧಕಃ
ಶ್ರುತ್ವಾ ಪಾತಕಕಂಚುಕಾನಿ ಬಹುಧಾ ಮುಕ್ತ್ವಾಪಿ ಮುಕ್ತಿಪ್ರದಂ।
ಗೋವಿಂದಾಕ್ಷಿಸರೋಜಪೂಜಿತಪದಂ ಮಂದಾರಕುಂದಾದಿಭಿಃ
ಮಾಕಂದೈರತಿಸುಂದರೈರಪಿ ಮುದಾ ಮಂದೈರ್ಮರಂದೈರಪಿ ॥೧೦೯॥

ಮನೋಭವಮನೋಭವಪ್ರಭವಭೂತಭೂತಿಂ ಯಶೋ
ನ ವೇದ ತತ ಏವ ತದ್ವಿಪುಲಭಾಲಲೋಲಾನಲೈಃ।
ವಿದಗ್ಧಮಪಿ ದಗ್ಧಮಿತ್ಯಪಿ ವದಂತಿ ಬೃಂದಾರಕಾಃ
ಶಿವಾರ್ಚಗಣಸಾಫಲ್ಯೈರಶಿವಲಕ್ಷಣೈರ್ದುಃಖಿತಂ ॥೧೧೦॥

ತಿಳಿಯದಾಗಲಿ ಶಿವಾರ್ಚನೆಯೊಂದನ್ನು ಬಿಟ್ಟು ಮತ್ತೆ ಬೇರೆ ಯಾವ ಪ್ರಯತ್ನವನ್ನಾಗಲಿ ಕೆಲಸವನ್ನಾಗಲಿ ಮಾಡುತ್ತಿರಲಿಲ್ಲ. ಸರ್ವದಾ ಆ ಪರಾತ್ಪರನಾದ ಪರಶಿವನೊಬ್ಬನನ್ನೇ ಭಾವಿಸಿ ಪೂಜಿಸುತ್ತಿದ್ದಳು. ||೧೦೮||

ಹೀಗೆಯೇ ಈಶ್ವರಭಕ್ತರಾದವರು ಶಿವಮಹಿಮೆಯನ್ನು ತಿಳಿದುಕೊಂಡ ಮೇಲೆ ಶಿವನನ್ನು ಎಂದೂ ಅರ್ಚಿಸದೇ ಇರುವುದಿಲ್ಲ. ಆ ಶಿವಾರಾಧಕರ ಪಾಪಗಳು ಶಿವಾರ್ಚನೆಯಿಂದ ಕವಚವು ಕಳಚಿಹೋಗುವಂತೆ ಜಾರಿ ಹೋಗುವುವು. ಆದ್ದರಿಂದಲೇ ಅವರು ಪುಣ್ಯಾತ್ಮರಾಗಿರುವರು. ಆ ಶಿವಭಕ್ತರು ಶಿವಪಾದಾರವಿಂದವೇ ತಮಗೆ ಮೋಕ್ಷಕರವೆಂದು ದೃಢವಾಗಿ ನಂಬಿ, ನಾರಾಯಣನ ನಯನಕಮಲದಿಂದ ಪೂಜಿತವಾದ ಆ ಶಿವಪಾದಗಳನ್ನೇ ಮಂದಾರ, ಮಲ್ಲಿಗೆ, ಮಾಕಂದ, ಮುಂತಾದ ಅನೇಕ ಪುಷ್ಪಗಳಿಂದ ಪೂಜಿಸುವರು. ||೧೦೯||

ಮನಸಿಜನಾದ ಮನ್ಮಥನು ಪ್ರವರ್ಧಮಾನನಾಗಿದ್ದರೂ ಶಿವನ ಮಹಿಮೆಯ ಪಾರಮ್ಯವನ್ನು ಆತನು ತಿಳಿಯಲಿಲ್ಲ. ಆದ್ದರಿಂದಲೇ ಆತನು ಮೂಢನಾಗಿ ಆ ಪರಮೇಶ್ವರನ ಫಾಲಲೋಚನಾಗ್ನಿಗೆ ಸಿಲುಕಿ ಭಸ್ಮೀಭೂತನಾದನು. ಶಿವನ ಪಾರಮ್ಯಕ್ಕೆ ಅನುಗುಣವಾಗಿ ಆತನು ವರ್ತಿಸದೇ ಇದ್ದದ್ದರಿಂದ ಅವನು ಅಮಂಗಳಕರವಾದ ಗತಿಯನ್ನೂ ಮಹಾದುಃಖವನ್ನೂ ಪಡೆದನು. ಹೀಗೆಂದು ತಿಳಿದ ಎಲ್ಲಾ ದೇವತೆಗಳೂ ಹೇಳುವರು. ಆದುದರಿಂದ ಶಿವನ ಮಹಿಮೆಯನ್ನು ಸರ್ವರೂ ತಿಳಿದು ಮುಂದುವರಿಯಬೇಕು. ||೧೧೦||

ವಿವೇಕವಿಗಮೇ ಕಥಂ ಗಿರಿಶತುಂಗಲಿಂಗಾರ್ಚನಂ
ತದಕ್ಷಯಸುಖಪ್ರದಂ ವಿದಿತವೇದತತ್ತ್ವೋ ಬುಧಃ ।
ಜಹಾತಿ ನ ತದಾದರಾಃ ಪರಮುದಾರಹಾರಾಃ ಪುರಾ
ಪುರಾರಿಪದಪೂಜನಾದಖಿಲಸಿದ್ಧಿಮಾಪುರ್ನೃಪ ॥೧೧೧॥

॥ ನಂದಿಕೇಶ್ವರ ಉವಾಚ ॥

ಇತ್ಯುಕ್ತೋ ಯಾಜ್ಞವಲ್ಕ್ಯೇನ ಮುದಾ ಜನಕಭೂಪತಿಃ ।
ಪ್ರಣಮ್ಯ ತಂ ಮುನಿಂ ಭಕ್ತ್ಯಾ ಪ್ರಾಹ ದೇವಾಃ ಕೃತಾಂಜಲಿಃ॥೧೧೨॥

॥ ಜನಕ ಉವಾಚ ॥

ತ್ವದುಕ್ತರೀತ್ಯಾ ಶಿವಪೂಜನೇಷು
ಮಮಾಧಿಕಾರಶ್ಶಿವದೀಕ್ಷಿತಸ್ಯ ।

ಎಲೈ ಜನಕಮಹಾರಾಜನೇ, ವಿವೇಕವು ಕಳೆದುಹೋದರೆ ಶಿವಲಿಂಗಾರ್ಚನೆಯಲ್ಲಿ ಹೇಗೆ ಬುದ್ಧಿಯು ಹುಟ್ಟೀತು? ಅವಿವೇಕಿಯಾದ ಮೂಢನಿಗೆ ಅಕ್ಷಯ ಸುಖಪ್ರದವಾದ ಈ ಶಿವಾರ್ಚನೆಯಲ್ಲಿ ಮನಸ್ಸು ಪ್ರವರ್ತಿಸುವುದಿಲ್ಲ. ಆತನು ಹಾಗೆಯೇ ಶಿವಧರ್ಮವನ್ನು ತ್ಯಜಿಸಿ ದಿನೇ ದಿನೇ ಪತಿತನೇ ಆಗುವನು. ಆದರೆ ತತ್ತ್ವಾರ್ಥವನ್ನು ತಿಳಿದ ವಿವೇಕಿಯಾತ ವಿದ್ವಾಂಸನು ಶಿವಾರಾಧನೆಯನ್ನು ಬಿಡದೆ, ಈ ಸಂಸಾರದ ಸ್ಥಿತಿಯು ಇಷ್ಟೇ ಎಂದು ಮನಗಂಡು ಭ್ರಾಂತರಾಗದೇ ಉದಾರರಾದ ಪತ್ನಿಯರ ಸಂಗವನ್ನೂ ಸಹ ತ್ಯಜಿಸಿ ವಿರಕ್ತರಾದರು. ಮತ್ತು ತ್ರಿಪುರಾಂತಕನಾದ ಪರಶಿವನ ಪಾದಕಮಲಗಳನ್ನು ಆರಾಧಿಸಿ ಭಜಿಸಿ ಸಕಲ ಶ್ರೇಯಸ್ಸುಗಳನ್ನೂ ಪಡೆದಿರುವರು. ಹೀಗೆ ಶಿವಮಹಿಮೆಯ ಪಾರಮ್ಯವು ಅಪಾರವಾಗಿರುವುದು. ॥೧೧೧॥

ಎಲೈ ದೇವತೆಗಳಿರಾ, ಈ ಪ್ರಕಾರವಾಗಿ ಯಾಜ್ಞವಲ್ಕ್ಯಮುನಿಯು ಹೇಳಿದ ಸೂರ್ಯದೇವನಿಂದ ಪ್ರೋಕ್ತವಾದ ಇತಿಹಾಸಗಳನ್ನು ಕೇಳಿ ಜನಕಮಹಾರಾಜನಿಗೆ ಪರಮಾನಂದವಾಯಿತು. ಬಳಿಕ ಜನಕನು ಭಕ್ತಿಯಿಂದ ಯಾಜ್ಞವಲ್ಕ್ಯನಿಗೆ ನಮಸ್ಕರಿಸಿ ವಿನಯಪೂರ್ವಕವಾಗಿ ಈ ರೀತಿ ಹೇಳಿದನು. ॥೧೧೨॥

ಮುನಿಶ್ರೇಷ್ಠನೇ, ನೀನು ಹೇಳಿದ ಪ್ರಕಾರ ಶಿವಾರ್ಚನೆಯಲ್ಲಿ ನನಗೂ ಅಧಿಕಾರವಿದೆ ಎಂದು ಸಿದ್ಧವಾಗುವುದು. ನಾನೂ ಸಹ ಶಿವಧರ್ಮದೀಕ್ಷಿತನಾಗ

ಸ್ಯಾದಿತ್ಯನ್ಯೈಮಿ ತ್ವರಯಾ ಮಮಾದ್ಯ
ಪಂಚಾಕ್ಷರಂ ಶೈವಮಿಹ ಪ್ರಯಚ್ಛ ॥೧೧೩॥

ಸೇಯಂ ಗಂಗಾ ತುಂಗರಂಗತ್ತರಂಗಾ
ಲಿಂಗಂ ತುಂಗಂ ಶಾಂಗವೋತೇಽಪಿ ಬಿಲ್ವಾಃ ।
ಕಾಲಃ ಪುಣ್ಯಃ ಕಾರ್ತಿಕಃ ಪುಷ್ಯಯುಕ್ತೋ
ಮಾಸಸ್ತೋಮಸ್ತೋಮಪೂಜೋಪಯುಕ್ತಃ ॥೧೧೪॥

ಗುರುರಪಿ ನ ಮಮಾನ್ಯೋ ಮಾನ್ಯಧನ್ಯಾಗ್ರಗಣ್ಯಃ
ತ್ವಮಸಿ ಗುರುರಪಾರಾಸಾರಸಂಸಾರಬಂಧಾತ್ ।
ಕುರು ಕುರು ಕುರು ಮುಕ್ತಂ ಮುಕ್ತಿಲಾಭಾಯ ಶೈವಂ
ದಿಶ ದಿಶ ದಿಶ ಮಹ್ಯಂ ಮಂತ್ರಮಪ್ರಾಪ್ತತಂತ್ರಂ ॥೧೧೫॥

ಬಲ್ಲೆನು. ನನಗೂ ಶಿವಧರ್ಮಗಳನ್ನು ಅನುಷ್ಠಾನಮಾಡಬೇಕೆಂಬ ತೀವ್ರ ಸಂಕಲ್ಪ ವಿದೆ. ಆದುದರಿಂದ ದಯೆಯಿಟ್ಟು ನನಗೆ ಆ ಶಿವಪಂಚಾಕ್ಷರೀಮಹಾಮಂತ್ರವನ್ನು ಉಪದೇಶಿಸು. ಇದಕ್ಕಾಗಿ ನಿನ್ನನ್ನು ಪ್ರಾರ್ಥಿಸುವೆನು. ॥೧೧೩॥

ಈಗ ಮಂತ್ರೋಪದೇಶಕ್ಕೆ ಪ್ರಶಸ್ತವಾದ ದೇಶಕಾಲಗಳು ಸನ್ನಿಹಿತವಾಗಿ ರುವುವು. ಇದೋ ಪುಣ್ಯವಾದ ಗಂಗಾನದಿಯೂ ಶಿವಲಿಂಗವೂ ಬಿಲ್ವವೃಕ್ಷಗಳೂ ಸಮೀಪದಲ್ಲಿಯೇ ಇರುತ್ತವೆ. ಹಾಗೆಯೇ ಪುಣ್ಯತಮವಾದ ಕಾರ್ತಿಕಮಾಸ, ಪುಷ್ಯ ನಕ್ಷತ್ರ, ಮತ್ತು ಸೋಮವಾರ ಇವುಗಳ ಮಹಾಯೋಗವು ಇಂದು ಲಭಿಸಿರುತ್ತದೆ. ಇಂದು ಸೋಮವ್ರತಕ್ಕೆ ಬಹಳ ಪ್ರಶಸ್ತವಾದ ದಿನವಾಗಿರುವುದರಿಂದ ಜಾಗ್ರತೆ ನನಗೆ ಮಂತ್ರವನ್ನು ಉಪದೇಶಿಸು. ॥೧೧೪॥

ನನಗೆ ನಿನ್ನೊಬ್ಬನನ್ನು ಬಿಟ್ಟು ಬೇರೆ ಯಾರೂ ಗುರುವೆನಿಸಲಾರರು. ನೀನೇ ಪರಮಶೈವನಾಗಿ ಧನ್ಯತಮನಾಗಿರುವುದರಿಂದ ನನಗೆ ಗುರುವಾಗಿರುವೆ. ನೀನೇ ನನ್ನನ್ನು ಈ ಅಸಾರವಾದ ಅಪಾರ ಸಂಸಾರ ಬಂಧನದಿಂದ ಮುಕ್ತನನ್ನಾಗಿ ಮಾಡ ಬೇಕು. ನನಗೆ ಬೇರೆ ಯಾವ ಗತಿಯೂ ಇರುವುದಿಲ್ಲ. ಆದುದರಿಂದ ಮೋಕ್ಷಕ್ಕೆ ಮುಖ್ಯಸಾಧನವಾದ ಶಿವಪಂಚಾಕ್ಷರೀ ಮಂತ್ರವನ್ನು ನನಗೆ ಜಾಗ್ರತೆ ಉಪದೇಶ ಮಾಡು. ಆ ಮಂತ್ರ ವಿಧಿಯನ್ನೂ ಮಹಿಮೆಯನ್ನೂ ನಾನು ಈವರೆಗೆ ತಿಳಿದಿರು ವುದಿಲ್ಲ. ಅಂಥ ಮಹಾಮಂತ್ರವನ್ನು ಇಂದು ಉಪದೇಶಿಸು. ॥೧೧೫॥

ಇತಿ ತದ್ವಚನಂ ಶ್ರುತ್ವಾ ಯಾಜ್ಞವಲ್ಕ್ಯೋ ಯಥಾವಿಧಿ ।
ದದೌ ಪಂಚಾಕ್ಷರಂ ತಸ್ಮೈ ಸಕುಟುಂಬಾಯ ಧೀಮತೇ ॥೧೧೬॥

ತತಸ್ತಯಾ ಬಭೌ ದೇವಾಃ ಶುಭಯಾ ಶೈವವಿದ್ಯಯಾ ।
ನವೇಂದುರಿವ ವೃಂದಾರವೃದ್ಧಿಹೇತುಸ್ಸ ಭೂಪತಿಃ ॥೧೧೭॥

ಪಂಚಾಕ್ಷರಜಪಂ ಕುರ್ವನ್ ಕುರ್ವನ್ ಲಿಂಗಾರ್ಚನಂ ಮುಹುಃ ।
ಪಿಬನ್ ಶಿವಕಥಾರೂಪಾಂ ಸುಧಾಂ ಸುಖಮವಾಪ ಸಃ ॥೧೧೮॥

ತಸ್ಮಾದ್ಭವದ್ಭಿರಭಯಾಯ ಶುಭಾಯ ನಿತ್ಯಂ
ಸೇವ್ಯಂ ಮಹೇಶ್ವರಪದಾಂಬುಜಮಾದರೇಣ ॥
ಉಕ್ತಾ ಕಥಾಪಿ ಮುಹುರಾದರತೋಽನುವಾರಂ
ಭಕ್ತ್ಯಾ ಸ್ಮೃತಾಪಿ ಸುಖದಾ ಭವತೀತಿ ಮನ್ಯೇ ॥೧೧೯॥

ಈರೀತಿಯಾದ ಜನಕನ ಪ್ರಾರ್ಥನೆಯನ್ನು ಆಲಿಸಿ ಯಾಜ್ಞವಲ್ಕ್ಯನು ತಥಾಸ್ತು, ಎಂದು ಸಮ್ಮತಿಸಿದನು. ಆನಂತರ ಸಕಲ ಸನ್ನಾಹಗಳನ್ನೂ ಅಣಿಮಾಡಿಕೊಂಡು ವಿಧ್ಯುಕ್ತಪ್ರಕಾರ ಜನಕರಾಜನಿಗೆ ಮತ್ತು ಆತನ ಕುಟುಂಬಕ್ಕೆ ಶಿವಪಂಚಾಕ್ಷರೀ ಮಹಾಮಂತ್ರವನ್ನು ಉಪದೇಶಿಸಿದನು. ||೧೧೬||

ಮಹಾಮಂತ್ರೋಪದೇಶವನ್ನು ಸ್ವೀಕರಿಸಿದ ಬಳಿಕ ಜನಕರಾಜನಿಗೆ ಜ್ಞಾನೋದಯವಾಯಿತು. ಆಗ ಆತನು ಆ ಶೈವವಿದ್ಯೆಯ ಮಹಿಮೆಯಿಂದ ಅತ್ಯಂತ ಉಜ್ವಲವಾಗಿ ಪ್ರಕಾಶಿಸಿದನು. ದಿನೇದಿನೇ ಅಭಿವೃದ್ಧಿಯನ್ನು ಪಡೆಯುವ ಬಾಲಚಂದ್ರನಂತೆ ಜನಕನು ಆಗ ಶೋಭಿಸಿದನು. ||೧೧೭||

ಆ ಮೊದಲುಗೊಂಡು ಸತತವೂ ಜನಕನು ಶಿವಪಂಚಾಕ್ಷರ ಮಂತ್ರವನ್ನೇ ಜಪಿಸುತ್ತಿದ್ದನು. ಕಾಲಕಾಲದಲ್ಲಿ ಶಿವಲಿಂಗಾರ್ಚನೆಯನ್ನು ಮಾಡಿ ರಾಜನು ಪದೇಪದೇ ಅಮೃತತುಲ್ಯವಾದ ಶಿವಕಥೆಯನ್ನು ಶ್ರವಣಮಾಡುತ್ತಾ ಪರಮಾನಂದವನ್ನು ಪಡೆದು ಸುಖಿಯಾಗಿದ್ದನು. ||೧೧೮||

ಎಲೈ ದೇವತೆಗಳಿರಾ ! ಹೀಗೆ ಶಿವಮಹಿಮಾಪಾರಮ್ಯವನ್ನು ವಿವರಿಸುವುದಕ್ಕಾಗಿ ವಿಸ್ತಾರವಾಗಿ ಕಥೆಗಳನ್ನು ಹೇಳಿರುವೆನು. ಇವುಗಳನ್ನು ಚೆನ್ನಾಗಿ ಮನನಮಾಡಿಕೊಂಡು ಶಿವಾರಾಧನೆಯನ್ನು ಮಾಡಿರಿ. ಸಕಲ ದುಃಖಭಯಗಳನ್ನು ಕಳೆದುಕೊಳ್ಳುವುದಕ್ಕೂ ಶ್ರೇಯಸ್ಸನ್ನು ಪಡೆಯುವುದಕ್ಕೂ ಶಿವಪಾದಾರವಿಂದಗಳನ್ನೇ

ಯಃ ಕಂಟಕಾರಿಪ್ರಸವೋಽಪಿ ಲಿಂಗೇ
ನಿಪಾತಿತಸ್ತೇನ ಗತಾಘಸಂಘಃ ॥
ಅಯಂ ಶಿಶುಶ್ಶಂಕರಮಂದಿರಾಯ
ನೇಯೋ ವಿಮಾನೇನ ಮಯಾದ್ಯ ಸದ್ಯಃ ॥೧೨೦॥

॥ ವ್ಯಾಸ ಉವಾಚ ॥

ಇತಿ ತದ್ವಚನಂ ಶ್ರುತ್ವಾ ಪುನರೂಚುಸ್ಸುರಾಸ್ತದಾ ।
ನಂದಿಕೇಶ್ವರಮಾಶ್ಚರ್ಯಕರೈರೇವ ಕರೈರ್ನತಾಃ ॥೧೨೧॥

॥ ದೇವಾ ಊಚುಃ ॥

ಅಯತ್ನಲಭ್ಯಃ ಕಥಮೇತದಾಸೀತ್
ಕೈಲಾಸವಾಸಸ್ಸ ವಿಲಾಸಹೇತುಃ ॥
ಸಾಂಬಸ್ಯ ಸಂಸಾರವಿಮೋಚಕಸ್ಯ
ತತ್ತ್ವಂ ಚ ದುರ್ಜ್ಞೇಯಮಿದಂ ಶಿವಸ್ಯ ॥೧೨೨॥

ಸೇವಿಸಿರಿ. ನಾನು ಹೇಳಿದ ಸಕಲ ಶಿವಕಥೆಗಳನ್ನೂ ಶ್ರದ್ಧೆಯಿಂದ ಸ್ಮರಿಸಿಕೊಳ್ಳುತ್ತಿರಿ. ಇದರಿಂದ ನಿಮಗೆ ಪರಮಸುಖಗಳು ಲಭಿಸುವುವು. ||೧೧೯||

ಹೆಚ್ಚು ಶ್ರಮವಹಿಸಿ ಆರಾಧಿಸುವುದಂತೂ ಇರಲಿ. ಕೇವಲ ಬೃಹತೀಪುಷ್ಪವನ್ನೊಂದನ್ನು ಶಿವಲಿಂಗದ ಮಸ್ತಕದಲ್ಲಿ ಭಕ್ತಿಯಿಂದಿಟ್ಟರೆ ಸಕಲ ಪಾಪರಾಶಿಗಳೂ ನಾಶವಾಗುತ್ತವೆ. ಹೀಗೆ ಶಿವಾರ್ಚನೆ ಎಂದರೆ ಸಾಮಾನ್ಯವಾದುದಲ್ಲ. ಪರಮ ಅದ್ಭುತವಾದದ್ದೆಂದು ತಿಳಿಯಿರಿ. ಎಲೈ ದೇವತೆಗಳಿರಾ, ಈಗ ನಾನು ಶಿವಸಂಕೇತದ ಮೇರೆಗೆ ಈ ಬಾಲಕನನ್ನು ವಿಮಾನದ ಮೂಲಕ ಕೈಲಾಸಕ್ಕೆ ಈ ಕೂಡಲೇ ಕರೆದುಕೊಂಡು ಹೋಗುವೆನು. ||೧೨೦||

ನಂದೀಶ್ವರನು ಈ ಪ್ರಕಾರವಾಗಿ ಹೇಳಲು ದೇವತೆಗಳು ಪುನಃ ಕೈಮುಗಿದು ನಮಸ್ಕರಿಸುತ್ತಾ ಆಶ್ಚರ್ಯಚಕಿತರಾಗಿ ಈ ರೀತಿ ಕೇಳಿದರು. ||೧೨೧||

ಎಲೈ ನಂದಿಕೇಶನೇ, ಇದೇನು ಮಹಾ ಆಶ್ಚರ್ಯ ಸಂಗತಿ? ಪರಮಾನಂದ ಸ್ಥಾನವಾದ ಕೈಲಾಸವು ಮಹಾದುಸ್ಸಾಧ್ಯವಾಗಿರಲು ಹೇಗೆ ಅನಾಯಾಸವಾಗಿ ಕೈಲಾಸವನ್ನು ಪಡೆಯಲು ಅರ್ಹನಾದನು? ಈ ವಿಚಾರವು ನಮಗೆ ಪರಮಾದ್ಭುತ

ಜನ್ಮ ಭಿಲ್ಲಕುಲೇ ತಸ್ಯ ಬಾಲಕಸ್ಯಾತಿಕುತ್ಸಿತೇ ।
ಧರ್ಮವಾರ್ತಾಪರಿಜ್ಞಾನಶೂನ್ಯಾಸ್ತತ್ಕುಲಜಾಃ ಖಲು ॥೧೨೩॥

ಯೋಗಿನೋಽಪಿ ನ ವಿದುಶ್ಶಿವರೂಪಂ
ಸಂತತೇನ ತಪಸಾತಿಕೃಶಾಸ್ತೇ ॥
ತದ್ವಿಚಾರವಿರತಿಃ ಕಥಮಾಸೀ
ದಸ್ಯ ಪುಣ್ಯಮಧಿಕಂ ಕಥಮೇವಂ ॥೧೨೪॥

ದೃಷ್ಟಾ ಪೂರ್ವಂ ತೇನ ಕಾಶೀಪುರೀ ವಾ
ಪೀತಂ ನಾಲ್ಪಂ ಜ್ಞಾನವಾಪೀಜಲಂ ವಾ ।
ಲಿಂಗಂ ತುಂಗಂ ವಿಶ್ವನಾಥಸ್ಯ ಬಿಲ್ವೈಃ
ಉತ್ಫುಲ್ಲೈರ್ವಾ ಪೂಜಿತಂ ತೇನ ಪುಷ್ಪೈಃ ॥೧೨೫॥

ವಾಗಿ ತೋರುತ್ತಿದೆ. ಎಷ್ಟೇ ಯೋಚಿಸಿದರೂ ನಮಗೆ ಇದು ಹೇಗೆ ಸಂಭವಿಸುವುದೆಂಬುದು ತಿಳಿಯುವುದೇ ಇಲ್ಲ. ಸಂಸಾರಬಂಧವಿಮೋಚಕನಾದ ಆ ಪರಮೇಶ್ವರನ ಮಹಿಮೆಯೂ ತತ್ವವೂ ಮಹಾ ಅಗಾಧವಾಗಿರುವಂತೆ, ನಮ್ಮಂಥ ಅಜ್ಞರಿಗೆ ಅದು ಸುಲಭಗೋಚರವೂ ಆಗುವುದಿಲ್ಲ. ॥೧೨೨॥

ಆ ಬಾಲಕನು ಮಹಾನೀಚವಾದ ಭಿಲ್ಲಜಾತಿಯಲ್ಲಿ ಹುಟ್ಟಿರುವನು. ಇವನಂತೂ ಶಿವಾರ್ಚನೆಯನ್ನು ಮಾಡುವುದಿರಲಿ. ಈತನ ವಂಶದಲ್ಲಿ ಯಾರೂ ಧರ್ಮವೆಂಬ ಹೆಸರನ್ನೇ ಕೇಳಿರುವುದಿಲ್ಲ. ಇಂಥ ಪಾಮರವಾದ ಕುಲದಲ್ಲಿ ಇವನು ಹುಟ್ಟಿರಲು ಕೈಲಾಸವಾಸಕ್ಕೆ ಹೇಗೆ ಯೋಗ್ಯನು ? ॥೧೨೩॥

ಮಹಾ ಮಹಾ ಯೋಗಿಗಳು ಶಿವಸ್ವರೂಪವನ್ನು ತಿಳಿದುಕೊಳ್ಳಬೇಕೆಂದು ಸಂತತವೂ ಘನಘೋರವಾದ ತಪಸ್ಸನ್ನು ಮಾಡುತ್ತಿರುವರು. ಮಹಾಕಾಯಕ್ಲೇಶವನ್ನು ಸಹಿಸುವರು. ಹಾಗಿದ್ದರೂ ಅವರಿಗೆ ಆ ಶಿವತತ್ವವು ದುರ್ಲಭವಾಗಿರಲು ಈ ಅಲ್ಪನಾದ ಬಾಲಕನಿಗೆ ಆ ಶಿವತತ್ವವೆಂದಾದರೂ ತಿಳಿಯುವ ಸಂಭವವಿದೆಯೇ? ಹಾಗಿಲ್ಲದೇ ಇದ್ದರೆ ಕೈಲಾಸವಾಸವು ಲಭಿಸುವಂಥ ಘನತರವಾದ ಪುಣ್ಯವಾದರೂ ಈತನಿಗೆ ಯಾವುದಿದೆ ? ॥೧೨೪॥

ಈ ಅಜ್ಞನಾದ ಬಾಲಕನು ಈ ಮೊದಲು ಒಂದು ಸಲವೂ ತತ್ವಜ್ಞಾನವೆಂಬ ಜಲಕಣವನ್ನೂ ಸಹ ಪಾನಮಾಡಿರಲಾರನು. ಅಂಥ ಪಾರಮಾರ್ಥಿಕಜ್ಞಾನ

ನ ಚಾವಿಮುಕ್ತೇಶ್ವರಲಿಂಗಪೂಜಾ
ಕೃತಾ ಕೃತಾಂತಾಂತಕತೋಷಹೇತುಃ ।
ನ ಚಾನ್ನಪೂರ್ಣಾಪಿ ವಿಲೋಕಿತಾ ಸಾ
ನ ಚಾರ್ಚಿತಂ ತತ್ಪದಪಂಕಜಂ ವಾ ॥೧೨೬॥

ನ ಢುಂಢಿರಾಜಾಂಘ್ರಿಸರೋಜಪೂಜಾ
ಪ್ರತ್ಯೂಹನಾಶಾಯ ಕೃತಾ ಚತುರ್ಥ್ಯಾಂ ।
ದೂರ್ವಾಂಕುರೈರ್ವಾ ಘೃತಲಡ್ಡುಕೈರ್ವಾ
ನ ಪೂರಿಕೈರ್ವಾಪಿ ನ ಪುಂಡರೀಕೈಃ ॥೧೨೭॥

ನ ಕ್ಷಿಪ್ರವಿಘ್ನೇಶ್ವರಪಾದಪೂಜಾ
ಕೃತಾ ಪ್ರಸೂನೈರ್ನವಬಿಲ್ವಪತ್ರೈಃ ।
ದ್ವಿತ್ರೈಃ ಪವಿತ್ರೈರ್ನ ಕೃತಾತಿಭಕ್ತ್ಯಾ
ವೀರೇಶ್ವರಸ್ಯಾರ್ಚನಮದ್ಯ ತೇನ ॥೧೨೮॥

ವಿಚಾರವಂತೂ ದೂರವಿರಲಿ. ಈತನು ಎಂದು ಕಾಶೀಕ್ಷೇತ್ರದ ಯಾತ್ರೆಯನ್ನು ಮಾಡಿರುವನು? ಅಥವಾ ಯಾವಾಗ ಆ ಶ್ರೀವಿಶ್ವನಾಥ ಲಿಂಗಕ್ಕೆ ಬಿಲ್ವದಳಗಳಿಂದಾಗಲಿ ಸುಂದರವಾಗಿರುವ ಪುಷ್ಪಗಳಿಂದಾಗಲಿ ಈತನು ಪೂಜಿಸಿರುವನು? ಅಂಥ ಪುಣ್ಯಸಂಗ್ರಹವಿಲ್ಲದೇ ಈತನು ಕೈಲಾಸಕ್ಕೆ ಹೇಗೆ ಯೋಗ್ಯನಾಗುವನು? ॥೧೨೫॥

ಮೃತ್ಯುಂಜಯನ ಪ್ರೀತಿಗೆ ಕಾರಣವಾದ ಅವಿಮುಕ್ತೇಶ್ವರ ಲಿಂಗಪೂಜೆಯನ್ನು ಎಂದೂ ಮಾಡಿರುವುದಿಲ್ಲ. ಅಥವಾ ಜಗನ್ಮಾತೆಯಾದ ಅನ್ನಪೂರ್ಣೆಯ ದರ್ಶನವನ್ನಾಗಲೀ ಮತ್ತು ಆ ಮಹಾದೇವಿಯ ಪಾದಪಂಕಜಗಳ ಪೂಜೆಯನ್ನಾಗಲಿ ಈತನು ನಡೆಸಿಲ್ಲ. ॥೧೨೬॥

ಈ ಬಾಲಕನು ಢುಂಢಿರಾಜನೆಂದು ದಿವ್ಯನಾಮವನ್ನು ಪಡೆದುಕೊಂಡಿರುವ ವಿಘ್ನೇಶ್ವರನನ್ನು ಯಾವ ಚತುರ್ಥೀತಿಥಿಯದಿನವೂ ಪೂಜಿಸಿ ಸಕಲ ಸಂಕಷ್ಟಗಳನ್ನೂ ನಾಶಮಾಡುವ ಆ ಗಣಪತಿಗೆ ದೂರ್ವಾಂಕುರಗಳಿಂದಾಗಲೀ ಕಮಲಗಳಿಂದಾಗಲೀ ಅರ್ಚಿಸಿಲ್ಲ. ಅಥವಾ ಕಡುಬು, ಪೂರಿ ಮುಂತಾದ ಭಕ್ಷ್ಯಭೋಜ್ಯಗಳನ್ನೂ ಆ ಗಜಾನನನಿಗೆ ಈತನು ಎಂದೂ ನೈವೇದ್ಯಮಾಡಿರುವುದಿಲ್ಲ. ॥೧೨೭॥

ಈತನು ಒಂದು ದಿನವೂ ಕ್ಷಿಪ್ರವಿಘ್ನೇಶ್ವರನನ್ನು ಎರಡೋ ಅಥವಾ

ವಿಕಟಾಚರಣಾರವಿಂದಯೋ
ರರವಿಂದೈರ್ನವಬಿಲ್ವಪಲ್ಲವೈಃ ।
ನ ಕೃತಂ ಖಲು ಪೂಜನಂ ಮುದಾ
ನ ಚ ತೇನ ಪ್ರಣತಾಪಿ ಸಾ ಶಿವಾ ॥೧೨೯॥

ಸೇನಾವಿನಾಯಕಃ ಪುಷ್ಪೈಶ್ಚಿಂತಾಮಣಿವಿನಾಯಕಃ ।
ಮಂಗಲೇಶೋ ನಾರ್ಚಿತೋಽಪಿ ಯಮೇಶೋ ನಾರ್ಚಿತಸ್ತಥಾ ॥೧೩೦॥

ಬೃಹಸ್ಪತೀಶ್ವರಸ್ಯಾಪಿ ವಿಶ್ವಕರ್ಮೇಶ್ವರಸ್ಯ ವಾ ।
ವಿಶ್ವೇಶ್ವರಸ್ಯ ವಾ ಪೂಜಾ ನ ಕೃತಾ ಬಿಲ್ವಪಲ್ಲವೈಃ ॥೧೩೧॥

ಚಂದ್ರೇಶ್ವರೋ ನಾರ್ಚಿತ ಏವ ತೇನ
ಸಿದ್ಧೇಶ್ವರೀ ಸಾ ನ ಸಮರ್ಚಿತಾಪಿ ।
ಆಮರ್ದಕೇಶೋ ನ ಸಮರ್ಚಿತೋಽಪಿ
ನ ಪಾಪಭಕ್ಷೋಽಪಿ ಸಮರ್ಚಿತೋಽಭೂತ್ ॥೧೩೨॥

ಮೂರೋ ಬಿಲ್ವಕುಸುಮಾದಿಗಳಿಂದ ಪೂಜಿಸಿಲ್ಲ. ಅಥವಾ ವೀರೇಶ್ವರಸ್ವಾಮಿಯನ್ನು ಸಹ ಎಂದೂ ಈತನು ಭಕ್ತಿಯಿಂದ ಅರ್ಚಿಸಿರುವುದಿಲ್ಲ. ||೧೨೮||

ಈ ಬಾಲಕನು ವಿಕಟಾ ಎಂಬ ಮಹಾದೇವಿಗೆ ಒಂದು ದಿನವೂ ಕಮಲ ಅಥವಾ ಬಿಲ್ವಪತ್ರೆ ಮುಂತಾದುವುಗಳಿಂದ ಭಕ್ತಿಪುರಸ್ಸರವಾಗಿ ಪೂಜಿಸಿರುವುದಿಲ್ಲ. ಅಥವಾ ಭಕ್ತಿಯಿಂದ ವಿಕಟಾದೇವಿಯನ್ನು ದರ್ಶನ ಮತ್ತು ನಮಸ್ಕಾರ ಇವುಗಳಿಂದ ತೃಪ್ತಿಪಡಿಸಲಿಲ್ಲ. ||೧೨೯||

ಶ್ರೀ ಕಾಶೀಕ್ಷೇತ್ರದಲ್ಲಿ ಸೇನಾವಿನಾಯಕಸ್ವಾಮಿ, ಚಿಂತಾಮಣಿ ವಿನಾಯಕ, ಮಂಗಳೇಶ್ವರ, ಯಮೇಶ್ವರ, ಬೃಹಸ್ಪತೀಶ್ವರ, ವಿಶ್ವಕರ್ಮೇಶ್ವರ, ವಿಶ್ವೇಶ್ವರ ಎಂಬ ಅಭಿಧಾನವುಳ್ಳ ಅನೇಕ ದೇವರುಗಳಿರುವರು. ಈ ಬಾಲಕನು ಅವರಲ್ಲಿ ಒಬ್ಬರನ್ನೂ ಪೂಜಿಸಿರುವುದಿಲ್ಲ. ||೧೩೦-೧೩೧||

ಕಾಶಿಯಲ್ಲಿ ಅನೇಕ ಶಿವದೇವಾಲಯಗಳಿರುವುವು. ಅವುಗಳಲ್ಲಿ ಚಂದ್ರೇಶ್ವರ, ಸಿದ್ಧೇಶ್ವರ, ಆಮರ್ದಕೇಶ್ವರ, ಪಾಪಭಕ್ಷೇಶ್ವರ, ಶ್ರೀಕಾಲಭೈರವಸ್ವಾಮಿ, ಎಂಬ ದೇವರುಗಳಿರುವರಲ್ಲದೇ ಬೇರೆ ಅನೇಕ ಶಿವಲಿಂಗಗಳೂ ಇರುತ್ತವೆ. ಆದರೆ ಈ

ಶ್ರೀಕಾಲಭೈರವಪದಾಂಬುಜಪೂಜನಂ ಚ
ಬಿಲ್ವಾದಿಭಿರ್ನ ಕೃತಮೇವ ಕದಾಪಿ ತೇನ ॥
ಕಾಶೀಪುರಾಮಿತಶಿವಾಲಯಲಿಂಗಪೂಜಾ
ಸಂಜಾತಪುಣ್ಯಫಲಮಸ್ಯಮಲಂ ಶ್ರುತಂ ನು ॥೧೩೩॥

ಭವದಾಗಮನಾಜ್ಞಾತಂ ರೂಪಮಸ್ಯ ವಿಶೇಷತಃ ।
ಅನ್ಯಥಾ ಪೂಜ್ಯತಾಭಕ್ತಿರೀದೃಶೇಷು ಕಥಂ ಭವೇತ್ ॥೧೩೪॥

ಮಹೇಶಾರ್ಚಕಚಿಹ್ನಾನಿ ದುರ್ಜ್ಞೇಯಾನ್ಯಪಿ ಲೇಶತಃ ।
ಜ್ಞಾಯಂತೇ ಕಾನಿ ಚಿತ್ತೇಷು ತಾನಿ ಸಂತ್ಯೇವ ನೇದೃಶೇ ॥೧೩೫॥

ಏವಂ ಸತಿ ಕಥಂ ವಾ ಸ್ಯಾದಧಿಕಾರಸ್ಯ ಲಕ್ಷಣಂ ।
ಅಲಮೇವಾಧಿಕಾರೇಣ ಜೀವನೇನಾಪ್ಯಲಂ ಖಲು ॥೧೩೬॥

ಬಾಲಕನು ಎಂದೂ ಬಿಲ್ವಾದಿಗಳಿಂದ ಶಿವಾರ್ಚನೆಯ ಪ್ರಯತ್ನವನ್ನು ಮಾಡಿರುವುದಿಲ್ಲ. ಶಿವಾರ್ಚನೆಯನ್ನು ಮಾಡದಿರುವುದರಿಂದ ಈತನು ಪವಿತ್ರಾತ್ಮನೂ ಆಗಿಲ್ಲ. ಇವನಲ್ಲಿ ಪುಣ್ಯಲೇಶವೂ ಕಾಣುವುದಿಲ್ಲ. ॥೧೩೨-೧೩೩॥

ಈವರೆಗೂ ನಾವು ಈ ಬಾಲಕನ ಕಡೆಗೆ ದೃಷ್ಟಿಯನ್ನೇ ಇಟ್ಟಿರಲಿಲ್ಲ. ಇಂದು ನೀನು ಬಂದಿರುವುದರಿಂದ ಈತನನ್ನು ನೋಡಬೇಕಾಯಿತು. ಇಂಥ ಭಿಲ್ಲನಲ್ಲಿ ಯಾರಿಗೆ ತಾನೇ ಆದರವಾಗಲಿ ಭಕ್ತಿಯಾಗಲಿ ಪೂಜ್ಯತಾಬುದ್ಧಿಯಾಗಲಿ ಉಂಟಾದೀತು ? ನೋಡಿದರೆ ಈತನು ಪುಣ್ಯಾತ್ಮನಂತೆ ತೋರುತ್ತಿರುವನೇ ? ॥೧೩೪॥

ಈತನಲ್ಲಿ ಸೂಕ್ಷ್ಮದೃಷ್ಟಿಯಿಂದ ನೋಡಿದರೂ ಒಂದು ಲೇಶವೂ ಶಿವಭಕ್ತಿ ಚಿಹ್ನೆಯಾಗಲಿ ಶಿವಭಕ್ತಲಕ್ಷಣವಾಗಲಿ ಕಂಡುಬರುವುದಿಲ್ಲ. ಇಂಥ ಭಿಲ್ಲನಂಥ ಪಾಮರನಲ್ಲಿ ಧರ್ಮವಾಗಲಿ ಧಾರ್ಮಿಕಭಾವನೆಯಾಗಲಿ ಕಾಣುವುದೇ ? ॥೧೩೫॥

ಹೀಗಿದ್ದರೂ ಈ ಬಾಲಕನು ಕೈಲಾಸವಾಸಕ್ಕೆ ಯೋಗ್ಯನಾಗಿದ್ದ ಪಕ್ಷದಲ್ಲಿ ಇನ್ನು ಇಂತಹ ಕರ್ಮಗಳಿಗೂ ಸ್ಥಾನಗಳಿಗೂ ಇಂತಹವರೇ ಅಧಿಕಾರಿಗಳು ಎಂಬ ವ್ಯವಸ್ಥೆಯು ಎಲ್ಲಿ ಬಂದೀತು ? ಆ ವ್ಯವಸ್ಥೆಯಾದರೂ ಹೇಗೆ ಆದೀತು ? ಒಂದು ವೇಳೆ ಇಷ್ಟು ವ್ಯವಸ್ಥೆಗಳು ಸಿದ್ಧವಾಗಿದ್ದರೂ ಇಂತಹವರು ಸದ್ಗತಿಯನ್ನು ಪಡೆಯು

ಯೋಗಾಭ್ಯಾಸೇನಾಪಿ ಸರ್ವಜ್ಞತಾ ನ
ಸರ್ವಜ್ಞತ್ವಂ ದುರ್ಲಭಂ ಮಾದೃಶೇಷು ।
ತಸ್ಮಾದಸ್ಮಿಂಸ್ತಾವದಸ್ಮಾಕಮಿಚ್ಛಾ
ಯಚ್ಛಾನ್ಯಸ್ಮೈ ಸ್ವಚ್ಛಮುಚ್ಚಾಧಿಕಾರಂ ॥೧೩೭॥

॥ ವ್ಯಾಸ ಉವಾಚ ॥

ಇತ್ಯುಕ್ತ್ವಾ ಪ್ರಣತಾಸ್ಸರ್ವೇ ಮುದ್ರಿಕಾಂ ವಿನಿವೇದ್ಯ ತೇ ।
ತತಸ್ತಾನಾಹ ನಂದೀಶೋ ಮಹೇಶ್ವರಮನುಸ್ಮರನ್ ॥೧೩೮॥

ಬುದ್ಧ್ಯಾ ಜ್ಞೇಯಂ ಶಾಂಭವಂ ಚಿಹ್ನಮಾದೌ
ಪಶ್ಚಾತ್ಕೃತ್ಯಂ ಕಾರ್ಯಮನ್ಯದ್ಭವದ್ಭಿಃ ।
ಧರ್ಮಾರ್ಥಧರ್ಮಜ್ಞಾನಸಿದ್ಧಿಃ ಫಲಂ ಕಿಂ
ವಿದ್ಯಾನಾಂ ವಾ ಸ್ವಾಶ್ರಿತಾನಾಂ ವಿಶೇಷಾತ್ ॥೧೩೯॥

ವುದಾದರೆ ಆ ಅಧಿಕಾರ ನಿರ್ಣಯವಾದರೂ ಏತಕ್ಕೆ? ಅದರಿಂದ ಏನು ಪ್ರಯೋಜನ? ಹೀಗೆಯೇ ಈ ಜಾತಿ, ಕುಲ, ಗೋತ್ರ, ಜನ್ಮ ಮುಂತಾದ ತಾರತಮ್ಯಗಳಿಂದ ತಾನೆ ಪ್ರಯೋಜನವೇನು? ॥೧೩೬॥

ನಮಗೆ ಈ ಪ್ರಪಂಚದ ಸೂಕ್ಷ್ಮತತ್ತ್ವಗಳೊಂದೂ ತಿಳಿಯದಾಗಿದೆ. ನಾವು ಎಷ್ಟೇ ಯೋಗಾಭ್ಯಾಸವನ್ನು ಯೋಗಸಿದ್ಧಿಯನ್ನು ಪಡೆದಿದ್ದರೂ ಎಲ್ಲಾ ವಿಚಾರಗಳನ್ನೂ ನಮ್ಮ ಸಾಮರ್ಥ್ಯದಿಂದ ತಿಳಿದುಕೊಳ್ಳುವುದು ಅಸಾಧ್ಯವಾಗಿರುವುದರಿಂದ ಆ ಸರ್ವಜ್ಞತ್ವವನ್ನು ನಮ್ಮಂತಹವರು ಪಡೆಯಲಾರರೆಂದು ನಮಗೆ ಅತ್ಯಂತ ನಿರುತ್ಸಾಹವಾಗಿದೆ. ಪರಿಸ್ಥಿತಿಯು ಇಷ್ಟು ಬಿಕ್ಕಟ್ಟಿನದಾಗಿರುವುದರಿಂದ ನಮ್ಮ ನಮ್ಮ ಅಧಿಕಾರವನ್ನು ನಡೆಸಲು ನಮ್ಮಿಂದ ಸಾಧ್ಯವಿಲ್ಲ. ಆದುದರಿಂದ ಈ ಅಧಿಕಾರಗಳನ್ನು ಬೇರೆ ಯಾರಿಗಾದರೂ ಒಪ್ಪಿಸು. ॥೧೩೭॥

ಈರೀತಿಯಾಗಿ ಹೇಳಿ ದೇವತೆಗಳೆಲ್ಲರೂ ತಮ್ಮ ತಮ್ಮ ಅಧಿಕಾರಮುದ್ರಿಕೆಗಳನ್ನು ಅರ್ಪಿಸಿ ನಮಸ್ಕರಿಸಿದರು. ಆಗ ನಂದಿಕೇಶನು ಅವರ ಸಂದೇಹವನ್ನು ನಿವಾರಣೆ ಮಾಡಲು ಶಿವನನ್ನೇ ಧ್ಯಾನಿಸುತ್ತಾ ಈ ರೀತಿ ಹೇಳಿದನು. ॥೧೩೮॥

ಎಲೈ ದೇವತೆಗಳಿರಾ! ಇಂತಹವನೇ ಶಿವಭಕ್ತನೆಂಬುದು ಹೊರಗಿನ ಆಡಂಬರದಿಂದ ನಿರ್ಣಯವಾಗಲಾರದು. ಶೈವಲಕ್ಷಣವನ್ನು ಕೇವಲ ಬುದ್ಧಿಶಕ್ತಿಯಿಂದ

ಮಹೇಶ್ವರಶ್ಚೇದಧಿಕಾರಮನ್ಯಂ
ಪ್ರದಾತುಮಿಚ್ಛತ್ಯತಿಶೋಭನೇಚ್ಛಃ ।
ತದಾ ಪ್ರಸಂಗೋಽಯಮಪೀತಿ ಮನ್ಯೇ
ಮಹೇಶ್ವರಸ್ತಾವದತಿಸ್ವತಂತ್ರಃ ॥೧೪೦॥

ಮಹೇಶ್ವರಾಜ್ಞಾವಶಗಾಶ್ಚ ಯೂಯಂ
ಸಂಪ್ರಾರ್ಥನೀಯಂ ತದಿದಂ ಹಿ ಭಾಗ್ಯಂ ।
ಏತತ್ಪರಿತ್ಯಾಗಮತಃ ಕುಬುದ್ಧ್ಯಾ
ಮೋಹಾದಭೂದೇವಮಿತಿ ಪ್ರಬುದ್ಧಂ ॥೧೪೧॥

ಪರೀಕ್ಷಿಸಿ ತಿಳಿದುಕೊಳ್ಳಬೇಕು. ಅಂತಃಕರಣದಲ್ಲಿ ಭಕ್ತಿಭಾವನೆಯು ತುಂಬಿಕೊಂಡಿದ್ದರೆ ಅದಕ್ಕೆ ಅನುಗುಣವಾಗಿ ಕರ್ಮಕ್ರಿಯೆಗಳೂ ನಡೆಯುವುವೆಂದು ತಿಳಿಯಿರಿ. ನೀವೆಲ್ಲರೂ ಇಷ್ಟು ವಿದ್ಯಾವಂತರಾಗಿದ್ದರೂ ಇಂಥ ಧರ್ಮಾಧರ್ಮ ಸೂಕ್ಷ್ಮವನ್ನು ತಿಳಿಯಲಾರಿರಾ? ವಿದ್ಯೆಗೆ ಈ ಸೂಕ್ಷ್ಮವಿಚಾರ ನಿರ್ಣಯವೇ ಫಲವಾಗಿರುತ್ತದೆಯಷ್ಟೆ. ಈ ವಿಚಾರ ವೈಶಿಷ್ಟ್ಯಗಳ ಕಡೆಗೆ ನೀವು ವಿಶೇಷವಾಗಿ ಗಮನಕೊಡಿರಿ. ||೧೩೯||

ನೀವು ಹೀಗೆ ನಿಮ್ಮ ನಿಮ್ಮ ಅಧಿಕಾರ ವಿಷಯದಲ್ಲಿ ಅಸ್ವಾರಸ್ಯವನ್ನು ತಾಳಬಾರದು. ಪರಮೇಶ್ವರನು ಸರ್ವಥಾ ಸರ್ವಸ್ವತಂತ್ರನಾಗಿರುವನೆಂಬುದನ್ನು ಸ್ಮರಿಸಿಕೊಳ್ಳಿರಿ. ಆದುದರಿಂದ ಆಯಾಯಾ ಪ್ರಸಂಗವಿಶೇಷದಲ್ಲಿ ಒಬ್ಬೊಬ್ಬರಿಗೆ ವಿಶೇಷವಾದ ಅಧಿಕಾರವನ್ನು ಕೊಡುವನು. ಅಧಿಕಾರಪ್ರದಾನಮಾಡುವ ವಿಷಯದಲ್ಲಿ ಆತನು ಸತ್ಯಸಂಕಲ್ಪನೂ ಶುಭಸಂಕಲ್ಪನೂ ಆಗಿರುವನು. ಆದುದರಿಂದಲೇ ಈ ಬಾಲಕನಿಗೆ ಇಂಥ ವಿಶೇಷ ಅಧಿಕಾರವು ಪ್ರಾಪ್ತವಾಗಿದೆ ಎಂದು ಭಾವಿಸಿರಿ. ||೧೪೦||

ನಿಮಗೆ ಯಾವ ಸ್ವಾತಂತ್ರ್ಯವೂ ಇರುವುದಿಲ್ಲ. ನೀವೆಲ್ಲರೂ ಕೇವಲ ಶಿವಾಜ್ಞೆಗೆ ಪರತಂತ್ರರಾಗಿರುವಿರಿ. ಆತನ ಸಂಕೇತದಂತೆ ನೀವು ನಡೆಯುವಿರಿ. ಆದುದರಿಂದ ನೀವು ಆ ಪರಮೇಶ್ವರನ ಸುಪ್ರೀತಿಯನ್ನು ಪ್ರಾರ್ಥಿಸಬೇಕು. ಅವನು ಅನುಗ್ರಹಿಸಿದ ಅಧಿಕಾರವನ್ನು ಮೌಢ್ಯದಿಂದ ಪರಿತ್ಯಾಗಮಾಡಕೂಡದು. ದುರ್ಬುದ್ಧಿಯಿಂದ ಎಲ್ಲಿಯಾದರೂ ಅಧಿಕಾರತ್ಯಾಗಮಾಡಿದರೆ ಅಪಾಯವೇ ಸಂಭವಿಸುವುದು. ಆದುದರಿಂದ ನಿಮ್ಮ ನಿಮ್ಮ ಅಧಿಕಾರವನ್ನು ಶ್ರದ್ಧೆಯಿಂದ ಪಾಲಿಸಿರಿ. ಇಂಥ ಅಧಿಕಾರಗಳು

ಇತ್ಯುಕ್ತಾಸ್ತೇ ಸುರಾಸ್ಸರ್ವೇ ನಂದಿಕೇಶೇನ ಧೀಮತಾ ।
ತದಾಜ್ಞಾಂ ಶಿರಸಾ ಧೃತ್ವಾ ಕೃತಾಂಜಲಿಪುಟಾಃ ಸ್ಥಿತಾಃ ॥೧೪೨॥

ತತಃ ಪರಂ ತೈಃ ಪ್ರಣತೋಽತಿಭಕ್ತ್ಯಾ
ಸ ನಂದಿಕೇಶೋಽಪಿ ಚತುರ್ಮುಖಾದ್ಯೈಃ ।
ವಿಮಾನಮಾರುಹ್ಯ ಯುಯೌ ಗೃಹೀತ್ವಾ
ತಂ ಬಾಲಕಂ ಶಂಕರಮಂದಿರಾಯ ॥೧೪೩॥

ಗಾಣಾಪತ್ಯಂ ದದೌ ತಸ್ಮೈ ಬಾಲಕಾಯ ಕೃಪಾನಿಧಿಃ ।
ತತ್ಪಿತ್ರೇ ಪ್ರಾಜ್ಯರಾಜ್ಯಾನಿ ದದೌ ಪೂಜಾಮನುಸ್ಮರನ್ ॥೧೪೪॥

ತಸ್ಮಾದಪಾರಕರುಣಾರಸಸಾಗರಸ್ಯ
ವಿಶ್ವೇಶ್ವರಸ್ಯ ಮಹಿಮಾ ಸ ಮಹಾನತೋ ಮೇ ।

ನಿಮಗೆ ಲಭಿಸಿ ಪರಮೇಶ್ವರನ ಸುಪ್ರೀತಿಗೆ ನೀವು ಪಾತ್ರರಾಗಿರುವುದು ನಿಮ್ಮ ಭಾಗ್ಯವೆಂದು ತಿಳಿಯಿರಿ. ||೧೪೧||

ಈರೀತಿ ನಂದಿಕೇಶನು ಬುದ್ಧಿವಾದಪೂರ್ವಕವಾಗಿ ಸಮಾಧಾನ ಹೇಳಲು ದೇವತೆಗಳಿಗೆ ಆಗ ಜ್ಞಾನೋದಯವಾಯಿತು. ಆಗ ಅವರು ಅಪ್ಪಣೆ ಆದಂತೆ ಆಗಲಿ ಎಂದು ಹೇಳಿ ಮತ್ತೆ ಸಾಷ್ಟಾಂಗ ನಮಸ್ಕಾರ ಮಾಡಿ ನಿಂತರು. ||೧೪೨||

ಬ್ರಹ್ಮನೇ ಮೊದಲಾದ ಸಮಸ್ತ ದೇವತೆಗಳೂ ಅತ್ಯಾದರಪೂರ್ವಕವಾಗಿ ನಿನ್ನ ಆಜ್ಞೆಯನ್ನು ಶಿರಸಾವಹಿಸಿದ್ದೇವೆ ಎಂದು ಹೇಳಿ ಅತ್ಯಂತ ಭಕ್ತಿಯಿಂದ ನಂದಿಕೇಶನಿಗೆ ನಮಸ್ಕರಿಸಿದ ಬಳಿಕ ನಂದೀಶನು, ಆ ಭಿಲ್ಲಬಾಲಕನನ್ನು ವಿಮಾನದಮೇಲೆ ಕೂರಿಸಿಕೊಂಡು ಕೈಲಾಸಕ್ಕೆ ತೆರಳಿದನು. ||೧೪೩||

ನಂದಿಕೇಶನು ಕೈಲಾಸಕ್ಕೆ ಸೇರಿದ ಬಳಿಕ ಆ ಭಿಲ್ಲಬಾಲಕನಿಗೆ ಅನೇಕ ಪರಿವಾರ ಗಣಗಳ ಮೇಲಿನ ಆಧಿಪತ್ಯವನ್ನು ಕೊಟ್ಟನು. ಅಲ್ಲದೇ ಆ ಬಾಲಕನ ತಂದೆಗೆ ಉತ್ತಮೋತ್ತಮ ರಾಜ್ಯವನ್ನೂ ಅನುಗ್ರಹಿಸಿದನು. ನಂದಿಕೇಶನು ಅವರ ಪೂಜೆ, ಭಕ್ತಿ, ಇವುಗಳಿಂದ ಸುಪ್ರೀತನಾಗಿದ್ದನು. ||೧೪೪||

ಪರಮೇಶ್ವರನು ಅಪಾರಕರುಣಾಸಿಧಿಯಾಗಿರುವನು. ಹಾಗೆಯೇ ಆ ವಿಶ್ವೇಶ್ವರನ ಮಹಿಮೆಯೂ ಅನಂತವಾಗಿರುತ್ತದೆ. ಆದರಿಂದಲೇ ಆ ಮಹಿಮೆಯು

ತದ್ವರ್ಣನಾಯ ಸಹನಾ ನ ಮನಃ ಪ್ರವೃತ್ತಂ
ನಿಶ್ಶೇಷತದ್ಗುಣವಿಶೇಷಣ ವರ್ಣನಾಯ ॥೧೪೫॥

ಚಿತ್ತಂ ಶಂಕರಸದ್ಗುಣಾರ್ಣವಲಸತ್ಕಲ್ಲೋಲಮಾಲಾಸ್ಫುರತ್
ಕೋಟ್ಯಂಶಾಂಶವಿಶೇಷಭೂರಿಮಹಿಮಾ ಸಂದೋಹಮಾನಂದದಂ।
ಸ್ಮೃತ್ವಾಪ್ಯಂತಕಭೀತಿಮಾತ್ರರಹಿತಂ ಪಾಪಾಬ್ಧಿಸಂಶೋಷಣಂ
ಮತ್ವಾ ತಿಷ್ಠತಿ ನೀಲಕಂಠಚರಣಾಂಭೋಜಾರ್ಚನಾತ್ಯಾದರಂ ॥೧೪೬॥

ಭೂತ್ಯಾ ಸಂವಲಯನ್ ಲಲಾಟಮಸಕೃದ್ರುದ್ರಾಕ್ಷಮಾಲಾಂ ವಹನ್
ತುಂಗಂ ಲಿಂಗಮುಪಸ್ಪೃಶನ್ನಭಿನವೈರ್ಬಿಲ್ವೀದಳೈರರ್ಚಯನ್।
ವಾರಂ ವಾರಮುಮಾಮನೋಹರಹರಾಪಾರಸ್ವರೂಪಂ ಸ್ಮರನ್
ಕುರ್ವನ್ ಪಾತಕಪಾವಕಾಚಲಲಯಂ ಶೈವಂ ಶಿವಂ ವಾಂಛತಿ ॥೧೪೭॥

ವರ್ಣನೆಯನ್ನು ಧೈರ್ಯದಿಂದ ಸಂಪೂರ್ಣಗೊಳಿಸಲು ಸಾಧ್ಯವಿಲ್ಲದಿದ್ದರೂ ಅತ್ಯಂತಾನಂದಪುರಸ್ಸರವಾಗಿ ವಿಶೇಷಗುಣವರ್ಣನೆಯನ್ನು ಮಾಡಲು ಮನಸ್ಸು ಅತ್ಯಂತ ಕುತೂಹಲದಿಂದ ಪ್ರವರ್ತಿಸುತ್ತಿದೆ. ॥೧೪೫॥

ಶಂಕರನು ಅನಂತಪರಿಪೂರ್ಣನಾಗಿದ್ದಾನೆ. ಆತನಲ್ಲಿ ಸದ್ಗುಣಗಳು ಮಹಾಸಾಗರದಂತೆ ತುಂಬಿಕೊಂಡು ಗಂಭೀರವಾಗಿರುತ್ತವೆ. ಅಂಥ ಸದ್ಗುಣಸಮುದ್ರದಲ್ಲಿ ಮಹಿಮೆಗಳೆಂಬ ತರಂಗಗಳು ಏಳುತ್ತಿರುತ್ತವೆ. ಆ ಮಹಿಮಾತರಂಗಗಳಲ್ಲಿನ ಕೋಟಿಕೋಟಿಭಾಗದ ಒಂದು ಕಣಲೇಶವನ್ನು ನಾವು ಪರಾಮರ್ಶಿಸಿದರೂ ನಮ್ಮ ಮನಸ್ಸು ಆನಂದಸಾಗರದಲ್ಲಿ ಓಲಾಡುವುದು. ಅಂಥ ಮಹಿಮೆಯನ್ನು ಧ್ಯಾನಿಸಿದರೆ ಸಕಲ ಪಾಪಸಾಗರವೂ ಬತ್ತುವುದಲ್ಲದೇ ಮೃತ್ಯುಭಯವೂ ತೊಲಗುವುದು. ಆದುದರಿಂದ ಈ ತತ್ವವನ್ನು ತಿಳಿದುಕೊಂಡು ಆ ನೀಲಕಂಠನ ಪಾದಕಮಲಗಳನ್ನೇ ಸರ್ವದಾ ಅತ್ಯಂತ ಭಕ್ತಿಪೂರ್ವಕವಾಗಿ ಆರಾಧಿಸಬೇಕು. ॥೧೪೬॥

ಯಾವನು ಮಹಾಪಾಪಗಳೆಂಬ ಅಗ್ನಿರಾಶಿಯನ್ನು ನಾಶಪಡಿಸಿಕೊಳ್ಳಬೇಕೆಂದು ಅಪೇಕ್ಷಿಸುವನೋ, ಮತ್ತು ಶಿವಸಾಕ್ಷಾತ್ಕಾರವನ್ನು ಬಯಸುವನೋ, ಅವನು ಅಂಗಾಂಗಗಳನ್ನು ಮತ್ತು ಲಲಾಟಪ್ರದೇಶವನ್ನು ಭಸ್ಮದಿಂದ ಲೇಪನಮಾಡಿಕೊಳ್ಳಬೇಕು. ರುದ್ರಾಕ್ಷಮಾಲೆಗಳನ್ನು ಸದಾ ಧರಿಸಬೇಕು. ಶಿವಲಿಂಗವನ್ನು ಭಯಭಕ್ತಿಯಿಂದ ಆಲಿಂಗಿಸಿಕೊಂಡು ಪದೇಪದೇ ಬಿಲ್ವಾದಿ ಸಾಮಗ್ರಿಗಳಿಂದ ಅರ್ಚಿಸಬೇಕು.

ಹಾರಾಚಾರಪರಾದರಾನನುಸರನ್ ಶ್ರೀರುದ್ರಮಾವರ್ತಯನ್
ಶ್ರೀ ಪಂಚಾಕ್ಷರಮಕ್ಷರಂ ಪ್ರತಿಜಪನ್ ಲಿಂಗಾನಿ ಪಶ್ಯನ್ ಮುಹುಃ ।
ಶ್ರೀ ವಿಶ್ವೇಶ್ವರ ಪಾಹಿ ಮಾಮಿತಿ ವದನ್ ವೀರೇಶ್ವರಂ ಸಂಸ್ತುವನ್
ಕುರ್ವನ್ ಪಾತಕಪಾವಕಾಚಲಲಯಂ ಶೈವಂ ಶಿವಂ ವಾಂಛತಿ ॥೧೪೮॥

ಧ್ಯಾಯನ್ ಮಾರಹರಂ ಸುಮೇರುಶಿಖರಾಪಾರಸ್ಫುರನ್ಮಂದಿರಾ
ಕಾರಸ್ವಾಂತಸರೋಜಕೇಸರವರಾಸಾರಾಕರಂ ಶಂಕರಂ ।
ರೋಮಾಂಚೋಚ್ಚಯಮಂಚಯನ್ ಪ್ರಸರಯನ್ನಾನಂದಜಾಶ್ರುದ್ರವಂ
ಕುರ್ವನ್ ಪಾತಕಪಾವಕಾಚಲಲಯಂ ಶೈವಂ ಶಿವಂ ವಾಂಛತಿ ॥೧೪೯॥

ಅಲ್ಲದೇ ಸರ್ವಕಾಲದಲ್ಲಿಯೂ ಆ ದೇವದೇವನಾದ ಉಮಾಪತಿಯ ದಿವ್ಯಸ್ವರೂಪವನ್ನೇ ಮನಸಾ ಭಾವಿಸುತ್ತಿರಬೇಕು. ಇಂತಹವನೇ ಪಾಪವಿಮುಕ್ತನಾಗುವನು. ಅಂತ್ಯದಲ್ಲಿ ಶಿವಧಾಮವನ್ನು ಪಡೆಯುವನು. ||೧೪೭||

ಶಿವಧರ್ಮಪರಾಯಣರಾದ ಶಾಂಭವರ ಮಾರ್ಗವನ್ನು ಅನುಸರಿಸಬೇಕು. ಪದೇ ಪದೇ ಶ್ರೀರುದ್ರಾಧ್ಯಾಯವನ್ನು ಪಾರಾಯಣಮಾಡಬೇಕು. ಅನೇಕಾನೇಕ ಶಿವಲಿಂಗಗಳ ಸಂದರ್ಶನಮಾಡುತ್ತಾ ಶ್ರೀಪಂಚಾಕ್ಷರೀ ಮಂತ್ರವನ್ನು ಜಪಿಸಬೇಕಲ್ಲದೇ ವೀರೇಶ್ವರಸ್ವಾಮಿಯ ಸ್ವರೂಪವನ್ನು ಸ್ತುತಿಸಿ, ಓ ವಿಶ್ವೇಶ್ವರನೇ! ದೀನನಾದ ನನ್ನನ್ನು ಕಾಪಾಡು ಎಂದು ಅನನ್ಯಪ್ರವಣತೆಯಿಂದ ಶರಣಾಗತನಾಗಬೇಕು. ಆಗ ಪಾಪನಾಶವಾಗುವುದು. ಶಿವಸಾಮೀಪ್ಯ ದೊರೆಯುವುದು. ||೧೪೮||

ಮನ್ಮಥಧ್ವಂಸಿಯಾದ ಶಂಕರನನ್ನೇ ಧ್ಯಾನಿಸಬೇಕು. ಹೃದಯಾಂತರಾಳವನ್ನು ಮೇರು ಪರ್ವತದಂತೆಯೂ ಅಂತಃಕರಣವನ್ನು ಶಿವಮಂದಿರದಂತೆಯೂ ಮನಸ್ಸನ್ನು ಕಮಲದಂತೆಯೂ ಭಾವಿಸಿಕೊಂಡು ಅಂಥ ಕಮಲದಲ್ಲಿ ಕಿಂಜಲ್ಕಗಳ ಮಧ್ಯೆ ಶಿವನು ಅಧ್ಯಾಸೀನನಾಗಿ ಅಮೃತತುಲ್ಯವಾದ ಮಕರಂದವನ್ನು ಸುರಿಸುತ್ತಿದ್ದಾನೆಂದು ಭಾವಿಸಬೇಕು. ಇಂಥ ಮಕರಂದವನ್ನು ಅಂತಃಕರಣದಿಂದಲೇ ಆಸ್ವಾದಿಸಿ ಆ ಅನುಭವದಿಂದ ರೋಮಾಂಚಿತನಾಗಬೇಕು. ನಯನಗಳಲ್ಲಿ ಸುಖವಿಶೇಷಾನುಭವದಿಂದ ಆನಂದ ಬಾಷ್ಪಗಳನ್ನು ಸುರಿಸಬೇಕು. ಇಂಥ ತನ್ಮಯತೆಯೂ ಉಚ್ಚಭಾವನೆಯೂ ಉಂಟಾದಾಗ ಸಮಸ್ತ ಪಾಪಗಳೂ ಧ್ವಂಸವಾಗುವುವು. ||೧೪೯||

ದುರ್ದಿನಾನಿ ಸುದಿನಾನಿ ನ ರೇವಾ
ತೀರನೀರಜನಿರಂತರಬಿಲ್ವೈಃ ।
ಬಿಲ್ವಮೂಲಕಮಲಾಮಲಲಿಂಗೇ
ಶಂಗಮಂಗಲಕರಾಂಗಕರಾಗ್ರೈಃ ॥೧೫೦॥

ಇಯಂ ಶಿವಕಥಾಸುಧಾ ಮುಹುರುಮಾಮನೋಹಾರಿಣೀ
ಶಿವೇನ ಕಥಿತಾ ಪುರಾ ತ್ರಿಪುರವೈರಿಣಾ ಸಾದರಂ ।
ಅಪಾರಸುಕೃತಾರ್ಣವೈಃ ಪರಮವಾಪ ಭೂಮಂಡಲಂ
ಮಹಾಘಲಯಕಾರಣಂ ಕರಣಮಾಶು ಮುಕ್ತೇಃ ಪರಂ ॥೧೫೧॥

ರಹಸ್ಯಮೇತದ್ರಹಸಿ ಶ್ರುತಂ ಪುರಾ
ಪುರಾರಿವಕ್ತ್ರಾಂಬುರುಹೇಣ ಗೌರ್ಯಾ ।
ಅನೇಕಕಲ್ಪಾವಧಿ ಸಾವಧಾನ
ಮಾಮ್ರೇಡಿತಂ ಸಾಧು ಸುಧಾರಸೇನ ॥೧೫೨॥

ಮಳೆಗಾಲದಲ್ಲಾಗಲಿ, ಹಿತಕರವಾದ ದಿನದಲ್ಲಾಗಲಿ ತಾರತಮ್ಯವಿಲ್ಲದೇ ನಿತ್ಯವೂ ನರ್ಮದಾನದೀತೀರದಲ್ಲಿರುವ ಬಿಲ್ವವೃಕ್ಷ ಮೂಲದಲ್ಲಿ ಸ್ಥಾಪಿತವಾದ ಶಿವಲಿಂಗಕ್ಕೆ ಕಮಲಗಳಿಂದಲೂ ಬಿಲ್ವಪತ್ರೆಗಳಿಂದಲೂ ಪೂಜಿಸಬೇಕು. ||೧೫೦||

ಈ ಪ್ರಕಾರವಾದ ಶಿವಕಥೆಯು ಅಪಾರವಾದುದು. ಈ ಕಥೆಯು ಅಮೃತ ಸದೃಶವಾದುದು. ಗಿರಿಜೆಯ ಮಹಾಪ್ರೀತಿಗೆ ಪಾತ್ರವಾದ ಈ ಕಥೆಯನ್ನು ಪೂರ್ವದಲ್ಲಿ ಸಾಕ್ಷಾತ್ ಶಂಕರನೇ ಪಾರ್ವತಿಗೆ ಹೇಳಿದ್ದನು. ಇಂಥ ಪರಮ ಪುಣ್ಯಕರವಾದ ಈ ಕಥೆಯು ಅದೃಷ್ಟ ವಿಶೇಷದಿಂದ ಈ ಭೂಮಂಡಲಕ್ಕೂ ತಿಳಿದು ಬಂದಿರುತ್ತದೆ. ಈ ಅತ್ಯದ್ಭುತವಾದ ಶಿವಕಥೆಯು ಮಹಾ ಮಹಾ ಪಾಪಗಳನ್ನು ನಾಶಮಾಡುವುದಾಗಿರುವುದಲ್ಲದೇ, ಸಾಕ್ಷಾತ್ ಪರಮಪದವಾದ ಮೋಕ್ಷಕ್ಕೂ ಕಾರಣವಾಗಿರುತ್ತದೆ. ||೧೫೧||

ಈ ಪವಿತ್ರವಾದ ಶಿವಕಥೆಯು ಪರಮ ರಹಸ್ಯವಾದದ್ದು. ಸುಲಭವಾಗಿ ಎಲ್ಲರಿಗೂ ದೊರೆಯತಕ್ಕದ್ದಲ್ಲ. ಈ ಕಥೆಯು ಪರಮ ರಹಸ್ಯವಾಗಿರುವುದರಿಂದ ಪೂರ್ವದಲ್ಲಿ ಪರಮೇಶ್ವರನು ಏಕಾಂತದಲ್ಲಿ ಗಿರಿಜೆಯೊಬ್ಬಳಿಗೆ ಮಾತ್ರ ಹೇಳಿದ್ದನು. ಮತ್ತು ಈ ಕಥೆಯು ಅತ್ಯಂತ ಗುಟ್ಟಾಗಿರತಕ್ಕದ್ದೆಂದೂ ಸ್ವತಃ ಆಜ್ಞಾಪಿಸಿರುವನು. ಈ ಕಥೆಯು

ತತಃ ಕದಾಚಿದ್ಗಣನಾಯಕೇನ
ಶ್ರುತಂ ಶಿವಾವಕ್ತ್ರಸರೋರುಹೇಣ ।
ಸ್ಕಂದೇನ ತಸ್ಮಾಚ್ಛ್ರುತಮಾದರೇಣ
ಶ್ರೀ ನಂದಿಕೇಶೇನ ತತಃ ಶ್ರುತಂ ಚ ॥೧೫೩॥

ತತಸ್ಸುರೈರೇತದತಿಪ್ರಯತ್ನೈಃ
ಪ್ರಾಪ್ತಂ ರಹಸ್ಯಂ ಮುನಯೋ ಮಯೇದಂ ।
ನಾರಾಯಣೇನೋಕ್ತಮತಿಪ್ರಯತ್ನಾತ್
ಆರಾಧಿತೇನೈವ ಮುಹುರ್ಮಯಾಪಿ ॥೧೫೪॥

ಇದಂ ರಹಸ್ಯಂ ಖಲು ಗೋಪನೀಯಂ
ರತ್ನಸ್ವರೂಪಂ ಖಲು ರತ್ನರತ್ನಂ ।
ಭಕ್ತಾಯ ದೇಯಂ ಖಲು ಶಾಂಭವಾಯ
ಜ್ಞಾತ್ವಾ ಸ್ವರೂಪಂ ಪುನರಾದರೇಣ ॥೧೫೫॥

ಪುನಃಪುನಃ ಕಥನ ಶ್ರವಣದಿಂದ ಅಮೃತರಸಸಂಕೀರ್ಣವಾಗಿ ಕಲ್ಪಾಂತ್ಯದವರೆಗೂ ಫಲಪ್ರದವಾಗುವುದು. ||೧೫೨||

ಈ ಕಥೆಯು ಆದಿಯಿಂದಲೂ ಕೇವಲ ಶಿವಪರಂಪರೆಯಿಂದಲೇ ಅನುಸ್ಯೂತವಾಗಿ ಬರುತ್ತಿರುವುದು. ಶಿವನಿಂದ ಕೇಳಿದ ಈ ಕಥೆಯನ್ನು ಪಾರ್ವತಿಯು ಗಣಪತಿಗೆ ಹೇಳಿದಳು. ಗಣಪತಿಯಿಂದ ಷಣ್ಮುಖನು ಕೇಳಿದನು. ಷಣ್ಮುಖಸ್ವಾಮಿಯು ನಂದಿಕೇಶನಿಗೆ ಉಪದೇಶಿಸಿದನು. ||೧೫೩||

ಬಳಿಕ ಆ ನಂದಿಕೇಶನನ್ನು ಅನೇಕ ಪೂಜಾಪುರಸ್ಸರವಾಗಿ ದೇವತೆಗಳು ಪ್ರಾರ್ಥಿಸಿಕೊಂಡು ಈ ಕಥೆಯನ್ನು ಶ್ರವಣಮಾಡಿದರು. ಅನಂತರ ನಾನು ವಿಷ್ಣುವನ್ನು ನಾನಾ ವಿಧವಾಗಿ ಆರಾಧನಾದಿಗಳಿಂದ ಉಪಸರ್ಪಣೆಮಾಡಿ ಈ ಕಥೆಯನ್ನು ಪಡೆದುಕೊಂಡೆನು. ||೧೫೪||

ಎಲೈ ಮುನಿಗಳಿರಾ! ಈ ಶಿವಕಥೆಯು ಪರಮ ರಹಸ್ಯವಾದದ್ದು. ಇದನ್ನು ಬಹಳ ಗುಟ್ಟಾಗಿ ಕಾಪಾಡಿಕೊಳ್ಳಬೇಕು. ಇದು ಸಾಕ್ಷಾತ್ ರತ್ನಸ್ವರೂಪವೆಂದೂ ಸಕಲ ರತ್ನಗಳಲ್ಲಿಯೂ ಶ್ರೇಷ್ಠವಾದ ರತ್ನವೆಂದೂ ತಿಳಿಯಿರಿ. ಈ ಕಥೆಯನ್ನು

ಏತದ್ಯಥಾ ಕರ್ಣಪಥಂ ಪ್ರಯಾತಿ
ಶೈವಂ ರಹಸ್ಯಂ ಪರಮಂ ಪವಿತ್ರಂ ।
ಕರೋತಿ ತಾವತ್ಸಕಲಾಘನಾಶಂ
ಸಂಸಾರಘೋರಾದ್ಭುತರಾಶಿನಾಶಂ ॥೧೫೬॥

ಅತ್ರೈವೋದಾಹರಂತೀಮಮಿತಿಹಾಸಂ ಬುಧೋತ್ತಮಾಃ ।
ಶೃಣುಧ್ವಂ ಸಾವಧಾನೇನ ಸರ್ವದುಃಖವಿನಾಶಕಂ ॥೧೫೭॥

ಪುರಾ ರೇವಾಸರಿತ್ತೀರೇ ಶೌನಕಶ್ಶಿವತತ್ಪರಃ ।
ಶಿವಲಿಂಗಾರ್ಚನಂ ಕುರ್ವನ್ ಉವಾಸ ಕಮಲಾದಿಭಿಃ ॥೧೫೮॥

ಕೇವಲ ಈಶ್ವರನಲ್ಲಿ ಭಕ್ತಿಯುಳ್ಳವರಿಗೇ ಹೇಳಬೇಕು. ಅವರನ್ನೂ ಸಹ ಪರೀಕ್ಷಿಸಿ ಅವರ ಭಕ್ತಿಯು ಎಷ್ಟರಮಟ್ಟಿಗೆ ಸ್ಥಿರವಾದದ್ದೆಂದು ನಿರ್ಣಯವಾದ ಬಳಿಕ ಅವರು ಮುಖ್ಯ ಅಧಿಕಾರಿ ಎಂದು ತಿಳಿದರೆ ಅಂತಹವರಿಗೆ ಮಾತ್ರವೇ ಇದನ್ನು ಉಪದೇಶಿಸಬೇಕು. ॥೧೫೫॥

ಈ ಶಿವಕಥೆಯು ಪರಮ ಪುಣ್ಯಕರವಾಗಿರುವುದರಿಂದಲೂ ಪರಮ ರಹಸ್ಯವಾಗಿರುವುದರಿಂದಲೂ ಇದು ಶಿವರಹಸ್ಯವೆಂದು ಕರೆಯಲ್ಪಟ್ಟಿದೆ. ಈ ಶಿವರಹಸ್ಯವು ಯಾವಾಗ ಶ್ರವಣವಾಗುವುದೋ ಆ ಕೂಡಲೇ ಸಮಸ್ತ ಪಾಪರಾಶಿಗಳೂ ಈ ಸಂಸಾರತಾಪತ್ರಯಗಳೂ ನಿಶ್ಶೇಷವಾಗಿ ಧ್ವಂಸವಾಗುವುವು. ॥೧೫೬॥

ಎಲೈ ಪಂಡಿತೋತ್ತಮರಿರಾ! ಇದೇ ವಿಚಾರದಲ್ಲಿ ಒಂದು ಇತಿಹಾಸವುಂಟು. ಆ ಇತಿಹಾಸವು ಸಮಸ್ತ ಪಾಪನಾಶಕವಾದುದು. ಅಲ್ಲದೇ ಮಹಾಪುಣ್ಯಕರವೂ ಆಗಿದೆ. ಅದನ್ನೇ ನಿಮಗೂ ಹೇಳುವೆನು. ಎಲ್ಲರೂ ಸಾವಧಾನಚಿತ್ತರಾಗಿ ಆಲಿಸಿ ಕೇಳಿರಿ. ॥೧೫೭॥

ಪೂರ್ವಕಾಲದಲ್ಲಿ ಶೌನಕಮುನಿಯು ಶಿವಾರಾಧನತತ್ಪರನಾಗಿ ರೇವಾನದೀ ತೀರದಲ್ಲಿ ಕಮಲಕುಸುಮಾದಿಗಳಿಂದ ಶಿವಲಿಂಗಾರ್ಚನೆಯನ್ನು ಮಾಡುತ್ತಾ ವಾಸ ಮಾಡಿಕೊಂಡಿದ್ದನು. ॥೧೫೮॥

ತತಃ ಪರಂ ಬಿಲ್ವಪತ್ರಾಣ್ಯಾದಾತುಂ ವಿಪಿನಂ ಯಯೌ ।
ಭಾರ್ಯಯಾ ಸಹ ಲಿಂಗಂ ಚ ಸಮಾದಾಯ ಸ ನಾರ್ಮದಂ ॥೧೫೯॥

ವನಜೈಃ ಕುಸುಮೈರೇವ ಪೂಜಯನ್ ಗಿರಿಜಾಪತಿಂ ।
ಶಿವಲಿಂಗೇ ಶಿವಾಕಾರೇ ಸರ್ವಸಿದ್ಧಿಪ್ರದಾಯಕೇ ॥೧೬೦॥

ತತಃ ಪರಂ ಸ ಶುಶ್ರಾವ ರಹಸ್ಯಂ ದೂರತಃ ಸ್ಥಿತಃ ।
ಗೀಯಮಾನಂ ಶುಕೇನೈವ ಕುಮಾರೇಣ ಮಮಾದರಾತ್ ॥೧೬೧॥

ಕುಮಾರಸ್ಯ ರಹಸ್ಯೇಽಸ್ಮಿನ್ ಪ್ರೀತಿರಪ್ಯಕ್ಷತಾ ಸದಾ ।
ಸರ್ವೋಪನಿಷದಾಂ ಸಾರೇ ಪರಮಾನಂದಸಾಗರೇ ॥೧೬೨॥

ಆ ರೇವಾತೀರದಲ್ಲಿ ಬಿಲ್ವಪತ್ರೆಗಳು ದುರ್ಲಭವಾಗಿದ್ದುದರಿಂದ ಬಿಲ್ವಪತ್ರೆಗಳು ಸುಲಭವಾಗಿ ದೊರೆಯತಕ್ಕ ಸ್ಥಳಕ್ಕೆ ಹೋಗಬೇಕೆಂಬ ಸಂಕಲ್ಪದಿಂದ, ಆತನು ನರ್ಮದಾಶಿವಲಿಂಗವನ್ನು ಜೊತೆಯಲ್ಲಿಯೇ ತೆಗೆದುಕೊಂಡು ಭಾರ್ಯೆಯೊಡನೆ ಒಂದು ಅರಣ್ಯಕ್ಕೆ ಹೋದನು. ॥೧೫೯॥

ಆ ಶೌನಕಮುನಿಗೆ ಎಲ್ಲಿಯೂ ಬಿಲ್ವಪತ್ರೆಯು ದೊರೆಯದಿರಲು ಅವನು ಅರಣ್ಯದಲ್ಲೇ ಒಂದು ಕಡೆ ನೆಲಸಿ ಆ ವನದ ಪುಷ್ಪಗಳನ್ನೇ ಸಂಗ್ರಹಮಾಡಿಕೊಂಡು ಶಿವಲಿಂಗಾರ್ಚನೆಯನ್ನು ಮಾಡತೊಡಗಿದನು. ಅಕಸ್ಮಾತ್ ಅಲ್ಲಿಗೆ ಸಮೀಪದಲ್ಲಿಯೇ ನನ್ನ (ವ್ಯಾಸನ) ಪುತ್ರನಾದ ಶುಕಮುನಿಯು ಅದೇ ಸಮಯದಲ್ಲಿ ಈ ಶಿವರಹಸ್ಯವನ್ನು ತನ್ಮಯತೆಯಿಂದ ಹಾಡಿಕೊಂಡು ಆನಂದಪಡುತ್ತಿದ್ದನು. ಆಗ ಶೌನಕಮುನಿಯು ದೂರದಿಂದಲೇ ಈ ಶಿವರಹಸ್ಯವನ್ನೆಲ್ಲಾ ಆದರದಿಂದ ಕೇಳಿ ತಿಳಿದುಕೊಂಡನು. ॥೧೬೦-೧೬೧॥

ಈ ಶಿವರಹಸ್ಯವು ಸಕಲ ಉಪನಿಷತ್ತುಗಳ ಸಾರಾಂಶವಾಗಿರುತ್ತದೆಂದೂ ಪರಮಾನಂದಸಾಧನೆಗೆ ಮುಖ್ಯ ಉಪಾಯವಾಗಿದೆಎಂದೂ ನಮ್ಮ ಶುಕನು ನಿಸ್ಸಂದೇಹವಾಗಿ ಅರಿತಿದ್ದನು. ಆದ್ದರಿಂದಲೇ ಆತನು ಅತ್ಯಂತ ಪ್ರೀತ್ಯಾದರಪುರಸ್ಸರವಾಗಿ ಸರ್ವದಾ ಈ ಶಿವರಹಸ್ಯವನ್ನೇ ಹಾಡಿಕೊಂಡು ಆನಂದಪಡುತ್ತಿದ್ದನು. ॥೧೬೨॥

ತತಃ ಶ್ರುತ್ವಾ ಶೌನಕೋಽಪಿ ರಹಸ್ಯಂ ಶೈವಮಾದರಾತ್ ।
ಶಿಷ್ಯಾನಧ್ಯಾಪಯಾಮಾಸ ವೇದಸಾರತ್ವನಿರ್ಣಯಾತ್ ॥೧೬೩॥

ತತಸ್ತೇಷ್ವೇವ ಶಿಷ್ಯೇಷು ಕೋಽಪ್ಯಭ್ಯಸ್ತವಿಶೇಷತಃ ।
ಗರ್ಗಾಖ್ಯಃ ಪ್ರಯಯೌ ಸ್ವೀಯಂ ದೇಶಂ ಹಿಮಗಿರೇಃ ಪರಂ॥೧೬೪॥

ಸ್ವಕಲತ್ರೇಣ ಸಂಯುಕ್ತಃ ಪಥ್ಯಭ್ಯಾಸೇನ ತಸ್ಯ ಸಃ ।
ಸೂರ್ಯಮಂಡಲಸಂಕಾಶಃ ಪಿಶಾಚೈರವಲೋಕಿತಃ ॥೧೬೫॥

ತತಸ್ತೇ ಸಮುಪಾಗತ್ಯ ಪ್ರಾಹುರತ್ಯಂತಮಾದರಾತ್ ।
ಪರಿವೃತ್ಯ ಕಲತ್ರೇಣ ಸಹಿತಂ ಭೀತಿಸಂಯುತಂ ॥೧೬೬॥

ಶೌನಕ ಮುನಿಯು ಈ ಶಿವರಹಸ್ಯವನ್ನು ಕೇಳಿದೊಡನೆಯೇ ಆತನಿಗೆ ಇದು ಸಕಲ ವೇದಗಳ ಸಾರವೆಂಬುದು ತಿಳಿಯಿತು. ಆಗ ಆತನು ಅತ್ಯಂತ ಆದರದಿಂದ ಇದನ್ನು ತನ್ನ ಶಿಷ್ಯರಿಗೆ ಹೇಳಿಕೊಟ್ಟನು. ||೧೬೩||

ಆ ಶೌನಕಮುನಿಯ ಬಳಿಯಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದ ಗರ್ಗನೆಂಬುವನು ಎಲ್ಲಾ ಶಿಷ್ಯರಿಗಿಂತಲೂ ಹೆಚ್ಚು ವಿದ್ಯಾವಂತನಾಗಿ ಪ್ರಖ್ಯಾತನಾದನು. ಅವನು ತನ್ನ ಅಭ್ಯಾಸವು ತೀರಿದ ಬಳಿಕ ತನ್ನ ದೇಶಕ್ಕೆ ಹಿಂತಿರುಗಿ ಬರುವಾಗ ಹಿಮವತ್ಪರ್ವತದ ಮಾರ್ಗವಾಗಿ ಬರುತ್ತಿದ್ದನು. ||೧೬೪||

ಆ ಗರ್ಗನು ಮಹಾನಿಷ್ಠನೂ ವಿದ್ಯಾವೀರ್ಯಸಂಪನ್ನನೂ ಆಗಿದ್ದುದರಿಂದ ಸೂರ್ಯಮಂಡಲದಂತೆ ತೇಜಸ್ವಿಯಾಗಿದ್ದನು. ಆತನು ತನ್ನ ಪತ್ನಿಯೊಡನೆ ಚಿರಪರಿಚಿತವಾದ ಮಾರ್ಗದಲ್ಲಿಯೇ ನಿರ್ಭಯವಾಗಿ ಪ್ರಯಾಣಮಾಡುತ್ತಿರಲು ಅವನನ್ನು ಕೆಲವು ಪಿಶಾಚಿಗಳು ನೋಡಿದವು. ||೧೬೫||

ಆ ಪಿಶಾಚಗಳನ್ನು ನೋಡಿ ಗರ್ಗನಿಗೂ ಆತನ ಭಾರ್ಯೆಗೂ ಸ್ವಲ್ಪ ಭಯವಾಯಿತು. ಆಗ ಆ ಪಿಶಾಚಗಳು ಸಮೀಪಕ್ಕೆ ಬಂದು ಆದರದಿಂದ ಈ ರೀತಿ ಕೇಳಿದವು. ||೧೬೬||

॥ ಪಿಶಾಚಾ ಊಚುಃ ॥

ಮಾನುಷ್ಯೋ ಹಿ ತವಾಕಾರಸ್ಸೂರ್ಯಮಂಡಲಸನ್ನಿಭಃ ।
ಕಥಮಾಸೀತ್ಕುತಃ ಪ್ರಾಪ್ತಮಿದಂ ಪರಮಪಾವನಂ ॥೧೬೭॥

ಭವದ್ದರ್ಶನಮಾತ್ರೇಣ ತೃಷಿತಾನಾಂ ತೃಷಾ ಗತಾ ।
ಕ್ಷುಧಾಪಿ ಶಾಂತಾ ಬಹುಧಾ ವದಾಸ್ಮಭ್ಯಂ ವಿಶೇಷತಃ ॥೧೬೮॥

ಸತ್ಯಂ ಚೇದುಚ್ಯತೇ ತರ್ಹಿ ಬಹುದೇಯಂ ಧನಂ ಮುದಾ ।
ಯತ್ರಾಸ್ತ್ಯಗಣಿತಂ ದ್ರವ್ಯಮಸ್ಮಾಭಿರಿಹ ಪಾಲಿತಂ ॥೧೬೯॥

ಅಸ್ಮಾಭಿಃ ಪಾಪಭಾರೇಣ ಪಿಶಾಚತ್ವಮುಪಾಗತಂ ।
ಅಸ್ಮತ್ಕೃತಾನಾಂ ಪಾಪಾನಾಮಿಯತ್ತಾಪಿ ನ ದೃಶ್ಯತೇ ॥೧೭೦॥

ಅಯ್ಯಾ ಪುಣ್ಯಾತ್ಮನೇ! ನಿನ್ನನ್ನು ನೋಡಿದರೆ ಮನುಷ್ಯನಂತೆ ಕಾಣು ತ್ತಿರುವೆ. ಮನುಷ್ಯನಾಗಿರುವ ನಿನಗೆ ಇಂಥ ಸೂರ್ಯಮಂಡಲಸದೃಶವಾದ ತೇಜಸ್ಸು ಹೇಗೆ ಪ್ರಾಪ್ತವಾಯಿತು? ಈ ವೀರ್ಯ ಮತ್ತು ತೇಜಸ್ಸುಗಳು ಪರಮಪವಿತ್ರಗಳಾ ಗಿರುತ್ತವೆ. ಇವುಗಳನ್ನು ನೀನು ಎಲ್ಲಿಂದ ಪಡೆದುಕೊಂಡೆ? ॥೧೬೭॥

ನಾವು ಮೊದಲು ಹಸಿವು ಬಾಯಾರಿಕೆಗಳಿಂದ ಪೀಡಿತರಾಗಿದ್ದರೂ ನಿನ್ನ ದರ್ಶನವಾದೊಡನೆಯೇ ನಮ್ಮ ಹಸಿವು ಬಾಯಾರಿಕೆಗಳೆಲ್ಲಾ ಮಾಯವಾದವು. ಆದುದರಿಂದ ನೀನು ಮಹಾಪುಣ್ಯಾತ್ಮನಾಗಿರಬೇಕು. ನಿನ್ನ ವೃತ್ತಾಂತವೇನೆಂಬು ದನ್ನು ನಮಗೆ ವಿಶದವಾಗಿ ಹೇಳು. ॥೧೬೮॥

ನಾವು ಇಲ್ಲಿ ಅಪಾರವಾದ ನಿಧಿನಿಕ್ಷೇಪಗಳನ್ನು ಕಾಪಾಡಿಟ್ಟುಕೊಂಡಿರುತ್ತೇವೆ. ನೀನು ನಿನ್ನ ನಿಜವಾದ ವೃತ್ತಾಂತವನ್ನೂ ಪುಣ್ಯಕಥೆಯನ್ನೂ ಹೇಳಿದರೆ ನಾವು ನಿನಗೆ ಅಪಾರವಾಗಿ ಧನವನ್ನು ಕೊಡುವೆವು. ॥೧೬೯॥

ನಾವು ಅಪಾರ ಪಾಪರಾಶಿಯನ್ನು ಕಟ್ಟಿಕೊಂಡಿರುವುದರಿಂದ ಪಿಶಾಚ ಜನ್ಮ ವನ್ನು ಪಡೆದು ವ್ಯಥೆಯನ್ನು ಅನುಭವಿಸುತ್ತಿದ್ದೇವೆ. ನಾವು ಮಾಡಿದ ಪಾಪವು ಇಷ್ಟಿಷ್ಟಲ್ಲ. ಆ ಪಾಪರಾಶಿಯನ್ನು ಇಷ್ಟೆಂದು ಹೇಳಲು ಸಾಧ್ಯವಿಲ್ಲ. ನಾವು ಸರ್ವಥಾ ಪಾಪಾತ್ಮರಾಗಿದ್ದೇವೆ. ॥೧೭೦॥

ಅಪಾರಜನ್ಮಾರ್ಜಿತಪಾಪಸಂಘೈಃ
ಅಶಾಂಕರತ್ವೇನ ಕೃತಾನಿ ಭೂಯಃ ।
ಪಾಪಾನ್ಯಪಾರಾಣಿ ಪಿಶಾಚಯೋನಿಃ
ಪ್ರಾಪ್ತಾ ಮುಹುರ್ದುಃಖವಿಶೇಷಭೋಗ್ಯೈಃ ॥೧೭೧॥

ಪಿಪಾಸಯಾಪಿ ಕ್ಷುಧಯಾಪಿ ನಿತ್ಯಂ
ಪ್ರತಿಕ್ಷಣಂ ನೋ ಮರಣೋಪಮಾನಿ ।
ದಿನಾನಿ ಯಾಂತ್ಯೇವ ನ ತದ್ವಿನಾಶಃ
ಸಂಭಾವಿತೋಽಪೀತ್ಯತಿದುಃಖಮೇವ ॥೧೭೨॥

ತವ ಪ್ರಭಾವೋಽಪ್ಯಘನಾಶಕೋಽಯಂ
ತನ್ಮೇವ ತಾವದ್ವದ ಸತ್ಯಮತ್ರ ।
ತೇನಾಸ್ಮದೀಯಾನಿ ಕಿಲಾತ್ಯಘಾನಿ
ನಾಶಂ ಪ್ರಯಾಸ್ಯಂತಿ ನ ಸಂಶಯೋಽತ್ರ ॥೧೭೩॥

ಅನೇಕ ಜನ್ಮಗಳಲ್ಲಿ ಪಾಪವನ್ನು ಮಾಡಿದ್ದರಿಂದ ಮೊದಲು ಅಶೈವರಾಗಿ ಜನಿಸಿದೆವು. ಆ ಅಶೈವಜನ್ಮದಲ್ಲಿ ಶಿವಾಪರಾಧವೇ ಮೊದಲಾದ ಅನೇಕರೀತಿಯ ಪಾಪಗಳನ್ನು ನಾವು ಮಾಡಿದ್ದರಿಂದ ಪರಮದುಃಖನಿಲಯವಾದ ಈ ಪಿಶಾಚ ಜನ್ಮವನ್ನು ಪಡೆದೆವು. ಹಾಗೆಯೇ ಮಹಾಯಾತನೆಗಳನ್ನೂ ಅನುಭವಿಸುತ್ತಿದ್ದೇವೆ.॥೧೭೧॥

ನಮಗೆ ಪ್ರತಿಕ್ಷಣದಲ್ಲಿಯೂ ಹಸಿವು ಬಾಯಾರಿಕೆಗಳ ಬಾಧೆಯು ಅಪರಿಮಿತವಾಗಿದೆ. ಏನೇ ಆದರೂ ಬಾಯಾರಿಕೆಯು ಇಂಗದೇ ಸರ್ವದಾ ಮರಣಕಾಲದ ಸಂಕಟವು ನಮ್ಮನ್ನು ಪೀಡಿಸುತ್ತಿದೆ. ಹೀಗೆಯೇ ಯಾತನೆಗಳನ್ನು ಅನುಭವಿಸುತ್ತಲೇ ದಿನಗಳು ಕಳೆಯುತ್ತಿವೆ. ಆದರೆ ನಮ್ಮ ದುಃಖವು ಮಾತ್ರ ತೀರಿರುವುದಿಲ್ಲ. ಮುಂದೆಯೂ ತೀರುವಂತೆ ತೋರುತ್ತಿಲ್ಲ. ॥೧೭೨॥

ನಿನ್ನ ವರ್ಚಸ್ಸನ್ನು ನೋಡಿದರೆ ಪಾಪನಾಶಕರವಾಗಿರುವಂತಿದೆ. ಆದುದರಿಂದ ನಿನ್ನ ಸತ್ಯವಾದ ಕಥೆಯನ್ನು ಹೇಳು. ಅದನ್ನು ಕೇಳುವುದರಿಂದ ಬಹುಶಃ ನಮ್ಮ ಪಾಪಗಳು ನಾಶವಾಗಬಹುದೆಂಬ ನಂಬಿಕೆ ನಮಗಿರುತ್ತದೆ. ॥೧೭೩॥

ಪಿಶಾಚತ್ವವಿನಾಶಾರ್ಥಂ ತ್ವತ್ಪ್ರಭಾವೋಪಯೋಗಿನಂ।
ನದಾನ್ಯಥಾ ವಧೋಪಾಯಶ್ಚಿಂತನೀಯೋ ನ ಸಂಶಯಃ ॥೧೭೪॥

ಇತಿ ತದ್ವಚನಂ ಶ್ರುತ್ವಾ ತದ್ಭಾರ್ಯಾ ಭಯವಿಹ್ವಲಾ।
ಪ್ರಾಹ ಭರ್ತಾರಮುತ್ಯಾರ್ತಾ ದೃಷ್ಟ್ವಾ ತಾನುದ್ಯತಾನ್ ವಧೇ ॥೧೭೫॥

ರಹಸ್ಯಶ್ರವಣಾದೇವ ತೇನ ಮುಕ್ತಾ ಭವಂತ್ವತಃ।
ತಾವತಾ ತದ್ವಧಾದ್ಭೀತಿರ್ನ ಭವಿಷ್ಯತಿ ಸರ್ವಥಾ ॥೧೭೬॥

ಇತಿ ತದ್ವಚನಂ ಶ್ರುತ್ವಾ ಸಮ್ಯಗಿತ್ಯವಧಾರ್ಯ ಚ।
ರಹಸ್ಯಮಾದಿತೋ ವಕ್ತುಂ ಚಕಾರೋಪಕ್ರಮಂ ಮುನಿಃ ॥೧೭೭॥

ನಿನ್ನ ನಿಜವಾದ ವೃತ್ತಾಂತವನ್ನು ಮೊದಲು ಹೇಳು. ನಿನ್ನ ಕಥೆಯು ಪುಣ್ಯತಮವಾಗಿದ್ದು ನಮ್ಮ ಪಿಶಾಚತ್ವವನ್ನು ನಾಶಮಾಡತಕ್ಕದ್ದಾಗಿದ್ದರೆ ಸರಿ. ಇಲ್ಲವಾದರೆ ನಿನ್ನನ್ನು ವಧಿಸುವೆವು. ಇದರಲ್ಲಿ ಸಂಶಯ ಬೇಡ. ||೧೭೪||

ಹೀಗೆಂದು ಆ ಪಿಶಾಚಗಳು ಆರ್ಭಟಿಸುತ್ತಾ ಸ್ವಲ್ಪ ವಿಲಂಬವನ್ನೂ ಸಹಿಸದೇ ಇವರನ್ನು ಕೊಲ್ಲಲು ಮೇಲೆ ಬೀಳಲಾರಂಭಿಸಿದುವು. ಆ ಗರ್ಗನ ಭಾರ್ಯೆಯು ಬಹಳ ಹೆದರಿದವಳಾಗಿ ತನ್ನ ಪತಿಯನ್ನು ಕುರಿತು ಈರೀತಿ ಹೇಳಿದಳು. ||೧೭೫||

ಜಾಗ್ರತೆ ಶಿವರಹಸ್ಯವನ್ನು ಹೇಳಿ ಈ ಪಿಶಾಚಗಳಿಗೆ ಶ್ರವಣಮಾಡಿಸು. ಶಿವರಹಸ್ಯಶ್ರವಣದಿಂದ ನಿಸ್ಸಂದೇಹವಾಗಿ ಇವು ಮೋಕ್ಷವನ್ನು ಪಡೆಯುವುವು. ಶಿವರಹಸ್ಯವನ್ನು ಹೇಳಿದರೆ ಮಾತ್ರ ನಮಗೆ ಭಯವು ತಪ್ಪುವುದು. ಆದುದರಿಂದ ಈಗ ಹೆಚ್ಚು ವಿಮರ್ಶೆಮಾಡುತ್ತಾ ಕುಳಿತುಕೊಳ್ಳಲು ಸಮಯವಿಲ್ಲ. ಶೀಘ್ರವಾಗಿ ಶಿವರಹಸ್ಯವನ್ನು ಶ್ರವಣಮಾಡಿಸಿ ಈ ಪಿಶಾಚಗಳ ದುಃಖವನ್ನು ಪರಿಹರಿಸಿ ನಾವೂ ನಿಶ್ಚಿಂತರಾಗೋಣ. ||೧೭೬||

ಪತ್ನಿಯ ಈ ಸಮಯೋಚಿತವಾದ ಸಲಹೆಯನ್ನು ಕೇಳಿ ಬಳಿಕ ತಾನೂ ಯುಕ್ತಾಯುಕ್ತವನ್ನು ಪರ್ಯಾಲೋಚಿಸಿ ಗರ್ಗಮುನಿಯು, ಶಿವರಹಸ್ಯವನ್ನು ಹೇಳುವುದೇ ಒಳ್ಳೆತೆಂದು ನಿರ್ಣಯಿಸಿಕೊಂಡನು. ಕೂಡಲೇ ಶಿವರಹಸ್ಯವನ್ನು ಆದಿಯಿಂದ ವಿಸ್ತಾರವಾಗಿ ಹೇಳಲುಪಕ್ರಮಿಸಿದನು. ||೧೭೭||

ತೇ ಸರ್ವೇ ಮೋಚಕಾಕಾರಾಃ ಶೃಣ್ವಂತಸ್ಸಾದರಂ ಕಥಾಂ ।
ಪೂರ್ಣಾಂ ಹಿರಣ್ಯರೂಪತ್ವಮವಾಪುರ್ಮಂದಮಾಸ್ತಿಕಾಃ ॥೧೭೮॥

ತತಸ್ತಾನಪಿ ದೃಷ್ಟ್ವಾಯಂ ಗರ್ಗೋ ವಿಸ್ಮಯಸಂಯುತಃ ।
ಮೇನೇ ಶಿವರಹಸ್ಯಸ್ಯ ಪ್ರಭಾವಮತುಲಂ ತದಾ ॥೧೭೯॥

ತನ್ಮುಖಪ್ರಮುಖಾಂಗೇಭ್ಯಶ್ಚನ್ಯೈರ್ಮೋಚಕವರ್ಣತಾ ।
ನಿರ್ಗತಾ ತತ್ಕಥಾಲಾಪಶ್ರವಣಾನ್ಮುನಿಪುಂಗವಾಃ ॥೧೮೦॥

ಸಂತುಷ್ಟಾಸ್ತೇ ತತಸ್ಸರ್ವೇ ಪ್ರಣಮ್ಯ ಮುನಿಪುಂಗವಂ ।
ತತ್ತನ್ನಿಕ್ಷೇಪದಾನೇನ ಚಕ್ರುಃ ಪ್ರೀತಮನುತ್ತಮಂ ॥೧೮೧॥

ಆ ಪಿಶಾಚಗಳು ಕೃಷ್ಣವರ್ಣಗಳಾಗಿದ್ದು ಭಯಂಕರವಾಗಿದ್ದವು. ಅವು ಶಿವ ರಹಸ್ಯವನ್ನು ಆದರದಿಂದ ಶ್ರವಣಮಾಡುತ್ತ ಅದುಸಂಪೂರ್ಣವಾಗುವ ಹೊತ್ತಿಗೆ ಕ್ರಮಕ್ರಮವಾಗಿ ಸುವರ್ಣದಂತೆ ಸುಂದರವಾದ ವರ್ಣವನ್ನು ಪಡೆದವು. ಆ ಪಿಶಾಚಗಳಲ್ಲಿ ಮೊದಲಿದ್ದ ಆ ವಿಕಾರಾಕೃತಿಯೇ ಮಾಯವಾಯಿತು. ||೧೭೮||

ಈ ಶಿವರಹಸ್ಯದ ಮಹಿಮೆಯನ್ನು ಮೊದಲು ಗರ್ಗನೂ ಸಹ ಪರೀಕ್ಷಿಸಿ ಸರಿಯಾಗಿ ತಿಳಿದುಕೊಂಡಿರಲಿಲ್ಲ. ಈಗ ಪಿಶಾಚಗಳ ಪರಿಣಾಮವನ್ನು ಕಂಡ ಬಳಿಕ ಅವನಿಗೆ ಆಶ್ಚರ್ಯವಾಯಿತಲ್ಲದೇ ಶಿವರಹಸ್ಯದ ಮಹಿಮೆಯು ಮಹತ್ತರವಾಗಿದೆ ಎಂಬುದೂ ಆತನಿಗೆ ಪರಿಚಯವಾಯಿತು. ||೧೭೯||

ಶಿವರಹಸ್ಯ ಕಥೆಗಳನ್ನು ಶ್ರವಣಮಾಡುತ್ತಿದ್ದಂತೆಯೇ ಆ ಪಿಶಾಚಗಳ ಮುಖವೇ ಮೊದಲಾದ ಅಂಗಗಳಲ್ಲಿ ತೋರುತ್ತಿದ್ದ ವಿಕಾರವೂ ಕೃಷ್ಣವರ್ಣವೂ ದೂರ ವಾಗುತ್ತ ಬಂದಿತು. ಅವುಗಳ ಅಂಗಾಂಗಗಳ ಆಕಾರಭಂಗಿಯೇ ಬದಲಾಯಿಸಿತು. ||೧೮೦||

ಈ ಬಗೆಯಾದ ಆತ್ಮೋದ್ಧಾರದಿಂದ ಪಿಶಾಚಗಳಿಗೆ ಪರಮ ಸಂತೋಷ ವಾಯಿತು. ಕಥಾಶ್ರವಣವು ಸಂಪೂರ್ಣವಾದ ಬಳಿಕ ಆ ಪಿಶಾಚಗಳು ಗರ್ಗನಿಗೆ ಭಕ್ತಿಯಿಂದ ನಮಸ್ಕರಿಸಿ, ತಮ್ಮಲ್ಲಿದ್ದ ಅಪಾರ ಧನನಿಧಿಯನ್ನು ಸಮರ್ಪಿಸಿ ಸಂತೋಷಗೊಳಿಸಿದವು. ||೧೮೧||

ತತಸ್ತಾನಾಹ ಸ ಮುನಿಃ ಕೇನ ಪಾಪೇನ ದುರ್ದಶಾ ।
ಪ್ರಾಪ್ತೇಯಮಿತಿ ಸಂಪ್ರಾಹುಃ ಸ್ವಕೀಯಾಘಕುಲಂ ತದಾ ॥೧೮೨॥

ಶ್ರುತ್ವಾ ತದೀಯಾಘಕುಲಾನಿ ದೃಷ್ಟ್ವಾ
ತದಂಗಕಾಂತಿಂ ಚ ಮಹೋತ್ಸವಂ ಚ ।
ಉವಾಸ ತತ್ರೈವಮತೋ ನಿಧಾನೈ
ರನಂತಧಾ ಪ್ರಾಪ್ಯ ಸುಖಾನಿ ನಿತ್ಯಂ ॥೧೮೩॥

ತೇ ಸಂತ್ಯಕ್ತಪಿಶಾಚದೇಹನಿಕರಾಸ್ಸರ್ವೇಽಪಿ ಗಂಧರ್ವತಾಂ
ಪ್ರಾಪ್ತಾಃ ಪುಣ್ಯಗಣಾನ್ವಿತಾಶ್ಶಿವಕಥಾಲಾಪಾನುಸಂಸೇವನಾತ್ ।
ತಸ್ಮಾತ್ಪುಣ್ಯಕರಪ್ರಸಾದಮಸಕೃಚ್ಛ್ರೋತವ್ಯಮತ್ಯಾದರಾತ್
ಏವಂ ಶೈವರಹಸ್ಯಮೀಶ್ವರಪದಾಂಭೋಜಾರ್ಚಕೈಃ ಕೇವಲಂ॥೧೮೪॥

ಬಳಿಕ ಗರ್ಗಮುನಿಯು ಆ ಪಿಶಾಚಗಳ ಸಂಗಡ ನಿಮಗೆ ಏಕೆ ಈ ಪಿಶಾಚ ಜನ್ಮವು ಪ್ರಾಪ್ತವಾಯಿತು? ನೀವು ಯಾವ ಪಾಪವನ್ನು ಮಾಡಿದ್ದಿರಿ? ಎಂದು ಪ್ರಶ್ನಿಸಲು ಆಗ ಪಿಶಾಚಗಳು ತಮ್ಮ ಪಾಪಸಂಚಿತವಾದ ರೀತಿಯನ್ನೂ ಕಥೆಯನ್ನೂ ವಿವರಿಸಿ ಹೇಳಿದವು. ॥೧೮೨॥

ಗರ್ಗನು ಆ ಪಿಶಾಚಗಳ ಪಾಪಕಥೆಯನ್ನೂ ಮತ್ತು ಅವುಗಳ ಮೊದಲಿನ ಕಷ್ಟಜೀವನವನ್ನೂ ಕೇಳಿದನು. ಶಿವರಹಸ್ಯದ ಶ್ರವಣದಿಂದ ಸಂಪೂರ್ಣ ಬದಲಾವಣೆ ಹೊಂದಿದ ಅವುಗಳ ಆಕಾರವನ್ನೂ ಉತ್ಸಾಹ ಮನೋಭಾವನೆಯನ್ನೂ ಪರಾಮರ್ಶಿಸಿ ಆತನಿಗೆ ಸಂತೃಪ್ತಿಯಾಯಿತು. ಬಳಿಕ ಅವನು ಅಲ್ಲಿಯೇ ತನ್ನ ವಾಸಸ್ಥಾನವನ್ನು ಕಲ್ಪಿಸಿಕೊಂಡು ಅಪಾರ ನಿಧಿನಿಕ್ಷೇಪಗಳ ಸಹಾಯದಿಂದ ಅಲ್ಲಿಯೇ ಸುಖವಾಗಿ ವಾಸಮಾಡತೊಡಗಿದನು. ॥೧೮೩॥

ಈ ಪುಣ್ಯಕರವಾದ ಶಿವರಹಸ್ಯಸಂದರ್ಭವನ್ನು ಶ್ರವಣಮಾಡಿದುದರಿಂದ ಆ ಪಿಶಾಚಗಳು ತಮ್ಮ ಪಿಶಾಚತ್ವವನ್ನು ನೀಗಿಕೊಂಡು ಪುಣ್ಯಜೀವಿಗಳಾದವು. ಅಲ್ಲದೇ ಕ್ರಮವಾಗಿ ಗಂಧರ್ವತ್ವವನ್ನು ಪಡೆದುಕೊಂಡು ಆನಂದವನ್ನು ಹೊಂದಿದವು. ಆದುದರಿಂದ ಈ ಕಥೆಯು ಪರಮ ಪವಿತ್ರವೂ ಪುಣ್ಯತಮವೂ ಆಗಿರುತ್ತದೆ. ಶಿವಾರ್ಚನನಿರತರಾದ ಆಸ್ತಿಕಶ್ರೇಷ್ಠರು ಈ ಶಿವರಹಸ್ಯವನ್ನು ಅತ್ಯಂತ ಪ್ರಯತ್ನಪೂರ್ವಕವಾಗಿ ಸರ್ವದಾ ಶ್ರವಣಮಾಡಬೇಕು. ॥೧೮೪॥

ಏತತ್ಪುಸ್ತಕಮಾದರೇಣ ಲಿಖಿತಂ ಯಃ ಪೂಜಯೇತ್ಸಂತತಂ
ತತ್ಸಂತಾನಸಮೃದ್ಧಿರಕ್ಷಯಸುಖಾವಾಪ್ತಿರ್ಮಹಾಘಕ್ಷಯಃ ।
ಸ್ಯಾದೇವೇತಿ ಶಿವಪ್ರಸಾದದಮಿದಂ ಶೈವಂ ರಹಸ್ಯಂ ಪರಂ
ಶ್ರೋತವ್ಯಂ ಶಿವಪೂಜನಾದರರಸೈರ್ಮಾಹೇಶ್ವರೈರನ್ವಹಂ ॥೧೮೫॥

ಕಃ ಕರ್ಪೂರಪರಾಗಭಾಸುರಗಿರಿಸ್ಫಾರಸ್ಫುರಚ್ಚಂದ್ರಿಕಾ
ತಾರಾಸಾರಸುಧಾಕರಾಚಿರರುಚಿವ್ಯಾಹಾರಹೀರಾಕರಾತ್ ।
ದೂರೀಕರ್ತುಮನಂಗಹರ್ತುರಪರಶ್ಶಕ್ತೋಽಸ್ತ್ಯಭಿಖ್ಯಾಕುಲೈಃ
ಸೋಽಹಂ ಮೋಹಸಮೂಹವಾಹತಿಮಿರಾಸಾರಪ್ರಸಾರಾಕರಂ॥೧೮೬॥

ಈ ಶಿವರಹಸ್ಯವನ್ನು ಯಾವನು ಪುಸ್ತಕರೂಪದಲ್ಲಿ ಸಂಪೂರ್ಣವಾಗಿ ಬರೆಯುವನೋ ಮತ್ತು ಅದಕ್ಕೆ ಅತ್ಯಾದರದಿಂದ ಪೂಜೆಮಾಡುವನೋ ಆತನು ಮಹಾ ಪಾಪಗಳನ್ನು ಕಳೆದುಕೊಂಡು ಅಕ್ಷಯವಾದ ಸುಖವನ್ನು ಪಡೆಯುವನು. ಮತ್ತು ಅಂತಹವನಿಗೆ ಸಂತಾನವೇ ಮೊದಲಾದ ಸಕಲ ಸಂಪತ್ತುಗಳೂ ಸಮೃದ್ಧವಾಗುವುವು. ಆದುದರಿಂದ ಈ ಶಿವರಹಸ್ಯವು ಸಾಕ್ಷಾತ್ ಪರಮೇಶ್ವರನ ಪ್ರಸಾದವೆಂತಲೂ ವರವೆಂತಲೂ ತಿಳಿಯತಕ್ಕದ್ದು. ಈಶ್ವರಭಕ್ತರು ಈ ಶಿವರಹಸ್ಯದ ಮಹತ್ವವನ್ನು ಅರಿತುಕೊಂಡು ಶಿವಾರಾಧನೆಯನ್ನು ನಿತ್ಯವೂ ಮಾಡಿ ಸರ್ವದಾ ಈ ಕಥೆಯನ್ನು ಶ್ರವಣ ಮಾಡಬೇಕು. ॥೧೮೫॥

ಈ ಸಂಸಾರದಲ್ಲಿ ಬಿದ್ದವರಿಗೆ ಅನಾದಿಯಾದ ಪಾಪವಾಸನೆಯಿಂದ ಅಹಂಕಾರವೆಂಬ ಅಜ್ಞಾನವು ಮುಚ್ಚಿಕೊಂಡಿರುತ್ತದೆ. ಈ ಅಹಂಕಾರ ಮತ್ತು ಮೋಹವು ಮಹಾ ಅಂಧಕಾರದಂತೆ ಮನುಷ್ಯನ ನಿಜವಾದ ಪ್ರಕಾಶರೂಪವಾದ ಜ್ಞಾನವನ್ನು ಆವರಿಸಿಕೊಂಡು ಪದೇ ಪದೇ ಪ್ರಮಾದಗಳನ್ನು ತಂದೊಡ್ಡುತ್ತಿರುತ್ತದೆ. ಇಂಥ ರೂಢಮೂಲವಾದ ಅಹಂಕಾರವನ್ನು ಲೋಭವನ್ನು ಕಾಮಧ್ವಂಸಿಯಾದ ಪರಮೇಶ್ವರನೊಬ್ಬನನ್ನು ಬಿಟ್ಟು ಮತ್ತೆ ಬೇರೆ ಯಾರು ತಾನೇ ದೂರಮಾಡಬಲ್ಲರು ? ಇಲ್ಲ. ಇಂಥ ಸರ್ವಜ್ಞನೂ ಸರ್ವಸ್ವತಂತ್ರನಾದ ಮಹಿಮಾಶಾಲಿಯೂ ಬೇರೆ ಯಾರೂ ಕಾಣುವುದಿಲ್ಲ. ಮನುಷ್ಯನ ಅಹಂಕಾರ ಮೋಹಗಳನ್ನು ಕತ್ತರಿಸಿ ಆತನನ್ನು ಪ್ರಕಾಶವಾದ ಜ್ಞಾನದ ಬಳಿಗೆ ಒಯ್ಯುವವನು ಆ ಪರಮೇಶ್ವರನೊಬ್ಬನೇ. ಆ ಪರಶಿವನು ಕರ್ಪೂರಪರಾಗದಂತೆಯೂ ಉಜ್ಜ್ವಲವಾದ ಚಂದ್ರಿಕೆಯಂತೆಯೂ ಸಕಲ ನಕ್ಷತ್ರಮಂಡಲದಿಂದೊಡಗೂಡಿ ಮಂದಹಾಸ

ಸಾರಕ್ರೂರಕರೋರುಸೂರನಿಕರಾಕಾರಾಕರಂ ಶಂಕರಂ
ಸಾರಂ ಸಾರಮನುಸ್ಮರಾಮಿ ಸ ಪರಂ ಗೌರೀವಿಹಾರಾದರಃ ।
ಸಂಸಾರಜ್ವರಸಾಗರಜ್ವರಕರೋ ಧ್ಯೇಯೋ ದಯಾಸಾಗರಃ ॥೧೮೭॥

ಧನ್ಯಂ ಭಾಲತಲಂ ವಿಭೂತಿಲಲಿತಂ ರುದ್ರಾಕ್ಷಮಾಲಾಂಕಿತಂ
ಧನ್ಯಂ ಕಂಠತಲಂ ಚ ನೇತ್ರಯುಗಲಂ ಧನ್ಯಂ ಶಿವಾಲೋಕನೈಃ ।
ಧನ್ಯಂ ಶ್ರೋತ್ರಯುಗಂ ಚ ಶಂಕರಕಥಾಪೀಯೂಷಧಾರಾವೃತಂ
ಧನ್ಯಂ ಮಾನಸಮಂಬಿಕಾಪತಿಪದಧ್ಯಾನಾನುರಕ್ತಂ ಸದಾ ॥೧೮೮॥

ಧನ್ಯಂ ಮಂದಿರಮಿಂದುಶೇಖರಪದಾಚಾರಾದರಾತ್ಮಾವರ
ವ್ಯಾಹಾರವ್ಯವಹಾರಧೀರರುಚಿರವ್ಯಾಪಾರದಾರಾಕರಂ ।

ಯುಕ್ತನಾದ ಚಂದ್ರನಂತೆಯೂ ವಿರಾಜಮಾನನಾಗಿರುತ್ತಾನೆ. ಆತನು ಸ್ಮಿತಪೂರ್ವಕವಾಗಿ ಸಂಭಾಷಿಸುವಾಗ ರತ್ನಕಾಂತಿಯು ಪ್ರವಾಹವೇ ಚೆಲ್ಲುವುದೋ ಎಂಬಂತೆ ಶಿವರಹಸ್ಯ ಗ್ರಂಥಗಳೂ ಪ್ರಕಾಶಮಾನವಾಗುವುವು. ॥೧೮೬॥

ಆ ಗೌರೀ ವಿಹಾರಿಯಾದ ಪರಮೇಶ್ವರನು ಅನೇಕ ಕೋಟಿ ಕಿರಣಗಳಿಂದ ಕೋಟಿಸೂರ್ಯರಂತೆ ಉಜ್ಜ್ವಲ ಪ್ರಕಾಶಮಾನನಾಗಿರುವನು. ಆತನನ್ನು ದಿವ್ಯಲೋಚನವಿಲ್ಲದಿದ್ದರೆ ನೋಡಲು ಸಾಧ್ಯವಿರುವುದಿಲ್ಲ. ಅಂಥ ಸ್ವಯಂಜ್ಯೋತಿ ಸ್ವರೂಪವನ್ನು ನಾನು ಪದೇ ಪದೇ ಧ್ಯಾನಿಸುವೆನು. ಆ ದಯಾಸಾಗರನಾದ ಪರಶಿವನು ಈ ಸಂಸಾರ ಕ್ಲೇಶವೆಂಬ ಜ್ವರಕ್ಕೇ ಜ್ವರಪ್ರಾಯನಾಗಿರುವನು. ಆತನನ್ನು ಆರಾಧಿಸಿದರೆ ಈ ಸಂಸಾರವು ಧ್ವಂಸವಾಗುವುದರಲ್ಲಿ ಸಂದೇಹವಿಲ್ಲ. (ಈ ಶ್ಲೋಕದ ಒಂದು ಪಾದವು ಮೂಲದಲ್ಲಿಲ್ಲ.) ॥೧೮೭॥

ವಿಭೂತಿ ಲೇಪನದಿಂದ ಸುಂದರವಾಗಿರುವ ಲಲಾಟವು ಧನ್ಯವಾದದ್ದು. ರುದ್ರಾಕ್ಷ ಮಾಲೆಗಳಿಂದ ಅಲಂಕೃತವಾದ ಕಂಠವೇ ಧನ್ಯತರವಾದದ್ದು. ಶಿವಸಂದರ್ಶನ ಮಾಡುವ ನೇತ್ರಗಳೇ ಧನ್ಯತಮವಾದವುಗಳು. ಪ್ರವಾಹಕ್ಕೆ ಸದೃಶವಾದ ಶಿವಕಥೆಗಳನ್ನು ಶ್ರವಣಮಾಡುವ ಶ್ರೋತ್ರಗಳು ನಿಜವಾಗಿಯೂ ಕೃತಕೃತ್ಯವಾದವುಗಳು. ಆ ದೇವದೇವನಾದ ಪಾರ್ವತೀರಮಣನ ಪಾದಕಮಲಗಳನ್ನು ಸದಾ ಚಿಂತಿಸುವ ಮನಸ್ಸೇ ಪರಮಧನ್ಯವಾದದ್ದು. ॥೧೮೮॥

ಶಾಂಭವರ ಮನೆಯು ಪರಮಧನ್ಯವಾದದ್ದು. ಏಕೆಂದರೆ ಅಲ್ಲಿ ಎಲ್ಲರೂ ಶಂಕರಪಾದಪದ್ಮಾರಾಧಕರಾಗಿರುವರು. ಸರ್ವದಾ ಶಿವಕಥೆಯ ಪಠನ, ಶ್ರವಣ ಇವು

ಹಾರಾಪಾರಕುಮಾರವೀರಸುಕರಾಸಾರಪ್ರಸಾರಾಚಿರ
ಪ್ರಾಕಾರಪ್ರವರಂ ಪರಂಪರಮಿದಂ ಕಿಂ ಧನ್ಯಮನ್ಯದ್ಭವೇತ್ ॥೧೮೯॥

ಶ್ರೀಕಾಲಕಾಲಮಹಿಲಾಬಲಕಾಲಕಾಲ
ಹಾಲಾಹಲಾಮಲಗಲಾಮಲಜಾಲಭಾಲ ।
ಕಲ್ಲೋಲಲೋಲಕಮಲಾಮಲಪತ್ರನಾಲ
ಮೂಲತ್ರಿಶೂಲಮಮಲಂ ಕಲಯೇಽನುವೇಲಂ ॥೧೯೦॥

ಶ್ರೀಗೌರೀರಮಣಪ್ರಭಾವಕಥನಾನಂದೇನ ಮನ್ಮಾನಸಂ
ವ್ಯಾಪ್ತಂ ಪ್ರಾಪ್ತಮತಃ ಪರಂ ಶಿವಪದಾಂಭೋಜಾರ್ಚನಾನಾಂ ಫಲಂ ।
ಸ್ಕಂದಾನಂದದಮೇತದೇವ ಪರಮಂ ಶೈವಂ ರಹಸ್ಯಂ ಮುಹುಃ
ಮೋಹಾಗ್ನಿಪ್ರಲಯಾಂಬುವಾಹ ಇತಿ ಮೇ ಬುದ್ಧಿಃ ಪ್ರವೃದ್ಧಾ ಮುದೇ
॥೧೯೧॥

ಆ ಮನೆಯಲ್ಲಿ ಸದಾ ನಡೆಯುತ್ತವೆ. ಮತ್ತು ಶಿವನ ಸದ್ಗುಣಗಳನ್ನು ಸದಾ ಸುಶ್ರಾವ್ಯವಾಗಿ ಹಾಡಿಕೊಂಡು ಆನಂದದಿಂದ ಸರ್ವದಾ ಶಿವಾರಾಧನೆಯ ವ್ಯವಹಾರಗಳನ್ನೇ ನಡೆಸುತ್ತಿರುವರು. ಹಾಗೆಯೇ ಆ ಭಕ್ತರ ಪುತ್ರರೂ ಶಿವಧರ್ಮಗಳನ್ನು ಅನುಷ್ಠಾನಮಾಡುತ್ತಾ ಸರ್ವತ್ರ ಪ್ರಚಾರಮಾಡುವರು. ಹೀಗೆ ಸರ್ವವಿಧದಲ್ಲಿಯೂ ಶಿವಧರ್ಮಾಕರವಾಗಿ ಪುಣ್ಯಧಾಮವಾಗಿರುವ ಅಂತಹವರ ಮಂದಿರಗಳು ಪರಮ ಧನ್ಯಗಳಲ್ಲವೆ! ॥೧೮೯॥

ಓ ಕಾಲಕಾಲನೇ, ಮೃತ್ಯುಂಜಯನೇ! ನೀನು ಗಿರಿಜಾದೇಹಾರ್ಧಧಾರಿಯಾಗಿರುತ್ತೀಯೆ. ಪ್ರಪಂಚಕ್ಷಯಕಾರಿಯಾದ ಭಯಂಕರ ಹಾಲಾಹಲವಿಷವನ್ನು ನೀನು ವಿಲಾಸದಿಂದ ಕಂಠದಲ್ಲಿ ಧರಿಸಿದ್ದೀಯೆ. ನಿನ್ನ ಭ್ರೂಮಧ್ಯವು ವಿಲಕ್ಷಣವಾಗಿರುವುದಲ್ಲದೇ ಲೋಕೋತ್ತರವೂ ಆಗಿರುತ್ತದೆ. ಕಮಲದ ದಂಟಿನಂತಿರುವ ಲೋಕೋತ್ತರವಾದ ತ್ರಿಶೂಲಾಯುಧವನ್ನು ನೀನು ಧರಿಸಿರುವೆ. ಇಂಥ ಅಪ್ರಮೇಯ ಸ್ವರೂಪನಾದ ನಿನ್ನನ್ನೇ ನಾನು ಸರ್ವದಾ ಮನಸಾ ಧ್ಯಾನಿಸುವೆನು. ॥೧೯೦॥

ಆ ಗಿರಿಜಾರಮಣನ ಮಹಿಮಾತಿಶಯವನ್ನು ವರ್ಣಿಸಿ ನನಗೆ ಅಪಾರವಾದ ಆನಂದವುಂಟಾಗಿದೆ. ಆ ಆನಂದಾತಿಶಯವಾದ ನನ್ನ ಚಿತ್ತವೆಲ್ಲವೂ ಪರಿಪೂರ್ಣವಾಗಿ ಓಲಾಡುತ್ತಿರುವುದು. ಈ ಎಲ್ಲಾ ಭಾಗ್ಯವೂ ನನಗೆ ಶಿವಾರ್ಚನೆಯ ಪುಣ್ಯವಿಶೇಷ

॥ ಶ್ರೀಸದಾಶಿವ ಉವಾಚ ॥

ಇತಿ ತದ್ವಚನಂ ಶ್ರುತ್ವಾ ನತ್ವಾ ವ್ಯಾಸಂ ಪುನಃ ಪುನಃ ।
ಸೂತಾಶ್ರಮಂ ಯಯುಸ್ಸರ್ವೇ ಶೌನಕಾದ್ಯಾಶ್ಮಿವೇಶುಭೇ ॥೧೯೨॥

ತತ್ರ ಸೂತಂ ಪುನರ್ನತ್ವಾ ತೇ ಸರ್ವೇ ಮುನಿಪುಂಗವಾಃ ।
ತುಷ್ಟುವುರ್ವಿವಿಧೈಃ ಸ್ತೋತ್ರೈರ್ಮದ್ಭಕ್ತಂ ರೋಮಹರ್ಷಣಂ ॥೧೯೩॥

॥ ಋಷಯ ಊಚುಃ ॥

ವ್ಯಾಸಸ್ತ್ವಯಾ ಪ್ರೇರಿತ ಏವ ಸೂತ
ಶ್ರೀಮನ್ಮಹಾದೇವಕಥಾಸುಧಾಯಾಂ ।
ಅತೋ ವಯಂ ಧನ್ಯತಮಾಃ ಕೃತಾರ್ಥಾಃ
ಕೃತಾಃ ಕೃತಾಂತಾಂತಕಸೇವಯಾ ಚ ॥೧೯೪॥

ದಿಂದಲೇ ಲಭಿಸಿರುವುದು. ಶಿವರಹಸ್ಯವು ನನಗೆ ಪರಮ ಪ್ರಿಯವಾದುದು. ಇದೇ ಶಿವರಹಸ್ಯವು ಷಣ್ಮುಖಸ್ವಾಮಿಗೂ ಆನಂದಕರವಾದುದು. ಈ ಶಿವರಹಸ್ಯವು ಪರಮ ಮಹಿಮಾಶಾಲಿಯಾಗಿರುವುದರಿಂದಲೇ ಅಜ್ಞಾನವೆಂಬ ಅಗ್ನಿಗೆ ಮಹಾವೃಷ್ಟಿಯನ್ನು ಸುರಿಸುವ ಮೇಘದಂತೆ ಹಿತಕರವಾಗಿದೆ. ಇದೇ ಮುಂತಾದ ಶಿವಮಹಿಮಾತಿಶಯ ಗಳನ್ನು ಸ್ಮರಿಸುತ್ತಾ ನನ್ನ ಚಿತ್ತವು ಆನಂದದಲ್ಲಿ ಮುಳುಗುತ್ತಿರುವುದು. ॥೧೯೧॥

ಎಲೌ ಗಿರಿಜೆ! ಈಪ್ರಕಾರವಾಗಿ ವ್ಯಾಸನು ನನ್ನ ಕಥೆಯನ್ನು ವಿಸ್ತಾರವಾಗಿ ಹೇಳಲು ಅದನ್ನು ಕೇಳಿ ಶೌನಕಮುನಿಯೇ ಮೊದಲಾದ ಎಲ್ಲಾ ಮುನಿಗಳಿಗೂ ಅತ್ಯಾನಂದವಾಯಿತು. ಆಗ ಅವರೆಲ್ಲರೂ ವ್ಯಾಸಮುನಿಗೆ ಭಕ್ತಿಯಿಂದ ನಮಸ್ಕರಿಸಿ ಸೂತಮುನಿಯ ಆಶ್ರಮಕ್ಕೆ ತೆರಳಿದರು. ॥೧೯೨॥

ಸೂತಮುನಿಯ ಆಶ್ರಮವನ್ನು ಸೇರಿದ ಬಳಿಕ ಆ ಮುನಿಗಳೆಲ್ಲರೂ ಸೂತ ಮುನಿಯು ನನ್ನ ಪರಮಭಕ್ತನಾಗಿದ್ದಾನೆಂದು ಅರಿತುಕೊಂಡು ಆತನನ್ನು ಅನೇಕ ವಿಧವಾಗಿ ಸ್ತುತಿಸಿದರು. ॥೧೯೩॥

ಎಲೈ ಸೂತಮುನಿಯೇ! ನೀನು ಪರಮ ಶಿವಭಕ್ತನಾಗಿದ್ದೀಯೆ. ಆದ್ದರಿಂದಲೇ ವ್ಯಾಸಮುನಿಗೆ ಶ್ರೀ ಮಹಾದೇವನ ಪುಣ್ಯಕಥೆಯನ್ನು ಹೇಳಿ ನೀನು ಆತನನ್ನು ಶಿವಧರ್ಮ ಮಾರ್ಗದಲ್ಲಿ ಪ್ರೇರಿಸಿರುವೆ. ಇದರಿಂದ ನಮಗೆ ಬಹಳ ಉಪಕಾರ

ಶ್ರುತ್ವಾತ್ರೈವ ಮಹೇಶ್ವರಾನ್ವಿತಕಥಾಂ ಭೂಯೋ ವಸಾಮೋ ವಯಂ
ಸತ್ಸಂಗಃ ಖಲು ಶಾಂಗ ಇತ್ಯಭಿಮತಃ ಸಂಗೋಽಯಮುತ್ಯುತ್ತಮಃ ।
ಅಸ್ಮಾಕಂ ಧನಮೇತದೇವ ಬಹುಧಾ ತಾವದ್ವಿಧೇಯಾ ದಯಾ
ಶೈವಾಗ್ರೇಸರಪಾದಪದ್ಮಭಜನಾದ್ಧನ್ಯಂ ಪರಂ ಜೀವನಂ ॥೧೯೫॥

ಶ್ರೀವಿಶ್ವೇಶ್ವರನಾಮಕೀರ್ತನಸುಧಾಸಿಂಧುಃ ಪ್ರವೃದ್ಧೋಽಧುನಾ
ತತ್ಕಲ್ಲೋಲಪರಂಪರಾ ವಿತನುತೇ ಕಲ್ಯಾಣರಾಶೀನ್ ಮುಹುಃ ।
ಉತ್ಸೇಕಂ ಸಮವಾಪ್ಯ ತಾವದಧುನಾ ಪುಣ್ಯಾಂಬುರಾಶಿಃ ಪರಂ
ಬ್ರಹ್ಮಾನಂದಪ ಏವ ಶೋಭನಕುಲಂ ದಾಸ್ಯತ್ಯಯಂ ಸರ್ವಥಾ ॥೧೯೬॥

ವಾಯಿತು, ನಮ್ಮ ಉದ್ಧಾರವೂ ಆಯಿತು. ವ್ಯಾಸಮುನಿಯಿಂದ ನಾವೂ ಉಪದೇಶವನ್ನು ಪಡೆದು ಶಂಕರನನ್ನು ಸೇವಿಸಿ ಇಂದು ಧನ್ಯರಾದೆವು. ॥೧೯೪॥

ಭಕ್ತೋತ್ತಮನೇ ! ನಾವು ಪುನಃ ಪುನಃ ಶಿವಕಥೆಯನ್ನೇ ಶ್ರವಣಮಾಡುತ್ತಿರಬೇಕೆಂಬ ಅಪೇಕ್ಷೆಯಿಂದ ನಿನ್ನ ಬಳಿಯಲ್ಲೇ ವಾಸಮಾಡಲು ಬಂದಿರುವೆವು. ಸತ್ಸಹವಾಸದಿಂದ ಸದ್ಬುದ್ಧಿಯು ಅಭಿವೃದ್ಧವಾಗುತ್ತದೆಯಷ್ಟೆ. ಈಗ ನಿನ್ನ ಸಹವಾಸವು ಪರಮೋತ್ಕೃಷ್ಟವಾದದ್ದೆಂದು ನಾವು ಅರಿತಿದ್ದೇವೆ. ಇಂಥ ಸುಯೋಗವು ಲಭಿಸುವುದೇ ಪರಮ ಧನಲಾಭ ಸದೃಶವೆಂದು ನಾವು ಇಲ್ಲಿಗೆ ಬಂದಿದ್ದೇವೆ. ನಿನ್ನಂಥ ಶಿವಭಕ್ತಾಗ್ರಣಿಯನ್ನು ಸೇವಿಸಿ ನಮ್ಮ ಜೀವನವನ್ನು ಸಾರ್ಥಕಪಡಿಸಕೊಳ್ಳಬೇಕೆಂಬ ತೀವ್ರ ಆಸಕ್ತಿಯು ನಮಗುಂಟಾಗಿದೆ. ನಮ್ಮಲ್ಲಿ ದಯೆಯಿಟ್ಟು ನಿನ್ನ ಆಶ್ರಯದಲ್ಲಿ ನಮಗೆ ವಾಸಮಾಡಲು ಅನುಜ್ಞೆಯನ್ನು ದಯಪಾಲಿಸು. ॥೧೯೫॥

ಎಲೈ ಸೂತಮುನಿಯೇ ! ನಾವೆಲ್ಲರೂ ವಿಶೇಷವಾಗಿ ಶಿವನ ಭಜನೆಯನ್ನು ಮಾಡುವೆವು. ಶಿವನಾಮ ಸಂಕೀರ್ತನವೆಂಬ ಅಮೃತಸಾಗರವು ಅತ್ಯಂತ ಪ್ರವರ್ಧಮಾನವಾಗಿ ತರಂಗ ತರಂಗಗಳು ಸುತ್ತಲೂ ಹರಡುವಂತೆ ಮಾಡುವೆವು. ಆಂಥ ಶಿವನಾಮ ಲಹರಿಗಳು ನಮಗೆ ಸಕಲ ಶ್ರೇಯಸ್ಸುಗಳನ್ನೂ ಒದಗಿಸುವುದರಲ್ಲಿ ಸಂಶಯವಿಲ್ಲ. ಈಗ ಶಿವನಾಮ ಸಂಕೀರ್ತನ ಪ್ರಸಂಗದಿಂದ ನಮ್ಮ ಪುಣ್ಯರಾಶಿಯು ಕ್ಷಣಕ್ಷಣಕ್ಕೂ ಅಭಿವೃದ್ಧವಾಗುತ್ತಿದೆ. ಹೀಗೆ ಸರ್ವಾಕಾರವಾಗಿ ನಾವು ಶಿವಾರಾಧನ ರೂಪವಾದ ಸದ್ವ್ಯವಹಾರದಲ್ಲಿ ನಿರತರಾಗಿರುವುದರಿಂದ ನಮಗೆ ಸಕಲ ಸೌಭಾಗ್ಯಗಳು ಬ್ರಹ್ಮಾನಂದವೂ ಖಂಡಿತವಾಗಿ ಲಭಿಸುವುದೆಂದು ನಿರೀಕ್ಷಿಸುತ್ತಿದ್ದೇವೆ. ॥೧೯೬॥

ಇತ್ಯಾಕರ್ಣ್ಯ ಶಿವಪ್ರಸಾದಕಥನೋದ್ಭೂತಾದ್ಭುತಾನಂದಜಾ
ಪಾರಾಶ್ರುಪ್ರಗಲತ್ಸಘೋನ್ಮುಖಶುಕಾದ್ಯಾಸ್ಯಾಸ್ಯಸಂಗಾನ್ಮುನೀನ್ ।
ದೃಷ್ಟ್ವಾ ಶಂಕರಪೂಜಿತೋತ್ಸವರಸಾವಿರ್ಭಾವಸಂಭಾವನೋ
ಸಂಸಾರಪ್ರವರಾಪಬೋಧಕಕಥಾಸಾಮರ್ಥ್ಯಮಾಹಾಸ್ತಿಕಃ ॥೧೯೭॥

ವೇದಾಂತಾ ಅಪಿ ತಾವದಂತರಹಿತಾಃ ಶ್ರಾಂತಾಶ್ಶಿವಾರಾಧನ
ಧ್ಯಾನಾಪಾರಕಥಾಫಲಾನುಕಥನೇ ಸ್ಯಾದತ್ರ ಕಾ ವಾ ಕಥಾ ।
ದೇವಾನಾಮುರಗೇಂದ್ರಕಿನ್ನರಗುರುವ್ಯಾಸಾದಿಕಾನಾಂ ಕಥಾ
ದೂರೇ ಧೂರ್ಜಟಿವಾಗ್ವಿಶೇಷರಚನಾ ವಿಜ್ಞೇಯಮೇತತ್ಫಲಂ ॥೧೯೮॥

ಈ ರೀತಿ ಆ ಮುನಿಗಳೆಲ್ಲರೂ ಹೇಳುತ್ತಿದ್ದಾಗ ಅವರ ಕಣ್ಣುಗಳಿಂದ ಆನಂದ ಬಾಷ್ಪವು ತುಂಬಿ ತುಳುಕುತ್ತಿದ್ದಿತು. ಶಿವನ ಪ್ರಸಾದ ಮಹಿಮೆಯನ್ನು ಅವರು ಮನಸಾರೆ ಭಾವಿಸಿಕೊಂಡು ಅದ್ಭುತರಸಾವಿಷ್ಟರಾಗಿದ್ದರು. ಶಿವಕಥೆಯನ್ನು ನೆನೆಸಿಕೊಂಡು ಅವರು ಅಮೃತವನ್ನು ಆಸ್ವಾದಿಸಿದಂತೆ ಆನಂದಭರಿತರಾಗಿದ್ದರು. ಹೀಗೆ ವಿಶೇಷವಾದ ಅನುಭೂತಿಯುಕ್ತರಾಗಿ ಮುನಿಗಳು ಹೇಳಿದ ಮಾತನ್ನು ಕೇಳಿ, ಆ ಮುನಿಗಳನ್ನೂ ನೋಡಿ, ಸೂತಮುನಿಗೆ ಬಹು ಆನಂದವಾಯಿತು. ಆಗ ಆತನು ಶಿವಪೂಜೆಯಿಂದ, ಶಿವೋತ್ಸವಾನುಷ್ಠಾನದಿಂದ, ಉಂಟಾಗುವ ಆನಂದ ರಸಾನುಭವವನ್ನು ಮನಸಾರೆ ನೆನೆಸಿಕೊಂಡನು. ಅನಂತರ ಆ ಸೂತಮುನಿಯು ಸಕಲ ಮುನಿಗಳನ್ನು ಕುರಿತು ಹೀಗೆ ನುಡಿದನು. ಆತನ ಮಾತುಗಳು ಈ ಸಂಸಾರ ದಲ್ಲಿನ ಆಗುಹೋಗುಗಳನ್ನು ವಿಮರ್ಶಿಸತಕ್ಕದ್ದಾಗಿಯೂ ಸಂಸಾರದ ಆಭಾಸಮಾನ ವಾದ ಸ್ವರೂಪವನ್ನು ನಿರೂಪಿಸತಕ್ಕದ್ದಾಗಿಯೂ ಇದ್ದವು. ॥೧೯೭॥

ಎಲೈ ಮುನಿಗಳಿರಾ! ನೀವು ಹೇಳುವುದು ಯಥಾರ್ಥವಾಗಿದೆ. ವೇದಾಂತಗಳು ಆದ್ಯಂತರಹಿತಗಳಾಗಿದ್ದರೂ ಅವುಗಳಿಗೆ ಶಿವಧ್ಯಾನ, ಶಿವಾರಾಧನ, ಶಿವಕಥಾಶ್ರವಣ ಇವುಗಳ ಫಲವು ಇಷ್ಟೆಂದು ಹೇಳಲು ಸಾಧ್ಯವಾಗಿಲ್ಲ. ಅಂದಮೇಲೆ ಇತರರ ಪಾಡೇನು ? ದೇವತೆಗಳಿಗಾಗಲೀ ಆದಿಶೇಷ, ಬೃಹಸ್ಪತಿ, ವ್ಯಾಸ ಮುಂತಾದವರಿಗಾಗಲಿ ಅದನ್ನು ವರ್ಣಿಸಲು ಸಾಧ್ಯವಿರುವುದಿಲ್ಲ. ಅದನ್ನು ಕೇವಲ ಆ ಪರಮೇಶ್ವರನ ಮಾತಿನಿಂದಲೇ ಅರಿತುಕೊಳ್ಳಬೇಕು. ॥೧೯೮॥

ಯೇ ವಾಂಛಂತಿ ಶಿವಂ ಶಿವಾಮಿತಕಥಾರೂಪಸ್ಫುರತ್ಸ್ವರ್ಧುನೀ
ನಿರ್ಧೂತಾಖಿಲಪಾತಕಾತ್ಮಕಮಲಾಶ್ಶೀಲಾಃ ಸುಶೀಲಾಃ ಕಲೌ ।
ತೇ ಸರ್ವೇ ಶಿವಮೇವ ಸಂತತಮುಮಾಕಾಂತಪ್ರಸಾದಾತ್ಪರಂ
ಸಂಪ್ರಾಪ್ಯಾತ್ರ ಶಿವಂಕರಂ ಶಿವಮಿತಿ ಜ್ಞಾತ್ವಾ ಶಿವಂ ಯಾಂತ್ಯಪಿ ॥೧೯೯॥

ಅಜ್ಞಾನೋರುತರಾಂಧಕಾರಲಹರೀಪೂರಾರುಣಃ ಕೋಽಪ್ಯಯಂ
ವಿಜ್ಞಾನಾಮೃತಸಾಗರಶ್ಶಿವಕಥಾರೂಪೋ ವಿರೂಪಂ ಪರಂ ।
ಸರ್ವಂ ಶರ್ವಸುರೂಪಮೇವ ಕುರುತೇ ಮುಕ್ತಾನಮುಕ್ತಾನಹೋ
ತದ್ಬಿಂದುಸ್ಸುರಮಂದಿರಾಕರಕರಂ ಕರ್ತುಂ ಸಮರ್ಥಶ್ಶ್ರುತಃ॥ ೨೦೦॥

ಯೋಗಾಭ್ಯಾಸರತಾ ಭವಂತು ಬಹವಸ್ತೀರ್ಥಾಟನಾತ್ಯುದ್ಯತಾಃ
ತೀರ್ಥಾವಾಸರತಾಶ್ಚ ನಿಷ್ಠುರಗಿರಿದ್ವಾರಾಂಧಕಾರಾದರಾಃ ।

ಈ ಕಲಿಯುಗದಲ್ಲಿ ಯಾರು ಶ್ರೇಯಸ್ಸನ್ನು ಆಕಾಂಕ್ಷಿಸುವರೋ, ಅವರು ಮೊದಲು ಶಿವಕಥಾರೂಪವಾದ ದೇವಗಂಗೆಯಲ್ಲಿ ಮುಳುಗಿ ತಮ್ಮ ಸಮಸ್ತ ಪಾಪಗಳನ್ನೂ ತೊಳೆದುಕೊಳ್ಳಬೇಕು. ಜನ್ಮಕ್ಕೆ ಹತ್ತಿಕೊಂಡಿರುವ ಪಾಪಗಳೆಂಬ ಕೊಳೆಯನ್ನು ಶಿವಕಥಾ ಶ್ರವಣದಿಂದ ಕಳೆದುಕೊಂಡಿರುವವರು ಮಾತ್ರವೇ ಕಲ್ಯಾಣವನ್ನು ಹೊಂದುವರು. ಸತತವೂ ಶಿವಾರಾಧನೆಯನ್ನು ಮಾಡಿ ಶಿವಸುಪ್ರೀತಿಗೆ ಪಾತ್ರರಾದ ಸದಾಚಾರ ಸಂಪನ್ನರು ಮಾತ್ರವೇ ಮಂಗಳಗಳಿಗೆ ಆದಿಕಾರಣನಾದ ಪರಮೇಶ್ವರನನ್ನು ಅರಿತುಕೊಂಡು ಶಿವನಿವಾಸಸ್ಥಾನವಾದ ಕೈಲಾಸವನ್ನು ಪಡೆಯುವರು.॥೧೯೯॥

ಶಿವಕಥೆ ಎಂಬುದು ಅಪಾರವಾದ ಒಂದು ವಿಜ್ಞಾನ ಸಾಗರದಂತಿರುವುದು. ಇದರಿಂದ ಅಜ್ಞಾನ, ಮೋಹ, ಎಂಬ ಅಂಧಕಾರವು ಶತಚ್ಛಿನ್ನವಾಗಿ ಹರಿದುಹೋಗುತ್ತದೆ. ಮೋಹಾಂಧಕಾರಕ್ಕೆ ಶಿವಕಥೆಯು ಅರುಣೋದಯ ಪ್ರಾಯವೇ ಸರಿ. ಅಮೃತ ತುಲ್ಯವಾದ ಈ ಶಿವಕಥೆಯ ಸೇವನೆಯಿಂದ ವಿಕಾರಾಕಾರವುಳ್ಳವರೂ ಕುರೂಪಿಗಳೂ ಅಜ್ಞರೂ ಮುಕ್ತಪ್ರಾಯರಾಗಿ ಸಾಕ್ಷಾತ್ ಶಿವಸಾರೂಪ್ಯವನ್ನೇ ಪಡೆಯುವರು. ಆ ಶಿವಕಥೆಯು ಒಂದು ಅಲ್ಪವನ್ನೂ ಸಹ ದೇವಲೋಕಸಾಮ್ರಾಜ್ಯದಷ್ಟು ವೈಭವಯುಕ್ತವಾದದ್ದನ್ನಾಗಿ ಮಾಡಲು ಶಕ್ತವಾಗಿರುತ್ತದೆ. ಇದರಲ್ಲಿ ಸಂಶಯವೇ ಇಲ್ಲ. ॥೨೦೦॥

ಅನೇಕರು ಆತ್ಮೋದ್ಧಾರಕ್ಕೆಂದು ಕಠೋರವಾದ ತಪಸ್ಸನ್ನು ಮಾಡುವರು. ಯೋಗಾಭ್ಯಾಸವನ್ನು ಮಾಡುವರು. ಮತ್ತೆ ಕೆಲವರು ಅನೇಕಾನೇಕ ಕ್ಷೇತ್ರ ತೀರ್ಥ

ತತ್ರಾಸ್ಥಾ ಮಮ ಮಾಸ್ತ್ವಹಂ ಶಿವರಹಸ್ಯಾಪಾರವರ್ಣಸ್ಫುರತ್
ನಿಶ್ರೇಣೀಶಿಖರೇಣ ಶಂಕರಕರಾಲಂಬೇ ಶಿವಂ ಪ್ರಾರ್ಥಯೇ ॥೨೦೧॥

ಕಂಠೇ ತಿಷ್ಠತಿ ಯಸ್ಯ ವಾ ಶಿವರಹಸ್ಯಾನಂತಚಿಂತಾಮಣಿಃ
ನಿತ್ಯಂ ತದ್ವಶತಾಂ ಪ್ರಯಾಂತಿ ವಿಬುಧಾಃ ಕಾಲಾನ್ವಿತಾಃ ಸ್ವಾನ್ವಿತಾಃ।
ತದ್ಗೇಹಾಂಗಣಮೇತ್ಯ ತಿಷ್ಠತಿ ರಮಾ ವಾಣೀಶಚೀಸಂಯುತಾ
ತದ್ಭಾಗ್ಯಾವಧಿಮಿಂದುಖಂಡವಿಲಸನ್ಮೌಳಿಃ ಪರಂ ವೇತ್ತ್ಯಹೋ ॥೨೦೨॥

ಆರುಹ್ಯಾಹಮಹಂ ಮುಹುಶ್ಶಿವರಹಸ್ಯಾನಂದದಂ ಸ್ಯಂದನಂ
ಋಗ್ವೇದಾದಿಕವೇದಚಕ್ರಘಟಿತಂ ವ್ಯಾಸಾದಿಕಾಶ್ವಾಶ್ರಿತಂ।
ಹಾರಾಪಾರವರಧ್ವಜಂ ಶಿವಕಥಾಶಯ್ಯಾವಿತಾನಾನ್ವಿತಂ
ಶರ್ವಾಧಿಷ್ಠಿತಮಂತರಾಯರಹಿತಸ್ಯಾಪಾರಮಾನಂದಯೇ ॥೨೦೩॥

ಗಳ ಯಾತ್ರೆಗಾಗಿ ಅಲೆಯುವರು. ಮತ್ತು ಕ್ಷೇತ್ರವಾಸವನ್ನು ಮಾಡುವರು. ಮತ್ತೆ ಹಲವರು ಭಯಂಕರವಾದ ಗಿರಿಗುಹೆಗಳ ಏಕಾಂತ ಅಂಧಕಾರವನ್ನು ಆಶ್ರಯಿಸುವರು. ಆದರೆ ನನಗೆ ಇವುಗಳಲ್ಲಿ ಒಂದೂ ಬೇಡ. ಅವುಗಳಲ್ಲಿ ನನಗೆ ಆದರ ಪ್ರವೃತ್ತಿಯೇ ಇಲ್ಲ. ನಾನು ಕೇವಲ ಶಿವರಹಸ್ಯ ಧ್ಯಾನಾಸಕ್ತನಾಗುವೆನು. ಆ ಶಿವರಹಸ್ಯದ ಒಂದೊಂದು ಅಕ್ಷರವೆಂಬ ಸೋಪಾನಗಳನ್ನು ಏರುತ್ತಾ ಶಿಖರಕ್ಕೆ ತಲಪಿ ನನಗೆ ಅಭಯಹಸ್ತವನ್ನು ಕರುಣಿಸೆಂದು ಶಿವನನ್ನೇ ಪ್ರಾರ್ಥಿಸುತ್ತೇನೆ. ॥೨೦೧॥

ಚಿಂತಾಮಣಿರತ್ನಸದೃಶವಾದ ಈ ಶಿವರಹಸ್ಯವು ಯಾವಾತನ ಕಂಠಸ್ಥವಾಗಿರುತ್ತದೆಯೋ, ಆತನಿಗೇ ಸಕಲ ದೇವತೆಗಳೂ ಅಧೀನರಾಗುವರು. ಯಮನೇ ಮೊದಲಾದ ಸಮಸ್ತ ದೇವತೆಗಳೂ ತಮ್ಮ ಸರ್ವಸ್ವದೊಂದಿಗೆ ವಶೀಭೂತರಾಗುತ್ತಾರೆ. ಅಂಥ ಶಿವರಹಸ್ಯವನ್ನು ಅಧ್ಯಯನಮಾಡಿದವನ ಮನೆಯ ಅಂಗಳದಲ್ಲಿ ಲಕ್ಷ್ಮಿಯು, ಸರಸ್ವತಿ, ಶಚೀ ಮುಂತಾದವರೊಡಗೂಡಿ ಬಂದು ನೆಲಸುವಳು. ಅಂಥ ಪರಮವಿಜ್ಞಾನಶಾಲಿಯ ಭಾಗ್ಯವು ಎಷ್ಟು ಮಹತ್ತರವಾಗಿರುತ್ತದೆಂಬುದನ್ನು ಆ ಪರಮೇಶ್ವರನೊಬ್ಬನೇ ಬಲ್ಲನು. ॥೨೦೨॥

ಪರಮಾನಂದಪ್ರದಾನಮಾಡುವ ಶಿವರಹಸ್ಯವೆಂಬ ರಥವನ್ನು ನಾನು ಪದೇ ಪದೇ ಏರುತ್ತೇನೆ. ಆ ಶಿವರಹಸ್ಯರೂಪವಾದ ರಥಕ್ಕೆ ಋಗ್ವೇದಾದಿ ವೇದರಾಶಿಗಳೇ ಚಕ್ರಗಳು. ವ್ಯಾಸಾದಿ ಮುನಿಗಳೇ ಅಶ್ವಗಳು. ಆ ರಥವು ಶಿವಕಥೆ ಎಂಬ ದಿವ್ಯವಾದ

ಪಶ್ಯಾಮುಶ್ಯತಶಶ್ವಿನಂಕರಶಿವಾಕಾಂತಾತಿಕಾಂತಾಮಿತಾ
ನಂತಾನಂದಕಥಾಸುಧಾಕರಕರವ್ಯಾಸಾರಸಾರಾಕರಂ ।
ಪಾರಶ್ರೀಕರತಾರಕಂ ಶಿವರಹಸ್ಯಾನಂದಮತ್ಯದ್ಭುತಂ
ಪಾರಾಚಾರಚಿರಾಚಿರದ್ಯುತಿಹರವ್ಯಾಹಾರಗಂಗಾವೃತಂ ॥೨೦೪॥

ಅತ್ಯಲ್ಪಂ ಫಲಮಿಂದಿರಾರಮಣತಾರೂಪಂ ವಿಧಿತ್ವಾತ್ಮಕಂ
ತ್ರೈಲೋಕ್ಯಾಧಿಪತಿತ್ವಮಪ್ಯಗಸುತಾಕಾಂತಾರ್ಚಕಸ್ಯೇತ್ಯತಃ ।
ಅನ್ಯತ್ತಾವದಭೂತಪೂರ್ವಮಮರಾಪ್ರಾಪ್ಯಂ ಕಿಮಪ್ಯಂಬಿಕಾ
ಕಾಂತಾನಂತಕಥೋತ್ಸುಕಸ್ಯ ಚ ಪರಂ ಕಲ್ಪ್ಯಂ ಫಲಂ ತದ್ವಿಧೇಃ ॥೨೦೫॥

ಶಯ್ಯಾಸನವಿತಾನಯುಕ್ತವಾಗಿರುತ್ತದೆ. ಅದಕ್ಕೆ ಶಾಂಭವರೇ ಧ್ವಜಪತಾಕಾಸ್ವರೂಪರು. ಆ ರಥದಲ್ಲಿ ಸಾಕ್ಷಾತ್ ಪರಶಿವನು ವಿರಾಜಮಾನನಾಗಿ ಕಾಣುವನು. ಆ ರಥವು ಅಪ್ರತಿಹತವಾದ ಊರ್ಧ್ವಗಮನವುಳ್ಳದ್ದಾಗಿರುತ್ತದೆ. ಇಂಥ ದಿವ್ಯವಾದ ರಥವನ್ನೇರಿ ನಾನು ಪರಮಾನಂದವನ್ನು ಹೊಂದುವೆನು. ||೨೦೩||

ಈ ಶಿವರಹಸ್ಯವು ಅತ್ಯದ್ಭುತವಾದದ್ದು. ಅದರಿಂದ ಲಭಿಸುವ ಆನಂದವೂ ಸಹ ಪರಮಾದ್ಭುತವಾಗಿರುತ್ತದೆ. ಈ ಶಿವರಹಸ್ಯವು ಅತ್ಯುತ್ಕೃಷ್ಟವಾದ ಶಿವತಾರಕ ಮಂತ್ರವೇ ಸರಿ. ಸಕಲ ಶ್ರೇಯಃಪ್ರದಾತನೂ ಭಗವತೀ ಗಿರಿಜಾ ವಲ್ಲಭನೂ ಆದ ಪರಶಿವನ ಪುಣ್ಯಕಥೆ ಎಂಬ ಚಂದ್ರಮನು ಈ ಶಿವರಹಸ್ಯದಲ್ಲಿ ತನ್ನ ಪೂರ್ಣಕಲೆಗಳಿಂದ ಯುಕ್ತನಾಗಿ ತನ್ನ ಅಮೃತಮಯವಾದ ಕಿರಣಗಳನ್ನು ಸರ್ವತ್ರ ಪ್ರಸರಿಸುತ್ತಿರುತ್ತಾನೆ. ಈ ಶಿವರಹಸ್ಯವು ಅಮೃತವೆಂಬ ಪಾನೀಯದ ಗೃಹವಾಗಿರುತ್ತದೆ. ಇದನ್ನು ಪಾನಮಾಡಿ ಮತ್ತರಾದ ಶಿವಭಕ್ತರು ಶಿವಧರ್ಮಸ್ವರೂಪಗಳನ್ನು ಯಥೇಚ್ಛವಾಗಿ ಸಾರುವರು. ಉದ್ಘೋಷಿಸುವರು. ಈ ಶಿವರಹಸ್ಯವು ಶಿವಭಕ್ತಿಯಿಂದ ಮೈಮರೆತ ಆಸ್ತಿಕಶ್ರೇಷ್ಠರ ಧರ್ಮಕೋಲಾಹಲದಿಂದ ಪರಿಪೂರ್ಣವಾಗಿ ಪ್ರಕಾಶಿಸುತ್ತದೆ. ||೨೦೪||

ಆ ಗಿರಿಜಾರಮಣನ ದಿವ್ಯಚರಿತೆಯಾದ ಈ ಶಿವರಹಸ್ಯದಲ್ಲಿ ಉತ್ಸುಕನಾಗಿರುವವನಿಗೆ ಲಕ್ಷ್ಮೀಪತಿತ್ವಪ್ರಾಪ್ತಿ ಎಂಬುದು ಅತ್ಯಲ್ಪ ಫಲವು. ಹಾಗೆಯೇ ಬ್ರಹ್ಮತ್ವ ಪ್ರಾಪ್ತಿ, ತ್ರೈಲೋಕ್ಯಾಧಿಪತ್ಯವುಳ್ಳ ಇಂದ್ರತ್ವಪ್ರಾಪ್ತಿ ಮುಂತಾದವುಗಳೆಲ್ಲಾ ಶಿವ ಪೂಜಕನಿಗೆ ಕೇವಲ ಸುಲಭವಾದ ಫಲಗಳು. ಈ ಫಲಗಳಿಗೆಲ್ಲವುಗಳಿಗಿಂತಲೂ

ಶ್ರುತ್ವಾಪಿ ಪ್ರಯುತೋ ದ್ವಿಜಶ್ಶಿವರಹಸ್ಯಾರ್ಥಾರ್ಧಭಾಗಾಕ್ಷರಾ
ಪಾರಶ್ರೀಕರಧೀರವೀರರವಮುಷ್ಯಸ್ತಾಘಕೋಟಿರ್ಭವೇತ್ ।
ಮುಕ್ತೋಽಪೀತಿ ಶಪಾಮಿ ಶಂಕರಪದಾಂಭೋಜಂ ಭುಜಾವುನ್ನತೌ
ಕೃತ್ವಾ ದೇವಗಣಸ್ತುತಾಂ ಶಿವಕಥಾಂ ಮತ್ವಾಪಿ ನತ್ವಾ ಶಿವೌ ॥೨೦೬॥

ಸತ್ಯಂ ತಾವದಿಹೋಚ್ಯತೇ ಶಿವರಹಸ್ಯಾನಂದಮಂದಾಕಿನೀ
ಕಲ್ಲೋಲಾನೀತಪೋತಪೂತಹೃದಯಾಂಭೋಜೇಷು ಮೃತ್ಯುಂಜಯಃ ।
ನೃತ್ಯತ್ಯಂಬಿಕಯಾ ಸಹಾನ್ಯತರಸ್ಯೈಃ ಕೈಲಾಸವಾಸೇನ ವಾ
ಕೃತ್ಯಂ ನೇತಿ ಮುಹುರ್ಮುಹುಶ್ಶಿವರಹಸ್ಯಾನಂದಗಂಗಾಧರಃ ॥೨೦೭॥

ಮಿಗಿಲಾದ ಸಕಲ ದೇವತೆಗಳಿಗೂ ಅಲಭ್ಯವಾದ ಪರಾತ್ಪರ ಫಲಪ್ರಾಪ್ತಿಯೆಂಬುದು ಶಿವಭಕ್ತನಿಗೆ ಸಾಧ್ಯವೆನಿಸುವುದು. ||೨೦೫||

ಈ ಶಿವಕಥಾರೂಪವಾದ ಶಿವರಹಸ್ಯವನ್ನು ದೇವತೆಗಳೂ ಸಹ ಆದರದಿಂದ ಪಠಿಸುತ್ತಾರೆ. ದ್ವಿಜನಾದವನು ಈ ಶಿವರಹಸ್ಯದಲ್ಲಿನ ಶ್ಲೋಕವನ್ನು ಅಥವಾ ಆ ಶ್ಲೋಕಾರ್ಧದ ಒಂದು ಅಕ್ಷರವನ್ನು ಆದರದಿಂದ ಧ್ವನಿಗೈದರೆ ಅಥವಾ ಅಂಥ ಧ್ವನಿಯನ್ನು ಭಕ್ತಿಯಿಂದ ಶ್ರವಣಮಾಡಿದರೆ ಆತನ ಕೋಟಿ ಕೋಟಿ ಪಾಪಗಳೂ ನಾಶವಾಗುವುವು. ಇದರ ತತ್ವವನ್ನು ತಿಳಿದುಕೊಂಡು ಮತ್ತೂ ಗಿರಿಜೆಯನ್ನೂ ಶಿವನನ್ನೂ ಪೂಜಿಸತಕ್ಕವನು ಮೋಕ್ಷವನ್ನೇ ಸೇರುವನೆಂದು ಶಿವಪಾದಾರವಿಂದಗಳಲ್ಲಿ ಆಣೆ ಇಟ್ಟು, ಎರಡೂ ತೋಳುಗಳನ್ನು ಮೇಲಕ್ಕೆತ್ತಿ ಶಪಥದಿಂದ ಹೇಳಬಲ್ಲೆನು. ||೨೦೬||

ಎಲೈ ಮುನಿಗಳೇ, ನಿಮಗೆ ನಿಜವಾದ ಸಂಗತಿಯನ್ನು ಹೇಳುವೆನು. ಇದರಲ್ಲಿ ಕೊಂಚವೂ ಸಂಶಯಪಡಲು ಅವಕಾಶವಿಲ್ಲ. ಯಾವ ಮನುಷ್ಯನ ಹೃದಯದಲ್ಲಿ ಶಿವರಹಸ್ಯಪ್ರಯುಕ್ತನಾದ ಆನಂದವೆಂಬ ಗಂಗೆಯು ಪ್ರವಹಿಸುತ್ತಾ ತನ್ನ ದಿವ್ಯಲಹರಿಗಳಿಂದ ಪಾವಿತ್ರ್ಯವನ್ನುಂಟುಮಾಡುತ್ತಿರುತ್ತದೆಯೋ, ಅಂತಹವನ ಹೃದಯದಲ್ಲಿ ಅದೇ ಶಿವರಹಸ್ಯವೆಂಬ ಗಂಗೆಯನ್ನು ಶಿರಸಾ ಧಾರಣಮಾಡಿಕೊಂಡು ಪರಮೇಶ್ವರನು ಗಿರಿಜೆಯೊಡನೆ ಅತ್ಯಾನಂದಭರದಿಂದ ನಾಟ್ಯವಾಡುವನು. ಅಂಥ ಅಪೂರ್ವವಾದ ರಂಗಸ್ಥಳವು ಇರುವ ತನಕ ಕೈಲಾಸದಿಂದೇನು ಪ್ರಯೋಜನ? ಎಂದು ನೆನೆಸಿ ಪರಮೇಶ್ವರನು ಅಂಥ ಭಕ್ತನ ಹೃದಯದಲ್ಲಿಯೇ ಅಟ್ಟಹಾಸದಿಂದ ವಿರಾಜಮಾನನಾಗುವನು. ||೨೦೭||

ಶ್ರುತ್ಯಂತಪ್ರಮಥಾಧಿನಾಯಕಕಥಾಪೂತಾಸ್ತತಸ್ತತ್ಕಥಾ
ಮಧ್ಯಸ್ಥಾಕ್ಷರರೂಪಮಘಗಿರಿಪ್ರಧ್ವಂಸವಜ್ರಾಯುಧಂ ।
ತತ್ಪಾಪಾಂಬುಧಿಬಾಡಬೋಽಘಕುಲಾಪಾರಾಂಧಕಾರಾಮಿತಾ
ನಭ್ರಾರ್ಕಾಮಿತರಾಶಿಕುಂಡಲಮಿದಂ ಕಿಂ ವಾ ಸುಧಾಸಾಗರಃ ॥೨೦೮॥

ಕಸ್ತೂರೀಸ್ವಲ್ಪಖಿಲ್ಯಾಮಿವ ಸುಕೃತಕರಾಪಾರರತ್ನಾಕರೋರು
ಶ್ರೀಯುಕ್ತಾನಂತಮುಕ್ತಾಫಲಮಿವ ವಿಮಲಂ ಶೈವನೋತದ್ರಹಸ್ಯಂ ।
ಧೃತ್ವಾ ಭಾವೋಽಪಿ ಭಾತಿ ಪ್ರಭುರಿವ ಜಗತಾಂ ಶಂಭುಭಕ್ತಪ್ರಭಾವೋ
ಭಾವೋ ಭಾಗ್ಯಾಂಬುರಾಶಿಶ್ಶಿವಪದಕಮಲಾರಾಧಕಃ ಕೋಽಪಿ ಲೋಕೇ
॥೨೦೯॥

ಎಲೈ ಮುನಿಗಳೇ, ನೀವೆಲ್ಲರೂ ಶಿವಕಥಾಶ್ರವಣದಿಂದ ಪೂತರಾಗಿರುತ್ತೀರಿ. ವೇದಾಂತಪ್ರತಿಪಾದ್ಯನೂ ಪರಮಪುರುಷನೂ ಆದ ಶಂಕರನ ದಿವ್ಯಕಥಾಮೃತವನ್ನು ಆಸ್ವಾದಿಸಿ ಪವಿತ್ರಾತ್ಮರಾಗಿರುತ್ತೀರಿ. ಆದರೆ ಈಗ ನಾನು ಹೇಳುವುದನ್ನೂ ನೀವು ಗಮನಿಸಿ ಕೇಳಿರಿ. ಈ ಶಿವರಹಸ್ಯದಲ್ಲಿನ ಒಂದೊಂದು ಅಕ್ಷರವೂ ಸಹ ಪಾಪಪರ್ವತಗಳ ಪ್ರಧ್ವಂಸಕಾರ್ಯದಲ್ಲಿ ವಜ್ರಾಯುಧವಾಗಿರುವುದು. ಪಾಪಸಮುದ್ರದ ಶೋಷಣಕಾರ್ಯದಲ್ಲಿ ಬಡಬಾಗ್ನಿಸ್ವರೂಪವಾಗಿದೆ. ಪಾಪವೆಂಬ ಗಾಡಾಂಧಕಾರಕ್ಕೆ ಮೇಘಾಚ್ಛಾದನೆಯಿಲ್ಲದ ಅಪಾರ ಸೂರ್ಯಮಂಡಲದಂತಿದೆ. ಅಥವಾ ಶಿವರಹಸ್ಯದ ಅಕ್ಷರವು ಸಾಕ್ಷಾತ್ ಅಮೃತಸಾಗರವೆನಿಸಿದೆ. ||೨೦೮||

ಇನ್ನು ಶಾಂಭವನ ಮಹತ್ವವು ಎಷ್ಟಿದೆ ಎಂದು ಹೇಗೆ ಹೇಳುವುದು? ಆ ಶಾಂಕರ ಎಂಬ ಪದಾರ್ಥವು ಒಂದು ಅಪೂರ್ವವಾದುದು. ಲೋಕೋತ್ತರವಾಗಿ ಅನಿವಾರ್ಯವೆನಿಸಿದೆ. ಆತನು ಸಾಕ್ಷಾತ್ ಭಾಗ್ಯರಾಶಿಯೇ ಆಗಿರುವನು. ಪುಣ್ಯ ಸಾಗರದಲ್ಲಿ ಉದ್ಭವಿಸಿ ಘನವಾಗಿಯೂ ಲೋಕೋತ್ತರವಾಗಿಯೂ ಇರುವ ಮುಕ್ತಾಫಲ (ಮುತ್ತು) ದಂತೆ ಶೈವನೆನಿಸಿದವನು ಈ ಶಿವರಹಸ್ಯವನ್ನು ಧಾರಣೆ ಮಾಡಿಕೊಂಡಿರುತ್ತಾನೆ. ಈ ಶಿವರಹಸ್ಯವನ್ನು ಧರಿಸಿದ್ದರಿಂದಲೇ ಆತನು ಸಕಲ ಜಗತ್ತುಗಳಿಗೂ ಪ್ರಭುವಿನಂತೆ ತೇಜಸ್ವಿಯಾಗಿ ವಿರಾಜಿಸುತ್ತಾನೆ. ಅಂತಹ ಶಾಂಭವನ ಮಹಿಮೆಯೇ ಒಂದು ಅದ್ವಿತೀಯವಷ್ಟೆ. ||೨೦೯||

ಕಿಂ ತಸ್ಯಾವಭೃಥಾಪ್ಲವೈಸ್ಸುರಸರಿದ್ರೇವಾದಿತೀರ್ಥಾಪ್ಲವೈಃ
ಕಿಂ ಗೋಕೋಟಿತುಲಾದಿದಾನನಿಕರೈಃ ಕಿಂ ದಿವ್ಯತೀರ್ಥಾಟನೈಃ ।
ಭಕ್ತಿಶ್ಚೇದ್ಗಿರಿಶಾರ್ಚನೇ ಶಿವರಹಸ್ಯಾನಂದಸಿಂಧುಸ್ಫುರತ್
ಧೀರಾಪಾರತರಂಗಮಂಗಲಕಥಾಭಾಗಾರ್ಥಭಾಗೇಽಪಿ ವಾ ॥೨೧೦॥

ಸಂಸಾರಾದ್ಭುತಸಾಗರಂ ಶಿವರಹಸ್ಯೋತ್ಕೃಷ್ಟನೌಕಾಶ್ರಿತಃ
ಶ್ರೀವಿಶ್ವೇಶ್ವರಕರ್ಣಧಾರಕೃಪಯಾ ತೀರ್ತ್ವಾಘನಕ್ರೈರ್ಭಯಂ ।
ತ್ಯಕ್ತ್ವಾ ತತ್ಪರಪಾರರೂಪಪರಮಾನಂದಸ್ವರೂಪಾಂಬಿಕಾ
ಕಾಂತಾನಂದದಪಾದಪದ್ಮಪುಲಿನಾಸೀನೋ ನ ಸೀದಾಮ್ಯಹೋ ॥೨೧೧॥

ಶಿವಾರ್ಚನೆಯೊಂದರಲ್ಲಿ ಮುಖ್ಯವಾಗಿ ಭಕ್ತಿಯೂ ಆದರಯುಕ್ತವಾದ ಪ್ರಯತ್ನವೂ ಇರಬೇಕು. ಶಿವಾರ್ಚನೆಯೊಂದು ನಡೆದರೆ ಮತ್ತೆ ಯಾವ ಧರ್ಮ ಕರ್ಮಗಳ ಆವಶ್ಯಕತೆಯೂ ಕಾಣುವುದಿಲ್ಲ. ಶಿವಾರಾಧನೆಯಿಂದ ಲಭಿಸುವ ಫಲ ಕ್ಕಿಂತಲೂ ಮಿಗಿಲಾದ ಪುಣ್ಯಫಲವು ಬೇರೆ ಯಾವುದರಿಂದಲೂ ಲಭಿಸುವುದಿಲ್ಲ. ಆದುದರಿಂದಲೇ ಬೇರೆ ಧರ್ಮಕರ್ಮಗಳಿಗೆ ಪ್ರಯತ್ನಿಸಬೇಕಾಗಿಲ್ಲ. ಯಾಗಾದಿಗಳನ್ನು ಮತ್ತು ಶಾಂತಿ ಅವಭೃಥ ಇತ್ಯಾದಿಗಳನ್ನು ಮಾಡಲಿಲ್ಲವೆಂದು ಚಿಂತಿಸಬೇಕಾಗಿಲ್ಲ. ಗಂಗೆ, ನರ್ಮದೆ ಮುಂತಾದ ನದೀತೀರ್ಥಗಳಲ್ಲಿ ಸ್ನಾನಮಾಡಬೇಕಾದುದಿಲ್ಲ ಹಾಗೆಯೇ ಗೋದಾನ, ತುಲಾಭಾರದಾನ, ಕ್ಷೇತ್ರಯಾತ್ರೆ ಮುಂತಾದ ಪಾರಲೌಕಿಕ ವಾದ ಧರ್ಮವನ್ನು ಸಂಗ್ರಹಿಸಲಿಲ್ಲವೆಂದು ಯೋಚಿಸಬೇಕಾಗಿಲ್ಲ. ಶಿವಾರಾಧನೆಯಲ್ಲಿ ಮಾತ್ರ ಭಕ್ತಿಶ್ರದ್ಧೆಗಳಿರಬೇಕು. ಹಾಗೆಯೇ ಈ ಶಿವರಹಸ್ಯದಿಂದುಂಟಾಗುವ ಆನಂದ ದಿಂದುಂಟಾಗುವ ಆನಂದಸಾಗರದಲ್ಲಿ, ಮಂಗಳಕರವಾದ ಶಿವಕಥೆಯಲ್ಲಿ, ಕಥಾಭಾಗ ದಲ್ಲಿ ಮತ್ತೂ ತದಂಶ, ತದರ್ಥ ಇವುಗಳಲ್ಲಿಯೂ, ಪರಮಶ್ರದ್ಧೆಯೂ ನಂಬಿಕೆಯೂ ಸಾಭಿನಿವೇಶಪ್ರವೃತ್ತಿಯೂ ಅವಶ್ಯವಾಗಿರಬೇಕು. ॥೨೧೦॥

ಎಲೈ ಮುನಿಗಳೇ, ನನಗೆ ಈಗ ಯಾವ ಭಯವೂ ಚಿಂತೆಯೂ ಇರುವು ದಿಲ್ಲ. ಏಕೆಂದರೆ ನಾನು ಸಂಸಾರಸಾಗರವನ್ನು ದಾಟಿರುತ್ತೇನೆ. ಸಂಸಾರವೆಂಬ ಸಮುದ್ರದಲ್ಲಿ ಮಾತ್ರವೇ ಪಾಪಗಳೆಂಬ ಮಹಾಮಹಾ ಮಕರಗಳಿರುತ್ತವೆ. (ಮೊಸಳೆ) ಆ ಸಂಸಾರಸಾಗರದಲ್ಲಿ ಮಗ್ನರಾಗಿರುವವರಿಗೆ ಮಾತ್ರವೇ ಆ ದುಷ್ಟಜಂತುಗಳ ದೆಸೆಯಿಂದ ಭಯವು ಸಂಭವಿಸುವುದು. ನಾನಾದರೋ ಈಗ ಶಿವರಹಸ್ಯವೆಂಬ

ಪಾಯಾದನ್ವಹಮೇವ ವಶ್ಶಿವರಹಸ್ಯಾಂಭೋರುಹಂ ಕಂದತಿ
ಸ್ಕಂದೋ ನಾಲತಿ ಮನ್ಮನಶ್ಶಿವಪದಾಂಭೋಜಪ್ರಭಾ ಕೋಶತಿ ।
ಪತ್ರಂತೀಶಗುಣಾಶ್ಶಿವಾಂಘ್ರಿಕಮಲಂ ತತ್ಕರ್ಣಿಕಾರೂಪತಿ
ಶ್ರಾಂತಂ ಮೇ ಭ್ರಮರತ್ಯುಮಾಪತಿಕಥಾ ತತ್ಕೇಸರಂತಿ ಸ್ವತಃ ॥೨೧೨॥

ಪಾಯಾದಂಕಗತಾಂಬಿಕಾಂಕವಿಲಸತ್ಪರ್ಯಂಕಲೀಲಾಲತಾ
ಪಾರಾನಂದದಸಿಂಧುರಾನನಸುಧಾದಾನಾಕರಶ್ಶಂಕರಃ ।
ಸ್ಕಂದಾಲೋಕನಸಾಗರೋ ಗಿರಿಸುತಾಸ್ಮೇರಾಧರಾಸ್ವಾದನಾ
ನಂದಾಲೋಲಿತವಿಗ್ರಹೋ ಮುಹುರುಮಾದಿವ್ಯಾಂಗಸಂಗಪ್ರಿಯಃ ॥೨೧೩॥

ನೌಕೆಯಲ್ಲಿ ಕುಳಿತುಕೊಂಡು ವಿಶ್ವನಾಥನ ಕೃಪೆಯಿಂದ ವಿಶ್ವನಾಥನ ಸಾರಥ್ಯಲಾಭದಿಂದಲೇ ಸಂಸಾರಸಾಗರವನ್ನು ದಾಟಿ ಭಯಗಳನ್ನೆಲ್ಲಾ ಕಳೆದುಕೊಂಡಿದ್ದೇನೆ. ಮತ್ತು ಗಿರಿಜಾಪತಿಯ ಪಾದಪದ್ಮವೆಂಬ ಮರಳುದಿಣ್ಣೆಯ ಮೇಲೆ ನಾನು ಸುಖಾಸೀನನಾಗಿ ಆ ಆನಂದಮಯನಾದ ಪರಶಿವನನ್ನೇ ಸೋಹಂಭಾವನೆಯಿಂದ ಧ್ಯಾನಿಸುತ್ತಿದ್ದೇನೆ. ॥೨೧೧॥

ಶಿವರಹಸ್ಯವೆಂಬುದು ಒಂದು ಲೋಕೋತ್ತರವಾದ ಕಮಲವು. ಅದಕ್ಕೆ ಷಣ್ಮುಖಸ್ವಾಮಿಯೇ ಒಂದು ಗೆಡ್ಡೆ. ನನ್ನ ಮನಸ್ಸೇ ಒಂದು ದಂಟು. ಶಿವಪಾದಪದ್ಮಗಳ ಪ್ರಭೆಯೇ ಕೋಶವು(ಮೊಗ್ಗು). ಶಿವಸದ್ಗುಣಗಳೇ ಅದರ ಎಲೆಗಳಂತಾಗುತ್ತವೆ. ಶಿವಚರಣಗಳು, ಕಿಂಜಲ್ಕಗಳು, ಶಿವಕಥೆಗಳು, ಪರಾಗಗಳು ಇಂಥ ಲೋಕೋತ್ತರವಾದ ಕಮಲವು ನಿಮ್ಮನ್ನು ಸತತವೂ ಸಲಹಲಿ. ॥೨೧೨॥

ಶ್ರೀ ಪರಮೇಶ್ವರನು ನಿತ್ಯಾನಂದ ಪರಿತೃಪ್ತನಾಗಿ ಪಂಚಾಯತನದೊಡನೆ ವಿರಾಜಮಾನನಾಗಿರುತ್ತಾನೆ. ಶಿವನ ವಾಮಾಂಕದ ಮೇಲೆ ಗಿರಿಜೆಯು ಸುಖಾಸೀನಳಾಗಿ ತನ್ನ ತೊಡೆಯಮೇಲೆ ಬಾಲಗಣಪತಿಯನ್ನು ಪ್ರೀತಿಯಿಂದ ಕೂರಿಸಿಕೊಂಡಿರುತ್ತಾಳೆ. ಸಮೀಪದಲ್ಲಿ ಇರುವ ಷಣ್ಮುಖಸ್ವಾಮಿಯನ್ನು ಶಿವನು ಪ್ರೇಮಭರಿತವಾದ ನೋಟದಿಂದ ಪದೇ ಪದೇ ಈಕ್ಷಿಸುವನು. ಸದಾಶಿವನು ಸ್ವತಃ ಆನಂದಮೂರ್ತಿಯಾಗಿ ಇರುವನಲ್ಲದೇ ಭಗವತಿ ಗಿರಿಜೆಯ ಸಂಗಸೌಖ್ಯದಲ್ಲಿ ಲೋಲುಪ್ತಿಪಡುತ್ತಿರುತ್ತಾನೆ. ಇಂಥ ಅಪೂರ್ವ ಸಮಾಗಮದಿಂದ ಶೋಭಿಸುವ ಪರಶಿವನು ನಮ್ಮನ್ನು ಅನಿಶವೂ ಕಾಪಾಡಲಿ. ॥೨೧೩॥

ಪಾಯಾದನ್ಯಯಭವ್ಯಭೂರಿವಿಭವೋ ಭೂಭೃತ್ಕುಮಾರೀಕರಾ
ಪಾರಶ್ರೀಕರತಾರಹಾರರುಚಿರಾಲಂಕಾರಶಂಕಾಕರಃ ।
ಕಿಂ ಗೌರೀಕರಜಾಚಿರಾತಿರುಚಿರಾಶ್ರೀಪದ್ಮರಾಗಾಧರಾ
ಧಾರಶ್ರೀರಿಯಮಿತ್ಯುಮಾಪರಿವೃಢೋ ಗಾಢಂ ಶಿವಾಲಿಂಗಿತಃ ॥೨೧೪॥

ಪಾಯಾದರ್ಧೇಂದುಮೌಳಿಃ ಶ್ರುತಿಕಥಿತಕಥಾಕಲ್ಪವೃಕ್ಷೋತಿಪಕ್ಷೋ
ದಿಕ್ಷು ವ್ಯಾಪ್ತಃ ಕ್ಷಣಂ ವಾ ಭವ ಭವಭವಜಾಪಾರತಾಪಾಪಹಾರಃ ।
ಸ್ಮೃತ್ಯಾರೂಢೋಽಪಿ ಯೋಽಷಿತ್ಪರಿವೃಢಗಿರಿಜಾರಕ್ಷಿತೋ ವೇದಶಾಖೋ
ನಂದೀಶಾದಿಪ್ರಸೂನೋ ಮುನಿಜನಮಧುಪೋ ಮೋಕ್ಷಲಕ್ಷ್ಮೀಫಲಾಢ್ಯಃ
॥೨೧೫॥

ಪರಮೇಶ್ವರನು ದಿವ್ಯವೈಭವಸಂಪನ್ನನಾಗಿರುವನು. ಆತನ ವೈಭವಕ್ಕೆ ಪರಿಮಿತಿಯೂ ಇಲ್ಲ, ಅಂತ್ಯವೂ ಇಲ್ಲ. ಅಲ್ಲದೇ ಅದು ನಿತ್ಯಶಾಶ್ವತವಾದದ್ದು. ಶಿವನು ಪಾರ್ವತಿಯಿಂದ ಗಾಢವಾಗಿ ಆಲಿಂಗಿಸಿಕೊಳ್ಳಲ್ಪಟ್ಟಾಗ ಆ ಭಗವತಿಯ ಹಸ್ತಕಾಂತಿಯು ಶಿವನ ಅಂಗಾಂಗಗಳಲ್ಲಿ ಸಂಸಕ್ತವಾಗುತ್ತದೆ. ಆಗ ನೋಡುವವರಿಗೆ ಶಂಕರನು ನಾನಾವಿಧವಾದ ದಿವ್ಯಾಲಂಕಾರಗಳನ್ನು ಧರಿಸಿರುವನೋ ಎಂಬಂತೆ ತೋರುವನು. ಅಂತಹ ದಿವ್ಯಸಮಾಗಮ ಸನ್ನಿವೇಶದಲ್ಲಿ ಭಗವತಿ ಗಿರಿಜೆಯೂ ಸಹ ತನ್ನ ಅಂಗಾಂಗಗಳ ಅಪೂರ್ವಕಾಂತಿಯಿಂದ ಸಂಪನ್ನಳಾಗಿ ಸಾಕ್ಷಾತ್ ಸೌಂದರ್ಯನಿಧಿಯಾದ ಲಕ್ಷ್ಮಿಯಂತೆ ಪ್ರಕಾಶಿಸುವಳು. ಇಂತಹ ದಿವ್ಯಪಂಚಾಯತನ ಸಮಾಗಮದಿಂದ ಸುಪ್ರೀತನಾದ ಪರಮೇಶ್ವರನು ನಮ್ಮನ್ನು ಕಾಪಾಡಿ ಉದ್ಧರಿಸಲಿ. ||೨೧೪||

ಆ ಚಂದ್ರಮೌಳಿಯು ವೇದೋಕ್ತವಾದ ಇತಿಹಾಸಗಳಿಂದ ಕಲ್ಪವೃಕ್ಷರೂಪನಾಗಿದ್ದಾನೆ. ಈ ಕಲ್ಪವೃಕ್ಷವನ್ನು ಕಾಪಾಡುವವಳು ಭಗವತಿ ಗಿರಿಜೆಯು. ಈ ಕಲ್ಪವೃಕ್ಷವು ಎಲ್ಲಾ ದಿಕ್ಕುಗಳಲ್ಲೂ ವ್ಯಾಪಿಸಿಕೊಂಡು ಸಂಸಾರವೆಂಬ ತೀಕ್ಷ್ಣತಾಪದಿಂದ ಸಂತಪ್ತರಾದವರ ತಾಪವನ್ನು ಪರಿಹರಿಸುತ್ತದೆ. ಆ ವೃಕ್ಷಕ್ಕೆ ವೇದವೇದಾಂತಗಳೇ ಕೊಂಬೆಗಳು. ನಂದಿಕೇಶ್ವರನೇ ಮೊದಲಾದವರು ಪುಷ್ಪಗಳು. ಮುನಿಜನರೇ ಭ್ರಮರಗಳು. ಈ ಕಲ್ಪವೃಕ್ಷವು ಮೋಕ್ಷವೆಂಬ ದಿವ್ಯಫಲವುಳ್ಳದ್ದು. ಇಂಥ ಕಲ್ಪವೃಕ್ಷಸ್ವರೂಪನಾದ ಪರಮೇಶ್ವರನು ನಮ್ಮ ಇಷ್ಟಾರ್ಥಗಳನ್ನು ದಯೆಪಾಲಿಸಿ ಕಾಪಾಡಲಿ. ||೨೧೫||

ಪಾಯಾದರ್ಧಾಂಗಗೌರೀಕರಕಮಲಕಥಾರತ್ನಸಿಂಧುರ್ಯತೋಽಭೂತ್
ತತ್ವಜ್ಞಾನಾಮೃತಾಂಶುಶ್ಶಿವಭಜನಸುಧಾಶ್ಶೈವಕಲ್ಪದ್ರುಮೋಽಪಿ ।
ಶಂಗಶ್ರೀಲಿಂಗಪೂಜಾವ್ರತನಿಯಮಮಣಿರ್ಭಕ್ತಿಭೂಕಾಮಧೇನುಃ
ವೈರಾಗ್ಯೈರಾವೃತೋಽಪಿ ತ್ರಿನಯನಚರಣಧ್ಯಾನರೂಪಾಪಿ ಲಕ್ಷ್ಮೀಃ॥೨೧೬॥

ಪಾಯಾದರ್ಧಶಶಾಂಕಶೇಖರಕಥಾಶ್ರೀಕಾಮಧೇನುರ್ಯಯಾ
ಲಿಂಗಾರಾಧನಪುಣ್ಯಲಕ್ಷಣಮಭೂತ್ ಕ್ಷೀರಂ ತದಪ್ಯಕ್ಷರಂ ।
ಆಮಿಕ್ಷಾಪಿ ವಿಲಕ್ಷಣಾ ಶಿವಯಶೋರೂಪಾ ಶಿವಾಧಿಕ್ಯತಾ
ಧೀರೂಪಂ ದಧಿ ಶಂಕರಾಂಘ್ರಿಕಮಲಸ್ನೇಹಾತ್ಮಕಂ ತದ್ಘೃತಂ ॥೨೧೭॥

ಪರಮೇಶ್ವರನ ಅರ್ಧಾಂಗಿಯಾದ ಪಾರ್ವತಿಯ ಕರಕಮಲದಲ್ಲಿ ಪ್ರಕಾಶಿತವಾದ ಶಿವಕಥೆಯು ಒಂದು ರತ್ನಾಕರವಾದ ಸಮುದ್ರರೂಪವಾಗಿದೆ. ಈ ಸಮುದ್ರದಿಂದ ತತ್ವಜ್ಞಾನವೆಂಬ ಚಂದ್ರಮನು ಹುಟ್ಟಿರುವನು. ಶಿವಭಜನೆ ಎಂಬ ಅಮೃತವು ಉದ್ಭವಿಸಿರುವುದು. ಈ ಸಮುದ್ರದಲ್ಲಿ ಶಿವಭಕ್ತರೆಂಬ ಕಲ್ಪವೃಕ್ಷವೂ ಭಕ್ತಿ ಎಂಬ ಕಾಮಧೇನುವೂ ಜನ್ಮವನ್ನು ತಾಳಿರುತ್ತವೆ. ಶಿವಲಿಂಗಪೂಜೆ, ಶಿವವ್ರತ, ಶಿವಧರ್ಮನಿಯಮ ಎಂಬ ರತ್ನಮಣಿಯೂ ಈ ಕಥಾಸಮುದ್ರದಿಂದಲೇ ಹುಟ್ಟಿರುವುದು. ಈ ಸಮುದ್ರವನ್ನು ಮಥಿಸಿದರೆ ವೈರಾಗ್ಯಶಾಲಿಯಾದವನಿಗೂ ಶಿವಧ್ಯಾನಸಮಾಧಿರೂಪವಾದ ಲಕ್ಷ್ಮಿಯು ಲಭಿಸುವಳು. ಹೀಗೆ ಸರ್ವಸಂಪದ್ಭರಿತವಾದ ಶಿವಕಥಾಸಾಗರವು ನಮ್ಮನ್ನು ಕಾಪಾಡಲಿ. ||೨೧೬||

ಚಂದ್ರಮೌಳಿಯ ಈ ಕಥೆಯು ಕಾಮಧೇನುರೂಪದಲ್ಲಿದೆ. ಈ ಕಾಮಧೇನುವಿನಿಂದ ಶಿವಲಿಂಗಾರಾಧನೆಯಿಂದ ಲಭಿಸುವ ಪುಣ್ಯವೆಂಬ ಕ್ಷೀರವು ಹುಟ್ಟಿರುವುದು. ಈ ಕ್ಷೀರದಿಂದ ಉಂಟಾಗುವ ಆಮಿಕ್ಷೆಯೂ ಸಹ ಅತ್ಯಂತ ವಿಲಕ್ಷಣವಾದದ್ದೇ ಸರಿ. ಶಿವಕೀರ್ತಿ ಎಂಬುದೇ ಆ ಕ್ಷೀರದ ಆಮಿಕ್ಷೆಯು. (ಹಾಲಿಗೆ ಮೊಸರನ್ನು ಸೇರಿಸಿದಾಗ ಆಗುವ ಗಟ್ಟಿಯ ಭಾಗವು ಆಮಿಕ್ಷೆಯು) ಶಿವಪಾರಮ್ಯಬುದ್ಧಿಯೇ ಮೊಸರು. ಶಿವಚರಣಗಳಲ್ಲಿ ಭಕ್ತಿ ಎಂಬುದೇ ತುಪ್ಪ. ಇಂಥ ವಿಲಕ್ಷಣವಸ್ತುಗಳನ್ನು ಕೊಡುವ ಕಾಮಧೇನುಸ್ವರೂಪವಾದ ಶಿವಕಥೆಯು ನಮ್ಮನ್ನು ಉದ್ಧರಿಸಲಿ. ||೨೧೭||

ಕರ್ತವ್ಯಾ ನದನಿಮ್ನಗಾಬ್ಧಿಸಿಕತಾನೀರಾಂಶಭೂಭೃದ್ವಸಾ
ಸಾರಾಂಶಾಂಶಧನಾಂಶಭಾಗಗಣನಾ ಕಾಲೇನ ಕಾಲೇನ ವಾ ।
ಬ್ರಹ್ಮಾದ್ಯೈರಪಿ ಸಾದರೈಶ್ಶಿವರಹಸ್ಯೋಕ್ತಾಕ್ಷರಾರ್ಧಾಕ್ಷರ
ವ್ಯಕ್ತಾಕರ್ಣನಪುಣ್ಯಶೈಲಗಣನಾ ಕರ್ತುಂ ನ ಶಕ್ಯಾ ದ್ವಿಜಾಃ ॥೨೧೮॥

ಸ್ವಸ್ತ್ಯಸ್ತು ಪ್ರಿಯಮಸ್ತು ಶಂ ಶಿವರಹಸ್ಯಾಕರ್ಣನೇ ಸಂತತಂ
ವಿಶ್ವಾಸೋಽಸ್ತು ಶಿವಾರ್ಚನೇ ಶಿವಜನೇ ಭೂತಿತ್ರಿಪುಂಡ್ರೇ ಶಿವೇ ।
ರುದ್ರಾಕ್ಷಾಭರಣೇ ಶಿವಾರ್ಚನರತಾಃ ಪುತ್ರಾಃ ಪವಿತ್ರಾಸ್ತತಃ
ಪೌತ್ರಾದ್ಯಾ ಅಪಿ ಸಂತು ಶೋಭನಕುಲಾನ್ಯಾಕಲ್ಪಮಾಯುಶ್ಚ ವಃ ॥೨೧೯॥

ಎಲೈ ಮುನಿಗಳೇ, ಪ್ರಪಂಚದಲ್ಲಿ ಪ್ರತಿಯೊಂದನ್ನೂ ಲೆಕ್ಕಮಾಡಿ ಪೂರೈಸಬಹುದು. ನದೀ, ನದ, ಸಮುದ್ರ ಇವುಗಳ ಜಲಕಣಗಳು ಎಷ್ಟು ಇವೆ ಎಂಬುದನ್ನೂ ಮತ್ತು ಅವುಗಳ ತೀರದಲ್ಲಿರುವ ಮರಳಲ್ಲಿ ಎಷ್ಟು ಕಣಗಳಿವೆ ಎಂಬುದನ್ನು ಸಹ ಕಾಲಾನುಕಾಲದಲ್ಲಿ ಪರಿಗಣಿಸಬಹುದು. ಹಾಗೆಯೇ ಎಷ್ಟೇ ದೊಡ್ಡ ಧನರಾಶಿಯನ್ನೂ ಪ್ರಪಂಚದಲ್ಲಿ ಎಷ್ಟು ಗುಡ್ಡಗಾಡುಗಳಿವೆ ಎಂಬಿವನ್ನೆಲ್ಲಾ ಒಂದಲ್ಲ ಒಂದು ದಿನಕ್ಕೆ ಲೆಕ್ಕಮಾಡಿ ಮುಗಿಸಬಹುದು. ಆದರೆ ಭಕ್ತಿಯಿಂದ ಶಿವರಹಸ್ಯವನ್ನು ಶ್ರವಣಮಾಡಿದವರ ಪುಣ್ಯರಾಶಿಯು ಎಷ್ಟೆಂದು ಪರಿಗಣಿಸಲು ಸಾಕ್ಷಾತ್ ಚತುರ್ಮುಖನಿಗೂ ಸಾಧ್ಯವಿಲ್ಲ. ಅಷ್ಟುಮಾತ್ರವೇಕೆ! ಆ ಶಿವರಹಸ್ಯಭಾಗದಲ್ಲಿ ಒಂದು ಶ್ಲೋಕ ಅಥವಾ ಅರ್ಧಶ್ಲೋಕಾಕ್ಷರ ಇವುಗಳನ್ನು ಮಾತ್ರವೇ ಶ್ರವಣಮಾಡುವವರ ಪುಣ್ಯರಾಶಿಯನ್ನೂ ಸಹ ಇಷ್ಟೇ ಎಂದು ಪರಿಗಣಿಸಲು ಸಾಧ್ಯವಿರುವುದಿಲ್ಲ. ॥೨೧೮॥

ಎಲೈ ಮುನಿಗಳೇ, ನಿಮಗೆ ಶಾಶ್ವತವಾದ ಮಂಗಳವಾಗಲಿ. ಕಲ್ಯಾಣವಾಗಲಿ. ಶಿವರಹಸ್ಯದ ಶ್ರವಣದಲ್ಲಿ ನಿಮಗೆ ನಂಬಿಕೆಯು ಅಭಿವೃದ್ಧವಾಗಲಿ. ಶಿವಾರ್ಚನೆಯಲ್ಲಿಯೂ, ಶಿವಭಕ್ತರಲ್ಲಿಯೂ, ಭಸ್ಮತ್ರಿಪುಂಡ್ರ, ರುದ್ರಾಕ್ಷಮಾಲೆ ಇವುಗಳಲ್ಲಿಯೂ ನಮಗೆ ಶಾಶ್ವತವಾಗಿ ಭಕ್ತಿಶ್ರದ್ಧೆಗಳಿರಲಿ. ನಿಮಗೆ ಪರಶಿವಭಕ್ತರಾದ ಪುತ್ರರು ಜನಿಸಲಿ. ನಿಮಗೆ ಶಿವಭಕ್ತರೇ ಆದ ಪೌತ್ರರೂ ಸಂತಾನಸಮೃದ್ಧಿಯೂ ಉಂಟಾಗಲಿ. ಹಾಗೆಯೇ ಸುದೀರ್ಘವಾದ ಆಯುಷ್ಯವು ದೊರಕಲಿ ಮತ್ತು ನೀವು ಶೋಭನ ಪರಂಪರೆಯನ್ನು ಹೊಂದಿರಿ. ॥೨೧೯॥

ಭೋ ಭೋ ಭವಾದ್ಭುತದವಾನಲಜಾಲಮಾಲಾ
ಸಂತಾಪಭೀಶ್ಶಿವರಹಸ್ಯಕಥಾತಿವೃಷ್ಟ್ಯಾ ।
ಶಾಂತಾಃ ಪ್ರಶಾಂತಹೃದಯಾಸ್ಸದಯಾ ಭವಂತಃ
ಸ್ವಾತ್ಮನ್ಯುಮಾರಮಣಪಾದರಜೋ ಭಜಧ್ವಂ ॥೨೨೦॥

ಸಂಸಾರೋರುವಸಂತಸೂರಕಿರಣವ್ಯಾಪಾರತಾಪಾತುರಾ
ಪಾರಂ ಶ್ರಾಂತಿವಿನಾಶಿನೀಂ ಶಿವರಹಸ್ಯಾಭೂತಪೂರ್ವಪ್ರಪಾಂ ।
ಕೋ ವಾ ನೇಚ್ಛತಿ ವಾಂಛಿತಂ ಯದಿ ಭವೇದಿಷ್ಟಂ ಪರಂ ಜೀವನಂ
ತ್ಯಕ್ತ್ವಾ ಸ್ವಾತ್ಮವಿಘಾತಕಂ ಕಲಿಮಲಾಕ್ರಾಂತಂ ಕಲೌ ಕೇವಲಂ ॥೨೨೧॥

ಎಲೈ ಮುನಿಗಳೇ, ಸಂಸಾರದಲ್ಲಿ ನಿಮಗೆ ಆಗಿಂದಾಗ್ಗೆ ಸಂಭವಿಸುವ ಪಾಪ ದುಃಖಗಳ ಭಯವೆಂಬ ಸಂತಾಪವು ಈ ಶಿವರಹಸ್ಯ ಕಥೆ ಎಂಬ ಮಹಾವೃಷ್ಟಿಯಿಂದ ಶಾಂತಿಯನ್ನೈದಲಿ. ನೀವು ಸತತವೂ ಭೂತದಯೆ ಪಶ್ಚಾತ್ತಾಪಸಂಪನ್ನರಾಗಿ ರಾಗದ್ವೇಷಾದಿಗಳನ್ನು ಬಿಟ್ಟು ಪರಮಸಾತ್ವಿಕರಾಗಿರಿ. ಮತ್ತು ಸರ್ವದಾ ಹೃದಯದಲ್ಲಿ ಪರಮೇಶ್ವರನನ್ನು ಕಂಡುಕೊಂಡು ಶಿವಚರಣಕಮಲಗಳ ಧೂಳಿಯನ್ನು ಧರಿಸಿರಿ. ॥೨೨೦॥

ಸಂಸಾರವೆಂಬುದು ವಸಂತಋತುವಿನ ಸೂರ್ಯನ ತೀಕ್ಷ್ಣಕಿರಣಗಳಂತೆ ಮಹಾಸಂತಾಪಕಾರಿಯಾದುದು. ಹೀಗಿರಲು ಸುಖಜೀವನವನ್ನು ಅಪೇಕ್ಷಿಸುವ ಯಾವ ಮನುಷ್ಯನು ತಾನೇ ಈ ಶಿವರಹಸ್ಯವನ್ನು ಅಪೇಕ್ಷಿಸಲಾರನು ? ಈ ಶಿವರಹಸ್ಯವು ದಿವ್ಯವಾದ ಪಾನೀಯಶಾಲೆಯಂತೆ (ಅರವಟ್ಟಿಗೆ) ಸಕಲ ತಾಪ ಮತ್ತು ಬಾಯಾರಿಕೆಗಳನ್ನೂ ಹೋಗಲಾಡಿಸಿ ಜೀವಕ್ಕೆ ಹಿತಕೊಡುವುದು. ಈ ಕಲಿಯುಗದಲ್ಲಿ ಶಿವಧರ್ಮಗಳನ್ನು ಬಿಟ್ಟು ಮತ್ತುಳಿದ ಎಲ್ಲಾ ವ್ಯಾಪಾರ ವ್ಯವಹಾರಗಳೂ ಪಾಪಭೂಯಿಷ್ಠಗಳಾಗಿರುವುದರಿಂದ ಮನುಷ್ಯನನ್ನು ಪತಿತನನ್ನಾಗಿ ಮಾಡುತ್ತವೆ. ಅಂತರಾತ್ಮನ ಶ್ರೇಯೋಮಾರ್ಗಗಳನ್ನು ತಪ್ಪಿಸಿ ಅಪಮಾರ್ಗಕ್ಕೆಳೆಯುವುದು. ಆದುದರಿಂದ ಪ್ರತಿಯೊಬ್ಬನೂ ಈ ಶಿವರಹಸ್ಯವನ್ನೂ ಶಿವಧರ್ಮಗಳನ್ನೂ ಶರಣು ಹೊಂದಬೇಕು. ॥೨೨೧॥

॥ ಸ್ಕಂದ ಉವಾಚ ॥

ಇತ್ಯುಚ್ಚೈರ್ಗಿರಿಶಾರ್ಚನೋತ್ಸವರತಾನ್ ಕರ್ತುಂ ಪ್ರವೃತ್ತಸ್ತದಾ
ಸೂತೋ ಭೂತಿವಿಭೂಷಿತಸ್ಸಿತಲಸದ್ಭಾಲತ್ರಿಪುಂಡ್ರಾಂಕಿತಃ ।
ಸಾಯಂಕಾಲಶಿವಾರ್ಚನೋದ್ಯತಮತಿಸ್ಸೂರ್ಯೋಽಸ್ತಶೃಂಗಂ ಯಥಾ
ಉತ್ತುಂಗೋನ್ನತಶಂಗಲಿಂಗನುಮಲಂ ದೃಷ್ಟ್ವೈವ ದೂರಾನ್ಮುನೇ ॥೨೨೨॥

ಸಾಯಂಕಾಲಶಿವಾರ್ಚನೋತ್ಸವರತಾನ್ ದೃಷ್ಟ್ವಾ ಮುನೀನ್ ತತ್ಸುತಾನ್
ತದ್ದಾರಾನ್ ತರವಶ್ಶುಕಾ ಅಪಿ ಪಿಕಾಃ ಕಾಲಾ ಮರಾಲಾ ಅಪಿ ।
ಶಾರ್ದೂಲಾಸ್ತರಪ್ಪೋಽಪಿ ಗೋಕುಲಯುತಾಶ್ಚಕ್ರುಶ್ಶಿವಾರಾಧನೇ
ಯತ್ನಂ ಭೂತಿವಿಭೂಷಿತಾಶ್ಶಿವಮಹಾದೇವೇತ್ಯುದೀರ್ಯೋಚ್ಚಕೈಃ ॥೨೨೩॥

ಈ ರೀತಿಯಾಗಿ ಸೂತಮುನಿಯು ಶಿವಧರ್ಮವನ್ನು ವಿವರವಾಗಿ ತಿಳಿಸಿದನು. ಮತ್ತು ಆ ಸಕಲ ಮುನಿಗಳೂ ಶಿವಾರ್ಚನೆಯಲ್ಲಿ ಆದರದಿಂದ ಪ್ರವರ್ತಿಸುವಂತೆ ಚೆನ್ನಾಗಿ ಬೋಧಿಸಿ ಪ್ರೇರಿಸಿದನು. ಆ ವೇಳೆಗೆ ಸೂರ್ಯನು ಅಸ್ತಾಚಲವನ್ನು ಸೇರಿ ಸಾಯಂಕಾಲವು ಪ್ರಾಪ್ತವಾದುದರಿಂದ, ಕೂಡಲೇ ಸೂತಮುನಿಯು ಮಹಿಮಾ ಪೂರಿತಗಳಾದ ಶಿವಲಿಂಗಗಳ ದರ್ಶನವನ್ನು ಮಾಡಿ ಶಿವಾರ್ಚನೆಯನ್ನು ನಡೆಸಲು ಪ್ರವೃತ್ತನಾದನು. ಆಗ ಸೂತಮುನಿಯು ಶುಚಿರ್ಭೂತನಾಗಿ ಮೈಗೆಲ್ಲಾ ಭಸ್ಮವನ್ನು ಲೇಪಿಸಿಕೊಂಡು, ಹಣೆಯಲ್ಲಿ ಭಸ್ಮತ್ರಿಪುಂಡ್ರಭಸ್ಮವನ್ನೂ ಕೊರಳಲ್ಲಿ ರುದ್ರಾಕ್ಷಮಾಲೆಗಳನ್ನೂ ಧರಿಸಿಕೊಂಡನು. ಅನಂತರ ಆ ಸಾಯಂಕಾಲಸಮಯದಲ್ಲಿ ಪ್ರದೋಷ ಶಿವಪೂಜೆಯನ್ನು ಆರಂಭಿಸಿದನು. ॥೨೨೨॥

ಆ ಆಶ್ರಮದಲ್ಲಿ ವಾಸಿಸುತ್ತಿದ್ದ ಸಕಲ ಮುನಿಗಳೂ, ಮುನಿಪುತ್ರರೂ ಮತ್ತು ಮುನಿಪತ್ನಿಯರು ಎಲ್ಲರೂ ಶಿವಾರ್ಚನೆಯ ಪ್ರಯತ್ನದಲ್ಲಿ ತೊಡಗಿದರು. ಇದನ್ನು ನೋಡಿ ಆ ವನಪ್ರದೇಶದಲ್ಲಿದ್ದ ಮರಗಿಡಗಳು, ಕೋಗಿಲೆ, ಹಂಸ ಮುಂತಾದ ಸಮಸ್ತ ಪಕ್ಷಿಗಳು, ದನಕರುಗಳು ಮತ್ತು ಶಾರ್ದೂಲವೇ ಮೊದಲಾದ ದುಷ್ಟ ಜಂತುಗಳೂ ಸಹ ಭಸ್ಮವನ್ನು ಧರಿಸಿ ಶಿವ ಮಹಾದೇವ ಎಂದು ಭಜಿಸುತ್ತಾ ಶಿವಾರ್ಚನೆಯನ್ನು ಆರಂಭಿಸಿದವು. ॥೨೨೩॥

ಏವಂ ಶಂಕರಶಂಕರಾಮೃತಕಥಾಪೀಯೂಷಧಾರಾಮೃತಾಃ
ಸರ್ವೇ ತೇ ಮುನಯಃ ಪ್ರದೋಷಸಮಯೇ ಸಂವೀಕ್ಷ್ಯ ಫಾಲೇಕ್ಷಣಂ ।
ಲಿಂಗೇ ಪೂಜಯಿತುಂ ತ್ರಯೀಮಯಿ ಮುಹುಃಸ್ಮೃತ್ವಾ ಪ್ರವೃತ್ತಾಸ್ತತಃ
ಪ್ರಾಜ್ಞಂ ಸೂತಮುಮಾಸಹಾಯಕಲನೇ ಕಾಲೋಽಯಮಿತ್ಯೂಚಿರೇ ॥೨೨೪॥

ಇತ್ಯಾಕರ್ಣ್ಯ ವಚೋ ವಿಲೋಕ್ಯ ರವಿಮಪ್ಯುದ್ಧೂಲಿತಾ ಭೂತಿಭಿಃ
ಬಿಲ್ವಾದ್ಯೈಶ್ಶಿವಪೂಜನೋತ್ಸವರತಾಸ್ಸಿದ್ಧೇಶ್ವರಂ ವೀಕ್ಷ್ಯ ಚ ।
ಧೃತ್ವಾ ಮೌನಮುಮಾಸಹಾಯಶಿವ ಇತ್ಯುಕ್ತ್ವಾ ಶಿವಾರಾಧನಂ
ಚಕ್ರುಸ್ತೇ ಕ್ರತುಕೋಟಿಪುಣ್ಯಫಲದಂ ಲಿಂಗಾರ್ಚನಂ ಕುಂಭಜ ॥೨೨೫॥

ಶ್ರೀಕಾಲಭೈರವಷಡಾನನಢುಂಢಿತುಂಡ
ನಂದೀಶಭೃಂಗಿವೃಷಭೇಶ್ವರವೀರಭದ್ರೈಃ ।
ಬ್ರಹ್ಮಾದಿಭಿಶ್ಚ ಕನಕಾಂಚಿತವೇತ್ರಹಸ್ತೈಃ
ಆರಾಧಿತೋಽಸ್ತು ಪುರತಸ್ಸ ಶಿವಶ್ಶಿವೋ ನಃ ॥೨೨೬॥

ಹೀಗೆ ಆ ಎಲ್ಲಾ ಮುನಿಗಳೂ ಸುಖಕರವಾದ ಪರಶಿವನ ಕಥಾಮೃತವನ್ನು ಆಸ್ವಾದನೆಮಾಡಿ ಶಿವಲಿಂಗದ ದರ್ಶನವನ್ನು ಮಾಡಿದರು. ಅನಂತರ ಪರಮೇಶ್ವರನನ್ನೇ ಧ್ಯಾನಿಸುತ್ತಾ ಶಿವಲಿಂಗಕ್ಕೆ ಪ್ರದೋಷಪೂಜೆಯನ್ನು ಮಾಡುವ ಕಾಲವು ಪ್ರಾಪ್ತವಾಗಿದೆ ಎಂದು ಸೂತಮುನಿಗೆ ತಿಳಿಸಿದರು. ಅನಂತರ ಅವರೆಲ್ಲರೂ ವೇದಮಯವಾದ ಶಿವಲಿಂಗಕ್ಕೆ ಅತ್ಯಂತ ಆದರ ವೈಭವದಿಂದ ಪೂಜೆ ಮಾಡಿದರು. ||೨೨೪||

ಎಲೈ ಕುಂಭಸಂಭವನೇ, ಮುನಿಗಳ ಮಾತನ್ನು ಕೇಳಿ ಸೂತನು ಸೂರ್ಯಾಸ್ತಮಯಕಾಲವನ್ನು ಗಮನಿಸಿದನು. ಅನಂತರ ಆ ಮುನಿಗಳೆಲ್ಲರೂ ಭಸ್ಮೋದ್ಧೂಳಿತವಿಗ್ರಹರಾಗಿ ಸಿದ್ಧೇಶ್ವರಶಿವಲಿಂಗವನ್ನು ಸಂದರ್ಶಿಸಿದರು. ಹಾಗೆಯೇ ಸಕಲ ಪೂಜಾಸಂಭಾರಗಳನ್ನೂ ಅಣಿಮಾಡಿಕೊಂಡು ಉಮಾಸಹಾಯ, ಶಿವ, ಪರಮೇಶ್ವರ, ಎಂದು ಭಜಿಸಿದರು. ಬಳಿಕ ಮೌನದಿಂದ ಇಷ್ಟಾರ್ಥಪ್ರದವಾದ ಶಿವಲಿಂಗಾರ್ಚನೆಯನ್ನು ಬಿಲ್ವಪತ್ರೆಯೇ ಮೊದಲಾದ ಅನೇಕ ಸಾಮಗ್ರಿಗಳಿಂದ ಅತ್ಯಂತ ವೈಭವಪೂರ್ವಕವಾಗಿ ನೆರವೇರಿಸಿದರು. ||೨೨೫||

ಎಲೈ ಕುಂಭಜನೇ, ಆ ಪರಮೇಶ್ವರನು ಸಕಲ ಪೂಜ್ಯನೂ ಪರಮೋತ್ತಮನೂ ಆಗಿರುವನು. ಆ ದೇವದೇವನನ್ನು ಬ್ರಹ್ಮನೇ ಮೊದಲಾದ ಸಮಸ್ತ

ಆಚಂದ್ರಾರ್ಕಮಿದಂ ರಹಸ್ಯಮನಿಶಂ ಶೈವಂ ಶಿವಾರ್ಥೇ ಮುದಾ
ಶ್ರೋತವ್ಯಂ ಸುಖಸಂತತಿಪ್ರದಮುಮಾಕಾಂತಪ್ರಿಯಂ ಸಾದರಂ।
ಏತತ್ಪುಸ್ತಕದಾನಮತ್ಯಘಹರಂ ಪುಣ್ಯಾಂಬುರಾಶಿಪ್ರದಂ
ಸರ್ವಾಭೀಷ್ಟದಮಪ್ಯತಶ್ಶಿವರತೈಶ್ಶ್ರಾವ್ಯಂ ಶ್ರುತಿವ್ಯಾಪೃತಂ ॥೨೨೭॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಉತ್ತರಾರ್ಧೇ ಶ್ರೀ ಜನಕ
ಯಾಜ್ಞವಲ್ಕ್ಯ ಸಂವಾದೇ ಧರ್ಮಧೇನು ಚಿತ್ರಾಶ್ವಸಂವಾದೇ
ಶಿವಪೂಜಾಮಹಿಮಾದಿವರ್ಣನಂ ನಾಮ
ಪಂಚಾಶೋಽಧ್ಯಾಯಃ

ಇತಿ ಶ್ರೀಶಿವರಹಸ್ಯತೃತೀಯಾಂಶೋತ್ತರಾರ್ಧಕಥಾ ಸಮಾಪ್ತಾ.

ದೇವತೆಗಳೂ ಛತ್ರವೇ ಮೊದಲಾದ ಸೇವಾಸಾಮಗ್ರಿಗಳನ್ನು ಹಿಡಿದುಕೊಂಡು ಸರ್ವದಾ ಸೇವೆಮಾಡುವರು. ಅಷ್ಟೇಕೆ! ಶಿವಾನುಗ್ರಹಕ್ಕೆ ಮುಖ್ಯಪಾತ್ರರಾಗಿರುವ ಕಾಲಭೈರವ, ಷಣ್ಮುಖಸ್ವಾಮಿ, ಗಜಾನನ, ನಂದೀಶ, ತುಂಡ, ಭೃಂಗಿ, ವೃಷಭೇಶ್ವರ, ವೀರಭದ್ರ ಮುಂತಾದ ಶಿವಗಣೋತ್ತಮರೂ ಸಹ ಆ ಸರ್ವೋತ್ತಮನನ್ನು ಸೇವಿಸುವರು. ಅಂಥ ಪರಮದೈವತವನ್ನು ನಾವೂ ಸಹ ಅಪ್ರಮತ್ತರಾಗಿ ಆರಾಧಿಸಬೇಕು. ಹಾಗೆ ಅತ್ಯಂತ ಆದರದಿಂದ ಪೂಜಿಸಿದರೇ ನಮಗೆ ಶ್ರೇಯಸ್ಸು ಲಭಿಸುವುದು. ||೨೨೬||

ನಾವು ಸತತವೂ ಶಿವಾರಾಧನೆಯನ್ನು ಮಾಡಬೇಕಲ್ಲದೇ ಶಿವನಿಗೆ ಸುಪ್ರೀತಿಯನ್ನುಂಟುಮಾಡಲು ಅತ್ಯಂತ ಆದರಪೂರ್ವಕವಾಗಿ ಶಿವರಹಸ್ಯವನ್ನು ಕೇಳಬೇಕು. ಇದನ್ನು ಶ್ರವಣಮಾಡಿದರೆ ನಮಗೆ ಕಲ್ಯಾಣಪರಂಪರೆಗಳು ಲಭಿಸುವುವು. ಮತ್ತು ಉಮಾಪತಿಯು ಈ ಪರಮರಹಸ್ಯವನ್ನು ಅತಿಶಯವಾಗಿ ಪ್ರೀತಿಸುವುದರಿಂದ ನಮ್ಮ ಶ್ರದ್ಧಾಭಕ್ತಿಯನ್ನು ನೋಡಿ ಸುಪ್ರೀತನಾಗುವನು. ಅಲ್ಲದೇ ಈ ಶಿವರಹಸ್ಯವೂ ಸಾಮಾನ್ಯವಾದುದಲ್ಲ. ಮಹಾಮಹಿಮಾಶಾಲಿಯಾದದ್ದು. ಚಂದ್ರಸೂರ್ಯರಿರುವ ವರೆಗೂ ಅಂದರೆ ಕಲ್ಪಾಂತ್ಯದವರೆಗೂ ಶಾಶ್ವತವಾಗಿರತಕ್ಕದು.

ಆದುದರಿಂದ ಈ ಶಿವರಹಸ್ಯವನ್ನು ಬರೆದು ಆ ಪುಸ್ತಕವನ್ನು ದಾನಮಾಡಿದರೆ ಸಕಲ ಪಾಪಗಳೂ ನಾಶವಾಗಿ ಸಮುದ್ರದಂತೆ ಅಪಾರವಾದ ಪುಣ್ಯರಾಶಿಯು ಲಭಿಸುವುದು. ಈ ಶಿವರಹಸ್ಯವು ಸಕಲ ಮನೋರಥಗಳನ್ನೂ ಈಡೇರಿಸ ಬಲ್ಲುದು. ಆದುದರಿಂದ ಶಿವಭಕ್ತರು ಕಿವಿಗೆ ಆನಂದವಾಗುವಷ್ಟು ಸಲ ಆದರದಿಂದ ಈ ಶಿವರಹಸ್ಯವನ್ನು ಕೇಳಬೇಕು. ಕಿವಿಯಲ್ಲಿ ಪ್ರತಿಧ್ವನಿತವಾಗುವತನಕ ಶ್ರವಣ ಮಾಡುತ್ತಿರಬೇಕು ಎಂದು ಕುಮಾರಸ್ವಾಮಿಯು ಜೈಗೀಷವ್ಯಾದಿಗಳಿಗೆ ಶಿವಮಹಿಮೆಯನ್ನು ವಿವರಿಸಿದನು. ||೨೨೭||

ಇಲ್ಲಿಗೆ ಶ್ರೀಶಿವರಹಸ್ಯದ ತೃತೀಯಾಂಶದ ಉತ್ತರಾರ್ಧದಲ್ಲಿ
ಐವತ್ತನೆಯ ಅಧ್ಯಾಯವು ಮುಗಿದುದು.

ಇಲ್ಲಿಗೆ ಶ್ರೀಶಿವರಹಸ್ಯದ ಮೂರನೆಯ ಅಂಶವು
ಸಮಾಪ್ತವಾದುದು.

॥ ಶ್ರೀಶಿವಃ ಪ್ರೀಯತಾಂ ॥